(1) ಅಳಲೇಕಾಯಿ	(4) ಕಪಿಲಾರಂಗು	(7) ಗೇರುಬೀಜ
(2) ತಾರೇಕಾಯಿ	(5) ಪತಂಗ	(8) ಆವರಿಕೆ ಗೋಂದು
(3) ದಿಂಡ ಗೋಂದು	(6) ಹೊಂಗೇಬೀಜ	(9) ಬ್ಯಾಲದಹಣ್ಣು ಮುಂತಾದ್ದು

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್ದಾರ್ರಿಂದ ಚಡಸವಾಲ್ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ಒಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ ಒಂದಕ್ಕೆ 1 ಆಣೆಯಂತೆ ಲೋಕಲ್‌ಸೆಸ್ ವಸೂಲ್ಮಾಡಲ್ಪಡುವದು.

3. ಕಿಸ್ತು ಕಾಲದೊಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಠೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ಅವ್ವಲ್ ದರಖಾಸ್ತುದಾರನ ಲುಕ್ಸಾನಿಗೆ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಪುಂಟಾಗುವ ಫಾಯಿದೆ ಭಾಗ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳಲ್ಲಿ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೋಧಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಪಿ. ವೆಂಕಟರಾವ್,
ಫಾರ್ ಅ|| ಡೆಪ್ಯುಟಿ ಕಮ್ಮಿಷನರ್.

ಮೈಸೂರ್ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರರಾದ ಜೋಡಿ ದೊಡ್ಡಸೋಮನಹಳ್ಳಿ ಜೋಡಿದಾರ್ ತಮ್ಮಯ್ಯಾ ವಗೈರೆ 7 ಜನಗಳಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ಕಚೇರೀಲಿ 1896ನೇ ಇಸವಿ ಜುಲೈ 20ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹರಾಜು ಆ ದಿವಸ ದಿವಾ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 308—15—10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ, ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುಖ್ತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕಂತಲೂ, ಇತರರಿಗೋಸ್ಕರ ಮುಖ್ತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರರು, ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಿಯಾದಿಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕ್ರಯ.	ಜಮೀನು. ನಂಬರ್, ಹಿಸ್ಸಾ ಜಮೀನಿನ ಹೆಸರು.	ಖುಷ್ಕಿ, ತರಿ, ಬಾಗಾಯಿತು.	ವಿಸ್ತೀರ್ಣ.		ಆಕಾರ.			ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.*		
1	2	3	4	5	6	7	8	9		10			11		
					ರೂ. ಆ. ಪೈ.			ಎ.	ಗುಂ.	ರೂ.	ಆ.	ಪೈ.	ರೂ.	ಆ.	ಪೈ.
ಶ್ರೀರಂಗಪಟ್ಟಣ.	[illegible]	[illegible]	ತಮ್ಮಯ್ಯ ವಗೈರೆ 7 ಜನರುಗಳು.	..	0	[illegible] ಗ್ರಾಮ	ಖುಷ್ಕಿ ಪರಂಪೋಕು ಬಾಗಾಯಿತು	470 41 4 515	16 14 7 27	697	8	0	308	15	10
													ಹರಾಜು ತಾರೀಖು ವರಿಗೆ ಬಡ್ಡಿ ಬರಬೇಕು.		

* ಯಾ ಬಾಕಿ ಇರುವ ವರ್ಷಕ್ಕೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

ತಾರೀಖು 12ನೇ ಜೂನ್ 1896.

1. ಕಂದಾಯದ ಬಾಕಿದಾರನಾದ ಸಿ. ದಡದಹಳ್ಳಿ ಗ್ರಾಮದ ಇನಾಂದಾರ್ ಚಂದ್ರಶೇಖರಶಾಸ್ತ್ರಿಗಳಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರ್ ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಜುಲೈ 20ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

ಹರಾಜು ಆ ದಿವಸ ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895–96ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 658–0–9 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತ್ತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರು, ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಾಗಳಿಗೆ ಗವರ್ನಮೆಂಟಿನವರು ಜವಾಬುದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.			ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟೀಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.		
1	2	3	4	5	6			7	8	9		10			11		
					ರೂ.	ಆ.	ಪೈ.			ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.
ಕೃಷ್ಣರಾಜಪೇಟೆ	ಅಕ್ಕಿ ಹೆಬ್ಬಾಳು	ಸರ್ವಮಾನ್ಯ ದಡದಹಳ್ಳಿ	ಚಂದ್ರಶೇಖರ ಶಾಸ್ತ್ರಿ ಬಿನ್ ಶ್ರೀಕಂಠಶಾಸ್ತ್ರಿ	..	..	..	.	ಮೈನರ್ ಇನಾಂ ಹೊರಪಡಿಸಿ ಪೂರಾ ಗ್ರಾಮ	ಖುಷ್ಕೀ ಪರಂಪೋಕು ತರೀ ಬಾಗಾಯತು	67 74 180 10 333	24 13 34 22 13	1273	0	0	658 ಹರಾಜು ತಾರೀಖು ವರಿಗೆ ಬಡ್ಡಿ ಬರಬೇಕು.	0	9

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಪಿ. ಪಂಚನಾಥರಾವ್,
ಸಬ್ ಡಿವಿಜನ್ ಆಫಿಸರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 469.

ಮೃತಪಟ್ಟ ನಲ್ಲೂರು ರಂಗರಾಯರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ನಲ್ಲೂರು ನಾರಾಯಣರಾಯರು, ಮೃತಪಟ್ಟ ಸದರೀ ರಂಗರಾಯರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಹಾಸನದ ಸ್ಥಳದ ಸದರೀ ನಾರಾಯಣರಾಯರು, ಸದರೀ ವಾಸಸ್ಥರಾಗಿ ಮೃತಪಟ್ಟ ರಂಗರಾಯರವರ ಜಿಂದಗಿ ಬಗ್ಯಾಗಿ ಬರತಕ್ಕ 10,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣರಾಯರ ಅರ್ಜಿಯನ್ನು ಸನ್ 1896ನೇ ಇಸವಿ ಜುಲೈ ತಿಂಗಳ ತಾರೀಖು 6ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ಜೂನ್ ತಿಂಗಳ 16ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮೆ.

ತಾರೀಖು 5ನೇ ಜೂನ್ 1896ನೇ ಇಸವಿ.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ;—

ಈ ಕೆಳಗೆ ನಮೂದಿಸುವ ಸಂದಲ್ ಕೋಠಿಗಳಿಗೆ ಅವುಗಳ ಬಾಜುದಲ್ಲಿ ಕಾಣಿಸಿರುವ ತಾಲ್ಲೂಕಿನ ಹೋಬಳಿಗಳಿಂದ ವಣ ಸಂದಲ್ ಮರಗಳು ಮತ್ತು ಹೊಂಭಸಿ ಎಂಬ ಕರಿಯಲ್ಪಡುವ ಕ್ಷೀಣ ಹೊಂದುತ್ತಾ ಇರುವ ಬಲಿತ ಸಂದಲ್ ಮರಗಳು, ಮತ್ತು ನೆಲದಲ್ಲಿ ಬಿಟ್ಟು ಇರುವ ಬೇರುಗಳು, ಬೇರು ಸಹಿತ ಕೀಳಿಸಿ ಬೀಳ ಮರ ಕಾಮಗಾರಿಯಿಂದ 1896ನೇ ಇಸವಿ ಅಕ್ಟೋಬರು 31ನೇ ತಾರೀಖಿನೊಳಗೆ ಕೋಠಿಗೆ ರವಾನಿಸಿ ಕೊಡುವದಕ್ಕೆ ಕಂಟ್ರಾಕ್ಟು ದರಖಾಸ್ತುಗಳು ಅಂಗೀಕರಿಸಲ್ಪಡುತ್ತೆ.

ನಂಬರು.	ಕೋಠೀಹೆಸರು.	ಜಮಾಯಿಸುವ ಮೊತ್ತ.	ಹೋಬಳಿ ಹೆಸರು.	ತಾಲ್ಲೂಕು ಹೆಸರು.
1	ಶಿವಮೊಗ್ಗ	30 ಟನ್.	ಆಗರದಹಳ್ಳಿ ತರಫ್ ಹೊಳಲೂರು	ಶಿವಮೊಗ್ಗ
		20 ,,	ಹೊಳೇಹೊನ್ನೂರು	ಡಿಟೋ
		25 ,,	ಚನ್ನಗಿರಿ	ಚನ್ನಗಿರಿ
		25 ,,	ಬುಬ್ಬಾಣಿ	ಡಿಟೋ
2	ಸಾಗರ	25 ,,	ಅನಂತಪುರ	ಸಾಗರ
3	ತೀರ್ಥಹಳ್ಳಿ	25 ,,	ಆರಗ	ತೀರ್ಥಹಳ್ಳಿ
		25 ,,	ಅಗ್ರಹಾರ	ಡಿಟೋ
		25 ,,	ಹುಮಚ	ನಗರ
		200		

2. ಎಲ್ಲಾ ಟೆಂಡರುಗಳ ಮೇಲೂ ಇಂಥಾ ಸಂದಲ್ ಕೋಠಿಗೆ ವಣ ಮತ್ತು ಹೊಂಭಶೀ ಸಂದಲ್ ಜಮಾಯಿಸುವ ಬಗ್ಗೆ ಟೆಂಡರ್ಎಂದು ಬರಿಯತಕ್ಕದ್ದು. ಮತ್ತು ಟೆಂಡರ್ ಸಂಗಡ ಕೋಠಿ ಒಂದಕ್ಕೆ 50 ರೂಪಾಯಿನಂತೆ ಕರ್ರೆನ್ಸೀ ನೋಟು ಮೂಲಕ ಠೇವಣಿ ಹಾಜರ್ಮಾಡತಕ್ಕದ್ದು. ಅಂಗೀಕರಿಸದೇ ಇದ್ದ ಟೆಂಡರಿನ ಸಂಗಡ ಮೊಬಲಗು ವಾಪಸು ಮಾಡಲ್ಪಡುವದು.

3. ಟೆಂಡರುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಹೆಸರಿನಲ್ಲಿ ಬರಿಯತಕ್ಕದ್ದು. 1896ನೇ ಇಸವಿ ಜುಲೈ 15ನೇ ತಾರೀಖು ದಿವಿ 12 ಘಂಟೆವರಿಗೂ ಸದರೀ ಟೆಂಡರುಗಳು ಅಂಗೀಕರಿಸಲ್ಪಡುವವು.

4. ಪ್ರತಿಯೊಬ್ಬ ದರಖಾಸ್ತುದಾರನೂ ಈ ಕೆಳಗೆ ನಮೂದಿಸುವ ತಪಸೀಲಿನಂತೆ ವಣ ಮತ್ತು ಹೊಂಭಶೀ ಸಂದಲು ಮರಗಳ ಜಡ ಸಹಿತ ಕೀಳಿಸಿ ಬಿಳೀ ಮರ ಕಾಮಗಾರಿಯಿಂದ ಕೋಠಿಗೆಪ್ರತಿಯೊಂದು ಹೋಬಳಿ ಯಿಂದ ರವಾನಿಸುವದಕ್ಕೆ ಟನ್ ಒಂದಕ್ಕೆ ಆಖ್ಯೈರ ದರ ನಮೂದಿಸತಕ್ಕದ್ದು.

(1). ಒಣಗಿರುವ ಸಂದಲ್ ಮರಗಳು ಮತ್ತು ನೆಲದಲ್ಲಿ ಬಿಟ್ಟ ಹಳೇ ಜಡಗಳು ಜಮಾವಣಿ ಬಗ್ಗೆ.

(2). ಕ್ಷೀಣ ಹೊಂದುತ್ತಾ ಇರುವ ಸುಮಾರು ಅರ್ಧಭಾಗದವರಿವಿಗೂ ವಣಗಿರುವ ಹೊಂಭಶೀ ಎಂದು ಕರಿಯಲ್ಪಡುವ ಬಲಿತಸಂದಲ್ ಮರಗಳೂ.

(5). ಕಂಟ್ರಾಕ್ಟುದಾರನು ಲೆಖ್ಖಕ್ಕೆ ತರಲ್ಪಟ್ಟ ತೇದಾದಿನ ಮೇಲೆ ಆರವಾಶಿ ವಗೈರೆ ಭರ್ತಿಗಾಗಿ ಟನ್ ಒಂದಕ್ಕೆ ಎರಡು ಹಂಡ್ರಡ್‌ವೇಟು ಅಂದರೆ ಶೇಕಡಾ 10 ರಂತೆ ಹೆಚ್ಚು ತೂಕವನ್ನು ಕೊಡಲು ಬದ್ಧನಾಗಿರತಕ್ಕದ್ದು.

6. ಸಂದಲ್ ಮರಗಳ ಚುನಾಯಿಸೋಣ, ಕೀಳುವಿಕ್ಕೆ, ಒರಟು ಕೆತ್ತನೆ, ಮತ್ತು ಅದೇ ವಿಷಯಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರು ಮಾಡುವ ರೂಲ್ಸು ಮತ್ತು ಕಾನೂನುಗಳಿಗೆ ಕಂಟ್ರಾಕ್ಟುದಾರನು ಖಂಡಿತವಾಗಿ ಬದ್ಧನಾಗಿರತಕ್ಕದ್ದು.

7. ಒಂದು ಅಂಗುಲಕ್ಕಿಂತ ಜಾಸ್ತಿಯಾಗಿ ಚೇಗುವುಳ್ಳ ಶಿಪ್ಪೆ ತಲೆಗಳು ಜಂಗಲುಗಳಲ್ಲಿ ಬಿಡಕೂಡದು. ವರಟು ಕೆತ್ತನೆ ಮಾಡದೆ ಹಾಗೆಯೇ ಕೋಠಿಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಛಾರ್ಜು ಮಾತ್ರ ಪಾವತಿ ಮಾಡಲ್ಪಡುತ್ತೆ. ಬುಕಣಿ ಮತ್ತು ಚೇಗು ಇರತಕ್ಕ ಚಕ್ಕೆ, ಮರಗಳ ಜೊತೆಯಲ್ಲಿಯೇ ಸಾಗಿಸಲ್ಪಡಬೇಕು.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರು ಪ್ರತಿ ಮಾಹೆಯಲ್ಲೂ ಎಷ್ಟು ಮೊತ್ತ ತಯಾರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕಮಾಡುತ್ತಾರೋ ಅಷ್ಟು ಮೊತ್ತವನ್ನು ಖಂಡಿತವಾಗಿ ಕೋಠಿಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಿಂದ ಮೊಕರೂರ್ಮಾಡಲ್ಪಡುವ ಪೆನಾಲ್ಟಿಗೆ ಗುರಿಯಾಗತಕ್ಕದ್ದು.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಟೆಂಡರ್ ಅಂಗೀಕರಿಸಿದ ವರ್ತಮಾನವನ್ನು ತಿಳಿದ ಒಂದು ವಾರದೊಳಗಾಗಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರದುಕೊಡಬೇಕಲ್ಲದೆ ತನ್ನ ಕಂಟ್ರಾಕ್ಟು ಸರಿಯಾಗಿ ಪೂರೈಸಿಕೊಡುವದಕ್ಕೆ ಖಾತರಿಗಾಗಿ ಪುನಃ 100 ಒಂದು ನೂರು ರೂಪಾಯಿ ಠೇವಣೀ ಇಡತಕ್ಕದ್ದು. ಕಂಟ್ರಾಕ್ಟಿನ ಷರತ್ತಿನಲ್ಲಿ ಯಾವದನ್ನಾದರೂ ತಪ್ಪಿದರೆ ಠೇವಣೀ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

10. ಕಮಿಷ್ಮಾ ದರದ ಟೆಂಡರ್ ಆಗಲಿ ಯಾ ಮತ್ಯಾವ ಟೆಂಡರೇ ಆಗಲಿ ತಿರಸ್ಕರಿಸುವದಕ್ಕೆ ಡಿಸ್ಟ್ರಿಕ್ಟ ಫಾರೆಸ್ಟು ಆಫಿಸರ್ರವರು ಸ್ವತಂತ್ರರಾಗಿರುತ್ತಾರೆ. ಮತ್ತು ಅಂಥಾ ಅಂಗೀಕರಿಸಲ್ಪಡುವ ಟೆಂಡರುಗಳು ಡೆಪ್ಯುಟಿ ಕಮಿಷ್ನರ್ ಸಾಹೇಬರವರ ಒಪ್ಪಿಗೆಯಿಂದ ಫಾರೆಸ್ಟು ಕನ್ಸರವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

11. ಸಂಪಲನ್ನು ಸಾಗಿಸುವದಕ್ಕೋಸ್ಕರ ಬೇಕಾಗುವ ಏರ್ಪಾಟುಗಳನ್ನು ಕಂಟ್ರಾಕ್ಟುದಾರನೇ ಮಾಡಿಕೊಳ್ಳತಕ್ಕದ್ದು. ಸರ್ಕಾರದವರು ರಸ್ತೆಯನ್ನಾಗಲಿ ಛಂಡೀದಾರಿಯನ್ನಾಗಲಿ ಮಾಡಿಸಿಕೊಡುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಈ ನೆಪದಿಂದ ಸಂಡಲ್ ವಾಯಿದೆಯಲ್ಲಿ ತಾರದೆಯಿದ್ದರೆ, ಯಾವ ಕಾರಣವೂ ಅಂಗೀಕರಿಸಲ್ಪಡಲಾರದು.

12. ಇನ್ಯಾವ ಸಂಗತಿಗಳಾದರೂ ತಿಳಿದುಕೊಳ್ಳಬೇಕಾಗಿದ್ದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಕೇಳತಕ್ಕದ್ದು. ಮತ್ತು ಅಲ್ಲಿ ನೋಟಿಸ ಬೋರ್ಡಿನ ಮೇಲೆ ಇಸ್ತಿಹಾರುನಾಮೆಯ ನಕಲು ಮತ್ತು ಕಂಟ್ರಾಕ್ಟು ಮುಚ್ಚಳಿಕೆ ನಕಲು ಸಹ ನೋಡಬಹುದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್,
ಮೈಸೂರ್.

ನಗರ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 332.

ಮೃತಪಟ್ಟ ಶಿಲೆಮಾನುಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಅಬ್ದುಲ್ ರಸೂಲುಸಾಬಿ ಬಿನ್ ಶಿಲೆಮಾನ್‌ಸಾಬ್, ಚಿಕ್ಕಮಗಳೂರು ವಾ. ಮೃತಪಟ್ಟ ಸದರಿ ಶಿಲೆಮಾನ್‌ಸಾಬರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ಸ್ಥಳದ ಅಬ್ದುಲ್ ರಸೂಲುಸಾಬರು, ಚಿಕ್ಕಮಗಳೂರು ವಾಸಸ್ಥರಾಗಿ ಮೃತಪಟ್ಟ ಶಿಲೆಮಾನ್‌ಸಾಬರ ಜಿಂದಗಿ ಬಗ್ಯಾಗಿ ಬರತಕ್ಕ ಚಿಕ್ಕಮಗಳೂರು ಮುನಸಿಫ್ ಕೋರ್ಟ್ 1894ನೇ ಇಸವಿ ಜಾರಿ ನಂಬರ್ 69ರಲ್ಲಿ ಬರಬೇಕಾದ 72—8—0 ರೂ. ಸಾಲವನ್ನು ವಸೂಲ್ ಮಾಡುವದಕ್ಕೆ ಸನ್1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ರಖಾಸ್ತುದಾರರಾದ ಅಬ್ದುಲ್ ರಸೂಲ್‌ಸಾಬರ ಅರ್ಜಿಯನ್ನು ಸನ್ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿಲೆಮಾನ್‌ಸಾಬರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ಜೂನ್ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಸಿ ನಮ್ಮ ದಸ್ತಖತ್ತುಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ ಜಡ್ಜ್.

Mysore Govt. Central Press, Bangalore.—1896.

47

ಮೈಸೂರ ಗೆಜೆಟ್.

ನಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 26.

ಬೆಂಗಳೂರು, ಗುರುವಾರ, ಜುಲೈ ತಾ|| 2, ಸ್ನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಇಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ಇಂಟೆಂಡೆಂಟರು, ಫಾರೆಸ್ಟ್ ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 15ನೇ ಜೂನ್ 1896.

ಇಂಜಿನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾರ್ಥಿ ವೇತನಗಳು.

ನಂ. 13507.—ಎಡಿ. 427, ಇದರಿಂದ ಪ್ರಸಿದ್ಧ ಪಡಿಸುವದೇನಂದರೆ:—ಮೈಸೂರ್ ಗವರ್ನಮೆಂಟಿನವರು ಈ ವರುಷ ಮೂರು ಇಂಜಿನಿಯರಿಂಗ್ ವಿದ್ಯಾರ್ಥಿವೇತನಗಳನ್ನು ಮತ್ತು ಮೂರು ಮೆಡಿಕಲ್ ವಿದ್ಯಾರ್ಥಿ ವೇತನಗಳನ್ನೂ ಕೊಡುವರು.

2. ಇಂಜಿನಿಯರಿಂಗ್ ವಿದ್ಯಾರ್ಥಿವೇತನಗಳು ಮಾಹೆಯಾನಾ 30 ರೂಪಾಯಿಗಳುಳ್ಳವು, ಮತ್ತು ಮದ್ರಾಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೂರು ವರುಷಗಳ ಕಾಲದವರಿವಿಗೆ ಕೊಡಲ್ಪಡುವವು. ಗ್ರಾಜುಯೇಟ್‌ಗಳಲ್ಲದವರಿಗಿಂತ ಪದಾರ್ಥ ವಿಜ್ಞಾನ ಶಾಸ್ತ್ರ ಯಾ ಗಣಿತಶಾಸ್ತ್ರಗಳನ್ನ ತಮ್ಮ ಐಚ್ಛಿಕ ಭಾಗವಾಗಿ ತೆಗೆದುಕೊಂಡು ಅವುಗಳಲ್ಲಿ ತೇರ್ಗಡೆಯಾಗಿರತಕ್ಕ ಗ್ರಾಜ್ಯುಯೇಟ್‌ಗಳು ಚುನಾಯಿಸಲ್ಪಡುವರು. ಜೀವನಾರ್ಥ ಮತ್ತು ಇತರ ಲಾಯಖಾದ ಭತ್ಯಗಳು ಪ್ರಾಕ್ಟಿಕಲ್ ಕೋರ್ಸಿನಲ್ಲಿ (ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಾಗಿದ್ದ ಪಕ್ಷದಲ್ಲಿ ಒಂದು ವರುಷವೂ ಮತ್ತು ಯಾಂತ್ರಿಕ ಇಂಜಿನಿಯರುಗಳಿಗೆ ಎರಡು ವರುಷಗಳೂ) ಕೊಡಲ್ಪಟ್ಟು ಅದನ್ನೇ ಥಿಯೊರಿಟಿಕಲ್ ಕೋರ್ಸಿನಲ್ಲಿಯೂ ಅನುಸರಿಸಲ್ಪಡುವವು. ಪ್ರಾಕ್ಟಿಕಲ್ ಕೋರ್ಸಿನಲ್ಲಿ ಅಭ್ಯಾಸಿಸುವ ಕಾಲವು ಪೆನ್ಷನಿಗೆ ಲಾಯಖಾದ ನೌಕರಿಯಾಗಿ ಎಣಿಸಲ್ಪಡುವದು, ಪರಂತು ವಿದ್ಯಾರ್ಥಿಗಳು ಕಾಲೇಜಿನಿಂದ ಬಿಡುಗಡೆಯಾದ ಕೂಡ್ಲೆ ಮೈಸೂರ್ ಪಬ್ಲಿಕ್

ವರ್ಕ್ಸ್ ಇಲಾಖೆಯಲ್ಲಿ ದಾಖಲ್ಮಾಡಲ್ಪಡುವರು. ಅವರು ತೇರ್ಗಡೆಯಾದ ತರುವಾಯ ಅವರ ನೌಕರಿಯು ಮೈಸೂರ್ ಗವರ್ನಮೆಂಟಿನವರಿಗೆ ಆವಶ್ಯಕವಾಗಿದ್ದಲ್ಲಿ ಮೈಸೂರ್ ಇಲಾಖೆಯಲ್ಲಿ ನೌಕರಿ ಮಾಡುವ ಬಗ್ಯೆ ಯಾ ಅವರು ಹಾಗೆ ನೌಕರಿ ಮಾಡಲು ಅನಂಗೀಕರಿಸಿದರೆ ಅವರಿಂದ ತೆಗೆದುಕೊಳ್ಳಲ್ಪಟ್ಟ ವಿದ್ಯಾರ್ಥಿವೇತನದ ಪೂರಾ ಮೊಬಲಗು ವಾಪಸು ಕೊಡುವಬಗ್ಯೆ ಸಹ ಒಂದು ವಡಂಬಡಿಕೆಯನ್ನು ಬರೆದು ಕೊಡಲು ಬದ್ಧರಾಗಿರಬೇಕು.

3. ಮೆಡಿಕಲ್ ವಿದ್ಯಾರ್ಥಿವೇತನಗಳು ಮಾಹೆಯಾನಾ 25 ರೂಪಾಯಿಗಳುಳ್ಳವು, ಮತ್ತು ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಾಗಲಿ ಅಥವಾ ಬೊಂಬಾಯಿ ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲಾಗಲಿ ಕೊಡಲ್ಪಡುವವು; ಮೊದಲು ಹೇಳಿದ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಎಲ್. ಎಂ. ಎಸ್. ಡಿಗ್ರಿ ಕೋರ್ಸಿಗೆ ಅಪೇಕ್ಷಿಸಿದರೆ ನಾಲ್ಕು ವರುಷಗಳ ಕಾಲದವರಿವಿಗೆ ಯಾ ವಿದ್ಯಾರ್ಥಿಗಳು ಎಂಬಿ., ಸಿ. ಎಂ. ಡಿಗ್ರಿ ಕೋರ್ಸಿಗೆ ಅಪೇಕ್ಷಿಸಿದರೆ ಐದು ವರುಷಗಳ ಕಾಲದವರಿವಿಗೆ, ಕಡೆಗೆ ಹೇಳಿದ ಕಾಲೇಜಿನಲ್ಲಿ ಐದು ವರುಷಗಳವರಿವಿಗೆ ಕೊಡಲ್ಪಡುವವು. ಇತರ ಉಮೇದ್ವಾರರುಗಳಿಗಿಂತ ಬಿ. ಏ. ಅಥವಾ ಎಫ್. ಏ. ಪರೀಕ್ಷೆಯನ್ನು ಪ್ಯಾಸ್ ಮಾಡಿದವರು ಚುನಾಯಿಸಲ್ಪಡುವರು.

4. ಎಲ್ಲಾ ಉಮೇದ್ವಾರರೂ ಮೈಸೂರ್ ದೇಶೀಯ್ಯರಾಗಿರಬೇಕು. ಅವರು ಅವರ ವಯಸ್ಸು, ಜಾತಿ ಮತ್ತು ತಂದೆ ಹೆಸರು ವ ಕಸಬು ಇವುಗಳನ್ನು ಅವರ ಅರ್ಜಿಯಲ್ಲಿ ನಮೂದಿಸತಕ್ಕದ್ದು.

5. ಎಲ್ಲಾ ಉಮೇದ್ವಾರರೂ ದೇಹದಾರಢ್ಯದ ವಿಷಯದಲ್ಲಿ ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜನ್ಯವರಿಂದ ಮೆಡಿಕಲ್ ಸರ್ಟಿಫಿಕೇಟನ್ನು ಹಾಜರ್ಮಾಡಬೇಕು.

6. ವಿದ್ಯಾರ್ಥಿವೇತನಗಳ ಕಾಲವು ಪ್ರತಿ ಕಾಲೇಜಿನ ಪ್ರಿನ್ಸಿಪಲ್‌ಯವರಿಂದ ತಲ್ಪಿದ ನಡತೆ ವ ಅಭಿವೃದ್ಧಿಯು ವಳ್ಳೇ ರಿಪೋರ್ಟನ್ನೂ ಮತ್ತು ಆಗಾಗ್ಯೆ ನಡೆಯುವ ಪರೀಕ್ಷೆಗಳಲ್ಲಿ ತೇರ್ಗಡೆ ಆಗುವದನ್ನೂ ಅನುಸರಿಸಿರುವದು.

7. ಇಂಜಿನಿಯರಿಂಗ್ ವ ಮೆಡಿಕಲ್ ವಿದ್ಯಾರ್ಥಿವೇತನಗಳ ಬಗ್ಯಾಗಿ ಅರ್ಜಿಗಳು ಮೈಸೂರ್ ವಿದ್ಯಾಭ್ಯಾಸದ ಇನ್ಸ್ಪೆಕ್ಟರ್ ಜನರಲ್‌ಯವರಿಗೆ 1896ನೇ ಜುಲೈ 1ನೇ ತಾರೀಖಿಗಿಂತ ಮೊದಲೇ ಕಳುಹಿಸಲ್ಪಡಬೇಕು. ಕಾಲೇಜು ವಿದ್ಯಾರ್ಥಿಗಳಿಂದ ಬರುವ ಅರ್ಜಿಗಳು ಪ್ರಿನ್ಸಿಪಲ್ ಯಾ ಹೆಡ್ ಮಾಸ್ಟರ್ ಮೂಲಕ ಕಳುಹಿಸಲ್ಪಡಬೇಕು.

ವ್ಯವಸಾಯ ಸಂಬಂಧದ ವಿದ್ಯಾರ್ಥಿವೇತನಗಳು.

ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಮೈಸೂರ್ ಗವರ್ನಮೆಂಟಿನವರು ಈ ವರುಷ ಎರಡು ವ್ಯವಸಾಯ ಸಂಬಂಧದ ವಿದ್ಯಾರ್ಥಿವೇತನಗಳನ್ನು ಕೊಡುವರು.

2. ವಿದ್ಯಾರ್ಥಿವೇತನಗಳು ಪ್ರೊಗ್ಗು ಮೂವತ್ತುನಾಲ್ಕು ತಿಂಗಳುಗಳು ವಿಸ್ತರಿಸತಕ್ಕ ಮೂರು ಅವಧಿಗಳವರಿವಿಗೆ ಕೊಡಲ್ಪಡುವವು.

3. ಮಾಹೆಯಾನಾ ವಿದ್ಯಾರ್ಥಿವೇತನಗಳ ದರಗಳು ಹ್ಯಾಗಂದರೆ:—

	ರೂ.	ಆ.	ಪೈ.
ಮೊದಲನೇ ವರುಷ	10	0	0
ಎರಡನೇ ವರುಷ	12	8	0
ಮಿಕ್ಕ ಕಾಲ	15	0	0

4. ವಿದ್ಯಾರ್ಥಿಗಳು ಓದುವ ಯಾವ ಕಾಲದಲ್ಲಿ ಎರಡು ದಫಾ ಕಾಲೇಜಿಗೆ ಪ್ರಯಾಣಮಾಡಲಿಕ್ಕೂ ಮತ್ತು ಎರಡು ದಫಾ ಅವರ ಮನೆಗಳಿಗೆ ಪ್ರಯಾಣಮಾಡಲಿಕ್ಕೂ ಮೂರನೇ ಕ್ಲಾಸಿನ ಎರಡು ರೈಲ್ವೆ ಚಾರ್ಜಿಗೆ ಅರ್ಹರಾಗಿರುತ್ತಾರೆ.

5. ವಿದ್ಯಾರ್ಥಿವೇತಗಳಿಗಾಗಿ ಉಮೇದ್ವಾರರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಮತ್ತು ಹದಿನಾರು ವರುಷಕ್ಕೆ ಮೀರಿ ಇಪ್ಪತ್ತೈದು ವರುಷಗಳ ವಳಗಿನ ವಯಸ್ಕರಾಗಿರಬೇಕು. ಅವರು ವ್ಯವಸಾಯವನ್ನು ಅವರ ಕಸಬಾಗಿ ತೆಗದುಕೊಳ್ಳಬೇಕು, ಮತ್ತು ಬಹುಶಃ ಸ್ವದೇಶಾಭಿಮಾನದಿಂದಲೂ ವ ಶ್ರದ್ಧೆಯಿಂದಲೂ ದೇಶದ ವ್ಯವಸಾಯ ಸಂಬಂಧವಾದ ಆದಾಯಗಳನ್ನು ವೃದ್ಧಿಪಡಿಸುವ ಬಗ್ಯೆ ಆಸಕ್ತಿವುಳ್ಳವರಾಗಿರಬೇಕು. ಅವರು ಅವರ ಸ್ವಂತದಲ್ಲಿ 50 ಎಕರೆಗಳಗ ಭೂಮಿಗೆ ಕಡಿಮೆಯಿಲ್ಲದೆ ಇಟ್ಟುಕೊಂಡಿರಬೇಕು ಅಥವಾ 50 ಎಕರೆಗಳ ಭೂಮಿಗೆ ಕಡಿಮೆಯಿಲ್ಲದೆ ಇಟ್ಟುಕೊಂಡಿರತಕ್ಕ ಅವಿಭಕ್ತ ಕುಟುಂಬದವರಾಗಿರಬೇಕು. ಉಮೇದ್ವಾರರು ಆತನು ಯಾ ಆತನ ಕುಟುಂಬದವರು 50 ಎಕರೆಗಳ ಜಮೀನಿಗೆ ಕಡಿಮೆಯಿಲ್ಲದೆ ಯಿಟ್ಟುಕೊಂಡಿದ್ದಾರೆಂಬ ಅಂಶದಲ್ಲಿ ಒಬ್ಬಅಸಿಸ್ಟೆಂಟ್ ಕಮ್ಮಿಷನರ್ ಅಥವಾ ಅಮಲ್ದಾರ್‍ರಿಂದಾಗಲಿ ಒಂದು ಸರ್ಟಿಫಿಕೇಟನ್ನು ಅವರ ಅರ್ಜಿಗಳೊಡನೆ ಮಲಫೂಫಿಸಬೇಕು.

6. ಎಲ್ಲಾ ಉಮೇದ್ವಾರರುಗಳೂ ದೇಹದಾರಢ್ಯದ ವಿಷಯದಲ್ಲಿ ಮೈಸೂರ ಗವರ್ನಮೆಂಟ್ ಸೀನಿಯರ್ ಸರ್ಜನ್ಯವರಿಂದ ಮೆಡಿಕಲ್ ಸರ್ಟಿಫಿಕೇಟನ್ನು ಹಾಜರ್ಮಾಡಬೇಕು.

7. ಗವರ್ನಮೆಂಟಿನವರಿಂದ ನಿಯಮಿಸಲ್ಪಟ್ಟ ವಿದ್ಯಾರ್ಥಿಗಳು ಸೈದಾಪೇಟೆಯ ವ್ಯವಸಾಯ ಸಂಬಂಧದ ಕಾಲೇಜಿನಲ್ಲಿ 1896ನೇ ಜುಲೈ 1ನೇ ತಾರೀಖಿಗಿಂತ ಮೊದಲೇ ದಾಖಲಾಗಬೇಕು. ಅವರು ಕಾಲೇಜಿಗೆ ಶೇರಿದ ನಂತರ ಸದರೀ ಕಾಲೇಜಿನಲ್ಲಿ ನಿಯಾಮಕವಾದ ಕಾಲದವರಿವಿಗೆ ಅವರ ವಿದ್ಯಾಭ್ಯಾಸವನ್ನು ನಡಿಸಿಕೊಂಡು ಬರುವ ಬಗ್ಯೂ ಮತ್ತು ಕಾಲ ಕ್ರಮೇಣ ನಿಯಮಿಸಲ್ಪಡಬಹುದಾದ ಯೋಗ್ಯತಾ ಪರೀಕ್ಷೆಗಳು ಯಾ ಇತರ ಪರೀಕ್ಷೆಗಳಿಗೆ ಹಾಜರಾಗುವ ಬಗ್ಯೂ, ಕಾಲೇಜಿನ ಕಟ್ಟಳೆ ವ ಕಾನೂನುಗಳಿಗೆ ಅನುಸರಿಸುವ ಬಗ್ಯೂ ಮತ್ತು ಅವರುಗಳಿಂದ ಬರತಕ್ಕದ್ದಾದ ವಿಸಿಪ್ಟ ಮೊಬಲಗನ್ನು ಕೊಡುವ ಬಗ್ಯೂ ಒಂದು ವಡಂಬಡಿಕೆಯನ್ನು ಬರದು ರುಜೂಮಾಡಿಕೊಡಬೇಕು; ಮತ್ತು ಸದರೀ ವಡಂಬಡಿಕೆಯು ಅಂಥಾ ವಿದ್ಯಾರ್ಥಿಗಳ ತಂದೆ ಯಾ ತಾಯಿ ಯಾ ಪೋಷಕರಿಂದ ಸಹ ಸದರೀ ವಿದ್ಯಾರ್ಥಿಗಳು ವಡಂಬಡಿಕೆಯ ಷರತ್ತುಗಳ ಮೇರೆ ನಡೆದುಕೊಳ್ಳುವ ಬಗ್ಯೆ ಜವಾಬ್ದಾರ್‍ರಾಗಿರುವದಕ್ಕೆ ರುಜುಮಾಡಲ್ಪಡಬೇಕು. ಮುಂಗಡವಾಗಿ ಒಂದು ಅವಧಿಗೆ ಕೊಡಬೇಕಾದ ಫಿ ಯಾನೆ ರುಸುಂ ರೂಪಾಯಿಗಳು 30.

8. ವಿದ್ಯಾರ್ಥಿವೇತನಗಳ ಬಗ್ಯಾಗಿ ಅರ್ಜಿಗಳು ಮೈಸೂರ್ ವಿದ್ಯಾಭ್ಯಾಸದ ಇನ್ಸ್ಪೆಕ್ಟರ್ ಜನರಲ್‌ಯವರಿಗೆ 1896ನೇ ಜೂನ್ 25ನೇ ತಾರೀಖಿನೊಳಗಾಗಿ ತಲ್ಪುವ ಮೇರೆ ಕಳುಹಿಸಲ್ಪಡಬೇಕು. ಕಾಲೇಜುಗಳ ವಿದ್ಯಾರ್ಥಿಗಳಿಂದ ಕಳುಹಿಸಲ್ಪಡುವ ಅರ್ಜಿಗಳ ಪ್ರಿನ್ಸಿಪಲ್ ಯಾ ಹೆಡ್ ಮಾಸ್ಟರ್ ಮೂಲಕ ಕಳುಹಿಸಲ್ಪಡತಕ್ಕದ್ದು.

ತಾರೀಖು 2ನೇ ಜೂನ್ 1896, ಬೆಂಗಳೂರು.

ನಂ. 13003.—ಲೋ. ಫಂ. 22—95, ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧ ಪಡಿಸುವದೇನಂದರೆ,—ಇದರಡಿ ಕಂಡ ಕಟ್ಟಡಗಳು ವ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ V ಡಿವಿಜನಿನಲ್ಲಿ ಖಲಾಲ್‌ಖಾನರಗಲ್ಲಿ ವಿಸ್ತಾರಪಡಿಸುವ ಬಗ್ಯಾಗಿ ಆವಶ್ಯಕವಾಗಿರುತವೆ:—

ಬ್ಲಾಕ್ ನಂಬರ್.	ಪೈ.	ಡೋರ್ ನಂಬರ್.	ಮಾಲೀಕರ ಹೆಸರು.	ವಿವರ.	ತೆಗದುಕೊಂಡಿರುವ ಬೀಜವರಿ. ಪೂರ್ವ ಪಶ್ಚಿಮ ಅಡಿಗಳು.	ತೆಗದುಕೊಂಡಿರುವ ಬೀಜವರಿ. ಉತ್ತರ ದಕ್ಷಿಣ ಅಡಿಗಳು.	ಚೆಕ್ಕು ಬಂದಿಗಳು. ಪೂರ್ವ.	ಚೆಕ್ಕು ಬಂದಿಗಳು. ಪಶ್ಚಿಮ.	ಚೆಕ್ಕು ಬಂದಿಗಳು. ಉತ್ತರ.	ಚೆಕ್ಕು ಬಂದಿಗಳು. ದಕ್ಷಿಣ.
1	0	0	ಮದಾರ್‌ಸಾಹೆಬ್ ..	ಮನೇಕಟ್ಟಡ ಜಮೀನುಸಹ	$9\frac{1}{2}$	$19\frac{1}{2}$	ಮದಾರ್‌ಸಾಹೆಬರ ಮನೆ	ಸುಬ್ಬಣ್ಣ ಮತ್ತು ರಾಮಣ್ಣನವರ ಮನೆ	ಕರೀಂಸಾಹೆಬರ ಮನೆ	ಹೊಸತಿಗಳರ ಫೇಟೆ
				ಅಂಗಡಿ ಡಿಟೋ	$9\frac{1}{2}$	12	..	..	..	..
2	0	0	ಸುಬ್ಬಣ್ಣ ..	ಮನೇಕಟ್ಟಡ ಜಮೀನುಸಹ	$12\frac{1}{2}$	$17\frac{1}{2}$	ಮದಾರ್‌ಸಾಹೆಬರ ಮನೆ	ರಾಮಣ್ಣನವರ ಮನೆ	ಎ. ಕರೀಂಸಾಹೆಬರ ಮನೆ	ಡಿಟೋ
3	0	0	ರಾಮಣ್ಣ ..	ಡಿಟೋ	$12\frac{1}{2}$	16	ಡಿಟೋ	ಸುಬ್ಬಣ್ಣನವರ ಮನೆ	ರಾಮಣ್ಣ ಮತ್ತು ತಿರುಮಲಪ್ಪ	ಡಿಟೋ
4	0	0	ತಿರುಮಲಪ್ಪ ..	ಡಿಟೋ	11	44	ಡಿಟೋ ಮತ್ತು ಕರೀಂಸಾಹೆಬರ ಮನೆ	ರಾಮಣ್ಣ ಮತ್ತು ತಿರುಮಲಪ್ಪ	ತಿರುಮಲಪ್ಪ	
5	0	0	ಅಬ್ದುಲ್‌ಕರೀಂಸಾಹೆಬ್ ..	ಡಿಟೋ ಮತ್ತು ಖಾಲೀ ಜಮೀನು	11	$28\frac{1}{2}$	ಡಿಟೋ	ಡಿಟೋ	ರಂಗಣ್ಣನವರ ಮನೆ	ಮದಾರ್‌ಸಾಹೆಬರ ಮನೆ
					$12\frac{1}{2}$	$18\frac{1}{2}$				
6	0	0	ರಂಗಣ್ಣ ..	ಖಾಲೀಜಮೀನು	5	$11\frac{1}{2}$	ರಂಗಣ್ಣನವರ ಮನೆ	ಗೋವಿಂದಪ್ಪನವರ ಮನೆ	ಗೋವಿಂದಪ್ಪ ಮತ್ತು ರಂಗಣ್ಣನವರ ಮನೆ	ಎ. ಕರೀಂಸಾಹೆಬರ ಮನೆ
7	0	5	ಗೋವಿಂದಪ್ಪ ..	ಮನೇಕಟ್ಟಡ ಜಮೀನುಸಹ	10	38	ಡಿಟೋ	ಪಟೇಲ್ ಮಹ್ಮದ್‌ಸಾಹೆಬರ ಮನೆ	ಗೋವಿಂಪ್ಪನವರ ಮನೆ	ಖಲಾಲ್‌ಖಾನರ ಮನೆ
				ಖಾಲೀಜಮೀನು	$10\frac{1}{2}$	$15\frac{1}{2}$				
8	0	$\frac{2}{7}$	ಪಟೇಲ್ ಮಹ್ಮದ್‌ಸಾಹೆಬ್ ..	ಮನೇಕಟ್ಟಡ ಜಮೀನುಸಹ	$9\frac{1}{2}$	$43\frac{1}{2}$	ಪಟೇಲ್ ಮಹ್ಮದ್‌ಸಾಹೆಬರ ಮನೆ	ಜಮೀನು ಮತ್ತು ಗೋವಿಂದಪ್ಪನವರ ಮನೆ	ಗಲ್ಲಿ	ರಂಗಣ್ಣ ಮತ್ತು ಗೋವಿಂದಪ್ಪನವರ ಮನೆ
				ಡಿಟೋ	$4\frac{1}{2}$	13				
				ಖಾಲೀಜಮೀನು ಒಂದು ಭಾವಿ	$9\frac{1}{2}$	$16\frac{1}{2}$				
9	0	8	ಸಾಂತಪ್ಪ ..	ಮನೇಕಟ್ಟಡ ಜಮೀನುಸಹ	10	32	ಸಾಂತಪ್ಪನವರಮನೆ	ಗಲ್ಲಿ	ನರಸಿಂಹಣ್ಣನವರ ಮನೆ	ಕುಂಬಾರಪೇಟೆ ಗಲ್ಲಿ
				ಡಿಟೋ	5	$8\frac{1}{2}$				
				ಖಾಲೀಜಮೀನು ಒಂದು ಭಾವಿ	$6\frac{1}{2}$	23				
10	0	5	ದಾಸಪ್ಪ ..	ಮನೇಕಟ್ಟಡ ಜಮೀನುಸಹ	5	12	ಗಲ್ಲಿ	ದಾಸಪ್ಪನವರ ಮನೆ	ಗಲ್ಲಿ	ಆಹಮದ್ ಅಬ್ದುಲ್ಲಾಸಾಹೆಬರ ಮನೆ
11	0	0	ನರಸಿಂಹಣ್ಣ ..	ಖಾಲೀಜಮೀನು	13	21	ನರಸಿಂಹಣ್ಣನವರ ಮನೆ	ಗಲ್ಲಿ	ಚಿನ್ನಪ್ಪನವರ ಮನೆ	ಸಾಂತಪ್ಪನವರಮನೆ
12	0	0	ಪಾಪಣ್ಣ ..	ಮನೇಕಟ್ಟಡ ಜಮೀನುಸಹ	10	29	ಪಾಪಣ್ಣನವರ ಮನೆ	ಗಲ್ಲಿ	ಮುನಿಯಪ್ಪನವರ ಮನೆ	ನರಸಿಂಹಣ್ಣನವರ ಮನೆ
13	0	8	ಮುನಿಯಪ್ಪ ..	ಡಿಟೋ	10	$31\frac{1}{2}$	ಮುನಿಯಪ್ಪನವರ ಮನೆ	ಗಲ್ಲಿ	ಪಿ. ಮಹಮ್ಮದ್‌ಸಾಹೆಬ್	ಚಿನ್ನಪ್ಪನವರಮನೆ
				ಖಾಲೀಜಮೀನು	10	$13\frac{1}{2}$				
14	0	0	ಪಿಲ್ಲಣ್ಣ ..	ಮನೇಕಟ್ಟಡ ಜಮೀನುಸಹ	$3\frac{3}{4}$	33	ಪಿಲ್ಲಣ್ಣನವರ ಮನೆ	ಗಲ್ಲಿ	ಪಿಲ್ಲಣ್ಣನವರ ಮನೆ	ಕುಂಬಾರಪೇಟೆ

ತಾರೀಖು 29ನೇ ಮೇ 1896, ಬೆಂಗಳೂರು.

ನಂ. 10408.—ಫಾ. ಫೈ. 94—95, ಸರ್ 1894ನೇ ಇಸವಿಯ VIIನೇ ನಂಬರ ಲ್ಯಾಂಡ್ ಅಕ್ವಿಜಿಷರ್ ರೆಗ್ಯುಲೇಷನಿನ 6ನೇ ಸೆಕ್‌ಷರ್ ನಿಯಮಗಳನುಸರಿಸಿ ಇದರಡಿ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಾಗಾಗಳು ಸರ್ಕಾರ್ ಕೆಲಸಕ್ಕೆ ಅಂದರೆ, ಮೈಸೂರ್ ಡಿಸ್ಟ್ರಿಕ್ಟಿನ ನಾರಾಯಣದುರ್ಗ ಸ್ಟೇಟ್ ಫಾರೆಸ್ಟಿನಲ್ಲಿ ಸೇರಿಸಿಕೊಳ್ಳುವ ಬಗ್ಗ್ಯಾಗಿ ಆವಶ್ಯಕವಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಹೆಸರುಗಳು.	ಬೇಕಾಗಿರುವ ಜಮೀನ್ ತಪ್ಸೀಲ್.							ಚಕ್ಕು ಬಂದಿಗಳು.				
					ಖುಷ್ಕಿಯಾ ತರೀ.	ಸರ್ವೆ ನಂ.	ಬೀಜವರಿ.		ಬೇರೀಜು.			ಪೂರ್ವ. ಸರ್ವೆ ನಂ	ಪಶ್ಚಿಮ. ಸರ್ವೆ ನಂ.	ಉತ್ತರ ಸ. ನಂ.	ದಕ್ಷಿಣ ಸರ್ವೆ ನಂ	
							ಎ.	ಗು.	ರೂ.	ಆ.	ಪೈ.					
ಮೈಸೂರು.	ಕೃಷ್ಣರಾಜಪೇಟೆ.	ಕಸಬಾ ಸಂತೇಬಾಚಹಳ್ಳಿ.	ಸಿಂಧಘಟ್ಟ.	ಹುಚ್ಚೇಗವುಡ ಮತ್ತು ಆತನ ಸಹೋದರರು.	ಖುಷ್ಕೀ	481	11	3	9	8	0	486	482 ವ 483	484	484ವ485	ಸಿಂಧಘಟ್ಟದ
					ಡಿಟ್ಟೋ	482	0	24	0	8	0	481	483	481	481	ಡಿಟ್ಟೋ
					ಡಿಟ್ಟೋ	483	5	2	4	8	0	481 ವ 482	484	484	484	ಡಿಟ್ಟೋ
					ಡಿಟ್ಟೋ	485	3	15	3	0	0	484	484	481	484	ಡಿಟ್ಟೋ
					ಡಿಟ್ಟೋ	486	5	19	5	0	0	484 ವ 487	481	484	484	ಡಿಟ್ಟೋ
					ಡಿಟ್ಟೋ	487	6	19	5	8	0	484	486 ವ 484	484	484	ಡಿಟ್ಟೋ
					ಡಿಟ್ಟೋ	489	1	19	1	12	0	488	490 ವ 484	484	484	ಡಿಟ್ಟೋ
					ಡಿಟ್ಟೋ	491	0	23	0	8	0	484	484	484	ಬಂದುಮನೆ	ನಂದಿಪುರ
					ತರೀ	488	4	3	14	0	0	484	489	484	484	ಡಿಟ್ಟೋ
					ಡಿಟ್ಟೋ	490	1	31	4	8	0	489	484	484	484	ಡಿಟ್ಟೋ

ಸರ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷರ್ ರೆಗ್ಯುಲೇಷನಿನ 6ನೇ ಸೆಕ್‌ಷರ್ ಅನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ ಬೆಂಗಳೂರು ಅರಮನೆಗೆ ಉದ್ದೇಸಿಸಲ್ಪಟ್ಟ ಹೊಸರಸ್ತೆಯನ್ನು ಹಾಕುವ ಬಗ್ಗ್ಯಾಗಿ ಅವಶ್ಯಕವಾಗಿರುತವೆ.

ಜಂಬರ ನಂಬರು.	ತಾಲ್ಲೂಕು.	ಹೋಬಳಿ.	ಗ್ರಾಮ.	ಮಾಲೀಕರ ಹೆಸರು.	ತೆಗದುಕೊಂಡಿರುವ ವಿಸ್ತೀರ್ಣ.				ಚಕ್ಕುಬಂದಿ.				ಷರಾ.
					ವಿವರ.	ಸರ್ವೆ ನಂ.	ಬೀಜವರಿ.		ಪೂರ್ವ.	ಪಶ್ಚಿಮ	ಉತ್ತರ.	ದಕ್ಷಿಣ.	
							ಎ.	ಗುಂ.					
1	ಬೆಂಗಳೂರು	ಹೆಸರೂರು	ಹನುಮಂತಪುರ	ಇಟ್ಟಿಗೆ ವೆಂಕಟರಮಣಪ್ಪ	ಖುಷ್ಕೀ	6ರ ಭಾಗ	0	8	ರಸ್ತೆ	ರಸ್ತೆ	ಸರ್ವೆ ನಂ. 56	ನಾಲಾ	
2			ಮಾಳೇನಹಳ್ಳಿ	ಮುನಿಯಪ್ಪ ಬಿನ್ ಬಸಣ್ಣ ಹಿಡುವಳೀದಾರ ಪಾಪಣ್ಣ	ಖುಷ್ಕೀ	5ರ ಭಾಗ	0	3	ರಸ್ತೆ	ರಸ್ತೆ	ಸರ್ವೆ ನಂ. 5	ರಸ್ತೆ	

ತಾರೀಖು 25ನೇ ಜೂನ್ 1896.

ನಂ. 13805.—ಎಡಿ. 439, ಮೈಸೂರ್ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಮಿಸ್ಟರ್ ಎಚ್. ಜೆ. ಭಾಭಾ ಯವರು ಮೂರು ತಿಂಗಳ ಪ್ರಿವಿಲೇಜ್ ರಜಾದಿಂದ ವಾಪಸ್ ಬಂದು 1896ನೇ ಜೂನ್ 18ನೇ ಮಧ್ಯಾಹ್ನದ ಪೂರ್ವಾನ್ಹದಲ್ಲಿ ತಮ್ಮ ಆಫೀಸಿನ ಚಾರ್ಜನ್ನು ಮರಳಿ ವಹಿಸಿರುತ್ತಾರೆ.

ನಂ. 13818.—ಮಿ. 2064, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಗವರ್ನ್‌ಮೆಂಟ್ ಪ್ರೆಸ್ ವ ಸ್ಟೋರ್‌ಗಳ ಸೂಪರಿಂಟೆಂಡೆಂಟ್ ಮತ್ತು ಮೈಸೂರ್ ಗೆಜೆಟ್ ಕಂಪೈಲರ್ ಮಿಸ್ಟರ್ ಸಿ. ವಿ. ರಾಘವಾಚಾರ್ಲು ಯವರಿಗೆ, ಮಾಹೆ ಮಜಕೂರು 26ನೇ ಮಧ್ಯಾಹ್ನಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಏಳು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಜೂರು ಹೆಡ್ ಶಿರಸ್ತೇದಾರ್ ಮಿಸ್ಟರ್ ಸಿ. ರಾಮರಾಯರು, ಅವರ ಕೆಲಸಗಳೊಂದಿಗೆ ಸದರೀ ಮಿಸ್ಟರ್ ಸಿ. ವಿ. ರಾಘವಾಚಾರ್ಲು ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಪ್ರೆಸ್, ಸ್ಟೋರ್‌ಗಳು ವ ಗೆಜೆಟ್ ಆಫೀಸಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 26ನೇ ಜೂನ್ 1896.

ನಂ. 13845.—ಜು. 1596, ಶಿವಮೊಗ್ಗಾ ಡಿಸ್ಟ್ರಿಕ್ಟ್ ಪೋಲೀಸ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಆರ್. ಬಿ. ಪ್ಯೂಮರ್‌ಯವರಿಗೆ, 1896ನೇ ಮೇ 5ನೇ ಮರ್ಕುಂ 12229.—ಜು. 1389ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ನಾಲ್ಕು ದಿನಗಳ ಪರೀಕ್ಷಾರ್ಥ ರಜಾವನ್ನ 1896ನೇ ಮೇ 16ರ ಲಾಗಾಯತು 19ರ ವರಿಗೆ ಉಭಯ ದಿನಗಳೂ ಶೇರಿ ಉಪಯೋಗಿಸಿಕೊಂಡಿರುತ್ತಾರೆ.

ತಾರೀಖು 29ನೇ ಜೂನ್ 1896.

ನಂ. 13599.—ಮಿ. 192, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಸ್ಟೇಟ್‌ಜಿಯೋಲಾಜಿಸ್ಟ್ ಮೆಸ್ಟರ್ ಆರ್. ಬ್ರೂಸ್‌ಫುಟ್, ಎಫ್. ಜಿ. ಎಸ್., ಯವರಿಗೆ, ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 20ನೇ ಜೂನ್ 1896.

ನಂ. 11094.—ರೆ. 4351, ಡೆಪ್ಯುಟಿ ಕಮಿಷನರ್ ಮೆಸ್ಟರ್ ಸಿ. ಮಾದಯ್ಯನವರು, ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರಿ ಮೆಸ್ಟರ್ ಬಿ. ಜಿ. ಕೃಷ್ಣಯ್ಯಂಗಾರ್ರವರಿಂದ ಕೋಲಾರ್ ಡಿಸ್ಟ್ರಿಕ್ಟ್ ವ ಟ್ರೆಜರೀ ಚಾರ್ಜನ್ನು ಮಾಹೆ ಮಜಕೂರ್ 12ನೇ ತಾರೀಖಿನ ಮಧ್ಯಾನ್ಹಾತ್ಪರ ಪುನಃ ವಹಿಶಿರುತ್ತಾರೆ.

ನಂ. 11091.—ರೆ. 4348, ತುಮಕೂರ್ ಡಿಸ್ಟ್ರಿಕ್ಟ್ ಯಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಮಿರ್ ಕಮಾಲುದ್ದೀನ್ ಅಲಿಖಾನರು, ಅವರಿಗೆ 1896ನೇ ಜೂನ್ 6ನೇ ಮರ್ಕುಂ 10629.—4195ನೇ ನಂ. ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ 31 ದಿನಗಳ ಪ್ರಿವಿಲೀಜ್ ರಜಾವನ್ನ 1896ನೇ ಮೇ 18ನೇ ತಾರೀಖಿನ ಮಧ್ಯಾನ್ಹಾತ್ಪರದ ಲಾಗಾಯತು ಉಪಯೋಗಿಸಿಕೊಂಡು ಮಾಹೆ ಮಜಕೂರು 11ನೇ ಮರ್ಕುಮಿನ ಪೂರ್ವಾನ್ಹದಲ್ಲಿ ಕೆಲಸಕ್ಕೆ ವಾಪಸ್ ಬಂದ ಸಬಬು ಉಪಯೋಗಿಸಿಕೊಳ್ಳದ ಉಳಿದ ರಜಾ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 11097.—ರೆ. ಫೈ. 125—95, ಕೊಪ್ಪದ ತಾಲ್ಲೂಕು ಅಮಲ್‌ದಾರ್ ಎನ್. ಸುಬ್ಬರಾಯರು, ಅವರಿಗೆ 1896ನೇ ಫೆಬ್ರವರಿ 21ನೇ ಮರ್ಕುಂ 7505.—ರೆ. 2930ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ್ ರಜಾವನ್ನ 1896ನೇ ಮಾರ್ಚಿ 22ನೇ ತಾರೀಖು ಲಾಗಾಯತು ಉಪಯೋಗಿಸಿಕೊಂಡು 1896ನೇ ಮೇ 30ನೇ ಮರ್ಕುಮಿನ ಪೂರ್ವಾನ್ಹದಲ್ಲಿ ಕೆಲಸಕ್ಕೆ ವಾಪಸು ಬಂದ ಸಬಬು ಉಪಯೋಗಿಸಿಕೊಳ್ಳದೇ ಉಳಿದ ರಜಾ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 11101.—ರೆ. ಫೈ. 105—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತಿಪಟೂರ್ ತಾಲ್ಲೂಕು ಅಮಲ್‌ದಾರ್ ಬಿ. ಸೀತಾರಾಮಯ್ಯನವರಿಗೆ, ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 24ನೇ ಜೂನ್ 1896.

ನಂ. 11088.—ಫೈ. 795, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಸ್ಟೇಟ್ ಹುಜೂರು ಖಜಾನೆಯ ಟ್ರೆಜರರ್ ಮೆಸ್ಟರ್ ಟಿ. ರಾಯಲುಚೆಟ್ಟಿಯವರಿಗೆ, ಮಾಹೆಮಜಕೂರು 24ನೇ ಮರ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 25ನೇ ಜೂನ್ 1896.

ನಂ. 11216.—ರೆ. 4397, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಮುಳಬಾಗಲ್ ತಾಲ್ಲೂಕ್ ಅಮಲ್‌ದಾರ್ ಮಹದೇವರಾಯರಿಗೆ, 1896ನೇ ಜುಲೈ ಗುರ್ರೇ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕೋಲಾರ್ ಡಿಸ್ಟ್ರಿಕ್ಟ್ ಟ್ರೆಜರಿಯ ಟ್ರೆಜರರಾದ ಡಬ್ಲ್ಯು. ಶಾಮರಾಯರು, ಸದರೀ ಮಹದೇವರಾಯರು ರಜಾದ ಮೇಲಿರುವಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮುಳಬಾಗಲ್ ತಾಲ್ಲೂಕಿನ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 11172.—ರೆ. 4376, ಸನ್ 1888ನೇ ಇಸವಿಯ IVನೇ ರೆಗ್ಯುಲೇಷನಾದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ, ಮೈಸೂರ್ ಗವರ್ನಮೆಂಟಿನವರು ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ದೊಡ್ಡಸೋಮನಹಳ್ಳಿ ಜೋಡಿ ಗ್ರಾಮಕ್ಕೆ ಲಗಾವ್ ಮಾಡತಕ್ಕದ್ದೆಂದು ಆಜ್ಞಾಪಿಸುತ್ತಾರೆ.

ನಂ. 11180.—ಫಾ. ಫೈ. 92—95, ಫಾರೆಸ್ಟುಗಳ ಅಸಿಸ್ಟೆಂಟ್ ಕನ್‌ಸರ್ವೇಟರ್ ಮೆಸ್ಟರ್ ಎಚ್. ಮುತ್ತಪ್ಪನವರು, ಫಾರೆಸ್ಟುಗಳ ಅಸಿಸ್ಟೆಂಟ್ ಕನ್‌ಸರ್ವೇಟರ್ ಮೆಸ್ಟರ್ ವೈ. ಸೀತಾರಾಮಯ್ಯನವರಿಂದ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನ ಚಾರ್ಜನ್ನು ಮಾಹೆ ಮಜಕೂರು 6ನೇ ತಾರೀಖಿನ ಮಧ್ಯಾನ್ಹಾತ್ಪರ ತೆಗೆದುಕೊಂಡಿರುತ್ತಾರೆ.

ತಾರೀಖು 26ನೇ ಜೂನ್ 1896.

ನಂ. 11207.—ರೆ. ಫೈ. 141—95, ಅರಸೀಕೆರೇ ತಾಲ್ಲೂಕು ಅಮಲ್‌ದಾರ್ ಎ. ವೀರರಾಘವಲು ನಾಯಡು ಯವರಿಗೆ, 1896ನೇ ಜೂನ್ 9ನೇ ಮರ್ಕುಂ 10674.—ರೆ. 4216ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಹದಿನೈದು ದಿನಗಳ ಪ್ರಿವಿಲೀಜ್ ರಜಾವನ್ನ ಇನ್ನೂ ಒಂದು ತಿಂಗಳ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ನಂ. 11210.—ರೆ. ಫೈ. 97—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರ್ ಡಿಸ್ಟ್ರಿಕ್ಟ್ ಯಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಪಿ. ವೆಂಕಟರಾಯರಿಗೆ, ಮಾಹೆಮಜಕೂರು 22ನೇ ತಾರೀಖಿನಲ್ಲಿ ಒಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 11213.—ರೆ. ಫೈ. 142—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಶ್ರೀನಿವಾಸಪುರದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್ ಸಿರಾಮೊಹದೀನ್ ಆಲಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಚಿಂತಾಮಣಿ ತಾಲ್ಲೂಕು ಅಮಲ್‌ದಾರು ತಮ್ಮ ಕೆಲಸಗಳೊಂದಿಗೆ ಸದರೀ ಸಿರಾಮೊಹದೀನ್ ಆಲಿಯವರು ರಜಾದ ಮೇಲಿರುವಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಶ್ರೀನಿವಾಸಪುರದ ಸಬ್ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 2ನೇ ಜೂನ್ 1896.

ನಂ. 10599.—ಫಾ. ಫೈ. 38—95, ಸನ್ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ, ಮೈಸೂರ ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಚಕ್ಕುಬಂದಿ ಮಾಡಲ್ಪಟ್ಟು ಮತ್ತು ವ್ಯವಸ್ಥೆಮಾಡಲ್ಪಟ್ಟ ಪ್ಲಾಂಟೇಷನ್‌ಗಳು ಮೇಲೆ ಹೇಳಲ್ಪಟ್ಟ ಫಾರೆಸ್ಟ್ ರೂಲ್ಸಿನ Iನೇ ರೂಲ್ ಅನುಸರಿಸಿ, ಗವರ್ನಮೆಂಟ್ ಪ್ಲಾಂಟೇಷನ್‌ಗಳಾಗಿ ಏಂಗಡಿಸಲ್ಪಡುವವು:—

ತಾಲ್ಲೂಕು.	ಪ್ಲಾಂಟೇಷನ್‌ಗಳ ಹೆಸರು.	ವಿಸ್ತೀರ್ಣ. ಎಕರೆಗಳು.	ಗುಂಟೆಗಳು.	ಚಕ್ಕುಬಂದಿ.
ತುಮಕೂರು.	(1) ಹೆರಹಳ್ಳಿ ರೆವಿನ್ಯೂ ಪ್ಲಾಂಟೇಷನ್	130		ಉತ್ತರಕ್ಕೆ—ಪೆಮ್ಮನಹಳ್ಳಿಯ ಸರ್ವೆ ನಂ. 65, 66, 80, 88, 78 ಮತ್ತು 90 ಪೂರ್ವಕ್ಕೆ—ಪಣಾಯಿಕನಪುರ ಗ್ರಾಮದ ಯಲ್ಲೆ ದಕ್ಷಿಣಕ್ಕೆ—ತಿಮ್ಮನಹಳ್ಳಿಯ ಸರ್ವೆ ನಂ. 71, 72 ವ 73 ಮತ್ತು ಚಿಕ್ಕಹಳ್ಳಿಯ ನಂ. 18, 19 ವ 21 ಪಶ್ಚಿಮಕ್ಕೆ—ತಿಮ್ಮನಹಳ್ಳಿಯ ಸರ್ವೆ ನಂ. 64 ವ 68
	(2) ನಾಗೇನಹಳ್ಳಿ ರೆವಿನ್ಯೂ ಪ್ಲಾಂಟೇಷನ್	14	19	ಉತ್ತರಕ್ಕೆ—ಯೆಲದಡ್ಲು ಗ್ರಾಮದ ಸರ್ವೆ ನಂ. 11 ಪೂರ್ವ—ಮತ್ತು ದಕ್ಷಿಣಕ್ಕೆ—ಸರ್ವೆ ನಂ. 54 ಪಶ್ಚಿಮಕ್ಕೆ—ಸರ್ವೆ ನಂ. 52
	(3) ದಾಸರಹಳ್ಳಿ ಫಾರೆಸ್ಟ್ ಪ್ಲಾಂಟೇಷನ್	290	16	ಉತ್ತರಕ್ಕೆ—ಸೀಗೇಪಾಳ್ಯದಗಡಿ ಮತ್ತು ದಾಸರಹಳ್ಳಿ (ಪ್ಲಾಂಟೇಷನ್) ಸರ್ವೆ ನಂ. 41 ಪೂರ್ವಕ್ಕೆ—ಹೊನ್ನೇನಹಳ್ಳಿ ಮತ್ತು ಗರೆಹಳ್ಳಿ, ಗ್ರಾಮಗಳ ಗಡಿ ದಕ್ಷಿಣಕ್ಕೆ—ದಾಸರಹಳ್ಳಿ ಗ್ರಾಮದ ಸರ್ವೆ ನಂ. 11 ಪಶ್ಚಿಮಕ್ಕೆ—ಮಲ್ಲೇನಹಳ್ಳಿ ಮತ್ತು ಕುಚಂಗಿಯ ಗಡಿ
	(4) ಮಲ್ಲಸಂದ್ರ ಫಾರೆಸ್ಟ್ ಪ್ಲಾಂಟೇಷನ್	107	37	ಉತ್ತರಕ್ಕೆ—ಗೊಲ್ಲಹಳ್ಳಿಯಗಡಿ ಮತ್ತು ಮಲ್ಲಸಂದ್ರ ಗ್ರಾಮದ ಸರ್ವೆ ನಂ. 32 ಪೂರ್ವಕ್ಕೆ—ಸರ್ವೆ ನಂ. 45 ಮತ್ತು ಮಲ್ಲಸಂದ್ರದ ಅಮೃತಮಹಲ್ ಕಾವಲ್ ದಕ್ಷಿಣಕ್ಕೆ—ಮಲ್ಲಸಂದ್ರ ಗ್ರಾಮದ ಸರ್ವೆ ನಂ. 47, 48 ವ 49 ಪಶ್ಚಿಮಕ್ಕೆ—ಸರ್ವೆ ನಂ. 36, 50 ವ 55
	(5) ಗೊಲ್ಲಹಳ್ಳಿ ಫಾರೆಸ್ಟ್ ಪ್ಲಾಂಟೇಷನ್	72	37	ಉತ್ತರಕ್ಕೆ—ಬಿಕ್ಕೋಡಿ ಗ್ರಾಮದ ಸರ್ವೆ ನಂ. 86, 87, 88 ವ 89 ಪೂರ್ವಕ್ಕೆ—ಬಿಕ್ಕೋಡಿ ಗ್ರಾಮದ ಸರ್ವೆ ನಂ. 15, 16, 17 ವ 18 ದಕ್ಷಿಣಕ್ಕೆ—ಬಿಕ್ಕೋಡಿ ಗ್ರಾಮದ ಸರ್ವೆ ನಂ. 8, 11, 12 ವ 14 ಪಶ್ಚಿಮಕ್ಕೆ—ಬಿಬಮ್ಮನಹಳ್ಳಿ ಗ್ರಾಮದ ಗಡಿಬಾಂದು
	(6) ಬಳ್ಳಾಪುರ ಫಾರೆಸ್ಟ್ ಪ್ಲಾಂಟೇಷನ್	248	9	ಉತ್ತರಕ್ಕೆ—ಲಿಂಗೇನಹಳ್ಳಿ ಪ್ಲಾಂಟೇಷನ್ ಪೂರ್ವಕ್ಕೆ—ಬಳ್ಳಾಪುರದ ಗಡಿಬಾಂದು ದಕ್ಷಿಣಕ್ಕೆ—ಬಳ್ಳಾಪುರ ಗ್ರಾಮದ ಸರ್ವೆ ನಂ. 90, 91, 94, 124, 119, 120 ವ 13 ಪಶ್ಚಿಮಕ್ಕೆ—ಬಳ್ಳಾಪುರದ ಗಡಿಬಾಂದು
	(7) ಲಿಂಗೇನಹಳ್ಳಿ ಫಾರೆಸ್ಟ್ ಪ್ಲಾಂಟೇಷನ್	365	38	ಉತ್ತರಕ್ಕೆ—ಲಿಂಗೇನಹಳ್ಳಿಯ ಸರ್ವೆ ನಂ. 17, 18, 20 ವ 23 ಪೂರ್ವಕ್ಕೆ—ಲಿಂಗೇನಹಳ್ಳಿ ಗಡಿಬಾಂದು ದಕ್ಷಿಣಕ್ಕೆ—ಬಳ್ಳಾಪುರ ಪ್ಲಾಂಟೇಷನಿನ ಗಡಿಬಾಂದು ಪಶ್ಚಿಮಕ್ಕೆ—ಲಿಂಗೇನಹಳ್ಳಿ ಗಡಿಬಾಂದು
	(8) ದೇವರಾಯದುರ್ಗ ಫಾರೆಸ್ಟಿನ ಗೊಲ್ಲಹಳ್ಳಿ ಫಾರೆಸ್ಟ್ ಪ್ಲಾಂಟೇಷನ್	225	28	ಉತ್ತರಕ್ಕೆ—ದೇವರಾಯದುರ್ಗದ ಸ್ಟೇಟ್ ಫಾರೆಸ್ಟಿನ ಸರಹದ್ದು ಲೈನು ಮತ್ತು ಗೊಲ್ಲಹಳ್ಳಿಯ ಸರ್ವೆ ನಂ. 12ರ ಭಾಗ ಪೂರ್ವಕ್ಕೆ—ಗೊಲ್ಲಹಳ್ಳಿ ಗ್ರಾಮದಗಡಿ ದಕ್ಷಿಣಕ್ಕೆ—ಡಿಟೋ ಡಿಟೋ ಪಶ್ಚಿಮಕ್ಕೆ—ಡಿಟೋ ಡಿಟೋ
ಮಧುಗಿರಿ.	(9) ದೊಡ್ಡ ವೀರಗೌಡನಹಳ್ಳಿ ರೆವಿನ್ಯೂ ಪ್ಲಾಂಟೇಷನ್	17	8	ಉತ್ತರಕ್ಕೆ—ಸಿರಾ ಹೈರೋಡು ಪೂರ್ವಕ್ಕೆ—ಸರ್ವೆ ನಂ. 64 ಮತ್ತು ಹಳ್ಳ ದಕ್ಷಿಣಕ್ಕೆ—ಸರ್ವೆ ನಂ. 64ರ 3 ಮತ್ತು 4ನೇ ಭಾಗಗಳು ಪಶ್ಚಿಮಕ್ಕೆ—ಸರ್ವೆ ನಂ. 14

ತಾಲ್ಲೂಕು.	ಪ್ಲಾಂಟೇಷನ್‌ಗಳ ಹೆಸರು.	ವಿಸ್ತೀರ್ಣ. ಎಕರೆಗಳು.	ವಿಸ್ತೀರ್ಣ. ಗುಂಟೆ ಗಳು.	ಚಕ್ಕುಬಂದಿ.
ಮದ್ದಗಿರಿ.	(10) ಸೂಳೆಕೆರೆ ಫಾರೆಸ್ಟ್ ಪ್ಲಾಂಟೇಷನ್	178	15	ಉತ್ತರಕ್ಕೆ—ಮಾರೆನಾಯಿಕನಹಳ್ಳಿಯ ಸರ್ವೆ ನಂ. 56 ಮತ್ತು ಗಟ್ಟಿ ತಿಮ್ಮನಹಳ್ಳಿಯ ನಂ. 4, 5, 6, 7, 8, 9 ವ 10 ಪೂರ್ವಕ್ಕೆ—ಮಾರೆನಾಯಿಕನಹಳ್ಳಿಯ ಸರ್ವೆ ನಂ. 12, 13 ವ 14 ಮತು ಗಟ್ಟಿ ತಿಮ್ಮನಹಳ್ಳಿಯ ಸರ್ವೆ ನಂ. 15, 16, 17, 18 ವ 25 ದಕ್ಷಿಣಕ್ಕೆ—ಗಟ್ಟಿತಿಮ್ಮನಹಳ್ಳಿಯ ಸರ್ವೆ ನಂ. 20 ಪಶ್ಚಿಮಕ್ಕೆ—ಗಟ್ಟಿತಿಮ್ಮನಹಳ್ಳಿಯ ಗಡಿಬಾಂದು
ಕುಣಿಗಲ್.	(11) ರಾಂಬಾಣದ ಹಂತ ರೆವಿನ್ಯೂ ಪ್ಲಾಂಟೇಷನ್	23	18	ಉತ್ತರಕ್ಕೆ—ಸರ್ವೆ ನಂ. 39 ವ 108 ಮತ್ತು ರಾಂಬಾಣದ ಹಂತದನಾಲೆ ಪೂರ್ವಕ್ಕೆ—ಸರ್ವೆ ನಂ. 92, 103, 104, 106 ವ 109 ಮತ್ತು ಕುಣಿಕಲ್ ತಾಲ್ಲೂಕಿನ ಕೋಡಿಹಳ್ಳಿ ದಕ್ಷಿಣಕ್ಕೆ—ಗ್ರಾಮದ ಸರ್ವೆ ನಂ. 94, 95, 97, 103 ವ 104 ಪಶ್ಚಿಮಕ್ಕೆ—ಸರ್ವೆ ನಂ. 40 ವ 97 ಮತ್ತು ರಾಂಬಾಣದ ಹಂತದ ನಾಲಾ
	(12) ಕಾಡುಮತ್ತಿಕೆರೆ ರೆವಿನ್ಯೂ ಪ್ಲಾಂಟೇಷನ್	42	26	ಉತ್ತರಕ್ಕೆ—ಸರ್ವೆ ನಂ. 32 ವ 27 ಪೂರ್ವಕ್ಕೆ—ಸರ್ವೆ ನಂ. 13, 27 ವ 29 ದಕ್ಷಿಣಕ್ಕೆ—ಸರ್ವೆ ನಂ. 10 ವ 11 ಪಶ್ಚಿಮಕ್ಕೆ—ಅರಿಕೆರೆಗಣಿ ಮಟ್ಟದ ಗಡಿ
ಹುಳಿಯಾರ ಉಪ ತಾಲ್ಲೂಕು.	(13) ತೊರೆಸೂರಗೊಂಡನಹಳ್ಳಿ ರೆವಿನ್ಯೂ ಪ್ಲಾಂಟೇಷನ್	75	2	ಉತ್ತರಕ್ಕೆ—ಸರ್ವೆ ನಂ. 10 ವ 12 ಪೂರ್ವಕ್ಕೆ—ಒಡೆಕಟ್ಟೆ ಗ್ರಾಮದ ಎಲ್ಲೆ ದಕ್ಷಿಣಕ್ಕೆ—ಸರ್ವೆ ನಂ. 21, 21 ವ 23 ಪಶ್ಚಿಮಕ್ಕೆ—ಸರ್ವೆ ನಂ. 15 ಮತ್ತು ಸರ್ವೆ ನಂ. 8ರ 1 ವ 2ನೇ ಭಾಗಗಳು
ತುರುವೇಕೆರೆ ಉಪ ತಾಲ್ಲೂಕು.	(14) ಕೃಷ್ಣಾಪುರ ಕಾವಲ್ ರೆವಿನ್ಯೂ ಪ್ಲಾಂಟೇಷನ್	10	20	ಉತ್ತರಕ್ಕೆ—ಕಲ್ಲಂಜಿಹಳ್ಳಿ ಗ್ರಾಮದ ಎಲ್ಲೆ ಪೂರ್ವಕ್ಕೆ—ಸರ್ವೆ ನಂ. 4 ದಕ್ಷಿಣಕ್ಕೆ—ಸರ್ವೆ ನಂ. 3ರ 2ನೇ ಭಾಗ ಪಶ್ಚಿಮಕ್ಕೆ—ಸರ್ವೆ ನಂ. 5ರ 2ನೇ ಭಾಗ
ಗುಬ್ಬಿ ತಾಲ್ಲೂಕು.	(15) ಅಡಗೂರು ಫಾರೆಸ್ಟ್ ಪ್ಲಾಂಟೇಷನ್	219	19	ಉತ್ತರಕ್ಕೆ—ಅಡಗೂರು ಗ್ರಾಮದ ಸರ್ವೆ ನಂ. 131, 137, 141 ವ 147 ಪೂರ್ವಕ್ಕೆ—ಪ್ರಭಾವನಹಳ್ಳಿಯ ಗಡಿಬಾಂದು ದಕ್ಷಿಣಕ್ಕೆ—ಡಿಟ್ಟೋ ಡಿಟ್ಟೋ ಪಶ್ಚಿಮಕ್ಕೆ—ಅಡಗೂರ ಸರ್ವೆ ನಂ. 39 ಮತ್ತು ಪ್ರಭಾವನಹಳ್ಳಿಯ ನಂ. 26, 27, 28, 29, 30 ವ 31
ಕೊರಟಗೆರೆ ಉಪ ತಾಲ್ಲೂಕು.	(16) ಗಂಟಿಗನಹಳ್ಳಿ ಫಾರೆಸ್ಟ್ ಪ್ಲಾಂಟೇಷನ್	184	16	ಉತ್ತರಕ್ಕೆ—ಗಂಟಿಗನಹಳ್ಳಿಯ ಸರ್ವೆ ನಂ. 30, 31, 1, 37, 36, 11, 12 ವ 10 ಪೂರ್ವಕ್ಕೆ—ಗಂಟಿಗನಹಳ್ಳಿಯ ಸರ್ವೆ ನಂ. 9 ದಕ್ಷಿಣಕ್ಕೆ—ಗಂಟಿಗನಹಳ್ಳಿಯ ಗಡಿಬಾಂದು ಪಶ್ಚಿಮಕ್ಕೆ—ಡಿಟ್ಟೋ ಡಿಟ್ಟೋ

ಹುಕುಂ ಒಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ಕ್ಯಾಂಪ್ ನಂ. 121

ನೋಟಿಫಿಕೇಷನ್.

ತಾರೀಖು 23ನೇ ಜೂನ್ 1896ನೇ ಇಸವಿ ಮೊಕ್ಕಾಂ ಮೈಸೂರು.

ಮೈಸೂರ ಷಹರಿನಲ್ಲಿ ಇರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನಕ್ಕೆ, ಮೈಸೂರ್ ಶ್ರೀನಿವಾಸ ದೇವರ ಬೀದಿಯಲ್ಲಿರುವ, ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ಶರಕೆ ನರಸಿಂಹಾಚಾರ್ಯರು.
(2) ಸುಬ್ಬಗಿರಿ ಶ್ರೀನಿವಾಸರಾಘವಾಚಾರ್ಯರು.
(3) ಕಾನಕಾನಹಳ್ಳಿ ಶ್ರೀನಿವಾಸಾಚಾರ್ಯರು.
(4) ಪುಸ್ತಕಂ ತಿರುಮಲಾಚಾರ್ಯರು.
(5) ಕೋಂಬೂರು ನಾರಣಯ್ಯಂಗಾರ್ರು.

ಪಿ. ಶ್ರೀನಿವಾಸಾಚಾರ್ರು,
ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಸೆಕ್ರೆಟರಿ.

SH

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಛಾಪಿಸಿದ್ದು. [ಸಂ. 26.

ಬೆಂಗಳೂರು, ಗುರುವಾರ, ಜುಲೈ ತಾ॥ 2, ಸನ್ 1896.

IIನೇ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕೆಯವರ ಕಾರ್ಖಾನೆ	ವೊಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರ್ಸ್‌ರ ಡಿಟ್ಟೋ	,, 170
1	ಮದ್ರಾಸ್ ಓಕ್ಸರವರ ಡಿಟ್ಟೋ	,, 250
1	ಡಿಟ್ಟೋ ಡಿಟ್ಟೋ ಡಿಟ್ಟೋ	,, 188
1	ಡಿಟ್ಟೋ ಬೋರ್ರ್ಯಾಮರವರ ಡಿಟ್ಟೋ	,, 85

ಖರೀದಿದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ 10½ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

SS

ಇನಾಂ ಇಲಾಖಾ.

ಇಸ್ತಿಹಾರನಾಮೆ.

(ನಂಬರು 6) ತಾರೀಖು 16ನೇ ಜೂನ್ ಸನ್ 1896.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಹೊಸಕೋಟೇ ತಾಲ್ಲೂಕಿನಲ್ಲಿ ಇರತಕ್ಕ ಚಿಲ್ಲರೇ ಇನಾಂಗಳ ಬಾಬತು (1300) ಫೈನಲ್ ಟೈಟಲ್ ಡೀಡ್ ಯಾನೆ ಕಾಯಂ ಪಟ್ಟೆಗಳು ಬೆಂಗಳೂರ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟಿವೆ.

2. ಸದರೀ ತಾಲ್ಲೂಕಿನ ಅಮಲದಾರರಿಂದ ಪ್ರತೇಕ ಪ್ರತೇಕ ನೋಟಿಸುಗಳು ಬಂದ ಮೇಲೆ ಅವುಗಳನ್ನ ತಗದುಕೊಳ್ಳುವ ಬಗ್ಯೆ ಸದರೀ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟಿಸುಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರೀ ಚಿಲ್ಲರೇ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರ್ಯಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1895—96ನೇ ಇಸವಿ ಮಿ|| ಅರ್ಜೀ ನಂಬರ್ 399.

ತುಮಕೂರಲ್ಲಿದ್ದು ಮೃತಪಟ್ಟ ರಂಗರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮೇಲ್ಕಂಡ ರಂಗರಾಯರ ಮಗ ವಾಸುದೇವರಾವ್ ಮೈನರ್, ಗಾರ್ಡಿಯನ್ ಮತ್ತು ತಾಯಿ ಕಮಲಾಬಾಯಮ್ಮ, ಮೃತಪಟ್ಟ ಸದರೀ ರಂಗರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ತುಮಕೂರು ಸ್ಥಳದ ವಾಸುದೇವರಾವ್ ಮೈನರ್, ಗಾರ್ಡಿಯನ್ ಕಮಲಾಬಾಯಮ್ಮ, ಡಿಟೋ ವಾಸಸ್ಥರಾಗಿ ಮೃತಪಟ್ಟ ರಂಗರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವಾಸುದೇವರಾವ್ ಮೈನರ್, ಗಾರ್ಡಿಯನ್ ಮತ್ತು ತಾಯಿ ಕಮಲಾಬಾಯಮ್ಮನ ಅರ್ಜಿಯನ್ನು ಸನ್1896ನೇ ಇಸವಿ ಜುಲೈ ತಿಂಗಳ ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಷೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದುಇದ ರಿಂದ ತಿಳಿಯಪಡಿಸಿ ಇದೆ.

ಸನ್ 1895—96ನೇ ಇಸವಿ ಮಿ|| ಅರ್ಜೀ ನಂಬರ್ 404.

ಮೃತಪಟ್ಟ ಕೃಷ್ಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕೋಲಾರಪೇಟೆಯಲ್ಲಿ ಇರುವ ವೆಂಕಟಸುಬ್ಬಯ್ಯನು, ಮೃತಪಟ್ಟ ಸದರೀ ಚನ್ನಪಟ್ಣ ತಾಲ್ಲೂಕು ರೆವಿನ್ಯೂ ಗುಮಾಸ್ತೆ ಕೆಲಸದಲ್ಲಿದ್ದ ಕೃಷ್ಣಪ್ಪನವರಿಗೆ ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಕೋಲಾರಪೇಟೆ ಸ್ಥಳದ ವೆಂಕಟಸುಬ್ಬಯ್ಯನು, ಡಿಟೋ ವಾಸಸ್ಥರಾಗಿ ಮೃತಪಟ್ಟ ಕೃಷ್ಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಸುಬ್ಬಯ್ಯನವರ ಅರ್ಜಿಯನ್ನು ಸನ್1896ನೇ ಇಸವಿ ಜುಲೈ ತಿಂಗಳ ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಷೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ಜೂನ್ ತಿಂಗಳ 18ನೇ ತಾರೀಖಿನಲ್ಲಿ ಕೋರ್ಟ ಮೊಹರಿನಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 4ನೇ ಜೂನ್ 1896.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರದ ತಾಲ್ಲೂಕು ಗ್ರಾಮಾಂತ್ರಗಳಲ್ಲಿರುವ ಕುರಂಗದ ಕಲ್ಲು ದುರ್ಮುಖಿಸಂವತ್ಸರದ ಬಾಬನ್ನು, 1896ನೇ ಇಸವಿ ಜುಲೈ 6ನೇ ತಾರೀಖಿನಲ್ಲಿ ಹರಾಜ್ ಮಾಡಲ್ಪಡುತ್ತೆ.

(2.) ಈ ಬಾಬತು ಹರಾಜ್ ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್ದಾರರು ಅಥವಾ ಶಿರಸ್ತೇದಾರರು ಮಾಡು ಸುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಲಾಗಾಯತು ಒಂದು ವರುಷದ ವರಿವಿಗೆ ಇರತಕ್ಕದ್ದು.

(4.) ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಿ ಅವರಿಂದ ಪಡೆದುಕೊಂಡಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಕಡೆಸವಾಲ್ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ರೂಪಾಯಿ 1ಕ್ಕೆ 1 ಆಣೇ ಮೇರೆ ಲೋಕಲ್‌ಸೆಸ್ ಸಹಿತ ಹರಾಜ್ ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ ಸವಾಲ್ದಾರನನ್ನ ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಲಿ ಜಮೀನುಗಳನ್ನ ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸಮಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಸೀಲ್ ಕಂಡ್ರ ತಾಲ್ಲೂಕು ಅಮಲ್ದಾರ್ರಿಂದ ವಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ವಿ. ಎನ್. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ನೋಟಿಸ್.

ತಾರೀಖು ನೇ ಜೂನ್ 1896ನೇ ಇಸವಿ.

ಈ ಕೆಳಗೆ ನಮೂದಾಗುವ ದೊಡ್ಡಮನುಷ್ಯರುಗಳು ಪ್ಯಾಲೀಸ್ 1ನೇ ಡಿವಿಜನ್‌ಗೆ ಮ್ಯುನಿಸಿಪಲ್ ಕಮ್ಮಿಷನರಾಗಲು ಸಮ್ಮತಿ ಯಿರುತ್ತಾರೆ ಯಾದ್ದರಿಂದ ಈ ಡಿವಿಜನಿನ ವೋಟರಸ್‌ಗಳು ಇದೇ ಇಸವಿ ಜುಲೈ ತಾರೀಖು 16ರಲ್ಲು ಬೆಳಿಗ್ಗೆ 8 ಘಂಟೆ ಲಾಗಾಯತು 10 ಮಧ್ಯಾನ್ನ 3 ಘಂಟೆ ಲಾಗಾಯತು 5 ಘಂಟೆ ವಳಗಾಗಿ ಪ್ಯಾಗ್ರೌಂಡ್ ಪೋಲೀಸ್ ಸ್ಟೇಷನ್ ಬಳಿ ಹಾಜರಾಗಿ ಅಲ್ಲಿ ನಮ್ಮಿಂದ ಕೊಡಲ್ಪಡುವ ಟಿಕ್ಕೆಟುಗಳು ತೆಗದುಕೊಂಡು ಈ ಡಿವಿಜನ್ ಕಮ್ಮಿಷನರ್ ಕೆಲಸಕ್ಕೆ ವಪ್ಪಿಕೊಂಡಿರತಕ್ಕವರ ಪೈಕಿ ವೊಬ್ಬರನ್ನ ಚುನಾಯಿಸಿ ಅವರ ಹೆಸರು ಮುಂತಾದ್ದನ್ನ ಟಿಕ್ಕೇಟಿನಲ್ಲಿ ಬರದು ಪೆಟ್ಟಿಗೇಲಿ ಹಾಕಬೇಕು.

ನಂಬರ್.	ಫಾಯಿಷ್ ಆದ ಲೀಸ್ಟಿನ ನಂ.	ಹೆಸರು.	ವಾಸಸ್ಥಳ.
1	15	ಮ॥ ರಾ॥ ರಾ॥ ಯ. ಯಸ್. ದೇವಾಂಬುಕೋನಾರ್.	ಮಿಷನ್‌ರೋಡ್ ಡೋರ್ ನಂಬರ್ 4.

ತಾರೀಖು ನೇ ಜೂನ್ 1896ನೇ ಇಸವಿ.

ಈ ಕೆಳಗೆ ನಮೂದಾಗುವ ದೊಡ್ಡಮನುಷ್ಯರುಗಳು ಲಾಲ್‌ಬಾಗ್ 6ನೇ ಡಿವಿಜನ್‌ಗೆ ಮ್ಯುನಿಸಿಪಲ್ ಕಮ್ಮಿಷನರಾಗಲು ಸಮ್ಮತಿಸಿ ಯಿರುತ್ತಾರೆ ಯಾದ್ದರಿಂದ ಈ ಡಿವಿಜನಿನ ವೋಟರ್ಸ್‌ಗಳು ಇದೆ ಇಸವಿ ಜುಲೈ ತಾರೀಖು 27ರಲ್ಲು ಬೆಳಿಗ್ಗೆ 8 ಘಂಟೆ ಲಾಗಾಯಿತು 10 ಮಧ್ಯಾನ್ಹ 3 ಘಂಟೆ ಲಾಗಾಯಿತು 5 ಘಂಟೆವಳಗಾಗಿ ಕಲಾಸಿಪಾಳ್ಯ ಪೋಲಿಸ್ ಸ್ಟೇಷನ್‌ಗೆ ಹಾಜರಾಗಿ ಅಲ್ಲಿ ನಮ್ಮಿಂದ ಕೊಡಲ್ಪಡುವ ಟಿಕ್ಕೆಟುಗಳು ತೆಗದುಕೊಂಡು ಈ ಡಿವಿಜನ್ ಕಮ್ಮಿಷನರ ಕೆಲಸಕ್ಕೆ ವಪ್ಪಿಕೊಂಡರತಕ್ಕವರ ಪೈಕಿ ಒಬ್ಬರನ್ನ ಚುನಾಯಿಸಿ ಅವರ ಹೆಸರು ಮುಂತಾದ್ದನ್ನ ಟಿಕ್ಕೆಟಿನಲ್ಲಿ ಬರದು ಪೆಟ್ಟಿಗೇಲಿ ಹಾಕಬೇಕು.

ನಂಬರ್.	ಫಾಯಿಷಾದ ಲೀಸ್ಟಿನ ನಂಬರ್.	ಹೆಸರು.	ವಾಸಸ್ಥಳ.
1	5	ಮ. ರಾ. ಪಟೇಲ್ ಸಿದ್ದೇಗವುಡ	ಮೇಸ್ತ್ರಿ ರಾಮಯ್ಯನ ಗಲ್ಲಿ

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮ್ಯುನಿಸಿಪಾಲ್ಟಿಯಲ್ಲಿ ನಡಿಯತಕ್ಕ ಕಾಂಗಾರಿಗಳನ್ನು ಮಾಡಿಸುವ ಬಗ್ಗ್ಯಾಗಲಿ ಸಾಮಾನುಗಳನ್ನು ಅಂದರೆ ಮೆಟಿರಿಯಲ್ ಟೂಲ್ಸ್ ಮೊದಲಾದವುಗಳನ್ನು ಸಪ್ಲೈ ಮಾಡತಕ್ಕ ಬಗ್ಗ್ಯಾಗಲಿ ಉದ್ಯುಕ್ತರಾದ ಜನರು ಮತ್ತು ಸಪ್ಲೈ ಮಾಡುತಿರುವವರುಗಳ ಹೆಸರುಗಳನ್ನು ಅಡ್ರೆಸಗಳನ್ನು ಮ್ಯುನಿಸಿಪಾಲ್ ಹೆಡ್ ಆಫೀಸಿನಲ್ಲಿ ಇಡಲ್ಪಟ್ಟಿರುವ ಬುಕ್ಕನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದಿಧೆ.

ಆಫೀಸ್ ಹಗಲು 11ರ ಲಾಗಾಯಿತು 5—30ರ ವರುವಿಗೆ ತೆರದು ಯಿರುವದು.

ಬೆಂಗಳೂರು ಸಿಟಿ ಮ್ಯುನಿಸಿಪಾಲ್ ಪ್ರಸೀಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದುಕೊಳ್ಳುವ ಬಗ್ಗೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರಿವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫೀಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬುಗಳನ್ನು ತೆಗದುಕೊಳ್ಳತಕ್ಕದ್ದು. ಒಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸೀಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮಿಮೋ ತಯಾರ್ಮಾಡಿ ಮ್ಯುನಿಸಿಪಾಲ್ ಆಫೀಸಿನಲ್ಲಿ ಚಿಕಟಾಯಿಸಲ್ಪಡುವದು.

ತಾರೀಖು 18ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ವೆಸ್ಟರ್ನ್ ಎಕ್ಸ್ಟೆನ್ಶನನಲ್ಲಿ ಖಾಲೀಯಿರುವ ಇದರ ಕೆಳಗೆ ನಮೂದಿಸಿರುವ ನಂಬರುಗಳ ನಿವೇಶನಗಳನ್ನ ಚಾಲತಿ ಇಸವಿ ಜುಲೈ 11 ಮತ್ತು 18ನೇ ತಾರೀಖುಗಳ ಪ್ರಾತಃಕಾಲ 7 ಘಂಟೆಗೆ ಆಯಾಯ ಜಮೀನ್ ಬಳಿಯಲ್ಲೇ ಹರಾಜುಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್ ಮಾಡಿ ಪಡದುಕೊಳ್ಳಬಹುದು.

2. ಸವಾಲ್ ಖೈದಾದ ಕೂಡ್ಲೆ ಆಡಸವಾಲ್‌ದಾರ್ರು ಸವಾಲ್ ಮೊಬಲಗಿನ ನಾಲ್ಕರಲ್ಲಿ ಒಂದು ಹಿಸ್ಸೇ ಮೊಬಲಗನ್ನ ಡಿಪಾಜಿಟ್ಟಾಗಿ ಹಾಜರ್ಮಾಡಿ ಮಂಜೂರೀ ಆರ್ಡರ್ ಕೊಟ್ಟ 7 ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿಮಾಡಿ ರಸೀತಿ ಪಡದು ಜಮೀನ್ ಸುಫರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಫರ್ದು ಮಾಡಿಕೊಂಡ 6 ತಿಂಗಳೊಳಗಾಗಿ ಕಟ್ಟಡವನ್ನ ಕಟ್ಟಿಕೊಳ್ಳಲು ಪ್ಲ್ಯಾನ್ ಹಾಜರ್ಮಾಡಿ ಲೈಸೆನ್ಸ್ ಪಡದು ಕಟ್ಟಡವನ್ನ ಪೂರೈಸಬೇಕು. ಇದಕ್ಕೆ ತಪ್ಪಿದಲ್ಲಿ ಲುಕ್ಸಾನಿಗೆ ಯಾವ ಈಡೂ ಯಿಲ್ಲದೆ ನಿವೇಶನವನ್ನ ಬೋರ್ಡಿಗೆ ಸೇರಿಸಿಕೊಂಡು ಹರಾಜು ಮಾಡಿಸಲ್ಪಡುತ್ತೆ.

4. ಸವಾಲ್ ಖೈದಾದ ಕೂಡ್ಲೆ ಡಿಪಾಜಿಟ್ಟು ಹಾಜರ್ಮಾಡದೆಯಾಗಲಿ ಅಥವಾ ಮಂಜೂರಿ ಆರ್ಡರ್ ಪಡದ ಏಳು ದಿವಸದೊಳಗಾಗಿ ಪೂರಾ ಮೊಬಲಗು ಪಾವತಿ ಮಾಡದೆಯಾಗಲಿ ತಪ್ಪಿದಲ್ಲಿ ಲುಕ್ಸಾನಿಗೆ ಆಡ ಸವಾಲ್‌ದಾರನ ಜವಾಬ್‌ದಾರೀ ಮೇಲೆ ಸೈಟ್ ಪುನಹ ಹರಾಜು ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ನಫೆ ಬಂದರೆ ಬೋರ್ಡಿಗೆ ಸೇರಿದ್ದಾಗಿ ಯಿರುತ್ತೆ.

5. ಯಾವ ಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾಗಲಿ ಅಂಗೀಕರಿಸುವ ಯಾ ನಿರಾಕರಿಸುವ ಬಾಧ್ಯತೆಯನ್ನು ಕೆಳಗೆ ಸೈನ್ ಮಾಡಿರುವರು ವುಳಿಸಿಕೊಂಡು ಇರುತ್ತಾರೆ.

ತಾರೀಖು 20ನೇ ಮಾಹೆ ಜೂನ್ 1896ನೇ ಇಸವಿ.

ಸೈಟ್ ನಂಬರು		ಹರಾಜು ತಾರೀಖು	ಸೈಟ್ ನಂಬರು		ಹರಾಜು ತಾರೀಖು
106	..	ಚಾಲತಿ ಇಸವಿ ಜುಲೈ 11ನೇ ತಾರೀಖು.	113	..	ಚಾಲತಿ ಇಸವಿ ಜುಲೈ 18ನೇ ತಾರೀಖು
108	..		114	..	
109	..		115	..	
110	..		116	..	
111	..		117	..	
112	..		119	..	

ತಾರೀಖು 17ನೇ ಜೂನ್ 1896.

ಬೆಂಗಳೂರು ಸಿಟಿ ಸರಹದ್ದಿನಲ್ಲಿ ಸನ್ 1896—97ನೇ ಇಸವಿ ಸಾಲಿನಲ್ಲಿ ಆಗಾಗ್ಯೆ ಅವಶ್ಯಕವಾಗಿ ನಡಿಯಲ್ಪಡುವ ಪ್ರತಿ ಪದಂ ಕಾಂಗಾರಿ 50 ರೂಪಾಯಿ ಅಥವಾ 50 ರೂಪಾಯಿಗಳಿಗೆ ಕಮ್ಮಿ ಕಿಮ್ಮತ್ತುಳ್ಳ ಯಲ್ಲಾ ಹರ್‌ಬಾಬೂ ಚಿಲ್ಲರೇ ಕಾಂಗಾರಿಗಳಂದರೆ, ರಸ್ತೆ ಕಾಂಗಾರೀ ವಿನಹ, ಕಟ್ಟಡಗಳ ರಿಪೇರಿ, ಚಪ್ಪಡಿಗಳಿಂದ ಚರಂಡಿ ಕಟ್ಟುವದು, ರೇರಿ ಮಾಡುವದು ರೈಲಿಂಗಸ್ ರಿಪೇರೀ ಮಾಡುವದು ಮೋರಿಗಳನ್ನು ಕಟ್ಟುವದು ರಿಪೇರಿ ಮಾಡುವದು ಬಾವಿಗಳನ್ನು ರಿಪೇರೀ ಮಾಡುವದು ವಗೈರೇಗಳಿಗೆ ಸನ್ 1896ನೇ ಇಸವಿ ಜುಲೈ 4ನೇ ತಾರೀಖು ಮಧ್ಯಾನ್ಹದ ವರೆಗೂ ಇದರ ಕೆಳಗೆ ರುಜು ಮಾಡಿರುವವರಿಂದ ದರಖಾಸ್ತುಗಳು ಅಂಗೀಕರಿಸಲ್ಪಡುತ್ತವೆ.

2. ಪ್ರತಿ ರೇಂಜಿ ಅಥವಾ ಸಬ್ ಓವರಸಿಯರ್ ಛಾರ್ಜಿನಲ್ಲಿ ಸಾಲ್ ಪೂರ್ತಿನಡೆಯಲ್ಪಡುವ ಕಾಂಗಾರಿಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ದರಖಾಸ್ತುಗಳು ರವಾನಿಸಲ್ಪಡಬೇಕು. ಯಾವ ದರಗಳಲ್ಲಿ ಕಾಂಗಾರೀ ಮಾಡಲು ಇಷ್ಟ ವಿಧಿಯೋ ಆ ದರಗಳು ದರಖಾಸ್ತಿನಲ್ಲಿ ನಮೂದಿಸಬೇಕು.

3. ಮೇಲೆ ಉದಹರಿಸಿದ ಕಾಂಗಾರಿಗಳು ನಡಿಸಲು ಹುಕುಂ ಕೊಟ್ಟ ವಡನೆ ಅವುಗಳನ್ನ ಷುರೂಮಾಡಿ ಪ್ರಸಿಡೆಂಟ್ ಅಥವಾ ಯಗ್ಜಿಕ್ಯೂಟಿವ್ ಇಂಜಿನೀಯರ್ ಯವರಿಗೆ ತೃಪ್ತಿಕರವಾಗುವ ಹಾಗೆ ಅತಿತ್ವರ್ಯದಲ್ಲಿ ಅವುಗಳನ್ನ ಪೂರೈಸಬೇಕು.

4. ಕಮ್ಮಿ ದರಖಾಸ್ತು ಅಥವಾ ಯಾವ ದರಖಾಸ್ತನ್ನೇ ಆಗಲಿ ಪ್ರಸಿಡೆಂಟರವರು ಅಂಗೀಕರಿಸಲು ಬದ್ಧರಾಗುವದಿಲ್ಲಾ ಅಥವಾ ಯಾವ ನಿರಾಕರಿಸಲ್ಪಟ್ಟ ದರಖಾಸ್ತಿಗೆ ಆಗಲಿ ಕಾರಣಗಳನ್ನು ಹೇಳಲು ಬದ್ಧರಾಗಿರುವದಿಲ್ಲಾ.

ತಾರೀಖು ನೇ ಜೂನ 1896.

ಈ ಕೆಳಗೆ ತೋರಿಸಿ ಇರುವ ಸಾಮಾನುಗಳು ಬೇಕಾಗಿ ಇರುವದ್ದರಿಂದ ಇಚ್ಛೆಯುಳ್ಳವರು ಸರಬರಾಯಿ ಮಾಡಲು ಟೆಂಡರ‍ಗಳನ್ನ ಕೊಡಬಹುದು.

50 ಕಬ್ಬಿಣದ ಗ್ಯಾಲವಾ ನೈಜರ ಬಾಬತು ಕಚರಾ ತೊಟ್ಟಿಗಳು ಮೂರು ಅಡಿ ಯತ್ತರ ಯರಡು ಅಡಿ ಸುತ್ತಳತೆಯುಳ್ಳದ್ದು.
50 ಚರಂಡಿಗಳ ಉಪಯೋಗಕ್ಕಾಗಿ ಕಬ್ಬಿಣದ ಕಂಬಿಗಳು.
50 ಕಬ್ಬಿಣದ ಲ್ಯಾಂಪೋಸ್ಟಯಾನೆ ದೀಪದ ಕಂಭಗಳು.

ಇವುಗಳ ವಿಷಯವಾಗಿ ವಿಶೇಷ ತಪ್ಸೀಲ್ ತಿಳಿಯಬೇಕಾದಲ್ಲಿ ಶಿಟಿ ಮ್ಯುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳತಕ್ಕದ್ದು.

ತಾರೀಖು ನೇ ಜೂನ 1896.

ಕಿಲ್ಲೆ ಅಗಳತೆಯಲ್ಲಿ ಕಲ್ಲುಗಳನ್ನ ಖರೀದಿಗೆ ತೆಗದುಕೊಂಡಿರುವ ಅಶೇಷ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ,—

1896ನೇ ಜುಲೈ ಗುರ್ರು ಲಾಗಾಯತು ಮೂರು ತಿಂಗಳ ವಳಗಾಗಿ ಕಿಲ್ಲೆ ಅಗಳತೆಯಲ್ಲಿ ವಿಕ್ರಯಿಸಲ್ಪಟ್ಟಿರುವ ಕಲ್ಲುಗಳನ್ನ ಆ ಸ್ಥಳದಿಂದ ಸಾಗಿಸಿಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಮ್ಯುನಿಸಿಪಾಲಿಟಿಗೆ ಸೇರಿಸಿಕೊಳ್ಳಲ್ಪಡುವದು.

1896ನೇ ಇಸವಿ ಸೆಪ್ಟಂಬರ 30ನೇ ತಾರೀಖಿನ ತರುವಾಯ ಸಾಗಿಸಲು ಅಪ್ಪಣೆ ಕೊಡುವದಿಲ್ಲ.

ತಾರೀಖು 29ನೇ ಜೂನ 1896ನೇ ಇಸವಿ.

ಈ ಕೆಳಗೆ ನಮೂದಾಗುವ ಡಿವಿಜನಗಳಲ್ಲಿ ಮ್ಯುನಿಸಿಪಲ್ ಕಮಿಷನರುಗಳನ್ನು ಚುನಾಯಿಸಲು ಅರ್ಹರಾದ ವೋಟರಸ್‌ಗಳ ಹೆಸರು ತೋರಿಸುವ ಸಪ್ಲಿಮೆಂಟ್ ತಖ್ತಾ.

ನಂಬರ.	ಹೆಸರು.	ವಾಸಸ್ಥಳ.
	1ನೇ ಪ್ಯಾಲೆಸ ಡಿವಿಜನ.	
1	ಮ|| ರಾ|| ಎನ. ನರಸಿಂಹಯ್ಯಂಗಾರ‍್ರವರು	ಸವಾರಲೈನ ಡೋರ ನಂಬರ 2
2	ಡಿಟೋ ಟಿ. ಆನಂದರಾಯರವರು ಬಿ. ಎ.	ಡಿಟೋ ಡಿಟೋ 3
3	ಡಿಟೋ ರಾಮರಾವ ರಣನವರೆಯವರು ರಾ. ಬಾ.	ಡಿಟೋ ಡಿಟೋ 4
4	ಮಸ್ತಾನ ಸಾಹೆಬರವರು	ಸುಬೇದಾರ ಛತ್ರದ ರೋಡ ಡಿ|| 78
5	ಅಹಂಮದುಲ್ಲಾ ಸಾಹೆಬರವರು	ಡಿಟೋ ಡಿಟೋ 83
6	ಮ|| ರಾ|| ಮುನಿಯಪ್ಪನವರು	ಡಿಟೋ ಡಿಟೋ 97
	2ನೇ ಡಿವಿಜನ ಬಳೇಪೇಟೆ	
1	ಮ|| ರಾ|| ಶಿಂಧೇ ಲಕ್ಷ್ಮಣರಾಯರವರು	ಹುರಿಯೋಪೇಟೆ ಲೈನ ಡಿಟೋ 43–44
	5ನೇ ನಗರ್ತಪೇಟೆ ಡಿವಿಜನ	
1	ಮ|| ರಾ|| ಎಂ. ಎಸ್. ಪುಟ್ಟಣ್ಣನವರು ಬಿ. ಎ.	ಗೊಲ್ಲರಪೇಟೆ ಬೆಂಕೀ ನವಾಬರ ಗಲ್ಲಿ ನಂ. 5

ಮ್ಯುನಿಸಿಪಲ್ ಕಮಿಷನರಾಗಿ ಈ ಕೆಳಗೆ ನಮೂದಿಸುವ ಡಿವಿಜನಗಳಲ್ಲಿ ಚುನಾಯಿಸಲ್ಪಡಲು ಅರ್ಹರಾದವರ ಹೆಸರುಗಳನ್ನ ತೋರಿಸುವ ಸಪ್ಲಿಮೆಂಟಲ್ ತಖ್ತಾ.

ನಂಬರ.	ಹೆಸರು.	ವಾಸಸ್ಥಳ.
	ನಂಬರ I ಪ್ಯಾಲೆಸ ಡಿವಿಜನ.	
1	ಮ|| ರಾ|| ಯನ. ನಾರಾಯಣಸಾಮಯ್ಯಂಗಾರು	ಸವಾರಲೈನ್ ರೋಡ ಮನೆ ನಂ. 2
2	ಡಿಟೋ ಟಿ. ಆನಂದರಾವು ಬಿ. ಎ.	ಡಿಟೋ ಡಿಟೋ 3
3	ಡಿಟೋ ರಾಮರಾವ ರಣನವರ ರಾ. ಬಾ.	ಡಿಟೋ ಡಿಟೋ 4
	ನಂ. II ಬಳೇಪೇಟೆ ಡಿವಿಜನ	
1	ಡಿಟೋ ಶಿಂಧೇ ಲಕ್ಷ್ಮಣರಾವು	ಹುರಿಯೋಪೇಟೆ ಗಲ್ಲಿ ನಂ. 43–44
	ನಂ. V ನಗರ್ತರಪೇಟೆ ಡಿವಿಜನ	
1	ಡಿಟೋ ಎಂ. ಎಸ್. ಪುಟ್ಟಣ್ಣನವರು ಬಿ. ಎ.	ಬೆಂಕಿ ನವಾಬರ ಗಲ್ಲಿ ಗೊಲ್ಲರಪೇಟೆ 5

ತಾರೀಖು ನೇ ಜೂನ 1896ನೇ ಇಸವಿ.

ಈ ಕೆಳಗೆ ನಮೂದಾಗುವ ದೊಡ್ಡಮನುಷ್ಯರುಗಳು ಹಲಸೂರುಪ್ಯಾಟೆ 4ನೇ ಡಿವಿಜನಗೆ ಮ್ಯುನಿಸಿಪಲ್ ಕಮಿಷನರಾಗಲು ಸಮ್ಮತಿಸಿ ಇರುತ್ತಾರೆಯಾದ್ದರಿಂದ ಈ ಡಿವಿಜನಿನ ವೋಟರ‍್ಸ‍ಗಳು ಇದೇ ಇಸವಿ ಜುಲೈ ತಾರೀಖು 22ರಲ್ಲು ಬೆಳಿಗ್ಗೆ 8 ಘಂಟೆ ಲಾಗಾಯತು 10. ಮಧ್ಯಾನ್ನ 3 ಘಂಟೆ ಲಾಗಾಯತು 5 ಘಂಟೆ ವಳಗಾಗಿ ಯಲಹಂಕದ ಗೇಟ ಪೊಲೀಸ್ ಸ್ಟೇಷನ ಬಳಿ ಹಾಜರಾಗಿ ಅಲ್ಲಿ ನಮ್ಮಿಂದ ಕೊಡಲ್ಪಡುವ ಟಿಕ್ಕೆಟುಗಳು ತೆಗದುಕೊಂಡು ಈ ಡಿವಿಜನ ಕಮಿಷನರ ಕೆಲಸಕ್ಕೆ ವಪ್ಪಿಕ್ಕೊಂಡು ಇರತಕ್ಕವರ ಪೈಕಿ 2 ಜನರನ್ನ ಚುನಾಯಿಸಿ ಅವರ ಹೆಸರು ಮುಂತಾದ್ದನ್ನ ಟಿಕ್ಕಿಟಿನಲ್ಲಿ ಬರದು ಪೆಟ್ಟಗೇಲಿ ಹಾಕಬೇಕು.

ನಂಬರು.	ಫಾಯಿಷಾದ ಲಿಸ್ಟಿನ ನಂಬರು.	ಹೆಸರು.	ವಾಸಸ್ಥಳ.
1	38	ಷೀರ್‌ಖಾನ್ ಸಾಹೆಬರು	ತಾಲ್ಲೂಕು ಕಚೇರಿ ರೋಡ್ 114
2	36	ಮ. ರಾ|| ರಾ|| ಪೋಲೇಪಲ್ಲಿ ನಾರಾಯಣಸಾಮಿ ಶೆಟ್ರು	ಅವಿನ್ಯೂ ರೋಡ್ 458
3	9	,, ಮಲ್ಲಿಕಾರ್ಜನಯ್ಯನ ನಾಗಪ್ಪನವರು	ಮಲ್ಲಿಕಾರ್ಜನಪ್ಪನ ಗಲ್ಲಿ 13
4	27	,, ಅಡ್ವೊಕೇಟ್ ಸಾಂಬಶಿವಯ್ಯರ್	ಚೌಡೇಶ್ವರಿಗುಡಿ ಗಲ್ಲಿ 13
5	14	,, ಬೊಪ್ಪಣ್ಣನವರ ಬಸಪ್ಪನವರು	ಜುಮ್ಮಾಮಸೀತಿ ರೋಡ್ 19

ತಾರೀಖು ನೇ ಜೂನ್ 1896.

ಈ ಕೆಳಗೆ ನಮೂದಾಗುವ ದೊಡ್ಡ ಮನುಷ್ಯರುಗಳು ನಗರ್ತಪ್ಯಾಟೆ 5ನೇ ಡಿವಿಜನ್‌ಗೆ ಮ್ಯುನಿಸಿಪಲ್ ಕಮಿಷನರಾಗಲು ಸಮ್ಮತಿಸಿ ಯಿರುತ್ತಾರೆ ಯಾದ್ದರಿಂದ ಈ ಡಿವಿಜನಿನ ವೋಟರ್‌ಸ್‌ಗಳು, ಇದೇ ಇಸವಿ ಜುಲೈ ತಾರೀಖು 24ರಲ್ಲು ಬೆಳಿಗ್ಯೆ 8 ಘಂಟೆ ಲಾಗಾಯತು 10 ಮಧ್ಯಾನ್ಹ 3 ಘಂಟೆ ಲಾಗಾಯಿತು 5 ಘಂಟೆವಳಗಾಗಿ, ಹಲಸೂರ್ ಗೇಟ್ ಪೊಲೀಸ್ ಸ್ಟೇಷನ್ ಬಳಿ ಹಾಜರಾಗಿ ಅಲ್ಲಿನಮ್ಮಿಂದ ಕೊಡಲ್ಪಡುವ ಟಿಕ್ಕೆಟ್‌ಗಳು, ತೆಗದುಕೊಂಡು ಈ ಡಿವಿಜನ್ ಕಮ್ಮಿಷನರ ಕೆಲಸಕ್ಕೆ ಒಪ್ಪಿಕೊಂಡಿರತಕ್ಕವರ ಪೈಕಿ ವೊಬ್ಬರನ್ನ ಚುನಾಯಿಸಿ ಅವರ ಹೆಸರು ಮುಂತಾದ್ದನ್ನ ಟಿಕ್ಕೆಟಿನಲ್ಲಿ ಬರದು ಪೆಟ್ಟಿಗಲಿ ಹಾಕಬೇಕು.

ನಂಬರ್.	ಫಾಯಿಷಾದ ಲಿಸ್ಟಿನ ನಂಬರ್.	ಹೆಸರು.	ವಾಸಸ್ಥಳ.	
1	5	ಮ. ರಾ. ಎಂ. ಎಸ್. ಪುಟ್ಟಣ್ಣನವರು B. A.	ಮಂಡಿ ಶಿದ್ದಣ್ಣನವರ ಮನೆಗಲ್ಲಿ	11
2	25	ಜವಳಿ ಅಂಗಡಿ ಯಾಕೂಬ್‌ಸಾಬರು	ಸಾದರ ಪತ್ರಪ್ಪನ ರೋಡ್	52

ತಾರೀಖು ನೇ ಜೂನ್ 1896ನೇ ಇಸವಿ.

ಈ ಕೆಳಗೆ ನಮೂದಾಗುವ ದೊಡ್ಡ ಮನುಷ್ಯರುಗಳು ಬಳೇಪ್ಯಾಟೆ 2ನೇ ಡಿವಿಜನ್‌ಗೆ ಮ್ಯುನಿಸಿಪಲ್ ಕಮ್ಮಿಷನರಾಗಲು ಸಮ್ಮತಿಸಿ ಯಿರುತ್ತಾರೆ ಯಾದ್ದರಿಂದ ಈ ಡಿವಿಜನಿನ ವೋಟರ್‌ಸ್‌ಗಳು ಇದೇ ಇಸವಿ ಜುಲೈ ತಾರೀಖು 18ರಲ್ಲು ಬೆಳಿಗ್ಯೆ 8 ಘಂಟೆ ಲಾಗಾಯಿತು 10 ಮಧ್ಯಾನ್ಹ 3 ಘಂಟೆ ಲಾಗಾಯಿತು 5 ಘಂಟೆವಳಗಾಗಿ ಉಪ್ಪಾರಪ್ಯಾಟೆ ಪೊಲೀಸ್ ಸ್ಟೇಷನ್ ಬಳಿ ಹಾಜರಾಗಿ ಅಲ್ಲಿ ನಮ್ಮಿದ ಕೊಡಲ್ಪಡುವ ಟಿಕ್ಕೆಟ್‌ಗಳು ತೆಗದುಕೊಂಡು ಈ ಡಿವಿಜನ್ ಕಮ್ಮಿಷನರ್ ಕೆಲಸಕ್ಕೆ ವಪ್ಪಿಕೊಂಡಿರತಕ್ಕವರ ಪೈಕಿ 2 ಯರಡು ಜನರನ್ನ ಚುನಾಯಿಸಿ ಅವರ ಹೆಸರು ಮುಂತಾದ್ದನ್ನ ಟಿಕ್ಕೆಟಿನಲ್ಲಿ ಬರದು ಪೆಟ್ಟಿಗೇಲಿ ಹಾಕಬೇಕು.

ನಂಬರು.	ಫಾಯಿಷಾದ ಲಿಸ್ಟಿನ ನಂಬರ್.	ಹೆಸರು.	ವಾಸಸ್ಥಳ.	
1	16	ಮ. ರಾ|| ಡಿ. ವೆಂಕಟರಾಮಯ್ಯ ಅಡ್ವೊಕೇಟರು	ಕಿಲಾರಿ ಧರ್ಮರಾಯನ ಗುಡಿ ಬೀದಿ	121
2	90	ಡಿಟ್ಟೋ ಬಿ. ಗಂಗಯ್ಯನವರು	ಕೊಟ್ಟಿಗೆ ಲೈನ್	5
3	ಸಪ್ಲಿ. 1	ಡಿಟ್ಟೋ ಸಿಂಧೇ ಲಕ್ಷ್ಮಣರಾವ್	ಹುರಿಯೋಪೇಟೆ	43—44

ತಾರೀಖು ನೇ ಜೂನ್ 1896.

ಈ ಕೆಳಗೆ ನಮೂದಾಗುವ ದೊಡ್ಡ ಮನುಷ್ಯರುಗಳು ಮನವಾರ್ತೆಪ್ಯಾಟೆ 3ನೇ ಡಿವಿಜನ್‌ಗೆ ಮ್ಯುನಿಸಿಪಲ್ ಕಮ್ಮಿಷನರಾಗಲು ಸಮ್ಮತಿಸಿರುತ್ತಾರೆ ಯಾದ್ದರಿಂದ, ಈ ಡಿವಿಜನಿನ ವೋಟರ್‌ಸ್‌ಗಳು ಇದೆ ಇಸವಿ ಜುಲೈ ತಾರೀಖು 20ರಲ್ಲು ಬೆಳಿಗ್ಯೆ8 ಘಂಟೆ ಲಾಗಾಯಿತು 10. ಮಧ್ಯಾನ್ಹ 3 ಘಂಟೆ ಲಾಗಾಯಿತು 5 ಘಂಟೆ ವಳಗಾಗಿ ತಾಲ್ಲೂಕು ಕಚ್ಚೇರಿಯಲ್ಲಿ ಹಾಜರಾಗಿ ಅಲ್ಲಿ ನಮ್ಮಿಂದ ಕೊಡಲ್ಪಡುವ ಟಿಕ್ಕೆಟುಗಳು ತೆಗದುಕೊಂಡು ಈ ಡಿವಿಜನ್ ಕಮ್ಮಿಷನರ ಕೆಲಸಕ್ಕೆ ವಪ್ಪಿಕೊಂಡಿರತಕ್ಕವರ ಪೈಕಿ 2 ಜನರನ್ನ ಚುನಾಯಿಸಿ ಅವರ ಹೆಸರು ಮುಂತಾದ್ದನ್ನ ಟಿಕ್ಕೆಟಿನಲ್ಲಿ ಬರದು ಪೆಟ್ಟಿಗೇಲಿ ಹಾಕಬೇಕು.

ನಂಬರ್.	ಫಾಯಿಷ್ ಆದಲಿಸ್ಟಿನ ನಂಬರು.	ಹೆಸರು.	ವಾಸಸ್ಥಳ.	
1	7	ಮ. ರಾ|| ವೀರಭದ್ರ ಶೆಟ್ಟರು	ಅರಳೆಪೇಟೆ ಜೋರ್ ನಂ.	181
2	49	ಡಿಟ್ಟೋ ಯಸ್. ರಾಮರಾವ್	ಸಂತೂಸಾಪೇಟೆ	13
3	98	ಡಿಟ್ಟೋ ಕೃಷ್ಣಮೂರ್ತಿರಾವ್	ಗುಂಡೋಪಂತರ ಬೀದಿ	13

ಟಿ. ಟಿ. ಲೆನಾರಡ್,
ಪ್ರಸಿಡೆಂಟ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 28ನೇ ಮೇ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯವ ಬಾಕಿದಾರರಾದ ಈ ಕೆಳಗೆ ನಮೂದಿಸುವ ಜೋಡೀದಾರರಿಂದ ಬರಬೇಕಾದ ಜವಿರ್ಗಾ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ತಾಲ್ಲೂಕು ಕಚೇರಿಯಲ್ಲಿ ಈ ಕೆಳಗೆ ನಮೂದಾಗುವ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895–96ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಜೋಡೀ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್‍ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್‍ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್‍ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್‍ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್‍ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತಂಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‍ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್‍ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್‍ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ವೃತ್ತಿನ ತಪ್ಸೀಲ್. ವೃತ್ತಿ ಪ್ರಮಾಣ.	ಜೋಡಿ ಸರ್ವಮಾನ್ಯ.	ಇನಾಮ್ತಿ.	ಸರಕಾರಕ್ಕೆ ಬರತಕ್ಕ ಜೋಡಿ ಮೊಬಲಗು.	ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.	ಹರಾಜಿನ ತಾರೀಖು.	ಷರಾ.
1	2	3	4	5	6	7	8	9	10	11
							ರೂ. ಆ. ಪೈ.	ರೂ. ಆ. ಪೈ.		
ಬೆಂಗಳೂರು.	ಕೃಷ್ಣರಾಜಪುರ.	ಜೋಡಿ ಕಲ್ಕೆರೆ.	ಶಾಂಭಟ್ಟ.	½ ವೃತ್ತಿ.	ಜೋಡಿ	..	4 4 2	20 13 8	1896ನೇ ಇಸವಿ ಜುಲೈ 27ನೇ	ಜೋಡಿ ರೂಪಾಯಿ 4—4—2

ಚಕ್ಕುಬಂದಿ.

ತಾಕು I ಖುಷ್ಕಿ 3 ಕೊಳಗ.

ಪೂರ್ವಕ್ಕೆ—ಮಾರಗೊಂಡಹಳ್ಳಿ ಗ್ರಾಮದ ಯಲ್ಲೆ
ಪಶ್ಚಿಮಕ್ಕೆ—ನಂಜಪ್ಪನ ಜಮೀನು
ಉತ್ತರಕ್ಕೆ—ನಾರಣಭಟ್ಟನ ವೃತ್ತಿ
ದಕ್ಷಿಣಕ್ಕೆ—ಗಂಗಾಧರಯ್ಯ, ಶೀತಾರಾಮಯ್ಯ ಇವರ ಜಮೀನ್

ತಾಕು II ತರೀ 3 ಕೊಳಗ.

ಪೂರ್ವಕ್ಕೆ—ಸೂರಭಟ್ಟರು, ರಾಮಸ್ವಾಮಿ ಭಟ್ಟರ ಗದ್ದೆ
ಪಶ್ಚಿಮಕ್ಕೆ—ನಂಜಪ್ಪನ ಗದ್ದೆ
ಉತ್ತರಕ್ಕೆ—ನಾರಿವಾಳ
ದಕ್ಷಿಣಕ್ಕೆ—ಬೂಡದಿ ಮಿತೆ

ತಾಕು III ತರೀ 3 ಕೊಳಗ.

ಪೂರ್ವಕ್ಕೆ—ನಂಜಪ್ಪನ ದಳೆ
ಪಶ್ಚಿಮಕ್ಕೆ—ಸುಬ್ಬರಾಯಪ್ಪನ ದಳೆ
ಉತ್ತರಕ್ಕೆ—ರಾಜಕಾಲ್ವೆ
ದಕ್ಷಿಣಕ್ಕೆ—ವೇದವೃತ್ತಿ ಗದ್ದೆ

ತಾಕು IV ವಠಾರ.

ಪೂರ್ವಕ್ಕೆ—ಸುಬ್ಬಾಶಾಸ್ತ್ರಿ ವಠಾರ
ಪಶ್ಚಿಮಕ್ಕೆ—ರಾಮಚಂದ್ರಯ್ಯನ ವಠಾರ
ಉತ್ತರಕ್ಕೆ—ಬೀದಿ
ದಕ್ಷಿಣಕ್ಕೆ—ಸದರೀ ಸುಬ್ಬಾಶಾಸ್ತ್ರಿ ವಠಾರ

ತಾಕು V ಜಮೀನು.

ಪೂರ್ವಕ್ಕೆ—ಮಾರಗೊಂಡಹಳ್ಳಿ ಗ್ರಾಮದ ಯಲ್ಲೆ
ಪಶ್ಚಿಮಕ್ಕೆ—ಆಗರದ ಯಲ್ಲೆ
ಉತ್ತರಕ್ಕೆ—ಬಿಳೆಸ್ವಾರ ಯಲ್ಲೆ
ದಕ್ಷಿಣಕ್ಕೆ—ಕೌದೇನಹಳ್ಳಿ ಯಲ್ಲೆ

ಈ ಮಧ್ಯೆ ಗ್ರಾಮದಲ್ಲಿ ವೃತ್ತಿ ಹಂಚಿಕೆ ಆದ್ದು ಜಾತ ವುಳದ್ದು ದಾಮಾಷಾಯಿ ಮೇರಿಗೆ ಈ ಅರ್ಧ ವೃತ್ತಿಗೆ ಸಲ್ಲತಕ್ಕದ್ದು ಸಹ

			ರಾಮಕೃಷ್ಣಭಟ್ಟ	ವೃತ್ತಿ 1ಕ್ಕೆ	ಜೋಡಿ	..	8 8 3	46 14 9		

ತಾಕು 1ಕ್ಕೆ ಖುಷ್ಕಿ 6 ಕೊಳಗ.

ಪೂರ್ವಕ್ಕೆ—ನಂಜಪ್ಪನ ವೃತ್ತಿ
ಪಶ್ಚಿಮಕ್ಕೆ—ಡಿಟೋ
ಉತ್ತರಕ್ಕೆ—ಗ್ರಾಮದ ಬೇಲಿ
ದಕ್ಷಿಣಕ್ಕೆ—ಶಾಮರಾಯರ ಜಮೀನ್

ತಾಕು II ತರೀ 6 ಕೊಳಗ.

ಪೂರ್ವಕ್ಕೆ—ನರಶಿಂಹಯ್ಯನ ಜಮೀನ್
ಪಶ್ಚಿಮಕ್ಕೆ—ನಂಜಪ್ಪನ ಜಮೀನ್
ಉತ್ತರಕ್ಕೆ—ರಾಜಕಾಲ್ವೆ
ದಕ್ಷಿಣಕ್ಕೆ—ನಾರಿವಾಳ

ತಾಕು III ತರೀ 6 ಕೊಳಗ.

ಪೂರ್ವಕ್ಕೆ—ನಂಜಪ್ಪನ ದಳೆ
ಪಶ್ಚಿಮಕ್ಕೆ—ಪುಟ್ಟನ ದಳೆ
ಉತ್ತರಕ್ಕೆ—ನಾರಿವಾಳ
ದಕ್ಷಿಣಕ್ಕೆ—ಬೂಡಿದಿ ಮಿತೆ

1896—97ನೇ ಇಸವಿ ಅರ್ಜೀ ನಂಬರ 36.

ಚಿಕ್ಕಮಗಳೂರು ತಾಲ್ಲೂಕು ತಡಗಲಿನಾಡು ಮಾಗಣಿ ಬಾಗೆಮನೆಯಲ್ಲಿ ಮೃತಪಟ್ಟ ಅರ್ಜಿದಾರನ ಅವಿಭಕ್ತ ತಂದೆ ಸವೇಗವುಡ ಚಿಕ್ಕಪ್ಪಂದ್ರು ದ್ಯಾವೇಗವುಡ, ಅಂಣೇಗವುಡ ಮತ್ತು ದ್ಯಾವೇಗಡರ ಮಗ ರಾಮೇಗವುಡರ ಆಸ್ತೀ ವಿಷಯದಲ್ಲಿ— ಅರ್ಜೀದಾರ್ರು ಚಿಕ್ಕಮಗಳೂರು ತಾಲ್ಲೂಕು ತಡಗಲಿನಾಡು ಮಾಗಣಿ ಬಾಗೆಮನೆಯಲ್ಲಿ ಮೃತಪಟ್ಟ ಸದರೀ ಮೇಲ್ಕಂಡವರಿಗೆ ವಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ಬಾಗೆಮನೆ ಸ್ಥಳದ ಬಸವೇಗವುಡನ ಮಗ ಲಿಂಗಪ್ಪಗವುಡರು, ಸದರೀ ಬಾಗೆಮ ಸ್ಥರಾಗಿ ಮೃತಪಟ್ಟ ಸದರೀ ಮೇಲ್ಕಂಡವರ ಜಿಂದಗಿ ಬಗ್ಯಾಗಿ ಬರತಕ್ಕ 20,000 ರೂಪಾಯಿ ಸಾಲವನ್ನು ವಸೂಲ್ ಮಾ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ದರೀ ದರಖಾಸು ದಾರರಾದ ಲಿಂಗೇಗವುಡರ ಅರ್ಜಿಯನ್ನು 1896ನೇ ಇಸವಿ ಸೆಪ್ಟಂಬರ ತಿಂಗಳ ತಾರೀಖು 18ರಲ್ಲು ಕೇಳಿ ಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಡಿಟೋ ಮೃತಪಟ್ಟ ಮೇಲ್ಕಂಡವರ ಆಸ್ತಿಗೆ ರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

96ನೇ ಇಸವಿ ಆಗಸ್ಟ ತಿಂಗಳ 4ನೇ ತಾರೀಖಿನಲ್ಲಿ ಕೋರ್ಟ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1896—97ನೇ ಇಸವಿ ಅರ್ಜೀ ನಂಬರ 35.

ಕಡೂರ ತಾಲ್ಲೂಕು ತಂಗಲಿಯಲ್ಲಿ ಮೃತಪಟ್ಟ ಜಾನಕಮ್ಮನವರ ಆಸ್ತೀ ವಿಷಯದಲ್ಲಿ—

(ದ.ರ್ರು) ಕಡೂರು ತಾಲ್ಲೂಕು ತಂಗಲಿಯಲ್ಲಿರುವ ಚನ್ನಕೇಶವಯ್ಯಂಗಾರ್ರು, ಮೃತಪಟ್ಟ ಸದರೀ ಜಾನಕಮ್ಮನವರಿಗೆ ತಾನು ಆಗಬೇಕೆಂಬ ಹಕ್ಕುದಾರಿ ಮೇಲೆ ತಂಗಲೀ ಸ್ಥಳದ ಚನ್ನಕೇಶವಯ್ಯಂಗಾರ್ರು, ತಂಗಲೀ ವಾಸಸ್ಥರಾಗಿ ಮೃತಪಟ್ಟ ಜಾನಕ ಜಿಂದಗಿಬಗ್ಯಾಗಿ ಬರತಕ್ಕ 50 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1890ನೇ ಇಸವಿ 27ನೇ ಆಕ್ಟು ಮೇ ಕೇಟ ಪಡೆಯತಕ್ಕ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ೀ ದರಖಾಸ್ತುದಾರರಾದ ಚನ್ನಕೇಶವಯ್ಯಂಗಾರ್ರ ಅರ್ಜಿಯನ್ನು 1896ನೇ ಇಸವಿ ಸೆಪ್ಟಂಬರು ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜಾನಕಮ್ಮ ನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896—97ನೇ ಇಸವಿ ಅರ್ಜೀ ನಂಬರ 37.

ಮಂಗಳೂರಲ್ಲಿ ಮೃತಪಟ್ಟ ನೆಲ್ಲಿಕಾಯಿ ಗುಂಡೇರಾಯರ ಮಕ್ಕಳು 1ನೇ ವೆಂಕಟರಾವು 2ನೇ ವ್ಯಾಸರಾವ್ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮಂಗಳೂರಲ್ಲಿರುವ ನೆಲ್ಲಿಕಾಯಿ ಶ್ರೀನಿವಾಸರಾಯರು, ಮೃತಪಟ್ಟ ಸದರೀ ಗುಂಡೇರಾಯರು ಮೈನರ ಮಕ್ಕಳಿಗೆ ತಾನು ಗಾರ್ಡಿಯನ್ ಆಗಬೇಕೆಂಬ ಹಕ್ಕುದಾರಿ ಮೇಲೆ, ಮಂಗಳೂರು ಸ್ಥಳದ ನೆಲ್ಲಿಕಾಯಿ ಶ್ರೀನಿವಾಸರಾಯರು, ಡಿಟೋ ವಾಸಸ್ಥ ರಾಗಿ ಮೃತಪಟ್ಟ ನೆಲ್ಲಿಕಾಯಿ ಗುಂಡೇರಾಯರ ಜಿಂದಗಿ ಬಗ್ಯಾಗಿ ಬರತಕ್ಕ 10,000 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನೆಲ್ಲಿಕಾಯಿ ಶ್ರೀನಿವಾಸರಾಯರ ಅರ್ಜಿಯನ್ನು 1896ನೇ ಇಸವಿ ಸೆಪ್ಟಂಬರು ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನೆಲ್ಲಿ ಕಾಯಿ ಗುಂಡೇರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896ನೇ ಇಸವಿ ಆಗಸ್ಟ ತಿಂಗಳ 3ನೇ ತಾರೀಖಿನಲ್ಲಿ ಕೋರ್ಟ ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಬಿ. ತಿರುಮಲಾಚಾರಿ,
ಡಿಸ್ಟ್ರಿಕ್ಟ ಜಡ್ಜ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 25ನೇ ಜುಲೈ 1896.

1. ಕಂದಾಯದ ಬಾಕಿದಾರರಾದ ಮೇಲಿನ ಹುಲವತ್ತಿ ದತ್ತಾತ್ರೆಯ ಪೀಠದ ಡಾಕ್ಟರ ಸಿಡ್ನಿಸ್ಮಿತ್ ಮತ್ತು ಬಿಯೆ. ಬ್ರಿಟೊಯವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇವರಡಿ ನಮೂದಾಗುವ, ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಇಧೆಯಂತ ಅಪ್ಪಣೆ ಮಾಡಲ್ಪಟ್ಟ ಸ್ಥಿರಸ್ವತ್ತು ಕಡೂರ್ ಡಿಸ್ಟ್ರಿಕ್ಟು ಚಿಕ್ಕಮಗ ಳೂರು ತಾಲ್ಲೂಕು ಕಚೇರಿಯಲ್ಲಿ ಸ್ 1896ನೇ ಇಸವಿ ಸೆಪ್ಟಂಬರ 5ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟ ಇಧೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿ ಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1896ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂ ದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 1,242—10—9 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿ ಟ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾ ಗಾಯತು 15 ದಿವಸಗಳಲ್ಲಿ ಪಾವತಿಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ ಮೊಬಲಗನ್ನ ಹಾಜರ್ಮಾ ಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾ ವತಿಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದ ರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆ ಯೇ ಯಾ ಏಜಂಟ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂಧರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡ

ಲ್ಪಟ್ಟ ಲಿಖಿತವಾದ ಅಧಿಕಾರಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು ಅದನ್ನ ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ಸಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರೈ ಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೇ, ಹರಾಜುದಾರರು ಸದರೀ ಸ್ವತ್ತಿನ ಸ ಸ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು ಡೆಪ್ಯು ಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ ಆತನಿಗೆ ಕೊಡಲ್ಪಡುವದ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ ಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. [illegible]	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ ಅಥವಾ [illegible]	ಜಮೀನು. [illegible]	ಜಮೀನು. ವಿಸ್ತೀರ್ಣ.		ಜಮೀನು. ಆಕಾರ.			[illegible]		
1	2	3	4	5	6	7	8	9		10			11		
					ರೂ. ಆ. ಪೈ.			ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಮಗಳೂರು.	ಜಾಗರ.	ಕೆಳಗೂರು.	ಡಾಕ್ಟರ್ ಸಿಡ್ನಿಸ್ಮಿತ್ ಮತ್ತು ಬಿಯ. ಬ್ರಿಟೊ ಯವರು.	..	..	17	ಕಾಫಿ	79	12	119	0	0	1242	10	9
						48	ಡಿಟೋ.	17	33	27	0	0	ಪಾವತಿ ತಾರೀಖು ವರೆಗಿನ ಬಡ್ಡಿ ವಗೈರೆ		

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮ್ಮಿಷನರ್.

ತಾರೀಖು 12ನೇ ಆಗಸ್ಟ 1896, ಬೆಂಗಳೂರು.

ಇದರಿಂದ ತಿಳಿಯಪಡಿಸುವದೇನಂದರೆ,—ಸುಬ್ಬಣ್ಣಯ್ಯ ಯಂಬ ಹೆಸರಿನಿಂದ ಮೈಸೂರ ಗೆಜೆಟ್ಟಿನ ಬಗ್ಯಾಗಿ ಈ ಆಫೀಸಿಗೆ ರೂ. 3 ಆಣೆ 8 ಮನಿ ಆರ್ಡರ್ ಬಂದಿರುತ್ತೆ. ಮನಿ ಆರ್ಡರ ಕೂಪರ್ನನಲ್ಲಿ ಚಂದಾದಾರ, ವಿಳಾಸ ಬರಿಯಲಿಲ್ಲವಾದ್ದರಿಂದ ಸದರೀ ಸುಬ್ಬಣ್ಣಯ್ಯ ಯಂಬುವರು, ಅವರಿಗೆ ಗೆಜೆಟ ತಲಪುವದು ಅವಶ್ಯಕವಾಗಿದ್ದಲ್ಲಿ ಸರಿಯಾದ ಮೇಲ್ವಿಳಾಸ ಬರೆದು ಕಳುಹಿಸತಕ್ಕದ್ದು.

ಸಿ. ರಾಘವಾಚಾರ್ಲು,
ಮೈಸೂರ ಗೆಜೆಟ ಕಂಪೈಲರ.

Mysore Govt. Central Press, Bangalore.—1896.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಫ್ರಾಯಿಷ್ ಆದ್ದು. [ನಂ. 33.

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 20, ಸರ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಇಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷರ್ ವ ಯುಡ್ಯುಕೇಷರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷರ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ಇಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷರ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 28ನೇ ಜುಲೈ 1896.

ನಂ. 1453.—ಜು. 148, ಸರ್ 1894ನೇ ಇಸವಿಯ ಮೈಸೂರ್ ಜೈಲ್ ಮ್ಯಾನ್ಯುಯಲಿನ 24 ವ 37ನೇ ಪುಟಗಳಲ್ಲಿ ಛಾಪಿಸಿರುವ 125 ಮತ್ತು 202ನೇ ರೂಲುಗಳಿಗೆ ಈ ಕೆಳಗೆ ಕಂಡ ಜಾಸ್ತೀ ಅಂಶಗಳು ಸೇರಿಸಲ್ಪಡಬೇಕೆಂದು ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

125 A. ಜೈಲಿಗೆ ದಾಖಲ್ಮಾಡಿಕೊಳ್ಳುವದಕ್ಕೆ ತರಲ್ಪಟ್ಟ ಯಾ ಸಾಕ್ಷಿಗಾಗಿ ಕೋರ್ಟಿಗೆ ಕಳುಹಿಸಲ್ಪಟ್ಟು ಮತ್ತು ಅಲ್ಲಿಂದ ಜೈಲಿಗೆ ವಾಪಸು ಬರುವ ಬಬ್ಬ ಸಿವಿಲ್ ಖೈದಿಯು ಅವನು ಹಾಗೆ ತರಲ್ಪಡಬಹುದಾದ ಯಾ ವಾಪಸು ಬರಬಹುದಾದ ಯಾವ ದಿನದಲ್ಲಾಗಲಿ ಮತ್ತು ಯಾವ ಘಂಟೆಯಲ್ಲಾಗಲಿ ಸೇರಿಸಿಕೊಳ್ಳಲ್ಪಡತಕ್ಕದ್ದು.

202 A. ಯಾವ ಖೈದಿಯಾಗಲಿ ಭಾನುವಾರಗಳು, ಕ್ರಿಸ್ತಮಸ್ ದಿನ ಯಾ ಗುಡ್‌ಫ್ರೈಡೆ ಯಾ ಲಾಕಪ್ಪಿನ ಕಾಲ ಮೀರಿದ ತರುವಾಯ ಯಾವ ದಿನದಲ್ಲಾಗಲಿ ಜೈಲಿಗೆ ಸೇರಿಸಿಕೊಳ್ಳಲ್ಪಡಕೂಡದು; ಆದರೆ ಜೈಲಿನಿಂದ ದರ್ಯಾಫ್ತಿ ಬಗ್ಯೆ ಯಾ ಸಾಕ್ಷಿಗಳಾಗಿ ಕಳುಹಿಸಲ್ಪಟ್ಟ ಖೈದಿಗಳು ಅವರು ಯಾವ ಕಾಲದಲ್ಲಿ ವಾಪಸು ಬಂದಾಗ್ಯೂ ಮರಳಿ ಸೇರಿಸಿಕೊಳ್ಳಲ್ಪಡತಕ್ಕದ್ದು.

ತಾರೀಖು 7ನೇ ಆಗಸ್ಟ್ 1896.

ನಂ. 1993.—ಮಿ. 328, 1894ನೇ ಇಸವಿ VIIನೇ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನು ಸಿ, ಇದರಿಂದ ಪ್ರಕಟ ಪಡಿಸುವದೇನಂದರೆ,—ಈ ಕೆಳಗೆ ನಮೂದು ಮಾಡಿರುವ ಜಮೀನುಗಳು ಸರಕಾರದ ಕೆಲಸಕ್ಕೆ ಅಂದರೆ ಹೆ ಘಟ್ಟದ ವಾಟರ್ ಪ್ರಾಜಕ್ಟಿಗೆ ನೀರು ಮುಳುಗಡೆಯಾದ ದಾಸೇನಹಳ್ಳೀ ಗ್ರಾಮವನ್ನು ಹೊಸದಾಗಿ ಕಟ್ಟುವದಕ್ಕಾಗಿ ಬೇಕಾಗಿ ಇರುತ್ತೆ

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಅನುಭವದಾರನ ಹೆಸರು.	ಜಮೀನು ತಪ್ಸೀಲ್.						ಚಕ್ಕುಬಂದಿ.
					ಸರ್ವೆ ನಂ.	ವಿಸ್ತೀರ್ಣ.		ಆಕಾರ.			
ಬೆಂಗಳೂರು	ನೆಲಮಂಗಲ	ತ್ಯಾಮಗೊಂಡ್ಲು	ಗುಡ್ಡದಹಳ್ಳಿ	ಜಟಂಗೀ ರಾಮ ಮತ್ತು ಕುಂಟಪ್ಪನ ಮಗ ರಾಮ	34 ಪೈ	5	19½	5	0	0	ಉತ್ತರಕ್ಕೆ-ಪಾಳ್ಯದ ಹನುಮಂತಯ್ಯನ ಹೊಲ ದಕ್ಷಿಣಕ್ಕೆ—ಮಾಳಿಗೇ ನರಸಿಂಹ ಹೊಲ ಪೂರ್ವಕ್ಕೆ—ಹೆಸರುಘಟ್ಟಕ್ಕೆ ಹೋಗತಕ್ಕ ವೋಣಿ ಪಶ್ಚಿಮಕ್ಕೆ—ಸೂರಪ್ಪನ ಹೊಲ ಸರ್ವೆ ನಂಬರ್ 31
				ಪಾಳ್ಯದ ಕೆಂಪಯ್ಯನಮಗ ಹನುಮಂತಯ್ಯ	34 ಪೈ	5	19½	5	0	0	ಉತ್ತರಕ್ಕೆ—ತೋಟ ತಿಂಮರಾಯನ ಹೊಲ ದಕ್ಷಿಣಕ್ಕೆ—ಮಾಳಿಗೆ ನರಸಿಂಹನ ಹೊಲ ಪೂರ್ವಕ್ಕೆ—ಹೆಸರುಘಟ್ಟದ ಯಲ್ಲಿ ಕಟ್ಟು ಪಶ್ಚಿಮಕ್ಕೆ—ಗುಡ್ಡದಹಳ್ಳಿ ಗ್ರಾಮದ ಬಂಜರ್

ತಾರೀಖು 11ನೇ ಆಗಸ್ಟ್ 1896.

ನಂ. 2114.—ಜು. 226, ಸನ್ 1877ನೇ ಇಸವಿಯ IIIನೇ ಆಕ್ಟಾದ ಇಂಡಿಯನ್ ರೆಜಿಸ್ಟ್ರೇಷನ್ ಆಕ್ಟಿನ 5ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುವದೇನಂದರೆ,—ಬೆಂಗಳೂರ ತಾಲ್ಲೂಕಿನ ಹಾಲೀ ಸಬ್ ರೆಜಿಸ್ಟ್ರೀ ಆಫಿಸ್ ಎರಡು ಪ್ರತ್ಯೇಕ ಆಫಿಸುಗಳಾಗಿ, ವೊಂದು ಮುನಿಸಿಪಲ್ ಸರಹದ್ದುಗಳಲ್ಲಿ ಅಧಿಕಾರ ವುಳ್ಳಂಥಾ ಬೆಂಗಳೂರ ಷಹರಿಗೋಸ್ಕರವೂ, ಮತ್ತೊಂದು ಬೆಂಗಳೂರ ಷಹರಿನ ಶಿವಾಯಿ ಬೆಂಗಳೂರ ತಾಲ್ಲೂಕಿಗೋಸ್ಕರವೂ, ಮಾಡಲ್ಪಡತಕ್ಕದ್ದು.

2. ಮೇಲ್ಕಂಡ ಏರ್ಪಾಡುಗಳು 1896ನೇ ಆಗಸ್ಟ್ ಗುರ್ರೇ ಲಾಗಾಯತು ಜಾರೀಗೆ ಬರತಕ್ಕದ್ದು.

ತಾರೀಖು 12ನೇ ಆಗಸ್ಟ್ 1896.

ನಂ. 2146.—ಜು. 236, ನಗರ ಡಿವಿಜನ್ ಡಿಸ್ಟ್ರಿಕ್ಟು ವ ಸೆಷನ್ಸ್ ಕೋರ್ಟಿನ ಶಿರಸ್ತೇದಾರ್ ಮೆಸ್ಟರ್ ಎಚ್. ರಾಮಾನುಜಯ್ಯಂಗಾರ್ರು, ಮೆಸ್ಟರ್ ಶಿಂಗ್ರಾಚಾರ್ರು ಬೇರೆ ಕೆಲಸದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಶಿವಮೊಗ್ಗಾ ಮುನ್ಸಿಫರಾಗಿ ಆಕ್ಟಿಂಗ್ ತರೀಕೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 13ನೇ ಆಗಸ್ಟ್ 1896.

ನಂ. 2205. ಮಿ. ಫೈ. 48—92, ಇದರಿಂದ ಸಕಲ ಜನರ ತಿಳುವಳಿಕೆ ಬಗ್ಯೆ ಪ್ರಕಟಿಸುವದೇನಂದರೆ, ಒಂದು ಗವರ್ನಮೆಂಟ್ ಟೆಲಿಗ್ರಾಫ್ (ಪೋಸ್ಟ್ ಮತ್ತು ಟೆಲಿಗ್ರಾಫ್ ಶೇರಿರುವ) ಆಫೀಸ್ ಗುಂಡ್ಲು ಪೇಟೆಯಲ್ಲಿ 1896ನೇ ಆಗಸ್ಟ್ ಗುರ್ರೆ ಲಾಗಾಯತು ಸ್ಥಾಪಿಸಲ್ಪಟ್ಟಿರುತ್ತೆ.

ನಂ. 22·2.—ಜು. 243, ಮೈಸೂರ್ ಸರ್ವಿಸ್ ರೆಗ್ಯುಲೇಷನ್ ಗಳ 188ನೇ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟು, ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಟರ್ ಜಿ. ಡನ್ನಿಂಗ್ ಯವರಿಗೆ, ಮಾಹೆ ಮಜಕೂರು 23ನೇ ಮರ್ಕೂಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಎರಡು ತಿಂಗಳು ಹತ್ತು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಬೆಂಗಳೂರು ಷಹರಿನ ಪೊಲೀಸ್ ಇನ್ಸ್ಪೆಕ್ಟರ್ ಎಲ್. ಕೃಷ್ಣರಾಯರು ಸದರೀ ಮೆಸ್ಟರ್ ಡನ್ನಿಂಗ್ ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಕಡೂರು ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಆಕ್ಟಿಂಗ್ ತರೀಕೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 2190.—ಲೋ. ಫಂ. 257—92, ಸನ್ 1894ನೇ ಇಸವಿಯ VIIನೇ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದಕ್ಕೆ ಜಂಟಿಸಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಬೆಂಗಳೂರು ಷಹರಿನಲ್ಲಿ ಘೋಷರ್ ಯಾನೆ ಜಲಾಶ್ರಯ ಕಟ್ಟುವ ಬಗ್ಯಾಗಿ ಅವಶ್ಯಕವಾಗಿರುತ್ತೆ.

ಡಿವಿಜನ್.	ಸ್ಥಳ.	ಮಾಲೀಕರ ಹೆಸರು.	ವತಾರ.	ವಿವರ.	ವಿಸ್ತೀರ್ಣ		ಚಕ್ಕು ಬಂದಿ.			
					ಪೂರ್ವ ಪಶ್ಚಿಮ ಅಡಿಗಳು.	ಉತ್ತರ ದಕ್ಷಿಣ ಅಡಿಗಳು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
IV.	ತಾಲ್ಲೂಕು ಕಚೇರಿ ರಸ್ತೆ.	ಕೋಟೆ ಅಪ್ಪಣ್ಣನವರ ಮಗ ಕೋಟೆ ನರಸಿಂಹಣ್ಣನವರು.	ನಂ. 94ರ ಸ್ವಲ್ಪ ಭಾಗ.	ಖಾಲಿ ಜಮೀನಿನ ಒಂದು ಭಾಗ.	11	6	ಅದೇ 94ನೇ ನಂಬರ ಜಗಲಿ.	ಪಬ್ಲಿಕ ಬೀದಿ.	ಅದೇ 94ನೇ ನಂಬರ ಮನೆ.	ತಾಲ್ಲೂಕು ಕಚೇರಿ ರಸ್ತೆ.

ನಂ. 2193.—ಲೋ. ಫಂ. 257—92, ಸ್ 1894ನೇ ಇಸವಿಯ VIIನೇ ನಂಬರ ಲ್ಯಾಂಡ ಅಕ್ವಿಜಿಷನ್ ರೆಗ್ಯುಲೇಷನಿನ ನಿಯಮಗಳನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನುಗಳು ಮತ್ತು ಕಟ್ಟಡ ಸರ್ಕಾರ ಕೆಲಸಕ್ಕೆ ಅಂದರೆ ಕುಣಿಗಲ್ ಮ್ಯುನಿಸಿಪಾಲಿಟಿಯಲ್ಲಿ ಒಂದು ರಸ್ತೆ ವಿಸ್ತಾರಪಡಿಸುವ ಬಗ್ಯೆಗಿ ಅವಶ್ಯಕವಾಗಿರುತವೆ.

ನಂಬರು.	ಬೀದಿಯ ಹೆಸರು.	ಜೋರ ನಂಬರ.	ಹಿಡುವಳಿದಾರ್ರ ಹೆಸರು.	ಬೇಕಾಗಿರುವ ವಿಸ್ತೀರ್ಣ, ಅಡಿಗಳು.		ತಪ್ಸೀಲು.	ಚಕ್ಕು ಬಂದಿ.				ಷರಾ.
				ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.		ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.	
1	ಒಡನಲೀಗವ್ಡನ ಬೀದಿ.	784	ಬಳೇ ತಿಮ್ಮಯ್ಯ.	21	20	ಹೆಂಚು ಮತ್ತು ಮಣ್ಣಿನ ಮಾಳಿಗೆ ಮನೆ (3 ಅಂಕಣಗಳು.)	ಸರ್ಕಾರ ರಸ್ತೆ.	ಮಠದ ಮಲ್ಲಪ್ಪನವರ ಮನೆ ಮತ್ತು ಜಮೀನು.	ಮಠದ ಮಲ್ಲಪ್ಪನವರ ಹಿತ್ತಲು.	ಸರ್ಕಾರ ರಸ್ತೆ.	

ತಾರೀಖು 15ನೇ ಆಗಸ್ಟ್ 1896..

ನಂ. 2310.—ಜು. 256, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 37ನೇ ಸೆಕ್ಷನ್ ಅನುಸರಿಸಿ, ಚಿಕ್ಕಬಳ್ಳಾಪುರದ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಜನರಲ್ ಅಸಿಸ್ಟೆಂಟ ಕಮ್ಮಿಷನರ ವ 1ನೇ ಕ್ಲಾಸ್ ಮಾಜಿಸ್ಟ್ರೇಟರಾದ ಮೆಸ್ಟರ್ ಕೆ. ಎಸ್. ದೊರಸಾಮಿ ಅಯ್ಯರ್ ಯವರಿಗೆ ಸದರೀ ಕ್ಲಾಸಿನ ಮಾಜಿಸ್ಟ್ರೇಟರಿಗೆ ಗವರ್ನಮೆಂಟಿನವರು ಕೊಡಬಹುದಾದ ಜಾಸ್ತೀ ಅಧಿಕಾರವಾಗಿ 4ನೇ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಈ ಕೆಳಗೆ ಕಂಡ ಅಧಿಕಾರವು ಕೊಡಲ್ಪಟ್ಟಿರುತ್ತೆ:—

ಎರಡು ವ ಮೂರನೇ ಕ್ಲಾಸಿನ ಮಾಜಿಸ್ಟ್ರೇಟುಗಳಿಂದ ತಪ್ಪುಸಾಬೀತು ಮಾಡಲ್ಪಟ್ಟದ್ದರ ಮೇಲೆ ಬರುವ ಅಪ್ಪೀಲುಗಳನ್ನ ದರ್ಯಾಫ್ತು ಮಾಡಲಿಕ್ಕೆ ಅಧಿಕಾರ, ಸೆಕ್ಷನ್ 407.

ನಂ. 2312.—ಜು. 258, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 37ನೇ ಸೆಕ್ಷನ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟು ದು ಕ್ಲಾಸು ಅಸಿಸ್ಟೆಂಟ್ ಕಮ್ಮಿಷನರ ವ 2ನೇ ಕ್ಲಾಸ ಮಾಜಿಸ್ಟ್ರೇಟರಾದ ಮೆಸ್ಟರ್ ಸಿ. ಶೇಷಾದ್ರಿಅಯ್ಯಂಗಾರ್‌ಯವರಿಗೆ ಸದರೀ ಕ್ಲಾಸಿನ ಮಾಜಿಸ್ಟ್ರೇಟರಿಗೆ ಗವರ್ನಮೆಂಟಿನವರು ಕೊಡಬಹುದಾದ ಜಾಸ್ತಿ ಅಧಿಕಾರವಾಗಿ 4ನೇ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಈ ಕೆಳಗ ಕಂಡ ಅಧಿಕಾರವು ಕೊಡಲ್ಪಟ್ಟಿರುತ್ತೆ:—

ಕಮ್ಮಿಟಮಾಡುವ ಬಗ್ಯೆ ದರ್ಯಾಫ್ತು ಮಾಡಲಿಕ್ಕೆ ಅಧಿಕಾರ, ಸೆಕ್ಷನ್ 206.

ನಂ. 2314.—ಜು. 260, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 357ನೇ ಸೆಕ್ಷನ್ ನಿಯಮಗಳನುಸರಿಸಿ, ತುಮಕೂರ್ 2ನೇ ಕ್ಲಾಸ ಮಾಜಿಸ್ಟ್ರೇಟ ವ ಯುಕ್ಲಾಸು ಅಸಿಸ್ಟೆಂಟ ಕಮ್ಮಿಷನರಾದ ಮೆಸ್ಟರ್ ಸಿ. ಶೇಷಾದ್ರಿಅಯ್ಯಂಗಾರ್ ಯವರಿಗೆ ಅವರಿಂದ ದರ್ಯಾಫ್ತು ಮಾಡಲ್ಪಟ್ಟ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಸಾಕ್ಷ್ಯವನ್ನ ಇಂಗ್ಲಿಷಭಾಷೆಯಲ್ಲಿ ಸ್ವದಸ್ತೂರ ತೆಗದುಕೊಳ್ಳುವ ಬಗ್ಯೆ ಅಪ್ಪಣೆ ಕೊಡಲ್ಪಟ್ಟಿರುತ್ತೆ.

ತಾರೀಖು 27ನೇ ಜುಲೈ 1896.

ನಂ. 990.-ಕೆ. 392, ಸರ್1894ನೇ ಇಸವಿಯ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನ್ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ ಚಿತ್ರದುರ್ಗದ ತಾಲ್ಲೂಕಿನಲ್ಲಿರುವ ಶಿರಿಗೆರೆಯ ಹಳೇ ಗ್ರಾಮ ನಿವೇಶನವನ್ನ ಬಡಾಯಿಸುವ ಬಗ್ಯಾಗಿ ಬೇಕಾಗಿರುತ್ತದೆ:—

ಬಾಬತ ನಂಬರು.	ತಾಲ್ಲೂಕು.	ಹೋಬಳಿ.	ಗ್ರಾಮ.	ಸರ್ಕಾರಿ ಕೆಲಸ.	ತೆಗೆದುಕೊಂಡಿರುವ ಸ್ಥಳ.				ಚಕ್ಕುಬಂದಿ.			
					ತೈಲು.	ಸರ್ವೆ ನಂಬರು.	ಬೀಜವರಿ.					
							ಎಕರೆಗಳು.	ಗುಂಟೆಗಳು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
..	ಚಿತ್ರದುರ್ಗ	ಹಿರೆಗುಂಟನೂರು	ಶಿಗೆರೆ	ಗಂಗಜ್ಜಿ ಕರಾಬು	ಖುಷ್ಕಿ	154ರ ಪೈಕಿ	1	20	ಗ್ರಾಮ ನಿವೇಶನ ಮತ್ತು ಖಾನೇಸುಮಾರಿ ಹೊಲಗೇರಿ ಸಹ.	ಸರ್ವೆ ನಂಬರ್ 155 ರ 157	ಗ್ರಾಮ ನಿವೇಶನ	ಸರ್ವೆ ನಂಬರು 153

ತಾರೀಖು 28ನೇ ಜುಲೈ 1896.

ನಂ. 1010.—ರೆ. ಫೈ. 119—93, ಸರ್ 1881ನೇ ಇಸವಿಯ XXIIನೇ ಯಾಕ್ಸೈಜ್ ಆಕ್ಟಿನ 55ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನನುಸರಿಸಿ, 1893ನೇ ಮೇ 5ನೇ ಮುರ್ಕಂ 18968.—ರೆ. ಫೈ. 119—93ನೇ ನಂಬರ್ ಇಸ್ತಿಹಾರ್ ನಾಮೆಯಲ್ಲಿ ವಿಧಿಸಲ್ಪಟ್ಟ ನಮೂನೆಗೆ ಬದಲಾಗಿ, ಜನವಿನೋದಗಳಿಗೆ ಸಂಬಂಧಪಟ್ಟ ರಿಫ್ರೆಷ್ಮೆಂಟ್ ಅಂಗಡಿಗಳಲ್ಲಿ ಪರಾಯಿದೇಶದ ಸ್ಪಿರಿಟ್ ಸಾರಾಯಿ ವ ಪರಾಯಿದೇಶದ ಉಕ್ಕಿದ ಸಾರಾಯಿಗಳನ್ನ ಮಾರತಕ್ಕ ಬಗ್ಯೆ ಉಂಟಾದ ಪರಾಯಿ ದೇಶದ ಸಾರಾಯಿ ರೂಲ್ಸಿನ Xನೇ ರೂಲ್ ಅನುಸರಿಸಿ, ಕೊಡಲ್ಪಡುವ ಆಗಾಗಿನ ಲೈಸೆನ್ಸಿಗೋಸ್ಕರ ಈ ಕೆಳಗೆ ಕಂಡ ನಮೂನೆಯನ್ನ ಅನುಸರಿಸುವ ಬಗ್ಯೆ ಮೈಸೂರ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ. ಮೇಲ್ಕಂಡ ಇಸ್ತಿಹಾರ್ನಾಮೆಯ Xನೇ ರೂಲಿನ ಕಡೆಯಲ್ಲಿ "ರಿಫ್ರೆಷ್ಮೆಂಟ್ ರೂಮ್ ಲೈಸೆನ್ಸ್ ನಮೂನೆಯಲ್ಲಿ" ಎಂಬ ಮಾತುಗಳಿಗೆ ಬದಲಾಗಿ "ಲಗತ ಮಾಡಿರುವ ನಮೂನೆಯಲ್ಲಿ" ಎಂಬ ಮಾತುಗಳು ಸೇರಿಸಲ್ಪಡತಕ್ಕದ್ದು:—

ಜನವಿನೋದಗಳಿಗೆ ಸಂಬಂಧಪಟ್ಟ ರಿಫ್ರೆಷ್ಮೆಂಟ್ ಅಂಗಡಿಗಳಲ್ಲಿ ಪರಾಯಿದೇಶದ ಸ್ಪಿರಿಟ್ ಸಾರಾಯಿಗಳನ್ನೂ ವ ಪರಾಯಿ ದೇಶದ ಉಕ್ಕಿದ ಸಾರಾಯಿಗಳನ್ನೂ ಬಿಕರಿ ಮಾಡುವ ಬಗ್ಯೆ ಆಗಾಗ್ಯೆ ಕೊಡಲ್ಪಡುವ ಲೈಸೆನ್ಸು.

ಲೈಸೆನ್ಸಿನ ರಿಜಿಸ್ಟರ್ ನಂಬರ್.
ಲೈಸೆನ್ಸದಾರನ ಹೆಸರು.
ದುಕಾನದಾರನ ಹೆಸರು.
ದುಕಾನಿನ ಸ್ಥಳ.

ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದ
ಹೆಸರುಳ್ಳ ನಾನು ಲ್ಲಿ ವಾಸವಾಗಿರುವ ಎಂಬವನ
ಮಗನಾದ ಎಂಬವನಿಗೆ ಈ ಕೆಳಗೆ ಕಂಡ ಷರತ್ತುಗಳಿಗೂ ಮತ್ತು ರೂಪಾಯಿಗಳ ಲೈಸೆನ್ಸ್ ಫೀಯನ್ನ ಕೊಡಲಿಕ್ಕೂ ಗುರಿಮಾಡಿ, ಮೇಲ್ಕಂಡ ಆವರಣದಲ್ಲಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿಯನ್ನೂ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನೂ ಚಿಲ್ಲರೆಯಾಗಿ ಬಿಕರಿ ಮಾಡುವದಕ್ಕೆ ಇದರಿಂದ ಅಧಿಕಾರ ಕೊಟ್ಟಿರುತ್ತೇನೆ:—

ಷರತ್ತುಗಳು.

I. ಈ ಲೈಸೆನ್ಸುದಾರನು, ತತ್ಕಾಲದಲ್ಲಿ ಜಾರೀಲಿರುವ ಯಾಕ್ಸೈಜ್ ಕಾನೂನುಗಳಿಗೂ ಮತ್ತು ಆಗಾಗ್ಯೆ ಸದರೀ ಕಾನೂನುಗಳನ್ನನುಸರಿಸಿ, ವಿಧಿಸಲ್ಪಡುವ ರೂಲುಗಳಿಗೂ ಅನುಸರಿಸಿ, ನಡೆದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

II. (a) ಈ ಲೈಸೆನ್ಸು ಕೆಳಗೆ ವಿವರಿಸಲ್ಪಟ್ಟ ಪರಾಯಿ ದೇಶದ ಸ್ಪಿರಿಟ್ ಸಾರಾಯಿಗಳೂ ವ ಪರಾಯಿ ದೇಶದ ಉಕ್ಕಿದ ಸಾರಾಯಿಗಳೂ ಬಿಕರಿ ಮಾಡುವ ಬಗ್ಯಾಗಿ ಕೊಡಲ್ಪಟ್ಟಿರುತ್ತೆ:—

(b) ಮೇಲೆ ಹೇಳಲ್ಪಟ್ಟ ಗುರ್ತುಗಳ ಪೈಕಿ ಯಾವದಾದರೊಂದು ಗುರ್ತಿಲ್ಲದ ಸ್ಪಿರಿಟ್ ಸಾರಾಯಿಯಾಗಲಿ ಯಾ ಪರಾಯಿ ದೇಶದ ಉಕ್ಕಿದ ಸಾರಾಯಿಯಾಗಲಿ ಈ ಲೈಸೆನ್ಸಿನ ದೆಸೆಯಿಂದ ಮಾರಲ್ಪಡಕೂಡದು.

III. ಈ ಲೈಸೆನ್ಸನ್ನನುಸರಿಸಿ, ಬಿಕರಿಮಾಡಲ್ಪಟ್ಟ ಯಲ್ಲಾ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಗಳು ಸದರೀ ಆವರಣಗಳಲ್ಲಿ ಕುಡಿಯಲ್ಪಡಬೇಕೇ ಹೊರ್ತು ಯಾವ ನೆಪದಿಂದಾಗಲಿ ದುಕಾನಿನಿಂದ ಹೊರಗೆ ವಯ್ಯಲ್ಪಡಕೂಡದು.

IV. (1) ಯಾವಬಗೆಯಾದ ಪರಾಯಿ ದೇಶದ ಸ್ಪಿರಿಟ್ ಸಾರಾಯಿಗಳು ಯಾ ಉಕ್ಕಿದ ಸಾರಾಯಿಗಳನ್ನ ಕಮ್ಯಾಂಡಿಗ್ ಆಫಿಸ ರರ ಯಾ ಆ ಬಗ್ಯೆ ಅಂಥಾ ಆಫಿಸರಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವ ಮನುಷ್ಯನ ಬರಹ ಮೂಲಕ ವಾದ ಅಪ್ಪಣೆ ಶಿವಾಯಿ ಯಾವ ಯೂರೋಪಿಯರ್ನ ನಾನ್‌ಕಮ್ಮಿಷನೆಡ್ ಆಫಿಸರ್ ಯಾ ಪ್ರೈವೇಟ್ ಸೋಲ ರ್, ಯಾ ಈ ಜಾತಿಗಳ ಜನಗಳಿಗೆ ಸಂಬಂಧಪಟ್ಟ ಯಾ ಶೇರಿದ ಯಾವ ಯೂರೋಪಿಯರ್ನ ಯಾ ಈಸ್ಟ್‌ಇಂಡಿಯರ್ನ ಹೆಂಗಸ ರಿಗಾಗಲಿ ಮಾರಲೂಕೂಡದು ಯಾ ಎಷ್ಟುಮಟ್ಟಿಗಾದರೂ ಕೊಡಲೂಕೂಡದು, ಮತ್ತು ಅಂಥಾ ಬರಹ ಮೂಲ ಕವಾದ ಅಪ್ಪಣೆಯು ಹಾಗೆ ಮಾರಾಟ ಮಾಡಿದ್ದಕ್ಕಾಗಿ ಲೈಸೆನ್ಸ್‌ದಾರನಿಂದ ದಸ್ತಾವೇಜು ತರೀಕ ಇಟ್ಟುಕೊಳ್ಳಲ್ಪ ಡತಕ್ಕದ್ದು, ಮತ್ತು ಯಾವ ಯಕ್ಸೈಜ್ ಆಫಿಸರರ ಮುಂದಾಗಲಿ ಕೇಳಿದಾಗ ಹಾಜರ್ಮಾಡಲ್ಪಡತಕ್ಕದ್ದು.

(2) ಹದಿನಾರು ವರುಷಕ್ಕೆ ಕಮ್ಮಿಯಾದ ವಯಸ್ಸುಳ್ಳ ಯಾವ ಮಗುವಿಗಾಗಲಿ, ಯಾ ಯಾವನೊಬ್ಬ ಶಿಪಾಯಿ, ಪೊಲೀಸ್ ಫೌಜಿಗೆ ಶೇರಿದ ಮನುಷ್ಯ ಯಾ ರೈಲ್ವೆ ಕಂಪೆನಿಯ ನೌಕರ ಯಾ ನೌಕರಿ ಮೇಲಿರುವ ಯಕ್ಸೈಜ್ ಯಗ್ಜಿಕ್ಯೂಟಿವ್ ಸ್ಟಾಫಿನ ಮೆಂಬರಿಗಾಗಲಿ, ಯಾವ ಬಗೆಯ ಪರಾಯಿ ದೇಶದ ಸ್ಪಿರಿಟ್ ಸಾರಾಯಿಗಳನ್ನ ಯಾ ಉಕ್ಕಿದ ಸಾರಾಯಿಗಳನ್ನ ಮಾರಲೂಕೂಡದು ಯಾ ಎಷ್ಟುಮಟ್ಟಿಗೂ ಕೊಡಲೂಕೂಡದು.

V. ಈ ಲೈಸೆನ್ಸ್ ಅನುಸರಿಸಿ, ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಗಳನ್ನ ಬಿಕರಿಮಾಡುವ ಸ್ಥಳವು ವಿಶಿಷ್ಟಜನರೂ ದಾರಿಯಲ್ಲಿ ತಿರುಗಾಡುವ ಯಾರೊಬ್ಬರಿಗೂ ಕಾಣಬರುವಂತೆ ಬಹಿರಂಗವಾಗಿ ಇರತಕ್ಕದ್ದು.

VI. ಅಂಗಡಿಯ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೆಯ ಮೇಲೆ ಲೈಸೆನ್ಸಿನ ನಂಬರು ಮತ್ತು ಲೈಸೆನ್ಸ್‌ದಾರನ ವ ಅಂಗಡಿಯವನ ಹೆಸರು ಸ್ಪಷ್ಟವಾಗಿ ಬರೆಯಲ್ಪಟ್ಟಿರತಕ್ಕದ್ದು. ಸದರೀ ಅಂಗಡಿಯ ಬಹಿರಂಗವಾದ ಸ್ಥಳದಲ್ಲಿ ಬಿಕರಿ ಮಾಡಲ್ಪಡುವ ಸಾರಾಯಿಗಳ ಒಂದು ತಪ್ಶೀಲ್‌ವಾರ್ ನಿರಖ್‌ಪಟ್ಟಿಯನ್ನ ತಗಲು ಹಾಕಿರತಕ್ಕದ್ದು.

VII. (a) ಈ ಲೈಸೆನ್ಸ್‌ದಾರನು ಮೇಲೆ ಹೇಳಲ್ಪಟ್ಟ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಗಳೊಂದಿಗೆ ಮೋಸಕರವಾಗಿ ನೀರು ಬೆರಿಸಕೂಡದು ಯಾ ಕೆಡಿಸಕೂಡದು, ಯಾ ಮೋಸಕರವಾಗಿ ನೀರು ಬೆರಿಶಿರುವಂಥಾ ಯಾ ಕೆಡಿಶಿರುವಂಥಾ ಸಾರಾಯಿಗಳೆಂದು ತಿಳಿದು ಮಾರಲೂಕೂಡದು;

(b) ಅಥವಾ ಸದರೀ ಅಂಗಡಿಯಲ್ಲಿ ಮತ್ತೇರಿ ಬೀಳುವದು ಅಥವಾ ಇತರ ಅಕ್ರಮವಾದ ನಡತೆ ನಡೆಯುವದು ತಿಳಿದು ಅವುಗಳಿಗೆ ಅವಕಾಶ ಕೊಡಕೂಡದು;

(c) ಅಥವಾ ಅಂಗಡಿಯಲ್ಲಿ ಯಾವ ವಿಧವಾದ ಜೂಜಿಗಾಗಲಿ ತಿಳಿದು ಆಸ್ಪದ ಕೊಡಕೂಡದು;

(d) ಅಥವಾ ವ್ಯಭಿಚಾರಿಗಳನ್ನಾಗಲಿ ಯಾ ಪ್ರಸಿದ್ಧವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ಸದರೀ ಅಂಗಡಿಯಲ್ಲಿ ತನಿಗೆ ತಿಳಿದು ಅಲ್ಲಿಗೆ ಬರುವಂತೆ ಅಥವಾ ಅಲ್ಲಿ ಇರುವಂತೆ ಮಾಡಕೂಡದು;

(e) ಅಥವಾ ಫರಾರಿಯಾಗಿ ಬಂದ ಯಾವ ಯೂರೋಪಿಯರ್ನ ಸೋಲ್ಜರಿಗಾದರೂ ಮನಃಪೂರ್ತಿಯಾಗಿ ವ ತಿಳಿದು ಅಲ್ಲಿ ಆಸರೆ ಕೊಡಲೂ ಕೂಡದು, ಯಾ ಅಂಥವರನ್ನ ಅಲ್ಲಿ ಬಚ್ಚಿಡಲೂ ಕೂಡದು.

VIII. ಈ ಲೈಸೆನ್ಸ್ ಮೇರಿಗೆ ದರೋಬಸ್ತು ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಗಳ ಬಿಕರಿಗಳೂ ನಗದಾಗಿ ಹಣ ತೆಗೆದುಕೊಂಡು ಮಾರತಕ್ಕದ್ದೇ ಹೊರ್ತು ಸಾಲವಾಗಿ ಕೊಡಕೂಡದು, ಅಥವಾ ಸಾರಾಯಿಗಾಗಿ ಯಾವ ವಸ್ತುಗಳನ್ನೂ ಅಡಮಾನವಾಗಿ ಯಾಗಲಿ ಯಾ ಬದಲಿಯಾಗಿ ಯಾಗಲಿ ಯಿಟ್ಟುಕೊಳ್ಳಕೂಡದು.

IX. ಮೇಲೆ ಹೇಳಲ್ಪಟ್ಟ ಅಂಗಡಿಯು——ಲಾಗಾಯತು——ವರಿಗೆ ತೆರೆದಿರತಕ್ಕದ್ದು.

X. ಈ ಲೈಸೆನ್ಸ್‌ದಾರನು ಯಿಡುವ ಲೆಕ್ಕದಲ್ಲಿ ತಿಂಗಳು, ತಾರೀಖು, ಸ್ಪಿರಿಟ್ ಸಾರಾಯಿಗಳು ವ ಉಕ್ಕಿದ ಸಾರಾಯಿಗಳು ತಂದ ಮೊತ್ತ ವ ತರಹೆ, ಯಾವ ಮೂಲಕವಾಗಿ ಅವು ಪಡೆದುಕೊಂಡದ್ದು, ಬಿಕರಿಯಾದ ಮೊತ್ತ ವ ಅದರ ಮೊಬಲಗು, ಮತ್ತು ರೋಜೇನಾ ಹಾಜರಿ ಸರಕಿನ ಶಿಲ್ಕು ಇವುಗಳ ಸಾಫಾ ವ ಕರಾರ್‌ವಾಕಾ ತಪ್ಶೀಲ್ ನಮೂದಿಸತಕ್ಕದ್ದು. ಈ ಲೆಕ್ಕಗಳು ಯಾವಕಾಲದಲ್ಲಾಗಲಿ ಯಕ್ಸೈಜ್ ಇಲಾಖೆಯ ಆಫಿಸರುಗಳ ತನಿಖೆ ಬಗ್ಯೆ ಒಳಪಟ್ಟಿರತಕ್ಕದ್ದು. ಈ ಲೆಕ್ಕದ ಗೋಷ್ವಾರೆಯು ಡೆಪ್ಯುಟಿ ಕಮ್ಮಿಷನರವರಿಗೆ ಕಳುಹಿಸಲ್ಪಡತಕ್ಕದ್ದು.

XI. ಈ ಲೈಸೆನ್ಸ್ ಕ್ರಯ, ದಾನ, ಭೋಗ್ಯ ಯಾ ಮತ್ಯಾವ ರೀತಿಯಿಂದಲಾಗಲಿ ವರ್ಗವಾಗತಕ್ಕದ್ದಲ್ಲಾ, ಮತ್ತು ಇದರಲ್ಲಿ ನಮೂದಿರುವವರು ಹೊರ್ತು ಅನ್ಯಥಾ ಯಾರಿಗೇ ಆಗಲಿ ಇದರಂತೆ ನಡಿಯಲಿಕ್ಕೆ ಅಧಿಕಾರ ವಿರುವದಿಲ್ಲ.

XII. ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಲೈಸೆನ್ಸ್‌ದಾರ ಯಾ ದುಕಾನ್‌ದಾರನು ಯಕ್ಸೈಜ್ ಕಾನೂನುಗಳಲ್ಲಿ ವ ಅವುಗಳಿಗನುಸರಿಸಿದ ನಿಬಂಧನೆಗಳಲ್ಲಿ ವಿಧಿಶಿರುವ ದಂಡನೆಗಳಿಗೆಲ್ಲಾ ಗುರಿಯಾಗುವದಲ್ಲದೆ ಮತ್ತು 1881ನೇ ಇಸವಿಯ XXIIನೇ ಯಕ್ಸೈಜ್ ಆಕ್ಟಿನ 13ನೇ ಸೆಕ್ಷನ್ ಮೇರಿಗೆ ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರಿದಂತೆ ಈ ಲೈಸೆನ್ಸ್ ರದ್ದಾಗಲಿಕ್ಕೆ ಸಹ ಗುರಿಯಾಗಿರತಕ್ಕದ್ದು.

XIII. ಈ ಲೈಸೆನ್ಸ್ ————ವರಿವಿಗೆ ಜಾರಿಯಲ್ಲಿರತಕ್ಕದ್ದು.

ತಾರೀಖು

ಡೆಪ್ಯುಟಿ ಕಮ್ಮಿಷನರ್,

ಡಿಸ್ಟ್ರಿಕ್ಟು.

ಈ ಕೆಳಗೆ ರುಜು ಮಾಡಿರುವಂಥಾ   ಲ್ಲಿ ವಾಸವಾಗಿರುವ   ನ ಮಗನಾದ   ಎಂಬ ನಾನು ಮೇಲ್ಕಂಡ ಲೈಸೆನ್ಸ್‌ದಾರನಾಗಿ, ನನಗಾಗಿಯೂ, ನನ್ನ ವಾರಸ್‌ದಾರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗಪಡೆದಂಥಾವರಿಗೋಸ್ಕರವೂ, ಇದರ ದೆಶೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸೋಣಾದ ವಿಶಿಷ್ಟ ಕರಾರುಗಳಿಗೂ ವ ಷರತ್ತುಗಳಿಗೂ ಒಪ್ಪಿರುತ್ತೇನೆ.

ಲೈಸೆನ್ಸ್‌ದಾರ್.

ತಿಂಗಳ   ನೇ ತಾರೀಖಿನಲ್ಲಿ ನಮ್ಮಗಳ ರೂಬರೂ ರುಜು ವ ಮೊಹರಿನೊಡನೆ ಒಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು:—

1

2

3

ತಾರೀಖು 22ನೇ ಜುಲೈ 1896.

ನಂ. 813.—ಫಾ. ಫೈ. 163—95, ಸ್ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷರ್ಷ ನಿಯಮಗಳನುಸಾ ಮೈಸೂರ್ ಗವರ್ನ್‌ಮೆಂಟನವರು ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಚಕ್ಕುಬಂದಿ ಒಳಂಗಪಟ್ಟ ಫಾರೆಸ್ಟುಗಳು ಮೇಲ್ಕಂಡ ಫಾರೆಸ್ಟ್ ರೂಲ್ಸಿನ 1ನೇ ರೂಲ್ ಅನುಸರಿಸಿ, ಸ್ಟೇಟ್ ಫಾರೆಸ್ಟುಗಳಾಗಿ ವರ್ಗೀಕರಿಸಿರುತವೆ:—

ನಂಬರು.	ಫಾರೆಸ್ಟಿನ ಹೆಸರು.	ಸ್ಥಳ.	ಚಕ್ಕುಬಂದಿ.
1	ನರಸಿಂಹದೇವರ ಬೆಟ್ಟ ಫಾರೆಸ್ಟ್, ಬ್ಲಾಕ್ ನಂ. II, ಚಿಕ್ಕಬಳ್ಳಾಪುರ ತಾಲ್ಲೂಕು.	7 ಚದುರ ಮೈಲುಗಳು, 521 ಎಕರೆಗಳು.	ಉತ್ತರಕ್ಕೆ—ಪಾಕ್ಮಾಡಲ್ಪಟ್ಟ ಲೈನು (12 ಗಜಗಳ ಅಗಲ) "ಏಕಾರ್ಲೇಶ್ವರನ ಡಿ" ಇಂದ ಪ್ರಾರಂಭಿಸಿ, ತಿಪ್ಪೇನಹಳ್ಳಿಯ ಸ. ನಂ. 28ರಲ್ಲಿ ಹಾದು ಹೋಗುತ್ತ ಪೂರ್ವಕ್ಕೆ—ಸದರೀ ಲೈನು ಮೇಲ್ಕಂಡ ಸರ್ವೆ ನಂಬರಿಂದ ಹೊರಟು, ಕಂಜಯ್ಯನಹಳ್ಳಿಯ ಸ. ನಂ. 108ರ ಉದ್ದಕ್ಕೂ ಮತ್ತು ಕಲವಾರದ ಸರ್ವೆ ನಂ. 131, 35 ವ 37 ಮತ್ತು ಸುಡಹಳ್ಳಿಯ ಸರ್ವೆ ನಂ. 4 ವ 5 ಇವುಗಳ ಭಾಗದಲ್ಲಿ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಲೈನು ಈ ಸ್ಥಳದಿಂದ ತಿರುಗಿ, ಜೋಡಿ ನೊಸಿಕುಂಟೆ ಹೊಸೂರ ಅಂಚಿನಲ್ಲಿ ಹಾದು, ಮುದರನಹಳ್ಳಿಯ ಸರ್ವೆ ನಂ. 57, 76, 79, 85, 111 ವ 12ರ ಉದ್ದಕ್ಕೂ ಹೋಗಿ, ಕರಲಹಳ್ಳಿಯ ಸರ್ವೆ ನಂ. 20ರ ಭಾಗದ ಉದ್ದಕ್ಕೂ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು, ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರ ತಾಲ್ಲೂಕು ಮಾದನಹಳ್ಳಿಯ ಹದ್ದನ್ನಶೇರಿ ಜಾಕಲಮುಡುಗಿನ ಸರ್ವೆ ನಂ. 34 ವ 32ರ ಭಾಗಗಳ ಉದ್ದಕ್ಕೂ ಹಾದು, ನಾಲ್ಕದರನಹಳ್ಳಿಯ ಸರ್ವೆ ನಂ. 22ರ ಭಾಗದ ಉದ್ದಕ್ಕೂ ಹೋಗಿ, ನೋಟಲೂರ ಸರ್ವೆ ನಂ. 20, 37 ವ 41ರ ಭಾಗಗಳಲ್ಲಿ ತಿರುಗಿ, ಚಿಕ್ಕಬಳ್ಳಾಪುರ ಗೋರೀಬಿದನೂರು ರಸ್ತೆಯ ಪಕ್ಕದಲ್ಲಿ ಉದ್ದಕ್ಕೂ 7 ಫರ್ಲಾಂಗುಗಳ ಫಾಸಲೆ ವರಿವಿಗೆ ಹೋಗಿ, ಹೊರಟ ಸ್ಥಳವನ್ನು ಶೇರುತ್ತದೆ. ಈ ಕೆಳಗೆ ಕಂಡವು ಮಾರ್ಗದ ಹಕ್ಕುದಾರಿಗಳು:— (I) ಸುಡಹಳ್ಳಿ ಕಣಿವೆಯಿಂದ ಸುಬ್ರಾಯನ ಕೋಟೆ ದೇವಸ್ಥಾನಕ್ಕೆ. (II) ಕಂಗನಹಳ್ಳಿಯಿಂದ ಕೊಪರಹಳ್ಳಿ ಫ್ಯಾಕ್ಟರೀರ್ಷ ಮಾರ್ಗವಾಗಿ ಮಂಚೇನಹಳ್ಳಿಗೆ.
2	ಡಿಟೋ ಫಾರೆಸ್ಟ್, ಬ್ಲಾಕ್ ನಂ. III, ಚಿಕ್ಕಬಳ್ಳಾಪುರ ಮತ್ತು ಗೋರೀಬಿದನೂರ್ ತಾಲ್ಲೂಕುಗಳು.	16 ಚದುರ ಮೈಲುಗಳು, 200 ಎಕರೆಗಳು.	ಉತ್ತರಕ್ಕೆ—ಪಾಕ್ಮಾಡಲ್ಪಟ್ಟ ಲೈನು (12-ಗಜಗಳು ಅಗಲ) ದಶರಥಗಳಗುಡಿ ಮರಪನಹಳ್ಳಿಯ ಸರ್ವೆ ನಂ. 8ರಿಂದ ಪ್ರಾರಂಭಿಸುತ್ತೆ. ಪೂರ್ವಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು, ಮರಪನಹಳ್ಳಿಯ ಸರ್ವೆ ನಂ. 78 ವ 90 ಮತ್ತು ಗೊಲ್ಲಹಳ್ಳಿಯ ಸರ್ವೆ ನಂ. 10 ಇವುಗಳ ಭಾಗಗಳ ಉದ್ದಕ್ಕೂ ಮತ್ತು ಹೊನ್ನೆಗಾರಹಳ್ಳಿಯ ಸರ್ವೆ ನಂ. 41ರ ಭಾಗದ ಉದ್ದಕ್ಕೂ ಹಾದು, ಆವಲಗುರ್ಕಿಯ ಸರ್ವೆ ನಂ. 49, 47, 170, 169, 193, 187, 186, 184 ವ 183 ಇವುಗಳನ್ನ ಶೇರಿ, ಹಿಂದಿನ ಗ್ರಾಮದ ಸರ್ವೆ ನಂ. 185ರ ಉದ್ದಕ್ಕೂ ಹಾದು ಮತ್ತು ಜೋಡಿ ಚಾವಂದಹಳ್ಳಿ ವ ಬೈರೋಗನಹಳ್ಳಿ ಗ್ರಾಮಗಳ ಅಂಚಿನಲ್ಲಿ ಹೋಗಿ, ಅಂಕನಗುಂಡಿಯ ಸರ್ವೆ ನಂ. 71, 72 ವ 74 ಮತ್ತು ತಿಪ್ಪನಹಳ್ಳಿಯ ಸರ್ವೆ ನಂ. 283, 49 ವ 103 ಇವುಗಳ ಉದ್ದಕ್ಕೂ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು ಚಿಕ್ಕಬಳ್ಳಾಪುರ, ಗೋರೀಬಿದನೂರು ರಸ್ತೆಯ ಪಾರ್ಶ್ವದ ಉದ್ದಕ್ಕೂ 58ನೇ ಮೈಲಿಯಲ್ಲಿ 4ನೇ ಫರ್ಲಾಂಗಿನಿಂದ 60ನೇ ಮೈಲಿಯಲ್ಲಿ 7ನೇ ಫರ್ಲಾಂಗಿನ ಒಂದು ಭಾಗದ ವರಿವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು, ಗೊಲ್ಲಹಳ್ಳಿಯ ಸರ್ವೆ ನಂ. 29, ಬೋಡಮಾನಹಳ್ಳಿಯ ಸರ್ವೆ ನಂ. 17 ವ 18, ಪೊಯಿಶೆಟ್ಟಿಹಳ್ಳಿಯ ಸರ್ವೆ ನಂ. 70 ವ 71 ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕು ಕೊಲಮಾನಹಳ್ಳಿಯ ಸರ್ವೆ ನಂ. 48 ವ 46 ಇವುಗಳ ಉದ್ದಕ್ಕೂ ಹಾದು, ರಾಯನಕಲ್ಲಿನ ಸರ್ವೆ ನಂ. 84ರ ಉದ್ದಕ್ಕೂ ಹೋಗಿ ತರುವಾಯ, ಗೋರೀಬಿದನೂರು ತಾಲ್ಲೂಕಿನ ದಂಡಿಗನಹಳ್ಳಿಯ ಸರ್ವೆ ನಂ. 136, 12, 137, 138 ವ 11 ಇವುಗಳ ಅಂಚಿನಲ್ಲಿ ಹಾದು, ಚಿಕ್ಕಬಳ್ಳಾಪುರ ತಾಲ್ಲೂಕಿನ ಕಟ್ಟಿಗಾನಹಳ್ಳಿಯ ಸರ್ವೆ ನಂ. 42, 96, 101 ವ 171 ಇವುಗಳ ಉದ್ದಕ್ಕೂ ಹೋಗಿ, ಹೊರಟ ಸ್ಥಳವನ್ನು ಶೇರುತ್ತದೆ. ಈ ಕೆಳಗೆ ಕಂಡವು ಮಾರ್ಗದ ಹಕ್ಕುದಾರಿಗಳು:— (I) ಜನಗಳಿಂದಲೂ ಮತ್ತು ಕಾಲ್ನಡಿಗೆಗಳಿಂದಲೂ ಉಪಯೋಗಿಸಲ್ಪಟ್ಟ ಮರವನಹಳ್ಳಿಯಿಂದ ಯರಂಗನಹಳ್ಳಿಗೆ ಹೋಗುವ ಭಂಡೀದಾರಿ.

ಸಂಖ್ಯೆ	ಫಾರೆಸ್ಟಿನ ಹೆಸರು.	ಸ್ಥಳ.	ಚಕ್ಕುಬಂದಿ.
2	ನರಸಿಂಹದೇವರ ಬೆಟ್ಟ ಫಾರೆಸ್ಟ್ ಬ್ಲಾಕ್ ನಂ. III, ಚಿಕ್ಕಬಳ್ಳಾಪುರ ಮತ್ತು ಗೋರೀಬಿದನೂರು ತಾಲ್ಲೂಕುಗಳು.	16 ಚದುರ ಮೈಲುಗಳು 200 ಎಕರೆಗಳು.	(II) ಚಿಕ್ಕಬಳ್ಳಾಪುರದಿಂದ ಗೋರೀಬಿದನೂರಿಗೆ ಹೋಗುವ ದೊಡ್ಡರಸ್ತೆ ಮತ್ತು ಅಲ್ಲಿಂದ ಜನಗಳಿಂದಲೂ ವ ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ದಂಡಿಗಾನಹಳ್ಳಿಗೆ ತಿರುಗುವ ಭಂಡಿ ದಾರಿ. (III) ಜನಗಳಿಂದಲೂ ಮತ್ತು ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ದಂಡಿಗಾನಹಳ್ಳಿಯಿಂದ ಕಟಿಗೇನಹಳ್ಳಿಗೆ ಹೋಗುವ ಕಾಲದಾರಿ. (IV) ಜನಗಳಿಂದಲೂ ಮತ್ತು ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ಮರಪನಹಳ್ಳಿಯಿಂದ ಆವಲಬೆಟ್ಟದ ಮೇಲಿರುವ ಆವಲಕೊಂಡಸ್ವಾಮಿಸ್ವಾಮಿ ದೇವಸ್ಥಾನಕ್ಕೆ ಹೋಗುವ ಭಂಡಿದಾರಿ.

ತಾರೀಖು 29ನೇ ಜುಲೈ 1896.

ನಂ. 1144.—ರೆ. 427, ಸರ್ 1888ನೇ ಇಸವಿಯ IVನೇ ರೆಗ್ಯುಲೇಷನಿಂದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನಿನ 2ನೇ ಪ್ರಾರಾ ಅನುಸರಿಸಿ ಮೈಸೂರ್ ಗವರ್ನಮೆಂಟಿನವರು, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನ ನೆಲಮಂಗಲ ತಾಲ್ಲೂಕಿನಲ್ಲಿರುವ ಕಾಯಂಗುಂತ್ತಾ ಕುಲಿಪುರ ಗ್ರಾಮಕ್ಕೆ ಲಗಾವ್ ಮಾಡುವ ಬಗ್ಯೆ, ಅಧಿಕಾರ ಕೊಟ್ಟಿರುತ್ತಾರೆ.

ತಾರೀಖು 30ನೇ ಜುಲೈ 1896.

ನಂ. 1173.—ರೆ. ಫೈ. 161—92, ಮೈಸೂರ್ ಸ್ಟೇಟ್ ಲೈಫ್. ಇನ್ಷೂರೆನ್ಸಿಗೆ ಸಂಬಂಧಪಟ್ಟ ರೂಲ್ಸಿನ 5 ವ 6ನೇ ರೂಲುಗಳಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಸೇರಿಸುವದಕ್ಕೆ ಮೈಸೂರ್ ಗವರ್ನಮೆಂಟಿನವರು ಮಂಜೂರ್ಮಾಡಿರುತ್ತಾರೆ:—

5. "ಇನ್ಷೂರೆನ್ಸಿನ ಕೆಲಸಗಳಿಗೋಸ್ಕರ ಗಣಿಸಲ್ಪಡಬೇಕಾಗಿ ಬರುವ ದಿನಕ್ಕೆ ಹಿಂದಿನ ಜನನದಿನವಾಗಲಿ ಯಾ ಮುಂದಿನ "ಜನನ ದಿನವಾಗಲಿ ಯಾವದು ಸಮೀಪವಾಗಿರುತ್ತದೆಯೋ ಅದು ಭೀಮಾದಾರನ ವಯಸ್ಸಾಗಿ ತೆಗದುಕೊಳ್ಳಲ್ಪಡುವದು. ಸದರೀ ದಿನ "ವು ಉಭಯ ಜನನ ಕಾಲಗಳಿಗೆ ಸಮಾಂತರಉಳ್ಳದ್ದಾಗಿರುವ ಪಕ್ಷದಲ್ಲಿ ಆತನ ವಯಸ್ಸು ಹಿಂದಿನ ಜನನ ದಿನದಲ್ಲಿ ಆಗಿರುವ ವಯಸ್ಸಾ "ಗಿ ಯೆಣಿಸಲ್ಪಡುವದು."

6. "ಈ ರೂಲುಗಳು ಜಾರೀಗೆ ಬಂದ ತರುವಾಯ ಮೈಸೂರ್ ಗವರ್ನಮೆಂಟಿನ ನವುಕರಿಗೆ ದಾಖಲಾಗಬಹುದಾದ ವಿಶಿಷ್ಟ "ಜನಗಳ ವಿಷಯದಲ್ಲಿ ಅವರು ಗವರ್ನಮೆಂಟ್ ನವುಕರಿಗೆ ದಾಖಲಾದ ತಾರೀಖಿನಿಂದಲೂ, ಅಥವಾ 21 ವರುಷಗಳ ವಯಸ್ಸಿನ ಮುಂ "ಚೆಯೋ ಗವರ್ನಮೆಂಟ್ ನವುಕರಿಯಲ್ಲಿ ಸೇರಿದಂಥಾವರ ವಿಷಯದಲ್ಲಿ 20 ವರುಷ 6 ತಿಂಗಳುಗಳ ವಯಸ್ಸು ಪೂರೈಸಿದ ತಾರೀಖಿನಿಂ "ದಲೂ ಇನ್ಷೂರೆನ್ಸು ಅವಶ್ಯಕವಾಗಿರತಕ್ಕದ್ದು. ಪರಂತು ವಿನಾಯಿಸಲ್ಪಟ್ಟ ಸಂದರ್ಭಗಳಲ್ಲಿ ನಿರ್ಣಯಿಸಲ್ಪಟ್ಟ ಕಾಲಕ್ಕೆ ಮಾತ್ರ "ಕೆಲಸಕ್ಕೆ ಇಡಲ್ಪಟ್ಟಿರುವ ಆಫೀಸರುಗಳು ಅವಶ್ಯಕವಾದ ಇನ್ಷೂರೆನ್ಸಿನಿಂದ ವಿನಾಯಿಸಲ್ಪಡಬಹುದು. 45 ವರುಷಗಳ ವಯಸ್ಸು "ಮೀರಿದ ಯಾ 10 ರೂಪಾಯಿಗಳ ತಲಬಿಗೆ ಕೀಳ್ಪಟ್ಟ ಯಾವ ಆಫೀಸರು ಮೊದಲಿನ ಯಾ ಆ ತರುವಾಯದ ಇನ್ಷೂರೆನ್ಸಿಗೆ ಅರ್ಹ "ನಾಗಿರುವದಿಲ್ಲ."

ತಾರೀಖು 31 ಜುಲೈ 1896.

ನಂ. 1178.—ರೆ. ಫೈ. 1—96—97, ಸರ್ 1894ನೇ ಇಸವಿಯ ಲ್ಯಾಂಡ್ ಅಕ್ವೈಜಿಷನ್ ರೆಗ್ಯುಲೇಷನಿನ 4ನೇ ಸೆಕ್ಷನ್ ಅನುಸರಿಸಿ, ಸಂಬಂಧಪಟ್ಟ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧ ಪಡಿಸುವದೇನಂದರೆ,—ಬೀರೂರಿಂದ ಶಿವಮೊಗ್ಗೆಗೆ ರೈಯಿಲ್‌ರಸ್ತೆಯನ್ನ ಕಡೂರು ವ ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿರುವ ತರೀಕೆರೆ, ಬಾಲನಹಳ್ಳಿ, ಮಸರಹಳ್ಳಿ, ಪೆಂಕೀಪುರ ಮತ್ತು ಬಿದರೆ ಇವುಗಳ ಮಾರ್ಗವಾಗಿ ಹಾಕುವದಕ್ಕೆ ಬೇಕಾದ ವಿಶಿಷ್ಟ ಜಮೀನುಗಳೂ ಮೇಲ್ಕಂಡ ರೆಗ್ಯುಲೇಷನ್ ಅನುಸರಿಸಿ, ಗವರ್ನಮೆಂಟಿನವರಿಂದ ಲಗಾವಡು ಕೊಟ್ಟು ತೆಗೆದು ಕೊಳ್ಳಲ್ಪಡುವವು ಮತ್ತು ಮೇಲೆ ಹೇಳಲ್ಪಟ್ಟ ಲೈನು ಹಾಕುತ್ತಲಿರುವ ಪಾರ್ಟಿಯವರು ಕೆಲಸ ಮಾಡದಂತೆ ಜನಗಳಿಂದ ಯಾವ ವಿಧದಿಂದಲೂ ಅಡಿಮೊಡಲ್ಪಡಕೂಡದು.

ತಾರೀಖು 10ನೇ ಆಗಸ್ಟ್ 1896.

ನಂ. 1544.—ರೆ. ಫೈ. 129—95, ಮೊಳಕಾಲ್ಮೂರು ತಾಲ್ಲೂಕಿನ ಅಮಲ್‌ದಾರ್ ಎಸ್. ಕೃಷ್ಣ ಅಯ್ಯರ್ ಯವರಿಗೆ, 1896ನೇ ಏಪ್ರೈಲ್ 26ನೇ ಮಸ್ಕುಂ ಕ್ಯಾಂಪ್ 201ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಇನ್ನೂ ಐದು ದಿನಗಳು 1896ನೇ ಏಪ್ರೈಲ್ 23ನೇ ತಾರೀಖಿನಿಂದ 27ರ ವರಿವಿಗೆ ಉಭಯ ದಿನಗಳು ಸೇರಿ ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 11ನೇ ಆಗಸ್ಟ್ 1896.

ನಂ. 1502.—ರೆ. 579, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟಿ ಡೆಪ್ಯುಟಿ ಕಮಿಷನರ್ ಮೆಸ್ಟರ್ ಎಚ್. ಎಚ್. ಸ್ಪಾರ್ಕ್ಸ್‌ಯವರಿಗೆ, 1896ನೇ ಆಗಸ್ಟ್ 12ನೇ ತಾರೀಖಿನಾರಭ್ಯ ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಯವರು, ಸದರೀ ಮೆಸ್ಟರ್ ಸ್ಪಾರ್ಕ್ಸ್ ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ನಂ. 1548.—ಎಕ್ಸೈಸ್. 62, ಸನ್ 1893ನೇ ಜನವರಿ 14ನೇ ಮುಕ್ಕಾಂ 11813—ರೆ. ಫೈ. 233–92ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿರುವ Vನೇ ರೂಲಿನ 6ನೇ ಪ್ಯಾರಾ (13)ನೇ ಕ್ಲಾಜಿಗೂ ಮತ್ತು ಸದರೀ ಇಸ್ತಿಹಾರ್‌ನಾಮೆಗೆ ಸೇರಿಸಿರುವ "ಎ" ಲೈಸೆನ್ಸಿನ 4 (4)ನೇ ಷರತ್ತಿಗೂ ಈ ಕೆಳಗೆ ಕಂಡದ್ದನ್ನು ಬದಲಾಗಿ ಸೇರಿಸುವ ಬಗ್ಗೆ ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ.

ರೆವಿನ್ಯೂ ಬೋರ್ಡಿನ ಸ್ಟ್ಯಾಂಡಿಂಗ್ ಆರ್ಡರುಗಳ XIನೇ ಅಧ್ಯಾಯದ 170ನೇ ರೂಲಿನ 4ನೇ ಪ್ಯಾರಾವಿಗೆ ಒಳಪಟ್ಟಿರುವ ಮದರಾಸ್ ಪ್ರೆಸಿಡೆನ್ಸಿಯಲ್ಲಿರುವ ಬಳ್ಳಾರಿ, ಅನಂತಪುರ, ಕಡಪ ಉತ್ತರ ಆರ್ಕಾಟು, ಶಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳಿಂದ ಮತ್ತು ಸದರೀ ಡಿಸ್ಟ್ರಿಕ್ಟುಗಳಿಗೆ ಶೇಂದಿಯನ್ನು ಆಮದರಫ್ತು ಮಾಡುವ ಬಗ್ಗೆ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳು ಅವರುಗಳ ಯುಕ್ತಾನುಸಾರ ಅಪ್ಪಣೆ ಕೊಡಬಹುದು. ಸದರೀ ಆರ್ಡರಿನ ಯಕ್ಸ್‌ಟ್ರಾಕ್ಟು ಅಂದರೆ ಭಾಗವು ಇದರ ಬಾಜೂದಲ್ಲಿ ಕಾಣಿಸಿರುತ್ತೆ.

XIನೇ ಅಧ್ಯಾಯ, 170ನೇ ರೂಲ್, 4ನೇ ಪ್ಯಾರಾ "ಬಳ್ಳಾರಿ, ಅನಂತಪುರ, ಕಡಪ, ಉತ್ತರ ಆರ್ಕಾಟು, ಶಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳ ಕಲೆಕ್ಟರುಗಳು ಮೈಸೂರಿಂದ ಮತ್ತು ಮೈಸೂರಿಗೆ ಶೇಂದಿಯನ್ನು ಆಮದರಫ್ತು ಮಾಡುವ ಬಗ್ಗೆ ಅಪ್ಪಣೆ ಕೊಡಬಹುದು. ಪರಂತು ಶೇಂದಿಯು ಶೇದಾರಫ್ತು ಮಾಡಲ್ಪಡುವ ಇಜಾರೆ ಸ್ಥಳಗಳ ಗುತ್ತಿಗದಾರರಿಗೆ ಮಾತ್ರವೇ ರಹದಾರಿಗಳು ಕೊಡಲ್ಪಡತಕ್ಕದ್ದು."

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 7ನೇ ಆಗಸ್ಟ್ 1896.

ಇಸ್ತಿಹಾರ್‌ನಾಮ ನಂ. 736.—4122, ಲೋಕಲ್ ಮೈಸೂರ್ ಪಬ್ಲಿಕ್‌ವರ್ಕ್ಸ್ ಇಲಾಖೆಯ ಅಪ್ಪರ್ ಸಬಾರ್ಡಿನೇಟ್ ಸಿಬ್ಬಂದಿಯಲ್ಲಿ ಈ ಕೆಳಗೆ ಕಂಡ ಬಡ್ತಿಗಳು 1896ನೇ ಏಪ್ರಿಲ್ 6ನೇ ಮುಕ್ಕಾಂ ಲಾಗಾಯತು ಮಾಡಲ್ಪಟ್ಟಿರುತ್ತವೆ:—

ಡಿವಿಜನ್.	ಹೆಸರುಗಳು.	ಹಾಲಿ ದರ್ಜೆ.	ಬಡ್ತೀ ಮಾಡಲ್ಪಟ್ಟ ದರ್ಜೆ.	ಬಡ್ತಿಯ ಸ್ವಭಾವ.	ಷರಾ.
ಬೆಂಗಳೂರು ..	ಪಿ. ಮುನಿಸಾಮಿ ಮೊದಲಿಯಾರು ..	2ನೇ ಗ್ರೇಡ್ ಸೂಪರ್‌ವೈಜರ್ ..	1ನೇ ಗ್ರೇಡ್ ಸುಪರ್ ವೈಜರ್ ..	ಖಾಯಂ	ಮೃತಪಟ್ಟ ಮೆ॥ ಡಬ್ಲ್ಯು. ಎಂ. ಮೆಲ್ಲರಿಗೆ ಬದಲಾಗಿ.
ಮೈಸೂರು ..	ಮೆಸ್ಟರ್ ಎಚ್. ಎಲ್. ಹ್ವೀಲರ್	3ನೇ ಗ್ರೇಡ ಸೂಪರ್‌ವೈಜರ್ ..	2ನೇ ಗ್ರೇಡ ಸುಪರ್ ವೈಜರ್ ..	ಡಿಟೋ	
ಚಿತ್ರದುರ್ಗ ..	ಪಿ. ನಲ್ಲನಾಯಗಂ ಮೊದಲಿಯಾರು ..	1ನೇ ಗ್ರೇಡ ಓವರ್‌ಸಿಯರ್ ..	3ನೇ ಗ್ರೇಡ ಸುಪರ್ ವೈಜರ್ ..	ಡಿಟೋ	
ಬೆಂಗಳೂರು ..	ಮೆಸ್ಟರ್ ಆರ್. ಈ. ಫೋರಿಗಾರ್ಡ್	ಸೂಪರ್‌ನ್ಯೂಮರರಿ 1ನೆ ಗ್ರೇಡ್ ಓವರ್‌ಸಿಯರ್ ..	1ನೇ ಗ್ರೇಡ್ ಓವರ್‌ಸಿಯರ್ ..	ಡಿಟೋ	

ತಾರೀಖು 12ನೇ ಆಗಸ್ಟ್ 1896.

ನಂ. 743.—4203, ಚಾಮರಾಜ ನಾಲೆ ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜನಿಯರ್ ಮೆಸ್ಟರ್ ಬಿ. ಸಿ. ಶ್ರೀನಿವಾಸಯ್ಯಂಗಾರ್ರಿಗೆ ಮಾಹೆ ಮಜಕೂರು 15ನೇ ತಾರೀಖು ಲಾಗಾಯತು ಯಾ ಅವರು ಹೊರಟ ತಾರೀಖಿನಾರಭ್ಯ ಇಪ್ಪತ್ತೈದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಸಿ. ಬರ್ನ್, ಕರ್ನಲ್,
ಮೈಸೂರ್ ಗವರ್ನಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂ. 261. ತಾರೀಖು 12ನೇ ಆಗಸ್ಟ್ 1896, ಬೆಂಗಳೂರು.

ಕಾನರ್ಕಾಹಳ್ಳಿಯಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಕಿಲ್ಲೆ ರಂಗನಾಥಸ್ವಾಮಿ ದೇವಸ್ಥಾನ ಮಳೆಗಾಳು ಮಹಾದೇವೇಶ್ವರ ದೇವಸ್ಥಾನ ಕಲ್ಲಹಳ್ಳಿ ವೆಂಕಟರಮಣಸ್ವಾಮಿ ದೇವಸ್ಥಾನ ಈ ಮೂರು ದೇವಸ್ಥಾನಗಳಿಗೂ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

1. ಕರ್ಕಾಕಾನಹಳ್ಳಿಯಲ್ಲಿರುವ ಹಶಿಗೆ ಗುಂಡಪ್ಪನವರು.
2. ಡಿಟೋ ಗುರಿಕಾರ ತಿಮ್ಮಪ್ಪನವರು.
3. ಡಿಟೋ ಯಜಮಾನ ಶ್ರೀನಿವಾಸ ಶೆಟ್ಟರು.
4. ಡಿಟೋ ಪೆನ್ಷನ್ ಶೇಕದಾರ್ ಶ್ರೀನಿವಾಸರಾಯರು.

ವಿ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂಪರ್ಇಂಟೆಂಡೆಂಟ್ ಮತ್ತು ಸೆಕ್ರೆಟರಿ.

73

ಮೈಸೂರ ಗೆಜೆಟ್.

ನಂ. XXXI. ಸರ್ಕಾರದಿಂದ ಘಾಯಿಷ್ ಆದ್ದು. ನಂ. 33.

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 20, ಸನ್ 1896.

IIನೇ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ಪ್ರಕಟನ ಪತ್ರಿಕೆ.

ಮೈಸೂರು ಬೇಕೀ ಪರೀಕ್ಷೆಗಳು.

ಸನ್ 1896ನೇ ಇಸವಿ ಆಗಸ್ಟ್ ತಾರೀಖು 6.

(i) ಸನ್ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಲೋವರ್ ಸೆಕಂಡರೀ ಪರೀಕ್ಷಾ ದೇಶಭಾಷಾ ಪರೀಕ್ಷೆಗೆ ಪ್ರವೇಶಧನವು (2—8—0) ರೂಪಾಯಿಗಳಿಗೆ ಬದಲಾಗಿ (3—0—0) ರೂಪಾಯಿಗಳಂತೆ ನಿಯಮಿಸಲ್ಪಟ್ಟಿರುತ್ತೆ.

(ii) ಸನ್ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಕರ್ಣಾಟಕ ಪಂಡಿತ ಪರೀಕ್ಷೆಗೆ ಕರ್ಣಾಟಕ ವಚನಕಾವ್ಯವು ಪೂರ್ತಿಯಾಗಿ ನಿಯಮಿಸಲ್ಪಟ್ಟಿರುತ್ತೆ.

ಎಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಬೆಂಗಳೂರ್ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 24ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೈನರ್ ಫಾರೆಸ್ಟ್ ಯಾನೆ ಚಿಲ್ಲರೆ ಪಸಾರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ಸಾದರ್ಮಾಡಲ್ಪಟ್ಟಿರುವ 1895ನೇ ಇಸವಿ ಜನವರಿ 31ನೇ ಮರ್ಕೂಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಘಾಯಿಷಾಗಿರುವ ಆದೇ ಇಸವಿ ಜನವರಿ 23ನೇ ಮರ್ಕೂಂ ಇಸ್ತಿಹಾರನ್ನು ಬದಲಾಯಿಸಿ ಅಮಲ್ದಾರ್ ಮತ್ತು ಸವಾಲ್ದಾರ್‌ಗಳ ವಶವಳಿಕೆ ಬಗ್ಗೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತೀಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್ದಾರ್ರೇ ಆಗಲಿ ಅವರ ಗೈರಹಾಜರಿಯಲ್ಲಿ ಶಿರಸ್ತ್ರೇದಾರ್ರೇ ಆಗಲಿ ಈ ಬಗ್ಗೆ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತುಮಾಡುವ ಸ್ಥಳಗಳಲ್ಲಿ ಫಸಲನ್ನು ಹರಾಜು ಮಾಡುವರು. ಕಾರ್ತೀಕ ಫಸಲನ್ನು ಡಿಸೆಂಬರ್ ತಿಂಗಳಲ್ಲಿಯೂ ವೈಶಾಖೀ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್ದಾರರು ಪ್ರಕಟಿಸುತ್ತಾರೆ. ಇನ್ನೊಂದು ಹುಕುಂ ಕೊಡುವವರಿವಿಗೂ ಕ್ಲೋಸ್‌ಪೇಟೆ ಸಬ್ ಡಿವಿಜನಿನಲ್ಲಿ ಈ ಕೆಳಗೆ ನಮೂದುಮಾಡಿರುವ ಸ್ಥಳಗಳಲ್ಲಿ ಹರಾಜ್ ಮಾಡಲ್ಪಡುತ್ತೆ.

(3) ಹರಾಜು ಷರತ್ತುಗಳೇನಂದರೆ:—

(a) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್ಮಾಡುವದಿಲ್ಲ.

(b) ಆಖೈರ್ ಜಡಸವಾಲ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯಕೂಡದು.

(c) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರ ಏಜಂಟರಾಗಿ ಸವಾಲ್ ಮಾಡುತ್ತಾರೋ ಕೇಳಲ್ಪಡಬಹುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(d) ಜಡಸವಾಲ್ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ಮತ್ತು ರೂಪಾಯಿ 1ಕ್ಕೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ಸನ್ನೂ ಸಹ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್ದಾರ್ರಿಂದ ತಿಳಿಸಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟ್ಟನ್ನ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜ್ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್ದಾರನನ್ನ ಗುರಿಮಾಡುವದು.

(e) ಅಂಗೀಕರಿಸಲ್ಪಟ್ಟ ಸವಾಲ್ದಾರನು ವೈಶಾಖೀ ಫಸಲನ್ನು ಜೂನ್ 1ನೇ ತಾರೀಖು ಲಾಗಾಯತು ಡಿಸೆಂಬರು 31ರ ವರಿಗೂ, ಕಾರ್ತೀಕ ಫಸಲನ್ನು ಜನವರಿ 1ನೇ ತಾರೀಖು ಲಾಗಾಯತು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ತಾಲ್ಲೂಕು.	ತಾಲ್ಲೂಕಿನಲ್ಲಿ ಹರಾಜ್ ಮಾಡುವ ಸ್ಥಳ.
ಚನ್ನಪಟ್ಟಣ ..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು ಮರವಳಿ (ಜಂಗಲಿ ಪಸಾರೆ ಚನ್ನಪಟ್ಟಣದ ಕಸಬೆಯಲ್ಲಿ ಮಾತ್ರ ಹರಾಜ್ ಮಾಡಲ್ಪಡುತ್ತೆ)
ಕಾರ್ಕಾನಹಳ್ಳಿ ..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)
ಮಾಗಡಿ ..	ಮಾಗಡಿ ತಾವರೆಕೆರೆ, ಸೋಲೂರು, ಕುದೂರು ಮೊಕ್ಕಾಂಗಳಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)
ಕ್ಲೋಸ್‌ಪೇಟೆ ..	ಬಿಡದಿ ಮತ್ತು ಕ್ಲೋಸ್‌ಪೇಟೆಯಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)

ಬಿ. ಕುಪ್ಪುಸಾಮಿನಾಯುಡು,
ಫಾರ್ ಡೆಪ್ಯುಟಿ ಕಮ್ಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫಿಸಿನಿಂದ.

ಇಸ್ತಿಹಾರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರಸಿಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದುಕೊಳ್ಳುವ ಬಗ್ಗೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರಿವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫಿಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬ್‌ಗಳನ್ನು ತೆಗದುಕೊಳ್ಳತಕ್ಕದ್ದು. ಒಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸಿಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮೆಮೋ ತಯಾರ್ಮಾಡಿ ಮ್ಯುನಿಸಿಪಲ್ ಆಫಿಸಿನಲ್ಲಿ ಚಿಕಟಾಯಿಸಲ್ಪಡುವದು.

ತಾರೀಖು 18ನೇ ಮೇ 1896.

ಟಿ. ಟಿ. ಲೆನಾರಡ್,
ಪ್ರಸಿಡೆಂಟ್.

ಕೋಲಾರ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 11ನೇ ಆಗಸ್ಟ್ 1896.

ಸನ್ 1896—97ನೇ ಸಾಲಿಗೆ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಇರುವ ಡಿಸ್ಟ್ರಿಕ್ಟು ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿಯೂ ಮತ್ತು ಪ್ಲಾಂಟೇಷನ್‌ಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆಜಿನಸುಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯು ಈ ಕೆಳಗೆ ಕಂಡ ತಖ್ತೆಯಲ್ಲಿ ನಮೂದುಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಸ್ಥಳಗಳಲ್ಲಿಯೂ ಮತ್ತು ಆಫೀಸರವರಿಂದಲೂ ತಾಲ್ಲೂಕುವಾರಾಗಿಯಾಗಲಿ ಅಥವಾ ಹೋಬಳೀವಾರಾಗಿಯಾಗಲಿ ಅಥವಾ ಮತ್ಯಾವ ರೀತಿಯಾಗಿಯಾಗಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಹರಾಜು ಪ್ರತಿದಿನಸದಲ್ಲಿಯೂ 12 ಘಂಟೆ ಲಾಗಾಯತು ನಡಿಸಲ್ಪಡುವದು.

ನಂಬರು	ತಾಲ್ಲೂಕಿನ ಹೆಸರು	ಸ್ಥಳ	ಹರಾಜ್ ತಾರೀಖು	ಹರಾಜ್ ಸ್ಥಳ	ಹರಾಜ್ ಮಾಡುವ ಆಫೀಸರವರು
1	ಕೋಲಾರ	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು .. ಗಾಜಲದಿನ್ನೆ ಪ್ಲಾಂಟೇಷನ್ .. ಸಂಗೊಂಡಹಳ್ಳಿ ಡಿಟೋ .. ಬಯ್ಯಪ್ಪನಹಳ್ಳಿ ಡಿಟೋ ..	14ನೇ ಸೆಪ್ಟಂಬರ್ 1896ನೇ ಇಸವಿ	ಕೋಲಾರ ತಾಲ್ಲೂಕು ಕಚೇರಿ	ಕೋಲಾರ ತಾಲ್ಲೂಕು ಅಮಲ್ದಾರು ಫಾರೆಸ್ಟು ರೇಂಜರು, ಮಾಲೂರು ಅಮಲ್ದಾರು ಸಹ.
2	ಬೌರಿಂಪೇಟೆ	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು ಕಾಮಸಮುದ್ರ ಸ್ಟೇಟ್‌ಫಾರೆಸ್ಟು ಮತ್ತು ಇದರಲ್ಲಿರತಕ್ಕ ಪ್ಲಾಂಟೇಷನ್‌ಗಳು .. ಕಾರಬಲೆ ಪ್ಲಾಂಟೇಷನ್ ..	16ನೇ ಸೆಪ್ಟಂಬರ್ 1896ನೇ ಇಸವಿ	ಬೌರಿಂಗಪೇಟೆ ತಾಲ್ಲೂಕು ಕಚೇರಿ	ಬೌರಿಂಗ್‌ಪೇಟೆ ತಾಲ್ಲೂಕು ಅಮಲ್ದಾರು ಫಾರೆಸ್ಟು ರೇಂಜರು, ಮಾಲೂರು ಅಮಲ್ದಾರು ಸಹ.
3	ಮಾಲೂರು	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು .. ತಾಲ್ಲೂಕು ಕಚೇರಿ ಕಾಂಪೌಂಡಿನಲ್ಲಿರುವ ಪ್ಲಾಂಟೇಷನ್ .. ಬೆಳ್ಳಾವಿ ಪ್ಲಾಂಟೇಷನ್ ದಿನ್ನೇರಿ ಡಿಟೋ .. ಕಾಡುಮುತ್ಸಂದ್ರ ಡಿಟೋ .. ಹಳೆಕುರಂಡಹಳ್ಳಿ ಡಿಟೋ .. ಹೊಸಕುರಂಡಹಳ್ಳಿ ಡಿಟೋ .. ನುಲ್ಲಪ್ಪನಹಳ್ಳಿ ಡಿಟೋ .. ಮಾರಸಂದ್ರ ಡಿಟೋ .. ರಾಮಚಂದ್ರಪುರ ಡಿಟೋ .. ಎಸವಂತಪುರ ಡಿಟೋ .. ಲಕ್ಷ್ಮೀಸಾಗರ ಡಿಟೋ .. ವಕ್ಕಲೇರಿ ಡಿಟೋ ..	19ನೇ ಸೆಪ್ಟಂಬರ್ 1896ನೇ ಇಸವಿ	ಮಾಲೂರು ತಾಲ್ಲೂಕು ಕಚೇರಿ	ಮಾಲೂರು ತಾಲ್ಲೂಕು ಅಮಲ್ದಾರು ಫಾರೆಸ್ಟು ರೇಂಜರು, ಮಾಲೂರು ಅಮಲ್ದಾರು ಸಹ.
4	ಮುಳಬಾಗಲು	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು .. ಆಗರಸ್ಟೇಟ್ ಫಾರೆಸ್ಟು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು .. ಕಾಶೀಪುರ ಪ್ಲಾಂಟೇಷನ್‌ಗಳು ..	23ನೇ ಸೆಪ್ಟಂಬರ್ 1896ನೇ ಇಸವಿ	ಮುಳಬಾಗಲು ತಾಲ್ಲೂಕು ಕಚೇರಿ	ಮುಬಾಗಲು ತಾ|| ಅಮಲ್ದಾರು ಫಾರೆಸ್ಟು ರೇಂಜರು, ಶ್ರೀನಿವಾಸಪುರ ಅಮಲ್ದಾರು ಸಹ.
5	ಶ್ರೀನಿವಾಸಪುರ ಸಬ್ ತಾಲ್ಲೂಕು	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು .. ಶ್ರೀನಿವಾಸಪುರ ಫಾರೆಸ್ಟು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು .. ರಾಯಲ್‌ಪಾಡು ಫಾರೆಸ್ಟ್ ಡಿಟೋ ..	25ನೇ ಸೆಪ್ಟಂಬರ್ 1896ನೇ ಇಸವಿ	ಶ್ರೀನಿವಾಸಪುರ ತಾಲ್ಲೂಕು ಕಚೇರಿ	ಶ್ರೀನಿವಾಸಪುರ ಡೆಪ್ಯುಟಿ ಅಮಲ್ದಾರು ಫಾರೆಸ್ಟು ರೇಂಜರು, ಶ್ರೀನಿವಾಸಪುರ ಅಮಲ್ದಾರು ಸಹ.

ನಂಬರು.	ತಾಲ್ಲೂಕಿನ ಹೆಸರು.	ಸ್ಥಳ.	ಹರಾಜ್ ತಾರೀಖು.	ಹರಾಜ್ ಸ್ಥಳ.	ಹರಾಜ್ ಮಾಡುವ ಆಫೀಸರವರು.
6	ಚಿಂತಾಮಣಿ ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟುಗಳು .. ಕೋನಪಲ್ಲಿ ಪ್ಲಾಟೇಷನ್ .. ಅಡ್ಡಗಲ್ ನಲವಂಕಿ ಸ್ಟೇಟ್‌ಫಾರೆಸ್ಟು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು.	28ನೇ ಸೆಪ್ಟಂಬರ್ 1896ನೇ ಇಸವಿ	ಚಿಂತಾಮಣಿ ತಾಲ್ಲೋಕು ಕಚೇರಿ	ಚಿಂತಾಮಣಿ ತಾಲ್ಲೂಕು ಅಮಲ್ದಾರು. ಫಾರೆಸ್ಟು ರೇಂಜರು, ಶ್ರೀನಿವಾಸಪುರ ಅಮಲ್ದಾರು ಸಹ.
7	ಶಿಡ್ಲಘಟ್ಟ ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟುಗಳು .. ಪಟ್ರಹಳ್ಳಿ ಪ್ಲಾಂಟೇಷನ್ .. ತಿರುಮಲಿಗಾನದಿನ್ನೆ ಡಿಟೋ .. ಚೌಡನಂದ್ರ ಡಿಟೋ .. ಗೊರ್ರಮಡಗು ಡಿಟೋ .. ಜಂಗಂಕೋಟೆ ಡಿಟೋ .. ಚಿಕ್ಕಹಾರಡಿ ಡಿಟೋ .. ದೊಡ್ಡಹಾರಡಿ ಡಿಟೋ ..	30ನೇ ಸೆಪ್ಟಂಬರ್ ಮತ್ತು 1ನೇ ಅಕ್ಟೋಬರ್ 1896ನೇ ಇಸವಿ	ಶಿಡ್ಲಘಟ್ಟ ತಾಲ್ಲೋಕು ಕಚೇರಿ	ಶಿಡ್ಲಘಟ್ಟ ತಾಲ್ಲೂಕು ಅಮಲ್ದಾರು. ಫಾರೆಸ್ಟು ರೇಂಜರು, ಚಿಕ್ಕಬಳ್ಳಾಪುರ ಅಮಲ್ದಾರು ಸಹ.
8	ಚಿಕ್ಕಬಳ್ಳಾಪುರ.	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟುಗಳು. .. ಸುಲ್ಲಾಲಪ್ಪನದಿನ್ನೆ ಪ್ಲಾಂಟೇಷನ್ .. ನರಸಿಹ್ಮದೇವರಪಟ್ಟ ಫಾರೆಸ್ಟು 2 ಮತ್ತು 3ನೇ ಬ್ಲಾಕುಗಳು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು .. ನಂದೀ ಸ್ಟೇಟ್‌ಫಾರೆಸ್ಟು ಡಿಟೋ .. ಕಾವಲಪಟ್ಟಿಹಳ್ಳಿ ಪ್ಲಾಂಟೇಷನ್ .. ಸಂಬಾರಗಿಡ ಕಾವಲ್ ಡಿಟೋ ..	5ನೇ ಅಕ್ಟೋಬರ್ 1896ನೇ ಇಸವಿ	ಚಿಕ್ಕಬಳ್ಳಾಪುರ ತಾಲ್ಲೋಕು ಕಚೇರಿ	ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್ದಾರು. ಫಾರೆಸ್ಟು ರೇಂಜರು, ಚಿಕ್ಕಬಳ್ಳಾಪುರ ಅಮಲ್ದಾರು ಸಹ.
9	ಗೋರೀಬಿದನೂರು.	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟುಗಳು .. ನರಸಿಹ್ಮದೇವರಪಟ್ಟ ಫಾರೆಸ್ಟು 4ನೇ ಬ್ಲಾಕು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು .. ವಲಸೆ ಫಾರೆಸ್ಟು ಡಿಟೋ ..	8ನೇ ಅಕ್ಟೋಬರ್ 1896ನೇ ಇಸವಿ	ಗೋರೀಬಿದನೂರು ತಾಲ್ಲೋಕು ಕಚೇರಿ	ಗೋರೀಬಿದನೂರು ತಾಲ್ಲೂಕು ಅಮಲ್ದಾರು. ಫಾರೆಸ್ಟು ರೇಂಜರು, ಚಿಕ್ಕಬಳ್ಳಾಪುರ ಅಮಲ್ದಾರು ಸಹ.
10	ಗುಡಿಬಂಡೆ ಸಬ್ ತಾಲ್ಲೂಕು ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟುಗಳು .. ಬೀಚಗಾನಹಳ್ಳಿ ಪ್ಲಾಂಟೇಷನ್ .. ನರಸಿಹ್ಮದೇವರಪಟ್ಟ ಫಾರೆಸ್ಟು 5ನೇ ಬ್ಲಾಕು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು ..	10ನೇ ಅಕ್ಟೋಬರ್ 1896ನೇ ಇಸವಿ	ಗುಡಿಬಂಡೆ ತಾಲ್ಲೋಕು ಕಚೇರಿ	ಗುಡಿಬಂಡೆ ಡೆಪ್ಯುಟಿ ಅಮಲ್ದಾರು. ಫಾರೆಸ್ಟು ರೇಂಜರು, ಬಾಗೇಪಲ್ಲಿ ಅಮಲ್ದಾರು ಸಹ.
	ಬಾಗೇಪಲ್ಲಿ ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟುಗಳು .. ಎಲ್ಲಂಪಲ್ಲಿ ಪ್ಲಾಂಟೇಷನ್ .. ಇಟ್ಟಿಕಲ್‌ದುರ್ಗ ಫಾರೆಸ್ಟು ..	13ನೇ ಅಕ್ಟೋಬರ್ 1896ನೇ ಇಸವಿ	ಬಾಗೇಪಲ್ಲಿ ತಾಲ್ಲೋಕು ಕಚೇರಿ	ಬಾಗೇಪಲ್ಲಿ ತಾಲ್ಲೂಕು ಅಮಲ್ದಾರು. ಡಿಟೋ ಮತ್ತು ಫಾರೆಸ್ಟು ರೇಂಜರು, ಬಾಗೇಪಲ್ಲಿ ಅಮಲ್ದಾರು ಸಹ.

ಪಸಾರೆಜಿನಸಿಗಳ ವಿವರ.

1. ಜೇನು, 2. ಜೇನುಮೇಣ, 3. ಕಪಿಲಾರಂಗು, 4. ಗೇರುಪಪ್ಪು, 5. ಹುಣಸೇಹಣ್ಣು, 6. ಹೊಂಗೇಕಾಯಿ, 7. ಬ್ಯಾಲದಹಣ್ಣು, 8. ಕಲ್ಲುಹೂವು, 9. ಕಾಡುಹರಳು, 10. ಗೋಂದು, 11. ಮರಡಿಪಪ್ಪು, 12. ಶೀಗೇಕಾಯಿ, 13. ತಾರೇಕಾಯಿ, 14. ಪಪ್ಪಿಚಕ್ಕೆ, 15. ಅಳಲೇಕಾಯಿ, 16. ಶೀತಾಫಲ.

2. ಚಡದರಖಾಸ್ತುದಾರರು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆಯನ್ನು ಠೇವಣಿ ಕಟ್ಟತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜುಮಾಡಲ್ಪಡುವದು. ಆದರೆ ಅದರಿಂದ ಉಂಟಾಗುವ ಆದಾಯದಲ್ಲ ಸದರೀಯವರಿಗೆ ಏನೂ ದೊರಿಯಲಾರದು. ಹರಾಜು ಮಂಜೂರಾದ ಸಂಗತಿಯನ್ನು ಚಡಸವಾಲ್‌ದಾರ್ರಿಗೆ ತಿಳಿಸಿದ

ಒಂದು ವಾರದೊಳಗಾಗಿ ಬಾಕಿ ಮುಕ್ತಾಲು ಹಿಸ್ಸೆ ಮೊಬಲಗನ್ನು ಸದರೀಯವರು ಪಾವತೀ ಮಾಡತಕ್ಕದ್ದು. ಅಷ್ಟರಲ್ಲಿ ಹಣ ಪಾವತಿ ಮಾಡಲು ತಪ್ಪಿದರೆ ದರಖಾಸ್ತುದಾರು ಮೊದಲು ಪಾವತಿ ಮಾಡಿದ ಕಾಲು ಹಿಸ್ಸೇ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ತಪ್ಪಿಸಲಾದೀತು. ಪೂರಾ ಮೊಬಲಗು ಪಾವತಿಯಾದ ನಂತರ ಹರಾಜುಕಾಲದಲ್ಲಿ ಫಾಯಿಷ್ ಆಗುವ ಷರತ್ತುಗಳ ಕಂಡು ದರಖಾಸ್ತುದಾರರು ಕರಾರು ಬರೆದು ಕೊಡಬೇಕಾಗಿದೆ. ಇದಕ್ಕೆ ತಪ್ಪಿದರೆ ಜಿನಸಿಯನ್ನು ರೂಢಿಸಲು ಅಪ್ಪಣೆ ಕೊಡಲ್ಪಡಲಾರದು, ಪೂರಾ ಹರಾಜು ಮೊಬಲಗಿನ ಮೇಲೆ ರೂಪಾಯಿಗೆ ಒಂದು ಆಣೆಯಂತೆ ಲೋಕಲ್ ಸೆಸ್ ಕೊಡತಕ್ಕದ್ದು.

3. ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಇಜಾರೇದಾರರು ಹಿಡುವಳಿ ಜಮೀನಿನಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಸಲನ್ನು ರೂಢಿಸಲು ಹಕ್ಕು ಇರುವದಿಲ್ಲ.

5. ಇನಾಂದಾರರ ಸ್ಥಿರಪಟ್ಟ ಹಕ್ಕುದಾರಿಗೆ ಇಜಾರೇದಾರರು ಪ್ರವೇಶಿಸಕೂಡದು.

6. ಗ್ರಾಮ ಅಮರಾಯಿ ಫಲ ಹುಟ್ಟುವಳಿಯು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

7. ದರಖಾಸ್ತುದಾರರು ತಕ್ಕ ಸವಾಲ್ ಮಾಡದೆ ಹೋದರೆ ಹರಾಜು ಮಾಡುವ ಆಫೀಸರರು ಹರಾಜು ನಿಲ್ಲಿಸುವದಕ್ಕೂ ಅಥವಾ ಮುಂದೆ ಮತ್ತೊಂದು ವೇಳೆ ಹರಾಜು ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

ಬಿ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ.

ತಾರೀಖು 8ನೇ ಆಗಸ್ಟ್ 1896.

ಸ್ಥಿರಸ್ವತ್ತಿನ ಹರಾಜಿನ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಜೋಡಿ ಬಾಕಿದಾರರಾದ ಹನುಮಂತಾಚಾರ್ರು ವಗೈರೆರಿಂದ ಬರಬೇಕಾದ ನೀರಸರದಿ ಬಾಕಿಗಾಗಿ ಇದರಡಿ ನಮೂದಾಗುವ ಫೋರ್ಫಿಟ್ಟಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್ದಾರ್ರ ಕಚೇರಿಲಿ 1896ನೇ ಸೆಪ್ಟಂಬರ್ 26ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 96—12—5 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜಿನ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಫಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜಿನ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷ್ನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷ್ನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷ್ನರವರಿಂದ ಸ್ಯರ್ಟಿ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷ್ನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತು.			ಜಮೀನು. ನಂಬರ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.		ಜಮೀನು. ಆಕಾರ.			ಸರ್ಕಾರಕ್ಕೆ ಬರಪೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.		
1	2	3	4	5	6			7	8	9		10			11		
					ರೂ.	ಆ.	ಪೈ.			ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಬಳ್ಳಾಪುರ.	ಚಿಕ್ಕಬಳ್ಳಾಪುರ.	ಜೋಡಿ ಬೊಮ್ಮನಹಳ್ಳಿ ಗ್ರಾಮ.	ಹನುಮಂತಾಚಾರ್ರು ವಗೈರೆರು	..	..	..	..	ಗ್ರಾಮದಲ್ಲಿ ಬಾಕಿದಾರ್ರಿಗೆ ಇರುವ ಹಿಸ್ಸೆಗಳು.	ಖುಷ್ಕೀ ತರೀ ಬಾಗಾಯತು ಪರಂಪೋಕು	299 20 38 78	11 13 26 20	596	4	0	96	0	5
									ಟೋಟಲ್	436	30				ನೋಟಿಸ್ ಫೀ ವಗೈರೆ 0–12–0		
												ನೀರ್ ಸರದಿ ..			96–12–5		
									ಸಾಲಿನಾ ಸರ್ಕಾರಕ್ಕೆ ಕೊಡತಕ್ಕ ಜೋಡಿ	..	..	136	0	0	ಹರಾಜ್ ತಾರೀಕ್ ವರಿಗೆ ಬಡ್ಡಿ ಕೊಡಪೇಕು.		

ಸಿ. ಮಾದಯ್ಯ,
ಡೆಪ್ಯುಟಿ ಕಮಿಷ್ನರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 3ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸರ್ 1896–97ನೇ ಸಾಲಿಗೆ, ಅಂದರೆ 1896ನೇ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ ವರಿಗೆ, ತುಮಕೂರು ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನು ತುಮಕೂರು ತಾಲ್ಲೂಕು ಕಚೇರಿಯಲ್ಲಿ 1896ನೇ ಸೆಪ್ಟಂಬರ್ 4ನೇ ತಾರೀಖಿನ ಬೆಳಿಗ್ಗೆ 11 ಘಂಟೆಗೆ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರು ಅಥವಾ ಶಿರಸ್ತೇದಾರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡೆದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು.

5. ಚಡಸವಾಲ್ದಾರು, ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಆಯಾ ತಾಲ್ಲೂಕು ಅಮಲ್ದಾರ್ರಿಂದ ಚಡಸವಾಲ್ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳ ಒಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆ ಯಂತೆ ಆಗುವ ಲೋಕಲ್ ಸೆಸ್ ಬೇಬಿಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

6. ಇಜಾರ್ದಾರು ಹಿಡುವಳಿ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರ್ದಾರ್ರ ಹಕ್ಕಿಗೆ ಆತಂಕಪಡಿಸಕೂಡದು.

8. ಹಿಡುವಳಿಯಲ್ಲಿಲ್ಲದ ಜಮೀನುಗಳನ್ನ ಸರ್ಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರವೇನೂ ಇಲ್ಲ ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನು ಜಮಾಯಿಸುವದಕ್ಕಾಗಿ ಜಮೀನುಗಳನ್ನು ಇಜಾರೆದಾರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್ದಾರ್ರಿಂದ ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರು ಸಾಗಿಸಕೂಡದು.

ತಾರೀಖು 3ನೇ ಅಗಸ್ಟ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸನ್ 1896-97ನೇ ಸಾಲಿಗೆ ಅಂದರೆ, 1896ನೇ ಜುಲೈ 1ನೇ ತಾರೀಖು ಲಾಗಾಯತು 1897ನೇ ಜೂನ್ 30ನೇ ತಾರೀಖು ವರಿಗೆ ಈ ಕೆಳಗೆ ನಮೂದಾಗುವ ತಿಪಟೂರು ಮತ್ತು ಪಾವಗಡ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಸರಕಾರಿ ಬಂಜರ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲ್‌ಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸಿಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನ ಅಮಲ್ದಾರ್ರ ರೂಬರೂಬ್ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಮತ್ತು ಸ್ಥಳಗಳಲ್ಲಿಯೂ ಹರಾಜ್ ಮಾಡಲ್ಪಡುತ್ತೆ. ಹರಾಜ್ ಮಧ್ಯಾಹ್ನ 11 ಘಂಟೆಗೆ ಷುರು ಆಗುತ್ತೆ. ಹರಾಜ್ ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ತಾಲ್ಲೂಕು.	ಪಸಾರೇ ಜಿನಸಿ.	ತಾರೀಖು.	ಸ್ಥಳ.
ತಿಪಟೂರು.	ಜೆನ್ನಾಯಕನಹಳ್ಳಿ, ಈರ್ಲಗೆರೆ, ಚಿಕ್ಕಮಾರ್ಪನ ಹಳ್ಳಿ, ಕಡೇಹಳ್ಳಿ ಕಾವಲ್, ಕೆಂಚವೀರನಹಳ್ಳಿ, ಆದಿನಾಯಕನಹಳ್ಳಿ, ಲಕ್ಷ್ಮೀಪುರ ಈ ಗ್ರಾಮಗಳಲ್ಲಿರತಕ್ಕ ಅಳಲೇಕಾಯಿ. ಬೀದರೆಗುಡಿ, ಲಕ್ಕಿಹಳ್ಳಿ ಕಾವಲ್, ಹೊಂಗಲಕ್ಷ್ಮೀ ಕಾವಲ್, ಈಚನೂರ್ ಕಾವಲ್, ಹಾಲ್ಕುರಿಕೆ ಕಾವಲ್‌ಗಳಲ್ಲಿರುವ, 1 ತಾರೆಕಾಯಿ 2 ದಿಂಡಗದ ಗೋಂದು 3 ಕಪಿಲಾರಂಗು 4 ಹೊಂಗೇಬೀಜ 5 ತಂಗಡಿಮ್ಯಾಣ 6 ಬ್ಯಾಲದಕಾಯಿ 7 ಪತಂಗೆ	1896ನೇ ಸೆಪ್ಟಂಬರ್ 5ನೇ ತಾರೀಖು.	ತಿಪಟೂರು.
ಪಾವಗಡ	1 ಜೇನುತುಪ್ಪ 2 ಕಲ್ಲುಹೂವ್ವು 3 ಅಳಲೇಕಾಯಿ 4 ತಗರೆಬೀಜ 5 ಮಡ್ಡಿಚಕ್ಕೆ 6 ಶೀತಾಫಲ	1896ನೇ ಸೆಪ್ಟಂಬರ್ 8ನೇ ತಾರೀಖು.	ಪಾವಗಡ.

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್ದಾರ್ರಿಂದ ಚಡಸವಾಲ್ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ಒಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ ವಸೂಲ್ಮಾಡಲ್ಪಡುವದು.

3. ಕ್ಲಿಪ್ತ ಕಾಲದ ಒಳಗೆ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಠೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಫಾಯಿದೆ ಭಾಗ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವಫಸಲನ್ನ ರೂಢಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟ್ಟು ಫಾರೆಸ್ಟ್ಟು ಡಿಪಾರ್ಟ್ಮೆಂಟ್.

ತಾರೀಖು 29ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಬುಕ್ಕಾಪಟ್ಟ, ಮಂಚಲುದೊರೆ, ತೀರ್ಥರಾಂಪುರ ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟ್ಟು 1896—97ನೇ ಸಾಲ್ ಅಂದರೆ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂನ್ ಆಖೈರುವರಿಗೆ ಜಮಾಯಿಸಿಕೊಳ್ಳುವ ಹಕ್ಕು ತುಮಕೂರ ಡಿಸ್ಟ್ರಿಕ್ಟ್ಟು ಡಿಸ್ಟ್ರಿಕ್ಟ್ಟು ಫಾರೆಸ್ಟು ಆಫಿಸರು ಅಥವಾ ಅವರಿಂದ ನೇಮಿಸಲ್ಪಡುವ ಸಬ್ ಅಸಿಸ್ಟೆಂಟ್ ಕಂಸರವೇಟರ ರೂಬರೂ 1896ನೇ ಇಸವಿ ಸೆಪ್ಟಂಬರ್ ತಾರೀಖು 4ರಲ್ಲು ಬಹಿರಂಗವಾಗಿ ತುಮಕೂರ ಡಿಸ್ಟ್ರಿಕ್ಟ್ಟು ಫಾರೆಸ್ಟು ಆಫಿಸಿನಲ್ಲಿ ಹರಾಜುಮಾಡಲ್ಪಡುತ್ತೆ.

2 ಚಡಸವಾಲ್‌ದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಮೊಬಲಗು ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು ಹದಿನೈದು ದಿವಸದವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗ್ಗೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ಮಾಡಲ್ಪಡುವದು.

3. ಖಿಸ್ತು ಮೊಬಲಗು ಗೊತ್ತಾದ ಕಾಲದವಳಗಾಗಿ ಪಾವತಿ ಮಾಡದೆ ಹೋದರೆ ಚಡಸವಾಲ್‌ದಾರನ ಠೇವಣಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಅವಲ್ ಇಜಾರೆದಾರನ್ನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಉಂಟಾಗುವ ಫಾಯಿದೆ ಭಾಗ ಅವಲ್ ಇಜಾರೆದಾರನು ಹೊಂದಲು ಅರ್ಹನಾಗುವದಿಲ್ಲ

4. ಹರಾಜು ಮಂಜೂರಾದ ಕೂಡ್ಲೆ ಇಜಾರೆದಾರನು ಡಿಸ್ಟ್ರಿಕ್ಟ್ಟು ಫಾರೆಸ್ಟು ಆಫಿಸರವರ ಹೆಸರಿಗೆ ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನ ಬರದುಕೊಡಬೇಕು. ಈ ಮುಚ್ಚಳಿಕೇ ಷರತ್ತುಗಳು ಹರಾಜುಕಾಲದಲ್ಲಿ ತಿಳಿಸಲ್ಪಡುತ್ತವೆ.

ತಾರೀಖು 29ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ದೇವರಾಯದುರ್ಗ, ಮದ್ದಗಿರಿ, ಕುದರೆಕಣಿವೆ, ಹುಲಿಯೂರುದುರ್ಗ, ಕಂಪ್ಲಾಪುರ, ಬುಕ್ಕಾಪಟ್ಟ, ಮಂಚಲುದೊರೆ, ತೀರ್ಥರಾಂಪುರ ಸ್ಟೇಟ್ ಫಾರೆಸ್ಟುಗಳಲ್ಲಿರತಕ್ಕ ಕಲ್ಲು ಹುವ್ವು 1896—97ನೇ ಸಾಲ್ ಅಂದರೆ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂನ್ ಆಖೈರು ಪರಿಯಂತರ ಜಮಾಯಿಸಿಕೊಳ್ಳುವ ಹಕ್ಕು ತುಮಕೂರ ಡಿಸ್ಟ್ರಿಕ್ಟ್ಟು ಡಿಸ್ಟ್ರಿಕ್ಟ್ಟು ಫಾರೆಸ್ಟು ಆಫಿಸರವರಿಂದ 1896ನೇ ಇಸವಿ ಸೆಪ್ಟಂಬರ ತಾರೀಖು 4ರಲ್ಲು ಬಹಿರಂಗವಾಗಿ ತುಮಕೂರು ಡಿಸ್ಟ್ರಿಕ್ಟ್ಟು ಫಾರೆಸ್ಟು ಆಫಿಸಿನಲ್ಲಿ ಹರಾಜುಮಾಡಲ್ಪಡುತ್ತೆ.

2. ಚಡಸವಾಲ್‌ದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆ ಮೊಬಲಗು ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು ಹದಿನೈದು ದಿವಸದವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ಮಾಡುವದು.

3. ಖಿಸ್ತು ಮೊಬಲಗು ಗೊತ್ತಾದ ಕಾಲದವಳಗಾಗಿ ಹಾಜರ್ಮಾಡದೆ ಹೋದರೆ ಚಡಸವಾಲ್‌ದಾರನ ಠೇವಣಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಅವಲ್ ಇಜಾರ್‌ದಾರನ್ನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಉಂಟಾಗುವ ಫಾಯಿದೆ ಭಾಗ ಅವಲ್ ಇಜಾರೆದಾರನು ಹೊಂದಲು ಅರ್ಹನಾಗುವದಿಲ್ಲ.

ಎಂ. ವೆಂಕಟನಾರಣಪ್ಪ, ಡಿಸ್ಟ್ರಿಕ್ಟ್ಟು ಫಾರೆಸ್ಟು ಆಫಿಸರ್.

ಮೈಸೂರ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಮೈಸೂರ್ ನಜರಬಾದಿನಲ್ಲಿ ಇರುವ ಶಿವಗ್ನಾನಂ ಪಿಳ್ಳೆಯವರ ವಿಷಯದಲ್ಲಿ—

ಸರ್ 1895—96ನೇ ಇಸವಿ ದಿವಾಳಿ ಕೇಸ್ ನಂಬರ್ 263.

ಹುಕುಂ.

ಮೇಲ್ಕಂಡ ಶಿವಗ್ನಾನಂಪಿಳ್ಳೆಯವರು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬರೂ ಅರ್ಜೀದಾರರಾದ ಶಿವಗ್ನಾನಂಪಿಳ್ಳೇರ ಪರವಾಗಿ ಅಡ್ವೊಕೇಟ್ ಮಿಸ್ಟರ್ ನಂಜಪ್ಪನವರನ್ನೂ ಮತ್ತು ಸದರೀಯವರ ದೇಣೇದಾರರಾದ 1ನೇ ಯತಿರಾಜ ಸಂಪತ್ಕುಮಾರ ಬ್ಯಾಂಕ್ ಏಜಂಟ್ ಅಳಸಿಂಗ್ರಾಚಾರ್ರು 3ನೇ ಹಿಂದೂ ಯೂನಿಯನ್ ಬ್ಯಾಂಕ್ 18ನೇ ನಾಗಮ್ಮನವರ ತರಫ್ ಅಡ್ವೊಕೇಟ್ ಮ॥ ರಾಘವಾಚಾರ್ ಇವರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ದೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ,—2ನೇ ಜರ್ಗವೋರ್ಚ ಬ್ಯಾಂಕ್ ಏಜಂಟರು, 4ನೇ ವೆಂಕಟರಾಮಯ್ಯ, 5ನೇ ಆರ್ಕಾಟ್ ನಾರಾಯಣಸ್ವಾಮಿ ಮೊದಲಿ, 6ನೇ ಕ್ಯಾವಲರಿ ಬ್ಯಾಂಕ್, 7ನೇ ಮಧುರಶೆಟ್ಟಿ, 8ನೇ ಕೃಷ್ಣಯ್ಯಂಗಾರ್ರು, 9ನೇ ನಂಜುಂಡಪ್ಪ, 10ನೇ ಅಪ್ಪಾಜಪ್ಪ, 11ನೇ ಅರುಣಾಚಲ ಮೊದಲಿ, 12ನೇ ಪೋಬಳಾಚಾರಿ, 13ನೇ ಚಿಕ್ಕಬಳ್ಳಾಪುರ ಬ್ಯಾಂಕ್, 14ನೇ ಗೋವಿಂದಪ್ಪ, 15ನೇ ಹೊನ್ನಯ್ಯ, 16ನೇ ಶೇಂಪಣ್ಣ, 17ನೇ ರಾಮಸ್ವಾಮಿಶೆಟ್ಟಿ, 19ನೇ ವೀರರಾಘವಲು ನಾಯುಡು, 20ನೇ ಈರೋಜಿ ನಂಜಾಜಿ, 21ನೇ ಮಣಿಗೆ ಕರಿಬಸಪ್ಪ, 22ನೇ ನರಸಿಂಹಯ್ಯ, 23ನೇ ಶಿವಶಂಕರಪ್ಪ, 24ನೇ ಕೃಷ್ಣಯ್ಯ ಗವುಡ, 25ನೇ ಸೀತಾರಾಮಯ್ಯ, 26ನೇ ಮದರಾಸ್ ಹಿಂದೂ ಪರೋಪಕಾರಿ ಕಂಪಿನಿ, 27ನೇ ಮಂಜಪ್ಪ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಶಿವಗ್ನಾನಂ ಪಿಳ್ಳೆಯವರು ಹೊಂದುವದಕ್ಕೆ ಹಕ್ಕುದಾರರ ಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸರ್ 1896ನೇ ಇಸವಿ ಆಗಸ್ಟ 5ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತಿನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬಡ್ಡಿ ಬರಬೇಕಾದ ತಾರೀಖು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಮೈಸೂರ್ ಯತಿರಾಜ ಸಂಪತ್ಕುಮಾರ ಬ್ಯಾಂಕ್ ಏಜಂಟ್ ಆಳಸಿಂಗ್ರಾಚಾರ್ರು ..	492–15–11	..	ಡಿಕ್ರಿ ಬಾಬತು	
3	ಹಿಂದೂ ಯೂನಿಯನ್ ಬ್ಯಾಂಕ್ ..	1,651–13– 0	..	ಡಿಟೋ	
18	ಹಾಸನದಲ್ಲಿರುವ ನಾಗಮ್ಮ ..	800– 0– 0	..	ತಮಸೂಕು ಬಾಬತು	
		2944–12–11	..		

ಪಿ. ಸಿಂಗ್ರಾಚಾರ್,
ಸಬ್ ಜಡ್ಜ್.

ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟು ಇಲಾಖಾ.

ನೋಟಿಸ.

ತಾರೀಖು 10ನೇ ಆಗಸ್ಟ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಮೈಸೂರು ಡಿಸ್ಟ್ರಿಕ್ಟು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್.

1. ಕೃಷ್ಣರಾಜಪೇಟೆ ತಾಲ್ಲೂಕಿಗೆ ಶೇರಿದ.

(1) ಕನ್ನಂಬಾಡಿ ಹೋಬಳಿ ಪೈಕಿ. | ಬಲ್ಲೇನಹಳ್ಳಿ ಕಾವಲ್, ಬಿಂಡಹಳ್ಳಿ ಕಾವಲ್.

(2) ಅಕ್ಕಿಹೆಬ್ಬಾಳು ಹೋಬಳಿ ಪೈಕಿ. | ಆಲಂಬಾಡಿ ಕಾವಲ್, ಬೆಳ್ಳಿಬೆಟ್ಟದ ಕಾವಲ್.

2. ನಾಗಮಂಗ್ಲ ತಾಲ್ಲೂಕಿಗೆ ಶೇರಿದ.

(1) ಕಸಬಾ ಹೋಬಳಿ ಪೈಕಿ. } ಬಸವನಕಲ್ಲೂ ಮತ್ತು ಕೊತ್ತೀಪುರದ ಕಾವಲ್.
(2) ಹಂಪಾಪುರದ ಫಿರಕಾ. } ನಾಗನಕೆರೆ ಕಲ್ಲಗೇರೆ ಕಾವಲ್.

3. ಶ್ರೀರಂಗಪಟ್ಟಣದ ತಾಲ್ಲೂಕಿಗೆ ಶೇರಿದ.

(1) ಬಳಗುಳ್ಳದ ಹೋಬಳಿ ಪೈಕಿ. | ಕುರಗಳ್ಳಿ, ಬಸ್ತೀಪುರ ಪ್ಲಾಂಟೇಷನ್ ಸಮೀಪಗಳಲ್ಲಿ.

(4) ಕೃಷ್ಣರಾಜಪೇಟೆ ತಾಲ್ಲೂಕಿಗೆ ಶೇರಿದ ಡಿಸ್ಟ್ರಿಕ್ಟು ಜಂಗಲ್‌ಗಳೂ ಮತ್ತು ಬೀಬಿಬೆಟ್ಟದ ಜಂಗಲ್ ಸಹ.

ಸ್ 1897ನೇ ಇಸವಿ ಜೂನ್ ಆಖೈರ್ ವರಿಗೆ ಈ ಮೇಲ್ಕಂಡವುಗಳಲ್ಲಿ ವುತ್ಪತ್ತಿ ಆಗುವ ಶೀಗೇಕಾಯಿ, ಅಳಲೇಕಾಯಿ, ದಿಂಡ್ಲು ಗೋಂದು, ಹೊಂಗೇಬೀಜ, ಜೇನುಮ್ಯಾಣ, ಜೇನುತುಪ್ಪ, ಹುಣಶೇಹಣ್ಣು ಈ ಬಾಬ್ತಾರ್ 1896ನೇ ಇಸವಿ ಸೆಪ್ಟಂಬರ್ ತಾರೀಖು (2)ರಲ್ಲು ಚಿನಕುರ್ಲಿ ಮುಸಾಫರ್ ಬಂಗ್ಲೆಯಲ್ಲಿ ಡಿಸ್ಟ್ರಿಕ್ಟು ಅಥವಾ ಸಬ್ ಡಿವಿಜನ್ ಫಾರೆಸ್ಟು ಆಫೀಸರವರು ಹರಾಜು ಮಾಡಿಸುತ್ತಾರೆ.

2. ದರಖಾಸ್ತಿನಲ್ಲಿ ಮಂಜೂರಾದ ಜಿನಸಿ ಮೊತ್ತವನ್ನು 1897ನೇ ಇಸವಿ ಏಪ್ರಿಲ್ ಆಖೈರ್ ವಳಗಾಗಿ ಬಗರ್ ಲಾಗವಡಿಸ್ಸಿಂದ ಶ್ರೀರಂಗಪಟ್ಟಣದ ಸಂಡಲ್ ಕೋಠಿಗೆ ಪಾವತಿ ಮಾಡಿ ದರೋಗರಿಂದ ರಶೀತಿ ಪಡಿಯಬೇಕು.

3. ದರಖಾಸ್ತು ಮಂಜೂರಾದ ಒಡನೆ ಜಡದರಖಾಸ್ತು ದಾರನು ದರಖಾಸ್ತಿನ ಮೇರೆ ನಡದುಕೊಳ್ಳತಕ್ಕ ಬಗ್ಗೆ (50) ರೂಪಾಯಿಗಳು ಡಿಪಾಜಿಟ್ ಯಿಟ್ಟು ಛಾಪಾಕಾಗದ್ದಲ್ಲಿ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಮತ್ತು ಖಾತರ್ ಜಾಮಿನ್ ಸಹ ಕೊಡಬೇಕು.

4. ಮೇಲ್ಕಂಡ ಡಿಪಾಜಿಟ್ ಮೊಬಲಗು ಕೂಡಲೆ ಪಾವತಿ ಮಾಡದೆ ಇದ್ದರೆ ಪುನಹ ಹರಾಜು ಕ್ರಮ ನಡಸಿ ಅದರಲ್ಲಿ ವುಂಟಾಗುವ ನಷ್ಟಕ್ಕೆ ಮೊದಲ್ ದರಖಾಸ್ತು ದಾರನ್ನ ಗುರಿಪಡಿಸುತ್ತೆ. (2)ನೇ ದರಖಾಸ್ತಿನಲ್ಲಿ ಮೊದಲ್ ದರಖಾಸ್ತಿಗಿಂತಾ ಸರ್ಕಾರಕ್ಕೆ ಜಾಸ್ತಿ ವುತ್ಪತ್ತಿ ವುಂಟಾದಲ್ಲಿ ಡಿಟೋ ಜಾಸ್ತಿಗೆ ಮೊದಲು ದರಖಾಸ್ತು ದಾರನಿಗೆ ಯೇನೂ ಹಕ್ಕು ಇರುವದಿಲ್ಲ.

10	ಗುಡಿಬಂಡೆ ಸಬ್ ತಾಲ್ಲೂಕು ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟುಗಳು .. ಬೀಚಗಾನಹಳ್ಳಿ ಪ್ಲಾಂಟೇಷನ್ .. ನರಸಿಂಹದೇವರಬೆಟ್ಟ ಫಾರೆಸ್ಟು 5ನೇ ಬ್ಲಾಕು ಮತ್ತು ಇದರಲ್ಲಿರುವ ಪ್ಲಾಂಟೇಷನ್‌ಗಳು ..	10ನೇ ಅಕ್ಟೋಬರ 1896ನೇ ಇಸವಿ	ಗುಡಿಬಂಡೆ ತಾಲ್ಲೂಕು ಕಚೇರಿ	ಗುಡಿಬಂಡೆ ಡೆಪ್ಯುಟಿ ಅಮಲ್‌ದಾರು. ಫಾರೆಸ್ಟು ರೇಂಜರು, ಬಾಗೇಪಲ್ಲಿ ಅಮಲ್‌ದಾರು ಸಹ.
	ಬಾಗೇಪಲ್ಲಿ ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟುಗಳು .. ಎಲ್ಲಂಪಲ್ಲಿ ಪ್ಲಾಂಟೇಷನ್ .. ಇಟ್ಟಿಕಲ್‌ದುರ್ಗ ಫಾರೆಸ್ಟು ..	13ನೇ ಅಕ್ಟೋಬರ 1896ನೇ ಇಸವಿ	ಬಾಗೇಪಲ್ಲಿ ತಾಲ್ಲೂಕು ಕಚೇರಿ	ಬಾಗೇಪಲ್ಲಿ ತಾಲ್ಲೂಕು ಅಮಲ್‌ದಾರು. ಡಿಟೋ ಮತ್ತು ಫಾರೆಸ್ಟು ರೇಂಜರು, ಬಾಗೇಪಲ್ಲಿ ಅಮಲ್‌ದಾರು ಸಹ.

ಪಸಾರೆಜಿನಿಸಿಗಳ ವಿವರ.

1. ಜೇನು, 2. ಜೇನುಮೇಣ, 3. ಕಪಿಲಾರಂಗು, 4. ಗೇರುಪಪ್ಪು, 5. ಹುಣಸೇಹಣ್ಣು, 6. ಹೊಂಗೇಕಾಯಿ, 7. ಬ್ಯಾಲದಹಣ್ಣು, 8. ಕಲ್ಲುಹೂವು, 9. ಕಾಡುಹರಳು, 10. ಗೋಂದು, 11. ಮರಡಿಪಪ್ಪು, 12. ಶೀಗೇಕಾಯಿ, 13. ತಾರೇಕಾಯಿ, 14. ಪಪ್ಪಳಚಕ್ಕೆ, 15. ಅಳಲೇಕಾಯಿ. 16. ಶೀತಾಫಲ.

2. ಚಡದರಖಾಸ್ತುದಾರರು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆಯನ್ನು ಶೀವಣಿ ಕಟ್ಟತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜು ಮಾಡಲ್ಪಡುವದು. ಆದರೆ ಅದರಿಂದ ಉಂಟಾಗುವ ಆದಾಯದಲ್ಲಿ ಸದರೀಯವರಿಗೆ ಏನೂ ದೊರೆಯಲಾರದು. ಹರಾಜು ಮಂಜೂರಾದ ಸಂಗತಿಯನ್ನು ಚಡಸವಾಲ್‌ದಾರ್ರಿಗೆ ತಿಳಿಸಿದ

ಒಂದು ವಾರದೊಳಗಾಗಿ ಬಾಕಿ ಮುಕ್ತಾಲು ಹಿಸ್ಸೆ ಮೊಬಲಗನ್ನು ಸದರೀಯವರು ಪಾವತೀ ಮಾಡತಕ್ಕದ್ದು. ಅಷ್ಟರಲ್ಲಿ ಹಣ ಪಾವತಿ ಮಾಡಲು ತಪ್ಪಿದರೆ ದರಖಾಸ್ತುದಾರು ಮೊದಲು ಪಾವತಿ ಮಾಡಿದ ಕಾಲು ಹಿಸ್ಸೇ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ತಪ್ಪಿಸಲಾದೀತು. ಪೂರಾ ಮೊಬಲಗು ಪಾವತಿಯಾದ ನಂತರ ಹರಾಜಾಕಾಲದಲ್ಲಿ ಘಾಯಿಷ್ ಆಗುವ ಷರತ್ತುಗಳ ಕಂಡು ದರಖಾಸ್ತುದಾರರು ಕರಾರು ಬರಹ ಕೊಡಬೇಕಾಗಿದೆ. ಇದಕ್ಕೆ ತಪ್ಪಿದರೆ ಜೆನಸಿಯನ್ನು ರೂಢಿಸಲು ಅಪ್ಪಣೆ ಕೊಡಲ್ಪಡಲಾರದು, ಪೂರಾ ಹರಾಜು ಮೊಬಲಗಿನ ಮೇಲೆ ರೂಪಾಯಿಗೆ ಒಂದು ಆಣೆಯಂತೆ ಲೋಕಲ್ ಸೆಸ್ ಕೊಡತಕ್ಕದ್ದು.

3. ಹರಾಜು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಇಜಾರೇದಾರರು ಹಿಡುವಳಿ ಜಮೀನಿನಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಸಲನ್ನು ರೂಢಿಸಲು ಹಕ್ಕು ಇರುವದಿಲ್ಲ.

5. ಇನಾಂದಾರರ ಸ್ಥಿರಪಟ್ಟ ಹಕ್ಕುದಾರಿಗೆ ಇಜಾರೇದಾರು ಪ್ರವೇಶಿಸಕೂಡದು.

6. ಗ್ರಾಮ ಅಮರಾಯಿ ಫಲ ಹುಟ್ಟುವಳಿಯು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

7. ದರಖಾಸ್ತುದಾರರು ತಕ್ಕ ಸವಾಲ್ ಮಾಡದೆ ಹೋದರೆ ಹರಾಜು ಮಾಡುವ ಆಫೀಸರರು ಹರಾಜು ನಿಲ್ಲಿಸುವದಕ್ಕೂ ಅಥವಾ ಮುಂದೆ ಮತ್ತೊಂದು ವೇಳೆ ಹರಾಜು ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

ಬಿ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸ್ನ 1896—97ನೇ ಇಸವಿ ಅರ್ಜೀ ನಂಬರ್ 29.

ಮೃತಪಟ್ಟ ಚನ್ನಂಕ್ಕೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಜವರೇಗವುಡರು, ಮೃತಪಟ್ಟ ಸದರೀ ಚನ್ನಂಕ್ಕೇಗವುಡರಿಗೆ ಮಗ ಆಗಬೇಕೆಂಬ ಹಕ್ಕುದಾರಿಮೇಲೆ ನಾಗಮಂಗಲದ ತಾಲ್ಲೂಕು ನೆಲ್ಲೀಗೆರೆ ಹೋಬಳಿ ಆಳೀಸಂದ್ರದ ಸ್ಥಳದ ಸದರೀ ಜವರೇಗವುಡರು, ಸದರೀ ವಾಸಸ್ಥರಾಗಿ ಮೃತಪಟ್ಟ ಚನ್ನಂಕ್ಕೇಗವುಡರ ಜಿಂದಗಿ ಬಗ್ಗೆಗಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜವರೇಗವುಡರ ಅರ್ಜಿಯನ್ನು ಸ್ನ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಂಕ್ಕೇಗವುಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ನ 1896—97ನೇ ಇಸವಿ ಅರ್ಜೀ ನಂಬರ್ 33.

ಮೃತಪಟ್ಟ ಕಪ್ಪಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು 1ನೇ ಚಿಕ್ಕಮಂಜಭಟ್ಟ 2ನೇ ವೆಂಕಟಪತಯ್ಯ 3ನೇ ನರಸುಬ್ಬಯ್ಯ ಇವರುಗಳು, ಮೃತಪಟ್ಟ ಸದರೀ ಕಪ್ಪಮ್ಮನವರಿಗೆ ಅಕ್ಕನಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಅರಕಲಗೂಡು ತಾಲ್ಲೂಕು ಮರೂರ್ ಹೋಬಳಿ ಸರ್ವಮಾನ್ಯ ಹೆಬ್ಬಾಲೇ ಗ್ರಾಮದ ಸ್ಥಳದ ಸದರೀ 1—2—3ನೇ ಅರ್ಜಿದಾರರು, ಸದರೀ ವಾಸಸ್ಥರಾಗಿ ಮೃತಪಟ್ಟ ಕಪ್ಪಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕಮಂಜಭಟ್ಟ ವಗೈರೇರ ಅರ್ಜಿಯನ್ನು ಸ್ನ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಪ್ಪಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ನ 1896—97ನೇ ಇಸವಿ ಅರ್ಜೀ ನಂಬರ್ 43.

ಮೃತಪಟ್ಟ ಪಟೇಲ್ ಮರಿದೇವರುಯೆಂಬವರ ಆಸ್ತೀವಿಷಯದಲ್ಲಿ—

ಅರ್ಜೀದಾರು 1ನೇ ಶಿವನಪ್ಪ 2ನೇ ನಂಜಯ್ಯ ಯೀವರುಗಳು, ಮೃತಪಟ್ಟ ಸದರೀ ಮರಿದೇವರುಯವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮಳವಳ್ಳಿ ತಾಲ್ಲೂಕು ಅಪ್ಪೇರಹಳ್ಳಿದಾಖಲೆ ಚನ್ನಮಲ್ಲೇಗವುಡನ ಕೊಪ್ಪಲ್ ಸ್ಥಳದ ಸದರೀ ಶಿವನಪ್ಪ, ನಂಜಯ್ಯ ಇವರು, ಸದರೀ ವಾಸಸ್ಥರಾಗಿ ಮೃತಪಟ್ಟ ಮರಿದೇವರುಯವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿವನಪ್ಪ ವಗೈರೇರ ಅರ್ಜಿಯನ್ನು ಸ್ನ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿದೇವರುಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 44.

ಮೃತಪಟ್ಟ ಗೌರೀ ವೆಂಕಟಸುಬ್ಬಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ರಾಮಣ್ಣನವರು, ಮೃತಪಟ್ಟ ಸದರೀ ಗೌರೀವೆಂಕಟಸುಬ್ಬಯ್ಯನವರಿಗೆ ಅಣ್ಣನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ರಾಮಣ್ಣನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಗೌರೀ ವೆಂಕಟಸುಬ್ಬಯ್ಯನವರ ಜಿಂದಗಿ ಬಗ್ಗೆಗಿ ಬರತಕ್ಕ 220 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಣ್ಣನವರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೌರೀ ವೆಂಕಟಸುಬ್ಬಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ಮಳವಳ್ಳೀ ಸ್ಥಳದ ಫಿರ್ಕಾ ಶಾನಭಾಗ ಕೃಷ್ಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮಲ್ಲಣ್ಣಯ್ಯನವರು, ಮೃತಪಟ್ಟ ಸದರೀ ಕೃಷ್ಣಯ್ಯನವರಿಗೆ ದಾಯಾದಿ ಆಗಬೇಕೆಂಬ ಹಕ್ಕುದಾರಿ ಮೇಲೆ ಅರಸೀಕೆರೆ ಸ್ಥಳದ ಸದರೀ ಮಲ್ಲಣ್ಣಯ್ಯನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಕೃಷ್ಣಯ್ಯನವರ ಜಿಂದಗಿ ಬಗ್ಗೆಗಿ ಬರತಕ್ಕ 45 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಲ್ಲಣ್ಣಯ್ಯನವರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 46.

ಮೃತಪಟ್ಟ ಗರ್ಗೇಶ್ವರೀ ಕೃಷ್ಣಯ್ಯಂಗಾರು ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶಲ್ವಪುಳ್ಳೆಯ್ಯಂಗಾರು, ಮೃತಪಟ್ಟ ಸದರೀ ಕೃಷ್ಣಯ್ಯಂಗಾರ್ರಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕೃಷ್ಣರಾಜ ಮೊಹಲಾ ಸುಬ್ಬರಾಯರ ಕೆರೆ ಬಳಿ ಸ್ಥಳದ ಸದರೀ ಶಲ್ವಪುಳ್ಳೆಯ್ಯಂಗಾರು, ಸದರೀ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕೃಷ್ಣಯ್ಯಂಗಾರು ಜಿಂದಗಿ ಬಗ್ಗೆಗಿ ಬರತಕ್ಕ 200 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಲ್ವಪುಳ್ಳೆಯ್ಯಂಗಾರು ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖು 21ರರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯಂಗಾರು ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896ನೇ ಇಸವಿ ಆಗಸ್ಟು ತಿಂಗಳ 15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೂಡನೆ ಕೊಡೋಣಾಗಿಧೆ.

ಯಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟು ಜಡ್ಜಿ.

ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 10ನೇ ಆಗಸ್ಟು 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಮೈಸೂರು ಡಿಸ್ಟ್ರಿಕ್ಟು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್.

1. ಕೃಷ್ಣರಾಜಪೇಟೆ ತಾಲ್ಲೂಕಿಗೆ ಶೇರಿದ.

(1) ಕನ್ನಂಬಾಡಿ ಹೋಬಳಿ ಪೈಕಿ.	ಬಲ್ಲೇನಹಳ್ಳಿ ಕಾವಲ್, ಬಿಂಡಹಳ್ಳಿ ಕಾವಲ್.
(2) ಅಕ್ಕಿಹೆಬ್ಬಾಳು ಹೋಬಳಿ ಪೈಕಿ.	ಆಲಂಬಾಡಿ ಕಾವಲ್, ಬೆಳ್ಳಿಬೆಟ್ಟದ ಕಾವಲ್.

2. ನಾಗಮಂಗ್ಲ ತಾಲ್ಲೂಕಿಗೆ ಶೇರಿದ.

(1) ಕಸಬಾ ಹೋಬಳಿ ಪೈಕಿ.	ಬಸವನಕಲ್ಲೂ ಮತ್ತು ಕೊತ್ತೀಪುರದ ಕಾವಲ್.
(2) ಹಂಪಾಪುರದ ಫಿರಕಾ.	ನಾಗನಕೆರೆ ಕಲ್ಲಗೇರ ಕಾವಲ್.

3. ಶ್ರೀರಂಗಪಟ್ಟಣದ ತಾಲ್ಲೂಕಿಗೆ ಶೇರಿದ.

(1) ಬಳಗುಳ್ಳದ ಹೋಬಳಿ ಪೈಕಿ.	ಕುರಗಳ್ಳಿ, ಬಸ್ತೀಪುರ ಪ್ಲಾಂಟೇಷನ್ ಸಮೀಪಗಳಲ್ಲಿ.

(4) ಕೃಷ್ಣರಾಜಪೇಟೆ ತಾಲ್ಲೂಕಿಗೆ ಶೇರಿದ ಡಿಸ್ಟ್ರಿಕ್ಟು ಜಂಗಲ್‌ಗಳೂ ಮತ್ತು ಬೀಬಿಬೆಟ್ಟದ ಜಂಗಲ್ ಸಹ.

ಸನ್ 1897ನೇ ಇಸವಿ ಜೂನ್ ಆಖೈರ್ ವರೆಗೆ ಈ ಮೇಲ್ಕಂಡವುಗಳಲ್ಲಿ ಉತ್ಪತ್ತಿ ಆಗುವ ಶೀಗೇಕಾಯಿ, ಅಳಲೇಕಾಯಿ, ದಿಂಡುಗೋಂದು, ಹೊಂಗೇಬೀಜ, ಜೇನುಮೇಣ, ಜೇನುತುಪ್ಪ, ಹುಣಿಶೇಹಣ್ಣು ಈ ಬಾಬ್ತಿಯ 1896ನೇ ಇಸವಿ ಸೆಪ್ಟಂಬರ್ ತಾರೀಖು (2)ರಲ್ಲು ಚಿನಕುರ್ಲಿ ಮುಸಾಫರ್ ಬಂಗ್ಲೆಯಲ್ಲಿ ಡಿಸ್ಟ್ರಿಕ್ಟು ಅಥವಾ ಸಬ್ ಡಿವಿಜನ್ ಫಾರೆಸ್ಟ್ ಆಫಿಸರವರು ಹರಾಜು ಮಾಡಿಸುತ್ತಾರೆ.

2. ದರಖಾಸ್ತಿನಲ್ಲಿ ಮಂಜೂರಾದ ಜಿನಸಿ ಮೊತ್ತವನ್ನು 1897ನೇ ಇಸವಿ ಏಪ್ರಿಲ್ ಆಖೈರ್ ವಳಗಾಗಿ ಬಗರ ಲಾಗವಡಿನಿಂದ ಶ್ರೀರಂಗಪಟ್ಟಣದ ಸಂಡಲ್ ಕೋಠಿಗೆ ಪಾವತಿ ಮಾಡಿ ದರೋಗರಿಂದ ರಶೀತಿ ಪಡಿಯಬೇಕು.

3. ದರಖಾಸ್ತು ಮಂಜೂರಾದವಡನೆ ಚಡದರಖಾಸ್ತುದಾರನು ದರಖಾಸ್ತಿನ ಮೇರೆ ನಡದುಕೊಳ್ಳತಕ್ಕ ಬಗ್ಯೆ (50) ರೂಪಾಯಿಗಳು ಡಿಪಾಜಿಟ್ ಯಿಟ್ಟು ಧಾಪಾಕಾಗದಲ್ಲಿ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಮತ್ತು ಖಾತರ್ ಜಾಮೀನ್ ಸಹ ಕೊಡಬೇಕು.

4. ಮೇಲ್ಕಂಡ ಡಿಪಾಜಿಟ್ ಮೊಬಲಗು ಕೂಡಲೆ ಪಾವತಿ ಮಾಡದೆ ಇದ್ದರೆ ಪುನಹ ಹರಾಜು ಕ್ರಮ ನಡಸಿ ಅವರಲ್ಲಿ ಉಂಟಾಗುವ ನಷ್ಟಕ್ಕೆ ಮೊದಲ್ ದರಖಾಸ್ತುದಾರನ್ನ ಗುರಿಪಡಿಸುತ್ತೆ. (2)ನೇ ದರಖಾಸ್ತಿನಲ್ಲಿ ಮೊದಲ್ ದರಖಾಸ್ತಿಗಿಂತಾ ಸರ್ಕಾರಕ್ಕೆ ಜಾಸ್ತಿ ಉತ್ಪತ್ತಿ ಉಂಟಾದಲ್ಲಿ ಡಿಟೋ ಜಾಸ್ತಿಗೆ ಮೊದಲು ದರಖಾಸ್ತುದಾರನಿಗೆ ಯೇನೂ ಹಕ್ಕು ಇರುವದಿಲ್ಲ.

5. ಮೇಲ್ಕಂಡ ವಾಯಿದೆಯಲ್ಲಿ ಜಿನಸಿಗಳನ್ನ ಕೋಠಿಗೆ ದರಖಾಸ್ತುದಾರನು ಪಾವತಿಮಾಡಿ ರಶೀತಿ ಹಾಜರ್ ಮಾಡದೆ ಯಿದ್ದಲ್ಲಿ ದರಖಾಸ್ತುದಾರನ ಡಿಪಾಜಿಟ್ ಮೊಬಲಗನ್ನ ಸರ್ಕಾರಕ್ಕೆ ಮುಫತ್ತಾಗಿ ಶಿವಾಜಮೆಗೆ ದಾಖಲ್ಮಾಡಿ ಕೊಳ್ಳುವದಲ್ಲದೆ ಫಸಲನ್ನ ಅಮಾನಿಯಾ ಇತರ ವಿಧವಾಗಿ ರೊಖಿಸಿ ಅದರಲ್ಲಿ ಉಂಟಾಗುವ ನಷ್ಟಕ್ಕೆ ಮೊದಲು ದರಖಾಸ್ತುದಾರನನ್ನೂ ಮತ್ತು ಜಾಮೀನ್‌ದಾರನನ್ನೂ ಸಹ ಗುರಿಮಾಡಲಾಗುತ್ತೆ.

6. ದರಖಾಸ್ತು ಮಂಜೂರಿ ಯಾ ನಾ ಮಂಜೂರ್ ಮಾಡತಕ್ಕ ಹಕ್ಕು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಯಿಟ್ಟುಕೊಂಡಿರುತ್ತಾರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್.

ಸಾಗುವಳಿಗೋಸ್ಕರ ಜಮೀನ್ ಹಿಡುವಳಿ ಹರಾಜು.

ತಾರೀಖು 1ನೇ ಆಗಸ್ಟ್ 1896.

ಇಸ್ತಿಹಾರ್.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜು ಕೈದಾದಕೂಡ್ಲೆ ಚಡಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜು ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜು ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜು ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುವದು.

5. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜು ಡೆಪ್ಯುಟಿ ಕಮಿಷನರ ಮಂಜೂರಾತಿಗೆ ಬಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ ಬಗ್ಯೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲಾ ವ್ಯವಸ್ಥೆಯಾಗುವ ನಿರೀಕ್ಷಣೆ ಮೇಲೆ ಷರತ ಬಂದಿಯಾಗಿರುವದೆಂದು ಎಣಿಸತಕ್ಕದ್ದು.

124

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರ್.	ಬಾಬು ಖುಷ್ಕೀ, ತರೀ, ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ. ಕೂಡಿದ ಮಟ್ಟಿಗೂ ಕರಾರ್ವಾಕಾ ತಪ್ಸೀಲ್.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ	ಬಾನದಹಳ್ಳಿ ಗ್ರಾಮ	35 36 60 51 52 53	ತರೀ ಜಮೀನ್	0—11 0—31 0—9 2—10 2—6 2—3 7—30	1—8—0 2—8—0 1—4—0 12—0—0 12—0—0 12—0—0 41—4—0		ಜಮೀನ್ ಬಳಿ 1896ನೇ ಇಸವಿ ಅಕ್ಟೋಬರ್ 26ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೇ ತಾಲ್ಲೂಕು ಅಮಲ್‌ದಾರ್ ಅಥವಾ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸರವರು.	

ಇದರಿಂದ ತಿಳಿಯಪಡಿಸುವದೇನಂದರೆ,— ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಕೈದಾದ ಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರಿ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರ್ಲೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿಕಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡೆಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿಕಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳೀ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

125

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ: ಜಮೀನ್. ಸರ್ವೆ ನಂಬರು.	ಬಾಬು ಖುಷ್ಕಿ, ಭಾಗಾಯತು ಅಥವಾ ತರಿ.	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ. ಕೊಡತಕ್ಕ ಮರಗಳ ಕಿಮ್ಮತ್ತು.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ಮಾಡತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ಬೂಗನಹಳ್ಳಿ.	179	ತರೀ ಜಮೀನ್.	0— 5	0—12—0	..	ಜಮೀನ್ ಬಳಿ 1896ನೇ ಅಕ್ಟೋಬರ್ 26ನೇ ದಿವಸ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ಅಥವಾ ಕಿಕ್ಕೇರಿ ಹೋಬಳಿ ಶೇಕ್ದಾರರು.	
			180		0—17	2— 8—0	..			
					0—22	3— 4—0				

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇವರಡೀಲಿ ಕಂಡ ಜಮೀನ್ ಹಿಡವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಜಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಖೈದಾಬಕೂಡ್ಲೆ ಜಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ, ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣೀ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು, ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ ಡೆಪ್ಯುಟಿಕಮಿಷನರು ಆವಶ್ಯಕವಾದ ಸಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲಿ ಕಮ್ಮಿಯಾದಷ್ಟು ಮೊಬಲಗನ್ನ ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5 ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿಕಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈರು ದಿವಸಗಳ ತರುವಾಯ ತಾಲ್ಲೂಕು ಅಮಲ್ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ, ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮವಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ.					ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ರಮಪ್ರಕಾರವಾಗಿದ್ದಲ್ಲಿ ಸರ್ಕಾರದ ಸವಾಲ್ ವೊಬಲಗು ಮತ್ತು ಇತರ ಷರಾ.
			ಜವಿನ್.				ಮರಗಳು ಭಾವಿಗಳು ವಗೈರೆ.			
			ಸರ್ವೆ ನಂಬರು.	ಖಾಬು ಖುಷ್ಕಿ, ತರೀ, ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಕೂಡಿದ ಮಟ್ಟಿಗೂ ಕರಾರ್ವಾಕಾ ತಫ್ಸೀಲ್.			
1	2	3	4	5	6	7	8	9	10	11
ಕೃಷ್ಣರಾಜಪ್ಯಾಟೆ.	ಕಿಕ್ಕೇರಿ	ಗುಂಡೆಹೊಸಹಳ್ಳಿ ಗ್ರಾಮ	235	ತರೀ ಜವಿನ್	0—20	0— 4—0		ಜವಿನ್‌ಗಳ ಬಳಿ 1896ನೇ ಇಸವಿ ಅಕ್ಟೋಬರ್ 27ನೇ ದಿವಿ 11ಘಂಟೆ.	ಕೃಷ್ಣರಾಜಪ್ಯಾಟೆ ತಾಲ್ಲೂಕು ಅಮಲ್ದಾರು) ಅಥವಾ ಫ್ರೆಂಚ್‌ರಾಕ್ಸ ಸಬ್ ಡಿವಿಜನ್ ಆಫಿಸರವರು.	
			240		1—14	7— 8—0				
			80		1—34	9— 8—0				
			212		2— 2	12— 0—0				
			213		2— 0	11— 0—0				
			214		2— 3	12— 0—0				
			215		2— 2	11— 0—0				
			216		2—14	13— 0—0				
			217		1—37	10— 0—0				
			257		0—25	1— 4—0				
			78		1— 4	6— 8—0				
			259		0—10	0— 4—0				
			261		1—21	8— 0—0				
			262		2— 1	11— 0—0				
			199		1—37	7— 0—0				
			211		1—28	0—12—0				
			128		0—12	1—12—0				
			17		25—24	122—12—0				

ಪಿ. ಪಂಚನಾಥರಾವ್,
ಸಬ್ ಡಿವಿಜನ್ ಆಫಿಸರ್.

ನಗರ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 34.

ಮೃತಪಟ್ಟ ಅಜ್ಜಂಪುರದ ಮಹಮ್ಮದ್ ಮಸ್ತಾನಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಯಿಮಾಂಬಿ, ಮೃಪಟ್ಟ ಸದರೀ ಅಜ್ಜಂಪುರದ ಮಹಮ್ಮದ್‌ಮಸ್ತಾನಸಾಬರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ತಳವಾಸೆ ಮಾಗಣಿ ಶಿರವಾಸಿ ಗ್ರಾಮ ಸ್ಥಳದ ಅರ್ಜೀದಾರಳು ಯಿಮಾಂಬಿಯು, ಚಿಕ್ಕಮಗಳೂರು ತಾಲ್ಲೂಕು ತಳವಾಸೆ ಮಾಗಣಿ ಶಿರವಾಸಿಗ್ರಾಮದ ವಾಸಸ್ಥರಾಗಿ ಚಿಕ್ಕಮಗಳೂರು ಕಸಬಾದಲ್ಲಿ ಮೃತಪಟ್ಟ ಮಹಮ್ಮದ್ ಮಸ್ತಾನಸಾಬರ ಜಿಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್‌ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಯಿಮಾಂಬೀ ಯಂಬವಳ ಅರ್ಜಿಯನ್ನು ಸನ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಜ್ಜಂಪುರದ ಮಹಮ್ಮದ್ ಮಸ್ತಾನಸಾಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ಆಗಸ್ಟ್‌ತಿಂಗಳ 18ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟು ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮೆ.

ತಾರೀಖು 24ನೇ ಅಗಸ್ಟ್ 1896.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಡಿಪೋಗಳಿಗೆ ಅವುಗಳ ಬಾಜೂದಲ್ಲಿ ಕಾಣಿಸಿರುವ ಜಂಗಲಿನಿಂದ 1897ನೇ ಇಸವಿ ಮಾರ್ಚಿ ಆಖೈರ್ ವಳಗಾಗಿ ನಾಟ್ಟಾ, ಬೆಲಗು, ಗಳ ಜಮಾಯಿಸಿ ಕೊಡುವದಕ್ಕೆ ಟೆಂಡರ್ ಗಳು ಅಂಗೀಕರಿಸಲ್ಪಡುತ್ತವೆ:—

ನಂಬರು	ಡಿಪೋ ಹೆಸರು.	ಮರದ ಜಾತಿ.	ಮೊತ್ತ ಅದದು.	ಜಂಗಲ್ ಹೆಸರು.	ಸುಮಾರು ಫಾಸಲೆ ಮೈಲಿ.	ಷರಾ.
1	ಶಿವಮೊಗ್ಗಾ ..	ಸಾಗುವಾನಿ ನಾಟಾ	100	ಭೂತನಸೈಲು	20	ಶಂಕರ ಫಾರೆಸ್ಟ್
		ಜಂಗಲಿ ನಾಟಾ	200	ಶೆಟ್ಟಿಹಳ್ಳಿ, ಶಂಕರ	14	ಡಿಟೋ
		ಜಂಬೆ ನಾಟಾ	300	ಹಾರೋಹಿತ್ತಲು, ಸಾಗರವಳ್ಳಿ, ವಾರೇಕೊಪ್ಪ, ಅರನೇಲಿ ಮತ್ತು ಇತರ ಬಾಜು ಡಿಸ್ಟ್ರಿಕ್ಟು ಫಾರೆಸ್ಟುಗಳು	22	
		ಸಾಗುವಾನಿ ಬೆಲಗು	300	ಬೊಂಮೇನಹಳ್ಳಿ, ಮತ್ತು ಬಾಜು ಡಿಸ್ಟ್ರಿಕ್ಟು ಜಂಗಲ್	13	
		ಜಂಗಲ್ ಬೆಲಗು	100	ಡಿಟೋ	13	
		ಕಿರಿ ಬಿದರು	12,000	ಶಂಕರ ಫಾರೆಸ್ಟ್	14	ಶಂಕರ ಫಾರೆಸ್ಟ್
2	ಆಯನೂರು ..	ಸಾಗುವಾನಿ ನಾಟಾ	100	ಮಸರೂರು ಮತ್ತು ಬಾಜು ಡಿಸ್ಟ್ರಿಕ್ಟು ಫಾರೆಸ್ಟುಗಳು	12	ಮಸರೂರು ಫಾರೆಸ್ಟ್
		ಜಂಗಲ್ ನಾಟಾ	75	ವಾರೇಕೊಪ್ಪ, ಹಾರೋಹಿತ್ತಲು, ಸಾಗರವಳ್ಳಿ ಡಿಸ್ಟ್ರಿಕ್ಟು ಜಂಗಲ್ ಗಳು	12	
		ಸಾಗುವಾನಿ ಬೆಲಗು	200	ಕುಂಶಿ	10	
		ಕಿರಿ ಬಿದರು	5,000	ಕೂಡಿ, ಮತ್ತಲಿ, ಮತ್ತು ತಾವರೇ ಕೊಪ್ಪ	10	
3	ಚನ್ನಗಿರಿ ..	ಸಾಗುವಾನಿ ಬೆಲಗು	1,500	ಸಾರತಿ, ಹಗೇದಹಳ್ಳಿ, ಹಂಚಿದ್ದಾಪುರ ಮತ್ತು ಆಗರದಹಳ್ಳಿ ಡಿಸ್ಟ್ರಿಕ್ಟು ಜಂಗಲ್‌ಗಳು	11	
		ಕಿರಿ ಬಿದರು	50,000	ಭಂಡಿಗುಡ್ಡು, ಬಿದನೆಹಾಳು ಮತ್ತು ನುಲೆಬಸಲಿ	15	
4	ಮುಬ್ರಾಣಿ ..	ಸಾಗುವಾನಿ ಬೆಲಗು	1,000	ಮುಬ್ರಾಣಿ ಬ್ಲಾಕು	8	ಕುಕ್ಕವಾಡಾ ಮುಬ್ರಾಣಿ ಡಿಟೋ
		ಜಂಗಲಿ ಬೆಲಗು	500	ಕೆಂಗಾಡೇಣು,	8	
		ಕಿರಿ ಬಿದರು	50,000	ಕಾಗಿಹಳ್ಳ, ರಕ್ಷಿಹಾಳು	10	
5	ಕಣಬೂರು ..	ಸಾಗುವಾನಿ ನಾಟಾ	100	ಕಣಬೂರು, ಹಾಗಲಮನೆ, ಆರಂಬಳ್ಳಿ ಮತ್ತು ಅಜ್ಜಿಗುಡ್ಡೆ ಡಿಸ್ಟ್ರಿಕ್ಟು ಜಂಗಲ್	6	
		ಜಂಗಲ್ ನಾಟಾ	150	ಡಿಟೋ	6	
6	ಸಮುದ್ರಹಳ್ಳಿ ..	ಡಿಟೋ	150	ಜೋರನೆಡಿಹಳ್ಳೀ ಫಾರೆಸ್ಟ್	6	
7	ಶಿಕಾರಿಪುರ ..	ಸಾಗುವಾನಿ ನಾಟಾ	25	ಕರಡಿಪಟ್ಟ ಫಾರೆಸ್ಟ್	16	
		ಜಂಗಲ್ ನಾಟಾ	100			
		ಕಿರಿ ಬಿದರು	10,000	ಕರಡಿಪಟ್ಟ ಮತ್ತು ಗಂಗವನಸರ ಫಾರೆಸ್ಟುಗಳು	12ರ ಲಾ॥ 15	
		ಹೆಬ್ಬಿದರು	1,000	ಡಿಟೋ ಡಿಟೋ	ಡಿಟೋ	
		ಸಾಗುವಾನಿ ಬೆಲಗು	300	ಗಂಗವನಸರ ಮತ್ತು ಬಾಜು ಡಿಸ್ಟ್ರಿಕ್ಟು ಫಾರೆಸ್ಟ್	12	
		ಜಂಗಲ್ ಬೆಲಗು	100	ಡಿಟೋ ಡಿಟೋ	12	

ನಂಬರು.	ಡಿಪೋ ಹೆಸರು.	ಮರದ ಜಾತಿ.	ಮೊತ್ತ ಅದದು.	ಜಂಗಲ್ ಹೆಸರು.	ಸುಮಾರು ಫಾಸಲೆ ಮೈಲಿ.	ಷರಾ.
8	ಶಿರಾಳಕೊಪ್ಪ ..	ಜಂಗಲ್ ನಾಟೂ	75	ಬೆಳಂದೂರು ಫಾರೆಸ್ಟ್	14	
		ಡಿಟ್ಟೋ ಬೆಲಗು	150			
		ಹೆಬ್ಬಿದರು	500			
		ಕಿರಿ ಬಿದರು	5,000	ಕರಡಿ ಬೆಟ್ಟ	22	
		ಸಾಗುವಾನಿ ಬೆಲಗು	100	ಕವಲಿ, ಬಸವನಂದಿಹಳ್ಳಿ ಮತ್ತು ತೊಗರಶಿ ಫಾರೆಸ್ಟ್‌ಗಳು	7	
9	ಆನವಟ್ಟಿ ..	ಸಾಗುವಾನಿ ನಾಟೂ	50	ತೆಲಗಡ್ಡೆ ಫಾರೆಸ್ಟ್	8	
		ಡಿಟ್ಟೋ ಬೆಲಗು	200			
		ಜಂಗಲ್ ನಾಟೂ	75	ಬೆಟ್ಟದ ಕುರ್ಲಿ	8	
		ಹೆಬ್ಬಿದರು	1,000			
		ಕಿರಿ ಬಿದರು	5,000			
10	ಚಿತ್ರದುರ್ಗ ..	ಸಾಗುವಾನಿ ನಾಟೂ	25	ಮಸದೂರು ಮತ್ತು ಬಾಜು ಡಿಸ್ಟ್ರಿಕ್ಟು ಫಾರೆಸ್ಟ್‌ಗಳು	90	
		ಜಂಗಲ್ ನಾಟೂ	50	ಶಟ್ಟಿಹಳ್ಳಿ, ಶಂಕರ	84	
		ಸಾಗುವಾನಿ ಬೆಲಗು	500	ಸಾರತಿ, ಹಗೇದಹಳ್ಳಿ, ಹಂಚಿಕಿದ್ದಾಪುರ ಮತ್ತು ಆಗರದಹಳ್ಳಿ	49	
		ಕಿರಿ ಬಿದರು	12,000	ಭಂಡಿಗುಡ್ಡ, ಬದನೆಹಾಳು ನುಲಿ ಬಸಲಿ	53	
		ಹೆಬ್ಬಿದರು	300	ಡಿಟ್ಟೋ	53	

2. ಎಲ್ಲಾ ಟೆಂಡರ್‌ಗಳ ಮೇಲೂ ಯಿಂಥಾ ಡಿಪೋವಿಗೆ ನಾಟೂ, ಬೆಲಗುಗಳ ಜಮಾಯಿಸುವ ಬಗ್ಯೆ ಟೆಂಡರ್ ಯೆಂದು ಬರಿಯುತಕ್ಕದ್ದು. ಮತ್ತು ಟೆಂಡರ್ ಸಂಗಡ ಡಿಪೋ 1ಕ್ಕೆ 100 ರೂಪಾಯಿನಂತೆ ಕರ್ರೆನ್ಸೀ ನೋಟ್ ಮೂಲಕ ಠೇವಣಿ ಹಾಜರ್ ಮಾಡತಕ್ಕದ್ದು. ತಿರಸ್ಕರಿಸಲ್ಪಟ್ಟ ಟೆಂಡರಿನ ಸಂಗಡ ಮೊಬಲಗು ವಾಪಸ್ ಮಾಡಲ್ಪಡುವದು.

3. ಟೆಂಡರ್‌ಗಳು ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕನ್ಸರ್‌ವೇಟರ ಹೆಸರಿನಲ್ಲಿ ಬರಿಯತಕ್ಕದ್ದು. 1896ನೇ ಇಸವಿ ಸೆಪ್ಟೆಂಬರ ತಾರೀಖು 28ನೇ ದಿವಿ 12 ಘಂಟೆ ವರಿಗೂ ಸದರೀ ಟೆಂಡರ್‌ಗಳು ಅಂಗೀಕರಿಸಲ್ಪಡುವವು.

4. ಪ್ರತಿ ಒಬ್ಬ ದರಖಾಸ್ತುದಾರನೂ ಈ ಕೆಳಗೆ ನಮೂದಿಸುವ ತಪ್ಶೀಲಿನಂತೆ ನಾಟೂಗಳನ್ನು, ಕಡದು, ಕೆತ್ತಿ ಜಮಾಯಿಸುವದಕ್ಕೆ ಸಲೆ ಅಡಿ 1ಕ್ಕೆ ಅಬ್ಕಾರ್ ದರ ನಮೂದಿಸತಕ್ಕದ್ದು.

ನಾಟೂಗಳು.

(1) 12 ಸಲೆ ಅಡಿ ಮತ್ತು ಅದಕ್ಕೆ ವಳಪಟ್ಟದ್ದಕ್ಕೆ.
(2) 12 ಸಲೆ ಅಡಿ ಮೇಲ್ಪಟ್ಟು 20 ಸಲೆ ಅಡಿ ವರಿಗೆ.
(3) 20 ಸಲೆ ಅಡಿಗೆ ಮೇಲ್ಪಟ್ಟದ್ದಕ್ಕೆ.

ಬೆಲಗುಗಳು.

(1) 4 ಸಲೆ ಅಡಿ ವಳಪಟ್ಟದ್ದಕ್ಕೆ.
(2) 4 ಅಡಿಗೆ ಮೇಲ್ಪಟ್ಟು 8 ಅಡಿ ವರಿಗೆ ಯಿರುವವಕ್ಕೆ.
(3) 8 ಅಡಿಗೆ ಮೇಲ್ಪಟ್ಟದ್ದಕ್ಕೆ.

ಹೆಬ್ಬಿದರು ಯಾ ಕಿರಿ ಬಿದರು ಗಳ 100ಕ್ಕೆ.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಟೆಂಡರ್ ಅಂಗೀಕರಿಸಿದ ವರ್ತಮಾನವನ್ನು ತಿಳಿದ ವಂದು ವಾರದೊಳಗಾಗಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರೆದುಕೊಡಬೇಕಲ್ಲದೇ ತನ್ನ ಕಂಟ್ರಾಕ್ಟು ಸರಿಯಾಗಿ ಪೂರೈಸಿಕೊಡುವದಕ್ಕೆ ಖಾತ್ರಿಗಾಗಿ ಪುನಹ 150 ರೂಪಾಯಿ ಠೇವಣಿ ಯಿಡತಕ್ಕದ್ದು. ಕಂಟ್ರಾಕ್ಟಿನ ಷರತ್ತಿನಲ್ಲಿ ಯಾವದಕ್ಕಾದರೂ ತಪ್ಪಿದರೆ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

6. ಕೆಂಪೀ ಕಾಲದಲ್ಲಿ ಕಂಟ್ರಾಕ್ಟುದಾರನು ಡೆಪ್ಯುಟಿ ಕನ್ಸರ್‌ವೇಟರ ಅಪ್ಪಣೆ ಅನುಸರಿಸಿ ನಡದುಕೊಳ್ಳಬೇಕು.

7. ಫಾರೆಸ್ಟ್ ಇಲಾಖೆಯವರು ನಿರ್ಷಾಮಾಡಿದ ಮರಗಳ ವಿನಹ ಬೇರೆ ಮರಗಳನ್ನ ಕಡಿಯಕೂಡದು, ಮತ್ತು ಡೆಪ್ಯುಟಿ ಕನ್ಸರ್‌ವೇಟರ ಅಪ್ಪಣೆ ಮೇರಿಗೆ ನಾಟೂಗಳನ್ನು ಸರಿಯಾಗಿ ಕೆತ್ತಿಸಬೇಕು.

8. ಕಮ್ಮಿ ದರದ ಟೆಂಡರ್ ಆಗಲಿ ಯಾ ಮತ್ತ್ಯಾವ ಟೆಂಡರ್ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕನ್ಸರ್ವೇಟರು ಸ್ವತಂತ್ರರಾಗಿ ಯಿರುತ್ತಾರೆ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕನ್ಸರ್ವೇಟರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

9. ಜಂಗಲಿನಿಂದ ನಾಟಾಗಳನ್ನು ಸಾಗಿಸುವದಕ್ಕೋಸ್ಕರ ಬೇಕಾಗುವ ಏರ್ಪಾಡುಗಳನ್ನು ಕಂಟ್ರಾಕ್ಟುದಾರನೇ ಮಾಡಿಕೊಳ್ಳತಕ್ಕದ್ದು. ಸರಕಾರದವರು ರಸ್ತೆಯನ್ನಾಗಲಿ ಭಂಡಿದಾರಿಯನ್ನಾಗಲಿ ಮಾಡಿಸಿ ಕೊಡುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಈ ನೆವದಿಂದ ನಾಟಾ ವಗ್ಯೈರೆ ವಾಯಿದೆಯಲ್ಲಿ ತಾರದಿದ್ದರೆ ಈ ಕಾರಣವು ಅಂಗೀಕರಿಸಲ್ಪಡಲ್ಯಾರದು.

10. ಇನ್ಯಾವ ಸಂಗತಿಗಳಾದರೂ ತಿಳಿದುಕೊಳ್ಳಬೇಕಾಗಿದ್ದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕನ್ಸರ್ವೇಟರ ಆಫೀಸಿನಲ್ಲಿ ಕೇಳತಕ್ಕದ್ದು, ಮತ್ತು ಅಲ್ಲಿ ನೋಟಿಸ್ ಹಲಿಗೇ ಮೇಲೆ ಇಸ್ತಿಹಾರ್‌ನಾಮೆಯ ನಕಲು ಮತ್ತು ಕಂಟ್ರಾಕ್ಟು ಮುಚ್ಚಳಿಕೆ ನಕಲು ಸಹ ನೋಡಬಹುದು.

ಸಿ. ನಾರಾಯಣರಾವ್,
ಡೆ|| ಕನ್ಸರ್ವೇಟರ್.

ನೋಟಿಸ್.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟಾಫೀಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಪ್ಸೀಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುವಂಥಾ ಕೂಪರ್ನಗಳ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ಮೊಬಲಗು ತೆಗದುಕೊಂಡು ರಶೀತಿ ಕೊಡುವ ಬಗ್ಯಾಗಿ ಅಪ್ಪಣೆ ಯಿಡುವದ್ದರಿಂದ ಇನ್ನು ಮೇಲೆ ಮೈಸೂರ್ ಶೀಮೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್ಡರ್ ಹೊರ್ತಾಗಿ ಅನ್ಯಥಾ ಆ ಬಗ್ಯಾಗಿ ಈ ಆಫೀಸಿಗೆ ಕಳುಹಿಸಲ್ಪಡುವ ಯಾವ ಮನಿಆರ್ಡರಾಗಲಿ ಈ ಆಫೀಸಿನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಶಕ್ಕೂ ನಿಗೆ ಕೊಡಲ್ಪಡಲಾರದು.

ತಾರೀಖು 12ನೇ ಆಗಸ್ಟ್ 1896, ಬೆಂಗಳೂರು.

ಇದರಿಂದ ತಿಳಿಯಪಡಿಸುವದೇನಂದರೆ,—ಸುಬ್ಬಣ್ಣಯ್ಯ ಯಂಬ ಹೆಸರಿನಿಂದ ಮೈಸೂರ ಗೆಜೆಟ್ಟಿನ ಬಗ್ಯಾಗಿ ಈ ಆಫೀಸಿಗೆ ರೂ. 3 ಆಣೆ 8 ಮನಿ ಆರ್ಡರ್ ಬಂದಿರುತ್ತೆ. ಮನಿ ಆರ್ಡರ್ ಕೂಪರ್ನನಲ್ಲಿ ಚಂದಾದಾರ್ರ ವಿಳಾಸ ಬರಿಯಲಿಲ್ಲವಾದ್ದರಿಂದ ಸದರೀ ಸುಬ್ಬಣ್ಣಯ ಯಂಬುವರು, ಅವರಿಗೆ ಗೆಜೆಟ್ ತಲಪುವದು ಅವಶ್ಯಕವಾಗಿದ್ದಲ್ಲಿ ಸರಿಯಾದ ಮೇಲ್ವಿಳಾಸ ಬರದು ಕಳುಹಿಸತಕದ್ದು.

ಮೈಸೂರ ಗೆಜೆಟ್ ಚಂದಾ ದರ ವಗ್ಯೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚೆಷ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು	
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷ್ನ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್,ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ವಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮರ್ಕುಂ 24205—6—ಜಿ. 6200ನೇ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್

ಬಗ್ಯೆ ನೋಟಿಸ್‌ಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ ..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯೂಪ್ಲಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	" ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..	..	0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನ್‌ಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನ್‌ಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಯಿಲ್ಲ.

ಸಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪೈಲರ್.

Mysore Govt. Central Press, Bangalore.—1896.

(131)

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಸ್ ಆದ್ದು. [ನಂ. 36.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ॥ 10, ಸನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಯಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 1ನೇ ಸೆಪ್ಟಂಬರ್ 1896.

ನಂ. 2612.—ಜು. 306, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 203 (b)ನೇ ಆರ್ಟಿಕಲ್ ಅನುಸರಿಸಿ, ಶ್ರೀರಂಗಪಟ್ಣದ ಮುನ್ಸಿಫ್ ಮೆಸ್ಟರ್ ಎನ್. ಟಿ. ಗೋಪಾಲಯ್ಯಂಗಾರ್ ಯವರಿಗೆ, 1896ನೇ ಮಾರ್ಚಿ 13ರ ಲಾಗಾಯತು 23ನೇ ತಾರೀಖು ವರವಿಗೆ ನಿಸ್ಬತಲಬಿನ ಮೇಲೆ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿತ್ತು.

ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟು ಕೋರ್ಟು ಶಿರಸ್ತೇದಾರ್ ವೈದ್ಯಲಿಂಗಂ ಮೊದಲಿಯಾರ್ರು, ಸದರೀ ಎನ್. ಟಿ. ಗೋಪಾಲಯ್ಯಂಗಾರ್ರು ರಜಾದ ಮೇಲಿದ್ದ ಕಾಲದಲ್ಲಿ ಕಡೇ ಗ್ರೇಡಿನಲ್ಲಿ ಶ್ರೀರಂಗಪಟ್ಣದ ಮುನ್ಸಿಫರಾಗಿ ಆಕ್ಟಿಂಗ್ ತರೀಕ್ ಇದ್ದರು.

ನಂ. 3122.—ಜು. 316, ಮೈಸೂರ್ ಗವರ್ನಮೆಂಟಿನವರು ಸಕಲ ಜನರ ತಿಳುವಳಿಕೆ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ,—1896ನೇ ಸೆಪ್ಟಂಬರ್ 15ನೇ ತಾರೀಖಿನ ಲಾಗಾಯತು ವ ಆ ತರುವಾಯು "ಶಿವಮೊಗ್ಗ ಸಬಾರ್ಡಿನೇಟ್ ಜಡ್ಜರ ಕೋರ್ಟು"ಯೆಂಬದಾಗಿ ಕರಿಯಲ್ಪಡತಕ್ಕ ಒಂದು ಸಬಾರ್ಡಿನೇಟ್ ಜಡ್ಜರ ಕೋರ್ಟು ಶಿವಮೊಗ್ಗೆಯಲ್ಲಿ ಸ್ಥಾಪಿಸಲ್ಪಡುವದು, ಮತ್ತು ಸದರೀ ಕೋರ್ಟಿಗಾಗಿ ಮೊಕರರ್ಮಾಡಲ್ಪಟ್ಟ ಸಬಾರ್ಡಿನೇಟ್ ಜಡ್ಜರು 1883ನೇ ಇಸವಿಯ ಮೈಸೂರ್ ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 9ನೇ ಸೆಕ್ಷನ್ ಅನುಸರಿಸಿ, ಒಬ್ಬ ಸಬಾರ್ಡಿನೇಟ್ ಜಡ್ಜರ ಅಧಿಕಾರವನ್ನು ಶಿವಮೊಗ್ಗ, ಕಡೂರು ವ ಚಿತ್ರದುರ್ಗ ರೆವಿನ್ಯೂ ಡಿಸ್ಟ್ರಿಕ್ಟುಗಳ ಸ್ಥಳ ಸರಹದ್ದುಗಳಲ್ಲಿ ಚಲಾಯಿಸತಕ್ಕದ್ದು.

ತಾರೀಖು 2ನೇ ಸೆಪ್ಟೆಂಬರ್ 1896.

ನಂ. 3170.—ಲೋ. ಫಂ. 178—92, ಮಿಸ್ಟರ್ ಸೈಯದ್ ಆಲಿ ಸಾಹೇಬರು ರಾಜೀನಾಮೆ ಕೊಡಲ್ಪಟ್ಟ, ಮಿಸ್ಟರ್ ಮೊಹದೀನ್ ಸಾಹೇಬರ ಸ್ಥಳದಲ್ಲಿ (ಬೆಂಗಳೂರು ಡಿಸ್ಟ್ರಿಕ್ಟು) ಹೊಸಕೋಟೆ ಮ್ಯುನಿಸಿಪಾಲಿಟಿಯ ಮೆಂಬರಾಗಿ ನೇಮಕರಮಾಡಲ್ಪಟ್ಟಿರುತ್ತಾರೆ.

ತಾರೀಖು 4ನೇ ಸೆಪ್ಟೆಂಬರ್ 1896.

ನಂ. 3303.—ಜು. 330, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಟಿ. ಪರಮಶಿವಯ್ಯರ್, ಬಿ. ಎ. ಯವರು 2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ನೇಮಕರಮಾಡಲ್ಪಟ್ಟಿರುತ್ತಾರೆ.

ತಾರೀಖು 5ನೇ ಸೆಪ್ಟೆಂಬರ್ 1896.

ನಂ.3342.—ಜು. 333, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 203 (b)ನೇ ಆರ್ಟಿಕಲ್ ಅನುಸರಿಸಿ, ನಂದೀದುರ್ಗ ಡಿವಿಜನಿನ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜಿ ಮಿಸ್ಟರ್ ಟಿ. ನರಹರಿರಾವ್, ಎಂ. ಎಲ್. ಯವರಿಗೆ, 1896ನೇ ಆಗಸ್ಟ್ 1ನೇ ಮಾರ್ಕ್ಕಂ 1760.—ಜು. 189ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಮಂಜೂರಾಗಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ ಇನ್ನೂ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮಿಸ್ಟರ್ ಎಸ್. ಆರ್. ಸುಬ್ಬರಾಯ ಅಯ್ಯರ್, ಬಿ. ಎ., ಯವರು ಸದರೀ ಮಿಸ್ಟರ್ ನರಹರಿರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ನಂದೀದುರ್ಗ ಡಿವಿಜನಿನ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜರಾಗಿ ಆಕ್ಟಿಂಗ್ ತರೀಕ್ ಇರತಕ್ಕದ್ದು.

3. ಮಿಸ್ಟರ್ ಪಿ. ಸಿಂಗ್ರಾಚಾರ್ಯರವರೂ, ಸದರೀ ಮಿಸ್ಟರ್ ಸುಬ್ಬರಾಯ ಅಯ್ಯರ್ ಯವರು ಬೇರೇ ಕೆಲಸದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮೈಸೂರ್ ಸಬಾರ್ಡಿನೇಟ್ ಜಡ್ಜರಾಗಿ ಆಕ್ಟಿಂಗ್ ತರೀಕ್ ಇರತಕ್ಕದ್ದು.

ತಾರೀಖು 7ನೇ ಸೆಪ್ಟೆಂಬರ್ 1896.

ನಂ. 3389.—ಜು. 346, ಸಾಗರದ ಮುನ್ಸಿಫ್ ಮಿಸ್ಟರ್ ಬಿ. ಬಸವಾರಾಧ್ಯ, ಬಿ. ಎ., ಬಿ. ಎಲ್., ಯವರಿಗೆ ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 203 (b)ನೇ ಆರ್ಟಿಕಲ್ ಅನುಸರಿಸಿ, ನಿಸ್ಫ ತಲಬಿನಮೇಲೆ, 1896ನೇ ಆಗಸ್ಟ್ 24ನೇ ಮಾರ್ಕ್ಕಂ ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರ್ ಆಕ್ಟಿಂಗ್ ಮುನ್ಸಿಫ್ ಮಿಸ್ಟರ್ ಎಸ್. ಶೇಷಗಿರಿರಾಯರು, ಸದರೀ ಮಿಸ್ಟರ್ ಬಿ. ಬಸವಾರಾಧ್ಯರವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸಾಗರದ ಮುನ್ಸಿಫರಾಗಿ ಆಕ್ಟಿಂಗ್ ತರೀಕ್ ನೇಮಕರಮಾಡಲ್ಪಟ್ಟಿರುತ್ತಾರೆ. ಕೂಡ್ಲೆ ಕೆಲಸದ ಮೇಲೆ ಹೋಗಿ ಸೇರತಕ್ಕದ್ದು.

ಮೈಸೂರ್ ಅಡಿಷನಲ್ ಮುನ್ಸಿಫ್ ಮಿಸ್ಟರ್ ವಿ. ರಂಗಾಚಾರಿ, ಬಿ. ಎ., ಬಿ. ಎಲ್., ಯವರು ತಮ್ಮ ಕೆಲಸಗಳೊಂದಿಗೆ ಹಂಗಾಮಿಯಾಗಿ ಮೈಸೂರ್ ಮುನ್ಸಿಫ್ ಕೋರ್ಟಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 20ನೇ ಆಗಸ್ಟ್ 1896.

ನಂ. 2506.—ಲೋ. ಫಂ. 257.—92, ಸ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ, ಅಂದರೆ ತರೀಕೆರೆ ಮ್ಯುನಿಸಿಪಾಲಿಟಿಯ ಹಿಂದೂ ಸ್ಮಶಾನಕ್ಕೆ ಹೋಗುವ ಬಗ್ಗೆ ಮಾರ್ಗ ಮಾಡುವದಕ್ಕಾಗಿ ಬೇಕಾಗಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ಸರ್ವೆ ನಂಬರು.	ಬೀಜವರಿ. ಎ.	ಬೀಜವರಿ. ಗುಂಟೆ.	ಜೇರೀಜು. ರೂ.	ಜೇರೀಜು. ಆ.	ಜೇರೀಜು. ಪೈ.	ಜಮೀನಿನ ತರಹೆ.	ಚಕ್ಕುಬಂದಿ. ಪೂರ್ವ.	ಚಕ್ಕುಬಂದಿ. ಪಶ್ಚಿಮ.	ಚಕ್ಕುಬಂದಿ. ಉತ್ತರ.	ಚಕ್ಕುಬಂದಿ. ದಕ್ಷಿಣ.	ಕೊಡತಕ್ಕ ನಷ್ಟದ ಅಂದಾಜು. ರೂ.	ಆ.	ಪೈ.	ಷರಾ.
ಕಡೂರು	ತರೀಕೆರೆ	ನಡ್ವಿ ಹೊಸಹಳ್ಳಿ	ಪುಟ್ಟಪ್ಪನ ಕೆಂಚಪ್ಪ ಗಂಡಪ್ಪ	11	2	29	8	6	0	ಹುಡ್ಡಿ ಗಂಟಿ ಜಮೀನು	ಜಾಲಿಯಾ ಬೀ ಪೋಟೆ ಸರ್ವೆ ನಂ. 10	ದಡಗಳ ಹೊಸೂರು ವಿಗ್ರಹ ಪಶ್ಚಿಮ ಬೀ ಸರ್ವೆ ನಂ. 15 ಬ ನಂ. ಭಾಗ	ಕಲ್ಲು ಬೀ ಬಿದ್ದನಾರಾಯಣ ನಂ. 13	ಪುಟ್ಟಪ್ಪನ ಕೆಂಚಪ್ಪ ಗಂಡಪ್ಪ ನಂ. 9	75	0	0	

ತಾರೀಖು 28ನೇ ಆಗಸ್ಟ್ 1896.

ನಂ. 2855.—ವಿ. 487, ಗ್ವಾಲಿಯರ ರೆಸಿಡೆಂಟರವರಿಂದ ಮೈಸೂರ ರೆಸಿಡೆಂಟರವರ ಫಸ್ಟ್ ಅಸಿಸ್ಟೆಂಟರವರ ಮೂಲಕ ತಲ್ಪಿದ ಗ್ವಾಲಿಯರ ಸಂಸ್ಥಾನದಿಂದ ಕೊಡಲ್ಪಟ್ಟ ಈ ಕೆಳಗೆ ಕಂಡ ಇಸ್ತಿಹಾರು ಸಕಲ ಜನರ ತಿಳುವಳಿಕೆ ಬಗ್ಯಾಗಿ ಪ್ರಾಯಿಷ್ಕಾಡ ಲ್ಪಟ್ಟಿರುತ್ತೆ:—

ಇಸ್ತಿಹಾರ್.

ಉಜ್ಜನಿಯಲ್ಲಿ 1897ನೇ ಇಸವಿಯಲ್ಲಿ ನಡಿಯುವ ಸಿಹ್ನಸ್ತ ಮೇಲಾಕ್ಕೆ ವಿಶೇಷ ಜನ ಸಂಘವು ನಿರೀಕ್ಷಿಸಲ್ಪಟ್ಟಿರುತ್ತೆ. ಸನ 1885ನೇ ಇಸವಿಯಲ್ಲಿ ಪ್ರಾಪ್ತವಾಗಿದ್ದಂತೆ ಘೋರವಾದ ಕಲರಾ ಉಪದ್ರವವು ಸಾಧ್ಯವಾದ ಮಟ್ಟಿಗೆ ನಿರೋಧಪಡಿಸುವ ಬಗ್ಯೆ ಈ ಕೆಳಗೆ ಕಂಡ ಏರ್ಪಾಡುಗಳು ಪ್ರಜೆಗಳ ಕ್ಷೇಮಾರ್ಥವಾಗಿ ಹುಕುಂ ಮಾಡಲ್ಪಟ್ಟಿರುತವೆ, ಮತ್ತು ಅವುಗಳು ಖಂಡಿತವಾಗಿ ಆಚರಿಸ ಲ್ಪಡತಕ್ಕದ್ದು:—

I. 1897ನೇ ವರುಷದ ಸಿಹ್ನಸ್ತ ಮೇಲಾಕ್ಕೆ ಬರತಕ್ಕ ಯಾತ್ರಿಕರು ಉಜ್ಜನಿ ಪಟ್ಟಣವನ್ನ ಪ್ರವೇಶ ಮಾಡುವದರಿಂದಲೂ ಯಾ ಸಿಪ್ರಾನದಿಯ ಧಡಗಳಲ್ಲಿ ವಾಸಮಾಡುವದರಿಂದಲೂ ನಿರೋಧಿಸಲ್ಪಟ್ಟಿರುತಾರೆ.

II. ಪರಸ್ಪರ ಮತವಿರೋಧಿಗಳು ಅವರವರ ಸ್ನಾನಘಟ್ಟಗಳಿಗೆ ಹೋಗುವಾಗ್ಯೂ ಮತ್ತು ಬರುವಾಗ್ಯೂ ಉಸ್ತುವಾರಿಯಿಂದ ಒಯ್ಯಲ್ಪಡುವರು. ಮೇಲಾವಿನ ಚಾರ್ಜಿನಲ್ಲಿರುವ ಆಫೀಸರರಿಂದ ಕೊಡಲ್ಪಡುವ ಇಸ್ತಿಹಾರುಗಳಿಂದ ಮುಂದೆ ನಿರ್ಣಯಿಸಲ್ಪಡಬಹು ದಾದ ಸ್ನಾನಘಟ್ಟಗಳಲ್ಲೂ ಮತ್ತು ಕಾಲಗಳಲ್ಲೂ ಮಾತ್ರ ಸಿಪ್ರಾ ನದಿಯಲ್ಲಿ ಸ್ನಾನ ಮಾಡತಕ್ಕದ್ದು.

III. ಯಾತ್ರಿಕರು ಮೇಲಾವಿನ ಚಾರ್ಜಿನಲ್ಲಿರುವ ಆಫಿಸರಿಂದ ಕೊಡಲ್ಪಡಬಹುದಾದ ಕನ್ಸರ್ವೆನ್ಸಿ ರೆಗ್ಯುಲೇಷನ್‌ಗಳಿಗೆ ವಿಧೇ ಯರಾಗಿರತಕ್ಕದ್ದು.

IV. ಯಾತ್ರಿಕರು ಸಿಪ್ರಾನದಿಯ ಉದಕವನ್ನ ಪಾನಮಾಡುವ ಕೆಲಸಗಳಿಗಾಗಿ ಉಪಯೋಗಪಡಿಸಕೂಡದು. ಯಾತ್ರಿಕರಿಗೆ ನಿರ್ಮಲವಾದ ನೀರು ಸರಬರಾಯಿ ಮಾಡುವ ಬಗ್ಯೆ ಮೊದಲಿಗಿಂತಿರುವದಕ್ಕೆ ಜಾಸ್ತಿಯಾಗಿ ಸಾಕಾದ ಮಟ್ಟಿಗೆ ಭಾವಿಗಳು ಸಿದ್ಧಪಡಿಸ ಲ್ಪಡುವವು.

V. ಯಾತ್ರಿಕರು ಈ ಪಾನಮಾಡುವ ಭಾವಿಗಳಿಗೆ ಶೀದಾ ಪ್ರವೇಶ ಮಾಡಕೂಡದು. ಸರ್ಕಾರ ವಿಚಾರಣೆಗೆ ವಳಪಟ್ಟು ನೀರು ಬಟ್ಟೆಯ ಚೀಲಗಳ ಮೂಲಕವಾಗಿ ತೊಟ್ಟಿಗಳಲ್ಲಿ ಸೇದಿ ತುಂಬಿಸಲ್ಪಡುವದು. ಸದರೀ ತೊಟ್ಟಿಗಳಿಂದ ನೀರು ಅವುಗಳ ರಂಧ್ರಮೂಲ ಕ ತೆಗದುಕೊಳ್ಳಬೇಕು. ಇವುಗಳು ಸದರೀ ಕೆಲಸಕ್ಕಾಗಿ ಸರಕಾರದಿಂದ ನೇಮಿಸಲ್ಪಡುವ ಬ್ರಾಹ್ಮರ ವಶದಲ್ಲಿರತಕ್ಕದ್ದು.

VI. ಕೋರಿದಂತೆ ರೈಲ್ವೆ ಕಂಪನಿಯವರು ಯಾತ್ರಿಕರು ಇಳಿಯುವ ಸ್ಥಳಗಳಿಗೆ ಸೈಡಿಂಗ್ಸ್‌ಯಾನೆ ಕಟ್ಟಡಗಳನ್ನ ಕಟ್ಟುವ ಪಕ್ಷಕ್ಕೆ ಮೇಲಾಕ್ಕೆ ಬರುವ ಜನಗಳು ಉಜ್ಜನಿ ರೈಲ್ವೆ ಸ್ಟೇಷನಿನಲ್ಲಿ ಇಳಿಯುವದಕ್ಕೆ ಅವಕಾಶ ಕೊಡಲ್ಪಡಲಾರದು.

ಲಷ್ಕರ್ ತಾರೀಖು 3—7—96.

ಎಂ. ಜೆ. ರೋಸ್,
ಗ್ವಾಲಿಯರ್ ಹುಜೂರ್ ದರ್ಬಾರ್,
ಚೀಫ್ ಸೆಕ್ರೆಟರಿ.

ತಾರೀಖು 29ನೇ ಜುಲೈ 1896.

ನಂ. 1144.—ರೆ. 427, ಸನ 1888ನೇ ಇಸವಿಯ IVನೇ ರೆಗ್ಯುಲೇಷನಿನಿಂದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನಿನ 2ನೇ ಪ್ಯಾರಾ ಅನುಸರಿಸಿ ಮೈಸೂರ ಗವರ್ನಮೆಂಟಿನವರು, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನ ನೆಲಮಂಗಲ ತಾಲ್ಲೂಕಿನಲ್ಲಿರುವ ಕಾಯಂಗುಂತ್ತಾ ಕುಲಿಪುರ ಗ್ರಾಮಕ್ಕೆ ಲಗಾವ್ ಮಾಡುವ ಬಗ್ಯೆ, ಅಧಿಕಾರ ಕೊಟ್ಟಿ ರುತ್ತಾರೆ.

ತಾರೀಖು 11ನೇ ಆಗಸ್ಟ್, 1896.

ನಂ. 1548.—ಎಕ್ಸೈಸ್. 62, ಸನ 1893ನೇ ಜನವರಿ 14ನೇ ಮಕ್ಕಾಂ 11813—ರೆ. ಫೈ. 233-92ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿರುವ Vನೇ ರೂಲಿನ 6ನೇ ಪ್ಯಾರಾ (13)ನೇ ಕ್ಲಾಜಿಗೂ ಮತ್ತು ಸದರೀ ಇಸ್ತಿಹಾರ್‌ನಾಮೆಗೆ ಶೇರಿಸಿರುವ "ಎ" ಲೈಸೆನ್ಸಿನ 4 (4)ನೇ ಷರತ್ತಿಗೂ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸುವ ಬಗ್ಯೆ ಮೈಸೂರ್ ಗವರ್ನಮೆಂಟಿನವ ರು ಅಪ್ಪಣೆ ಕೊಡುತ್ತಾರೆ.

ರೆವಿನ್ಯೂ ಬೋರ್ಡಿನ ಸ್ಟ್ಯಾಂಡಿಂಗ್ ಆರ್ಡರುಗಳ XIನೇ ಅಧ್ಯಾಯದ 170ನೇ ರೂಲಿನ 4ನೇ ಪ್ಯಾರಾವಿಗೆ ಬಳಪಟ್ಟ ಮಡ ರಾಸ್ ಪ್ರೆಸಿಡೆನ್ಸಿಯಲ್ಲಿರುವ ಬಳ್ಳಾರಿ, ಅನಂತಪುರ, ಕಡಪ ಉತ್ತರ ಆರ್ಕಾಟು, ಶಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳಿಂದ ಮತ್ತು ಸದರೀ ಡಿಸ್ಟ್ರಿಕ್ಟುಗಳಿಗೆ ಶೇಂದಿಯನ್ನ ಆಮದರಫ್ತು ಮಾಡುವ ಬಗ್ಯೆ ಬೆಂಗಳೂರು, ಕೋಲಾರ, ತುಮಕೂ ರು, ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರುಗಳು ಅವರುಗಳ ಯುಕ್ತಾನುಸಾರ ಅಪ್ಪಣೆ ಕೊಡಬಹುದು. ಸದರೀ ಆರ್ಡರಿನ ಯಕ್ಸ್ ಟ್ರಾಕ್ಟು ಅಂದರೆ ಭಾಗವು ಇದರ ಬಾಜೂದಲ್ಲಿ ಕಾಣಿಸಿರುತ್ತೆ.

XIನೇ ಅಧ್ಯಾಯ, 170ನೇ ರೂಲ್, 4ನೇ ಪ್ಯಾರಾ "ಬಳ್ಳಾರಿ, ಅನಂತಪುರ, ಕಡಪ, ಉತ್ತರ ಆರ್ಕಾಟು, ಶಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳ ಕಲೆಕ್ಟರುಗಳು ಮೈಸೂರಿಂದ ಮತ್ತು ಮೈಸೂರಿಗೆ ಶೇಂದಿಯನ್ನ ಆಮದರಫ್ತು ಮಾಡುವ ಬಗ್ಯೆ ಅಪ್ಪಣೆ ಕೊಡಬಹುದು. ಪರಂತು ಶೇಂದಿಯು ಶೀದಾ ರಫ್ತು ಮಾಡಲ್ಪಡುವ ಇಜಾರೆ ಸ್ಥಳಗಳ ಗುತ್ತಿಗೆದಾರ್ರಿಗೆ ಮಾತ್ರವೇ ರಹದಾರಿಗಳು ಕೊಡಲ್ಪಡತಕ್ಕದ್ದು."

ತಾರೀಖು 17ನೇ ಆಗಸ್ಟ್ 1896.

ನಂ. 1874.—ರೆ. 705, ಮೈಸೂರ್ ಡಿಸ್ಟ್ರಿಕ್ಟ್ ಮಳವಳ್ಳಿ ತಾಲ್ಲೂಕಿಗೆ ಶೇರಿಸೋಣಾದ ಗ್ರಾಮಗಳನ್ನ ತೋರಿಸುವ ಇಧಕ್ಕೆ ಜಂಟಿಸಲ್ಪಟ್ಟ ತಖ್ತೆಯು ಸರ್ವರ ತಿಳುವಳಿಕೆ ಬಗ್ಯೆ ಪ್ರಾಯಿಷ್ ಮಾಡಲ್ಪಟ್ಟಿರುತ್ತೆ.

ಮಾಗಣಿ.	ನಂಬರ.	ಇಟ್ಟುಕೊಳ್ಳುವ ಬಗ್ಯೆ ಉದ್ದೇಸಿಸದ ಗ್ರಾಮಗಳ ಹೆಸರುಗಳು.	ನಂಬರ.	3ನೇ ಕಾಲಮಿನಲ್ಲಿ ನಮೂದ್ಮಾಡಲ್ಪಟ್ಟಿರುವ ಗ್ರಾಮಗಳಿಗೆ ಶೇರಿಸಲ್ಪಡ ಜೇಕಾದ ಗ್ರಾಮಗಳ ಹೆಸರುಗಳು.	ಷರಾ.
1	2	3	4	5	6
ಮಳವಳ್ಳಿ ..	1	ನೆಟ್ಟಕಲ್ಲು	1	ಕಾಡಂಕನಹಳ್ಳಿ	
ಗೌಡಗೆರೆ ..	2	ಅಂತರವಳ್ಳಿ	2	ಹೊಸಹಳ್ಳಿ	

ತಾರೀಖು 27ನೇ ಸೆಪ್ಟಂಬರ 1896.

ನಂ. 2264.—ರೆ. ಫೈ. 99—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 173ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ ಡಿ. ಸುಬ್ಬರಾಯರಿಗೆ, 1896ನೇ ಆಗಸ್ಟ 24ನೇ ಮಾರ್ಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ಹುಳಿಯಾರ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಬಿ. ಸಿ. ಕೇಶವಯ್ಯನವರು ತಮ್ಮ ಕೆಲಸಗಳೊಂದಿಗೆ ಸದರೀ ಅಮಲ್ದಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ನಂ. 2289.—ಫಾ. ಫೈ. 104—95, ಹಾಸನ ಡಿಸ್ಟ್ರಿಕ್ಟು ಫಾರೆಸ್ಟುಗಳ ಡೆಪ್ಯುಟಿ ಕನ್ಸರವೇಟರ್ ಮೆಸ್ಟರ್ ಎಸ್. ವಿ. ಬಾಪೂರಾಯರಿಗೆ, 1896ನೇ ಆಗಸ್ಟ 17ನೇ ಮಾರ್ಕ್ಕಂ 1838.—ಫಾ. ಫೈ. 104—95ನೇ ನಂಬರ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಇನ್ನೂ ಎರಡು ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 28ನೇ ಆಗಸ್ಟ 1896.

ನಂ. 2284.—ರೆ. ಫೈ. 138—95, ತಿರುಮಕೂಡ್ಲು ನರಸೀಪುರದ ತಾಲ್ಲೂಕಿನ ಅಮಲ್ದಾರ್ ಹನುಮಂತರಾಯರಿಗೆ, 1896ನೇ ಜೂನ್ 10 ವ 16ನೇ ಮಾರ್ಕ್ಕಂಗಳ 10770.—ರೆ. 4249 ಮತ್ತು 10945.—ರೆ. ಫೈ. 138—95ನೇ ನಂಬರುಗಳ ಗವರ್ನಮೆಂಟ ಇಸ್ತಿಹಾರ್ನಾಮೆಗಳಲ್ಲಿ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ್ ರಜಾ ಪೈಕಿ 1896ನೇ ಮೇ 11ನೇ ತಾರೀಖು ಲಾಗಾಯತು ಜುಲೈ 7ನೇ ಮಾರ್ಕ್ಕಂ ವರಿವಿಗೆ ಉಭಯ ದಿನಗಳೂ ಶೇರಿ ಉಪಯೋಗಿಸಿಕೊಂಡ ಸಬಬ್ ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 2358.—ಫಾ. ಫೈ. 27—95, ಸರ್ 1896ನೇ ಏಪ್ರೆಲ್ 15ನೇ ಮಾರ್ಕ್ಕಂ 278—ಡಿ. ೬. ನೇ ನಂಬರ ಗವರ್ನಮೆಂಟ ಇಸ್ತಿಹಾರ್ನಾಮೆಯಲ್ಲಿ ಮೆಸ್ಸರ್ಸ್ ವೈ. ಶೀತಾರಾಮಯ್ಯನವರು, ಬಿ. ರಾಮಸ್ವಾಮಿ ಅಯ್ಯರ್ ಯವರು ಮತ್ತು ಕೆ. ಶಾಮಯ್ಯಂಗಾರಿಯವರು ಇವರುಗಳನ್ನ ಕೋಲಾರ, ಚಿತ್ರದುರ್ಗ ವ ಷಿಕಾರಿಪುರ ಸಬ್ ಡಿವಿಜನಿಗೆ ಹುಕುಂ ಮಾಡಿದ್ದ ವರ್ಗಾವರ್ಗಿಗಳು ರದ್ದುಮಾಡಲ್ಪಟ್ಟಿರುತವೆ.

2. ಮೆಸ್ಟರ್ ವೈ. ಶೀತಾರಾಮಯ್ಯನವರು ಕಡೂರು ಡಿಸ್ಟ್ರಿಕ್ಟಿಗೆ ಸ್ಪೆಷಲ್ ಡ್ಯೂಟಿಗಾಗಿ ನಿಯಮಿಸಲ್ಪಟ್ಟಿರುತ್ತಾರೆ. (ರಜಾದಿಂದ ವಾಪಸ್ ಬಂದ ತರುವಾಯ ಕೆಲಸಕ್ಕೆ ಹೋಗಿ ಶೇರತಕ್ಕದ್ದು.

ನಂ. 2400.—ರೆ. ಫೈ. 31—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಗವರ್ನಮೆಂಟ ಕಂಟ್ರೋಲರ್ ಮೆಸ್ಟರ್ ಈ. ಆರ್. ಸುಬ್ಬಾಯರ್ ಯವರಿಗೆ, 1896ನೇ ಆಗಸ್ಟ 24ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 31ನೇ ಆಗಸ್ಟ 1896.

ನಂ. 2362.—ರೆ. ಫೈ. 161—92, ಸರ್ 1896ನೇ ಜುಲೈ 29ನೇ ಮಾರ್ಕ್ಕಂ 1173.—ರೆ. ಫೈ. 161—92ನೇ ನಂಬರ ಇಸ್ತಿಹಾರ್ನಾಮೆ ಅನುಸರಿಸಿ, ಮೈಸೂರ್ ಗವರ್ನಮೆಂಟನವರು ಅಪ್ಪಣೆ ಕೊಡುವದೇನಂದರೆ,—ಮೈಸೂರ ಸ್ಟೇಟ್ ಲೈಫ್ ಇನ್‌ಷೂರೆನ್ಸಿಗೆ ಸಂಬಂಧಪಟ್ಟ ರೂಲ್ಸಿನ 6ನೇ ರೂಲಿಗೆ ಈ ಕೆಳಗೆ ಕಂಡದ್ದು ಬದಲಾಗಿ ಸೇರಿಸಲ್ಪಡತಕ್ಕದ್ದು:—

6. "ಈ ರೂಲುಗಳು ಜಾರೀಗೆ ಬಂದ ತರುವಾಯ ಮೈಸೂರ್ ಗವರ್ನಮೆಂಟ ನವುಕರಿಗೆ ದಾಖಲಾಗಬಹುದಾದ ದರೋಬಸ್ತು "ಜನಗಳೂ ಅವರು ಗವರ್ನಮೆಂಟ ನವುಕರಿಗೆ ದಾಖಲಾಗುವ ತಾರೀಖಿನಿಂದಲೂ ಅಥವಾ 21 ವರುಷಗಳ ವಯಸ್ಸಿನ ಪೂರ್ವವೇ "ಗವರ್ನಮೆಂಟ ನವುಕರಿಗೆ ಶೇರುವಂಥಾವರ ವಿಷಯದಲ್ಲಿ 20 ವರುಷ ಆರು ತಿಂಗಳುಗಳ ವಯಸ್ಸು ಪೂರೈಸಿದ ತಾರೀಖಿನಿಂದಲೂ, "ಅಪೂರ್ವ ಸಂದರ್ಭಗಳಲ್ಲಿ ಗವರ್ನಮೆಂಟನವರಿಂದ ಪ್ರತ್ಯೇಕವಾಗಿ ವಿನಾಯಿಸಲ್ಪಟ್ಟಿದ್ದ ಹೊರ್ತು, ಇನ್‌ಷೂರೆನ್ಸ ಅವಶ್ಯಕವಾಗಿರತ "ಕ್ಕದ್ದು. 45 ವರುಷಗಳ ವಯಸ್ಸು ಮೀರಿದ ಯಾ 10 ರೂಪಾಯಿಗಳ ತಲಬಿಗೆ ಕೀಳ್ಪಟ್ಟ ಯಾವ ಆಫಿಸರು ಮೊದಲಿನ ಯಾ ಆ "ತರುವಾಯದ ಇನ್‌ಷೂರೆನ್ಸಿಗೆ ಅರ್ಹರಾಗಿರುವದಿಲ್ಲ."

ತಾರೀಖು 1ನೇ ಸೆಪ್ಟೆಂಬರ್ 1896.

ನಂ. 2421.–ರೆ. ಫೈ. 23—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ. ಎ. ಯವರಿಗೆ, 1896ನೇ ಆಗಸ್ಟ್ 28ನೇ ತಾರೀಖು ಲಾಗಾಯತು ಯೂ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2432.—ರೆ. 888, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ರಂಗಯ್ಯ ಚೆಟ್ಟಿಯವರಿಗೆ, 1896ನೇ ಆಗಸ್ಟ್ 27ನೇ ಮುರ್ರಂ ಲಾಗಾಯತು ಯೂ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2338.—ಫಾ. ಫೈ. 90—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳ ಡೆಪ್ಯುಟಿ ಕನ್ಸರ್ವೇಟರ್ ಮೆಸ್ಟರ್ ಟಿ. ಅಬ್ದುಲ್‌ಕರೀಂ ಯವರಿಗೆ, 1896ನೇ ಸೆಪ್ಟೆಂಬರ್ 5ನೇ ಮುರ್ರಂ ಲಾಗಾಯತು ಯೂ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಎರಡು ತಿಂಗಳೂ ಏಳು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹೆಗ್ಗಡದೇವನಕೋಟೆ ಸಬ್ ಡಿವಿಜನಿನ ಅಸಿಸ್ಟೆಂಟ್ ಕನ್ಸರ್ವೇಟರ್ ಮೆಸ್ಟರ್ ಎಂ. ಜಿ. ರಾಮರಾಯರು ತಮ್ಮ ಕೆಲಸಗಳೊಂದಿಗೆ ಸದರೀ ಮೆಸ್ಟರ್ ಅಬ್ದುಲ್‌ಕರೀಂಯವರು ರಜಾದ ಮೇಲಿರುವ ಕಾಲದಲ್ಲಿ ಯೂ ಮತ್ತೊಂದು ಹುಕುಂ ಕೊಡುವ ಪರಿಯಂತ ಫಾರೆಸ್ಟ್‌ಗಳ ಡೆಪ್ಯುಟಿ ಕನ್ಸರ್ವೇಟರ ಆಫೀಸಿನ ಛಾರ್ಜಿನಲ್ಲಿ ಇರತಕ್ಕದ್ದು.

ತಾರೀಖು 4ನೇ ಸೆಪ್ಟೆಂಬರ್ 1896.

ನಂ. 2537—ರೆ. ಫೈ. 38–96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಏ. ಆರ್. ತ್ಯಾಗರಾಜ ಅಯ್ಯರ್ ಯವರಿಗೆ, 1896ನೇ ಆಗಸ್ಟ್ 21ನೇ ಮುರ್ರಾಮಿನಲ್ಲಿ ಒಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 2558.—ರೆ. ಫೈ. 33—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ|| ಕೆ. ಶ್ರೀನಿವಾಸರಾಯರಿಗೆ, 1896ನೇ ಆಗಸ್ಟ್ 4ನೇ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2566.—ರೆ. ಫೈ. 37—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟ್ ನೆಲಮಂಗಲ ತಾಲ್ಲೂಕು ಅಮಲ್‌ದಾರ್ ಸಿ. ರಾಜಗೋಪಾಲಾಚಾರ್ ಯವರಿಗೆ, 1896ನೇ ಆಗಸ್ಟ್ 29ನೇ ಮುರ್ರಂ ಲಾಗಾಯತು ಯೂ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಶಿರಸ್ತೇದಾರರು ಸದರೀ ತಾಲ್ಲೂಕಿನ ಅಮಲ್‌ದಾರರು ರಜಾದ ಮೇಲಿರುವ ಕಾಲದಲ್ಲಿ ಯೂ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 5ನೇ ಸೆಪ್ಟೆಂಬರ್ 1896.

ನಂ. 2555.—ರೆ. ಫೈ. 33—96, ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಕೆ. ಶ್ರೀನಿವಾಸರಾಯರಿಗೆ, 1896ನೇ ಜುಲೈ 28ನೇ ಮುರ್ರಂ 1005.—ರೆ. 403ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ 15 ದಿನಗಳ ಕ್ಯಾಜುಯಲ್ ರಜಾ ಪೈಕಿ 7 ದಿನಗಳು ಮಾತ್ರ ಉಪಯೋಗಿಸಿಕೊಂಡದ್ದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ 8 ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 27ನೇ ಆಗಸ್ಟ್ 1896.

ನಂ. 479.—ಬೀರೂರಿಂದ ಶಿವಮೊಗ್ಗೆಗೆ ಸುಮಾರು $38\frac{1}{2}$ ಮೈಲಿಗಳ ಫಾಸಲೆ ರೈಲ್ವೇ ಲೈನು ಹಾಕುವ ಬಗ್ಗೆ ದರಖಾಸ್ತುಗಳು ಇದರಿಂದ ಅಪೇಕ್ಷಿಸಲ್ಪಡುತವೆ.

2. ಮಾಡಬೇಕಾಗಿರುವ ಪ್ರತಿ ತರಹೇಡ ಕಾಮಗಾರಿಗೂ ದರಖಾಸ್ತುಗಳು "ರೇಟುಗಳ ಷೆಡ್ಯೂಲ್" ನಮೂನೆಯಲ್ಲಿ ಇರತಕ್ಕದ್ದು.

3. ಕಾಮಗಾರಿಯು ಮೂರುಭಾಗಗಳಾಗಿಯೂ ಬೆಂಕೀಪುರದ ಹೊಸಸೇತುವೆ ಮತ್ತು ಅದರ ಕಟ್ಟೆಗಳು ಪ್ರತ್ಯೇಕ ಕಂಟ್ರಾಕ್ಟಾಗಿಯೂ ಕೊಡಲ್ಪಡುವದು. ಸದರೀ ಕಾಮಗಾರಿಯಲ್ಲಿ ಪರ್ಮನೆಂಟ್ ವೇ ವ ಸ್ಟೇಷನ್ ಯಂತ್ರಗಳು ಹೊರತಾಗಿ ವಿಸಿಷ್ಟ ಕೆಲಸವೂ ಅಡಗಿರುವದು. ಅಪೇಕ್ಷಿಸುವ ಕಂಟ್ರಾಕ್ಟರುಗಳು ಒಂದು ಭಾಗಕ್ಕೆ ಜಾಸ್ತಿಯಾಗಿ ಪ್ರತ್ಯೇಕ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.

4. ದರಖಾಸ್ತಿನ ನಮೂನೆಗಳು ಇದರಡಿ ರುಜು ಮಾಡಿರುವವರಿಗೆ ಲಿಖಿತಮೂಲಕವಾಗಿಯಾಗಲಿ ಯಾ ರೂಬರೂ ಆಗಲಿ ಕೇಳಿ ಪಡೆಯಬಹುದು.

5. ದರಖಾಸ್ತುಗಳು 1896ನೇ ಅಕ್ಟೋಬರ 1ನೇ ತಾರೀಖಿನ ಮಧ್ಯಾನ್ಹದಲ್ಲಾಗಲಿ ಯಾ ತತ್ಪೂರ್ವದಲ್ಲಾಗಲಿ ಈ ಕೆಳಗೆ ರುಜು ಮಾಡಿರುವವರಿಗೆ ತಲ್ಪತಕ್ಕದ್ದು.

6. ಕಂಟ್ರಾಕ್ಟಿನ ವಿಶೇಷ ಸಂಗತಿಗಳು ಮತ್ತು ಷರತ್ತುಗಳು ಮೈಸೂರು ರೈಲ್ವೆಗಳ ಗವರ್ನಮೆಂಟ ಸೆಕ್ರೆಟೆರಿಯವರ ಆಫಿಸಿನಲ್ಲಿ, ಆದಿತ್ಯವಾರಗಳು ಮತ್ತು ರಜಾ ದಿನಗಳು ಹೊರತಾಗಿ, 11 ಘಂಟೆಯಿಂದ 4 ಘಂಟೆ ವರಿಗಿನ ಮಧ್ಯೆ ಕಾಲಗಳಲ್ಲಿ ಪ್ರತಿದಿನವೂ ನೋಡಬಹುದು ಮತ್ತು ಸಮಾಚಾರ ಪಡೆಯಬಹುದು.

7. ಕಾಮಗಾರಿಗಳ ವಿಶೇಷ ಸಂಗತಿಯ ಮತ್ತು ಕಂಟ್ರಾಕ್ಟಿನ ಷರತ್ತುಗಳ ಅಚ್ಚುಹಾಕಲ್ಪಟ್ಟ ಪ್ರತಿಯು ಮೊದಲು ಹೇಳಿದ್ದಕ್ಕೆ ಹತ್ತು ರೂಪಾಯಿಗಳೂ ಮತ್ತು ತರುವಾಯ ಹೇಳಿದ್ದಕ್ಕೆ ಐದು ರೂಪಾಯಿಗಳೂ ತಲ್ಪಿದ ಮೇಲೆ ಕಳುಹಿಸಲ್ಪಡುವದು.

8. ಈ ಕೆಳಗೆ ರುಜು ಮಾಡಿರುವವರು ಕಮ್ಮಿಯಾದ ಯಾ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಹಾಗೆ ಮಾಡುವದಕ್ಕೆ ಕಾರಣಗಳು ತಿಳಿಸದೇನೇ ಉಳಿಸಿಕೊಂಡಿರುತ್ತಾರೆ.

ಹುಕುಂ ಬಮೋಜೀಬ್,

ಸಿ. ಬರ್ಕ, ಕರ್ನಲ್,

ಮೈಸೂರ ರೈಲ್ವೆಗಳ ಗವರ್ನಮೆಂಟ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ.

ನಂ. 387. ತಾರೀಖು 22ನೇ ಆಗಸ್ಟ್ 1896. ಮೊಕ್ಕಾಂ ಹರಿಹರ.

ಹರಿಹರ ಕಸಬಾದಲ್ಲಿರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ಛತ್ರ ದೇವಸ್ಥಾನಗಳಿಗೆ ಮೊದಲು ಮೊಕರರ್ಮಾಡಲ್ಪಟ್ಟಿರುವ 5 ಜನ ಧರ್ಮದರ್ಶಿಗಳಲ್ಲದೆ ಹರಿಹರದಲ್ಲಿರುವ ರಾಜನಹಳ್ಳಿ ಶಾನುಭೋಗ ನಾಡಿಗ ಬಾಲಕೃಷ್ಣರಾಯರನ್ನು ಸಹ ಧರ್ಮದರ್ಶಿಯಾಗಿ ನೇಮಿಸಿ ಯಿದೆ.

ಪಿ. ಶ್ರೀನಿವಾಸಾಚಾರ್ಲು,

ಮುಜರಾಯಿ ಸೂಪರಿಂಟೆಂಡೆಂಟ ಮತ್ತು ಸೆಕ್ರೆಟೆರಿ.

ಮಿ ಲಿ ಟ ರಿ.

ಇಸ್ತಿಹಾರ.

ತಾರೀಖು 8ನೇ ಸೆಪ್ಟಂಬರ 1896.

ಘನವನ್ನು ಹೊಂದಿನ ಶ್ರೀಮತ್ ಮಹಾರಾಜ್ಞೀ-ರೀಜಂಟರವರು, ಮಿಸ್ಟರ ಚಾಮಪ್ಪಾಜಿ ಅರಸಿನವರಿಗೆ ಘನವನ್ನು ಹೊಂದಿದ ಶ್ರೀಮತ್ ಮಹಾರಾಜರವರ ಬಾಡೀಗಾರ್ಡ್ ಜಮಾದಾರ್ರನ್ನಾಗಿ, 1896ನೇ ಸೆಪ್ಟಂಬರ ಗುರ್‍ರೀ ಲಾಗಾಯತು ಅಜಮಾಯಿಷೀ ತರೀಕ ಮೊಕರರ್ಮಾಡಿರುತ್ತಾರೆ.

ಹುಕುಂ ಬಮೋಜೀಬ್,

ಪಿ. ಎಚ್. ಮೆಕ್ಇಂಟೈರ್, ಲೆಫ್ಟಿನೆಂಟ ಕರ್ನಲ್,

ಮಿಲಿಟರಿ ಸೆಕ್ರೆಟೆರಿ.

137

ಮೈಸೂರ ಗೆಜೆಟ್.

ನಂ. XXXI. ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 36.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ॥ 10, ಸರ್ಕ 1896.

IIನೇ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ಪ್ರಕಟನ ಪತ್ರಿಕೆ.

ಮೈಸೂರು ದೇಶೀ ಪರೀಕ್ಷೆಗಳು.

ಸರ್ಕ 1896ನೇ ಇಸವಿ ಆಗಸ್ಟು ತಾರೀಖು 6.

(i) ಸರ್ಕ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಲೋವರ್ ಸೆಕಂಡರೀ ಪರೀಕ್ಷಾ ದೇಶಭಾಷಾ ಪರೀಕ್ಷ್ಯೆಗೆ ಪ್ರವೇಶಧನವು (2—8—0) ರೂಪಾಯಿಗಳಿಗೆ ಬದಲಾಗಿ (3—0—0) ರೂಪಾಯಿಗಳಂತೆ ನಿಯಮಿಸಲ್ಪಟ್ಟಿರುತ್ತೆ.

(ii) ಸರ್ಕ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಕರ್ಣಾಟಕ ಪಂಡಿತ ಪರೀಕ್ಷೆಗೆ ಕರ್ಣಾಟಕ ವಚನಕಾವ್ಯವು ಪೂರ್ತಿಯಾಗಿ ನಿಯಮಿಸಲ್ಪಟ್ಟಿರುತ್ತೆ.

ಮೈಸೂರು ಲೋವರ್ ಸೆಕಂಡರೀ ಪರೀಕ್ಷೆ.

ಸರ್ಕ 1896ನೇ ಇಸವಿ ಆಗಸ್ಟ್ ತಾರೀಖು 14.

ಸಿ. ಪರ್ಸನ್; ಸಿ. ಕೆ. ಸುಬ್ಬರಾವು ಇವರುಗಳಿಂದ ರಚಿತವಾದ ವ್ಯವಸಾಯ ಶಾಸ್ತ್ರದ ಪ್ರಥಮ ಪುಸ್ತಕವು ತತ್ಕಾಲದಲ್ಲಿ ಛಾಪಿಸಲ್ಪಡುವದಿಲ್ಲವಾದ್ದರಿಂದ ಇತಃಪರ ಮತ್ತೊಂದು ಅಪ್ಪಣೆ ಕೊಡುವ ವರೆವಿಗೂ ಹಾರ್ಮಾರ್ ಸಾಹೇಬರವರಿಂದ ರಚಿಸಲ್ಪಟ್ಟ ಕನ್ನಡ ವ್ಯವಸಾಯ ಕ್ರಮ ಬೋಧಿನಿ ಎಂಬ ಪುಸ್ತಕವು ವ್ಯವಸಾಯ ಶಾಸ್ತ್ರಕ್ಕಾಗಿ ಮೈಸೂರು ಲೋವರ್ ಸೆಕಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತೆ.

ಎಚ್. ಜೆ. ಭಾಭಾ,

ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಇನಾಂ ಇಲಾಖಾ.

ಇಸ್ತಿಹಾರ್ನಾಮೆ.

ನಂಬರು 1. ತಾರೀಖು 18ನೇ ಆಗಸ್ಟ್, 1896.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ನಾಗಮಂಗಲ ತಾಲ್ಲೂಕಿನಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು (729) ಫೈನಲ್ ಟೈಟಲ್‌ಡೀಡ್ ಯಾನೆ ಕಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್ದಾರ್ರು ಪ್ರತ್ಯೇಕ ಪ್ರತ್ಯೇಕ ನೋಟಿಸಗಳು ಬಂದ ಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರ್ರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟಿಸಗಳನ್ನ ದೇರಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫಿಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಸಾಪಟ್ಟೆಗಳು ರದ್ದುಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಯಿರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲಮೆಂಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 443.

ಮೃತಪಟ್ಟ ಸಿ. ವಿ. ಕೃಷ್ಣಸಾಮಿಶಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರ ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಲಕ್ಷ್ಮಣಮೊದಲಿಯಾರ್ರು ಬೀದಿಯಲ್ಲಿರುವ ಸಿ. ವಿ. ಮುನಿಸಾಮಿಶಟ್ಟಿಯು, ಮೃತಪಟ್ಟ ಸದರೀ ಸಿ. ವಿ. ಕೃಷ್ಣಸಾಮಿಶಟ್ಟರಿಗೆ ಅವಿಭಕ್ತ ಅಣ್ಣನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರ ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಸ್ಥಳದ ಸಿ. ವಿ. ಮುನಿಸಾಮಿಶಟ್ಟಿಯು, ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಲಕ್ಷ್ಮಣಮೊದಲಿಯಾರ್ರು ಬೀದಿಯ ವಾಸಸ್ಥರಾಗಿ ಮೃತಪಟ್ಟ ಸಿ. ವಿ. ಕೃಷ್ಣಸಾಮಿಶಟ್ಟರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಿ. ವಿ. ಮುನಿಸಾಮಿಶಟ್ಟರ ಅರ್ಜಿಯನ್ನು 1896ನೇ ಇಸವಿ ಸೆಪ್ಟಂಬರಿ ತಿಂಗಳ ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿ. ವಿ. ಕೃಷ್ಣಸಾಮಿಶಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896ನೇ ಇಸವಿ ಆಗಸ್ಟ್ ತಿಂಗಳ 28ನೇ ತಾರೀಖಿನಲ್ಲಿ ಕೋರ್ಟ ಮೊಹರ್ ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್, ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟ್.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವೆಂಬರ್ 1896.
ಡಿಟ್ಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ್ „
ಬೆಂಗಳೂರು	ಬೆಂಗಳೂರು	4ನೇ ಡಿಟ್ಟೋ „
ಹಾಸನ	ಹಾಸನ	7ನೇ ಡಿಟ್ಟೋ „
ಕಡೂರು	ಚಿಕ್ಕಮಗಳೂರು	10ನೇ ಡಿಟ್ಟೋ „
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟ್ಟೋ „
ಡಿಟ್ಟೋ	ಸಾಗರ	18ನೇ ಡಿಟ್ಟೋ „
ಡಿಟ್ಟೋ	ತೀರ್ಥಹಳ್ಳಿ	22ನೇ ಡಿಟ್ಟೋ „

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಆಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಗಂಧಲನ್ನ ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಯೆ ವದಗಿಸಲ್ಪಡುವ ಸಂಧಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿಧೆ.

ಹಳೇ ತರಹೆ ಪ್ರಕಾರ.

ಸಂದಲ್ ವಿವರ.	ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
	ಟ.	ಹ.	ಟ.	ಹ.	ಟ.	ಹ.	ಟ.	ಹ.	ಟ.	ಹ.	ಟ.	ಹ.
ಸಲಾಕಿ ಅವ್ವಲ್ ..	1	..	..	5	..	15	..	..	..	15	...	...
ಡಿಟ್ಟೋ ದುಯಂ ..	..	5	1	5	2	5	3	5	1	..	..	2
ಡಿಟ್ಟೋ ಸಿಯಂ ..	1	10	7	10	5	5	12	15	8	..	4	..
ಡಿಟ್ಟೋ ಚಹರಂ ..	45	15	30	..	44	..	32	10	12	..	7	..
ಡಿಟ್ಟೋ ಪಂಚಂ ..	7	..	10	..	10	10	37	.	25	..	14	..
ಚಿಕ್ಕ ಸಲಾಕಿ ..	1	2	1	..	..	..	..	..	..	..	..	..
ದೊಡ್ಡ ಜಡಾ ..	21	..			33	..	66	5	40	..	25	..
ಚಿಕ್ಕ ಜಡಾ ..	3	15	35	..	5	..	8	..	4	..	2	..
ಜಡದ ರಂಬೆ ..	1	5			7	..	..	..	...	..	...	..
ದೊಡ್ಡ ಜಜ್ಜು ..	18	..	61	5	30	..	94	..	65	..	43	..
ಚಿಕ್ಕ ಜಜ್ಜು ..	3	5			11	..						..
ಬಗರದದ್ದು ..	2	15	6	..	5	5	26	.	9	..	13	10
ಐರ್ ವಾಚೆ ಗುಬಗರು ..	1	..	3	..	..	10	...	..	..	..	..	..
ಗರಗಸ ಬುಕಣಿ ..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಟ .	1	10	1	..	6	5	15	10	15	..	16	..
ಚಿಕ್ಕ ಡಿಟ್ಟೋ ..	..	..	2	..						..		..
ಕೆತ್ನೆ ಐರ್ ಚಿಲ್ಟ ..	6	..	..	..	..	..	..	..	..	..	..	...
ಹತ್ರಿ ಚಿಲ್ಟ ..	1	6	..	..	..	..	..	..	..	..	..	..
ಮಿಲ್ವ ಚಿಲ್ಟ ..	17	10	30	..	21	5	30	..	12	..	9	..
ಬನೋಲ ಬುಕಣಿ ..	1	15	10	..	14	..	14	15	5	10	6	8
ಕೊಯತ ಚಿಲ್ಟ ..	..	..	1	10	3	10	9	..	2	..	1	..
ಜುಮ್ಲಾ ..	135	15	200	..	200	..	350	..	200	..	150	..

ಹೊಸ ಯಾ ಬೋಂಬಾಯಿ ತರಹೆ ಪ್ರಕಾರ.

ಸಂದಲ್ ವಿವರ.	ಹುಣಸೂರು ಕೋಠಿ.		ಶ್ರೀರಂಗಪಟ್ಟಣ ಕೋಠಿ.	
	ಟ.	ಹ.	ಟ.	ಹ.
ವಿಲಾಯಿತಿ ಬಡ ..	1	.	..	10
ಚೈನಾ ಬಡ ..	20	..	30	
ಪಂಚಂ ..	28	..	89	..
ಚಿಕ್ಕ ಸಲಾಕಿ, ಘೋಟ್ಟ (ಅವ್ವಲ್) ..	3	...	5	..
ಡಿಟ್ಟೋ (ದುಯಂ) ..	2	..	1	..
ಘೋಟ ಬಡಲ ..	50	..	30	..
ಜಡಾ (ಅವ್ವಲ್) ..	25	..	25	..
ಡಿಟ್ಟೋ (ದುಯಂ) ..	25	..	12	..
ಡಿಟ್ಟೋ (ಸಿಯಂ) .	20	..	8	..
ಡಿಟ್ಟೋ (ಚಹರಂ) ..	7	..	7	..
ಜಜ್ಜು (ಅವ್ವಲ್) ..	50	...	25	..
ಡಿಟ್ಟೋ (ದುಯಂ) ..	40	15	15	..
ಬಗರದದ್ದು ..	5	..	12	..
ಐರ್ ಬಗರು ..	5	..	14	..
ಚಿರಿಯಾ ..	5	..	5	..
ಐರ್ ಚಿಲ್ಟ (ಅವ್ವಲ್) ..	4	..	6	..
ಡಿಟ್ಟೋ (ದುಯಂ) ..	6	..	6	10
ಹತ್ರಿ ಚಿಲ್ಟ ..	1	..	2	10
ಗರಗಸ ಬುಕಣಿ ..	1	..	..	10
ಮಿಲ್ಲ ಚಿಲ್ಟ ..	30	..	50	..
ಬನೋಲಾ ಬುಕಣಿ ..	7	.	10	..
ಚೇಗು ಮಿಲ್ವ ..	..	..	5	..
ಕಳೆದವರುಷದ ಜಡಾ	113	15	12	15
ಸ್ಪೆಷಲ್ ಕ್ಲ್ಯಾಸ್ ..	..	10	...	..
ಟೋಟಲ್ ..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಗೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮುಕ್ಕಾಂ 15230.—ಆರ್. ಎಫ್. 155.—92ನೇ ನಂಬರ ರೂಲ್ಸ್‌ಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಪ್ರಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿಕೆ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಯಿತರ ಆಫಿಸರಿಂದ ಆಗಲಿ ಶೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಚಡಪರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ್ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫಿಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದಿಯನ್ನ 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫಿಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡೆದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫಿಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ಮಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಕೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫಿಸರ ಹೆಸರಿಗೆ", ಮುಂದಾಗಿ ಕಳುಹಿಸಲ್ಪಡುವ ಕರ್ರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ಬೆಲೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಯಿಲ್ಲದ ರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ಒಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫಿಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ವುಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಯಂದಿಗೂ ಯಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳ ವಿನಹ ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿಒಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫಿಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫಿಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ಒಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫಿಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ್ ಹಾಜರಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ಖುದ್ದು ತೂಗಿಸಲ್ಪಡ

ತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನ ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫೀಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ಒಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲವಾದ್ಯೈ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಗೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಗೆ ಖಾಯಿಷ್ ಮಾಡಿ ಆಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ವುತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ವಂದಕ್ಕೆ 8 ಆಣೆಗಳ ಮೇರ ಕೋಠೀ ಬಾಡಿಗ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳ ವಾಯಿದೇ ನೋಟೀಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವವರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್‌ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜ್ ಆಫೀಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡೆಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಒಟ್ಟು ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಶೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್‌ಛಾರ್ಜ್ ಫಾರೆಸ್ಟ್ ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜ್ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಷ್ಟಪಡುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

ನೋಟಿಫಿಕೇಷನ್.

ಬೆಂಗಳೂರು ತಾರೀಖು 4ನೇ ಸೆಪ್ಟಂಬರ್ 1896.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಾಗುವ ತಖ್ತೆಲಿ ಕಂಡ ತಾರೀಖು ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟುಗಳಲ್ಲಿರುವ ವಣ ಬಿದರುಗಳನ್ನು ಕಡದು ಸಾಗಿಸಿಕೊಳ್ಳತಕ್ಕ ಹಕ್ಕುದಾರಿಯು ಹರಾಜ್ ಮಾಡಲ್ಪಡುತ್ತೆ. ಈ ಹರಾಜು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

ನಂಬರು	ತಾಲ್ಲೂಕು ಹೆಸರು.	ಫಾರೆಸ್ಟು ಹೆಸರು.	ಹರಾಜ್ ತಾರೀಖು.	ಹರಾಜ್ ಸ್ಥಳ.	ಯಾವ ಆಫೀಸರ್ ಹರಾಜ್ ಮಾಡುತ್ತಾರೆ.
1	ಆನೇಕಲ್ ..	ರಾಗಿಹಳ್ಳಿ ..	10ನೇ ನವಂಬರ್ 1896	ಬನ್ನೇರಘಟ್ಟ	ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್.
2	ಕಾನಖಾನಹಳ್ಳಿ ..	ಬಿಳಿಕಲ್ ..	14ನೇ ಡಿಟೋ	ಕಾನಖಾನಹಳ್ಳಿ	
3	ಡಿಟೋ ..	ಬಾಣಂತಿಮಾರಿ ..	ಡಿಟೋ	ಡಿಟೋ	
4	ಡಿಟೋ ..	ಮುಗ್ಗೂರು ..	18ನೇ ಡಿಟೋ	ಕೋಡಿಹಳ್ಳಿ	
5	ಡಿಟೋ ..	ಚಿಲ್ಲಂದಾಡಿ ..			
6	ಮಳವಳ್ಳಿ ..	ಬಸವನಬೆಟ್ಟ ..	23ನೇ ಡಿಟೋ	ಹಲಗೂರು	
7	ಕಾನಖಾನಹಳ್ಳಿ ..	ಕಬ್ಬಾಳದುರ್ಗ ಮತ್ತು ಭೀಮನಕಂಡಿಬೆಟ್ಟ ..	27ನೇ ಡಿಟೋ	ಹನಿಯೂರು	
8	ಚನ್ನಪಟ್ಣ ..	ತೆಂಗಿನಕಲ್ ..	30ನೇ ಡಿಟೋ	ಚನ್ನಪಟ್ಣ	
9	ಕ್ಲೋಸೆಪೇಟೆ ಸಬ್ ತಾ॥ ..	ಹಂದಿಗೊಂದಿ ..	2ನೇ ಡಿಸೆಂಬರ್1896	ಕ್ಲೋಸೆಪೇಟೆ	
10	ಡಿಟೋ ..	ಹುಲ್ತಾರು ...			
11	ಮಾಗಡಿ ..	ಸಾವಂದುರ್ಗ ..	7ನೇ ಡಿಟೋ	ಮಾಗಡಿ	
12	ದೊಡ್ಡಬಳ್ಳಾಪುರ ..	ಹುಲಕಡಿ ಮತ್ತು ವುಜ್ಜನಿ	14ನೇ ಡಿಟೋ	ಜಾಲಗೆರೆ	

2. ದೊಡ್ಡ ಫಾರೆಸ್ಟುಗಳು ಅಂದರೆ, ಬಿಳಿಕಲ್, ಬಸವನಬೆಟ್ಟ, ಮುಗ್ಗೂರು, ಚಿಲಂದಾಡಿ, ಹಂದಿಗೊಂದಿ ಮತ್ತು ಸಾವಂದುರ್ಗ ಯಿವುಗಳನ್ನು ಸ್ವಾಭಾವಿಕವಾದ ಸರಹದ್ದುಗಳಿಂದಲಾಗಲಿ ಅಥವಾ ಬೇರೇ ಗುರ್ತುಗಳಿಂದಲಾಗಲಿ ಅನುಕೂಲವಾದ ಬ್ಲಾಕುಗಳಾಗಿ ವಿಂಗಡಿಸಲ್ಪಡುವುದು.

3. ಹರಾಜ್ ಆದ ವಡನೆ ಹರಾಜ್‌ದಾರನು ಶೇಕಡಾ 25 ರೂಪಾಯಿ ಡಿಪಾಜಿಟ್ ಕೊಡಬೇಕು. ಬಾಕಿ ಹಣ ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಹಾಜರ್ಮಾಡಬೇಕು. ತಪ್ಪಿದರೆ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ ಮತ್ತು ಹಕ್ಕನ್ನು ಪುನಹ ಹರಾಜುಮಾಡಿ ಮೊದಲನೇ ಹರಾಜ್‌ದಾರನನ್ನು ಲುಕ್ಸಾನಿಗೆ ಗುರಿಮಾಡುತ್ತೆ. 2ನೇ ಹರಾಜಿನಲ್ಲಿ ಜಾಸ್ತಿ ಹುಟ್ಟುಳಿ ಏನಾದರೂ ಆದರೆ ಅದಕ್ಕೆ ಅವನಿಗೆ ಹಕ್ಕುದಾರಿ ಏನೂ ಯಿರುವದಿಲ್ಲ.

4. ಫಾರೆಸ್ಟಿನಲ್ಲಿ ಅಥವಾ ಫಾರೆಸ್ಟ್ ಪ್ರದೇಶದಲ್ಲಿ ಬೆಂಕಿಏನಾದರೂ ಬಿದ್ದರೆ ಅದಕ್ಕೆ ಹರಾಜ್‌ದಾರನೇ ಜವಾಬ್‌ದಾರನಾಗಿರತಕ್ಕದ್ದು. ಅವನಿಗೆ ಗೊತ್ತುಮಾಡಿದ ಪ್ರದೇಶದಲ್ಲಿ ಕಂಟ್ರಾಕ್ಟುದಾರನೇ ಆಗಲಿ ಅಥವಾ ಅವನ ಕಡೆ ಜನರೇಆಗಲಿ ಏನಾದರೂ ಅಕ್ರಮನಡಿಸಿದ್ದ್ರೆ ಫಾರೆಸ್ಟ್ ರೂಲ್ಸ್ ಮೇರೆ ನಡಿಸಲಾಧೀತು.

ಮುದ್ದಪ್ಪ,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್.

ಬೆಂಗಳೂರ್ ಡಿಸ್ಟ್ರಿಕ್ಟು.

ತಾರೀಖು 28ನೇ ಆಗಸ್ಟ್ 1896.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರ ತಾಲ್ಲೂಕು ಗ್ರಾಮಾಂತರಗಳಲ್ಲಿರುವ ಕುರಂಗದ ಕಲ್ಲು ದುರ್ಮುಖಿ ಸಂವತ್ಸರದ ಬಾಬನ್ನು 1896ನೇ ಇಸವಿ ಜುಲೈ 6ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1896ನೇ ಇಸವಿ ಜೂನ್ 25ನೇ ಮರ್ಸ್ಕು ಮಿನ 25ನೇ ನಂಬರ್ ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿತ್ತಷ್ಟೆ, ಇದನ್ನ ಬದಲಾಯಿಸಿ 1896ನೇ ಇಸವಿ ಅಕ್ಟೋಬರ್ ತಾರೀಖು 1ರಲ್ಲು ದುಸರಾ ಹರಾಜು ಮಾಡಲ್ಪಡುತ್ತೆ.

(2) ಈ ಬಾಬತು ಹರಾಜ್ ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರು ಅಥವಾ ಶಿರಸ್ತೇದಾರು ಮಾಡುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಲಾಗಾಯತು ಒಂದು ವರುಷದ ಮುದ್ದಿಗೆ ಇರತಕ್ಕದ್ದು.

(4.) ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ

ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ ಮಾಡಬೇಕು. ಬಾಕಿ ಮೊಬಲಗನ್ನ ರೂಪಾಯಿ 1ಕ್ಕೆ 1 ಅಣೆ ಮೇರೆ ಲೋಕಲ್‌ಸೆಸ್ ಸಹಿತ ಹರಾಜು ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್‌ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನ ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್‍ರ ಹಕ್ಕಿಗೆ ಆತಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಲಿ ಜಮೀನುಗಳನ್ನ ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲು, ಮತ್ತು ಅದು ರವಾನ್ಸಾಗುವ ಸ್ಥಳ ಈ ತಪ್ಸೀಲ್ ಕಂಡು ತಾಲ್ಲೂಕು ಅಮಲ್‌ದಾರ್‌ರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್‌ರು ಸಾಗಿಸಕೂಡದು.

ವಿ. ಎನ್. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮಿಷನರ.

ತುಮಕೂರ್ ಡಿಸ್ಟ್ರಿಕ್ಟು.

ತಾರೀಖು 31ನೇ ಆಗಸ್ಟು 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸರ್ 1896–97ನೇ ಸಾಲಿಗೆ ಮಧುಗಿರಿ ತಾಲ್ಲೂಕು ಮತ್ತು ಕೊರಟಗೆರೆ ಸಬ್ ತಾಲ್ಲೂಕಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಆಕಾರ ಕಂಡ ಫಡ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲ್‌ಗಳಲ್ಲಿಯೂ ದೊರೆಯುವ ಪಸಾರೆ ಜಿನಸಿಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನ 4—8—96 ಮತ್ತು 5—8—96ನೇ ತಾರೀಖುಗಳಲ್ಲಿ ಹರಾಜು ಮಾಡಿಸಲಾಗಿ ಕಂ ಸವಾಲ್ ಆದ್ದರಿಂದ ಸದರೀ ಹಕ್ಕುದಾರಿಯನ್ನ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಪುನಹ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾನ್ಹ 11 ಘಂಟೆಗೆ ಷುರುವಾಗುತ್ತೆ, ಹರಾಜು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಮಧುಗಿರಿ ತಾರೀಖು 29—9—96 ಮಧುಗಿರಿ, ಕೊರಟಗೆರೆ ತಾರೀಖು 30—9—96 ಕೊರಟಗೆರೆ.

2. ಚಡದರಖಾಸ್ತುದಾರನು ಹರಾಜು ಕೈದಾದ ಕೂಡ್ಲೆ ಹರಾಜ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್‌ದಾರ್‌ರಿಂದ ಚಡಸವಾಲ್‌ದಾರ್‌ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ಒಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜ್ ಮೊಬಲಗಿಗೆ ರೂಪಾಯಿ 1ಕೆ 1 ಅಣೆಯಂತೆ ಲೋಕಲ್‌ಸೆಸ್ಸ್ ವಸೂಲ್ ಮಾಡಲ್ಪಡುವದು.

3. ಕ್ಲಿಪ್ತಕಾಲದ ಒಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಠೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್‌ಸಾನಿಗೆ ಒಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಫುಂಟಾಗುವ ಫಾಯಿದೆ ಭಾಗ್ಯ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೋಧಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಸೇರಿರುವದಿಲ್ಲ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ.

1896ನೇ ಇಸವಿ ಮೇ ತಾರೀಖು 25ರಲ್ಲಿ ನಡೆಯಲ್ಪಟ್ಟ ತುಮಕೂರ್ ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಮೀಟಿಂಗಿನ ಪ್ರೊಸೀಡಿಂಗ್ಸ್.

ಹಾಜರ್.

ಅಫೀಷಿಯಲ್ ಮೆಂಬರುಗಳು.

ಮೆಸ್ಟರ್ ಎಂ. ನಾರಾಯಣರಾವ್ ಪ್ರೆಸಿಡೆಂಟ್.
,, ಪಿ. ವೆಂಕಟರಾವ್ ಜನರಲ್ ಅಸಿಸ್ಟೆಂಟ್ ಕಮಿಷನರ್.
,, ತಿ. ಟಿ. ಡಲಾಲ್ ಎಗ್ಸಿಕ್ಯೂಟಿವ್ ಇಂಜಿನಿಯರ್.
,, ಟಿ. ಎಸ್. ನಂಜಪ್ಪನವರು ಅಸಿಸ್ಟೆಂಟ್ ಸರ್ಜನ್.
,, ಮಹಮದ್ ರಜಾಸಾಹೇಬರು ತುಮಕೂರ್ ಅಮಲ್‌ದಾರ್.
,, ಸಿ. ಎನ್. ಚನ್ನಯ್ಯನವರು ಮದ್ದಗಿರಿ ಅಮಲ್‌ದಾರ್.
,, ಸಿ. ಕಂಠೀರವಾಚಾರ್ ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್‌ದಾರ್.

ಮೆಸ್ಟರ್ ಪೀ. ಶೀತಾರಾಮಯ್ಯನವರು ಗುಬ್ಬೀ ತಾಲ್ಲೂಕು ಅಮಲ್‌ದಾರ್.
,, ಬಿ. ಶೀತಾರಾಮಯ್ಯನವರು ತಿಪಟೂರು ತಾಲ್ಲೂಕು ಅಮಲ್‌ದಾರ್.
,, ಆರ್. ರಾಘವೇಂದ್ರರಾವ್ ಪಾವಗಡ ತಾಲ್ಲೂಕು ಅಮಲ್‌ದಾರ್.
,, ವಿ. ಪಾರ್ಥಸಾರಥಯ್ಯಂಗಾರ್ ಕುಣಿಗಲ್ ತಾಲ್ಲೂಕು ಅಮಲ್‌ದಾರ್.

ಗೈರ್ ಹಾಜರ್.

ಮೆಸ್ಟರ್ ಎ. ವೇದಾಂತ ದೇಶಿಗಂ ಅಯ್ಯಂಗಾರ್ ಸಿರಾ ತಾಲ್ಲೂಕು ಅಮಲ್‌ದಾರ್.

ನಾನ್ ಅಫಿಷಿಯಲ್ ಮೆಂಬರುಗಳು.

ಹಾಜರ್.

ಮೆಸ್ಟರ್ ರಾಮದಾಸಪ್ಪನವರು.
,, ಅಬಿದಲ್ಲಿ ಸಾಹೇಬರವರು.
,, ಆಗಳಿ ಕೃಷ್ಣಪ್ಪನವರು.
,, ಗಂಗಣಶೆಟ್ಟರು.

ಮೆಸ್ಟರ್ ಚಿಕ್ಕಣಶೆಟ್ಟರು.
,, ವೆಂಬಾಕ್ ಶ್ರೀನಿವಾಸತಾತಾಚಾರ್.
,, ಸೈಯದ್ ಮುಸ್ತಫಾ ಸಾಹೇಬರವರು.

ಗೈರ್ ಹಾಜರ್ ಇಲ್ಲ.

1. ಮುಸಾಫರ್ ಖಾನೆಗಳಿಗೆ ಪಾತ್ರೆಗಳನ್ನ ಕೊಡಿಸುವ ವಿಚಾರದಲ್ಲಿ 1896ನೇ ಇಸವಿ ಮಾರ್ಚಿ ತಾರೀಖು 16ರಲ್ಲಿ ಆದ 10615.—23, ಎಲ್. ಎಫ್. 103.—95ನೇ ನಂಬರ ಗವರ್ನಮೆಂಟ್ ಪ್ರೊಸಿಡಿಂಗ್ಸನ್ನ ಓದಲಾಯಿತು. ರಿಕಾರ್ಡ್ ಮಾಡಬೇಕೆಂತ ತೀರ್ಮಾನಿಸಲ್ಪಟ್ಟಿತು.

2. ಕಾಲರಾ ರೋಗ ಪ್ರಾಪ್ತವಾದ ಸಂದರ್ಭಗಳಲ್ಲಿ ತಗಲತಕ್ಕ ಖರ್ಚು ಪೈಕಿ ಕೆಲವುಭಾಗ ಡಿಸ್ಟ್ರಿಕ್ಟ್ ಫಂಡಿಗೂ, ಮತ್ತು ಕೆಲವು ಭಾಗ ಮೆಡಿಕಲ್ ಶೇವಿಂಗ್ಸಿಗೆ ಖರ್ಚು ಬೀಳತಕ್ಕ ವಿಚಾರದಲ್ಲಿ ಡೆಪ್ಯುಟಿ ಕಮಿಷನರವರುಗಳ ಅಭಿಪ್ರಾಯ ಕೊಡಬೇಕೆಂತಲೂ, ಔಷಧವು ತಾಲ್ಲೂಕು ಡಿಸ್ಪೆನ್ಸರಿಗಳಲ್ಲಿಯೂ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನ ಆಸ್ಪತ್ರೆಗಳಲ್ಲಿಯು ಬೆಂಗಳೂರು ಮೆಡಿಕಲ್ ಸ್ಟೋರಿನಿಂದಲೂ ಸಹ ಸಹ ದೊರೆಯುತ್ತೆಂಬುವದನ್ನು ಮುಂದಿನ ನಡವಳಿಕೆಗೋಸ್ಕರ ಡೆಪ್ಯುಟಿ ಕಮಿಷನರುಗಳು ನೋಟುಮಾಡಿಕೊಳ್ಳಬೇಕೆಂತಲೂ ಸಹ ಆದ 1896ನೇ ಇಸವಿ ಮಾರ್ಚಿ 17ನೇ ಮುಕ್ಕಾಂ 10693.—703 ಜಿ. 319.—92ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸನ್ನ ಓದಲಾಯಿತು, ಕಾಲರಾ ಪ್ರಾಪ್ತವಾದ ಸಂದರ್ಭದಲ್ಲಿ ಝೋಪಡಿಗಳನ್ನ ಕಟ್ಟತಕ್ಕ ಹಾಗೆ ಬಟ್ಟೆಗಳು ಕಾಯಿಲೆ ಜನಗಳ ತಿಂಡಿ ಯಿಷ್ಟು ಖರ್ಚುಗಳ ಪೈಕಿ ನ್ಯಾಯವಾದ ವಂದು ಭಾಗವನ್ನು ಡಿಸ್ಟ್ರಿಕ್ಟ್ ಫಂಡಿಗೆ ಅಥವಾ ಸಂದರ್ಭಾನುಸಾರ ಮ್ಯುನಿಸಿಪಾಲಿಟಿಗೂ ಸೇರಿಸಬಹುದಾಗಿದೆ. ಆದರೆ ಔಷಧದ ಖರ್ಚು ಮೆಡಿಕಲ್ ಉದ್ಯೋಗಸ್ಥರ ಟ್ರಾವಲಿಂಗ್ ಅಲೌನ್ಸ್ ಮತ್ತು ಇತರ ವಿಧವಾದ ಯಲ್ಲಾ ಖರ್ಚುಗಳೂ ಪ್ರೊವಿನ್ಸಿಯಲ್ ಫಂಡಿನಿಂದ ಖರ್ಚು ಕೊಡಿಸಬೇಕೆಂತಲೂ ತೀರ್ಮಾನವಾಗಲ್ಪಟ್ಟಿತು.

3. 1896—97ನೇ ಸಾಲಿನ ತುಮಕೂರ್ ಸರಕಲಿನ ಡಿಸ್ಟ್ರಿಕ್ಟ್ ಫಂಡ್ ಬಜೆಟ್ಟಿನ ಮೇಲೆ ಆದ 1896ನೇ ಇಸವಿ ಏಪ್ರಿಲ್ 1ನೇ ಮುಕ್ಕಾಂ 11235.—9, ಎಲ್. ಎಫ್. 90—95ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಓದಿ ರಿಕಾರ್ಡ್ ಮಾಡಲ್ಪಟ್ಟಿತು.

4. 1,000 ರೂಪಾಯಿ ಅಂದಾಜಾ ಖರ್ಚಿನಲ್ಲಿ ಕಟ್ಟಲ್ಪಡಬಹುದಾದ ನಾಲ್ಕನೇ ತರಗತಿಯ ಮುಸಾಫರ್ ಖಾನಾ ನಕ್ಷೆಯನ್ನ ಒಪ್ಪಿತದಿಂದ ಮಂಜೂರಾದ ಗವರ್ನಮೆಂಟ್ ಪ್ರೊಸಿಡಿಂಗ್ಸನ್ನ ಓದಿ ರಿಕಾರ್ಡು ಮಾಡಲ್ಪಟ್ಟಿತು.

5. 1895—96ನೇ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಬಜೆಟ್ಟಿನಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಗೋಸ್ಕರ ಮಂಜೂರಾಗಿರುವ 1,000 ರೂಪಾಯಿ ರಿಜರ್ವ್ ಬಾಬಿನಿಂದ ಖರ್ಚು ಬೀಳಬಹುದಾದ ತುಮಕೂರು, ವಡ್ಡಗೆರೆ ರಸ್ತೆಗೆ ಆಗಬೇಕಾದ ಸ್ಪೆಷಲ್ ರಿಪೇರಿಗೋಸ್ಕರ 400 ರೂಪಾಯಿಗಳಿಗೆ ವಂದು ಅಂದಾಜಾ ತಯಾರ್ಮಾಡಿ ಒಪ್ಪಿತಕ್ಕೋಸ್ಕರ ಕಳುಹಿಸಲ್ಪಟ್ಟ ತುಮಕೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ 1896ನೇ ಇಸವಿ ಏಪ್ರಿಲ್ 7ನೇ ಮುಕ್ಕಾಂ 310ನೇ ನಂಬರ್ ಡಾಕೆಟ್ಟನ್ನ ಓದಲಾಯಿತು. ಸದರಿ ಅಂದಾಜಾವನ್ನ ಮಂಜೂರ್ಮಾಡಬಹುದೆಂದು ತೀರ್ಮಾನವಾಯಿತು.

6. ಮೆಸರ್ಸ್ ಸುಲತಾನ್ ಅಂಡ್ ಕಂಪನಿಯವರಿಂದ ತಲ್ಪಿದ ವಂದು ಪ್ರಕಟನಾಪತ್ರಿಕೆಯನ್ನು ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರು 1896ನೇ ಇಸವಿ ಏಪ್ರಿಲ್ 6ನೇ ಮುಕ್ಕಾಂ 302ನೇ ನಂಬರ್ ಡಾಕೆಟ್ ಬರಸಿದ್ದರಲ್ಲಿ ನೀರು ಸೇದುವ ಯಂತ್ರವನ್ನ ಡಿಸ್ಟ್ರಿಕ್ಟ್ ಫಂಡ್ ಖರ್ಚಿನಿಂದ ತರಿಸಿ ಇದರ ಉಪಯೋಗವನ್ನ ಜನಗಳಿಗೆ ತೋರ್ಪಡಿಸಬಹುದೆಂದು ತಾತ್ಪರ್ಯಪಟ್ಟ ವಿಚಾರ ಜಿಜ್ಞಾಸವಾಗಿ ಪ್ರದರ್ಶನಕ್ಕಾಗಿ ಸದರೀ ಕಂಪನಿಯವರು ಅವರ ನೀರು ತೆಗೆಯುವ ಯಂತ್ರವನ್ನ ತುಮಕೂರಲ್ಲಿ ತಂದು ತೋರಿಸಲು ಅಭಿಪ್ರಾಯ ಪಡುವರೇ ಹ್ಯಾಗೆಂದು ಸದರೀ ಕಂಪನಿಯವರಿಗೆ ಬರಸಬೇಕೆಂದು ತೀರ್ಮಾನವಾಗಲ್ಪಟ್ಟಿತು.

7. ಕೇವಲ ಹೀನಸ್ಥಿತಿಯಲ್ಲಿ ಇರತಕ್ಕ ತುಮಕೂರು ಮದ್ದೂರು ರಸ್ತೆಯ ಕೆಲವು ಭಾಗ ಸ್ಪೆಷಲ್ ರಿಪೇರಿ ಬಗ್ಯೆ 1,535 ರೂಪಾಯಿಗೆ ವಂದು ಅಂದಾಜಾ ತಯಾರ್ಮಾಡಿ ಒಪ್ಪಿತಕ್ಕೋಸ್ಕರ 1896ನೇ ಇಸವಿ ಮೇ 22ನೇ ಮುಕ್ಕಾಂ 455ನೇ ನಂಬರ್ ಡಾಕೆಟ್ ಎಗ್ಸಿ

ಕ್ಸ್ಯೂಟಿವ್ ಇಂಜಿನಿಯರ್ ಸಾಹೆಬರವರಿಂದ ತಲ್ಪಿದ್ದನ್ನ ವೋದಲಾಯಿತು. ಸದ್ಯದಲ್ಲಿ ವೊಬಲಗು ಯಾವದೂ ಇಲ್ಲವಾ. ಈ ಅಂದಾಜು ಮಂಜೂರೀ ವಿಚಾರ ಪ್ರಕೃತ ನಿಲ್ಲಿಸಿರಬೇಕೆಂದು ತೀರ್ಮಾನವಾಯಿತು.

8. 1895—96ನೇ ಸಾಲಿನ ಡಿಸ್ಟ್ರಿಕ್ಟ್ ಫಂಡ ಬಡ್ಜೆಟ್ಟಿನಲ್ಲಿ ಮಂಜೂರಾಗಿರತಕ್ಕ ಗ್ರಾಂಟಿಗಳಲ್ಲಿ ಕೆಲವು ಬದಲಾವಣೆಗಳನ್ನ ಮಾಡಿಸಿಕೊಡಬೇಕೆಂದು ಎಗ್ಸಿಕ್ಯೂಟಿವ್ ಇಂಜಿನಿಯರ ಸಾಹೆಬರವರ 1896ನೇ ಇಸವಿ ಮೇ 21ನೇ ಮರ್‍ಖಂ 451ನೇ ನಂಬರ ಡಾಕೆಟಿವಡನೆ ಕಳುಹಿಸಿದ ಅಪ್ಲಿಕೇಷನ ಚರ್ಚೆಯಿಂದ ಒಪ್ಪಲಪಟ್ಟು, ತ್ವರ್‍ಯದಲ್ಲೀ ಮಂಜೂರಾತಿಯನ್ನ ಬೇಡಿ ಗವರ್ನಮೆಂಟಿಗೆ ರವಾನಿಸಬೇಕೆಂದು ತೀರ್ಮಾನವಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಫಂಡ ಬೋರ್ಡ್.

ತುಮಕೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟಮೆಂಟ್.

1896ನೇ ಇಸವಿ ಆಗಸ್ಟ್ ತಾರೀಖು 29ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಪೋದಲ್ಲಿ ಮತ್ತು ಗುಬ್ಬೀ ತಾಲ್ಲೂಕ ಚನ್ನಶೆಟ್ಟಿಹಳ್ಳಿ ಪ್ಲ್ಯಾಂಟೇಷನಿನಲ್ಲಿರುವ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನ 1896ನೇ ಇಸವಿ ಸೆಪ್ಟಂಬರ್ ತಾರೀಖು 22ರಲ್ಲು ತುಮಕೂರು ಡಿಪೋದಲ್ಲಿಯೂ ತಾರೀಖು 24ರಲ್ಲು ಚನ್ನಶೆಟ್ಟಹಳ್ಳಿ ಪ್ಲ್ಯಾಂಟೇಷನಿನಲ್ಲಿಯೂ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಪೋ.

ತರಹೆ.	ಸಂಖ್ಯೆ.	ಸಲೆ ಅಡಿ.	ಸಲೆ ಅಂಗುಲ.	ಸಲೆ ಸೆಂಟ್ಸ್.
ಕ್ಯಾಸರೀನ ಮರಗಳು	249	568	6	3
ಹಳ್ಳೀ ಬಿದರುಗಳು	544			

ಗುಬ್ಬೀ ತಾಲ್ಲೂಕು ಚನ್ನಶೆಟ್ಟಹಳ್ಳಿ ಪ್ಲ್ಯಾಂಟೇಷನ್.

ತರಹೆ.	ಸಂಖ್ಯೆ.	ಸಲೆ ಅಡಿ.	ಸಲೆ ಅಂಗುಲ.	ಸಲೆ ಸೆಂಟ್ಸ್.
ಕ್ಯಾಸರೀನ ಮರಗಳು	1190			

ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಷರತ್ತುಗಳು—ಹರಾಜ್ ಕೈದ್ಗಾದ್ದ ಕೂಡ್ಲೆ ಕಾಲ್ಲುಹಿಸ್ಸೇ ಮೊಬಲಗು ಠೇವಣಿ ತೆರೀಕ ಹಾಜರ್‍ಮಾಡಬೇಕು. ಬಾಕಿ ಮೊಬಲಗನ್ನ ಹರಾಜ್ ತಾರೀಖು ಲಾಗಾಯತು 1 ವಾರದವಳಗಾಗಿ ಹಾಜರ್‍ಮಾಡಬೇಕು. ಇದಕ್ಕೆ ತಪ್ಪಿದರೆ ದೂಸರೆ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜ್‌ದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳ್ಲೆಲ್ಲಾ ಹರಾಜು ತಾರೀಖು ಲಾಗಾಯತು 10 ದಿವಸದವಳಗಾಗಿ ಸಾಗಿಸಿಕೊಳ್ಳಬೇಕು. ಇತರ ತಪ್ಸೀಲುಗಳಿಗೆ 1895ನೇ ಇಸವಿ ಏಪ್ರೆಲ್ 25ನೇ ಮರ್‍ಖಂ ಮೈಸೂರ ಗೆಜೆಟ್ 1ನೇ ಭಾಗದಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ 15ನೇ ಮರ್‍ಖಂ 15229ನೇ ನಂಬರು ಗವರ್ನಮೆಂಟ್ ನೋಟಿಫಿಕೇಷನ್ನೋಡಿ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್.

ಸಾಗುವಳಿಗೋಸ್ಕರ ಜಮೀನು ಹಿಡುವಳಿ ಹರಾಜು.

ತಾರೀಖು 1ನೇ ಆಗಸ್ಟ್ 1896.

ಇಸ್ತಿಹಾರ್.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೋರೆ ಇದರಡೀಲಿ ಕಂಡ ಜಮೀನು ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಹೇಳಲ್ಪಟ್ಟು ಆಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜು ಕೈದಾದ ಕೂಡ್ಲೆ ಚಡಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜು ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನ ಸಾವತಿ ಮಾಡಬೇಕು.

4. ಪೂರಾ ಹರಾಜು ಮೊಬಲಗನ್ನು ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಖಾತಾ ಬಾಕಿ ಉಳಿದದ್ದನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜು ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣವರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುವದು.

5. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜು ಡೆಪ್ಯುಟಿ ಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವರೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ "ಡಿ" ಯಲ್ಲಿ ...ಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ...ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲಾ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ.					ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
			ಜಮೀನ್.				ಮರಗಳು ಭಾವಿಗಳು ವಗೈರೆ.			
			ಸರ್ವೆ ನಂಬರ್.	ಬಾಬು ಖುಷ್ಕಿ, ತರಿ, ಬಾಗಾಯಿತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಕೂಡಿದ ಮಟ್ಟಿಗೂ ಕರಾರ್ವಾಕಾ ತಖ್ತೀಲ್.			
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ	ಬಾನದಹಳ್ಳಿ ಗ್ರಾಮ	35 36 60 51 52 53	ತರೀ ಜಮೀನ್	0—11 0—31 0—9 2—10 2—6 2—3	1—8—0 2—8—0 1—4—0 12—0—0 12—0—0 12—0—0		ಜಮೀನ್ ಬಳಿ 1896ನೇ ಇಸವಿ ಅಕ್ಟೋಬರ್ 26ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್‌ದಾರ್ ಅಥವಾ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.	
					7—30	41—4—0				

ಇದರಿಂದ ತಿಳಿಯಪಡಿಸುವದೇನಂದರೆ,— ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡಿಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಜಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಕೈದಾದ ಕೂಡ್ಲೆ ಜಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಖಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು

ಮಾಡಲ್ಪಡುವದು ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರಿ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿಕಮಿಷನರು ಅವಶ್ಯಕವಾದ ಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡೆಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲಿ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿಕಮಿಷನರ ಮಂಜೂರಾತಿಗೆ ಬಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳೀ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಪ್ರಕಾರ ಅಮಲ್‌ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರು.	ಜಾಮು ಖುಷ್ಕಿ, ತರೀ, ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ. ಕೂಡಿದ ವಟ್ಟಿಗೂ ಕರಾರ್ವಾಕಾ ತಪ್ಸೀಲ.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ವೃಗಿನಳ್ಳಿ.	179	ತರೀ ಜಮೀನ್.	0— 5	0—12—0	..	ಜಮೀನ್ ಬಳಿ 1896ನೇ ಇಸವಿ ಅಕ್ಟೋಬರ್ 26ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ಅಥವಾ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.	
			180		0—17	2— 8—0	..			
					0—22	3— 4—0				

ಅದರಿಂದ ತಿಳಿಯಪಡಿಸುವದೇನಂದರೆ,— ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇವರಡೀಲಿ ಕಂಡ ಜಮೀನ್ ಹಿಡವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಜಿಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಖೈದಾದಕೂಡ್ಲೆ ಜಿಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಃ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ, ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣೀ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು, ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೆ ಆಗಲಿ ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ ಡೆಪ್ಯುಟಿಕಮಿಷನರು ಅವಶ್ಯಕವಾದ ಸಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ್ದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ, ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿಕಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾಲ್ಕು ದಿವಸಗಳ ತರುವಾಯ ತಾಲ್ಲೂಕು ಅಮಲ್ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಂಮಾಡದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿಯಾನ್ನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂಕೋಡ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳಲ್ಲಿ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರು.	ಬಾಬು ಖುಷ್ಕೀ, ತರೀ ಬಾಗಾಯ್ತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ. ಕೊಡಿದ ಮಟ್ಟಿಗೂ ಕರಾರ್ವಾಕಾ ತಪ್ಶೀಲ್.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪ್ಯಾಟೆ.	ಕಿಕ್ಕೇರಿ	ಗುಂಡೆಹೊಸಹಳ್ಳಿ ಗ್ರಾಮ	235	ತರೀ ಜಮೀನ್	0—20	0—4—0		ಜಮೀನುಗಳ ಬಳಿ 1896ನೇ ಇಸವಿ ಅಕ್ಟೋಬರ್ 27ನೇ ದಿವ 11 ಘಂಟೆ.	ಕೃಷ್ಣರಾಜಪ್ಯಾಟೆ ತಾಲ್ಲೂಕು ಅಮಲ್ದಾರ್ರು ಅಥವಾ ಫ್ರೆಂಚ್‌ರಾಕ್ಸ ಸಬ್ ಡಿವಿಜನ್ ಆಫೀಸರವರು.	
			240		1—14	7—8—0				
			80		1—34	9—8—0				
			212		2—2	12—0—0				
			213		2—0	11—0—0				
			214		2—3	12—0—0				
			215		2—2	11—0—0				
			216		2—14	13—0—0				
			217		1—37	10—0—0				
			257		0—25	1—4—0				
			78		1—4	6—8—0				
			259		0—10	0—4—0				
			261		1—21	8—0—0				
			262		2—1	11—0—0				
			199		1—37	7—0—0				
			211		1—28	0—12—0				
			128		0—12	1—12—0				
			17		25—24	122—12—0				

ಪಿ. ವೆಂಕಟನಾಥರಾವ್,
ಸಬ್ ಡಿವಿಜನ್ ಆಫೀಸರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮೆ.

ತಾರೀಖು 24ನೇ ಆಗಸ್ಟ 1896.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಡಿಪೋಗಳಿಗೆ ಅವುಗಳ ಬಾಜೂದಲ್ಲಿ ಕಾಣಿಸಿರುವ ಜಂಗಲಿನಿಂದ 1897ನೇ ಇಸವಿ ಮಾರ್ಚಿ ಆಖೈರ ವಳಗಾಗಿ ನಾಟ್ಹಾ, ಬೆಲಗು, ಗಳ ಜಮಾಯಿಸಿ ಕೊಡುವದಕ್ಕೆ ಟೆಂಡರ ಗಳು ಅಂಗೀಕರಿಸಲ್ಪಡುತ್ತವೆ:—

ನಂಬರು.	ಡಿಪೋ ಹೆಸರು.	ಮರದ ಜಾತಿ.	ಮೊತ್ತ ಆದದು.	ಜಂಗಲ್ ಹೆಸರು.	ಸುಮಾರು ಫಾಸಲೆ ಮೈಲಿ.	ಷರಾ.
1	ಶಿವಮೊಗ್ಗಾ ..	ಸಾಗುವಾನಿ ನಾಟಾ	100	ಭೂತನಪೈಲು	20	ಶಂಕರ ಫಾರೆಸ್ಟ
		ಜಂಗಲಿ ನಾಟಾ	200	ಶಟ್ಟೈಹಳ್ಳಿ, ಶಂಕರ	14	ಡಿಟೋ
		ಜಂಬೆ ನಾಟಾ	300	ಹಾರೋಹಿತ್ತಲು, ಸಾಗರವಳ್ಳಿ, ವಾರೇಕೊಪ್ಪ, ಅರನೇಲಿ ಮತ್ತು ಇತರ ಬಾಜು ಡಿಸ್ಟ್ರಿಕ್ಟು ಫಾರೆಸ್ಟಗಳು	22	
		ಸಾಗುವಾನಿ ಬೆಲಗು	300	ಬೊಂಮೇನಹಳ್ಳಿ ಮತ್ತು ಬಾಜು ಡಿಸ್ಟ್ರಿಕ್ಟು ಜಂಗಲ	13	
		ಜಂಗಲ್ ಬೆಲಗು	100	ಡಿಟೋ	13	
		ಕಿರಿ ಬಿದರು	12,000	ಶಂಕರ ಫಾರೆಸ್ಟ	14	ಶಂಕರ ಫಾರೆಸ್ಟ
2	ಆಯನೂರು ..	ಸಾಗುವಾನಿ ನಾಟಾ	100	ಮಸರೂರು ಮತ್ತು ಬಾಜು ಡಿಸ್ಟ್ರಿಕ್ಟು ಫಾರೆಸ್ಟಗಳು	12	ಮಸರೂರು ಫಾರೆಸ್ಟ
		ಜಂಗಲ್ ನಾಟಾ	75	ವಾರೇಕೊಪ್ಪ, ಹಾರೋಹಿತ್ತಲು, ಸಾಗರವಳ್ಳಿ ಡಿಸ್ಟ್ರಿಕ್ಟು ಜಂಗಲ್ ಗಳು	12	
		ಸಾಗುವಾನಿ ಬೆಲಗು	200	ಕುಂಶಿ	10	
		ಕಿರಿ ಬಿದರು	5,000	ಕೂಡಿ, ಮತ್ತಲಿ, ಮತ್ತು ತಾವರೇ ಕೊಪ್ಪ	10	
3	ಚನ್ನಗಿರಿ ..	ಸಾಗುವಾನಿ ಬೆಲಗು	1,500	ಸಾರತಿ, ಹಗೇದಹಳ್ಳಿ, ಹಂಚಿಶಿದ್ದಾಪುರ ಮತ್ತು ಆಗರದಳ್ಳಿ ಡಿಸ್ಟ್ರಿಕ್ಟು ಜಂಗಲ್‌ಗಳು	11	
		ಕಿರಿ ಬಿದರು	50,000	ಭಂಡಿಗುದ್ದು, ಬಿದನೆಹಾಳು ಮತ್ತು ನುಲೆಬಸಲಿ	15	
4	ಪುಬ್ರಾಣಿ ..	ಸಾಗುವಾನಿ ಬೆಲಗು	1,000	ಪುಬ್ರಾಣಿ ಬ್ಲಾಕು	8	ಕುಕ್ಕವಾಡಾ ಪುಬ್ರಾಣಿ
		ಜಂಗಲಿ ಬೆಲಗು	500	ಕೆಂಗಾಡೇಣಾ,	8	ಡಿಟೋ
		ಕಿರಿ ಬಿದರು	50,000	ಕಾಗಿಹಳ್ಳ, ರಕ್ಷಿಹಾಳು	10	
5	ಕಣಬೂರು ..	ಸಾಗುವಾನಿ ನಾಟಾ	100	ಕಣಬೂರು, ಹಾಗಲಮನೆ, ಆರಂಬಳ್ಳಿ ಮತ್ತು ಅಜ್ಜಿಗುಡ್ಡೆ ಡಿಸ್ಟ್ರಿಕ್ಟು ಜಂಗಲ್	6	
		ಜಂಗಲ್ ನಾಟಾ	150	ಡಿಟೋ	6	
6	ಸಮುದ್ರಹಳ್ಳಿ ..	ಡಿಟೋ	150	ಜೋರನೆಡೆಹಳ್ಳೀ ಫಾರೆಸ್ಟ	6	
7	ಶಿಕಾರಿಪುರ ..	ಸಾಗುವಾನಿ ನಾಟಾ	25	ಕರಡಿಪಟ್ಟ ಫಾರೆಸ್ಟ	16	
		ಜಂಗಲ್ ನಾಟಾ	100			
		ಕಿರಿ ಬಿದರು	10,000	ಕರಡಿಪಟ್ಟ ಮತ್ತು ಗಂಗವನಸರ ಫಾರೆಸ್ಟಗಳು	12ರ ಲಾ|| 15	
		ಹೆಬ್ಬಿದರು	1,000	ಡಿಟೋ ಡಿಟೋ	ಡಿಟೋ	
		ಸಾಗುವಾನಿ ಬೆಲಗು	300	ಗಂಗವನಸರ ಮತ್ತು ಬಾಜು ಡಿಸ್ಟ್ರಿಕ್ಟು ಫಾರೆಸ್ಟ	12	
		ಜಂಗಲ್ ಬೆಲಗು	100	ಡಿಟೋ ಡಿಟೋ	12	

ನಂಬರ್.	ಡಿಪೋ ಹೆಸರು.	ಮರದ ಜಾತಿ.	ಮೊತ್ತ ಅದದು.	ಜಂಗಲ್ ಹೆಸರು.	ಸುಮಾರು ಫಾಸಲೆ ಮೈಲಿ.	ಷರಾ.
8	ಶಿರಾಳಕೊಪ್ಪ ..	ಜಂಗಲ್ ನಾಟಾ	75	ಬೆಳಂದೂರು ಫಾರೆಸ್ಟ್	14	
		ಡಿಟೋ ಬೆಲಗು	150			
		ಹೆಬ್ಬಿದರು	500			
		ಕಿರಿ ಬಿದರು	5,000	ಕರಡಿ ಬೆಟ್ಟ	22	
		ಸಾಗುವಾನಿ ಬೆಲಗು	100	ಕವಲಿ, ಬಸವನಂದಿಹಳ್ಳಿ ಮತ್ತು ತೊಗರಿಕೆ ಫಾರೆಸ್ಟುಗಳು	7	
9	ಆನವಟ್ಟಿ ..	ಸಾಗುವಾನಿ ನಾಟಾ	50	ತೆಲಗಡ್ಡೆ ಫಾರೆಸ್ಟ್	8	
		ಡಿಟೋ ಬೆಲಗು	200			
		ಜಂಗಲ್ ನಾಟಾ	75	ಬೆಟ್ಟದ ಕುರ್ಲಿ	8	
		ಹೆಬ್ಬಿದರು	1,000			
		ಕಿರಿ ಬಿದರು	5,000			
10	ಚಿತ್ರದುರ್ಗ ..	ಸಾಗುವಾನಿ ನಾಟಾ	25	ಮಸರೂರು ಮತ್ತು ಬಾಜು ಡಿಸ್ಟ್ರಿಕ್ಟ್ ಫಾರೆಸ್ಟುಗಳು	90	
		ಜಂಗಲ್ ನಾಟಾ	50	ಶೆಟ್ಟಿಹಳ್ಳಿ, ಶಂಕರ	84	
		ಸಾಗುವಾನಿ ಬೆಲಗು	500	ಸಾರತಿ, ಹಗೇದಹಳ್ಳಿ, ಹಂಚಿಬಿದ್ದಾಪುರ ಮತ್ತು ಆಗರದಹಳ್ಳಿ	49	
		ಕಿರಿ ಬಿದರು	12,000	ಭಂಡಿಗುಡ್ಡ, ಬಿದನೆಹಾಳು ಸುಳೆ ಬಸಲಿ	53	
		ಹೆಬ್ಬಿದರು	300	ಡಿಟೋ	53	

2. ಎಲ್ಲಾ ಟೆಂಡರ್‌ಗಳ ಮೇಲೂ ಯಿಂಥಾ ಡಿಪೋವಿಗೆ ನಾಟಾ, ಬೆಲಗುಗಳ ಜಮಾಯಿಸುವ ಬಗ್ಯೆ ಟೇಂಡರ್ ಯಂದು ಬರಿಯತಕ್ಕದ್ದು. ಮತ್ತು ಟೆಂಡರ್ ಸಂಗಡ ಡಿಪೋ 1ಕ್ಕೆ 100 ರೂಪಾಯಿನಂತೆ ಕರೆನ್ಸೀ ನೋಟ್ ಮೂಲಕ ಠೇವಣಿ ಹಾಜರ್ ಮಾಡತಕ್ಕದ್ದು. ತಿರಸ್ಕರಿಸಲ್ಪಟ್ಟ ಟೆಂಡರಿನ ಸಂಗಡ ಮೊಬಲಗು ವಾಪಸ್ ಮಾಡಲ್ಪಡುವದು.

3. ಟೆಂಡರ್‌ಗಳು ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕನ್ಸರ್ವೇಟರ ಹೆಸರಿನಲ್ಲಿ ಬರಿಯತಕ್ಕದ್ದು. 1896ನೇ ಇಸವಿ ಸೆಪ್ಟಂಬರ್ ತಾರೀಖು 28ನೇ ದಿವಿ 12 ಘಂಟೆ ವರಿಗೂ ಸದರೀ ಟೆಂಡರ್‌ಗಳು ಅಂಗೀಕರಿಸಲ್ಪಡುವವು.

4. ಪ್ರತಿ ಒಬ್ಬ ದರಖಾಸ್ತುದಾರನೂ ಈ ಕೆಳಗೆ ನಮೂದಿಸುವ ತಪ್ಸೀಲಿನಂತೆ ನಾಟಾಗಳನ್ನು, ಕಡದು, ಕೆತ್ತಿ ಜಮಾಯಿಸುವದಕ್ಕೆ ಸಲೆ ಅಡಿ 1ಕ್ಕೆ ಆಖೈರ್ ದರ ನಮೂದಿಸತಕ್ಕದ್ದು.

ನಾಟಾಗಳು.

(1) 12 ಸಲೆ ಅಡಿ ಮತ್ತು ಅಧಕ್ಕೆ ವಳಪಟ್ಟದ್ದಕ್ಕೆ.
(2) 12 ಸಲೆ ಅಡಿ ಮೇಲ್ಪಟ್ಟು 20 ಸಲೆ ಅಡಿ ವರಿಗೆ.
(3) 20 ಸಲೆ ಅಡಿಗೆ ಮೇಲ್ಪಟ್ಟದ್ದಕ್ಕೆ.

ಬೆಲಗುಗಳು.

(1) 4 ಸಲೆ ಅಡಿ ವಳಪಟ್ಟದ್ದಕ್ಕೆ.
(2) 4 ಅಡಿಗೆ ಮೇಲ್ಪಟ್ಟು 8 ಅಡಿ ವರಿಗೆ ಯಿರುವದಕ್ಕೆ.
(3) 8 ಅಡಿಗೆ ಮೇಲ್ಪಟ್ಟದ್ದಕ್ಕೆ.

ಹೆಬ್ಬಿದರು ಯಾ ಕಿರಿ ಬಿದರುಗಳ 100ಕ್ಕೆ.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಟೆಂಡರ್ ಅಂಗೀಕರಿಸಿದ ವರ್ತಮಾನವನ್ನು ತಿಳಿದ ಒಂದು ವಾರದೊಳಗಾಗಿ ಕಂಟ್ರಾಕ್ಟ್ ಮುಚ್ಚಳಿಕೆಯನ್ನು ಬರೆದುಕೊಡಬೇಕಲ್ಲದೇ ತನ್ನ ಕಂಟ್ರಾಕ್ಟು ಸರಿಯಾಗಿ ಪೂರೈಸಿಕೊಡುವದಕ್ಕೆ ಖಾತ್ರಿಗಾಗಿ ಪುನಹ 150 ರೂಪಾಯಿ ಠೇವಣಿ ಯಿಡತಕ್ಕದ್ದು. ಕಂಟ್ರಾಕ್ಟಿನ ಷರತ್ತಿನಲ್ಲಿ ಯಾವದಕ್ಕಾದರೂ ತಪ್ಪಿದರೆ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

6. ಕೆಂಕೀ ಕಾಲದಲ್ಲಿ ಕಂಟ್ರಾಕ್ಟುದಾರನು ಡೆಪ್ಯುಟಿ ಕನ್ಸರ್ವೇಟರ ಅಪ್ಪಣೆ ಅನುಸರಿಸಿ ನಡದುಕೊಳ್ಳಬೇಕು.

7. ಫಾರೆಸ್ಟ್ ಇಲಾಖೆಯವರು ನಿಶಾನ್ ಮಾಡಿದ ಮರಗಳ ವಿನಹ ಬೇರೆ ಮರಗಳನ್ನ ಕಡಿಯಕೂಡದು, ಮತ್ತು ಡೆಪ್ಯುಟಿ ಕನ್ಸರ್ವೇಟರ ಅಪ್ಪಣೆ ಮೇರಿಗೆ ನಾಟಾಗಳನ್ನು ಸರಿಯಾಗಿ ಕೆತ್ತಿಸಬೇಕು.

8. ಕಮ್ಮಿ ದರದ ಟೆಂಡರ್ ಆಗಲಿ ಯಾ ಮತ್ತ್ಯಾವ ಟೆಂಡರ್ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕನ್ಸರ್ವೇಟರು ಸ್ವತಂತ್ರರಾಗಿ ಯಿರುತ್ತಾರೆ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕನ್ಸರ್ವೇಟರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

9. ಜಂಗಲಿನಿಂದ ನಾಟಾಗಳನ್ನು ಸಾಗಿಸುವದಕ್ಕೋಸ್ಕರ ಬೇಕಾಗುವ ಏರ್ಪಾಡುಗಳನ್ನು ಕಂಟ್ರಾಕ್ಟುದಾರನೇ ಮಾಡಿಕೊಳ್ಳತಕ್ಕದ್ದು. ಸರಕಾರದವರು ರಸ್ತೆಯನ್ನಾಗಲಿ ಭಂಡಿದಾರಿಯನ್ನಾಗಲಿ ಮಾಡಿಸಿ ಕೊಡುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಈ ನೆಪದಿಂದ ನಾಟಾ ವಗೈರೆ ವಾಯಿದೆಯಲ್ಲಿ ತಾರದಿದ್ದರೆ ಈ ಕಾರಣವು ಅಂಗೀಕರಿಸಲ್ಪಡಲಾರದು.

10. ಇನ್ಯಾವ ಸಂಗತಿಗಳಾದರೂ ತಿಳಿದುಕೊಳ್ಳಬೇಕಾಗಿದ್ದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕನ್ಸರ್ವೇಟರ ಆಫೀಸಿನಲ್ಲಿ ಕೇಳತಕ್ಕದ್ದು, ಮತ್ತು ಅಲ್ಲಿ ನೋಟಿಸ್ ಹಲಿಗೇ ಮೇಲೆ ಇಸ್ತಿಹಾರ್‌ನಾಮೆಯ ನಕಲು ಮತ್ತು ಕಂಟ್ರಾಕ್ಟು ಮುಚ್ಚಳಿಕೆ ನಕಲು ಸಹ ನೋಡಬಹುದು.

ಸಿ. ನಾರಾಯಣರಾವ್,
ಡೆ|| ಕನ್ಸರ್ವೇಟರ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಫಾರೆಸ್ಟು ಇಲಾಖಾ.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಡಿಸ್ಟ್ರಿಕ್ಟಿಗೆ ಸೇರಿದ ಯಿದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ದೊರಿಯುವ ತಂಗಡಿ, ನಾಯಿಬೇಲ ಮತ್ತು ಕಕ್ಕೆ ಚಕ್ಕೆಗಳನ್ನ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಯಿಜಾರೆಯ ವಟ್ಟು ಸ್ವತಂತ್ರದ ಹಕ್ಕು ಬಹಿರಂಗವಾಗಿ ಹರಾಜು ಮೂಲಕ ಡೆಪ್ಯುಟಿ ಕಮ್ಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಆಫಿಸರ ಮೂಲಕ ವಿಕ್ರಯಿಸಲ್ಪಡುತ್ತೆ. ಹರಾಜು ತಾರೀಖು ಮತ್ತು ಹರಾಜು ನಡಿಸುವ ಸ್ಥಳ ವಗೈರೆ ತಪ್ಸೀಲುಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ನಂಬರು	ಹೋಬಳಿಗಳು.	ಹರಾಜು ತಾರೀಖು.	ಹರಾಜು ಹಾಕುವ ಸ್ಥಳ.	ಇಜಾರೆ ಹಕ್ಕಿನ ಕಾಲ.	ಷರಾ.
ಜಗಲೂರು ..	1	ಸೊಕ್ಕೆ	1896ನೇ ಇಸವಿ ಸೆಪ್ಟಂಬರ್ ತಾರೀಖು 24	ಜಗಲೂರು	1896ನೇ ಇಸವಿ ನವೆಂಬರು ಗುರ್ರೇ ಲಾಗಾಯತು 1897ನೇ ಇಸವಿ ಜೂನ್ ಅಖೈರುವರೆಗೆ.	ಅಮೃತಮಹಲು ಮತ್ತು ಕಾವಲುಗಾರಿ ಬಗ್ಗೆ ಅಥವಾ ಹೊಣೆಗಾರಿಗೆ ಹರಾಜು ನಡೆಯುವ ಆಫೀಸರರಿಗೆ ಮನಸಾದಂತೆ ಹರಾಜು ಮಾಡಲ್ಪಡುತ್ತದೆ.
	2	ಬಿಳಚೋಡು				
	3	ಜಗಲೂರು				
	4	ಅಮೃತಮಹಲ್ ಕಾವಲ್				
ದಾವಣಗೆರೆ ...	1	ದಾವಣಗೆರೆ	1896ನೇ ಇಸವಿ ಸೆಪ್ಟಂಬರ್ ತಾರೀಖು 28	ದಾವಣಗೆರೆ		
	2	ಆನಗೋಡು				
	3	ಮಾಯಕೊಂಡೆ				
	4	ಅಣಜಿ				
	5	ಹದಡಿ				
	6	ಹರಿಹರ				
	7	ಮಲೆಬೆನ್ನೂರು				
	8	ಅಮೃತಮಹಲ್ ಕಾವಲುಗಳು				
ಹೊಳಲ್ಕೆರೆ ...	1	ಹೊಳಲಿಕೆರೆ	1896ನೇ ಇಸವಿ ಸೆಪ್ಟಂಬರ್ ತಾರೀಖು 30	ಹೊಳಲ್ಕೆರೆ		
	2	ರಾಮಗಿರಿ				
	3	ಭರಮನಾಯಕನದುರ್ಗ				
	4	ತಾಳ್ಯ				
	5	ಹೊಸದುರ್ಗ				
	6	ಬಾಗೂರು				
	7	ಅಮೃತಮಹಲ್ ಕಾವಲು				
ಮೊಳಕಾಲುಮುರು	1	ಮೊಳಕಾಲುಮುರು	ಡಿಟೋ	ಮೊಳಕಾಲ್ಮುರು		
	2	ದೇವಸಮುದ್ರ				
	3	ಅಮೃತಮಹಲ್ ಕಾವಲು				

2. ಮೇಲ್ಕಂಡ ತಾರೀಖಿನಲ್ಲಿ ಮಧ್ಯಾಹ್ನದ ಲಾಗಾಯತು ಸಾಯಿಂಕಾಲದವರಿಗೂ ಹರಾಜ್ ಕ್ರಮ ಜರಿಗಿಸುವದು.

3. ಮೇಲ್ಕಂಡ ವಟ್ಟು ಸ್ವತಂತ್ರದ ಇಜಾರೆ ಹಕ್ಕು ಆಖೈರು ಚಡದಖಾಸ್ತುದಾರ್ರುಗಳಿಗೆ ಕೊಡಲ್ಪಡುವದು. ಆದರೆ ಯಾವ ದರಖಾಸ್ತನ್ನೇಆಗಲಿ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಸಹ ಹರಾಜು ನಡಿಸುವ ಆಫಿಸರವರು ಮೊಖ್ತ್ಯಾರ್ರಾಗಿ ಯಿದ್ದಾರೆ. ಪೋಟಾಪೋಟಿಯಲ್ಲಿ ನಿಲ್ಲುವ ಆಖೈರು ಚಡಸವಾಲು ಮೊಬಲಗು ಮೇಲ್ಕಂಡ ಯಂಟು ತಿಂಗಳು ಕಾಲದಲ್ಲಿ ಕಡಿದು ಜಮಾಯಿಸಿಕೊಳ್ಳಲ್ಪಡುವ ಚಕ್ಕೆಯ ಖರೀದಿಯಂದು ಭಾವಿಸಲ್ಪಡುತ್ತದೆ.

4. ಇಜಾರೆ ಮಾಡಬೇಕೆಂದು ಅಪೇಕ್ಷಿಸುವವರು ತಾವೇ ಖುದ್ದುಬಂದು ಹರಾಜಿನಲ್ಲಿ ಚಡಸವಾಲು ಮಾಡಬಹುದು ಅಥವಾ ತಮ್ಮಿಂದ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರನ್ನಾಗಲಿ ಕಳಹಿಸಬಹುದು. ಚಡ ಸವಾಲು ಮಾಡಲಪೇಕ್ಷೆವುಳ್ಳವರು ಖಾತರೀ ಬಗ್ಯಾಗಿ ಐವತ್ತು ರೂಪಾಯಿಗಳನ್ನು ಹರಾಜ್ ಕಾಲದಲ್ಲಿ ಹರಾಜ್ ಮಾಡುವ ಆಫಿಸರವರಲ್ಲಿ ಠೇವಣಿ ಇಡಬೇಕು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರು ಹಾಜರುಮಾಡಿದ್ದ ಡಿಪಾಜಿಟ್ಟು ಮೊಬಲಗನ್ನ ಹರಾಜ್ ಖೈದಾದ ಕೂಡ್ಲೆ ಡಿಪಾಜಿಟ್ಟುದಾರ್ರಿಗೆ ವಾಪಸು ಮಾಡಲ್ಪಡುತ್ತದೆ. ಅಂಗೀಕರಿಸಲ್ಪಟ್ಟ ಸವಾಲುದಾರ್ರುಗಳು ತಮ್ಮ ಸವಾಲಿನ ಪೊಟ್ಟು ಮೊಬಲಗಿನಲ್ಲಿ ಮೊದಲು ಹಾಜರ್ಮಾಡಿದ್ದ ಮೊಬಲಗು ಸೇರಿ ಕಾಲುಹಿಸ್ಸೆಯನ್ನು ಪಾವತಿ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಡಿಪಾಜಿಟ್ಟು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದೂ ಅಲ್ಲದೆ ಬಾಬನ್ನ ದುಸರಾ ಹರಾಜ್ ಮಾಡಿಸುವದರಲ್ಲಿ ಫುಂಟಾಗುವ ನಷ್ಟಕ್ಕೂ ಈತನನ್ನೇ ಗುರಿಮಾಡಲ್ಪಡುತ್ತದೆ.

5. ಮೇಲ್ಕಂಡ ಮೇರಿಗೆ ನಡಿಸಲ್ಪಡಬೇಕಾಗಿ ಬರುವ ಯರಡನೇ ಹರಾಜಿನಲ್ಲಿ ಮೊದಲಿನ ಹರಾಜ್ ಚಡದರಖಾಸ್ತಿಗಿಂತ ಮೊಬಲಗು ಜಾಸ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಮೊಬಲಗು ಕಮ್ಮಿಯಾದಲ್ಲಿ ಅಂಥಾ ಮೊಬಲಗನ್ನ ಅವಲ್ ಚಡದರಖಾಸ್ತುದಾರನಿಂದ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲು ಮಾಡಲ್ಪಡುತ್ತದೆ.

6. ಇಜಾರೆ ಬಾಬತು ಬಾಕಿ ಮುಕ್ಕಾಲು ಹಿಸ್ಸೆಯನ್ನ ಇದೇ ಇಸವಿ ಅಕ್ಟೋಬರ್ ಮಾಹೆ ಆಖೈರುವಳಗಾಗಿ ಖಜಾನೆಗೆ ಪಾಖ್ರ್ಮಾವಣಿ ಮಾಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ಠೇವಣಿಯು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ, ಅಲ್ಲದೆ ಚಕ್ಕೆ ಜಮಾಯಿಸುವ ಹಕ್ಕು ಸಹ ಪುನಃ ಹರಾಜು ಮಾಡಲ್ಪಡುತ್ತದೆ.

7. ಹರಾಜು ಮಂಜೂರಾದ ಮೂರು ದಿವಸಗಳೊಳಗಾಗಿ ಇಜಾರೆದಾರನು ಈ ಕೆಳಗೆ ನಮೂದಿಸುವ ಷರತ್ತುಗಳ ಪ್ರಕಾರ ನಡದುಕೊಳ್ಳತಕ್ಕ ಬಗ್ಯೆ ಬದ್ಧನಾಗಿ ಮುಚ್ಚಳಿಕೆ ಬರದುಕೊಡಬೇಕು.

8. ಮೇಲ್ಕಂಡ ಮೇರೆ ಪೂರ್ತಿ ಮೊಬಲಗು ಇರಸಾಲು ಆದ ನಂತರ ಈ ಕೆಳಗೆ ನಮೂದಿಸಿರುವ ಷರತ್ತುಗಳು ಕಂಡು ಸರಿಯಾದ ಕಿಮ್ಮತಿನ ಛಾಪಾಕಾಗದದಲ್ಲಿ ಇದೇ ಇಸವಿ ನವಂಬರು ಗುರ್ರೇ ತಾರೀಖಿನಲ್ಲಿ ಕರಾರು ಬರದುಕೊಟ್ಟು ಅನಂತರ ಬಾಬು ಸುಫರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳ್ಯಾವವೆಂದರೆ:—

(1) ಬಂದುವರುಷಕ್ಕಿಂತಲೂ ಎಳೇದಾದ ಗಿಡವನ್ನ ಕಡಿಯುವದಿಲ್ಲ.

(2) ಕಡಿಯುವ ವಿಶಿಷ್ಟ ತೋಟೂ ಮತ್ತು ರೆಂಬೆಗಳಲ್ಲಿರುವ ಚಕ್ಕೆಯನ್ನ ನಿಶ್ಶೇಷವಾಗಿ ತೆಗದುಕೊಳ್ಳುತ್ತೇನೆ. ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಚಕ್ಕೆಯನ್ನ ತೆಗಿಯದೆ ಬಿಡುವದಿಲ್ಲ.

(3) ಚಕ್ಕೆಯನ್ನ ತೆಗದ ನಂತರ ವಿಶಿಷ್ಟ ಸಾದೆಯೂ ಇಜಾರೆದಾರನಿಗೆ ಸೇರಿದ್ದೇ ಶಿವಾಯಿ ಸರ್ಕಾರಕ್ಕೆ ಸೇರಿದ್ದಲ್ಲ.

(4) ಡಿಸ್ಟ್ರಿಕ್ಟು ಫಾರೆಸ್ಟು ಅಫಿಸರವರು ಹುಕುಂ ಮಾಡುವ ಮೇರೆ ನಾನು ಸಾಗಿಸಿಕೊಂಡು ಹೋಗುವ ಪ್ರತಿ ಯೊಂದು ಗಾಡಿಯು ಚಕ್ಕೆಗೂ ಪ್ಯಾಸು ಪಡಿಯುತ್ತೇನೆ.

(5) ಡೆಪ್ಯುಟಿ ಕಮ್ಮಿಷನರು ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರೇ ಆಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ನೌಕರರೇ ಆಗಲಿ ಮೊಕರರು ಮಾಡುವ ಮೇರಿಗೆ ಕರಾರು ಅನುಸರಿಸಿ ಜಮಾಯಿಸಿಕೊಂಡು ಹೋಗುವ ಚಕ್ಕೆಗೆ ತಪ್ಸೀಲಾಗಿ ಲೆಖ್ಖ ಇಡುತ್ತೀನೆ ಅಲ್ಲದೆ ಈ ಬಾಬತು ಲೆಖ್ಖವನ್ನು ಡೆಪ್ಯುಟಿ ಕಮ್ಮಿಷನರು ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಇತರ ಆಫಿಸರು ಕೇಳಿದಾಗ್ಯೆ ತನಖೀಬಗ್ಯೆ ಹಾಜರುಮಾಡುತ್ತೇನೆ.

(6) ನಾನು ಜಮಾಯಿಸುವ ವಿಶಿಷ್ಟ ಚಕ್ಕೆಯನ್ನೂ 1897ನೇ ಇಸವಿ ಜೂನ್ ಆಖೈರವಳಗಾಗಿ ನನ್ನ ಇಜಾರೆ ತಾಲ್ಲೂಕಿನಿಂದ ಹೊರಗೆ ಸಾಗಿಸಿಕೊಂಡು ಹೋಗುತ್ತೇನೆ.

(7) ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳಲ್ಲಿ ಸಹ ನನ್ನಿಂದಾಗಲಿ ನನ್ನಕಡೆ ಜನಗಳಿಂದಾಗಲಿ ಬೆಂಕಿ ಅಪಾಯವೇ ಮೊದಲಾದ ಇನ್ನ್ಯಾವ ಕಾರಣಗಳಿಂದಾಗಲಿ ಖರೀದಿ ಬಾಳತಕ್ಕ ಮರಗಳು ಅಥವಾ ಫಸಲುಗಳು ನಾಶವಾದಲ್ಲಿ ಅದರಿಂದುಂಟಾಗುವ ನಷ್ಟಕ್ಕೆ ನಾನೇ ಜವಾಬು ಮಾಡಲು ಬದ್ಧನಾಗಿದ್ದೇನೆ.

(8) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ನಾನಾಗಲಿ ನನ್ನ ತರಫ್ ಜನಗಳಾಗಲಿ ಅತಿಕ್ರಮಿಸಿ ನಡದಲ್ಲಿ ನನ್ನ ಇಜಾರೆಯನ್ನ ರದ್ದುಮಾಡಬಹುದು. ಮತ್ತು ನಾನು ಅದುವರಿಗೆ ಜಮಾಯಿಸಿ ಹಾಜರು ಯಿಟ್ಟುಕೊಂಡು ಯಿರತಕ್ಕ ಚಕ್ಕೆಯನ್ನ ಸರ್ಕಾರದವರು ಜಫ್ತೀಮಾಡಬಹುದು.

ತಾರೀಖು 4ನೇ ಸೆಪ್ಟಂಬರ್ 1896.

ಯಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮ್ಮಿಷನರ್.

Mysore Govt. Central Press, Bangalore.—1896.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಸ್ ಆದ್ದು. [ನಂ. 37.

ಬೆಂಗಳೂರು, ಗುರುವಾರ, ಸೆಪ್ಟಂಬರ ತಾ॥ 17, ಸನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ ವ ಯಡ್ಯುಕೇಷನ ಇನಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

(ಪ್ರತಿ) ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 1ನೇ ಸೆಪ್ಟಂಬರ 1896.

ನಂ. 3122.—ಜು. 316, ಮೈಸೂರ ಗವರ್ನಮೆಂಟಿನವರು ಸಕಲ ಜನರ ತಿಳುವಳಿಕೆ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂಧರೆ,—1896ನೇ ಸೆಪ್ಟಂಬರ 15ನೇ ತಾರೀಖಿನ ಲಾಗಾಯತು ವ ಆ ತರುವಾಯು "ಶಿವಮೊಗ್ಗಾ ಸಬಾರ್ಡಿನೇಟ ಜಡ್ಜರ ಕೋರ್ಟು"ಯೆಂಬದಾಗಿ ಕರಿಯಲ್ಪಡತಕ್ಕ ಒಂದು ಸಬಾರ್ಡಿನೇಟ ಜಡ್ಜರ ಕೋರ್ಟು ಶಿವಮೊಗ್ಗೆಯಲ್ಲಿ ಸ್ಥಾಪಿಸಲ್ಪಡುವದು, ಮತ್ತು ಸದರೀ ಕೋರ್ಟಿಗಾಗಿ ಮೊಕರರ್ಮಾಡಲ್ಪಟ್ಟ ಸಬಾರ್ಡಿನೇಟ ಜಡ್ಜರು 1883ನೇ ಇಸವಿಯ ಮೈಸೂರ ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 9ನೇ ಸೆಕ್ಷನ ಅನುಸರಿಸಿ, ಒಬ್ಬ ಸಬಾರ್ಡಿನೇಟ ಜಡ್ಜರ ಅಧಿಕಾರವನ್ನು ಶಿವಮೊಗ್ಗಾ, ಕಡೂರು ವ ಚಿತ್ರದುರ್ಗ ರೆವಿನ್ಯೂ ಡಿಸ್ಟ್ರಿಕ್ಟುಗಳ ಸ್ಥಳ ಸರಹದ್ದುಗಳಲ್ಲಿ ಚಲಾಯಿಸತಕ್ಕದ್ದು.

ತಾರೀಖು 11ನೇ ಸೆಪ್ಟಂಬರ 1896.

ನಂ. 3518.—ಜು. 364, ಈ ಕೆಳಗೆ ಕಂಡ ಸಬಾರ್ಡಿನೇಟ ಜಡ್ಜಿಗಳ ವರ್ಗಾವರ್ಗಿಗಳೂ ಮತ್ತು ನೇಮಣೂಕಿಗಳೂ ಹುಕುಂ ಮಾಡಲ್ಪಟ್ಟಿರುತವೆ:—

ಮೆಸ್ಟರ ಎಂ. ರಾಮಸ್ವಾಮಿಅಯ್ಯರ, ಬಿ. ಏ., ಬಿ. ಎಲ್., ಯವರು ಶಿವಮೊಗ್ಗಾ ಸಬ ಜಡ್ಜರಾಗಿರತಕ್ಕದ್ದು. (ಅಷ್ಟಗ್ರಾಮದ ಡಿವಿಜನಿನ ಆಕ್ಟಿಂಗ್ ಡಿಸ್ಟ್ರಿಕ್ಟು ವ ಸೆಷನ್ಸ ಜಡ್ಜ ಕೆಲಸದ ಚಾರ್ಜನ್ನು ಒಪ್ಪಿಸಿದ ತರುವಾಯ ತಕ್ಷಣವೇ ಕೆಲಸಕ್ಕೆ ಹೋಗಿಶೇರತಕ್ಕದ್ದು.)

ಮೆಸ್ಸರ್ ಎಸ್. ಆರ್. ಸುಬ್ರಾಯಅಯ್ಯರ್ ಬಿ. ಎ., ಯವರು ಮೈಸೂರ್ ಸಬ್ ಜಡ್ಜರಾಗಿರತಕ್ಕದ್ದು. (ನಂದೀದುರ್ಗದ ಡಿವಿಜ ನಿನ ಆಕ್ಟಿಂಗ್ ಡಿಸ್ಟ್ರಿಕ್ಟ್ ವ ಸೆಷ್ಷನ್ಸ್ ಜಡ್ಜ್ ಕೆಲಸದ ಚಾರ್ಜನ್ನು ಒಪ್ಪಿಸಿದ ತರುವಾಯ ಕೆಲಸಕ್ಕೆ ಹೋಗಿ ಸೇರತಕ್ಕದ್ದು.)

ಮೆಸ್ಸರ್ ಎಸ್. ವೆಂಕಟವರದಯ್ಯಂಗಾರ್ ಯವರು ಬೆಂಗಳೂರ್ ಸಬ್ ಜಡ್ಜರಾಗಿರತಕ್ಕದ್ದು.

ನಂ. 3521.—ಜ್. 367, ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 203 (b)ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಮುನ್ಸಿಫ್ ಮೆಸ್ಸರ್ ಟಿ. ಜೆ. ವ್ಯಾಂಡರ್ಗ್ರೋ ಯವರಿಗೆ, 1896ನೇ ಸೆಪ್ಟಂಬರ್ 3ನೇ ತಾರೀಖು ಲಾಗಾಯತು ನಿಸ್ಸ್ತಲಬಿನ ಮೇಲೆ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ವ ಸೆಷ್ಷನ್ಸ್ ಕೋರ್ಟಿನ ಶಿರಸ್ತೇದಾರ್ ಮೆಸ್ಸರ್ ಬಿ. ಎಸ್. ವೈದ್ಯಲಿಂಗಮೊದಲಿಯಾರು, ಮೆಸ್ಸರ್ ವ್ಯಾಂಡರ್ಗ್ರೋ ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕಡೇ ಗ್ರೇಡಿನಲ್ಲಿ ಸಬ್ ಪ್ರೊಟೆಂ ತರ್ಕೆ ಮುನ್ಸಿಫ್‌ರಾಗಿ ಆಕ್ಟ್ ಮಾಡುವಂತೆ ಮೊಕರರ್ರಮಾಡಲ್ಪಟ್ಟು, 1896 [illegible] ಲೈ 21ನೇ ಮುರ್ಖ್ಖ 1159.—ಜ್. 117ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆ ಅನುಸರಿಸಿ, ಬೆಂಗಳೂರಿಗೆ ವರ್ಗಮಾಡ [illegible] ಸ್ಸರ್ ಬಿ. ಶ್ರೀನಿವಾಸರಾಯರಿಗೆ ಬದಲಾಗಿ ಚಿಕ್ಕಮಗಳೂರಿಗೆ ನಿಯಮಿಸಲ್ಪಟ್ಟಿರುತ್ತಾರೆ.

ತಾರೀಖು 31ನೇ ಆಗಸ್ಟ್ 1896.

ನಂ. 2362.—ರೆ. ಫೈ. 161–92, ಸ್ 1896ನೇ ಜುಲೈ 29ನೇ ಮುರ್ಖ್ಖಂ 1173.—ರೆ. ಫೈ. 161–92ನೇ ನಂಬರ್ ಇಸ್ತಿಹಾರನಾಮೆ ಅನುಸರಿಸಿ, ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುವದೇನಂದರೆ,—ಮೈಸೂರ್ ಸ್ಟೇಟ್ ಲೈಫ್ ಇನ್ಷ್ಯೂರೆನ್ಸಿಗೆ ಸಂಬಂಧಪಟ್ಟ ರೂಲ್ಸಿನ 6ನೇ ರೂಲಿಗೆ ಈ ಕೆಳಗೆ ಕಂಡದ್ದು ಬದಲಾಗಿ ಸೇರಿಸಲ್ಪಡತಕ್ಕದ್ದು:—

6. "ಈ ರೂಲುಗಳು ಜಾರಿಗೆ ಬಂದ ತರುವಾಯ ಮೈಸೂರ್ ಗವರ್ನಮೆಂಟ್ ನವುಕರಿಗೆ ದಾಖಲಾಗಬಹುದಾದ ದರೋಬಸ್ತು "ಜನಗಳೂ ಅವರು ಗವರ್ನಮೆಂಟ್ ನವುಕರಿಗೆ ದಾಖಲಾಗುವ ತಾರೀಖಿನಿಂದಲೂ ಅಥವಾ 21 ವರುಷಗಳ ವಯಸ್ಸಿನ ಪೂರ್ವವೇ "ಗವರ್ನಮೆಂಟ್ ನವುಕರಿಗೆ ಸೇರುವಂಥಾವರ ವಿಷಯದಲ್ಲಿ 20 ವರುಷ ಆರು ತಿಂಗಳುಗಳ ವಯಸ್ಸು ಪೂರೈಸಿದ ತಾರೀಖಿನಿಂದಲೂ, "ಅಪೂರ್ವ ಸಂದರ್ಭಗಳಲ್ಲಿ ಗವರ್ನಮೆಂಟಿನವರಿಂದ ಪ್ರತ್ಯೇಕವಾಗಿ ವಿನಾಯಿಸಲ್ಪಟ್ಟದ್ದು ಹೊರ್ತು, ಇನ್ಷ್ಯೂರೆನ್ಸ್ ಅವಶ್ಯಕವಾಗಿರತ "ಕ್ಕದ್ದು. 45 ವರುಷಗಳ ವಯಸ್ಸು ಮೀರಿದ ಯಾ 10 ರೂಪಾಯಿಗಳ ತಲಬಿಗೆ ಕೀಳ್ಪಟ್ಟ ಯಾವ ಆಫಿಸರರು ಮೊದಲಿನ ಯಾ ಆ "ತರುವಾಯದ ಇನ್ಷ್ಯೂರೆನ್ಸಿಗೆ ಅರ್ಹರಾಗಿರುವದಿಲ್ಲ."

ತಾರೀಖು 8ನೇ ಸೆಪ್ಟಂಬರ್ 1896.

ನಂ. 2708.—ರೆ. ಫೈ. 25.—96, ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ ಕೃಷ್ಣಸಿಂಗ್ ಯವರಿಗೆ, 1896ನೇ ಆಗಸ್ಟ್ 19ನೇ ಮುರ್ಖ್ಖಂ 1981.—ರೆ. ಫೈ. 25.—96ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ರಜಾ 1896ನೇ ಆಗಸ್ಟ್ 13ರ ಲಾಗಾಯತು 16ನೇ ಮುರ್ಖ್ಖಂ ವರಿವಿಗೆ (ಉಭಯದಿನಗಳೂ ಸೇರಿ) ಉಪಯೋಗಿಸಿಕೊಂಡದ್ದರಿಂದ ಉಪಯೋಗಿಸಿಕೊಳ್ಳದ ರಜಾಭಾಗ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 2711.—ರೆ. ಫೈ. 44.—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟ್ ಚಾಮರಾಜನಗರ ತಾಲ್ಲೂಕಿನ ಅಮಲ್ದಾರ್ ಕೃಷ್ಣಪ್ಪನವರಿಗೆ, 1896ನೇ ಆಗಸ್ಟ್ 31ನೇ ತಾರೀಖು ಲಾಗಾಯತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

2. ತಾಲ್ಲೂಕು ಶಿರಸ್ತೇದಾರು, ಸದರೀ ಅಮಲ್ದಾರು ರಜಾದ ಮೇಲಿದ್ದ ಕಾಲದಲ್ಲಿ ಸದರೀ ತಾಲ್ಲೂಕಿನ ಚಾಲ್ತಿ, ಕೆಲಸಗಳ ಚಾರ್ಜಿನಲ್ಲಿದ್ದರು.

ನಂ. 2771.—ರೆ. ಫೈ. 153.—95, ಚನ್ನರಾಯಪಟ್ಣ ತಾಲ್ಲೂಕು ಅಮಲ್ದಾರ್ ಬಿ. ಕೇಶವಯ್ಯಂಗಾರ್ರಿಗೆ, 1896ನೇ ಆಗಸ್ಟ್ 1ನೇ ಮುರ್ಖ್ಖಂ 1244.—ರೆ. ಫೈ. 153.—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಹದಿನೈದು ದಿನಗಳ ಕ್ಯಾಜುಯಲ್ ರಜಾ ಅದೇ ತಿಂಗಳ 12ನೇ ತಾರೀಖಿನ ಪುಧ್ಯಾನ್ಹಾತ್ಪರದ ಲಾಗಾಯತು ಉಪಯೋಗಿಸಿಕೊಂಡು 17ನೇ ತಾರೀಖಿನ ಪೂರ್ವಾನ್ಹದಲ್ಲಿ ಕೆಲಸಕ್ಕೆ ವಾಪಸುಬಂದ ಸಬಬು ಉಪಯೋಗಿಸಿಕೊಳ್ಳದ ರಜಾಭಾಗ ಯಿದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 9ನೇ ಸೆಪ್ಟಂಬರ್ 1896.

ನಂ. 2703.—ರೆ. ಫೈ. 46.—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟ್ ಯಕ್ಸ್ಟ್ರಾ ಅಸಿಸ್ಟೆಂಟ್ ಕಮ್ಮಿಷನರ ಮೆಸ್ಸರ್ ವಿ. ಶ್ರೀನಿವಾಸಾಚಾರ್ಲು ಯವರಿಗೆ, 1896ನೇ ಸೆಪ್ಟಂಬರ್ 4ನೇ ಮುರ್ಖ್ಖಂ ಲಾಗಾಯತು ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 2750.—ರೆ. ಫೈ. 47.—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 172ನೇ ಆರ್ಟಿಕಲ್ ಅನುಸರಿಸಿ, [illegible]ರ ಡಿಸ್ಟ್ರಿಕ್ಟ್ ಮೈಸೂರ್ ತಾಲ್ಲೂಕಿನ ಅಮಲ್ದಾರ್ ಎಸ್. ಕೃಷ್ಣಮೂರ್ತಿರಾಯರಿಗೆ, ಅವರು ಉಪಯೋಗಿಸಿಕೊಳ್ಳುವ ತಾ[illegible] ಲಾಗಾಯತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಶಿರಸ್ತೇದಾರ್ ನಾರಾಯಣರಾಯರು, ಸದರೀ ಅಮಲ್ದಾರ್ ಎಸ್. ಕೃಷ್ಣಮೂರ್ತಿರಾಯರು [illegible]ದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿದ್ದು ಮತ್ತು ಮೂರನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗಳು ಚಲಾಯಿಸತಕ್ಕದ್ದು.

ನಂ. 2768.—ರೆ. ಫೈ. 37.—96, ನೆಲಮಂಗಲ ತಾಲ್ಲೂಕು ಅಮಲ್ದಾರ್ ಸಿ. ರಾಜಗೋಪಾಲಾಚಾರ್ ಯವರಿಗೆ, 1896ನೇ ಸೆಪ್ಟಂಬರ್ 4ನೇ ಮುರ್ಖ್ಖಂ 2566.—ರೆ. ಫೈ. 37.—96ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಮೂರು ದಿನಗಳ ಕ್ಯಾಜುಯಲ್ ರಜಾ ಇನ್ನೂ ಐದುದಿನಗಳು ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 27ನೇ ಆಗಸ್ಟ್ 1896.

ನಂ. 2245.—ಫಾ. ಫೈ. 96.—95, ಸ್ತ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ, ಮೈಸೂರ್ ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ,—ಇದರಡಿಕಂಡ ಕೋಲಾರ್ ಡಿಸ್ಟ್ರಿಕ್ಟಿನಲ್ಲಿರುವ ಸರಹದ್ದು ವಿಂಗಡಿಸಿ ವ ವ್ಯವಸ್ಥೆ ಮಾಡಲ್ಪಟ್ಟ ಫಾರೆಸ್ಟುಗಳು ಮೇಲೆ ಹೇಳಲ್ಪಟ್ಟ ರೂಲ್ಸಿನ 1ನೇ ರೂಲ್ ಅನುಸರಿಸಿ, ಸ್ಟೇಟ್ ಫಾರೆಸ್ಟುಗಳಾಗಿ ವಿಂಗಡಿಸಲ್ಪಡ ತಕ್ಕದ್ದು;—

ತಾಲ್ಲೂಕು.	ಫಾರೆಸ್ಟಿನ ಹೆಸರು.	ಘುಮಾರು ವಿಸ್ತೀರ್ಣ.	ಚಕ್ಕುಬಂದಿ.
ಚಿಂತಾಮಣಿ ತಾಲ್ಲೂಕು ವ ಶ್ರೀನಿವಾಸಪುರ ಸಬ್ ತಾಲ್ಲೂಕ್	ರಾಯಲ್‌ಪಾಡ್ ಸ್ಟೇಟ್ ಫಾರೆಸ್ಟು, ಮುದುಮುಡುಗು ಸುಣಕಲ್ ಬ್ಲಾಕ್ ನಂ. I.	$21\frac{1}{3}$ ಚದುರ ಮೈಲಿಗಳು.	ಉತ್ತರಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಡಿಸ್ಟ್ರಿಕ್ಟು, ಹದ್ದು ವಿಂಗಡಿಸಲ್ಪಟ್ಟಲೈನು ಮುದುಮುಡುಗು ಗ್ರಾಮದ (ಸರ್ವೆ ನಂ. 144) ದೊಡ್ಡೇಶ್ವರ ಮಲೆಗುಟ್ಟದಿಂದ ಹೊರಟು ಸದರೀ ಗ್ರಾಮದ ಸರ್ವೆ ನಂ. 143, 142 ವ 345 ಇವುಗಳ ಕಡೆಗೂ ಹಾದು ಹೋಗುತ್ತದೆ. ಪೂರ್ವಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಮತ್ತು ಉತ್ತರ ಆರ್ಕಾಟು ಡಿಸ್ಟ್ರಿಕ್ಟುಗಳು, ಸದರೀ ಲೈನು ಗುಂಟಪಲ್ಲಿ ಗ್ರಾಮದ ಸರ್ವೆ ನಂ. 16ರ ಕಡೆಗೂ ಯಡೆಬಿಡದೆ ಹೋಗಿ, ಬೆಂಗಳೂರು ಕಡಪಾ ಹೈ ರೋಡಿನ ಮೂರು ಬಾಂದುಗಳು ವ ಎಲ್ಲೆಕಲ್ಲಿನ ಸಮೀಪ ಹಾದು ಮೇಲ್ಕಂಡ ಗ್ರಾಮದ ಸರ್ವೆ ನಂ. 17 ವ 18 ಮತ್ತು (ಸುಣಕಲ್ ಗ್ರಾಮದ) ಸರ್ವೆ ನಂ. 20, (ಜಿದಮಾಕಲಪಲ್ಲಿ ಗ್ರಾಮದ) ಸರ್ವೆ ನಂ. 47 ವ 52, (ಮುಲ್‌ಗೊಲ್‌ಪಲ್ಲಿ ಗ್ರಾಮದ) ಸರ್ವೆ ನಂ. 1 ಮತ್ತು (ಕೊಂಟಂಪಲ್ಲಿ ಗ್ರಾಮದ) ಸರ್ವೆ ನಂ. 100 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಹದ್ದು ವಿಂಗಡಿಸಲ್ಪಟ್ಟ ಲೈನು ಹಿಂದೆ ಹೇಳಿದ ಗ್ರಾಮದ ಸರ್ವೆ ನಂ. 85, (ಪಂದಿವಾರಪಲ್ಲಿ) ಸರ್ವೆ ನಂ. 15, (ಸಾತನೂರ) ಸರ್ವೆ ನಂ. 5, (ಕೊತ್ತಿಪೇಟೆ) ಸರ್ವೆ ನಂ. 57, 137, 127, 111, 112, 94 ವ 89 ಮತ್ತು ಮರಿಮಾಕಲಪಲ್ಲಿಯ ಸರ್ವೆ ನಂ. 47, ಕುರಪಲ್ಲಿಯ ಸರ್ವೆ ನಂ. 15 ಮತ್ತು ತುಪ್ಪಲ್ಲಿ ಗ್ರಾಮದ ಸರ್ವೆ ನಂ. 62 ಇವುಗಳ ಕಡೆಗೂ ಹೋಗಿ ಬೆಂಗಳೂರು ಕಡಪಾ ಹೈ ರೋಡಿನ 64ನೇ ಮೈಲಿ ಕಲ್ಲಿನಬಳಿ ಕೊನೆ ಮುಟ್ಟುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಬೆಂಗಳೂರು, ಕಡಪಾ ಹೈ ರೋಡು 68ನೇ ಮೈಲಿಕಲ್ಲಿನ ವರಿವಿಗೆ ಪಶ್ಚಿಮ ಸರಹದ್ದಾಗಿ, ಆ ತರುವಾಯ 4 ವ 5ನೇ ಫರ್ಲಾಂಗ್ ಕಲ್ಲುಗಳ ಮಧ್ಯೆ ಈ ರಸ್ತೆಯನ್ನು ದಾಟಿ, ಗುಂಟಪಲ್ಲಿಯ ಸರ್ವೆ ನಂ. 14, ತಿಮ್ಮಲಪಲ್ಲಿಯ ಸರ್ವೆ ನಂ. 26, ಮುಳ್ಳು ಮುತ್ತುಕಪಲ್ಲಿಯ ಸರ್ವೆ ನಂ. 1, ಮುದುಮುಡುಗಿನ ಸರ್ವೆ ನಂ. 140 ವ 141, ಬೊಡ್ಡಿಪಲ್ಲಿ ಗ್ರಾಮಗಳ ಸರ್ವೆ ನಂ. 19 ವ 1 ಇವುಗಳ ಕಡೆಗೂ ಹೋಗಿ, ಹೊರಟ ಸ್ಥಳವನ್ನು ಸೇರುತ್ತದೆ.
	ಬ್ಲಾಕ್ ನಂ. II, ವಲ್ಸಕೊಂಡ ಫಾರೆಸ್ಟು.	$7\frac{1}{7}$ ಚದುರ ಮೈಲಿಗಳು.	ಪೂರ್ವಕ್ಕೆ—ಹದ್ದು ವಿಂಗಡಿಸಲ್ಪಟ್ಟ ಲೈನು ಕೊತ್ತವಾರಪಲ್ಲಿಯ ಸರ್ವೆ ನಂ. 17ರಿಂದ ಹೊರಟು, ವೇಪಲಪಲ್ಲಿಯ ಸರ್ವೆ ನಂ. 20 ವ 119, ತಿಮ್ಮಲಪಲ್ಲಿಯ ಸರ್ವೆ ನಂ. 120 ವ 142 ಮತ್ತು ಮಂಜೇವಾರಪಲ್ಲಿ ಗ್ರಾಮಗಳ ಸರ್ವೆ ನಂ. 93 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಬಸವನಪಲ್ಲಿಯ ಸರ್ವೆ ನಂ. 22, ಗುಡಸ್ವಾರಪಲ್ಲಿಯ ಸರ್ವೆ ನಂ. 29, ಉಪ್ಪಾರಪಲ್ಲಿಯ ಸರ್ವೆ ನಂ. 42 ಮತ್ತು ಯರ್ರಂವಾರಪಲ್ಲಿ ಗ್ರಾಮಗಳ ಸರ್ವೆ ನಂ. 54 ಇವುಗಳ ಕಡೆಗೂ ಹೋಗುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಪತ್ತೂರ ಸರ್ವೆ ನಂ. 45, ತಂದ್ರಂಪಲ್ಲಿಯ ಸರ್ವೆ ನಂ. 26, ಬಲುತ್ತುಮಾರಿಯ ಸರ್ವೆ ನಂ. 11 ವ 107, ಕೊತ್ತಪಲ್ಲಿಯ ಸರ್ವೆ ನಂ. 36, 11, 10, 100, 99 ವ 50 ಮತ್ತು ಕುರಗಪಲ್ಲಿ ಗ್ರಾಮಗಳ ಸರ್ವೆ ನಂ. 81 ವ 96 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಡಿಸ್ಟ್ರಿಕ್ಟು, ಸದರೀ ಲೈನು ಕುರಗೇಪಲ್ಲಿಯ ಸರ್ವೆ ನಂ. 81 ವ 96, ವಾಣೀಶ್ವರಪಲ್ಲಿಯ ಸರ್ವೆ ನಂ. 52, ಕೊತ್ತಪಲ್ಲಿಯ ಸರ್ವೆ ನಂ. 50 ವ 99 ಮತ್ತು ಕೊತ್ತವಾರಪಲ್ಲಿ ಗ್ರಾಮಗಳ ಸರ್ವೆ ನಂ. 1 ಇವುಗಳ ಕಡೆಗೂ ಹೋಗಿ ಹೊರಟ ಸ್ಥಳವನ್ನ ಸೇರುತ್ತದೆ.
	ಬ್ಲಾಕ್ ನಂ. III, ವಾಲೇಶ್ವರಬೆಟ್ಟ ಫಾರೆಸ್ಟು.	$2\frac{5}{7}$ ಚದುರ ಮೈಲಿಗಳು.	ಪೂರ್ವಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಉತ್ತರ ಆರ್ಕಾಟು ಡಿಸ್ಟ್ರಿಕ್ಟು, ಹದ್ದು ವಿಂಗಡಿಸಲ್ಪಟ್ಟ ಲೈನು ಬಾವಲಪಲ್ಲಿಯ ಸರ್ವೆ ನಂ. 8ರಿಂದ ಹೊರಟು, ಕೋನಂಪಲ್ಲಿಯ ಸರ್ವೆ ನಂ. 40 ವ 28 ಮತ್ತು ಗುಟ್ಟಪಲ್ಲಿ ಗ್ರಾಮಗಳ ಸರ್ವೆ ನಂ. 34 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಗುಟ್ಟಪಲ್ಲಿಯ [illegible] ನಂ. 33 ವ 34, ಕೋನಂಪಲ್ಲಿಯ ಸರ್ವೆ ನಂ. 4, ಜೋ[illegible] ಸರ್ವೆ ನಂ. 10 ವ 56 ಮತ್ತು ಬಾಚವಾರ್‌ಪಲ್ಲಿ ಗ್ರಾಮಗಳ ಸರ್ವೆ [illegible] 47 ಇವುಗಳ ಕಡೆಗೂ ಹೋಗುತ್ತದೆ.

ತಾಲ್ಲೂಕು.	ಫಾರೆಸ್ಟಿನ ಹೆಸರು.	ಷುಮಾರು ವಿಸ್ತೀರ್ಣ.	ಚಕ್ಕುಬಂದಿ.
ಚಿಂತಾಮಣಿ ತಾಲ್ಲೂಕು ವ ಶ್ರೀನಿವಾಸಪುರ ಸಬ್ ತಾಲ್ಲೂಕು	ಬ್ಲಾಕ್ ನಂ. III, ವಾಲೇಶ್ವರ ಬೆಟ್ಟ ಫಾರೆಸ್ಟು.	$2\frac{5}{6}$ ಚದುರ ಮೈಲಿಗಳು.	ಪಶ್ಚಿಮಕ್ಕೆ—ಈ ಸ್ಥಳದಿಂದ ಅದು ಹಿಂದೆ ಹೇಳಿದ ಗ್ರಾಮದ ಸರ್ವೆ ನಂ. 16 ಮತ್ತು ಇಲದೊಣೆ ಗ್ರಾಮದ ಸರ್ವೆ ನಂ. 197 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಗುಂಜಾರಗೋನಪಲ್ಲಿಯ ಸರ್ವೆ ನಂ. 1, ಮೂಡಚವಾರಪಲ್ಲಿ ಗ್ರಾಮಗಳ ಸರ್ವೆ ನಂ. 35 ವ 45 ಇವುಗಳ ಕಡೆಗೂ ಹಾದು ಹೊರಟ ಸ್ಥಳವನ್ನ ಶೇರುತ್ತದೆ.
ಚಿಂತಾಮಣಿ	ಅಡಗಲ್ಲು ನೆಲವಂಕಿ ಜಂಗಲ್.	$5\frac{1}{3}$ ಚದುರ ಮೈಲಿಗಳು.	ಪೂರ್ವಕ್ಕೆ—ಹದ್ದು ವಿಂಗಡಿಸಲ್ಪಟ್ಟ ಲೈನು ಬುರ್ಗಮಾಕಲಪಲ್ಲಿ ಗ್ರಾಮದ ಸರ್ವೆ ನಂ. 44ರಿಂದ ಹೊರಟು ತೂಪಲ್ಲಿ ಗ್ರಾಮದ ಸರ್ವೆ ನಂ. 32ರ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಲೈನು ಅಲ್ಲಿಂದ ಹೊರಟು ಮಂಚಿನೀಳ್ಳು ಕೋಟೆಯ ಸರ್ವೆ ನಂ. 188, ಗೊಲ್ಲಪಲ್ಲಿಯ ಸರ್ವೆ ನಂ. 16, ಪಾತ ನೆಲವಂಕಿಯ ಸರ್ವೆ ನಂ. 18, ಸೋಣಪಲ್ಲಿಯ ಸರ್ವೆ ನಂ. 14 ವ 30, ಕುರಪಲ್ಲಿಯ ಸರ್ವೆ ನಂ. 69, ತಿಮ್ಮನಪಲ್ಲಿ ಗ್ರಾಮಕ್ಕೆ ಶೇರಿದ ಖರಾಬ್ ಜಮೀನ್ ವರಿವಿಗೂ ಮತ್ತು ಕೊಡಪಲ್ಲಿಯ ಸರ್ವೆ ನಂ. 17 ಇವುಗಳ ಕಡೆಗೂ ಹೋಗುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಹೊರಟು ದಿಗವಮಾರಂಪಲ್ಲಿಯ ಸರ್ವೆ ನಂ. 61, 67 ವ 64, ತಿಮ್ಮನಪಲ್ಲಿಯ ಸರ್ವೆ ನಂ. 26, 40, 66, 72 ವ 52 ಮತ್ತು ಕಂಬಲಪಲ್ಲಿಯ ಸರ್ವೆ ನಂ. 27 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ—ಈ ಸ್ಥಳದಿಂದ ಸದರೀ ಲೈನು ಹೊರಟು ತುಮ್ಮೂರುಪಲ್ಲಿಯ ಸರ್ವೆ ನಂ. 39, 28, 112, ಅಡಗಲ್ ಗ್ರಾಮದ ಸರ್ವೆ ನಂ. 87, 79, 189 ವ 156 ಇವುಗಳ ಕಡೆಗೂ ಹೋಗಿ ಹೊರಟ ಸ್ಥಳವನ್ನು ಶೇರುತ್ತದೆ.

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ತಾರೀಖು 28ನೇ ಆಗಸ್ಟ್ 1896.

ನಂ. 2855.—ನಂ. 487, ಗ್ವಾಲಿಯರ್ ರೆಸಿಡೆಂಟರವರಿಂದ ಮೈಸೂರ್ ರೆಸಿಡೆಂಟರವರ ಫಸ್ಟ್ ಅಸಿಸ್ಟೆಂಟರವರ ಮೂಲಕ ತಲ್ಪಿದ ಗ್ವಾಲಿಯರ್ ಸಂಸ್ಥಾನದಿಂದ ಕೊಡಲ್ಪಟ್ಟ ಈ ಕೆಳಗೆ ಕಂಡ ಇಸ್ತಿಹಾರು ಸಕಲ ಜನರ ತಿಳುವಳಿಕೆ ಬಗ್ಗೆ ಪ್ರಾಯಿಷ್ಮಾಡಲ್ಪಟ್ಟಿರುತ್ತೆ:—

ಇಸ್ತಿಹಾರ್.

ಉಜ್ಜನಿಯಲ್ಲಿ 1897ನೇ ಇಸವಿಯಲ್ಲಿ ನಡಿಯುವ ಸಿಹ್ನಸ್ತ ಮೇಲಾಕ್ಕೆ ವಿಶೇಷ ಜನ ಸಂಘವು ನಿರೀಕ್ಷಿಸಲ್ಪಟ್ಟಿರುತ್ತೆ. ಸನ್ 1885ನೇ ಇಸವಿಯಲ್ಲಿ ಪ್ರಾಪ್ತವಾಗಿದ್ದಂತೆ ಘೋರವಾದ ಕಲರಾ ಉಪದ್ರವವು ಸಾಧ್ಯವಾದ ಮಟ್ಟಿಗೆ ನಿರೋಧಪಡಿಸುವ ಬಗ್ಗೆ ಈ ಕೆಳಗೆ ಕಂಡ ಏರ್ಪಾಡುಗಳು ಪ್ರಜೆಗಳ ಕ್ಷೇಮಾರ್ಥವಾಗಿ ಹುಕುಂ ಮಾಡಲ್ಪಟ್ಟಿರುತವೆ, ಮತ್ತು ಅವುಗಳು ಖಂಡಿತವಾಗಿ ಆಚರಿಸಲ್ಪಡತಕ್ಕದ್ದು:—

I. 1897ನೇ ವರುಷದ ಸಿಹ್ನಸ್ತ ಮೇಲಾಕ್ಕೆ ಬರತಕ್ಕ ಯಾತ್ರಿಕರು ಉಜ್ಜನಿ ಪಟ್ಟಣವನ್ನ ಪ್ರವೇಶ ಮಾಡುವದರಿಂದಲೂ ಯಾ ಸಿಪ್ರಾನದಿಯ ಘಡಗಳಲ್ಲಿ ವಾಸಮಾಡುವದರಿಂದಲೂ ನಿರೋಧಿಸಲ್ಪಟ್ಟಿರುತ್ತಾರೆ.

II. ಪರಸ್ಪರ ಮತವಿರೋಧಿಗಳು ಅವರವರ ಸ್ನಾನಘಟ್ಟಗಳಿಗೆ ಹೋಗುವಾಗ್ಯೂ ಮತ್ತು ಬರುವಾಗ್ಯೂ ಉಸ್ತುವಾರಿಯಿಂದ ಒಯ್ಯಲ್ಪಡುವರು. ಮೇಲಾವಿನ ಚಾರ್ಜಿನಲ್ಲಿರುವ ಆಫೀಸರರಿಂದ ಕೊಡಲ್ಪಡುವ ಇಸ್ತಿಹಾರುಗಳಿಂದ ಮುಂದೆ ನಿರ್ಣಯಿಸಲ್ಪಡಬಹುದಾದ ಸ್ನಾನಘಟ್ಟಗಳಲ್ಲೂ ಮತ್ತು ಕಾಲಗಳಲ್ಲೂ ಮಾತ್ರ ಸಿಪ್ರಾ ನದಿಯಲ್ಲಿ ಸ್ನಾನ ಮಾಡತಕ್ಕದ್ದು.

III. ಯಾತ್ರಿಕರು ಮೇಲಾವಿನ ಚಾರ್ಜಿನಲ್ಲಿರುವ ಆಫೀಸರಿಂದ ಕೊಡಲ್ಪಡಬಹುದಾದ ಕರ್ಸರ್ವೇಸಿ ರೆಗ್ಯುಲೇಷನ್ಸುಗಳಿಗೆ ವಿಧೇಯರಾಗಿರತಕ್ಕದ್ದು.

IV. ಯಾತ್ರಿಕರು ಸಿಪ್ರಾನದಿಯ ಉದಕವನ್ನ ಪಾನಮಾಡುವ ಕೆಲಸಗಳಿಗಾಗಿ ಉಪಯೋಗಪಡಿಸಕೂಡದು. ಯಾತ್ರಿಕರಿಗೆ ನಿರ್ಮಲವಾದ ನೀರು ಸರಬರಾಯಿ ಮಾಡುವ ಬಗ್ಗೆ ಮೊದಲಿಗಿಂತಿರುವದಕ್ಕೆ ಜಾಸ್ತಿಯಾಗಿ ಸಾಕಾದ ಮಟ್ಟಿಗೆ ಭಾವಿಗಳು ಸಿದ್ಧಪಡಿಸಲ್ಪಡುವವು.

V. ಯಾತ್ರಿಕರು ಈ ಪಾನಮಾಡುವ ಭಾವಿಗಳಿಗೆ ಶೀದಾ ಪ್ರವೇಶ ಮಾಡಕೂಡದ್ದು. ಸರ್ಕಾರ್ ವಿಚಾರಣೆಗೆ ವಳಪಟ್ಟು ನೀರು ಬಟ್ಟೆಯ ಚೀಲಗಳ ಮೂಲಕವಾಗಿ ತೊಟ್ಟಿಗಳಲ್ಲಿ ಸೇದಿ ತುಂಬಿಸಲ್ಪಡುವದು. ಸದರೀ ತೊಟ್ಟಿಗಳಿಂದ ನೀರು ಅವುಗಳ ರಂಧ್ರಮೂಲಕ ತೆಗೆದುಕೊಳ್ಳಬೇಕು, ಇವುಗಳು ಸದರೀ ಕೆಲಸಕ್ಕಾಗಿ ಸರಕಾರದಿಂದ ನೇಮಿಸಲ್ಪಡುವ ಬ್ರಾಹ್ಮರ ವಶದಲ್ಲಿರತಕ್ಕದ್ದು.

VI. ಕೋರಿದಂತೆ ರೈಲ್ವೆ ಕಂಪೆನಿಯವರು ಯಾತ್ರಿಕರು ಇಳಿಯುವ ಸ್ಥಳಗಳಿಗೆ ಸೈಡಿಂಗ್ಸ್ಯಾನೆ ಕಟ್ಟಡಗಳನ್ನ ಕಟ್ಟುವ ಪಕ್ಷಕ್ಕೆ ಮೇಲಾಕ್ಕೆ ಬರುವ ಜನಗಳು ಉಜ್ಜನಿ ರೈಲ್ವೆ ಸ್ಟೇಷನಿನಲ್ಲಿ ಇಳಿಯುವದಕ್ಕೆ ಅವಕಾಶ ಕೊಡಲ್ಪಡಲಾರದು.

ಲಷ್ಕರ್ ತಾರೀಖು 3—7—96.

ಎಂ. ಜೆ. ರೋಸ್ಕೆ
ಗ್ವಾಲಿಯರ್ ಹುಜೂರ್ ದರ್ಬಾರ್,
ಚೀಫ್ ಸೆಕ್ರೆಟರಿ.

157

ಮೈಸೂರ್ ರೈಲ್ವೆ.

ಇಸ್ತಿಹಾರ್‌ನಾಮಾ.

ತಾರೀಖು 27ನೇ ಆಗಸ್ಟ್ 1896.

ನಂ. 479.—ಬೀರೂರಿಂದ ಶಿವಮೊಗ್ಗೆಗೆ ಷುಮಾರು $38\frac{1}{2}$ ಮೈಲಿಗಳ ಘಾಸಲೆ ರೈಲ್ವೇ ಲೈನು ಹಾಕುವ ಬಗ್ಯಾಗಿ ದರಖಾಸ್ತುಗಳು ಇದರಿಂದ ಅಪೇಕ್ಷಿಸಲ್ಪಡುತವೆ.

2. ಮಾಡಬೇಕಾಗಿರುವ ಪ್ರತಿ ತರಹೇದ ಕಾಮಗಾರಿಗೂ ದರಖಾಸ್ತುಗಳು "ರೇಟುಗಳ ಷೆಡ್ಯೂಲ್" ನಮೂನೆಯಲ್ಲಿ ಇರತಕ್ಕದ್ದು.

3. ಕಾಮಗಾರಿಯು ಮೂರುಭಾಗಗಳಾಗಿಯೂ ಬೆಂಕೀಪುರದ ಹೊಸಸೇತುವೆ ಮತ್ತು ಅದರ ಕಟ್ಟೆಗಳು ಪ್ರತ್ಯೇಕ ಕಂಟ್ರಾಕ್ಟಾಗಿಯೂ ಕೊಡಲ್ಪಡುವದು. ಸದರೀ ಕಾಮಗಾರಿಯಲ್ಲಿ ಪರ್ಮನೆಂಟ್ ವೇ ವ ಸ್ಟೇಷನ್ ಯಂತ್ರಗಳು ಹೊರತಾಗಿ ವಿಸಿಷ್ಟ ಕೆಲಸವೂ ಅಡಗಿರುವದು. ಅಪೇಕ್ಷಿಸುವ ಕಂಟ್ರಾಕ್ಟರುಗಳು ವಂದು ಭಾಗಕ್ಕೆ ಜಾಸ್ತಿಯಾಗಿ ಪ್ರತ್ಯೇಕ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.

4. ದರಖಾಸ್ತಿನ ನಮೂನೆಗಳು ಇದರಡಿ ರುಜು ಮಾಡಿರುವವರಿಗೆ ಲಿಖಿತಮೂಲಕವಾಗಿಯಾಗಲಿ ಯಾ ರೂಬರೂ ಆಗಲಿ ಕೇಳಿ ಪಡೆಯಬಹುದು.

5. ದರಖಾಸ್ತುಗಳು 1896ನೇ ಅಕ್ಟೋಬರ್ 1ನೇ ತಾರೀಖಿನ ಮಧ್ಯಾನ್ಹದಲ್ಲಾಗಲಿ ಯಾ ತತ್ಪೂರ್ವದಲ್ಲಾಗಲಿ ಈ ಕೆಳಗೆ ರುಜು ಮಾಡಿರುವವರಿಗೆ ತಲ್ಪತಕ್ಕದ್ದು.

6. ಕಂಟ್ರಾಕ್ಟಿನ ವಿಶೇಷ ಸಂಗತಿಗಳು ಮತ್ತು ಷರತ್ತುಗಳು ಮೈಸೂರು ರೈಲ್ವೆಗಳ ಗವರ್ನಮೆಂಟ್ ಸೆಕ್ರೆಟರಿಯವರ ಆಫಿಸಿನಲ್ಲಿ, ಆದಿತ್ಯವಾರಗಳು ಮತ್ತು ರಜಾ ದಿನಗಳು ಹೊರತಾಗಿ, 11 ಘಂಟೆಯಿಂದ 4 ಘಂಟೆ ವರಿಗಿನ ಮಧ್ಯೆ ಕಾಲಗಳಲ್ಲಿ ಪ್ರತಿದಿನವೂ ನೋಡಬಹುದು ಮತ್ತು ಸಮಾಚಾರ ಪಡೆಯಬಹುದು.

7. ಕಾಮಗಾರಿಗಳ ವಿಶೇಷ ಸಂಗತಿಯು ಮತ್ತು ಕಂಟ್ರಾಕ್ಟಿನ ಷರತ್ತುಗಳ ಅಚ್ಚುಹಾಕಲ್ಪಟ್ಟ ಪ್ರತಿಯು ಮೊದಲು ಹೇಳಿದ್ದಕ್ಕೆ ಹತ್ತು ರೂಪಾಯಿಗಳೂ ಮತ್ತು ತರುವಾಯ ಹೇಳಿದ್ದಕ್ಕೆ ಐದು ರೂಪಾಯಿಗಳೂ ತಲ್ಪಿದ ಮೇಲೆ ಕಳುಹಿಸಲ್ಪಡುವದು.

8. ಈ ಕೆಳಗೆ ರುಜು ಮಾಡಿರುವವರು ಕಮ್ಮಿಯಾದ ಯಾ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಹಾಗೆ ಮಾಡುವದಕ್ಕೆ ಕಾರಣಗಳು ತಿಳಿಸದೇನೇ ಉಳಿಸಿಕೊಂಡಿರುತ್ತಾರೆ.

ಹುಕುಂ ಬಮೋಜೀಬ್,

ಸಿ. ಬರ್ಕ್, ಕರ್ನಲ್,

ಮೈಸೂರ್ ರೈಲ್ವೆಗಳ ಗವರ್ನಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. XXXI. ಸರ್ಕಾರದಿಂದ ಛಾಯಿಸ್ ಆದ್ದು. [ನಂ. 37.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 17, ಸರ್ನ 1896.

IIನೇ ಭಾಗ.

ಇಂಡ್ಯಗೆವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ನಂದೀದುರ್ಗದ ಡಿವಿಜನ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ನ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 44.

ಮೃತಪಟ್ಟ ಚಿಕ್ಕಹನುಮಂತಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಅಕ್ಕೀಪೇಟೆಗೆ ಶೇರಿದ ರಾಜೇವಾರ್ ಪೇಟೆಯಲ್ಲಿ ಇರುವ ಹನುಮಯ್ಯನು, ಮೃತಪಟ್ಟ ಸದರೀ ಚಿಕ್ಕ ಹನುಮಂತಪ್ಪನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಅಕ್ಕೀಪೇಟೆಗೆ ಶೇರಿದ ರಾಜೇವಾರ್ ಪೇಟೇ ಸ್ಥಳದ ಹನುಮಯ್ಯನು, ರಾಜೇವಾರ್ ಪೇಟೇ ವಾಸಸ್ಥರಾಗಿ ಮೃತಪಟ್ಟ ಚಿಕ್ಕಹನುಮಂತಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ನ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

5. ಮೆಸ್ಟರ ಸಿ. ಅಪ್ಪಯ್ಯನವರು 3ನೇ ಕ್ಲಾಸ ಅಸಿಸ್ಟೆಂಟ ಕನಸರವೇಟರಿಂದ 2ನೇ ಕ್ಲಾಸ ಅಸಿಸ್ಟೆಂಟ ಕನಸರವೇಟರಿಗೆ.
6. ಮೆಸ್ಟರ ಕೆ. ಶಾಮಯ್ಯಂಗಾರ್ರು ಸಬ ಅಸಿಸ್ಟೆಂಟ ಕನಸರವೇಟರಿಂದ 3ನೇ ಕ್ಲಾಸ ಅಸಿಸ್ಟೆಂಟ ಕನಸರವೇಟರಿಗೆ.

ತಾರೀಖು 23ನೇ ಜೂನ 1896.

ನಂ. 13719.—ಜ. 1569, ಕ್ರಿಮಿನಲ ಪ್ರೊಸಿಡ್ಯೂರ ಕೋಡಿನ 357ನೇ ಸೆಕ್ಷನ ನಿಯಮಗಳನುಸರಿಸಿ, ತುಮಕೂರು 2ನೇ ಕ್ಲಾಸ ಮಾಜಿಸ್ಟ್ರೇಟ ವ ಅಸಿಸ್ಟೆಂಟ ಕಮ್ಮಿಷನರ ಮೆಸ್ಟರ ವಿ. ಶ್ರೀನಿವಾಸಾಚಾರ್ಲು ಯವರು, ಅವರಿಂದ ಪರ್ಯಾಪ್ತಿ ಮಾಡಲ್ಪಟ್ಟ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲಿಷ ಭಾಷೆಯಲ್ಲಿ ಸ್ವದಸ್ತೂರ ತೆಗದುಕೊಳ್ಳುವ ಬಗ್ಯೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ತಾರೀಖು 2ನೇ ಜುಲೈ 1896.

ನಂ. 68.—ಮಿ. ಫೈ. 65-93, ಮೈಸೂರ ಶ್ರೀಮನ ಮಹಾರಾಜರವರಿಗೆ ಉಪಾಧ್ಯಾಯರಾದ ಮೆಸ್ಟರ ಜೆ. ಜಿ. ವೈಟ್ಲಿಯವರಿಗೆ, 1896ನೇ ಜೂನ 1ನೇ ಮರ್ಸೂಂ 12987.—ಮಿ. 65—93ನೇ ನಂಬರ ಇಸ್ತಿಹಾರನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ ರಜಾವನ್ನ 1896ನೇ ಏಪ್ರೈಲ ಗುರ್ರೇ ಲಾಗಾಯತು ಉಪಯೋಗಿಸಿಕೊಂಡು 1896ನೇ ಜೂನ 20ನೇ ಮರ್ಸೂಮಿನ ಪೂರ್ವಾಹ್ನದಲ್ಲಿ ಪುನಃ ಕೆಲಸಕ್ಕೆ ವಾಪಸ ಬಂದಿರುವ ಸಬಬ ಉಪಯೋಗಿಸಿಕೊಳ್ಳದೇ ಉಳಿದ ರಜಾ ಭಾಗವು ರದ್ದು ಮಾಡಲ್ಪಟ್ಟಿರುತ್ತೆ.

ನಂ. 88.—ಮಿ. ಫೈ 3—93, ಒಂದನೇ ಕ್ಲಾಸ ಆಸ್ಪಿಟಲ ಅಸಿಸ್ಟೆಂಟ ಮೆಸ್ಟರ ರಂಗಣ್ಣ, ಎಲ್. ಎಂ. ವ ಎಸ್., ಯವರು 2ನೇ ಕ್ಲಾಸ ಆಕ್ಟಿಂಗ ಸಬ ಅಸಿಸ್ಟೆಂಟ ಸರ್ಜನರಾಗಿ ಸಬ ಪ್ರೋಟೆಂ ತರೀಕ ಮೊಕರರ್ಮಾಡಲ್ಪಟ್ಟಿರುತ್ತಾರೆ

ನಂ. 73.—ಮಿ. 12, ಗ್ರಾಮ ಉದ್ಯೋಗಸ್ಥರ ನಡವಳಿಕೆ ಬಗ್ಯಾಗಿ ಅವರಿಗೆ ಪೋಸ್ಟ ಆಫೀಸಿನ ಉದ್ಯೋಗಸ್ಥರು ಮತ್ತು ನೌಕರಮಾನೇರ ವಿಷಯದಲ್ಲಿರತಕ್ಕ ಸಂಬಂಧವನ್ನ ಕುರಿತ ಮದ್ರಾಸ ಪ್ರೆಸಿಡೆನ್ಸಿಯಲ್ಲಿ ಜಾರೀಲಿರುವ ಈ ಕೆಳಗೆ ಕಂಡ ರೂಲ್ಸು ಮೈಸೂರ ಸೀಮೆಗೆ ಲಗಾವ ಮಾಡಲ್ಪಟ್ಟು, ಸದರೀ ಸೀಮೆಯಲ್ಲಿರುವ ಗ್ರಾಮ ಉದ್ಯೋಗಸ್ಥರ ತಿಳುವಳಿಕೆ ಮತ್ತು ನಡವಳಿಕೆ ಬಗ್ಯಾಗಿ ಪ್ರಾಮಿಷ ಮಾಡಲ್ಪಟ್ಟಿರುತವೆ.

ರೂಲ್ಸ್.

1. ಕಾಗದಗಳನ್ನ ತೆಗೆದುಕೊಳ್ಳುವ ಬಗ್ಯೆ ಜಾಸ್ತಿ ಟಪ್ಪಾಲ ಪೆಟ್ಟಿಗೆಗಳನ್ನ ಸ್ಥಾಪಿಸುವದರಿಂದಲೂ ಮತ್ತು ಗ್ರಾಮ ಟಪ್ಪಾಲಿನವನನ್ನು ವಿಶಿಷ್ಟ ಗ್ರಾಮಗಳಿಗೆ, ಮುಖ್ಯವಾಗಿ ಟಪ್ಪಾಲ ಪೆಟ್ಟಿಗೆಗಳು ಇಟ್ಟಿರತಕ್ಕ ಸ್ಥಳಗಳಿಗೆ, ಬಹಳ ಕ್ರಮವಾಗಿ ಮತ್ತು ಸರಿಯಾಗಿ ಹೋಗಿ ನೋಡಿಕೊಳ್ಳುವ ಹಾಗೆ ಮಾಡುವದರಿಂದಲೂ ಬಹಳ ದೂರವಾದ ಗ್ರಾಮಗಳಲ್ಲಿ ಟಪ್ಪಾಲ ಸಾಕರ್ಯಗಳನ್ನು ವಿಸ್ತರಿಸುವದಕ್ಕೆ ಪೋಸ್ಟಲ ಇಲಾಖೆಯವರಿಂದ ಪ್ರಯತ್ನಗಳು ಮಾಡಲ್ಪಡುತಲಿವೆ.

2. ಹೊಸ ಟಪ್ಪಾಲ್ ಪೆಟ್ಟಿಗೆಗಳು ರೂಲ್ ಮೇರೆ ಗ್ರಾಮ ಮೊಖ್ತೇಸರರ ವಶದಲ್ಲಿ ಯಿಡಲ್ಪಡುವವು, ಅಂದರೆ ಪೆಟ್ಟಿಗೆಗಳು ಅವರ ಮನೆಗಳ ಮುಂದೆ ಎಲ್ಲರಿಗೂ ಬಳಕೆಯಾಗಿರತಕ್ಕ ಸ್ಥಳಗಳಲ್ಲಿ ಭದ್ರಪಡಿಸಲ್ಪಡುವವು. ಅವರುಗಳು ಅವುಗಳನ್ನ ತೆಗಿಯಬೇಕಾದ ಯಾ ಅವುಗಳಲ್ಲಿರತಕ್ಕವುಗಳನ್ನ ವ್ಯವಸ್ಥೆ ಮಾಡಬೇಕಾದ ಅವಶ್ಯಕ ವಿರುವದಿಲ್ಲ. ಇದು ಸದರೀ ಟಪ್ಪಾಲ್ ಪೆಟ್ಟಿಗೆಗಳ ಬೀಗದ ಕೈಗಳನ್ನ ಯಿಟ್ಟುಕೊಂಡಿರುವ ಟಪ್ಪಾಲಿನವರಿಂದ ಮಾಡಲ್ಪಡುವದು. ಗ್ರಾಮ ಟಪ್ಪಾಲಿನವರು ಗ್ರಾಮಗಳಿಗೆ ಬರುವದರಲ್ಲಿ ಸರಿಯಾಗಿ ವ ಕ್ರಮವಾಗಿ ಯಿರುವದಕ್ಕೂ ಮತ್ತು ಸದರೀ ಟಪ್ಪಾಲು ಪೆಟ್ಟಿಗೆಗಳನ್ನ ಅವುಗಳ ಮೇಲೆ ತಿಳಿಸಲ್ಪಟ್ಟ ವಾರದ ಆಯಾ ದಿನಗಳಲ್ಲಿ ತೆರಪು ಮಾಡಿದ್ದಕ್ಕೂ ಮತ್ತು ಹಾಗೆ ಮಾಡದಿದ್ದರೆ ಪೋಸ್ಟ್ ಆಫೀಸುಗಳ ಇನ್ಸ್‌ಪೆಕ್ಟರಿಗಾಗಲಿ ಯಾ ತಪ್ಪಿತಸ್ಥನಾದ ಗ್ರಾಮ ಟಪ್ಪಾಲಿನವನು ಸಂಬಂಧಪಟ್ಟ ಆಫೀಸಿನ ಸಬ್ ಪೋಸ್ಟ್ ಮಾಸ್ಟರಿಗಾಗಲಿ ಲಿಖಿತಮೂಲಕ ಯಾ ದೋಷರೂಪಕವಾದ ಅಕ್ರಮದ ಸ್ವಭಾವವನ್ನ ವಿಜಿಟ್ ಬುಕ್ಕಿನಲ್ಲಿ ಸಂಕ್ಷೇಪವಾಗಿ ಗುರ್ತು ಮಾಡುವದರ ಮೂಲಕ ರಿಪೋರ್ಟು ಮಾಡಲಿಕ್ಕೂ ಗ್ರಾಮ ಮೊಖ್ತೇಸರರು ಜವಾಬ್ದಾರರಾಗಿರತಕ್ಕದ್ದು. ಟಪ್ಪಾಲಿನವರು ಇದಕ್ಕಾಗಿ ವಿಜಿಟ್ ಬುಕ್ಕುಗಳನ್ನ ಸರಬರಾಯಿ ಮಾಡಲ್ಪಡುವರು, ಅದರಲ್ಲಿ ಪ್ರತಿ ಗ್ರಾಮದ ಮೊಖ್ತೇಸರನೂ ತನ್ನ ಹೆಸರನ್ನ ರುಜು ಮಾಡತಕ್ಕದ್ದು ಮತ್ತು ಸಾಧ್ಯವಾದ ಮಟ್ಟಿಗೂ ತಕ್ಕ ಕಾಲದಿನಲ್ಲಿ ಬಂದ ತಾರೀಖನ್ನು ಗುರ್ತು ಮಾಡತಕ್ಕದ್ದು. ಏನಾದರೂ ಅಕ್ರಮಗಳು ಅಂದರೆ, ನಿಯಮಿಸಲ್ಪಟ್ಟ ತಾರೀಖಿನಲ್ಲಿ ಗೈರ್ ಹಾಜರಾಗುವಣ, ತನ್ನ ವಿಜಿಟ್ ಬುಕ್ಕನ್ನು ಹಾಜರ್ಮಾಡಲಿಕ್ಕೆ ತಪ್ಪುವಣ, ಯಾ ಇಂಥಾವುಗಳು ಕಂಡು ಬಂದರೆ ಕೂಡ್ಲೆ ಮೊಖ್ತೇಸರನು ಅವುಗಳನ್ನ ಮೇಲ್ಕಂಡ ಆಫೀಸರುಗಳ ತಿಳುವಳಿಕೆಗೆ ತರತಕ್ಕದ್ದು. ಟಪ್ಪಾಲ್ ಅಧಿಕಾರಿಗಳಿಗೆ ಟಪ್ಪಾಲ್ ವಿಷಯಕವಾದ ತಿಳುವಳಿಕೆಗಳನ್ನ ಲಕ್ಕೋಟೆಯ ಮೇಲೆ "ಟಪ್ಪಾಲ್ ಸರ್ಕಾರ್" ಎಂಬ ಮಾತುಗಳನ್ನು ಮೇಲ್ ವಿಳಾಸ ಬರೆದು ಮತ್ತು ಗ್ರಾಮ ಮುಖ್ಯಸ್ಥನು ಯಡಗಡೆ ಕೊನೆಯ ಕೆಳಭಾಗದಲ್ಲಿ ರುಜು ಮಾಡಿ ಟಪ್ಪಾಲ್ ಹಾಸಲಿಲ್ಲದೆ ರವಾನಿಸಬಹುದು.

3. ಟಪ್ಪಾಲ್ ರನ್ನರ್‌ಗಳು ಹಳ್ಳಗಳು, ಪ್ರವಾಹಗಳು, ವಗೈರೆಗಳಲ್ಲಿ ಟಪ್ಪಾಲ್‌ಗಳನ್ನ ಸಾಗಿಸುವದಕ್ಕೆ ಅನುಕೂಲ ಪಡಿಸುವ ಬಗ್ಯಾಗಿ ಸಹಾಯವನ್ನ ಸಪೇಕ್ಷಿಸುವಾಗ ರನ್ನರ್‌ಗಳು ಹೋಗುವ ರಸ್ತೆಯ ಉದ್ದಕ್ಕೂ ಸಮೀಪದಲ್ಲಿರುವ ಗ್ರಾಮಗಳ ಮುಖ್ಯಸ್ಥರು ಅವರುಗಳಿಗೆ ವಿಶಿಷ್ಟ ಸಹಾಯವನ್ನೂ ಕೊಡಬೇಕು. ಪೋಸ್ಟಲ್ ಇಲಾಖೆಯ ಮೇಲ್ಪಟ್ಟ ಆಫೀಸರುಗಳು ಯಾವ ಗ್ರಾಮವನ್ನಾಗಲಿ ನೋಡಲು ಬಂದಾಗ ಅವರಿಗೆ ಬೇಕಾಗಬಹುದಾದ ವಿಶಿಷ್ಟ ಸಹಾಯವನ್ನೂ ಮತ್ತು ವರ್ತಮಾನವನ್ನೂ ಕೊಡಬೇಕು.

4. ಪೋಸ್ಟಲ್ ಅಧಿಕಾರಿಗಳಿಗೆ ಸಹಾಯವನ್ನು ಮತ್ತು ಟಪ್ಪಾಲಿನವರು, ರನ್ನರ್‌ಗಳು, ವಗೈರೇರ ಕೆಲಸಗಳಿಗಾಗಿ ನಂಬಿಕೆಯಾದ ವ ಲಾಯಖಾದ ಜನಗಳನ್ನ ಚುನಾಯಿಸುವ ಬಗ್ಯೆ ವರ್ತಮಾನವನ್ನು ಗ್ರಾಮ ಆಫೀಸರುಗಳು ಕೇಳಲ್ಪಟ್ಟಾಗ ಕೊಡಬೇಕು, ಅವರುಗಳು ಗ್ರಾಮ ಟಪ್ಪಾಲಿನವರಿಗೆ ಮನಿಆರ್ಡರುಗಳ ಪಾವತೀದಾರರನ್ನ ಗುರುತು ಹಿಡಿಯುವದರಲ್ಲಿಯೂ ಮತ್ತು ಅವರ ರೂಬರೂ ಹಣ ಪಾವತಿಯಾದರೆ ಹಾಗೆ ಪಾವತಿಯಾದ್ದಕ್ಕೆ ಸಾಕ್ಷಿಭೂತವಾಗಿ ರುಜು ಮಾಡಲಿಕ್ಕೂ ಸಹ ಸಹಾಯಮಾಡಬೇಕು.

5. ಗ್ರಾಮ ಟಪ್ಪಾಲಿನವರು ಮನಿಆರ್ಡರುಗಳ ಪಾವತಿಗಾಗಿ ಅವರ ಸ್ವಾಧೀನದಲ್ಲಿ ಮೊಬಲಗು ಸಮೇತ ಪ್ರಯಾಣ ಮಾಡುವಾಗ ಯಾವ ಗ್ರಾಮದಲ್ಲಾದರೂ ರಾತ್ರಿಕಾಲದಲ್ಲಿ ತಂಗಬೇಕಾಗಿ ಬಂದಲ್ಲಿ ರಾತ್ರಿಕಾಲದಲ್ಲಿ ಮೊಬಲಗನ್ನ ಬಂದೋಬಸ್ತಿನಿಂದ ಕಾಪಾಡತಕ್ಕ ವಿಷಯದಲ್ಲಿ ಸಹಾಯ ಕೇಳಲ್ಪಟ್ಟರೆ ಗ್ರಾಮ ಮುಖ್ಯಸ್ಥನು ತನಗೆ ಸಾಧ್ಯವಾದ ಮಟ್ಟಿಗೆ ಅವರುಗಳಿಗೆ ಸಹಾಯಮಾಡಬೇಕು.

ತಾರೀಖು 3ನೇ ಜುಲೈ 1896.

ನಂ. 126.—ಮಿ. ಫೈ. 48—92, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಒಂದು ಗವರ್ನಮೆಂಟ್ ಟೆಲಿಗ್ರಾಫ್ ಆಫೀಸು (ಅಂಚೆ ಮತ್ತು ಟೆಲಿಗ್ರಾಫ್ ಕೂಡಿಸಿ) ನಂಜಿನಗೂಡಿನಲ್ಲಿ 1896ನೇ ಜೂನ್ 21ನೇ ಮಾರ್ಚ್ಕಾಮಿನಲ್ಲಿ ಸ್ಥಾಪಿಸಲ್ಪಟ್ಟಿರುತ್ತೆ.

ತಾರೀಖು 6ನೇ ಜುಲೈ 1896.

ನಂ. 2227.—ಮಿ. 51, ಸನ್ 1890ನೇ ಇಸವಿಯ VIನೇ ಮೈಸೂರ್ ಆರಂಸ್ ರೆಗ್ಯುಲೇಷನಿನ 22ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರವನ್ನ ಚಲಾಯಿಸುವದರಲ್ಲಿ ಸದರೀ ರೆಗ್ಯುಲೇಷನಿನ 8, 9, 10 ವ 11ನೇ ಸೆಕ್ಷನ್‌ಗಳಲ್ಲಿ ಅಡಗಿರುವ ವಿಶಿಷ್ಟ ನಿಬಂಧಗಳು ಮತ್ತು ನಿರೂಪಣೆಗಳಿಂದ ಕೆಲವು ಜನಗಳನ್ನು ಮೈಸೂರ್ ಸೀಮೆಯಲ್ಲಿ ಬಿಡುಗಡೆ ಮಾಡುವ 1896ನೇ ಏಪ್ರಿಲ್ 27ನೇ ಮುಕ್ಕಾಂ 12079.—ಮಿ. 1730ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿ ಮಾಡಿರುವ ಮೇರೆ 1895ನೇ ಮೇ 1ನೇ ಮುಕ್ಕಾಂ 1ನೇ ನಂಬರ್ (ಜನರಲ್) ಇಸ್ತಿಹಾರ್‌ನಾಮೆಯ 1ನೇ ಪ್ಯಾರಾವಿನ (II)ನೇ ಕ್ಲಾಜಿನಲ್ಲಿರುವ "ಎಲ್ಲಾ ಟಪ್ಪಾಲ್ ರನ್ನರ್‌ಗಳೂ" ಎಂಬ ಮಾತುಗಳ ತರುವಾಯ "ಮತ್ತು ಗ್ರಾಮ ಟಪ್ಪಾಲಿನವರು" ಎಂಬ ಮಾತುಗಳನ್ನು ಸೇರಿಸುವ ಬಗ್ಯೆ ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ.

ನಂ. 235.—ಜ. 20, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿಸ್ಟರ್ ಎಂ. ನಂಜರಾಜ ಅರಸಿನವರಿಗೆ, 1896ನೇ ಏಪ್ರಿಲ್ 16ನೇ ಮುಕ್ಕಾಂ ಕ್ಯಾಂಪ್ 150ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಹತ್ತು ದಿನಗಳ ಕ್ಯಾಜುಯಲ್ ರಜಾವನ್ನ ಅವರು ಉಪಯೋಗಿಸಿಕೊಳ್ಳದ ಸಬಬು ಅದನ್ನ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 16ನೇ ಜೂನ್ 1896.

ನಂ. 10945.—ರೆ. ಫೈ. 138—95, ತಿರುಮುಕೂಡ್ಲು ನರಸೀಪುರದ ತಾಲ್ಲೂಕು ಅಮಲ್ದಾರ್ ಜಿ. ಹನುಮಂತರಾಯರಿಗೆ, 196ನೇ ಜೂನ್ 10ನೇ ಮುಕ್ಕಾಂ 10770.—ರೆ. 4249ನೇ ನಂಬರ್ ಗವರ್ನಮೆಂಟ್ ಇಸ್ತಿಹಾರಿನ ಮೇರೆ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾ ಇನ್ನೂ ಎರಡು ತಿಂಗಳು ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 18ನೇ ಜೂನ್ 1896.

ನಂ. 11059.—ಫಾ. ಫೈ. 61—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ,ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟುಗಳ ಡೆಪ್ಯುಟಿ ಕನ್ಸರ್ವೇಟರ್ ಮಿಸ್ಟರ್ ಸಿ. ನಾರಾಯಣರಾಯರಿಗೆ, 1896ನೇ ಜೂನ್ 10ನೇ ತಾರೀಖಿನಾರಭ್ಯ ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 11062.—ಫಾ. ಫೈ. 123—95, ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರ್ ಮಿಸ್ಟರ್ ಸಿ. ಅಪ್ಪಯ್ಯನವರಿಗೆ, 1896ನೇ ಮೇ 15ನೇ ಷುರ್ಕ್ಕಂ 9973.—ಫಾ. ಫೈ. 123—95ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾವನ್ನ ಮೇ 13ನೇ ಮಾರ್ಕ್ಕುಯಿನ ಪೂರ್ವಾಹ್ನದಾರಭ್ಯ ಉಪಯೋಗಿಸಿಕೊಂಡು 1896ನೇ ಜೂನ್ 6ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದ ಸಬಬ್ ಉಪಯೋಗಿಸಿಕೊಳ್ಳದೆ ಉಳಿದ ರಜಾ ಭಾಗ ಅಂದರೆ ಏಳು ದಿನಗಳು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 23ನೇ ಜೂನ್ 1896.

ನಂ. —ಇದರಿಂದ ಪ್ರಸಿದ್ಧಪಡಿಸುವದೇನಂದರೆ,–1894ನೇ ಇಸವಿಯ VIIನೇ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಇದರಡಿ ಕಂಡ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ, ಬೆಂಗಳೂರು ಸಿಟಿಯ ಸದರ್ನ್ ಮಹಾರಾಟ್ಟಾ ರೈಲ್ವೆ ಗೂಡ್ಸ್ ಷೆಡ್ ಬಡಾಯಿಸುವ ಬಗ್ಯಾಗಿ ಅವಶ್ಯಕವಾಗಿರುತವೆ.

ನಂಬರು.	ಮಾಲೀಕರು ಯಾ ಅನುಭವದಾರರು ಹೆಸರುಗಳು.	ಬೀಜವರಿ.			ಷರಾ.
		ಚದುರಡಿಗಳು.	ಎಕರೆಗಳು.	ಗುಂಟೆಗಳು.	
1	ಹೇಮಾಶಾಮಯ್ಯ, ಅನುಭವದಾರ ಕವಾಡಿಗರ ಮರಿಯಪ್ಪ ..	11,533½	..	10½	ತೊಲೆಗಳನ್ನು ಕುಯ್ಯುವದಕ್ಕೆ ಉಪಯೋಗಿಸಿರುವ ಗುಣಿ.
2	ಷಾಪುನಾರಾಣಶೆಟ್ಟಿ ..	6,970	..	6½	ಮೈದಾನು (ಖಾಲಿಜಾಗ).
3	ಮೇಸ್ತ್ರೀನಾರಾಯಣಪ್ಪನ ಛತ್ರ ..	7,476	..	6¾	ಸರಹದ್ದು ಗೋಡೆಯು ಕಲ್ಲಿನಿಂದ ಕಟ್ಟಲ್ಪಟ್ಟಿಧೆ. ವಠಾರದಲ್ಲಿ 46 ಅಂಕಣಗಳ ಹಂಚಿನಮನೆಯಿಧೆ.
4	ಸೆಟ್ಟೂರು ಕೃಷ್ಣಯ್ಯಂಗಾರ್, ಅನುಭವದಾರು ವೆಂಚೇಪಲ್ಲಿ ನಂಜುಂಡಪ್ಪ ಮತ್ತು ಮರಿಯಪ್ಪ ..	9,126¼	..	8¼	ಮೈದಾನು (ಖಾಲಿಜಾಗ).
5	ಮೇಸ್ತ್ರಿ ಮರಿಯಪ್ಪನವರ ಛತ್ರ ..	19,737	..	18¼	ಸರಹದ್ದು ಗೋಡೆಗಾಗಿ ಕಲ್ಲುಚಪ್ಪಡಿಗಳು ಭೂಮಿಯಲ್ಲಿ ಹೂಳಲ್ಪಟ್ಟಿರುತ್ತವೆ ವಠಾರದಲ್ಲಿ 18 ಅಂಕಣಗಳ ಕಲ್ಲು ಮತ್ತು 32 ಅಂಕಣಗಳ ಹಂಚಿನ ಕಟ್ಟಡಗಳು ಯಿರುತವೆ.
6	ಶೇಷಗಿರಿರಾವ್, ಅನುಭವದಾರ್ ಯಂಗಣ್ಣ ಚಟ್ಟಿ ..	16,514¼	..	15¼	ಮೈದಾನು (ಖಾಲಿಜಾಗ). ಒಂದು ಹುಣಸೇಮರವಿದೆ.
7	ವೆಂಕಟೇಶಯ್ಯ ಮತ್ತು ಇತರರು, ಅನುಭವದಾರ್ ರಾಮಣ್ಣನ ಲಿಂಗಣ್ಣ.	12,240	..	11½	ಮೈದಾನು (ಖಾಲಿಜಾಗ).
8/1	ಯಂಗಣ್ಣ ಚಟ್ಟಿ ..	7,353¾	..	6¾	ಡಿಟ್ಟೋ.
8/2	ನರಹರಿರಾವ್, ಸ್ಕೂಲ್‌ಮಾಸ್ಟರ್ ..	7,353¾	..	6¾	ಡಿಟ್ಟೋ.
9	ಪುಟ್ಟಣ್ಣನ ಛತ್ರ ..	18,471	..	17	ಉತ್ತರ ಮತ್ತು ದಕ್ಷಿಣ ಗೋಡೆಗಳು ಕಲ್ಲುಚಪ್ಪಡಿಗಳಿಂದಲೂ, ಪೂರ್ವಕ್ಕೆ ಯಿಟ್ಟಿಗೆಯಿಂದಲೂ, ಪಶ್ಚಿಮಕ್ಕೆ ಕಲ್ಲಿನಿಂದಲೂ, ಕಟ್ಟಲ್ಪಟ್ಟಿವೆ, ವಠಾರವು 12 ಅಂಕಣ ಹಂಚುಗಳ, 7 ಅಂಕಣ ಕಲ್ಲಿನ ಮತ್ತು 24 ಅಂಕಣ ಮಣ್ಣಿನ ಮಾಳಿಗೆಯ ಕಟ್ಟಡಗಳು ವುಂಟಾಗಿವೆ.
10	ಮುತ್ತಿನ ಕಂಟಿಸ್ವಾಮಿಮಠ ..	23,061¼	..	21	ಕಲ್ಲಿನ ಸರಹದ್ದುಗೋಡೆಯಿದೆ, ವಠಾರದಲ್ಲಿ 9 ಅಂಕಣ ಕಲ್ಲಿನ ಮತ್ತು 10 ಅಂಕಣ ಹಂಚಿನ ಕಟ್ಟಡಗಳುಯಿವೆ.
11/1	ಚನ್ನಪಟ್ಟಣ ಶ್ರೀಪಾದರಾವ್, ಅನುಭವದಾರ್ ರಾಮಣ್ಣನ ಲಿಂಗಣ್ಣ ..	10,665	..	9¾	ಮೈದಾನು (ಖಾಲಿಜಾಗ).
11/2	ಬಾಲಕೃಷ್ಣರಾವ್, ಅನುಭವದಾರ್ ಯಂಗಣ್ಣ ಚಟ್ಟಿ ..	10,665	..	9¾	ಡಿಟ್ಟೋ.
12	ಗವರ್ನಮೆಂಟ್ ..	153,791	3	21	ಯಿದರಲ್ಲಿ ಒಂದು ಹಂಚಿನಮಾಳಿಗೆ ಯಿದೆ.
13	ಡಿಟ್ಟೋ ..	14,298	..	13	ಯಿದರೊಳಗೆ ಕಲ್ಲಿನಿಂದ ಕಟ್ಟಲ್ಪಟ್ಟ ಒಂದು ಛತ್ರವೂ ಮತ್ತು ಒಂದು ಆಕ್ಟ್ರಾಯಿ ಚಾವಡಿಯೂ ಸಹ ಯಿದೆ.
	ಪಬ್ಲಿಕ್‌ರಸ್ತೆ ..	..	1	10	ರಸ್ತೆ.
	ಅಡ್ಡರಸ್ತೆ ..	..	..	20	ಅಡ್ಡರಸ್ತೆ.
	ಜುಮ್ಲಾ....	..	9	12¼	

ತಾರೀಖು 2ನೇ ಜೂನ್ 1896.

ನಂ. 10599.—ಫೊ. ಫೈ. 38—95, ಸನ್ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ ಮೈಸೂರ ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಚಕ್ಕುಬಂದಿ ಮಾಡಲ್ಪಟ್ಟು ಮತ್ತು ವ್ಯವಸ್ಥೆ ಮಾಡಲ್ಪಟ್ಟ ಪ್ಲಾಂಟೇಷನ್‌ಗಳು ಮೇಲೆ ಹೇಳಲ್ಪಟ್ಟ ಫಾರೆಸ್ಟ್ ರೂಲ್ಸಿನ Iನೇ ರೂಲ್ ಅನುಸರಿಸಿ, ಗವರ್ನಮೆಂಟ್ ಪ್ಲಾಂಟೇಷನ್‌ಗಳಾಗಿ ವಿಂಗಡಿಸಲ್ಪಡುವವು:—

ತಾಲ್ಲೂಕು.	ಪ್ಲಾಂಟೇಷನ್‌ಗಳ ಹೆಸರು.	ವಿಸ್ತೀರ್ಣ. ಎಕರೆಗಳು.	ಗುಂಟೆಗಳು.	ಚಕ್ಕುಬಂದಿ.
ತುಮಕೂರು.	(1) ಹೆರಹಳ್ಳಿ ರೆವಿನ್ಯೂ ಪ್ಲಾಂಟೇಷನ್	130		ಉತ್ತರಕ್ಕೆ—ಪೆಮ್ಮನಹಳ್ಳಿಯ ಸರ್ವೆ ನಂ. 65, 66, 89, 88, 78 ಮತ್ತು 90 ಪೂರ್ವಕ್ಕೆ—ಡಣಾಯಿಕನಪುರ ಗ್ರಾಮದ ಯಲ್ಲೆ ದಕ್ಷಿಣಕ್ಕೆ—ತಿಮ್ಮನಹಳ್ಳಿಯ ಸರ್ವೆ ನಂ. 71, 72 ವ 73 ಮತ್ತು ಚಿಕ್ಕಹಳ್ಳಿಯ ನಂ. 18, 19 ವ 21 ಪಶ್ಚಿಮಕ್ಕೆ—ತಿಮ್ಮನಹಳ್ಳಿಯ ಸರ್ವೆ ನಂ. 64 ವ 68
	(2) ನಾಗೇನಹಳ್ಳಿ ರೆವಿನ್ಯೂ ಪ್ಲಾಂಟೇಷನ್	14	19	ಉತ್ತರಕ್ಕೆ—ಯೆಲದಡ್ಲು ಗ್ರಾಮದ ಸರ್ವೆ ನಂ. 11 ಪೂರ್ವ—ಮತ್ತು ದಕ್ಷಿಣಕ್ಕೆ—ಸರ್ವೆ ನಂ. 54 ಪಶ್ಚಿಮಕ್ಕೆ—ಸರ್ವೆ ನಂ. 52
	(3) ದಾಸರಹಳ್ಳಿ ಫಾರೆಸ್ಟ್ ಪ್ಲಾಂಟೇಷನ್	290	16	ಉತ್ತರಕ್ಕೆ—ಸೀಗೇಪಾಳ್ಯದಗಡಿ ಮತ್ತು ದಾಸರಹಳ್ಳಿ (ಪ್ಲಾಂಟೇಷನ್) ಸರ್ವೆ ನಂ. 41 ಪೂರ್ವಕ್ಕೆ—ಹೊನ್ನೇನಹಳ್ಳಿ ಮತ್ತು ಗರೆಹಳ್ಳಿ ಗ್ರಾಮಗಳ ಗಡಿ ದಕ್ಷಿಣಕ್ಕೆ—ದಾಸರಹಳ್ಳಿ ಗ್ರಾಮದ ಸರ್ವೆ ನಂ. 11 ಪಶ್ಚಿಮಕ್ಕೆ—ಮಲ್ಲೇನಹಳ್ಳಿ ಮತ್ತು ಕುಚಂಗಿಯ ಗಡಿ
	(4) ಮಲ್ಲಸಂದ್ರ ಫಾರೆಸ್ಟ್ ಪ್ಲಾಂಟೇಷನ್	107	37	ಉತ್ತರಕ್ಕೆ—ಗೊಲ್ಲಹಳ್ಳಿಯಗಡಿ ಮತ್ತು ಮಲ್ಲಸಂದ್ರ ಗ್ರಾಮದ ಸರ್ವೆ ನಂ 32 ಪೂರ್ವಕ್ಕೆ—ಸರ್ವೆ ನಂ. 45 ಮತ್ತು ಮಲ್ಲಸಂದ್ರದ ಅಮೃತಮಹಲ್ ಕಾವಲ್ ದಕ್ಷಿಣಕ್ಕೆ—ಮಲ್ಲಸಂದ್ರ ಗ್ರಾಮದ ಸರ್ವೆ ನಂ. 47, 48 ವ 49 ಪಶ್ಚಿಮಕ್ಕೆ—ಸರ್ವೆ ನಂ. 36, 50 ವ 55
	(5) ಗೊಲ್ಲಹಳ್ಳಿ ಫಾರೆಸ್ಟ್ ಪ್ಲಾಂಟೇಷನ್	72	37	ಉತ್ತರಕ್ಕೆ—ಬಿಕ್ಕೋಡಿ ಗ್ರಾಮದ ಸರ್ವೆ ನಂ. 86, 87, 88 ವ 89 ಪೂರ್ವಕ್ಕೆ—ಬಿಕ್ಕೋಡಿ ಗ್ರಾಮದ ಸರ್ವೆ ನಂ. 15, 16, 17 ವ 18 ದಕ್ಷಿಣಕ್ಕೆ—ಬಿಕ್ಕೋಡಿ ಗ್ರಾಮದ ಸರ್ವೆ ನಂ. 8, 11, 12 ವ 14 ಪಶ್ಚಿಮಕ್ಕೆ—ಓಬಮ್ಮನಹಳ್ಳಿ ಗ್ರಾಮದ ಗಡಿಬಾಂದು
	(6) ಬಳ್ಳಾಪುರ ಫಾರೆಸ್ಟ್ ಪ್ಲಾಂಟೇಷನ್	248	9	ಉತ್ತರಕ್ಕೆ—ಲಿಂಗೇನಹಳ್ಳಿ ಪ್ಲಾಂಟೇಷನ್ ಪೂರ್ವಕ್ಕೆ—ಬಳ್ಳಾಪುರದ ಗಡಿಬಾಂದು ದಕ್ಷಿಣಕ್ಕೆ—ಬಳ್ಳಾಪುರ ಗ್ರಾಮದ ಸರ್ವೆ ನಂ. 90, 91, 94, 124, 119, 120 ವ 13 ಪಶ್ಚಿಮಕ್ಕೆ—ಬಳ್ಳಾಪುರದ ಗಡಿಬಾಂದು
	(7) ಲಿಂಗೇನಹಳ್ಳಿ ಫಾರೆಸ್ಟ್ ಪ್ಲಾಂಟೇಷನ್	365	38	ಉತ್ತರಕ್ಕೆ—ಲಿಂಗೇನಹಳ್ಳಿಯ ಸರ್ವೆ ನಂ. 17, 18, 20 ವ 23 ಪೂರ್ವಕ್ಕೆ—ಲಿಂಗೇನಹಳ್ಳಿ ಗಡಿಬಾಂದು ದಕ್ಷಿಣಕ್ಕೆ—ಬಳ್ಳಾಪುರ ಪ್ಲಾಂಟೇಷನಿನ ಗಡಿಬಾಂದು ಪಶ್ಚಿಮಕ್ಕೆ—ಲಿಂಗೇನಹಳ್ಳಿ ಗಡಿಬಾಂದು
	(8) ದೇವರಾಯದುರ್ಗ ಫಾರೆಸ್ಟಿನ ಗೊಲ್ಲಹಳ್ಳಿ ಫಾರೆಸ್ಟ್ ಪ್ಲಾಂಟೇಷನ್	225	28	ಉತ್ತರಕ್ಕೆ—ದೇವರಾಯದುರ್ಗದ ಸ್ಟೇಟ್ ಫಾರೆಸ್ಟಿನ ಸರಹದ್ದು ಲೈನು ಮತ್ತು ಗೊಲ್ಲಹಳ್ಳಿಯ ಸರ್ವೆ ನಂ. 12ರ ಭಾಗ ಪೂರ್ವಕ್ಕೆ—ಗೊಲ್ಲಹಳ್ಳಿ ಗ್ರಾಮದಗಡಿ ದಕ್ಷಿಣಕ್ಕೆ—ಡಿಟೋ ಡಿಟೋ ಪಶ್ಚಿಮಕ್ಕೆ—ಡಿಟೋ ಡಿಟೋ
ಮದ್ದುಗಿರಿ.	(9) ದೊಡ್ಡವೀರಗೌಡನಹಳ್ಳಿ ರೆವಿನ್ಯೂ ಪ್ಲಾಂಟೇಷನ್	17	8	ಉತ್ತರಕ್ಕೆ—ಸಿರಾ ಹೈರೋಡು ಪೂರ್ವಕ್ಕೆ—ಸರ್ವೆ ನಂ. 64 ಮತ್ತು ಹಳ್ಳ ದಕ್ಷಿಣಕ್ಕೆ—ಸರ್ವೆ ನಂ. 64ರ 3 ಮತ್ತು 4ನೇ ಭಾಗಗಳು ಪಶ್ಚಿಮಕ್ಕೆ—ಸರ್ವೆ ನಂ. 14

ತಾಲ್ಲೂಕು.	ಪ್ಲಾಂಟೇಷನ್ನುಗಳ ಹೆಸರು.	ವಿಸ್ತೀರ್ಣ. ಎಕರೆಗಳು.	ಗುಂಟೆಗಳು.	ಚಕ್ಕುಬಂದಿ.
ಮಧುಗಿರಿ.	(10) ಸೂಳೆಕೆರೆ ಫಾರೆಸ್ಟ್ ಪ್ಲಾಂಟೇಷನ್	178	15	ಉತ್ತರಕ್ಕೆ—ಮಾರೆನಾಯಿಕನಹಳ್ಳಿಯ ಸರ್ವೆ ನಂ. 56 ಮತ್ತು ಗಟ್ಟಿ ತಿಮ್ಮನಹಳ್ಳಿಯ ನಂ. 4, 5, 6, 7, 8, 9 ವ 10 ಪೂರ್ವಕ್ಕೆ—ಮಾರೆನಾಯಿಕನಹಳ್ಳಿಯ ಸರ್ವೆ ನಂ. 12, 13 ವ 14 ಮತು ಗಟ್ಟಿತಿಮ್ಮನಹಳ್ಳಿಯ ಸರ್ವೆ ನಂ. 15, 16, 17, 18 ವ 25 ದಕ್ಷಿಣಕ್ಕೆ—ಗಟ್ಟಿತಿಮ್ಮನಹಳ್ಳಿಯು ಸರ್ವೆ ನಂ. 20 ಪಶ್ಚಿಮಕ್ಕೆ—ಗಟ್ಟಿತಿಮ್ಮನಹಳ್ಳಿಯ ಗಡಿಬಾಂದು
ಕುಣಿಗಲ್.	(11) ರಾಂಬಾಣದ ಹಂತ ರೆವಿನ್ಯೂ ಪ್ಲಾಂಟೇಷನ್	23	18	ಉತ್ತರಕ್ಕೆ—ಸರ್ವೆ ನಂ. 39 ವ 108 ಮತ್ತು ರಾಂಬಾಣದ ಹಂತದನಾಲೆ ಪೂರ್ವಕ್ಕೆ—ಸರ್ವೆ ನಂ. 92, 103, 104, 106 ವ 109 ಮತ್ತು ಕುಣಿಕಲ್ ತಾಲ್ಲೂಕಿನ ಕೋಡಿಹಳ್ಳಿ ದಕ್ಷಿಣಕ್ಕೆ—ಗ್ರಾಮದ ಸರ್ವೆ ನಂ. 94, 95, 97, 103 ವ 104 ಪಶ್ಚಿಮಕ್ಕೆ—ಸರ್ವೆ ನಂ. 40 ವ 97 ಮತ್ತು ರಾಂಬಾಣದ ಹಂತದ ನಾಲಾ
	(12) ಕಾಡುಮತ್ತಿಕೆರೆ ರೆವಿನ್ಯೂ ಪ್ಲಾಂಟೇಷನ್	42	26	ಉತ್ತರಕ್ಕೆ—ಸರ್ವೆ ನಂ. 32 ವ 27 ಪೂರ್ವಕ್ಕೆ—ಸರ್ವೆ ನಂ. 13, 27 ವ 29 ದಕ್ಷಿಣಕ್ಕೆ—ಸರ್ವೆ ನಂ. 10 ವ 11 ಪಶ್ಚಿಮಕ್ಕೆ—ಅರಿಕೆರೆಗಣಿ ಮಟ್ಟದ ಗಡಿ
ಹುಲಿಯೂರದುರ್ಗ ತಾಲ್ಲೂಕು.	(13) ತೊರೆಸೂರಗೊಂಡನಹಳ್ಳಿ ರೆವಿನ್ಯೂ ಪ್ಲಾಂಟೇಷನ್	75	2	ಉತ್ತರಕ್ಕೆ—ಸರ್ವೆ ನಂ. 10 ವ 12 ಪೂರ್ವಕ್ಕೆ—ಓಟಕಟ್ಟ ಗ್ರಾಮದ ಯಲ್ಲೆ ದಕ್ಷಿಣಕ್ಕೆ—ಸರ್ವೆ ನಂ. 21, 21 ವ 23 ಪಶ್ಚಿಮಕ್ಕೆ—ಸರ್ವೆ ನಂ. 15 ಮತ್ತು ಸರ್ವೆ ನಂ. 8ರ 1 ವ 2ನೇ ಭಾಗಗಳು
ತುಮಕೂರ ತಾಲ್ಲೂಕು.	(14) ಕೃಷ್ಣಾಪುರ ಕಾವಲ್ ರೆವಿನ್ಯೂ ಪ್ಲಾಂಟೇಷನ್	10	20	ಉತ್ತರಕ್ಕೆ—ಕಲ್ಲಂಜಿಹಳ್ಳಿ ಗ್ರಾಮದ ಯಲ್ಲೆ ಪೂರ್ವಕ್ಕೆ—ಸರ್ವೆ ನಂ. 4 ದಕ್ಷಿಣಕ್ಕೆ—ಸರ್ವೆ ನಂ. 3ರ 2ನೇ ಭಾಗ ಪಶ್ಚಿಮಕ್ಕೆ—ಸರ್ವೆ ನಂ. 5ರ 2ನೇ ಭಾಗ
ಗುಬ್ಬಿ ತಾಲ್ಲೂಕು.	(15) ಅಡಗೂರು ಫಾರೆಸ್ಟ್ ಪ್ಲಾಂಟೇಷನ್	219	19	ಉತ್ತರಕ್ಕೆ—ಅಡಗೂರು ಗ್ರಾಮದ ಸರ್ವೆ ನಂ. 131, 137, 141 ವ 147 ಪೂರ್ವಕ್ಕೆ—ಪ್ರಭಾವನಹಳ್ಳಿಯ ಗಡಿಬಾಂದು ದಕ್ಷಿಣಕ್ಕೆ—ಡಿಟೋ ಡಿಟೋ ಪಶ್ಚಿಮಕ್ಕೆ—ಅಡಗೂರ ಸರ್ವೆ ನಂ. 39 ಮತ್ತು ಪ್ರಭಾವನಹಳ್ಳಿಯ ನಂ. 26, 27, 28, 29, 30 ವ 31
ಕೊರಟಗೆರೆ ತಾಲ್ಲೂಕು.	(16) ಗಂಟಿಗನಹಳ್ಳಿ ಫಾರೆಸ್ಟ್ ಪ್ಲಾಂಟೇಷನ್	184	16	ಉತ್ತರಕ್ಕೆ—ಗಂಟಿಗನಹಳ್ಳಿಯ ಸರ್ವೆ ನಂ. 30, 31, 1, 37, 36, 11, 12 ವ 10 ಪೂರ್ವಕ್ಕೆ—ಗಂಟಿಗನಹಳ್ಳಿಯ ಸರ್ವೆ ನಂ. 9 ದಕ್ಷಿಣಕ್ಕೆ—ಗಂಟಿಗನಹಳ್ಳಿಯ ಗಡಿಬಾಂದು ಪಶ್ಚಿಮಕ್ಕೆ—ಡಿಟೋ ಡಿಟೋ

ತಾರೀಖು 1ನೇ ಜುಲೈ 1896.

ನಂ. 11335—ಫಾ. ಫೈ. 1—96, ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್ಸರವೇಟರ್ ಮೆಸ್ಟರ್ ಪಿ. ಈ. ಬೆರ್ನರ್ಡಯವರು ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರ್ ತಾಬೆಯಲ್ಲಿ ನೌಕರಿಬಗ್ಗೆ ತುಮಕೂರು ಡಿಸ್ಟ್ರಿಕ್ಟಿಗೆ ಹಂಗಾಮಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ

ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಛಾಯಿಷ್ ಆದ್ದು.[ನಂ. 27.

ಬೆಂಗಳೂರು, ಗುರುವಾರ, ಜುಲೈ ತಾ॥ 9, ಸ್ನ 1896.

IIನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಷಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರನ್ಸ್ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ರ್ಯಾವರವರ ಡಿಟೋ	,, 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್ ರಿಕೆಟ್ಸ್, ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಇನಾಂ ಇಲಾಖಾ.

ಇಸ್ತಿಹಾರ್‌ನಾಮೆ.

(ನಂಬರು 6) ತಾರೀಖು 16ನೇ ಜೂನ್ ಸನ್ 1896.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಹೊಸಕೋಟೇ ತಾಲ್ಲೂಕಿನಲ್ಲಿ ಇರತಕ್ಕ ಚಿಲ್ಲರೇ ಇನಾಂಗಳ ಬಾಬತು 1300) ಫೈನಲ್ ಟೈಟಲ್ ಡೀಡ್ ಯಾನೆ ಕಾಯಂ ಪಟ್ಟೆಗಳು ಬೆಂಗಳೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಬಳಿಗೆ ಬಟವಾಡೆ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟಿವೆ.

2. ಸದರೀ ತಾಲ್ಲೂಕಿನ ಅಮಲ್ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್‌ಗಳು ಬಂದ ಮೇಲೆ ಅವುಗಳನ್ನ ತಗದುಕೊಳ್ಳುವ ಬಗ್ಗೆ ಸದರೀ ಇನಾಂದಾರರು ಖುದ್ದು ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರು ಅಂಥಾ ನೋಟೀಸ್‌ಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರೀ ಚಿಲ್ಲರೇ ಇನಾಂಗಳ ಬಗ್ಗೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಶೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್.

ಟ್ರೆಜರೀ ಇಲಾಖಾ ಡೆಪ್ಯುಟಿ ಕಮ್ಮಿಷನರ್‌ಗಳಿಗೆ.

ಸನ್ 1896ನೇ ಇಸವಿ ಜೂನ್ 11ನೇ ಮರ್ಕೂಂ 1851ನೇ ನಂಬರ್ ಸರ್ಕ್ಯುಲರ್ ಕೋಡಿನಲ್ಲಿ ವಿಧಿಸಿ ಇರುವ ಕಾಯಿದೆಗೆ ವಿರೋಧವಾಗಿ ಆರು ತಿಂಗಳಿಗೆ ಮೇಲ್ಪಟ್ಟ ಕಾಲಗಳಿಂದ ಪಾವತಿ ಆಗದೆ ಬಾಕೀಲಿರುವ ಹಿಂದಿನ ಸಂಬಳಗಳನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಖಜಾನೆಯವರು ಪಾವತಿ ಮಾಡುತ್ತಾ ಬರುವ ದೃಷ್ಟಾಂತವು ಜ್ಯಾರಳವಾಗಿ ಇರುವಂತೆ ತಿಳಿಯುಬಂದದ್ದರಿಂದ ಟ್ರೆಜರೀ ಇಲಾಖಾ ಡೆಪ್ಯುಟಿ ಕಮ್ಮಿಷನರ್‌ಗಳು 5ನೇ ಆವರ್ತದ ಶಿವಿಲ್ ಅಕವುಂಟ್ ಕೋಡಿನ ಮೊದಲನೇ ವಹಿಯಲ್ಲಿ 5ನೇ ನಿಬಂಧನೆಯನ್ನು ಗಮನಿಸಬೇಕೆಂದೂನ್ನೂ ಮತ್ತು ಅದಕ್ಕೆ ಸಂಬಂಧಪಟ್ಟ ಹೊಸದಾಗಿ ಹುಟ್ಟಿರುವ ಅಡೆಂಡಂ ಯಂಬ ಕಾಯಿದೆ ಪತ್ರಿಕೆಯನ್ನು ಸಹ ಪರಾಂಬರಿಸಬೇಕಾದ್ದಲ್ಲದೆ ಹುಕುಂ ಬಗ್ಗೆ ಕಂಟ್ರೋಲರವರಿಗೆ ಬರದುಕೊಂಡ ಹೊರ್ತು ಡಿಸ್ಟ್ರಿಕ್ಟ್ ಖಜಾನೆಯಲ್ಲಿಯೇ ಆಗಲಿ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಆರು ತಿಂಗಳಿಂದಲೂ ತೆಗದುಕೊಳ್ಳದೆ ನಿಂತಿರುವ ಸಂಬಳದ ಬಾಬತು ಬಿಲ್‌ಗಳ ಮೇಲೆ ಹಣ ಪಾವತಿ ಮಾಡಕೂಡದೆಂಬದಾಗಿ ಕಂಟ್ರೋಲರವರು ಸೂಚಿಸುತ್ತಾರೆ.

ಅದೇ ಮೇರಿಗೆ ಮೇಲಿನ ನಮೂದಾದ ನಿಬಂಧನೆಗೆ ಸಂಬಂಧಪಟ್ಟ ಅಡೆಂಡಂ ಅನುಸರಿಸಿ ಯರಡು ವರುಷಗಳಿಗಿಂತಲೂ ಜಾಸ್ತೀ ಕಾಲದ ವರಿಗೂ ಪಾವತಿ ಆಗದೆ ನಿಂತಿರುವ ತಲಬುಗಳು ಪಾವತಿ ಆಗುವದಕ್ಕೆ ಮುಂಚಿತವಾಗಿಯೇ ಗವರ್ನ್‌ಮೆಂಟ್ ಸ್ಯಾಂಕ್ಷನ್ ಪಡಿಯಬೇಕು.

ಮೇಲ್ಕಂಡ ತಿಳುವಳಿಕೆಗಳನ್ನು ಮುಖ್ಯವಾಗಿ ಗಮನಿಸಬೇಕೆಂಬದಾಗಿ ಕೋರುವದಲ್ಲದೆ ಅವುಗಳಿಗೆ ವಿರೋಧವಾಗಿ ನಡದಿದ್ದೇ ಆದರೆ ಪಾವತಿ ಮಾಡಿದ ಟ್ರೆಜರೀ ಆಫೀಸರು ಖುದ್ದು ತಾವೇ ಜವಾಬ್‌ದಾರ್ರಾಗುತ್ತಾರೆಂದೂನ್ನೂ ಸೂಚಿಸುತ್ತಾರೆ.

ಟ್ರೆಜರೀ ಇಲಾಖಾ ಡಿಸ್ಟ್ರಿಕ್ಟ್‌ಜಾತ್ ಡೆಪ್ಯುಟಿ ಕಮ್ಮಿಷನರುಗಳಿಗೆ ಮತ್ತು ಸ್ಟೇಟ್ ಹುಜೂರು ಟ್ರೆಜರೀ ಇನ್‌ಚಾರ್ಜ್ ಆಫೀಸರವರಿಗೆ.

1896ನೇ ಇಸವಿ ಜೂನ್ 11ನೇ ಮರ್ಕೂಂ 1852ನೇ ನಂಬರ್ ಸರ್ಕ್ಯುಲರ್.

ಒಂದು ತಿಂಗಳಿನ ಆಖೈರ್ ಭಾಗದೊಳು ಒಂದು ಖಜಾನೆಯಿಂದ ಮತ್ತೊಂದು ಖಜಾನೆಗೆ ಹಣ ಯಾ ಕರೆನ್ಸೀ ನೋಟುಗಳು ಇರಸಾಲ್ ಮಾಡಿದಾಗ ಸದರೀ ಇರಸಾಲ್ ಮಾರನೇ ತಿಂಗಳಿನ ಮೊದಲಿನ ತಾರೀಖಿನಲ್ಲಿ ಮಾರ್ಗದಲ್ಲೇ ಇರುವ ದೃಷ್ಟಾಂತಗಳು ಬಂದು ಇರುವದ್ದರಿಂದ ಒಂದು ಖಜಾನೆಯಿಂದ ಮತ್ತೊಂದು ಖಜಾನೆಗೆ ಕಳುಹಿಸುವ ಇರಸಾಲ್‌ಗಳು ಯಾವ ತಿಂಗಳಲ್ಲಿ ಕಳುಹಿಸಲ್ಪಡುತ್ತವೆಯೋ ಆ ತಿಂಗಳು ಮುಗಿಯುವದರೊಳಗಾಗಿ ಅವು ಉದ್ದೇಶಿಸಿದ ಮೊಕ್ಕಾಂಗೆ ಶೇರುವ ಹಾಗೆ ಕಳುಹಿಸಬೇಕೆಂಬದಾಗಿ ವಿಧಾಯಕ ಮಾಡುವ 5ನೇ ಆವರ್ತದ ಶಿವಿಲ್ ಅಕವುಂಟ್ ಕೋಡಿನ 1ನೇ ವಹಿಯೊಳಗಿನ 31ನೇ ಅಧ್ಯಾಯದ 642ನೇ ನಿಬಂಧನೆಯ 1ನೇ ಕಲಮನ್ನು ಟ್ರೆಜರೀ ಇಲಾಖಾ ಡೆಪ್ಯುಟಿ ಕಮ್ಮಿಷನರ್‌ಗಳು ಗಮನಿಸಬೇಕೆಂಬದಾಗಿ ಕಂಟ್ರೋಲರವರು ಸೂಚಿಸುತ್ತಾರೆ. ಈ ಕಾಯಿದೆಯನ್ನು ಖಂಡಿತವಾಗಿ ಜಾರೀಲಿಡಬೇಕೆಂದೂನ್ನೂ ಸೂಚಿಸುತ್ತಾರೆ.

ಈ. ಆರ್. ಸುಬ್ಬರಾಯರ್,
ಕಂಟ್ರೋಲರ್ ಆಫ್ ಮೈಸೂರ್,
ಯಂಬದಾಗಿ ದಸ್ತಖತ್ ಆಗಿ ಇರುತ್ತೆ.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡಿಯತಕ್ಕ ಕಾಂಗಾರಿಗಳನ್ನು ಮಾಡಿಸುವ ಬಗ್ಯಾಗಲಿ ಸಾಮಾನುಗಳನ್ನು ಅಂದರೆ ಮೆಟಿರಿಯಲ್ ಟೂಲ್ಸ್ ಮೊದಲಾದವುಗಳನ್ನು ಸಪ್ಲೈ ಮಾಡತಕ್ಕ ಬಗ್ಯಾಗಲಿ ಪುದ್ಯುಕ್ತರಾದ ಜನರು ಮತ್ತು ಸಪ್ಲೈ ಮಾಡುತಿರುವವರುಗಳ ಹೆಸರುಗಳನ್ನು ಅಡ್ರೆಸಗಳನ್ನು ಮ್ಯುನಿಸಿಪಾಲ್ ಹೆಡ್ ಆಫಿಸಿನಲ್ಲಿ ಇಡಲ್ಪಟ್ಟು ಇರುವ ಬುಕ್ಕಿನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದಿದೆ.

ಆಫಿಸ್ ಹಗಲು 11ರ ಲಾಗಾಯಿತು 5—30ರ ವರುವಿಗೆ ತೆರದು ಯಿರುವದು.

ಬೆಂಗಳೂರು ಸಿಟಿ ಮ್ಯುನಿಸಿಪಾಲ್ ಪ್ರಸಿಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದುಕೊಳ್ಳುವ ಬಗ್ಗೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರುವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫಿಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬುಗಳನ್ನು ತೆಗದುಕೊಳ್ಳತಕ್ಕದ್ದು. ಒಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರು ಆ ಸಂಗತಿಯನ್ನು ಕೂಡ್ಲೆ ಪ್ರಸಿಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮಿಮೋ ತಯಾರ್ಮಾಡಿ ಮ್ಯುನಿಸಿಪಾಲ್ ಆಫಿಸಿನಲ್ಲಿ ಚಿಕಟಾಯಿಸಲ್ಪಡುವದು.

ತಾರೀಖು 18ನೇ ಮೇ 1896.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ವೆಸ್ಟ್ರರ್ನ ಎಕ್ಸ್ಟೆನ್ಷನ್ನಲ್ಲಿ ಖಾಲೀಯಿರುವ ಇದರ ಕೆಳಗೆ ನಮೂದಿಸಿರುವ ನಂಬರುಗಳ ನಿವೇಶನಗಳನ್ನ ಚಾಲತಿ ಇಸವಿ ಜುಲೈ 11 ಮತ್ತು 18ನೇ ತಾರೀಖುಗಳ ಪ್ರಾತಃಕಾಲ 7 ಘಂಟೆಗೆ ಆಯಾಯ ಜಮೀನ್ ಬಳಿಯಲ್ಲೇ ಹರಾಜುಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್ ಮಾಡಿ ಪಡದುಕೊಳ್ಳಬಹುದು.

2. ಸವಾಲ್ ಖೈದಾದ ಕೂಡ್ಲೆ ಚಡಸವಾಲ್‌ದಾರು ಸವಾಲ್ ಮೊಬಲಗಿನ ನಾಲ್ಕರಲ್ಲಿ ಒಂದು ಹಿಸ್ಸೇ ಮೊಬಲಗನ್ನ ಡಿಪಾಜಿಟ್ಟಾಗಿ ಹಾಜರ್ಮಾಡಿ ಮಂಜೂರೀ ಆರ್ಡರ್ ಕೊಟ್ಟ 7 ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿಮಾಡಿ ರಸೀತಿ ಪಡದು ಜಮೀನ್ ಸುಫರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಫರ್ದು ಮಾಡಿಕೊಂಡ 6 ತಿಂಗಳೊಳಗಾಗಿ ಕಟ್ಟಡವನ್ನ ಕಟ್ಟಿಕೊಳ್ಳಲು ಪ್ಲಾನ್ ಹಾಜರ್ಮಾಡಿ ಲೈಸೆನ್ಸ್ ಪಡದು ಕಟ್ಟಡವನ್ನ ಪೂರೈಸಬೇಕು. ಇದಕ್ಕೆ ತಪ್ಪಿದಲ್ಲಿ ಲುಕ್ಸಾನಿಗೆ ಯಾವ ಈಡೂ ಯಿಲ್ಲದೆ ನಿವೇಶನವನ್ನ ಬೋರ್ಡಿಗೆ ಸೇರಿಸಿಕೊಂಡು ಹರಾಜು ಮಾಡಿಸಲ್ಪಡುತ್ತೆ.

4. ಸವಾಲ್ ಖೈದಾದ ಕೂಡ್ಲೆ ಡಿಪಾಜಿಟ್ಟು ಹಾಜರ್ಮಾಡದೆಯಾಗಲಿ ಅಥವಾ ಮಂಜೂರಿ ಆರ್ಡರ್ ಪಡದ ಏಳು ದಿವಸದೊಳಗಾಗಿ ಪೂರಾ ಮೊಬಲಗು ಪಾವತಿ ಮಾಡದೆಯಾಗಲಿ ತಪ್ಪಿದಲ್ಲಿ ಲುಕ್ಸಾನಿಗೆ ಚಡ್ ಸವಾಲ್‌ದಾರನ ಜವಾಬ್‌ದಾರೀ ಮೇಲೆ ಸೈಟ್ ಪುನಹ ಹರಾಜು ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ನಫೆ ಬಂದರೆ ಬೋರ್ಡಿಗೆ ಸೇರಿದ್ದಾಗಿ ಯಿರುತ್ತೆ.

5. ಯಾವ ಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾಗಲಿ ಅಂಗೀಕರಿಸುವ ಯಾ ನಿರಾಕರಿಸುವ ಬಾಧ್ಯತೆಯನ್ನು ಕೆಳಗೆ ಸೈನ್ ಮಾಡಿರುವರು ವುಳಿಸಿಕೊಂಡು ಇರುತ್ತಾರೆ.

ತಾರೀಖು 20ನೇ ಮಾಹೆ ಜೂನ್ 1896ನೇ ಇಸವಿ.

ಸೈಟ್ ನಂಬರು		ಹರಾಜು ತಾರೀಖು	ಸೈಟ್ ನಂಬರು		ಹರಾಜು ತಾರೀಖು
106	..		113	..	
108	..	ಚಾಲತಿ ಇಸವಿ	114	..	ಚಾಲತಿ ಇಸವಿ ಜು
109	..	ಜುಲೈ 11ನೇ	115	..	ಲೈ 18ನೇ ತಾರೀಖು
110	..	ತಾರೀಖು.	116	..	
111	..		117	..	
112	..		119	..	

ತಾರೀಖು ನೇ ಜೂನ್ 1896.

ಈ ಕೆಳಗೆ ತೋರಿಸಿ ಇರುವ ಸಾಮಾನುಗಳು ಬೇಕಾಗಿ ಇರುವದ್ದರಿಂದ ಇಚ್ಛೆಯುಳ್ಳವರು ಸರಬರಾಯಿ ಮಾಡಲು ಟೆಂಡರ್‌ಗಳನ್ನ ಕೊಡಬಹುದು.

50 ಕಬ್ಬಿಣದ ಗ್ಯಾಲವಾನೈಜರ್ ಬಾಬತು ಕಚರಾ ತೊಟ್ಟಿಗಳು ಮೂರು ಅಡಿ ಯತ್ತರ ಯರಡು ಅಡಿ ಸುತ್ತಳತೆಯುಳ್ಳದ್ದು.

50 ಚರಂಡಿಗಳ ಉಪಯೋಗಕ್ಕಾಗಿ ಕಬ್ಬಿಣದ ಕಂಬಿಗಳು.

50 ಕಬ್ಬಿಣದ ಲ್ಯಾಂಪ್ಪೋಸ್ಟಿಯಾನೆ ದೀಪದ ಕಂಬಗಳು.

ಇವುಗಳ ವಿಷಯವಾಗಿ ವಿಶೇಷ ತಪ್ಸೀಲ್ ತಿಳಿಯಬೇಕಾದಲ್ಲಿ ಸಿಟಿ ಮ್ಯುನಿಸಿಪಲ್ ಆಫಿಸಿಗೆ ಬಂದು ತಿಳಿದುಕೊಳ್ಳತಕ್ಕದ್ದು.

ತಾರೀಖು ನೇ ಜೂನ್ 1896.

ಕಿಲ್ಲೆ ಅಗಳತೆಯಲ್ಲಿ ಕಲ್ಲುಗಳನ್ನ ಖರೀದಿಗೆ ತೆಗದುಕೊಂಡಿರುವ ಅಶೇಷ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ,—

1896ನೇ ಜುಲೈ ಗುರ್ರ್ಯ ಲಾಗಾಯತು ಮೂರು ತಿಂಗಳ ವಳಗಾಗಿ ಕಿಲ್ಲೆ ಅಗಳತೆಯಲ್ಲಿ ವಿಕ್ರಯಿಸಲ್ಪಟ್ಟಿರುವ ಕಲ್ಲುಗಳನ್ನ ಆ ಸ್ಥಳದಿಂದ ಸಾಗಿಸಿಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಮ್ಯುನಿಸಿಪಾಲಿಟಿಗೆ ಸೇರಿಸಿಕೊಳ್ಳಲ್ಪಡುವದು.

1896ನೇ ಇಸವಿ ಸೆಪ್ಟಂಬರ್ 30ನೇ ತಾರೀಖಿನ ತರುವಾಯ ಸಾಗಿಸಲು ಅಪ್ಪಣೆ ಕೊಡುವದಿಲ್ಲ.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.

ಮೈಸೂರ್ ಡಿಸ್ಟ್ರಿಕ್ಟ್.

ತಾರೀಖು 6ನೇ ಜುಲೈ 1896.

1896ನೇ ಇಸವಿ ಮಾರ್ಚಿ 15ರ ಲಾಗಾಯತು ಗ್ರಾಮದಿಂದ ಗೈರ್ ಹಾಜರಾಗಿರುವ ಮಾಳಿಗೆ ಎಂಬುವನ ಚಹರೇ ಪಟ್ಟಿ.—

ಹೆಸರು—ಮಾಳಿಗೆ

ತಂದೆ ಹೆಸರು—ಕಾಳಮನ್ನೇ ಗವುಡ

ವಯಸ್ಸು—40 ಮತ್ತು 50 ವರುಷಕ್ಕೆ ಮಧ್ಯೆ

ಜಾತಿ—ಹಾಲುಕುರುಬ

ವಾಸಸ್ಥಳ—ಯಡತೊರೇ ತಾಲ್ಲೂಕು ಹರದನಹಳ್ಳಿ ಹೋಬಳಿ ಚಿಕ್ಕನಾಯ್ಕನಹಳ್ಳಿ ಕೊಪ್ಪಲ್

ಗುರ್ತು ಕಂಡು ಹಿಡಿಯುವ ಭಾವಗಳ ತಪಶೀಲ್ ಮಾಶಿಬಿಟ್ಟು ಇದಾನೆ, ತಲೆ ಮೇಲಿನ ಕೂದಲು ಸ್ವಲ್ಪ ಬೆಳ್ಳಗೆ ಇದೆ. ಇವನನ್ನು ಕೊನೇಲಿ ಕಂಡಾಗ ಇವನು ಬೂದಿಬಣ್ಣದ ಕಂಬಳಿಯನ್ನು ಸಾಧಾರಣ ಪಂಚೆಯನ್ನು ಹೊದ್ದುಕೊಂಡು ಇದ್ದ. ತಲೆಗೆ ಬಿಳಿ ಬಟ್ಟೆ ಸುತ್ತಿಕೊಂಡು ಇದ್ದ.

ಇವನು ಇರುವ ಸಳ ಮುಂತಾದ್ದರ ಇನ್ಫರ್ಮೇಷನ್ಯಾನೆ ವರ್ತಮಾನಗಳನ್ನ ಯಡತೊರೇ ತಾಲ್ಲೂಕು ಪೋಲೀಸ್ ಇನ್ಸ್ಪೆಕ್ಟರವರಿಗಾಗಲಿ ಅಥವಾ ಅಮಲ್ದಾರ್ರವರಿಗಾಗಲಿ ಕೊಡಬೇಕಾಗಿ ಕೋರಿ ಇದೆ.

ನಂಜನಗೂಡು ತಾಲ್ಲೂಕು 1895—96ನೇ ಇಸವಿ 8—59ನೇ ನಂಬರು ಹೊಸಕೋಟೆ ಚನ್ನಬಸವನ ಖೂನೀ ಮೊಕದ್ದಮಾಕ್ಕೆ ಸಂಬಂಧಪಟ್ಟ ನಂಜನಗೂಡು ತಾಲ್ಲೂಕು ಪೋಲೀಸಿನವರಿಂದ ಅ ಕ್ಷಿತನಾಗಿ ಹಾಲಿ ತಪ್ಪಿಸಿಕೊಂಡು ಇರುವ ಬಲಗೈ ರಂಗ ಯಂಬುವನ ಚಹರೇ ಪಟ್ಟಿ.—

ಹೆಸರು	..	ರಂಗ
ತಂದೆ ಹೆಸರು	..	ದೊಡ್ಡ ರಂಗ
ಜಾತಿ	..	ಬಲಗೈ
ವಯಸ್ಸು	..	ಸುಮಾರು 36 ವರುಷ
ಎತ್ತರ	..	ಅಡಿ 5—5½ ಅಥವಾ 6 ಅಂಗುಲ
ಕಸಬು	..	ಆರಂಭ ಮತ್ತು ಜೀತಗಾರ
ಬಣ್ಣ	..	ಕಪ್ಪು

ಗುರ್ತು ಕಂಡು ಹಿಡಿಯುವದಕ್ಕೆ ಬೇಕಾದ ಭಾವಗಳ ತಪಸೀಲು.

ನೀಳು ಮುಖ, ಎಡದತೋಳು ಒಳಭಾಗದಲ್ಲಿ 2 ಅಂಗುಲ ಉದ್ದಕ್ಕೆ ⅓ ಅಂಗುಲ ಅಗಲಕ್ಕೆ ಕಾಮಾಲೆಗೋಸ್ಕರ ಬರೆ ಹಾಕಿದ ಗುರ್ತುಯಿದೆ. ಮೀಸೆ ಬಿಟ್ಟು ಇದಾನೆ ಇವನನ್ನು ಕೊನೇಲಿ ಕಂಡ ವ್ಯಾಳೆ ಇವನು ಹೊಲೆ ಮಗ್ಗದ ಪಂಚೆ ಉಟ್ಟುಕೊಂಡು ಇದ್ದನು. ಮೇಲ್ಗಡೆ ಬಿಳಿದಟ್ಟಿ ಸುತ್ತಿಕೊಂಡು ಇದ್ದ. ಕರೀ ಕಂಬಳಿ ಹೊದ್ದುಕೊಂಡು ಇದ್ದ.

ಈ ಮನುಷ್ಯನು ಇರುವ ಜಾಗಾ ಮುಂತಾದ್ದರ ಯಿನ್ಫರಮೇಷನ್ಯಾನೆ ವರ್ತಮಾನವನ್ನ ನಂಜನಗೂಡು ತಾಲ್ಲೂಕು ಪೋಲೀಸ್ ಇನ್ಸ್ಪೆಕ್ಟರಿಗಾಗಲಿ ಅಥವಾ ಅಮಲ್ದಾರ್ರವರಿಗಾಗಲಿ ಕೊಡಬೇಕಾಗಿ ಕೋರಿಯಿದೆ.

ಸಿ. ಹಾರ್ಡಿ,
ಮೈಸೂರ್ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೆಬರವರು.

ಶಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ ನೋಟಿಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟು.

1895—96ನೇ ಇಸವಿ ಒರಿಜಿನಲ್ ನಂಬರು 14.

ವಾದಿಗಳು.

ಮೈಸೂರು ಶೀಮೆ ಲಿಂಗಾಯತ ವೀರ ಶೈವ ಬ್ರಾಹ್ಮರುಗಳಾದ
1ನೇ ವೀರಸಂಗಪ್ಪ.
2ನೇ ಎಸ್. ಆರ್. ಕರಿಬಸವಶಾಸ್ತ್ರಿ.
3ನೇ ಚಿಕ್ಕ ಶಿವಲಿಂಗಸ್ವಾಮಿ.
4ನೇ ಹುಚ್ಚಪ್ಪ.
5ನೇ ವಿರುಪಾಕ್ಷಪ್ಪ.
6ನೇ ಶಾಂತವೀರಪ್ಪ.
7ನೇ ಗುರುವಣ್ಣ.
8ನೇ ಹುಚ್ಚವೀರಪ್ಪ.
9ನೇ ಯಜಮಾನ ಪುಟ್ಟಣ್ಣ.
10ನೇ ಗುಬ್ಬಣ್ಣ.
11ನೇ ಚೆನ್ನಬಸಪ್ಪ.
12ನೇ ಸಿದ್ಧರಾಮಣ್ಣ.
13ನೇ ಬಸವಲಿಂಗಪ್ಪ.
14ನೇ ಮುದ್ದಪ್ಪ.
15ನೇ ಗಂಗಶೆಟ್ಟಿ.
16ನೇ ಚೆನ್ನಶೆಟ್ಟಿ.
17ನೇ ವೀರಭದ್ರಯ್ಯ.
18ನೇ ಪಿ. ರಾಚಣ್ಣ.
19ನೇ ಪುಟ್ಟಣ್ಣ.
20ನೇ ವಿಶಕಂಠಯ್ಯ.
21ನೇ ಗುರುಶಾಂತಪ್ಪ.

ಪ್ರತಿವಾದಿ.

ಬೆಂಗಳೂರಿನಲ್ಲಿ ಇರುವ ಮೈಸೂರು ಗವರ್ನಮೆಂಟ್ ಜನರಲ್ ಸೆಕ್ರೆಟರಿಯವರಾದ ಮಿಸ್ಟರ್ ವಿ. ಯನ್. ನರಸಿಂಹಯ್ಯಂಗಾರ್ರವರು.

ಈ ಮೊಕದ್ದಮಾ ವಾದಿಗಳು ಮೇಲ್ಕಂಡ ಪ್ರತಿವಾದೀರ ಮೇಲೆ ಲುಕ್ಸಾನಿಗೂ ಮತ್ತು ಮಾನನಷ್ಟಕ್ಕೂ ಈ ಕೋರ್ಟಿನಲ್ಲಿ ಮಾಡಿರುವ ದಾವಾ 1896ನೇ ಇಸವಿ ಜುಲೈ 28ನೇ ತಾರೀಖಿಗೆ ಇಷ್ಯೂ ಹಿಯರಿಂಗ್ ಬಗ್ಗೆ ಇಟ್ಟು ಇರುತ್ತೆಂದು ಇದರಿಂದ ತಿಳಿಯಪಡಿಸಿ ಇದೆ.

ದಾವಾ ಅರ್ಜಿ ಮತ್ತು ಷೆಡ್ಯೂಲ್ ಇದರ ಕೂಡ ಫಾಯಿಲ್ ಮಾಡಿ ಇರುತ್ತೆ.

ಬತಾರೀಖು 24ನೇ ಮಾರ್ಚಿ 1896ನೇ ಇಸವಿ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ನಂದೀದುರ್ಗ ಡಿವಿಜನ್ ಡಿ|| ಜಡ್ಜಿಯವರ ಕೋರ್ಟು.

ಸರ್ 1896ನೇ ಇಸವಿ ಜರ್ನಾಲ್ ನಂ. 14.

ವಾದಿ—ಮೈಸೂರು ಮಹಾರಾಜರ ಸಂಸ್ಥಾನದಲ್ಲಿ ವಾಸವಾಗಿರುವ ಲಿಂಗಾಯಿತ (ವೀರಶೈವ) ಬ್ರಾಹ್ಮಣರು (ಮತದಲ್ಲಿ ಲಿಂಗಾಯತನು, ಜಾತಿಯಲ್ಲಿ ವೀರಶೈವ ಬ್ರಾಹ್ಮಣನು ಆದ ವೀರಸಂಗಪ್ಪ.

ಪ್ರತಿವಾದಿ—ಬೆಂಗಳೂರು ಶಿಟಿ ಹಲಸೂರುಪೇಟೆಯಲ್ಲಿ ಇರುವ ಮೈಸೂರ್ ಗವರ್ನಮೆಂಟಿಗೆ ಜನರಲ್ ಸೆಕ್ರೆಟೆರಿಯಾಗಿರುವ ವಿ. ಯರ್. ನರಸಿಂಹೈಯ್ಯಂಗಾರ್ ಯಸ್ಕ್ವಯರ್ ರವರು.

ಮೇಲೆ ಕಂಡ ವಾದಿಗಳು ಹೇಳಿಕೊಳ್ಳುವದೇನಂದರೆ—

1ನೇ ಮೇಲೆಕಂಡ ಪ್ರತಿವಾದಿಯು 1891ನೇ ಇಸವಿಯಲ್ಲಿ ಮೈಸೂರು ಸಂಸ್ಥಾನಕ್ಕೆ ಸೆನಸಸ್ ಸೂಪರಿಂಟೆಂಡೆಂಟರಾಗಿದ್ದು, 1893ನೇ ಇಸವಿ ಮಾರ್ಚಿ ತಿಂಗಳು ಯಾ ಆಸುಮಾರು ಕಾಲದಲ್ಲಿ ಮೈಸೂರು (1891) ಸೆನಸಸ್ ಯಾ ಖಾನೇಷುಮಾರಿ ತೆಗೆದಾಗ ಒಂದು ಪತ್ರಿಕೆಯನ್ನು ಪ್ರಕಟಿಸಿದರು. ಸದರೀ ಪತ್ರಿಕೆಯು ಇಂಡಿಯಾ (1891) ಸೆನಸಸ್ ಯಾ ಖಾನೇಷುಮಾರಿ 25ನೇ ವಾಲ್ಯೂಮಿನ 1—2ನೇ ಒಂದು ಎರಡನೇ ಭಾಗಗಳಾಗಿ ಮಾಡಲ್ಪಟ್ಟವೆ. ಸದರೀ ಪತ್ರಿಕೆಗಳು ಬೆಂಗಳೂರಲ್ಲಿ ಮೈಸೂರು ಗವರ್ನಮೆಂಟ ಸೆಂಟ್ರಲ್ ಬುಕ ಡಿಪೋನಲ್ಲಿ ಬಿಕರಿ ಮಾಡುತ್ತಾರೆ.

II. ಇದಕ್ಕೆ ಲಗತ್ ಮಾಡಿ ಇರುವ ಏ. ಗುರ್ತುಳ್ಳ ಷೆಡ್ಯೂಲಿನಲ್ಲಿ ನಮೂದಿಸಿರುವ ಪ್ರಕಾರ ಮೇಲೆ ಕಂಡ ಪತ್ರಿಕೆಯು ಅನೇಕ ವಚನಗಳಲ್ಲಿ ಪ್ರತಿವಾದಿಯು ಅಸಂಗತವಾಗಿ ವಾದಿಗಳ ಮತವನ್ನು ಜಾತಿಯನ್ನು ಜನಗಳ ಅಪಹಾಸ್ಯಕ್ಕೆ ತೋರ್ಪಡುವಂತೆ ಮಾಡೋಣವೆಂದ ವಾದಿಗಳನ್ನು ವಿಶೇಷವಾಗಿಯು ಸುಳ್ಳಾಗಿಯು ಕೆಟ್ಟ ಅಭಿಪ್ರಾಯದಿಂದಲು ಅವಮಾನ ಪಡಿಸಿದ್ದಾರೆ. ಇವಲ್ಲದೆ ಮೇಲೆಕಂಡ ಪತ್ರಿಕೆಯಲ್ಲಿ ಪ್ರತಿವಾದಿ ಮನಃಪೂರ್ವಕವಾಗಿಯು ದ್ವೇಷದಿಂದಲು ವಾದಿಗಳನ್ನು ಅವರ ಜಾತಿ ಪ್ರಕಾರ ತಾನು ಮಾಡಬೇಕಾಗಿದ್ದ ರೀತಿಯಲ್ಲಿ ವಿವರಿಸಲಿಲ್ಲ.

III. ಮೇಲೆ ಹೇಳಿರುವ ಅಂಶಗಳು ಸುಳ್ಳಾಗಿಯು ದ್ವೇಷವನ್ನುಂಟು ಮಾಡುವ ಹಾಗೆಯು ಇರುವದಲ್ಲದೆ ವಾದಿಗಳ ಮನಸ್ಸಿಗೆ ವಿಶೇಷ ಸಂಕಟವನ್ನುಂಟು ಮಾಡಿ ಅವರನ್ನು ತಮ್ಮ ಮತಸ್ಥರಲ್ಲಿಯು ಸ್ವದೇಶಸ್ಥರಲ್ಲಿಯು ಅವಮಾನಪಡಿಸಿವೆ.

IV. ವ್ಯಾಜ್ಯಕಾರಣ ಬೆಂಗಳೂರು ಸಿಟಿಯ ಈ ಕೋರ್ಟು ಸರಹದ್ದಿನಲ್ಲಿ ಸರ್ 1895ನೇ ಇಸವಿ ಏಪ್ರೆಲ್ 10ನೇ ತಾರೀಖಿನಲ್ಲಿ ಅಂದರೆ ಮೇಲೆ ಕಂಡ ವೀರಸಂಗಪ್ಪನು ಮೈಸೂರು ಸರ್ಕಾರ್ ಸೆಂಟ್ರಲ್ ಬುಕ್ ಡಿಪೋನಲ್ಲಿ ಮೇಲೆಕಂಡ ಸೆನಸಸ್ ಯಾ ಖಾನೇಷುಮಾರಿ ಪತ್ರಿಕೆಯ ನಕಲನ್ನು ಕೊಂಡುಕೊಂಡಾಗ ಹುಟ್ಟಿತ್ತು. ಪತ್ರಿಕೆಯು ಮೊದಲು ಪ್ರಕಟನೆಯಾಗಾಯಿತು ಸದರೀ ಪತ್ರಿಕೆಯನ್ನು ಬಿಕರಿ ಮಾಡಿದ ಕಾಲದಲ್ಲಿಯು ವ್ಯಾಜ್ಯ ಕಾರಣ ಪದೇ ಪದೇ ಸಂಭವಿಸಿತ್ತು. ಶಿವಿಲ್ ಪ್ರೊಸಿಡ್ಯೂರ್ ಕೋಡ್ 424ನೇ ಸೆಕ್ಷನಿಗೆ ಅನುಸಾರವಾಗಿ ಕೊಡಬೇಕಾದ ನೋಟೀಸ್, ರಿಜಿಸ್ಟರ್, ಪೋಸ್ಟುದ್ವಾರಾ ಪ್ರತಿವಾದಿಗೆ ಕೊಟ್ಟಿದೆ.

ಜಡ್ಜಮೆಂಟ ಬಗ್ಯೆ ವಾದಿಗಳ ಪ್ರಾರ್ಥನೆ.

(ಎ) ಪ್ರತಿವಾದಿಯು—ವಾದಿಗಳಿಗೆ ಲುಕ್ಸಾನ್ ತರೀಕಾಗಿ ದಾವೆ ಖರ್ಚುಗಳು ಸಹಿತ 5,100 ರೂಪಾಯಿ ಕೊಡುವಂತೆಯೂ,

(ಬಿ) ಪ್ರತಿವಾದಿಯು—ಮೇಲೆಕಂಡ ಅಂಶಗಳನ್ನು ಇಯಿಂದ ಪ್ರಕಟಿಸದ ಹಾಗೆ ಇಂಜೆಕ್ಷನ್ ಕೊಡಿಸಬೇಕೆಂತಲು,

(ಸಿ) ಕೋರ್ಟಿಗೆ ನ್ಯಾಯವಾಗಿಯು ಯುಕ್ತವಾಗಿಯೂ ತೋರುವ ಇತರ ಪರಿಹಾರಗಳಿಗೆ ವಾದಿಗಳಿಗೆ ಡಿಕ್ರಿ ಕೊಡಿಸಬೇಕೆಂತಲೂ,

ಅಡ್ಲೆನಾರ್ಟನ್.
ವಾದಿಗಳ ಕೌಸಿಲರ್.
ಮಿ. ಯಚ್. ಲ್ಯೂಬಿಕ್.
ವಾದಿಗಳ ಅಡ್ವೋಕೇಟ್.

ಮೈ. ವೀರಸಂಗಪ್ಪ,
ವಾದಿ.

ಮೇಲೆಕಂಡ ವಾದಿಗಳ ಪೈಕಿ ವೀರಸಂಗಪ್ಪನಾದ ನಾನು ನನ್ನ ತಿಳುವಳಿಕೆ ಮತ್ತು ನಂಬಿಕೆಮೇಲೆ ನಮೂದಿಸಿರುವ ವಿಷಯಗಳು ಎಲ್ಲಾ ನಿಶ್ಚಯವಾದ್ದೆಂದು ಪ್ರಮಾಣವಾಗಿ ಹೇಳುತ್ತೇನೆ.

ಬೆಂಗಳೂರು.
ತಾರೀಖು 1895ನೇ ಇಸವಿ.

ಶಾಂತವೀರಪ್ಪನ ರುಜುವು.
ಹುಚ್ಚೀರಪ್ಪನ ರುಜುವು.

ಷೆಡ್ಯೂಲ್. A.

ಸೆನ್ಸಸ್ ರಿಪೋರ್ಟಿನಲ್ಲಿ ನಮೂದಿರುವ ಅಂಶಗಳ ಪೈಕಿ ಆಕ್ಷೇಪಿಸಲ್ಪಟ್ಟ ವಿಷಯಗಳ ಯಕ್ಸ್‌ಟ್ರ್ಯಾಕ್ಟುಗಳು.

(1891) ಮೈಸೂರು ಸೆನ್ಸಸ್ ಯಾ ಕಾನೇಷುಮಾರಿಯು. 1ನೇ ಭಾಗ.

238ನೇ ಪುಟ. "ಲಿಂಗಾಯಿತರು"—

ಮತದ ಸಂತತಿ ಪ್ರಕಾರ ಲಿಂಗಾಯಿತರ ಮತದ ಮೊದಲಿನ ಅಭಿಪ್ರಾಯವು ಬ್ರಾಹ್ಮಣ ಮತವಿರೋಧವಾಗಿತ್ತು. ಭವಿಷ್ಕಾರ ಹಾಕಿದ್ದಕ್ಕೆ ಹಗೆ ತೀರಿಸುವ ಉದ್ದಿಶ್ಯ ಬ್ರಾಹ್ಮಣರ ದೇವತೆಗಳನ್ನು ಮತ್ತು ಅವರ ಜಾತಿಯ ಶ್ರೇಷ್ಟತ್ವವನ್ನು ನಾಶಪಡಿಸುವದಕ್ಕೋಸ್ಕರ ಹೊಸಕೃಷಿ ಮಾಡಿದಂತಾ ಮತಭ್ರಷ್ಟನಾದ ಬ್ರಾಹ್ಮಣನಿಗೆ ಇದರ ಖ್ಯಾತಿ ವಿಷಯವು ಅನ್ವಯಿಸುತ್ತದೆ. ಈ ಮತದಲ್ಲಿ ವರಟಾಗಿರುವ ಬಹಳ ಜನಗಳ ಸಭೆಯವರು ಪರಂತು ಲಿಂಗಾಯಿತರಲ್ಲಿ ವೀರಶೈವ ಬ್ರಾಹ್ಮಣರ ವಿನಹಾ ಇತರ ಜಾತಿಯವರು ಸೇರಿದ್ದರೆಂಬುವದು ಲಿಂಗಾಯಿತರು ಶೂದ್ರರೆಂದಾಗಿ ತೀರ್ಮಾನವಾಗಿರುವಂಥಾ ಇಂಡಿಯನ್ ಲಾ ರಿಪೋರ್ಟು ಬೊಂಬಾಯಿ 3ನೇ ವಾಲಿಯಂ 273ನೇ ಪೇಜಿನಲ್ಲಿ ಗೋಪಾಲನರಹರ್, ಯದಿರಿ ಹನುಮಂತುಗಣೇಶಸಾಫ್ರಿ ವಗೈರೆ ಮೊಕದ್ದಮೆಯಲ್ಲಿ ಬೊಂಬಾಯಿ ಹೈಕೋರ್ಟಿನಲ್ಲಿ ತೀರ್ಮಾನ ಮಾಡಿರುವ ಪ್ರಕಾರ ಪ್ರತಿ ಒಬ್ಬ ಲಿಂಗಧಾರಿಯು ವೀರಶೈವ ಬ್ರಾಹ್ಮಣನಹಾಗೆ ಆಗಬೇಕು ಎಂಬುವದಾಗಿ ಹೇಳುವ ವಿಷಯವನ್ನು ತಿರಸ್ಕಾರ ಮಾಡಿದರು. (ಲಿಂಗಾಯಿತರೆಲ್ಲರನ್ನೂ ಶೂದ್ರರೆಂಬದಾಗಿ ವಿವರಿಸ ಕೂಡದೆಂತ ಹುಟ್ಟಿರುವ ಸರ್ಕಾರದ ಖಂಡಿತವಾದ ಹುಕ್ಕುಂಗೆ ವಿರೋಧವಾಗಿ ಇದನ್ನು ಅದನ್ನು ಆತನು ನಮೂದಿಸುತ್ತಾನೆ.)

ಲಿಂಗಾಯಿತರ ಅರಳು ಮರುಳಾದ ಮತ್ತು ವಗ್ಗಟ್ಟಾದ ವೈಖರಿಯು ಈಚೆಗೆ ನಡೆದ ಎಣಿಕೆ ಕಾಲದಲ್ಲಿ ಕೆಲವು ಇತರ ಸಬ್ ಡಿವಿಜನ್‌ಗಳಿಗೂ ಮತ್ತು ಕೀಳ್ ಜನಗಳಿಗೂ ಒಂದು ಕೆಟ್ಟ ಉದಾಹರಣೆಯನ್ನು ತೋರಿಸುವದಕ್ಕೆ ತಪ್ಪಲಿಲ್ಲ. ಅಕ್ಕಸಾಲಿಗರ ಕಾಲದಲ್ಲಿಯೂ ಮತ್ತು ಆಕಾಲದಲ್ಲಿಯೂ ಸಹಾ ವಿಶ್ವಕರ್ಮ ಬ್ರಾಹ್ಮಣರೆಂದು ತಮ್ಮನ್ನು ಅಂಗೀಕರಿಸತಕ್ಕ ಹಕ್ಕನ್ನು ಸ್ಥಾಪಿಸಬೇಕೆಂದು ಜನಗಳು ಮೇಲೆ ಕಂಡು ಕಾಣದಂತೆ ಮೊಕದ್ದಮೆ ನಡಿಸುವದಕ್ಕೆ ಅನೇಕ ದಿವಸಗಳಿಂದಾ ವ್ಯಾಜ್ಯವಾಡುತ್ತಾ ಇದ್ದಾರೆ ಅವರು ತಮ್ಮ ಮಾದರಿಗಳನ್ನು ತಮ್ಮ ಸ್ವಂತ ವೇದಗಳನ್ನು ಮತ್ತು ಬರವಣಿಗೆಯನ್ನು ಉಂಟಾಗಿದ್ದರೆಂತಲೂ ಅವನ ಮೂಲವಂಶ ದೈವ ಸಮ್ಮಂಧವಾದ್ದೆಂತಲೂ ಹೇಳಿದರು.

ಶಾಸ್ತ್ರ ಸಮ್ಮಂಧವಾದ ಆಧಾರಕ್ಕೋಸ್ಕರ ಸಾಧ್ಯವಾಗಿರುವ ಸಂಗತಿಗಳ ವಿಷಯದಲ್ಲಿ ತಕ್ಕಷ್ಟು ಆಧಾರವಿಲ್ಲದೆ ಗ್ರಂಥ ಬಾಹುಳ್ಯವಾಗಿಯೂ ಪರಿಶುದ್ಧವಾಗಿಯೂ ಇರುವ ವಿದ್ಯವನ್ನು ಆಕ್ಷೇಪಿಸುವದಕ್ಕೆ ಸಿದ್ಧರಾಗಿದ್ದರು.

ತಮ್ಮ ಸ್ವಂತ ಹಕ್ಕನ್ನು ಸ್ಥಿರಪಡಿಸುವದಕ್ಕೂ ಬೇರೆ ವಿಧವಾಗಿ ಕಾನೇಷುಮಾರಿ ತೆಗಿಯಲ್ಪಡುವ ವಿಷಯದಲ್ಲಿ ತಿರಸ್ಕರಿಸುವದಕ್ಕೂ ಸಿಲ್ಪಿಗಾರರು ಲಿಂಗಾಯಿತ ಘಣದವರು ಉಂಟು ಮಾಡಿದ ಸಮಯವನ್ನು ನಿರೀಕ್ಷಿಸಿಕೊಂಡಿದ್ದರು. ಈ ಸ್ಥಿತಿಯು ಕಷ್ಟವನ್ನು ಬಾಹುಳ್ಯವಾಗಿ ತೋರುವಂತೆ ಮಾಡುವದಕ್ಕೋಸ್ಕರ ಸಾಧಾರಣವಾಗಿ ದೇಶಘಣದವರೆಂದು ಸ್ಥಾಪಿಸಿಕೊಳ್ಳುವ ಕೆಲ ಇತರ ಜಾತಿಯವರು ಲಿಂಗಾಯಿತರು ಕೇಳಿದ ಹಕ್ಕಿಗೆ ವಿರೋಧವಾಗಿ ಅರ್ಜಿ ಕೊಟ್ಟರು. ಲಿಂಗಾಯಿತರ ಪ್ರಶಂಸೆಯು ಸಂಪೂರ್ಣವಾಗಿ ಕುಚಿತಕರವಾಗಿಲ್ಲದೆ ಇರಲಿಲ್ಲ. ಬೇಡರು ರಾಮಾಯಣದ ಪ್ರಸಿದ್ಧ ಗ್ರಂಥಕರ್ತನ ವಂಶಸ್ತರೆಂದು ಹಕ್ಕು ಉಂಟು ಮಾಡಿಕೊಂಡು ವಾಲ್ಮೀಕಿ ಬ್ರಾಹ್ಮಣರೆಂದು ಸ್ಥಾಪಿಸಿದರು. ಕುಂಬಾರರು ತಮ್ಮನ್ನು ಗುಂಡು ಬ್ರಾಹ್ಮಣರೆಂದು ಹೇಳಿಕೊಂಡರು, ಇವರನ್ನೆಲ್ಲಾ ನೋಡಿ ಹೊಟ್ಟೆಕಿಚ್ಚುಪಟ್ಟುಕೊಂಡು ಮಾದಿಗರು ಯಾ ಚಕ್ಕಲರ್ ಪುರಾಣವೆಂದು ಕರಿಯಲ್ಪಡುವದನ್ನೇ ತಮಗೆ ಆಧಾರವಾಗಿ ಇಟ್ಟುಕೊಂಡು ಸಮಯೋಚಿತವರಿಸಿಬಿಟ್ಟು, ತಮ್ಮನ್ನು ಮತಂಗ ಬ್ರಾಹ್ಮಣರೆಂದು ಹೇಳಿಕೊಳ್ಳುತ್ತಾರೆ

ಲಿಂಗಾಯಿತರನ್ನ ಬ್ರಾಹ್ಮಣರಲ್ಲದೆ ಇವರಿಗಿಂತ ಹೆಚ್ಚಾಗಿ ಶೂದ್ರರೆಂತ ವಿಂಗಡಿಸಬಾರದೆಂತಲು ಅವು ಅವರ ಸ್ವಂತ ಹೆಸರಿನಿಂದ ಪ್ರತ್ಯೇಕವಾಗಿ ಕರಿಯಲ್ಪಡಬೇಕೆಂತಲೂ ಮತ್ತು ತಮ್ಮಷ್ಟಕ್ಕೆ ತಾವೇ ವೀರಶೈವ ಬ್ರಾಹ್ಮಣರೆಂದು ಕರದುಕೊಳ್ಳುವದಕ್ಕೆ ಸ್ವತಂತ್ರವಿರುವಾಗ ಅವರು ಪ್ರತಿ ಒಬ್ಬ ಕಾನೇಷುಮಾರಿ ತೆಗಿಯಲ್ಪಟ್ಟವನು ತಾವು ಯಾವ ಮುಖ್ಯವಾದ ಮತ್ತು ಪರಿಶುದ್ಧವಾದ ತರಗತಿಗೆ ಸೇರಿದ್ದಾನೋ ಅದನ್ನು ತಿಳಿಸಬೇಕೆಂದು ಮಹಾರಾಜರ ಗವರ್ನಮೆಂಟಿನವರ ಆರ್ಡರಿನಿಂದ ಈ ಕಷ್ಟ ನಿವಾರಣೆ ಮಾಡಲ್ಪಟ್ಟಿತು. ಈ ರೂಲನ್ನು ಅನುಸರಿಸಿ ಪ್ರತಿ ಒಂದು ಜಾತಿಯು ಮತ್ತು ಕೀಳುಜಾತಿಗೆ ಈ ಹಿಂದೂಮತದ ದಿವ್ಯಭವನದಲ್ಲಿ ಯುಕ್ತವಾದ ಸ್ಥಳವು ಕೊಡಲ್ಪಟ್ಟಿತು ಈ ಶೂದ್ರರೆಂಬುವ ಹೆಸರು ತಹಲ್‌ವರಿಗೂ ಆವರ್ಗದಲ್ಲಿ ಶವಣೆ ಮಾಡಿದ್ದು ಅನೇಕ ಮತದವರಿಗೂ ಅಸಹ್ಯವಾಗಿ ತೋರಿದ್ದರಿಂದ ಅದನ್ನು ಸಂಪೂರ್ಣವಾಗಿ ಈ ಕಾನೇಷುಮಾರಿಯಿಂದ ವಜಾ ಮಾಡಲ್ಪಟ್ಟಿತು. (ಲಿಂಗಾಯಿತರಲ್ಲಿ ಬ್ರಾಹ್ಮಣರೆ ಇಲ್ಲವೆಂತ ಬಹುಶಹಃ ಉದ್ದೇಶಿಸಿದ್ದಾರೆಯಾಗಿ ತೋರುತ್ತೆ.)

ಈ ಲಿಂಗಾಯಿತರ ಪ್ರಶಂಸೆಯು ತಣ್ಣಗಾದ ಕೂಡಲೆ ಅವರಪೈಕಿ ಕೆಲವು ಮುಖ್ಯಸ್ಥರು ಅವರು ಮೊದಲು ಮಾಡಿದ ಆಗ್ರಹದಿಂದ ನಾಚಿಕೆಪಟ್ಟು ಸತ್ಯದಿಂದ ಉಂಟಾಗಿದ್ದ ಶಕ್ತಿ ಆ ಕಾಲದಲ್ಲಿ ತಪ್ಪಿ ಹೋಯಿತೆಂದು ತೋರು

ತೆಂಬುವ ವಿಷಯು ಗಮನಾರ್ಹವಾಗಿದೆ. ಅವರ ಮತದ ಬಿರುದಾದ ಮಾಮೂಲ್ ನಂದೀಧ್ವಜೋತ್ಸವವೂ ವರುಷಾ ವರ್ಷ ನಡಿಸುವದಕ್ಕೆ ಅಪ್ಪಣೆ ಕೊಡಬೇಕಾದ ಸಂಗತಿಯೂ ಪೋಲೀಸ್ ಇಲಾಖೆಯವರ ಆಲೋಚನೆಗೆ ಬಂದಾಗ ಅವರ ಮನೋವೃದ್ಧಿಶ್ಯಗಳು ಪರೀಕ್ಷಿಸಲ್ಪಟ್ಟವು ಲಿಂಗಾಯಿತರು ಬ್ರಾಹ್ಮಣರಾಗಿ ಆದ್ದರಿಂದಲೂ ಮತ್ತು ಬಲಗೈ ಗುಂಪಿಗೆ ಶೇರೋಣನಿಂತು ಹೋದ್ದರಿಂದಲೂ, ಈ ನಂದೀಧ್ವಜೋತ್ಸವವನ್ನು ಮಾಡುವದಕ್ಕೆ ಅವರಿಗೆ ಹಕ್ಕು ಇಲ್ಲವೆಂಬ ಕಾರಣದ ಮೇಲೆ ಸದರೀ ಲಿಂಗಾಯಿತರು ಲೈಸೆನ್ಸ್ ಬಗ್ಯೆ ಕೊಟ್ಟ ಅರ್ಜಿಯು ಇತರ ಜಾತಿ ಜನಗಳಿಂದ ಆಕ್ಷೇಪಿಸಲ್ಪಟ್ಟಿತು. ತರುವಾಯ ಲಿಂಗಾಯಿತರು ತಮ್ಮ ಪೂರ್ವದ ಸ್ಥಿತಿಯನ್ನು ಪುನಹಾ ಸಂಪಾದಿಸಿಕೊಳ್ಳುವದಕ್ಕೆ ಸಂತೋಷ ಪಡುವಂತೆ ತೋರಿಸಿಕೊಂಡರು.

240ನೇ ಪುಟ. ಮೇಲ್ಕಂಡ ಸಂಗತಿಗಳು ಈಮತಸ್ಥರು ಬ್ರಾಹ್ಮಣರಿಗೆ ತೋರಿಸಿದ ಅಜ್ಞಾನವಾದ ಮರ್ಯಾದೆಯನ್ನು ಸೂಚಿಸುತ್ತದೆ. ಈ ಪ್ರತಿ ಒಂದು ಚಿಲ್ಲರೆ ಗುಂಪಿಗೆ ಜಾತಿಯ ಅವುನ್ನತ್ಯವನ್ನು ನಾಶ ಪಡಿಸುವವರಲ್ಲಿ ಇಷ್ಟವಿರುವಾಗ ಕೆಳಗಿನ ಅಸಮಾನಗಳ ನಾಶನಕ್ಕೆ ಬಹಳ ವಿರೋಧವಾಗಿದೆ ಎಂಬುವದು ಈಗ ಹಿಂದೂ ಜನಗಳಲ್ಲಿ ನಡಿಯುತಕ್ಕಂಥಾ ಉಬ್ಬುವಿಕೆಯು ಮತ್ತು ಉಬ್ಬುವಿಕೆಯು ಮುಖ್ಯವಾದ ವಿಷಯವಾಗಿದೆ ಬಹಳ ಮಂದಿ ಮಾಡುವ ಅಯುಕ್ತಿಯಿಂದ ಪ್ರತಿ ಅಬ್ರಾಹ್ಮಣನಗುಂಪು ಬ್ರಾಹ್ಮಣನ ಅವುನ್ನತ್ಯದಿಂದ ತೊಳದು ಬಿಟ್ಟು ತನ್ನ ಸ್ವಂತ ಗುಂಪನ್ನು ಕೀಳುಮಾಡಿ ಅವನ ಸ್ಥಾನವನ್ನು ಆಕ್ರಮಿಸಿಕೊಳ್ಳುವದಕ್ಕೆ ಅಪೇಕ್ಷಿಸುತ್ತಾನೆ.

244ನೇ ಪುಟ. ಆದ್ದರಿಂದಲೇ ಲಿಂಗಾಯಿತರು ಬ್ರಾಹ್ಮಣ ಮತಕ್ಕೋಸ್ಕರ ವ್ಯಾಜ್ಯವಾಡುತ್ತಾ ಇದ್ದಾಗ ಮೊದಲಿಯಾರ್ರು ಮತ್ತು ಅವರ ಸ್ನೇಹಿತರು ಅವರಿಂದ ಕಲ್ತುಕೊಂಡು ತಮ್ಮನ್ನು ಭೂವೈಶ್ಯರೆಂದು ಹೇಳಿಕೊಳ್ಳುವದಕ್ಕೆ ಪ್ರಯತ್ನಪಟ್ಟರು.

297ನೇ ಪುಟ. ಒಂದು ಉದಾಹರಣೆಗೋಸ್ಕರ ಹಾಲಿ ಆಲೋಚನೆಯಲ್ಲಿರುವ ಕಾನೇಷುಮಾರಿಯಲ್ಲಿ ನಮೂದಿರುವ ಲಿಂಗಾಯಿತರ ನಡವಳಿಕೆಗಳನ್ನು ಹೇಳ ಬಹುದು. ಬ್ರಾಹ್ಮಣರ ಗುಂಪುಗಳಿಗೆ ವ್ಯಾಪಿಸುವ ಒಂದು ಕಡೆಯಲ್ಲಿ ಸೇರುವ ಮತ್ತೊಂದು ಕಡೆಯಲ್ಲಿ ಪ್ರಚರಿಸುವ ಗೋತ್ರಗಳು ಅವರಿಗೆ ಇಲ್ಲ. ಪ್ರತಿ ಒಬ್ಬ ಕಾನೇಷುಮಾರಿ ತೆಗಿಯಲ್ಪಟ್ಟ ಬ್ರಾಹ್ಮಣನ ಗೋತ್ರ, ಶಾಖಾ ವಗ್ಯೆರೆಯನ್ನು ವಿವರಿಸಬೇಕೆಂಬ ಕಟ್ಲೆ ಪ್ರಚರಿಸಲ್ಪಟ್ಟಾಗ ಲಿಂಗಾಯಿತರು ಬ್ರಾಹ್ಮಣರ ದರ್ಜೆಗೆ ತಾವುನ್ನೂ ಸೇರಬೇಕೆಂಬ ತಮ್ಮಕ್ಕ ಹಕ್ಕನ್ನು ಸ್ಥಾಪಿಸಿ ಹೇಳುವದಕ್ಕೋಸ್ಕರ ಮತಕ್ಕೆ ಒಂದು ಒಂದರ ಪ್ರಕಾರ ತಮ್ಮ ಗುಂಪುಗಳಲ್ಲಿಯೂ ಸಹಾ ನಾಲ್ಕು ಗೋತ್ರಗಳು ಇವೆಯಂತಲೂ ತಾವು ವೀರಶೈವ ಬ್ರಾಹ್ಮಣರಾದ್ದರಿಂದ ತಮ್ಮ ಸ್ವಂತ ಗೋತ್ರಗಳಾದ 1ನೇ ರೇಣುಕ 2ನೇ ದಾರುಕ 3ನೇ ಘಂಟಾಕರ್ನ, 4ನೇ ಗಜಕರ್ಣ, ಈ 4 ಗೋತ್ರಗಳನ್ನು ರಿಕಾರ್ಡು ಮಾಡೇ ತೀರಬೇಕೆಂಬದಾಗಿ ಲಿಂಗಾಯಿತರು ವೃಥವಾಗಿ ಹೇಳಿದರು.

ಪರಂತು ಈ ಸಂಗತಿ ಮಾಮೂಲಾಗಿ ಗೊತ್ತಾದ ಬ್ರಾಹ್ಮಣರ ಮಟ್ಟಿಗೆ ಬೇಕಾಗಿರುವದ್ದರಿಂದ ಲಿಂಗಾಯಿತರು ಮಾಡಿರುವ ದಾಖಲೆಗಳು ಪೆಚ್ಚಾದ್ದೆಂದು ಭಾವಿಸಲ್ಪಟ್ಟವು. ಈ ಮೇಲೆ ಹೇಳಿರುವ 4 ಗೋತ್ರಗಳು ಹಿಂದೂ ಮತದ ಪ್ರಸಿದ್ಧರಾದ ಯಾವ ಋಷಿಗಳಿಂದಲೂ ಉತ್ಪತ್ತಿಸಲಿಲ್ಲವೆಂಬ ಅಂಶವೂ ಈ ಸಂದರ್ಭದಲ್ಲಿ ಗಮನಿಸಲ್ಪಡಬೇಕಾಗಿದೆ.

309ನೇ ಪುಟ. ಈ ವಿಷಯವನ್ನೆಲ್ಲಾ ಮರೆ ಮಾಡುವದಕ್ಕೆ ಲಿಂಗಾಯಿತರು ವೃಥಾಚಾರವಾಗಿ 18 ಪಣ ಅಥವಾ ಬಲಗೈ ಗುಂಪಿಗೆ ತಾವು ಯಜಮಾನರೆಂತಲೂ ಮತ್ತು ಫಣಗಳಿಗೆ ತಾವು ವಿಚಾರಣೆಕರ್ತರೆಂತಲೂ ವ್ಯಾಖ್ಯಾನಾಗಿದ್ದಾಗ್ಯು ಯಾವ ಗುಂಪಿಗೂ ಶೇರಿದವರಲ್ಲವೆಂದು ಹೇಳಿದರು ಈ ಕಾನೇಷುಮಾರಿಯಲ್ಲಿ ಬ್ರಾಹ್ಮಣಜಾತಿಯಲ್ಲಿ ಎಣಿಕೆ ಮಾಡಲ್ಪಡಬೇಕೆಂಬ ದುರಾಸೆಯಿಂದ ಬ್ರಾಹ್ಮಣರಿಗೂ ತಮಗೂ ಇರುವಂಥಾ ಭೇದಗಳನ್ನು ಮತ್ತು ವಿಶೇಷಗಳನ್ನು ಮರಸಿಬಿಡುವದಕ್ಕೆ ಇದ್ದಂಥಾ ಕೋರಿಕೆಯು ಈ ಸಂಗತಿಯಲ್ಲಿ ಅವರ ಕೃತ್ಯಗಳಿಗೆ ಆದಿಕಾರಣವಾಗಿರುತ್ತೆ.

ಅಪೆಂಡಿಕ್ಸ್ 12ನೇ ಪುಟ ಪ್ಯಾರ 3.

ಲಿಂಗಾಯಿತರನ್ನು ಎಣಿಕೆ ಮಾಡುವದರಲ್ಲಿ 3—4ನೇ ಕಾಲಂಗಳಲ್ಲಿ ಜಾತಿ ಮತ್ತು ಮತದಲ್ಲಿಯೂ ಆ ಹೆಸರಿನಿಂದಲೇ ದಾಖಲ್ ಮಾಡಬೇಕು. ಆದರೆ 5ನೇ ಕಾಲಂನಲ್ಲಿ ಜಾತಿಯ ಪಂಗಡಗಳನ್ನು ಸಾದಾ ಬಣಜಿಗ, ನೊಣಬ, ಕೋರಿಶೆಟ್ಟಿ, ವಗ್ಯೆರೆ ಎಂತ ವಿಶದವಾಗಿ ದಾಖಲ್ಮಾಡಬೇಕು. ಎಣಿಕೆ ಮಾಡುವವನು ಎಣಿಕೆ ಮಾಡಲ್ಪಟ್ಟ ಲಿಂಗಾಯಿತನನ್ನು ತಾನು ಯಾವ ಜಾತಿಗೆ ಶೇರಿದ್ದಾನೋ ಅಂಥಾ ಫಣಕ್ಕೆ ಅವನು ಮೆಂಬರೇ ಅಲ್ಲವೆ ಎಂಬುವ ಅಂಶವನ್ನು ಕೇಳಿ 5ನೇ ಕಾಲಂನಲ್ಲಿ ಅವನ ಜವಾಬ್ ವಿಶದವಾಗಿ ನಮೂದಿಸಬೇಕು.

ಶಾಂತವೀರಪ್ಪನರುಜುವು.

ಹುಚ್ಚೀರಪ್ಪನರುಜು.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 415.

ಮೃತಪಟ್ಟ ಶಿಪಾಯಿ ರಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಕ್ಲೋಸ್‌ಪೇಟೆ ಕಸಬಾದಲ್ಲಿರುವ 1ನೇ ಭದ್ರೇಗವುಡ 2ನೇ ಚನ್ನನಾಯಿಕ ಇವರು, ಮೃತಪಟ್ಟ ಸದರೀ ಶಿಪಾಯಿ ರಾಮಯ್ಯನವರಿಗೆ 1ನೇ ಯವನು ಸೋದರಳಿಯ ಮತ್ತು 2ನೇ ಯವ ಬಂಧುವು ಆಗಬೇಕೆಂಬ ಹಕ್ಕುದಾರಿ ಮೇಲೆ ಕ್ಲೋಸ್‌ಪೇಟೆ ಸ್ಥಳದ 1ನೇ ಭದ್ರೇಗವುಡ 2ನೇ ಚನ್ನನಾಯಿಕ ಇವರು, ಕ್ಲೋಸ್‌ಪೇಟೆ ವಾಸಸ್ಥರಾಗಿ ಮೃತಪಟ್ಟ ಶಿಪಾಯಿ ರಾಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ಮಸೂಲ್ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಭದ್ರೇಗವುಡ 2ನೇ ಚನ್ನನಾಯಿಕರ ಅರ್ಜಿಯನ್ನು ಸನ್ 1896ನೇ ಇಸವಿ ಜುಲೈ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿಪಾಯಿ ರಾಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 434.

ಮೃತಪಟ್ಟ ಪುಟ್ಟಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಮುಳಬಾಗಲು ತಾಲ್ಲೂಕು ಬೈರಕೂರು ಹೋಬಳಿ ಗುಡಪಲ್ಲಿ ಶಾನುಭೋಗ ರಾಮಪ್ಪನವರ ಕುಮಾರನಾದ ನಾರಣಪ್ಪನು, ಮೃತಪಟ್ಟ ಸದರೀ ಪುಟ್ಟಪ್ಪನವರಿಗೆ ಅವಿಭಕ್ತ ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಗುಡಪಲ್ಲಿ ಸ್ಥಳದ ನಾರಣಪ್ಪನವರು, ಡಿಟೋ ವಾಸಸ್ಥರಾಗಿ ಮೃತಪಟ್ಟ ಪುಟ್ಟಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದ್ದರೀ ದರಖಾಸ್ತುದಾರರಾದ ನಾರಣಪ್ಪನವರ ಅರ್ಜಿಯನ್ನು ಸನ್ 1896ನೇ ಇಸವಿ ಜುಲೈ ತಿಂಗಳ ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895—96ನೇ ಇಸವಿ ಮಿ|| ಅರ್ಜೀ ನಂಬರ್ 435.

ಮೃತಪಟ್ಟ ರಾಮಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಮುಳಬಾಗಲು ತಾಲ್ಲೂಕು ದುಗ್ಗಸಂದ್ರದ ಹೋಬಳಿ ಅಂಬಲಿಕಲ್ಲಿನಲ್ಲಿಯಿರುವ ಸಾಕಮ್ಮನು, ಮೃತಪಟ್ಟ ಸದರೀ ರಾಮಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಅಂಬಲಿಕಲ್ಲು ಸ್ಥಳದ ಸಾಕಮ್ಮನವರು, ಡಿಟೋ ವಾಸಸ್ಥರಾಗಿ ಮೃತಪಟ್ಟ ರಾಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಾಕಮ್ಮನವರ ಅರ್ಜಿಯನ್ನು ಸನ್1896ನೇ ಇಸವಿ ಜುಲೈ ತಿಂಗಳ ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895—96ನೇ ಇಸವಿ ಮಿ|| ಅರ್ಜೀ ನಂಬರ್ 436.

ಮೃತಪಟ್ಟ ದೊಡ್ಡಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಬೆಂಗಳೂರ ಪವಾಡಕಟ್ಟೆ ಪೇಟೆಯಲ್ಲಿರುವ 1ನೇ ಕೆಂಪಯ್ಯ 2ನೇ ಚಿಕ್ಕದೊಡ್ಡಯ್ಯ, ಮೃತಪಟ್ಟ ಸದರೀ ದೊಡ್ಡಯ್ಯನವರಿಗೆ ತಮ್ಮಂದರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಪವಾಡಕಟ್ಟೆಪ್ಯಾಟೆ ಸ್ಥಳದ 1ನೇ ಕೆಂಪಯ್ಯ 2ನೇ ಚಿಕ್ಕದೊಡ್ಡಯ್ಯನವರು, ಡಿಟೋ ಪ್ಯಾಟೆ ವಾಸಸ್ಥರಾಗಿ ಮೃತಪಟ್ಟ ದೊಡ್ಡಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಕೆಂಪಯ್ಯ 2ನೇ ಚಿಕ್ಕದೊಡ್ಡಯ್ಯ ಯಿವರ ಅರ್ಜಿಯನ್ನು ಸನ್1896ನೇ ಇಸವಿ ಜುಲೈ ತಿಂಗಳ ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಜೂನ್ ತಿಂಗಳ 24ನೇ ತಾರೀಖಿನಲ್ಲಿ ಕೋರ್ಟ್ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 26ನೇ ಮೇ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕಿದಾರರಾದ ಈ ಕೆಳಗೆ ನಮೂದಿಸುವ ಜೋಡೀದಾರರಿಂದ ಬರಬೇಕಾದ ಜವಿರ್ಗೆ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟ ಬೆಂಗಳೂರು ತಾಲ್ಲೂಕು ಕಚೇರಿಯಲ್ಲಿ ಈ ಕೆಳಗೆ ನಮೂದಾಗುವ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟ ಇದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895–96ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಜೋಡೀ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರ್ಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು) ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್.				ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.	ಹರಾಜ್ ತಾರೀಖು.	ಷರಾ.
				ಭೂಮಿ ಸ್ವತ್ತು.	ಜೋಡಿ ವಗೈರೆ ಸ್ವತ್ತು.	ವಿಸ್ತೀರ್ಣ.	ಸರಕಾರಕ್ಕೆ ಬರತಕ್ಕ ಜೋಡಿ ಮೊಬಲಗು.			
1	2	3	4	5	6	7	8	9	10	11
							ರೂ. ಆ. ಪೈ.	ರೂ. ಆ. ಪೈ.		
ಬೆಂಗಳೂರು.	ಕೃಷ್ಣರಾಜಪುರ.	ಜೋಡಿ ಕಲ್ಕೆರೆ.	ಶಾಂಭಟ್ಟ.	$\frac{1}{2}$ ವೃತ್ತಿ.	ಜೋಡಿ	..	4 4 2	20 13 8	1896ನೇ ಇಸವಿ ಜುಲೈ 27ರಲ್ಲು	ಜೋಡಿ ರೂಪಾಯಿ 4—4—2

ಚೆಕ್ಕು ಬಂದಿ.

ತಾಕು I ಖುಷ್ಕಿ 3 ಕೊಳಗ.

ಪೂರ್ವಕ್ಕೆ—ಮಾರಗೊಂಡಹಳ್ಳಿ ಗ್ರಾಮದ ಯಲ್ಲೆ
ಪಶ್ಚಿಮಕ್ಕೆ—ನಂಜಪ್ಪನ ಜಮೀನು
ಉತ್ತರಕ್ಕೆ—ನಾರಣಭಟ್ಟನ ವೃತ್ತಿ
ದಕ್ಷಿಣಕ್ಕೆ—ಗಂಗಾಧರಯ್ಯ, ಸೀತಾರಾಮಯ್ಯ ಇವರ ಜಮೀನ್

ತಾಕು II ತರೀ 3 ಕೊಳಗ.

ಪೂರ್ವಕ್ಕೆ—ಸೂರಭಟ್ಟರು, ರಾಮಸ್ವಾಮಿ ಭಟ್ಟರ ಗದ್ದೆ
ಪಶ್ಚಿಮಕ್ಕೆ—ನಂಜಪ್ಪನ ಗದ್ದೆ
ಉತ್ತರಕ್ಕೆ—ನಾರಿವಾಳ
ದಕ್ಷಿಣಕ್ಕೆ—ಬೂಡದಿ ಮಿತೆ

ತಾಕು III ತರೀ 3 ಕೊಳಗ.

ಪೂರ್ವಕ್ಕೆ—ನಂಜಪ್ಪನ ದಳೆ
ಪಶ್ಚಿಮಕ್ಕೆ—ಸುಬ್ಬರಾಯಪ್ಪನ ದಳೆ
ಉತ್ತರಕ್ಕೆ—ರಾಜಕಾಲ್ವೆ
ದಕ್ಷಿಣಕ್ಕೆ—ವೇದವೃತ್ತಿ ಗದ್ದೆ

ತಾಕು IV ವಠಾರ.

ಪೂರ್ವಕ್ಕೆ—ಸುಬ್ಬಾಶಾಸ್ತ್ರಿ ವಠಾರ
ಪಶ್ಚಿಮಕ್ಕೆ—ರಾಮಚಂದ್ರಯ್ಯನ ವಠಾರ
ಉತ್ತರಕ್ಕೆ—ಬೀದಿ
ದಕ್ಷಿಣಕ್ಕೆ—ಸದರೀ ಸುಬ್ಬಾಶಾಸ್ತ್ರಿ ವಠಾರ

ತಾಕು V ಜಮೀನು.

ಪೂರ್ವಕ್ಕೆ—ಮಾರಗೊಂಡಹಳ್ಳಿ ಗ್ರಾಮದ ಯಲ್ಲೆ
ಪಶ್ಚಿಮಕ್ಕೆ—ಆಗರದ ಯಲ್ಲೆ
ಉತ್ತರಕ್ಕೆ—ಬಿಳೆಸ್ವಾರ ಯಲ್ಲೆ
ದಕ್ಷಿಣಕ್ಕೆ—ಕೌದೇನಹಳ್ಳಿ ಯಲ್ಲೆ

ಈ ಮಧ್ಯೆ ಗ್ರಾಮದಲ್ಲಿ ವೃತ್ತಿ ಹಂಚಿಕೆ ಆದ್ದು ಜಾತ ವುಳದ್ದು ದಾಮಾಷಾಯಿ ಮೇರಿಗೆ ಈ ಅರ್ಧ ವೃತ್ತಿಗೆ ಸಲ್ಲತಕ್ಕದ್ದು ಸಹ

			ರಾಮಕೃಷ್ಣ ಭಟ್ಟ	ವೃತ್ತಿ 1ಕ್ಕೆ	ಜೋಡಿ	..	8 8 3	46 14 9		

ತಾಕು 1ಕ್ಕೆ ಖುಷ್ಕಿ 6 ಕೊಳಗ.

ಪೂರ್ವಕ್ಕೆ—ನಂಜಪ್ಪನ ವೃತ್ತಿ
ಪಶ್ಚಿಮಕ್ಕೆ—ಡಿಟೋ
ಉತ್ತರಕ್ಕೆ—ಗ್ರಾಮದ ಬೇಲಿ
ದಕ್ಷಿಣಕ್ಕೆ—ಶಾಮರಾಯರ ಜಮೀನ್

ತಾಕು II ತರೀ 6 ಕೊಳಗ.

ಪೂರ್ವಕ್ಕೆ—ನರಸಿಂಹಯ್ಯನ ಜಮೀನ್
ಪಶ್ಚಿಮಕ್ಕೆ—ನಂಜಪ್ಪನ ಜಮೀನ್
ಉತ್ತರಕ್ಕೆ—ರಾಜಕಾಲ್ವೆ
ದಕ್ಷಿಣಕ್ಕೆ—ನಾರಿವಾಳ

ತಾಕು III ತರೀ 6 ಕೊಳಗ.

ಪೂರ್ವಕ್ಕೆ—ನಂಜಪ್ಪನ ದಳೆ
ಪಶ್ಚಿಮಕ್ಕೆ—ಪುಟ್ಟನ ದಳೆ
ಉತ್ತರಕ್ಕೆ—ನಾರಿವಾಳ
ದಕ್ಷಿಣಕ್ಕೆ—ಬೂಡಿದಿ ಮಿತೆ

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲ್. ವೃತ್ತಿ ವಗೈರೆ.	ಜೋಡಿ ವಗೈರೆ.	ಸಿಸ್ತು.	ಸರಕಾರಕ್ಕೆ ಬರತಕ್ಕ ಜೋಡಿ ಮೊಬಲಗು.	ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.	ಹರಾಜು ತಾರೀಖು.	ಷರಾ.
1	2	3	4	5	6	7	8	9	10	11
ಬೆಂಗಳೂರು.	ಕೃಷ್ಣರಾಜಪುರ.	ಜೋಡಿ ಕನ್ನಲ್ಲಿ.	ರಾಮಕೃಷ್ಣಭಟ್ಟ	ವೃತ್ತಿ 1ಕ್ಕೆ	ಜೋಡಿ	..	ರೂ. ಅ. ಪೈ. 8 8 3	ರೂ. ಆ. ಪೈ. 46 14 9	ಹರಾಜು ತಾರೀಖು 96ನೇ ಇಸವಿ ಜುಲೈ 27ರಲ್ಲಿ	ಜೋಡಿ ರೂಪಾಯಿ 8—8—3

ತಾಕು IV ಬಾಗಾಯತು ಪಡಿ 2.
ಪೂರ್ವಕ್ಕೆ—ವೀರಭದ್ರಪ್ಪನ ಮಾನ್ಯ
ಪಶ್ಚಿಮಕ್ಕೆ—ಹೋಣಿ
ಉತ್ತರಕ್ಕೆ—ನಂಜಪ್ಪನ ಜಮೀನು
ದಕ್ಷಿಣಕ್ಕೆ—ಸೀತಾರಾಮಯ್ಯನ ಜಮೀನು
ತಾಕು V ವಠಾರ.
ಪೂರ್ವಕ್ಕೆ—ನಂಜುಂಡಭಟ್ಟರ ವಠಾರ
ಪಶ್ಚಿಮಕ್ಕೆ—ಬೀದಿ
ಉತ್ತರಕ್ಕೆ—ನಲ್ಲೂರು ನಂಜಪ್ಪನ ವಠಾರ
ದಕ್ಷಿಣಕ್ಕೆ—ಸುಬ್ಬಾಭಟ್ಟರ ನಂಜಪ್ಪನ ವಠಾರ
ಈ ಮಧ್ಯೆ ರೈತ ಮೇಕೆಮುದ್ದ ಇರುವ ಹುಲ್ಲುಮನೆ 2 ಮಾಳಿಗೆಮನೆ 1ನೂ ಸಹ
ತಾಕು VI ಜಮೀನು.
ಪೂರ್ವಕ್ಕೆ—ಮಾರಗೊಂಡನಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಅಗರದ ಯಲ್ಲೆ
ಉತ್ತರಕ್ಕೆ—ಬಿಳೇಶ್ವಾರ ಯಲ್ಲೆ
ದಕ್ಷಿಣಕ್ಕೆ—ಕೌದೇನಹಳ್ಳಿ ಯಲ್ಲೆ
ಈ ಮಧ್ಯೆ ಗ್ರಾಮದಲ್ಲಿ ವೃತ್ತಿ ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಾ
ಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

			ವೆಂಕಟಸುಬ್ಬಯ್ಯ	ವೃತ್ತಿ 1ಕ್ಕೆ	ಜೋಡಿ	..	8 8 3	31 4 6

ತಾಕು 1ಕ್ಕೆ ಖುಷ್ಕಿ 6 ಕೊಳಗ.
ಪೂರ್ವಕ್ಕೆ—ಮಾರಗೊಂಡನಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ದಂಡು ಸುಬ್ಬಾಶಾಸ್ತ್ರಿ, ನಾರಣಭಟ್ಟರ ಜಮೀನು
ಉತ್ತರಕ್ಕೆ—ಸೂರ್ಯಭಟ್ಟರ ಜಮೀನು
ದಕ್ಷಿಣಕ್ಕೆ—ದಂಡು ಸೂರಶಾಸ್ತ್ರಿ, ಅಶ್ವತ್ಥಭಟ್ಟರ ಜಮೀನು
ತಾಕು II ತರೀ 6 ಕೊಳಗ.
ಪೂರ್ವಕ್ಕೆ—ನಾರಣಭಟ್ಟ, ಸುಬ್ಬಾಭಟ್ಟರ ದಳೆ
ಪಶ್ಚಿಮಕ್ಕೆ—ಸೀತಾರಾಮಯ್ಯನ ದಳೆ
ಉತ್ತರಕ್ಕೆ—ರಾಜಕಾಲ್ವೆ
ದಕ್ಷಿಣಕ್ಕೆ—ಸಾರೋಡು ಕಾಲ್ವೆ
ತಾಕು III ತರೀ 6 ಕೊಳಗ.
ಪೂರ್ವಕ್ಕೆ—ರಾಮಕೃಷ್ಣಭಟ್ಟರ ದಳೆ
ಪಶ್ಚಿಮಕ್ಕೆ—ಚಂದ್ರಯ್ಯನ ದಳೆ
ಉತ್ತರಕ್ಕೆ—ನಾಲೆವಾಳ
ದಕ್ಷಿಣಕ್ಕೆ—ಖೂಡಿದಿ ಮಿತೆ
ತಾಕು IV ಬಾಗಾಯತು 1 ಪಡಿ.
ಪೂರ್ವಕ್ಕೆ—ಕರೇಗವುಡ, ಮುನಿಗನ ತೋಪು
ಪಶ್ಚಿಮಕ್ಕೆ—ಬೀಳಿ
ಉತ್ತರಕ್ಕೆ—ಮೆಣಸಿನ ತೋಟಗಳು
ದಕ್ಷಿಣಕ್ಕೆ—ರಾಮಸ್ವಾಮಿ ಕಣ
ತಾಕು V ವಠಾರ.
ಪೂರ್ವಕ್ಕೆ—ರಾಮಸ್ವಾಮಿಭಟ್ಟರು ಮತ್ತು ಸೂರಿಭಟ್ಟರ ವಠಾರ
ಪಶ್ಚಿಮಕ್ಕೆ—ಇನಾಂತಿ ವಠಾರ
ಉತ್ತರಕ್ಕೆ—ಬೀದಿ
ದಕ್ಷಿಣಕ್ಕೆ—ಸೂರಿಭಟ್ಟರು, ಅಪ್ಪಾರಾಯಪ್ಪ ಮತ್ತು ಪಾಪಣ್ಣನ ಜಮೀನು

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ವೃತ್ತಿನ ತಪ್ಸೀಲ್.				ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.	ಹರಾಜ್ ತಾರೀಖು.	ಷರಾ.
				ವೃತ್ತೀ ತಪ್ಸೀಲ್.	ಜೋಡಿ ವಗೈರೆ ತಪ್ಸೀಲ್.	ವಿಸ್ತೀರ್ಣ.	ಸರ್ಕಾರಕ್ಕೆ ಬರತಕ್ಕ ಜೋಡಿ ಮೊಬಲಗು.			
1	2	3	4	5	6	7	8	9	10	11
ಬೆಂಗಳೂರು.	ಕೃಷ್ಣರಾಜಪುರ.	ಜೋಡೀ ಕಲ್ಲುಕೆರೆ.	ವೆಂಕಟಸುಬ್ಬಯ್ಯ	ವೃತ್ತಿ 1ಕ್ಕೆ	ಜೋಡಿ	..	ರೂ. ಆ. ಪೈ. 8 8 3	ರೂ. ಆ. ಪೈ. 31 4 6	ಹರಾಜ್ ತಾರೀಖು 96ನೇ ಇಸವಿ ಜುಲೈ 27ರಲ್ಲು	ಜೋಡೀ ರೂಪಾಯಿ 8—8—3

ತಾಕು VI.

ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ

ಪಶ್ಚಿಮಕ್ಕೆ—ಅಗರದಯಲ್ಲೆ

ಉತ್ತರಕ್ಕೆ—ಬಿಳೇಸ್ವಾರ ಯಲ್ಲೆ

ದಕ್ಷಿಣಕ್ಕೆ—ಕೌದೇನಹಳ್ಳಿ ಯಲ್ಲೆ

ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರು ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

			ರಾಮಲಿಂಗಭಟ್ಟ	ವೃತ್ತಿ 1÷1	ಜೋಡಿ	..	2 12 11	6 13 6		ಜೋಡೀ ರೂಪಾಯಿ 2—12—11

ತಾಕು I ಖುಷ್ಕಿ ಕೊಳಗ 1—ಬಳ್ಳ 1.

ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ

ಪಶ್ಚಿಮಕ್ಕೆ—ಸುಬ್ಬಾಶಾಸ್ತ್ರಿಗಳ ಜಮೀನ್

ಉತ್ತರಕ್ಕೆ—ಶಾನುಭೋಗನ ವೃತ್ತಿ

ದಕ್ಷಿಣಕ್ಕೆ—ಅಶ್ವತ್ಥಭಟ್ಟರು ವಗೈರೇರ ಜಮೀನ್

ತಾಕು II ತರೀ 5 ಕೊಳಗ.

ಪೂರ್ವಕ್ಕೆ—ಉಪ್ಪರಗಡ್ಡೆ ಗದ್ದೆ

ಪಶ್ಚಿಮಕ್ಕೆ—ಹತ್ತು ಬಳ್ಳದ ಹಳ್ಳದಗದ್ದೆ

ಉತ್ತರಕ್ಕೆ—ಆಚೆಕಾಲ್ವೆದಳೆ ಹಂಚಿಕೆ

ದಕ್ಷಿಣಕ್ಕೆ—ಈಚೆಕಾಲ್ವೆದಳೆ ಹಂಚಿಕೆ

ತಾಕು III ವಠಾರ.

ಪೂರ್ವಕ್ಕೆ—ದಾರಿ

ಪಶ್ಚಿಮಕ್ಕೆ—ಸುಬ್ಬಾಭಟ್ಟರ ಹಿತ್ತಲು

ಉತ್ತರಕ್ಕೆ—ಅಗಸರಮನೆ

ದಕ್ಷಿಣಕ್ಕೆ—ಅಶ್ವತ್ಥಭಟ್ಟ, ಸುಬ್ಬಾಶಾಸ್ತ್ರಿ ವಠಾರ

ತಾಕು IV.

ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ

ಪಶ್ಚಿಮಕ್ಕೆ—ಅಗರದ ಯಲ್ಲೆ

ಉತ್ತರಕ್ಕೆ—ಬಿಳೇಸ್ವಾರ ಯಲ್ಲೆ

ದಕ್ಷಿಣಕ್ಕೆ—ಕೌದೇನಹಳ್ಳಿ ಯಲ್ಲೆ

ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

			ಕೊಮಾರಯ್ಯ	ವೃತ್ತಿ $\frac{3}{4}$	ಜೋಡಿ	..	6 6 1	20 0 7		

ತಾಕು I ಖುಷ್ಕಿ 4 ಕೊಳಗದ 2 ಬಳ್ಳ.

ಪೂರ್ವಕ್ಕೆ—ಅಪ್ಪಾರಾಯಪ್ಪ ವಗೈರೇರ ಜಮೀನ್

ಪಶ್ಚಿಮಕ್ಕೆ—ಪಾಳ್ಯದ ನರಸಿಂಹಶಾಸ್ತ್ರಿ ವಗೈರೇರ ಜಮೀನ್

ಉತ್ತರಕ್ಕೆ—ರಾಮಚಂದ್ರಯ್ಯನ ಜಮೀನ್

ದಕ್ಷಿಣಕ್ಕೆ—ಜಾರಕಬಂಡೆ

ತಾಕು II ತರೀ 4 ಕೊಳಗದ 2 ಬಳ್ಳ.

ಪೂರ್ವಕ್ಕೆ—ನಂಜುಂಡಭಟ್ಟರ ದಳೆ

ಪಶ್ಚಿಮಕ್ಕೆ—ನಂಜಪ್ಪನ ದಳೆ

ಉತ್ತರಕ್ಕೆ—ಸಾರೋಡು ಕಾಲ್ವೆ

ಕ್ಷಿಣಕ್ಕೆ—ಸೂರಭಟ್ಟರ ದಳೆ

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲ್. ವೃತ್ತೀ ತಪ್ಸೀಲ್.	ಸ್ವತ್ತಿನ ತಪ್ಸೀಲ್. ಜೋಡೀ ವಗೈರೆ ತಪ್ಸೀಲ್.	ಸ್ವತ್ತಿನ ತಪ್ಸೀಲ್. ವಿಸ್ತೀರ್ಣ.	ಸ್ವತ್ತಿನ ತಪ್ಸೀಲ್. ಸರಕಾರಕ್ಕೆ ಬರತಕ್ಕ ಜೋಡೀ ಮೊಬಲಗು.	ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.	ಹರಾಜ್ ತಾರೀಖು.	ಷರಾ.
1	2	3	4	5	6	7	8	9	10	11
ಬೆಂಗಳೂರು.	ಕೃಷ್ಣರಾಜಪುರ.	ಜೋಡೀ ಕಲ್ಲುಕೆರೆ.	ಕೊಮಾರಯ್ಯ	ವೃತ್ತಿ $\frac{3}{4}$	ಜೋಡಿ	..	ರೂ. ಆ. ಪೈ. 6 6 1	ರೂ. ಆ. ಪೈ. 20 0 7	1896ನೇ ಇಸವಿ ಜುಲೈ 27ದಲ್ಲು.	6—6—1
			ಐವರಖಂಡಪುರದ ರಾಮಕೃಷ್ಣಯ್ಯ	ವೃತ್ತಿ $\frac{3}{4}$	ಜೋಡಿ	..	6 6 1	23 7 4		

(ಕೊಮಾರಯ್ಯ)

ತಾಕು III ತರೀ 4 ಕೊಳಗದ 2 ಬಳ್ಳ.
ಪೂರ್ವಕ್ಕೆ—ಶಟ್ಟಿದಳೆ
ಪಶ್ಚಿಮಕ್ಕೆ—ಸೂರಿಭಟ್ಟರ ದಳೆ
ಉತ್ತರಕ್ಕೆ—ಕರೇಗವುಡನಗದ್ದೆ
ದಕ್ಷಿಣಕ್ಕೆ—ಬೂಡಿದಿ ಮಿತೆ

ತಾಕು IV ಬಾಗಾಯತು ಪಡಿ 2.
ಪೂರ್ವಕ್ಕೆ—ವೀರಭದ್ರನ ಮಾನ್ಯ
ಪಶ್ಚಿಮಕ್ಕೆ—ರಾಮಸ್ವಾಮಿಭಟ್ಟನ ಹಿಸ್ಸೇ ಜಮೀನು
ಉತ್ತರಕ್ಕೆ—ಸೂರಿಭಟ್ಟನ ಜಮೀನು
ದಕ್ಷಿಣಕ್ಕೆ—ನಂಜುಂಡಯ್ಯನ ಜಮೀನು

ತಾಕು V ವಠಾರ.
ಪೂರ್ವಕ್ಕೆ—ಗ್ರಾಮದ ಪೇಲಿ
ಪಶ್ಚಿಮಕ್ಕೆ—ದಾರಿ
ಉತ್ತರಕ್ಕೆ—ಕೊಳಾಇ ಮುನಿಶಾಮಿ ಮನೆ
ದಕ್ಷಿಣಕ್ಕೆ—ಹಜಾಮರ ಮನೆ

ತಾಕು VI.
ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಅಗರದ ಯಲೆ
ಉತ್ತರಕ್ಕೆ—ಬಿಳೇಸ್ವಾರ ಯಲ್ಲೆ
ದಕ್ಷಿಣಕ್ಕೆ—ಕೌದೇನಹಳ್ಳಿಯಲ್ಲೆ
ಈ ಮಧ್ಯ ಗ್ರಾಮದಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

(ಐವರಖಂಡಪುರದ ರಾಮಕೃಷ್ಣಯ್ಯ)

ತಾಕು I ಖುಷ್ಕಿ ಕೊಳಗ $1\frac{1}{2}$.
ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಕಾಲ್ವೆ
ಉತ್ತರಕ್ಕೆ—ಶಾನುಭೋಗ ನಂಜಪ್ಪನ ವೃತ್ತಿ
ದಕ್ಷಿಣಕ್ಕೆ—ಗಂಗಾಧರಯ್ಯ, ಸೀತಾರಾಮಯ್ಯನ ಜಮೀನ್

ತಾಕು II ತರೀ ಕೊಳಗ 6.
ಪೂರ್ವಕ್ಕೆ—ಸೀತಾರಾಮಯ್ಯನ ದಳೆ
ಪಶ್ಚಿಮಕ್ಕೆ—ರಾಮಚಂದ್ರಯ್ಯನ ದಳೆ
ಉತ್ತರಕ್ಕೆ—ರಾಜಕಾಲ್ವೆ
ದಕ್ಷಿಣಕ್ಕೆ—ಉಪ್ಪರಗಡ್ಡೆಗದ್ದೆ

ತಾಕು III ತರೀ ಕೊಳಗ 6.
ಪೂರ್ವಕ್ಕೆ—ಸೀತಾರಾಮಯ್ಯ, ಗಂಗಾಧರಯ್ಯನ ದಳೆ
ಪಶ್ಚಿಮಕ್ಕೆ—ಸುಬ್ಬಾಭಟ್ಟರ ದಳೆ
ಉತ್ತರಕ್ಕೆ—ನಾರಿವಾಳ
ದಕ್ಷಿಣಕ್ಕೆ—ಬೂಡಿದಿ ಗಡ್ಡೆ

ತಾಕು IV ವಠಾರ.
ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಅಗರದ ಯಲೆ
ಉತ್ತರಕ್ಕೆ—ಬಿಳೇಸ್ವಾರ ಯಲ್ಲೆ
ದಕ್ಷಿಣಕ್ಕೆ—ಕೌದೇನಹಳ್ಳಿ
ಈ ಮಧ್ಯ ಗ್ರಾಮದಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಾಯಿ ಮೇರಿಗೆ ಈ ವೃತ್ತಿಗೆ ಶೇರತಕ್ಕದ್ದು ಸಹ

197

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ವೃತ್ತೀ ತಪ್ಸೀಲ್.	ಜೋಡಿ ವಗ್ಯೆರೆ ತಪ್ಸೀಲ್.	ವಿಸ್ತೀರ್ಣ.	ಸರಕಾರಕ್ಕೆ ಬರತಕ್ಕ ಜೋಡೀ ಮೊಬಲಗು.	ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.	ಹರಾಜು ತಾರೀಖು.	ಷರಾ.
1	2	3	4	5	6	7	8	9	10	11
							ರೂ. ಆ. ಪೈ.	ರೂ. ಆ. ಪೈ.		
ಬೆಂಗಳೂರು.	ಕೃಷ್ಣರಾಜಪುರ.	ಜೋಡಿ ಕಲ್ಲುಕೆರೆ.	ರಾಮಯ್ಯನ ಹೆಂಡತಿ ಶೀತಮ್ಮ	ವೃತ್ತಿ I	ಜೋಡಿ	..	8 8 3	20 13 8	ಹರಾಜ್ ತಾರೀಖು 1896ನೇ ಇಸವಿ ಜುಲೈ 27ರಲ್ಲು	ಜೋಡಿ ರೂಪಾಯಿ 8—8—3

ತಾಕು I ಖುಷ್ಕಿ 3 ಕೊಳಗ.
ಪೂರ್ವಕ್ಕೆ—ನಂಜಪ್ಪನ ಜಮೀನು
ಪಶ್ಚಿಮಕ್ಕೆ—ಮುನಿಶಾಮಿ ಜಮೀನು
ಉತ್ತರಕ್ಕೆ—ಗಂಗಾಧರಯ್ಯನ ಜಮೀನು
ದಕ್ಷಿಣಕ್ಕೆ—ಅಪ್ಪೂರಾಯಪ್ಪನ ಜಮೀನು

ತಾಕು II ಖುಷ್ಕಿ ಕೊಳಗ 3.
ಪೂರ್ವಕ್ಕೆ—ಅಪ್ಪೂರಾಯಪ್ಪನ ಜಮೀನು
ಪಶ್ಚಿಮಕ್ಕೆ—ಕೊಮಾರಯ್ಯನ ಜಮೀನು
ಉತ್ತರಕ್ಕೆ—ಅಪ್ಪೂರಾಯಪ್ಪನ ಜಮೀನು
ದಕ್ಷಿಣಕ್ಕೆ—ಜಾರಕಬಂಡೆ

ತಾಕು III ತರೀ 12 ಕೊಳಗ.
ಪೂರ್ವಕ್ಕೆ—ಅಮಾನೀ ಹುವ್ವಿನ ಅಕೆಕೆರೆ
ಪಶ್ಚಿಮಕ್ಕೆ—ನೀರಗಂಟಿ ಇನಾಂತಿ, ರಾಮಚಂದ್ರಯ್ಯನ ಜಮೀನು
ಉತ್ತರಕ್ಕೆ—ರಾಮಾಪಂಡಿತ ವಗ್ಯೆರೇರ ಜಮೀನು
ದಕ್ಷಿಣಕ್ಕೆ—ನಾರಿವಾಳ

ತಾಕು IV ಖುಷ್ಕಿ ಪಡಿ 2.
ಪೂರ್ವಕ್ಕೆ—ಶಾಮರಾಯರ ಕಣ, ಕೃಷ್ಣರಾಜಪುರದ ದಾರಿ
ಪಶ್ಚಿಮಕ್ಕೆ—ದಂಡಿನ ದಾರಿ
ಉತ್ತರಕ್ಕೆ—ನಿಲುಕಲ್ಲು
ದಕ್ಷಿಣಕ್ಕೆ—ಶಾಮರಾಯರ ಕಣ ಮತ್ತು ನಂಜಪ್ಪನ ಕಣ

ತಾಕು V ವಠಾರ.
ಪೂರ್ವಕ್ಕೆ—ಹಜಾಮರ ಮನೆ
ಪಶ್ಚಿಮಕ್ಕೆ—ಗಂಗಾಧರಯ್ಯ, ಶೀತಾರಾಮಯ್ಯನ ವಠಾರ
ಉತ್ತರಕ್ಕೆ—ಬೀದಿ
ದಕ್ಷಿಣಕ್ಕೆ—ಬೇಲಿ

ತಾಕು VI
ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಅಗರದ ಯಲ್ಲೆ
ಉತ್ತರಕ್ಕೆ—ಬಿಳೀಸ್ವಾರ ಯಲ್ಲೆ
ದಕ್ಷಿಣಕ್ಕೆ—ಕಾದೇನಹಳ್ಳಿ ಯಲ್ಲೆ

ಈ ಮಧ್ಯೆ ಗ್ರಾಮದಲ್ಲಿ ವೃತ್ತಿ ಮಾರ್ ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

ಕೆ. ಶ್ರೀನಿವಾಸರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 1ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲದ ತಾಲ್ಲೂಕು ಗ್ರಾಮಾಂತ್ರಗಳಲ್ಲಿರುವ ಕುರಂಗದ ಕಲ್ಲು ದುರ್ಮುಖಿಸಂವತ್ಸರದ ಬಾಬನ್ನು, 1896ನೇ ಇಸವಿ ಆಗಸ್ಟು ತಾರೀಖು 10ರಲ್ಲಿ ಹರಾಜ್ ಮಾಡಲ್ಪಡುತ್ತೆ.

(2.) ಈ ಬಾಬತು ಹರಾಜ್ ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರು ಅಥವಾ ಶಿರಸ್ತೇದಾರು ಮಾಡಿ ಸುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಲಾಗಾಯತು ಒಂದು ವರುಷದ ವರಿವಿಗೆ ಇರತಕ್ಕದ್ದು.

(4.) ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತನ್ನ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್‌ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ರೂಪಾಯಿ 1ಕ್ಕೆ 1 ಆಣೇ ಮೇರೆ ಲೋಕಲ್‌ಸೆಸ್ ಸಹಿತ ಹರಾಜ್ ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೆ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

(8) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಶೀಲ್ ಕಂಡು ತಾಲ್ಲೂಕು ಅಮಲ್‌ದಾರ್ರಿಂದ ವಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರು ಸಾಗಿಸಕೂಡದು.

ವಿ. ಎಸ್. ನರಸಿಂಹಯ್ಯಂಗಾರಿ,
ಡೆಪ್ಯುಟಿ ಕಮಿಷನರ.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿ ಹಾ ರ್ ನಾ ಮೆ .

ಬವರಿಂಗ್‌ಪೇಟೆ ತಾಲ್ಲೂಕು ಕಚೇರಿಯಿಂದ.

ತಾರೀಖು 10ನೇ ಜೂನ್ 1896.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಇದರಡಿ ಕಂಡ ಬವರಿಂಗ್‌ಪೇಟೆ ತಾಲ್ಲೂಕಿನ ಗ್ರಾಮಗಳ ಬಗೆಯರ ಬಂಜರು ಜಮೀನಿನ ಬಂಡೆಗಳಲ್ಲಿ ಕೊಯಿದು ಸಾಗಿಸುವ ಬಗ್ಗೆ ಸರ್ 1896ನೇ ಇಸವಿ ಜುಲೈ 2ನೇ ತಾರೀಖು ದಿವಿ 11 ಘಂಟೆಗೆ ಹರಾಜ್ ಮಾಡಲ್ಪಡುತ್ತೆ.

2. ಈ ಹರಾಜ್ ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ ಯಾ ಶಿರಸ್ತೇದಾರ್ರ ಸಮಕ್ಷಮ ಜರಗಲ್ಪಡುವದು.

3. ಇದು ಡೆಪ್ಯುಟಿ ಕಮಿಷನರ್ ಸಾಹೆಬರವರ ಮಂಜೂರಿಗೆ ವಳಪಟ್ಟು ಇರತಕ್ಕದ್ದು.

4. ಸರ್ 1897ನೇ ಇಸವಿ ಜೂನ್ ಮಾಹೆ ವರಿಗೆ ಅವಧಿ ಕೊಟ್ಟು ಇದೆ.

5. ಹರಾಜಿನಲ್ಲಿ ಪಡೆಯುವವನು ಹರಾಜ್ ಕಾಲದಲ್ಲಿ ಶೇಕಡಾ 25 ರೂಪಾಯಿನ ಮೇರಿಗೆ ಡಿಪಾಜಿಟ್ ಇಟ್ಟು ನಿಂತ ಹಣ ಸರಿಯಾದ ಕಾಲದಲ್ಲಿ ಅಂದರೆ ಹರಾಜ್ ಕಾಯಂ ಆದ ಸಂಗತಿ ತಿಳಿದ 7 ದಿವಸದ ವಳಗಾಗಿ ಲೋಕಲ್‌ಸೆಸ್ ವಗ್ಯೆರೆ ವಿಶಿಷ್ಟವಾ ಕೊಡದೆ ತಪ್ಪಿದರೆ ಡಿಪಾಜಿಟ್ ಹಣ ಸರ್ಕಾರಕ್ಕೆ ಶೇರಿಸಿಕೊಂಡು 2ನೇ ಹರಾಜ್ ಮಾಡಲ್ಪಡುತ್ತೆ.

6. ಕರಾರು.

ಎ. ಹರಾಜ್‌ದಾರ್ ಹುಲ್ಲುಬನ್ನಿ ದನಗಳು ಮೇಯಿಸುವ ಸ್ಥಳದಲ್ಲಿ ಹೋಗಕೂಡದು.
ಬಿ. ಸರ್ಕಾರ್ ಬಂಜರ್ ಜಮೀನಿನ ಬಂಡೆಗಳನ್ನ ತೆಗದುಕೊಳ್ಳ ಬಹುದು.
ಸಿ. ರೈತರು ತಮ್ಮ ಸ್ವಂತ ಜಿರಾಯಿತು ವಗ್ಯೆರೆ ಕಟ್ಟಣಗಳಿಗೆ ಉಪಯೋಗಿಸುವ ಬಂಡೆಗಳಲ್ಲಿ ಪ್ರವೇಶಿಸಕೂಡದು.
ಡಿ. ಸರ್ಕಾರ್ ಕೆಲಸಗಳಿಗೋಸ್ಕರ ಬಂಡೆಗಳನ್ನ ಮುಫತ್ತಾಗಿ ಕೊಡಬೇಕು.
ಇ. ಹರಾಜ್‌ದಾರನು ಬಂಡೆ ತೆಗೆಯುವದರ ಮೂಲಕ ಜಮೀನು ಸಾಗುವಳಿಗೆ ಉಪಯೋಗವಿಲ್ಲದಂತೆ ಮಾಡಕೂಡದು.

16. ಬೆರ್ಮಂಗಲದ ಹೋಬಳಿ.

1 ನಾಗಿಶೆಟ್ಟಿಹಳ್ಳಿ	12 ಕದರೆಗವುಡನಕೋಟೆ	9 ದೊಡ್ಡ ಕಾರು ಮಜರೆ ಕುರುಬಕಾರು
6 ಪಾರಾಂಡಹಳ್ಳಿ	3 ಪೀಲಬಂಡೆ	14 ಗರುಡಾದ್ರಿಹಳ್ಳಿ
11 ಸೆರ್ನಹಳ್ಳಿ	8 ತಮ್ಮೇನಹಳ್ಳಿ	5 ಜವನಕೊಪ್ಪ
2 ಅಲ್ಲಿಕುಂಟೆ ಕದರೆಪಲ್ಲಿ	13 ಗೊರ್ಲಚಿನ್ನೇಪಲ್ಲಿ	10 ಅಂಕತಟ್ಟಿಹಳ್ಳಿ
7 ಕಸಬೆ ಬೆರ್ಮಂಗಲ	4 ಕಮ್ಮಸಂದ್ರ	15 ಪೋಲೆಪಲ್ಲಿ
		16 ಜಗರಾಪುರ

6 ಕ್ಯಾಸಂಬಳ್ಳಿ ಹೋಬಳಿ.

1 ಬಾಣಗೆರೆ	3 ಕೆಂಪಾಪುರ	5 ಬಳಗೆರೆ
2 ಪೂಜಾರಿಹಳ್ಳಿ	4 ಅಲ್ಲೀಕಲ್ಲು	6 ಜಂಬರಸನಹಳ್ಳಿ

6 ದಾಸರಹೊಸಹಳ್ಳಿ ಹೋಬಳಿ.

1 ಮಲಿಯಾಂಗುರಿಕಿ	3 ಬಲ್ಲಿಗಾನಹಳ್ಳಿ	5 ಪೆದ್ದಪಲ್ಲಿ
2 ತೊಂಗಲ್ಲು	4 ಮಾದಮಂಗಲ	6 ಮಾವಹಳ್ಳಿ

1 ಕಸಬೆ ಹೋಬಳಿ ನಾಯಕರಹಳ್ಳಿಬಂಡೆ

ಬಿ. ಜಿ. ಕೃಷ್ಣಯ್ಯಂಗಾರ್,
ಅ॥ ಡೆಪ್ಯುಟಿ ಕಮಿಷನರ್.

ತುಮಕೂರ್ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕಿದಾರರಾದ ಈ ಕೆಳಗೆ ನಮೂದಾಗುವ ಜೋಡೀದಾರರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗು ಹಿಡುವಳಿ ಹಕ್ಕು ತಪ್ಪಿಸಲ್ಪಟ್ಟ ಸ್ಥಿರಸ್ವತ್ತು ತುಮಕೂರ್ ಡಿಸ್ಟ್ರಿಕ್ಟು ತಿಪಟೂರು ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಆಗಸ್ಟ್ 8ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.
ಹರಾಜು ಡಿಟೋ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ * ಬಾಕಿ ಕಂದಾಯದ ಬಗ್ಗೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 725–11–10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜ್‌ದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ಸದರೀ ದರಖಾಸ್ತುದಾರರಾದ ಹನುಮಕ್ಕನ ಅರ್ಜಿಯನ್ನು ಸರ್ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 10ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೋಬಳಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896ನೇ ಇಸವಿ ಜುಲೈ ತಿಂಗಳ 3ನೇ ತಾರೀಖಿನಲ್ಲಿ ಕೋರ್ಟ್ ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 26ನೇ ಮೇ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕಿದಾರರಾದ ಈ ಕೆಳಗೆ ನಮೂದಿಸುವ ಜೋಡೀದಾರರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ತಾಲ್ಲೂಕು ಕಚೇರಿಯಲ್ಲಿ ಈ ಕೆಳಗೆ ನಮೂದಾಗುವ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಜೋಡೀ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ವೃತ್ತೀ ತಪ್ಸೀಲ್.	ಜೋಡಿ ವಗೈರೆ ತಪ್ಸೀಲ್.	ವಿಸ್ತೀರ್ಣ.	ಸರಕಾರಕ್ಕೆ ಬರತಕ್ಕ ಜೋಡಿ ಮೊಬಲಗು.	ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.	ಹರಾಜಿನ ತಾರೀಖು.	ಷರಾ.
1	2	3	4	5	6	7	8	9	10	11
ಬೆಂಗಳೂರು.	ಕೃಷ್ಣರಾಜಪುರ.	ಜೋಡಿ ಕಲ್ಲುಕೆರೆ.	ಶಾಂಭಟ್ಟ.	½ ವೃತ್ತಿ.	ಜೋಡಿ	..	ರೂ. ಆ. ಪೈ. 4 4 2	ರೂ. ಆ. ಪೈ. 20 13 8	1896ನೇ ಇಸವಿ ಜುಲೈ 27ರಲ್ಲು	ಜೋಡಿ ರೂಪಾಯಿ 4—4—2

ಚಕ್ಕುಬಂದಿ.

ತಾಕು I ಖುಷ್ಕಿ 3 ಕೊಳಗ.

ಪೂರ್ವಕ್ಕೆ—ಮಾರಗೊಂಡಹಳ್ಳಿ ಗ್ರಾಮದ ಯಲ್ಲೆ
ಪಶ್ಚಿಮಕ್ಕೆ—ನಂಜಪ್ಪನ ಜಮೀನು
ಉತ್ತರಕ್ಕೆ—ನಾರಣಭಟ್ಟನ ವೃತ್ತಿ
ದಕ್ಷಿಣಕ್ಕೆ—ಗಂಗಾಧರಯ್ಯ, ಶೀತಾರಾಮಯ್ಯ ಇವರ ಜಮೀನ್

ತಾಕು II ತರೀ 3 ಕೊಳಗ.

ಪೂರ್ವಕ್ಕೆ—ಸೂರಭಟ್ಟರು, ರಾಮಸ್ವಾಮಿ ಭಟ್ಟರ ಗದ್ದೆ
ಪಶ್ಚಿಮಕ್ಕೆ—ನಂಜಪ್ಪನ ಗದ್ದೆ
ಉತ್ತರಕ್ಕೆ—ನಾರಿವಾಳ
ದಕ್ಷಿಣಕ್ಕೆ—ಬೋಡದಿ ಮಿತೆ

ತಾಕು III ತರೀ 3 ಕೊಳಗ.

ಪೂರ್ವಕ್ಕೆ—ನಂಜಪ್ಪನ ದಳೆ
ಪಶ್ಚಿಮಕ್ಕೆ—ಸುಬ್ಬರಾಯಪ್ಪನ ದಳೆ
ಉತ್ತರಕ್ಕೆ—ರಾಜಕಾಲ್ವೆ
ದಕ್ಷಿಣಕ್ಕೆ—ವೇದವೃತ್ತಿ ಗದ್ದೆ

ತಾಕು IV ವಠಾರ.

ಪೂರ್ವಕ್ಕೆ—ಸುಬ್ಬಾಶಾಸ್ತ್ರಿ ವಠಾರ
ಪಶ್ಚಿಮಕ್ಕೆ—ರಾಮಚಂದ್ರಯ್ಯನ ವಠಾರ
ಉತ್ತರಕ್ಕೆ—ಬೀದಿ
ದಕ್ಷಿಣಕ್ಕೆ—ಸದರೀ ಸುಬ್ಬಾಶಾಸ್ತ್ರಿ ವಠಾರ

ತಾಕು V ಜಮೀನು.

ಪೂರ್ವಕ್ಕೆ—ಮಾರಗೊಂಡಹಳ್ಳಿ ಗ್ರಾಮದ ಯಲ್ಲೆ
ಪಶ್ಚಿಮಕ್ಕೆ—ಆಗರದ ಯಲ್ಲೆ
ಉತ್ತರಕ್ಕೆ—ಬಿಳೆಶ್ವಾರ ಯಲ್ಲೆ
ದಕ್ಷಿಣಕ್ಕೆ—ಕಾಡೇನಹಳ್ಳಿ ಯಲ್ಲೆ

ಈ ಮಧ್ಯೆ ಗ್ರಾಮದಲ್ಲಿ ವೃತ್ತಿ ಹಂಚಿಕೆ ಆದ್ದು ಜಾತ ವುಳದ್ದು ದಾಮಾಷಾಯಿ ಮೇರಿಗೆ ಈ ಅರ್ಧ ವೃತ್ತಿಗೆ ಸಲ್ಲತಕ್ಕದ್ದು ಸಹ

			ರಾಮಕೃಷ್ಣಭಟ್ಟ	ವೃತ್ತಿ 1ಕ್ಕೆ	ಜೋಡಿ	..	8 8 3	46 14 9		

ತಾಕು 1ಕ್ಕೆ ಖುಷ್ಕಿ 6 ಕೊಳಗ.

ಪೂರ್ವಕ್ಕೆ—ನಂಜಪ್ಪನ ವೃತ್ತಿ
ಪಶ್ಚಿಮಕ್ಕೆ—ಡಿಟೋ
ಉತ್ತರಕ್ಕೆ—ಗ್ರಾಮದ ಬೇಲಿ
ದಕ್ಷಿಣಕ್ಕೆ—ಶಾಮರಾಯರ ಜಮೀನ್

ತಾಕು II ತರೀ 6 ಕೊಳಗ.

ಪೂರ್ವಕ್ಕೆ—ನರಸಿಂಹಯ್ಯನ ಜಮೀನ್
ಪಶ್ಚಿಮಕ್ಕೆ—ನಂಜಪ್ಪನ ಜಮೀನ್
ಉತ್ತರಕ್ಕೆ—ರಾಜಕಾಲ್ವೆ
ದಕ್ಷಿಣಕ್ಕೆ—ನಾರಿವಾಳ

ತಾಕು III ತರೀ 6 ಕೊಳಗ.

ಪೂರ್ವಕ್ಕೆ—ನಂಜಪ್ಪನ ದಳೆ
ಪಶ್ಚಿಮಕ್ಕೆ—ಪುಟ್ಟನ ದಳೆ
ಉತ್ತರಕ್ಕೆ—ನಾರಿವಾಳ
ದಕ್ಷಿಣಕ್ಕೆ—ಬೋಡಿದಿ ಮಿತೆ

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸ್ವತ್ತಿನ ತಪ್ಸೀಲ್.				ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.	ಜರಾಯಿ ತಾರೀಖು.	ಷರಾ.
				ಭೂ ಸ್ವತ್ತು.	ಜೋಡಿ ಸ್ವತ್ತು.	ಸಿವಾಯ್.	ಸರಕಾರಕ್ಕೆ ಬರತಕ್ಕ ಜೋಡಿ ಮೊಬಲಗು.			
1	2	3	4	5	6	7	8	9	10	11
							ರೂ. ಆ. ಪೈ.	ರೂ. ಆ. ಪೈ.		
			ರಾಮಕೃಷ್ಣಭಟ್ಟ	ವೃತ್ತಿ 1ಕ್ಕೆ	ಜೋಡಿ	..	8 8 3	46 14 9		

ತಾಕು IV ಬಾಗಾಯತು ಪಡಿ 2.
ಪೂರ್ವಕ್ಕೆ— ವೀರಭದ್ರಪ್ಪನ ಮಾನ್ಯ
ಪಶ್ಚಿಮಕ್ಕೆ—ಪೋಣಿ
ಉತ್ತರಕ್ಕೆ—ನಂಜಪ್ಪನ ಜಮೀನು
ದಕ್ಷಿಣಕ್ಕೆ—ಸೀತಾರಾಮಯ್ಯನ ಜಮೀನು
ತಾಕು V ವತಾರ.
ಪೂರ್ವಕ್ಕೆ—ನಂಜುಂಡಭಟ್ಟರ ವತಾರ
ಪಶ್ಚಿಮಕ್ಕೆ—ಬೀದಿ
ಉತ್ತರಕ್ಕೆ—ನಲ್ಲೂರು ನಂಜಪ್ಪನ ವತಾರ
ದಕ್ಷಿಣಕ್ಕೆ—ಸುಬ್ಬಾಭಟ್ಟರ ನಂಜಪ್ಪನ ವತಾರ
ಈ ಮಧ್ಯೆ ರೈತ ಮೇಕೆಮುದ್ದ ಇರುವ ಹುಲ್ಲುಮನೆ 2 ಮಾಳಿಗೆಮನೆ 1ನೂ ಸಹ
ತಾಕು VI ಜಮೀನು.
ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಅಗರದ ಯಲ್ಲೆ
ಉತ್ತರಕ್ಕೆ—ಬೆಳೀಸ್ವಾರ ಯಲ್ಲೆ
ದಕ್ಷಿಣಕ್ಕೆ—ಕೌದೇನಹಳ್ಳಿ ಯಲ್ಲೆ
ಈ ಮಧ್ಯೆ ಗ್ರಾಮದಲ್ಲಿ ವೃತ್ತಿ ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಾ
ಯಿ ಮೇರೆಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

1	2	3	4	5	6	7	8	9	10	11
ಬೆಂಗಳೂರು.	ಕೃಷ್ಣರಾಜಪುರ.	ಜೋಡಿ ಕಣ್ಣೂರು.	ವೆಂಕಟಸುಬ್ಬಯ್ಯ	ವೃತ್ತಿ 1ಕ್ಕೆ	ಜೋಡಿ	..	8 8 3	31 4 6	ಜರಾಯಿ ತಾರೀಖು 96ನೇ ಇಸವಿ ಜುಲೈ 27ರಲ್ಲು	ಜೋಡಿ ರೂಪಾಯಿ 8—8—3

ತಾಕು 1ಕ್ಕೆ ಖುಷ್ಕಿ 6 ಕೊಳಗ.
ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ದಂಡು ಸುಬ್ಬಾಶಾಸ್ತ್ರಿ, ನಾರಣಭಟ್ಟರ ಜಮೀನು
ಉತ್ತರಕ್ಕೆ—ಸೂರ್ಯಭಟ್ಟರ ಜಮೀನು
ದಕ್ಷಿಣಕ್ಕೆ— ದಂಡು ಸೂರಶಾಸ್ತ್ರಿ, ಅಶ್ವತ್ಥಭಟ್ಟರ ಜಮೀನು
ತಾಕು II ತರೀ 6 ಕೊಳಗ.
ಪೂರ್ವಕ್ಕೆ— ನಾರಣಭಟ್ಟ, ಸುಬ್ಬಾಭಟ್ಟರ ದಳೆ
ಪಶ್ಚಿಮಕ್ಕೆ—ಶೀತಾರಾಮಯ್ಯನ ದಳೆ
ಉತ್ತರಕ್ಕೆ—ರಾಜಕಾಲ್ವೆ
ದಕ್ಷಿಣಕ್ಕೆ—ಸಾರೋಡು ಕಾಲ್ವೆ
ತಾಕು III ತರೀ 6 ಕೊಳಗ.
ಪೂರ್ವಕ್ಕೆ—ರಾಮಕೃಷ್ಣಭಟ್ಟರ ದಳೆ
ಪಶ್ಚಿಮಕ್ಕೆ—ಚಂದ್ರಯ್ಯನ ದಳೆ
ಉತ್ತರಕ್ಕೆ—ನಾರಿವಾಳ
ದಕ್ಷಿಣಕ್ಕೆ—ಬೊಡಿದಿ ಮಿತೆ
ತಾಕು IV ಬಾಗಾಯತು 1 ಪಡಿ.
ಪೂರ್ವಕ್ಕೆ—ಕರೇಗವುಡ, ಮುನಿಗನ ತೋಪು
ಪಶ್ಚಿಮಕ್ಕೆ—ಬೀದಿ
ಉತ್ತರಕ್ಕೆ—ಮೆಣಸಿನ ತೋಟಗಳು
ದಕ್ಷಿಣಕ್ಕೆ—ರಾಮಸ್ವಾಮಿ ಕಣ
ತಾಕು V ವತಾರ.
ಪೂರ್ವಕ್ಕೆ—ರಾಮಸ್ವಾಮಿಭಟ್ಟರು ಮತ್ತು ಸೂರಿಭಟ್ಟರ ವತಾರ
ಪಶ್ಚಿಮಕ್ಕೆ—ಇನಾಂತಿ ವತಾರ
ಉತ್ತರಕ್ಕೆ—ಬೀದಿ
ದಕ್ಷಿಣಕ್ಕೆ—ಸೂರಿಭಟ್ಟರು, ಅಪ್ಪಾರಾಯಪ್ಪ ಮತ್ತು ಪಾಪಣ್ಣನ ಜಮೀನು

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ವೃತ್ತಿನ ತಪ್ಸೀಲ್.				ಸರಕಾರಕ್ಕೆ ಬರಬೇಕಾದ ಬಾಕಿ ಪೊಬಲಗು.	ಹರಾಜ್ ತಾರೀಖು.	ಷರಾ.
				ವೃತ್ತಿ ತಪ್ಸೀಲ್.	ಜೋಡಿ ವಸ್ತ್ರರಿ ತಪ್ಸೀಲ್.	ವಿಸ್ತೀರ್ಣ.	ಸರ್ಕಾರಕ್ಕೆ ಬರತಕ್ಕ ಜೋಡಿ ಪೊಬಲಗು.			
1	2	3	4	5	6	7	8	9	10	11
ಬೆಂಗಳೂರು.	ಕೃಷ್ಣರಾಜಪುರ.	ಜೋಡೀ ಕಲ್ಲುಕೆರೆ.	ವೆಂಕಟಸುಬ್ಬಯ್ಯ	ವೃತ್ತಿ 1ಕ್ಕೆ	ಜೋಡಿ	..	ರೂ. ಆ. ಪೈ. 8 8 3	ರೂ. ಆ. ಪೈ. 31 4 6	ಹರಾಜ್ ತಾರೀಖು 96ನೇ ಇಸವಿ ಜುಲೈ 27ರಲ್ಲು	ಜೋಡೀ ರೂಪಾಯಿ 8—8—3

ತಾಕು VI.
ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಅಗರದಯಲ್ಲಿ
ಉತ್ತರಕ್ಕೆ—ಬಿಳೇಸ್ವಾರ ಯಲ್ಲೆ
ದಕ್ಷಿಣಕ್ಕೆ—ಕೌದೇನಹಳ್ಳಿ ಯಲ್ಲೆ
ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರು ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

			ರಾಮಲಿಂಗಭಟ್ಟ	ವೃತ್ತಿ 1÷1	ಜೋಡಿ	..	2 12 11	6 13 6		ಜೋಡೀ ರೂಪಾಯಿ 2—12—11

ತಾಕು I ಖುಷ್ಕಿ ಕೊಳಗ 1—ಬಳ್ಳ 1.
ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಸುಬ್ಬಾಶಾಸ್ತ್ರಿಗಳ ಜಮೀನ್
ಉತ್ತರಕ್ಕೆ—ಶಾನುಭೋಗನ ವೃತ್ತಿ
ದಕ್ಷಿಣಕ್ಕೆ—ಅಶ್ವತ್ಥಭಟ್ಟರು ವಗೈರೇರ ಜಮೀನ್

ತಾಕು II ತರೀ 5 ಕೊಳಗ.
ಪೂರ್ವಕ್ಕೆ—ಉಪ್ಪರಗಡ್ಡೆ ಗದ್ದೆ
ಪಶ್ಚಿಮಕ್ಕೆ—ಹತ್ತು ಬಳ್ಳದ ಹಳ್ಳದಗದ್ದೆ
ಉತ್ತರಕ್ಕೆ—ಆಚೆಕಾಲ್ವೆದಳೆ ಹಂಚಿಕೆ
ದಕ್ಷಿಣಕ್ಕೆ—ಈಚೆಕಾಲ್ವೆದಳೆ ಹಂಚಿಕೆ

ತಾಕು III ವಠಾರ.
ಪೂರ್ವಕ್ಕೆ—ದಾರಿ
ಪಶ್ಚಿಮಕ್ಕೆ—ಸುಬ್ಬಾಭಟ್ಟರ ಹಿತ್ತಲು
ಉತ್ತರಕ್ಕೆ—ಅಗಸರಮನೆ
ದಕ್ಷಿಣಕ್ಕೆ—ಅಶ್ವತ್ಥಭಟ್ಟ, ಸುಬ್ಬಾಶಾಸ್ತ್ರಿ ವಠಾರ

ತಾಕು IV.
ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಅಗರದ ಯಲ್ಲೆ
ಉತ್ತರಕ್ಕೆ—ಬಿಳೇಸ್ವಾರ ಯಲ್ಲೆ
ದಕ್ಷಿಣಕ್ಕೆ—ಕೌದೇನಹಳ್ಳಿ ಯಲ್ಲೆ
ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

			ಕೊಮಾರಯ್ಯ	ವೃತ್ತಿ $\frac{3}{4}$	ಜೋಡಿ	..	6 6 1	20 0 7		

ತಾಕು I ಖುಷ್ಕಿ 4 ಕೊಳಗದ 2 ಬಳ್ಳ.
ಪೂರ್ವಕ್ಕೆ—ಅಪ್ಪಾರಾಯಪ್ಪ ವಗೈರೇರ ಜಮೀನ್
ಪಶ್ಚಿಮಕ್ಕೆ—ಪಾಳ್ಯದ ನರಸಿಂಹಶಾಸ್ತ್ರಿ ವಗೈರೇರ ಜಮೀನ್
ಉತ್ತರಕ್ಕೆ—ರಾಮಚಂದ್ರಯ್ಯನ ಜಮೀನ್
ದಕ್ಷಿಣಕ್ಕೆ—ಜಾರಕಬಂಡೆ

ತಾಕು II ತರೀ 4 ಕೊಳಗದ 2 ಬಳ್ಳ.
ಪೂರ್ವಕ್ಕೆ—ನಂಜುಂಡಭಟ್ಟರ ದಳೆ
ಪಶ್ಚಿಮಕ್ಕೆ—ವಂಜಪ್ಪನ ದಳೆ
ಉತ್ತರಕ್ಕೆ—ಸಾರೋಡು ಕಾಲ್ವೆ
ಕ್ಷಿಣಕ್ಕೆ—ಸೂರಭಟ್ಟರ ದಳೆ

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್.				ಸರ್ಕಾರಕ್ಕೆ ಬರಬೇಕಾದ ಬಾಕಿ ಬಾಬುಗಳು.	ಹರಾಜು ತಾರೀಖು.	ಷರಾ.
				ಸ್ವತ್ತಿನ ಪ್ರಕಾರ.	ಜೋಡಿ ವಗೈರೆ ಪ್ರಕಾರ.	ವಿಸ್ತೀರ್ಣ.	ಸರ್ಕಾರಕ್ಕೆ ಬರತಕ್ಕ ಜೋಡಿ ಬಾಬುಗಳು.			
1	2	3	4	5	6	7	8	9	10	11
ಬೆಂಗಳೂರು.	ಕೃಷ್ಣರಾಜಪುರ.	ಜಡಿಗೇನಹಳ್ಳಿ.	ಕೊಮಾರಯ್ಯ	ವೃತ್ತಿ $\frac{3}{4}$	ಜೋಡಿ	..	ರೂ. ಆ. ಪೈ. 6 6 1	ರೂ. ಆ. ಪೈ. 20 0 7	1896ನೇ ಇಸವಿ ಜುಲೈ 27ನೇವು	6—6—1
				ತಾಕು III ತರೀ 4 ಕೊಳಗದ 2 ಬಳ್ಳ. ಪೂರ್ವಕ್ಕೆ—ಕಟ್ಟೆದಳಿ ಪಶ್ಚಿಮಕ್ಕೆ—ಸೂರಿಭಟ್ಟರ ದಳಿ ಉತ್ತರಕ್ಕೆ—ಕರೇಗೌಡನಗದ್ದೆ ದಕ್ಷಿಣಕ್ಕೆ—ಬೂಡಿದಿ ಮಿಶೆ ತಾಕು IV ಬಾಗಾಯತು ಪಡಿ 2. ಪೂರ್ವಕ್ಕೆ—ವೀರಭದ್ರನ ಮಾನ್ಯ ಪಶ್ಚಿಮಕ್ಕೆ—ರಾಮಸ್ವಾಮಿಭಟ್ಟನ ಹಿಸ್ಸೇ ಜಮೀನು ಉತ್ತರಕ್ಕೆ—ಸೂರಿಭಟ್ಟನ ಜಮೀನು ದಕ್ಷಿಣಕ್ಕೆ—ನಂಜುಂಡಯ್ಯನ ಜಮೀನು ತಾಕು V ವಠಾರ. ಪೂರ್ವಕ್ಕೆ—ಗ್ರಾಮದ ಬೀದಿ ಪಶ್ಚಿಮಕ್ಕೆ—ದಾರಿ ಉತ್ತರಕ್ಕೆ—ಕೊಳಾತಿ ಮುನಿಶಾಮಿ ಮನೆ ದಕ್ಷಿಣಕ್ಕೆ—ಹಜಾಮರ ಮನೆ ತಾಕು VI. ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ ಪಶ್ಚಿಮಕ್ಕೆ—ಅಗರದ ಯಲ್ಲೆ ಉತ್ತರಕ್ಕೆ—ಬಿಳೇಸ್ವಾರ ಯಲ್ಲೆ ದಕ್ಷಿಣಕ್ಕೆ—ಕೌದೇನಹಳ್ಳಿಯಲ್ಲೆ ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ						
			ಐವರಖಂಡಪುರದ ರಾಮಕೃಷ್ಣಯ್ಯ	ವೃತ್ತಿ $\frac{3}{4}$	ಜೋಡಿ	..	6 6 1	23 7 4		
				ತಾಕು I ಖುಷ್ಕಿ ಕೊಳಗ $4\frac{1}{2}$. ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ ಪಶ್ಚಿಮಕ್ಕೆ—ಕಾಲ್ವೆ ಉತ್ತರಕ್ಕೆ—ಶಾನುಭೋಗ ನಂಜಪ್ಪನ ವೃತ್ತಿ ದಕ್ಷಿಣಕ್ಕೆ—ಗಂಗಾಧರಯ್ಯ, ಸೀತಾರಾಮಯ್ಯನ ಜಮೀನ್ ತಾಕು II ತರೀ ಕೊಳಗ 6. ಪೂರ್ವಕ್ಕೆ—ಸೀತಾರಾಮಯ್ಯನ ದಳಿ ಪಶ್ಚಿಮಕ್ಕೆ—ರಾಮಚಂದ್ರಯ್ಯನ ದಳಿ ಉತ್ತರಕ್ಕೆ—ರಾಜಕಾಲ್ವೆ ದಕ್ಷಿಣಕ್ಕೆ—ಉಪ್ಪರಗಡ್ಡೆಗದ್ದೆ ತಾಕು III ತರೀ ಕೊಳಗ 6. ಪೂರ್ವಕ್ಕೆ—ಸೀತಾರಾಮಯ್ಯ, ಗಂಗಾಧರಯ್ಯನ ದಳಿ ಪಶ್ಚಿಮಕ್ಕೆ—ಸುಬ್ಬಾಭಟ್ಟರ ದಳಿ ಉತ್ತರಕ್ಕೆ—ನಾರಿವಾಳ ದಕ್ಷಿಣಕ್ಕೆ—ಬೂಡಿದಿ ಗಡ್ಡೆ ತಾಕು IV ವಠಾರ. ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ ಪಶ್ಚಿಮಕ್ಕೆ—ಅಗರದ ಯಲ್ಲೆ ಉತ್ತರಕ್ಕೆ—ಬಿಳೇಸ್ವಾರ ಯಲ್ಲೆ ದಕ್ಷಿಣಕ್ಕೆ—ಕೌದೇನಹಳ್ಳಿ ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ವುಳದ್ದು ದಾಮಾಷಾಯಿ ಮೇರಿಗೆ ಈ ವೃತ್ತಿಗೆ ಶೇರತಕ್ಕದ್ದು ಸಹ						

225

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ವೃತ್ತಿನ ತಪ್ಸೀಲ್. ವೃತ್ತಿ ಕ್ಲಾಸ್	ಜೋಡಿ ಸರ್ವಮಾನ್ಯ	ವಿಸ್ತೀರ್ಣ	ಸರಕಾರಕ್ಕೆ ಬರತಕ್ಕ ಜೋಡಿ ಮೊಬಲಗು.	ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.	ಹರಾಜು ತಾರೀಖು.	ಷರಾ.
1	2	3	4	5	6	7	8	9	10	11
							ರೂ. ಆ. ಪೈ.	ರೂ. ಆ. ಪೈ.		
ಬೆಂಗಳೂರು.	ಕೃಷ್ಣರಾಜಪುರ.	ಜೋಡಿ [illegible].	ರಾಮಯ್ಯನ ಹೆಂಡತಿ ಶೀತಮ್ಮ	ವೃತ್ತಿ I	ಜೋಡಿ	..	8 8 3	20 13 8	ಹರಾಜು ತಾರೀಖು 1896ನೇ ಇಸವಿ ಜುಲೈ 27ರಲ್ಲಿ	ಜೋಡಿ ರೂಪಾಯಿ 8—8—3

ತಾಕು I ಖುಷ್ಕಿ 3 ಕೊಳಗ.

ಪೂರ್ವಕ್ಕೆ—ನಂಜಪ್ಪನ ಜಮೀನು
ಪಶ್ಚಿಮಕ್ಕೆ—ಮುನಿಶಾಮಿ ಜಮೀನು
ಉತ್ತರಕ್ಕೆ—ಗಂಗಾಧರಯ್ಯನ ಜಮೀನು
ದಕ್ಷಿಣಕ್ಕೆ—ಅಪ್ಪೂರಾಯಪ್ಪನ ಜಮೀನು

ತಾಕು II ಖುಷ್ಕಿ ಕೊಳಗ 3.

ಪೂರ್ವಕ್ಕೆ—ಅಪ್ಪೂರಾಯಪ್ಪನ ಜಮೀನು
ಪಶ್ಚಿಮಕ್ಕೆ—ಕೊಮಾರಯ್ಯನ ಜಮೀನು
ಉತ್ತರಕ್ಕೆ—ಅಪ್ಪೂರಾಯಪ್ಪನ ಜಮೀನು
ದಕ್ಷಿಣಕ್ಕೆ—ಜಾರಕಬಂಡೆ

ತಾಕು III ತರೀ 12 ಕೊಳಗ.

ಪೂರ್ವಕ್ಕೆ—ಅಮಾನೀ ಹುಲ್ಲಿನ ಅಣೆಕೆರೆ
ಪಶ್ಚಿಮಕ್ಕೆ—ನೀರಗಂಟ ಇನಾಂತಿ, ರಾಮಚಂದ್ರಯ್ಯನ ಜಮೀನು
ಉತ್ತರಕ್ಕೆ—ರಾಮಾಪಂಡಿತ ವಗೈರೇರ ಜಮೀನು
ದಕ್ಷಿಣಕ್ಕೆ—ನಾರಿವಾಳ

ತಾಕು IV ಖುಷ್ಕಿ ಪಡಿ 2.

ಪೂರ್ವಕ್ಕೆ—ಶಾಮರಾಯರ ಕಣ, ಕೃಷ್ಣರಾಜಪುರದ ದಾರಿ
ಪಶ್ಚಿಮಕ್ಕೆ—ದಂಡಿನ ದಾರಿ
ಉತ್ತರಕ್ಕೆ—ನಿಲುಕಲ್ಲು
ದಕ್ಷಿಣಕ್ಕೆ—ಶಾಮರಾಯರ ಕಣ ಮತ್ತು ನಂಜಪ್ಪನ ಕಣ

ತಾಕು V ವಠಾರ.

ಪೂರ್ವಕ್ಕೆ—ಹಜಾಮರ ಮನೆ
ಪಶ್ಚಿಮಕ್ಕೆ—ಗಂಗಾಧರಯ್ಯ, ಶೀತಾರಾಮಯ್ಯನ ವಠಾರ
ಉತ್ತರಕ್ಕೆ—ಬೀದಿ
ದಕ್ಷಿಣಕ್ಕೆ—ಹಿತ್ತಲಿ

ತಾಕು VI

ಪೂರ್ವಕ್ಕೆ—ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ—ಅಗರದ ಯಲ್ಲೆ
ಉತ್ತರಕ್ಕೆ—ಬಿಳೇಸ್ವಾರ ಯಲ್ಲೆ
ದಕ್ಷಿಣಕ್ಕೆ—ಕಾದೇನಹಳ್ಳಿ ಯಲ್ಲೆ

ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ವುಳದ್ದುದಾಮಾ ಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

ಕೆ. ಶ್ರೀನಿವಾಸರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 1ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲದ ತಾಲ್ಲೂಕು ಗ್ರಾಮಾಂತ್ರಗಳಲ್ಲಿರುವ ಕುರಂಗದ ಕಲ್ಲು ದುರ್ಮುಖಿಸಂವತ್ಸರದ ಬಾಬನ್ನು, 1896ನೇ ಇಸವಿ ಆಗಸ್ಟು ತಾರೀಖು 10ರಲ್ಲಿ ಹರಾಜ್ ಮಾಡಲ್ಪಡುತ್ತೆ.

(2.) ಈ ಬಾಬತು ಹರಾಜ್ ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್ದಾರರು ಅಥವಾ ಶಿರಸ್ತೇದಾರರು ಮಾಡಿ ಸುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಲಾಗಾಯತು ಒಂದು ವರುಷದ ವರಿವಿಗೆ ಇರತಕ್ಕದ್ದು.

(4.) ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಜಡಸವಾಲ್ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ರೂಪಾಯಿ 1ಕ್ಕೆ 1 ಆಣೇ ಮೇರೆ ಲೋಕಲ್‌ಸೆಸ್ ಸಹಿತ ಹರಾಜ್ ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್ದಾರನನ್ನು ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೆ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಅಟಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಸೀಲ್ ಕಂಡು ತಾಲ್ಲೂಕು ಅಮಲ್ದಾರ್ರಿಂದ ವಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ವಿ. ಎನ್. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡಿಯತಕ್ಕ ಕಾಂಗಾರಿಗಳನ್ನು ಮಾಡಿಸುವ ಬಗ್ಯಾಗಲಿ ಸಾಮಾನುಗಳನ್ನು ಅಂದರೆ ಮೆಟೀರಿಯಲ್ ಟೂಲ್ಸ್ ಮೊದಲಾದವುಗಳನ್ನು ಸಪ್ಲೈ ಮಾಡತಕ್ಕ ಬಗ್ಯಾಗಲಿ ಉದ್ಯುಕ್ತರಾದ ಜನರು ಮತ್ತು ಸಪ್ಲೈ ಮಾಡುತಿರುವವರುಗಳ ಹೆಸರುಗಳನ್ನು ಅಡ್ರೆಸ್‌ಗಳನ್ನು ಮ್ಯುನಿಸಿಪಾಲ್ ಹೆಡ್ ಆಫೀಸಿನಲ್ಲಿ ಇಡಲ್ಪಟ್ಟು ಇರುವ ಬುಕ್ಕಿನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದಿದೆ.

ಆಫೀಸ್ ಹಗಲು 11ರ ಲಾಗಾಯಿತು 5—30ರ ವರುವಿಗೆ ತೆರದು ಯಿರುವದು.

ಬೆಂಗಳೂರು ಸಿಟಿ ಮ್ಯುನಿಸಿಪಾಲ್ ಪ್ರಸಿಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದುಕೊಳ್ಳುವ ಬಗ್ಯೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರಿವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫೀಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬಗಳನ್ನು ತೆಗದುಕೊಳ್ಳತಕ್ಕದ್ದು. ಒಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸಿಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮಿಮೋ ತಯಾರ್ಮಾಡಿ ಮ್ಯುನಿಸಿಪಾಲ್ ಆಫೀಸಿನಲ್ಲಿ ಟಿಕಟಾಯಿಸಲ್ಪಡುವದು.
ತಾರೀಖು 18ನೇ ಮೇ 1896.

ತಾರೀಖು ನೇ ಜೂನ್ 1896.

ಈ ಕೆಳಗೆ ತೋರಿಸಿ ಇರುವ ಸಾಮಾನುಗಳು ಬೇಕಾಗಿ ಇರುವದ್ದರಿಂದ ಇಚ್ಛೆಯುಳ್ಳವರು ಸರಬರಾಯಿ ಮಾಡಲು ಟೆಂಡರ್‌ಗಳನ್ನ ಕೊಡಬಹುದು.

50 ಕಬ್ಬಿಣದ ಗ್ಯಾಲವಾ ನೈಜರ್ ಬಾಬತು ಕಚರಾ ತೊಟ್ಟಿಗಳು ಮೂರು ಅಡಿ ಯತ್ತರ ಯರಡು ಅಡಿ ಸುತ್ತಳತೆಯುಳ್ಳದ್ದು.

50 ಚರಂಡಿಗಳ ಉಪಯೋಗಕ್ಕಾಗಿ ಕಬ್ಬಿಣದ ಕಂಬಿಗಳು.

50 ಕಬ್ಬಿಣದ ಲ್ಯಾಂಪೋಸ್ಟ್‌ಯಾನೆ ದೀಪದ ಕಂಭಗಳು.

ಇವುಗಳ ವಿಷಯವಾಗಿ ವಿಶೇಷ ತಪ್ಸೀಲ್ ತಿಳಿಯಬೇಕಾದಲ್ಲಿ ಸಿಟಿ ಮ್ಯುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳತಕ್ಕದ್ದು.

ತಾರೀಖು ನೇ ಜೂನ್ 1896.

ಕಿಲೆ ಅಗಳತೆಯಲ್ಲಿ ಕಲ್ಲುಗಳನ್ನ ಖರೀದಿಗೆ ತೆಗದುಕೊಂಡಿರುವ ಅಶೇಷ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ,—

1896ನೇ ಜುಲೈ ಗುರ್‍ರ್‍ಯೇ ಲಾಗಾಯತು ಮೂರು ತಿಂಗಳ ವಳಗಾಗಿ ಕಿಲೆ ಅಗಳತೆಯಲ್ಲಿ ವಿಕ್ರಯಿಸಲ್ಪಟ್ಟಿರುವ ಕಲ್ಲುಗಳನ್ನ ಆ ಸ್ಥಳದಿಂದ ಸಾಗಿಸಿಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಮ್ಯುನಿಸಿಪಾಲಿಟಿಗೆ ಸೇರಿಸಿಕೊಳ್ಳಲ್ಪಡುವದು.

1896ನೇ ಇಸವಿ ಸೆಪ್ಟಂಬರ 30ನೇ ತಾರೀಖಿನ ತರುವಾಯ ಸಾಗಿಸಲು ಅಪ್ಪಣೆ ಕೊಡುವದಿಲ್ಲ.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.

ತುಮಕೂರ್ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕಿದಾರರಾದ ಈ ಕೆಳಗೆ ನಮೂದಾಗುವ ಜೋಡೀದಾರರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗು ಹಿಡುವಳಿ ಹಕ್ಕು ತಪ್ಪಿಸಲ್ಪಟ್ಟ ಸ್ಥಿರಸ್ವತ್ತು ತುಮಕೂರ್ ಡಿಸ್ಟ್ರಿಕ್ಟು ತಿಪಟೂರು ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಆಗಸ್ಟ್ 8ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ. ಹರಾಜು ಡಿಟೋ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ * ಬಾಕಿ ಕಂದಾಯದ ಬಗ್ಯೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 725–11–10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್‍ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್‍ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್‍ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನನಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್‍ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್‍ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‍ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್‍ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್‍ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜ್‌ದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ವೃತ್ತಿ.	ಅಂದಾಜು ಬೀಜವರಿ.			ಅಂದಾಜು ಹುಟ್ಟುವಳಿ ಯಾ ಬೇರೀಜು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಕ್ವಿಟರೆಂಟ.			ಯಾವಬಾಕಿ ಮೊಬಲಗಿಗೋಸ್ಕರ ವೃತ್ತಿಗಳು ಹರಾಜ್ ಮಾಡಲ್ಪಡುವದೋ ಅಂಥಾ ಸರ್ಕಾರದ ಬಾಕಿ.			ಹರಾಜು ತಾ॥ ವಗೈರೆ.
						ಖಂಡಿ.	ಕು.	ಪ.	ರೂ.ಆ.ಪೈ.	ರೂ.	ಆ.	ಪೈ.	ರೂ.	ಆ.	ಪೈ.	
ತುಮಕೂರು.	ತಿಪಟೂರು.	ದಬ್ಬೆಗಟ್ಟ.	ಬಿನ್ನೆನಕೆರೆ ಜೋಡೀ ಗ್ರಾಮ.	1 ಕ್ರಿಷ್ಣ ಭಟ್ಟ	೩॥÷	229	16	4		725	11	10	725	11	10	1896ನೇ ಇಸವಿ ಅಗಸ್ಟ 8ನೇ ತಾರೀಖಿನಲ್ಲಿ ತಿಪಟೂರು ತಾಲ್ಲೂಕು ಅಮಲ್ದಾರ್ರ ರೂಬರೂಬ.
				2 ವೆಂಕಟಗಿರಯ್ಯ	೨											
				3 ಪುಟ್ಟಭಟ್ಟ	|||÷								ಮನ್ಮಥ ಸಾಲಿನ ಕ್ವಿಟರೆಂಟ ಬಾಕಿ ಗೋಸ್ಕರ			
				4 ಕಂ॥ ನರಶಿಂಭಟ್ಟ	|||=											
				5 ತಮ್ಮಣ್ಣಭಟ್ಟನ ನಂಜುಂಡಭಟ್ಟ	|||÷											
				6 ಹಿರಿಯಣ್ಣಭಟ್ಟನ ಹೆಂಡತಿ ಲಕ್ಷ್ಮಮ್ಮ	|||÷											
				7 ದಾನಪ್ಪ	೨											
				8 ಸುಬ್ಬರಾಯಶಾಸ್ತ್ರಿ	೨|											
				9 ಕೊಮಾರಯ್ಯ	೨|											
				10 ದೊಡ್ಡ ನರಸಿಂಹಭಟ್ಟನ ಮಗ ನರಸಿಂಹಭಟ್ಟ	೧|÷											
				11 ವೆಂಕಟನಾರಣಪ್ಪ	೧÷											
				12 ರಾಮಾಭಟ್ಟರು	೧||=											
				13 ಗೋಪಾಲಭಟ್ರ ಚಲುವಾಭಟ್ಟ	೧||											
				14 ಶ್ರೀಕಂಠಯ್ಯ	೧||											
				15 ಸುಬ್ಬಾಭಟ್ಟ	೩||											
				16 ಪುಟ್ಟಮ್ಮ	|||=											
				17 ಕಾಶೀಪತಿಭಟ್ಟನ ಸುಬ್ಬಾಭಟ್ಟ	|=											
				18 ಹನುಮಂತಯ್ಯನ ಹೆಂಡತಿ ಗವುರಮ್ಮ	೧||											
				19 ಲಕ್ಷ್ಮಣ ಜೋಯಿಸ	೧											
				20 ಕುಣಿಗಲು ನಾಗಪ್ಪ	|=											
				21 ಹೊನ್ನಪ್ಪ	|											
				22 ದ್ಯಾವಯ್ಯ	|||=											
				23 ಕೃಷ್ಣಭಟ್ಟನ ಹೆಂಡತಿ ಸುಬ್ಬಮ್ಮ	||											

ತಾರೀಖು 3ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸನ್ 1896—97ನೇ ಸಾಲಿಗೆ ಅಂದರೆ, 1896ನೇ ಇಸವಿ ಜುಲೈ 1ನೇ ತಾರೀಖು ಲಾಗಾಯತು ಸನ್ 1897ನೇ ಇಸವಿ ಜೂನ್ 30ನೇ ತಾರೀಖು ವರಿಗೆ ಈ ಕೆಳಗೆ ಕಂಡ ಶಿರಾ, ಮದ್ದಗಿರಿ ಮತ್ತು ಕೊರಟಗೆರೆ ಸಬ್ ತಾಲ್ಲೂಕು ಗ್ರಾಮಗಳಲ್ಲಿರುವ ಡಿಸ್ಟ್ರಿಕ್ಟು ಫಾರಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಸರಕಾರೀ ಬಂಜರು ಜಮೀನುಗಳಲ್ಲಿಯೂ ಮತ್ತು ಅಮೃತಮಲ್ ಕಾವಲುಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸುಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನ ಅಮಲ್ದಾರ್ರವರ ರೂಬರೂ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಮತ್ತು ಸ್ಥಳಗಳಲ್ಲಿಯೂ ಹರಾಜ್ ಮಾಡಲ್ಪಡುತ್ತೆ. ಹರಾಜು ಮಧ್ಯಾನ್ಹ 11 ಘಂಟೆಗೆ ಷುರೂ ಆಗುತ್ತೆ. ಈ ಹರಾಜು ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ತಾಲ್ಲೂಕುಗಳು.	ಪಸಾರೇ ಜಿನಸೀ.		ತಾರೀಖು.	ಸ್ಥಳ.
ಶಿರಾ ತಾಲ್ಲೂಕು.	1 ಕಪಿಲಾರಂಗು	10 ಸೀತಾಫಲ	1896ನೇ ಇಸವಿ ಆಗಸ್ಟ 6ನೇ ತಾರೀಖು.	ಶಿರಾ ತಾಲ್ಲೂಕು ಕಚೇರಿಯಲ್ಲಿ.
	2 ಸೀಗೇಕಾಯಿ	11 ಪಪ್ಪಿಚಕ್ಕೆ		
	3 ಹುಣಿಸೇಹಣ್ಣು	12 ಸಾಮೆಚಕ್ಕೆ		
	4 ಅಳಲೇಕಾಯಿ	13 ಮಡ್ಡಿಚಕ್ಕೆ		
	5 ತಾರೇಕಾಯಿ	14 ಕಾಡುಅರಿಶಿನ		
	6 ಗೇರುಬೀಜ	15 ಬ್ಯಾಲದಕಾಯಿ		
	7 ತುರುಕಹರಳು	16 ಹೊಂಗೇಕಾಯಿ		
	8 ದೊಡ್ಡಆಗಸೆ	17 ಮರಡಿಪಪ್ಪು		
	9 ಗೋಂದು			
ಮದ್ದಗಿರಿ ತಾ॥	1 ಕಪಿಲಾರಂಗು	7 ಗೋಂದು	1896ನೇ ಇಸವಿ ಆಗಸ್ಟ 4ನೇ ತಾರೀಖು.	ಮದ್ದಗಿರಿ ತಾಲ್ಲೂಕು ಕಚೇರಿಯಲ್ಲಿ.
	2 ಶೀಗೇಕಾಯಿ	8 ಶೀತಾಫಲ		
	3 ಹುಣಿಸೇಹಣ್ಣು	9 ಬ್ಯಾಲದಕಾಯಿ		
	4 ಅಳಲೇಕಾಯಿ	10 ಹೊಂಗೇಕಾಯಿ		
	5 ತಾರೇಕಾಯಿ	11 ಪಪ್ಪಿಚಕ್ಕೆ		
	6 ಗೇರುಬೀಜ			

ತಾಲ್ಲೂಕುಗಳು.	ಪಸಾರೇ ಜಿನಸೀ.		ತಾರೀಖು.	ಸ್ಥಳ.
ಕೊರಟಗೆರೆ ಸಬ್ ತಾಲ್ಲೂಕು.	1 ಕಪಿಲಾರಂಗು 2 ಶೀಗೇಕಾಯಿ 3 ಹುಣಶೇಹಣ್ಣು 4 ಅಳಲೇಕಾಯಿ 5 ತಾರೇಕಾಯಿ 6 ಗೇರುಬೀಜ 7 ತುರುಕಹರಳು 8 ದೊಡ್ಡ ಅಗಸೆ	9 ಗೋಂದು 10 ಶೀತಾಫಲ 11 ಸಾಮೆಚಕ್ಕೆ 12 ಕಾಡುಅರಿಶಿನ 13 ಬ್ಯಾಲದಕಾಯಿ 14 ಮಡ್ಡಿ ಚಕ್ಕೆ 15 ಹೊಂಗೇಕಾಯಿ	1896ನೇ ಇಸವಿ ಆಗಸ್ಟ್ 5ನೇ ತಾರೀಖು.	ಕೊರಟಗೆರೆ ತಾಲ್ಲೂಕು ಕಚೇರಿಯಲ್ಲಿ.

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್‌ದಾರರಿಂದ ಚಡಸವಾಲ್‌ದಾರರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ ವಸೂಲು ಮಾಡಲ್ಪಡುವದು.

3. ಕ್ಲಿಪ್ತ ಕಾಲದ ವಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಠೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಪುಂಟಾಗುವ ಫಾಯಿದೆ ಭಾಗ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೇ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸರ್ 1896—97ನೇ ಸಾಲಿಗೆ ಅಂದರೆ, 1896ನೇ ಇಸವಿ ಜುಲೈ 1ನೇ ತಾರೀಖು ಲಾಗಾಯತು ಸರ್ 1897ನೇ ಇಸವಿ ಜೂನ್ 30ನೇ ತಾರೀಖು ವರಿಗೆ ಈ ಕೆಳಗೆ ಕಂಡ ಮದ್ದಗಿರಿ, ಶಿರಾ, ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಇರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಆಯಾ ತಾಲ್ಲೂಕು ಕಚೇರಿಯಲ್ಲಿ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆ. ಹರಾಜು ಬೆಳಿಗ್ಗೆ 11 ಘಂಟೆಗೆ ಷುರೂ ಆಗುತ್ತೆ.

ತಾಲ್ಲೂಕು.		ತಾರೀಖು.	ಸ್ಥಳ.
ಮದ್ದಗಿರಿ	..	1896ನೇ ಇಸವಿ ಆಗಸ್ಟ್ 3ನೇ ತಾರೀಖು	ಮದ್ದಗಿರಿ ತಾಲ್ಲೂಕು ಕಚೇರಿಯಲ್ಲಿ
ಶಿರಾ	..	1896ನೇ ಇಸವಿ ಆಗಸ್ಟ್ 5ನೇ ತಾರೀಖು	ಶಿರಾ ತಾಲ್ಲೂಕು ಕಚೇರಿಯಲ್ಲಿ
ಗುಬ್ಬಿ	..	1896ನೇ ಇಸವಿ ಆಗಸ್ಟ್ 10ನೇ ತಾರೀಖು	ಗುಬ್ಬೀ ತಾಲ್ಲೂಕು ಕಚೇರಿಯಲ್ಲಿ.

2. ಅಮಲ್‌ದಾರರು ಅಥವಾ ಶಿರಸ್ತೇದಾರರು ಹರಾಜ್ ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರಪತ್ರಿಕೆಯನ್ನ ಹಾಜರು ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಸೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರು ಮಾಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಚಡಸವಾಲ್‌ದಾರರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್‌ಸೆಸ್ ದೇಖಿಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

6. ಇಜಾರೆದಾರರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರರು ವಿನಹ ಇತರರಿಗೆ ಮಾರಲೂಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರದಾರರ ಹಕ್ಕಿಗೆ ಆತಂಕಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರರು ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಪಣ ಕಲ್ಲುಗಳು ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್‌ದಾರರಿಂದ ಮಾಫೀ ಲೈಸೆನ್ಸನ್ನು ಪಡಿಯದೆ ಕಲ್ಲುಗಳನ್ನ ಇಜಾರೆದಾರರು ಸಾಗಿಸಕೂಡದು.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರರಾದ ತಿಪಟೂರು ತಾಲ್ಲೂಕು ಜೋಡಿ ಹುಲಿಸಂದ್ರ ಗ್ರಾಮ ಜೋಡಿದಾರರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಹಿಡುವಳಿ ಹಕ್ಕು ತಪ್ಪಿಸಲ್ಪಟ್ಟ ಸ್ಥಿರಸ್ವತ್ತು ವೃತ್ತಿವಾರ್ ತುಮಕೂರು ಡಿಸ್ಟ್ರಿಕ್ಟು ತಿಪಟೂರ್ ತಾಲ್ಲೂಕು ತಿಪಟೂರ್ ಗ್ರಾಮದಲ್ಲಿ 1896ನೇ ಜುಲೈ 20ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕಚಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 189 ನೇ ಸಾಲಿಗೆ* ಬಾಕಿ ಕಂದಾಯದ ಬಗ್ಯೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 245—13—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದುಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜ್ ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಆಥನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ ಮಾಡಲ್ಪಟ್ಟ ಕೂಡ್ಲೇ ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿ ಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರ್ರ ಹೆಸರು.	ವೃತ್ತಿ.	ವಟ್ಟುಗ್ರಾಮದ ವಿಸ್ತೀರ್ಣದ ಅಂದಾಜು.				ವಟ್ಟುಗ್ರಾಮದ ವಟ್ಟುಬೇರಿಜಿನ ಅಂದಾಜು.			ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.			ವೃತ್ತಿವಾರ್ ಎಷ್ಟುಬಾಕಿ ಬಗ್ಯೆ ಗ್ರಾಮ ಹರಾಜು ಮಾಡಲ್ಪಡುತ್ತೆ.			ಹರಾಜು ತಾರೀಖು.
							ಖ.	ಕೊ.	ಪ.										
ತುಮಕೂರು	ತಿಪಟೂರು	ಹೊನ್ನವಳ್ಳಿ	ಜೋಡಿಹುಲಿಸಂದ್ರಗ್ರಾಮ	1 ಸೂರಪ್ಪ	$4\frac{1}{4}$											53	13	8	1896ನೇ ಇಸವಿ ಜುಲೈ ತಾರೀಖು 20ನೇ ತಾಲ್ಲೂಕು ಕಛೇರಿ ಹತ್ತಿರ.
				2 ತಿಮ್ಮಪ್ಪಯ್ಯ	$3\frac{1}{2}$											47	0	5	
				3 ಮೂಲೆಮನೆ ನಾರಣಪ್ಪ	4											50	11	0	
				4 ಶಾಮಾವಧಾನಿಗಳ ವೆಂಕಟೇಶಭಟ್ಟ	$3\frac{3}{8}$	ಖುಷ್ಕೀ	37	1	0	600	0	0	408	2	9	42	12	4	
						ತರೀ	34	1	8							22	2	9	
																12	10	9	
						ಖರಾಬು	16	16	6							16	10	1	
				5 ರಾಮಸ್ವಾಮಯ್ಯ	$1\frac{3}{4}$														
				6 ರಾಂಭಟ್ಟರ ಸುಬ್ಬಯ್ಯ.	1		87	18	14										
				7 ಮಾಲೆಕಲ್ಲಯ್ಯನ ನಾರಣಪ್ಪ	$1\frac{5}{16}$														

ಯಂ. ನಾರಾಯಣರಾವ್,

ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 25ನೇ ಜೂನ್ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕಿದಾರನಾದ ಕಾಯಂಗುತ್ತಾ ಭಾರತೀಪುರ ಗ್ರಾಮದ ವೆಂಕಟಗಿರಿಗೋಸಾಯಿರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರ್ ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಆಗಸ್ಟ್ 10ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ಆ ದಿವಸ ದಿವ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895–96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 308–3–3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟ ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಲ್ಪಲೋಪಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೋಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಸ್ವಂತದ ಮನೆಗಳು.	ಕಟ್ಟಡಗಳು. ಅಂದಾಜು ಕ್ರಯ.	ಜಮೀನು. ನಂಬರ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ ತರೀ ಬಾಗಾಯತು ಇತ್ಯಾದಿ.	ಜಮೀನು. ವಿಸ್ತೀರ್ಣ.		ಜಮೀನು. ಕಂದಾಯ.			ಸರ್ಕಾರಕ್ಕೆ ಬರಬೇಕಾದ ಬಾಕಿ ಸಂಬಂಧವಾದ ಖುಲಾಸೆ.		
1	2	3	4	5	6	7	8	9		10			11		
					ರೂ. ಆ. ಪೈ.			ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.
ಕೃಷ್ಣರಾಜಪೇಟೆ.	ಸಂತೆಬಾಚಹಳ್ಳಿ.	ಕಾಯಿಂಗೋಡು ಬಾರಕಿಡ್ಡ.	ವೆಂಕಟಗಿರಿಗೋಸಾಯಿ	..	..	ಕ್ವಾರ್ ಇನಾಂ ಹೊರತಾಗಿ ಸ್ವಾರಾ ಗ್ರಾಮ ಜಿಸ್ತು.	ಖುಷ್ಕೀ	486	20	790	4	0	308	3	3
							ಪರಂಪೋಕು	289	13						
							ತರೀ	77	28						
							ಬಾಗಾಯತು	12	32				ಹರಾಜು ತಾರೀಖು ವರಿಗೆ ಬಡ್ಡಿ ಬರಬೇಕು.		
								866	13						

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನವಮೂದಿಸತಕ್ಕದ್ದು.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮಿಷ್ನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 451.

ಅರ್ಜೀದಾರ್ ತಿರುಮಕೂಡ್ಲು ನರಸೀಪುರದ ತಾಲ್ಲೂಕು ಸೋಸಲೆಯಲ್ಲಿರುವ ಶ್ರೀನಿವಾಸರಂಗಾಚಾರು, ಮೈನರಾದ ಸದರೀ ಸ್ಥಳದ ಶೇಷಾದ್ರಿ ನರಸುಂಹ್ಮಾಚಾರ್ರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಶೇಷಾದ್ರಿ ನರಸುಂಹ್ಮಾಚಾರಿಗೆ ಸೋದರಮಾವ ಆಗಬೇಕೆಂಬ ಹಕ್ಕಿನಮೇಲೆ ಸದರೀ ಸೋಸಲೆ ಸ್ಥಳದ ಸದರೀ ಶ್ರೀನಿವಾಸರಂಗಾಚಾರ್ರು, ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರಟಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1896ನೇ ಇಸವಿ ಜುಲೈ ತಾರೀಖು 31ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 452.

ಮೃತಪಟ್ಟ ವೆಂಕಟರಮಣಪ್ಪ ಪುರಫ್ ಅಮ್ಮಣ್ಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮಲ್ಲಮ್ಮನವರು, ಮೃತಪಟ್ಟ ಸದರೀ ವೆಂಕಟರಮಣಪ್ಪ ಪುರಫ್ ಅಮ್ಮಣ್ಣಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಮಂಡೀಮೊಹಲಾ ಸ್ಥಳದ ಸದರೀ ಮಲ್ಲಮ್ಮನವರು, ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣಪ್ಪ ಪುರಫ್ ಅಮ್ಮಣ್ಣಪ್ಪನವರ ಜಿಂದಗಿ ಬಗ್ಗಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಬಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಲ್ಲಮ್ಮನವರ ಅರ್ಜಿಯನ್ನು ಸನ್1896ನೇ ಇಸವಿ ಜುಲೈ ತಿಂಗಳ ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಪ್ಪ ಪುರಫ್ ಅಮ್ಮಣ್ಣಪ್ಪನವರ ಆಸ್ತಿಗೆ ಹಕ್ಕುದಾರರಾದ ಯಿನಿಸ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 453.

ಮೃತಪಟ್ಟ ತರೀಕೆರೆ ಗರುಡಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ತಿಮ್ಮಮ್ಮ, 2ನೇ ಗರುಡಮ್ಮ ಸಹ, ಮೃತಪಟ್ಟ ಸದರೀ ಗರುಡಾಚಾರ್ರಿಗೆ 1ನೇ ಹೆಂಡತಿ, 2ನೇ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ನಾಗಮಂಗಲದ ತಾಲ್ಲೂಕು ಬಿಂಡಿಗನವಲೇ ಸ್ಥಳದ ಸದರೀ 1—2ನೇ ಅರ್ಜೀದಾರ್ರು ಸದರೀ ವಾಸಸ್ಥ

233

ರಾಗಿ ಮೃತಪಟ್ಟ ಗರುಡಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸನ್1860ನೇ ಇಸವಿ 27ನೇ ಆಕ್ಟ್ಟ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತಿಮ್ಮಮ್ಮ, ಗರುಡಮ್ಮ ಇವರುಗಳ ಅರ್ಜಿಯನ್ನು ಸನ್ 1896ನೇ ಇಸವಿ ಜುಲೈ ತಿಂಗಳ ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗರುಡಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 454.

ಮೃತಪಟ್ಟ ಫ್ಲೀಡರು ಗುರ್ರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕಾವೇರಮ್ಮನವರು, ಮೃತಪಟ್ಟ ಸದರೀ ಗುರ್ರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಕೃಷ್ಣರಾಜಪೇಟೆ ತಾಲ್ಲೂಕು ಬೂಕನಕೆರೆ ಸ್ಥಳದ ಸದರೀ ಕಾವೇರಮ್ಮನವರು, ಹೊಳೇನರಸೀಪುರದ ವಾಸಸ್ಥರಾಗಿ ಮೃತಪಟ್ಟ ಗುರ್ರಾಯರವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟ್ಟ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಾವೇರಮ್ಮನವರ ಅರ್ಜಿಯನ್ನು ಸನ್ 1896ನೇ ಇಸವಿ ಜುಲೈ ತಿಂಗಳ ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರ್ರಾಯರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 497.

ಮೃತಪಟ್ಟ ಯಿಮಾಂಸಾಹೇಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಜಮಾಲುಸಾಹೇಬರು, ಮೃತಪಟ್ಟ ಸದರೀ ಯಿಮಾಂಸಾಹೇಬರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹಾಸನದ ತಾಲ್ಲೂಕು ಆಲೂರು ಪ್ಯಾಟೇ ಸ್ಥಳದ ಸದರೀ ಜಮಾಲುಸಾಬರು, ಸದರೀ ವಾಸಸ್ಥರಾಗಿ ಮೃತಪಟ್ಟ ಯಿಮಾಂಸಾಹೇಬರ ಜಿಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಟ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜಮಾಲುಸಾಬರ ಅರ್ಜಿಯನ್ನು ಸನ್ 1896ನೇ ಇಸವಿ ಆಗಸ್ಟ್ಟ ತಿಂಗಳ ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಯಿಮಾಂಸಾಹೇಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 502.

ಮೃತಪಟ್ಟ ಪುಟ್ಟನಂಜುಂಡಶಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಸೂರ್ಯನಾರಾಯಣಶಟ್ಟರು, ಮೃತಪಟ್ಟ ಸದರೀ ಪುಟ್ಟ ನಂಜುಂಡಶಟ್ಟರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ದೊಡ್ಡ ಪ್ಯಾಟೇ ಸ್ಥಳದ ಸದರೀ ಸೂರ್ಯನಾರಾಯಣಶಟ್ಟರು, ಸದರೀ ವಾಸಸ್ಥರಾಗಿ ಮೃತಪಟ್ಟ ಪುಟ್ಟನಂಜುಂಡಶಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟ್ಟ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸೂರ್ಯನಾರಾಯಣಶಟ್ಟರ ಅರ್ಜಿಯನ್ನು ಸನ್ 1896ನೇ ಇಸವಿ ಆಗಸ್ಟ್ಟ ತಿಂಗಳ ತಾರೀಖು 14ರಲ್ಲು ಕೇಳಿಸರಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟನಂಜುಂಡಶಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಜುಲೈ ತಿಂಗಳ 2ನೇ ತಾರೀಖಿನಲ್ಲಿ ಕೋರ್ಟ್ ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ತಾರೀಖು 6ನೇ ಜುಲೈ 1896.

1896ನೇ ಇಸವಿ ಮಾರ್ಚಿ 15ರ ಲಾಗಾಯತು ಗ್ರಾಮದಿಂದ ಗೈರ್ ಹಾಜರಾಗಿರುವ ಮಾಳಿಗೆ ಎಂಬುವನ ಚಹರೇ ಪಟ್ಟಿ—

ಹೆಸರು—ಮಾಳಿಗೆ
ತಂದೆ ಹೆಸರು—ಕಾಳಮನ್ನೇ ಗವುಡ
ವೆಯಸ್ಸು—40 ಮತ್ತು 50 ವರುಷಕ್ಕೆ ಮಧ್ಯೆ
ಜಾತಿ—ಹಾಲುಕುರುಬ
ವಾಸಸ್ಥಳ—ಯಡತೊರೇ ತಾಲ್ಲೂಕು ಹರದನಹಳ್ಳಿ ಹೋಬಳಿ ಚಿಕ್ಕನಾಯ್ಕನಹಳ್ಳಿ ಕೊಪ್ಪಲ್

ಗುರ್ತು ಕಂಡು ಹಿಡಿಯುವ ಭಾವಗಳ ತಪಶೀಲ್ ಮಾಶಿಬಿಟ್ಟು ಇಧಾನೆ, ತಲೆ ಮೇಲಿನ ಕೂದಲು ಸ್ವಲ್ಪ ಬೆಳ್ಳಗೆ ಇಧೆ. ಇವನನ್ನು ಕೊನೇಲಿ ಕಂಡಾಗ ಇವನು ಬೂದಿಬಣ್ಣದ ಕಂಬಳಿಯನ್ನು ಸಾಧಾರಣ ಪಂಚೆಯನ್ನು ಹೊದ್ದುಕೊಂಡು ಇದ್ದ. ತಲಿಗೆ ಬಿಳಿ ಬಟ್ಟೆ ಸುತ್ತಿಕೊಂಡು ಇದ್ದ.

ಇವನು ಇರುವ ಸಳ ಮುಂತಾದ್ದರ ಇಂಫರ್ಮೇಷಯಾನೆ ವರ್ತಮಾನಗಳನ್ನ ಯಡತೊರೇ ತಾಲ್ಲೂಕು ಪೋಲೀಸ್ ಇನ್ಸ್ಪೆಕ್ಟರವರಿಗಾಗಲಿ ಅಥವಾ ಅಮಲ್ದಾರ್ರವರಿಗಾಗಲಿ ಕೊಡಬೇಕಾಗಿ ಕೋರಿ ಇಧೆ.

ನಂಜನಗೂಡು ತಾಲ್ಲೂಕು 1895—96ನೇ ಇಸವಿ 8—59ನೇ ನಂಬರು, ಹೊಸಕೋಟೆ ಚನ್ನಬಸವನ ಖೂನೀ ಮೊಕದ್ದಮಾಕ್ಕೆ ಸಂಬಂಧಪಟ್ಟ ನಂಜನಗೂಡು ತಾಲ್ಲೂಕು ಪೊಲೀಸಿನವರಿಂದ ಅಪೇಕ್ಷಿತನಾಗಿ ಹಾಲಿ ತಪ್ಪಿಸಿಕೊಂಡು ಇರುವ ಬಲಗೈ ರಂಗಯಂಬುವನ ಚಹರೇ ಪಟ್ಟಿ,—

ಹೆಸರು	..	ರಂಗ
ತಂದೆ ಹೆಸರು	..	ದೊಡ್ಡ ರಂಗ
ಜಾತಿ	..	ಬಲಗೈ
ವಯಸ್ಸು	..	ಸುಮಾರು 36 ವರುಷ
ಎತ್ತರ	..	ಅಡಿ 5—5½ ಅಥವಾ 6 ಅಂಗುಲ
ಕಸಬು	..	ಆರಂಭ ಮತ್ತು ಜೀತಗಾರ
ಬಣ್ಣ	..	ಕಪ್ಪು

ಗುರ್ತು ಕಂಡು ಹಿಡಿಯುವದಕ್ಕೆ ಬೇಕಾದ ಭಾವಗಳ ತಪಶೀಲು.

ನೀಳು ಮುಖ ಎಡದತೋಳು ಬಳಭಾಗದಲ್ಲಿ 2 ಅಂಗುಲ ಉದ್ದಕ್ಕೆ ⅓ ಅಂಗುಲ ಅಗಲಕ್ಕೆ ಕಾಮಾಲೆಗೋಸ್ಕರ ಬರೆ ಹಾಕಿದ ಗುರ್ತುಯಿದೆ. ವಿಶೇ ಬಿಟ್ಟು ಇಧಾನೆ ಇವನನ್ನು ಕೊನೇಲಿ ಕಂಡ ವ್ಯಾಳೆ ಇವನು ಹೊಲೆ ಮಗ್ಗದ ಪಂಚೆ ಉಟ್ಟುಕೊಂಡು ಇದ್ದನು. ಮೇಲ್ಕಡೆ ಬಿಳೀದಟ್ಟಿ ಸುತ್ತಿಕೊಂಡು ಇದ್ದ. ಕರೀ ಕಂಬಳಿ ಹೊದ್ದುಕೊಂಡು ಇದ್ದ.

ಈ ಮನುಷ್ಯನು ಇರುವ ಜಾಗಾ ಮುಂತಾದ್ದರ ಯಿಂಘರಮೇಷನ್ಯಾನೆ ವರ್ತಮಾನವನ್ನ ನಂಜನಗೂಡು ತಾಲ್ಲೂಕು ಪೊಲೀಸ್ ಇನ್ಸ್ಪೆಕ್ಟರಿಗಾಗಲಿ ಅಥವಾ ಅಮಲ್ದಾರ್ರವರಿಗಾಗಲಿ ಕೊಡಬೇಕಾಗಿ ಕೋರಿಯಿದೆ.

ಸಿ. ಹಾರ್ಡಿ,
ಮೈಸೂರ್ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೆಬರವರು.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸ್.

ತಾರೀಖು 1ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಂಡ್ಯ ತಾಲ್ಲೂಕು ಕುದರಗುಂಡಿ ಹೋಬಳಿ ಸ್ವವತಾಸ್ಯ ಗವಡಗೆರೇ ಗ್ರಾಮದ ಕೆರೆಗೆ ನೀರು ಬರತಕ್ಕ ನೀರು ಹರಿಯುವ ಹಳ್ಳದಲ್ಲಿ, ಒಂದು ಕುಡಿಕೆಯಲ್ಲಿ ಜೂತಕದ (17—4—0) ಅಂದಾಜಾವುಳ್ಳ ಚಿನ್ನದ ಬುಗಡಿ ಅದದು 4 ಡಿಪೋ ನಾಗರ ಕಡಕು 2 ಕೊಂಡ್ಲು 1 ಕಂಟರಾಯಿ ಹಣ 7 ಗೂಷೆಹಣ 4 ಸಹ ದೊರಕಿದ್ದಾಗಿ ಹಾಜರಾಗಿರುವದು ಅಮಾನತ್ತು ಯಿಧೆ. ಈ ನಿಕ್ಷೇಪಕ್ಕಾಗಲಿ ಅಥವಾ ಇದರ ವಂದು ಭಾಗಕ್ಕಾಗಲಿ ಹಕ್ಕುದಾರರಾಗಿ ಇರತಕ್ಕವರು ಖುದ್ದಾಗಿಯೇ ಆಗಲಿ ಅಥವಾ ವಕೀಲರ ಮುಖಾಂತ್ರವಾಗಿಯೇ ಆಗಲಿ 1896ನೇ ಇಸವಿ ಡಿಸೆಂಬರ್ ತಾರೀಖು 18ನೇ ಮಧ್ಯಾನ್ಹದಿವಿ 12 ಘಂಟೆಗೆ ಫ್ರೆಂಚರಾಕ್ಸ್ ಸಬ್ ಡಿವಿಜನ್ ಆಫಿಸ್ ರೂಬರೂಬ್ ಹಾಜರಾಗಿ ಅವುಗಳಲ್ಲಿ ತಮಗಿರುವ ಹಕ್ಕನ್ನ ಸ್ಥಿರಪಡಿಸಿ ಕೊಡಬೇಕು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 12ನೇ ಜೂನ್ 1896.

1. ಕಂದಾಯದ ಜಾಹಿದಾರನಾದ ಸಣ್ಣೂರಾಯರ ಕೃಷ್ಣಪ್ಪನವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಹಿಡುವಳಿ ಹಕ್ಕು ತಪ್ಪಿಸಲ್ಪಟ್ಟಿ ಇಧೆ ಯಂದು ಪ್ರಕಟಿಸಲ್ಪಟ್ಟಿರುವ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರ ಡಿಸ್ಟ್ರಿಕ್ಟ್ ಶ್ರೀರಂಗಪಟ್ಟಣ ತಾಲ್ಲೂಕು ಶ್ರೀರಂಗಪಟ್ಟಣ ಗ್ರಾಮದಲ್ಲಿ ಕಚೇರಿ ರೂಬರೂಬ್ 1896ನೇ ಇಸವಿ ಜುಲೈ 22ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇಧೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1897ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 336—4—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಭಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದು ಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸಧರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಆವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜ್ ನಿಲ್ಲಿಸಲ್ಪಡುತ್ತೆ.

7. ಹರಾಜ್ ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜ್‌ದಾರು; ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜ್‌ದಾರನ ಹೆಸರನಲ್ಲಿ ರಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಪಾಯಿದೆಯಲ್ಲಿ ಗವರ್ನಮೇಂಟಿನವರಿಗೆ ಅಪ್ಪೀಲ್‌ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸ್ವತ್ತಿನ ತಪ್ಶೀಲ್.									ಸರ್ಕಾರಕ್ಕೆ ಬರಬೇಕಾದ ನೋಟೀಸು ಫೀ ವಗೈರೆ ಸಹಾ ಬಾಕಿ ಮೊಬಲಗು.			
				ಕಟ್ಟಡಗಳು.		ಜಮೀನು.										
				ಕಟ್ಟಡದ ನಂಬರು.	ಅಂದಾಜು ಕಿಮ್ಮತ್ತು.	ನಂಬರು ಅಥವಾ ಭಾಗದ ಹೆಸರು.	ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.						
1	2	3	4	5	6	7	8	9		10			11			
					ರೂ. ಆ. ಪೈ.			ಎಕರೆ	ಗುಂ.	ರೂ.	ಆ.	ಪೈ.	ರೂ.	ಆ.	ಪೈ.	
ಶ್ರೀರಂಗಪಟ್ಟಣ	ಚಂದಗಾಲು	ಚಿಕ್ಕಹಳ್ಳಿ ಗ್ರಾಮ	ಸಂಬಾರಯ್ಯರ ಕೃಷ್ಣಯ್ಯನವರು			1 ಪೈ. 2	ಖುಷ್ಕೀ	2	27	2	0	0	33	15	10	ಸ್ವಭಾನು
						3	ತರೀ	2	30	11	0	0	160	0	0	ತಾರಣ
						19	ಡಿಟೋ	4	12	16	0	0	10	4	3	ವ್ಯಯ
						162 ಪೈ.	ಡಿಟೋ	1	23	6	0	0	243	9	10	ವಿರೋಧಿ
						157 ಪೈ.	ಖುಷ್ಕೀ	2	29	2	8	0	321	2	3	ವಿಕೃತಿ
						177	ಡಿಟೋ	1	23	1	8	0	321	2	3	ಖರ
							ತರೀ	5	5	19	8	0	321	2	3	ನಂದನ
						182	ಖುಷ್ಕೀ	5	15	3	8	0	321	2	3	ವಿಜಯ
						210	ಡಿಟೋ	1	20	1	8	0	321	2	3	ಜಯ
							ತರೀ	5	0	18	8	0	321	2	3	ಮನ್ಮಥಾ
						211 ಪೈ.	ಖುಷ್ಕೀ	2	11	2	0	0	93	3	4	ಬಾಂದು
						212	ಡಿಟೋ	15	34	14	0	0	———	—	—	
						214 ಪೈ.	ಡಿಟೋ	1	35	1	12	0	2467	14	9	96ನೇ ಇಸವಿ ಮಾ
						195 ಪೈ.	ತರೀ	2	9	8	8	0	499	2	1	ರ್ಚಿ ಆಖೈರಿಗೆ ಬಡ್ಡಿ
						185	ಡಿಟೋ	4	30	18	0	0	3	12	0	ನೋಟಿಸ್ ಫಿ ವಗೈರೆ
						189	ಡಿಟೋ	4	31	19	0	0	———	—	—	
						191	ಡಿಟೋ	4	23	17	0	0	2970	12	10	
						192	ಡಿಟೋ	4	0	16	0	0				ಮಾರ್ಚಿ ಈಚಿಗೆ ಹ
						193	ಡಿಟೋ	3	8	12	0	0				ರಾಜು ತಾರೀಖು ವರಿವಿ
						198	ಡಿಟೋ	5	20	21	0	0				ಗೆ ಬಡ್ಡಿ ಬರಬೇಕು
						199	ಡಿಟೋ	3	13	12	0	0				
						200	ಡಿಟೋ	1	25	6	0	0				
						201	ಡಿಟೋ	9	17	35	0	0				
						206	ಡಿಟೋ	3	24	15	0	0				
						209	ಡಿಟೋ	5	29	23	0	0				
								105	13	302	4	0				
			ಪುಟ್ಟಣ್ಣನವರ ಖಾತೆಗೆ ಅನುಭವದಾರ ಸಂಬಾರಯ್ಯರ ಕೃಷ್ಣಯ್ಯನವರು			168	ತರೀ	3	17	13	0	0	13	13	0	ವಿರೋಧಿ
													13	13	0	ವಿಕೃತಿ
													13	13	0	ಖರ
													13	13	0	ನಂದನ
													13	13	0	ವಿಜಯ
													13	13	0	ಜಯ
													13	13	0	ಮನ್ಮಥಾ
													96	11	0	
													3	12	0	ನೋಟಿಸ್ ಫೀ ವಗೈರೆ
													16	13	0	96ನೇ ಮಾರ್ಚಿ ಆ
																ಖೈರಿಗೆ ಬಡ್ಡಿ
													117	4	0	ಮಾರ್ಚಿ ಈಚಿಗೆ ಹರಾ
																ಜ್ ತಾರೀಖು ವರಿವಿಗೆ
																ಬಡ್ಡಿ ಬರಬೇಕು

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎಕರೆ	ಗುಂ.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು. ರೂ.	ಆ.	ಪೈ.	
1	2	3	4	5	6 ರೂ.ಆ.ಪೈ.	7	8	9		10			11			
ಶ್ರೀರಂಗಪಟ್ಟಣ	ಚಂದಗಾಲು	ಚನ್ನಹಳ್ಳಿ ಗ್ರಾಮ	ಶಿದ್ದಾ ಜವಮ್ಮಣಿ ಖಾತೆಗೆ ಅ॥ ಸಂಣೂರಾಯರ ಕೃಷ್ಣಪ್ಪನವರು			190	ತರೀ	3	20	13	0	0	117	4	0	ಮೇಲಿನ ಖಾತೇ ತಪಶೀಲಿನಂತೆ ಮಾರ್ಚಿ ಈಚಿಗೆ ಬಡ್ಡಿ ಬರಬೇಕು
		ದೊಡ್ಡಂಕನಹಳ್ಳಿ	ಪುಟ್ಟಮಲ್ಲಪ್ಪನವರ ಖಾತೆಗೆ ಅನುಭವದಾರ ಸಂಣೂರಾಯರ ಕೃಷ್ಣಪ್ಪನವರು			19	ಬಾಗಾಯತು	0	38	2	4	0	14	14	7	ಪ್ರಮಾಥಿ
							ಖುಷ್ಕೀ	1	3	1	4	0	14	14	7	ವಿಕ್ರಮ
							ನೀರು ತೀರ್ವೆ	0	0	4	8	0	6	10	5	ವಿಷು
													6	10	5	ಚಿತ್ರಭಾನು
								2	1	8	0	0	6	10	5	ಸ್ವಭಾನು
													6	10	5	ತಾರಣ
													8	3	6	ವಿರೋಧಿ
													8	3	6	ವಿಕೃತಿ
													8	3	6	ಖರಾ
													8	3	6	ನಂದನ
													8	3	6	ವಿಜಯ
													8	3	6	ಜಯ
													8	3	6	ಮನ್ಮಥಾ
													113	15	4	ನೋಟಿಸ್ ಫೀ, ವ
													3	8	0	ಗೈರೆ 96ನೇ ಮಾ
													58	10	11	ರ್ಚಿಆಖೈರಿಗೆಬಡ್ಡಿ
													176	2	3	ಮಾರ್ಚಿಈಚಿಗೆ ಹರಾಜ್ ತಾರೀಖು
													3381	7	1	ವರವಿಗೆ ಬಡ್ಡಿ ಬರಬೇಕು.

ಪಿ. ಪಂಚನಾಥರಾವ್,
ಸಬ್ ಡಿವಿಜ಼ ಆಫಿಸರ್.

ಮೈಸೂರ್ ಡಿಸ್ಟ್ರಿಕ್ಟು.

ತಾರೀಖು 30ನೇ ಜೂ೯ 1896ನೇ ಇಸವಿ.

ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಅಡಗಿಯಿರತಕ್ಕ ಈ ಕೆಳಗೆ ನಮೂದಾಗುವ ತಾಲ್ಲೂಕುಗಳಲ್ಲಿ 1896ನೇ ಜುಲೈ ಲಾಗಾಯತು 1897ನೇ ಜೂ೯ ಆಖೈರಿವರಿಗೆ ಕುರಂಗದ ಕಲ್ಲುಗಳನ್ನು ಜಮಾಯಿಸುವ ಹಕ್ಕುದಾರಿಯನ್ನು ತಾಲ್ಲೂಕ್‌ವಾರಾಗಿ ಆಯಾ ತಾಲ್ಲೂಕುಗಳ ಯದುರಿಗೆ ಬರೆದಿರುವ ತಾರೀಖು ಮತ್ತು ಸ್ಥಳಗಳಲ್ಲಿ ಮಧ್ಯಾನ್ಹ 12 ಘಂಟೆ ಲಾಗಾಯತು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆಂತ ಯಿದರಿಂದ ಸಮಸ್ತ ಜನಗಳಿಗೂ ತಿಳಿಸಿರುತ್ತದೆ.

ತಾಲ್ಲೂಕು.	ಹರಾಜ್ ತಾರೀಖು ಮತ್ತು ಸ್ಥಳ.	ಹರಾಜ್ ಮಾಡಿಸತಕ್ಕ ಆಫೀಸರ ಹೆಸರು.
1 ಮೈಸೂರು 2 ಯಡತೊರೆ 3 ಹುಣಸೂರು 4 ಹೆಗ್ಗಡದೇವನಕೋಟೆ 5 ಗುಂಡ್ಲುಪೇಟೆ 6 ಚಾಮರಾಜನಗರ 7 ನಂಜನಗೂಡು 8 ತಿರುಮಕೂಡ್ಲು ನರಸೀಪುರ	1896ನೇ ಇಸವಿ ಜುಲೈ 16ರಲ್ಲು ಮೈಸೂರ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ	ಡೆಪ್ಯುಟಿ ಕಮ್ಮಿಷನರ್ ಅಥವಾ ಅಸಿಸ್ಟೆಂಟ್ ಕಮ್ಮಿಷನರವರು.
9 ಶ್ರೀರಂಗಪಟ್ಟಣ 10 ಕೃಷ್ಣರಾಜಪೇಟೆ 11 ನಾಗಮಂಗಲ 12 ಮಂಡ್ಯ 13 ಮಳವಳ್ಳಿ	1896ನೇ ಇಸವಿ ಜುಲೈ 18ರಲ್ಲು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸಿನಲ್ಲಿ	ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.

(2.) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ರೂಪಾಯಿ 1ಕ್ಕೆ ಪ್ರೊಂದಾಣೆ ಮೇರೆ ಲೋಕಲ್ ಸೆಸ್ ಸಹಿತ ಹರಾಜು ಕಾಯಂಆದ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳಲ್ಲಿ ಪಾವತಿಮಾಡಬೇಕು. ಹಾಗೆ ಬಾಕಿ ಮೊಬಲಗನ್ನ ಪಾವತಿ ಮಾಡುವದಕ್ಕೆ ಚಡಸವಾಲ್‌ದಾರನು ತಪ್ಪಿದಲ್ಲಿ ಅವನಿಂದ ಹಾಜರ್ಮಾಡಲ್ಪಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು, ಡಿಪಾಜಿಟ್ ಹಾಜರ್ಮಾಡುವದಕ್ಕಾಗಲಿ ಅಥವಾ ಬಾಕಿ ಹಣವನ್ನ ಪಾವತಿಮಾಡುವದಕ್ಕಾಗಲಿ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಆದರಿಂದ ಉಂಟಾಗುವ ನಷ್ಟಕ್ಕೆ ಮೊದಲ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

(3.) ಇತರ ಷರತುಗಳು ಯಾವವಂದರೆ—

(a) ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರನ ಅನುಮತಿ ವಿನಹ ಅರಿರಿಸಿಕೊಳ್ಳಕೂಡದು. ಪರಂತು ತಮ್ಮ ಹಿಡುವಳೀ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿ ಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(b) ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

(c) ಹಿಡುವಳಿಯಲ್ಲಿ ಯಿಲ್ಲದ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗೆದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(d) ಕಲ್ಲಗಳನ್ನು ಜಮಾಯಿಸುವದಕ್ಕೋಸ್ಕರ ಜಮೀನುಗಳನ್ನ ಇಜಾರೆದಾರನು ಅಗೆಯಕೂಡದು. ಒಂದು ವೇಳೆ ಅಗೆದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(e) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲು ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಸೀಲ್ ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಒಂದು ಮಾಫೀ ಲೈಸೆನ್ಸ್ ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

Mysore Govt. Central Press, Bangalore.—1896.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 29.

ಬೆಂಗಳೂರು, ಗುರುವಾರ, ಜುಲೈ ತಾ|| 23, ಸನ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ ಕಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಯಡ್ಯು ಕೇಷನ್ ಇನ್‌ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಯೆರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 30ನೇ ಜೂನ್ 1896.

ನಂ. 14005.—ಲೋ. ಫಂ. 257—92, ಸನ್ 1894ನೇ ಇಸವಿಯ ನಂ. VIIನೇ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್‌ಷನ್ ನಿಯಮಗಳನುಸರಿಸಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನು ಸರ್ಕಾರ್ ಕೆಲಸಕ್ಕೆ, ಅಂದರೆ, ನಂಜನಗೂಡು ಷಹರಿನಲ್ಲಿ ಗೌರೀಘಟ್ಟದ ರಸ್ತೆಯನ್ನ ಅಗಲಪಡಿಸುವ ಬಗ್ಯಾಗಿ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು—ಮೈಸೂರು.

ತಾಲ್ಲೂಕು—ನಂಜನಗೂಡು

ಹೋಬಳಿ—ಕಸಬಾ.

ಗ್ರಾಮ—ನಂಜನಗೂಡು.

ಹಿಡುವಳಿದಾರ್ರ ಹೆಸರು—ಲಕ್ಷ್ಮಮ್ಮ, ತಿರುಮಲಮ್ಮ.

ವಿವರ ಮತ್ತು ನಂಬರು-ಒಂದು ಜಗಲಿ ಮತ್ತು ಚಪ್ಪರ ಸಹಿತವಾದ ಖಾಲೀ ಜಾಗ.

ಬೀಜವರಿ—20 ಸಲಿಗಜಗಳು.

ಜೇರೀಜು—ಇಲ್ಲ.

ಚೆಕ್ಕುಬಂದಿ:—

ಪೂರ್ವಕ್ಕೆ—ಅಪ್ಪಾಜಿಶೆಟ್ಟರ ಮತ್ತು ರಾಮಶೆಟ್ಟರ ಮನೆ.

ಪಶ್ಚಿಮಕ್ಕೆ—ಗೌರೀಘಟ್ಟದ ರಸ್ತೆ.

ಉತ್ತರಕ್ಕೆ—ಸುಬ್ರಾಯಶೆಟ್ಟರ ಮನೆಗೆ ಹೋಗುವಗಲ್ಲಿ (ಪೂರ್ವದಲ್ಲಿ ಅಂಕನಾಥಶೆಟ್ಟರ ಮನೆ)

ದಕ್ಷಿಣಕ್ಕೆ—ದೊಡ್ಡರಸ್ತೆ.

ತಾರೀಖು 8ನೇ ಜುಲೈ 1896.

ನಂ. 450.—ಎಜ್ಯು. 24, ಸ್ 1895ನೇ ಮಾರ್ಚಿ 18ನೇ ಮರ್ಸ್ಕಂ ಎ. 49ನೇ ನಂಬರ ಇಸ್ತಿಹಾರ್ನಾಮೆಯಲ್ಲಿ ಘಾಯಿಷ್ ಮಾಡಲ್ಪಟ್ಟ ಗವರ್ನಮೆಂಟ್ ಬಾಲಿಕಾ ಪಾಠಶಾಲೆಗಳ ಆಡಳಿತವನ್ನ ಕಮ್ಮಿಟಿಗಳಿಂದ ನಡಿಸುವ ಬಗ್ಯಾದ ರೂಲ್ಸಿನ 15ನೇ ರೂಲಿಗೆ ಈ ಕೆಳಗೆ ಕಂಡದ್ದನ್ನು ಬದಲಾಗಿ ಸೇರಿಸಲ್ಪಡತಕ್ಕದ್ದೆಂದು ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ.

"ಪಾಠಶಾಲೆ ಸಿಬ್ಬಂದಿಯ ಯಾವನೊಬ್ಬ ಮೆಂಬರಿನ ಮೊಕರರಾತಿ, ಬಡ್ತಿ, ಶಿಕ್ಷೆ, ಅಮಾನತ್ ಮತ್ತು ಬರತರಫ್ ಮಾಡುವಣ, ಇದಲ್ಲದೆ ಹಂಗಾಮಿಯಾಗಿ ಉತ್ತರಾಧಿಕಾರಿಯ ಮೊಕರರಾತಿಯನ್ನಾಗಲಿ ಯಾ ರಜಾ ಅಥವಾ ಆಕ್ಟಿಂಗ್ ಅಲೋವೆನ್ಸ್ ಕೊಡುವಣವನ್ನಾಗಲಿ ಬೇಕಾಗಿರತಕ್ಕ ಯಾವನೊಬ್ಬ ಮೆಂಬರಿನ ರಜಾವೂ, 1895ನೇ ಜೂನ್ 28ನೇ ಮರ್ಸ್ಕಂ 24799.-802-ಜ. 6289ನೇ ನಂಬರ ಗವರ್ನಮೆಂಟ್ ಪ್ರೊಸಿಡಿಂಗ್ಸಿನ 5ನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟ ಮೇರೆ ಅವರಿಗೆ ಕೊಡಲ್ಪಟ್ಟಿರುವ ಅಧಿಕಾರದೊಳಗಾಗಿ ವಿದ್ಯಾಭ್ಯಾಸದ ಇನ್ಸ್ಪೆಕ್ಟರ್ ಜನರಲ್ಯವರಿಂದಲೂ ಮತ್ತು ಇತರ ಸಂದರ್ಭಗಳಲ್ಲಿ ಗವರ್ನಮೆಂಟಿನವರು ಆಗಿಂದಾಗ್ಯೆ ವಿಧಿಸುವ ರೂಲ್ಸಿಗೆ ಒಳಪಟ್ಟು ಕಮ್ಮಿಟಿಯವರು ಕಳುಹಿಸುವ ಶಿಫಾರಸುಗಳನ್ನ ಸರಿಯಾದ ಆಲೋಚನೆ ಮಾಡಿದ ತರುವಾಯ ಗವರ್ನಮೆಂಟಿನವರಿಂದಲೂ ಮಂಜೂರ್ಮಾಡಲ್ಪಡತಕ್ಕದ್ದು."

ತಾರೀಖು 10ನೇ ಜುಲೈ 1896.

ನಂ. 360.—ಫೈ. 29, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಅಸಿಸ್ಟೆಂಟ್ ಕಂಟ್ರೋಲರ್ ಮಿಸ್ಟರ್ ಹೆರಿ ಈಗಲ್ಸ್ಯವರಿಗೆ, 1896ನೇ ಜುಲೈ 4ನೇ ಮರ್ಸ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 15ನೇ ಜುಲೈ 1896.

ನಂ. 767.—ಜು. 56, ಪೊಲೀಸ್ ಇಲಾಖೆಯಲ್ಲಿ ಈ ಕೆಳಗೆ ಕಂಡ ಬಡ್ತಿಗಳು 1896ನೇ ಜುಲೈ ಗುರ್ರೇ ಲಾಗಾಯತು ಸಬ್ ಪ್ರೋಟವಾಗಿ ಮಂಜೂರ್ಮಾಡಲ್ಪಟ್ಟಿರುತವೆ:—

ಹೆಸರು.	ಇಂದ.	ಗೆ.
1. ಮಿ॥ ಸೈಯದ್ ಅಮೀರ್ ಹಸನ್ಯವರು	2ನೇ ಕ್ಲಾಸ್ ಸೂಪರಿಂಟೆಂಡೆಂಟ್	1ನೇ ಕ್ಲಾಸ್ ಸೂಪರಿಂಟೆಂಡೆಂಟ್
2. ,, ಎಂ. ನಂಜರಾಜ ಅರಸಿನವರು	1ನೇ ಕ್ಲಾಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್	2ನೇ ಕ್ಲಾಸ್ ಡಿಟೋ
3. ,, ಪಿ ಎಫ್. ಬೌರಿಂಗ್ಯವರು	2ನೇ ಕ್ಲಾಸ್ ಡಿಟೋ ಡಿಟೋ	1ನೇ ಕ್ಲಾಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ (ಪೊಲೀಸ್ ಲಿಸ್ಟಿನಲ್ಲಿ ಸೆಕೆಂಡ್ಮಾಡಲ್ಪಟ್ಟಿರುತ್ತಾರೆ.)

ನಂ. 770.—ಜು. 59, ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಇದರಡಿ ಕಂಡ ಅಮಲ್ದಾರ್ರುಗಳೂ ವ ಡೆಪ್ಯುಟಿ ಅಮಲ್ದಾರ್ರುಗಳೂ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ:—

ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ರು ಬಿ. ಕೃಷ್ಣಸಿಂಗ್ಯವರು.

ನಂಜನಗೂಡು ತಾಲ್ಲೂಕು ಅಮಲ್ದಾರ್ರು ಸಿ. ವೆಂಕಟರಾಯರು.

ದೇವನಹಳ್ಳಿ ತಾಲ್ಲೂಕು ಅಮಲ್ದಾರ್ರು ಎಂ. ರಂಗರಾಯರು.

ಗುಡಿಬಂಡ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು ಸಿ. ಕೃಷ್ಣಮನಾಯಿಡು ಯವರು.

ಶ್ರೀರಂಗಪಟ್ಟಣದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು ಡಿ. ಸುಬ್ಬರಾಯರು.

ಹರಿಹರದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು ಎಂ. ರಂಗನಾಥರಾಯರು.

ಶ್ರೀನಿವಾಸಪುರದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು ಎಂ. ಕೃಷ್ಣಸ್ವಾಮಯ್ಯಂಗಾರ್ ಯವರು.

ಕುಂಸೀ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು ಚಿನ್ನಪ್ಪಾವು ಪಿಳ್ಳೆಯವರು.

ನಂ. 808.—ಮಿ. 140, ಘನವನ್ನು ಹೊಂದಿದ ಶ್ರೀಮನ್ ಮಹಾರಾಜ್ಞೀ ರೀಜಂಟಿಯವರು, ಈ ಕೆಳಗೆ ಕಂಡ ಮೊಕರರಾತಿಗಳು ಮಾಡಿರುತ್ತಾರೆ:—

1. ಮಿಸ್ಟರ್ ಎಚ್. ಲಿಂಗರಾಜ ಅರಸಿನವರು ದರ್ಬಾರ್ ಬಕ್ಷಿಯಾಗಿ ಅವರು ಸದರೀ ಉದ್ಯೋಗದ ಚಾರ್ಜನ್ನು ವಹಿಸಿದ ತಾರೀಖು ಲಾಗಾಯತು ಯಿರತಕ್ಕದ್ದು.
2. ಮಿಸ್ಟರ್ ಎಂ. ಶಾಮರಾಯರು ಅರಮನೆ ಲಾಯಗಳ ಸೂಪರಿಂಟೆಂಡೆಂಟರಾಗಿರತಕ್ಕದ್ದು.

ನಂ. 812.—ಮಿ. ಫೈ. 349.—92, ಸ್ 1896ನೇ ಮಾರ್ಚಿ 20ನೇ ಮರ್ಸ್ಕಂ 10902.— ಜ. ಫೈ. 349.-92ನೇ ನಂಬರ ಇಸ್ತಿಹಾರ್ನಾಮೆಯಿಂದ ತಿದ್ದುಪಡಿಯಾದ ಮೇರೆ 1893ನೇ ಮೇ 15ನೇ ಮರ್ಸ್ಕಂ 18948.—ಜ. ಫೈ. 349.-92ನೇ ನಂಬರ ಇಸ್ತಿಹಾರಿನೊಡನೆ ಘಾಯಿಷ್ ಮಾಡಲ್ಪಟ್ಟ ಮೈಸೂರ ಲೋಕಲ್ ಸರ್ವಿಸ್ ಪರೀಕ್ಷೆಗೆ ಸಂಬಂಧಪಟ್ಟ ರೂಲ್ಸಿನ 3ನೇ ರೂಲಿಗೆ ಈ ಕೆಳಗೆ ಕಂಡ ರೂಲನ್ನು ಬದಲಾಗಿ ಸೇರಿಸತಕ್ಕದ್ದು.

"3. ಪರೀಕ್ಷೆಯು ಇದರ ಬಾಜೂದಲ್ಲಿ ಕಂಡ ಸ್ಥಳಗಳಲ್ಲಿಯೂ ಮತ್ತು ಪ್ರತಿ ವರುಷ ನವಂಬರ ತಿಂಗಳಲ್ಲಿನ ಯಗ್ಜಾಮಿನರುಗಳ ಬೋರ್ಡು ಸೆಕ್ರಿಟೆರಿಯವರಿಂದ ಪ್ರಸಿದ್ಧ ಪಡಿಸಲ್ಪಡಬಹುದಾದ ಫಲಾನೇ ತಾರೀಖು ವ ಘಂಟೆಗಳಲ್ಲಿಯೂ ನಡಿಸಲ್ಪಡುವದು.

ಬೆಂಗಳೂರು.	ಕೋಲಾರ.	ಚಿತ್ರದುರ್ಗ.	ತುಮಕೂರ.
ಮೈಸೂರು.	ಶಿವಮೊಗ್ಗಾ.	ಚಿಕ್ಕಮಗಳೂರು.	ಹಾಸನ.

ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳಿಗೆ ಸೇರುವ ಜಾಸ್ತಿ ಅಂಶಗಳು ಮತ್ತು ತಿದ್ದುಪಾಟುಗಳು.

ನಂ.

ಪುಟ 185, ಅಪ್ಪೆಂಡಿಕ್ಸ್ ನಂಬರ್ 2.

ಈ ಕೆಳಗೆ ಕಂಡದ್ದನ್ನು ಸಬ್ ಜಡ್ಜಿಗಳ ಎಂಬ ಮಾತಿನ ಕೆಳಗೆ ಸೇರಿಸತಕ್ಕದ್ದು:—

ಚೀಫ್ ಕೋರ್ಟಿನ ರಜಿಸ್ಟ್ರಾರು. | 3 ರೂಪಾಯಿಗಳು. | 6 ಆಣೆಗಳು.

ತಾರೀಖು 17ನೇ ಜುಲೈ 1896.

ನಂ. 915.—ಜು. 79, ಹೊಳೇನರಸೀಪುರದ ಮುನ್ಸಿಫ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಮೆಸ್ಟರ್ ಪಿ. ಪಿ. ಶಿವಪ್ರಕಾಶಂಪಿಳ್ಳೆಯವರು, 1859ನೇ ಇಸವಿಯ 13ನೇ ನಂಬರ ಬ್ರೀಚ್ ಆಫ್ ಕಾಂಟ್ರಾಕ್ಟ್ ಆಕ್ಟ್ ಅನುಸರಿಸಿ, ಮೊಕದ್ದಮೆಗಳನ್ನ ದರ್ಯಾಫ್ತೀ ಮಾಡುವ ಬಗ್ಗೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ತಾರೀಖು 18ನೇ ಜುಲೈ 1896.

ನಂ. 1035.—ಜು. 93, ಈ ಕೆಳಗೆ ಕಂಡ ಬಡ್ತಿಗಳು 1896ನೇ ಜುಲೈ ಗುರ್ರೇ ಲಾಗಾಯತು ಹುಕುಂ ಮಾಡಲ್ಪಟ್ಟಿರುತವೆ.

ಮೆಸ್ಟರ್ ಟ. ಜೆ. ವ್ಯಾಂಡರ್ಸ್ಲೋ ಯವರು 1ನೇ ಕ್ಲಾಸ್ ಮುನ್ಸಿಫ್‌ರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ಎರಡನೇ ಕ್ಲಾಸ್ ಮುನ್ಸಿಫ್ ಮೆಸ್ಟರ್ ಬಿ. ಶ್ರೀನಿವಾಸರಾಯರು ಮೆಸ್ಟರ್ ವೆಂಕಟವರದಯ್ಯಂಗಾರ್ರು ಬೇರೇಕೆಲಸದ ಮೇಲಿರುವ ಕಾಲದಲ್ಲಿ 1ನೇ ಕ್ಲಾಸಿನಲ್ಲಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

ಮೆಸ್ಟರ್ ಬಸವಾರಾಧ್ಯಯವರು 2ನೇ ಕ್ಲಾಸ್ ಮುನ್ಸಿಫರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ಮೂರನೇ ಕ್ಲಾಸ್ ಮುನ್ಸಿಫ್ ಮೆಸ್ಟರ್ ಪಿ. ಪಿ. ಶಿವಪ್ರಕಾಶಂಪಿಳ್ಳೆಯವರು ಮೆಸ್ಟರ್ ಎಸ್. ವೆಂಕಟವರದಯ್ಯಂಗಾರು ಬೇರೇ ಕೆಲಸದ ಮೇಲಿರುವ ಕಾಲದಲ್ಲಿ 2ನೇ ಕ್ಲಾಸಿನಲ್ಲಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

ಮೆಸ್ಟರ್ ಎಲ್. ಯಸ್. ಪಿ. ಡಿಕ್ರೂಜ್‌ಯವರು 3ನೇ ಕ್ಲಾಸ್ ಮುನ್ಸಿಫ್‌ರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ತಾರೀಖು 6ನೇ ಜುಲೈ 1896.

ನಂ. 98.—ರೆ. 23, ಸನ್ 1888ನೇ ಇಸವಿಯ IVನೇ ಮೈಸೂರ್ ಲ್ಯಾಂಡ್ ರೆವಿನ್ಯೂ ರೆಗ್ಯುಲೇಷನಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನು ಮಾಗಡೀ ತಾಲ್ಲೂಕಿನಲ್ಲಿರುವ ಕಾಯಂ ಗುತ್ತಾ ಕುರುಬರಹಳ್ಳಿ ಗ್ರಾಮಕ್ಕೆ ಲಗಾವಾಗತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ.

ತಾರೀಖು 9ನೇ ಜುಲೈ 1896.

ನಂ. 385.—ರೆ. ಫೈ. 97.—95, ತುಮಕೂರು ಡಿಸ್ಟ್ರಿಕ್ಟ್ ಯಕ್ಸಾಟ್ರ) ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಪಿ. ವೆಂಕಟರಾಯರಿಗೆ, 1896ನೇ ಏಪ್ರೆಲ್ 25ನೇ ಮುರ್ಕಂ 6199.—200ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸಿನಲ್ಲಿ ಮಂಜೂರ್ಮಾಡಲ್ಪಟ್ಟ ಹದಿನೈದು ದಿನಗಳ ಕ್ಯಾಜುಯಲ್ ರಜಾ 1896ನೇ ಏಪ್ರೆಲ್ 27ನೇ ತಾರೀಖು ಲಾಗಾಯತು ಉಪಯೋಗಿಸಿಕೊಂಡು 1896ನೇ ಮೇ 6ನೇ ತಾರೀಖಿನ ಪೂರ್ವಾಹ್ಣದಲ್ಲಿ ಕೆಲಸಕ್ಕೆ ವಾಪಸ್ ಬಂದಿರುವ ಸಬಬ್ ಉಪಯೋಗಿಸಿಕೊಳ್ಳದ ಉಳಿದ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 10ನೇ ಜುಲೈ 1896.

ನಂ. 396.—ರೆ. ಫೈ. 104.—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ತಾಲ್ಲೂಕು ಅಮಲ್ದಾರ್ ಮಹಮ್ಮದ್ ರಜಾಯವರಿಗೆ, 1896ನೇ ಜುಲೈ 4ನೇ ಮುರ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ಜುಲೈ 1896.

ನಂ. 614.—ಲೋ. ಫಂ. 257.—92, ಸನ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧ ಪಡಿಸುವದೇನಂದರೆ,—ಇದರಡಿ ಕಂಡ ಖಾಲೀ ಕಟ್ಟಡ ಜಾಗಗಳು ವ ಕಟ್ಟಡಗಳು ಸರ್ಕಾರ ಕೆಲಸಕ್ಕೆ ಅಂದರೆ ಅಜ್ಜಂಪುರದಲ್ಲಿ ಬಸವನ ಭಾವಿಗೆ ಹೋಗುವ ಗಲ್ಲಿಯನ್ನ ವಿಸ್ತರಿಸುವ ಬಗ್ಗಾಗಿ ಬೇಕಾಗಿರುತವೆ:—

ಷಹರಿನ ಹೆಸರು—ಅಜ್ಜಂಪುರ ಷಹರ್
ಹಿಡುವಳಿದಾರ್ರ ಹೆಸರು—ಬಿ. ಶಂಕರಪ್ಪ
ಬೇಕಾಗಿರುವ ಜಮೀನಿನ ತಪಶೀಲ್—ಹೆಂಚಿನಮನೆ
ಬೀಜವರಿ —480 ಚದುರಡಿಗಳು

ಚಕ್ಕು ಬಂದಿ:—
ಉತ್ತರಕ್ಕೆ—ಸದರೀ ಮನೆಯ ಉಳಿದಭಾಗ
ಪೂರ್ವಕ್ಕೆ—ನಡಿಯುವ ಗಲ್ಲಿ
ದಕ್ಷಿಣಕ್ಕೆ—ಮ್ಯುನಿಸಿಪಲ್ ಚರಂಡಿ
ಪಶ್ಚಿಮಕ್ಕೆ—ಮ್ಯುನಿಸಿಪಲ್ ರಸ್ತೆ

ಷರಾ:—
ಲಾಂಬಿ—ಉತ್ತರ ದಕ್ಷಿಣ 80 ಅಡಿಗಳು
ರುಂದಿ—ಪೂರ್ವ ಪಶ್ಚಿಮ 6 ಅಡಿಗಳು

ತಾರೀಖು 23ನೇ ಜೂನ್ 1896.

ನಂ. 11086.—ರೆ. ಫಾ. 50.—92, ಇದರಿಂದ ಪ್ರಸಿದ್ಧಪಡಿಸುವದೇನಂದರೆ,–1894ನೇ ಇಸವಿಯ VIIನೇ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಇದರಡಿಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಬೆಂಗಳೂರು ಸಿಟಿಯ ಸದರನ್ ಮಹಾರಾಟ್ಟಾ ರೈಲ್ವೆ ಗೂಡ್ಸ್ ಷೆಡ್ ಬಡಾಯಿಸುವ ಬಗ್ಗ್ಯಾಗಿ ಅವಶ್ಯಕವಾಗಿರುತವೆ.

ನಂಬರು.	ಮಾಲೀಕರು ಯಾ ಅನುಭವದಾರರ ಹೆಸರುಗಳು.	ಬೀಜವರಿ.			ಷರಾ.
		ಚದುರಡಿಗಳು.	ಎಕರೆಗಳು.	ಗುಂಟೆಗಳು.	
1	ಹೇಮಾಚಾರ್ಯ, ಅನುಭವದಾರ ಕವಾಡಿಗರ ಮರಿಯಪ್ಪ ..	11,533½	..	10½	ತೊಲೆಗಳನ್ನು ಕುಯ್ಯುವದಕ್ಕೆ ಉಪಯೋಗಿಸಿರುವ ಗುಣಿ.
					ಮೈದಾನು (ಖಾಲಿಜಾಗ).
2	ಪಾಪುನಾರಾಣಶೆಟ್ಟಿ ..	6,970	..	6½	ಸರಹದ್ದು ಗೋಡೆಯು ಕಲ್ಲಿನಿಂದ ಕಟ್ಟಲ್ಪಟ್ಟಿಧೆ.
3	ಮೇಸ್ತ್ರೀನಾರಾಯಣಪ್ಪನ ಛತ್ರ ..	7,476	..	6¾	ವಠಾರದಲ್ಲಿ 46 ಅಂಕಣಗಳ ಹಂಚಿನಮನೆಯಿಧೆ.
4	ಸೆಟ್ಟೂರು ಕೃಷ್ಣಯ್ಯಂಗಾರ್, ಅನುಭವದಾರು ಮಂಚೇಪಲ್ಲಿ ನಂಜುಂಡಪ್ಪ ಮತ್ತು ಮರಿಯಪ್ಪ ..	9,126¼	..	8¼	ಮೈದಾನು (ಖಾಲಿಜಾಗ).
5	ಮೇಸ್ತ್ರಿ ಮರಿಯಪ್ಪನವರ ಛತ್ರ ..	19,737	..	18¼	ಸರಹದ್ದು ಗೋಡೆಗಾಗಿ ಕಲ್ಲುಚಪ್ಪಡಿಗಳು ಭೂಮಿಯಲ್ಲಿ ಹೂಳಲ್ಪಟ್ಟಿರುತ್ತವೆ ವಠಾರದಲ್ಲಿ 18 ಅಂಕಣಗಳ ಕಲ್ಲು ಮತ್ತು 32 ಅಂಕಣಗಳ ಹಂಚಿನ ಕಟ್ಟಡಗಳು ಯಿರುತವೆ.
6	ಶೇಷಗಿರಿರಾವ್, ಅನುಭವದಾರ ಯಂಗಣ್ಣ ಚಟ್ಟಿ ..	16,514¼	..	15¼	ಮೈದಾನು (ಖಾಲಿಜಾಗ). ಒಂದು ಹುಣಸೇಮರವಿದೆ.
7	ವೆಂಕಟೇಶಯ್ಯ ಮತ್ತು ಇತರರು, ಅನುಭವದಾರ್ ರಾಮಣ್ಣನ ಲಿಂಗಣ್ಣ.	12,240	..	11½	ಮೈದಾನು (ಖಾಲಿಜಾಗ).
8/1	ಯಂಗಣ್ಣ ಚಟ್ಟಿ ..	7,353¾	..	6¾	ಡಿಟ್ಟೋ.
8/2	ನರಹರಿರಾವ್, ಸ್ಕೂಲ್‌ಮಾಸ್ಟರ್ ..	7,353¾	..	6¾	ಡಿಟ್ಟೋ.
9	ಪುಟ್ಟಣ್ಣನ ಛತ್ರ ..	18,471	..	17	ಉತ್ತರ ಮತ್ತು ದಕ್ಷಿಣ ಗೋಡೆಗಳು ಕಲ್ಲುಚಪ್ಪಡಿಗಳಿಂದಲೂ, ಪೂರ್ವಕ್ಕೆ ಯಿಟ್ಟಿಗೆಯಿಂದಲೂ, ಪಶ್ಚಿಮಕ್ಕೆ ಕಲ್ಲಿನಿಂದಲೂ, ಕಟ್ಟಲ್ಪಟ್ಟಿವೆ, ವಠಾರವು 12 ಅಂಕಣ ಹಂಚುಗಳ, 7 ಅಂಕಣ ಕಲ್ಲಿನ ಮತ್ತು 24 ಅಂಕಣ ಮಣ್ಣಿನ ಮಾಳಿಗೆಯ ಕಟ್ಟಡಗಳು ವುಂಟಾಗಿವೆ.
10	ಮುತ್ತಿನ ಕಂಟಸ್ವಾಮಿಮಠ ..	23,061¼	..	21	ಕಲ್ಲಿನ ಸರಹದ್ದುಗೋಡೆಯಿದೆ, ವಠಾರದಲ್ಲಿ 9 ಅಂಕಣ ಕಲ್ಲಿನ ಮತ್ತು 10 ಅಂಕಣ ಹಂಚಿನ ಕಟ್ಟಡಗಳುಯಿವೆ.
11/1	ಚನ್ನಪಟ್ನ ಶ್ರೀಪಾದರಾವ್, ಅನುಭವದಾರ್ ರಾಮಣ್ಣನ ಲಿಂಗಣ್ಣ ..	10,665	..	9¾	ಮೈದಾನು (ಖಾಲಿಜಾಗ).
11/2	ಬಾಲಕೃಷ್ಣರಾವ್, ಅನುಭವದಾರ್ ಯಂಗಣ್ಣ ಚಟ್ಟಿ ..	10,665	..	9¾	ಡಿಟ್ಟೋ.
12	ಗವರ್ನ್‌ಮೆಂಟ್ ..	153,791	3	21	ಯಿದರಲ್ಲಿ ಒಂದು ಹಂಚಿನಮಾಳಿಗೆ ಯಿದೆ.
13	ಡಿಟ್ಟೋ ..	14,298	..	13	ಯಿದರೊಳಗೆ ಕಲ್ಲಿನಿಂದ ಕಟ್ಟಲ್ಪಟ್ಟ ಒಂದು ಛತ್ರವೂ ಮತ್ತು ಒಂದು ಅಕ್ಕಾರಿಯ ಚಾವಡಿಯೂ ಸಹ ಯಿದೆ.
	ಪಬ್ಲಿಕ್‌ರಸ್ತೆ ..	..	1	10	ರಸ್ತೆ.
	ಅಡ್ಡರಸ್ತೆ ..	..	..	20	ಅಡ್ಡರಸ್ತೆ.
	ಜುಮ್ಲಾ....	..	9	12¼	

ತಾರೀಖು 13ನೇ ಜುಲೈ 1896.

ನಂ. 437.—ರೆ. 155, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಬೌರಿಂಗ್‌ಪೇಟೆ ತಾಲ್ಲೂಕು ಅಮಲ್‌ದಾರ್ ಪಿ. ಸೀತಾರಾಮಯ್ಯನವರಿಗೆ, ಮಾಹೆಮಜಕೂರ್ 4ನೇ ಮರ್ಕೂಮಿನಲ್ಲಿ ವೊಂದುದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 440.—ರೆ. 159, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಗೋರೀಬಿದನೂರು ತಾಲ್ಲೂಕು ಅಮಲ್‌ದಾರ್ ಜೆ. ಶ್ರೀನಿವಾಸರಾಯರಿಗೆ, 1896ನೇ ಜುಲೈ 5ನೇ ಮರ್ಕೂಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ಶಿರಸ್ತೇದಾರು, ತಮ್ಮ ಕೆಲಸಗಳೊಂದಿಗೆ ಸದರೀ ಅಮಲ್‌ದಾರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

2142

ತಾರೀಖು 14ನೇ ಜುಲೈ 1896.

ನಂ. 535.—ಫಾ. ಫೈ. 91.—95, ಷಿಕಾರಿಪುರದ ಫಾರೆಸ್ಟ್ ಸಬ್ ಡಿವಿಜನಿನ ಫಾರೆಸ್ಟುಗಳ ಅಸಿಸ್ಟೆಂಟ್ ಕರ್ನಸರವೇಟರ ಮೆಸ್ಟರ್ ಬಿ. ಶ್ರೀನಿವಾಸರಾಯರಿಗೆ, 1896ನೇ ಏಪ್ರೆಲ್ 10ನೇ ಮರ್ಕುಂ 9316.—ಫಾ. ಫೈ. 91.—95ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ವೊಂದು ತಿಂಗಳ ಕಾಹಿಲೇ ರಜಾ ಮತ್ತು 1896ನೇ ಏಪ್ರೆಲ್ 18ನೇ ಮರ್ಕುಂ 9474.—ಫಾ. ಫೈ. 91.—95ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಇನ್ನೂ ಎರಡು ತಿಂಗಳ ವರಿವಿಗೆ ಜಾಸ್ತೀ ಮಾಡಲ್ಪಟ್ಟಿದ್ದದ್ದು ಪುನಹ ಆರು ವಾರಗಳ ವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಫಾರೆಸ್ಟುಗಳ ಯಕ್ಸ್ಟ್ರಾ ಅಸಿಸ್ಟೆಂಟ್ ಕರ್ನಸರವೇಟರ್ ಮೆಸ್ಟರ್ ಮಾರ್ಟೀರೋ ಯವರು ಸದರೀ ಶ್ರೀನಿವಾಸರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಷಿಕಾರಿಪುರದ ಸಬ್ ಡಿವಿಜನಿನ ಚಾರ್ಜಿನಲ್ಲಿ ಇನ್ನೂ ಯಿರತಕ್ಕದ್ದು.

ನಂ. 463.—ರೆ. 174, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ನಂಜನಗೂಡು ತಾಲ್ಲೂಕು ಅಮಲ್‌ದಾರ್ ವೈ. ನರಸಣ್ಣನವರಿಗೆ, 1896ನೇ ಜುಲೈ ಗುರ್ರೇ ತಾರೀಖು ಲಾಗಾಯತು ಎರಡು ತಿಂಗಳೂ ವ ಇಪ್ಪತ್ತೊಂದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ. ಹಾಲಿ ಮಂಜೂರ್ಮಾಡಲ್ಪಟ್ಟ ರಜಾ ಪೂರೈಸಿದ ತಾರೀಖು ಲಾಗಾಯತು ಅವರು ತಮ್ಮ ಕೆಲಸದಿಂದ ಪೆನ್ಷನ್‌ಮೇಲೆ ನಿವೃತ್ತರಾಗುವದಕ್ಕೆ ಪೂರ್ವದ ರಜಾವಾಗಿರುತ್ತೆ.

ನಂ. 466.—ರೆ. 177, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಶ್ರೀರಂಗಪಟ್ಟಣದ ತಾಲ್ಲೂಕು ಅಮಲ್‌ದಾರ್ ಸಿ. ವೆಂಕಟಾಚಲಯ್ಯನವರಿಗೆ, 1896ನೇ ಜುಲೈ ಗುರ್ರೇ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ. ಸದರೀ ರಜಾ ಪೂರೈಸಿದ ತರುವಾಯ ಅವರು ತಮ್ಮ ಕೆಲಸದಿಂದ ಪೆನ್ಷನ್‌ಮೇಲೆ ನಿವೃತ್ತರಾಗತಕ್ಕದ್ದು.

ತಾರೀಖು 15ನೇ ಜುಲೈ 1896.

ನಂ. 512.—ರೆ. ಫೈ. 146.—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಅರಕಲ್‌ಗೂಡು ತಾಲ್ಲೂಕು ಅಮಲ್‌ದಾರ್ ಬಿ. ಶಂಕರಯ್ಯನವರಿಗೆ, 1896ನೇ ಜುಲೈ 15ನೇ ಮರ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ಶಿರಸ್ತೇದಾರು ತಮ್ಮ ಸ್ವಂತ ಕೆಲಸಗಳೊಂದಿಗೆ ಸದರೀ ಅಮಲ್‌ದಾರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂ. 86. ತಾರೀಖು 15ನೇ ಜುಲೈ 1896, ಬೆಂಗಳೂರು.

ಮಂಜರಾಬಾದ್ ತಾಲ್ಲೂಕು ಸಕ್ಲೇಶಪುರದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಶ್ರೀಸಕಲೇಶ್ವರಸ್ವಾಮಿ ದೇವಸ್ಥಾನಕ್ಕೆ ಈ ಕೆಳಗೆ ನಮೂದು ಮಾಡುವವರನ್ನ 2 ವರುಷ ಪರಿಯಂತ್ರ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

1. ಕಾಫಿಪ್ಲ್ಯಾಂಟರ್ ವಳಲಹಳ್ಳಿ ಮಂಜಯ್ಯನವರು.
2. ಪಟೇಲ್ ಮತ್ತು ಜಮೀನ್ದಾರ್ ಸಕಲೇಶಪುರದ ಸುಬ್ಬಾಯರು.
3. ಕಾಫಿಪ್ಲ್ಯಾಂಟರ್ ಗುಂಡಿಕೆರೆ ಶ್ರೀಕಂಠಯ್ಯನವರು.
4. ಡಿಟ್ಟೋ ಬೆಳ್ಳೂರು ಮ್ಯಲಾರಯ್ಯನವರು.

ನಂ. 89. ತಾರೀಖು 16ನೇ ಜುಲೈ 1896, ಬೆಂಗಳೂರು.

ಮಾಗಡಿ ತಾಲ್ಲೂಕು ಕುದೂರಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಪ್ರಸನ್ನ ಗಂಗಾಧರೇಶ್ವರಸ್ವಾಮಿ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ 2 ವರುಷ ಪರಿಯಂತ್ರ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

1. ಕುದೂರಲ್ಲಿರುವ ಶಾನುಭಾಗ ಪುಟ್ಟರಂಗಯ್ಯನವರು.
2. „ ಪಟೇಲ್ ಕೆಂಪೇಗವುಡರು.
3. „ ವೈಶ್ಯ ವೆಂಕಟಾಚಲಶೆಟ್ಟರು.
4. „ ಶಿವಾಚಾರದ ಸಾಲಿಂಕಪ್ಪನವರು.
5. „ ನಾರಶಿದೇವರು.

ಪಿ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಘಾಯಿಷ್ ಆದ್ದು. [ಸಂ. 29.

ಬೆಂಗಳೂರು, ಗುರುವಾರ, ಜುಲೈ ತಾ॥ 23, ಸನ್ 1896.

IIನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ ಡಿಟೋ	„ 170
1	ಮದ್ರಾಸ್ ಓಕ್ಸರವರ ಡಿಟೋ	„ 250
1	ಡಿಟೋ ಡಿಟೋ ಡಿಟೋ	„ 188
1	ಡಿಟೋ ಬೋರ್ಯಾಪ್ರವರ ಡಿಟೋ	„ 85

ಖರೀದೀದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ನೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕೆಟ್ಸ್, ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 10.

ಮೃತಪಟ್ಟ ರೆಸಿಡೆನ್ಸಿ ರಾಮಸ್ವಾಮಯ್ಯಂಗಾರ್ರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಅಮೃತಮಹಲ್ ಆಫಿಸಿನ ಬಿ. ಗೋಪಾಲಯ್ಯಂಗಾರ್ರವರು, ಮೃತಪಟ್ಟ ಸದರೀ ರಾಮಸ್ವಾಮಯ್ಯಂಗಾರ್ರವರಿಗೆ ಸಹೋದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಬಿ. ಗೋಪಾಲಯ್ಯಂಗಾರ್ರವರು, ಬೆಂಗಳೂರು ಮುನವಾರ್ಪೇಟೆ ವಾಸಸ್ಥರಾಗಿ ಮೃತಪಟ್ಟ ರಾಮಸ್ವಾಮಯ್ಯಂಗಾರ್ರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗೋಪಾಲಯ್ಯಂಗಾರ್ರ ಅರ್ಜಿಯನ್ನು ಸನ್ 1896ನೇ ಇಸವಿ ಅಗಸ್ಟ್ ತಿಂಗಳ ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಸ್ವಾಮಯ್ಯಂಗಾರ್ರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಅರ್ಜೀ ನಂಬರ್ 11.

ಮೃತಪಟ್ಟ ಚನ್ನಮ್ಮನವರ ಆಸ್ತೀ ವಿಷಯದಲ್ಲಿ—

ಚಿಕ್ಕಬಳ್ಳಾಪುರದಲ್ಲಿರುವ ಮೇಲ್ಕಂಡ ಘಾತಿ ಚನ್ನಮ್ಮನವರ ಮಗಳು ಶೇಷಮ್ಮ ಮೈನರ್, ಗಾರ್ಡಿಯನ್ ಮತ್ತು ಗಂಡ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫಿಸಿನಲ್ಲಿರುವ ಎಲ್. ಶ್ರೀನಿವಾಸಯ್ಯಂಗಾರು, ಮೃತಪಟ್ಟ ಸದರೀ ಚನ್ನಮ್ಮನವರಿಗೆ ಅಳಿಯನು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಬಳ್ಳಾಪುರ ಸ್ಥಳದ ಎಲ್. ಶ್ರೀನಿವಾಸಯ್ಯಂಗಾರು, ಚಿಕ್ಕಬಳ್ಳಾಪುರ ವಾಸಸ್ಥರಾಗಿ ಮೃತಪಟ್ಟ ಚನ್ನಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಎಲ್. ಶ್ರೀನಿವಾಸಯ್ಯಂಗಾರ್ರ ಅರ್ಜಿಯನ್ನು ಸನ್ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ಜುಲೈ ತಿಂಗಳ 10ನೇ ತಾರೀಖಿನಲ್ಲಿ ಕೋರ್ಟ್ ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 1ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ನೆಲವಂಗಲದ ತಾಲ್ಲೂಕು ಗ್ರಾಮಾಂತ್ರಗಳಲ್ಲಿರುವ ಕುರಂಗದ ಕಲ್ಲು ದುರ್ಮುಖಿಸಂವತ್ಸರದ ಬಾಬನ್ನು, 1896ನೇ ಇಸವಿ ಆಗಸ್ಟು ತಾರೀಖು 10ರಲ್ಲಿ ಹರಾಜ್ ಮಾಡಲ್ಪಡುತ್ತೆ.

(2.) ಈ ಬಾಬತು ಹರಾಜ್ ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರು ಅಥವಾ ಶಿರಸ್ತೇದಾರು ಮಾಡುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಲಾಗಾಯತು ಒಂದು ವರುಷದ ವರಿವಿಗೆ ಇರತಕ್ಕದ್ದು.

(4.) ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್‌ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ರೂಪಾಯಿ 1ಕ್ಕೆ 1 ಆಣೇ ಮೇರೆ ಲೋಕಲ್‌ಸೆಸ್ ಸಹಿತ ಹರಾಜ್ ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನು ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೆ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನು ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

(9.) ಕಲ್ಲುಗಳನ್ನು ಜಮಾಯಿಸುವದಕ್ಕಾಗಿ ಜಮೀನುಗಳನ್ನು ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಶೀಲ್ ಕಂಡು ತಾಲ್ಲೂಕು ಅಮಲ್ದಾರ್ರಿಂದ ವಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ವಿ. ಎನ್. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡಿಯತಕ್ಕ ಕಾಂಗುರಿಗಳನ್ನು ಮಾಡಿಸುವ ಬಗ್ಯಾಗಲಿ ಸಾಮಾನುಗಳನ್ನು ಅಂದರೆ ಮೆಟೀರಿಯಲ್ ಟೂಲ್ಸ್ ಮೊದಲಾದವುಗಳನ್ನು ಸಪ್ಲೈ ಮಾಡತಕ್ಕ ಬಗ್ಯಾಗಲಿ ಪುದ್ಯುಕ್ತರಾದ ಜನರು ಮತ್ತು ಸಪ್ಲೈ ಮಾಡುತಿರುವವರುಗಳ ಹೆಸರುಗಳನ್ನೂ ಅಡ್ರೆಸ್‌ಗಳನ್ನೂ ಮ್ಯುನಿಸಿಪಲ್ ಹೆಡ್ ಆಫೀಸಿನಲ್ಲಿ ಇಡಲ್ಪಟ್ಟು ಇರುವ ಬುಕ್ಕಿನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದಿದೆ.

ಆಫೀಸ್ ಹಗಲು 11ರ ಲಾಗಾಯಿತು 5—30ರ ವರುವಿಗೆ ತೆರದು ಯಿರುವದು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರಸೀಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದುಕೊಳ್ಳುವ ಬಗ್ಯೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರಿವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫಿಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬುಗಳನ್ನು ತೆಗದುಕೊಳ್ಳತಕ್ಕದ್ದು. ಒಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸೀಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮಿಮೋ ತಯಾರ್‍ಮಾಡಿ ಮ್ಯುನಿಸಿಪಲ್ ಆಫೀಸಿನಲ್ಲಿ ಚಿಕಟಾಯಿಸಲ್ಪಡುವದು.

ತಾರೀಖು 18ನೇ ಮೇ 1896.

ತಾರೀಖು　　ನೇ ಜೂನ್ 1896.

ಕಿಲ್ಲೆ ಅಗಳತೆಯಲ್ಲಿ ಕಲ್ಲುಗಳನ್ನು ಖರೀದಿಗೆ ತೆಗದುಕೊಂಡಿರುವ ಅಶೇಷ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ,— 1896ನೇ ಜುಲೈ ಗುರ್‍ರ್ರೀ ಲಾಗಾಯತು ಮೂರು ತಿಂಗಳ ವಳಗಾಗಿ ಕಿಲ್ಲೆ ಅಗಳತೆಯಲ್ಲಿ ವಿಕ್ರಯಿಸಲ್ಪಟ್ಟಿರುವ ಕಲ್ಲುಗಳನ್ನು ಆ ಸ್ಥಳದಿಂದ ಸಾಗಿಸಿಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಮ್ಯುನಿಸಿಪಾಲಿಟಿಗೆ ಶೇರಿಸಿಕೊಳ್ಳಲ್ಪಡುವದು.

1896ನೇ ಇಸವಿ ಸೆಪ್ಟಂಬರ್ 30ನೇ ತಾರೀಖಿನ ತರುವಾಯ ಸಾಗಿಸಲು ಅಪ್ಪಣೆ ಕೊಡುವದಿಲ್ಲ.

ತಾರೀಖು 8ನೇ ಜುಲೈ 1896.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರುಗಳ ಎಲೆಕ್ಷನ್ ಯಾನೆ ಚುನಾವಣೆಯನ್ನು ಬತ್ತಿ ಇಡುವದನ್ನು ಕುರಿತು.
ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—

ಮೈಸೂರ್ ಗವರ್ನಮೆಂಟಿನವರ ಅಪ್ಪಣೆ ಅನುಸರಿಸಿ, ಚಾಲತಿ ಸಾಲಿಗೆ ಸಿಟಿ ಮ್ಯುನಿಸಿಪಾಲಿಟಿಗೆ ಶೇರಿದ ಡಿವಿಜನ್‌ಗಳ ಕಮಿಷನರುಗಳ ಎಲೆಕ್ಷನ್ ಯಾನೆ ಚುನಾವಣೆಯ ತಾರೀಖು ಇತಃಪರ ನಿಷ್ಕರ್ಷೆ ಆಗತಕ್ಕ ಬಗ್ಯೆ ಮುಂದಕ್ಕೆ ಬತ್ತಿ ಇಡಲ್ಪಟ್ಟು ಇದೆ.

ತಾರೀಖು 6ನೇ ಜುಲೈ 1896.

ಸನ್ 1896ನೇ ಇಸವಿ ಜೂನ್ 30ನೇ ಮಕ್ಕಾಮಿನ ಬೋರ್ಡು ಮೀಟಿಂಗ್‌ನಲ್ಲಿ ಪ್ಯಾಸಾದ ರೆಜೆಲ್ಯೂಷನ್ ಅನುಸರಿಸಿ, ಸಾದೆ ಮತ್ತು ಇದ್ದಲು ವ್ಯಾಪಾರದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ:—

ಸಿಟಿ ಮಜ್ಕೂರಿನಲ್ಲಿ ಸಾದೆ ಮತ್ತು ಇದ್ದಲು ವ್ಯಾಪಾರದಾರರು ತಮ್ಮ ಅಂಗಡಿಗಳಲ್ಲಿ ಇದರ ಕೆಳಗೆ ಸೈನ್ ಮಾಡಿ ಇರುವವರಿಂದ ಕೊಡಲ್ಪಡುವ 'ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ಎಂಬ'' ಛಾಪವುಳ್ಳಂಥಾ ಕ್ರಮವಾದ ತೂಕದ ಕಲ್ಲುಗಳನ್ನ ಉಪಯೋಗಿಸಬೇಕು ಹಾಗೆ ಛಾಪೆ ಇಲ್ಲದ ತೂಕದ ಕಲ್ಲುಗಳನ್ನ ಉಪಯೋಗಿಸುವಂಥಾವರನ್ನ ಮೋಸಕೃತ್ಯಕ್ಕೆ ಗುರಿಮಾಡಿ ಲಾ ಅನುಸರಿಸಿ ಕ್ರಮ ನಡಿಸಲ್ಪಡುತ್ತೆ.

2. ಮೇಲೆಕಂಡ ಷರತ್ತುಗಳನ್ನ ಚಾಲತಿ ಇಸವಿ ಜುಲೈ ಗುರ್ರೇ ಲಾಗಾಯತು ಕೊಡಲ್ಪಡುವ ಲೈಸೆನ್ಸುಗಳಲ್ಲಿ ನಮೂದಿಸಲಾಗುತ್ತೆ.

3. ಈ ಸಂಬಂಧವಾದ ವ್ಯಾಪಾರದಾರರೆಲ್ಲರೂ ಒಂದೇ ನಮೂನೆಯಾದ ತೂಕದ ಕಲ್ಲುಗಳನ್ನ ಅಂಗಡಿಗಳಲ್ಲಿ ಉಪಯೋಗಿಸಬೇಕು. ಡಿಟೋ ನಮೂನೆ ಕಲ್ಲುಗಳನ್ನ ಮ್ಯುನಿಸಿಪಲ್ ಕಲೆಕ್ಷನ್ ಆಫಿಸಿನಲ್ಲಿ ನೋಡಬಹುದು. ಲೈಸೆನ್ಸ್ ತೆಗೆದುಕೊಳ್ಳುವ ವೇಳೆ ಡಿಟೋ ಕಲ್ಲುಗಳನ್ನ ಹಾಜರ್ಮಾಡಬೇಕು. ಅವುಗಳನ್ನ ಅಜಮಾಯಿಷಿಯಿಂದ ಛಾರ್ಜು ಇಲ್ಲದೆ ಛಾಪೆ ಹಾಕಿ ಕೊಡಲ್ಪಡುವದು. ಮ್ಯುನಿಸಿಪಾಲಿಟಿಯಿಂದ ಅಂಥಾ ತೂಕದ ಕಲ್ಲುಗಳನ್ನ ಸಪ್ಲೈ ಆಗಬೇಕೆಂಬ ಇಷ್ಟವುಳ್ಳವರಿಗೆ ಖರೀದಿಗೆ ಕೊಡಿಸಲಾಗುವದು.

ಟಿ. ಟಿ. ಲೆನಾರ್ಡ,
ಪ್ರಸಿಡೆಂಟ್.

ಕೋಲಾರ್ ಡಿಸ್ಟ್ರಿಕ್ಟು.

ತಾರೀಖು 17ನೇ ಜುಲೈ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಾಯಂಗುತ್ತಾ ಬಾಕಿದಾರರಾದ ಜಯಾಚಾರಿಂದ ಬರಬೇಕಾದ ಕಾಯಂಗುತ್ತಾ ಬಾಕಿಗಾಗಿ ಇದರಡಿ ನಮೂದಾಗುವ ಘೋರ್ಕಿಟಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಅಮಲ್ದಾರ್ರ ಕಚೇರೀಲಿ 1896ನೇ ಇಸವಿ ಆಗಸ್ಟ್ 29ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895–96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಾಯಂಗುತ್ತಾ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 44–13–3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ, ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂಲ್ಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ

ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಜಾತಿ	ಅಂದಾಜು ಕಿಮ್ಮತ್ತು.			ಜಮೀನು. ನಂಬರ್ ಅಥವಾ ಸರ್ವೆ ನಂಬರು.	ಖುಷ್ಕಿ, ತರಿ, ಬಾಗಾಯತು.	ವಿಸ್ತೀರ್ಣ.		ಕಂದಾಯ.			[illegible]		
1	2	3	4	5	6			7	8	9		10			11		
					ರೂ.	ಆ.	ಪೈ.			ಎಕರೆ.	ಗುಂಟೆ.	ರೂ.	ಆ	ಪೈ.	ರೂ.	ಆ.	ಪೈ.
ಮಾಲೂರು	[illegible]	[illegible] ಗ್ರಾಮ	ಜಯಾಚಾರಿ, ಅರ್ಧ ಗ್ರಾಮ ಅನುಭವದಾರ	..	..	..	..	ಅರ್ಧ ಗ್ರಾಮ	ಖುಷ್ಕೀ ತರೀ ಬಾಗಾಯತು ಪರಂಪೋಕು	630 10 37 71	1 36 16 13	287	7	7	44	13	3
									ಟೋಟಲ್	749	26				ಬಡ್ಡಿ ನೋಟಿಸ ಫೀ ಸಹಿತವಾಗಿ ಕೊಡಬೇಕು.		
									ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ್ದು						195–9–8		

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ತುಮಕೂರ್ ಡಿಸ್ಟ್ರಿಕ್ಟ್.

ತಾರೀಖು 3ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸರ್ 1896—97ನೇ ಸಾಲಿಗೆ ಅಂದರೆ, 1896ನೇ ಇಸವಿ ಜುಲೈ 1ನೇ ತಾರೀಖು ಲಾಗಾಯತು ಸರ್ 1897ನೇ ಇಸವಿ ಜೂನ್ 30ನೇ ತಾರೀಖು ವರಿಗೆ ಈ ಕೆಳಗೆ ಕಂಡ ಶಿರ, ಮದ್ದಗಿರಿ ಮತ್ತು ಕೊರಟಗೆರೆ ಸಬ್ ತಾಲ್ಲೂಕು ಗ್ರಾಮಗಳಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಡ ಸರಕಾರೀ ಬಂಜರು ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲುಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸುಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನು ಅಮಲ್ದಾರ್ರವರ ರೂಬರೂ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಮತ್ತು ಸ್ಥಳಗಳಲ್ಲಿಯೂ ಹರಾಜ್ ಮಾಡಲ್ಪಡುತ್ತೆ. ಹರಾಜು ಮಧ್ಯಾನ್ಹ 11 ಘಂಟೆಗೆ ಷುರೂ ಆಗುತ್ತೆ. ಈ ಹರಾಜು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ವಳಪಟ್ಟಿರುತ್ತೆ.

ತಾಲ್ಲೂಕುಗಳು.	ಪಸಾರೇ ಜಿನಸೀ.		ತಾರೀಖು.	ಸ್ಥಳ.
ಶಿರಾ ತಾಲ್ಲೂಕು.	1 ಕಪಿಲಾರಂಗು 2 ಶೀಗೇಕಾಯಿ 3 ಹುಣಿಶೇಹಣ್ಣು 4 ಅಳಲೇಕಾಯಿ 5 ತಾರೇಕಾಯಿ 6 ಗೇರುಬೀಜ 7 ತುರುಕಹರಳು 8 ದೊಡ್ಡಅಗಸೆ 9 ಗೋಂದು	10 ಶೀತಾಫಲ 11 ಪಟ್ಟೆಚಕ್ಕೆ 12 ಸಾಮೆಚಕ್ಕೆ 13 ಮಡ್ಡಿಚಕ್ಕೆ 14 ಕಾಡುಅರಿಶಿನ 15 ಬ್ಯಾಲದಕಾಯಿ 16 ಹೊಂಗೇಕಾಯಿ 17 ಮರಡಿಪವ್ವು	1896ನೇ ಇಸವಿ ಆಗಸ್ಟ್ 6ನೇ ತಾರೀಖು.	ಶಿರಾ ತಾಲ್ಲೂಕು ಕಚೇರಿಯಲ್ಲಿ.
ಮದ್ದಗಿರಿ ತಾ॥	1 ಕಪಿಲಾರಂಗು 2 ಶೀಗೇಕಾಯಿ 3 ಹುಣಿಶೇಹಣ್ಣು 4 ಅಳಲೇಕಾಯಿ 5 ತಾರೇಕಾಯಿ 6 ಗೇರುಬೀಜ	7 ಗೋಂದು 8 ಶೀತಾಫಲ 9 ಬ್ಯಾಲದಕಾಯಿ 10 ಹೊಂಗೇಕಾಯಿ 11 ಪಟ್ಟೆಚಕ್ಕೆ	1896ನೇ ಇಸವಿ ಆಗಸ್ಟ್ 4ನೇ ತಾರೀಖು.	ಮದ್ದಗಿರಿ ತಾಲ್ಲೂಕು ಕಚೇರಿಯಲ್ಲಿ.

ತಾಲ್ಲೂಕುಗಳು.	ಪಸಾರೇ ಜಿನಸೀ.		ತಾರೀಖು.	ಸ್ಥಳ.
ಕೊರಟಗೆರೆ ಸಬ್ ತಾಲ್ಲೂಕು.	1 ಕಪಿಲಾರಂಗು 2 ಶೀಗೇಕಾಯಿ 3 ಹುಣಿಶೇಹಣ್ಣು 4 ಅಳಲೇಕಾಯಿ 5 ತಾರೇಕಾಯಿ 6 ಗೇರುಬೀಜ 7 ತುರುಕಹರಳು 8 ದೊಡ್ಡಅಗಸೆ	9 ಗೋಂದು 10 ಶೀತಾಫಲ 11 ಸಾಮೆಚಕ್ಕೆ 12 ಕಾಡುಅರಿಶಿನ 13 ಬ್ಯಾಲದಕಾಯಿ 14 ಮಡ್ಡಿಚಕ್ಕೆ 15 ಹೊಂಗೇಕಾಯಿ	1896ನೇ ಇಸವಿ ಆಗಸ್ಟ್ 5ನೇ ತಾರೀಖು.	ಕೊರಟಗೆರೆ ತಾಲ್ಲೂಕು ಕಚೇರಿಯಲ್ಲಿ.

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್ದಾರಿಂದ ಚಡಸವಾಲ್ದಾರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ ವಸೂಲು ಮಾಡಲ್ಪಡುವದು.

3. ಕ್ಲಿಪ್ತ ಕಾಲದ ವಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಠೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದ ಸರೇ ಹರಾಜಿನಲ್ಲಿ ಫಂಟಾಗುವ ಫಾಯಿದೆ ಭಾಗ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಥಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೇ ಜಿನಸುಗಳಲ್ಲಿ ಅಡಗಿರುವದಿಲ್ಲ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸರ್ 1896—97ನೇ ಸಾಲಿಗೆ ಅಂದರೆ, 1896ನೇ ಇಸವಿ ಜುಲೈ 1ನೇ ತಾರೀಖು ಲಾಗಾಯತು ಸರ್ 1897ನೇ ಇಸವಿ ಜೂನ್ 30ನೇ ತಾರೀಖು ವರಿಗೆ ಈ ಕೆಳಗೆ ಕಂಡ ಮದ್ದಗಿರಿ, ಶಿರಾ, ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಇರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಆಯಾ ತಾಲ್ಲೂಕು ಕಚೇರಿಯಲ್ಲಿ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆ. ಹರಾಜು ಬೆಳಿಗ್ಗೆ 11 ಘಂಟೆಗೆ ಷುರೂ ಆಗುತ್ತೆ.

ತಾಲ್ಲೂಕು.		ತಾರೀಖು.	ಸ್ಥಳ.
ಮದ್ದಗಿರಿ	..	1896ನೇ ಇಸವಿ ಆಗಸ್ಟ್ 3ನೇ ತಾರೀಖು	ಮದ್ದಗಿರಿ ತಾಲ್ಲೂಕು ಕಚೇರಿಯಲ್ಲಿ
ಶಿರಾ	..	1896ನೇ ಇಸವಿ ಆಗಸ್ಟ್ 5ನೇ ತಾರೀಖು	ಶಿರಾ ತಾಲ್ಲೂಕು ಕಚೇರಿಯಲ್ಲಿ
ಗುಬ್ಬಿ	..	1896ನೇ ಇಸವಿ ಆಗಸ್ಟ್ 10ನೇ ತಾರೀಖು	ಗುಬ್ಬೀ ತಾಲ್ಲೂಕು ಕಚೇರಿಯಲ್ಲಿ.

2. ಅಮಲ್ದಾರ್ರು ಅಥವಾ ಶಿರಸ್ತೇದಾರ್ರು ಹರಾಜ್ ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರಪತ್ರಿಕೆಯನ್ನ ಹಾಜರು ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಸೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರು ಮಾಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಚಡಸವಾಲ್‌ದಾರರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

6. ಇಜಾರೆದಾರರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರರು ವಿನಹ ಇತರರಿಗೆ ಮಾರಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರರ ಹಕ್ಕಿಗೆ ಆತಂಕಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್‌ದಾರರಿಂದ ಮಾಫೀ ಲೈಸೆನ್ಸನ್ನು ಪಡಿಯದೆ ಕಲ್ಲುಗಳನ್ನು ಇಜಾರೆದಾರರು ಸಾಗಿಸಕೂಡದು.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕಿದಾರರಾದ ಈ ಕೆಳಗೆ ನಮೂದಾಗುವ ಜೋಡೀದಾರರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಹಿಡುವಳಿ ಹಕ್ಕು ತಪ್ಪಿಸಲ್ಪಟ್ಟ ಸ್ಥಿರಸ್ವತ್ತು ತುಮಕೂರ್ ಡಿಸ್ಟ್ರಿಕ್ಟು ತಿಪಟೂರು ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಆಗಸ್ಟ್ 8ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂಥು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಡಿಟೋ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ * ಬಾಕಿ ಕಂದಾಯದ ಬಗ್ಯೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 725–11–10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫೀವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜ್‌ದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

250

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ವೃತ್ತಿ.	ಅಂದಾಜು ಬೀಜವರಿ.			ಅಂದಾಜು ಹುಟ್ಟುವಳಿ ಯಾ ಪೇರೀಜು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಕ್ವಿಟರೆಂಟ್.			ಯಾವಬಾಕಿ ಮೊಬಲಗಿಗೋಸ್ಕರ ವೃತ್ತಿಗಳು ಹರಾಜು ಮಾಡಲ್ಪಡುವದೋ ಅಂಥಾ ಸರ್ಕಾರದ ಬಾಕಿ.			ಹರಾಜು ತಾ॥ ವಗೈರೆ.
						ಖಂಡಿ.	ಕು.	ಪ.	ರೂ.ಆ.ಪೈ.	ರೂ.	ಆ.	ಪೈ.	ರೂ.	ಆ.	ಪೈ.	
ತುಮಕೂರು.	ತಿಪಟೂರು.	ದಬ್ಬೆಗಟ್ಟ.	ಬೆನಕಿನಕೆರೆ ಜೋಡೀ ಗ್ರಾಮ.	1 ಕ್ರಿಷ್ಣಭಟ್ಟ	8॥÷	229	16	4		725	11	10	725	11	10	1896ನೇ ಇಸವಿ ಅಗಸ್ಟು 8ನೇ ತಾರೀಖಿನಲ್ಲಿ ತಿಪಟೂರು ತಾಲ್ಲೂಕು ಅಮಲ್ದಾರ್ರ ರೂಬರೂ.
				2 ವೆಂಕಟಗಿರಯ್ಯ	೨											
				3 ಪುಟ್ಟಭಟ್ಟ	।।।÷								ಮನ್ಮಥ ಸಾಲಿನ ಕ್ವಿಟರೆಂಟ್ ಬಾಕಿ ಗೋಸ್ಕರ			
				4 ಕಂ॥ ನರಸಿಂಭಟ್ಟ	।।।=											
				5 ತಮ್ಮಣ್ಣಭಟ್ಟನ ನಂಜುಂಡಭಟ್ಟ	।।।÷											
				6 ಹಿರಿಯಣ್ಣಭಟ್ಟನ ಹೆಂಡತಿ ಲಕ್ಷ್ಮಮ್ಮ	।।।÷											
				7 ದಾನಪ್ಪ	೨											
				8 ಸುಬ್ಬರಾಯಶಾಸ್ತ್ರಿ	೨।											
				9 ಕೊಮಾರಯ್ಯ	೭।											
				10 ದೊಡ್ಡ ನರಸಿಂಹಭಟ್ಟನ ಮಗ ನರಸಿಂಹಭಟ್ಟ	೧।÷											
				11 ವೆಂಕಟನಾರಣಪ್ಪ	೧÷											
				12 ರಾಮಾಭಟ್ಟರು	೧॥=											
				13 ಗೋಪಾಲಭಟ್ರು ಚೆಲುವಾಭಟ್ಟ	೧॥											
				14 ಶ್ರೀಕಂಠಯ್ಯ	೧॥											
				15 ಸುಬ್ಬಾಭಟ್ಟ	೩॥											
				16 ಪುಟ್ಟವ್ವ	।।।=											
				17 ಕಾಶೀಪತಿಭಟ್ಟನ ಸುಬ್ಬಾಭಟ್ಟ	।≡											
				18 ಹನುಮಂತಯ್ಯನ ಹೆಂಡತಿ ಗವುರಮ್ಮ	೧॥											
				19 ಲಕ್ಷ್ಮಣ ಜೋಯಿಸ	೧											
				20 ಕುಣಿಗಲು ನಾಗಪ್ಪ	।=											
				21 ಹೊನ್ನಪ್ಪ	।											
				22 ದ್ಯಾವಯ್ಯ	।।।=											
				23 ಕೃಷ್ಣಭಟ್ಟನ ಹೆಂಡತಿ ಸುಬ್ಬಮ್ಮ	॥											

ಯಂ. ನಾರಾಯಣರಾವ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 6ನೇ ಜುಲೈ 1896.

1896ನೇ ಇಸವಿ ಮಾರ್ಚಿ 15ರ ಲಾಗಾಯತು ಗ್ರಾಮದಿಂದ ಗೈರ್ ಹಾಜರಾಗಿರುವ ಮಾಳಿಗೆ ಎಂಬುವನ ಚಹರೇ ಪಟ್ಟಿ,—

ಹೆಸರು—ಮಾಳಿಗೆ,

ತಂದೆ ಹೆಸರು—ಕಾಳಮನ್ನೇ ಗವುಡ

ವಯಸ್ಸು—40 ಮತ್ತು 50 ವರುಷಕ್ಕೆ ಮಧ್ಯೆ

ಜಾತಿ—ಹಾಲುಕುರುಬ

ವಾಸಸ್ಥಳ—ಯಡತೊರೇ ತಾಲ್ಲೂಕು ಹರದನಹಳ್ಳಿ ಹೋಬಳಿ ಚಿಕ್ಕನಾಯ್ಕನಹಳ್ಳಿ ಕೊಪ್ಪಲ್

ಗುರ್ತು ಕಂಡು ಹಿಡಿಯುವ ಭಾವಗಳ ತಪಶೀಲ್ ಮೀಶೆಬಿಟ್ಟು ಇದ್ದಾನೆ, ತಲೆ ಮೇಲಿನ ಕೂದಲು ಸ್ವಲ್ಪ ಬೆಳ್ಳಗೆ ಇದೆ. ಇವನನ್ನು ಕೊನೇಲಿ ಕಂಡಾಗ ಇವನು ಬೂದಿಬಣ್ಣದ ಕಂಬಳಿಯನ್ನು ಸಾಧಾರಣ ಪಂಚೆಯನ್ನು ಹೊದ್ದುಕೊಂಡು ಇದ್ದ. ತಲೆಗೆ ಬಿಳಿ ಬಟ್ಟೆ ಸುತ್ತಿಕೊಂಡು ಇದ್ದ.

ಇವನು ಇರುವ ಸ್ಥಳ ಮಾಲುಮಾದ್ದರ ಇನಫರ್ಮೇಷನ್ನಯಾನೆ ವರ್ತಮಾನಗಳನ್ನ ಯಡತೊರೇ ತಾಲ್ಲೂಕು ಪೋಲೀಸ್ ಇನಸ್ಪೆಕ್ಟರವರಿಗಾಗಲಿ ಅಥವಾ ಅಮಲ್ದಾರ್ರವರಿಗಾಗಲಿ ಕೊಡಬೇಕಾಗಿ ಕೋರಿ ಇದೆ.

ನಂಜನಗೂಡು ತಾಲ್ಲೂಕು 1895—96ನೇ ಇಸವಿ 8—59ನೇ ನಂಬರು ಹೊಸಕೋಟಿ ಚನ್ನಬಸವನ ಖೂನೀ ಮೊಕದ್ದಮಾಕ್ಕೆ ಸಂಬಂಧಪಟ್ಟ ನಂಜನಗೂಡು ತಾಲ್ಲೂಕು ಪೊಲೀಸಿನವರಿಂದ ಅಪೇಕ್ಷಿತನಾಗಿ ಹಾಲಿ ತಪ್ಪಿಸಿಕೊಂಡು ಇರುವ ಬಲಗೈ ರಂಗ ಯಂಬುವನ ಚಹರೇ ಪಟ್ಟಿ,—

ಹೆಸರು	..	ರಂಗ
ತಂದೆ ಹೆಸರು	..	ದೊಡ್ಡ ರಂಗ
ಜಾತಿ	..	ಬಲಗೈ
ವಯಸ್ಸು	..	ಸುಮಾರು 36 ವರುಷ
ಎತ್ತರ	..	ಅಡಿ 5—5½ ಅಥವಾ 6 ಅಂಗುಲ
ಕಸಬು	..	ಆರಂಭ ಮತ್ತು ಜೀತಗಾರ
ಬಣ್ಣ	..	ಕಪ್ಪು

ಗುರ್ತು ಕಂಡು ಹಿಡಿಯುವದಕ್ಕೆ ಬೇಕಾದ ಭಾವಗಳ ತಪಶೀಲು.

ನೀಳ ಮುಖ ಎಡದತೋಳು ಒಳಭಾಗದಲ್ಲಿ 2 ಅಂಗುಲ ಉದ್ದಕ್ಕೆ ½ ಅಂಗುಲ ಅಗಲಕ್ಕೆ ಕಾಮ್ಗಾಲೆಗೋಸ್ಕರ ಬರೆ ಹಾಕಿದ ಗುರ್ತುಯಿದೆ. ಮೀಶೆ ಬಿಟ್ಟಿದ್ದ ಇಧಾನೆ ಇವನನ್ನು ಕೊನೇಲಿ ಕಂಡ ವ್ಯಾಳೆ ಇವನು ಹೊಲೆ ಮಗ್ಗದ ಪಂಚೆ ಉಟ್ಟುಕೊಂಡು ಇದ್ದನು. ಮೇಲ್ಗಡೆ ಬಿಳೀದಟ್ಟಿ ಸುತ್ತಿಕೊಂಡು ಇದ್ದ. ಕರೀ ಕಂಬಳಿ ಹೊದ್ದುಕೊಂಡು ಇದ್ದ.

ಈ ಮನುಷ್ಯನು ಇರುವ ಜಾಗಾ ಮುಂತಾದ್ದರ ಯಿಥಾರ್ಥವೋರ್ತೆಯಾನೆ ವರ್ತಮಾನವನ್ನು ನಂಜನಗೂಡು ತಾಲ್ಲೂಕು ಪೊಲೀಸ್ ಇನ್ಸ್‌ಪೆಕ್ಟರಿಗಾಗಲಿ ಅಥವಾ ಅಮಲ್ದಾರ್‌ರವರಿಗಾಗಲಿ ಕೊಡಬೇಕಾಗಿ ಕೋರಿಯಿದೆ.

ಸಿ. ಹಾರ್ಡಿ,
ಮೈಸೂರ್ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು.

ತಾರೀಖು 25ನೇ ಜೂನ್ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರನಾದ ಕಾಯಂಗುತ್ತಾ ಭಾರತೀಪುರ ಗ್ರಾಮದ ವೆಂಕಟಗಿರಿಗೋಸಾಯಿರಿಂದ ಬರಬೇಕಾದ ಜಮೀನು ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರ್ ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಆಗಸ್ಟ್ 10ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 308—3—3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತಾರೆಯೋ ಎಂಬ ಅಂಶವನ್ನು ತಿಳಿಸಬೇಕಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗ್ಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷ್ನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷ್ನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷ್ನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಅಂದಾಜಾ ಕಿಮ್ಮತು.	ಸ್ವತ್ತಿನ ತಪ್ಶೀಲ್. ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.		ಜಮೀನು. ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.		
1	2	3	4	5	6	7	8	9		10			11		
					ರೂ. ಆ. ಪೈ.			ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.
ಕೃಷ್ಣರಾಜಪೇಟೆ.	ಸಂತೆಬಾಚಹಳ್ಳಿ.	ಕಾಯಂಗುತ್ತಾ ಭಾರತೀಪುರ.	ವೆಂಕಟಗಿರಿಗೋಸಾಯಿ	..	..	ಮೈನರ್ ಇನಾಂ ಹೊರಪಡಿಸಿ ಪೂರಾ ಗ್ರಾಮವನ್ನೂ.	ಖುಷ್ಕೀ	486	20	790	4	0	308	3	3
							ಪರಂಪೋಕು	289	13						
							ತರೀ	77	28				ಹರಾಜು ತಾರೀಖು ವರಿಗೆ ಬಡ್ಡಿ ಬರಬೇಕು.		
							ಬಾಗಾಯತು	12	32						
								866	13						

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ತಾರೀಖು 30ನೇ ಜೂನ್ 1896ನೇ ಇಸವಿ.

ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಅಡಗಿಯಿರತಕ್ಕ ಈ ಕೆಳಗೆ ನಮೂದಾಗುವ ತಾಲ್ಲೂಕುಗಳಲ್ಲಿ 1896ನೇ ಜುಲೈ ಲಾಗಾಯತು 1897ನೇ ಜೂನ್ ಆಖೈರವರಿಗೆ ಕುರಂಗದ ಕಲ್ಲುಗಳನ್ನು ಜಮಾಯಿಸುವ ಹಕ್ಕುದಾರಿಯನ್ನು ತಾಲ್ಲೂಕುವಾರಾಗಿ ಆಯಾ ತಾಲ್ಲೂಕುಗಳ ಯದುರಿಗೆ ಬರೆದಿರುವ ತಾರೀಖು ಮತ್ತು ಸ್ಥಳಗಳಲ್ಲಿ ಮಧ್ಯಾಹ್ನ 12 ಘಂಟೆ ಲಾಗಾಯತು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆಂತ ಯಿದರಿಂದ ಸಮಸ್ತ ಜನಗಳಿಗೂ ತಿಳಿಸಿರುತ್ತದೆ.

ತಾಲ್ಲೂಕು.	ಹರಾಜ್ ತಾರೀಖು ಮತ್ತು ಸ್ಥಳ.	ಹರಾಜ್ ಮಾಡಿಸತಕ್ಕ ಆಫೀಸರಹೆಸರು.
1 ಮೈಸೂರು	1896ನೇ ಇಸವಿ ಜುಲೈ 16ರಲ್ಲು ಮೈಸೂರ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ	ಡೆಪ್ಯುಟಿ ಕಮಿಷನರ್ ಅಥವಾ ಅಸಿಸ್ಟೆಂಟ್ ಕಮಿಷನರವರು.
2 ಯಡತೊರೆ		
3 ಹುಣಸೂರು		
4 ಹೆಗ್ಗಡದೇವನಕೋಟೆ		
5 ಗುಂಡ್ಲುಪೇಟೆ		
6 ಚಾಮರಾಜನಗರ		
7 ನಂಜನಗೂಡು		
8 ತಿರಮಕೂಡ್ಲು ನರಸೀಪುರ		

9 ಶ್ರೀರಂಗಪಟ್ಣ 10 ಕೃಷ್ಣರಾಜಪೇಟೆ 11 ನಾಗಮಂಗಲ 12 ಮಂಡ್ಯ 13 ಮಳವಳ್ಳಿ	1896ನೇ ಇಸವಿ ಜುಲೈ 18ರಲ್ಲು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸಿನಲ್ಲಿ	ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.

(2.) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಡಿಪಾಜಿಟ್ ಹಾಜರ್‍ಮಾಡಬೇಕು. ಬಾಕಿ ಮೊಬಲಗನ್ನ ರೂಪಾಯಿ 1ಕ್ಕೆ ಪೊಂದಾಣೆ ಮೇರೆ ಲೋಕಲ್ ಸೆಸ್ ಸಹಿತ ಹರಾಜು ಕಾಯಂಆದ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳಲ್ಲಿ ಪಾವತಿಮಾಡಬೇಕು. ಹಾಗೆ ಬಾಕಿ ಮೊಬಲಗನ್ನ ಪಾವತಿ ಮಾಡುವದಕ್ಕೆ ಚಡಸವಾಲ್‌ದಾರನು ತಪ್ಪಿದಲ್ಲಿ ಅವನಿಂದ ಹಾಜರ್‍ಮಾಡಲ್ಪಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು, ಡಿಪಾಜಿಟ್ ಹಾಜರ್‍ಮಾಡುವದಕ್ಕಾಗಲಿ ಅಥವಾ ಬಾಕಿ ಹಣವನ್ನ ಪಾವತಿಮಾಡುವದಕ್ಕಾಗಲಿ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

(3.) ಇತರ ಷರತಾಗಳು ಯಾವವಂದರೆ—

(a) ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಪರಂತು ತಮ್ಮ ಹಿಡುವಳೀ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿ ಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(b) ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

c) ಹಿಡುವಳಿಯಲ್ಲಿ ಯಿಲ್ಲದ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಕ್ಷ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗೆದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(d) ಕಲ್ಲಗಳನ್ನು ಜಮಾಯಿಸುವದಕ್ಕೋಸ್ಕರ ಜಮೀನುಗಳನ್ನ ಇಜಾರೆದಾರನು ಅಗೆಯಕೂಡದು. ಒಂದು ವೇಳೆ ಅಗೆದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(e) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲು ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಸೀಲ್ ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಒಂದು ಮಾಫೀ ಲೈಸೆನ್ಸ್ ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸ್.

ತಾರೀಖು 1ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಂಡ್ಯ ತಾಲ್ಲೂಕು ಕುದರಗುಂಡಿ ಹೋಬಳಿ ಸರ್ವಮಾನ್ಯ ಗನಡಗೆರೇ ಗ್ರಾಮದ ಕೆರೆಗೆ ನೀರು ಬರತಕ್ಕ ನೀರು ಹರಿಯುವ ಹಳ್ಳದಲ್ಲಿ, ಒಂದು ಕುಡಿಕೆಯಲ್ಲಿ ದೊರಕಿದ (17—4—0) ಅಂದಾಜಾವುಳ್ಳ ಚಿನ್ನದ ಬುಗಡಿ ಅದದು 4 ಡಿಟೋ ನಾಗರ ಕಡಕು 2 ಕೊಂಡ್ಲು 1 ಕಂಟೀರಾಯಿ ಹಣ 7 ಗೂಟಿಹಣ 4 ಸಹ ದೊರಕಿದ್ದಾಗಿ ಹಾಜರಾಗಿರುವದು ಅಮಾನತ್ತು ಯಿಥೆ. ಈ ನಿಕ್ಷೇಪಕ್ಕಾಗಲಿ ಅಥವಾ ಇದರ ವಂದು ಭಾಗಕ್ಕಾಗಲಿ ಹಕ್ಕುದಾರರಾಗಿ ಇರತಕ್ಕವರು ಖುದ್ದಾಗಿಯೇ ಆಗಲಿ ಅಥವಾ ವಕೀಲರ ಮುಖಾಂತ್ರವಾಗಿಯೇ ಆಗಲಿ 1896ನೇ ಇಸವಿ ಡಿಸೆಂಬರ್ ತಾರೀಖು 18ನೇ ಮಧ್ಯಾನ್ನ ದಿವ 12 ಘಂಟೆಗೆ ಫ್ರೆಂಚರಾಕ್ಸ್ ಸಬ್ ಡಿವಿಜನ್ ಆಫೀಸ್ ರೂಬರೂಬ್ ಹಾಜರಾಗಿ ಅವುಗಳಲ್ಲಿ ತಮಗಿರುವ ಹಕ್ಕನ್ನ ಸ್ಥಿರಪಡಿಸಿ ಕೊಪಬೇಕು.

ಪಿ. ಪಂಚನಾಥರಾವ್,
ಸಬ್ ಡಿವಿಜನ್ ಆಫೀಸರ್.

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಿಲ್ಲ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು.	
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮರ್ಕುಂ 24205—6—ಜಿ. 6200ನೇ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಹೋಬ್ಳಿ ವಾರು ಯಾವತ್ತೂ ರಿಯಾಯತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸ್‌ಗಳು:—

ಮೊದಲನೇ ದಫಾ ಪ್ರಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟ್ಟೋ	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸ್‌ಗಳಿಗೆ:—

ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸ್‌ಗಳಿಗೆ:—

ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„ ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ ..	0	8
ಎರಡನೇ ದಫಾ	ಡಿಟ್ಟೋ	ಡಿಟ್ಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		.. ..	0	4

ಷರಾ.—ಚಂದಾ ವಗೈರೇ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೆ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಲ್ಪಡುತ್ತೆಂಬ ಖಾತರ್ ಯಿಲ್ಲ.

ಸಿ. ವಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪೈಲರ್.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಸ್ ಆದ್ದು. [ನಂ. 30.

ಬೆಂಗಳೂರು, ಗುರುವಾರ, ಜುಲೈ ತಾ॥ 30, ಸನ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಇಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಯಜ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜಿಯರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿಯರು, ಪೋಲೀಸ್ ಸೂಪರ್‌ಇಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.— ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 30ನೇ ಜೂನ್ 1896.

ಸಂ. 14005.—ಲೋ. ಫಂ. 257—92, ಸನ್ 1894ನೇ ಇಸವಿಯ ನಂ. VIIನೇ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ, ನಂಜನಗೂಡು ಷಹರಿನಲ್ಲಿ ಗೌರೀಘಟ್ಟದ ರಸ್ತೆಯನ್ನ ಅಗಲಪಡಿಸುವ ಬಗ್ಯಾಗಿ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟ್—ಮೈಸೂರು.
ತಾಲ್ಲೂಕು—ನಂಜನಗೂಡು
ಹೋಬಳಿ—ಕಸಬಾ.
ಗ್ರಾಮ—ನಂಜನಗೂಡು.
ಹಿಡುವಳಿದಾರ್ರ ಹೆಸರು—ಲಕ್ಷ್ಮಮ್ಮ, ತಿರುಮಲಮ್ಮ.
ವಿವರ ಮತ್ತು ನಂಬರು—ಒಂದು ಜಗಲಿ ಮತ್ತು ಚಪ್ಪರ ಸಹಿತವಾದ ಖಾಲೀ ಜಾಗ.
ವಿಸ್ತೀರ್ಣ—20 ಸಲಿಗಜಗಳು.
ಜೋಡಿ—ಇಲ್ಲ.

ಚೆಕ್ಕುಬಂದಿ:—

ಪೂರ್ವಕ್ಕೆ—ಅಪ್ಪಾಜಿಶೆಟ್ಟರ ಮತ್ತು ರಾಮಶೆಟ್ಟರ ಮನೆ.
ಪಶ್ಚಿಮಕ್ಕೆ—ಗೌರೀಘಟ್ಟದ ರಸ್ತೆ.
ಉತ್ತರಕ್ಕೆ—ಸುಬ್ಬರಾಯಶೆಟ್ಟರ ಮನೆಗೆ ಹೋಗುವಗಲ್ಲಿ (ಪೂರ್ವದಲ್ಲಿ ಅಂಕನಾಥಶೆಟ್ಟರ ಮನೆ)
ದಕ್ಷಿಣಕ್ಕೆ—ದೊಡ್ಡರಸ್ತೆ.

256

ತಾರೀಖು 21ನೇ ಜುಲೈ 1896.

ನಂ 1102.—ಲೋ. ಫಂ. 114—92, ಸನ್ 1894ನೇ ಇಸವಿಯ VIIನೇ ನಂ. ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧ ಪಡಿಸುವದೇನೆಂದರೆ,—ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮನೆಗಳೂ ಮತ್ತು ಹಿತ್ತಲುಗಳೂ ಸರ್ಕಾರ ಕೆಲಸಕ್ಕೆ ಅಂದರೆ, 1894ನೇ ಜೂನ್ 14ನೇ ಮರ್ಕುಂ 22998.—ಲೋ. ಫಂ. 257–92ನೇ ನಂಬರ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಅನುಸರಿಸಿ ತೆಗದುಕೊಳ್ಳಲ್ಪಟ್ಟ ಸ್ಥಳಕ್ಕೆ ಷಹರ ಮಧ್ಯದಲ್ಲಿರುವ ಈ ಕೆಳಗೆ ಕಂಡ ಮೂರು ಹೊಲಗೇರಿಗಳನ್ನ ಬದಲಾಯಿಸಿ ಚಿಕ್ಕಮಗಳೂರು ಷಹರಿನ ಆರೋಗ್ಯಾಭಿವೃದ್ಧಿಗಾಗಿ ಬೇಕಾಗಿರುತವೆ:—

ಡಿಸ್ಟ್ರಿಕ್ಟ್.	ತಾಲ್ಲೂಕು.	ಬೀದಿಯ ಹೆಸರು.	ಹಿಡುವಳಿದಾರ್ರ ಹೆಸರುಗಳು.	ಮನೆಗಳ ಮತ್ತು ಹಿತ್ತಲುಗಳ ತಪಶೀಲ್.	ತಿದ್ದುಪಡಿಯಾದ ಮ್ಯುನಿಸಿಪಾಲಿಟಿ ನಂಬರು.	ತೆಗದುಕೊಳ್ಳಬೇಕಾದ ವಿಸ್ತೀರ್ಣ.			ಚಕ್ಕುಬಂದಿ.				ವ್ಯವಸ್ಥೆಯಾದ ಲಾಗವಡು ಮೊಬಲಗು.	ಷರಾ.
						ಮನೆಗಳು ಲಾಂ. + ರುಂ. ಗಜಗಳು.	ಹಿತ್ತಲುಗಳು. ಲಾಂ. + ರುಂ. ಗಜಗಳು.	ಜುಮ್ಲಾ.	ಉತ್ತರ.	ಪೂರ್ವ.	ಪಶ್ಚಿಮ.	ದಕ್ಷಿಣ.	ರೂ.	
ಕಡೂರು.	ಚಿಕ್ಕಮಗಳೂರು.	ನಂ. 1, ಜೈಲ್ ರಸ್ತೆಯಲ್ಲಿರುವ ಸಂತೆ ಹೊಲಗೇರಿ.	ಝಾಡಮಾಲಿ ಚೆಲುವ	ಹುಲ್ಲಿನ ಮನೆ	617	40	56	96	ಬಾರ್ ಲೈನಿಗೆ ಹೋಗುವ ರಸ್ತೆ.	ಜೈಲ್‌ರಸ್ತೆ.	ಮ್ಯುನಿಸಿಪಲ್ ಗಡಿ.	ಮ್ಯುನಿಸಿಪಲ್‌ಗಡಿ.	40	
			ಡಿಟ್ಟೋ ಮಧರೆ	ಡಿಟ್ಟೋ	618	56	35	91					45	
			ದೊಡ್ಡ ಈರ	ಡಿಟ್ಟೋ	619	15	60	75					25	
			ಬಲಗೈ ದಾಸಿ	ಹೆಂಚಿನಮನೆ	620	40	60	100					145	
			ಕೆಂಗೀ ತಿಮ್ಮ	ಡಿಟ್ಟೋ	621	55	60	95					135	
			ತಿಮ್ಮ ಬಿನ್ ಹನುಮ	ಡಿಟ್ಟೋ	622	35	60	95					135	
			ದೊಡ್ಡ, ಎಂ. ಕಾನನ ಹೆಂಡತಿ	ಡಿಟ್ಟೋ	623	35	60	95					135	
			ಸಂತೇಹಳ್ಳಿ ರಂಗ	ಡಿಟ್ಟೋ	624	35	60	95					135	
			ದೊಡ್ಡ	ಡಿಟ್ಟೋ	625	63	70	133					229½	
			ಮರಿಭೈರ	ಡಿಟ್ಟೋ	626	64	88	152					232	
			ಹೊಸಬ	ಹುಲ್ಲಿನ ಮನೆ	627	30	84	114					41	
			ರಂಗ ಬಿನ್ ಸಂತೇಹಳ್ಳಿ ಗುಬ್ಬಿ	ಡಿಟ್ಟೋ	628	36	78	114					43½	
			ತಪಸ	ಡಿಟ್ಟೋ	629	30	84	114					41	
			ಮರಿಗುಡ್ಡಿ	ಡಿಟ್ಟೋ	630	70	63	133					250	
			ಜುಮ್ಲಾ	..	..	..	..	..	..	..	..	..	1,632	
ಕಡೂರು.	ಚಿಕ್ಕಮಗಳೂರು.	ನಂ. 2, ಬಸವನಹಳ್ಳಿ ಹೊಲಗೇರಿ.	ಹುಲ್ಲಿ ಚಿಕ್ಕ	ಹುಲ್ಲಿನ ಮನೆ	1685	28—9	66	103	ಬಸವನಹಳ್ಳಿಗೆಹೋಗುವ ರಸ್ತೆ.	ಆಕ್ಟ್ರಾಯಿಕಟ್ಟೆ ಮತ್ತು ಬಸವನಹಳ್ಳಿಕೆರೆ.	ಕಡೂರು ಮಂಗಳೂರು ರಸ್ತೆಗೆ ಹೋಗುವ ದಾರಿಯಾ ಅಗಸರ ಬೀದಿ.	ಕಡೂರು, ಮಂಗಳೂರು ರಸ್ತೆ.	51	
			ಒಲಗೈ ತಿಮ್ಮ	ಡಿಟ್ಟೋ	1686	18	18	36					37	
			ಹಾಸನದ ಕಾಳ	ಬಂಜರ್ ಜಮೀನ್	1687	..	42	42					10	
			ದೊಡ್ಡಬಿನ್ ಬುಳ್ಳಿ	ಹುಲ್ಲಿನ ಮನೆ	1688	24	42	66					26½	
			ಬೂದಿ ಚಿಕ್ಕ	ಡಿಟ್ಟೋ	1689	18	60	78					27	
			ಬಲಗೈ ಮಂದೊಡ್ಡ	ಡಿಟ್ಟೋ	1690	28	28	56					25	
			ಡಿಟ್ಟೋ	ಡಿಟ್ಟೋ	..	28	204	232					79½	

ಕಡೂರು.	ಚಿಕ್ಕಮಗಳೂರು.	ನಂ. 2, ಏಗಸನಹಳ್ಳಿ ಜೋಲಗೇರಿ.	ಬಲಗ್ಯೆ ಮರಿದೊಡ್ಡ ..	ಬಂಜರ್ ಜಮೀನು	..	..	42	42	ಏಗಸನಹಳ್ಳಿಗೆ ಹೋಗುವ ರಸ್ತೆ	ಅಕ್ಕ್ರಾಯಿ ಕಟ್ಟೆ ನಡು ಏಗಸನಹಳ್ಳ	ಕಡೂರು, ಮಂಗಳೂರು ರಸ್ತೆಗೆ ಹೋಗುವದು ಯೂ ಅಗಸರಬೀದಿ.	ಕಡೂರು, ಮಂಗಳೂರು ರಸ್ತೆ	..	* ಹೆದಸ್ಥಾನದಿಂದ ಕಿಸಲಾದಕ್ಕೆ ಅಧಿಕಾರವು. *ಸಾವ ಖರ್ಚಿನಿಂದ ಕಿಸಲಾದಕ್ಕಾ ಅಧಿಕಾರವು.
			ಮಲ್ಲ ಬಿನ್ ಕೊರಬ ..	ಹುಲ್ಲಿನ ಮನೆ	1691	21	55	76					41	
			ಮಲ್ಲ ಬಿನ್ ಕೊರಕ ..	ಬಂಜರ್ ಜಮೀನು	.	12	20	32					..	
			ಸಿದ್ದ ಬಿನ್ ಈರಮರ್ಲ ..	ಹುಲ್ಲಿನ ಮನೆ	1692	28	..	28					18	
			ಕುರುವಂಗಿ ರಂಗ ..	ಡಿಟ್ಟೋ	1693	18	..	18					12	
			ದೊಡ್ಡನಮಗ ಮಿರ್ಜಾ ..	ಡಿಟ್ಟೋ	1694	15	..	15					10	
			ಕುಳುವಾಡಿ ದ್ಯಾವ ...	ಡಿಟ್ಟೋ	1695	18	..	18 }					20	
						12	..	12 }						
			ಚಿಕ್ಕಬಲಗ್ಯೆ ಮೋಟ ..	ಡಿಟ್ಟೋ	1696	28	.	28					18	
			ಮುಂದಾಸಿ ದಾಸ ..	ಡಿಟ್ಟೋ	1697	32	112	144					50	
			ದಾಸಿ ಜವರ ..	ಡಿಟ್ಟೋ	1698	40	42	82					36	
			ಮಲ್ಲನ ತಿಮ್ಮ ..	ಡಿಟ್ಟೋ	1699	28	..	28					18	
			ನೀಲ ಬಿನ್ ಜವರ ..	ಡಿಟ್ಟೋ	1700	20		20					50	
						40	40	80						
			ನೀಲನ ಮಲ್ಲಿ ..	ಡಿಟ್ಟೋ	1701	24	..	24					38	
			ಡಿಟ್ಟೋ ನೀಲನ ಕೊಟ್ಟಿಗೆ ..	ಡಿಟ್ಟೋ	..	20	..	20						
			ಸಗಣ ಬಿನ್ ಸಣ್ಣ ..	ಡಿಟ್ಟೋ	1702	24	60	84					47	
			ಡಿಟ್ಟೋ ಕೊಟ್ಟಿಗೆ ..	ಡಿಟ್ಟೋ	..	24	..	24						
			ಮರಿಷಕುನ ..	ಡಿಟ್ಟೋ	1703	30	..	30					20	
			ಸಗಣ ಬಿನ್ ಸಣ್ಣ ..	ಡಿಟ್ಟೋ	1704	15	..	15 }					28	
			ಡಿಟ್ಟೋ ಕೊಟ್ಟಿಗೆ ..	ಡಿಟ್ಟೋ	..	28	..	28 }						
			ಲಕ್ಷ್ಮಿಯ ದೇವಸ್ಥಾನ ..	ಹೆಂಚಿನ ಮನೆ	1705	12	..	12					*	
			ಕರಿಕೆ ತಿಮ್ಮನ ಸಣ್ಣ ..	ಹುಲ್ಲಿನ ಮನೆ	1706	27	168	195					55	
			ಸಿದ್ದ ಬಿನ್ ಕರಿಕೆರೆ ತಿಮ್ಮ ..	ಡಿಟ್ಟೋ	1707	28	105	133					58	
			ಡಿಟ್ಟೋ ..	ಡಿಟ್ಟೋ	..	20	..	20						
			ರಾಮನಹಳ್ಳಿ ಸಗಣಿ ..	ಡಿಟ್ಟೋ	1708	28	...	28					14	
			ಹೊಸಬಿಸಿ ..	ಡಿಟ್ಟೋ	1709	24	..	24					16	
			ದುಮ್ಮೇನಹಳ್ಳಿ ಕಂಚ ..	ಡಿಟ್ಟೋ	1710	40	..	40					26	
			ಹಾಲ್ಮಿಡಿ ಕಾಳ ..	ಡಿಟ್ಟೋ	1711	40	..	40					26	
			ಕುಳುವಾಡಿ ದಾಸ ..	ಡಿಟ್ಟೋ	1712	20	72	92					32	
			ಪೂಜಾರಿ ಸಗಣಬರ್ಕ ..	ಡಿಟ್ಟೋ	1713	45	24	69					36	
			ಡಿಟ್ಟೋ ...	ಡಿಟ್ಟೋ	1714	24	28	52					23	
			ಕಾಳ ಬಿನ್ ದೊಡ್ಡಮರಿ ಸಗಣ ..	ಡಿಟ್ಟೋ	1715	50	144	194					70	
			ದಾಸ ಬಿನ್ ಕುಳುವಾಡಿ ಕೆಂಚ ..	ಡಿಟ್ಟೋ	1716	.	45	45					11	
			ಮಾರಿಯಗುಡಿ ..	ಹೆಂಚಿನ ಮನೆ	1717	90	..	90					*	
			ಜುಮ್ಲಾ ..	..	..	..	..	..	..	..	..	..	1,029	

257

ಡಿಸ್ಟ್ರಿಕ್ಟು.	ತಾಲ್ಲೂಕು.	ಬೀದಿಯ ಹೆಸರು.	ಹಿಡುವಳಿದಾರರ ಹೆಸರುಗಳು.	ಮನೆಗಳ ಮತ್ತು ಹಿತ್ತಲುಗಳ ತಪಶೀಲ್.	ತಿದ್ದುಪಡಿಯಾದ ಮ್ಯುನಿಸಿಪಾಲಿಟಿ ನಂಬರು.	ತೆಗದುಕೊಳ್ಳಬೇಕಾದ ವಿಸ್ತೀರ್ಣ. ಮನೆಗಳು ಲಾಂ. + ರುಂ. ಗಜಗಳು.	ತೆಗದುಕೊಳ್ಳಬೇಕಾದ ವಿಸ್ತೀರ್ಣ. ಹಿತ್ತಲುಗಳು ಲಾಂ. + ರುಂದಿ. ಗಜಗಳು.	ತೆಗದುಕೊಳ್ಳಬೇಕಾದ ವಿಸ್ತೀರ್ಣ. ಜುಮ್ಲಾ.	ಚಕ್ಕುಬಂದಿ. ಉತ್ತರ.	ಚಕ್ಕುಬಂದಿ. ಪೂರ್ವ.	ಚಕ್ಕುಬಂದಿ. ಪಶ್ಚಿಮ.	ಚಕ್ಕುಬಂದಿ. ದಕ್ಷಿಣ.	ವ್ಯವಸ್ಥೆಯಾದ ಲಾಗವಡು ಮೊಬಲಗು.	ಷರಾ.
ಕಡೂರು.	ಚಿಕ್ಕಮಗಳೂರು.	ನಂ. 3, ಫ್ರೀಡಕ್ ಮೆ|| ಮಲ್ಲಾರಿ ರಾಯರ ಮನೆಯ ಸಮೀಪದ ಹೊಲಗೇರಿ.	ಪೂಜಾರಿ ಮಲಗುಡ್ಡಿ ..	ಹುಲ್ಲಿನ ಮನೆ	339	16	..	16	ವೇದಾವತಿ ನಾಲೆಯ ಮೇಲಿನ ಬಂಜರ್ ಜಮೀನು.	ವಸ್ತಾರಾ ರಸ್ತೆ.	ಮ್ಯುನಿಸಿಪಲ್ ಗಡಿ ಮತ್ತು ವೇದಾವತಿ ನಾಲಾ.	ಮ್ಯುನಿಸಿಪಲ್ ಗಡಿ.	ರೂ. 20	
			ಪೂಜಾರಿ ಚನ್ನಯ್ಯ ..	ಡಿಟೋ	340	42	192	234					76	
			ಕ್ರಿಸ್ತಿ ರಾಜಲು ..	ಡಿಟೋ	341	48	96	144					156	
			ಷರಾಬ್ ವೆಂಕಟಪ್ಪ .. ಖಾತೇದಾರ್ ಜಾಕಿ ಫರ್ನಾಂಡೆಸ್ ..	ಹೆಂಚಿನ ಮನೆ	343	264	..	264					300	
			ಜುಮ್ಲಾ ..	..	..	..	..	..	..	..	..	..	552	

			ರೂ.
ನೋಟ್.—ನಂ. 1ನೇ ಹೊಲಗೇರಿಯ ಲಾಗವಡು ಮೊಬಲಗು	..	..	1,632
ನಂ. 2ನೇ ಡಿಟೋ ಡಿಟೋ	..	..	1,029
ನಂ. 3ನೇ ಡಿಟೋ ಡಿಟೋ	..	..	552
ಸನ್ 1894ನೇ ಜೂನ್ 14ನೇ ಮರ್ಕಂ 22998.—ಲೋ. ಫಂ. 257—94ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಅನುಸರಿಸಿ ತೆಗದುಕೊಳ್ಳಲ್ಪಟ್ಟ ಜಮೀನುಗಳ ಲಾಗವಡು ಮೊಬಲಗು		..	557
ಜುಮ್ಲಾ ಮಂಜೂರಾಗಿರುವ ಲಾಗವಡು ಮೊಬಲಗು ..			3,800 ಮಾತ್ರ.

ತಾರೀಖು 8ನೇ ಜುಲೈ 1896.

ನಂ. 450.—ಎಡ್ಯು. 24, ಸನ 1895ನೇ ಮಾರ್ಚಿ 18ನೇ ಮುರ್ಕ್ಕಂ ಎ. 49ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ ಘಾಯಿಷ್ ಮಾಡಲ್ಪಟ್ಟ ಗವರ್ನಮೆಂಟ್ ಬಾಲಿಕಾ ಪಾಠಶಾಲೆಗಳ ಆಡಳಿತವನ್ನ ಕಮ್ಮಿಟಿಗಳಿಂದ ನಡಿಸುವ ಬಗ್ಯಾದ ರೂಲ್ಸಿನ 15ನೇ ರೂಲಿಗೆ ಈ ಕೆಳಗೆ ಕಂಡದ್ದನ್ನು ಬದಲಾಗಿ ಸೇರಿಸಲ್ಪಡತಕ್ಕದ್ದೆಂದು ಗವರ್ನಮೆಂಟನವರು ಅಪ್ಪಣೆ ಕೊಡುತ್ತಾರೆ.

"ಪಾಠಶಾಲೆ ಸಿಬ್ಬಂದಿಯ ಯಾವನೊಬ್ಬ ಮೆಂಬರಿನ ನೊಕರರಾತಿ, ಬಡ್ತಿ, ಶಿಕ್ಷೆ, ಅಮಾನತ ಮತ್ತು ಬರತರಫ ಮಾಡುವಣ, ಇದಲ್ಲದೆ ಹಂಗಾಮಿಯಾಗಿ ಉತ್ತರಾಧಿಕಾರಿಯ ನೊಕರರಾತಿಯನ್ನಾಗಲಿ ಯಾ ರಜಾ ಅಥವಾ ಆಕ್ಟಿಂಗ್ ಅಲೋವೆನ್ಸ್ ಕೊಡುವಣವನ್ನಾಗಲಿ ಬೇಕಾಗಿರತಕ್ಕ ಯಾವನೊಬ್ಬ ಮೆಂಬರಿನ ರಜಾವೂ, 1895ನೇ ಜೂನ 28ನೇ ಮುರ್ಕ್ಕಂ 24799.-802-ಜ. 6289ನೇ ನಂಬರ ಗವರ್ನಮೆಂಟ ಪ್ರೊಸಿಡಿಂಗ್ಸಿನ 5ನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟ ಮೇರೆ ಅವರಿಗೆ ಕೊಡಲ್ಪಟ್ಟಿರುವ ಅಧಿಕಾರದೊಳಗಾಗಿ ವಿದ್ಯಾಭ್ಯಾಸದ ಇನ್ಸ್ಪೆಕ್ಟರ ಜನರಲಯವರಿಂದಲೂ ಮತ್ತು ಇತರ ಸಂದರ್ಭಗಳಲ್ಲಿ ಗವರ್ನಮೆಂಟನವರು ಆಗಿಂದಾಗ್ಯೆ ವಿಧಿಸುವ ರೂಲ್ಸಿಗೆ ಒಳಪಟ್ಟು ಕಮ್ಮಿಟಿಯವರು ಕಳುಹಿಸುವ ಶಿಫಾರಸುಗಳನ್ನ ಸರಿಯಾದ ಆಲೋಚನೆ ಮಾಡಿದ ತರುವಾಯ ಗವರ್ನಮೆಂಟನವರಿಂದಲೂ ಮಂಜೂರ್ಮಾಡಲ್ಪಡತಕ್ಕದ್ದು."

ತಾರೀಖು 15ನೇ ಜುಲೈ 1896.

ನಂ. 812.—ಮಿ. ಫೈ. 349.—92, ಸನ 1896ನೇ ಮಾರ್ಚಿ 20ನೇ ಮುರ್ಕ್ಕಂ 10902.— ಜ. ಫೈ. 349.-92ನೇ ನಂಬರ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1893ನೇ ಮೇ 15ನೇ ಮುರ್ಕ್ಕಂ 18948.—ಜ. ಫೈ. 349.-92ನೇ ನಂಬರ ಇಸ್ತಿಹಾರಿನೊಡನೆ ಘಾಯಿಷ್ ಮಾಡಲ್ಪಟ್ಟ ಮೈಸೂರ ಲೋಕಲ್ ಸರ್ವಿಸ್ ಪರೀಕ್ಷೆಗೆ ಸಂಬಂಧಪಟ್ಟ ರೂಲ್ಸಿನ 3ನೇ ರೂಲಿಗೆ ಈ ಕೆಳಗೆ ಕಂಡ ರೂಲನ್ನು ಬದಲಾಗಿ ಶೇರಿಸತಕ್ಕದ್ದು.

"3. ಪರೀಕ್ಷೆಯು ಇದರ ಬಾಜೂದಲ್ಲಿ ಕಂಡ ಸ್ಥಳಗಳಲ್ಲಿಯೂ ಮತ್ತು ಪ್ರತಿ ವರುಷ ನವಂಬರ ತಿಂಗಳಲ್ಲಿನ ಯಗ್ಜಾಮಿನರುಗಳ ಬೋರ್ಡು ಸೆಕ್ರಿಟೆರಿಯವರಿಂದ ಪ್ರಸಿದ್ಧ ಪಡಿಸಲ್ಪಡಬಹುದಾದ ಫಲಾನೇ ತಾರೀಖು ವ ಘಂಟೆಗಳಲ್ಲಿಯೂ ನಡಿಸಲ್ಪಡುವದು.

ಬೆಂಗಳೂರು.	ಕೋಲಾರ.	ಚಿತ್ರದುರ್ಗ.	ತುಮುಕೂರ.
ಮೈಸೂರು.	ಶಿವಮೊಗ್ಗ.	ಚಿಕ್ಕಮಗಳೂರು.	ಹಾಸನ.

ಮೈಸೂರ ಸರ್ವಿಸ್ ರೆಗ್ಯುಲೇಷನ್ಸಗಳಿಗೆ ಶೇರುವ ಜಾಸ್ತಿ ಅಂಶಗಳೂ ಮತ್ತು ತಿದ್ದುಪಾಟುಗಳು.

ನಂ.

ಪುಟ 185, ಅಪ್ಪೆಂಡಿಕ್ಸ ನಂಬರ 2.

ಈ ಕೆಳಗೆ ಕಂಡದ್ದನ್ನ ಸಬ್ ಜಡ್ಜಿಗಳ ಎಂಬ ಮಾತಿನ ಕೆಳಗೆ ಶೇರಿಸತಕ್ಕದ್ದು:—

ಚೀಫ ಕೋರ್ಟಿನ ರೆಜಿಸ್ಟ್ರಾರು.	3 ರೂಪಾಯಿಗಳು.	6 ಆಣೆಗಳು.

ತಾರೀಖು 18ನೇ ಜುಲೈ 1896.

ನಂ. 977.—ಲೋ. ಫಂ. 257.—92, ಸನ 1894ನೇ ಇಸವಿಯ VIIನೇ ನಂಬರ ಲ್ಯಾಂಡ ಆಕ್ವಿಜಿಷನ ರೆಗ್ಯುಲೇಷನಿನ ನಿಯಮಗಳನುಸರಿಸಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕಟ್ಟತಕ್ಕ ಖಾಲೀ ಜಾಗಗಳು ಮತ್ತು ಕಟ್ಟಡ ಸರ್ಕಾರ ಕೆಲಸಕ್ಕೆ ಅಂದರೆ ಚಿಕ್ಕಮಗಳೂರ ಷಹರಿನ ಪಶ್ಚಿಮ ದಿಕ್ಕಿನ ಬಡಾವಣೆ ಬಗ್ಯಾಗಿ ಬೇಕಾಗಿರುತವೆ:—

ನಂಬರು.	ಷಹರಿನ ಹೆಸರು.	ಸೈಟ ನಂಬರ.	ಹಿಡುವಳಿದಾರರ ಹೆಸರುಗಳು.	ಬೇಕಾಗಿರುವ ಜಮೀನುಗಳ ತಪಸೀಲ.	ಬೀಜವರಿ.	ಚಕ್ಕುಬಂದಿ.			
						ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
					ಚದರ ಗಜ				
1	ಚಿಕ್ಕಮಗಳೂರು	161	ನಾಡಿಗ ಜನಾರ್ದನಯ್ಯನವರು	ಖಾಲೀ ಜಾಗ	$778\frac{2}{3}$	ಚಿಕ್ಕಮಗಳೂರು, ಸಾಂತವೇರ ರಸ್ತೆ	ಪಶ್ಚಿಮ ದಿಕ್ಕಿನ ಬಡಾವಣೆಯಲ್ಲಿರುವ 6ನೆ ನಂ. ಮುಖ್ಯ ರಸ್ತೆ	ಸೀತಾರಾಮಯ್ಯನವರ 162ನೇ ನಂ. ಖಾಲೀ ಜಾಗ	ನೀರಿನ ಕಾಲಿವೆ
2		162	ನಾಡಿಗ ಸೀತಾರಾಮಯ್ಯನವರು	ಡಿಟೋ	$661\frac{2}{9}$	ಡಿಟೋ	ಡಿಟೋ	ಮೆ॥ ಕೃಷ್ಣಪ್ಪನವರ ಮನೆ ಮತ್ತು 163ನೇ ನಂ. ಖಾಲೀ ಜಾಗ	ಜನಾರ್ದಯ್ಯನವರ 161ನೇ ನಂ. ಖಾಲಿ ಜಾಗ
3		163	ಪ್ಲೀಡರ ಮೆಸ್ಟ್ರ ಕೃಷ್ಣಪ್ಪನವರು	ಹೆಂಚಿನಮನೆ	157	ಡಿಟೋ	ಡಿಟೋ	ಪಶ್ಚಿಮ ದಿಕ್ಕಿನ ಬಡಾವಣೆಯ ಸೈಟ ನಂ. 366	ಸೀತಾರಾಮಯ್ಯನವರ ಖಾಲಿ ಜಾಗ ನಂ. 162
		163	ಡಿಟೋ	ಖಾಲೀ ಜಾಗ	481	ಡಿಟೋ	ಡಿಟೋ	ಡಿಟೋ	ಡಿಟೋ

ತಾರೀಖು 18ನೇ ಜುಲೈ 1896.

ನಂ. 1026.—ಜು. 88, ಈ ಕೆಳಗೆ ಕಂಡ ಮೊಕರರಾತಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ ಮೆಸ್ಟರ್ ಪಿ. ಸುಬ್ರಹ್ಮಣ್ಯ ಅಯ್ಯರ್, ಬಿ. ಏ., ಯವರು ಮತ್ತೊಂದು ಹುಕುಂ ಕೊಡುವ ಪರಿಯಂತ ಬೆಂಗಳೂರ ಅಡಿಷನಲ್ ಮುನ್ಸಿಫರ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ಮದರಾಸ್ ಹೈಕೋರ್ಟು ವಕೀಲ್ ಮೆಸ್ಟರ್ ವಿ. ರಂಗಾಚಾರಿ, ಬಿ. ಏ., ಬಿ. ಎಲ್., ಯವರು ಮೈಸೂರಲ್ಲಿ 3ನೇ ಕ್ಲಾಸ್ ಅಡಿಷನಲ್ ಮುನ್ಸಿಫರಾಗಿರತಕ್ಕದ್ದು.

ಮೈಸೂರ್ ಚೀಫ್ ಕೋರ್ಟು ಅಡ್ವೋಕೇಟ್ ಮೆಸ್ಟರ್ ಎಂ. ಏ. ನಾರಾಯಣಯ್ಯಂಗಾರ್, ಬಿ. ಏ., ಬಿ. ಎಲ್., ಯವರು ಯಡಹಳ್ಳಿಯಲ್ಲಿ 3ನೇ ಕ್ಲಾಸ್ ಮುನ್ಸಿಫರಾಗಿರತಕ್ಕದ್ದು.

ತಾರೀಖು 20ನೇ ಜುಲೈ 1896.

ನಂ. 1061.—ಲೋ. ಫಂ. 253—93, ತುಮಕೂರ್ ಷಹರಿನ ಮ್ಯುನಿಸಿಪಲ್ ಸರಹದ್ದುಗಳು ಮೈಸೂರ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟಿರುವದರಿಂದ ಸಕಲರ ತಿಳುವಳಿಕೆ ಬಗ್ಯೆ ಫಾಯಿಷ್ಮಾಡಲ್ಪಟ್ಟಿರುತವೆ:—

ಉತ್ತರಕ್ಕೆ—ತುಮಕೂರು ತಾಲ್ಲೂಕಿನಲ್ಲಿರುವ ಹೊನ್ನೇನಹಳ್ಳಿ, ಲಿಂಗಾಪುರ ಮತ್ತು ಅಂತರಸನಹಳ್ಳಿ ಗ್ರಾಮಗಳ ದಕ್ಷಿಣಯಲ್ಲಿ.

ಪೂರ್ವಕ್ಕೆ—ಸತ್ಯಮಂಗಲ ಗ್ರಾಮದ ಮತ್ತು ತುಮಕೂರು ಗ್ರಾಮದ ಸರ್ವೆ ನಂ. 192, 193, 200, 202, 205, 207, 228, 243, 244, 288, 287, 33, 34, 285, 276, 277 ವ 273 ಇವುಗಳ ಪಶ್ಚಿಮದ ಯಲ್ಲಿ, ಬತವಾಡಿ ಗ್ರಾಮದ ಪಶ್ಚಿಮದ ಯಲ್ಲಿ ಸಹ.

ದಕ್ಷಿಣಕ್ಕೆ—ಸತ್ತಿಹಳ್ಳಿ, ಉಪ್ಪಾರಹಳ್ಳಿ ವ ಮರಳೂರು ಗ್ರಾಮಗಳ ಮತ್ತು ವೀರಸಾಗರ ಗ್ರಾಮದ ಸರ್ವೆ ನಂ. 4 ವ 5ರ ಉತ್ತರದ ಯಲ್ಲಿ.

ಪಶ್ಚಿಮಕ್ಕೆ—ವೀರಸಾಗರ ಗ್ರಾಮದ ಸರ್ವೆ ನಂ. 32; ತುಮಕೂರು ಗ್ರಾಮದ ಸರ್ವೆ ನಂ. 123 ವ 130 ಮತ್ತು ತುಮಕೂರು ಅಮಾನೀಕೆರೆಯ ಸರ್ವೆ ನಂ. 147, 148, 149, 152, 153, 171, 172, 173, 178, 54, 53, 49, 45, 43 ವ 42 ಮತ್ತು ದಿಬ್ಬೂರು ಗ್ರಾಮದ ಪೂರ್ವದ ಯಲ್ಲಿ.

ತಾರೀಖು 21ನೇ ಜುಲೈ 1896.

ನಂ. 1147.—ಜು. 101, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 144ನೇ ಸೆಕ್ಷನ್ ಮೇರೆ—ಚಿಕ್ಕಬಳ್ಳಾಪುರದ ಮುಸಲ್ಮಾನ ಜನಗಳ ಎರಡು ಕಕ್ಷಿಗಳಲ್ಲಿನ ಕಲಹವು ಸಮಾಧಾನವಾಗಿ ಫೈಸಲ್ಮಾಡಿ ಕೊಂಡಿರುವದಾಗಿ ಕೋಲಾರ್ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ರಿಪೋರ್ಟು ಮಾಡಿರುವ ಸಬಬ್ ಗವರ್ನಮೆಂಟಿನವರು ಅಪ್ಪಣೆ ಕೊಡುವದೇನಂದರೆ,—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 144ನೇ ಸೆಕ್ಷನ್ ಅನುಸರಿಸಿ ಚಿಕ್ಕಬಳ್ಳಾಪುರದ ತಾಲ್ಲೂಕಿನ ಅಮಲ್ದಾರ್ ಮಾಜಿಸ್ಟ್ರೇಟರಿಂದ 1896ನೇ ಮಾರ್ಚಿ 11ನೇ ಮುರ್ಖುಮಿನಲ್ಲಿ ಮಾಡಲ್ಪಟ್ಟಿದ್ದ ಹುಕುಂ ಇನ್ನೂ ಆರು ತಿಂಗಳ ಪರಿಯಂತ ಜಾರಿಯಲ್ಲಿರತಕ್ಕದ್ದೆಂದು ಪ್ರಸಿದ್ಧಪಡಿಸುವ ಮೊಕ್ಕಾಂ ಮೈಸೂರ, 1896ನೇ ಮೇ 10ನೇ ಮುರ್ಖುಂ 272ನೇ ನಂಬರ್ ಆರ್ಡರ್ ಇದರಿಂದ ಮೌಕೂಫ್ ಮಾಡಲ್ಪಟ್ಟಿರುತ್ತೆ.

ನಂ. 1157.—ಜು. 115, ಮೈಸೂರ ಗವರ್ನಮೆಂಟಿನವರು ಇದರಿಂದ ಪ್ರಸಿದ್ಧಪಡಿಸುವದೇನಂದರೆ,—1896ನೇ ಜುಲೈ 27ನೇ ತಾರೀಖು ಲಾಗಾಯತು ವ ಆ ತರುವಾಯ ಎರಡು ಖಾಯಂ ಅಡಿಷನಲ್ ಮುನ್ಸಿಫರ ಕೋರ್ಟುಗಳು, ವೊಂದು ಬೆಂಗಳೂರಲ್ಲಿಯೂ ಮತ್ತೊಂದು ಮೈಸೂರಲ್ಲಿಯೂ ಸ್ಥಾಪಿಸಲ್ಪಡುವವು, ಮತ್ತು ಈ ಅಡಿಷನಲ್ ಮುನ್ಸಿಫರುಗಳು ಬೆಂಗಳೂರು ವ ಮೈಸೂರ ಮುನ್ಸಿಫರುಗಳ ಅಧಿಕಾರ ಸರಹದ್ದಿನೊಳಗೆ ಅಡಗಿರುವ ತಾಲ್ಲೂಕುಗಳ ಮೇಲೆ ಚಲಾಯಿಸುವ ಬಗ್ಯೆ ಇದರಿಂದ ಅಧಿಕಾರ ಕೊಡಲ್ಪಟ್ಟಿರುತ್ತಾರೆ. ಚೀಫ್ ಕೋರ್ಟಿನವರು ಆಗಾಗ್ಯೆ ಮುಖ್ಯ ಮತ್ತು ಅಡಿಷನಲ್ ಮುನ್ಸಿಫರುಗಳಿಗೆ ಕೆಲಸವನ್ನ ಹಂಚಿಕೊಡುವರು.

ನಂ. 1159.—ಜು. 117, ಈ ಕೆಳಗೆ ಕಂಡ ಮುನ್ಸಿಫರ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಮೆಸ್ಟರ್ ಟಿ. ಜೆ. ವ್ಯಾಂಡರ್ಲೋಯವರು ಬೆಂಗಳೂರಿಂದ ಮೈಸೂರಿಗೆ.

ಮೆಸ್ಟರ್ ಬಿ. ಶ್ರೀನಿವಾಸರಾಯರು ಚಿಕ್ಕಮಗಳೂರಿಂದ ಬೆಂಗಳೂರಿಗೆ.

ಮೆಸ್ಟರ್ ಟಿ. ಈ. ಜಯರಾಂ ಅಯ್ಯರ್ ಯವರು ಯಡಹಳ್ಳಿಯಿಂದ ಹೊನ್ನಾಳಿಗೆ.

ಮೆಸ್ಟರ್ ಎ. ಟಿ. ಗೋಪಾಲಯ್ಯಂಗಾರು ಚಿಕ್ಕಮಗಳೂರಿಗೆ, ಆದರೆ ಮೆಸ್ಟರ್ ಎಸ್. ವೆಂಕಟವರದಯ್ಯಂಗಾರ್ರಿಗೆ ಚಾರ್ಜು ವೊಪ್ಪಿಸುವ ವರಿವಿಗೆ ಶ್ರೀರಂಗಪಟ್ಟಣದಲ್ಲಿ ಕೆಲಸನೋಡುತಲಿರತಕ್ಕದ್ದು.

ಮೈಸೂರ ಆಕ್ಟಿಂಗ್ ಮುನ್ಸಿಫ್ ಮೆಸ್ಟರ್ ಎಸ್. ಶೇಷಗಿರಿರಾಯರು ಮೆಸ್ಟರ್ ಎ. ಟಿ. ಗೋಪಾಲಯ್ಯಂಗಾರು ಶ್ರೀರಂಗಪಟ್ಟಣದ ಮುನ್ಸಿಫರಾಗಿ ಕೆಲಸ ನೋಡುತ್ತಲಿರುವ ಕಾಲದಲ್ಲಿ ಚಿಕ್ಕಮಗಳೂರು ಮುನ್ಸಿಫರಾಗಿ ಕೆಲಸನೋಡತಕ್ಕದ್ದು.

ನಂ. 1162.—ಜು. 120, ಪೊಲೀಸ್ ಅಸಿಸ್ಟೆಂಟ್ ಸೂಪರ್ಇಂಟೆಂಡೆಂಟ್ ಮೆಸ್ಟರ್ ಡಿ. ಏ. ಬಲ್ಲಾರ್ಡ್ ಯವರು (ಬೇರೇ ಕೆಲಸದ ಮೇಲಿರುವ ಮೆಸ್ಟರ್ ಫಿಲಿಪ್ ಫ್ರಾನ್ಸಿಸ್ ಬೌರಿಂಗ್‌ಯವರಿಗೆ ಬದಲಾಗಿ) ಕಡೂರಿಂದ ತುಮಕೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

ಪೊಲೀಸ್ ಸೂಪರ್ಇಂಟೆಂಡೆಂಟ್ ಮೆಸ್ಟರ್ ಜೆ. ಹನ್ನಿಂಗ್ ಯವರು ಕಡೂರು ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 22ನೇ ಜುಲೈ 1896.

ನಂ. 1181.—ಲೋ. ಫಂ. 257.—92, ಸನ 1894ನೇ ಇಸವಿಯ VIIನೇ ನಂಬರ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ ನಿಯಮಗಳನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕಟ್ಟಡಗಳು ಸರ್ಕಾರ ಕೆಲಸಕ್ಕೆ ಅಂದರೆ (1) ಗೊಬ್ಬರವನ್ನ ಜಮಾಯಿಸುವದಕ್ಕೂ ಮತ್ತು (2) ಚಿತ್ರದುರ್ಗ ಷಹರಿನಲ್ಲಿ ಮುಸಲ್ಮಾನರ ಖಬರಸ್ತಾನ ಬಡಾಯಿಸುವದಕ್ಕೂ ಅವಶ್ಯಕವಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಅನುಭವದಾರರ ಹೆಸರುಗಳು.	ಅವಶ್ಯಕವಾಗಿರುವ ಜಮೀನುಗಳ ತಪ್ಸೀಲ್.				ಚಕ್ಕುಬಂದಿ.			
					ವಿವರ.	ಸರ್ವೇ ನಂ.	ಬೀಜವರಿ.	ಫೇರೀಜು.	ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.
							ಎ. ಗುಂ.	ರೂ. ಆ. ಪೈ.				
ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ	ಶಹರು	1. ಹೊಸೂರ ಬಿನ್ ಹೊಸೂರ	ಖುಷ್ಕೀ	67	0—19	0—4—0	ಸರ್ವೇ ನಂ. 63	ಸರ್ವೇ ನಂಬರ 68	ಚಿತ್ರದುರ್ಗದಿಂದ ಮೆಡಿಹಳ್ಳಿಗೆ ಹೋಗುವ ರಸ್ತೆ	ಸರ್ವೇ ನಂ. 66
				2. ಷೇಕ ಅಬ್ದುಲ್ಲ ಬಿನ್ ಖಾಸಿಂಸಾಹೆಬ	ಖುಷ್ಕೀ	66	1—20	0—11—4	ಡಿಟೋ 65	ಡಿಟೋ 69	ಸರ್ವೇ ನಂ. 67	ಸರ್ವೇ ನಂ. 66ರ ಉಳಿದ ಭಾಗ

ತಾರೀಖು 23ನೇ ಜುಲೈ 1896.

ನಂ. 1214.—ಲೋ. ಫಂ. 21.—92, ಮೃತಪಟ್ಟ ಮಿಸ್ಟರ್ ತಿರುಮಲರಾಯರ ಸ್ಥಳದಲ್ಲಿ ಮಿಸ್ಟರ್ ರಾಮಾಜೋಯಿಸರವರು ಚನ್ನಗಿರಿ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ಮೊಕರ್ರಮ್ಮಾಡಲ್ಪಟ್ಟಿರುತ್ತಾರೆ.

ನಂ. 1217.—ಲೋ. ಫಂ. 428—92, ಕೋಲಾರ್ ಸ್ಥಳವನ್ನು ಬಿಟ್ಟು ಹೋದ ರೆ|| ಮಿಸ್ಟರ್ ರಿಚರ್ಡ್ಸ್‌ಯವರ ಸ್ಥಳದಲ್ಲಿ ರೆ|| ಮಿಸ್ಟರ್ ಬಟ್ರಿಕ್‌ಯವರು ಕೋಲಾರದ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ಮೊಕರರ್ಮ್ಮಾಡಲ್ಪರುತ್ತಾರೆ.

ನಂ. 1220.—ಲೋ. ಫಂ. 428—92, ಮೃತಪಟ್ಟ ಮಿಸ್ಟರ್ ಶೇಷಣ್ಣನವರ ಸ್ಥಳದಲ್ಲಿ ಮಿಸ್ಟರ್ ವೆಂಕಟನಾರಣಪ್ಪ ವುರಫ್ ಅಪ್ಪೂರಾಯರು ಗೋರೀಬಿದನೂರ ಮ್ಯುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ಮ್ಮಾಡಲ್ಪಟ್ಟಿರುತ್ತಾರೆ.

ನಂ. 1229.—ಲೋ. ಫಂ. 178—92, ಮೃತಪಟ್ಟ ಮಿಸ್ಟರ್ ತಿಮ್ಮಯ್ಯನವರ ಸ್ಥಳದಲ್ಲಿ ಮಿಸ್ಟರ್ ಶ್ರೀಕಂಠಯ್ಯನವರು ದೇವನಹಳ್ಳೀ ಮ್ಯುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ಮ್ಮಾಡಲ್ಪಟ್ಟಿರುತ್ತಾರೆ.

ತಾರೀಖು 24ನೇ ಜುಲೈ 1896.

ನಂ. 1317.—ಮಿ. 32, ಸ್ಟೇಟ್ ಜಿಯಾಲಜಿಸ್ಟ್ ಮಿಸ್ಟರ್ ಆರ್. ಬ್ರೂಸ್‌ಫುಟ್, ಎಫ್. ಜಿ. ಎಸ್., ಯವರು ಜಿಯಲಾಜಿಕಲ್ ಇಲಾಖೆಯ ಗವರ್ನಮೆಂಟ್ ಎಕ್ಸ್ ಅಫಿಷಿಯೋ ಸೆಕ್ರಿಟೆರಿಯರಾಗಿ ಮೊಕರರ್ಮ್ಮಾಡಲ್ಪಟ್ಟಿರುತ್ತಾರೆ.

ನಂ. 1314.—ಮಿ. 29, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಜಿಯಲಾಜಿಕಲ್ ಇಲಾಖೆಯ ಡಾಕ್ಟರ್ ಜೆ. ಡಬ್ಲಿಯೂ. ಇವಾನ್ಸ್, ಡಿ. ಎಸ್., ಎಫ್. ಜಿ. ಎಸ್., ಯವರ ಹುದ್ದೆಯು "ಸೀನಿಯರ್ ಜಿಯಾಲಜಿಸ್ಟ್ ಮತ್ತು ಅನಲಿಸ್ಟ್"ನಿಂದ "ಮೈಸೂರ ಮೈನ್ಸ್ ಇನ್‌ಸ್ಪೆಕ್ಟರ್"ಗೆ ಬದಲಾಯಿಸಲ್ಪಟ್ಟಿರುತ್ತೆ.

ನಂ. 1320.—ಮಿ. 35, ಮೈಸೂರ ಮೈನ್ಸ್ ಇನ್‌ಸ್ಪೆಕ್ಟರ್ ಡಾಕ್ಟರ್ ಜೆ. ಡಬ್ಲಿಯೂ. ಇವಾನ್ಸ್, ಡಿ. ಎಸ್., ಎಫ್. ಜಿ. ಎಸ್., ಯವರು ಜಿಯಲಾಜಿಕಲ್ ಇಲಾಖೆಯ ಗವರ್ನಮೆಂಟ್ ಎಕ್ಸ್ ಅಫಿಷಿಯೋ ಅಸಿಸ್ಟೆಂಟ್ ಸೆಕ್ರಿಟೆರಿಯಾಗಿ ಮೊಕರರ್ಮ್ಮಾಡಲ್ಪಟ್ಟಿರುತ್ತಾರೆ.

ನಂ. 1342.—ಜು. 135, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಶ್ರೀರಂಗಪಟ್ಟಣ ತಾಲ್ಲೂಕು ಅಮಲ್ದಾರ್ ಹಸನ್‌ಅಲಿಬೇಗ್‌ಯವರು 2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ಮ್ಮಾಡಲ್ಪಟ್ಟಿರುತ್ತಾರೆ.

ನಂ. 1288.—ಲೋ. ಫಂ. 125—92, ರಾಜೀನಾಮೆಕೊಟ್ಟ ಮಿಸ್ಟರ್ ಹರಿಕಾತೂರು ನರಸಪ್ಪನವರ ಸ್ಥಳದಲ್ಲಿ ಮಿಸ್ಟರ್ ಕುರುಬರ ಸಂಕಣ್ಣನವರು ತರೀಕೆರೆ ಮುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ಮ್ಮಾಡಲ್ಪಟ್ಟಿರುತ್ತಾರೆ.

ನಂ. 1293.—ಲೋ. ಫಂ. 90—92, ಬೋರ್ಡಿನ ಕ್ರಮವಾದ ಮೂರು ಮೀಟಿಂಗ್‌ಗಳಿಂದ ಗೈರಹಾಜರಾದ ಸಬಬು ಮೆಂಬರುಗಳ ಪಟ್ಟಿಯಿಂದ ಹೆಸರನ್ನು ತೆಗದುಹಾಕಲ್ಪಟ್ಟ ಮಿಸ್ಟರ್ ಕೃಷ್ಣಪ್ಪನವರ ಸ್ಥಳದಲ್ಲಿ ಮಿಸ್ಟರ್ ಲಕ್ಷ್ಮೀನರಸಿಂಹಶಾಸ್ತ್ರಿಯವರು ತುರುವೇಕೆರೆ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ಮೊಕರರ್ಮ್ಮಾಡಲ್ಪಟ್ಟಿರುತ್ತಾರೆ.

ತಾರೀಖು 6ನೇ ಜುಲೈ 1896.

ನಂ. 98.—ರೆ. 23, ಸನ 1888ನೇ ಇಸವಿಯ IVನೇ ಮೈಸೂರ ಲ್ಯಾಂಡ್ ರೆವಿನ್ಯೂ ರೆಗ್ಯುಲೇಷನಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನು ಮಾಗಡೀ ತಾಲ್ಲೂಕಿನಲ್ಲಿರುವ ಕಾಯಂ ಗುತ್ತಾ ಕುರುಬರಹಳ್ಳಿ ಗ್ರಾಮಕ್ಕೆ ಲಗಾವಾಗತಕ್ಕದ್ದೆಂದು ಮೈಸೂರ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ.

ತಾರೀಖು 13ನೇ ಜುಲೈ 1896.

ನಂ. 614.—ಲೋ. ಫಂ. 257—92, ಸನ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧ ಪಡಿಸುವದೇನಂದರೆ,—ಇದರಡಿ ಕಂಡ ಖಾಲೀ ಕಟ್ಟಡ ಜಾಗಾಗಳು ವ ಕಟ್ಟಡಗಳು ಸರ್ಕಾರ ಕೆಲಸಕ್ಕೆ ಅಂದರೆ ಅಜ್ಜಂಪುರದಲ್ಲಿ ಬಸವನ ಭಾವಿಗೆ ಹೋಗುವ ಗಲ್ಲಿಯನ್ನು ವಿಸ್ತರಿಸುವ ಬಗ್ಗ್ಯಾಗಿ ಬೇಕಾಗಿರುತವೆ:—

ಷಹರಿನ ಹೆಸರು—ಅಜ್ಜಂಪುರ ಷಹರ್
ಹಿಡುವಳಿದಾರ್ರ ಹೆಸರು—ಬಿ. ಶಂಕರಪ್ಪ
ಬೇಕಾಗಿರುವ ಜಮೀನಿನ ತಪಶೀಲ್—ಹೆಂಚಿನಮನೆ
ಬೀಜವರಿ—480 ಚದುರಡಿಗಳು

ಚಕ್ಕು ಬಂದಿ:—
ಉತ್ತರಕ್ಕೆ—ಸದರೀ ಮನೆಯ ಉಳಿದಭಾಗ
ಪೂರ್ವಕ್ಕೆ—ನಡಿಯುವ ಗಲ್ಲಿ
ದಕ್ಷಿಣಕ್ಕೆ—ಮ್ಯುನಿಸಿಪಲ್ ಚರಂಡಿ
ಪಶ್ಚಿಮಕ್ಕೆ—ಮ್ಯುನಿಸಿಪಲ್ ರಸ್ತೆ

ಷರಾ:—
ಲಾಂಬಿ—ಉತ್ತರ ದಕ್ಷಿಣ 80 ಅಡಿಗಳು
ರುಂದಿ—ಪೂರ್ವ ಪಶ್ಚಿಮ 6 ಅಡಿಗಳು

ತಾರೀಖು 16ನೇ ಜುಲೈ 1896.

ನಂ. 574.—ರೆ. ಫೈ. 110—95, ಹುಣಸೂರು ತಾಲ್ಲೂಕು ಅಮಲ್ದಾರ್ ಮೀರ್ ನಿಜಾಮುದ್ದೀನ್ ಅಲಿಖಾನ್ ಯವರಿಗೆ 1896ನೇ ಜೂನ್ 15ನೇ ಮರ್ಕುಂ 10912.—ರೆ. ಫೈ. 110—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ಐದು ವಾರಗಳ ಪ್ರಿವಿಲೇಜ್ ರಜಾ 1896ನೇ ಮೇ 22ನೇ ತಾರೀಖಿನ ಪೂರ್ವಾಹ್ನದ ಲಾಗಾಯತು ವುಪಯೋಗಿಸಿಕೊಂಡು 1896ನೇ ಜೂನ್ 25ನೇ ಮರ್ಕುಮಿನಲ್ಲಿ ಕೆಲಸಕ್ಕೆ ವಾಪಸು ಬಂದಿರುವದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ ವೊಂದು ದಿನ, ಮತ್ತು ಸದರೀಯವರು ರಜಾದ ಮೇಲಿದ್ದಾಗ ಕೆಲಸಕ್ಕಾಗಿ ಕರೆಸಲ್ಪಟ್ಟಿದ್ದ ಎರಡು ದಿನಗಳೂ ಸಹ ಅಂದರೆ 1896ನೇ ಜೂನ್ 11 ವ 12ನೇ ತಾರೀಖುಗಳು ಯಿದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 17ನೇ ಜುಲೈ 1896.

ನಂ 592.—ರೆ. 237, ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಕೆ. ಯಸ್. ಚಂದ್ರಶೇಖರ ಅಯ್ಯರ್ ಯವರಿಗೆ, 1896ನೇ ಜೂನ್ 16ನೇ ಮರ್ಕುಂ 10930.—ರೆ. 4307ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟಿದ್ದ ಹದಿನೈದು ದಿನಗಳ ಕ್ಯಾಜುಯಲ್ ರಜಾ 1896ನೇ ಜೂನ್ 22ನೇ ತಾರೀಖಿನ ಮಧ್ಯಾಹ್ನೋತ್ತರದ ಲಾಗಾಯತು ಉಪಯೋಗಿಸಿಕೊಂಡು ಮಾಹೆಮಜಕೂರು 6ನೇ ತಾರೀಖಿನ ಮಧ್ಯಾಹ್ನೋತ್ತರ ಕೆಲಸಕ್ಕೆ ವಾಪಸ್ ಬಂದಿರುವ ಸಬಬ್ ಉಪಯೋಗಿಸಿಕೊಳ್ಳದ ರಜಾ ಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 18ನೇ ಜುಲೈ 1896.

ನಂ. 677.-ರೆ. ಫೈ. 142-95, ಶ್ರೀನಿವಾಸಪುರದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಸಿರಾಜ್ ಮೊಹದೀನ್ ಆಲಿಯವರಿಗೆ, 1896ನೇ ಜೂನ್ 26ನೇ ಮರ್ಕುಂ 11213.—ರೆ. ಫೈ. 142—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ಎಂಟುದಿನಗಳ ಕ್ಯಾಜುಯಲ್ ರಜಾ ಮಾಹೆಮಜಕೂರ್ 1ನೇ ತಾರೀಖು ಲಾಗಾಯತು ಉಪಯೋಗಿಸಿಕೊಂಡು ಮಾಹೆ ಮಜಕೂರ್ 7ನೇ ಮರ್ಕುಮಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುವದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗವು ಯಿದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 20ನೇ ಜುಲೈ 1896.

ನಂ. 685.—ರೆ. 275, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 171ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟು ಟ್ರೆಜರೀ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಎಂ. ರಾಮಚಂದ್ರರಾಯರಿಗೆ ಮಾಹೆಮಜಕೂರ್ 20ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 614.—ರೆ. 244, 1896ನೇ ಜುಲೈ 11ನೇ ಮರ್ಕುಂ 312.—ರೆ. 97ನೇ ನಂಬರ್ ಇಸ್ತಿಹಾರ್ ನಾಮೆಯನ್ನು ತಿದ್ದಿ ಪಡಿಮಾಡಿ ಈ ಕೆಳಗೆ ಕಂಡ ಅಸಿಸ್ಟೆಂಟ್ ಕಮಿಷನರುಗಳ ನೇಮಣೂಕಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಮೆಸ್ಟರ್ ಕೆ. ಶ್ರೀನಿವಾಸರಾಯರು ಬೆಂಗಳೂರು ಡಿಸ್ಟ್ರಿಕ್ಟಿಗೆ.

ಮೆಸ್ಟರ್ ಸಿ. ಶೇಷಾದ್ರಯ್ಯಂಗಾರ್ರು ತುಮಕೂರು ಡಿಸ್ಟ್ರಿಕ್ಟಿಗೆ.

ಇದು ಹಾಸನದಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ಮಾಡಿದ್ದ ಮೆಸ್ಟರ್ ಜೆ. ಡಬ್ಲಿಯೂ. ಸ್ಪೆಟಿಯವರ ವರ್ಗವನ್ನು ರದ್ದು ಮಾಡುತ್ತೆ.

ನಂ. 621.—ರೆ. 251, 1896ನೇ ಜುಲೈ 10ನೇ ಮರ್ಕುಂ 284—ರೆ. 81ನೇ ನಂಬರ್ ಇಸ್ತಿಹಾರ್ನಾಮೆಯನ್ನು ತಿದ್ದುಪಡಿಮಾಡಿ ಈ ಕೆಳಗೆ ಕಂಡ ಅಮಲ್ದಾರ್ರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಸಿ. ನರಸಿಂಗರಾಯರು ಜಗಲೂರಿಂದ ಮೂಡಗೆರೆಗೆ (ಕೂಡ್ಲೆ ಕೆಲಸದಮೇಲೆ ಹೋಗಿಶೇರತಕ್ಕದ್ದು.)

ವ್ಯಂಕಟ ಮಹದೇವರಾಯರು ಮುಳಬಾಗಲಿಂದ ಜಗಲೂರಿಗೆ.

2. ಇದು ದಾವಣಗೆರೆಯಿಂದ ಮೂಡಗಿರಗ ಮಾಡಿದ್ದ ಜಿ. ಆರ್. ಶ್ರೀನಿವಾಸಯ್ಯಂಗಾರ್ರ ವರ್ಗವನ್ನು ರದ್ದು ಮಾಡುತ್ತೆ.

ತಾರೀಖು 24ನೇ ಜುಲೈ 1896.

ನಂ. 948.—ರೆ. 369, ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ,—ಬುಚೇನಹಳ್ಳಿ ಗ್ರಾಮವು ಗುಂಡ್ಲುಪೇಟೇ ತಾಲ್ಲೂಕು ಹಂಗಳೆ ಹೋಬಳಿಯಿಂದ ಕೂತನೂರು ಹೋಬಳಿಗೆ ವರ್ಗಾಯಿಸಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫಾಯಿಷ್ ಆದ್ದು. [ನಂ. 30.

ಬೆಂಗಳೂರು, ಗುರುವಾರ, ಜುಲೈ ತಾ॥ 30, ಸನ 1896.

IIನೇ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲ್ಯಾಂಡ್ ಪೋರ್ಟರು ಬ್ರದರನೆರ ಡಿಟ್ಟೋ	,, 170
1	ಮದ್ರಾಸ್ ಓಕ್ಸರವರ ಡಿಟ್ಟೋ	,, 250
1	ಡಿಟ್ಟೋ ಡಿಟ್ಟೋ ಡಿಟ್ಟೋ	,, 188
1	ಡಿಟ್ಟೋ ಬೋರ್ರ್ಯಾಮರವರ ಡಿಟ್ಟೋ	,, 85

ಖರೀದಿದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{3}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 1.

ಮೃತಪಟ್ಟ ನಾಗನಾಯಕರ ಆಸ್ತೀ ವಿಷಯದಲ್ಲಿ—

ಗುಬ್ಬೀ ತಾಲ್ಲೂಕು ಕಲ್ಲೂರು ಸಮ್ಮತು ಜಾಕೇನಹಳ್ಳಿಯಲ್ಲಿ ಇರುವ ಶಿದ್ದಲಿಂಗನಾಯಕರು, ಮೃತಪಟ್ಟ ಸದರೀ ನಾಗನಾಯರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಜಾಕೇನಹಳ್ಳಿ ಸ್ಥಳದ ಶಿದ್ದಲಿಂಗನಾಯಕರು, ಜಾಕೇನಹಳ್ಳಿ ವಾಸಸ್ಥರಾಗಿ ಮೃತಪಟ್ಟ ನಾಗನಾಯಕರ ಜಿಂದಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿದ್ದಲಿಂಗನಾಯಕರ ಅರ್ಜಿಯನ್ನು ಸರ್ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗನಾಯಕರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896ನೇ ಇಸವಿ ಜುಲೈ ತಿಂಗಳ 20ನೇ ತಾರೀಖಿನಲ್ಲಿ ಕೋರ್ಟ್ ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 445.

ಮೃತಪಟ್ಟ ಕೃಷ್ಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮಾಗಡೀ ತಾಲ್ಲೂಕು ಕಸಬಾದಲ್ಲಿರುವ ರಾಮಶೆಟ್ಟರು, ಮೃತಪಟ್ಟ ಸದರೀ ಕೃಷ್ಣಯ್ಯನವರಿಗೆ ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡೀ ಸ್ಥಳದ ರಾಮಶೆಟ್ಟರು. ಮಾಗಡಿ ವಾಸಸ್ಥರಾಗಿ ಮೃತಪಟ್ಟ ಕೃಷ್ಣಯ್ಯನವರ ಜಿಂದಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸರ್1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಶೆಟ್ಟರ ಅರ್ಜಿಯನ್ನು ಸರ್ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1895—96ನೇ ಇಸವಿ ಮಿ|| ಅರ್ಜೀ ನಂಬರ್ 446.

ಮೃತಪಟ್ಟ ಶಾಮರಾಯರ ಆಸ್ತೀವಿಷಯದಲ್ಲಿ—

ಅರ್ಜೀದಾರ್ರು ಹೊಸಕೋಟೆ ಕಸಬಾದಲ್ಲಿರುವ ಅಪ್ಪೂರಾಯರು, ಮೃತಪಟ್ಟ ಸದರೀ ಶಾಮರಾಯರಿಗೆ ಅಣ್ಣನಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಸಕೋಟೇ ಸ್ಥಳದ ಅಪ್ಪೂರಾಯರು, ಹೊಸಕೋಟೇ ವಾಸಸ್ಥರಾಗಿ ಮೃತಪಟ್ಟ ಶಾಮರಾಯರ ಜಿಂದಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಪ್ಪೂರಾಯರ ಅರ್ಜಿಯನ್ನು ಸರ್ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್1896ನೇ ಇಸವಿ ಜುಲೈ ತಿಂಗಳ 22ನೇ ತಾರೀಖಿನಲ್ಲಿ ಕೋರ್ಟ್ ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡು ಆಫಿಸಿನಿಂದ.

ಇಸ್ತಿಹಾರ್.

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನಂದರೆ,—ವೆಸ್ಟ್ರನ್ ಎಕ್ಸ್‌ಟೆನ್ಷನ್ ಮಹಮದ್ ಕಮ್ಯೂನಿಟೀಗೆ ಸೇರಿದ ಈ ಕೆಳಗೆ ನಮೂದಿಸುವ ಅಳತೆಗಳುಳ್ಳ 10 ಹತ್ತು ತಾಕುಗಳು ಚಾಲತಿ ಇಸವಿ ಆಗಸ್ಟ್ 8ನೇ ತಾರೀಖು ಪ್ರಾತಃಕಾಲ $7\frac{1}{2}$ ಘಂಟೆಗೆ ಡಿಟೋ ಜಾಗಾದ ಬಳಿಯಲ್ಲೇ ಹರಾಜುಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್‌ಮಾಡಿ ಪಡದುಕೊಳ್ಳಬಹುದು:—

2. ಸವಾಲ್ ಖೈದಾದ ಕೂಡ್ಲೆ ಛಡಸವಾಲ್‌ದಾರ್ರು ಸವಾಲ್ ಮೊಬಲಗಿನ ನಾಲ್ಕರಲ್ಲಿ ಒಂದು ಹಿಸ್ಸೆಯನ್ನ ಡಿಪಾಜಿಟ್ಟಾಗಿ ಹಾಜರ್‌ಮಾಡಿ ಮಂಜೂರೀ ಆರ್ಡರ್ ಕೊಟ್ಟ 7 ಏಳು ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿಮಾಡಿ ರಶೀತಿ ಪಡದು ಜಮೀನ್ ಸುಫರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಫರ್ದುಮಾಡಿಕೊಂಡ 6 ತಿಂಗಳೊಳಗಾಗಿ ಕಟ್ಟಡವನ್ನ ಕಟ್ಟಿ ಪೂರೈಸಬೇಕು. ಕಾಮಗಾರಿಗೆ ಕ್ರಮವಾಗಿ ಪ್ಲಾನ್ ಹಾಜರ್ಮಾಡಿ ಲೈಸೆನ್ಸ್ ಪಡದುಕೊಳ್ಳಬೇಕು. ಹಾಗೆ ಕಟ್ಟಡವನ್ನ ಕಟ್ಟಿಕೊಳ್ಳದೆ ತಪ್ಪಿಹೋದಲ್ಲಿ ಲುಕ್ಸಾನಿಗೆ ಯಾವ ಈಡೂ ಇಲ್ಲದೆ ನಿವೇಶನವನ್ನ ಬೋರ್ಡಿಗೆ ಸೇರಿಸಿಕೊಂಡು ಹರಾಜು ಮಾಡಿಸಲ್ಪಡುವದು.

4. ಸವಾಲ್ ಖೈದಾದ ಕೂಡ್ಲೆ ಡಿಪಾಜಿಟ್ಟು ಹಾಜರ್ಮಾಡದೆಯಾಗಲಿ ಅಥವಾ ಮಂಜೂರೀ ಆರ್ಡರ್ ಪಡದ ಏಳು ದಿವಸದೊಳಗಾಗಿ ಪೂರಾ ವೊಬಲಗು ಪಾವತಿ ಮಾಡದೆಯಾಗಲಿ ತಪ್ಪಿದಲ್ಲಿ ಲುಕ್ಸಾನಿಗೆ ಛಡ ಸವಾಲ್‌ದಾರನ ಜವಾಬ್‌ದಾರೀ ಮೇಲೆ ಸೈಟ್ ಪುನಹ ಹರಾಜು ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ನಫೆ ಬಂದರೆ ಬೋರ್ಡಿಗೆ ಶೇರಿದ್ದಾಗಿರುತ್ತೆ.

5. ಯಾವಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾಗಲಿ ಅಂಗೀಕರಿಸುವ ಮತ್ತು ನಿರಾಕರಿಸುವ ಬಾಧ್ಯತೆಯನ್ನು ಈ ಕೆಳಗೆ ಸೈನ್ ಮಾಡಿ ಯಿರುವರು ವುಳಿಸಿಕೊಂಡು ಯಿರುತ್ತಾರೆ.

ತಾರೀಖು 21ನೇ ಜುಲೈ 1896.

ತಾಕು ನಂಬರು		ವಿಸ್ತೀರ್ಣ	ತಾಕು ನಂಬರು		ವಿಸ್ತೀರ್ನ
1	ಸುಮಾರು	$\frac{85+75}{2} \times 30$ ಅಡಿ	6	ಸುಮಾರು	$\frac{50+45}{2} \times 30$ ಅಡಿ
2	,,	$\frac{75+70}{2} \times 30$,,	7	,,	$\frac{45+42}{2} \times 30$,,
3	,,	$\frac{70+60}{2} \times 30$,,	8	,,	$\frac{42+41}{2} \times 30$,,
4	,,	$\frac{60+55}{2} \times 30$,,	9	,,	$\frac{45+55}{2} \times 30$,,
5	,,	$\frac{55+50}{2} \times 30$,,	10	,,	$\frac{55+75}{2} \times 30$,,

---

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡಿಯತಕ್ಕ ಕಾಂಗಾರಿಗಳನ್ನು ಮಾಡಿಸುವ ಬಗ್ಯಾಗಲಿ ಸಾಮಾನುಗಳನ್ನು ಅಂದರೆ ಮೆಟೀರಿಯಲ್ ಟೂಲ್ಸ್ ಮೊದಲಾದವುಗಳನ್ನು ಸಪ್ಲೈಮಾಡತಕ್ಕ ಬಗ್ಯಾಗಲಿ ವುದ್ಯುಕ್ತರಾದ ಜನರು ಮತ್ತು ಸಪ್ಲೈ ಮಾಡುತಿರುವವರುಗಳ ಹೆಸರುಗಳನ್ನೂ ಅಡ್ರೆಸಗಳನ್ನೂ ಮ್ಯುನಿಸಿಪಲ್ ಹೆಡ್ ಆಫಿಸಿನಲ್ಲಿ ಇಡಲ್ಪಟ್ಟು ಇರುವ ಬುಕ್ಕಿನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದಿಧೆ.

ಆಫಿಸ್ ಹಗಲು 11ರ ಲಾಗಾಯಿತು 5—30ರ ವರುವಿಗೆ ತೆರದು ಯಿರುವದು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರಸೀಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದುಕೊಳ್ಳುವ ಬಗ್ಯೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರಿವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫಿಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬ್‌ಗಳನ್ನು ತೆಗದುಕೊಳ್ಳತಕ್ಕದ್ದು. ಒಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸೀಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮಿಮೋ ತಯಾರ್ಮಾಡಿ ಮ್ಯುನಿಸಿಪಲ್ ಆಫಿಸಿನಲ್ಲಿ ಚಿಕಟಾಯಿಸಲ್ಪಡುವದು.

ತಾರೀಖು 18ನೇ ಮೇ 1896.

ತಾರೀಖು ನೇ ಜೂನ್ 1896.

ಕಿಲ್ಲೆ ಅಗಳತೆಯಲ್ಲಿ ಕಲ್ಲುಗಳನ್ನ ಖರೀದಿಗೆ ತೆಗದುಕೊಂಡಿರುವ ಅಶೇಷ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ,—1896ನೇ ಜುಲೈ ಗುರ್ರೀ ಲಾಗಾಯತು ಮೂರು ತಿಂಗಳ ವಳಗಾಗಿ ಕಿಲ್ಲೆ ಅಗಳತೆಯಲ್ಲಿ ವಿಕ್ರಯಿಸಲ್ಪಟ್ಟಿರುವ ಕಲ್ಲುಗಳನ್ನ ಆ ಸ್ಥಳದಿಂದ ಸಾಗಿಸಿಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಮ್ಯುನಿಸಿಪಾಲಿಟಿಗೆ ಶೇರಿಸಿಕೊಳ್ಳಲ್ಪಡುವದು.

1896ನೇ ಇಸವಿ ಸೆಪ್ಟಂಬರ್ 30ನೇ ತಾರೀಖಿನ ತರುವಾಯ ಸಾಗಿಸಲು ಅಪ್ಪಣೆ ಕೊಡುವದಿಲ್ಲ.

ತಾರೀಖು 8ನೇ ಜುಲೈ 1896.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮ್ಮಿಷನರುಗಳ ಎಲೆಕ್ಷನ್‌ಯಾನೆ ಚುನಾವಣೆಯನ್ನ ಒತ್ತಿ ಇಡುವದನ್ನ ಕುರಿತು.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂರೆ:—

ಮೈಸೂರ್ ಗವರ್ನಮೆಂಟಿನವರ ಅಪ್ಪಣೆ ಅನುಸರಿಸಿ, ಹಾಲತಿ ಸಾಲಿಗೆ ಸಿಟಿ ಮ್ಯುನಿಸಿಪಾಲಿಟಿಗೆ ಶೇರಿದ ಡಿವಿಜನ್‌ಗಳ ಕಮ್ಮಿಷನರುಗಳ ಎಲೆಕ್ಷನ್‌ಯಾನೆ ಚುನಾವಣಿಯ ತಾರೀಖು ಇತಃಪರ ನಿಷ್ಕರ್ಷೆ ಆಗತಕ್ಕ ಬಗ್ಯೆ ಮುಂದಕ್ಕೆ ಒತ್ತಿ ಇಡಲ್ಪಟ್ಟು ಇಧೆ.

ತಾರೀಖು 6ನೇ ಜುಲೈ 1896.

ಸರ್ 1896ನೇ ಇಸವಿ ಜೂನ್ 30ನೇ ಮರ್ಕ್ಯುವಿನ ಬೋರ್ಡು ಮೀಟಿಂಗಿನಲ್ಲಿ ಪ್ಯಾಸಾದ ರೆಜೊಲ್ಯೂಷನ್ ಅನುಸರಿಸಿ, ಸಾದೆ ಮತ್ತು ಇದ್ದಲು ವ್ಯಾಪಾರದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ:—

ಸಿಟಿ ಮಜ್ಕೂರಿನಲ್ಲಿ ಸಾದೆ ಮತ್ತು ಇದ್ದಲು ವ್ಯಾಪಾರದಾರರು ತಮ್ಮ ಅಂಗಡಿಗಳಲ್ಲಿ ಇದರ ಕೆಳಗೆ ಸ್ಟೈ ಮಾಡಿ ಇರುವವರಿಂದ ಕೊಡಲ್ಪಡುವ "ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ಎಂಬ" ಛಾಪೆವುಳ್ಳಂಥಾ ಕ್ರಮವಾದ ತೂಕದ ಕಲ್ಲುಗಳನ್ನ ಉಪಯೋಗಿಸಬೇಕು. ಹಾಗೆ ಛಾಪೆ ಇಲ್ಲದ ತೂಕದ ಕಲ್ಲುಗಳನ್ನ ಉಪಯೋಗಿಸಿದಂಥಾವರನ್ನ ಮೋಸಕೃತ್ಯಕ್ಕೆ ಗುರಿಮಾಡಿ ಲಾ ಅನುಸರಿಸಿ ಕ್ರಮ ನಡಿಸಲ್ಪಡುತ್ತೆ.

2. ಮೇಲೆಕಂಡ ಷರತ್ತುಗಳನ್ನ ಚಾಲತಿ ಇಸವಿ ಜುಲೈ ಗುರ್ರೇ ಲಾಗಾಯತು ಕೊಡಲ್ಪಡುವ ಲೈಸೆನ್ಸುಗಳಲ್ಲಿ ನಮೂದಿಸಲಾಗುತ್ತೆ.

3. ಈ ಸಂಬಂಧವಾದ ವ್ಯಾಪಾರದಾರರೆಲ್ಲರೂ ಒಂದೇ ನಮೂನೆಯಾದ ತೂಕದ ಕಲ್ಲುಗಳನ್ನ ಅಂಗಡಿಗಳಲ್ಲಿ ಉಪಯೋಗಿಸಬೇಕು. ಡಿಟೋ ನಮೂನೆ ಕಲ್ಲುಗಳನ್ನ ಮ್ಯುನಿಸಿಪಲ್ ಕಲೆಕ್ಷನ್ ಆಫೀಸಿನಲ್ಲಿ ನೋಡಬಹುದು. ಲೈಸೆನ್ಸ್ ತೆಗೆದುಕೊಳ್ಳುವ ವೇಳೆ ಡಿಟೋ ಕಲ್ಲುಗಳನ್ನ ಹಾಜರ್ಮಾಡಬೇಕು. ಅವುಗಳನ್ನ ಅಜಮಾಯಿಷಿಯಿಂದ ಛಾರ್ಜು ಇಲ್ಲದೆ ಛಾಪೆ ಹಾಕಿ ಕೊಡಲ್ಪಡುವದು. ಮ್ಯುನಿಸಿಪಾಲಿಟಿಯಿಂದ ಅಂಥಾ ತೂಕದ ಕಲ್ಲುಗಳನ್ನ ಸಪ್ಲೈ ಆಗಬೇಕೆಂಬ ಇಷ್ಟವುಳ್ಳವರಿಗೆ ಖರೀದಿಗೆ ಕೊಡಿಸಲಾಗುವದು.

ಟಿ. ಟಿ. ಲೆನಾರ್ಡ,
ಪ್ರಸಿಡೆಂಟ್.

ಕೋಲಾರ್ ಡಿಸ್ಟ್ರಿಕ್ಟು.

ತಾರೀಖು 17ನೇ ಜುಲೈ 1896.

ಸ್ಥಿರಸ್ವತ್ತಿನ ಹರಾಜ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಾಯಂಗುತ್ತಾ ಬಾಕಿದಾರರಾದ ಜಯ್ಯಾಚಾರ್‍ರಿಂದ ಬರಬೇಕಾದ ಕಾಯಂಗುತ್ತಾ ಬಾಕಿಗಾಗಿ ಇದರಡಿ ನಮೂದಾಗುವ ಫಾರ್ಫಿಟ್ಯಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಅಮಲ್ದಾರ್ರ ಕಚೇರೀಲಿ 1896ನೇ ಇಸವಿ ಆಗಸ್ಟ 29ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಾಯಂಗುತ್ತಾ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 44—13—3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ

ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬುದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಜಾಗ.	ಕಟ್ಟಡಗಳು. ಅಂದಾಜು ಕಿಮ್ಮತ್ತು.			ಜಮೀನು. ನಂಬರ್ ಅಥವಾ ಜಮೀನು ಇರುವ ಜಾಗ.	ಜಮೀನು. ಖುಷ್ಕಿ, ತರಿ, ಬಾಗಾಯತು.	ಜಮೀನು. ವಿಸ್ತೀರ್ಣ.		ಜಮೀನು. ಕಂದಾಯ.			ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.		
1	2	3	4	5	6			7	8	9		10			11		
					ರೂ.	ಆ.	ಪೈ.			ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.
ಕೋಲಾರು	ಶ್ರೀನಿವಾಸಪುರ	ವೆಂಕಟಾಪುರ ಗ್ರಾಮ	ಜಯ್ಯಾಚಾರಿ, ಅರ್ಧ ಗ್ರಾಮ ಅನುಭವದಾರ	..	..	..	..	ಅರ್ಧ ಗ್ರಾಮ	ಖುಷ್ಕೀ	630	1	287	7	7	44	13	3
									ತರೀ	10	36						
									ಬಾಗಾಯತು	37	16						
									ಪರಂಪೋಕು	71	13						
									ಟೋಟಲ	749	26				ಬಡ್ಡಿ ನೋಟಿಸ ಫೀ ಸಹಿತವಾಗಿ ಕೊಡಬೇಕು.		
									ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ್ದು						195–9–8		

ಸಿ. ಮಾದಯ್ಯ,
ಡೆಪ್ಯುಟಿ ಕಮಿಷನರ್.

ತುಮಕೂರ್ ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ 1896—97ನೇ ಸಾಲಿಗೆ ಅಂದರೆ, 1896ನೇ ಜುಲೈ 1ನೇ ತಾರೀಖು ಲಾಗಾಯತು 1897ನೇ ಜೂನ್ 30ನೇ ತಾರೀಖಿನ ವರಿಗೆ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಆಯಾ ತಾಲ್ಲೂಕು ಕಚೇರಿಯಲ್ಲಿ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆ. ಹರಾಜ್ ಬೆಳಿಗ್ಗೆ 11 ಘಂಟೆಗೆ ಷುರು ಆಗುತ್ತೆ.

ತಾಲ್ಲೂಕು.	ತಾರೀಖು.	ಸ್ಥಳ.
ತಿಪ್ಟೂರ್	1896ನೇ ಆಗಸ್ಟ್ 22	ತಿಪ್ಟೂರ್
ಪಾವಗಡ	ಡಿಟ್ಟೋ	ಪಾವಗಡ

2. ಅಮಲ್ದಾರು ಅಥವಾ ಶಿರಸ್ತೇದಾರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಇಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್ದಾರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಆಯಾ ತಾಲ್ಲೂಕು ಅಮಲ್ದಾರಿಂದ ಚಡ ಸವಾಲ್ದಾರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ವಂದಕ್ಕೆ ಮೂರು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ದೇಖಿಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

6. ಇಜಾರೆದಾರು ಹಿಡುವಳಿ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರು ವಿನಹ ಇತರರಿಗೆ ಮಾರಕೂಡದು.

7. ಇಜಾರೆದಾರು ಹುಲ್ಲುಬನ್ನಿ ಯಾ ಹುಲ್ಲುಗಾವಲ್ ಇಜಾರೆದಾರ ಹಕ್ಕಿಗೆ ಆತಂಕಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರು ಅಗಿಯಕೂಡದು. ವಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್ ಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್ದಾರಿಂದ ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರು ಸಾಗಿಸಕೂಡದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮ್ಮಿಷನರ್.

ಫ್ರೇಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸ್.

ತಾರೀಖು 1ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಂಡ್ಯ ತಾಲ್ಲೂಕು ಕುದರಗುಂಡಿ ಹೋಬಳಿ ಸರ್ವಮಾನ್ಯ ಗವಡಗೆರೇ ಗ್ರಾಮದ ಕೆರೆಗೆ ನೀರು ಬರತಕ್ಕ ನೀರು ಹರಿಯುವ ಹಳ್ಳದಲ್ಲಿ, ಒಂದು ಕುಡಿಕೆಯಲ್ಲಿ ದೊರಕಿದ (17—4—0) ಅಂದಾಜಾ ವುಳ್ಳ ಚಿನ್ನದ ಬುಗಡಿ ಅದದು 4 ಡಿಟ್ಟೋ ನಾಗರ ಕಡಕು 2 ಕೊಂಡ್ಲು 1 ಕಂಟಿರಾಯಿ ಹಣ 7 ಗೂಡೆಹಣ 4 ಸಹ ದೊರಕಿದ್ದಾಗಿ ಹಾಜರಾಗಿರುವದು ಅಮಾನತ್ತು ಯಿಧೆ. ಈ ನಿಕ್ಷೇಪಕ್ಕಾಗಲಿ ಅಥವಾ ಇದರ ವಂದು ಭಾಗಕ್ಕಾಗಲಿ ಹಕ್ಕುದಾರರಾಗಿ ಇರತಕ್ಕವರು ಖುದ್ದಾಗಿಯೇ ಆಗಲಿ ಅಥವಾ ವಕೀಲರ ಮುಖಾಂತ್ರವಾಗಿಯೇ ಆಗಲಿ 1896ನೇ ಇಸವಿ ಡಿಸೆಂಬರ್ ತಾರೀಖು 18ನೇ ಮಧ್ಯಾನ್ಹ ದಿವಿ 12 ಘಂಟೆಗೆ ಫ್ರೇಂಚರಾಕ್ಸ್ ಸಬ್ ಡಿವಿಜನ್ ಆಫಿಸ್ ರೂಬರೂಬ್ ಹಾಜರಾಗಿ ಅವುಗಳಲ್ಲಿ ತಮಗಿರುವ ಹಕ್ಕನ್ನ ಸ್ಥಿರಪಡಿಸಿ ಕೊಡಬೇಕು.

ಪಿ. ಪಂಚನಾಥರಾವ್,
ಸಬ್ ಡಿವಿಜನ್ ಆಫಿಸರ್

ಹಾಸನ ಡಿಸ್ಟ್ರಿಕ್ಟು.

ತಾರೀಖು 15ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಸರ್ 1896—97ನೇ ಸಾಲಿಗೆ ಬೇಲೂರು ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನು ಬೇಲೂರು ತಾಲ್ಲೂಕು ಕಚೇರಿಯಲ್ಲಿ ಬರುವ ಆಗಸ್ಟ್ 31ನೇ ತಾರೀಖಿನ ಬೆಳಿಗ್ಗೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರು ಅಥವಾ ಶಿರಸ್ತೇದಾರು ಹರಾಜು ಮಾಡುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತೆ.

4. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡೆದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್ದಾರು ಹರಾಜ್ ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡಬೇಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್ದಾರ್ರಿಂದ ಚಡಸವಾಲ್ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡ ಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ದೇಖಿಲ್ ಚಡಸವಾಲ್ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು.

6. ಇಜಾರೆದಾರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನು ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನು ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೇದಾರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನು ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನು ತೆಗೆದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನು ಜಮಾಯಿಸುವದಕ್ಕಾಗಿ ಜಮೀನುಗಳನ್ನು ಇಜಾರೆದಾರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ. ಈ ತಪ್ಸೀಲ್‌ಗಳು ನಮೂದು ಕಂಡು ತಾಲ್ಲೂಕು ಅಮಲ್ದಾರ್ರಿಂದ ವಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರು ಸಾಗಿಸಕೂಡದು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ನಗರ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 12.

ಮೃತಪಟ್ಟ ಜೇಕಬ್ ಡಿಕಾಸ್ಟಾ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶಿವಮೊಗ್ಗದಲ್ಲಿರುವ ಮನುವೇಲು ಡಿಕಾಸ್ಟಾ ಬಿನ್ ಲೋರೆನ್ಸ್ ಡಿಕಾಸ್ಟಾ, ಮೃತಪಟ್ಟ ಸದರೀ ಜೇಕಬ್ ಡಿಕಾಸ್ಟಾ ಎಂಬುವರಿಗೆ ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಮನುವೇಲು ಡಿಕಾಸ್ಟಾ ಎಂಬುವರು, ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ಜೇಕಬ್ ಡಿಕಾಸ್ಟಾ ಎಂಬುವರ ಜಿಂದಗಿ ಬಗ್ಗೆಗಿ ಬರತಕ್ಕ 1,200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮನುವೇಲು ಡಿಕಾಸ್ಟಾ ಎಂಬುವರ ಅರ್ಜಿಯನ್ನು ಸರ್ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜೇಕಬ್ ಡಿಕಾಸ್ಟಾ ಎಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 15.

ಮೃತಪಟ್ಟ ಸಂಣೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಚಿಕ್ಕಮಗಳೂರು ತಾಲ್ಲೂಕು ಮಾಗಡಿ ವಾಸಿಗಳಾದ 1ನೇ ಕದರೇಗವುಡ ಬಿನ್ ಸಂಣೇಗವುಡ, 2ನೇ ನರಸೇಗವುಡ ಬಿನ್ ದಾಸೇಗವುಡ, ಮೃತಪಟ್ಟ ಸದರೀ ಸಂಣೇಗವುಡರಿಗೆ 1ನೇ ಯವನು ಮಗ 2ನೇ ಯವನು ಅಂಣ ಆಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ಮಾಗಡಿ ಸ್ಥಳದ 1ನೇ ಕದರೇಗವುಡ, 2ನೇ ನರಸೇಗವುಡ ಎಂಬುವರು, ಸದರೀ ಮಾಗಡಿ ವಾಸಸ್ಥರಾಗಿ ಮೃತಪಟ್ಟ ಸಂಣೇಗವುಡರ ಜಿಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಕದರೇಗವುಡ, 2ನೇ ನರಸೇಗವುಡ, ಎಂಬುವರ ಅರ್ಜಿಯನ್ನು ಸನ್ 1896ನೇ ಇಸವಿ ಆಗಸ್ಟು ತಿಂಗಳ ತಾರೀಖು 28ರಲ್ಲು ಕೇಳಿ ಸರಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಂಣೇಗವುಡರ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ಜುಲೈ ತಿಂಗಳ 13ನೇ ತಾರೀಖಿನಲ್ಲಿ ಕೋರ್ಟ್ ಮೊಹರ ನಿಂ ನಮ್ಮ ದಸ್ತುಖತ್ತುಸಹ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ ಜಡ್ಜ್.

Mysore Govt. Central Press, Bangalore.—1896.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಪ್ ಆದ್ದು. [ನಂ. 31.

ಬೆಂಗಳೂರು, ಗುರುವಾರ, ಆಗಸ್ಟ್ ತಾ|| 6, ಸನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಹೊರೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ ವ ಯಜ್ಯುಕೇಷನ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಹೊರೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್‍ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಹೊರೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 13ನೇ ಜುಲೈ 1896.

ನಂ. 614.—ಲೋ. ಫಂ. 257.—92, ಸನ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ ರೆಗ್ಯುಲೇಷನಿನ 6ನೇ ಸೆಕ್ಷನ ಅನುಸರಿಸಿ, ಪ್ರಸಿದ್ಧ ಪಡಿಸುವದೇನಂದರೆ,—ಇದರಡಿ ಕಂಡ ಖಾಲೀ ಕಟ್ಟಡ ಜಾಗಾಗಳು ವ ಕಟ್ಟಡಗಳು ಸರ್ಕಾರ ಕೆಲಸಕ್ಕೆ ಅಂದರೆ ಅಜ್ಜಂಪುರದಲ್ಲಿ ಖಸವನ ಭಾವಿಗೆ ಹೋಗುವ ಗಲ್ಲಿಯನ್ನ ವಿಸ್ತರಿಸುವ ಬಗ್ಗಾಗಿ ಬೇಕಾಗಿರುತವೆ:—

ಷಹರಿನ ಹೆಸರು—ಅಜ್ಜಂಪುರ ಷಹರ್
ಹಿಡುವಳಿದಾರ್‍ರ ಹೆಸರು—ಬಿ. ಶಂಕರಪ್ಪ
ಬೇಕಾಗಿರುವ ಜಮೀನಿನ ತಪಶೀಲ್—ಹೆಂಚಿನಮನೆ
ಬೀಜವರಿ—480 ಚದುರಡಿಗಳು

ಚಕ್ಕು ಬಂದಿ:—

ಉತ್ತರಕ್ಕೆ—ಸದರೀ ಮನೆಯ ಉಳಿದಭಾಗ
ಪೂರ್ವಕ್ಕೆ—ನಡಿಯುವ ಗಲ್ಲಿ
ದಕ್ಷಿಣಕ್ಕೆ—ಮ್ಯುನಿಸಿಪಲ್ ಚರಂಡಿ
ಪಶ್ಚಿಮಕ್ಕೆ—ಮ್ಯುನಿಸಿಪಲ್ ರಸ್ತೆ

ಷರಾ:—

ಲಾಂಬಿ—ಉತ್ತರ ದಕ್ಷಿಣ 80 ಅಡಿಗಳು
ರುಂದಿ—ಪೂರ್ವ ಪಶ್ಚಿಮ 6 ಅಡಿಗಳು

ತಾರೀಖು 21ನೇ ಜುಲೈ 1896.

ನಂ. 1102.—ಲೋ. ಫಂ. 114—92, ಸನ್ 1894ನೇ ಇಸವಿಯ VIIನೇ ನಂ. ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧ ಪಡಿಸುವದೇನಂದರೆ,—ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮನೆಗಳೂ ಮತ್ತು ಹಿತ್ತಲುಗಳೂ ಸರ್ಕಾರ ಕೆಲಸಕ್ಕೆ ಅಂದರೆ, 1894ನೇ ಜೂನ್ ತಾ 14ನೇ ಮರ್ಸ್ಯಂ 22998.—ಲೋ. ಫಂ. 257-92ನೇ ನಂಬರ್ ಗವರ್ನ್‌ಮೆಂಟ್ ಪ್ರೊಸಿಡಿಂಗ್ಸ್ ಅನುಸರಿಸಿ ತೆಗದುಕೊಳ್ಳಲ್ಪಟ್ಟ ಸ್ಥಳಕ್ಕೆ ಷಹರ ಮಧ್ಯದಲ್ಲಿರುವ ಈ ಕೆಳಗೆ ಕಂಡ ಮಾದರು ಹೊಲಗೇರಿಗಳನ್ನು ಬದಲಾಯಿಸಿ ಚಿಕ್ಕಮಗಳೂರು ಷಹರಿನ ಆರೋಗ್ಯಾಭಿವೃದ್ಧಿಗಾಗಿ ಬೇಕಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಬೀದಿಯ ಹೆಸರು.	ಹಿಡುವಳಿದಾರರ ಹೆಸರುಗಳು.	ಮನೆಗಳ ಮತ್ತು ಹಿತ್ತಲುಗಳ ತಪಸೀಲ್.	ತಿದ್ದುಪಡಿಯಾದ ಮ್ಯುನಿಸಿಪಾಲಿಟಿ ನಂಬರು.	ತೆಗದುಕೊಳ್ಳಬೇಕಾದ ವಿಸ್ತೀರ್ಣ. ಮನೆಗಳು ಲಾಂ. + ರುಂ. ಗಜಗಳು.	ಹಿತ್ತಲುಗಳು. ಲಾಂ. + ರುಂ. ಗಜಗಳು.	ಜುಮ್ಲಾ.	ಚಕ್ಕುಬಂದಿ. ಉತ್ತರ.	ಪೂರ್ವ.	ಪಶ್ಚಿಮ.	ದಕ್ಷಿಣ.	ವ್ಯವಸ್ಥೆಯಾದ ಲಾಗವಡು ಮೊಬಲಗು.	ಷರಾ.
													ರೂ.	
ಕಡೂರು.	ಚಿಕ್ಕಮಗಳೂರು.	ನಂ. 1, ಜೈಲ್ ರಸ್ತೆ ಯಲ್ಲಿರುವ ಸಂತೆ ಹೊಲಗೇರಿ.	ಝೂಡಮಾಲಿ ಚೆಲುವ	ಹುಲ್ಲಿನ ಮನೆ	617	40	56	96	ಬಾಡಿ ಲೈನಿಗೆ ಹೋಗುವ ರಸ್ತೆ.	ಜೈಲರಸ್ತೆ.	ಮ್ಯುನಿಸಿಪಲ್ ಗಡಿ.	ಮ್ಯುನಿಸಿಪಲ್ ಗಡಿ.	40	
			ಡಿಟ್ಟೋ ಮಧರೆ	ಡಿಟ್ಟೋ	618	56	35	91					45	
			ದೊಡ್ಡ ಈರ	ಡಿಟ್ಟೋ	619	15	60	75					25	
			ಬಲಗೈ ದಾಸಿ	ಹೆಂಚಿನ ಮನೆ	620	40	60	100					145	
			ಕೆಂಗೀ ತಿಮ್ಮ	ಡಿಟ್ಟೋ	621	35	60	95					135	
			ತಿಮ್ಮ ಗರ್ಬಿ ಹನುಮ	ಡಿಟ್ಟೋ	622	35	60	95					135	
			ದೊಡ್ಡ, ಎಂ. ಕಾನನ ಹೆಂಡತಿ	ಡಿಟ್ಟೋ	623	35	60	95					135	
			ಸಂತೇಹಳ್ಳಿ ರಂಗ	ಡಿಟ್ಟೋ	624	35	60	95					135	
			ದೊಡ್ಡ	ಡಿಟ್ಟೋ	625	63	70	133					229½	
			ಮರಿಭೈರ	ಡಿಟ್ಟೋ	626	64	88	152					232	
			ಹೊಸಬ	ಹುಲ್ಲಿನ ಮನೆ	627	30	84	114					41	
			ರಂಗ ಬಿನ್ ಸಂತೇಹಳ್ಳಿ ಗುಬ್ಬಿ	ಡಿಟ್ಟೋ	628	36	78	114					43½	
			ತಪ್ಪನ	ಡಿಟ್ಟೋ	629	30	84	114					41	
			ಮರಿಗುಡಿ	ಡಿಟ್ಟೋ	630	70	63	133					250	
			ಜುಮ್ಲಾ		..	..	..	..	..	..	..	..	1,632	
ಕಡೂರು.	ಚಿಕ್ಕಮಗಳೂರು.	ನಂ. 2, ಬಸವನಹಳ್ಳಿ ಹೊಲಗೇರಿ.	ಹುಲ್ಲಿ ಚಿಕ್ಕ	ಹುಲ್ಲಿನ ಮನೆ	1685	28—9	66	103	ಬಸವನಹಳ್ಳಿಗೆ ಹೋಗುವ ರಸ್ತೆ.	ಆಕ್ಕ್ಯಾಯಿಕಟ್ಟೆ ಮತ್ತು ಬಸವನಹಳ್ಳಿ ಕೆರೆ.	ಕಡೂರು ಮಂಗಳೂರು ರಸ್ತೆಗೆ ಹೋಗುವ ದಾರಿ ಯಾ ಅಗಸರ ಬೀದಿ.	ಕಡೂರು, ಮಂಗಳೂರು ರಸ್ತೆ.	51	
			ಬಲಗೈ ತಿಮ್ಮ	ಡಿಟ್ಟೋ	1686	18	18	36					37	
			ಹೊಸನದ ಕಾಳ	ಬಂಜರ್ ಜಮೀನು	1687	..	42	42					10	
			ದೊಡ್ಡಬೀರ ಬುಳ್ಳಿ	ಹುಲ್ಲಿನ ಮನೆ	1688	24	42	66					26½	
			ಬೂದಿ ಚಿಕ್ಕ	ಡಿಟ್ಟೋ	1689	18	60	78					27	
			ಬಲಗೈ ಮರಿದೊಡ್ಡ	ಡಿಟ್ಟೋ	1690	28	28	56					25	
			ಡಿಟ್ಟೋ	ಡಿಟ್ಟೋ	..	28	204	232					79½	

ಕಡೂರು.	ಚಿಕ್ಕ ಮಗಳೂರು.	ನಂ. 2 ಮಸನಹಳ್ಳಿ ಹೋಬಳಿ.	ಬಲಗೈ ಮರಿದೊಡ್ಡ	ಬಂಜರ್ ಜಮೀನು	..	..	42	42	ಮಸನಹಳ್ಳಿಗೆ ಹೋಗುವ ದಾರಿ	ಅಕ್ಕ್ರಾಯಿ ಕಟ್ಟೆ ಮತ್ತು ಮಸನಹಳ್ಳಿ ಕೆರೆ	ಕಡೂರು, ಮಂಗಳೂರು ರಸ್ತೆಗೆ ಹೋಗುವದಾರಿ ಯೂ ಅಗಸರಬೈಲು.	ಕಡೂರು, ಮಂಗಳೂರು ರಸ್ತೆ	..	* ದೇವಸ್ಥಾನದ್ದರಿಂದ ತೆಗೆದುಕೊಳ್ಳತಕ್ಕದ್ದಲ್ಲ. *ಗುಡಿ ಆದ್ದರಿಂದ ತೆಗೆದುಕೊಳ್ಳತಕ್ಕದ್ದಲ್ಲ.
			ಮಲ್ಲ ಬಿನ್ ಕೊರಬ	ಹುಲ್ಲಿನ ಮನೆ	1691	21	55	76					41	
			ಮಲ್ಲ ಬಿನ್ ಕೊರಕ	ಬಂಜರ್ ಜಮೀನು	..	12	20	32					..	
			ಸಿದ್ದ ಬಿನ್ ಈರಮಲ್ಲ	ಹುಲ್ಲಿನ ಮನೆ	1692	28	..	28					18	
			ಕುರುವಂಗಿ ರಂಗ	ಡಿಟೋ	1693	18		18					12	
			ದೊಡ್ಡನಮಗ ಮಿರ್ಜಾ	ಡಿಟೋ	1694	15	..	15					10	
			ಕುಳುವಾಡಿ ದ್ಯಾವ	ಡಿಟೋ	1695	18	..	18					20	
						12		12						
			ಚಿಕ್ಕಬಲಗೈ ಮೋಟ	ಡಿಟೋ	1696	28		28					18	
			ಮರಿದಾಸಿ ದಾಸ	ಡಿಟೋ	1697	32	112	144					50	
			ದಾಸಿ ಜವರ	ಡಿಟೋ	1698	40	42	82					36	
			ಮಲ್ಲನ ತಿಮ್ಮ	ಡಿಟೋ	1699	28	..	28					18	
			ನೀಲ ಬಿನ್ ಜವರ	ಡಿಟೋ	1700	20	..	20					50	
						40	40	80						
			ನೀಲನ ಮಲ್ಲಿ	ಡಿಟೋ	1701	24	..	24					38	
			ಡಿಟೋ ನೀಲನ ಕೊಟ್ಟಿಗೆ	ಡಿಟೋ	..	20	..	20						
			ಸಗಣ ಬಿನ್ ಸಣ್ಣ	ಡಿಟೋ	1702	24	60	84					47	
			ಡಿಟೋ ಕೊಟ್ಟಿಗೆ	ಡಿಟೋ	..	24	..	24						
			ಮರಿಷಕುನ	ಡಿಟೋ	1703	30	..	30					20	
			ಸಗಣ ಬಿನ್ ಸಣ್ಣ	ಡಿಟೋ	1704	15	..	15					28	
			ಡಿಟೋ ಕೊಟ್ಟಿಗೆ	ಡಿಟೋ	..	28	..	28						
			ಲಕ್ಷ್ಮಿಯ ದೇವಸ್ಥಾನ	ಹೆಂಚಿನ ಮನೆ	1705	12	..	12					*	
			ಕರಿಕ್ ತಿಮ್ಮನಸಣ್ಣ	ಹುಲ್ಲಿನ ಮನೆ	1706	27	168	195					55	
			ಸಿದ್ದ ಬಿನ್ ಕರಿಕೆರೆ ತಿಮ್ಮ	ಡಿಟೋ	1707	28	105	133					58	
			ಡಿಟೋ	ಡಿಟೋ		20	..	20						
			ರಾಮನಹಳ್ಳಿ ಸಗಣಿ	ಡಿಟೋ	1708	28	..	28					14	
			ಹೊಸಬ ಸಣ್ಣ	ಡಿಟೋ	1709	24	..	24					16	
			ದುಮ್ಮೇನಹಳ್ಳಿ ಕೆಂಚ	ಡಿಟೋ	1710	40	..	40					26	
			ಹಾಲ್ಮಿಡಿ ಕಾಳ	ಡಿಟೋ	1711	40	..	40					26	
			ಕುಳುವಾಡಿ ದಾಸ	ಡಿಟೋ	1712	20	72	92					32	
			ಪೂಜಾರಿ ಸಗಣಬಕ್ಕ	ಡಿಟೋ	1713	45	24	69					36	
			ಡಿಟೋ	ಡಿಟೋ	1714	24	28	52					23	
			ಕಾಳ ಬಿನ್ ದೊಡ್ಡಮರಿ ಸಗಣ	ಡಿಟೋ	1715	50	144	194					70	
			ದಾಸ ಬಿನ್ ಕುಳುವಾಡಿ ಕೆಂಚ	ಡಿಟೋ	1716		45	45					11	
			ಮಾರಿಯಗುಡಿ	ಹೆಂಚಿನ ಮನೆ	1717	90		90					*	
			ಜುಮ್ಲಾ	..	..	..	..	..	..	..	..	..	1,029	

ಡಿಸ್ಟ್ರಿಕ್ಟು.	ತಾಲ್ಲೂಕು.	ಬೀದಿಯ ಹೆಸರು.	ಹಿಡುವಳಿದಾರರ ಹೆಸರುಗಳು.	ಮನೆಗಳ ಮತ್ತು ಹಿತ್ತಲುಗಳ ತಪಶೀಲ್.	ತಿದ್ದುಪಡಿಯಾದ ಮ್ಯುನಿಸಿಪಾಲಿಟಿ ನಂಬರು.	ತೆಗೆದುಕೊಳ್ಳಬೇಕಾದ ವಿಸ್ತೀರ್ಣ.			ಚೆಕ್ಕುಬಂದಿ.				ವ್ಯವಸ್ಥೆಯಾದ ಲಾಗವಡು ಮೊಬಲಗು.	ಷರಾ.
						ಮನೆಗಳು ಲಾಂ. + ರುಂ. ಗಜಗಳು.	ಹಿತ್ತಲುಗಳು ಲಾಂ. + ರುಂದಿ. ಗಜಗಳು.	ಜುಮ್ಲಾ.	ಉತ್ತರ.	ಪೂರ್ವ.	ಪಶ್ಚಿಮ.	ದಕ್ಷಿಣ.	ರೂ.	
ಕಡೂರು.	ಚಿಕ್ಕಮಗಳೂರು.	ನಂ. 3, ಫ್ರೀಡಕ್ ಮೆ|| ಮಲ್ಲಾರಿ ರಾಯರ ಮನೆಯ ಸಮೀಪದ ಹೊಲಗೇರಿ.	ಪೂಜಾರಿ ಮರಿಗುಡ್ಡಿ ..	ಹುಲ್ಲಿನ ಮನೆ	339	16	..	16	ವೇದಾವತಿ ನಾಲೆಯ ಮೇಲಿನ ಬಂಜರ್ ಜಮೀನು.	ವಸ್ತಾರಾ ರಸ್ತೆ.	ಮ್ಯುನಿಸಿಪಲ್ ಗಡಿ ಮತ್ತು ವೇದಾವತಿ ನಾಲಾ.	ಮ್ಯುನಿಸಿಪಲ್ ಗಡಿ.	20	
			ಪೂಜಾರಿ ಚನ್ನಯ್ಯ ..	ಡಿಟೋ.	340	42	192	234					76	
			ಕ್ರಿಸ್ತರ ರಾಜಲು. ..	ಡಿಟೋ	341	48	96	144					156	
			ಷರಾಬ್ ವೆಂಕಟಪ್ಪ .. ಖಾತೇದಾರ್ ಜಾಕಿ ಫರ್ನಾಂಡಿಸ್ ..	ಹೆಂಚಿನ ಮನೆ	343	264	..	264					300	
			ಜುಮ್ಲಾ ..	..	..	..	..	..	..	..	..	..	552	

			ರೂ.
ನೋಟ್.—ನಂ. 1ನೇ ಹೊಲಗೇರಿಯ ಲಾಗವಡು ಮೊಬಲಗು	..	..	1,632
ನಂ. 2ನೇ ಡಿಟೋ ಡಿಟೋ	..	..	1,029
ನಂ. 3ನೇ ಡಿಟೋ ಡಿಟೋ	..	..	552
ಸರ್ 1894ನೇ ಜೂನ್ 14ನೇ ಮರ್ಕುಂ 22998.—ಲೋ. ಫಂ. 257—94ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಅನುಸರಿಸಿ ತೆಗೆದುಕೊಳ್ಳಲ್ಪಟ್ಟ ಜಮೀನುಗಳ ಲಾಗವಡು ಮೊಬಲಗು		..	557
ಜುಮ್ಲಾ ಮಂಜೂರಾಗಿರುವ ಲಾಗವಡು ಮೊಬಲಗು		..	3,800 ಮಾತ್ರ.

ತಾರೀಖು 18ನೇ ಜುಲೈ 1896.

ನಂ. 977.—ಲೋ. ಫಂ. 257.—92, ಸನ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ ರೆಗ್ಯುಲೇಷನಿನ ನಿಯಮಗಳನುಸರಿಸಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕಟ್ಟತಕ್ಕ ಖಾಲೀ ಜಾಗಗಳು ಮತ್ತು ಕಟ್ಟಡ ಸರ್ಕಾರ್ ಕೆಲಸಕ್ಕೆ ಅಂದರೆ ಚಿಕ್ಕಮಗಳೂರ ಷಹರಿನ ಪಶ್ಚಿಮ ದಿಕ್ಕಿನ ಬಡಾವಣೆ ಬಗ್ಗ್ಯಾಗಿ ಬೇಕಾಗಿರುತವೆ:—

ನಂಬರು.	ಷಹರಿನ ಹೆಸರು.	ಸೈಟ್ ನಂಬರ್	ಹಿಡುವಳಿದಾರರ ಹೆಸರುಗಳು.	ಬೇಕಾಗಿರುವ ಜಮೀನುಗಳ ತಪಸೀಲ್.	ಬೀಜವರಿ:	ಚೆಕ್ಕುಬಂದಿ.			
						ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
					ಚದರ ಗಜ				
1	ಚಿಕ್ಕಮಗಳೂರು	161	ನಾಡಿಗ ಜನಾರ್ದನಯ್ಯನವರು	ಖಾಲೀ ಜಾಗ	$778\frac{2}{3}$	ಚಿಕ್ಕಮಗಳೂರು, ಸಾಂತವೇರಿ ರಸ್ತೆ	ಪಶ್ಚಿಮ ದಿಕ್ಕಿನ ಬಡಾವಣೆಯಲ್ಲಿರುವ 6ನೆ ನಂ. ಮುಖ್ಯ ರಸ್ತೆ	ಸೀತಾರಾಮಯ್ಯನವರ 162ನೇ ನಂ. ಖಾಲೀ ಜಾಗ	ನೀರಿನ ಕಾಲುವೆ
2		162	ನಾಡಿಗ ಸೀತಾರಾಮಯ್ಯನವರು	ಡಿಟೋ	$661\frac{2}{9}$	ಡಿಟೋ	ಡಿಟೋ	ಮೆ|| ಕೃಷ್ಣಪ್ಪನವರ ಮನೆ ಮತ್ತು 163ನೇ ನಂ. ಖಾಲೀ ಜಾಗ	ಜನಾರ್ದನಯ್ಯನವರ 161ನೇ ನಂ. ಖಾಲಿ ಜಾಗ
3		163	ಫೀಡರ್ ಮೆಸ್ಟರ್ ಕೃಷ್ಣಪ್ಪನವರು	ಹೆಂಚಿನಮನೆ	157	ಡಿಟೋ	ಡಿಟೋ	ಪಶ್ಚಿಮ ದಿಕ್ಕಿನ ಬಡಾವಣೆಯ ಸೈಟ್ ನಂ. 366	ಸೀತಾರಾಮಯ್ಯನವರ ಖಾಲಿ ಜಾಗ ನಂ. 162
		163	ಡಿಟೋ	ಖಾಲೀ ಜಾಗ	481	ಡಿಟೋ	ಡಿಟೋ	ಡಿಟೋ	ಡಿಟೋ

ತಾರೀಖು 22ನೇ ಜುಲೈ 1896.

ನಂ. 1181.—ಲೋ. ಫಂ. 257.—92, ಸನ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ ರೆಗ್ಯುಲೇಷನಿನ ನಿಯಮಗಳನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕಟ್ಟಡಗಳು ಸರ್ಕಾರ್ ಕೆಲಸಕ್ಕೆ ಅಂದರೆ (1) ಗೊಬ್ಬರವನ್ನ ಜಮಾಯಿಸುವದಕ್ಕೂ ಮತ್ತು (2) ಚಿತ್ರದುರ್ಗ ಷಹರಿನಲ್ಲಿ ಮುಸಲ್ಮಾನರ ಖಬರಸ್ತಾನ ಬಡಾಯಿಸುವದಕ್ಕೂ ಅವಶ್ಯಕವಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಅನುಭವದಾರರ ಹೆಸರುಗಳು.	ಅವಶ್ಯಕವಾಗಿರುವ ಜಮೀನುಗಳ ತಪ್ಸೀಲ್.				ಚೆಕ್ಕುಬಂದಿ.			
					ವಿವರ.	ಸರ್ವೇ ನಂ.	ಬೀಜವರಿ.	ಬೇರೀಜು.	ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.
							ಎ. ಗುಂ.	ರೂ. ಆ. ಪೈ.				
ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ	ಮೆದೇಹಳ್ಳಿ	1. ಹೊಸೂರ ಬಿನ ಹೊಸೂರ	ಖುಷ್ಕಿ	67	0—19	0—4—0	ಸರ್ವೇ ನಂ. 63	ಸರ್ವೇ ನಂಬರ್ 68	ಚಿತ್ರದುರ್ಗದಿಂದ ಮೆದೆಹಳ್ಳಿಗೆ ಹೋಗುವ ರಸ್ತೆ	ಸರ್ವೇ ನಂ. 66
				2. ಷೇಕ್ ಅಬ್ದುಲ್ಲ ಬಿನ ಖಾಸಿಂಸಾಹೆಬ್	ಖುಷ್ಕಿ	66	1—20	0—11—4	ಡಿಟೋ 65	ಡಿಟೋ 69	ಸರ್ವೇ ನಂ. 67	ಸರ್ವೇ ನಂ 66ರ ಉಳಿದ ಭಾಗ.

ತಾರೀಖು 24ನೇ ಜುಲೈ 1896.

ನಂ. 1346.—ಮಿ. ಫೈ. 5–95, ಚೀಫ್ ಸೆಕ್ರಟೆರಿಯವರಾದ ಮೆಸ್ಟರ್ ಟಿ. ಆನಂದರಾಯರಿಗೆ, 1896ನೇ ಏಪ್ರೆಲ್ 25ನೇ ಮುರ್ಕಂ ಸಿ. 207ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ರಜಾ ಇನ್ನೂ ಮೂರು ತಿಂಗಳ ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 27ನೇ ಜುಲೈ 1896.

ನಂ. 1372.—ಪಿ. 239, ಸನ 1896ನೇ ಮೇ 5ನೇ ಮುರ್ಕಂ 12229.—ಜು. 1389 ಮತ್ತು ಜೂನ 26ನೇ ಮುರ್ಕಂ 13845.—ಜು. 1596ನೇ ನಂಬರುಗಳ ಇಸ್ತಿಹಾರ್ನಾಮೆಗಳಿಗೆಬದಲಾಗಿ ಪ್ರಸಿದ್ಧಪಡಿಸುವದೇನಂದರೆ,—ಮೈಸೂರ್ ಸರ್ವಿಸ್ ರೆಗ್ಯುಲೇಷನ

ಗಳ 173ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟು ಪೊಲೀಸ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರ ಮಿಸ್ಟರ್ ಆರ್. ಬಿ. ಫ್ಲ್ಯಾವರ್ ಯವರಿಗೆ, 1896ನೇ ಮೇ 16ನೇ ತಾರೀಖು ಲಾಗಾಯತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 1391.—ಜು. 141, ಸ್ 1877ನೇ ಇಸವಿಯ IIIನೇ ರಜಿಸ್ಟ್ರೇಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಮೈಸೂರ್ ಗವರ್ನಮೆಂಟಿನವರು ಈ ಕೆಳಗೆ ಕಂಡ ವರ್ಗಾವರ್ಗಿಗಳೂ ಮತ್ತು ನೇಮಣೂಕಯೂ ಹುಕುಂ ಮಾಡಿರುತ್ತಾರೆ:—

(1) ನಂಜನಗೂಡಿನ 1ನೇ ಗ್ರೇಡ್ ಸಬ್ ರಜಿಸ್ಟ್ರಾರ್ ಎಚ್. ಚಿಂತಾಮಣಿರಾಯರು, ರವಿನ್ಯೂ ಇಲಾಖೆಗೆ ವರ್ಗ ಮಾಡಲ್ಪಟ್ಟ ಎಂ. ರಂಗನಾಥರಾಯರಿಗೆ ಬದಲಾಗಿ ಮೈಸೂರಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

(2) ಎಡತೊರೆಯ 1ನೇ ಗ್ರೇಡ್ ಸಬ್ ರಜಿಸ್ಟ್ರಾರ ಟಿ. ಶೇಷಾದ್ರಯ್ಯಂಗಾರ್ರು, ಎಚ್. ಚಿಂತಾಮಣಿರಾಯರಿಗೆ ಬದಲಾಗಿ ನಂಜನಗೂಡಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

(3) ಮೈಸೂರ್ ಡೆಪ್ಯುಟಿ ಕಮ್ಮಿಷನರ್ ಆಫೀಸ್ ರಿಕಾರ್ಡ್ ಕೀಪರ ಈ. ಸಿ. ಸದಾಶಿವಪಿಳ್ಳೆಯವರು, 1ನೇ ಗ್ರೇಡ್ ಸಬ್ ರಜಿಸ್ಟ್ರಾರ್ರಾಗಿ ಮೊಕರರ್ ಮಾಡಲ್ಪಟ್ಟ ಟಿ. ಶೇಷಾದ್ರಯ್ಯಂಗಾರ್ರಿಗೆ ಬದಲಾಗಿ ಎಡತೊರೆಗೆ ನೇಮಿಸಲ್ಪಟ್ಟಿರುತ್ತಾರೆ.

ನಂ. 1429.—ಲೋ. ಫಂ. 44.-96, ಮಿಸ್ಟರ ಜೆ. ಕ್ಯಾಮರ್ರ ಯವರನ್ನ, 1895ನೇ ಆಕ್ಟೋಬರ್ 21ನೇ ತಾರೀಖು ಲಾಗಾಯತು ಪುನಹ ಮೂರು ವರುಷಗಳ ಕಾಲದ ವರಿವಿಗೆ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಲಾಲಬಾಗ್ ಡಿವಿಜನಿನ ಮೆಂಬರಾಗಿ ಗವರ್ನಮೆಂಟಿನವರು ಪುನಸ್ಚ ಮೊಕರರ್ ಮಾಡಿರುತ್ತಾರೆ.

ತಾರೀಖು 28ನೇ ಜುಲೈ 1896.

ನಂ. 1453.—ಜು. 148, ಸ್ 1894ನೇ ಇಸವಿಯ ಮೈಸೂರ್ ಜೈಲ್ ಮ್ಯಾನ್ಯುಯಲಿನ 24 ವ 37ನೇ ಪುಟಗಳಲ್ಲಿ ಛಾಪಿಸಿರುವ 125 ಮತ್ತು 202ನೇ ರೂಲುಗಳಿಗೆ ಈ ಕೆಳಗೆ ಕಂಡ ಜಾಸ್ತೀ ಅಂಶಗಳು ಸೇರಿಸಲ್ಪಡಬೇಕೆಂದು ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

125 A. ಜೈಲಿಗೆ ದಾಖಲ್ಮಾಡಿಕೊಳ್ಳುವದಕ್ಕೆ ತರಲ್ಪಟ್ಟ ಯಾ ಸಾಕ್ಷಿಗಾಗಿ ಕೋರ್ಟಿಗೆ ಕಳುಹಿಸಲ್ಪಟ್ಟು ಮತ್ತು ಅಲ್ಲಿಂದ ಜೈಲಿಗೆ ವಾಪಸು ಬರುವ ಬಬ್ಬ ಸಿವಿಲ್ ಖೈದಿಯು ಅವನ ಹಾಗೆ ತರಲ್ಪಡಬಹುದಾದ ಯಾ ವಾಪಸು ಬರಬಹುದಾದ ಯಾವ ದಿನದಲ್ಲಾಗಲಿ ಮತ್ತು ಯಾವ ಘಂಟೆಯಲ್ಲಾಗಲಿ ಸೇರಿಸಿಕೊಳ್ಳಲ್ಪಡತಕ್ಕದ್ದು.

202 A. ಯಾವ ಖೈದಿಯಾಗಲಿ ಭಾನುವಾರಗಳು, ಕ್ರಿಸ್ತಮಸ್ ದಿನ ಯಾ ಗುಡ್‌ಫ್ರೈಡೆ ಯಾ ಲಾಕಪ್ಪಿನ ಕಾಲ ಮಿಾರಿದ ತರುವಾಯ ಯಾವ ದಿನದಲ್ಲಾಗಲಿ ಜೈಲಿಗೆ ಸೇರಿಸಿಕೊಳ್ಳಲ್ಪಡಕೂಡದು; ಆದರೆ ಜೈಲಿನಿಂದ ದರ್ಯಾಫ್ತಿ ಬಗ್ಗೆ ಯಾ ಸಾಕ್ಷಿಗಳಾಗಿ ಕಳುಹಿಸಲ್ಪಟ್ಟ ಖೈದಿಗಳು ಅವರು ಯಾವ ಕಾಲದಲ್ಲಿ ವಾಪಸು ಬಂದ ಗ್ಯೂ ಮರಳಿ ಸೇರಿಸಿಕೊಳ್ಳಲ್ಪಡತಕ್ಕದ್ದು.

ತಾರೀಖು 29ನೇ ಜುಲೈ 1896.

ನಂ. 1559.—ಜು. 159, ಸ್ 1896ನೇ ಇಸವಿ ಜುಲೈ 21ನೇ ಮರ್ಸ್ಸುಂ 1159.—ಜು. 117ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಹುಕುಂ ಆದ ಮೈಸೂರ್ ಆಕ್ಟಿಂಗ್ ಮುನ್ಸಿಫ್‌ರಾದ ಮಿಸ್ಟರ್ ಎಸ್. ಶೇಷಗಿರಿರಾಯರಿಗೆ, ಚಿಕ್ಕಮಗಳೂರಿಗೆ ಆಗಿದ್ದ ವರ್ಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 22ನೇ ಜುಲೈ 1896.

ನಂ. 831.—ರೆ. ಪ್ರೈ. 127.—95, ಶಿವಮೊಗ್ಗಾ ಡಿಸ್ಟ್ರಿಕ್ಟು ನಗರ ತಾಲ್ಲೂಕಿನ ಅಮಲ್‌ದಾರ್ ಕೆ. ಜಿ. ಅನಂತರಾಮಯ್ಯಂಗಾರ್ರಿಗೆ, 1896ನೇ ಏಪ್ರಿಲ್ 16ನೇ ಮರ್ಸ್ಸುಂ 9444.-ರೆ. ಪ್ರೈ. 127—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೇಜ್ ರಜಾ 1896ನೇ ಏಪ್ರಿಲ್ 22ನೇ ತಾರೀಖಿನ ಮಧ್ಯಾಹ್ನಾತ್ಪರದ ಲಾಗಾಯತು ಉಪಯೋಗಿಸಿಕೊಂಡು 1896ನೇ ಜುಲೈ 6ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸ್ ಬಂದಿರುವದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗವನ್ನ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 872.-ರೆ. 343, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟು ಕೊರಟಗೆರೇ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ಬಿ. ವಾಸುದೇವರಾಯರಿಗೆ, 1896ನೇ ಜುಲೈ 18ನೇ ಮರ್ಸ್ಸುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಏಳು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಮದ್ದಗಿರೀ ತಾಲ್ಲೂಕು ಅಮಲ್‌ದಾರ್ರು ತಮ್ಮ ಕೆಲಸಗಳೊಂದಿಗೆ ಸದರೀ ಬಿ. ವಾಸುದೇವರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕೊರಟಗೆರೆ ಸಬ್ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 24ನೇ ಜುಲೈ 1896.

ನಂ. 825.—ರೆ. 329, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 220ನೇ ಆರ್ಟಿಕಲ್ ಅನುಸರಿಸಿ, ಚನ್ನಪಟ್ಟಣದ ತಾಲ್ಲೂಕು ಅಮಲ್‌ದಾರ್ ಬಾದಾಮಿ ಕೃಷ್ಣರಾಯರಿಗೆ, ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಎರಡು ತಿಂಗಳ ಫರ್ಲೋ ರಜಾ ಕೊಡಲ್ಪಟ್ಟಿರುತ್ತೆ.

277

ರೆವಿನ್ಯೂ ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟರ ಆಫೀಸ್ ಹೆಡ್ ಕ್ಲಾರ್ಕ್ ನರಸಿಂಹ ಶ್ರೀನಿವಾಸ ಪ್ರೆಂಟಿಸ್ ಯವರು ಸದರೀ ಬಾದಾಮಿ ಕೃಷ್ಣರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಚನ್ನಪಟ್ಟಣದ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ನೊಕರರಾಗಿ ನೇಮಿಸಲ್ಪಟ್ಟಿರುತ್ತಾರೆ.

ನಂ. 949.—ರೆ. 370, ಮೈಸೂರ್ ಸರ್ವಿಸ್ ರಗ್ಯುಲೇಷನ್ಗಳ 171ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಎಕ್ಸ್ಟ್ರಾ ಅಸಿಸ್ಟಂಟ್ ಕಮಿಷನರ್ ಮಿಸ್ಟರ್ ಅಬ್ದುಲ್ಅಜೀಜ್ ಯವರಿಗೆ, ಮಾಹೆ ಮಜಕೂರ್ 13ನೇ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 957.—ರೆ. ಫೈ.—141—95, ಅರಸೀಕೆರೆ ತಾಲ್ಲೂಕಿನ ಅಮಲ್ದಾರ್ ವಿ. ವೀರರಾಘವಲುನಾಯುಡು ಯವರಿಗೆ, 1896ನೇ ಜೂನ್ 9 ವ 26ನೇ ಮರ್ಕಂ 10674.—ರೆ. 4216 ಮತ್ತು 11207.—ರೆ. ಫೈ. 141—95ನೇ ನಂಬರುಗಳ ಗವರ್ನಮೆಂಟ್ ಇಸ್ತಿಹಾರನಾಮೆಗಳಲ್ಲಿ ಕೊಡಲ್ಪಟ್ಟಿದ್ದ ಪ್ರಿವಿಲೇಜ್ ರಜಾ ಇನ್ನೂ ಒಂದೂವರೆ ತಿಂಗಳ ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ನಂ. 960.—ರೆ. 380, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 171ನೇ ಆರ್ಟಿಕಲ್ ಅನುಸರಿಸಿ, ಕೋಲಾರದ ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ವಿ. ಆರ್. ತ್ಯಾಗರಾಜ ಅಯ್ಯರ್ಯವರಿಗೆ, ಮಾಹೆ ಮಜಕೂರ್ 13ನೇ ಮರ್ಕಂ ಲಾಗಾಯತು ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 25ನೇ ಜುಲೈ 1896.

ನಂ. 917.—ರೆ. 360, ಈ ಕೆಳಗೆ ಕಂಡ ಡೆಪ್ಯುಟಿ ಅಮಲ್ದಾರ್ರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಸಿರಾ ಮೊಹದೀನ್ ಅಲಿಯವರು ಹೊಸದುರ್ಗಕ್ಕೆ (ಕೂಡ್ಲೆ ಕೆಲಸದ ಮೇಲೆ ಹೋಗಿ ಶೇರತಕ್ಕದ್ದು.)

ಟಿ. ವೆಂಕಟರಾಮಯ್ಯನವರು ಹೊಸದುರ್ಗದಿಂದ ಯಡೆಹಳ್ಳಿಗೆ (ಚಾರ್ಜು ಒಪ್ಪಿಸಿದ ತರುವಾಯ ಕೂಡ್ಲೆ ಕೆಲಸದ ಮೇಲೆ ಹೋಗಿ ಶೇರತಕ್ಕದ್ದು.)

ತಾರೀಖು 27ನೇ ಜುಲೈ 1896.

ನಂ. 944.—ಫಾ. ಫೈ. 27—95, ಮೂರನೇ ಗ್ರೇಡ್ ರೇಂಜರ್ ಎಚ್. ಶ್ರೀನಿವಾಸರಾಯರು, ಮಿಸ್ಟರ್ ಕೆ. ಶಾಮಯ್ಯಂಗಾರು ಫಾರೆಸ್ಟುಗಳ ಆಕ್ಟಿಂಗ್ ಅಸಿಸ್ಟೆಂಟ್ ಕನ್ಸರ್ವೇಟರಾಗಿ ಕೆಲಸ ನೋಡುತಲಿರುವ ಕಾಲದಲ್ಲಿ ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್ಸರ್ವೇಟರಾಗಿ ಆಕ್ಟಿಂಗ್ ತರೀಕ್ ನೊಕರರಾಗಿ ನೇಮಿಸಲ್ಪಟ್ಟಿರುತ್ತಾರೆ.

ನಂ. 990.—ರೆ. 392, ಸ್ 1894ನೇ ಇಸವಿಯ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ ಚಿತ್ರದುರ್ಗದ ತಾಲ್ಲೂಕಿನಲ್ಲಿರುವ ಶಿರಿಗೆರೆಯ ಹಳೇ ಗ್ರಾಮ ನಿವೇಶನವನ್ನು ಬಡಾಯಿಸುವ ಬಗ್ಯೆಗಿ ಬೇಕಾಗಿರುತ್ತದೆ:—

ಜಂಟರ್ ನಂಬರ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ತೆಗದುಕೊಂಡಿರುವ ಸ್ಥಳ.				ಚಕ್ಕುಬಂದಿ.			
					ಕ್ಷೇತ್ರ.	ಸರ್ವೆ ನಂಬರು.	ಬೀಜವರಿ.					
							ಎಕರೆಗಳು.	ಗುಂಟೆಗಳು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
..	ಚಿತ್ರದುರ್ಗ	ಹಿರಿಗುಂಟನೂರು	ಶಿರಿಗೆರೆ	ಗಂಗಜ್ಜ ಕೂನಾರ್ಪ	ಖುಷ್ಕಿ	154ರ ಪೋ	1	20	ಗ್ರಾಮ ನಿವೇಶನ ಮತ್ತು ಭೀಮನಗೌಡನ ಪೋತೀ ಬೋವಿಗೌಡನ ಹಳ.	ಸರ್ವೆ ನಂಬರ್ 155 ರ 157	ಗ್ರಾಮ ನಿವೇಶನ	ಸರ್ವೆ ನಂಬರು 153

ನಂ. 996.—ರೆ. 398, ಮೈಸೂರ್ ಸರ್ವಿಸ ರಗ್ಯುಲೇಷನ್ಗಳ 188ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರ ತಾಲ್ಲೂಕಿನ ಅಮಲ್ದಾರ್ ಬಿ. ಲಕ್ಷ್ಮಣರಾಯರಿಗೆ, 1896ನೇ ಜುಲೈ ಗುರೆ ಲಾಗಾಯತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ. ಹಾಲಿ ಕೊಟ್ಟಿರುವ ರಜಾ ಪೂರೈಸಿದ ತಾರೀಖು ಲಾಗಾಯತು ಸರಾನು ತನ್ನ ಕೆಲಸದಿಂದ ಪೆನ್ಷನ್ ಮೇಲೆ ನಿವೃತ್ತರಾಗುವದಕ್ಕೆ ಪೂರ್ವ ಕೊಟ್ಟ ರಜಾ ಆಗಿರುತ್ತೆ.

ತಾರೀಖು 28ನೇ ಜುಲೈ 1896.

ನಂ. 954.—ರೆ 374, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 171ನೇ ಆರ್ಟಿಕಲ್ ಅನುಸರಿಸಿ, ಫ್ರೆಂಚ್ರಾಕ್ಸ್ ಸಬ್ ಡಿವಿಜನ್ ಆಫೀಸರ್ ಮಿಸ್ಟರ್ ಪಂಚನಾಥರಾಯರಿಗೆ, 1896ನೇ ಜುಲೈ 22ನೇ ತಾರೀಖಿನಾರಭ್ಯ ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 1005.—ರೆ. 403, ಮೈಸೂರ್ ಸರ್ವಿಸ್ ರಗ್ಯುಲೇಷನ್ಗಳ 173ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಕೆ. ಶ್ರೀನಿವಾಸರಾಯರಿಗೆ, 1896ನೇ ಜುಲೈ 22ನೇ ಮರ್ಕಂ ಲಾಗಾಯತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಜುಲೈ 1896.

ನಂ. 813.—ಫಾ. ಫೈ. 163—95, ಸರ್ 1878ನೇ ಇಸವಿಯ ಫಾರೆಸ್ಟ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ, ಮೈಸೂರ್ ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಚಕ್ಕು ಬಂದಿ ವಿಂಗಡಿಸಲ್ಪಟ್ಟ ಫಾರೆಸ್ಟುಗಳು ಮೇಲ್ಕಂಡ ಫಾರೆಸ್ಟ ರೂಲ್ಸಿನ 1ನೇ ರೂಲ್ ಅನುಸರಿಸಿ, ಸ್ಟೇಟ್ ಫಾರೆಸ್ಟುಗಳಾಗಿ ವರ್ಗೀಕರಿಸಿರುತವೆ:—

ನಂಬರು.	ಫಾರೆಸ್ಟಿನ ಹೆಸರು.	ಸ್ಥಳ.	ಚಕ್ಕು ಬಂದಿ.
1	ನರಶಿಂಹದೇವರ ಬೆಟ್ಟ ಫಾರೆಸ್ಟ, ಬ್ಲಾಕ್ ನಂ. II, ಚಿಕ್ಕಬಳ್ಳಾಪುರ ತಾಲ್ಲೂಕು.	7 ಚದುರ ಮೈಲುಗಳು, 521 ಎಕರೆಗಳು.	ಉತ್ತರಕ್ಕೆ—ಪಾಕ್ಮಾಡಲ್ಪಟ್ಟ ಲೈನು (12 ಗಜಗಳ ಅಗಲ) "ವಿಕ್ರಾಲೇಶ್ವರನ ಗುಡಿ" ಇಂದ ಪ್ರಾರಂಭಿಸಿ, ತಿಪ್ಪೇನಹಳ್ಳಿಯ ಸ. ನಂ. 28ರಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಲೈನು ಮೇಲ್ಕಂಡ ಸರ್ವೆ ನಂಬರಿಂದ ಹೊರಟು, ಕಂಜಯ್ಯನಹಳ್ಳಿಯ ಸ. ನಂ. 108ರ ಉದ್ದಕ್ಕೂ ಮತ್ತು ಕಲವಾರದ ಸರ್ವೆ ನಂ. 131, 35 ವ 37 ಮತ್ತು ಸುಡಹಳ್ಳಿಯ ಸರ್ವೆ ನಂ. 4 ವ 5 ಇವುಗಳ ಭಾಗಗಳಲ್ಲಿ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಲೈನು ಈ ಸ್ಥಳದಿಂದ ತಿರುಗಿ, ಜೋಡಿ ನೊಸಿಕುಂಟೆ ಹೊಸೂರ ಅಂಚಿನಲ್ಲಿ ಹಾದು, ಮದರನಹಳ್ಳಿಯ ಸರ್ವೆ ನಂ. 57, 76, 79, 85, 111 ವ 12ರ ಉದ್ದಕ್ಕೂ ಹೋಗಿ, ಕರಲಹಳ್ಳಿಯ ಸರ್ವೆ ನಂ. 20ರ ಭಾಗದ ಉದ್ದಕ್ಕೂ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು, ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರ ತಾಲ್ಲೂಕು ಮಾದನಹಳ್ಳಿಯ ಹದ್ದನ್ನ ಶೇರಿ ಜಾಕಲಮುಡುಗಿನ ಸರ್ವೆ ನಂ. 34 ವ 32ರ ಭಾಗಗಳ ಉದ್ದಕ್ಕೂ ಹಾದು, ನಾಲ್ಕದರನಹಳ್ಳಿಯ ಸರ್ವೆ ನಂ. 22ರ ಭಾಗದ ಉದ್ದಕ್ಕೂ ಹೋಗಿ, ಮೋಟಲೂರ ಸರ್ವೆ ನಂ. 20, 37 ವ 41ರ ಭಾಗಗಳಲ್ಲಿ ತಿರುಗಿ, ಚಿಕ್ಕಬಳ್ಳಾಪುರ ಗೋರೀಬಿದನೂರು ರಸ್ತೆಯ ಪಕ್ಕದಲ್ಲಿ ಉದ್ದಕ್ಕೂ 7 ಫರ್ಲಾಂಗುಗಳ ಫಾಸಲೆ ವರವಿಗೆ ಹೋಗಿ, ಹೊರಟ ಸ್ಥಳವನ್ನು ಶೇರುತ್ತದೆ. ಈ ಕೆಳಗೆ ಕಂಡವು ಮಾರ್ಗದ ಹಕ್ಕುದಾರಿಗಳು:— (I) ಸುಡಹಳ್ಳಿ, ಕಣಿವೆಯಿಂದ ಸುಬ್ರಾಯನ ಘಾಟಿ ದೇವಸ್ಥಾನಕ್ಕೆ. (II) ಕಂಗನಹಳ್ಳಿಯಿಂದ ಕೊಪರಹಳ್ಳಿ ಪ್ಲಾಂಟೇಷನ್ ಮಾರ್ಗವಾಗಿ ಮಂಚೇನಹಳ್ಳಿಗೆ.
2	ಡಿಟೋ ಫಾರೆಸ್ಟ, ಬ್ಲಾಕ್ ನಂ. III, ಚಿಕ್ಕಬಳ್ಳಾಪುರ ಮತ್ತು ಗೋರೀಬಿದನೂರ ತಾಲ್ಲೂಕುಗಳು.	16 ಚದುರ ಮೈಲುಗಳು, 200 ಎಕರೆಗಳು.	ಉತ್ತರಕ್ಕೆ—ಪಾಕ್ಮಾಡಲ್ಪಟ್ಟ ಲೈನು (12 ಗಜಗಳು ಅಗಲ) ದಶರಥಗಳಗುಡಿ ಮರಪನಹಳ್ಳಿಯ ಸರ್ವೆ ನಂ. 8ರಿಂದ ಪ್ರಾರಂಭಿಸುತ್ತೆ. ಪೂರ್ವಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು, ಮರಪನಹಳ್ಳಿಯ ಸರ್ವೆ ನಂ. 78 ವ 90 ಮತ್ತು ಗೊಲ್ಲಹಳ್ಳಿಯ ಸರ್ವೆ ನಂ. 10 ಇವುಗಳ ಭಾಗಗಳ ಉದ್ದಕ್ಕೂ ಮತ್ತು ಹೊನ್ನೆಗಾರಹಳ್ಳಿಯ ಸರ್ವೆ ನಂ. 41ರ ಭಾಗದ ಉದ್ದಕ್ಕೂ ಹಾದು, ಆವಲಗುರ್ಕಿಯ ಸರ್ವೆ ನಂ. 49, 47, 170, 169, 193, 187, 186, 184 ವ 183 ಇವುಗಳನ್ನು ಶೇರಿ, ಹಿಂದಿನ ಗ್ರಾಮದ ಸರ್ವೆ ನಂ. 185ರ ಉದ್ದಕ್ಕೂ ಹಾದು ಮತ್ತು ಜೋಡಿ ಬಾವಂದಹಳ್ಳಿ ವ ಬೈರೋಗನಹಳ್ಳಿ ಗ್ರಾಮಗಳ ಅಂಚಿನಲ್ಲಿ ಹೋಗಿ, ಅಂಕನಗುಂಡಿಯ ಸರ್ವೆ ನಂ. 71, 72 ವ 74 ಮತ್ತು ತಿಪ್ಪನಹಳ್ಳಿಯ ಸರ್ವೆ ನಂ. 283, 49 ವ 103 ಇವುಗಳ ಉದ್ದಕ್ಕೂ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು ಚಿಕ್ಕಬಳ್ಳಾಪುರ, ಗೋರೀಬಿದನೂರು ರಸ್ತೆಯ ಪಾರ್ಶ್ವದ ಉದ್ದಕ್ಕೂ 58ನೇ ಮೈಲಿಯಲ್ಲಿ 4ನೇ ಫರ್ಲಾಂಗಿನಿಂದ 60ನೇ ಮೈಲಿಯಲ್ಲಿ 7ನೇ ಫರ್ಲಾಂಗಿನ ಒಂದು ಭಾಗದ ವರವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು, ಗೊಲ್ಲಹಳ್ಳಿಯ ಸರ್ವೆ ನಂ. 29, ಬೋಡಮಾನಹಳ್ಳಿಯ ಸರ್ವೆ ನಂ. 17 ವ 18, ಪೊಯಿಶಟ್ಟಿಹಳ್ಳಿಯ ಸರ್ವೆ ನಂ. 70 ವ 71 ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕು ಕೊಲಮಾನಹಳ್ಳಿಯ ಸರ್ವೆ ನಂ. 48 ವ 46 ಇವುಗಳ ಉದ್ದಕ್ಕೂ ಹಾದು, ರಾಯನಕಲ್ಲಿನ ಸರ್ವೆ ನಂ. 84ರ ಉದ್ದಕ್ಕೂ ಹೋಗಿ ತರುವಾಯ ಗೋರೀಬಿದನೂರು ತಾಲ್ಲೂಕಿನ ದಂಡಿಗನಹಳ್ಳಿಯ ಸರ್ವೆ ನಂ. 136, 12, 137, 138 ವ 11 ಇವುಗಳ ಅಂಚಿನಲ್ಲಿ ಹಾದು, ಚಿಕ್ಕಬಳ್ಳಾಪುರ ತಾಲ್ಲೂಕಿನ ಕಟ್ಟಿಗಾನಹಳ್ಳಿಯ ಸರ್ವೆ ನಂ. 42, 96, 101 ವ 171 ಇವುಗಳ ಉದ್ದಕ್ಕೂ ಹೋಗಿ, ಹೊರಟ ಸ್ಥಳವನ್ನು ಶೇರುತ್ತದೆ. ಈ ಕೆಳಗೆ ಕಂಡವು ಮಾರ್ಗದ ಹಕ್ಕುದಾರಿಗಳು:— (I) ಜನಗಳಿಂದಲೂ ಮತ್ತು ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ಮರವನಹಳ್ಳಿಯಿಂದ ಯರಂಗನಹಳ್ಳಿಗೆ ಹೋಗುವ ಭಂಡೀದಾರಿ.

ನಂಬರು.	ಫಾರೆಸ್ಟಿನ ಹೆಸರು.	ಸ್ಥಳ.	ಚಕ್ಕುಬಂದಿ.
2	ನರಸಿಂಹದೇವರ ಬೆಟ್ಟ ಫಾರೆಸ್ಟ್ ಬ್ಲಾಕ ನಂ. III, ಚಿಕ್ಕಬಳ್ಳಾಪುರ ಮತ್ತು ಗೋರೀಬಿದನೂರು ತಾಲ್ಲೂಕುಗಳು.	16 ಚದರ ಮೈಲಿಗಳು 200 ಎಕರೆಗಳು.	(II) ಚಿಕ್ಕಬಳ್ಳಾಪುರದಿಂದ ಗೋರೀಬಿದನೂರಿಗೆ ಹೋಗುವ ದೊಡ್ಡರಸ್ತೆ ಮತ್ತು ಅಲ್ಲಿಂದ ಜನಗಳಿಂದಲೂ ವ ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ದಂಡಿಗಾನಹಳ್ಳಿಗೆ ತಿರುಗುವ ಭಂಡಿ ದಾರಿ. (III) ಜನಗಳಿಂದಲೂ ಮತ್ತು ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ದಂಡಿಗಾನಹಳ್ಳಿಯಿಂದ ಕಟಗಾನಹಳ್ಳಿಗೆ ಹೋಗುವ ಕಾಲ್‌ದಾರಿ. (IV) ಜನಗಳಿಂದಲೂ ಮತ್ತು ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ಮರಪನಹಳ್ಳಿಯಿಂದ ಆವಲಬೆಟ್ಟದ ಮೇಲಿರುವ ಆವಲುಕೊಂಡರಾಯಸ್ವಾಮಿ ದೇವಸ್ಥಾನಕ್ಕೆ ಹೋಗುವ ಭಂಡಿದಾರಿ.

ತಾರೀಖು 28ನೇ ಜುಲೈ 1896.

ನಂ. 1010.—ರೆ. ಫೈ. 119—93, ಸನ್ 1881ನೇ ಇಸವಿಯ XXIIನೇ ಯಕ್ಸೈಜ್ ಆಕ್ಟಿನ 55ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನನುಸರಿಸಿ, 1893ನೇ ಮೇ 5ನೇ ಮರ್ಸುಂ 18968.—ರೆ. ಫೈ. 119—93ನೇ ನಂಬರ ಇಸ್ತಿಹಾರ್ ನಾಮೆಯಲ್ಲಿ ವಿಧಿಸಲ್ಪಟ್ಟ ನಮೂನೆಗೆ ಬದಲಾಗಿ, ಜನವಿನೋದಗಳಿಗೆ ಸಂಬಂಧಪಟ್ಟ ರಿಫ್ರೆಷ್ಮೆಂಟ್ ಅಂಗಡಿಗಳಲ್ಲಿ ಪರಾಯಿದೇಶದ ಸ್ಪಿರಿಟ್ ಸಾರಾಯಿ ವ ಪರಾಯಿದೇಶದ ಉಕ್ಕಿದ ಸಾರಾಯಿಗಳನ್ನ ಮಾರತಕ್ಕ ಬಗ್ಯೆ ಉಂಟಾದ ಪರಾಯಿ ದೇಶದ ಸಾರಾಯಿ ರೂಲ್ಸಿನ Xನೇ ರೂಲ್ ಅನುಸರಿಸಿ, ಕೊಡಲ್ಪಡುವ ಆಗಾಗಿನ ಲೈಸೆನ್ಸಿಗೋಸ್ಕರ ಈ ಕೆಳಗೆ ಕಂಡ ನಮೂನೆಯನ್ನ ಅನುಸರಿಸುವ ಬಗ್ಯೆ ಮೈಸೂರ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ. ಮೇಲ್ಕಂಡ ಇಸ್ತಿಹಾರ್‌ನಾಮೆಯ Xನೇ ರೂಲಿನ ಕಡೆಯಲ್ಲಿ "ರಿಫ್ರೆಷ್ಮೆಂಟ್ ರೂಮ್ ಲೈಸೆನ್ಸ್ ನಮೂನೆಯಲ್ಲಿ" ಎಂಬ ಮಾತುಗಳಿಗೆ ಬದಲಾಗಿ "ಲಗತು ಮಾಡಿರುವ ನಮೂನೆಯಲ್ಲಿ" ಎಂಬ ಮಾತುಗಳು ಸೇರಿಸಲ್ಪಡತಕ್ಕದ್ದು:—

ಜನವಿನೋದಗಳಿಗೆ ಸಂಬಂಧಪಟ್ಟ ರಿಫ್ರೆಷ್ಮೆಂಟ್ ಅಂಗಡಿಗಳಲ್ಲಿ ಪರಾಯಿದೇಶದ ಸ್ಪಿರಿಟ್ ಸಾರಾಯಿಗಳನ್ನೂ ವ ಪರಾಯಿ ದೇಶದ ಉಕ್ಕಿದ ಸಾರಾಯಿಗಳನ್ನೂ ಬಿಕರಿ ಮಾಡುವ ಬಗ್ಯೆ ಆಗಾಗ್ಯೆ ಕೊಡಲ್ಪಡುವ ಲೈಸೆನ್ಸು.

ಲೈಸೆನ್ಸಿನ ರಿಜಿಸ್ಟರ್ ನಂಬರ್.
ಲೈಸೆನ್ಸ್‌ದಾರನ ಹೆಸರು.
ದುಕಾನ್‌ದಾರನ ಹೆಸರು.
ದುಕಾನಿನ ಸ್ಥಳ

ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದ ಎಂಬವನ
ಹೆಸರುಳ್ಳ ನಾನು ಲ್ಲಿ ವಾಸವಾಗಿರುವ
ಮಗನಾದ ಎಂಬವನಿಗೆ ಈ ಕೆಳಗೆ ಕಂಡ ಷರತ್ತುಗಳಿಗೂ ಮತ್ತು ರೂಪಾಯಿಗಳ ಲೈಸೆನ್ಸ್ ಫೀಯನ್ನ ಕೊಡಲಿಕ್ಕೂ ಗುರಿಮಾಡಿ, ಮೇಲ್ಕಂಡ ಆವರಣದಲ್ಲಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿಯನ್ನೂ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನೂ ಚಿಲ್ಲರೆಯಾಗಿ ಬಿಕರಿ ಮಾಡುವದಕ್ಕೆ ಇದರಿಂದ ಅಧಿಕಾರ ಕೊಟ್ಟಿರುತ್ತೇನೆ:—

ಷರತ್ತುಗಳು.

I. ಈ ಲೈಸೆನ್ಸುದಾರನು, ತತ್ಕಾಲದಲ್ಲಿ ಜಾರೀಲಿರುವ ಯಕ್ಸೈಜ್ ಕಾನೂನುಗಳಿಗೂ ಮತ್ತು ಆಗಾಗ್ಯೆ ಸದರೀ ಕಾನೂನುಗಳನ್ನನುಸರಿಸಿ, ವಿಧಿಸಲ್ಪಡುವ ರೂಲುಗಳಿಗೂ ಅನುಸರಿಸಿ, ನಡೆದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

II. (a) ಈ ಲೈಸೆನ್ಸು ಕೆಳಗೆ ವಿವರಿಸಲ್ಪಟ್ಟ ಪರಾಯಿ ದೇಶದ ಸ್ಪಿರಿಟ್ ಸಾರಾಯಿಗಳೂ ವ ಪರಾಯಿ ದೇಶದ ಉಕ್ಕಿದ ಸಾರಾಯಿಗಳೂ ಬಿಕರಿ ಮಾಡುವ ಬಗ್ಯಾಗಿ ಕೊಡಲ್ಪಟ್ಟಿರುತ್ತೆ:—

(b) ಮೇಲೆ ಹೇಳಲ್ಪಟ್ಟ ಗುರ್ತುಗಳ ಪೈಕಿ ಯಾವದಾದರೊಂದು ಗುರ್ತಿಲ್ಲದ ಪರಾಯಿ ದೇಶದ ಸ್ಪಿರಿಟ್ ಸಾರಾಯಿಯಾಗಲಿ ಯಾ ಪರಾಯಿ ದೇಶದ ಉಕ್ಕಿದ ಸಾರಾಯಿಯಾಗಲಿ ಈ ಲೈಸೆನ್ಸಿನ ದೆಶೆಯಿಂದ ಮಾರಲ್ಪಡಕೂಡದು.

III. ಈ ಲೈಸೆನ್ಸನ್ನನುಸರಿಸಿ, ಬಿಕರಿಮಾಡಲ್ಪಟ್ಟ ಯಲ್ಲಾ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಗಳು ಸದರೀ ಆವರಣಗಳಲ್ಲಿ ಕುಡಿಯಲ್ಪಡಬೇಕೇ ಹೊರ್ತು ಯಾವ ನೆಪದಿಂದಾಗಲಿ ದುಕಾನಿನಿಂದ ಹೊರಗೆ ಒಯ್ಯಲ್ಪಡಕೂಡದು.

IV. (1) ಯಾವಬಗೆಯಾದ ಪರಾಯಿ ದೇಶದ ಸ್ಪಿರಿಟ್ ಸಾರಾಯಿಗಳು ಯಾ ಉಕ್ಕಿದ ಸಾರಾಯಿಗಳನ್ನ ಕಮ್ಯಾಂಡಿಗ್ ಆಫಿಸರರ ಯಾ ಆ ಬಗ್ಯೆ ಅಂಥಾ ಆಫಿಸರಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವ ಮನುಷ್ಯನ ಬರಹ ಮೂಲಕವಾದ ಅಪ್ಪಣೆ ಶಿವಾಯಿ ಯಾವ ಯೂರೋಪಿಯನ್ ನಾನ್‌ಕಮ್ಮಿಷನೆಡ್ ಆಫಿಸರ್ ಯಾ ಪ್ರೈವೇಟ್ ಸೋಲ್ಜರ್, ಯಾ ಈ ಜಾತಿಗಳ ಜನಗಳಿಗೆ ಸಂಬಂಧಪಟ್ಟ ಯಾ ಸೇರಿದ ಯಾವ ಯೂರೋಪಿಯನ್ ಯಾ ಈಸ್ಟ್‌ಇಂಡಿಯನ್ ಹೆಂಗಸ

ರಿಗಾಗಲಿ ಮಾರಲೂಕೂಡದು ಯಾ ಎಷ್ಟುಮಟ್ಟಿಗಾದರೂ ಕೊಡಲೂಕೂಡದು, ಮತ್ತು ಅಂಥಾ ಬರಹ ಮೂಲಕವಾದ ಅಪ್ಪಣೆಯು ಹಾಗೆ ಮಾರಾಟ ಮಾಡಿದ್ದಕ್ಕಾಗಿ ಲೈಸೆನ್ಸದಾರನಿಂದ ದಸ್ತಾವೇಜು ತಾರೀಕ ಇಟ್ಟುಕೊಳ್ಳಲ್ಪಡತಕ್ಕದ್ದು, ಮತ್ತು ಯಾವ ಯಕ್ಸೈಜ್ ಆಫೀಸರರ ಮುಂದಾಗಲಿ ಕೇಳಿದಾಗ ಹಾಜರ್ಮಾಡಲ್ಪಡತಕ್ಕದ್ದು.

(2) ಹದಿನಾರು ವರುಷಕ್ಕೆ ಕಮ್ಮಿಯಾದ ವಯಸ್ಸುಳ್ಳ ಯಾವ ಮಗುವಿಗಾಗಲಿ, ಯಾ ಯಾವನೊಬ್ಬ ಸಿಪಾಯಿ, ಪೋಲೀಸ್ ಫೌಜಿಗೆ ಶೇರಿದ ಮನುಷ್ಯ ಯಾ ರೈಲ್ವೆ ಕಂಪೆನಿಯ ನೌಕರ ಯಾ ನೌಕರಿ ಮೇಲಿರುವ ಯಕ್ಸೈಜ್ ಯಗ್ಸಿಕ್ಯೂಟಿವ್ ಸ್ಟಾಫಿನ ಮೆಂಬರಿಗಾಗಲಿ, ಯಾವ ಬಗೆಯ ಪರಾಯಿ ದೇಶದ ಸ್ಪಿರಿಟ್ ಸಾರಾಯಿಗಳನ್ನ ಯಾ ಉಕ್ಕಿದ ಸಾರಾಯಿಗಳನ್ನ ಮಾರಲೂಕೂಡದು ಯಾ ಎಷ್ಟುಮಟ್ಟಿಗೂ ಕೊಡಲೂಕೂಡದು.

V. ಈ ಲೈಸೆನ್ಸ್ ಅನುಸರಿಸಿ, ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಗಳನ್ನ ಬಿಕರಿಮಾಡುವ ಸ್ಥಳವು ಒಳಗಿರತಕ್ಕ ವಿಶಿಷ್ಟಜನರೂ ದಾರಿಯಲ್ಲಿ ತಿರುಗಾಡುವ ಯಾರೊಬ್ಬರಿಗೂ ಕಾಣಬರುವಂತೆ ಬಹಿರಂಗವಾಗಿ ಇರತಕ್ಕದ್ದು.

VI. ಅಂಗಡಿಯ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೆಯ ಮೇಲೆ ಲೈಸೆನ್ಸಿನ ನಂಬರು ಮತ್ತು ಲೈಸೆನ್ಸದಾರನ ವ ಅಂಗಡಿಯವನ ಹೆಸರು ಸ್ಪಷ್ಟವಾಗಿ ಬರೆಯಲ್ಪಟ್ಟಿರತಕ್ಕದ್ದು. ಸದರೀ ಅಂಗಡಿಯ ಬಹಿರಂಗವಾದ ಸ್ಥಳದಲ್ಲಿ ಬಿಕರಿ ಮಾಡಲ್ಪಡುವ ಸಾರಾಯಿಗಳ ಒಂದು ತಪ್ಸೀಲವಾರ್ ನಿರಖಪಟ್ಟಿಯನ್ನ ತಗಲು ಹಾಕಿರತಕ್ಕದ್ದು.

VII. (a) ಈ ಲೈಸೆನ್ಸದಾರನು ಮೇಲೆ ಹೇಳಲ್ಪಟ್ಟ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಗಳೊಂದಿಗೆ ಮೋಸಕರವಾಗಿ ನೀರು ಬೆರಿಸಕೂಡದು ಯಾ ಕೆಡಿಸಕೂಡದು, ಯಾ ಮೋಸಕರವಾಗಿ ನೀರು ಬೆರಿತಿರುವಂಥಾ ಯಾ ಕೆಡಿಸಿರುವಂಥಾ ಸಾರಾಯಿಗಳೆಂದು ತಿಳಿದು ಮಾರಲೂಕೂಡದು;

(b) ಅಥವಾ ಸದರೀ ಅಂಗಡಿಯಲ್ಲಿ ಮತ್ತೇರಿ ಬೀಳುವದು ಅಥವಾ ಇತರ ಅಕ್ರಮವಾದ ನಡತೆ ನಡೆಯುವದು ತಿಳಿದು ಅವುಗಳಿಗೆ ಅವಕಾಶ ಕೊಡಕೂಡದು;

(c) ಅಥವಾ ಅಂಗಡಿಯಲ್ಲಿ ಯಾವ ವಿಧವಾದ ಜೂಜಿಗಾಗಲಿ ತಿಳಿದು ಆಸ್ಪದ ಕೊಡಕೂಡದು;

(d) ಅಥವಾ ವ್ಯಭಿಚಾರಿಗಳನ್ನಾಗಲಿ ಯಾ ಪ್ರಸಿದ್ಧವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ಸದರೀ ಅಂಗಡಿಯಲ್ಲಿ ತನಗೆ ತಿಳಿದು ಅಲ್ಲಿಗೆ ಬರುವಂತೆ ಅಥವಾ ಅಲ್ಲಿ ಇರುವಂತೆ ಮಾಡಕೂಡದು;

(e) ಅಥವಾ ಫರಾರಿಯಾಗಿ ಬಂದ ಯಾವ ಯುರೋಪಿಯನ್ ಸೋಲ್ಜರಿಗಾದರೂ ಮನಃಪೂರ್ತಿಯಾಗಿ ವ ತಿಳಿದು ಅಲ್ಲಿ ಆಸರೆ ಕೊಡಲೂ ಕೂಡದು ಯಾ ಅಂಥವರನ್ನ ಅಲ್ಲಿ ಬಚ್ಚಿಡಲೂ ಕೂಡದು.

VIII. ಈ ಲೈಸೆನ್ಸ್ ಮೇರಿಗೆ ದರೋಬಸ್ತು ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಗಳ ಬಿಕರಿಗಳೂ ನಗದಾಗಿ ಹಣ ತೆಗೆದುಕೊಂಡು ಮಾರತಕ್ಕದ್ದೇ ಹೊರ್ತು ಸಾಲವಾಗಿ ಕೊಡಕೂಡದು, ಅಥವಾ ಸಾರಾಯಿಗಾಗಿ ಯಾವ ವಸ್ತುಗಳನ್ನೂ ಅಡಮಾನವಾಗಿ ಯಾಗಲಿ ಯಾ ಬದಲಿಯಾಗಿ ಯಾಗಲಿ ಯಿಟ್ಟುಕೊಳ್ಳಕೂಡದು.

IX. ಮೇಲೆ ಹೇಳಲ್ಪಟ್ಟ ಅಂಗಡಿಯು——ಲಾಗಾಯತು————ವರಿಗೆ ತೆರದಿರತಕ್ಕದ್ದು.

X. ಈ ಲೈಸೆನ್ಸದಾರನು ಯಿಡುವ ಲೆಕ್ಕದಲ್ಲಿ ತಿಂಗಳು, ತಾರೀಖು, ಸ್ಪಿರಿಟ್ ಸಾರಾಯಿಗಳು ವ ಉಕ್ಕಿದ ಸಾರಾಯಿಗಳು ತಂದ ಮೊತ್ತ ವ ತರಹ, ಯಾವ ಮೂಲಕವಾಗಿ ಅವು ಪಡೆದುಕೊಂಡದ್ದು, ಬಿಕರಿಯಾದ ಮೊತ್ತ ವ ಅದರ ಮೊಬಲಗು, ಮತ್ತು ರೋಜೇನಾ ಹಾಜರಿ ಸರಕಿನ ಶಿಲ್ಕು ಇವುಗಳ ಸಾಬಾ ವ ಕರಾರ್‌ವಾಕಾ ತಪ್ಸೀಲ್ ನಮೂದಿಸತಕ್ಕದ್ದು. ಈ ಲೆಕ್ಕಗಳು ಯಾವಕಾಲದಲ್ಲಾಗಲಿ ಯಕ್ಸೈಜ್ ಇಲಾಖೆಯ ಆಫೀಸರುಗಳ ತನಿಖೆ ಬಗ್ಗೆ ಒಳಪಟ್ಟಿರತಕ್ಕದ್ದು. ಈ ಲೆಕ್ಕದ ಗೋಷ್ವಾರೆಯು ಡೆಪ್ಯುಟಿ ಕಮ್ಮಿಷನರವರಿಗೆ ಕಳುಹಿಸಲ್ಪಡತಕ್ಕದ್ದು.

XI. ಈ ಲೈಸೆನ್ಸ ಕ್ರಯ, ದಾನ, ಭೋಗ್ಯ ಯಾ ಮತ್ತ್ಯಾವ ರೀತಿಯಿಂದಲಾಗಲಿ ವರ್ಗವಾಗತಕ್ಕದ್ದಲ್ಲಾ, ಮತ್ತು ಇದರಲ್ಲಿ ನಮೂದಿರುವವರು ಹೊರ್ತು ಅನ್ಯಥಾ ಯಾರಿಗೇ ಆಗಲಿ ಇದರಂತೆ ನಡಿಯಲಿಕ್ಕೆ ಅಧಿಕಾರ ವಿರುವದಿಲ್ಲ.

XII. ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಲೈಸೆನ್ಸದಾರ ಯಾ ದುಕಾನದಾರನು ಯಕ್ಸೈಜ್ ಕಾನೂನುಗಳಲ್ಲಿ ವ ಅವುಗಳಿಗನುಸರಿಸಿದ ನಿಬಂಧನೆಗಳಲ್ಲಿ ವಿಧಿಸಿರುವ ದಂಡನೆಗಳಿಗೆಲ್ಲಾ ಗುರಿಯಾಗುವದಲ್ಲದೆ ಮತ್ತು 1881ನೇ ಇಸವಿಯ XXIIನೇ ಯಕ್ಸೈಜ್ ಆಕ್ಟಿನ 13ನೇ ಸೆಕ್ಷನ ಮೇರಿಗೆ ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರಿದಂತೆ ಈ ಲೈಸೆನ್ಸ ರದ್ದಾಗಲಿಕ್ಕೆ ಸಹ ಗುರಿಯಾಗಿರತಕ್ಕದ್ದು.

XIII. ಈ ಲೈಸೆನ್ಸ್————ವರಿವಿಗೆ ಜಾರಿಯಲ್ಲಿರತಕ್ಕದ್ದು.

ತಾರೀಖು

ಡೆಪ್ಯುಟಿ ಕಮ್ಮಿಷನರ್,

ಡಿಸ್ಟ್ರಿಕ್ಟು.

ಈ ಕೆಳಗೆ ರುಜು ಮಾಡಿರುವಂಥಾ ಲ್ಲಿ ವಾಸವಾಗಿರುವ ನ ಮಗನಾದ ಎಂಬ ನಾನು ಮೇಲ್ಕಂಡ ಲೈಸೆನ್ಸದಾರನಾಗಿ, ನನಗಾಗಿಯೂ, ನನ್ನ ವಾರಸದಾರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗಪಡೆದಂಥಾವರಿಗೋಸ್ಕರವೂ, ಇದರ ದೆಶೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸೋಣಾದ ವಿಶಿಷ್ಟ ಕರಾರುಗಳಿಗೂ ವ ಷರತ್ತುಗಳಿಗೂ ಒಪ್ಪಿರುತ್ತೇನೆ.

ಲೈಸೆನ್ಸದಾರ್.

ತಿಂಗಳ ನೇ ತಾರೀಖಿನಲ್ಲಿ ನಮ್ಮಗಳ ರೂಬರೂ ರುಜಾ ವ ಮೊಹರಿನೊಡನೆ ಒಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು:—

1

2

3

ತಾರೀಖು 29ನೇ ಜುಲೈ 1896.

ನಂ. 1003.—ಫೈ. 75, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 172ನೇ ಆರ್ಟಿಕಲ್ ಅನುಸರಿಸಿ, ಸ್ಟೇಟ್ ಹುಜೂರ್ ಟ್ರೆಜರಿಯ ಟ್ರೆಜರರ್ ಮಿಸ್ಟರ್ ಟಿ. ರಾಮಲುಚೆಟ್ಟಿಯವರಿಗೆ, ಮಾಹೆ ಮಜಕೂರ್ 29ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ಕ್ರಿರೀಖಿನಾರಭ್ಯ ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂ. 162. ತಾರೀಖು 30ನೇ ಜುಲೈ 1896, ಬೆಂಗಳೂರು.

ಮೈಸೂರ್ ಷಹರಿನಲ್ಲಿರುವ ಮುಜರಾಯಿ ವಿಚಾರಣೇಗೆ ವಳಪಟ್ಟ ಪಂಚೆಗವಿಮಠ—ಜಪದಕಟ್ಟೆಮಠ—ದೀನನಾಥ್‌ಲಾಲಾ ಧರ್ಮಶಾಲಾ ಈ 3ಕ್ಕೂ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿಯಿದೆ.

1. ಅಡ್ವೊಕೇಟ್ ಯಂ. ಎ. ಕ್ರಿಷ್ಣಯ್ಯಂಗಾರ್ ಬಿ. ಯೆ. ಯವರು.
2. ಅಂಬಳೆ ಅಣ್ಣಯ್ಯಪಂಡಿತರು.
3. ಪೆನ್ಷನ್ ಅಮಲ್ದಾರ್ ನಾರಾಯಣಸ್ವಾಮಿರಾಯರು.
4. ಧರ್ಮಾಧಿಕಾರಿ ಸುಂದರಶಾಸ್ತ್ರಿಗಳವರು.
5. ಪಂಡಿತ ರತ್ನಂಕಸ್ತೂರಿ ರಂಗಾಚಾರ್ಯರು.

ಏ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫಾಯಿಷ್ ಆದ್ದು. [ಸಂ. 31.

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 6, ಸನ್ 1896.

IIನೇ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್ರ ಡಿಟೋ	„ 170
1	ಮದ್ರಾಸ್ ಓಕ್ಸರವರ ಡಿಟೋ ..	„ 250
1	ಡಿಟೋ ಡಿಟೋ ಡಿಟೋ ..	„ 188
1	ಡಿಟೋ ಬೋರ‍್ಯಾನರವರ ಡಿಟೋ	„ 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರ್ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 24ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೈನರ್ ಫಾರೆಸ್ಟ್ ಯಾನೆ ಚಿಲ್ಲರೆ ಪಸಾರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ಸಾದರ್‌ಮಾಡಲ್ಪಟ್ಟಿರುವ 1895ನೇ ಇಸವಿ ಜನವರಿ 31ನೇ ಮುರ್ಕಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಪ್ರಾಯಿಷಾಗಿರುವ ಅದೇ ಇಸವಿ ಜನವರಿ 23ನೇ ಮುರ್ಕಂ ಇಸ್ತಿಹಾರನ್ನು ಬದಲಾಯಿಸಿ ಅಮಲ್‌ದಾರ್ ಮತ್ತು ಸವಾಲ್‌ದಾರ್‌ಗಳ ನಡ ವಳಿಕೆ ಬಗ್ಗೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತೀಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್‌ದಾರ್ರೇ ಆಗಲಿ ಅವರ ಗೈರಹಾಜರಿಯಲ್ಲಿ ಶಿರಸ್ತೇದಾರ್ರೇ ಆಗಲಿ ಈ ಬಗ್ಗೆ ಡೆಪ್ಯುಟಿ ಕಮಿಷನರವರಿಂದ ಗೊತ್ತುಮಾಡುವ ಸ್ಥಳಗಳಲ್ಲಿ ಫಸಲನ್ನು ಹರಾಜು ಮಾಡುವರು. ಕಾರ್ತೀಕ ಫಸಲನ್ನು ಡಿಸೆಂಬರ್ ತಿಂಗಳಲ್ಲಿಯೂ ವೈಶಾಖೀ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್‌ದಾರು ಪ್ರಕಟಿಸುತ್ತಾರೆ. ಇನ್ನೊಂದು ಹುಕುಂ ಕೊಡುವವರಿವಿಗೂ ಕ್ಲೋಸ್‌ಪೇಟೆ ಸಬ್ ಡಿವಿಜನಿನಲ್ಲಿ ಈ ಕೆಳಗೆ ನಮೂದುಮಾಡಿರುವ ಸ್ಥಳಗಳಲ್ಲಿ ಹರಾಜ್ ಮಾಡಲ್ಪಡುತ್ತೆ.

(3) ಹರಾಜು ಷರತ್ತುಗಳೇನಂದರೆ:—

(a) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್‌ಮಾಡುವದಿಲ್ಲ.

(b) ಆಖೈರ್ ಚಡಸವಾಲ್ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯ ಕೂಡದು.

(c) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರ ಏಜಂಟರಾಗಿ ಸವಾಲ್ ಮಾಡುತ್ತಾರೋ ಕೇಳಲ್ಪಡಬಹುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್‌ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(d) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್‌ಮಾಡಬೇಕು. ಬಾಕಿ ಮೊಬಲಗನ್ನೂ ಮತ್ತು ರೂಪಾಯಿ 1ಕ್ಕೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ಸನ್ನೂ ಸಹ ಹರಾಜ್ ಕಾಯಂ ಆದ ಸಂಗತಿ ಖರಹ ಮೂಲಕ ಅಮಲ್‌ದಾರ್ರಿಂದ ತಿಳಿಸಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟ್ಟನ್ನು ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜ್ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್‌ದಾರನನ್ನು ಗುರಿಮಾಡುವದು.

(e) ಅಂಗೀಕರಿಸಲ್ಪಟ್ಟ ಸವಾಲ್‌ದಾರನು ವೈಶಾಖೀ ಫಸಲನ್ನು ಜೂನ್ 1ನೇ ತಾರೀಖು ಲಾಗಾಯತು ಡಿಸೆಂಬರು 31ರ ವರಿಗೂ, ಕಾರ್ತೀಕ ಫಸಲನ್ನು ಜನವರಿ 1ನೇ ತಾರೀಖು ಲಾಗಾಯತು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿ ರುತ್ತಾನೆ.

ತಾಲ್ಲೂಕು.		ತಾಲ್ಲೂಕಿನಲ್ಲಿ ಹರಾಜ್ ಮಾಡುವ ಸ್ಥಳ.
ಚನ್ನಪಟ್ಟಣ	..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು ಮರವಳಿ (ಜಂಗಲಿ ಪಸಾರೆ ಚನ್ನಪಟ್ಟಣದ ಕಸಬೆಯಲ್ಲಿ ಮಾತ್ರ ಹರಾಜ್‌ಮಾಡಲ್ಪಡುತ್ತೆ)
ಕಾನಕಾನಹಳ್ಳಿ	..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)
ಮಾಗಡಿ	..	ಮಾಗಡಿ ತಾವರೆಕೆರೆ, ಸೋಲೂರು, ಕುದೂರು ಮೊಕ್ಕಾಂಗಳಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)
ಕ್ಲೋಸ್‌ಪೇಟೆ	..	ಬಿಡದಿ ಮತ್ತು ಕ್ಲೋಸ್‌ಪೇಟೆಯಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)

ಬಿ. ಕುಪ್ಪಸಾಮಿನಾಯುಡು,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.

ಇಸ್ತಿಹಾರ್.

V. ಈ ಲೈಸೆನ್ಸ್ ಅನುಸರಿಸಿ, ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಗಳನ್ನು ಬಿಕರಿಮಾಡುವ ಸ್ಥಳವು ಒಳಗಿರತಕ್ಕ ವಿಕ್ರಯಜನರೂ ದಾರಿಯಲ್ಲಿ ತಿರುಗಾಡುವ ಯಾರೊಬ್ಬರಿಗೂ ಕಾಣಬರುವಂತೆ ಬಹಿರಂಗವಾಗಿ ಇರತಕ್ಕದ್ದು.

VI. ಅಂಗಡಿಯ ಮೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೆಯ ಮೇಲೆ ಲೈಸೆನ್ಸಿನ ನಂಬರು ಮತ್ತು ಲೈಸೆನ್ಸದಾರನ ವ ಅಂಗಡಿಯವನ ಹೆಸರು ಸ್ಪಷ್ಟವಾಗಿ ಬರೆಯಲ್ಪಟ್ಟಿರತಕ್ಕದ್ದು. ಸದರೀ ಅಂಗಡಿಯ ಬಹಿರಂಗವಾದ ಸ್ಥಳದಲ್ಲಿ ಬಿಕರಿ ಮಾಡಲ್ಪಡುವ ಸಾರಾಯಿಗಳ ಒಂದು ತಪ್ಸೀಲ್‌ವಾರ್ ನಿರಖ್‌ಪಟ್ಟಿಯನ್ನು ತಗಲು ಹಾಕಿರತಕ್ಕದ್ದು.

VII. (a) ಈ ಲೈಸೆನ್ಸದಾರನು ಮೇಲೆ ಹೇಳಲ್ಪಟ್ಟ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಗಳೊಂದಿಗೆ ಮೋಸಕರವಾಗಿ ನೀರು ಬೆರಸಕೂಡದು ಯಾ ಕೆಡಿಸಕೂಡದು, ಯಾ ಮೋಸಕರವಾಗಿ ನೀರು ಬೆರತಿರುವಂಥಾ ಯಾ ಕೆಡಿಸಿರುವಂಥಾ ಸಾರಾಯಿಗಳೆಂದು ತಿಳಿದು ಮಾರಲೂಕೂಡದು;

(b) ಅಥವಾ ಸದರೀ ಅಂಗಡಿಯಲ್ಲಿ ಮತ್ತೇರಿ ಬೀಳುವದು ಅಥವಾ ಇತರ ಅಕ್ರಮವಾದ ನಡತೆ ನಡೆಯುವದು ತಿಳಿದು ಅವುಗಳಿಗೆ ಅವಕಾಶ ಕೊಡಕೂಡದು;

(c) ಅಥವಾ ಅಂಗಡಿಯಲ್ಲಿ ಯಾವ ವಿಧವಾದ ಜೂಜುಗಳಿಗಾಗಲಿ ತಿಳಿದು ಆಸ್ಪದ ಕೊಡಕೂಡದು;

(d) ಅಥವಾ ವ್ಯಭಿಚಾರಿಗಳನ್ನಾಗಲಿ ಯಾ ಪ್ರಸಿದ್ಧವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ಸದರೀ ಅಂಗಡಿಯಲ್ಲಿ ತನಗೆ ತಿಳಿದು ಅಲ್ಲಿಗೆ ಬರುವಂತೆ ಅಥವಾ ಅಲ್ಲಿ ಇರುವಂತೆ ಮಾಡಕೂಡದು;

(e) ಅಥವಾ ಫರಾರಿಯಾಗಿ ಬಂದ ಯಾವ ಯೂರೋಪಿಯನ್ ಸೋಲ್ಜರಿಗಾದರೂ ಮನಃಪೂರ್ತಿಯಾಗಿ ವ ತಿಳಿದು ಅಲ್ಲಿ ಆಸರೆ ಕೊಡಲೂ ಕೂಡದು ಯಾ ಅಂಥವರನ್ನು ಅಲ್ಲಿ ಬಚ್ಚಿಡಲೂ ಕೂಡದು.

VIII. ಈ ಲೈಸೆನ್ಸ್ ಮೇರೆಗೆ ದರೋಬಸ್ತು ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಗಳ ಬಿಕರಿಗಳನ್ನು ನಗದಾಗಿ ಹಣ ತೆಗೆದುಕೊಂಡು ಮಾರತಕ್ಕದ್ದೇ ಹೊರ್ತು ಸಾಲವಾಗಿ ಕೊಡಕೂಡದು, ಅಥವಾ ಸಾರಾಯಿಗಾಗಿ ಯಾವ ವಸ್ತುಗಳನ್ನೂ ಅಡಮಾನವಾಗಿ ಯಾಗಲಿ ಯಾ ಬದಲಿಯಾಗಿ ಯಾಗಲಿ ಯಿಟ್ಟುಕೊಳ್ಳಕೂಡದು.

IX. ಮೇಲೆ ಹೇಳಲ್ಪಟ್ಟ ಅಂಗಡಿಯು——ಲಾಗಾಯತು———ವರೆಗೆ ತೆರದಿರತಕ್ಕದ್ದು.

X. ಈ ಲೈಸೆನ್ಸದಾರನು ಯಿಡುವ ಲೆಕ್ಕದಲ್ಲಿ ತಿಂಗಳು, ತಾರೀಖು, ಸ್ಪಿರಿಟ್ ಸಾರಾಯಿಗಳು ವ ಉಕ್ಕಿದ ಸಾರಾಯಿಗಳು ತಂದ ಮೊತ್ತ ವ ತರಹೆ, ಯಾವ ಮೂಲಕವಾಗಿ ಅವು ಪಡೆದುಕೊಂಡದ್ದು, ಬಿಕರಿಯಾದ ಮೊತ್ತ ವ ಅದರ ಮೊಬಲಗು, ಮತ್ತು ರೋಜೇನಾ ಹಾಜರಿ ಸರಕಿನ ಶಿಲ್ಕು ಇವುಗಳ ಸಾಬಾ ವ ಕರಾರ್‌ವಾಕಾ ತಪ್ಸೀಲ್ ನಮೂದಿಸತಕ್ಕದ್ದು. ಈ ಲೆಕ್ಕಗಳು ಯಾವಕಾಲದಲ್ಲಾಗಲಿ ಯಕ್ಸೈಜ್ ಇಲಾಖೆಯ ಆಫೀಸರುಗಳ ತನಿಖೆ ಬಗ್ಗೆ ಒಳಪಟ್ಟಿರತಕ್ಕದ್ದು. ಈ ಲೆಕ್ಕದ ಗೋಷ್ವಾರೆಯು ಡೆಪ್ಯುಟಿ ಕಮ್ಮಿಷನರವರಿಗೆ ಕಳುಹಿಸಲ್ಪಡತಕ್ಕದ್ದು.

XI. ಈ ಲೈಸೆನ್ಸ್ ಕ್ರಯ, ದಾನ, ಭೋಗ್ಯ ಯಾ ಮತ್ಯಾವ ರೀತಿಯಿಂದಲಾಗಲಿ ವರ್ಗವಾಗತಕ್ಕದ್ದಲ್ಲಾ, ಮತ್ತು ಇದರಲ್ಲಿ ನಮೂದಿರುವವರು ಹೊರ್ತು ಅನ್ಯಥಾ ಯಾರಿಗೇ ಆಗಲಿ ಇದರಂತೆ ನಡೆಯಲಿಕ್ಕೆ ಅಧಿಕಾರ ವಿರುವದಿಲ್ಲ.

XII. ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಲೈಸೆನ್ಸದಾರ ಯಾ ದುಕಾನ್‌ದಾರನು ಯಕ್ಸೈಜ್ ಕಾನೂನುಗಳಲ್ಲಿ ವ ಅವುಗಳಿಗನುಸರಿಸಿದ ನಿಬಂಧನೆಗಳಲ್ಲಿ ವಿಧಿಸಿರುವ ದಂಡನೆಗಳಿಗೆಲ್ಲಾ ಗುರಿಯಾಗುವದಲ್ಲದೆ ಮತ್ತು 1881ನೇ ಇಸವಿಯ XXIIನೇ ಯಕ್ಸೈಜ್ ಆಕ್ಟಿನ 13ನೇ ಸೆಕ್ಷನ್ ಮೇರೆಗೆ ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರಿದಂತೆ ಈ ಲೈಸೆನ್ಸ್ ರದ್ದಾಗಲಿಕ್ಕೆ ಸಹ ಗುರಿಯಾಗಿರತಕ್ಕದ್ದು.

XIII. ಈ ಲೈಸೆನ್ಸ್———ವರೆವಿಗೆ ಜಾರಿಯಲ್ಲಿರತಕ್ಕದ್ದು.

ತಾರೀಖು

ಡೆಪ್ಯುಟಿ ಕಮ್ಮಿಷನರ್,
ಡಿಸ್ಟ್ರಿಕ್ಟು.

ಈ ಕೆಳಗೆ ರುಜು ಮಾಡಿರುವಂಥಾ ಲ್ಲಿ ವಾಸವಾಗಿರುವ ನ ಮಗನಾದ

ಎಂಬ ನಾನು ಮೇಲ್ಕಂಡ ಲೈಸೆನ್ಸದಾರನಾಗಿ, ನನಗಾಗಿಯೂ, ನನ್ನ ವಾರಸ್‌ದಾರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗವಡೆದಂಥಾವರಿಗೋಸ್ಕರವೂ, ಇದರ ದೆಸೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸೋಣಾದ ವಿಶಿಷ್ಟ ಕರಾರುಗಳಿಗೂ ವ ಷರತ್ತುಗಳಿಗೂ ಒಪ್ಪಿರುತ್ತೇನೆ.

ಲೈಸೆನ್ಸದಾರ್.

ತಿಂಗಳ ನೇ ತಾರೀಖಿನಲ್ಲಿ ನಮ್ಮಗಳ ರೂಬರೂ ರುಜು ವ ಮೊಹರಿನೊಡನೆ ಒಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು:—
1
2
3

305

ತಾರೀಖು 22ನೇ ಜುಲೈ 1896.

ನಂ. 813.—ಫಾ. ಫೈ. 163—95, ಸ್ನೇ 1878ನೇ ಇಸವಿಯ ಫಾರೆಸ್ಟು ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ, ಮೈಸೂರ್ ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಚಕ್ಕುಬಂದಿ ವಿಂಗಡಿಸಲ್ಪಟ್ಟ ಫಾರೆಸ್ಟುಗಳು ಮೇಲ್ಕಂಡ ಫಾರೆಸ್ಟು ರೂಲ್ಸಿನ 1ನೇ ರೂಲ್ ಅನುಸರಿಸಿ, ಸ್ಟೇಟ್ ಫಾರೆಸ್ಟುಗಳಾಗಿ ವರ್ಗೀಕರಿಸಿರುತವೆ:—

ನಂಬರು.	ಫಾರೆಸ್ಟಿನ ಹೆಸರು.	ಸ್ಥಳ.	ಚಕ್ಕುಬಂದಿ.
1	ನರಶಿಂಹದೇವರ ಬೆಟ್ಟ ಫಾರೆಸ್ಟು, ಬ್ಲಾಕ್ ನಂ. II, ಚಿಕ್ಕಬಳ್ಳಾಪುರ ತಾಲ್ಲೂಕು.	7 ಚದುರ ಮೈಲುಗಳು, 521 ಎಕರೆಗಳು.	ಉತ್ತರಕ್ಕೆ—ಪಾಕ್ಮಾಡಲ್ಪಟ್ಟ ಲೈನು (12 ಗಜಗಳ ಅಗಲ) "ವಿಕ್ಟೋರಿಯೇಶ್ವರನ ಗುಡಿ" ಇಂದ ಪ್ರಾರಂಭಿಸಿ, ತಿಪ್ಪೇನಹಳ್ಳಿಯ ಸ. ನಂ. 28ರಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಲೈನು ಮೇಲ್ಕಂಡ ಸರ್ವೆ ನಂಬರಿಂದ ಹೊರಟು, ಕಂಜಯ್ಯನಹಳ್ಳಿಯ ಸ. ನಂ. 108ರ ಉದ್ದಕ್ಕೂ ಮತ್ತು ಕಲವಾರದ ಸರ್ವೆ ನಂ. 131, 35 ವ 37 ಮತ್ತು ಸುಡಹಳ್ಳಿಯ ಸರ್ವೆ ನಂ. 4 ವ 5 ಇವುಗಳ ಭಾಗಗಳಲ್ಲಿ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಲೈನು ಈ ಸ್ಥಳದಿಂದ ತಿರುಗಿ, ಜೋಡಿ ನೊಸಿಕುಂಟೆ ಹೊಸೂರ ಅಂಚಿನಲ್ಲಿ ಹಾದು, ಮುದರನಹಳ್ಳಿಯ ಸರ್ವೆ ನಂ. 57, 76, 79, 85, 111 ವ 12ರ ಉದ್ದಕ್ಕೂ ಹೋಗಿ, ಕರಲಹಳ್ಳಿಯ ಸರ್ವೆ ನಂ. 20ರ ಭಾಗದ ಉದ್ದಕ್ಕೂ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು, ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರ ತಾಲ್ಲೂಕು ಮಾದನಹಳ್ಳಿಯ ಹದ್ದನ್ನಶೇರಿ ಜಾಕಲಮುಡುಗಿನ ಸರ್ವೆ ನಂ. 34 ವ 32ರ ಭಾಗಗಳ ಉದ್ದಕ್ಕೂ ಹಾದು, ನಾಲ್ಕದರನಹಳ್ಳಿಯ ಸರ್ವೆ ನಂ. 22ರ ಭಾಗದ ಉದ್ದಕ್ಕೂ ಹೋಗಿ, ಮೋಟಲೂರ ಸರ್ವೆ ನಂ. 20, 37 ವ 41ರ ಭಾಗಗಳಲ್ಲಿ ತಿರುಗಿ, ಚಿಕ್ಕಬಳ್ಳಾಪುರ ಗೋರೀಬಿದನೂರು ರಸ್ತೆಯ ಪಕ್ಕದಲ್ಲಿ ಉದ್ದಕ್ಕೂ 7 ಫರ್ಲಾಂಗುಗಳ ಫಾಸಲೆ ವರಿವಿಗೆ ಹೋಗಿ, ಹೊರಟ ಸ್ಥಳವನ್ನು ಶೇರುತ್ತದೆ. ಈ ಕೆಳಗೆ ಕಂಡವು ಮಾರ್ಗದ ಹಕ್ಕುದಾರಿಗಳು:— (I) ಸುಡಹಳ್ಳಿ, ಕಣಿವೆಯಿಂದ ಸುಬ್ರಾಯನ ಘಾಟಿ ದೇವಸ್ಥಾನಕ್ಕೆ. (II) ಕಂಗನಹಳ್ಳಿಯಿಂದ ಕೊಪರಹಳ್ಳಿ ಪ್ಲಾಂಟೇಷನ್ ಮಾರ್ಗವಾಗಿ ಮಂಚೇನಹಳ್ಳಿಗೆ.
2	ಡಿಟ್ಟೋ ಫಾರೆಸ್ಟು, ಬ್ಲಾಕ್ ನಂ. III, ಚಿಕ್ಕಬಳ್ಳಾಪುರ ಮತ್ತು ಗೋರೀಬಿದನೂರ್ ತಾಲ್ಲೂಕುಗಳು.	16 ಚದುರ ಮೈಲುಗಳು, 200 ಎಕರೆಗಳು.	ಉತ್ತರಕ್ಕೆ—ಪಾಕ್ಮಾಡಲ್ಪಟ್ಟ ಲೈನು (12 ಗಜಗಳು ಅಗಲ) ದಶರಥಗಳಗುಡಿ ಮರಪನಹಳ್ಳಿಯ ಸರ್ವೆ ನಂ. 8ರಿಂದ ಪ್ರಾರಂಭಿಸುತ್ತೆ. ಪೂರ್ವಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು, ಮರಪನಹಳ್ಳಿಯ ಸರ್ವೆ ನಂ. 78 ವ 90 ಮತ್ತು ಗೊಲ್ಲಹಳ್ಳಿಯ ಸರ್ವೆ ನಂ. 10 ಇವುಗಳ ಭಾಗಗಳ ಉದ್ದಕ್ಕೂ ಮತ್ತು ಹೊನ್ನಗಾರಹಳ್ಳಿಯ ಸರ್ವೆ ನಂ. 41ರ ಭಾಗದ ಉದ್ದಕ್ಕೂ ಹಾದು, ಆವಲಗುರ್ಕಿಯ ಸರ್ವೆ ನಂ. 49, 47, 170, 169, 193, 187, 186, 184 ವ 183 ಇವುಗಳನ್ನ ಶೇರಿ, ಹಿಂದಿನ ಗ್ರಾಮದ ಸರ್ವೆ ನಂ. 185ರ ಉದ್ದಕ್ಕೂ ಹಾದು ಮತ್ತು ಜೋಡಿ ಬಾವಂದಹಳ್ಳಿ ವ ಬೈರೋಗನಹಳ್ಳಿ ಗ್ರಾಮಗಳ ಅಂಚಿನಲ್ಲಿ ಹೋಗಿ, ಅಂಕನಗುಂಡಿಯ ಸರ್ವೆ ನಂ. 71, 72 ವ 74 ಮತ್ತು ತಿಪ್ಪನಹಳ್ಳಿಯ ಸರ್ವೆ ನಂ. 283, 49 ವ 103 ಇವುಗಳ ಉದ್ದಕ್ಕೂ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು ಚಿಕ್ಕಬಳ್ಳಾಪುರ, ಗೋರೀಬಿದನೂರು ರಸ್ತೆಯ ಪಾರ್ಶ್ವದ ಉದ್ದಕ್ಕೂ 58ನೇ ಮೈಲಿಯಲ್ಲಿ 4ನೇ ಫರ್ಲಾಂಗಿನಿಂದ 60ನೇ ಮೈಲಿಯಲ್ಲಿ 7ನೇ ಫರ್ಲಾಂಗಿನ ಒಂದು ಭಾಗದ ವರಿವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಲೈನು ಈ ಸ್ಥಳದಿಂದ ಹೊರಟು, ಗೊಲ್ಲಹಳ್ಳಿಯ ಸರ್ವೆ ನಂ. 29, ಬೋಡವಮಾನಹಳ್ಳಿಯ ಸರ್ವೆ ನಂ. 17 ವ 18, ಪೊಯಿಶೆಟ್ಟಿಹಳ್ಳಿಯ ಸರ್ವೆ ನಂ. 70 ವ 71 ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕು ಕೊಲಮಾನಹಳ್ಳಿಯ ಸರ್ವೆ ನಂ. 48 ವ 46 ಇವುಗಳ ಉದ್ದಕ್ಕೂ ಹಾದು, ರಾಯನಕಲ್ಲಿನ ಸರ್ವೆ ನಂ. 84ರ ಉದ್ದಕ್ಕೂ ಹೋಗಿ ತರುವಾಯ ಗೋರೀಬಿದನೂರು ತಾಲ್ಲೂಕಿನ ದಂಡಿಗನಹಳ್ಳಿಯ ಸರ್ವೆ ನಂ. 136, 12, 137, 138 ವ 11 ಇವುಗಳ ಅಂಚಿನಲ್ಲಿ ಹಾದು, ಚಿಕ್ಕಬಳ್ಳಾಪುರ ತಾಲ್ಲೂಕಿನ ಕಟ್ಟಿಗಾನಹಳ್ಳಿಯ ಸರ್ವೆ ನಂ. 42, 96, 101 ವ 171 ಇವುಗಳ ಉದ್ದಕ್ಕೂ ಹೋಗಿ, ಹೊರಟ ಸ್ಥಳವನ್ನು ಶೇರುತ್ತದೆ. ಈ ಕೆಳಗೆ ಕಂಡವು ಮಾರ್ಗದ ಹಕ್ಕುದಾರಿಗಳು:— (I) ಜನಗಳಿಂದಲೂ ಮತ್ತು ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ಮರವನಹಳ್ಳಿಯಿಂದ ಯರಂಗನಹಳ್ಳಿಗೆ ಹೋಗುವ ಭಂಡೀದಾರಿ.

ನಂಬರು	ಫಾರೆಸ್ಟಿನ ಹೆಸರು.	ಸ್ಥಳ.	ಚಕ್ಕುಬಂದಿ.
2	ನರಸಿಂಹದೇವರ ಬೆಟ್ಟ ಫಾರೆಸ್ಟ್ ಬ್ಲಾಕ್ ನಂ. III, ಚಿಕ್ಕಬಳ್ಳಾಪುರ ಮತ್ತು ಗೋರೀಬಿದನೂರು ತಾಲ್ಲೂಕುಗಳು.	16 ಚದುರ ಮೈಲುಗಳು 200 ಎಕರೆಗಳು.	(II) ಚಿಕ್ಕಬಳ್ಳಾಪುರದಿಂದ ಗೋರೀಬಿದನೂರಿಗೆ ಹೋಗುವ ದೊಡ್ಡ ರಸ್ತೆ ಮತ್ತು ಅಲ್ಲಿಂದ ಜನಗಳಿಂದಲೂ ವ ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ದಂಡಿಗಾನಹಳ್ಳಿಗೆ ತಿರುಗುವ ಭಂಡಿ ದಾರಿ. (III) ಜನಗಳಿಂದಲೂ ಮತ್ತು ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ದಂಡಿಗಾನಹಳ್ಳಿಯಿಂದ ಕಟಿಗಾನಹಳ್ಳಿಗೆ ಹೋಗುವ ಕಾಲದಾರಿ. (IV) ಜನಗಳಿಂದಲೂ ಮತ್ತು ಕಾಲ್ನಡೆಗಳಿಂದಲೂ ಉಪಯೋಗಿಸಲ್ಪಟ್ಟ ಮರಪನಹಳ್ಳಿಯಿಂದ ಆವಲಿಬೆಟ್ಟದ ಮೇಲಿರುವ ಆವಲಕೊಂಡರಾಯಸ್ವಾಮಿ ದೇವಸ್ಥಾನಕ್ಕೆ ಹೋಗುವ ಭಂಡಿದಾರಿ.

ತಾರೀಖು 29ನೇ ಜುಲೈ 1896.

ನಂ. 1111.—ರೆ. 407, ಈ ಕೆಳಗೆ ಕಂಡ ಅಮಲ್ದಾರುಗಳ ಬಡ್ತಿಗಳು, 1896ನೇ ಜುಲೈ ಗುರ್ರೆ ಲಾಗಾಯತು ಹುಕುಂ ಮಾಡಲ್ಪಟ್ಟಿರುತವೆ:—

ಎರಡನೇ ಕ್ಲಾಸಿನಿಂದ ವೊಂದನೇ ಕ್ಲಾಸಿಗೆ (ಖಾಯಂ.)

1. ಕುಣಿಗಲ್ ಡಿ. ರಾಮಸ್ವಾಮಯ್ಯನವರು
2. ಎಂ. ಕೃಷ್ಣರಾಯರು

ಚೆಂಜೀರೀ ಕೃಷ್ಣರಾಯರು (ಸೆಕೆಂಡೆಡ್.)

ಎರಡನೇ ಕ್ಲಾಸಿನಿಂದ ವೊಂದನೇ ಕ್ಲಾಸಿಗೆ (ಆಕ್ಟಿಂಗ್ ತರೀಕ್ ಸಬ್ ಪ್ರೋಟವಾಗಿ.)

ಹೊನ್ನಪ್ಪನಾಯಿಡುಯವರು (ಸೆಕೆಂಡೆಡ್.)

1. ಹೇಮಾ ಹನುಮಂತಯ್ಯನವರು

ಎರಡನೇ ಕ್ಲಾಸ್ (ಆಕ್ಟಿಂಗ್ ಸಬ್ ಪ್ರೋಟಂ.)ನಿಂದ ಎರಡನೇ ಕ್ಲಾಸಿಗೆ (ಖಾಯಂ.)

1. ಹಾಸನದ ಆರ್. ಶ್ರೀನಿವಾಸರಾಯರು
2. ಎ. ಕೃಷ್ಣಪ್ಪನವರು

ಮೂರನೇ ಕ್ಲಾಸಿನಿಂದ ಎರಡನೇ ಕ್ಲಾಸಿಗೆ (ಖಾಯಂ.)

ಮಿರ್ ನಿಜಾಮುದ್ದೀನ್ ಅಲಿಖಾನರು (ಸೆಕೆಂಡೆಡ್.)
ಪೂರ್ಣ ಶ್ರೀನಿವಾಸರಾಯರು (ಸೆಕೆಂಡೆಡ್.)

1 ಕೆ. ಶ್ರೀಕಂಠಯ್ಯನವರು

ಮೂರನೇ ಕ್ಲಾಸಿನಿಂದ ಎರಡನೇ ಕ್ಲಾಸಿಗೆ (ಆಕ್ಟಿಂಗ್ ತರೀಕ್ ಸಬ್ ಪ್ರೋಟವಾಗಿ.)

1. ಪಿ. ಸೀತಾರಾಮಯ್ಯನವರು
2. ವಿ. ಕಂಠೀರವಾಚಾರು
3. ಸಿ. ನರಸಿಂಗರಾಯರು
4. ಎ. ಗೋಪಾಲಯ್ಯಂಗಾರು

ಮೂರನೇ ಕ್ಲಾಸ್ (ಆಕ್ಟಿಂಗ್ ಸಬ್ ಪ್ರೋಟಂ.) ನಿಂದ ಮೂರನೇ ಕ್ಲಾಸಿಗೆ (ಖಾಯಂ.)

1. ಬಾವಾರಾಯರು
2. ಸಿ. ರಾಜಗೋಪಾಲಾಚಾರಿಯವರು

ನಾಲ್ಕನೇ ಕ್ಲಾಸಿನಿಂದ ಮೂರನೇ ಕ್ಲಾಸಿಗೆ (ಖಾಯಂ.)

1. ಪಿ. ನಂಜುಂಡನಾಯಿಡುಯವರು
2. ಪಿ. ಆರ್. ವೆಂಕಟಸುಬ್ಬಯ್ಯನವರು
3. ಚಿಕ್ಕಬಳ್ಳಾಪುರದ ಕೃಷ್ಣರಾಯರು

ನಾಲ್ಕನೇ ಕ್ಲಾಸಿನಿಂದ ಮೂರನೇ ಕ್ಲಾಸಿಗೆ (ಆಕ್ಟಿಂಗ್ ತರೀಕ್ ಸಬ್ ಪ್ರೋಟವಾಗಿ.)

1. ಸಿ. ನಾರಾಯಣರಾಯರು
2. ತೆನ್ನೂರು ರಾಮಚಂದ್ರರಾಯರು
3. ಎಚ್. ಆರ್. ಸುಬ್ಬರಾಯರು
4. ಎಂ. ಗುಲಾಂ ಮೊಹದೀನ್ ಖಾನರು
5. ಮಹಮ್ಮದ್ ರಜಾಯವರು

ತಾರೀಖು 31 ಜುಲೈ 1896.

ನಂ. 1178.—ರೆ. ಫೈ. 1—96—97, ಸ್ 1894ನೇ ಇಸವಿಯ ಲ್ಯಾಂಡ್ ಅಕ್ವಿಜೆಷನ್ ರೆಗ್ಯುಲೇಷನಿನ 4ನೇ ಸೆಕ್ಷನ್ ಅನುಸರಿಸಿ, ಸಂಬಂಧಪಟ್ಟ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧ ಪಡಿಸುವದೇನಂದರೆ,—ಬೀರೂರಿಂದ ಶಿವಮೊಗ್ಗೆಗೆ ರೈಯಿಲ್ ರಸ್ತೆಯನ್ನ ಕಡೂರು ವ ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿರುವ ತರೀಕೆರೆ, ಬಾಲನಹಳ್ಳಿ, ಮುನರಹಳ್ಳಿ, ಬೆಂಕೀಪುರ ಮತ್ತು ಬಿದರೆ ಇವುಗಳ ಮಾರ್ಗವಾಗಿ ಹಾಕುವದಕ್ಕೆ ಬೇಕಾದ ವಿಸಿಷ್ಟ ಜಮೀನುಗಳೂ ಮೇಲ್ಕಂಡ ರೆಗ್ಯುಲೇಷನ್ ಅನುಸರಿಸಿ, ಗವರ್ನಮೆಂಟಿನವರಿಂದ ಲಾಗವಡು ಕೊಟ್ಟು ತೆಗೆದು ಕೊಳ್ಳಲ್ಪಡುವವು ಮತ್ತು ಮೇಲೆ ಹೇಳಲ್ಪಟ್ಟ ಲೈನು ಹಾಕುತ್ತಲಿರುವ ಪಾರ್ಟಿಯವರು ಕೆಲಸ ಮಾಡದಂತೆ ಜನಗಳಿಂದ ಯಾವ ವಿಧದಿಂದಲೂ ಅಡ್ಡಿಮಾಡಲ್ಪಡಕೂಡದು.

ತಾರೀಖು 31ನೇ ಜುಲೈ 1896.

ನಂ. 1238.—ರೆ. 464, ಬೆಂಗಳೂರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸರ್ ಬಿ. ಕುಪ್ಪುಸ್ವಾಮಿ ನಾಯಿಡು ಯವರಿಗೆ, 1896ನೇ ಮೇ 11ನೇ ಮರ್ಕುಂ 9934.—ರೆ. 3824ನೇ ನಂಬರ ಗವರ್ನಮೆಂಟ್ ಇಷ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಮೂರೂವರೇ ತಿಂಗಳ ಪ್ರಿವಿಲೀಜ್ ರಜಾ ಇನ್ನೂ ಎರಡು ದಿನಗಳು ಜಾಸ್ತೀಮಾಡಲ್ಪಟ್ಟಿರುತ್ತೆ.

ನಂ. 1241.—ರೆ. ಫೈ. 146—95, ಅರಕಲಗೂಡು ತಾಲ್ಲೂಕಿನ ಅಮಲ್ದಾರ್ ಬಿ. ಶಂಕರಯ್ಯನವರಿಗೆ, 1896ನೇ ಜುಲೈ 15ನೇ ಮರ್ಕುಂ 512.—ರೆ. ಫೈ. 146—95ನೇ ನಂಬರ ಗವರ್ನಮೆಂಟ್ ಇಷ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಎಂಟು ದಿನಗಳ ಕ್ಯಾಜುಯಲ್ ರಜಾ ಇನ್ನೂ ಒಂದು ದಿನ ಜಾಸ್ತೀಮಾಡಲ್ಪಟ್ಟಿರುತ್ತೆ.

ನಂ. 1247.—ರೆ. ಫೈ. 154—95, ಕುಣಿಗಲ್ ತಾಲ್ಲೂಕು ಅಮಲ್ದಾರ್ ವಿ. ಪಾರ್ಥಸಾರಥಿ ಅಯ್ಯಂಗಾರ್ರಿಗೆ, 1896ನೇ ಮೇ 26ನೇ ಮರ್ಕುಂ 10358—ರೆ. 4085ನೇ ನಂಬರ ಗವರ್ನಮೆಂಟ್ ಇಷ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಅವರ ಕೋರಿಕೆಯಂತೆ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 1ನೇ ಆಗಸ್ಟು, 1896.

ನಂ. 1244.—ರೆ. ಫೈ. 153—95, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟು ಚನ್ನರಾಯಪಟ್ಣ ತಾಲ್ಲೂಕಿನ ಅಮಲ್ದಾರ್ ಬಿ. ಕೇಶವಯ್ಯಂಗಾರ್ರಿಗೆ, 1896ನೇ ಜುಲೈ 28ನೇ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕಿನ ಶಿರಸ್ತೇದಾರ್ರು ತಮ್ಮ ಕೆಲಸಗಳೊಂದಿಗೆ ಸದರೀ ಅಮಲ್ದಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಚನ್ನರಾಯಪಟ್ಣ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ನಂ. 1266.—ರೆ. 479, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ ಅನುಸರಿಸಿ, ಕಾನಕಾನಹಳ್ಳೀ ತಾಲ್ಲೂಕು ಅಮಲ್ದಾರ್ ಗೋವಿಂದಪ್ಪನವರಿಗೆ, 1896ನೇ ಜುಲೈ ಗುರ್ರೇ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ. ಹಾಲಿ ಕೊಟ್ಟಿರುವ ರಜಾ ಪೂರೈಸಿದ ತಾರೀಖು ಲಾಗಾಯತು ಸದರೀ ಯವರು ಪೆನ್ಷನ್ ಮೇಲೆ ತಮ್ಮ ಕೆಲಸದಿಂದ ನಿವೃತ್ತರಾಗುವದಕ್ಕೆ ಪೂರ್ವ ಕೊಟ್ಟ ರಜಾ ಆಗಿರುತ್ತೆ.

ತಾರೀಖು 5ನೇ ಆಗಸ್ಟು 1896.

ನಂ. 1327.—ರೆ. 497, ಈ ಕೆಳಗೆ ಕಂಡ ಸಬ್ ಪ್ರೋಟೆಂ ಪ ಅಜಮಾಯಿಷೀ ತರೀಖಿನ ಅಮಲ್ದಾರ್ರುಗಳು, ಅವರು ಹಾಗೆ ಮೊಕರರ್ರುಮಾಡಲ್ಪಟ್ಟಿದ್ದ ತಾರೀಖುಗಳ ಲಾಗಾಯತು 4ನೇ ಕ್ಲಾಸ್ ಅಮಲ್ದಾರ್ರುಗಳಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ:—

1. ಚಿಕ್ಕಬಳ್ಳಾಪುರ ಕೃಷ್ಣರಾಯರು
2. ಕೃಷ್ಣೇಅರಸಿನವರು
3. ಏ. ವೇದಾಂತದೇಶಿಗಯ್ಯಂಗಾರ್ರು
4. ಮಹದೇವರಾಯರು
5. ಟಿ. ಕೆ. ಸುಂದ್ರರಾಜಯ್ಯಂಗಾರ್ರು
6. ಬಿ. ಶಂಕರಯ್ಯನವರು
7. ಹಸನ್ ಅಲ್ಲಿಬೇಗ್‌ಯವರು
8. ವಿ. ಎನ್. ಗುರುರಾಯರು
9. ಎಸ್. ಕೃಷ್ಣಅಯ್ಯರ್‌ಯವರು
10. ವಿ. ಕೃಷ್ಣರಾಯರು

ನಂ. 1336.—ರೆ. 506, ಈ ಕೆಳಗೆ ಕಂಡ ಆಫೀಸರುಗಳು, ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರುಗಳು, 2ನೇ ಕ್ಲಾಸಿನಿಂದ 1ನೇ ಕ್ಲಾಸಿಗೆ 1896ನೇ ಆಗಸ್ಟು ಗುರ್ರೇ ಲಾಗಾಯತು ಬಡ್ತೀಮಾಡಲ್ಪಟ್ಟಿರುತ್ತಾರೆ:—

1. ಮೆಸ್ಟರ್ ವಿ. ಶ್ರೀನಿವಾಸಾಚಾರ್ರು ಯವರು
2. ಮೆಸ್ಟರ್ ಅಬ್ದುಲ್ ಅಜೀಜ್‌ಯವರು
3. ಮೆಸ್ಟರ್ ಬಿ. ರಾಮಸ್ವಾಮಯ್ಯಂಗಾರ್ರು

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಪಬ್ಲಿಕ್‌ವರ್ಕ್ಸ.

ಇಷ್ತಿಹಾರನಾಮಾ.

ತಾರೀಖು 30ನೇ ಜುಲೈ 1896.

ನಂ. 696.—3927, ಕೋಲಾರ ಡಿವಿಜನಿಗೆ ಸೇರಿದ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ಸಿ. ಎಂ. ಆನಂದತೀರ್ಥರಾಯರಿಗೆ, 1896ನೇ ಜೂನ್ 13ನೇ ತಾರೀಖು ಲಾಗಾಯತು ಎರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಸಿ. ಬರ್ಡ್, ಕರ್ನಲ್,

ಮೈಸೂರ ಗವರ್ನಮೆಂಟ್ ಪಬ್ಲಿಕ್‌ವರ್ಕ್ಸ ಇಲಾಖಾ ಸೆಕ್ರೆಟರಿ.

೩೦೮

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಛಾಯಿಷ್ ಆದ್ದು. [ಸಂ. 32.

ಬೆಂಗಳೂರು, ಗುರುವಾರ, ಆಗಸ್ಟ ತಾ॥ 13, ಸನ್ 1896.

IIನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ.	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ ಡಿಟೋ	,, 170
1	ಮದ್ರಾಸ್ ಒಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ರ್ಯಾಪರವರ ಡಿಟೋ	,, 85

ಖರೀದೀದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ 10½ ರೂಪಾಯಿ ನೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 18.

ಮೃತಪಟ್ಟ ಶ್ರೀಕಂಠಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಗೌರೀಬಿದನೂರಲ್ಲಿರುವ ಸ್ಕೂಲ್ ಹೆಡ್ ಮಾಸ್ಟರ್ ಕೆಲಸದಲ್ಲಿರುವ ಶೀತಾರಾಮಯ್ಯನವರು, ಮೃತಪಟ್ಟ ಸದರೀ ಶ್ರೀಕಂಠಯ್ಯನವರಿಗೆ ಮಾವ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ಶೀತಾರಾಮಯ್ಯನವರು, ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಶ್ರೀಕಂಠಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೀತಾರಾಮಯ್ಯನವರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀಕಂಠಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 19.

ಮೃತಪಟ್ಟ ಮುನಿಶಾಮಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಗೊಲ್ಲರಪೇಟೆಗೆ ಸೇರಿದ ಹಳೇ ಅಕ್ಕಿಪೇಟೇಲಿರುವ ಶಿದ್ದರಾಮಂಣನವರು, ಮೃತಪಟ್ಟ ಸದರೀ ಮುನಿ ಶಾಮಪ್ಪನವರಿಗೆ ತಂಧೆ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಶಿದ್ದರಾಮಂಣನವರು, ಹಳೇ ಅಕ್ಕೀಪೇಟೇ ವಾಸಸ್ಥರಾಗಿ ಮೃತಪಟ್ಟ ಮುನಿಶಾಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸರ್1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿದ್ದರಾಮಂಣನವರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿಶಾಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್1896ನೇ ಇಸವಿ ಆಗಸ್ಟ್ ತಿಂಗಳ 1ನೇ ತಾರೀಖಿನಲ್ಲಿ ಕೋರ್ಟ್ ಮೊಹರಿನಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1896—97ನೇ ಇಸವಿ ಮಿ|| ಅರ್ಜೀ ನಂಬರ 21.

ಮೃತಪಟ್ಟ ಫ್ರಾನ್ಸಿಸ್ ಗ್ರಿಗೊರಿ ಯಾಂಬುವರ ಆಸ್ತೀವಿಷಯದಲ್ಲಿ—

ಅರ್ಜೀದಾರು ಚನ್ನಪಟ್ಣದ ಕನಬಾದಲ್ಲಿರುವ ಫ್ರಾನ್ಸಿಸ್ ಅಮೃತಪಿಳ್ಳೆ, ಮೃತಪಟ್ಟ ಸದರೀ ಫ್ರಾನ್ಸಿಸ್ ಗ್ರಿಗೊರೀರಿಗೆ ಅಂಣ ನು ಆಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಪಟ್ಣದ ಸ್ಥಳದ ಫ್ರಾನ್ಸಿಸ್ ಅಮೃತಪಿಳ್ಳೆಯವರು, ಅರಸೀಕೆರೆ ವಾಸಸ್ಥರಾಗಿ ಮೃತಪಟ್ಟ ಫ್ರಾನ್ಸಿಸ್ ಗ್ರಿಗೊರೀರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಫ್ರಾನ್ಸಿಸ್ ಅಮೃತಪಿಳ್ಳೆಯವರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 2ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಫ್ರಾನ್ಸಿಸ್ ಗ್ರಿಗೊರೀರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 23.

ಮೃತಪಟ್ಟ ಬಿ. ಲಿಂಗಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಶಿವಿಲ್ ಮಿಲಿಟರೀ ಸ್ಟೇಷನ್ ಹಲಸೂರಿನಲ್ಲಿ ಇರುವ ಬಿ. ಸೂರಪ್ಪ ಮತ್ತು ಬಿ. ಸಿ. ಲಿಂಗಯ್ಯ, ಮೃತ ಪಟ್ಟ ಸದರೀ ಬಿ. ಲಿಂಗಯ್ಯನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹಲಸೂರು ಸ್ಥಳದ ಬಿ. ಸೂರಪ್ಪ ಮತ್ತು ಬಿ. ಸಿ. ಲಿಂಗಯ್ಯನವರು, ಹಲಸೂರು ವಾಸಸ್ಥರಾಗಿ ಮೃತಪಟ್ಟ ಬಿ. ಲಿಂಗಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಿ. ಸೂರಪ್ಪ ಮತ್ತು ಬಿ. ಸಿ. ಲಿಂಗಯ್ಯನವರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತ ಪಟ್ಟ ಬಿ. ಲಿಂಗಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896ನೇ ಇಸವಿ ಜುಲೈ ತಿಂಗಳ 29ನೇ ತಾರೀಖಿನಲ್ಲಿ ಕೋರ್ಟ್ ಮೊಹರಿನಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

31

ಸ್ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 24.

ಮೃತಪಟ್ಟ ಶ್ರೀನಿವಾಸರಾಘವಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಮೈಸೂರು ದೇವರಾಜ ಮೊಹಲಾದಲ್ಲಿರುವ A. ಕೃಷ್ಣಯ್ಯಂಗಾರು), ಮೃತಪಟ್ಟ ಸದರೀ ಶ್ರೀನಿವಾಸರಾಘವಾಚಾರ್ಯರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರ್ ದೇವರಾಜ ಮೊಹಲಾ ಸ್ಥಳದ A. ಕೃಷ್ಣಯ್ಯಂಗಾರು), ಶ್ರೀರಂಗದ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸರಾಘವಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ A. ಕೃಷ್ಣಯ್ಯಂಗಾರ್ರ ಅರ್ಜಿಯನ್ನು ಸ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸ ರಾಘವಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 25.

ಮೃತಪಟ್ಟ ಕೃಷ್ಣಶಿಂಗರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಬೆಂಗಳೂರು ಜೋರೀಪೇಟೆ ಕೃಷ್ಣಶಿಂಗರ ಬೀದಿಯಲ್ಲಿರುವ ಸುಬ್ಬಾಬಾಯಿಯು, ಮೃತಪಟ್ಟ ಸದರೀ ಕೃಷ್ಣಶಿಂಗರಿಗೆ ತಾಯಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಸುಬ್ಬಾಬಾಯಿಯು, ಚನ್ನಪಟ್ಣ ವಾಸಸ್ಥರಾಗಿ ಮೃತಪಟ್ಟ ಕೃಷ್ಣಶಿಂಗರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಾಬಾಯಿಯ ಅರ್ಜಿಯನ್ನು 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಶಿಂಗರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896ನೇ ಇಸವಿ ಆಗಸ್ಟ್ ತಿಂಗಳ 1ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 421.

ಮೃತಪಟ್ಟ ದುರ್ಗಪ್ಪನವರ ಯಲ್ಲಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಬೆಂಗಳೂರು ಅಕ್ಕೀಪೇಟೆಯಲ್ಲಿ ಇರುವ ಮರಿಯಪ್ಪನು, ಮೃತಪಟ್ಟ ಸದರೀ ದುರ್ಗಪ್ಪನವರ ಯಲ್ಲಪ್ಪನವರಿಗೆ ಭಾವಮೈದನನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಅಕ್ಕೀಪೇಟೆ ಸ್ಥಳದ ಮರಿಯಪ್ಪನು, ಬೆಂಗಳೂರು ಅಕ್ಕಿಪೇಟೇ ವಾಸಸ್ಥರಾಗಿ ಮೃತಪಟ್ಟ ದುರ್ಗಪ್ಪನವರ ಯಲ್ಲಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮರಿಯಪ್ಪನವರ ಅರ್ಜಿಯನ್ನು ಸ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಯಲ್ಲಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1896ನೇ ಇಸವಿ ಜುಲೈ ತಿಂಗಳ 29ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರ್ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 24ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನೆಂದರೆ,—ಮೈನರ್ ಫಾರೆಸ್ಟ್ ಯಾನೆ ಚಿಲ್ಲರೆ ಪಸೂರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ಸಾದರ್‌ಮಾಡಲ್ಪಟ್ಟಿರುವ 1895ನೇ ಇಸವಿ ಜನವರಿ 31ನೇ ಮುರ್ಕುಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಛಾಯಿಸಾಗಿರುವ ಅದೇ ಇಸವಿ ಜನವರಿ 23ನೇ ಮುರ್ಕುಂ ಇಸ್ತಿಹಾರನ್ನು ಬದಲಾಯಿಸಿ ಅಮಲ್‌ದಾರ್ ಮತ್ತು ಸವಾಲ್‌ದಾರಗಳ ನಸವಳಿಕೆ ಬಗ್ಯೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತೀಕ ಮತ್ತು ವೈಶಾಖಿ ಫಸಲುಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್ದಾರ್ರೇಆಗಲಿ ಅವರ ಗೈರಹಾಜರಿಯಲ್ಲಿ ಶಿರಸ್ತಾರ್ರೇಆಗಲಿ ಈ ಬಗ್ಯೆ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತುಮಾಡುವ ಸ್ಥಳಗಳಲ್ಲಿ ಫಸಲನ್ನು ಹರಾಜು ಮಾಡುವರು. ಕಾರ್ತೀಕ ಫಸಲನ್ನು ಡಿಸೆಂಬರ್ ತಿಂಗಳಲ್ಲಿಯೂ ವೈಶಾಖೀ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್ದಾರು ಪ್ರಕಟಿಸುತ್ತಾರೆ. ಇನ್ನೊಂದು ಹುಕುಂ ಕೊಡುವವರಿವಿಗೂ ಕ್ಲೋಸ್‌ಪೇಟೆ ಸಬ್ ಡಿವಿಜನಿನಲ್ಲಿ ಈ ಕೆಳಗೆ ನಮೂದುಮಾಡಿರುವ ಸ್ಥಳಗಳಲ್ಲಿ ಹರಾಜ್ ಮಾಡಲ್ಪಡುತ್ತೆ.

(3) ಹರಾಜು ಷರತ್ತುಗಳೇನಂದರೆ:—

(a) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್ಮಾಡುವದಿಲ್ಲ.

(b) ಆಖೈರ್ ಚಡಸವಾಲ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯ ಕೂಡದು.

(c) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರ ಏಜಂಟರಾಗಿ ಸವಾಲ್ ಮಾಡುತ್ತಾರೋ ಕೇಳಲ್ಪಡಬಹುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(d) ಚಡಸವಾಲ್ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ಮತ್ತು ರೂಪಾಯಿ 1ಕ್ಕೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ಸನ್ನೂ ಸಹ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್ದಾರ್ರಿಂದ ತಿಳಿಸಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟ್ಟನ್ನ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜ್ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್ದಾರನನ್ನ ಗುರಿಮಾಡುವದು.

(e) ಅಂಗೀಕರಿಸಲ್ಪಟ್ಟ ಸವಾಲ್ದಾರನು ವೈಶಾಖೀ ಫಸಲನ್ನು ಜೂನ್ 1ನೇ ತಾರೀಖು ಲಾಗಾಯತು ಡಿಸೆಂಬರು 31ರ ವರಿಗೂ, ಕಾರ್ತೀಕ ಫಸಲನ್ನು ಜನವರಿ 1ನೇ ತಾರೀಖು ಲಾಗಾಯತು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ತಾಲ್ಲೂಕು.		ತಾಲ್ಲೂಕಿನಲ್ಲಿ ಹರಾಜ್ ಮಾಡುವ ಸ್ಥಳ.
ಚನ್ನಪಟ್ಟಣ	..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು ಮರವಳಿ (ಜಂಗಲಿ ಪಸಾರೆ ಚನ್ನಪಟ್ಟಣದ ಕಸಬೆಯಲ್ಲಿ ಮಾತ್ರ ಹರಾಜ್‌ಮಾಡಲ್ಪಡುತ್ತೆ)
ಕಾನಕಾನಹಳ್ಳಿ	..	ಪ್ರತಿ ಹೋಬಳಿ ಕಸಬೆಯಲ್ಲಿಯೂ ಆಯಾ ಹೋಬಳಿ ಬಾಬತು (ಮರವಳಿ ಮತ್ತು ಜಂಗ್ಲಿಪಸಾರೆ ಸಹ)
ಮಾಗಡಿ	..	ಮಾಗಡಿ ತಾವರೆಕೆರೆ, ಸೋಲೂರು, ಕುದೂರು ಮೊಕ್ಕಾಂಗಳಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)
ಕ್ಲೋಸ್‌ಪೇಟೆ	..	ಬಿಡದಿ ಮತ್ತು ಕ್ಲೋಸ್‌ಪೇಟೆಯಲ್ಲಿ (ಮರವಳಿ ಮತ್ತು ಜಂಗ್ಲಿ ಪಸಾರೆ ಸಹ)

ಬಿ. ಕುಪ್ಪುಸಾಮಿನಾಯುಡು,
ಫಾರ್ ಡೆಪ್ಯುಟಿ ಕಮ್ಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡು ಆಫಿಸಿನಿಂದ.

ಇಸ್ತಿಹಾರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರಸಿಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದುಕೊಳ್ಳುವ ಬಗ್ಯೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರಿವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫಿಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬ್‌ಗಳನ್ನು ತೆಗದುಕೊಳ್ಳತಕ್ಕದ್ದು. ಒಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸಿಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮೆಮೋ ತಯಾರ್ಮಾಡಿ ಮ್ಯುನಿಸಿಪಲ್ ಆಫಿಸಿನಲ್ಲಿ ಚಿಕಟಾಯಿಸಲ್ಪಡುವದು.

ತಾರೀಖು 18ನೇ ಮೇ 1896.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.

ಕೋಲಾರ್ ಡಿಸ್ಟ್ರಿಕ್ಟು.

ತಾರೀಖು 8ನೇ ಆಗಸ್ಟ 1896.

ಸ್ಥಿರಸ್ವತ್ತಿನ ಹರಾಜ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಜೋಡಿ ಬಾಕಿದಾರರಾದ ಹನುಮಂತಾಚಾರ್ರು ವಗೈರೆರಿಂದ ಬರಬೇಕಾದ ನೀರಸರದಿ ಬಾಕಿಗಾಗಿ ಇದರಡಿ ನಮೂದಾಗುವ ಘೌರ್‌ಫಿಟ್ಟಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್ದಾರ್ರ ಕಚೇರಿಲಿ 1896ನೇ ಸೆಪ್ಟಂಬರ್ 26ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕಂ ಚಡದರಖುಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 96—12—5 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತ್ತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷ್ನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷ್ನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಡೆಪ್ಯುಟಿ ಕಮಿಷನರವರಿಂದ ಸರ್ಕಾ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರ್ಟಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತೆಗಳಿಗೆ ಗವರ್ನಮೆಂಟಿನವರು ಜವಾಬದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತು.			ಜಮೀನು. ನಂಬರ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.		ಜಮೀನು. ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.		
1	2	3	4	5	6			7	8	9		10			11		
					ರೂ.	ಆ.	ಪೈ.			ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಬಳ್ಳಾಪುರ.	ಚಿಕ್ಕಬಳ್ಳಾಪುರ.	ಜೋಡಿ ಬೊಮ್ಮನಹಳ್ಳಿ ಗ್ರಾಮ.	ಹನುಮಂತಾಚಾರ್ರು ವಗೈರೆರು	..	..	..	..	ಗ್ರಾಮದಲ್ಲಿ ಬಾಕಿದಾರ್ರಿಗೆ ಇರುವ ಹಿಸ್ಸೆಗಳು.	ಖುಷ್ಕೀ	299	11	596	4	0	96	0	5
									ತರೀ	20	13						
									ಬಾಗಾಯತು	38	26						
									ಪರಂಪೋಕು	78	20						
									ಟೋಟಲ್	436	30				ನೋಟಿಸ ಫೀ ವಗೈರೆ 0–12–0		
									ಸಾಲಿನಾ ಸರ್ಕಾರಕ್ಕೆ ಕೊಡತಕ್ಕ ಜೋಡಿ	..	..	ನೀರ್ ಸರದಿ		..	96–12–5		
												136	0	0	ಹರಾಜ್ ತಾರೀಕ್ ವರಿಗೆ ಬಡ್ಡಿ ಕೊಡಬೇಕು.		

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ತುಮಕೂರ್ ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸನ್ 1896—97ನೇ ಸಾಲಿಗೆ ಅಂದರೆ, 1896ನೇ ಜುಲೈ 1ನೇ ತಾರೀಖು ಲಾಗಾಯತು 1897ನೇ ಜೂನ್ 30ನೇ ತಾರೀಖಿನ ವರಿಗೆ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಆಯಾ ತಾಲ್ಲೂಕು ಕಚೇರಿಯಲ್ಲಿ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆ. ಹರಾಜ್ ಬೆಳಿಗ್ಗೆ 11 ಘಂಟೆಗೆ ಶುರೂ ಆಗುತ್ತೆ.

ತಾಲ್ಲೂಕು.	ತಾರೀಖು.	ಸ್ಥಳ.
ತಿಪ್ಟೂರ್	1896ನೇ ಆಗಸ್ಟ್ 22	ತಿಪ್ಟೂರ್
ಪಾವಗಡ	ಡಿಟೋ	ಪಾವಗಡ

2. ಅಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು [illegible] ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೆ [illegible] ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಇಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರ್ರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಆಯಾ ತಾಲ್ಲೂಕು ಅಮಲ್‌ದಾರ್ರಿಂದ ಚಡ ಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ದೇಖಿಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡನಾಗಿ ತೆಗೆದುಕೊಳ್ಳಲ್ಪಡುತ್ತೆ.

6. ಇಜಾರೆದಾರರು ಹಿಡುವಳಿ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರರು ವಿನಹ ಇತರರಿಗೆ ಮಾರಕೂಡದು.

7. ಇಜಾರೆದಾರರು ಹುಲ್ಲುಬನ್ನಿ ಯಾ ಹುಲ್ಲುಗಾವಲ್ ಇಜಾರೆದಾರರ ಹಕ್ಕಿಗೆ ಆತಂಕಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗೆದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರರು ಅಗಿಯುಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್ ಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್ದಾರರಿಂದ ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರರು ಸಾಗಿಸಕೂಡದು.

ತಾರೀಖು 3ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸನ್ 1896–97ನೇ ಸಾಲಿಗೆ, ಅಂದರೆ 1896ನೇ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ ವರಿಗೆ, ತುಮಕೂರು ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ತುಮಕೂರು ತಾಲ್ಲೂಕು ಕಚೇರಿಯಲ್ಲಿ 1896ನೇ ಸೆಪ್ಟೆಂಬರ್ 4ನೇ ತಾರೀಖಿನ ಬೆಳಿಗ್ಗೆ 11 ಘಂಟೆಗೆ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರರು ಅಥವಾ ಶಿರಸ್ತೇದಾರರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡೆದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು.

5. ಚಡಸವಾಲ್ದಾರರು, ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಆಯಾ ತಾಲ್ಲೂಕು ಅಮಲ್ದಾರರಿಂದ ಚಡಸವಾಲ್ದಾರರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳ ಒಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆ ಯಂತೆ ಆಗುವ ಲೋಕಲ್ ಸೆಸ್ ದೇಖೀಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

6. ಇಜಾರೆದಾರರು ಹಿಡುವಳಿ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರರ ಹಕ್ಕಿಗೆ ಆತಂಕಪಡಿಸಕೂಡದು.

8. ಹಿಡುವಳಿಯಲ್ಲಿಲ್ಲದ ಜಮೀನುಗಳನ್ನ ಸರ್ಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರರ ಅಭ್ಯಂತರವೇನೂ ಇಲ್ಲ ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನು ಜಮಾಯಿಸುವದಕ್ಕಾಗಿ ಜಮೀನುಗಳನ್ನು ಇಜಾರೆದಾರರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್ಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್ದಾರರಿಂದ ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರರು ಸಾಗಿಸಕೂಡದು.

ತಾರೀಖು 3ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸನ್ 1896–97ನೇ ಸಾಲಿಗೆ ಅಂದರೆ, 1896ನೇ ಜುಲೈ 1ನೇ ತಾರೀಖು ಲಾಗಾಯತು 1897ನೇ ಜೂನ್ 30ನೇ ತಾರೀಖು ವರಿಗೆ ಈ ಕೆಳಗೆ ನಮೂದಾಗುವ ತಿಪಟೂರು ಮತ್ತು ಪಾವಗಡ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಸರಕಾರಿ ಬಂಜರ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸಿಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನ ಅಮಲ್ದಾರರ ರೂಬರೂಬ್ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಮತ್ತು ಸ್ಥಳಗಳಲ್ಲಿಯೂ ಹರಾಜ್ ಮಾಡಲ್ಪಡುತ್ತೆ. ಹರಾಜ್ ಮಧ್ಯಾಹ್ನ 11 ಘಂಟೆಗೆ ಶುರು ಆಗುತ್ತೆ. ಹರಾಜ್ ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ತಾಲ್ಲೂಕು.	ಪಸಾರೇ ಜಿನಸಿ.	ತಾರೀಖು.	ಸ್ಥಳ.
ತಿಪಟೂರು.	ಚೆನ್ನಾಯಕನಹಳ್ಳಿ, ಈರ್ಲಗೆರೆ, ಚಿಕ್ಕಮಾರ್ಪನ ಹಳ್ಳಿ, ಕಡೇಹಳ್ಳಿ ಕಾವಲ್, ಕೆಂಚವಾರನಹಳ್ಳಿ, ಆದಿನಾಯಕನಹಳ್ಳಿ, ಲಕ್ಷ್ಮೀಪುರ ಈ ಗ್ರಾಮಗಳಲ್ಲಿರತಕ್ಕ ಅಳಲೇಕಾಯಿ. ಬಿದರೆಗುಡಿ, ಲಕ್ಕಿಹಳ್ಳಿ ಕಾವಲ್, ಹೊಂಗಲಕ್ಷ್ಮೀ ಕಾವಲ್, ಈಚನೂರ ಕಾವಲ್, ಹಾಲ್ಕುರಿಕೆ ಕಾವಲ್‌ಗಳಲ್ಲಿರುವ, 1 ತಾರೆಕಾಯಿ 2 ದಿಂಡಗದ ಗೋಂದು 3 ಕಪಿಲಾರಂಗು 4 ಹೊಂಗೇಬೀಜ 5 ತಂಗಡಿಮ್ಯಾಣ 6 ಬ್ಯಾಲದಕಾಯಿ 7 ಪತಂಗ	1896ನೇ ಸೆಪ್ಟಂಬರ್ 5ನೇ ತಾರೀಖು.	ತಿಪಟೂರು.
ಪಾವಗಡ.	1 ಜೇನುತುಪ್ಪ 2 ಕಲ್ಲುಹುವ್ವು 3 ಅಳಲೇಕಾಯಿ 4 ತಗರಸಿಬೀಜ 5 ಮಡ್ಡಿಚಕ್ಕೆ 6 ಶೀತಾಫಲ	1896ನೇ ಸೆಪ್ಟಂಬರ್ 8ನೇ ತಾರೀಖು.	ಪಾವಗಡ.

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ 1ಕ್ಕೆ 1 ಅಣೆಯಂತೆ ಲೋಕಲ್‌ಸೆಸ್ ವಸೂಲ್ಮಾಡಲ್ಪಡುವದು.

3. ಕಿಪ್ತು ಕಾಲದ ವಳಗೆ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಠೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಫಾಯಿದೆ ಭಾಗ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವಫಸಲನ್ನ ರೂಢಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್, ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ತಾರೀಖು 29ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಬುಕ್ಕಾಪಟ್ಣ, ಮಂಚಲುದೊರೆ, ತೀರ್ಥರಾಂಪುರ ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು 1896—97ನೇ ಸಾಲಿ ಅಂದರೆ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂನ್ ಆಖೈರುವರಿಗೆ ಜಮಾಯಿಸಿಕೊಳ್ಳುವ ಹಕ್ಕು ತುಮಕೂರ್ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರು ಅಥವಾ ಅವರಿಂದ ನೇಮಿಸಲ್ಪಡುವ ಸಬ್ ಅಸಿಸ್ಟೆಂಟ್ ಕಂಸರ್‌ವೇಟರ್ ರೂಬರೂ 1896ನೇ ಇಸವಿ ಸೆಪ್ಟಂಬರ್ ತಾರೀಖು 4ರಲ್ಲು ಬಹಿರಂಗವಾಗಿ ತುಮಕೂರ್ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಹರಾಜುಮಾಡಲ್ಪಡುತ್ತೆ.

2. ಚಡಸವಾಲ್‌ದಾರನು ಹರಾಜು ಕೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಮೊಬಲಗು ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು ಹದಿನೈದು ದಿವಸದವಳಗಾಗಿ ಪಾವತಿ ಮಾಡತಕ್ಕದ್ದು, ಪೂರಾ ಹರಾಜು ಮೊಬಲಗ್ಗೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ಮಾಡಲ್ಪಡುವದು.

3. ಖಿಸ್ತು ಮೊಬಲಗು ಗೊತ್ತಾದ ಕಾಲದವಳಗಾಗಿ ಪಾವತಿ ಮಾಡದೆ ಹೋದರೆ ಚಡಸವಾಲ್‌ದಾರನ ಠೇವಣಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಅವಲ್ ಇಜಾರೆದಾರನ್ನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಉಂಟಾಗುವ ಫಾಯಿದೆ ಭಾಗ ಅವಲ್ ಇಜಾರೆದಾರನು ಹೊಂದಲು ಅರ್ಹನಾಗುವದಿಲ್ಲ.

4. ಹರಾಜು ಮಂಜೂರಾದ ಕೂಡ್ಲೆ ಇಜಾರೆದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರ ಹೆಸರಿಗೆ ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನ ಬರೆದುಕೊಡಬೇಕು. ಈ ಮುಚ್ಚಳಿಕೇ ಷರತ್ತುಗಳು ಹರಾಜುಕಾಲದಲ್ಲಿ ತಿಳಿಸಲ್ಪಡುತ್ತವೆ.

ತಾರೀಖು 29ನೇ ಜುಲೈ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರ್ ಡಿಸ್ಟ್ರಿಕ್ಟಿನಲ್ಲಿರುವ ದೇವರಾಯದುರ್ಗ, ಮಧ್ದಗಿರಿ, ಕುದರೆಕಣಿವೆ, ಹುಲಿಯೂರುದುರ್ಗ, ಕಂಪ್ಲಾಪುರ, ಬುಕ್ಕಾಪಟ್ಣ, ಮಂಚಲುದೊರೆ, ತೀರ್ಥರಾಂಪುರ ಸ್ಟೇಟ್ ಫಾರೆಸ್ಟುಗಳಲ್ಲಿರತಕ್ಕ ಕಲ್ಲುಹುವ್ವು 1896—97ನೇ ಸಾಲ್ ಅಂದರೆ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂನ್ ಆಖೈರು ಪರ್ಯಂತರ ಜಮಾಯಿಸಿಕೊಳ್ಳುವ ಹಕ್ಕು ತುಮಕೂರ್ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ 1896ನೇ ಇಸವಿ ಸೆಪ್ಟಂಬರ್ ತಾರೀಖು 4ರಲ್ಲು ಬಹಿರಂಗವಾಗಿ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಹರಾಜುಮಾಡಲ್ಪಡುತ್ತೆ.

2. ಚಡಸವಾಲ್‌ದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆ ಮೊಬಲಗು ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು ಹದಿನೈದು ದಿವಸದವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ಮಾಡುವದು.

3. ಖಿಸ್ತು ಮೊಬಲಗು ಗೊತ್ತಾದ ಕಾಲದವಳಗಾಗಿ ಹಾಜರ್ಮಾಡದೆ ಹೋದರೆ ಚಡಸವಾಲ್‌ದಾರನ ಠೇವಣಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಅವಲ್ ಇಜಾರ್‌ದಾರನ್ನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಉಂಟಾಗುವ ಫಾಯಿದೆ ಭಾಗ ಅವಲ್ ಇಜಾರೆದಾರನು ಹೊಂದಲು ಅರ್ಹನಾಗುವದಿಲ್ಲ.

ಎಂ. ವೆಂಕಟನಾರಣಪ್ಪ, ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್.

ಮೈಸೂರ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಮೈಸೂರು ತಾಲ್ಲೂಕು ಕಾಯುಂಗುತ್ತಾ ವುದಯೂರು ಗ್ರಾಮದಲ್ಲಿ ಇರುವ ಶಿವಾಚಾರದ ಹೊನ್ನಪ್ಪನ ವಿಷಯದಲ್ಲಿ—

ಸನ್ 1896—97ನೇ ಇಸವಿ ದಿವಾಳಿ ಕೇಸ್ ನಂಬರ್ 422.

ಹುಕುಂ.

ಮೇಲ್ಕಂಡ ಹೊನ್ನಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಹೊನ್ನಪ್ಪನ ಪರವಾಗಿ ಫಸ್ಟ್‌ಗ್ರೇಡ್ ಪ್ಲೀಡರ್ ವೆಂಕಟರಾಮಯ್ಯನವರನ್ನೂ ಮತ್ತು ಸದರೀಯವನ ದೇಣೇದಾರ್ರಾದವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ದೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ,—1ನೇ ಮೈಸೂರು ಕಿಲ್ಲೆಯಲ್ಲಿರುವ ಕೃಷ್ಣೋ ಅರಸಿನವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರಿ ಶಿವಾಚಾರದ ಹೊನ್ನಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1896ನೇ ಇಸವಿ ಜುಲೈ 27ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ದೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಸಾಲವಾದ ತಾರೀಖು ಇಲ್ಲವೆ ಸುಮಾರು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಮೈಸೂರು ಕಿಲ್ಲೇಲಿರುವ ಕೃಷ್ಣೋಅರಸಿನವರು	250	..	ಡಿಕ್ರಿ ಬಾಬತು	

ಎಸ್. ಆರ್. ಸುಬ್ಬರಾಮಅಯ್ಯರ್,
ಸಬ್ ಜಡ್ಜ.

ಮೈಸೂರ್ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 12ನೇ ಜುಲೈ 1896.

1. ಕಂದಾಯದ ಬಾಕಿದಾರರಾದ ಮೈಸೂರು ವಗ್ಯೆರೆ ಗ್ರಾಮದ ಕೋಮಾರ ತಿರನಾರಣಯ್ಯಂಗಾರಿ ವಗ್ಯೆರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸರಕಾರಕ್ಕೆ ಶೇರಿಸಿಕೊಳ್ಳಲ್ಪಟ್ಟ ಸ್ಥಿರಸ್ವತ್ತು ಮೈಸೂರ್ ಡಿಸ್ಟ್ರಿಕ್ಟ್ ಯಡತೊರೆ ತಾಲ್ಲೂಕು ಸರ್ವ ಮಾನ್ಯ ಹಳೆಯೂರು ಹೊಸೂರು ಗ್ರಾಮದಲ್ಲಿ 1896ನೇ ಸೆಪ್ಟಂಬರ್ 5ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಡೆಪ್ಯುಟಿ ಕಮಿಷ್ನರ್ ಸಾಹೇಬರವರು ಅಥವಾ ಅಸಿಸ್ಟೆಂಟ್ ಕಮಿಷ್ನರ್ ಸಾಹೇಬರವರಿಂದ ಆ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1896ನೇ ಸಾಲಿಗೆ ಪೂರ್ತಿಯಾಗಿ * ಮನ್ಮಥ ಸಂವತ್ಸರಕ್ಕೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ 393—15—8 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದು ಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುಖ್ತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀ

ಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜ್ ನಿಲ್ಲಿಸಲ್ಪಡುತ್ತೆ.

7. ಹರಾಜ್ ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜ್‌ದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜ್‌ದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್‌ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ನಂಬರ್ ಅಥವಾ ಗದ್ದೆ ಹೆಸರು.	ಖುಷ್ಕಿ, ತರಿ, ಬಾಗಾಯತು.	ವಿಸ್ತೀರ್ಣ.			ಕಂದಾಯ.			ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.		
1	2	3	4	5	6	7	8	9			10			11		
					ರೂ. ಆ. ಪೈ.			ಖ.	ಕೊಳ.	ಮಾನ.	ರೂ.	ಆ.	ಪೈ.	ರೂ.	ಆ.	ಪೈ.
ಬೇಲೂರು.	ಬ್ಯಾಡರಹಳ್ಳಿ.	ಹಗರನಹಳ್ಳಿ ಹೆಬ್ಬಾರು ಹೊಸಹಳ್ಳಿ.	ಕೊಮಾರ ತಿರನಾರಣಯ್ಯಂಗಾರು ವಗೈರೆ 18 ಜನ	..	0	ಹಗರನಹಳ್ಳಿ ಹೆಬ್ಬಾರು ಹೊಸಹಳ್ಳಿ.	ಬಾಗಾಯತು	27	12	11	207	1	2	395	3	8
							ಖುಷ್ಕಿ	85	15	$13\frac{3}{4}$	1205	8	9			
							ತರೀ	86	15	$13\frac{3}{4}$	1595	9	0	ಮೊಬಲಗು ಪಾವತಿ ವರಿಗಿನ ಬಡ್ಡಿ ಸಹ		

* ಯಾ ಬಾಕಿ ಇರುವ ಮೊಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 15ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ 1896—97ನೇ ಸಾಲಿಗೆ ಬೇಲೂರು ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಬೇಲೂರು ತಾಲ್ಲೂಕು ಕಚೇರಿಯಲ್ಲಿ ಬರುವ ಆಗಸ್ಟ್ 31ನೇ ತಾರೀಖಿನ ಬೆಳಗ್ಯೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್‌ದಾರು ಅಥವಾ ಶಿರಸ್ತೇದಾರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರರು ಹರಾಜ್ ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡಬೇಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್‌ದಾರರಿಂದ ಚಡಸವಾಲ್‌ದಾರರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡ ಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ದೇಖೀಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೆದಾರರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೇದಾರರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನ್‌ಗಳನ್ನ ಇಜಾರೆದಾರರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ತಾಲ್ಲೂಕು ಅಮಲ್‌ದಾರರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರರು ಸಾಗಿಸಕೂಡದು.

ತಾರೀಖು 18ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ 1896—97ನೇ ಸಾಲಿಗೆ ಅರಶೀಕೆರೆ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಅರಶೀಕೆರೆ ತಾಲ್ಲೂಕು ಕಚೇರಿಯಲ್ಲಿ ಬರುವ ಸೆಪ್ಟಂಬರ್ 5ನೇ ತಾರೀಖು ಬೆಳಿಗ್ಯೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್‌ದಾರರು ಅಥವಾ ಶಿರಸ್ತೇದಾರರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಅಮಲ್‌ದಾರರಿಂದ ಚಡಸವಾಲ್‌ದಾರರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ದೇಖೀಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೇದಾರರು ಹಿಡುವಳಿ ಜಮೀನ್‌ಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನ್‌ಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನ್‌ಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನ್‌ಗಳನ್ನ ಇಜಾರೇದಾರರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ತಾಲ್ಲೂಕು ಅಮಲ್‌ದಾರರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರರು ಸಾಗಿಸಕೂಡದು.

ತಾರೀಖು 24ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ 1896—97ನೇ ಸಾಲಿಗೆ ಹೊಳೇನರಶೀಪುರ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಹೊಳೇನರಶೀಪುರದ ತಾಲ್ಲೂಕು ಕಚೇರಿಯಲ್ಲಿ ಬರುವ ಸೆಪ್ಟಂಬರ್ 12ನೇ ತಾರೀಖಿನ ಬೆಳಿಗ್ಯೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್‌ದಾರರು ಅಥವಾ ಶಿರಸ್ತೇದಾರರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಅಮಲ್‌ದಾರರಿಂದ ಚಡಸವಾಲ್‌ದಾರರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ದೇಖಿಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೆದಾರರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರರ ಹಕ್ಕಿಗೆ ಅತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಖ್ಸೀಲ್‌ಗಳು ನಮೂದು ಕಂಡು ತಾಲ್ಲೂಕು ಅಮಲ್‌ದಾರರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರರು ಸಾಗಿಸಕೂಡದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ 1896—97ನೇ ಸಾಲಿಗೆ ಆಲೂರು ಸಬ್ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಆಲೂರು ಸಬ್ ತಾಲ್ಲೂಕು ಕಚೇರಿಯಲ್ಲಿ ಬರುವ ಸೆಪ್ಟಂಬರ 8ನೇ ತಾರೀಖಿನ ಬೆಳಿಗ್ಯೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಡೆಪ್ಯುಟಿ ಅಮಲ್‌ದಾರರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಡೆಪ್ಯುಟಿ ಅಮಲ್‌ದಾರರಿಂದ ಚಡಸವಾಲ್‌ದಾರರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್‌ಸೆಸ್ ದೇಖಿಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೆದಾರರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್‌ಗಾವಲ್ ಇಜಾರೆದಾರರ ಹಕ್ಕಿಗೆ ಅತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಖ್ಸೀಲ್‌ಗಳು ನಮೂದು ಕಂಡು ತಾಲ್ಲೂಕು ಡೆಪ್ಯುಟಿ ಅಮಲ್‌ದಾರರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರರು ಸಾಗಿಸಕೂಡದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ 1896—97ನೇ ಸಾಲಿಗೆ ಅರಕಲಗೂಡು ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಅರಕಲಗೂಡು ತಾಲ್ಲೂಕು ಕಚೇರಿಯಲ್ಲಿ ಬರುವ ಸೆಪ್ಟಂಬರ 14ನೇ ತಾರೀಖಿನ ಬೆಳಿಗ್ಯೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್‌ದಾರರು ಅಥವಾ ಶಿರಸ್ತೇದಾರರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರ್ರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಅಮಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು.

6. ಇಜಾರೆದಾರ್ರು ಹಿಡುವಳಿ ಜಮೀನ್ಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರ್ರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರ್ರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರ್ರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನ್ಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀನ್ಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗೆದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನ್ಗಳನ್ನ ಇಜಾರೇದಾರ್ರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ತಾಲ್ಲೂಕು ಅಮಲ್‌ದಾರಿಂದ ಒಂದು ಮಾಫೀ ಲೈಸೆನ್ಸನ್ನು ಪಡಿಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸಕೂಡದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ನ 1896—97ನೇ ಸಾಲಿಗೆ ಹಾಸನ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಹಾಸನ ತಾಲ್ಲೂಕು ಕಚೇರಿಯಲ್ಲಿ ಬರುವ ಸೆಪ್ಟಂಬರ್ 7ನೇ ತಾರೀಖಿನ ಬೆಳ್ಗ್ಯೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರ್ರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಅಮಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ ದೇಖೀಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೆದಾರ್ರು ಹಿಡುವಳಿ ಜಮೀನ್ಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರ್ರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರ್ರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನ್ಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರವೇನೂ ಯಿರುವದಿಲ್ಲ. ಪರಂತು ಅಂಥಾ ಜಮೀನ್ಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನ್ಗಳನ್ನ ಇಜಾರೆದಾರ್ರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸಕೂಡದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ನ 1896—97ನೇ ಸಾಲಿಗೆ ಮಂಜಿರಾಬಾದ್ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಮಂಜಿರಾಬಾದ್ ತಾಲ್ಲೂಕು ಕಚೇರಿಯಲ್ಲಿ ಬರುವ ಸೆಪ್ಟಂಬರ್ 9ನೇ ತಾರೀಖಿನ ಬೆಳ್ಗ್ಯೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್‌ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್‌ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರ್ರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಅಮಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ ದೇಖಿಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೆದಾರ್ರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರ್ರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರ್ರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರ್ರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರ ವೇನೂ ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರ್ರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸಂಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸಕೂಡದು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ನಗರ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 13.

ಮೃತಪಟ್ಟ ತೀರ್ಥಹಳ್ಳಿ ತಾಲ್ಲೂಕು ಅಗ್ರಹಾರದ ಮಾಗಣಿ ಮರಹಳ್ಳಿಯಲ್ಲಿದ್ದ ಸುಬ್ರಾಯರ ಹೆಂಡತಿ ಬೆಳ್ಳಮ್ಮ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ತೀರ್ಥಹಳ್ಳಿ ತಾಲ್ಲೂಕು ಮಳೂರು ಮಾಗಣಿ ತೆಂಗಿನಕೆರೆಯಲ್ಲಿರುವ ಗುಂಡಪ್ಪಯ್ಯ ಬಿನ್ ವೆಂಕಪ್ಪಯ್ಯ, ಮೃತಪಟ್ಟ ಸದರೀ ಬೆಳ್ಳಮ್ಮ ಎಂಬುವರಿಗೆ ತಂಗೀ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ತೆಂಗಿನಕೆರೆ ಸ್ಥಳದ ಗುಂಡಪ್ಪಯ್ಯ ಎಂಬುವರು, ಮರಹಳ್ಳಿ ವಾಸಸ್ಥರಾಗಿ ಮೃತಪಟ್ಟ ಬೆಳ್ಳಮ್ಮ ಎಂಬುವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗುಂಡಪ್ಪಯ್ಯ ಎಂಬುವರ ಅರ್ಜಿಯನ್ನು ಸರ್ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೆಳ್ಳಮ್ಮ ಎಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 14.

ಮೃತಪಟ್ಟ ಚನ್ನೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚಿಕ್ಕಮಗಳೂರು ತಾಲ್ಲೂಕು ಆಣೂರು ಮಾಗಣಿ ಗಡಬನಹಳ್ಳಿ ವಾಸಿ ಶಿದ್ದಮ್ಮ ಹೆಗ್ಗಡ್ತಿ ಕೋಂ. ಚನ್ನೇಗವುಡ, ಮೃತಪಟ್ಟ ಸದರೀ ಚನ್ನೇಗವುಡರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಗಡಬನಹಳ್ಳಿ, ಸ್ಥಳದ ಶಿದ್ದಮ್ಮ ಹೆಗ್ಗಡತಿ ಎಂಬುವರು, ಗಡಬನಹಳ್ಳೀ ವಾಸಸ್ಥರಾಗಿ ಮೃತಪಟ್ಟ ಚನ್ನೇಗವುಡರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿದ್ದಮ್ಮ ಹೆಗ್ಗಡತಿ ಎಂಬುವರ ಅರ್ಜಿಯನ್ನು ಸರ್ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನೇಗವುಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896ನೇ ಇಸವಿ ಜುಲೈ ತಿಂಗಳ 13ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 33.

ಶಿವಮೊಗ್ಗೆಯಲ್ಲಿ ಮೃತಪಟ್ಟ ಬಾಗೂರು ವೆಂಕಟಸುಬ್ಬಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಶಾಮಣ್ಣ, 2ನೇ ನಂಜುಂಡಯ್ಯ, 3ನೇ ನಾಗಪ್ಪ, 4ನೇ ವೆಂಕಟರಮಣ ಮೈನರ್, ಗಾರ್ಡಿಯನ್ ಶಿವಮೊಗ್ಗೆಯಲ್ಲಿರುವ ಕಾಮಸಮುದ್ರದ ಕೃಷ್ಣಪ್ಪ, ಮೃತಪಟ್ಟ ಸದರೀ ವೆಂಕಟಸುಬ್ಬಯ್ಯನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಮೇಲ್ಕಂಡವರು, ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟಸುಬ್ಬಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಸುಬ್ಬಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896ನೇ ಇಸವಿ ಆಗಸ್ಟ್ ತಿಂಗಳ 5ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ತಕ್ಕದ್ದು. ಪ್ರತಿ ಕೋರಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನು ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫೀಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನು ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ಒಣಗುವ ದೆಶೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದಿದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀದಿದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೀ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋರಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರೆವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋರೀಬಾಡಿಗೆ.

8. ಮೇಲಿನ ಸೆಕ್ಷನ್‍ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋರೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋರಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ಯಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ವಂದಕ್ಕೆ 8 ಆಣೆಗಳ ಮೇರೆ ಕೋರೀಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳು ವಾಯಿದೇ ನೋಟೀಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ಉಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್ಪೆಕ್ಟರ್ ಜನರಲ್‍ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‍ಚಾರ್ಜ್ ಆಫೀಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋರಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‍ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‍ಗಳೂ ಉಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟೆ ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಶೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‍ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್‍ಛಾರ್ಜ್ ಫಾರೆಸ್ಟ್ ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಂ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‍ಛಾರ್ಜ್ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಜವಾಬ್‍ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ಉಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್‍ಸರ್ವೇಟರ್ ಆಫ್ ಫಾರೆಸ್ಟ್ಸ್.

ನೋಟಿಫಿಕೇಷನ್.

ಬೆಂಗಳೂರು ತಾರೀಖು 4ನೇ ಸೆಪ್ಟಂಬರ್ 1896.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,— ಈ ಕೆಳಗೆ ನಮೂದಾಗುವ ತಖ್ತೆಯಲಿ ಕಂಡ ತಾರೀಖು ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟುಗಳಲ್ಲಿರುವ ವಣ ಬಿದರುಗಳನ್ನು ಕಡದು ಸಾಗಿಸಿಕೊಳ್ಳತಕ್ಕ ಹಕ್ಕುದಾರಿಯು ಹರಾಜ್ ಮಾಡಲ್ಪಡುತ್ತೆ. ಈ ಹರಾಜು ಡೆಪ್ಯುಟಿ ಕಮಿಷ್ನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಯಿರುತ್ತೆ.

ನಂಬರ್	ತಾಲ್ಲೂಕು ಹೆಸರು.	ಫಾರೆಸ್ಟು ಹೆಸರು.	ಹರಾಜ್ ತಾರೀಖು.	ಹರಾಜ್ ಸ್ಥಳ.	ಯಾವ ಆಫೀಸರ್ ಹರಾಜ್ ಮಾಡುತ್ತಾರೆ.
1	ಆನೇಕಲ್	ರಾಗಿಹಳ್ಳಿ ..	10ನೇ ನವಂಬರ್ 1896	ಬನ್ನೇರಘಟ್ಟ	
2	ಕಾನಕಾನಹಳ್ಳಿ ..	ಬಿಳಿಕಲ್	14ನೇ ಡಿಟೋ	ಕಾನಕಾನಹಳ್ಳಿ	
3	ಡಿಟೋ	ಬಾಣಂತಿಮಾರಿ	ಡಿಟೋ	ಡಿಟೋ	
4	ಡಿಟೋ ..	ಮುಗ್ಗೂರು ..	18ನೇ ಡಿಟೋ	ಕೋಡಿಹಳ್ಳಿ	
5	ಡಿಟೋ ..	ಚಿಲ್ಲಂದಾಡಿ ..			ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್.
6	ಮಳವಳ್ಳಿ	ಬಸವನಬೆಟ್ಟ ..	23ನೇ ಡಿಟೋ	ಹಲಗೂರು	
7	ಕಾನಕಾನಹಳ್ಳಿ ..	ಕಬ್ಬಾಳದುರ್ಗ ಮತ್ತು ಭೀಮನಕಂಡಿಬೆಟ್ಟ ..	27ನೇ ಡಿಟೋ	ಹನಿಯೂರು	
8	ಚನ್ನಪಟ್ಣ ..	ತೆಂಗಿನಕಲ್ ..	30ನೇ ಡಿಟೋ	ಚನ್ನಪಟ್ಣ	
9	ಕ್ಲೋಸ್‌ಪೇಟೆ ಸಬ್ ತಾ||	ಹಂದಿಗೊಂದಿ	2ನೇ ಡಿಸೆಂಬರ್ 1896	ಕ್ಲೋಸ್‌ಪೇಟೆ	
10	ಡಿಟೋ	ಹುಲ್ತಾರು ..			
11	ಮಾಗಡಿ ..	ಸಾವಂದುರ್ಗ ..	7ನೇ ಡಿಟೋ	ಮಾಗಡಿ	
12	ದೊಡ್ಡಬಳ್ಳಾಪುರ ..	ಹುಲಕಡಿ ಮತ್ತು ವುಜ್ಜನಿ	14ನೇ ಡಿಟೋ	ಜಾಲಗೆರೆ	

2. ದೊಡ್ಡ ಫಾರೆಸ್ಟುಗಳು ಅಂದರೆ, ಬಿಳಿಕಲ್, ಬಸವನಬೆಟ್ಟ, ಮುಗ್ಗೂರು, ಚಿಲಂದಾಡಿ, ಹಂದಿಗೊಂದಿ ಮತ್ತು ಸಾವಂದುರ್ಗ ಯಿವುಗಳನ್ನು ಸ್ವಾಭಾವಿಕವಾದ ಸರಹದ್ದುಗಳಿಂದಲಾಗಲಿ ಅಥವಾ ಬೇರೇ ಗುರ್ತುಗಳಿಂದಲಾಗಲಿ ಅನುಕೂಲವಾದ ಬ್ಲಾಕುಗಳಾಗಿ ವಿಂಗಡಿಸಲ್ಪಡುವುದು.

3. ಹರಾಜ್ ಆದ ವಡನೆ ಹರಾಜ್‌ದಾರನು ಶೇಕಡಾ 25 ರೂಪಾಯಿ ಡಿಪಾಜಿಟ್ ಕೊಡಬೇಕು. ಬಾಕಿ ಹಣ ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಹಾಜರ್ಮಾಡಬೇಕು. ತಪ್ಪಿದರೆ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಹಕ್ಕನ್ನು ಪುನಹ ಹರಾಜುಮಾಡಿ ಮೊದಲನೇ ಹರಾಜ್‌ದಾರನನ್ನು ಲುಕ್ಸಾನಿಗೆ ಗುರಿಮಾಡುತ್ತೆ. 2ನೇ ಹರಾಜಿನಲ್ಲಿ ಜಾಸ್ತಿ ಹುಟ್ಟುವಳಿ ಏನಾದರೂ ಆದರೆ ಅದಕ್ಕೆ ಅವನಿಗೆ ಹಕ್ಕುದಾರಿ ಏನೂ ಯಿರುವದಿಲ್ಲ.

4. ಫಾರೆಸ್ಟಿನಲ್ಲಿ ಅಥವಾ ಫಾರೆಸ್ಟ್ ಪ್ರದೇಶದಲ್ಲಿ ಬೆಂಕಿಏನಾದರೂ ಬಿದ್ದರೆ ಅದಕ್ಕೆ ಹರಾಜ್‌ದಾರನೇ ಜವಾಬ್‌ದಾರನಾಗಿರತಕ್ಕದ್ದು. ಅವನಿಗೆ ಗೊತ್ತುಮಾಡಿದ ಪ್ರದೇಶದಲ್ಲಿ ಕಂಟ್ರಾಕ್ಟುದಾರನೇ ಆಗಲಿ ಅಥವಾ ಅವನ ಕಡೆ ಜನರೇಆಗಲಿ ಏನಾದರೂ ಅಕ್ರಮನಡಿಸಿದರೆ ಫಾರೆಸ್ಟ್ ರೂಲ್ಸ್ ಮೇರೆ ನಡಿಸಲಾಧೀತು.

ಮುದ್ದಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್.

ಬೆಂಗಳೂರ್ ಡಿಸ್ಟ್ರಿಕ್ಟು.

ತಾರೀಖು 28ನೇ ಆಗಸ್ಟ್ 1896.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರ ತಾಲ್ಲೂಕು ಗ್ರಾಮಾಂತರಗಳಲ್ಲಿರುವ ಕುರಂಗದ ಕಲ್ಲು ಧುರ್ಮುಖಿ ಸಂವತ್ಸರದ ಬಾಬನ್ನು 1896ನೇ ಇಸವಿ ಜುಲೈ 6ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1896ನೇ ಇಸವಿ ಜೂನ್ 25ನೇ ಮುರ್ಕುಮಿನ 25ನೇ ನಂಬರ್ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಿತ್ತಷ್ಟೆ, ಇದನ್ನು ಬದಲಾಯಿಸಿ 1896ನೇ ಇಸವಿ ಅಕ್ಟೋಬರ್ ತಾರೀಖು 1ರಲ್ಲು ದುಸರಾ ಹರಾಜು ಮಾಡಲ್ಪಡುತ್ತೆ.

(2.) ಈ ಬಾಬತು ಹರಾಜ್ ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರು ಅಥವಾ ಶಿರಸ್ತೇದಾರು ಮಾಡಿಸುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಲಾಗಾಯತು ಒಂದು ವರುಷದ ಮಿಂವಿಗೆ ಇರತಕ್ಕದ್ದು.

(4.) ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ

ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಿ ಅವರಿಂದ ಪಡಕೊಂಡಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ ಮಾಡಬೇಕು. ಬಾಕಿ ಮೊಬಲಗನ್ನು ರೂಪಾಯಿ 1ಕ್ಕೆ 1 ಆಣೆ ಮೇರೆ ಲೋಕಲ್‌ಸೆಸ್ ಸಹಿತ ಹರಾಜು ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನು ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನು ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನು ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(9.) ಕಲ್ಲುಗಳನ್ನು ಜಮಾಯಿಸುವದಕ್ಕಾಗಲಿ ಜಮೀನುಗಳನ್ನು ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಸೀಲ್ ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ವಿ. ಎನ್. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಬಾಗೇಪಲ್ಲಿ ತಾಲ್ಲೂಕು ಕಚೇರಿಯಿಂದ.

ಇಸ್ತಿಹಾರ್‌ನಾಮೆ.

ತಾರೀಖು 18ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಗ್ರಾಮಾಂತ್ರಗಳಲ್ಲಿ ಯಿರುವ ಕುರಂಗದಕಲ್ಲು 96—97ನೇ ದುರ್ಮುಖಿ ಸಂವತ್ಸರಕ್ಕೆ ದಾಖಲಾಗತಕ್ಕದ್ದನ್ನು 1896ನೇ ಇಸವಿ ಮಾಹೆ ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆ.

2. ಈ ಹರಾಜು ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರ್ರವರು ಮಾಡಿಸುತ್ತಾರೆ.

3. ಇಜಾರೆಯು ಪ್ರತಿ ಸಾಲ್ ಜುಲೈ ಲಾಗಾಯತು ಒಂದು ವರ್ಷದ ವರೆಗೆ ಯಿರತಕ್ಕದ್ದು.

4. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ಮಾಡುತ್ತಾರೋ ಅಥವಾ ಯಿತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಿ ಅವರಿಂದ ಪಡಕೊಂಡುಇರುವ ಅಧಿಕಾರಪತ್ರಿಕೆಯನ್ನು ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರನು ಹರಾಜುಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25ರೂ. ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ರೂಪಾಯಿ ಒಂದಕ್ಕೆ ನಂದಾಣೆ ಪ್ರಕಾರ ಆಗುವ ಲೋಕಲ್ ಸೆಸ್ಸ ಸಹಿತ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ದುಸರಾ ಹರಾಜ್ ಮಾಡಲ್ಪಟ್ಟು ಅದರಿಂದ ವುಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನು ಗುರಿಮಾಡಲ್ಪಡುತ್ತೆ.

6. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನು ಆಯಾಯ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಲಿ ಅಥವಾ ಇಜಾರೆದಾರರಿಗೇ ವಿನಹ ಇತರರಿಗೆ ಮಾರುವದಕ್ಕಾಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

7. ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಕಾವಲ್ ಇಜಾರೆದಾರರ ಹಕ್ಕಿಗೆ ಆಟಂಕ ಪಡಿಸಕೂಡದು.

8 ಹಿಡುವಳಿಯಲ್ಲಿ ಇಲ್ಲದೆ ಜಮೀನುಗಳನ್ನ ಸರ್ಕಾರದವರು ದರಖಾಸ್ತು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗಡ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುವದಿಲ್ಲ

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರನು ಅಗಿಯಕೂಡದು, ಒಂದು ವೇಳೆ ಅಗದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಮಾಡಿಸಬೇಕು.

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ತುಮಕೂರ್ ಡಿಸ್ಟ್ರಿಕ್ಟು.

ತಾರೀಖು 31ನೇ ಆಗಸ್ಟು 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸನ್ 1896–97ನೇ ಸಾಲಿಗೆ ಮದ್ದಗಿರಿ ತಾಲ್ಲೂಕು ಮತ್ತು ಕೊರ್ಟಗೆರೆ ಸಬ್ ತಾಲ್ಲೂಕಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಆಕಾರ ಕಂಡ ಫಡ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲ್‌ಗಳಲ್ಲಿಯೂ ದೊರೆಯುವ ಪಸಾರೆ ಜಿನಸಿಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನ 4—8—96 ಮತ್ತು 5—8—96ನೇ ತಾರೀಖುಗಳಲ್ಲಿ ಹರಾಜು ಮಾಡಿಸಲಾಗಿ ಕಂಸವಾಲ್ ಆದ್ದರಿಂದ ಸದರೀ ಹಕ್ಕುದಾರಿಯನ್ನ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಪುನಹ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾನ್ಹ 11 ಘಂಟೆಗೆ ಷುರುವಾಗುತ್ತೆ, ಹರಾಜು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಮದ್ದಗಿರಿ ತಾರೀಖು 29—9—96 ಮದ್ದಗಿರಿ, ಕೊರ್ಟಗೆರೆ ತಾರೀಖು 30—9—96 ಕೊರ್ಟಗೆರೆ.

2. ಚಡದರಖಾಸ್ತುದಾರನು ಹರಾಜು ಕೈದಾದ ಕೂಡ್ಲೆ ಹರಾಜ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ಒಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜ್ ಮೊಬಲಗಿಗೆ ರೂಪಾಯಿ 1ಕೆ 1 ಆಣೆಯಂತೆ ಲೋಕಲ್‌ಸೆಸ್ಸ್ ವಸೂಲ್ ಮಾಡಲ್ಪಡುವದು.

3. ಕ್ಲಿಪ್ತಕಾಲದ ಒಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಠೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ಒಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಟಾಗುವ ಫಾಯಿದೆ ಭಾಗ, ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೊಢಿಸಕೂಡದು.

5 ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಅರ್ಜೀ ನಂಬರ್ 15.

ಮೃತಪಟ್ಟ ಕಾಳಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ನರಸಿಂಹ ಮೈನರ್, ಗಾರ್ಡಿಯನ್ ಜನಕತಂದೆ ಚನ್ನನಾಯಿಕ ವುರಫ್ ಚನ್ನಣ್ಣನವರು, ಮೃತಪಟ್ಟ ಸದರೀ ಕಾಳಪ್ಪನವರಿಗೆ ಮೈನರ್ ದತ್ತುಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಬೆಟ್ಟದಪುರದ ಹೋಬಳಿ ಚಿನ್ನನಾಯಿಕನ ಕೊಪ್ಪಲ್ ಸ್ಥಳದ ಸದರೀ ಚನ್ನನಾಯಿಕ ವುರಫ್ ಚನ್ನಣ್ಣನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಕಾಳಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನನಾಯಿಕ ವುರಫ್ ಚನ್ನಣ್ಣನವರ ಅರ್ಜಿಯನ್ನ ಸನ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 16ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾಳಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಅರ್ಜೀ ನಂಬರ್ 42.

ಮೃತಪಟ್ಟ ಮೈಸೂರು ರಂಗಾಚಾರ್ರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶ್ರೀನಿವಾಸಯ್ಯಂಗಾರ್ ಮೈನರ್ ಗಾರ್ಡಿಯನ್ ತಾಯಿ ಶ್ರೀರಂಗಮ್ಮನವರು, ಮೃತಪಟ್ಟ ಸದರೀ ರಂಗಾಚಾರ್ರಿಗೆ ಮಗ, ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಹೊಸಅಗ್ರಹಾರ ಸ್ಥಳದ ಸದರೀ ಶ್ರೀರಂಗಮ್ಮನವರು, ಸದರೀ ವಾಸಸ್ಥರಾಗಿ

ಮೃತಪಟ್ಟ ರಂಗಾಚಾರ್ರ ಜಿಂದಗಿ ಬಗ್ಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀರಂಗಮ್ಮನವರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಾಚಾರ್ರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 78.

ಮೃತಪಟ್ಟ ನಂಜಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮುದ್ದಮ್ಮ, ವೀರಶೆಟ್ಟರು ಸಹ ಮೃತಪಟ್ಟ ಸದರೀ ನಂಜಶೆಟ್ಟರಿಗೆ ಅಕ್ಕ, ಸೋದರಅಳಿಯ ಆಗಬೇಕೆಂಬ ಹಕ್ಕುದಾರಿ ಮೇಲೆ ಮಳೆಂದೂರು ಕಸಬಾ ಸ್ಥಳದ ಸದರೀ ಮುದ್ದಮ್ಮ, ವೀರಶೆಟ್ಟರು, ಸದರೀ ವಾಸಸ್ಥರಾಗಿ ಮೃತಪಟ್ಟ ನಂಜಶೆಟ್ಟರ ಜಿಂದಗಿ ಬಗ್ಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುದ್ದಮ್ಮ, ವೀರಶೆಟ್ಟರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 79.

ಮೃತಪಟ್ಟ ಅಜ್ಜಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶ್ರೀಕಂಠಯ್ಯನವರು, ಮೃತಪಟ್ಟ ಸದರೀ ಅಜ್ಜಮ್ಮನವರಿಗೆ, ಮೈದನನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ದೊಡ್ಡಪ್ಯಾಟೆ ಸ್ಥಳದ ಸದರೀ ಶ್ರೀಕಂಠಯ್ಯನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಅಜ್ಜಮ್ಮನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 250 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀಕಂಠಯ್ಯನವರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಜ್ಜಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896ನೇ ಇಸವಿ ಆಗಸ್ಟ್ ತಿಂಗಳ 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಸಿಹಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 30.

ಮೃತಪಟ್ಟ ಜೀವಣರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸುಬ್ಬರಾವ್ ಮೈನರ್, ಗಾರ್ಡಿಯರ್ನ್ ತಾಯಿ ನಾಗೂಬಾಯಿಯವರು, ಮೃತಪಟ್ಟ ಸದರೀ ಜೀವಣರಾಯರಿಗೆ ಮಗ, ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಹಳೇಅಗ್ರಹಾರ ಸ್ಥಳದ ಸದರೀ ನಾಗೂಬಾಯಿಯವರು, ಸದರೀ ವಾಸಸ್ಥರಾಗಿ ಮೃತಪಟ್ಟ ಜೀವಣರಾಯರ ಜಿಂದಗಿ ಬಗ್ಗ್ಯಾಗಿ ಬರತಕ್ಕ 600 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾಗೂಬಾಯರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜೀವಣರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 80.

ಮೃತಪಟ್ಟ ಕುಂಚಿಗರ ಚಿಕ್ಕಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕೆ. ಚಿಕ್ಕಣ್ಣನವರು, ಮೃತಪಟ್ಟ ಸದರೀ ಚಿಕ್ಕಣ್ಣನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲಾ ಸ್ಥಳದ ಸದರೀ ಚಿಕ್ಕಣ್ಣನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಚಿಕ್ಕಣ್ಣನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 950 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕಣ್ಣನವರ ಅರ್ಜಿಯನ್ನು ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 81.

ಮೃತಪಟ್ಟ ಹಾರ್ರು ಜವಾಲಶೇಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಜಾನಸ್ ಜವಾಲಶೇಟರು, ಮೃತಪಟ್ಟ ಸದರೀ ಹಾರ್ರು ಜವಾಲಶೇಟರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರ ದೊಡ್ಡಪ್ಯಾಟೆ ಸ್ಥಳದ ಸದರೀ ಜಾನಸ್ ಜವಾಲಶೇಟರು, ಸದರೀ ವಾಸಸ್ಥರಾಗಿ ಮೃತಪಟ್ಟ ಹಾರ್ರು ಜವಾಲಶೇಟರ ಜಿಂದಗಿ ಬಗ್ಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜಾನಸ್ ಜವಾಲಶೇಟರ ಅರ್ಜಿಯನ್ನು 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಡಿಟೋ ಮೃತಪಟ್ಟ ಹಾರ್ರು ಜವಾಲಶೇಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ನ 1896—97ನೇ ಇಸವಿ ಅರ್ಜೀ ನಂಬರ 82.

ಮೈಸೂರ ಕಿಲ್ಲೇಯಲ್ಲಿರುವ 1ನೇ ಪುಟ್ಟನಂಜಪ್ಪ, 2ನೇ ಪಾರ್ವತಮ್ಮ, 3ನೇ ಗುರುಶಾಂತಮ್ಮ ಇವರು ಮೈನರಗಳು, ಗಾರ್ಡಿಯನ್ ಅರ್ಜೆದಾರ ಜಿಲ ಭದ್ರಮ್ಮನವರು, ಮೈನರಾದ ಮೈಸೂರ ಕಿಲ್ಲೇ ಸ್ಥಳದ 1ನೇ ಪುಟ್ಟನಂಜಪ್ಪ, ಪಾರ್ವತಮ್ಮ, ಗುರುಶಾಂತಮ್ಮ ಇವರುಗಳ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಪುಟ್ಟನಂಜಪ್ಪ ವಗೈರೇರಿಗೆ ಆಜ್ಞೇ ಆಗಪೇಕೆಂಬ ಹಕ್ಕಿನ ಮೇಲೆ ಡಿಟೋ ಮೈಸೂರ ಕಿಲ್ಲೇ ಸ್ಥಳದ ಸದರೀ ಭದ್ರಮ್ಮನವರು, ಸದರೀ ಮೈನರರ ಆಸ್ತೀ ಕಾಪಾಡುವದಕ್ಕೆ ಸರಟಿಫಿಕೇಟ ಬಗ್ಗೆ ಅರ್ಜೀ ಕೊಟ್ಟು ಇರುತ್ತಾರೆ.

ಸದರೀ ಅರ್ಜೀ ಹಿಯರಿಂಗ ಬಗ್ಗೆ 1896ನೇ ಇಸವಿ ಸೆಪ್ಟಂಬರ ತಾರೀಖು 17ರಲ್ಲು ಮೊಕರರ ಮಾಡಿರುವದರಿಂ ಇದರಿಂದ ನೋಟಿಸ ಕೊಡಲಾಗಿದೆ.

ಸ್ನ 1896ನೇ ಇಸವಿ ಆಗಸ್ಟ್ ತಿಂಗಳ 26ನೇ ತಾರೀಖಿನಲ್ಲಿ ಕೋರ್ಟು ಮೊಹರ ಸಹಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಂ. ರಾಮಸ್ವಾಮಯ್ಯರ,
ಡಿಸ್ಟ್ರಿಕ್ಟು ಜಡ್ಜ.

ತುಮಕೂರ ಡಿಸ್ಟ್ರಿಕ್ಟು ಫಾರೆಸ್ಟ್ ಡಿಪಾರ್ಟಮೆಂಟ.

1896ನೇ ಇಸವಿ ಆಗಸ್ಟ್ ತಾರೀಖು 29ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಪೋದಲ್ಲಿ ಮತ್ತು ಗುಬ್ಬೀ ತಾಲ್ಲೂಕ ಚನ್ನಶೆಟ್ಟಿಹಳ್ಳಿ ಪ್ಲಾಂಟೇಷನಿನಲ್ಲಿರುವ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನ 1896ನೇ ಇಸವಿ ಸೆಪ್ಟಂಬರ ತಾರೀಖು 22ರಲ್ಲು ತುಮಕೂರು ಡಿಪೋದಲ್ಲಿಯೂ ತಾರೀಖು 24ರಲ್ಲು ಚನ್ನಶೆಟ್ಟಿಹಳ್ಳಿ ಪ್ಲಾಂಟೇಷನಿನಲ್ಲಿಯೂ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಪೋ.

ತರಹೆ.	ಸಂಖ್ಯೆ.	ಸಲೆ ಅಡಿ.	ಅಂಗುಲ.	ಸೆಂಟ್ಸ.
ಕ್ಯಾಸರೀನ ಮರಗಳು ..	249	568	6	3
ಹಳೇ ಬಿದರುಗಳು ..	544			

ಗುಬ್ಬೀ ತಾಲ್ಲೂಕು ಚನ್ನಶೆಟ್ಟಿಹಳ್ಳಿ ಪ್ಲಾಂಟೇಷನ.

ತರಹೆ.	ಸಂಖ್ಯೆ.	ಸಲೆ ಅಡಿ.	ಅಂಗುಲ.	ಸೆಂಟ್ಸ.
ಕ್ಯಾಸರೀನ ಮರಗಳು ..	1190			

ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಷರತ್ತುಗಳು—ಹರಾಜ ಕೈದಾದ ಕೂಡ್ಲೆ ಕಾಲುಹಿಸ್ಸೇ ಮೊಬಲಗು ಠೇವಣಿ ತರೀಕ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ಹರಾಜ ತಾರೀಖು ಲಾಗಾಯತು 1 ವಾರದವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೆ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳೆಲ್ಲಾ ಹರಾಜು ತಾರೀಖು ಲಾಗಾಯತು 10 ದಿವಸದವಳಗಾಗಿ ಸಾಗಿಸಿಕೊಳ್ಳಬೇಕು. ಇತರ ತಪ್ಸೀಲುಗಳಿಗೆ 1895ನೇ ಇಸವಿ ಏಪ್ರೆಲ 25ನೇ ಮರ್ಕೂಂ ಮೈಸೂರ ಗೆಜೆಟ 1ನೇ ಭಾಗದಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ 15ನೇ ಮರ್ಕೂಂ 15229ನೇ ನಂಬರು ಗವರ್ನಮೆಂಟ ನೋಟಿಫಿಕೇಷನ ನೋಡಿ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ ಆಫಿಸರ.

ಫ್ರೆಂಚರಾಕ್ಸ ಸಬ ಡಿವಿಜನ.

ಸಾಗುವಳಿಗೋಸ್ಕರ ಜಮೀನು ಹಿಡುವಳಿ ಹರಾಜು.

ತಾರೀಖು 1ನೇ ಆಗಸ್ಟು 1896.

ಇಸ್ತಿಹಾರ.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ ರೆವಿನ್ಯೂ ಕೋಡ ಮತ್ತು ರೂಲ್ಸ ಮೇರೆ ಇದರಡೀಲಿ ಕಂಡ ಜಮೀನು ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ ಜಡಸವಾಲ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜು ಕೈದಾದಕೂಡ್ಲೆ ಜಡಸವಾಲದಾರನು ತನ್ನ ಸವಾಲ ಮೊಬಲಗು ಪ್ರತಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜು ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜು ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜು ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುವದು.

5. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜು ಡೆಪ್ಯುಟಿ ಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವರೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಯೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲಾ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರ್.	ಜಮೀನ್. ಖುಷ್ಕಿ, ತರಿ, ಬಾಗಾಯತು ವಿವರ.	ಜಮೀನ್. ವಿಸ್ತೀರ್ಣ.	ಜಮೀನ್. ಆಕಾರ.	ಮರಗಳು ಭಾವಿಗಳು ವಗೈರೆ. ಕಡಿದ ಮರಗಳಿಗೆ ಕಟ್ಟಬೇಕಾದ ತೀರ್ವೆ.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ನಡೆಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ	ಮಾನದಹಳ್ಳಿ ಗ್ರಾಮ	35 36 60 51 52 53	ತರಿ ಜಮೀನು	0—11 0—51 0—9 2—10 2—6 2—3 7—30	1—8—0 2—8—0 1—4—0 12—0—0 12—0—0 12—0—0 41—4—0		ಜಮೀನು ಬಳಿ 1896ನೇ ಇಸವಿ ಅಕ್ಟೋಬರ್ 26ನೇ ತಾ|| 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ರವರು ಅಥವಾ ಅವರ ಪ್ರತಿನಿಧಿ ಡಿಪ್ಯುಟಿ ಅಮಲ್ದಾರರು.	

ಇದರಿಂದ ತಿಳಿಯಪಡಿಸುವದೇನಂದರೆ,— ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಜಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಖೈದಾದ ಕೂಡ್ಲೆ ಜಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು

ಮಾಡಲ್ಪಡುವದು ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗ ಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿಕಮ್ಮಿಷನರು ಅವಶ್ಯಕವಾದ ಶಿಫಾರಸ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡೆಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುಖ ತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುಖತಾಲೀಕರಾಗಿರುವದೋ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲವೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳೀ ಚೀಟಿಯಾನೆ ಟರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರು.	ಪಾಯಿ ಮಿರಾಸ್ತಿ, ಇನಾಂ ಅಥವಾ ಕಾ...	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ. ಕೊಡತಕ್ಕ ಸರ್ಕಾರದ ...	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ಶೀಳನೆರೆ.	179	ತರಿ ಜಮೀನ್.	0— 5	0—12—0	..	ಜಮೀನ್ ಬಳಿ 1896ನೇ ಅಕ್ಟೋಬರ್ 26ನೇ ದಿವಸ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್‌ದಾರ್ ಅಥವಾ ಶೇಕ್ದಾರ್ ಹೆಡ್ ಮುನ್ಷಿ ಇವರುಗಳು.	
			180		0—17	2— 8—0	..			
					0—22	3— 4—0				

ಇದರಿಂದ ತಿಳಿಯಪಡಿಸುವದೇನಂದರೆ,— ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇವರಡೀಲಿ ಕಂಡ ಜಮೀನ್ ಹಿಡವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಜಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಖೈದಾದಕೂಡ್ಲೆ ಜಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ, ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

340

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣೀ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು, ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ ಡೆಪ್ಯುಟಿಕಮಿಷನರು ಆವಶ್ಯಕವಾದ ಸಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲಿ ಕಮ್ಮಿಯಾದಷ್ಟು ಮೊಬಲಗನ್ನ ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5 ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿಕಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್ದಾರರು ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನು. ಸರ್ವೆ ನಂಬರು.	ಖುಷ್ಕಿ, ತರೀ ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಬಾವಿಗಳು ವಗೈರೆ. ಕೂಡಿದ ಮಟ್ಟುಗೂ ಕರಾರ್ವಾಕಾ ತಪ್ಶೀಲ್.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪ್ಯಾಟೆ.	ಕಿಕ್ಕೇರಿ	ಗುಂಡೆಹೊಸಹಳ್ಳಿ ಗ್ರಾಮ	235	ತರೀ ಜಮೀನು	0—20	0— 4—0		ಜಮೀನುಗಳ ಬಳಿ 1896ನೇ ಇಸವಿ ಅಕ್ಟೋಬರ್ 27ನೇ ದಿವಿ 11ಘಂಟೆ.	ಕೃಷ್ಣರಾಜಪ್ಯಾಟೆ ತಾಲ್ಲೂಕು ಅಮಲ್‌ದಾರ್ರು ಅಥವಾ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸರವರು.	
			240		1—14	7— 8—0				
			80		1—34	9— 8—0				
			212		2— 2	12— 0—0				
			213		2— 0	11— 0—0				
			214		2— 3	12— 0—0				
			215		2— 2	11— 0—0				
			216		2—14	13— 0—0				
			217		1—37	10— 0—0				
			257		0—25	1— 4—0				
			78		1— 4	6— 8—0				
			259		0—10	0— 4—0				
			261		1—21	8— 0—0				
			262		2— 1	11— 0—0				
			199		1—37	7— 0—0				
			211		1—28	0—12—0				
			128		0—12	1—12—0				
			17		25—24	122—12—0				

ಪಿ. ಪಂಚನಾಥರಾವ್,
ಸಬ್ ಡಿವಿಜನ್ ಆಫಿಸರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮೆ.

ತಾರೀಖು 24ನೇ ಆಗಸ್ಟು 1896.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಡಿಪ್ಪೋಗಳಿಗೆ ಅವುಗಳ ಬಾಜುದಲ್ಲಿ ಕಾಣಿಸಿರುವ ಜಂಗಲಿನಿಂದ 1897ನೇ ಇಸವಿ ಮಾರ್ಚಿ ಆಖ್ಯೈರ್ ವಳಗಾಗಿ ನಾಟು, ಬೆಲಗು, ಗಳ ಜಮಾಯಿಸಿ ಕೊಡುವದಕ್ಕೆ ಟೆಂಡರ್ ಗಳು ಅಂಗೀಕರಿಸಲ್ಪಡುತ್ತವೆ:—

ನಂಬರು.	ಡಿಪ್ಪೋ ಹೆಸರು.	ಮರದ ಜಾತಿ.	ಮೊತ್ತ ಅದದು.	ಜಂಗಲ್ ಹೆಸರು.	ಸುಮಾರು ಫಾಸಲೆ ಮೈಲಿ	ಷರಾ.
1	ಶಿವಮೊಗ್ಗಾ ..	ಸಾಗುವಾನಿ ನಾಟೂ	100	ಭೂತನಜ್ಯೈಲು	20	ಶಂಕರ ಫಾರೆಸ್ಟು
		ಜಂಗಲಿ ನಾಟೂ	200	ಶಟ್ಟಿಹಳ್ಳಿ, ಶಂಕರ	14	ಡಿಟ್ಟೋ
		ಜಂಜೆ ನಾಟೂ	300	ಹಾರೋಹಿತ್ತಲು, ಸಾಗರವಳ್ಳಿ, ವಾರೇಕೊಪ್ಪ, ಅರಸೇಲಿ ಮತ್ತು ಇತರ ಬಾಜು ಡಿಸ್ಟ್ರಿಕ್ಟು ಫಾರೆಸ್ಟುಗಳು	22	
		ಸಾಗುವಾನಿ ಬೆಲಗು	300	ಬೊಂಮೇನಹಳ್ಳಿ ಮತ್ತು ಬಾಜು ಡಿಸ್ಟ್ರಿಕ್ಟು ಜಂಗಲ	13	
		ಜಂಗಲ್ ಬೆಲಗು	100	ಡಿಟ್ಟೋ	13	
		ಕಿರಿ ಬಿದರು	12,000	ಶಂಕರ ಫಾರೆಸ್ಟು	14	ಶಂಕರ ಫಾರೆಸ್ಟು
2	ಆಯನೂರು ..	ಸಾಗುವಾನಿ ನಾಟೂ	100	ಮಸರೂರು ಮತ್ತು ಬಾಜು ಡಿಸ್ಟ್ರಿಕ್ಟು ಫಾರೆಸ್ಟುಗಳು	12	ಮಸರೂರು ಫಾರೆಸ್ಟು
		ಜಂಗಲ್ ನಾಟೂ	75	ವಾರೇಕೊಪ್ಪ, ಹಾರೋಹಿತ್ತಲು, ಸಾಗರವಳ್ಳಿ ಡಿಸ್ಟ್ರಿಕ್ಟು ಜಂಗಲ್ ಗಳು	12	
		ಸಾಗುವಾನಿ ಬೆಲಗು	200	ಕುಂಶಿ	10	
		ಕಿರಿ ಬಿದರು	5,000	ಕೂಡಿ, ಮತ್ತಲಿ, ಮತ್ತು ತಾವರೇ ಕೊಪ್ಪ	10	
3	ಚನ್ನಗಿರಿ ..	ಸಾಗುವಾನಿ ಬೆಲಗು	1,500	ಸಾರತಿ, ಹಗೇದಹಳ್ಳಿ, ಹಂಚಿಶಿದ್ದಾಪುರ ಮತ್ತು ಆಗರದಳ್ಳಿ ಡಿಸ್ಟ್ರಿಕ್ಟು ಜಂಗಲ್ ಗಳು	11	
		ಕಿರಿ ಬಿದರು	50,000	ಭಂಡಿಗುದ್ದು, ಒದನೆಹಾಳು ಮತ್ತು ನಲೆಬಸಲಿ	15	
4	ಮುಬ್ರಾಣಿ ..	ಸಾಗುವಾನಿ ಬೆಲಗು	1,000	ಮುಬ್ರಾಣಿ ಬ್ಲಾಕು	8	ಕುಕ್ಕವಾಡಾ ಮುಬ್ರಾಣಿ
		ಜಂಗಲಿ ಬೆಲಗು	500	ಕೆಂಗಾಡೇಣು,	8	ಡಿಟ್ಟೋ
		ಕಿರಿ ಬಿದರು	50,000	ಕಾಗಿಹಳ್ಳ, ರಕ್ಷಿಹಾಳು	10	
5	ಕಣಬೂರು ..	ಸಾಗುವಾನಿ ನಾಟೂ	100	ಕಣಬೂರು, ಹಾಗಲಮನೆ, ಆರಂಬಳ್ಳಿ ಮತ್ತು ಅಜ್ಜಿಗುಡ್ಡೆ ಡಿಸ್ಟ್ರಿಕ್ಟು ಜಂಗಲ್	6	
		ಜಂಗಲ್ ನಾಟೂ	150	ಡಿಟ್ಟೋ	6	
6	ಸಮುದ್ರಹಳ್ಳಿ ..	ಡಿಟ್ಟೋ	150	ಚೋರನಡೆಹಳ್ಳೀ ಫಾರೆಸ್ಟು	6	
7	ಶಿಕಾರಿಪುರ ..	ಸಾಗುವಾನಿ ನಾಟೂ	25	ಕರಡಿಬಟ್ಟು ಫಾರೆಸ್ಟು	16	
		ಜಂಗಲ್ ನಾಟೂ	100			
		ಕಿರಿ ಬಿದರು	10,000	ಕರಡಿಬಟ್ಟು ಮತ್ತು ಗಂಗವನಸರ ಫಾರೆಸ್ಟುಗಳು	12ರ ಲಾ॥ 15	
		ಹೆಬ್ಬಿದರು	1,000	ಡಿಟ್ಟೋ ಡಿಟ್ಟೋ	ಡಿಟ್ಟೋ	
		ಸಾಗುವಾನಿ ಬೆಲಗು	300	ಗಂಗವನಸರ ಮತ್ತು ಬಾಜು ಡಿಸ್ಟ್ರಿಕ್ಟು ಫಾರೆಸ್ಟು	12	
		ಜಂಗಲ್ ಬೆಲಗು	100	ಡಿಟ್ಟೋ ಡಿಟ್ಟೋ	12	

ನಂಬರ್.	ಡಿಪೋ ಹೆಸರು.	ಮರದ ಜಾತಿ.	ಮೊತ್ತ ಅದದು.	ಜಂಗಲ್ ಹೆಸರು.	ಸುಮಾರು ಫಾಸಲೆ ಮೈಲಿ.	ಷರಾ.
8	ಶಿರಾಳಕೊಪ್ಪ ..	ಜಂಗಲ್ ನಾಟಾ	75	ಬೆಳಂದೂರು ಫಾರೆಸ್ಟ್	14	
		ಡಿಟ್ಟೋ ಬೆಲಗು	150			
		ಹೆಬ್ಬಿದರು	500			
		ಕಿರಿ ಬಿದರು	5,000	ಕರಡಿ ಬೆಟ್ಟ	22	
		ಸಾಗುವಾನಿ ಬೆಲಗು	100	ಕವಲಿ, ಬಸವನಂದಿಹಳ್ಳಿ ಮತ್ತು ತೊಗವಶಿ ಫಾರೆಸ್ಟುಗಳು	7	
9	ಆನವಟ್ಟಿ ..	ಸಾಗುವಾನಿ ನಾಟಾ	50	ತೆಲಗಡ್ಡೆ ಫಾರೆಸ್ಟ್	8	
		ಡಿಟ್ಟೋ ಬೆಲಗು	200			
		ಜಂಗಲ್ ನಾಟಾ	75	ಬೆಟ್ಟದ ಕುರ್ಲಿ	8	
		ಹೆಬ್ಬಿದರು	1,000			
		ಕಿರಿ ಬಿದರು	5,000			
10	ಚಿತ್ರದುರ್ಗ ..	ಸಾಗುವಾನಿ ನಾಟಾ	25	ಮುಸಟೂರು ಮತ್ತು ಬಾಜು ಡಿಸ್ಟ್ರಿಕ್ಟ್ ಫಾರೆಸ್ಟುಗಳು	90	
		ಜಂಗಲ್ ನಾಟಾ	50	ಶಟ್ಟಿಹಳ್ಳಿ, ಶಂಕರ	84	
		ಸಾಗುವಾನಿ ಬೆಲಗು	500	ಸಾರತಿ, ಹಗೇದಹಳ್ಳಿ, ಹಂಚಿಹಿದ್ದಾಪುರ ಮತ್ತು ಆಗರದಹಳ್ಳಿ	49	
		ಕಿರಿ ಬಿದರು	12,000	ಭಂಡಿಗುಡ್ಡ, ಬದನೆಹಾಳು ನುಲಿ ಬಸಲಿ	53	
		ಹೆಬ್ಬಿದರು	300	ಡಿಟ್ಟೋ	53	

2. ಎಲ್ಲಾ ಟೆಂಡರ್‌ಗಳ ಮೇಲೂ ಯಿಂಥಾ ಡಿಪೋವಿಗೆ ನಾಟಾ, ಬೆಲಗುಗಳ ಜಮಾಯಿಸುವ ಬಗ್ಯೆ ಟೆಂಡರ್ ಯೆಂದು ಬರಿಯತಕ್ಕದ್ದು. ಮತ್ತು ಟೆಂಡರ್ ಸಂಗಡ ಡಿಪೋ 1ಕ್ಕೆ 100 ರೂಪಾಯಿನಂತೆ ಕರ್ರೆನ್ಸೀ ನೋಟ್ ಮೂಲಕ ಠೇವಣಿ ಹಾಜರ್ ಮಾಡತಕ್ಕದ್ದು, ತಿರಸ್ಕರಿಸಲ್ಪಟ್ಟ ಟೆಂಡರಿನ ಸಂಗಡ ಮೊಬಲಗು ವಾಪಸ್ ಮಾಡಲ್ಪಡುವದು.

3. ಟೆಂಡರ್‌ಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕನ್ಸರ್ವೇಟರ ಹೆಸರಿನಲ್ಲಿ ಬರಿಯತಕ್ಕದ್ದು. 1896ನೇ ಇಸವಿ ಸೆಪ್ಟಂಬರ್ ತಾರೀಖು 28ನೇ ದಿವಿ 12 ಘಂಟೆ ವರಿಗೂ ಸದರೀ ಟೆಂಡರ್‌ಗಳು ಅಂಗೀಕರಿಸಲ್ಪಡುವವು.

4. ಪ್ರತಿ ಒಬ್ಬ ದರಖಾಸ್ತುದಾರನೂ ಈ ಕೆಳಗೆ ನಮೂದಿಸುವ ತಪ್ಸೀಲಿನಂತೆ ನಾಟಾಗಳನ್ನು, ಕಡದು, ಕೆತ್ತಿ ಜಮಾಯಿಸುವದಕ್ಕೆ ಸಲೆ ಅಡಿ 1ಕ್ಕೆ ಆಖ್ಯೆರ್ ದರ ನಮೂದಿಸತಕ್ಕದ್ದು.

ನಾಟಾಗಳು.

(1) 12 ಸಲೆ ಅಡಿ ಮತ್ತು ಅದಕ್ಕೆ ವಳಪಟ್ಟದ್ದಕ್ಕೆ.
(2) 12 ಸಲೆ ಅಡಿ ಮೇಲ್ಪಟ್ಟು 20 ಸಲೆ ಅಡಿ ವರಿಗೆ.
(3) 20 ಸಲೆ ಅಡಿಗೆ ಮೇಲ್ಪಟ್ಟದ್ದಕ್ಕೆ.

ಬೆಲಗುಗಳು.

(1) 4 ಸಲೆ ಅಡಿ ವಳಪಟ್ಟದ್ದಕ್ಕೆ.
(2) 4 ಅಡಿಗೆ ಮೇಲ್ಪಟ್ಟು 8 ಅಡಿ ವರಿಗೆ ಯಿರುವವಕ್ಕೆ.
(3) 8 ಅಡಿಗೆ ಮೇಲ್ಪಟ್ಟದ್ದಕ್ಕೆ.

ಹೆಬ್ಬಿದರು ಯಾ ಕಿರಿ ಬಿದರುಗಳ 100ಕ್ಕೆ.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಟೆಂಡರ್ ಅಂಗೀಕರಿಸಿದ ವರ್ತಮಾನವನ್ನು ತಿಳಿದ ಒಂದು ವಾರದೊಳಗಾಗಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರೆದುಕೊಡಬೇಕಲ್ಲದೇ ತನ್ನ ಕಂಟ್ರಾಕ್ಟು ಸರಿಯಾಗಿ ಪೂರೈಸಿಕೊಡುವದಕ್ಕೆ ಖಾತ್ರಿಗಾಗಿ ಪುನಹ 150 ರೂಪಾಯಿ ಠೇವಣಿ ಯಿಡತಕ್ಕದ್ದು. ಕಂಟ್ರಾಕ್ಟಿನ ಷರತ್ತಿನಲ್ಲಿ ಯಾವದಕ್ಕಾದರೂ ತಪ್ಪಿದರೆ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

6. ಕೆಂಕೀ ಕಾಲದಲ್ಲಿ ಕಂಟ್ರಾಕ್ಟುದಾರನು ಡೆಪ್ಯುಟಿ ಕನ್ಸರ್ವೇಟರ ಅಪ್ಪಣೆ ಅನುಸರಿಸಿ ನಡದುಕೊಳ್ಳಬೇಕು.

7. ಫಾರೆಸ್ಟ್ ಇಲಾಖೆಯವರು ನಿಷ್ಕರ್ಷ ಮಾಡಿದ ಮರಗಳ ವಿನಹ ಬೇರೆ ಮರಗಳನ್ನ ಕಡಿಯಕೂಡದು, ಮತ್ತು ಡೆಪ್ಯುಟಿ ಕನ್ಸರ್ವೇಟರ ಅಪ್ಪಣೆ ಮೇರಿಗೆ ನಾಟಾಗಳನ್ನು ಸರಿಯಾಗಿ ಕೆತ್ತಿಸಬೇಕು.

8. ಕಮ್ಮಿ ದರದ ಟೆಂಡರ್ ಆಗಲಿ ಯಾ ಮತ್ಯಾವ ಟೆಂಡರ್ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕನ್ಸರ್ವೇಟರು ಸ್ವತಂತ್ರರಾಗಿ ಯಿರುತ್ತಾರೆ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕನ್ಸರ್ವೇಟರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

9. ಜಂಗಲಿನಿಂದ ನಾಟಾಗಳನ್ನು ಸಾಗಿಸುವದಕ್ಕೋಸ್ಕರ ಬೇಕಾಗುವ ಏರ್ಪಾಡುಗಳನ್ನು ಕಂಟ್ರಾಕ್ಟುದಾರನೇ ಮಾಡಿಕೊಳ್ಳತಕ್ಕದ್ದು. ಸರಕಾರದವರು ರಸ್ತೆಯನ್ನಾಗಲಿ ಭಂಡಿದಾರಿಯನ್ನಾಗಲಿ ಮಾಡಿಸಿ ಕೊಡುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಈ ನೆಪದಿಂದ ನಾಟಾ ವಗ್ಯೆರೆ ವಾಯಿದೆಯಲ್ಲಿ ತಾರದಿದ್ದರೆ ಈ ಕಾರಣವು ಅಂಗೀಕರಿಸಲ್ಪಡಲಾರದು.

10. ಇನ್ಯಾವ ಸಂಗತಿಗಳಾದರೂ ತಿಳಿದುಕೊಳ್ಳಬೇಕಾಗಿದ್ದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕನ್ಸರ್ವೇಟರ ಆಫೀಸಿನಲ್ಲಿ ಕೇಳತಕ್ಕದ್ದು, ಮತ್ತು ಅಲ್ಲಿ ನೋಟೀಸ್ ಹಲಿಗೇ ಮೇಲೆ ಇಸ್ತಿಹಾರ್‌ನಾಮೆಯ ನಕಲು ಮತ್ತು ಕಂಟ್ರಾಕ್ಟು ಮುಚ್ಚಳಿಕೆ ನಕಲು ಸಹ ನೋಡಬಹುದು.

ಸಿ. ನಾರಾಯಣರಾವ್,
ಡೆ|| ಕನ್ಸರ್ವೇಟರ್.

ಕಡೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ತಾರೀಖು 3ನೇ ಸೆಪ್ಟೆಂಬರ 1896.

ಇವರಡಿಕಂಡ ಡಿಪೋಗಳಿಗೆ ಅದಕ್ಕೆ ಎದುರಾಗಿ ಕಾಣಿಸಲ್ಪಟ್ಟ ಜಂಗಲಿಗಳಿಂದ ನಾಟಾಗಳನ್ನು, ಬೆಲಗುಗಳನ್ನು ಮತ್ತು ಕಿರಿಗಳುಗಳನ್ನು ಬರುವ 1897ನೇ ಇಸವಿ ಮೇ 31ನೇ ತಾರೀಖು ವೊಳಗಾಗಿ ಜಮಾಯಿಸಿ ಕೊಡಲು ಯಿಷ್ಟವುಳ್ಳವರು ಟೆಂಡರ್ಯಾನೆ ದರಖಾಸ್ತು ಕೊಡಬಹುದು.

ಡಿಪೋ ಹೆಸರು.	ತರಹೆ.	ಜಮಾಯಿಸಿಕೊಡ ಬೇಕಾದ ಸಂಖ್ಯೆ.	ಯಾವ ಜಂಗಲಿಯಿಂದ ಜಮಾಯಿಸಿ ಕೊಡತಕ್ಕದ್ದು ವಗೈರೆ.	ಅಂದಾಜಾ ಫಾಸಲೆ.
ಲಕ್ಕುವಳ್ಳಿ ..	ಮನ್ನಾಜಾತಿ ನಾಟಾ	* 200	ಹೊಸಹಳ್ಳಿ, ಕೋಳಿಗೋಡು ಕರಡಿಮಟ್ಟೆ ಡಿಸ್ಟ್ರಿಕ್ಟ್ ಜಂಗಲಿಗಳಿಂದ ಕೊರವನ ಗುಡ್ಡೆ ಡಿಸ್ಟ್ರಿಕ್ಟ್ ಜಂಗಲ್	7ರ ಲಾಗಾಯತು 10 ಮೈಲಿಗಳು
	ಪೋಖ್ತೆಯಾದ ಹಳೇ ಮರದಿಂದ ಕಾಡುಜಾತಿ	* 100	ಸಾಮು, ಡಿಸ್ಟ್ರಿಕ್ಟ್ ಜಂಗಲು ನಾವೆ ಸಮೀಪದ ಸ್ಟೇಟ್ ಫಾರೆಸ್ಟ್	11ರ ಲಾಗಾಯತು 13 ಮೈಲಿಗಳು
ತರೀಕೆರೆ ..	ಸಾಗುವಾನಿ ಬೆಲಗು	* 300	ಗಂಟೆನ್ಯಾಕನಕಣಿವೆ ಡಿಸ್ಟ್ರಿಕ್ಟ್ ಜಂಗಲ್ ಮತ್ತು ತ್ಯಾಗದಬ್ಯಾಗಿ ಡಿಸ್ಟ್ರಿಕ್ಟ್ ಜಂಗಲ್	5ರ ಲಾಗಾಯತು 7 ಮೈಲಿಗಳು
	ಮನ್ನಾಜಾತಿ ನಾಟಾ	* 50		6ರ ಲಾಗಾಯತು 10 ಮೈಲಿಗಳು
	ಕಾಡುಜಾತಿ	* 25		
	ಕಿರಿಗಳು	30,000	ವುಬ್ರಾಣಿ ಹಾದಿಕೆರೆ ಜಂಗಲ್	5ರ ಲಾ|| 8 ಮೈಲಿಗಳು.
ಕಡೂರು	ಸಾಗುವಾನಿ ಬೆಲಗು	* 200	ದೊಡ್ಡನ ಗುಡ್ಡದ ಡಿಸ್ಟ್ರಿಕ್ಟ್ ಜಂಗಲ್	10ರ ಲಾಗಾಯತು 13 ಮೈಲಿಗಳು.
	ಕಿರಿಗಳು	5000		
ಚಿಕ್ಕಮಗಳೂರು	ಜಂಗಲಿ ಬೆಲಗು	* 300	ಬಾಳೇಹೊನ್ನೂರು ರೋಡು ಕುಂದೂರು ಇಳಿ ಹೊಳೆ ಹತ್ತು ಮುಕ್ಕಿ ಡಿಸ್ಟ್ರಿಕ್ಟ್ ಜಂಗಲ್	15ರ ಲಾಗಾಯತು 20 ಮೈಲಿಗಳು
	ಕಿರಿಗಳು	20,000		
ಹೆಬ್ಬೆ ಡಿಪೋ ..	ಸಾಗುವಾನಿ ಮತ್ತು ಮನ್ನಾಜಾತಿ (ವಣ ನಾಟಾಗಳು)	* 200	ಹೆಬ್ಬೆ ಮತ್ತು ತೇಗೂರುಗುಡ್ಡ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಜಂಗಲ್	3ರ ಲಾಗಾಯತು 5 ಮೈಲಿಗಳು

* ಫಾರೆಸ್ಟು ಇಲಾಖೆಯಿಂದ ನಿಷ್ಕರ್ಷೆ ಮಾಡಲ್ಪಟ್ಟವುಗಳು.

2. ಪ್ರತಿ ವೊಂದು ದರಖಾಸ್ತಿನ ಲಕೋಟೆಯ ಮೇಲೆಯೂ ಇಂಥಾ ಜಂಗಲಿಯಿಂದ ಇಂಥಾ ಡಿಪೋಕ್ಕೆ ತಯ್ಯಾರಿಯಿಂದ ಹೇರಿ ತಂದು ಕೊಡುವ ಬಗ್ಗೆ ದರಖಾಸ್ತುಯೆಂದು ಬರದು ರವಾನಿಸತಕ್ಕದ್ದು.

3. ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು 1896ನೇ ಇಸವಿ ಅಕ್ಟೋಬರ ತಾರೀಖು 10ರ ವರಿಗೆ ದರಖಾಸ್ತುಗಳನ್ನ ಹಿಡಿಯುತ್ತಾರೆ.

4. ಕಂಟ್ರಾಕ್ಟು ಮಾಡತಕ್ಕವರುಗಳು ಮೇಲೆ ಹೇಳಿದ ಜಂಗಲಿಗಳಿಂದ ವೊಂದು ಜಂಗಲಿಗಿಂತ ಹೆಚ್ಚಾದ ಜಂಗಲಿಗಳಿಂದ ತಯ್ಯಾರಿ ಯಿಂದ ನಾಟಾಗಳನ್ನು ಮತ್ತು ಬೊಂಬುಗಳನ್ನು ಕಡಿದು ತಯ್ಯಾರಿಯಿಂದ ಯಾವ ಯಾವ ಡಿಪೋಗಳಿಗೆ ರಫ್ತು ಮಾಡುವದಕ್ಕೆ ಆಗುತ್ತೋ ಅದನ್ನ ಪ್ರತ್ಯೇಕವಾಗಿ ನಮೂದಿಸತಕ್ಕದ್ದು. ನಾಟಾ ಮತ್ತು ಬೊಂಬುಗಳ ತಯ್ಯಾರಿ ಇದುವರಿಗೂ ಡಿಸ್ಟ್ರಿಕ್ಟಿನಲ್ಲಿ ಜಾರಿಯಲ್ಲಿ ಇರುವ ಮಾಮೂಲಿನಂತೆ ಇರಬೇಕು. ಅಲ್ಲದೆ ಫಾರೆಸ್ಟ್ ಇಲಾಖೆಯವರ ಅಪ್ಪಣೆ ಅನುಸರಿಸಿ ಇರಬೇಕು.

5. ನಾಟಾ ಬೆಲಗುಗಳ ವಿಚಾರದಲ್ಲಿ ಸಲೆ ಅಡಿ 1ಕ್ಕೆ ಇಷ್ಟರ ಅಂತೆ ಯಂತಲೂ ಗಳುಗಳ ಬಗ್ಗೆ 100ಕ್ಕೆ ಇಷ್ಟರಂತೆ ಯಂತಲೂ ನಮೂದಿಸಬೇಕು.

6. ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪ್ರತಿ ವೊಬ್ಬ ಕಂಟ್ರಾಕ್ಟುದಾರನೂ ತಾನು ಕ್ರಮವರಿತು ಬರದುಕೊಡಬೇಕಾದ ಬಾಂಡುಯಾನೆ ಮುಚ್ಚಳಿಕೆ ಅನುಸರಿಸಿ ಕೆಲಸ ನಡಿಸತಕ್ಕ ಖಾತರು ಬಗ್ಗೆ ವೊಂದುನೂರು ರೂಪಾಯಿಗಳನ್ನು ಠೇವಣಿ ಇಡಬೇಕು.

7. ಕೇವಲ ಕಮ್ಮಿ ದರಕ್ಕೆ ಕೊಡುವ ದರಖಾಸ್ತುಗಳನ್ನೇ ಆಗಲಿ ಮತ್ತ್ಯಾವ ತರಹೆ ದರಖಾಸ್ತುಗಳನ್ನೇ ಆಗಲಿ ಅಂಗೀಕರಿಸುವದಕ್ಕೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಬದ್ಧರಾಗಿರುವದಿಲ್ಲ. ದರಖಾಸ್ತುಗಳ ಮಂಜೂರಾತಿ ಮೈಸೂರು ಶೀಮೆಯ ಫಾರೆಸ್ಟ್ ಕನ್ಸರ್ವೇಟರ ಸಾಹೇಬರವರ ಮಂಜೂರಿಗೆ ವಳಪಟ್ಟು ಇರುತ್ತೆ.

8. ಮೇಲೆ ಹೇಳಿರುವ ತಪ್ಶೀಲ್‌ಗಳಲ್ಲದೆ ಜಾಸ್ತೀ ಅಂಶಗಳನ್ನು ತಿಳಿಯಬೇಕೆಂದು ಅಪೇಕ್ಷಿಸಿದಲ್ಲಿ ಈ ತಪ್ಶೀಲ್‌ಗಳು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರ ಆಫೀಸಿನಲ್ಲಿ ದೊರಿಯುತ್ತೆ.

ಬಿ. ಹೀರಾಶಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ.

ಚಿತ್ರದುರ್ಗ ಡಿಸ್ಟ್ರಿಕ್ಟು.

ಫಾರೆಸ್ಟು ಇಲಾಖಾ.

ನೋಟಿಸ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಡಿಸ್ಟ್ರಿಕ್ಟಿಗೆ ಶೇರಿದ ಯಿದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ದೊರಿಯುವ ತಂಗಡಿ, ನಾಯಿಬೇಲ ಮತ್ತು ಚಕ್ಕೆಜಕ್ಕೆಗಳನ್ನ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಯಿಜಾರೆಯ ವಟ್ಟು ಸ್ವತಂತ್ರದ ಹಕ್ಕು ಬಹಿರಂಗವಾಗಿ ಹರಾಜು ಮೂಲಕ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಆಫಿಸರ ಮೂಲಕ ವಿಕ್ರಯಿಸಲ್ಪಡುತ್ತೆ. ಹರಾಜು ತಾರೀಖು ಮತ್ತು ಹರಾಜು ನಡಿಸುವ ಸ್ಥಳ ವಗ್ಯೆರೆ ತಪ್ಶೀಲುಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ನಂಬರು	ಹೋಬಳಿಗಳು.	ಹರಾಜು ತಾರೀಖು.	ಹರಾಜು ಹಾಕುವ ಸ್ಥಳ.	ಇಜಾರೆ ಹಕ್ಕಿನ ಕಾಲ.	ಷರಾ.
ಜಗಲೂರು ..	1	ಸೊಕ್ಕೆ	1896ನೇ ಇಸವಿ ಸೆಪ್ಟಂಬರ್ ತಾರೀಖು 24	ಜಗಲೂರು	1896ನೇ ಇಸವಿ ನವಂಬರು ಗುರ್ರೆ ಲಾಗಾಯತು 1897ನೇ ಇಸವಿ ಜೂನ್ ಆಖೈರುವರೆಗೆ.	ತಾಲ್ಲೂಕುವಾರು ಮತ್ತು ಕಾವಲುವಾರಾಗಲಿ ಅಥವಾ ಒಟ್ಟಾಗಿ ಹರಾಜು ನಡೆಸುವ ಆಫೀಸರಿಗೆ ಮನಸ್ಸಿಗೆ ತೋರಿದಂತೆ ಹರಾಜು ಮಾಡಲ್ಪಡುತ್ತದೆ.
	2	ಬಿಳಚೋಡು				
	3	ಜಗಲೂರು				
	4	ಅಮೃತಮಹಲ್ ಕಾವಲ್				
ದಾವಣಗೆರೆ ...	1	ದಾವಣಗೆರೆ	1896ನೇ ಇಸವಿ ಸೆಪ್ಟಂಬರ್ ತಾರೀಖು 28	ದಾವಣಗೆರೆ		
	2	ಆನಗೋಡು				
	3	ಮಾಯಕೊಂಡ				
	4	ಅಣಜಿ				
	5	ಹದಡಿ				
	6	ಹರಿಹರ				
	7	ಮಲೆಬೆನ್ನೂರು				
	8	ಅಮೃತಮಹಲ್ ಕಾವಲುಗಳು				
ಹೊಳಲ್ಕೆರೆ ...	1	ಹೊಳಲಕೆರೆ	1896ನೇ ಇಸವಿ ಸೆಪ್ಟಂಬರ್ ತಾರೀಖು 30	ಹೊಳಲ್ಕೆರೆ		
	2	ರಾಮಗಿರಿ				
	3	ಬರಮನಾಯಕನದುರ್ಗ				
	4	ತಾಳ್ಯ				
	5	ಹೊಸದುರ್ಗ				
	6	ಬಾಗೂರು				
	7	ಅಮೃತಮಹಲ್ ಕಾವಲು				
ಮೊಳಕಾಲುಮುರು	1	ಮೊಳಕಾಲುಮುರು	ಡಿಟೋ	ಮೊಳಕಾಲ್ಮುರು		
	2	ದೇವಸಮುದ್ರ				
	3	ಅಮೃತಮಹಲ್ ಕಾವಲು				

2. ಮೇಲ್ಕಂಡ ತಾರೀಖಿನಲ್ಲಿ ಮಧ್ಯಾನ್ಹದ ಲಾಗಾಯತು ಸಾಯಿಂಕಾಲದವರಿಗೂ ಹರಾಜ್ ಕ್ರಮ ಜರಿಗಿಸುವದು.

3. ಮೇಲ್ಕಂಡ ವಟ್ಟು ಸ್ವತಂತ್ರದ ಇಜಾರೆ ಹಕ್ಕು ಆಖೈರು ಚಡದರಖಾಸ್ತುದಾರ್ರುಗಳಿಗೆ ಕೊಡಲ್ಪಡುವದು. ಆದರೆ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಸಹ ಹರಾಜು ನಡಿಸುವ ಆಫೀಸರವರು ಮೊಖ್ತ್ಯಾರ್ರಾಗಿ ಯಿದ್ದಾರೆ. ಪೋಟಾಪೋಟಿಯಲ್ಲಿ ನಿಲ್ಲುವ ಆಖೈರು ಚಡಸವಾಲು ಮೊಬಲಗು ಮೇಲ್ಕಂಡ ಯಂಟು ತಿಂಗಳು ಕಾಲದಲ್ಲಿ ಕಡಿದು ಜಮಾಯಿಸಿಕೊಳ್ಳಲ್ಪಡುವ ಚಕ್ಕೆಯ ಖರೀದಿಯೆಂದು ಭಾವಿಸಲ್ಪಡುತ್ತದೆ.

4. ಇಜಾರೆ ಮಾಡಬೇಕೆಂದು ಅಪೇಕ್ಷಿಸುವವರು ತಾವೇ ಖುದ್ದುಬಂದು ಹರಾಜಿನಲ್ಲಿ ಚಡಸವಾಲು ಮಾಡಬಹುದು ಅಥವಾ ತಮ್ಮಿಂದ ಅಪ್ಪಣೆ ಹೊಂದಲ್ಪಟ್ಟಿರುವ ಮುಖ್ತಾರಿಕರನ್ನಾಗಲಿ ಕಳಿಹಿಸಬಹುದು. ಚಡ ಸವಾಲು ಮಾಡಲಪೇಕ್ಷೆಪಡುವವರು ಖಾತರೀ ಬಗ್ಯಾಗಿ ಐವತ್ತು ರೂಪಾಯಿಗಳನ್ನು ಹರಾಜ್ ಕಾಲದಲ್ಲಿ ಹರಾಜ್ ಮಾಡುವ ಆಫಿಸರವರಲ್ಲಿ ಠೇವಣಿ ಇಡಬೇಕು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರು ಹಾಜರುಮಾಡಿದ್ದ ಡಿಪಾಜಿಟ್ಟು ಮೊಬಲಗನ್ನ ಹರಾಜ್ ಖೈದಾದ ಕೂಡ್ಲೆ ಡಿಪಾಜಿಟ್ಟುದಾರ್ರಿಗೆ ವಾಪಸು ಮಾಡಲ್ಪಡುತ್ತದೆ. ಅಂಗೀಕರಿಸಲ್ಪಟ್ಟ ಸವಾಲುದಾರ್ರುಗಳು ತಮ್ಮ ಸವಾಲಿನ ಪೊಟ್ಟು ಮೊಬಲಗಿನಲ್ಲಿ ಮೊದಲು ಹಾಜರ್ಮಾಡಿದ್ದ ಮೊಬಲಗು ಸೇರಿ ಕಾಲುಹಿಸ್ಸೆಯನ್ನು ಪಾವತಿ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಡಿಪಾಜಿಟ್ಟು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದೂ ಅಲ್ಲದೆ ಬಾಬನ್ನ ದುಸರಾ ಹರಾಜ್ ಮಾಡಿಸುವದರಲ್ಲಿ ಉಂಟಾಗುವ ನಷ್ಟಕ್ಕೂ ಆತನನ್ನೇ ಗುನಾವಾರ ಮಾಡಲ್ಪಡುತ್ತದೆ.

5. ಮೇಲ್ಕಂಡ ಮೇರಿಗೆ ನಡಿಸಲ್ಪಡಬೇಕಾಗಿ ಬರುವ ಯರಡನೇ ಹರಾಜಿನಲ್ಲಿ ಮೊದಲಿನ ಹರಾಜ್ ಚಡದರಖಾಸ್ತಿಗಿಂತ ಮೊಬಲಗು ಜಾಸ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಮೊಬಲಗು ಕಮ್ಮಿಯಾದಲ್ಲಿ ಅಂಥಾ ಮೊಬಲಗನ್ನ ಅವಲ್ ಚಡದರಖಾಸ್ತುದಾರನಿಂದ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲು ಮಾಡಲ್ಪಡುತ್ತದೆ.

6. ಇಜಾರೆ ಬಾಬತು ಬಾಕಿ ಮುಕ್ಕಾಲು ಹಿಸ್ಸೆಯನ್ನು ಇದೇ ಇಸವಿ ಅಕ್ಟೋಬರ್ ಮಾಹೆ ಆಖೈರುವಳಗಾಗಿ ಖಜಾನೆಗೆ ಪಾರ್ಖಾವಣಿ ಮಾಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ಠೇವಣಿಯು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ, ಅಲ್ಲದೆ ಚಕ್ಕೆ ಜಮಾಯಿಸುವ ಹಕ್ಕು ಸಹ ಪುನಹ ಹರಾಜು ಮಾಡಲ್ಪಡುತ್ತದೆ.

7. ಹರಾಜು ಮಂಜೂರಾದ ಮೂರು ದಿವಸಗಳೊಳಗಾಗಿ ಇಜಾರೆದಾರನು ಈ ಕೆಳಗೆ ನಮೂದಿಸುವ ಷರತ್ತುಗಳ ಪ್ರಕಾರ ನಡದುಕೊಳ್ಳತಕ್ಕ ಬಗ್ಯೆ ಬದ್ಧನಾಗಿ ಮುಚ್ಚಳಿಕೆ ಬರದುಕೊಡಬೇಕು.

8. ಮೇಲ್ಕಂಡ ಮೇರೆ ಪೂರ್ತಿ ಮೊಬಲಗು ಇರಸಾಲು ಆದ ನಂತರ ಈ ಕೆಳಗೆ ನಮೂದಿಸಿರುವ ಷರತ್ತುಗಳು ಕಂಡು ಸರಿಯಾದ ಕಿಮ್ಮತಿನ ಛಾಪಾಕಾಗದದಲ್ಲಿ ಇದೇ ಇಸವಿ ನವಂಬರು ಗುರ್ರೇ ತಾರೀಖಿನಲ್ಲಿ ಕರಾರು ಬರದುಕೊಟ್ಟು ಅನಂತರ ಬಾಬು ಸುಪರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳ್ಯಾವವೆಂದರೆ:—

(1) ಒಂದುವರುಷಕ್ಕಿಂತಲೂ ಎಳೇದಾದ ಗಿಡವನ್ನು ಕಡಿಯುವದಿಲ್ಲ.

(2) ಕಡಿಯುವ ವಿಶಿಷ್ಟ ಮೋಟೂ ಮತ್ತು ರೆಂಬೆಗಳಲ್ಲಿರುವ ಚಕ್ಕೆಯನ್ನು ನಿಶ್ಶೇಷವಾಗಿ ತೆಗದುಕೊಳ್ಳುತ್ತೇನೆ. ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಚಕ್ಕೆಯನ್ನು ತೆಗಿಯದೆ ಬಿಡುವದಿಲ್ಲ.

(3) ಚಕ್ಕೆಯನ್ನು ತೆಗದ ನಂತರ ವಿಶಿಷ್ಟ ಸಾದೆಯೂ ಇಜಾರೆದಾರನಿಗೆ ಸೇರಿದ್ದೇ ಶಿವಾಯಿ ಸರ್ಕಾರಕ್ಕೆ ಸೇರಿದ್ದಲ್ಲ.

(4) ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಹುಕುಂ ಮಾಡುವ ಮೇರೆ ನಾನು ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿಯು ಚಕ್ಕೆಗೂ ಪ್ಯಾಸು ಪಡಿಯುತ್ತೇನೆ.

(5) ಡೆಪ್ಯುಟಿ ಕಮಿಷನರು ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರೇ ಆಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ನೌಕರರೇ ಆಗಲಿ ಮೊಕರರು ಮಾಡುವ ಮೇರಿಗೆ ಕರಾರು ಅನುಸರಿಸಿ ಜಮಾಯಿಸಿಕೊಂಡು ಹೋಗುವ ಚಕ್ಕೆಗೆ ತಪ್ಪಿಲ್ಲಾಗಿ ಲೆಖ್ಖ ಇಡುತ್ತೇನೆ ಅಲ್ಲದೆ ಈ ಬಾಬತು ಲೆಖ್ಖವನ್ನು ಡೆಪ್ಯುಟಿ ಕಮಿಷನರು ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಇತರ ಆಫಿಸರು ಕೇಳಿದಾಗ್ಯೆ ತನಖೀಬಗ್ಗೆ ಹಾಜರುಮಾಡುತ್ತೇನೆ.

(6) ನಾನು ಜಮಾಯಿಸುವ ವಿಶಿಷ್ಟ ಚಕ್ಕೆಯನ್ನೂ 1897ನೇ ಇಸವಿ ಜೂನ್ ಆಖೈರವಳಗಾಗಿ ನನ್ನ ಇಜಾರೆ ತಾಲ್ಲೂಕಿನಿಂದ ಹೊರಗೆ ಸಾಗಿಸಿಕೊಂಡು ಹೋಗುತ್ತೇನೆ.

(7) ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್ಗಳಲ್ಲಿ ಸಹ ನನ್ನಿಂದಾಗಲಿ ನನ್ನ ಕಡೆ ಜನಗಳಿಂದಾಗಲಿ ಬೆಂಕಿ ಅಪಾಯವೇ ಮೊದಲಾದ ಇನ್ಯಾವ ಕಾರಣಗಳಿಂದಾಗಲಿ ಖರೀದಿ ಬಾಳತಕ್ಕ ಮರಗಳು ಅಥವಾ ಫಸಲುಗಳು ನಾಶವಾದಲ್ಲಿ ಅದರಿಂದುಂಟಾಗುವ ನಷ್ಟಕ್ಕೆ ನಾನೇ ಜವಾಬು ಮಾಡಲು ಬದ್ಧನಾಗಿದ್ದೇನೆ.

(8) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ನಾನಾಗಲಿ ನನ್ನ ತರಫ಼ ಜನಗಳಾಗಲಿ ಅತಿಕ್ರಮಿಸಿ ನಡದಲ್ಲಿ ನನ್ನ ಇಜಾರೆಯನ್ನು ರದ್ದುಮಾಡಬಹುದು. ಮತ್ತು ನಾನು ಅದುವರಿಗೆ ಜಮಾಯಿಸಿ ಹಾಜರು ಯಿಟ್ಟುಕೊಂಡು ಯಿರತಕ್ಕ ಚಕ್ಕೆಯನ್ನು ಸರ್ಕಾರದವರು ಜಪ್ತೀಮಾಡಬಹುದು.

ತಾರೀಖು 4ನೇ ಸೆಪ್ಟಂಬರ್ 1896.

ತಾರೀಖು 4ನೇ ಸೆಪ್ಟಂಬರ್ 1896.

ಸರ್ 1896–97ನೇ ಸಾಲಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಪ್ಲಾಂಟೇಷನ್ಗಳಲ್ಲಿಯೂ ಪ್ಯಾಯಲ್ ರಿಜರ್ವ್, ಗ್ರಾಮ ಫಾರೆಸ್ಟು ಮತ್ತು ಅಮೃತಮಹಲ್ ಕಾವಲುಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೇ ಜೆನಸಿಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯು ಈ ಕೆಳಗೆ ಕಂಡ ತಖ್ತೆಯಲ್ಲಿ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ, ಸ್ಥಳಗಳಲ್ಲಿಯೂ ತಾಲ್ಲೂಕು ಅಮಲ್ದಾರು ಅಥವಾ ಡೆಪ್ಯುಟಿ ಅಮಲ್ದಾರುಗಳ ರೂಬರೂ ತಾಲ್ಲೂಕುವಾರಾಗಿಯಾಗಲಿ ಅಥವಾ ಹೋಬಳಿವಾರಾಗಿಯಾಗಲಿ ಅಥವಾ ಮತ್ಯಾವ ರೀತಿಯಾಗಿ ಆಗಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ನಂ	ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಷರಾ.
1	ಚಿತ್ರದುರ್ಗ ..	2ನೇ ಅಕ್ಟೋಬರ 1896 ..	ಚಿತ್ರದುರ್ಗ	
2	ಚಳ್ಳಕೆರೆ ..	24ನೇ ಸೆಪ್ಟಂಬರ 1896 ..	ಚಳ್ಳಕೆರೆ	
3	ಹಿರಿಯೂರು ..	27ನೇ ಡಿಟೋ ಡಿಟೋ ..	ಹಿರಿಯೂರು	
4	ಹೊಳಲ್ಕೆರೆ, ಹೊಸದುರ್ಗ ..	29ನೇ ಡಿಟೋ ಡಿಟೋ ..	ಹೊಳಲ್ಕೆರೆ	
5	ದಾವಣಗೆರೆ, ಹರಿಹರ ..	27ನೇ ಡಿಟೋ ಡಿಟೋ ..	ದಾವಣಗೆರೆ	
6	ಜಗಲೂರು ..	23ನೇ ಡಿಟೋ ಡಿಟೋ ..	ಜಗಲೂರು	
7	ಮೊಳಕಾಲ್ಮುರು ..	29ನೇ ಡಿಟೋ ಡಿಟೋ ..	ಮೊಳಕಾಲ್ಮುರು	

846

ಪಸಾರೆ ಜಿನಸಿಗಳ ವಿವರ.

1 ಜೇನು, 2 ಜೇನುಮೇಣ, 3 ಕಪಿಲಾರಂಗು, 4 ಗೇರುಪಪ್ಪು, 5 ಹುಣಸೇಹಣ್ಣು, 6 ಹೊಂಗೇಕಾಯಿ, 7 ಬ್ಯಾಲದಹಣ್ಣು, 8 ಕಲ್ಲುಹುವ್ವು, 9 ಕಾಡುಹರಳು, 10 ಗೋಂದು, 11 ಮರಡಿಪಪ್ಪು, 12 ಶೀಗೇಕಾಯಿ, 13 ತಾರೇಕಾಯಿ, 14 ಪಪ್ಪೈಚಕ್ಕೆ, 15 ಅಳಲೇಕಾಯಿ, 16 ಶೀತಾಫಲ, 17 ಜಾಲಿಗುತ್ತು, 18 ಹೊಂಗೇ ಎಲೆ, 19 ಕಲ್ಲುಹುವ್ವು.

2. ಚಡರಖಾಸ್ತುದಾರರು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ಠೇವಣಿ ಕಟ್ಟತಕ್ಕದ್ದು ಇದಕ್ಕೆ ತಪ್ಪಿದರೆ ಅವರನ್ನು ನಷ್ಟಕ್ಕೆ ಗುರಿ ಮಾಡಿ ಬಾಬು ದುಸರೇ ಹರಾಜು ಮಾಡಲ್ಪಡುವದು. ಆದರೆ ಅದರಿಂದ ಫುಂಟಾಗುವ ಆದಾಯದಲ್ಲಿ ಸದರೀಯವರಿಗೆ ಏನೂ ದೊರಿಯಲಾರದು. ಹರಾಜು ಮಂಜೂರಾದ ಸಂಗತಿಯನ್ನು ಚಡಸವಾಲ್‌ದಾರ್ರಿಗೆ ತಿಳಿಸಿದ ಬಂದು ವಾರದೊಳಗಾಗಿ ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಸದರೀಯವರು ಪಾವತಿ ಮಾಡತಕ್ಕದ್ದು. ಅಷ್ಟರಲ್ಲೇ ಹಣ ಪಾವತಿ ಮಾಡಲು ತಪ್ಪಿದರೆ ದರಖಾಸ್ತುದಾರ್ರು ಮೊದಲು ಪಾವತಿ ಮಾಡಿದ ಕಾಲು ಹಿಸ್ಸೆ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ತಪ್ಪಿಸಲಾದೀತು. ಪೂರಾ ಮೊಬಲಗು ಪಾವತಿಯಾದ ನಂತರ ಹರಾಜು ಕಾಲದಲ್ಲಿ ಘಾಯಿಷಾಗುವ ಷರತ್ತುಗಳ ಕಂಡು ದರಖಾಸ್ತುದಾರರು ಕರಾರು ಬರದುಕೊಡಬೇಕಾಗಿದೆ. ಇದಕ್ಕೆ ತಪ್ಪಿದರೆ ಜಿನಸಿಯನ್ನು ರೂಢಿಸಲು ಅಪ್ಪಣೆ ಕೊಡಲ್ಪಡಲಾರದು. ಪೂರಾ ಹರಾಜು ಮೊಬಲಗಿನ ಮೇಲೆ ರೂಪಾಯಿಗೆ ಬಂದು ಆಣೆಯಂತೆ ಲೋಕಲ್‌ಸೆಸ್ ಕೊಡತಕ್ಕದ್ದು.

3. ಹರಾಜು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ವಳಪಟ್ಟಿರುತ್ತೆ.

4. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನು ರೂಢಿಸಲು ಹಕ್ಕಿರುವದಿಲ್ಲ.

5. ಇನಾಂದಾರರ, ಸ್ಥಿರಪಟ್ಟ ಹಕ್ಕುದಾರಿಗೆ ಇಜಾರೆದಾರ್ರು ಪ್ರವೇಶಿಸಕೂಡದು.

6. ಗ್ರಾಮ ಅಮರಾಯಿ ಫಲ ಹುಟ್ಟುವಳಿಯು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

7. ದರಖಾಸ್ತುದಾರರು ತಕ್ಕ ಸವಾಲ್ ಮಾಡದೆ ಹೋದರೆ ಹರಾಜು ಮಾಡುವ ಆಫಿಸರರು ಹರಾಜು ನಿಲ್ಲಿಸುವದಕ್ಕೂ ಅಥವಾ ಮುಂದೆ ಮತ್ತೊಂದು ವೇಳೆ ಹರಾಜು ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

ಯಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮ್ಮಿಷನರ್.

ಕೊಡಗು ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 7ನೇ ಸೆಪ್ಟಂಬರ್ 1896ನೇ ಇಸವಿ.

ಸನ್ 1896ನೇ ಇಸವಿ ನವಂಬರ್ ತಾರೀಖು 25ರಲ್ಲು ಫ್ರೇಜರ್‌ಪೇಟೆಯಲ್ಲಿ ಹೆಚ್ಚುಕಡಿಮೆ 120 ಟನ್ ಗಂಧ ಹರಾಜು ಹಾಕಲ್ಪಡುತ್ತದೆ.

ಷರತ್—ಸನ್ 1895ನೇ ಇಸವಿ ಮೇ ತಿಂಗಳ ಕೊಡಗು ಡಿಸ್ಟ್ರಿಕ್ಟ್ ಗೆಜೆಟ್ಟಿನಲ್ಲಿ ಘಾಯಿಷ್ ಮಾಡಲ್ಪಟ್ಟ ಚೀಫ್ ಕಮ್ಮಿಷನರ್ ಸಾಹೆಬರವರ ಸನ್ 1895ನೇ ಇಸವಿ ಏಪ್ರೆಲ್ ತಾರೀಖು 16ರ ನಂಬರ್ 4ರ ನೋಟಿಫಿಕೇಷನ್ ಮೇರೆ ಶೀಕಡಾ 25ರಷ್ಟು ಕ್ರಯವನ್ನು ಹರಾಜುಕಾಲದಲ್ಲಿ ಕೊಡತಕ್ಕದ್ದು. ಬಾಕಿ ಮೊಬಲಗನ್ನು ಸನ್ 1897ನೇ ಇಸವಿ ಮಾರ್ಚಿ ತಾರೀಖು 1ರ ವಳಗೇ ಸಾಕಲ್ಯವಾಗಿ ಪಾವತಿಮಾಡತಕ್ಕದ್ದು.

ಹೆಚ್. ವಿನ್,
ಕೊಡಗು ಫಾರೆಸ್ಟ್ ಡೆಪ್ಯುಟಿ ಕನ್ಸರ್ವೇಟರ್.

ನೋಟಿಸ್.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟಾಫೀಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಪ್ಸೀಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುವಂಥಾ ಕೂಪನ್‌ಗಳ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನೆಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ಮೊಬಲಗು ತೆಗದುಕೊಂಡು ರಶೀತಿ ಕೊಡುವ ಬಗ್ಯಾಗಿ ಅಪ್ಪಣೆ ಯಿರುವದ್ದರಿಂದ ಇನ್ನು ಮೇಲೆ ಮೈಸೂರ್ ಶೀಮೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್ಡರ್ ಹೊರ್ತಾಗಿ ಅನ್ಯಥಾ ಆ ಬಗ್ಯಾಗಿ ಈ ಆಫಿಸಿಗೆ ಕಳುಹಿಸಲ್ಪಡುವ ಯಾವ ಮನಿಆರ್ಡರಾಗಲಿ ಈ ಆಫೀಸಿನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಶಕ್ಕೂ ನಿಗೆ ಕೊಡಲ್ಪಡಲಾರದು.

347

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಿಷ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು	
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯುಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ವಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮರ್ಕುಂ 24205—6—ಜಿ. 6200ನೇ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸ್‌ಗಳು:—

ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	.. ..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್‌ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	.. .. ..	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	.. ..	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್‌ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯೂಪ್ಲಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„	..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ	..	0	8
ಎರಡನೇ ದಫಾ	ಡಿಟೋ	ಡಿಟೋ	..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		..	..	0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದ್‌ಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಬಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ಒಳಗಾಗಿ ಕಂಪೈಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಯಿಲ್ಲ.

ಸಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪೈಲರ್.

Mysore Govt. Central Press, Bangalore.—1896.

3348

ಮೈಸೂರ ಗೆಜೆಟ.

ಸಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 38.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ|| 24, ಸ್ನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ ವ ಯಜ್ಯುಕೇಷನ ಇನಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 1ನೇ ಸೆಪ್ಟಂಬರ್ 1896.

ನಂ. 3122.—ಜು. 316, ಮೈಸೂರ್ ಗವರ್ನಮೆಂಟಿನವರು ಸಕಲ ಜನರ ತಿಳುವಳಿಕೆ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ,—1896ನೇ ಸೆಪ್ಟಂಬರ್ 15ನೇ ತಾರೀಖಿನ ಲಾಗಾಯತು ವ ಆ ತರುವಾಯು "ಶಿವಮೊಗ್ಗಾ ಸಬಾರ್ಡಿನೇಟ ಜಡ್ಜರ ಕೋರ್ಟು"ಯೆಂಬದಾಗಿ ಕರಿಯಲ್ಪಡತಕ್ಕ ಒಂದು ಸಬಾರ್ಡಿನೇಟ ಜಡ್ಜರ ಕೋರ್ಟು ಶಿವಮೊಗ್ಗೆಯಲ್ಲಿ ಸ್ಥಾಪಿಸಲ್ಪಡುವದು, ಮತ್ತು ಸದರೀ ಕೋರ್ಟಿಗಾಗಿ ಮೊಕರರ್ಮಾಡಲ್ಪಟ್ಟ ಸಬಾರ್ಡಿನೇಟ ಜಡ್ಜರು 1883ನೇ ಇಸವಿಯ ಮೈಸೂರ್ ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 9ನೇ ಸೆಕ್ಷನ ಅನುಸರಿಸಿ, ಒಬ್ಬ ಸಬಾರ್ಡಿನೇಟ ಜಡ್ಜರ ಅಧಿಕಾರವನ್ನ ಶಿವಮೊಗ್ಗಾ, ಕಡೂರು ವ ಚಿತ್ರದುರ್ಗ ರೆವಿನ್ಯೂ ಡಿಸ್ಟ್ರಿಕ್ಟುಗಳ ಸ್ಥಳ ಸರಹದ್ದುಗಳಲ್ಲಿ ಚಲಾಯಿಸತಕ್ಕದ್ದು.

ತಾರೀಖು 10ನೇ ಸೆಪ್ಟಂಬರ್ 1896.

ನಂ. 3516.—ಜು. 362, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಕೋಲಾರ್ ಗೋಲ್ಡ್‌ಫೀಲ್ಡ್ಸ ಸ್ಪೆಷಲ್ ಮಾಜಿಸ್ಟ್ರೇಟ ವ ಮುನಸಿಫ್ ಮೆಸ್ಟರ್ ಜಿ. ಹ್ಯೂಂರ್ಟಿಯವರಿಗೆ, 1896ನೇ ಸೆಪ್ಟಂಬರ್ 14ನೇ ಮುಕ್ಕಾಂ ಲಾಗಾಯತು ಹನ್ನೆರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 8ನೇ ಸೆಪ್ಟಂಬರ್ 1896.

ನಂ. 3401.—ಲೋ. ಫಂ. 257—92, ಸ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕಟ್ಟಡವ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಚಿತ್ರದುರ್ಗ ಮ್ಯುನಿಸಿಪಾಲಿಟಿಯಲ್ಲಿ ಅಯ್ಯಣ್ಣನ ಪೇಟೆಯಿಂದ ಪುರುಷೋತ್ತಮ ಪಂತನಕೆರೆಗೆ ಒಂದು ರಸ್ತೆಯನ್ನ ಹಾಕುವ ಬಗ್ಯಾಗಿ ಬೇಕಾಗಿರುತವೆ:—

ನಂಬರು.	ಮಾಲೀಕರ ಹೆಸರು.	ಜಮೀನ್ ಮತ್ತು ಮನೆಯ ತಪ್ಸೀಲು.	ತೆಗೆದುಕೊಳ್ಳಬೇಕಾದ ವಿಸ್ತೀರ್ಣ.			ಚಕ್ಕುಬಂದಿ.			
			ಉದ್ದ	ಅಗಲ	ವಿಸ್ತೀರ್ಣ	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಗಜ	ಗಳು.					
1	ಶೆಟ್ಟಿ ಮಹಾಲಿಂಗಪ್ಪ	ಸಾಧಾರಣ ಹೆಂಚಿನ ಮನೆ	3	8	24	ಕಲ್ಲಿಕೃಷ್ಣಪ್ಪನ ಬೈಲು ಅಂಗಳ	ಮಾಲೀಕರ ಮನೆಯ ಹಿಕ್ಕಭಾಗ	ಅಯ್ಯಣ್ಣನಪೇಟೆ	ಮಾಲೀಕರ ಬೈಲು ಅಂಗಳ
2	ಡಿಟೋ	ಬೈಲು ಅಂಗಳ	3	41	123	ಡಿಟೋ	ಮಾಲೀಕರ ಮುಖ್ಯ ಕಟ್ಟಡ ಮತ್ತು ಭಾವಿ	ಮಾಲೀಕರ ಮೇಲ್ಕಂಡ ಹೆಂಚಿನ ಮನೆ	ವಕೀಲ್ ಶ್ರೀನಿವಾಸರಾಯರ ಹಿತ್ತಲು

ತಾರೀಖು 9ನೇ ಸೆಪ್ಟಂಬರ್ 1896.

ಈ ಕೆಳಗೆ ಕಂಡ ಬಡ್ತಿಯು ಹುಕುಂ ಮಾಡಲ್ಪಟ್ಟಿರುತೆ:—

ನಂ. 3490.—ಜು. 354, 1ನೇ ಕ್ಲಾಸ್ ಮುನ್ಸಿಫ್ ವ ಆಕ್ಟಿಂಗ್ ಸಬ್ ಜಡ್ಜು ಮಿಸ್ಟರ್ ಎಸ್. ವೆಂಕಟವರದಯ್ಯಂಗಾರ್‌ಯವರು, 1896ನೇ ಸೆಪ್ಟಂಬರ್ 15ನೇ ಮಾರ್ಕುಂಲಾಗಾಯತು ಸಬ್ ಪ್ರೋಟವಾಗಿ 2ನೇ ಕ್ಲಾಸ್ ಸಬ್ ಜಡ್ಜ್‌ರಾಗಿ ಖಾಯಂ.

ನಂ. 3452.—ಲೋ. ಫಂ. 65—96, ಸ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದಕ್ಕೆ ಜಂಟಿಸಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ, ಸಕ್ಲೇಶಪುರದ ಷಹರ್ ಬಡಾಯಿಸುವ ಬಗ್ಯಾಗಿ ಬೇಕಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ತೆಗೆದುಕೊಳ್ಳಬೇಕಾದ ಜಮೀನಿನ ತಪ್ಸೀಲು.				ಚಕ್ಕುಬಂದಿ.			
					ಸರ್ವೇ ನಂ.	ತಪ್ಸೀಲು.	ವಿಸ್ತೀರ್ಣ.	ಬೇರೀಜು.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
							ಎ. ಗುಂ.	ರೂ. ಆ. ಪೈ				
ಹಾಸನ.	ಮಂಜರಾಬಾದ.	ಸಕ್ಲೇಶಪುರ.	ಸಕ್ಲೇಶಪುರ.	ಚನ್ನಬೀರ ಸಕಣಿಗ	105	ಖುಷ್ಕಿ	3—10	1—4—0	ಸರ್ವೇ ನಂಬರ್ 107	ರಸ್ತೆ	ಸರ್ವೇ ನಂ. 103 ವ 104	ಸರ್ವೇ ನಂ. 106
				ಹುಚ್ಚಭೈರ ಬೀರ ಈರ	ಸರ್ವೇ ನಂ. 107ರಪೈಕಿ	ಡಿಟೋ	0—29	0—4—0	ಸರ್ವೇ ನಂಬರ್ 110 ವ 111	ಸರ್ವೇ ನಂ. 105 ವ 106	ಸರ್ವೇ ನಂ. 108 ವ 39	ಸರ್ವೇ ನಂ. 111
				ಜೋಯಿಸ ಕೃಷ್ಣಭಟ್ಟ, ಹುಚ್ಚಭೈರ ಬೀರ ಈರ	ಡಿಟೋ	ಡಿಟೋ	0—30	0—4—0	..	..	..	..
				ನಿಂಗಾ ಬೀರ ಮರಿನಿಂಗ	ಡಿಟೋ	ಡಿಟೋ	0—30	0—4—0	..	..	..	..
				ಚನ್ನಾಬೀರ ಸಕಣಿಗ	ಡಿಟೋ	ಡಿಟೋ	3—16	0—4—0	..	..	..	..
							5—25	2—0—0				
				ಪಡವಲ್ ಬೀರ ಅಯ್ಯಾಸಾಮಿ	113	ಡಿಟೋ	0—29	0—4—0	ಸರ್ವೇನಂ. 112 ಗ್ರಾಮನಿವೇಶನ	ಸರ್ವೇ ನಂ. 111	ಸರ್ವೇ ನಂ. 111	ಸರ್ವೇ ನಂ. 115

ತಾರೀಖು 23ನೇ ಸೆಪ್ಟಂಬರ್ 1896ನೇ ಇಸವಿ.

ನಂ. 4084.—ಪಿ. 837.—ಸರ್ 1894ನೇ ಇಸವಿ ಜೂನ್ 10ನೇ ಮರ್ಕ್ಕಂ 21572—ಜಿ. ಎಸ್. 99.—93ನೇ ನಂಬ್ರುಳ್ಳ ಇಸ್ತಿಹಾರ್ನಾಮೆ ಜೊತೆಗೆ ಸಾದರ್ಮಾಡಲ್ಪಟ್ಟ ನಿಯಮಗಳನುಸರಿಸಿ, ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ, ಯಿದರಡಿ ಕಂಡ ತಖ್ತೆಯು, ಸರ್ವರ ತಿಳುವಳಿಕೆ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ:—

1896ನೇ ಇಸವಿಯ ದಸರಾ ಪ್ರಜಾ ಪ್ರತಿನಿಧಿಗಳ ಸಭೆಗೆ ಚುನಾಯಿಸಲ್ಪಟ್ಟ ಮೆಂಬರುಗಳ ತಖ್ತೆ.

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
	ಮೈಸೂರು ಡಿಸ್ಟ್ರಿಕ್ಟು.	
ಮೈಸೂರ್ ಟೌನ್ ಮ್ಯುನಿಸಿಪಾಲಿಟಿ	1 ಮೆಸ್ಟರ್ ಲಕ್ಷ್ಮೀನರಸಿಹ್ಮ ಅಯ್ಯಂಗಾರ್ರು	ಅಡ್ವೋಕೇಟ್
	2 ಡಿಟ್ಟೋ ಎಂ. ವೆಂಕಟಕೃಷ್ಣಯ್ಯನವರು	ಸ್ಕೂಲ್ ಮಾಸ್ಟರ್
	3 ಡಿಟ್ಟೋ ಎ. ರಾಮಣ್ಣನವರು	ಅಡ್ವೋಕೇಟ್
	4 ಡಿಟ್ಟೋ ಹೆಚ್. ಕೃಷ್ಣರಾಯರು	ಡಿಟ್ಟೋ
ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬೋರ್ಡು	1 ಡಿಟ್ಟೋ ಅಂಬಳೆ ಅಣ್ಣಯ್ಯ ಪಂಡಿತರು	ಜಮೀನ್ದಾರ್
	2 ಡಿಟ್ಟೋ ಶಿವೋಜಿರಾಯರು	ಡಿಟ್ಟೋ
ಫ್ರೆಂಚ್‌ರಾಕ್ಸ್ ಲೋಕಲ್ ಫಂಡ್ ಬೋರ್ಡು	1 ಡಿಟ್ಟೋ ಅಕ್ಕಿಹೆಬ್ಬಾಳ್ ಕೃಷ್ಣಪ್ಪನವರು	ಡಿಟ್ಟೋ
	2 ಡಿಟ್ಟೋ ವೈದ್ಯನಾಥಪುರದ ರಾಮಣ್ಣನವರು	ಡಿಟ್ಟೋ
ಮೈಸೂರ್ ತಾಲ್ಲೂಕು	1 ಡಿಟ್ಟೋ ಕೃಷ್ಣರಾಯರು	ಕಂಟ್ರಾಕ್ಟರ್
	2 ಡಿಟ್ಟೋ ಗೋಪಶೆಟ್ಟರು	ವರ್ತಕರು
	3 ಡಿಟ್ಟೋ ಮಲ್ಲಿಕಾರ್ಜುನಪ್ಪನವರು	ಇನಾಂದಾರ್
	4 ಡಿಟ್ಟೋ ಮಾದಪ್ಪನವರು	ಡಿಟ್ಟೋ
ಯಡತೊರೆ ತಾಲ್ಲೂಕು	1 ಡಿಟ್ಟೋ ಮಲ್ಲಿಕಾರ್ಜುನಯ್ಯನವರು	ಪಟೇಲ್
	2 ಡಿಟ್ಟೋ ಮಂಡರ್ ಸುಬ್ಬರಾಯರು	ಜಮೀನ್ದಾರ್
	3 ಡಿಟ್ಟೋ ಅಂಡಾಜಯ್ಯಂಗಾರ್ರು	ಡಿಟ್ಟೋ
	4 ಡಿಟ್ಟೋ ದಾಸಶೆಟ್ಟರು	ವರ್ತಕರು
ಹುಣಸೂರು ತಾಲ್ಲೂಕು	1 ಡಿಟ್ಟೋ ಚನ್ನಕೇಶವಯ್ಯ ವುರುಫ್ ರಾಯಪ್ಪನವರು	ಜಮೀನ್ದಾರ್
	2 ಡಿಟ್ಟೋ ಬಿ. ಕೃಷ್ಣಪ್ಪನವರು	ಪೆನ್ಷನ್ ಸ್ಕೂಲ್ ಮಾಸ್ಟರ್
	3 ಡಿಟ್ಟೋ ಪಟ್ರಿ ಹೇ ಸಾಹೆಬರು	ಗಂಧದಯಂಣೆ ಕಾರಖಾನೆ ಸ್ವಂತ ಕರ್ತರು
ಡಿಟ್ಟೋ ಮ್ಯುನಿಸಿಪಾಲಿಟಿ	1 ಡಿಟ್ಟೋ ನರಸಿಹ್ಮಯ್ಯನವರು	ಜಮೀನ್ದಾರ್
ಹೆಗ್ಗಡದೇವನಕೋಟೆ ತಾಲ್ಲೂಕು	1 ಡಿಟ್ಟೋ ರಂಗಯ್ಯಂಗಾರ್ರು	ಜಮೀನ್ದಾರ್ ಮತ್ತು ಕಂಟ್ರಾಕ್ಟರ್
	2 ಡಿಟ್ಟೋ ಸುಬ್ಬಣ್ಣನವರು	ಜಮೀನ್ದಾರ್ ಮತ್ತು ಶಾನಭೋಗ್
ಗುಂಡಲ್‌ಪೇಟೆ ತಾಲ್ಲೂಕು	1 ಡಿಟ್ಟೋ ವಳಹಟ್ಟಿ ದೇವಪ್ಪನವರು	ಜಮೀನ್ದಾರ್
	2 ಡಿಟ್ಟೋ ಗುರಿಕಾರ್ ಹೊನ್ನಪ್ಪನವರು	ಡಿಟ್ಟೋ
ಚಾಮರಾಜನಗರ ತಾಲ್ಲೂಕು	1 ಡಿಟ್ಟೋ ನಾಗಪ್ಪನವರು	ವರ್ತಕರು
	2 ಡಿಟ್ಟೋ ಅಂಬಳೆ ಅಣ್ಣಯ್ಯ ಪಂಡಿತರು	ಜಮೀನ್ದಾರ್
	3 ಡಿಟ್ಟೋ ವಾಸುದೇವಯ್ಯದವರು	ಡಿಟ್ಟೋ ವ ಶಾನಭೋಗ್
ನಂಜನಗೂಡು ತಾಲ್ಲೂಕು	1 ಡಿಟ್ಟೋ ಕಳಿಯೂರು ವೆಂಕಟಸುಬ್ಬಯ್ಯನವರು	ಪ್ಲೀಡರು
	2 ಡಿಟ್ಟೋ ಮಸ್ತಾನ್ ಸಾಹೆಬರು	ಜವಳಿ ವರ್ತಕರು
	3 ಡಿಟ್ಟೋ ನಾಯಿಕ್ ನರಸಿಹ್ಮಾಚಾರ್ರು	ಬ್ಯಾಂಕ್ ಏಜಂಟ್
ಡಿಟ್ಟೋ ಮ್ಯುನಿಸಿಪಾಲಿಟಿ	1 ಡಿಟ್ಟೋ ಶಂಕರನಾರಣಪ್ಪನವರು	ಜಮೀನ್ದಾರ್
ತಿರುಮಕೂಡ್ಲು ನರಸೀಪುರ ತಾಲ್ಲೂಕು	1 ಡಿಟ್ಟೋ ಶಿದ್ದಲಿಂಗಪಂಡೇವರು	ಬ್ಯಾಂಕ್ ಏಜಂಟ್
	2 ಡಿಟ್ಟೋ ಕೊಳ್ಳೇಗಾಲ ವೆಂಕಟಾದ್ರಿಶೆಟ್ರು	ಜಮೀನ್ದಾರ್
	3 ಖಾಲಿ	
ಶ್ರೀರಂಗಪಟ್ಟಣ ತಾಲ್ಲೂಕು	1 ಮೆಸ್ಟರ್ ನರಸಿಹ್ಮಗವುಡರು	ಜಮೀನ್ದಾರ್
	2 ಖಾಲಿ	
	3 ಡಿಟ್ಟೋ	
	4 ಮೆಸ್ಟರ್ ವೆಂಕಟಕೃಷ್ಣಪ್ಪನವರು	ಜಮೀನ್ದಾರ್ ಮತ್ತು ಶಾನಭೋಗ್
ಡಿಟ್ಟೋ ಮ್ಯುನಿಸಿಪಾಲಿಟಿ	1 ಡಿಟ್ಟೋ ಕರಿಮೊಹಿದೀನ್ ಸಾಹೆಬರು	ಸ್ಕೂಲ್ ಮಾಸ್ಟರ್
ಕೃಷ್ಣರಾಜಪೇಟೆ ತಾಲ್ಲೂಕು	1 ಡಿಟ್ಟೋ ರಂಗಯ್ಯಂಗಾರ್ರು	ಜಮೀನ್ದಾರ್ ವ ಪೆನ್ಷನರ್
	2 ಡಿಟ್ಟೋ ಶೀತಾರಾಮಯ್ಯನವರು	ಡಿಟ್ಟೋ ಮತ್ತು ಶಾನಭೋಗ್
	3 ಡಿಟ್ಟೋ ಲಿಂಗರಾಜಗವುಡರು	ಜಮೀನ್ದಾರ್ ವ ಪಟೇಲ್

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ನಾಗಮಂಗಲ್ ತಾಲ್ಲೂಕು	1 ಮಿಸ್ಟರ್ ಚಂದ್ರಶೇಕರಯ್ಯನವರು ..	ಜಮೀನ್ದಾರ್
	2 ಡಿಟ್ಟೋ ಗುಂಡಪ್ಪನವರು ..	ಜಮೀನ್ದಾರ್ ಮತ್ತು ಶಾನಭೋಗ್
	3 ಡಿಟ್ಟೋ ದೊಡ್ಡೇಗವುಡರು ..	ಜಮೀನ್ದಾರ್ ಮತ್ತು ಪಟೇಲ್
ಮಂಡ್ಯ ತಾಲ್ಲೂಕು	1 ಡಿಟ್ಟೋ ಜಿನ್ನಪ್ಪನ ನಂಜಪ್ಪನವರು ..	ವರ್ತಕರು
	2 ಡಿಟ್ಟೋ ರಾಮಣ್ಣನವರು ..	ಜಮೀನ್ದಾರ್
	3 ಡಿಟ್ಟೋ ಎ. ಆನಂದಾಳ್ವಾರ್ರು ..	ಡಿಟ್ಟೋ
ಮಳವಳ್ಳಿ ತಾಲ್ಲೂಕು	1 ಡಿಟ್ಟೋ ಶಂಕರಪ್ಪನವರು ..	ಡಿಟ್ಟೋ
	2 ಡಿಟ್ಟೋ ಮಾಯಿಗವುಡರು ..	ಡಿಟ್ಟೋ
ಡಿಟ್ಟೋ ಮ್ಯುನಿಸಿಪಾಲಿಟಿ ..	1 ಖಾಲಿ	
ಶ್ರೀಯದುಗಿರಿಸದಾನಂದವರ್ಧನೀಸಭಾ ..	1 ಮಿಸ್ಟರ್ ತಿರುವಾಯಿಮೊಳಿ ತಿರುನಾರಣಯ್ಯಂಗಾರ್ರು ..	ಆಚಾರ್ಯರು
	ಬೆಂಗಳೂರು ಡಿಸ್ಟ್ರಿಕ್ಟು.	
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ..	1 ಮಿಸ್ಟರ್ ಡಿ. ವೆಂಕಟ್ರಾಮಯ್ಯನವರು ..	ಅಡ್ವೊಕೇಟ್
	2 ಡಿಟ್ಟೋ ನಾಗಪ್ಪನವರು ..	ವರ್ತಕರು
	3 ಡಿಟ್ಟೋ ಎಂ. ರುದ್ರಪ್ಪನವರು ..	ಫ್ಲವರಿಸ್ಟ್
	4 ಡಿಟ್ಟೋ ಹಾಫಿಜುಲ್ಲಾಖಾನ್ ಸಾಹೆಬರು ..	ಹಕೀಂ
ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬೋರ್ಡು ..	1 ಡಿಟ್ಟೋ ಗುರಿಕಾರ ತಿಮ್ಮಪ್ಪನವರು ..	ಜಮೀನ್ದಾರ್
	2 ಡಿಟ್ಟೋ ಶ್ರೀಕಂಠಯ್ಯನವರು ..	ಡಿಟ್ಟೋ
ಬೆಂಗಳೂರು ತಾಲ್ಲೂಕು ..	1 ಡಿಟ್ಟೋ ರೆವರೆಂಡ್ ಸಿ. ಡಬ್ಲಿಯು. ಕ್ರಿಸ್ಟಿಯನ್ಯವರು ...	ಮಿಷನೆರಿ ಮತ್ತು ಜಮೀನ್ದಾರ್
	2 ಡಿಟ್ಟೋ ಚಿತಂಬರಸಾಹುಜಿಯವರು ..	ವರ್ತಕರು
	3 ಡಿಟ್ಟೋ ವೇಲುಮೊದಲಿಯಾರ್ರು ..	ಜಮೀನ್ದಾರ್
ಹೊಸಕೋಟೆ ತಾಲ್ಲೂಕು ..	1 ಡಿಟ್ಟೋ ಪ್ಯಾರೇಗವುಡರ ಮುನೇಗವುಡರು ..	ಡಿಟ್ಟೋ
	2 ಖಾಲಿ	
	3 ಮಿಸ್ಟರ್ ಮಗವಳ ಭಾಸ್ಕರಯ್ಯನವರು .	ಜಮೀನ್ದಾರ್ ಮತ್ತು ಪಟೇಲ್
ಚನ್ನಪಟ್ಣ ಕುಲೀಸ್‌ಪ್ಯಾಟೆ ಸ|| ತಾ|| ಸೇರಿ.	1 ಡಿಟ್ಟೋ ಖಾಥೂಮಿಯ್ಯಾ ಸಾಹೆಬ್ ಭಜಂತ್ರಿ.	ಜಮೀನ್ದಾರ್
	2 ಡಿಟ್ಟೋ ಯಜಮಾನ್ ನರಸಿಹ್ಮಯ್ಯನವರು.	ವರ್ತಕರು ಮತ್ತು ಜಮೀನ್ದಾರ್
	3 ಡಿಟ್ಟೋ ನಂಜುಂಡಗವುಡರು ..	ಪಟೇಲ್ ಮತ್ತು ಜಮೀನ್ದಾರ್
ಚನ್ನಪಟ್ಣದ ಮ್ಯುನಿಸಿಪಾಲಿಟಿ .	1 ಡಿಟ್ಟೋ ರಾಮಶೆಟ್ಟರು ..	ವರ್ತಕರು
ಕುಲೀಸ್‌ಪ್ಯಾಟೆ ಡಿಟ್ಟೋ .	1 ಡಿಟ್ಟೋ ಅಹಮದುಲ್ಲಾಖಾನರು ..	ಡಿಟ್ಟೋ
ಆನೆಕಲ್ ತಾಲ್ಲೂಕು .	1 ಡಿಟ್ಟೋ ರಾಮಸ್ವಾಮಯ್ಯಂಗಾರ್ರು .	ಪಾಳ್ಳೇಗಾರ್ರ ವಕೀಲರು .
	2 ಡಿಟ್ಟೋ ಹುಸ್ಕೂರು ದಾಸಪ್ಪಯ್ಯಂಗಾರ್ರು,	ಶಾನಭೋಗ್
	3 ಡಿಟ್ಟೋ ಎಂ. ಧಾಳಪ್ಪನವರು ..	ಡಿಟ್ಟೋ
ಡಿಟ್ಟೋ ಮ್ಯುನಿಸಿಪಾಲಿಟಿ ..	1 ಡಿಟ್ಟೋ ಜಿ. ರಂಗಯ್ಯನವರು ..	ಉಪದೇಶಿಕರು
ಕಾನ್‌ಕಾನ್‌ಹಳ್ಳಿ ತಾಲ್ಲೂಕು .	1 ಡಿಟ್ಟೋ ಗುರಿಕಾರ್ ತಿಮ್ಮೇಗವುಡರು ..	ಜಮೀನ್ದಾರ್ ಮತ್ತು ಪಟೇಲ್
	2 ಡಿಟ್ಟೋ ಶ್ರೀನಿವಾಸರಾಯರು ..	ಜಮೀನ್ದಾರ್ ಮತ್ತು ಪೆನ್‌ಷನರ್
	3 ಡಿಟ್ಟೋ ಕೂನೂರು ರಾಮೇ ಅರಸಿನವರು ..	ಡಿಟ್ಟೋ ಮತ್ತು ಪಟೇಲ್
ನೆಲಮಂಗಲ್ ತಾಲ್ಲೂಕು ..	1 ಡಿಟ್ಟೋ ಪೇಗೂರು ವೀರಭದ್ರಯ್ಯನವರು ..	ವರ್ತಕರು ಮತ್ತು ಜಮೀನ್ದಾರ್
	2 ಡಿಟ್ಟೋ ರಾಜದೊಡ್ಡನಂಜಯ್ಯನವರು ..	ವರ್ತಕರು
	3 ಡಿಟ್ಟೋ ದೇಶಕುಲಕರಣಿ ದಾಸಪ್ಪನವರು ..	ಜೋಡಿದಾರ್
ದೇವನಹಳ್ಳಿ ತಾಲ್ಲೂಕು ..	1 ಡಿಟ್ಟೋ ಬಾಲೇಪುರದ ವೆಂಕಟ್ರಾಮಯ್ಯನವರು ..	ಶಾನಭೋಗ್ ಮತ್ತು ಜಮೀನ್ದಾರ್
	2 ಡಿಟ್ಟೋ ಅರಳೇ ಮುದ್ದಣ್ಣನವರು ..	ವರ್ತಕರು ಮತ್ತು ಜಮೀನ್ದಾರ್
	3 ಡಿಟ್ಟೋ ಅರದೇಶಹಳ್ಳಿ ರಾಮಚಂದ್ರಯ್ಯನವರು	ಜೋಡಿದಾರ್
ಡಿಟ್ಟೋ ಮ್ಯುನಿಸಿಪಾಲಿಟಿ .	1 ಡಿಟ್ಟೋ ಶ್ರೀನಿವಾಸ ಗೋಪಾಲಚಾರ್ರು	ಜಮೀನ್ದಾರ್
ದೊಡ್ಡಬಳಾಪುರ ತಾಲ್ಲೂಕು ..	1 ಡಿಟ್ಟೋ ಕರಿ ರಿಯಪ್ಪನವರು ..	ಶಾನಭೋಗ್ ಮತ್ತು ಜಮೀನ್ದಾರ್
	2 ಡಿಟ್ಟೋ ಶ್ರೀನಿವಾಸಮೂರ್ತಿಗಳು .	ಜಮೀನ್ದಾರ್
	3 ಡಿಟ್ಟೋ ರುಮಾಲೆ ರುದ್ರಪ್ಪನವರು. .	ವರ್ತಕರು
ಡಿಟ್ಟೋ ಮ್ಯುನಿಸಿಪಾಲಿಟಿ ..	1 ಡಿಟ್ಟೋ ಸದಾಶಿವರಾಯರು .	ಪ್ಲೀಡರ್ ಮತ್ತು ಜಮೀನ್ದಾರ್
ಮಾಗಡಿ ತಾಲ್ಲೂಕು ..	1 ಡಿಟ್ಟೋ ಎಂ. ಕೆ. ಕೃಷ್ಣಮೂರ್ತಿರಾಯರು.	ಜಮೀನ್ದಾರ್
	2 ಡಿಟ್ಟೋ ವೆಂಕಟರಾಮ ಶೆಟ್ಟರು ..	ವರ್ತಕರು
	3 ಡಿಟ್ಟೋ ಪುಟ್ಟಣ್ಣ ಶೆಟ್ಟರು ..	ಡಿಟ್ಟೋ

352

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
	ಕೋಲಾರದ ಡಿಸ್ಟ್ರಿಕ್ಟು.	
ಕೋಲಾರ ತಾಲ್ಲೂಕು ..	1 ಮೆಸ್ಟರ್ ಸಾಹುಕಾರ್ ಶೇಷಯ್ಯಂಗಾರ್ರು ..	ಶಾನಭೋಗ್
	2 ಡಿಟ್ಟೋ ಬಸವೇಗವುಡರು ..	ಪಟೇಲ್
	3 ಡಿಟ್ಟೋ ಪೊನ್ನಸುಬ್ಬಣ್ಣನವರು ..	ಜಮೀನ್ದಾರ್
	4 ಡಿಟ್ಟೋ ಬ್ಯರೇಗವುಡರು ..	ಪಟೇಲ್
ಡಿಟ್ಟೋ ಮ್ಯುನಿಸಿಪಾಲಿಟಿ	1 ಡಿಟ್ಟೋ ಶೆಟ್ಟಿವೆಂಕಟಮುನಿಯಪ್ಪನವರು ..	ವರ್ತಕರು
	2 ಡಿಟ್ಟೋ ಗುರುರಾಯರು ..	ಪ್ಲೀಡರ್
	3 ಡಿಟ್ಟೋ ಮಾಲೂರು ಮಲ್ಲಪ್ಪಶೆಟ್ಟರು ..	ವರ್ತಕರು
ಡಿಸ್ಟ್ರಿಕ್ಟು ಲೋಕಲ್ ಫಂಡುಬೋರ್ಡ್ ..	1 ಡಿಟ್ಟೋ ಜವಳಿಸುಬ್ಬಾಶಾಸ್ತ್ರಿಗಳು ..	ಜೋಡಿದಾರು
	2 ಡಿಟ್ಟೋ ಕಲ್ಲಹಳ್ಳಿ ರಾಮೇಗವುಡರು ..	ಪಟೇಲ್
ಬವರಿಂಗ್ ಪ್ಯಾಟೆ ತಾಲ್ಲೂಕು ..	1 ಡಿಟ್ಟೋ ವರದಾಪುರ ಚಂಗರಡ್ಡಿಯವರು ..	ಪಟೇಲ್ ಮತ್ತು ಜಮೀನ್ದಾರ್
	2 ಡಿಟ್ಟೋ ತಿರುನಾರಾಯಣಸ್ವಾಮಿ ಮೊದಲಿಯಾರು ..	ಕಂಟ್ರಾಕ್ಟರ್
	3 ಡಿಟ್ಟೋ ಸುಬ್ಬಣ್ಣನವರು ..	ಶಾನಭೋಗ್
ಮುಳಬಾಗಲ್ ತಾಲ್ಲೂಕು ..	1 ಡಿಟ್ಟೋ ಭೀಮರಾಯರು ..	ಡಿಟ್ಟೋ
	2 ಡಿಟ್ಟೋ ನಾರಪ್ಪನವರು ..	ಜಮೀನ್ದಾರ್
	3 ಡಿಟ್ಟೋ ವೆಂಕಟೇಗವುಡರು ..	ಪಟೇಲ್
ಡಿಟ್ಟೋ ಮ್ಯುನಿಸಿಪಾಲಿಟಿ ..	1 ಡಿಟ್ಟೋ ತೋಟ್ಲಪಾಳ್ಯ ಮುನಿಯಪ್ಪನವರು.	ಜಮೀನ್ದಾರ್
ಚಿಂತಾಮಣಿ ತಾಲ್ಲೂಕು ..	1 ಡಿಟ್ಟೋ ಚಿನ್ನಪ್ಪನವರು ..	ಶಾನಭೋಗ್ ಮತ್ತು ಜಮೀನ್ದಾರ್
	2 ಡಿಟ್ಟೋ ಮುನಿಶಾಮಿಗವುಡರು ..	ಪಟೇಲ್ ಮತ್ತು ಜಮೀನ್ದಾರ್
ಶ್ರೀನಿವಾಸಪುರ ಸಬ್ ತಾಲ್ಲೂಕು ..	1 ಡಿಟ್ಟೋ ಸದಾಶಿವಪ್ಪನವರು ..	ಶಾನಭೋಗ್
	2 ಡಿಟ್ಟೋ ಶ್ರೀಕಂಠಪ್ಪನವರು ..	ಪಟೇಲ್
ಚಿಕ್ಕಬಳ್ಳಾಪುರ ತಾಲ್ಲೂಕು ..	1 ಡಿಟ್ಟೋ ನರಸಿಹ್ಮರಡ್ಡಿಯವರು ..	ಡಿಟ್ಟೋ
	2 ಡಿಟ್ಟೋ ಯರನೂಲ್ ನರಸಿಹ್ಮಯ್ಯನವರು ..	ವರ್ತಕರು
	3 ಡಿಟ್ಟೋ ರಂಗಸಾಮಯ್ಯಂಗಾರು	ಪ್ಲೀಡರ್
ಡಿಟ್ಟೋ ಮ್ಯುನಿಸಿಪಾಲಿಟಿ ..	1 ಡಿಟ್ಟೋ ಸಾಹುಕಾರ್ ದೊಡ್ಡಮುನಿಯಪ್ಪನವರು ..	ವರ್ತಕರು
ಗೋರೀಬಿದನೂರು ತಾಲ್ಲೂಕು ..	1 ಖಾಲಿ ..	
	2 ಮೆಸ್ಟರ್ ಚಿಕ್ಕಸುಬ್ಬರಾಯಪ್ಪನವರು ..	ಶಾನಭೋಗ್
	3 ಡಿಟ್ಟೋ ನಾರಾಯಣಗವುಡರು ..	ಪಟೇಲ್
ಬಾಗೇಪಲ್ಲಿ ತಾಲ್ಲೂಕು ..	1 ಡಿಟ್ಟೋ ಸುಬ್ಬಪ್ಪನವರು ..	ಶಾನಭೋಗ್ ಮತ್ತು ಜಮೀನ್ದಾ
	2 ಡಿಟ್ಟೋ ವೆಂಕಟನರಸಪ್ಪನವರು ..	ಜಮೀನ್ದಾರ್
ಗುಡಿಬಂಡೆ ಸಬ್ ತಾಲ್ಲೂಕು ..	1 ಡಿಟ್ಟೋ ಬಾಚಿನ ಕರಿಯಪ್ಪನವರು ..	ಜಮೀನ್ದಾರ್ ಮತ್ತು ವರ್ತಕರು
ಶಿಡ್ಲಘಟ್ಟ ತಾಲ್ಲೂಕು ..	1 ಡಿಟ್ಟೋ ಗುಡಿಬಂಡೆ ಲಕ್ಷ್ಮಣರಾಯರು ..	ಶಾನಭೋಗ್
	2 ಡಿಟ್ಟೋ ಮುತ್ತೂರು ವೆಂಕಟರಮಣಯ್ಯನವರು ..	ಡಿಟ್ಟೋ
	3 ಡಿಟ್ಟೋ ಹನುಮೇಗವುಡರು ..	ಪಟೇಲ್
ಡಿಟ್ಟೋ ಮ್ಯುನಿಸಿಪಾಲಿಟಿ ..	1 ಡಿಟ್ಟೋ ರಾಮೇಗವುಡರು ..	ಜಮೀನ್ದಾರ್ ಮತ್ತು ಪಟೇಲ್
ಮಾಲೂರು ತಾಲ್ಲೂಕು ..	1 ಡಿಟ್ಟೋ ಸೀತಾರಾಮಯ್ಯನವರು ..	ಶಾನುಭೋಗ್
	2 ಡಿಟ್ಟೋ ವೆಂಕಟರಮಣಯ್ಯನವರು ..	ಡಿಟ್ಟೋ
ಕೋಲಾರ ಗೋಲ್ಡ್‌ಫೀಲ್ಡ್ಸ್ ಮೈನಿಂಗ್ ಬೋರ್ಡ್ ...	1 ಡಿಟ್ಟೋ ಕ್ಯಾಪ್ಟನ್ ಜೋನ್ಸ್‌ರೋಸಾಹೇಬರು	ಉರಿಗಂ ಛಾಂಪಿಯನ್ ರೀಫ್ ಕಂಪನಿ ಸೂಪರಿಂಟೆಂಡೆಂಟರು
	ತುಮಕೂರು ಡಿಸ್ಟ್ರಿಕ್ಟು.	
ತುಮಕೂರು ತಾಲ್ಲೂಕು ..	1 ಡಿಟ್ಟೋ ಶೇಷಭಟ್ಟರರಾಮಣ್ಣನವರು	ಜಮೀನ್ದಾರ್
	2 ಡಿಟ್ಟೋ ಅಪ್ಪಣ್ಣಶೆಟ್ಟರ ಕೆಂಚಪ್ಪನವರು ..	ವರ್ತಕರು
	3 ಡಿಟ್ಟೋ ಸಾಸಲು ತಿಮ್ಮೇಗವುಡರು ..	ಜಿರಾಯಿತ್‌ದಾರ್
	4 ಡಿಟ್ಟೋ ಹೊನ್ನುಡಿಕೆ ಪುಟ್ಟಶಾಮಯ್ಯನವರು	ಜಮೀನ್ದಾರ್
ಡಿಟ್ಟೋ ಮ್ಯುನಿಸಿಪಾಲಿಟಿ ...	1 ಡಿಟ್ಟೋ ವೆಂಕಟಾಚಾರ್ರು ..	ಪ್ಲೀಡರ್
	2 ಡಿಟ್ಟೋ ಸಿ. ತಿರುವೆಂಗಡಮೊದಲಿಯಾರ್ರು.	ಪೆನ್ಶನರ್ ಅಮಲ್ದಾರ್ರು
	3 ಡಿಟ್ಟೋ ಸಯ್ಯದ್‌ದಾವೂದ್‌ಸಾಹೇಬರು ..	ಪೆನ್ಶನರ್ ಬಾರ್‌ಸುಬೇದಾರ್ರು
ಡಿಸ್ಟ್ರಿಕ್ಟು ಲೋಕಲ್ ಫಂಡ್ ಬೋರ್ಡ್ ..	1 ಡಿಟ್ಟೋ ರಾಮದಾಸಪ್ಪನವರು ..	ಜಮೀನ್ದಾರ್ ಮತ್ತು ಪ್ಲೀಡರ್
	2 ಡಿಟ್ಟೋ ಅಗಳಿಕೃಷ್ಣಪ್ಪನವರು ..	ಜಮೀನ್ದಾರ್

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಮದ್ದಗಿರಿ ತಾಲ್ಲೂಕು ..	1 ಮೆಸ್ಸರ್ ನಾಗಪ್ಪನವರು ಬಿನ್ ಗೋಪಾಲಯ್ಯನವರು ..	ಜಮೀನ್ದಾರ್
	2 ಡಿಟ್ಟೋ ಮೈರ್ದಹಳ್ಳಿ ಶಾಮಣ್ಣನವರು ..	ಡಿಟ್ಟೋ
	3 ಡಿಟ್ಟೋ ಶ್ರವಂಡರಹಳ್ಳಿ ಚಿಕ್ಕೇಗವುಡರು ..	ಪಟೇಲ್ ಮತ್ತು ಜಿರಾಯಿತಿದಾರ್
ಕೊರಟಿಗೆರೆ ಸಬ್ ತಾಲ್ಲೂಕು ..	1 ಡಿಟ್ಟೋ ಬಿಶಟ್ರು ..	ಜಿರಾಯಿತಿದಾರ್
ಚಿಕ್ಕನಾಯಕನಹಳ್ಳಿ ತಾಲ್ಲೂಕು ..	1 ಡಿಟ್ಟೋ ಪುಟ್ಟಣ್ಣನವರು ...	ಶಾನಭೋಗ್
	2 ಡಿಟ್ಟೋ ನರಸಿಹ್ಮಯ್ಯನವರು ..	ಡಿಟ್ಟೋ
ಹುಳಿಯಾರ್ ಸಬ್ ತಾಲ್ಲೂಕು ..	1 ಡಿಟ್ಟೋ ಗಫೂರ್‌ಖಾನ್‌ಸಾಹೇಬರು ..	ಜಮೀನ್ದಾರ್
ಶಿರಾ ತಾಲ್ಲೂಕು ..	1 ಡಿಟ್ಟೋ ಕುಂಜಗೇನಹಳ್ಳಿ ಬಡೇಸಾಹೇಬರು	ಜಿರಾಯಿತ್‌ದಾರ್
	2 ಡಿಟ್ಟೋ ಪಟ್ನಾಯಕನಹಳ್ಳಿ ಶಂಕರಗೌಡಪ್ಪನವರು ..	ಡಿಟ್ಟೋ ಮತ್ತು ವರ್ತಕರು
	3 ಡಿಟ್ಟೋ ಯಲದಬಾಗೇ ಲಕ್ಷ್ಮೀನರಸೇಗವುಡರು ..	ಜಿರಾಯಿತಿದಾರ್
ಗುಬ್ಬೀ ತಾಲ್ಲೂಕು ..	1 ಡಿಟ್ಟೋ ಕಡಬದ ರಾಮಾನುಜಯ್ಯಂಗಾರ್ರು	ಜಮೀನ್ದಾರ್
	2 ಡಿಟ್ಟೋ ಗುಬ್ಬೀ ಮದಾರ್‌ಸಾಹೇಬರು ..	ಜಿರಾಯಿತಿದಾರ್ ಮತ್ತು ಕಂಟ್ರಾಕ್ಟರ್
	3 ಡಿಟ್ಟೋ ಫಲವಟ್ಟ ಹೊನ್ನಲಿಂಗೇಗವುಡರು	ಜಮೀನ್ದಾರ ಮತ್ತು ಪಟೇಲ್
	4 ಡಿಟ್ಟೋ ಕಡಬದ ನಂಜುಂಡಭಟ್ಟರು ..	ಜಮೀನ್ದಾರ್
ತಿಪಟೂರು ತಾಲ್ಲೂಕು ..	1 ಡಿಟ್ಟೋ ರಂಗಾಪುರದ ಬಸವಲಿಂಗಯ್ಯನವರು	ಜಿರಾಯಿತಿದಾರ್
	2 ಡಿಟ್ಟೋ ನೊಣವಿನಕೆರೆ ಸುಬ್ಬರಾಯರು ..	ಶಾನಭೋಗ್ ಮತ್ತು ಜಮೀನ್ದಾರ್
ತುರುವೇಕೆರೆ ಸಬ್ ತಾಲ್ಲೂಕು ..	1 ಡಿಟ್ಟೋ ನಾಗಪ್ಪನವರು	ಪಟೇಲ್
ಪಾವಗಡ ತಾಲ್ಲೂಕು ..	1 ಡಿಟ್ಟೋ ತಿರುಮಲತಾತಾಚಾರ್ರು ..	ಜಮೀನ್ದಾರ್
	2 ಡಿಟ್ಟೋ ಪುಟ್ಟನಂಜರಡ್ಡಿಯವರು ..	ಪಟೇಲ್
ಕುಣಿಗಲ್ ತಾಲ್ಲೂಕು ..	1 ಡಿಟ್ಟೋ ಹಿರೂರು ಗುಂಡಪ್ಪನವರು ..	ಜಮೀನ್ದಾರ್
	2 ಡಿಟ್ಟೋ ರಂಗೇಗವುಡರು ..	ಪಟೇಲ್
	3 ಡಿಟ್ಟೋ ಅಮೃತೂರು ಕೃಷ್ಣಯ್ಯಂಗಾರ್ರು	ಜಮೀನ್ದಾರ್
	ಹಾಸನ ಡಿಸ್ಟ್ರಿಕ್ಟ್.	
ಆಲೂರು ಸಬ್ ತಾಲ್ಲೂಕು ಶಾಮೀಲ್	1 ಡಿಟ್ಟೋ ಸುಬ್ಬಶಟ್ಟರು ..	ವರ್ತಕರು
ಹಾಸನ ತಾಲ್ಲೂಕು ..	2 ಡಿಟ್ಟೋ ಸಯ್ಯದ್‌ಖಾದರ್‌ಸಾಹೇಬರು ..	ಡಿಟ್ಟೋ
	3 ಡಿಟ್ಟೋ ಕೆ. ಶ್ರೀನಿವಾಸಮೂರ್ತಿಯವರು ...	ಜಮೀನ್ದಾರ್
	4 ಡಿಟ್ಟೋ ನಾರಣಯ್ಯಂಗಾರ್ರು ..	ಜಮೀನ್ದಾರ್ ಮತ್ತು ಶಾನಭೋಗ್
ಹಾಸನ ಮ್ಯುನಿಸಿಪಾಲಿಟಿ ..	1 ಡಿಟ್ಟೋ ನಾಡಿಗ ಚನ್ನಕೇಶವಯ್ಯನವರು ..	ಬ್ಯಾಂಕ್ ಏಜಂಟ್
	2 ಡಿಟ್ಟೋ ಪಸಾರೆಧರಣಪ್ಪನವರು ..	ವರ್ತಕರು
ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬೋರ್ಡ್ ..	1 ಡಿಟ್ಟೋ ಕಲಸಾಪುರದ ತಮ್ಮಯ್ಯನವರು ...	ಕಾಫಿ ಪ್ಲಾಂಟರ್
	2 ಡಿಟ್ಟೋ ಬಾಣಾವಾರದ ವೆಂಕಟಸುಬ್ಬಯ್ಯನವರು ..	ಇನಾಂದಾರ್
ಮಂಜರಾಬಾದ್ ತಾಲ್ಲೂಕು ..	1 ಡಿಟ್ಟೋ ವೆಂಕಟಾಚಲಶಟ್ಟರು ...	ವರ್ತಕರು
	2 ಡಿಟ್ಟೋ ನರಸಿಹ್ಮಯ್ಯನವರು ...	ಶಾನಭೋಗ್
	3 ಡಿಟ್ಟೋ ಮಲ್ಲೇಗವುಡರು ...	ಮೊಖ್ತೆಸರ ಪಟೇಲ್
	4 ಖಾಲಿ ...	
ಬೇಲೂರು ತಾಲ್ಲೂಕು ..	1 ಮೆಸ್ಸರ್ ಲಕ್ಕುಂದದ ಕೇಶವಯ್ಯಂಗಾರ್ರು	ಶಾನಭೋಗ್
	2 ಡಿಟ್ಟೋ ಅಬ್ದುಲ್‌ರಹಿಮಾನ್ ಸಾಹೇಬರು ..	ಕಾಫಿ ಪ್ಲಾಂಟರ್
	3 ಖಾಲಿ ..	
ಅರಸೀಕೆರೆ ತಾಲ್ಲೂಕು ..	1 ಮೆಸ್ಸರ್ ಸೀತಾರಾಮಯ್ಯನವರು ..	ಜಮೀನ್ದಾರ್ ಮತ್ತು ಶಾನಭೋಗ್
	2 ಡಿಟ್ಟೋ ಕೆಂಚರಾಯಶಟ್ಟರು ..	ವರ್ತಕರು
	3 ಡಿಟ್ಟೋ ದಾಸಪ್ಪನವರು ..	ಜಮೀನ್ದಾರ್ ಮತ್ತು ಶಾನಭೋಗ್
ಚನ್ನರಾಯಪಟ್ಟಣದ ತಾಲ್ಲೂಕು ..	1 ಡಿಟ್ಟೋ ವೆಂಕಟರಾಮಯ್ಯನವರು ..	ಶಾನಭೋಗ್
	2 ಡಿಟ್ಟೋ ಕೆಂಪೇಗವುಡರು ..	ಜಮೀನ್ದಾರ್ ಮತ್ತು ಪಟೇಲ್
	3 ಡಿಟ್ಟೋ ಕೃಷ್ಣಪ್ಪನವರು ..	ಜಮೀನ್ದಾರ್ ಮತ್ತು ಶಾನಭೋಗ್
ಹೊಳೇನರಸೀಪುರದ ತಾಲ್ಲೂಕು ..	1 ಡಿಟ್ಟೋ ವೆಂಕಟರಾಮಯ್ಯನವರು ..	ಜಮೀನ್ದಾರ್ ಮತ್ತು ಪ್ಲೀಡರ್
	2 ಡಿಟ್ಟೋ ಲಕ್ಷ್ಮೀನಾರಾಯಣಪಂಡಿತರು ..	ಜಮೀನ್ದಾರ್
ಡಿಟ್ಟೋ ಮ್ಯುನಿಸಿಪಾಲಿಟಿ ..	1 ಡಿಟ್ಟೋ ಕೆ. ರಾಘವೇಂದ್ರಾಚಾರ್ರು ..	ಸಾಹುಕಾರ್

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಅರಕಲಗೂಡು ತಾಲ್ಲೂಕು ..	1 ಮೆಸ್ಟರ್ ಪುಟ್ಟಸಾಮಯ್ಯನವರು ..	ಶಾನಭೋಗ
	2 ಡಿಟ್ಟೋ ಅಬ್ದುಲ್ಲಾ ಸಾಹೇಬರವರು ...	ಜಮೀನ್ದಾರ್
	3 ಡಿಟ್ಟೋ ಮಲ್ಲಪ್ಪಾಜಿ ಅರಸಿನವರು ..	ಪಟೇಲ್
ಸೌತ್ ಮೈಸೂರ್ ಯೂರೋಪಿಯನ್ ಪ್ಲಾಂಟರ್ಸ್ ಅಸೋಶಿಯೇಷನ್ ..	1 ಡಿಟ್ಟೋ ಜೇ. ಜಿ. ಹ್ಯಾಮಿಲ್ಟನ್ ಸಾಹೇಬರು	ಕಾಫಿ ಪ್ಲಾಂಟರ್
ಸೌತ್ ಮೈಸೂರು ನೇಟಿವ್ ಪ್ಲಾಂಟರ್ಸ್ ಅಸೋಶಿಯೇಷನ್ ..	1 ಡಿಟ್ಟೋ ಉಡೇವರದ ದ್ಯಾವಪ್ಪ ಗೌಡರು ...	ಡಿಟ್ಟೋ
	ಶಿವಮೊಗ್ಗಾ ಡಿಸ್ಟ್ರಿಕ್ಟ್.	
ಶಿವಮೊಗ್ಗಾ ತಾಲ್ಲೂಕು ..	1 ಮೆಸ್ಟರ್ ಹೊಸದುರ್ಗದ ಗಿರಿಯಪ್ಪನವರು	ಜಮೀನ್ದಾರ್
	2 ಡಿಟ್ಟೋ ಗೌಸ್‌ಷರೀಫ್ ಸಾಹೆಬರು ..	ಸಾಹುಕಾರ್
ಡಿಟ್ಟೋ ಮ್ಯುನಿಸಿಪಾಲಿಟಿ ..	1 ಡಿಟ್ಟೋ ಎಚ್. ಗಿರಿಯಪ್ಪನವರು ..	ಜಮೀನ್ದಾರ್
	2 ಡಿಟ್ಟೋ ಚನ್ನಗಿರಿ ಮಲ್ಹಾರರಾಯರು ..	ಪ್ಲೀಡರ್
	3 ಡಿಟ್ಟೋ ಜಿ. ಕೋಡಪ್ಪನವರು ..	ವರ್ತಕರು
ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬೋರ್ಡು ..	1 ಡಿಟ್ಟೋ ನಾಡಿಗ ತಿಮ್ಮಪ್ಪನವರು ...	ಜಮೀನ್ದಾರ್
	2 ಡಿಟ್ಟೋ ಹೊಸಬಾಳೆ ತಿಮ್ಮಪ್ಪನವರು ...	ಡಿಟ್ಟೋ
ಕುಂಶಿ ಸಬ್ ತಾಲ್ಲೂಕು ..	1 ಡಿಟ್ಟೋ ರಾಮಚಂದ್ರಪ್ಪನವರು ಬಿನ್ ಹಿರ ಲಾಲಪ್ಪನವರು ..	ಡಿಟ್ಟೋ
	2 ಡಿಟ್ಟೋ ಸರಾಫ್ ವೆಂಕಪ್ಪನಾಯಕರು ...	ಡಿಟ್ಟೋ
ಚನ್ನಗಿರಿ ತಾಲ್ಲೂಕು ..	1 ಡಿಟ್ಟೋ ಸಂತೆಬೆನ್ನೂರ ಸಾಹುಮಲ್ಲಯ್ಯನವರು	ವರ್ತಕರು
	2 ಡಿಟ್ಟೋ ಮರಳಶಿದ್ದಯ್ಯನವರು ಬಿನ್ ರೇವಯ್ಯನವರು ..	ಜಮೀನ್ದಾರ್
	3 ಡಿಟ್ಟೋ ಕತ್ತಲಗಿರಿ ಮುರಿಗಪ್ಪಗವುಡರು ..	ಪಟೇಲ್ ಮತ್ತು ಜಮೀನ್ದಾರ್
	4 ಡಿಟ್ಟೋ ಬೆಳಗನೋಟಿ ಗೌಡಲಿಂಗಯ್ಯನವರು	ಡಿಟ್ಟೋ
ಹೊನ್ನಾಳಿ ತಾಲ್ಲೂಕು ...	1 ಡಿಟ್ಟೋ ಚಟ್ನಹಳ್ಳಿ ನಾಡಿಗ ಗೋಪಾಲಪ್ಪನವರು	ಶಾನಭೋಗ್ ಮತ್ತು ಜಮೀನ್ದಾರ್
	2 ಡಿಟ್ಟೋ ಮಲ್ಲೂರು ನಾಡಿಗ ನರಶಿಂಗಪ್ಪನವರು	ಡಿಟ್ಟೋ ಡಿಟ್ಟೋ
	3 ಡಿಟ್ಟೋ ಬೇಗುತ್ತಿ ನಾಡಿಗ ಮಲ್ಲಾರಪ್ಪನವರು	ಡಿಟ್ಟೋ ಡಿಟ್ಟೋ
	4 ಡಿಟ್ಟೋ ಮುನಿಯಪ್ಪನ ಗುರುಬಸಪ್ಪನವರು	ಜಮೀನ್ದಾರ್ ಮತ್ತು ವರ್ತಕರು
ಶಿಕಾರಿಪುರ ತಾಲ್ಲೂಕು ..	1 ಡಿಟ್ಟೋ ದೇವಪ್ಪನವರು ಬಿನ್ ರಂಗಭಟ್ಟರು	ಪಟೇಲ್ ಮತ್ತು ಜಮೀನ್ದಾರ್
	2 ಡಿಟ್ಟೋ ರಂಗಪ್ಪನವರು ಬಿನ್ ಹುಚ್ಚರಾಯರು	ಜಮೀನ್ದಾರ್ ಮತ್ತು ಶಾನಭೋಗ್
	3 ಡಿಟ್ಟೋ ರಮಣೀ ಬಸಪ್ಪನವರು ..	ವರ್ತಕರು
	4 ಡಿಟ್ಟೋ ಅಂಟಿಕೊಪ್ಪದ ಬಸಪ್ಪನವರು ...	ಡಿಟ್ಟೋ
ಡಿಟ್ಟೋ ಮ್ಯುನಿಸಿಪಾಲಿಟಿ ..	1 ಡಿಟ್ಟೋ ಎಸ್. ರಾಮರಾಯರು ...	ಜಮೀನ್ದಾರ್
ಸೊರಬ ತಾಲ್ಲೂಕು .	1 ಡಿಟ್ಟೋ ಹೆಗ್ಗಡೆ ರಾಮಪ್ಪನವರು ಬಿನ್ ಪುಟ್ಟಪ್ಪನವರು ...	ಪಟೇಲ್ ಮತ್ತು ಜಮೀನ್ದಾರ್
	2 ಡಿಟ್ಟೋ ಕೆರೇಹಳ್ಳಿ ನಾಡಿಗ ಶಿವಪ್ಪನವರು ಬಿನ್ ವಿರೂಪಾಕ್ಷಪ್ಪನವರು ..	ಶಾನಭೋಗ್ ಮತ್ತು ಜಮೀನ್ದಾರ್
	3 ಡಿಟ್ಟೋ ಕ್ಯಾಸರಗುಪ್ಪೆ ಶಿವಯ್ಯನವರು ಬಿನ್ ಭಂಡಯ್ಯನವರು ..	ಪಟೇಲ್ ಮತ್ತು ಜಮೀನ್ದಾರ್
	4 ಡಿಟ್ಟೋ ತ್ಯಾವಗೋಡ್ ಶಿವಯ್ಯನವರು ಬಿನ್ ಕೊಟ್ಟರಯ್ಯನವರು	ಡಿಟ್ಟೋ ಡಿಟ್ಟೋ
ಸಾಗರ ತಾಲ್ಲೂಕು ..	1 ಡಿಟ್ಟೋ ಬಿಳಿ ಕೃಷ್ಣಪ್ಪನವರು ಬಿನ್ ದ್ಯಾವಪ್ಪನವರು ..	ಜಮೀನ್ದಾರ್
	2 ಡಿಟ್ಟೋ ಕಾಗೋಡು ಗುರುವಯ್ಯಗವುಡರು ಬಿನ್ ಗುರುವಯ್ಯನವರು ..	ಡಿಟ್ಟೋ
	3 ಖಾಲಿ.	
	4 ಮೆಸ್ಟರ್ ಕೇಲಡಿ ಮಹಾಂತಯ್ಯನವರು ಉರಫ್ ಫಕೀರಯ್ಯನವರು ...	ಹಿರೇಮಠದ ಯೇಜಂಟ್
ನಗರ ತಾಲ್ಲೂಕು ..	1 ಡಿಟ್ಟೋ ಹೆಬ್ಬಯಲು ಲಿಂಗಪ್ಪನವರು ..	ಶಾನಭೋಗ್ ಮತ್ತು ಜಮೀನ್ದಾರ್
	2 ಡಿಟ್ಟೋ ಮಂಜಪ್ಪಗವುಡರು ..	ಜಮೀನ್ದಾರ್ ಮತ್ತು ವರ್ತಕರು
	3 ಡಿಟ್ಟೋ ಚಂದ್ರಯ್ಯನ ನಾಗಪ್ಪನವರು ..	ಡಿಟ್ಟೋ ಡಿಟ್ಟೋ
	4 ಡಿಟ್ಟೋ ನಾಗೇಂದ್ರಭಟ್ಟರು	ವರ್ತಕರು
ತೀರ್ಥಹಳ್ಳಿ ತಾಲ್ಲೂಕು ..	1 ಡಿಟ್ಟೋ ಕುಲುಂದ ತಿಮ್ಮಣ್ಣಗವುಡರು ..	ಜಮೀನ್ದಾರ್
	2 ಡಿಟ್ಟೋ ಹಂದಲಸನ ಸುಬ್ಬಣ್ಣನವರು .	ಜಮೀನ್ದಾರ್ ಮತ್ತು ಕಂಟ್ರಾಕ್ಟರ್
	3 ಡಿಟ್ಟೋ ಅಡಿವಪ್ಪನವರು ಬಿನ್ ಕೊಟ್ರಪ್ಪನವರು ..	ಸಾಹುಕಾರ್
	4 ಡಿಟ್ಟೋ ಜವಳಿ ವಿಠಲಯ್ಯನವರು ...	ವರ್ತಕರು
ನಗರ ಸಭಾ ..	1 ಡಿಟ್ಟೋ ಎಸ್. ಆನಂದರಾಯರು, ಬಿ. ಏ., ಬಿ. ಎಲ್. ..	ಅಡ್ವೋಕೇಟ್

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
	ಕಡೂರು ಡಿಸ್ಟ್ರಿಕ್ಟು.	
ಚಿಕ್ಕಮಗಳೂರು ತಾಲ್ಲೂಕು ..	1 ಮೆಸ್ಟರ್ ಸಿ. ಶ್ರೀನಿವಾಸರಾಯರು ..	ಕಾಫಿ ಪ್ಲಾಂಟರ್
	2 ಡಿಟೋ ಸಿ. ವಾಸುದೇವರಾಯರು ...	ಡಿಟೋ
	3 ಡಿಟೋ ವಿರತ್ತೇಗವುಡರು ..	ಪಟೇಲ್ ಮತ್ತು ಡಿಟೋ
	4 ಡಿಟೋ ಪುಪ್ಪಂಣಶಟ್ಟರು ..	ವರ್ತಕರು
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಬಿ. ಗುಂಡಪ್ಪನವರು ..	ಪ್ಲೀಡರ್
	2 ಡಿಟೋ ಗಂಜಾಂಅಬ್ದುಲ್ ಖಾದರ್ ಸಾಹೆಬರು	ಕಾಫಿ ಪ್ಲಾಂಟರ್
ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬೋರ್ಡ್ ..	1 ಡಿಟೋ ಗುಂಡಪ್ಪನವರು ...	ಪ್ಲೀಡರ್ ಮತ್ತು ಇನಾಂದಾರ್
	2 ಡಿಟೋ ಕುಪ್ಪುಸಾಮಿಪಿಳ್ಳೆಯವರು ..	ಕಾಫಿ ಪ್ಲಾಂಟರ್
ತರೀಕೆರೆ ತಾಲ್ಲೂಕು ..	1 ಡಿಟೋ ಅತ್ತಿಗನಾಳ್ ಶಾಮಂಣನವರು ..	ಡಿಟೋ
	2 ಡಿಟೋ ಕುಪ್ಪುಸಾಮಿಪಿಳ್ಳೆಯವರು ..	ಡಿಟೋ
	3 ಡಿಟೋ ಹಿರೆಕತೂರ್ ನರಸಪ್ಪನವರು ..	ಶಾನಭೋಗ್
	4 ಡಿಟೋ ಬೀರನಹಳ್ಳಿ ಬಸವೇಗವುಡರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಗೊಟ್ಟೂರು ವೆಂಕಟಸುಬ್ಬಯ್ಯನವರು ..	ವರ್ತಕರು
ಕೊಪ್ಪದ ತಾಲ್ಲೂಕು ..	1 ಡಿಟೋ ಕಿಗ್ಗದ ವಿಶ್ವೇಶ್ವರಯ್ಯನವರು ..	ಜಹಗೀರ್ದಾರ್
	2 ಡಿಟೋ ಹೆಡಸೆ ಸೀತಾರಾಮಶಾಸ್ತ್ರಿಗಳು ...	ಡಿಟೋ
	3 ಡಿಟೋ ಹರಿಹರಪುರದ ರಂಗಣ್ಣ ಉಪಾಧ್ಯರು	ಜಹಗೀರ್ದಾರ್ ಮತ್ತು ಸಾಹುಕಾರ್
ಎಡೆಹಳ್ಳಿ ಸಬ್ ತಾಲ್ಲೂಕು ..	1 ಡಿಟೋ ತರೀಕೆರೆ ಶ್ರೀನಿವಾಸರಾಯರು ..	ಜಹಗೀರ್ದಾರ್
ಕಡೂರು ತಾಲ್ಲೂಕು ..	1 ಡಿಟೋ ಪತ್ರೆ ರುದ್ರಪ್ಪನವರು ..	ಸಾಹುಕಾರ್
	2 ಡಿಟೋ ಪಟ್ಟಣಗೆರೆ ರಂಗಂಣನವರು ...	ಜಹಗೀರ್ದಾರ್
	3 ಡಿಟೋ ಆನವಟ್ಟಿ ರಂಗರಾಯರು ..	ಡಿಟೋ
ಮೂಡಗೆರೆ ತಾಲ್ಲೂಕು ..	1 ಡಿಟೋ ಹೊರನಾಡ್ ಪುಟ್ಟಣ್ಣಶಟ್ಟರು ..	ಪಟೇಲ್
	2 ಡಿಟೋ ಶಾಂತರಾಜಯ್ಯ ಹೆಗ್ಗಡೆಯವರು ..	ಜಹಗೀರ್ದಾರ್
	3 ಡಿಟೋ ಕೊಟ್ರಕೆರೆ ಸೋಮೇಗವುಡರು ..	ಪಟೇಲ್
	4 ಡಿಟೋ ಹೆಸಗಲ್ ಪಟೇಲ್ ಪಟ್ಟದ ಶಿದ್ದಲಿಂಗಯ್ಯನವರು ..	ಡಿಟೋ
ನಾರ್ತ್ ಮೈಸೂರು ಯೂರೋಪಿಯನ್ ಪ್ಲಾಂಟರಸ್ ಅಸೋಸಿಯೇಷನ್ ..	1 ಡಿಟೋ ಸಿ. ಎಚ್. ಗಾಡ್‌ಫ್ರೆ ಸಾಹೇಬರು ..	ಕಾಫಿ ಪ್ಲಾಂಟರ್
ನಾರ್ತ್ ಮೈಸೂರು ನೇಟಿವ್ ಪ್ಲಾಂಟರ್ಸ್ ಅಸೋಸಿಯೇಷನ್ ..	1 ಡಿಟೋ ವಸ್ತಾರದ ಶಾಮರಾಯರು ...	ಡಿಟೋ
	ಚಿತ್ರದುರ್ಗದ ಡಿಸ್ಟ್ರಿಕ್ಟು.	
ಚಿತ್ರದುರ್ಗ ತಾಲ್ಲೂಕು ...	1 ಮೆಸ್ಟರ್ ಕಾಶಿ ನರಸಿಂಹಯ್ಯನವರು ..	ವರ್ತಕರು
	2 ಡಿಟೋ ಬಲಾಕಡಪ್ಪನವರು ..	ಡಿಟೋ
	3 ಡಿಟೋ ಮಾರಘಟ್ಟ ಬಸಪ್ಪನವರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಲಿಂಗಪ್ಪನವರು ..	ಮುರಗಿಮಠದ ಪಾರುಪತ್ತೇಗಾರು
	2 ಡಿಟೋ ಮಹಲಿಂಗಪ್ಪನವರು ..	ಶಟ್ಟರು
ಡಿಸ್ಟ್ರಿಕ್ಟು ಲೋಕಲ್‌ಫಂಡ್ ಬೋರ್ಡು ..	1 ಡಿಟೋ ಕ್ಯಾಸಪುರದ ರಾಮಂಣನವರು ..	ಶಾನಭೋಗ್
	2 ಡಿಟೋ ನಾಡಿಗ ಶಿದ್ದರಾಮಪ್ಪನವರು ..	ಪಟೇಲ್
ಚಳ್ಳಕೆರೆ ತಾಲ್ಲೂಕು ..	1 ಡಿಟೋ ಗುರುರಾಜಪ್ಪನವರು ..	ಶಾನಭೋಗ್
	2 ಡಿಟೋ ಸುಬ್ಬಂಣನವರು ...	ಡಿಟೋ
	3 ಡಿಟೋ ಚನ್ನಪ್ಪಯ್ಯನವರು ..	ಜಹಗೀರ್ದಾರ್
ಹಿರಿಯೂರು ತಾಲ್ಲೂಕು ..	1 ಡಿಟೋ ಭೀಮರಾಯರು ..	ಕಂಟ್ರಾಕ್ಟರ್
	2 ಡಿಟೋ ದೊಡ್ಡಕಿಟ್ಟದಹಳ್ಳಿ ಕರಿಯಣ್ಣನವರು	ಜಹಗೀರ್ದಾರು
ಹೊಳಲ್ಕೆರೆ ತಾಲ್ಲೂಕು ..	1 ಡಿಟೋ ಗುಂಡೇರಿ ಗೋಪಾಲಯ್ಯನವರು ..	ಶಾನಭೋಗ್
	2 ಡಿಟೋ ತಾಳ್ಯ ಕೇಶವಪ್ಪನವರು ..	ಡಿಟೋ ಮತ್ತು ಜಹಗೀರ್ದಾರು
ಹೊಸದುರ್ಗ ಸಬ್ ತಾಲ್ಲೂಕು ..	1 ಡಿಟೋ ಗುಂಡೇರಿ ಮಲ್ಲಯ್ಯನವರು ..	ಜಹಗೀರ್ದಾರ್
ದಾವಣಗೆರೆ ತಾಲ್ಲೂಕು ..	1 ಡಿಟೋ ಹೊಲೆಯುವನವರ ರುದ್ರಪ್ಪನವರು	ಜಹಗೀರ್ದಾರ್ ಮತ್ತು ವರ್ತಕರು
	2 ಡಿಟೋ ಹೊಸೂರ್ ನಂಜುಂಡರಾಯರು ..	ಜಹಗೀರ್ದಾರ್
	3 ಡಿಟೋ ಅಂದನೂರ್ ಶಿವಲಿಂಗಪ್ಪನವರು ..	ವರ್ತಕರು
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಮಗನಹಳ್ಳಿ ಷಡಕ್ಷರಪ್ಪನವರು ..	ಡಿಟೋ
ಹರಿಹರ ಸಬ್ ತಾಲ್ಲೂಕು ..	1 ಡಿಟೋ ಬಾಲಕೃಷ್ಣರಾಯರು ..	ಶಾನಭೋಗ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಅಡಿವಪ್ಪನವರು ..	ವರ್ತಕರು
ಜಗಳೂರು ತಾಲ್ಲೂಕು ..	1 ಡಿಟೋ ನರಸಿಂಗಪ್ಪನವರು ..	ಶಾನಭೋಗ್
	2 ಡಿಟೋ ದೇವಕೆರೆ ಗುರುಶಾಂತಪ್ಪನವರು ...	ಜಹಗೀರ್ದಾರು
ಮೊಳಕಾಲುಮುರು ತಾಲ್ಲೂಕು ..	1 ಡಿಟೋ ಜೆಂಕ ತಿಪ್ಪಯ್ಯನವರು ...	ದೇವಾಂಗದವರು
	2 ಡಿಟೋ ಕಾಟಪ್ಪನಾಯಕರು ...	ಜಹಗೀರ್ದಾರ್

ತಾರೀಖು 9ನೇ ಸೆಪ್ಟಂಬರ್ 1896.

ನಂ. 2714.—ಪಿ. 420, ಸನ್ 1883ನೇ ಜುಲೈ 11ನೇ ಮಾರ್ಖಂ 190ನೇ ನಂಬರ್ ಗವರ್ನಮೆಂಟಿನ ಈ ಕೆಳಗೆ ಕಂಡ ಇಸ್ತಿಹಾರ್‌ನಾಮೆಯು ಸಕಲರ ತಿಳುವಳಿಕೆ ಬಗ್ಯೆ ಪುನಃ ಪ್ರಖಾಯಿಷ್ಯಾಡಲ್ಪಟ್ಟಿರುತ್ತೆ:—

"ತಾಬೇದಾರೀ ಗವರ್ನಮೆಂಟ್ ಉದ್ಯೋಗಸ್ಥರುಗಳಿಂದ ಉದ್ಯೋಗಗಳು, ಬಡ್ತಿಗಳು ವ ಬಹಲ್‌ಗಳು ಮತ್ತು ಹೆಚ್ಚಾದ ಪೆನ್ಷನ್‌ಗಳು ಇವುಗಳಿಗಾಗಿ ಅರ್ಜಿಗಳು ದಿವಾನ್‌ರವರ ಆಫೀಸಿನಲ್ಲಿ ಬಾರಿಬಾರಿಗೂ ಕೊಡಲ್ಪಡುತ್ತಲಿವೆ. ಅಂಥಾ ಅರ್ಜಿಗಳಿಗೆ ಯಾವ ವಿಧವಾದ ಗಮನವೂ ಕೊಡುವದಿಲ್ಲ. ಅವುಗಳು ಆಯಾ ಇಲಾಖೆಗಳ ಮೊಖ್ತೇಸರರುಗಳ ಮೂಲಕ ಕಳುಹಿಸಲ್ಪಡಬೇಕು, ಅಥವಾ ಅರ್ಜೀದಾರನು ದಾಖಲಾಗಿದ್ದ ಇಲಾಖೆಯು ಮಾಕೂಫ್ ಮಾಡಲ್ಪಟ್ಟಿದ್ದರೆ ಆತನಿಗೆ ನವುಕರಿಗಾಗಿ ಅಪ್ಪಣೆಯಾಗಿದ್ದ ಇಲಾಖೆಯ ಮೊಖ್ತೇಸರರ ಮೂಲಕ ಕಳುಹಿಸಲ್ಪಡಬೇಕು."

ತಾರೀಖು 15ನೇ ಸೆಪ್ಟಂಬರ್ 1896.

ನಂ. 3594.—ಮಿ. 764, ಸನ್ 1890ನೇ ಇಸವಿಯ ಮೈಸೂರ್ ಆರಂಸ್ ರೆಗ್ಯುಲೇಷನಿನ 22ನೇ ಸೆಕ್ಷನ್ ಅನುಸರಿಸಿ, ಸ್ವಾದರ್ಮಾಡಲ್ಪಟ್ಟ 1895ನೇ ಮೇ 1ನೇ ಮಾರ್ಖಂ ನಂ. Iನೇ ಇಸ್ತಿಹಾರ್‌ನಾಮೆಯು Iನೇ ಪ್ಯಾರಾ 8ನೇ ಕ್ಲಾಜಿನಲ್ಲಿ ಈ ಕೆಳಗೆ ಕಂಡದ್ದನ್ನ ಜಾಸ್ತಿಯಾಗಿ ಸೇರಿಸುವ ಬಗ್ಯೆ ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

"ಮ್ಯುನಿಸಿಪಲ್ ಕಮ್ಮಿಟಿಗಳು" ಎಂಬ ಮಾತುಗಳ ತರುವಾಯ "ಲೋಕಲ್‌ಫಂಡ್ ಬೋರ್ಡಿನ ಮತ್ತು ರೆಪ್ರಜಂಟೇಟಿವ್ ಸಂಘದ" ಎಂಬ ಮಾತುಗಳನ್ನ ಸೇರಿಸತಕ್ಕದ್ದು.

ತಾರೀಖು 16ನೇ ಸೆಪ್ಟಂಬರ್ 1896.

ನಂ. 3690.–ಜು. 383, ಈ ಕೆಳಗೆ ಕಂಡ ಸ್ಪೆಷಲ್ ಸಬ್ ರೆಜಿಸ್ಟ್ರಾರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

(1) ದೇವನಹಳ್ಳಿಯ 3ನೇ ಗ್ರೇಡ್ ಸಬ್ ರೆಜಿಸ್ಟ್ರಾರ್ ಎ. ಮಹಾದೇವ ಮೊದಲಿಯಾರ್ರು ತುಮಕೂರಿಗೆ.

(2) ತುಮಕೂರು 3ನೇ ಗ್ರೇಡ್ ಸಬ್ ರೆಜಿಸ್ಟ್ರಾರ್ ಟಿ. ಬಿ. ವೆಂಕಟಾಚಾರ್ರು ದೇವನಹಳ್ಳಿಗೆ.

ನಂ. 3697.—ಜು. 389, ಮೂಡಗೆರೆ ತಾಲ್ಲೂಕು ಅಮಲ್‌ದಾರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಸಿ. ನರಸಿಂಗರಾಯರಿಗೆ, 1859ನೇ ಇಸವಿಯ XIIIನೇ ನಂಬರ್ ಆಕ್ಟ್ (ಬ್ರೀಚ್ ಆಫ್ ಕಾಂಟ್ರಾಕ್ಟ್ ಆಕ್ಟ್) ಅನುಸರಿಸಿ ಬರುವ ಮೊಕದ್ದಮೆಗಳನ್ನ ದರ್ಯಾಫ್ತೀ ಮಾಡಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 3695.—ಜು. 387, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಮೂಡಗೆರೆ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಸಿ. ನರಸಿಂಗರಾಯರು 2ನೇ ಕ್ಲಾಸಿನ ಮಾಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 17ನೇ ಸೆಪ್ಟಂಬರ್ 1896.

ನಂ. 3785.—ಮಿ. 790, ಈ ವರುಷಕ್ಕಾಗಿ ದಸರಾ ರಜಾಗಳು 1896ನೇ ಅಕ್ಟೋಬರ್ 6ನೇ ಮಂಗಳವಾರದ ಲಾಗಾಯತು 23ನೇ ಶುಕ್ರವಾರದ ವರಿಗೆ ಉಭಯ ದಿನಗಳೂ ಸೇರಿ ಕೊಡಲ್ಪಡುವವು.

2. ಜರೂರಿಯಾತ್ ಕೆಲಸದ ಬಗ್ಯಾಗಿ ಇಲಾಖೆಗಳ ಮೊಖ್ತೇಸರರುಗಳಿಂದ ಏರ್ಪಾಡುಗಳು ಮಾಡಲ್ಪಡುವವು.

ತಾರೀಖು 19ನೇ ಸೆಪ್ಟಂಬರ್ 1896.

ನಂ. 3894.—ಜು. 402, ಮಿಸ್ಟರ್ ಟಿ. ನರಹರಿರಾವ್, ಎಂ. ಎಲ್., ಯವರು ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟು ವ ಸೆಷನ್ಸ್ ಕೋರ್ಟಿನ ಚಾರ್ಜನ್ನು ಮಿಸ್ಟರ್ ಎಸ್. ಆರ್. ಸುಬ್ಬಾಯ ಆಯ್ಯರ್, ಬಿ. ಏ., ಯವರಿಂದ 1896ನೇ ಸೆಪ್ಟಂಬರ್ 12ನೇ ಮಾರ್ಖಮಿನ ಪೂರ್ವಾಹ್ನದಲ್ಲಿ ವಹಿಸಿದ್ದರಿಂದ ಅವರಿಗೆ 1896ನೇ ಸೆಪ್ಟಂಬರ್ 5ನೇ ಮಾರ್ಖಂ 3342.—ಜು. 333ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾ ಪೈಕಿ ಉಪಯೋಗಿಸಿಕೊಳ್ಳದ ಭಾಗವನ್ನ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 31ನೇ ಆಗಸ್ಟ್ 1896.

ನಂ. 2362.—ರೆ. ಫೈ. 161–92, ಸನ್ 1896ನೇ ಜುಲೈ 29ನೇ ಮಾರ್ಖಂ 1173.—ರೆ. ಫೈ. 161–92ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುವದೇನಂದರೆ,—ಮೈಸೂರ್ ಸ್ಟೇಟ್ ಲೈಫ್ ಇನ್‌ಷ್ಯೂರೆನ್ಸಿಗೆ ಸಂಬಂಧಪಟ್ಟ ರೂಲ್ಸಿನ 6ನೇ ರೂಲಿಗೆ ಈ ಕೆಳಗೆ ಕಂಡದ್ದು ಬದಲಾಗಿ ಸೇರಿಸಲ್ಪಡತಕ್ಕದ್ದು:—

6. "ಈ ರೂಲುಗಳು ಜಾರಿಗೆ ಬಂದ ತರುವಾಯ ಮೈಸೂರ್ ಗವರ್ನಮೆಂಟ್ ನವುಕರಿಗೆ ದಾಖಲಾಗಬಹುದಾದ ದರೋಬಸ್ತು "ಜನಗಳೂ ಅವರು ಗವರ್ನಮೆಂಟ್ ನವುಕರಿಗೆ ದಾಖಲಾಗುವ ತಾರೀಖಿನಿಂದಲೂ ಅಥವಾ 21 ವರುಷಗಳ ವಯಸ್ಸಿನ ಪೂರ್ವವೇ "ಗವರ್ನಮೆಂಟ್ ನವುಕರಿಗೆ ಸೇರುವಂಥಾವರ ವಿಷಯದಲ್ಲಿ 20 ವರುಷ ಆರು ತಿಂಗಳುಗಳ ವಯಸ್ಸು ಪೂರೈಸಿದ ತಾರೀಖಿನಿಂದಲೂ, "ಅಪೂರ್ವ ಸಂದರ್ಭಗಳಲ್ಲಿ ಗವರ್ನಮೆಂಟಿನವರಿಂದ ಪ್ರತ್ಯೇಕವಾಗಿ ವಿನಾಯಿಸಲ್ಪಟ್ಟಿದ್ದ ಹೊರ್ತು, ಇನ್‌ಷ್ಯೂರೆನ್ಸ್ ಅವಶ್ಯಕವಾಗಿರತಕ್ಕದ್ದು. 45 ವರುಷಗಳ ವಯಸ್ಸು ಮೀರಿದ ಯಾ 10 ರೂಪಾಯಿಗಳ ತಲಬಿಗೆ ಕೀಳ್ಪಟ್ಟ ಯಾವ ಆಫೀಸರರು ಮೊದಲಿನ ಯಾ ಆ "ತರುವಾಯದ ಇನ್‌ಷ್ಯೂರೆನ್ಸಿಗೆ ಅರ್ಹರಾಗಿರುವದಿಲ್ಲ."

C

ತಾರೀಖು 27ನೇ ಆಗಸ್ಟ್ 1896.

ನಂ. 2245.—ಫಾ. ಫೈ. 96.—95, ಸನ್ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ, ಮೈಸೂರ್ ಗವರ್ನಮೆಂಟನವರು ಪ್ರಸಿದ್ಧಪಡಿಸುವದೇನಂದರೆ;—ಇದರಡಿಕಂಡ ಕೋಲಾರ್ ಡಿಸ್ಟ್ರಿಕ್ಟಿನಲ್ಲಿರುವ ಸರಹದ್ದು ವಿಂಗಡಿಸಿ ವ್ಯವಸ್ಥೆ ಮಾಡಲ್ಪಟ್ಟ ಫಾರೆಸ್ಟುಗಳು ಮೇಲೆ ಹೇಳಲ್ಪಟ್ಟ ರೂಲ್ಸಿನ 1ನೇ ರೂಲ್ ಅನುಸರಿಸಿ, ಸ್ಟೇಟ್ ಫಾರೆಸ್ಟುಗಳಾಗಿ ವಿಂಗಡಿಸಲ್ಪಡ ತಕ್ಕದ್ದು;—

ತಾಲ್ಲೂಕು.	ಫಾರೆಸ್ಟಿನ ಹೆಸರು.	ಷುಮಾರು ವಿಸ್ತೀರ್ಣ.	ಚಕ್ಕುಬಂದಿ
ಚಿಂತಾಮಣಿ ತಾಲ್ಲೂಕು ಮ ಶ್ರೀನಿವಾಸಪುರ ಸಬ್ ತಾಲ್ಲೂಕ್	ರಾಯಲ್‌ಪಾಡ್ ಸ್ಟೇಟ್ ಫಾರೆಸ್ಟು, ಮುದುಮುಡುಗು ಸುಣಕಲ್ ಬ್ಲಾಕ್ ನಂ. I.	$21\frac{1}{3}$ ಚದುರ ಮೈಲಿಗಳು.	ಉತ್ತರಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಡಿಸ್ಟ್ರಿಕ್ಟು, ಹದ್ದು ವಿಂಗಡಿಸಲ್ಪಟ್ಟ ಲೈನು ಮುದುಮುಡುಗು ಗ್ರಾಮದ (ಸರ್ವೆ ನಂ. 144) ದೊಡ್ಡೀಶ್ವರ ಮಲೆಗುಟ್ಟದಿಂದ ಹೊರಟು ಸದರೀ ಗ್ರಾಮದ ಸರ್ವೆ ನಂ. 143, 142 ಮ 345 ಇವುಗಳ ಕಡೆಗೂ ಹಾದು ಹೋಗುತ್ತದೆ. ಪೂರ್ವಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಮತ್ತು ಉತ್ತರ ಆರ್ಕಾಟು ಡಿಸ್ಟ್ರಿಕ್ಟುಗಳು, ಸದರೀ ಲೈನು ಗುಂಟಪಲ್ಲಿ ಗ್ರಾಮದ ಸರ್ವೆ ನಂ. 16ರ ಕಡೆಗೂ ಯಡೆಬಿಡದೆ ಹೋಗಿ, ಬೆಂಗಳೂರು ಕಡಪಾ ಹೈ ರೋಡಿನ ಮೂರು ಬಾಂದುಗಳು ಮ ಎಲ್ಲೆ ಕಲ್ಲಿನ ಸಮೀಪ ಹಾದು ಮೇಲ್ಕಂಡ ಗ್ರಾಮದ ಸರ್ವೆ ನಂ. 17 ಮ 18 ಮತ್ತು (ಸುಣಕಲ್ ಗ್ರಾಮದ) ಸರ್ವೆ ನಂ. 20, (ಜಿದಮಾಕಲಪಲ್ಲಿ ಗ್ರಾಮದ) ಸರ್ವೆ ನಂ. 47 ಮ 52, (ಮುಲ್‌ಗೊಲ್‌ಪಲ್ಲಿ ಗ್ರಾಮದ) ಸರ್ವೆ ನಂ. 1 ಮತ್ತು (ಕೊಂಟಂಪಲ್ಲಿ ಗ್ರಾಮದ) ಸರ್ವೆ ನಂ. 100 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಹದ್ದು ವಿಂಗಡಿಸಲ್ಪಟ್ಟ ಲೈನು ಹಿಂದೆ ಹೇಳಿದ ಗ್ರಾಮದ ಸರ್ವೆ ನಂ 85, (ಪಂದಿವಾರಪಲ್ಲಿ) ಸರ್ವೆ ನಂ. 15, (ಸಾತನೂರ) ಸರ್ವೆ ನಂ. 5, (ಕೊತ್ತಿಪೇಟೆ) ಸರ್ವೆ ನಂ. 57, 137, 127, 111, 112, 94 ಮ 89 ಮತ್ತು ಮರಿಮಾಕಲಪಲ್ಲಿಯ ಸರ್ವೆ ನಂ. 47, ಕುರಪಲ್ಲಿಯ ಸರ್ವೆ ನಂ. 15 ಮತ್ತು ತುಪ್ಪಲ್ಲೆ ಗ್ರಾಮದ ಸರ್ವೆ ನಂ. 62 ಇವುಗಳ ಕಡೆಗೂ ಹೋಗಿ ಬೆಂಗಳೂರು ಕಡಪಾ ಹೈ ರೋಡಿನ 64ನೇ ಮೈಲಿ ಕಲ್ಲಿನಬಳಿ ಕೊನೆ ಮುಟ್ಟುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಬೆಂಗಳೂರು, ಕಡಪಾ ಹೈ ರೋಡು 68ನೇ ಮೈಲಿಕಲ್ಲಿನ ವರೆವಿಗೆ ಪಶ್ಚಿಮ ಸರಹದ್ದಾಗಿ, ಆ ತರುವಾಯ 4 ಮ 5ನೇ ಫರ್ಲಾಂಗ್ ಕಲ್ಲುಗಳ ಮಧ್ಯೆ ಈ ರಸ್ತೆಯನ್ನ ದಾಟಿ, ಗುಂಟಪಲ್ಲಿಯ ಸರ್ವೆ ನಂ. 14, ತಿಮ್ಮಲಪಲ್ಲಿಯ ಸರ್ವೆ ನಂ. 26, ಮುಳ್ಳುಮುತ್ತುಕಪಲ್ಲಿಯ ಸರ್ವೆ ನಂ. 1, ಮುದುಮುಡುಗಿನ ಸರ್ವೆ ನಂ. 140 ಮ 141, ಬೊಡ್ರೆಡ್ಡಿಪಲ್ಲಿ ಗ್ರಾಮಗಳ ಸರ್ವೆ ನಂ. 19 ಮ 1 ಇವುಗಳ ಕಡೆಗೂ ಹೋಗಿ, ಹೊರಟ ಸ್ಥಳವನ್ನು ಸೇರುತ್ತದೆ.
	ಬ್ಲಾಕ ನಂ. II, ಮಲ್ಸಕೊಂಡ ಫಾರೆಸ್ಟು.	$7\frac{1}{7}$ ಚದುರ ಮೈಲಿಗಳು.	ಪೂರ್ವಕ್ಕೆ—ಹದ್ದು ವಿಂಗಡಿಸಲ್ಪಟ್ಟ ಲೈನು ಕೊತ್ತವಾರಪಲ್ಲಿಯ ಸರ್ವೆ ನಂ. 17ರಿಂದ ಹೊರಟು, ವೇಪಲಪಲ್ಲಿಯ ಸರ್ವೆ ನಂ. 20 ಮ 119; ತಿಮ್ಮಲಪಲ್ಲಿಯ ಸರ್ವೆ ನಂ. 120 ಮ 142 ಮತ್ತು ಮಂಜೇವಾರಪಲ್ಲಿ ಗ್ರಾಮಗಳ ಸರ್ವೆ ನಂ. 93 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಬಸವನಪಲ್ಲಿಯ ಸರ್ವೆ ನಂ. 22, ಗುಡಸ್ವಾರಪಲ್ಲಿಯ ಸರ್ವೆ ನಂ. 29, ಉಪ್ಪಾರಪಲ್ಲಿಯ ಸರ್ವೆ ನಂ. 42 ಮತ್ತು ಯರ್ರಂವಾರಪಲ್ಲಿ ಗ್ರಾಮಗಳ ಸರ್ವೆ ನಂ. 54 ಇವುಗಳ ಕಡೆಗೂ ಹೋಗುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಪತ್ತೂರ ಸರ್ವೆ ನಂ. 45, ತಂದ್ರಂಪಲ್ಲಿಯ ಸರ್ವೆ ನಂ. 26, ಬಲುತ್ತಮಾರಿಯ ಸರ್ವೆ ನಂ. 11 ಮ 107, ಕೊತ್ತಪಲ್ಲಿಯ ಸರ್ವೆ ನಂ. 36, 11, 10, 100, 99 ಮ 50 ಮತ್ತು ಕುರಗಪಲ್ಲ ಗ್ರಾಮಗಳ ಸರ್ವೆ ನಂ. 81 ಮ 96 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಡಿಸ್ಟ್ರಿಕ್ಟು, ಸದರೀ ಲೈನು ಕುರಗೇಪಲ್ಲಿಯ ಸರ್ವೆ ನಂ. 81 ಮ 96, ವಾಣೀಶ್ವರಪಲ್ಲಿಯ ಸರ್ವೆ ನಂ. 52, ಕೊತ್ತಪಲ್ಲಿಯ ಸರ್ವೆ ನಂ. 50 ಮ 99 ಮತ್ತು ಕೊತ್ತವಾರಪಲ್ಲಿ ಗ್ರಾಮಗಳ ಸರ್ವೆ ನಂ. 1 ಇವುಗಳ ಕಡೆಗೂ ಹೋಗಿ ಹೊರಟ ಸ್ಥಳವನ್ನ ಸೇರುತ್ತದೆ.
	ಬ್ಲಾಕ ನಂ. III, ವಾಲೇಶ್ವರಬೆಟ್ಟ ಫಾರೆಸ್ಟು.	$2\frac{5}{6}$ ಚದುರ ಮೈಲಿಗಳು.	ಪೂರ್ವಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಉತ್ತರ ಆರ್ಕಾಟು ಡಿಸ್ಟ್ರಿಕ್ಟು, ಹದ್ದು ವಿಂಗಡಿಸಲ್ಪಟ್ಟ ಲೈನು ಬಾವಲಪಲ್ಲಿಯ ಸರ್ವೆ ನಂ. 8ರಿಂದ ಹೊರಟು, ಕೋನಂಪಲ್ಲಿಯ ಸರ್ವೆ ನಂ. 40 ಮ 28 ಮತ್ತು ಗುಟ್ಟಪಲ್ಲಿ ಗ್ರಾಮಗಳ ಸರ್ವೆ ನಂ. 34 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಗುಟ್ಟಪಲ್ಲಿಯ ಸರ್ವೆ ನಂ. 33 ಮ 34, ಕೋನಂಪಲ್ಲಿಯ ಸರ್ವೆ ನಂ. 4, ಬೋಮನಪಲ್ಲಿಯ ಸರ್ವೆ ನಂ. 10 ಮ 56 ಮತ್ತು ಬಾಚವಾರಿಪಲ್ಲಿ ಗ್ರಾಮಗಳ ಸರ್ವೆ ನಂ. 47 ಇವುಗಳ ಕಡೆಗೂ ಹೋಗುತ್ತದೆ.

ತಾಲ್ಲೂಕು.	ಫಾರೆಸ್ಟಿನ ಹೆಸರು.	ಪ್ರಮಾಣ ವಿಸ್ತೀರ್ಣ.	ಚಕ್ಕು ಬಂದಿ.
ಚಿಂತಾಮಣಿ ತಾಲ್ಲೂಕು ವ ಶ್ರೀನಿವಾಪುರ ಸಬ್‌ತಾಲ್ಲೂಕು	ಬ್ಲಾಕ್ ನಂ. III, ವಾಲೇಶ್ವರ ಬೆಟ್ಟ ಫಾರೆಸ್ಟು.	$2\frac{5}{6}$ ಚದುರ ಮೈಲಿಗಳು.	ಪಶ್ಚಿಮಕ್ಕೆ—ಈ ಸ್ಥಳದಿಂದ ಅದು ಹಿಂದೆ ಹೇಳಿದ ಗ್ರಾಮದ ಸರ್ವೆ ನಂ. 16 ಮತ್ತು ಇಲದೊಣಿ ಗ್ರಾಮದ ಸರ್ವೆ ನಂ. 197 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಗುಂಜಾರಗೋನಪಲ್ಲಿಯ ಸರ್ವೆ ನಂ. 1, ಮೂಚವಾರಪಲ್ಲಿ ಗ್ರಾಮಗಳ ಸರ್ವೆ ನಂ. 35 ವ 45 ಇವುಗಳ ಕಡೆಗೂ ಹಾದು ಹೊರಟ ಸ್ಥಳವನ್ನ ಶೇರುತ್ತದೆ.
ಚಿಂತಾಮಣಿ	ಅಡಗಲ್ಲು ನೆಲವಂಕಿ ಜಂಗಲ್.	$5\frac{1}{5}$ ಚದುರ ಮೈಲಿಗಳು.	ಪೂರ್ವಕ್ಕೆ—ಹದ್ದು ವಿಂಗಡಿಸಲ್ಪಟ್ಟ ಲೈನು ಬುರ್ಗಮಾಕಲಪಲ್ಲಿ ಗ್ರಾಮದ ಸರ್ವೆ ನಂ. 44ರಿಂದ ಹೊರಟು ತೂಪಲ್ಲಿ ಗ್ರಾಮದ ಸರ್ವೆ ನಂ. 32ರ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಲೈನು ಅಲ್ಲಿಂದ ಹೊರಟು ಮಂಚಿನೀಳ್ಳು ಕೋಟೆಯ ಸರ್ವೆ ನಂ. 188, ಗೊಲ್ಲಪಲ್ಲಿಯ ಸರ್ವೆ ನಂ. 16, ಪ್ರಾತ ನೆಲವಂಕಿಯ ಸರ್ವೆ ನಂ. 18, ಸೋಣಪಲ್ಲಿಯ ಸರ್ವೆ ನಂ. 14 ವ 30, ಕುರಪಲ್ಲಿಯ ಸರ್ವೆ ನಂ. 69, ತಿಮ್ಮನಪಲ್ಲಿ ಗ್ರಾಮಕ್ಕೆ ಶೇರಿದ ಖರಾಬ್ ಜಮೀನ್ ವಗೈರೆಗೂ ಮತ್ತು ಕೊಡಪಲ್ಲಿಯ ಸರ್ವೆ ನಂ. 17 ಇವುಗಳ ಕಡೆಗೂ ಹೋಗುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಹೊರಟು ದಿಗವಮಾರಂಪಲ್ಲಿಯ ಸರ್ವೆ ನಂ. 61, 67 ವ 64, ತಿಮ್ಮನಪಲ್ಲಿಯ ಸರ್ವೆ ನಂ. 26, 40, 66, 72 ವ 52 ಮತ್ತು ಕಂಬಲಪಲ್ಲಿಯ ಸರ್ವೆ ನಂ. 27 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ—ಈ ಸ್ಥಳದಿಂದ ಸದರೀ ಲೈನು ಹೊರಟು ತುಮ್ಮಲ್ಲರು ಪಲ್ಲಿಯ ಸರ್ವೆ ನಂ. 39, 28, 112, ಅಡಗಲ್ ಗ್ರಾಮದ ಸರ್ವೆ ನಂ. 87, 79, 189 ವ 156 ಇವುಗಳ ಕಡೆಗೂ ಹೋಗಿ ಹೊರಟ ಸ್ಥಳವನ್ನು ಶೇರುತ್ತದೆ.

ತಾರೀಖು 5ನೇ ಸೆಪ್ಟಂಬರ್ 1896.

ನಂ. 2632.—ರೆ. ಫೈ. 39—96, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಬಿ. ಜೆ. ಕುಮಾರಸಾಮಿ ನಾಯಕರವರಿಗೆ 1896ನೇ ಸೆಪ್ಟಂಬರ್ 5ನೇ ಮಾರ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2689.—ಫಾ. ಫೈ. 7—96, ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್‌ವೇಟರ್ ಮಿಸ್ಟರ್ ಜೆ. ಜೆ. ಮಾಣ್ಟೀರೋಯವರಿಗೆ, 1896ನೇ ಆಗಸ್ಟು ಗುರ್ರೇ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 2692.—ಫಾ. ಫೈ. 1—96, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್ಸರ್‌ವೇಟರ್ ಮಿಸ್ಟರ್ ಪಿ. ಈ. ಬೆರ್ನಾರ್ಡಯವರಿಗೆ, 1896ನೇ ಆಗಸ್ಟು 24ನೇ ಮಾರ್ಕಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 9ನೇ ಸೆಪ್ಟಂಬರ್ 1896.

ಅಶುದ್ಧ.

ನಂ. 2684.—ಫಾ. ಫೈ. 27—95, ಕೆಲವು ಫಾರೆಸ್ಟು ಆಫೀಸರುಗಳಿಗೆ ಹಂಗಾಮಿಯಾದ ಬಡ್ತಿಗಳನ್ನ ಹುಕುಂ ಮಾಡಿರುವ 1896ನೇ ಆಗಸ್ಟು 19ನೇ ಮಾರ್ಕಂ 1893.-ಫಾ. ಫೈ. 27-95ನೇ ನಂಬರ್ ಗವರ್ನ್‌ಮೆಂಟ್ ಇಷ್ಟಿಹಾರ್ ನಾಮೆಯಲ್ಲಿರುವ "1896ನೇ ಏಪ್ರಲ್ 12" ಎಂಬ ಮಾತುಗಳಿಗೆ ಬದಲಾಗಿ "1896ನೇ ಮಾರ್ಚಿ 12" ಎಂಬದಾಗಿ ಓದತಕ್ಕದ್ದು.

ತಾರೀಖು 11ನೇ ಆಗಸ್ಟು 1896.

ನಂ. 1618.—ಎಕ್ಸೈ. 64, ಸನ್ 1881ನೇ ಇಸವಿಯ XXIIನೇ ನಂಬರ್ ಎಕ್ಸೈಜ್ ಆಕ್ಟಿನ 55ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರಗಳ ಮೂಲಕ ಕಂಟ್ರಿ ಬೀರು ಅಂಗಡಿಗಳ ಮಾರಾಟದ ಬಗ್ಗೆ ಮತ್ತು ಕಂಟ್ರಿ ಬೀರು ಯಾ ಪೋರ್ಟರು ಚಿಲ್ಲರೆಯಾಗಿ ಮಾರುವದಕ್ಕೆ ಲೈಸೆನ್ಸಿಗಾಗಿಯೂ ನೋಟೀಸಿನ ಈ ಕೆಳಗೆ ಕಂಡ ನಮೂನೆಯನ್ನು ಮೈಸೂರು ಗವರ್ನ್‌ಮೆಂಟಿನವರು ವಿಧಿಸಿರುತ್ತಾರೆ:—

ನೇ ವರುಷಕ್ಕಾಗಿ ಲ್ಲಿ ಇರತಕ್ಕ ಕಂಟ್ರಿ ಬೀರು ಅಂಗಡಿಗಳ ಹರಾಜು ನೋಟೀಸ್.

1. ಇದರಿಂದ ಪ್ರಸಿದ್ಧ ಪಡಿಸುವದೇನಂದರೆ—ಇದಕ್ಕೆ ಜತೆಸಲ್ಪಟ್ಟ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮೂರು ಅಂಗಡಿಗಳ ಪ್ರತಿ ಒಂದರಲ್ಲೂ ಕಂಟ್ರಿ ಬೀರು ಯಾ ಪೋರ್ಟರು 189 ನೇ ಜುಲೈ 1ನೇ ತಾರೀಖಿನಿಂದ ಪ್ರಾರಂಭಿಸಿ 189 ನೇ ಜೂನ್ 30ನೇ ತಾರೀಖಿಗೆ ಆಖೈರಾಗುವ ಹನ್ನೆರಡು ತಿಂಗಳುಗಳ ಕಾಲಕ್ಕಾಗಿ ವಿಕರಿ ಮಾಡತಕ್ಕ ಏಕಮಾತ್ರ ಸ್ವಾತಂತ್ರ್ಯದ ಹಕ್ಕನ್ನು ಡಿಸ್ಟ್ರಿಕ್ಟು ಆಫೀಸಿನಲ್ಲಿ ನೇ ತಾರೀಖಿನಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫೀಸರರಿಂದ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಸವಾಲು ಮಾಡುವದಕ್ಕೆ ಪೂರ್ವ 50 ರೂಪಾಯಿ ಯಾ ಹರಾಜು ನಡಿಸತಕ್ಕ ಆಫಿಸರರಿಂದ ಗೊತ್ತುಮಾಡಲ್ಪಡಬಹುದಾದ ಇತರ ನ್ಯಾಯವಾದ ಮೊಬಲಗು ಠೇವಣಾತಿ ಇಡತಕ್ಕದ್ದು. ಪ್ರತಿ ಅಂಗಡಿಯೂ ಅಂಗೀಕರಿಸಲ್ಪಟ್ಟ ಚಡದರಖಾಸ್ತುದಾರರಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ತೋರಿಸದೆ ಮಂಜೂರು ಯಾ ತಳ್ಳಿಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿಯಾಗಲಿ ಯಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದಿರುವ ಮುಖ್ತಾಲೀಕರಾಗಲಿ ಹಾಜರಾಗಬೇಕು.

3. ಹರಾಜು ಪೂರೈಸಿದ ಕೂಡಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ಮೇರೆ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸ್ ಮಾಡಲ್ಪಡುವವು. ಹರಾಜು ನಡೆಯುವ ಕಾಲದಲ್ಲಿ ಪ್ರತಿ ಅಂಗಡಿಗಾಗಿ ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರು ತಕ್ಷಣವೇ ಆ ಅಂಗಡಿಯು ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣಿ ಇಡಬೇಕು. ಹಾಗೆ ಇಡಲಿಕ್ಕೆ ತಪ್ಪಿದಲ್ಲಿ 2ನೇ ಪ್ಯಾರಾ ಅನುಸರಿಸಿ ಆತನಿಂದ ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಸದರೀ ಅಂಗಡಿಯು ಪುನಃ ಮೇಲೆ ಕಂಡ ಷರತ್ತುಗಳಿಗೆ ಒಳಪಟ್ಟು ತಕ್ಷಣವೇ ಹರಾಜಾಗುವದಲ್ಲದೆ ಆತನು ಪುನಃ ಈ ಅಂಗಡಿಗಾಗಲಿ ಅಥವಾ ಇತರ ಯಾವ ಅಂಗಡಿಗಾಗಲಿ ಸವಾಲ್ ಮಾಡಕೂಡದು.

4. ಯಾರ ಹೆಸರಿಗೆ ಸದರೀ ಅಂಗಡಿಗಳು ಹರಾಜಿನಲ್ಲಿ ನಿಲ್ಲಲ್ಪಡುತ್ತೋ ಮತ್ತು 2 ವ 3ನೇ ಪ್ಯಾರಾಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜಿನ ತಾರೀಖು ಲಾಗಾಯತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟ ಪ್ರತಿ ಅಂಗಡಿಯ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತೀ ಮೊಬಲಗನ್ನು ಠೇವಣಿ ಕಟ್ಟಿ ಇದಕ್ಕೆ ಜಂಟಿಸಿರುವ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸನ್ನ ಪಡೆಯತಕ್ಕದ್ದು. ಮತ್ತು ಒಂದು ಎದುರು ಒಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆ ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರಿ ಮೇಲೆ ಮರಳಿ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿದ್ದ ಪಕ್ಷಕ್ಕೆ ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ತರುವಾಯ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸ್ದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

5. ಮೇಲಿನ ನಾಲ್ಕನೇ ಪ್ಯಾರಾ ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರಿ ಮೇಲೆ ನಡಿಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ, ಮತ್ತು ದುಸರಾ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜು ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರಾ ಹರಾಜಿನಲ್ಲಿ ಚಡಸವಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತ ಬಾಕಿ ಉಳಿಯುವದರನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರಾ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಠೇವಣಿ ಮೊಬಲಗು ದುಸರಾ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಅಂಥಾ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೇನೇ ಜಮಾ ಮಾಡಿಕೊಳ್ಳಲ್ಪಡುವದು.

6. ಮೇಲಿನ 4ನೇ ಪ್ಯಾರಾ ಅನುಸರಿಸಿ ಪಡೆಯಬೇಕಾದ ಲೈಸೆನ್ಸ್ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಮೆಸ್ಸರ್ಸ್ ಲೀಷ್‌ಮ್ಯಾನ್ ಅಂಡ್ ಕೋ ಯವರಿಂದಲೂ ಅಥವಾ ಕಿರ್ಕಿಯಲ್ಲಿ ಮೆಸ್ಸರ್ಸ್ ಮಾರ್ಕಿ ಅಂಡ್ ಕೋ ಯವರಿಂದಲೂ ಕಾಯಿಸಲ್ಪಟ್ಟ ಕಂಟ್ರಿ ಬೀರು ಯಾ ಪೋರ್ಟರು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ತಾಲ್ಲೂಕು ಖಜಾನೆಗೆ 189ನೇ ಜುಲೈ ಲಾಗಾಯತು ಪ್ರಾರಂಭಿಸಿ ಸರಿಯಾದ ತಿಂಗಳು ಗಟ್ಲೆ ಖಿಸ್ತುಗಳ ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿ ಒಂದು ಖಿಸ್ತು ಅದು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗಾಗಿ ಭಾವಿಸಲ್ಪಡತಕ್ಕದ್ದು. ಪ್ರತಿ ಒಂದು ತಿಂಗಳ ಗುತ್ತಿಗೆ ಮೊಬಲಗೂ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಪಾವತಿ ಮಾಡತಕ್ಕದ್ದು. ಲೈಸೆನ್ಸ್‌ದಾರನಿಂದ ಠೇವಣಿ ಇಟ್ಟಿರುವ ಎರಡು ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯ ಕಡೇ ಎರಡು ತಿಂಗಳಿಗಾಗಿ ಕೊಡತಕ್ಕ ಗುತ್ತಿಗೆ ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡತಕ್ಕದ್ದು. ಸದರೀ ತಿಂಗಳ 20ನೇ ತಾರೀಖಿನೊಳಗಾಗಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳನುಸರಿಸಿ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡಿ ನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಗುತ್ತಿಗೆ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ಯಾ ವಜಾ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(3) ಲೈಸೆನ್ಸ್‌ದಾರನು ಆತನಿಂದ ಕೊಂಡುಕೊಳ್ಳಲ್ಪಟ್ಟ ಕಂಟ್ರಿ ಬೀರು ಯಾ ಪೋರ್ಟರ ಪ್ರತಿ ಗ್ಯಾಲನಿಗೂ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(4) ಲೈಸೆನ್ಸ್‌ದಾರನಿಂದ ಕೊಂಡುಕೊಂಡು ಕಳುಹಿಸತಕ್ಕ ಕಂಟ್ರಿ ಬೀರು ಯಾ ಪೋರ್ಟರು ಬ್ರೂಯರಿಯಿಂದ ತಾಲ್ಲೂಕು ಅಮಲ್‌ದಾರ್‍ರಿಗೆ ಸೀದಾ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯು ಇಮ್ಮಡಿಯಾಗಿರತಕ್ಕದ್ದು, ಅಸಲ್ ಪ್ರತಿಯು ತಾಲ್ಲೂಕು ಅಮಲ್‌ದಾರ್‍ರಿಗೂ ಮತ್ತು ಎರಡನೇ ಪ್ರತಿಯು ಎಕ್ಸೈಜ್ ಕಮಿಷನರಿಗೂ ಕಳುಹಿಸತಕ್ಕದ್ದು. ಮೇಲೆ ನಮೂದಿಸಲ್ಪಟ್ಟ ಪ್ರಕಾರ ಮೇರಿಗೆ ಹಾಸಲ್ ಮೊಬಲಗು ಗೊತ್ತಾದ ಚಲನಿನಲ್ಲಿ ಲೈಸೆನ್ಸ್‌ದಾರನಿಂದ ಪಾವತಿ ಆದ ನಂತರ ಅಮಲ್‌ದಾರ್‍ರು ಸರಕನ್ನು ಲೈಸೆನ್ಸ್‌ದಾರನು ತನ್ನ ಅಂಗಡಿಗೆ ಸಾಗಿಸಲು ತಮ್ಮಿಂದ ಯಾ ಈ ವಿಷಯದಲ್ಲಿ ಅವರಿಂದ ಅಧಿಕಾರ ಪಡೆದ ಇತರ ಆಫಿಸರರಿಂದ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(5) ಲ್ಲಿರತಕ್ಕ ಪ್ರತಿ ಅಂಗಡಿಯ ಲೈಸೆನ್ಸ್‌ದಾರನೂ ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ತನ್ನ ಅಂಗಡಿಯ ಲೈಸೆನ್ಸಿನ ಕಾಲಕ್ಕಾಗಿ ವರುಷ ಒಂದಕ್ಕೆ 180 ರೂಪಾಯಿನ ದರದ ಮೇರಿಗೆ ಅಡ್ವಾನ್ಸಾಗಿ ರಿಜಿಸ್ಟ್ರೇಷನ್ ಫೀಯನ್ನು ಕೊಡತಕ್ಕದ್ದು.

(6) ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು, ಮತ್ತು ಲೆಖ್ಖಗಳು, ಬೀರು ಯಾ ಪೋರ್ಟರು ಸಾಗಿಸುವ ಬಗ್ಯೆ ಬೇಕಾದ ರಹದಾರಿಗಳು ಅಥವಾ ಪ್ಯಾಸುಗಳು ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(7) ಲೈಸೆನ್ಸ್‌ದಾರನು 189 ನೇ ಜುಲೈ 1ನೇ ತಾರೀಖಿನಲ್ಲಿ ಸದರೀ ಅಂಗಡಿಯಲ್ಲಿ ಶಿಲ್ಕಿನಲ್ಲಿ ಉಳಿಯಬಹುದಾದ ಬಿಟ್ಟು ಹೋಗುವ ಲೈಸೆನ್ಸ್‌ದಾರನಿಗೆ ಸೇರಿದ ಅಂಥಾ ಬೀರು ಯಾ ಪೋರ್ಟರನ್ನು ಎಕ್ಸೈಜ್ ಕಮಿಷನರವರಿಂದ ನಿಷ್ಕರ್ಷಿಸಲ್ಪಡಬಹುದಾದ ಲಾಗವಡು ಸದರೀಯವನಿಗೆ ಕೊಟ್ಟು ತೆಗದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

(8) ಲೈಸೆನ್ಸ್‌ದಾರನು ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡಬಹುದಾದ ನಿಬಂಧನೆಗಳ ಮೇರೆ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(9) ಬಾಕಿ ಕರಾರುಗಳು ವ ಷರತ್ತುಗಳು ಇದಕ್ಕೆ ಲಗತ್ತಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸ್‌ದಾರನಾಗಲಿ ಯಾ ಆತನ ತಿಳುವಳಿಕೆ ವ ಸಮ್ಮತಿಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ಅಥವಾ ಲೈಸೆನ್ಸ್‌ದಾರನು ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಿಗಿಸಿದ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರು ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಉಲ್ಲಂಘನೆ ಯಾ ಅಶ್ರದ್ಧೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿಟ್ಟಿರುವ ಠೇವಣಿ ಮೊಬಲಗನ್ನು ದಂಡವಾಗಿ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಮತ್ತು ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನು ಪುನಃ ಹರಾಜು ಮಾಡಲಿಕ್ಕೂ ಮುಖ್ತ್ಯಾರಾಗಿರತಕ್ಕದ್ದು. ಇದರಿಂದುಂಟಾಗುವ ಎಲ್ಲಾ ನಷ್ಟವನ್ನೂ ಲೈಸೆನ್ಸ್‌ದಾರನು 189 ನೇ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರ ದೆಶೆಯಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಆತನಿಂದ ಭರ್ತಿ ಮಾಡಲ್ಪಡತಕ್ಕದ್ದು. ಗುತ್ತಿಗೆಯು ರದ್ದುಮಾಡಲ್ಪಟ್ಟಲ್ಲಿ ಪೂರಾ ಕಾಲದ ಗುತ್ತಿಗೆ ಮೊಬಲಗು ತಕ್ಷಣ ಪಾವತಿ ಮಾಡತಕ್ಕದ್ದು, ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಗಳಂತೆ ಎಲ್ಲಾ ನಷ್ಟಗಳ ಸಹಿತ ವಸೂಲ್ಮಾಡಲ್ಪಡತಕ್ಕದ್ದು.

8. ಮೇಲಿನ ಹಿಂದಿನ ಷರತ್ತಿನಲ್ಲಿ ವಿಧಿಸಲ್ಪಟ್ಟ ದಂಡನೆಗಳು ಜಾರೀಲಿರುವ ಯಕ್ಸೈಜ್ ಕಾನೂನುಗಳಿಗೆ ಯಾ ರೂಲುಗಳಿಗೆ ವಿರೋಧವಾಗಿ ಮಾಡಲ್ಪಟ್ಟ ಯಾವ ತಕ್ಸೀರಿಗೂ ಲೈಸೆನ್ಸ್‌ದಾರನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಷೆಡ್ಯೂಲ್,

ಸ್ಥಳದ ಹೆಸರು.	ಅಂಗಡಿಯ ರಿಜಿಸ್ಟರ್ ನಂಬರ್.	ಅಂಗಡಿ ಇರುವ ಸ್ಥಳ.		ಹಾಲೀ ಲೈಸೆನ್ಸ್ ದಾರರ ಹೆಸರುಗಳು.	ಖರ್ಚು.			ಗುತ್ತಿಗೆ.	ಷರಾ.
		ಡೋರ್ ನಂಬರ್.	ಸ್ಥಳ.				—ಯ 8 ತಿಂಗಳು.		
					ಪೀಪಾಯಿಗಳು	ಪೀಪಾಯಿಗಳು	ಪೀಪಾಯಿಗಳು	ರೂ.	

ಬೀರ್ ಲೈಸೆನ್ಸ್.

ಕಂಟ್ರಿ ಬೀರನ್ನು ಯಾ ಪೋರ್ಟರನ್ನು ಚಿಲ್ಲರೆಯಾಗಿ ಮಾರುವದಕ್ಕೆ ಲೈಸೆನ್ಸ್ (1881ನೇ ಇಸವಿಯ XXIIನೇ ನಂಬರ್ ಆಕ್ಟಿನ 12 ವ 13ನೇ ಸೆಕ್ಷನ್‌ಗಳನುಸರಿಸಿ ಕೊಡಲ್ಪಟ್ಟದ್ದು.)

1. ರಿಜಿಸ್ಟರ್ ನಂಬರ್.
2. ಲೈಸೆನ್ಸ್‌ದಾರನ ಹೆಸರು.
3. ಮಾರುವವನ ಹೆಸರು.
4. ಸ್ಥಳ.

ಕಂಟ್ರಿ ಬೀರ್ ಮತ್ತು ಪೋರ್ಟರನ್ನು ನಂಬರ ಅಂಗಡಿಯಲ್ಲಿ ಚಿಲ್ಲರೆಯಾಗಿ ಮಾರುವದಕ್ಕೋಸ್ಕರ ಗೆ ಈ ಕೆಳಗಿನ ಷರತ್ತುಗಳನುಸರಿಸಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಆದ ನಾವು ಇದರಿಂದ ಅಧಿಕಾರವನ್ನು ಕೊಡುತ್ತೇವೆ:—

I. ಈ ಲೈಸೆನ್ಸ್ ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ, ಮತ್ತು ಇದರಲ್ಲಿ ನಮೂದಿರತಕ್ಕವರು ಶಿವಾಯಿ ಮತ್ಯಾವ ಜನರೂ ಇದರ ಆಧಾರದ ಮೇಲೆ ಕಾರ್ಯಗಳನ್ನು ನಡಿಸಲಿಕ್ಕೆ ಅಧಿಕಾರವಿರುವದಿಲ್ಲ.

II. ದುಕಾಣದಾರನು ಲೈಸೆನ್ಸ್‌ದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗಿರುತ್ತಾನೆ, ಅವು ಯಾವವೆಂದರೆ.

III. ಅವನು ಬೀರ್ ಯಾ ಪೋರ್ಟರನ್ನು ಪೀಪಾಯಿ ಅಥವಾ ಬುಡ್ಡಿಯಿಂದಾಗಲಿ ಅಂಗಡಿಯಲ್ಲಿ ಅಥವಾ ಹೊರಗಡೆಯಲ್ಲಿ ಕುಡಿಯಲಿಕ್ಕೆ ಮಾರಬೇಕೇ ಹೊರ್ತು ಇತರ ಯಾವ ತರಹೇದ ಬೀರ್ ಯಾ ಪೋರ್ಟರನ್ನಾಗಲಿ ಮಾರಕೂಡದು, ಮತ್ತು ಅಂಗಡಿಯ ಹೊರಗಡೆ ಕುಡಿಯಲಿಕ್ಕೆ ಮಾರುವ ಸಂದರ್ಭದಲ್ಲಿ ಯಕ್ಸೈಜ್ ಇಲಾಖೆಯವರಿಂದ ಕೊಡಲ್ಪಡುವ ರಹದಾರಿಗಳ ಆಧಾರದ ಮೇಲೆ ಮಾರತಕ್ಕದ್ದಲ್ಲದೆ ಸದರೀ ರಹದಾರಿಯಲ್ಲಿನ ಷರತ್ತುಗಳಂತೆ ಮಾರುವವನೂ ಮತ್ತು ಕೊಂಡುಕೊಳ್ಳುವನೂ ಈ ಉಭಯತ್ರರೂ ಖಂಡಿತವಾಗಿ ನಡೆದುಕೊಳ್ಳಬೇಕು. ಅಂಥಾ ರಹದಾರಿಗಳ ಆಧಾರದಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಎರಡು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ಎಂಟು ಸೇರುಗಳಿಗಿಂತ ಹೆಚ್ಚಾಗಿರಕೂಡದು.

IV. ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಬೀರು ಯಾ ಪೋರ್ಟರು ಯಷ್ಟು ಮಟ್ಟಿಗಾದರೂ ಯಾವ ಯೂರೋಪಿಯನ್ ಅಥವಾ ನಾನ್ ಕಮ್ಮಿಷನಡ್ ಆಫೀಸರಿಗಾದರೂ ಯಾ ಪ್ರೈವೇಟ್ ಸೋಲ್ಜರಿಗಾದರೂ ಅಥವಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಯಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅಥವಾ ಕೊಡಲೂ ಕೂಡದು, ಅವನು, ಅವಳು ಯಾ ಅವರುಗಳಿಗೆ ತನ್ನ ಅಂಗಡಿಯಲ್ಲಿ ಅಥವಾ ಅಂಗಡಿಯ ಆವರಣದಲ್ಲಿ ಬೀರು ಯಾ ಪೋರ್ಟರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿ ಯಾ ಅದಕ್ಕೆ ಶೇರಿದ ಆವರಣದಲ್ಲಿ ಜನಗಳು ಕುಡಿದು ನಿಷ್ಪಾಹತ್ತಿ ಬೀಳುವಂತೆ ಯಾ ಅವರು ಅಕ್ರಮವಾಗಿ ನಡಿಯುವಂತೆ ಅವಕಾಶ ಕೊಡಕೂಡದು, ಮತ್ತು ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆ ಮಾಡಕೂಡದು. ವ್ಯಭಿಚಾರಿಗಳನ್ನಾಗಲಿ ಯಾ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ತಿಳಿದು ತನ್ನ ಅಂಗಡಿಗೆ ಬರುವಂತೆ ಯಾದರೂ ಅಥವಾ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಿಗಾದರೂ ಯಾ ಇತರರಿಗಾದರೂ ಅವರುಗಳು ಫರಾರಿಯಾದವರೆಂದು ತಿಳಿದು ಅಥವಾ ಅಂತವರೆಂದು ನಂಬುವದಕ್ಕೆ ಕಾರಣವಿದ್ದೂ ಅಂತವರಿಗೆ ತನ್ನ ಅಂಗಡಿಯಲ್ಲಿ ಪುನಃಪೂರ್ತಿಯಾಗಿ ಸ್ಥಳ ಕೊಡಲೂ ಕೂಡದು ಯಾ ಛಪಾಯಿಸಿ ಇಡಲೂ ಕೂಡದು. ಗುಮಾನೀ ನಡತೆಗಳುಳ್ಳ ಜನಗಳ ವಿಷಯಕವಾದ ವರ್ತಮಾನವನ್ನು ಮಾಜಿಸ್ಟ್ರೇಟರಿಗೆ ಯಾ ಪೊಲೀಸ್ ಆಫೀಸರರಿಗೆ ತಿಳಿಸಬೇಕು, ಮತ್ತು ಉದ್ಯೋಗದ ಮೇಲಿರುವಾಗ ಯಾವ ಪೊಲೀಸ್ ಆಫೀಸರರಿಗಾಗಲಿ, ರೈಲ್ವೆ ನೌಕರನಿಗಾಗಲಿ ಯಾ ಯಕ್ಸೈಜ್ ಆಫೀಸರರಿಗಾಗಲಿ ಬೀರು ಯಾ ಪೋರ್ಟರನ್ನು ಮಾರಲೂ ಕೂಡದು ಅಥವಾ ಕೊಡಲೂ ಕೂಡದು.

V. ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ವೊಂದು ಹಲಿಗೇಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರು ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರು ಸಹ ವ್ಯಕ್ತವಾಗಿ ಬರಸಿ ಇಡಬೇಕು.

VI. ಅವನು ಯಾವ ಪದಾರ್ಥಗಳನ್ನಾಗಲಿ ಬದಲಿಯಾಗಿಯಾದರೂ ಯಾ ಅಡಮಾನವಾಗಿಯಾದರೂ ತೆಗದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ವೊಂದಕ್ಕೆ ವೊಂದು ರೂಪಾಯಿನ ಲಾಗಾಯತು ವೊಂದು ರೂಪಾಯಿ ನಾಲ್ಕಾಣೇ ವರಿವಿಗೂ ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮೋಷಾಯಿ ಪ್ರಕಾರವೂ ನಗದಾಗಿ ಹಣ ತೆಗೆದುಕೊಳ್ಳಬೇಕು.

VII. ಈ ಲೈಸೆನ್ಸ್ ಪ್ರಕಾರ ಮಾರುವ ಬೀರು ವ ಪೋರ್ಟರು ವೊಂದು ಹಾಗ್ಸ್ ಹೆಡ್ಯಾನೆ ಪೀಪಾಯಿಗೆ ಮಾಲ್ಟ್ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಶೇಕಡಾ 75ರಷ್ಟನ್ನೂ ಮತ್ತು ಕೆಂಟು ದೇಶದಲ್ಲಿ ಬೆಳದಂಥಾ ವಳ್ಳೇದಾಗಿರುವ 3 ಪೌಂಡ್ಸ್ ಹಾಪ್ಸ್ ಎಂಬ ಹುಪ್ಪುಗಳನ್ನೂ ಶೇರಿಸಬೇಕು, ಮತ್ತು ಮೇಲ್ಕಂಡ ಬೀರು ವ ಪೋರ್ಟರು ಭಟ್ಟೀ ಇಳಿಸತಕ್ಕವರಿಂದ ಖರೀದಿಗೆ ತಂದ ಹಾಗೆ ನೀರು ಬೆರಿಸದೆ ಯಾ ಇತರ ಪದಾರ್ಥ ಮಿಶ್ರಪಡಿಸಿ ಕೆಡಿಸದೆ ಅದೇ ತರಹೇದ್ದಾಗಿ ಮತ್ತು ಮಂದವಾಗಿರಬೇಕು. ಇಂಥಾ ಬೀರು ವ ಪೋರ್ಟರಿನ ಮಾದರಿಗಳು ಯಕ್ಸೈಜ್ ಇಲಾಖೆಯವರಿಂದ ಅಪೇಕ್ಷಿಸಿದಾಗ ತನಖಿ ಮತ್ತು ಅಜಮಾಯಿಷಿ ಮಾಡುವ ಬಗ್ಗ್ಯಾಗಿ ಭಟ್ಟೀ ಕಾರಖಾನೆಯಿಂದ ಶೀಸೆಯಲ್ಲಿ ಕಳುಹಿಸಲ್ಪಡತಕ್ಕದ್ದು.

VIII. ಸ್ಥಳಿಕ ಅಧಿಕಾರವುಳ್ಳ ಯಾವ ಮಾಜಿಸ್ಟ್ರೇಟರಾಗಲಿ ಅಥವಾ ಮಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಯಾ ಯಾವ ಆಬ್ಕಾರಿ ಯಾ ಎಕ್ಸೈಜ್ ಆಫೀಸರಾಗಲಿ ಯಾವ ಹೊತ್ತಿನಲ್ಲಾದರೂ ಅಂಗಡಿಯೊಳಗೆ ಪ್ರವೇಶ ಮಾಡಿ ಸದರೀ ಆವರಣವಲ್ಲಿರುವ ಬೀರು ಯಾ ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸ್‌ದಾರನಿಂದಲೂ ವ ಮಾರುವವನಿಂದಲೂ ಇಡಲ್ಪಡಬೇಕಾದ ಅಂಗಡಿ ಲೆಖ್ಖಗಳನ್ನು ತನಿಖೀ ಮಾಡಲಿಕ್ಕೆ ಹಾಜರ್ಮಾಡಬೇಕು. ಅಂಥಾ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾ ಆಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೀನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಮ್ ಬೀರೂ ನಾಶಪಡಿಸತಕ್ಕದ್ದು.

IX. ಸದರೀ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು, ಮತ್ತು ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ ಮೇಲೆ ಹೊರ್ತು ಬೆಳಿಗ್ಯೆ 6 ಘಂಟೆಗೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

X. ಕಮ್ಮಿಸ್ಸರಿಯಾಟ್ ಇಲಾಖೆಗಾಗಿ ತರಲ್ಪಟ್ಟು ಮತ್ತು ಮಿಲಿಟೆರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಯಾವ ಕಾರಣದಿಂದಲೂ ಅಂಗಡಿಯಲ್ಲಿ ಮಾರಲಿಕ್ಕೆ ಕಳುಹಿಸಲ್ಪಡಕೂಡದು.

XI. ಸದರೀ ಅಂಗಡಿಗೆ ಒಂದೇ ಬಾಗಲಿರಬೇಕು, ಮತ್ತು ಸದರೀ ಕಟ್ಟಡದ ಹಿಂಭಾಗದಲ್ಲ್ಯಾದರೂ ಯಾ ಕೊನೇ ಭಾಗಗಳಲ್ಲ್ಯಾದರೂ ಖಿಟಕಿ ಇಡಕೂಡದು. ಮದ್ಯ ಮಾರುವ ಜಗಲಿಯು ಅಂಗಡಿಯೊಳಗೆ ಇರುವ ಜನಗಳು ಅಂಗಡಿ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆದುರಾಗಿರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಶೇರಿದ ಹಾಗೆ ಎರಡನೇ ಕೊಠಡಿ ತೆರೆದಿರಕೂಡದು.

XII. ಮೇಲಿನ ಷರತ್ತುಗಳು ಮತ್ತು ನಿಬಂಧನೆಗಳ ಪೈಕಿ ಯಾವದನ್ನಾದರೂ ತಪ್ಪಿ ನಡದರೆ ಲೈಸೆನ್ಸ್‌ದಾರನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಆಪಾದಿಸಲ್ಪಟ್ಟ ಮೇಲೆ 1881ನೇ ಇಸವಿಯ XXIIನೇ ನಂಬರ ಆಕ್ಟು ಅನುಸರಿಸಿ ಜುರ್ಮಾನೆ ತೆರಲಿಕ್ಕೂ ಅಥವಾ ಸದರೀ ಆಕ್ಟಿನ 13ನೇ ಸೆಕ್ಷನ್ ಅನುಸರಿಸಿ ಲೈಸೆನ್ಸನ್ನು ಕಳೆದುಕೊಳ್ಳಲಿಕ್ಕೂ, ಯಾ ಇವೆರಡಕ್ಕೂ ಗುರಿಯಾಗತಕ್ಕದ್ದು.

XIII. ಈ ಲೈಸೆನ್ಸ್ 189 ನೇ ಇಸವಿ ನೇ ತಾರೀಖು ವರಿವಿಗೆ ಜಾರಿಯೇ ಹೊರ್ತು ತದನಂತರವಲ್ಲ, ಆದರೆ ಇದು 1881ನೇ ಇಸವಿಯ XXIIನೇ ನಂಬರ್ ಆಕ್ಟಿನ 13 ವ 14ನೇ ಸೆಕ್ಷನ್‌ಗಳನ್ನನುಸರಿಸಿ ಯಾವಾಗಾದರೂ ವಾಪಸ್ ತರಿಸಿಕೊಳ್ಳಲ್ಪಡಬಹುದು ಅಥವಾ ಬಿಟ್ಟುಬಿಡಲ್ಪಡಬಹುದು.

ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್,
ಡಿಸ್ಟ್ರಿಕ್ಟು.

ಎದುರು ಒಡಂಡಿಕೆ.

ಈ ಕೆಳಗೆ ರುಜು ಮಾಡಿರುವ ಮೇಲ್ಕಂಡ ಲೈಸೆನ್ಸ್‌ದಾರ ವ ಬಿಕರೀದಾರ ಮತ್ತು ಬಳಿಯಿರುವ ಬೀರ್ ಅಂಗಡಿಗೆ ಸಂಬಂಧಪಟ್ಟ ಇತರರಾದ ನಾವುಗಳು ನಮ್ಮಗಳಿಗಾಗಿಯೂ, ನಮ್ಮ ವಾರಸ್‌ದಾರರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗಪಡೆದಂಥಾವರಿಗೋಸ್ಕರವೂ ಇದರ ದೆಸೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ಬರೆಯೋಣಾದ, ಛಾಪಿಸೋಣಾದ ವ ಹೇಳೋಣಾದ ಕರಾರುಗಳಿಗೂ, ಷರತ್ತುಗಳಿಗೂ ವೊಪ್ಪಿರುತ್ತೇವೆ.

362

ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ನಮಗಳ ರೂಬರೂ ರುಜು ವ ಮೊಹರನಿಸಿ ಒಪ್ಪಿಸಲ್ಪಟ್ಟಿರುತ್ತೆ.

ತಾರೀಖಿನ ದಿನ

ಸಾಕ್ಷಿಗಳು.

1.
2.
3.

ಲೈಸೆನ್ಸದಾರ್ ವ ಬಿಕರೀದಾರ್.

ತಾರೀಖು 14ನೇ ಸೆಪ್ಟಂಬರ 1896.

ನಂ. 2919.—ರೆ. ಫೈ. 50—96, ಕೊರಟಗೆರೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಬಿ. ವಾಸುದೇವರಾಯರಿಗೆ, 1896ನೇ ಮೇ 23ನೇ ಮರ್ಕುಂ 10263.—ರೆ. 4033ನೇ ನಂಬರ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟೆರಿ.

ಪಬ್ಲಿಕವರ್ಕ್ಸ.

ಇಸ್ತಿಹಾರ್‌ನಾಮಾ.

ತಾರೀಖು 17ನೇ ಸೆಪ್ಟಂಬರ 1896.

ನಂ. 801.—4912, ಕಡೂರ ಡಿವಿಜನಿಗೆ ಸೇರಿದ ಆಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ಬಿ. ಸುಬ್ಬರಾಯರಿಗೆ, ಅವರು ಹೊರಟ ತಾರೀಖು ಲಾಗಾಯತು ಎರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಜೆ. ಹ್ಯೆಟ್ಲ,
ಮೈಸೂರ್ ಗವರ್ನಮೆಂಟ್ ಪಬ್ಲಿಕವರ್ಕ್ಸ ಇಲಾಖಾ ಆಸಿಸ್ಟೆಂಟ್ ಸೆಕ್ರೆಟೆರಿ.

363

ಮೈಸೂರ ಗೆಜೆಟ್.

ನಂ. XXXI. ಸರ್ಕಾರದಿಂದ ಛಾಯಿಸ್ ಆದ್ದು. [ನಂ. 38.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 24, ಸ್ನ 1896.

IIನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯುವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 45.

ಮೃತಪಟ್ಟ ಜಯರಾಮನಾಯಡು ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಶಿದ್ದೀಕಟ್ಟೆಗೆ ಸೇರಿದ ಬೆಂಕೀನವಾಬರಪೇಟೆಯಲ್ಲಿ ಇರುವ ಚಂಚಮ್ಮನು, ಮೃತಪಟ್ಟ ಸದರೀ ಜಯರಾಮನಾಯಡು ಯವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಬೆಂಕೀನವಾಬರ ಪ್ಯಾಟೆ ಸ್ಥಳದ ಚಂಚಮ್ಮನು, ಮದರಾಸ್ ವಾಸಸ್ಥರಾಗಿ ಮೃತಪಟ್ಟ ಜಯರಾಮನಾಯಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಂಚಮ್ಮನ ಅರ್ಜಿಯನ್ನು 1896ನೇ ಇಸವಿ ನವಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಡಿಟೋ ಮೃತಪಟ್ಟ ಜಯರಾಮನಾಯಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 48.

ಮೃತಪಟ್ಟ ಚುಚ್ಚುರಕನಹಳ್ಳಿ ಶೇಷಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಹೊಸಕೋಟೆ ತಾಲ್ಲೂಕು ಕಲ್ಲುಕುಂಟೆ ಅಗ್ರಹಾರದಲ್ಲಿ ಇರುವ ಶೇಷಮ್ಮನು, ಮೃತಪಟ್ಟ ಸದರೀ ಚುಚ್ಚುರಕನಹಳ್ಳಿ ಶೇಷಾಚಾರ್ಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಕಲ್ಲುಕುಂಟೆ ಅಗ್ರಹಾರದ ಸ್ಥಳದ ಶೇಷಮ್ಮನು, ಕಲ್ಲುಕುಂಟೆ ಅಗ್ರಹಾರದ ವಾಸಸ್ಥರಾಗಿ ಮೃತಪಟ್ಟ ಶೇಷಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೇಷಮ್ಮನವರ ಅರ್ಜಿಯನ್ನು ಸನ್ 1896ನೇ ಇಸವಿ ನವಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೇಷಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 50.

ಮೃತಪಟ್ಟ ಪಾಮುಂಡಹಳ್ಳಿ ದ್ಯಾವಣ್ಣನವರ ಆಲಪ್ಪನ ಮಗ ಮರಿಯಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚಿಕ್ಕಬಳ್ಳಾಪುರದ ತಾಲ್ಲೂಕು ಕಸಬಾ ಹೋಬಳಿ ಬೋದಿಗಾನಹಳ್ಳಿಯಲ್ಲಿರುವ ಲಕ್ಷ್ಮಕ್ಕನು, ಮೃತಪಟ್ಟ ಸದರೀ ಮರಿಯಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಬಳ್ಳಾಪುರದ ತಾಲ್ಲೂಕು ಬೋದಿಗಾನಹಳ್ಳಿ ಸ್ಥಳದ ಲಕ್ಷ್ಮಕ್ಕನು, ಚಿಕ್ಕಬಳ್ಳಾಪುರದ ತಾಲ್ಲೂಕು ಜೋಡಿ ಪಾಮುಂಡಹಳ್ಳಿ ವಾಸಸ್ಥರಾಗಿ ಮೃತಪಟ್ಟ ಮರಿಯಪ್ಪನವರ ಜೀವಿತದಲ್ಲಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಕ್ಕನ ಅರ್ಜಿಯನ್ನು ಸನ್ 1896ನೇ ಇಸವಿ ನವಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಯಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಸೆಪ್ಟೆಂಬರ್ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟುಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 82.

ಮೃತಪಟ್ಟ ರಾಯಶಿಂಗರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಹೊಸಕೋಟೆ ಕಸಬೆಯಲ್ಲಿ ಇರುವ ಮೋಹನಸಿಂಗ್, ಮೃತಪಟ್ಟ ಸದರೀ ರಾಯಶಿಂಗರಿಗೆ ಮಗನು ಆಗಬೇಕೆಂಬ ಹಕ್ಕುದಾರಿಮೇಲೆ ಹೊಸಕೋಟೆ ಸ್ಥಳದ ಮೋಹನಸಿಂಗರು, ಹೊಸಕೋಟೆ ವಾಸಸ್ಥರಾಗಿ ಮೃತಪಟ್ಟ ರಾಯಶಿಂಗರ ಜೀವಿತದಲ್ಲಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೋಹನಸಿಂಗರ ಅರ್ಜಿಯನ್ನು ಸನ್ 1896ನೇ ಇಸವಿ ನವಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಯಶಿಂಗರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಸೆಪ್ಟೆಂಬರ್ ತಿಂಗಳ ತಾರೀಖಿನಲ್ಲಿ ಕೋರ್ಟುಮೊಹರ್ ನಿಶಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ದಿವಾಳಿಯಾದ ಡಿಕ್ರಿ ದೇಣೇದಾರ ಕೋಲಾರ ಡಿಸ್ಟ್ರಿಕ್ಟು ಬವುರಿಂಗಪೇಟೆಯಲ್ಲಿರುವ ಬೆಸ್ತರ ಮುನಿಯಪ್ಪನ ಮಗ ರಾಮಣ್ಣನ ವಿಷಯದಲ್ಲಿ—

ಸನ್ 1895—96ನೇ ಇಸವಿ ದಿವಾಳಿ ಕೇಸ್ ನಂ. 145.

ಹುಕುಂ,

ಮೇಲ್ಕಂಡ ರಾಮಣ್ಣನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ರಾಮಣ್ಣನ ಪರವಾಗಿ ಮೆಸ್ಟರ್ ಪಾರ್ಥಸಾರಥಯ್ಯಂಗಾರ್ರು ಯುದುರಿಗೆ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರೆಂದರೆ,—ಬವುರಿಂಗಪೇಟೆಯಲ್ಲಿರುವ 1ನೇ ಪಳ್ಳಿಗರ ಪಿಲ್ಲಣ್ಣ, 2ನೇ ಪಳ್ಳಿಗರ ಯುರ್ರಪ್ಪ, 3ನೇ ಮಾಲೂರು ಗೊಲ್ಲ ಪಿಲ್ಲಣ್ಣ, 4ನೇ ಪೂಜಾರಿ ಹನುಮಪ್ಪ, 5ನೇ ಸುಬ್ರಹ್ಮಣ್ಯಶೆಟ್ಟಿ, 6ನೇ ಬವುರಿಂಗಪೇಟೆ ತಾಲ್ಲೂಕು ಮಾದಮಂಗಲದ ಹೋಬಳಿ ಸೂಲಕುಂಟೆಯಲ್ಲಿರುವ ಸಂಜೀವಯ್ಯ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ರಾಮಣ್ಣನು ತನ್ನ ಸಾಲಗಾರರಿಗೆ ಪಾವತಿ ಬಗ್ಗೆ ಮಾಹೆಯಾನಾ ತಪ್ಪದೆ ಈ ಕೋರ್ಟಿಗೆ ಎರಡು ರೂಪಾಯಿ ಹಾಜರ್ಮಾಡುವ ಷರತ್ತಿನ ಮೇಲೆ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1896ನೇ ಇಸವಿ ಫೆಬ್ರವರಿ 13ನೇ ತಾರೀಖಿನಲ್ಲಿ ಈ ಕೋರ್ಟುಮೊಹರ್ ನಮ್ಮ ದಸ್ತಖತ್ ನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ.

ನಂಬರು.	ಲೇಣೇದಾರು ಹೆಸರು.	ಸಾಲದ ಮೊಬಲಗು.	ಷರಾ.
1	ಬೌರಿಂಗಪೇಟೆಯಲ್ಲಿರುವ ಲಕ್ಷ್ಮಯ್ಯನ ಮಗ ಪಳ್ಳಿಗರ ಪಿಲ್ಲಣ್ಣ ..	19—4—0	ಕೋಲಾರ ಗೋಲ್ಡ್‌ಫೀಲ್ಡ್ ಮುನ್ಸಿಫ್ ಕೋರ್ಟು 1893—94ನೇ ಇಸವಿ ಸ್ಮಾ|| 159ನೇ ನಂ. ಡಿಕರೀ ಮೊಬಲಗು
2	ಪಳ್ಳಿಗರ ಯುರ್ರಪ್ಪ	42—8—0	ಡಿಟ್ಟೋ
3	ಮಾಲೂರು ಗೊಲ್ಲ ಪಿಲ್ಲಣ್ಣ ..	3—0—0	ಲೆಖ್ಖದ ಬಾಕಿ
4	ಪೂಜಾರಿ ಹನುಮಪ್ಪ ..	25—0—0	ಪತ್ರದ ಬಾಬತು
5	ಸುಬ್ರಹ್ಮಣ್ಯಶೆಟ್ಟಿ ..	7—0—0	ಡಿಟ್ಟೋ
6	ಸಂಜೀವಯ್ಯ ..	184—8—0	ಡಿಟ್ಟೋ

ಸನ್ 1896ನೇ ಇಸವಿ ಜೂನ್ 3ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತು ನಿಸಿ ಕೊಡಲ್ಪಟ್ಟಿಧೆ.

365

ದಿವಾಳಿಯಾದ ಡಿಕ್ರಿ ದೇಣೇದಾರ ಚಿಕ್ಕಬಳ್ಳಾಪುರದ ತಾಲ್ಲೂಕು ಅಂದಾರ್ಲಹಳ್ಳಿಲಿರುವ ಕ್ರಿಷ್ಣಪ್ಪನ ಮಗ ತಿಮ್ಮಯ್ಯನ ವಿಷಯದಲ್ಲಿ—

ಸನ್ 1895—96ನೇ ಇಸವಿ ದಿವಾಳಿ ಕೇಸ್ ನಂಬರು 8.

ಹುಕುಂ,

ಮೇಲ್ಕಂಡ ತಿಮ್ಮಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟರ್ ರೂಬರೂ ಅರ್ಜೀದಾರನಾದ ತಿಮ್ಮಯ್ಯನ ಪರವಾಗಿ ಅಡ್ವೋಕೇಟ್ ಮಿಸ್ಟರ್ ಎಸ್. ಸುಬ್ಬರಾಯರಿಗಾಗಿ, ಅಡ್ವೋಕೇಟ್ ಮಿಸ್ಟರ್ ಆಳಶಿಂಗ್ರಾಚಾರ್ರವರ ಯದುರಿಗೆ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದ್ರೆ,—1ನೇ ಚಿಕ್ಕಬಳ್ಳಾಪುರದ ತಾಲ್ಲೂಕು ಅಂದಾರ್ಲ ಹಳ್ಳಿಲಿರುವ ಅಬ್ಬುಗುಡ್ಡೇಗವುಡ 2 ಚಿಕ್ಕಬಳ್ಳಾಪುರದಲ್ಲಿರುವ ಕುಂಭಕೋಣದ ದೊಡ್ಡ ಕ್ರಿಷ್ಣಾವಧಾನಿ 3ನೇ ಡಿಟ್ಟೋ ಸ್ಥಳದಲ್ಲಿರುವ ಕುಂಭಕೋಣದ ನರಹರಿ ಶಾಸ್ತ್ರಿ 4ನೇ ಸದರೀ ಸ್ಥಳದಲ್ಲಿರುವ ಯಲೇ ತೋಟದ ಚಿಕ್ಕಬುಡ್ಡಣ್ಣ 5ನೇ ಸದರೀ ಸ್ಥಳದಲ್ಲಿರುವ ಬಂಡಾರಿ ವೆಂಕಟಪ್ಪ, 6ನೇ ಸದರೀ ಸ್ಥಳದಲ್ಲಿರುವ ಅದಾಲತ್ತು ಬ್ಯಾಂಕ್ ಏಜಂಟ್ ಕುಕ್ಕಲ ಅಣ್ಣಯ್ಯ, 7ನೇ ಸದರೀ ಸ್ಥಳದಲ್ಲಿರುವ ಶಂಕರನಾರಾಯಣರಾವ್, 8ನೇ ಚಿಕ್ಕಬಳ್ಳಾಪುರದ ತಾಲ್ಲೂಕು ನಂದೀಲಿರುವ ಹುರಳಗುರ್ಕಿ ರಾಮಯ್ಯ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ತಿಮ್ಮಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1896ನೇ ಇಸವಿ ಜನವರಿ 30ನೇ ತಾರೀಖಿನಲ್ಲಿ ಈ ಕೋರ್ಟರ್ ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಹೆಸರು.	ಸಾಲದ ಮೊಬಲಗು.	ಷರಾ.
1	ಚಿಕ್ಕಬಳ್ಳಾಪುರದ ತಾಲ್ಲೂಕು ಅಂದಾರ್ಲಹಳ್ಳಿಲಿರುವ ಅಬ್ಬುಗುಡ್ಡೇಗವುಡ ..	296— 5—4	ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟರ್ 1888ನೇ ಇಸವಿ ಶಿವಿಲ್ 570ನೇ ನಂ. ಡಿಕರಿ ಮೊಬಲಗು.
		54— 0—6	ಡಿಟ್ಟೋ ಕೋರ್ಟರ್ 1890ನೇ ಇಸವಿ ಶಿವಿಲ್ 596ನೇ ನಂ. ಡಿಕರೀ ಮೊಬಲಗು.
		400— 0—0	ಪತ್ರದ ಮೊಬಲಗು.
2	ಕುಂಭಕೋಣದ ದೊಡ್ಡಕೃಷ್ಣಾವಧಾನಿ ..	143— 4—2	ಡಿಕರೀ ಮೊಬಲಗು.
3	ಡಿಟ್ಟೋ ನರಹರಿಶಾಸ್ತ್ರಿಗಳು, ..	40— 0—0	ಡಿಟ್ಟೋ
	ಡಿಟ್ಟೋ ದೊಡ್ಡಕೃಷ್ಣಾವಧಾನಿ ನರಹರಿಶಾಸ್ತ್ರಿ ಸಹ	18— 9—6	ಡಿಟ್ಟೋ
4	ಯಲೇತೋಟದ ಚಿಕ್ಕಬುಡ್ಡಣ್ಣ ..	144— 7—9	ಡಿಟ್ಟೋ
5	ಬಂಡಾರೀ ವೆಂಕಟಪ್ಪ ..	80— 0—0	ಆಧಾರದ ಪತ್ರದ ಮೊಬಲಗು.
6	ಅದಾಲತ್ತು ಬ್ಯಾಂಕ್ ಏಜಂಟ್ ಕುಕ್ಕಲ ಅಣ್ಣಯ್ಯ.	54— 6—8	ಡಿಕರೀ ಮೊಬಲಗು.
7	ಶಂಕರನಾರಾಯಣರಾವ್ ..	55—14—8	ಡಿಟ್ಟೋ
8	ಹುರಳಗುರ್ಕಿ ರಾಮಯ್ಯ ..	300— 0—0	ಪತ್ರದ ಮೊಬಲಗು.

ಸನ್ 1896ನೇ ಇಸವಿ ಮೇ 29ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ಬಳ್ಳಾಪುರದ ಪೇಟೆ ರಂಗಸ್ವಾಮಿಗುಡಿ ಕೈಸಾಲೆಯಲ್ಲಿರುವ ಚಲಗಾರ ಭಗವತಿ ಮಗ ಮುನಿಸಾಮಿಯ ವಿಷಯದಲ್ಲಿ—

ಸನ್ 1895—96ನೇ ಇಸವಿ ದಿವಾಳಿ ಕೇಸ್ ನಂಬರ್ 325.

ಹುಕುಂ,

ಮೇಲ್ಕಂಡ ಮುನಿಸಾಮಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟರ್ ರೂಬರೂ ಅರ್ಜಿದಾರರಾದ ಮುನಿಸಾಮಿಯನ್ನೂ ಮತ್ತು ಸದರೀಯವರ ಲೇಣೇದಾರರಾದ ಬೆಂಗಳೂರು ಅರಳೇಪೇಟೆಯಲ್ಲಿರುವ ಮ್ಯುನಿಸಿಪಲ್ ಬೋರ್ಡರ್ ದಫೇದಾರ ಬುಸ್ಸಪ್ಪನ ಯದುರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮುನಿಸಾಮಿಯು ತನ್ನ ಸಾಲಗಾರ್ರಿಗೆ ಪಾವತಿ ಬಗ್ಯೆ ಮಾಹೆಯಾನಾ ತಪ್ಪದೆ ಕೋರ್ಟಿಗೆ ಯರಡು ರೂಪಾಯಿ ಹಾಜರ್ಮಾಡುವ ಷರತ್ತಿನ ಮೇಲೆ ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ರುಜುವಾತಾದ ಸಾಲದ ಪಟ್ಟಿ,

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯುಬಂದ ಅವರುಗಳ ವಾಸಸ್ಥಳ.	ಮೊಬಲಗು.	ಡಿಕ್ರೀ ಆದ ತಾರೀಖು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ಅರಳೆಪೇಟೆಯಲ್ಲಿರುವ ಮ್ಯುನಿಸಿಪಲ್ ಬೋರ್ಡು ದಫೇದಾರ ಬಸಪ್ಪ. ..	89—8—10	..	ಬೆಂಗಳೂರು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟ್ 1890ನೇ ಇಸವಿ ಸ್ಮಾಲ್‌ಕಾಜ್ 2557ನೇ ನಂಬರ್ ಡಿಕರೀ ಮೊಬಲಗು.	

ಸರ್ 1896ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತುಖತ್‌ನಿಸಿ ಕೊಡಲ್ಪಟ್ಟಿದೆ.

ದಿವಾಳಿಯಾದ ಡಿಕ್ರಿ ದೇಣೇದಾರ ನೆಲಮಂಗಲ ತಾಲ್ಲೂಕು ಸೊಂಡೇಕೊಪ್ಪದ ಸಮ್ಮತು ಗೋರಿನಬೆಲೆಯಲ್ಲಿರುವ ಕಸಾಘಟ್ಟದ ಹನುಮಂತನ ವಿಷಯದಲ್ಲಿ—

ಸರ್ 1894—95ನೇ ಇಸವಿ ದಿವಾಳಿ ವ್ಯಾಜ್ಯ ನಂಬರ್ 339.

ಹುಕುಂ,

ಮೇಲ್ಕಂಡ ಹನುಮಂತನು ಖುಲಾಸೆಯಾಗಬೇಕೆಂದು ಕೋರಿ ಬರೆದುಕೊಂಡ ಅರ್ಜಿಯು ಈ ಕೋರ್ಟಿನ ರೂಬರೂ ಅರ್ಜಿದಾರನಸಮಕ್ಷಮದಲ್ಲಿಯೂ ಮತ್ತು ಐರ್ಜ ಅರ್ಜಿದಾರನ ಲೇಣೇದಾರರಾದ 1ನೇ ನೆಲಮಂಗದಲ್ಲಿರುವ ಮರಾಟ ಲಕ್ಷ್ಮಣರಾಯರ ತರಫ್ ಅಡ್ವೋಕೇಟ್ ಮೆಸ್ಟರ್ ಕೆ. ಟಿ. ನರಸಿಹ್ಮಯ್ಯಂಗಾರ್ರವರ ಯದುರಾಗಿಯೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದ್ ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ತಾವೇ ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ,—2ನೇ ನೆಲಮಂಗದಲ್ಲಿರುವ ಕೋಮಟಿ ಅಂಜನಯ್ಯ, 3ನೇ ನೆಲಮಂಗಲದ ತಾಲ್ಲೂಕು ಮಲ್ಲರಬಾಣವಾಡಿಯಲ್ಲಿರುವ ಚನ್ನವೀರದೇವರು, 4ನೇ ನೆಲಮಂಗಲದ ತಾಲ್ಲೂಕು ಜೋಡಿ ಹಂಚಿಪುರಕ್ಕೆ ಸೇರಿದ ಕರಿಕಲ್ಲುಪಾಳ್ಯದ ಚನ್ನರಾಯ, 5ನೇ ನೆಲಮಂಗಲದ ತಾಲ್ಲೂಕು ಸೊಂಡೇಕೊಪ್ಪದ ಹೋಬಳಿ ಕವಲಗನಹಳ್ಳಿ ಹೆಳವರ ತಿಮ್ಮ, 6ನೇ ನೆಲಮಂಗಲ ತಾಲ್ಲೂಕು ಸೊಂಡೇಕೊಪ್ಪದಲ್ಲಿರುವ ಬೆಸ್ತರ ಮಾಯಿಗ, 7ನೇ ನೆಲಮಂಗಲ ತಾಲ್ಲೂಕು ಚವುಡಸಂದ್ರದಲ್ಲಿರುವ ದೇವಾಂಗದ ಶಿದ್ದಣ್ಣ. 8ನೇ ನೆಲಮಂಗಲ ತಾಲ್ಲೂಕು ಮಂಚೇನಹಳ್ಳಿಯಲ್ಲಿರುವ ಒಕ್ಕಲಿಗರ ಮೂಡ್ಲಿ, 9ನೇ ನೆಲಮಂಗಲದ ತಾಲ್ಲೂಕು ಹೊಸಹಳ್ಳಿಯಲ್ಲಿರುವ ತಮ್ಮಟಯ್ಯ, 10ನೇ ನೆಲಮಂಗಲದಲ್ಲಿರುವ ಕೋಮಟಿ ನಾರಾಯಣಶೆಟ್ಟಿ.

ಸದರೀ ಹನುಮಂತನು ದಿವಾಳಿಯಾದವನೆಂದುನ್ನೂ ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನು ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದುನ್ನೂ ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. 1ನೇ ಕ್ರಡಿಟರು ಲಕ್ಷ್ಮಣರಾಯರನ್ನು ಐರ್ಜ ದಿವಾಳಿಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ ಮಾಡಲ್ಪಡತಕ್ಕದ್ದೆಂದುನ್ನೂ ಸದರೀ ರಿಸೀವರಾದವನು ಒಡನೆ ತನ್ನ ರಿಸೀವರ್ ಕೆಲಸಗಳಿಗೆ ಪ್ರವೃತ್ತನಾಗತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟಿ ಇದೆ.

ಸರ್ 1895ನೇ ಇಸವಿ ಡಿಸೆಂಬರ್ 21ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತುಖತ್‌ನಿಸಿ ಕೊಡಲ್ಪಟ್ಟಿತು.

ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಜನರು ಅವರ ಹೆಸರಿಗೆ ಯದುರಾಗಿ ದಾಖಲಾಗಿರುವ ಸಾಲದ ಮೊಬಲಗುಗಳಿಗೆ ಲೇಣೇದಾರರೆಂದು ರುಜು ಮಾಡಿದ್ದಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟಿ ಇದೆ.

ನಂಬರ್.	ಲೇಣೇದಾರ್ರು ಹೆಸರು ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜುವಾದ ಮೊಬಲಗು.	ಸಾಲಗಳ ಸ್ವಭಾವ ಪ್ರತಿಫಲ ಮತ್ತು ಏನಾದರೂ ಈಡು.
		ರೂ. ಆ. ಪೈ.	
1	ನೆಲಮಂಗಲದಲ್ಲಿರುವ ಮರಾಟ ಲಕ್ಷ್ಮಣರಾವ್	225—14—6	ನೆಲಮಂಗಲದ ಮುನ್ಸಿಫ್ ಕೋರ್ಟ್ 1894–95ನೇ ಇಸವಿ ಜಾರಿ 587ನೇ ನಂ. ಬಾಡೀ ವಾರಂಟಿನಲ್ಲಿ ಕಂಡ ಮೊಬಲಗು.

ಸರ್ 1896ನೇ ಇಸವಿ ಮಾರ್ಚಿ 10ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತುಖತ್‌ನಿಸಿ ಕೊಡಲ್ಪಟ್ಟಿದೆ.

ದಿವಾಳಿಯಾದ ಡಿಕ್ರಿ ದೇಣೇದಾರ ನೆಲಮಂಗಲದ ತಾಲ್ಲೂಕು ತ್ಯಾಮಗೊಂಡ್ಲುನಲ್ಲಿರುವ ಶಿವಾಚಾರದ ಸಂಗಣ್ಣನ ಮಗ ಶಿದ್ದಪ್ಪನ ವಿಷಯದಲ್ಲಿ—

ಸರ್ 1895—96ನೇ ಇಸವಿ ದಿವಾಳಿ ಕೇಸ್ ನಂಬರು 154.

ಹುಕುಂ,

ಮೇಲ್ಕಂಡ ಶಿದ್ದಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟಿನ ರೂಬರೂ ಅರ್ಜಿದಾರನನ್ನೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲುನಲ್ಲಿರುವ ಮಲಕಲ್ ರಾಮಸ್ವಾಮಿಶೆಟ್ಟಿರ ತರಫ್ ಮೆಸ್ಟರ್ ಕೆ. ಟಿ.ನರಸಿಹ್ಮಯ್ಯಂಗಾರ್ರವರ ಯದುರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—2ನೇ ತ್ಯಾಮಗೊಂಡ್ಲುನಲ್ಲಿರುವ ಕುದೂರು ಹನುಮಂತಪ್ಪ, 3ನೇ ತಿಪಟೂರಲ್ಲಿರುವ ಮಾರವಾಡಿ ಪನ್ನಾಜಿ ಧನ್ನಾಜಿ, 4ನೇ ತಿಪಟೂರು ತಾಲ್ಲೂಕು ಗುರುಗದಹಳ್ಳೀಲಿರುವ ಚನ್ನಬಸಯ್ಯನಮಗ ರುದ್ರಪ್ಪ, 5ನೇ ಡಿಟ್ಟೋ ಸ್ಥಳದಲ್ಲಿರುವ ಗುರುವಣ್ಣಯ್ಯನಮಗ ರುದ್ರಪ್ಪ, 6ನೇ ತುಮಕೂರು ತಾಲ್ಲೂಕು ಉರುಡುಗೆರೆಯಲ್ಲಿರುವ ಮಲ್ಲಶೆಟ್ಟಪ್ಪ.

367

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಶಿದ್ದಪ್ಪನು ತನ್ನ ಸಾಲಗಾರ್ರಿಗೆ ಪಾವತಿಬಗ್ಯೆ ಮಾಹೆಯಾನಾ ತಪ್ಪದೆ ಕೋರ್ಟಿಗೆ ಯರಡು ರೂಪಾಯಿ ಹಾಜರ್ಮಾಡುವ ಷರತ್ತಿನ ಮೇಲೆ ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಯಿದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1896ನೇ ಇಸವಿ ಮಾರ್ಚಿ ತಿಂಗಳ 11ನೇ ತಾರೀಖಿನಲ್ಲಿ ಈ ಕೋರ್ಟ ಮೊಹರು ನಮ್ಮ ದಸ್ತಖತನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ,

ನಂಬರು.	ಲೇಣೇದಾರರು ಅಥವಾ ದಾವಾದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಕೊಡತಕ್ಕದ್ದು.	ದೇಣೆಯು ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ನೆಲವಂಗಲದ ತಾಲ್ಲೂಕು ತ್ಯಾವುಗೊಂಡ್ಲನಲ್ಲಿರುವ ಮಲಕಲ್ ರಾಮಸ್ವಾಮಿಶಟ್ಟಿ ..	24—6—0		ನೆಲವಂಗಲದ ಮುನ್ಸಿಫ್ ಕೋರ್ಟು 1894-95ನೇ ಇಸವಿ ಸಿವಿಲ್ 342ನೇ ಸಂ. ಡಿಕ್ರೀ ಮೊಬಲಗು	
2	ಕುದೂರು ಹನುಮಂತಪ್ಪ ..	20—0—0		ಪತ್ರದ ಬಗೆ	
3	ಪನ್ನಾಜಿ ಧನ್ನಾಜಿ ..	105—0—0		ಪಾತ್ರೆಸಾಮಾನುಗಳು ತಂದಬಗೆ	
4	ಚನ್ನಬಸವಯ್ಯನ ಮಗ ರುದ್ರಪ್ಪ ..	50—0—0		ಡಿಟೋ	
5	ಗುರುವಣ್ಣಯ್ಯನ ಮಗ ರುದ್ರಪ್ಪ ..	75—0—0		ಕೈ ಬದಲುಬಾಬತು	
6	ಮಲ್ಲಶಟ್ಟಪ್ಪ ..	250—0—0		ತಮಸೂಕು ಬಗೆ	

ಸನ್ 1896ನೇ ಇಸವಿ ಜೂನ್ 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತುನಿಸಿ ಕೊಡಲ್ಪಟ್ಟಿತು.

ಟಿ. ನರಹರಿರಾವ್,
ಡಿಸ್ಟ್ರಿಕ್ಟ ಜಡ್ಜ್.

ಫಾರೆಸ್ಟು ಇಲಾಖಾ.

ಇಸ್ತಿಹಾರ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ಮತ್ತು ಫಾರೆಸ್ಟು ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗ	ಶಿವಮೊಗ್ಗ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿದೆ.

ಹಳೇ ತರಹೆ ಪ್ರಕಾರ.

ಸಂದಲ್ ವಿವರ.	ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.
ಸಲಾಕಿ ಅವ್ವಲ್	1	..	..	5	..	15	..	..		15	..	...
ಡಿಟೋ ದುಯಂ	..	5	1	5	2	5	3	5	1	..	..	2
ಡಿಟೋ ಸಿಯಂ	1	10	7	10	5	5	12	15	8	..	4	..
ಡಿಟೋ ಚಹರಂ	45	15	30	..	44	..	32	10	12	..	7	..
ಡಿಟೋ ಪಂಚಂ	7	..	10	..	10	10	37	.	25	..	14	..
ಚಿಕ್ಕ ಸಲಾಕಿ	1	2	1	..	..	..	..	..	..	..	..	..
ದೊಡ್ಡ ಜಡಾ	21	..	35	..	33	..	66	5	40	..	25	..
ಚಿಕ್ಕ ಜಡಾ	3	15			5	..	8	..	4	..	2	..
ಜಡದ ರಂಬೆ	1	5			7	..	..	..	...	..	...	..
ದೊಡ್ಡ ಜಜ್ಜು	18	..	61	5	30	..	94	..	65	..	43	..
ಚಿಕ್ಕ ಜಜ್ಜು	3	5			11	..						
ಬಗರದದ್ದು	2	15	6	..	5	5	26	.	9	..	13	10
ಐರ್ ವಾಚಿ ಗುಬಗರು	1	..	3	..	..	10	..	..	..	..	..	..
ಗರಗಸ ಬುಕಣಿ	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಟ	1	10	1	..	6	5	15	10	15	..	16	..
ಚಿಕ್ಕ ಡಿಟೋ	..	..	2	..								
ಕತ್ತ್ರಿ ಐರ್ ಚಿಲ್ಟ	6	..	..	..	..	..	..	..	..	..	..	...
ಹತ್ರಿ ಚಿಲ್ಟ	1	6	..	..	..	..	..	..	..	..	..	..
ಮಿಲ್ವ ಚಿಲ್ಟ	17	10	30	..	21	5	30	..	12	..	9	..
ಬಸೋಲ ಬುಕಣಿ	1	15	10	..	14	..	14	15	5	10	6	8
ಕೊಯತ ಚಿಲ್ಟ	..	..	1	10	3	10	9	..	2	..	1	..
ಜುಮ್ಲಾ	135	15	200	..	200	..	350	..	200	..	150	..

ಹೊಸ ಯಾ ಬೊಂಬಾಯಿ ತರಹೆ ಪ್ರಕಾರ.

ಸಂಬಲ್ ವಿವರ.	ಹುಣಸೂರು ಕೋಠಿ.		ಶ್ರೀರಂಗಪಟ್ಟಣ ಕೋಠಿ.	
	ಟನ್.	ಹ.	ಟನ್.	ಹ.
ವಿಲಾಯಿತಿ ಬಡ್	1	.	..	10
ಜೈನಾ ಬಡ್	20	..	30	
ಪಂಚಂ	28	..	89	..
ಚಿಕ್ಕ ಸಲಾಕಿ, ಘೊಟ್ಟ (ಅವ್ವಲ್)	3	...	5	..
ಡಿಟೋ (ದುಯಂ)	2	..	1	..
ಘಟಿ ಬಚಲ	50	..	30	..
ಜಡಾ (ಅವ್ವಲ್)	25	..	25	..
ಡಿಟೋ (ದುಯಂ)	25	..	12	..
ಡಿಟೋ (ಸಿಯಂ)	20	..	8	..
ಡಿಟೋ (ಚಹರಂ)	7	..	7	..
ಜಜ್ಜು (ಅವ್ವಲ್)	50	...	25	..
ಡಿಟೋ (ದುಯಂ)	40	15	15	..
ಬಗರದದ್ದು	5	..	12	..
ಐರ್ ಬಗರು	5	..	14	..
ಚಿರಿಯಾ	5	..	5	..
ಐರ್ ಚಿಲ್ಟ (ಅವ್ವಲ್)	4	..	6	..
ಡಿಟೋ (ದುಯಂ)	6	..	6	10
ಹತ್ರಿ ಚಿಲ್ಟ	1	..	2	10
ಗರಗಸ ಬುಕಣಿ	1	..	..	10
ಮಿಲ್ಲ ಚಿಲ್ಟ	30	..	50	..
ಬಸೋಲಾ ಬುಕಣಿ	7	.	10	..
ಚೇಗು ಮಿಲ್ವ	..	..	5	..
ಕಳದವರುಷದ ಜಡಾ	113	15	12	15
ಸ್ಪೆಷಲ್ ಕ್ಲಾಸ್	..	10	...	..
ಟೋಟಲ್	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಗೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ಕ್ಯುಂ 15230.—ಆರ್. ಎಫ್. 155—92ನೇ ನಂಬರ್ ರೂಲ್ಸ್‌ಯಾನೆ ನಿಬಂಧನೆಗಳು ಗವರ್ನ್‌ಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಘಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜು ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಯಿತರ ಆಫಿಸರಿಂದ ಆಗಲಿ ಶೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಜಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟ್ಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದಿದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಫ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದಿದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನು ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ್ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದಿದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫಿಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದಿಯನ್ನು 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫಿಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನು ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದಿದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫಿಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದಿದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫಿಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಶೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಯಿಲ್ಲದ ರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ಒಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫಿಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ವುಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಗೆ ಪಾವತಿ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಯಂದಿಗೂ ಯಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟ್ ಖಜಾನೆಯಲ್ಲಿಯೇ ಆಗಲಿ ಖರೀದಿದಾರರು ಇತರ ಯಾವ ಗವರ್ನ್‌ಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನು ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫಿಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫಿಸರವರಿಗೆ ತಿಳಿಸುವದಕ್ಕೋಸ್ಕರ ಹೀಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದಿದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫಿಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರಿ ಹಾಜರಿಯಲ್ಲಿ ಡೆಪ್ಯುಟಿ ಕಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನು ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫಿಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನು ವಹಿಸತಕ್ಕದ್ದು

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ಒಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದಿದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನು ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀ

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲ ವಾದಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7\. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8\. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ವಂದಕ್ಕೆ 8 ಆಣೆಗಳ ಮೇರ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿ ದಾರನಿಗೆ 10 ದಿನಗಳು ವಾಯಿದೇ ನೋಟೀಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣನೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ಉಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದ್ದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್‌ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9\. ಫಾರೆಸ್ಟ್ ಇನ್‌ಚಾರ್ಜ್ ಆಫೀಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ಉಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟು ವಿಷಯ.

10\. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಸೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್‌ಛಾರ್ಜ್ ಫಾರೆಸ್ಟ್ ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11\. ಡೆಪ್ಯುಟಿ ಕಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜ್ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೀ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ಉಂಟಾಗಿರತಕ್ಕದ್ದು.

ನೋಟಿಸ್.

ತಾರೀಖು 15ನೇ ಸೆಪ್ಟಂಬರ್ 1896.

ಸರ್ಕಾರದ ಗಂಧದ ಕೋಠಿಗಳಲ್ಲಿ ಹಾಲಿ ಉಪಯೋಗದಲ್ಲಿರುವ ಪೌನ್ ವಜನೀ ಬಟ್ಟಿಗೆ ಬದಲಾಗಿ ಇಂಗ್ಲಿಷ್ ಸ್ಟಾಂಡರ್ಡ್ ಕರಾರ್‌ವಾಕಾ ಪೌನ್ ವಜನಿ ಬಟ್ಟು 1ಕ್ಕೆ $38\frac{8}{9}$ ರೂಪಾಯಿ ತೂಕವುಳ್ಳ ಬಟ್ಟುಗಳು ಗವರ್ನಮೆಂಟನವರ ಮಂಜೂರಾತೀ ಅನುಸರಿಸಿ, 1897ನೇ ಇಸವಿ ಲಾಗಾಯತು ಯಲ್ಲಾ ಕೋಠಿಗಳಲ್ಲಿಯೂ ಜಾರಿಯಲ್ಲಿ ತರಲ್ಪಡುತ್ತೆ. ಆದರೆ ಚಾಲತಿ 1896ನೇ ಡಿಸೆಂಬರ್ 31ನೇ ತಾರೀಖು ವಳಗೆ, ಖರೀದಿಗೆ ತೆಗದುಕೊಳ್ಳಲ್ಪಡುವ ಗಂಧ ಹಾಲಿ ಜಾರಿಯಲ್ಲಿರುವ ಪೌನ್ ಬಟ್ಟುಗಳ ಪ್ರಕಾರವೇ ವಜನಿಯಿಂದ ಕೊಡಲ್ಪಡುವದು.

ಐಯ್ಯಿಂದಾ ಜಾರಿಯಲ್ಲಿ ಬರತಕ್ಕ ಒಂದೇವಿಧವಾದ ಇಂಗ್ಲಿಷ್ ವಜನೀ ಬಟ್ಟುಗಳು ಅವುಗಳ ಸರಿಯಾದ ತೂಕ ಸಹ ಇದರಡಿ ನಮೂದಿಸಲ್ಪಟ್ಟಿರುತ್ತೆ:—

ಔನ್ಸ್ 1ಕ್ಕೆ $2\frac{3}{7}\frac{1}{2}$ ರೂಪಾಯಿ ತೂಕ	ಹನ್‌ಡ್ರೆಡ್‌ವೆಯಿಟ್ 1ಕ್ಕೆ $4,355\frac{5}{9}$ ರೂಪಾಯಿ ತೂಕ.
ಪೌನ್ 1ಕ್ಕೆ $38\frac{8}{9}$ ಡಿಟ್ಟೋ	ಟನ್ 1ಕ್ಕೆ $87,111\frac{1}{9}$ ಡಿಟ್ಟೋ.

ಸ್ಟಾಂಡರ್ಡ್ ಅಂದರೆ, ನಿಷ್ಕರ್ಷಿಸಲ್ಪಟ್ಟ ಕರಾರ್‌ವಾಕಾ ತ್ರಾಸು, ಬಟ್ಟುಗಳು ಪ್ರತಿ ಕೋಠಿಯಲ್ಲಿ ಹಾಜರಿರುತ್ತವೆ. ಇವುಗಳಿಂದ ಹಾಲಿ ವಜನೀ ಬಗ್ಯೆ ಉಪಯೋಗದಲ್ಲಿರುವ ಬಟ್ಟುಗಳನ್ನ ಅಜಮಾಯಿಷಿ ಮಾಡಿಕೊಳ್ಳಬಹುದಾಗಿರುತ್ತೆ.

ಸಿ. ಅಪ್ಪಯ್ಯ,
ಫಾರ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್.

ಬೆಂಗಳೂರ ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ಬೆಂಗಳೂರು ತಾರೀಖು 4ನೇ ಸೆಪ್ಟಂಬರ 1896.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಾಗುವ ತಖ್ತೇಲಿ ಕಂಡ ತಾರೀಖು ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟುಗಳಲ್ಲಿರುವ ವಣ ಬಿದರುಗಳನ್ನು ಕಡದು ಸಾಗಿಸಿಕೊಳ್ಳತಕ್ಕ ಹಕ್ಕುದಾರಿಯು ಹರಾಜ್ ಮಾಡಲ್ಪಡುತ್ತೆ. ಈ ಹರಾಜು ಡೆಪ್ಯುಟಿ ಕಮಿಷ್ನರ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

ನಂಬರ.	ತಾಲ್ಲೂಕು ಹೆಸರು.	ಫಾರೆಸ್ಟು ಹೆಸರು.	ಹರಾಜ್ ತಾರೀಖು.	ಹರಾಜ್ ಸ್ಥಳ.	ಯಾವ ಆಫೀಸರ ಹರಾಜ್ ಮಾಡುತ್ತಾರೆ.
1	ಆನೇಕಲ್	ರಾಗಿಹಳ್ಳಿ ..	10ನೇ ನವಂಬರ 1896	ಬನ್ನೇರಘಟ್ಟ	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್.
2	ಕಾನಖಾನಹಳ್ಳಿ ..	ಬಿಳಿಕಲ್ ..	14ನೇ ಡಿಟೋ	ಕಾನಖಾನಹಳ್ಳಿ	
3	ಡಿಟೋ ..	ಬಾಣಂತಿಮಾರಿ ..	ಡಿಟೋ	ಡಿಟೋ	
4	ಡಿಟೋ ..	ಮುಗ್ಗೂರು ..	} 18ನೇ ಡಿಟೋ	ಕೋಡಿಹಳ್ಳಿ	
5	ಡಿಟೋ ..	ಚಿಲ್ಲಂದಾಡಿ ..			
6	ಮಳವಳ್ಳಿ ..	ಬಸವನಬೆಟ್ಟ ..	23ನೇ ಡಿಟೋ	ಹಲಗೂರು	
7	ಕಾನಖಾನಹಳ್ಳಿ ..	ಕಬ್ಬಾಳದುರ್ಗ ಮತ್ತು ಭೀಮನಕಂಡಿಬೆಟ್ಟ ..	27ನೇ ಡಿಟೋ	ಹನಿಯೂರು	
8	ಚನ್ನಪಟ್ಣ ..	ತೆಂಗಿನಕಲ್ ..	30ನೇ ಡಿಟೋ	ಚನ್ನಪಟ್ಣ	
9	ಕ್ಲೋಸ್‌ಪೇಟೆ ಸಬ್ ತಾ|| ..	ಹಂದಿಗೊಂದಿ ..	} 2ನೇ ಡಿಸೆಂಬರ 1896	ಕ್ಲೋಸ್‌ಪೇಟೆ	
10	ಡಿಟೋ	ಹುಲ್ತಾರು ...			
11	ಮಾಗಡಿ ..	ಸಾವಂದುರ್ಗ ..	7ನೇ ಡಿಟೋ	ಮಾಗಡಿ	
12	ದೊಡ್ಡಬಳ್ಳಾಪುರ ..	ಹುಲಕಡಿ ಮತ್ತು ವುಜ್ಜನಿ	14ನೇ ಡಿಟೋ	ಜಾಲಗೆರೆ	

2. ದೊಡ್ಡ ಫಾರೆಸ್ಟುಗಳು ಅಂದರೆ, ಬಿಳಿಕಲ್, ಬಸವನಬೆಟ್ಟ, ಮುಗ್ಗೂರು, ಚಿಲಂದಾಡಿ, ಹಂದಿಗೊಂದಿ ಮತ್ತು ಸಾವಂದುರ್ಗ ಯಿವುಗಳನ್ನು ಸ್ವಾಭಾವಿಕವಾದ ಸರಹದ್ದುಗಳಿಂದಲಾಗಲಿ ಅಥವಾ ಬೇರೇ ಗುರ್ತುಗಳಿಂದಲಾಗಲಿ ಅನುಕೂಲವಾದ ಬ್ಲಾಕುಗಳಾಗಿ ವಿಂಗಡಿಸಲ್ಪಡುವುದು.

3. ಹರಾಜ್ ಆದ ವಡನೆ ಹರಾಜ್‌ದಾರನು ಶೇಕಡಾ 25 ರೂಪಾಯಿ ಡಿಪಾಜಿಟ್ ಕೊಡಬೇಕು. ಬಾಕಿ ಹಣ ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಹಾಜರ್ಮಾಡಬೇಕು. ತಪ್ಪಿದರೆ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಹಕ್ಕನ್ನು ಪುನಹ ಹರಾಜುಮಾಡಿ ಮೊದಲನೇ ಹರಾಜ್‌ದಾರನನ್ನು ಲುಕ್ಸಾನಿಗೆ ಗುರಿಮಾಡುತ್ತೆ. 2ನೇ ಹರಾಜಿನಲ್ಲಿ ಜಾಸ್ತಿ ಹುಟ್ಟುವಳಿ ಏನಾದರೂ ಆದರೆ ಅದಕ್ಕೆ ಅವನಿಗೆ ಹಕ್ಕುದಾರಿ ಏನೂ ಯಿರುವದಿಲ್ಲ.

4. ಫಾರೆಸ್ಟಿನಲ್ಲಿ ಅಥವಾ ಫಾರೆಸ್ಟ್ ಪ್ರದೇಶದಲ್ಲಿ ಬೆಂಕಿಏನಾದರೂ ಬಿದ್ದರೆ ಅದಕ್ಕೆ ಹರಾಜ್‌ದಾರನೇ ಜವಾಬ್‌ದಾರನಾಗಿರತಕ್ಕದ್ದು. ಅವನಿಗೆ ಗೊತ್ತುಮಾಡಿದ ಪ್ರದೇಶದಲ್ಲಿ ಕಂಟ್ರಾಕ್ಟುದಾರನೇ ಆಗಲಿ ಅಥವಾ ಅವನ ಕಡೆ ಜನರೇಆಗಲಿ ಏನಾದರೂ ಅಕ್ರಮನಡಿಸಿದರೆ ಫಾರೆಸ್ಟ್ ರೂಲ್ಸ್ ಮೇರೆ ನಡಿಸಲಾಧೀತು.

ಮುದ್ದಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ.

ತಾರೀಖು 28ನೇ ಆಗಸ್ಟ್ 1896.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರ ತಾಲ್ಲೂಕು ಗ್ರಾಮಾಂತರಗಳಲ್ಲಿರುವ ಕುರಂಗದ ಕಲ್ಲು ದುರ್ಮುಖಿ ಸಂವತ್ಸರದ ಬಾಬನ್ನು 1896ನೇ ಇಸವಿ ಜುಲೈ 6ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1896ನೇ ಇಸವಿ ಜೂನ್ 25ನೇ ಮರ್ಕುಮಿನ 25ನೇ ನಂಬರ ಗೆಜೆಟ್ಟಿನಲ್ಲಿ ಪ್ರಕಟಿಸಿ ಮಾಡಿತ್ತಷ್ಟೆ, ಇದನ್ನ ಬದಲಾಯಿಸಿ 1896ನೇ ಇಸವಿ ಅಕ್ಟೋಬರ ತಾರೀಖು 1ರಲ್ಲು ದುಸರಾ ಹರಾಜು ಮಾಡಲ್ಪಡುತ್ತೆ.

(2.) ಈ ಬಾಬತು ಹರಾಜ್ ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರು ಅಥವಾ ಶಿರಸ್ತೇದಾರು ಮಾಡುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಲಾಗಾಯತು ಬಂದು ವರುಷದ ವರಿವಿಗೆ ಇರತಕ್ಕದ್ದು.

(4.) ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ

ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ ಹಾಜರ್ ಮಾಡಬೇಕು. ಬಾಕಿ ಮೊಬಲಗನ್ನ ರೂಪಾಯಿ 1ಕ್ಕೆ 1 ಆಣೆ ಮೇರೆ ಲೋಕಲ್‌ಸೆಸ್ ಸಹಿತ ಹರಾಜು ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನ್ಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀನ್ಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಲಿ ಜಮೀನ್ಗಳನ್ನ ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಶೀಲ್ ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸಕೂಡದು.

ವಿ. ಎನ್. ನರಸುಹ್ಮಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ತಾರೀಖು 10ನೇ ಜುಲೈ 1896.

1896ನೇ ಇಸವಿ ಜುಲೈ ತಾರೀಖು 9ನೇ ರಾತ್ರಿ ದೊಡ್ಡಬಳ್ಳಾಪುರದ ತಾಲ್ಲೂಕು ಶಿರಸ್ತೇದಾರ್ರು ಕ್ರಿಷ್ಣಪ್ಪನವರು ವಾಸಮಾಡುವ ಮನೇ ಪೂರ್ವದಿಕ್ಕಿನ ಗೋಡೆಗೆ ಕನ್ನಾಹಾಕಿ ಕೊಠಡೀಲಿ ಪೆಟ್ಟಿಗೆಗಳಲ್ಲಿ ಇದ್ದ ಮಾಲುಗಳು ಕಳವಾಗಿರುವದಾಗಿ ಬರೆಸಿದ ಮಾಲುಪಟ್ಟಿ.

ಭಂಗಾರದ ನಗಗಳು.

		ರೂ.	ಆ.	ಪೈ.
1.	ಹಸರು ಕಲ್ಲಿಗೆ ಕೆತ್ತಿಶಿಂಗಾರ ಹಾಕಿ ಕಟ್ಟಿದ ಸಣ್ಣ ಶಾವಂತಿಗೆಹುವ್ವು ಸುಮಾರು ಖರೀದಿ ..	25	0	0
2.	ಭಂಗಾರದ ರ್‍ಯಾಗಟೆ ಸುಮಾರು 8 ವರಹ ತೂಕ ಅಪರಂಜಿ ..	56	0	0
3.	ಭಂಗಾರದ ಜಡೆಕುಚ್ಚುಗಳು 3ಕ್ಕೆ ಸುಮಾರು 8 ವರಹ ತೂಕ ಅಪರಂಜಿ, ಪೋಣಿಸಿದ ಧಾರ ಕಿತ್ತು ಹೋಗಿಧೆ	60	0	0
4.	ಚಿನ್ನದ ಸರಟು ಅಡ್ಡಿಕೆ ಕೆಂಪಿನ ಪದಕ ಹಾಕಿಧೆ, ಕೆಂಪು ಯಿಷ್ಟೆಂಬದು ಗೊತ್ತಿಲ್ಲ, ಸುಮಾರು 6ವರಹ ತೂಕ ವಳ್ಳೆಭಂಗಾರ ..	70	0	0
5.	ಕೆಂಪಿನ ಚಂದ್ರಮುರು ಜೊತೆ 1ಕ್ಕೆ ಬೊಂಬಾಯಿ ಮುತ್ತು ಸುತ್ತಿಧೆ, ಕೆಂಪಿನ ಅದದು ಗೊತ್ತಿಲ್ಲ	250	0	0
6.	ಮುತ್ತಿನ ಜಾಲೆಸರಪಣಿ ಅದದು ಗೊತ್ತಿಲ್ಲ ..	10	0	0
7.	ಮುತ್ತಿನ ವಾಲೇಸರಪಣಿ ಜೊತೆ 1ಕ್ಕೆ ಭಂಗಾರದಲ್ಲಿ ಸುತ್ತಿದ ಅದದು ಮುತ್ತು 48 ಯಿರುತ್ತದೆ ಮುತ್ತು ವುದ್ದಿನಕಾಳುಘಾತ್ರ ಯಿರುತ್ತದೆ ..	120	0	0
8.	ಬಿಡಿಮುತ್ತಿನ ಸರಾ 2ಕ್ಕೆ ಅದದು ಗೊತ್ತಿಲ್ಲ, ಹೆಸರುಕಾಳುಘಾತ್ರದ ಮುತ್ತುಗಳು ವಳ್ಳೇದು ..	70	0	0
9.	ಭಂಗಾರದ ಶಾವಂತಿಗೆ ಹುವ್ವು ಚಿಕ್ಕದು, ಒಂದು ವರಹ ತೂಕ ರೋಜಾಹುವ್ವಿನ ಮಾದ್ರಿಬಾಬತು ..	6	0	0
10.	ಬುಗಡಿ ಸರಪಣಿ ವಳ್ಳೆಮುತ್ತಿನ ಬಾಬತು, ಅದದು ಗೊತ್ತಿಲ್ಲ ..	15	0	0
11.	ಏಳು ವಳ್ಳೇಮುತ್ತಿನಿಂದ ಕಳಸಾ ಮಾಡಿರುವ ಬುಗಡಿ ಜೊತೆ 1ಕ್ಕೆ ಕೆಳಗಡೆಗೆ ಸಣ್ಣಮುತ್ತು ಸುತ್ತಿಧೆ	100	0	0
12.	ಭಂಗಾರದ ಯಲಗಾಯಿ ಗಾಜಿನಗ್ರೈರೆ ಅದದು 7ಕ್ಕೆ ಸುಮಾರು 7 ವರಹ ತೂಕ ವಳ್ಳೇ ಭಂಗಾರ ಒಂದು ಹವಳದ ಜಲಿಕಾಯಿ ಸಹ	60	0	0
13.	ವಳ್ಳೇ ಬಿಡಿಮುತ್ತುಗಳು ಸುಮಾರು 50—60 ಹೆಸರು ಕಾಳುಘಾತ್ರದ್ದು ..	120	0	0
14.	ಹಾಲಿನ್ವುಗರಿಗೆ ಎರಡು ವರಹ ತೂಕದ ಭಂಗಾರಕಟ್ಟಿದ್ದು ವಳ್ಳೇಭಂಗಾರ ..	10	0	0
15.	ಕೆಂಪುಕಲ್ಲಿನ ಅರಳೆಲೆ ಸುಮಾರು ಖರೀದಿ ಕೆಂಪು ಅದದು ಗೊತ್ತಿಲ್ಲ ..	20	0	0
16.	ಮಕ್ಕಳಿಗೆ ಹಾಕುವ ಬಿಳೇ ಕಲ್ಲಿನ ಶಾವಂತಿಗೆ ಹುವ್ವು	2	0	0

		ರೂ.	ಆ.	ಪೈ.
17.	ಚಿನ್ನದ ಗುಂಡುಬಟ್ಟು ವಳ್ಳೀಚಿನ್ನ ಸುಮಾರು ಒಂದು ವರಹ ತೂಕ	7	0	0
18.	ಭಂಗಾರದ ಕೈಸರಪಣಿ ಭಂಗಾರ ಸುಮಾರು 22 ವರಹ ತೂಕ ರುಳಿವಾಳ್ಳೀ ಬಾಬತು	140	0	0
19.	ಭಂಗಾರದ ಅಸಲಿ ಚೊಕ್ಕ ಭಂಗಾರ ಸುಮಾರು ಒಂದು ಪಾವುಳ್ಳದ್ದು	140	0	0
20.	ಭಂಗಾರದ ನಾಗರ ಗೆಜ್ಜೇ ಸುತ್ತಿರುವದು, ಸುಮಾರು 8 ವರಹ ತೂಕ	56	0	0
21.	ಭಂಗಾರದ ಬಟ್ಟು ಒಂದು ಸುಮಾರು ತೂಕ ಬಂಣ ಗೊತ್ತಿಲ್ಲ	1	0	0
22.	ಕೆಂಪಿನ ಮೂಗಬಟ್ಟು ವಂದಕ್ಕೆ ಸುಮಾರು ಖರೀದಿ ತೊಗರಿಬ್ಯಾಳೆಅಗಲ ಕೆಂಪು	15	0	0
23.	ಭಂಗಾರದ ಜಡೇಕುಚ್ಚಿನ ಮೇಲೆ ಹಾಕತಕ್ಕಗುಂಡು 2 ಗೊಣಸು 2ಕ್ಕೆಸುಮಾರು 2½ ವರಹ ತೂಕ	10	0	0
24.	ಭಂಗಾರದ ಸಂಣ ಶಾವಂತಿಗೆ ಹುವ್ವು ಸುಮಾರು 2 ವರಹ ತೂಕ ವಳ್ಳೀಭಂಗಾರ	15	0	0
25.	ಇಕ್ಕೇರಿ ವರಹ 3ರಕ್ಕೆ	21	0	0
26.	ನಗದು ರೂಪಾಯಿಗಳು ಒಂದು ಬಟ್ಟೇಲಿಗಂಟುಕಟ್ಟಿಹಾಕಿತ್ತು	20	0	0
27.	ಭಂಗಾರದ ಪೆಂಚಿ ಬಾಬತು ಬಿಡಿ ಪೆಂಚಿಗಳು 8ಕ್ಕೆ ಸುಮಾರು ಖರೀದಿ ತೂಕ ಗೊತ್ತಿಲ್ಲ	8	0	0
28.	ದೊಡ್ಡ ಮುತ್ತುಗಳು 2ಕ್ಕೆ ಮುತ್ತು ಅವರೇಕಾಳು ಘಾತ್ರದ ಬಾಬತು	100	0	0
29.	ಕಾಗದದ ಭರಣೀಲಿಹಾಕಿದ್ದಬಾಕೀ ಮುತ್ತುಗಳು ವಳ್ಳೀದು ಸುಮಾರು 50ಕ್ಕೆವುದ್ದಿನ ಕಾಳು ಘಾತ್ರದ ಬಾಬತು	10	0	0
30.	ಹತ್ತಕಡಕಿನಗೂಡು ಚಿನ್ನದ ಬಾಬತು ಸುಮಾರು 2½ ವರಹ ತೂಕದ್ದು ತಿರವೂ ಮರಸುತ್ತೂ ಇಲ್ಲದ್ದು	20	0	0
31.	ಬಿಡಿ ಸಾಗಿದ್ದ ನೆಲ್ಲೀಕಾಯಿ ಮಾಟದ ಭಂಗಾರದ ಗುಂಡು 2 ತಾಳೀ ಗುಂಡು 1ಕ್ಕೆ ತೂಕ ಗೊತ್ತಿಲ್ಲ ಸುಮಾರು ಖರೀದಿ	12	0	0
32.	ಕಂಠೀಸರಕ್ಕೆ ಹಾಕಿದ್ದ ಚಿನ್ನದಕೊಕ್ಕೆ ಸರಿಗೆ ಸಹ ಸುಮಾರು 2½ ವರಹ ತೂಕಕ್ಕೆ	14	0	0
33.	ಪಂಚರತ್ನದ ವುಂಗರ 1ಕ್ಕೆ	70	0	0
34.	ಚಿನ್ನದ ಗೂಡಿನ ವಜ್ರದವುಂಗ್ರ 1ಕ್ಕೆ ಅವರೇ ಬ್ಯಾಳೇ ಅಗಲಕ್ಕೆಸ್ವಲ್ಪ ಕಮ್ಮಿಯಾದ ವಜ್ರದ ಹಲಿಗೆ ವುಳ್ಳದ್ದಕ್ಕೆ	110	0	0
35.	ಚಿನ್ನದ ಗೂಡಿನ ಕೆಂಪಿನವುಂಗ್ರ 1ಕ್ಕೆ ಅವರೇಬ್ಯಾಳೇ ಅಗಲ ಕೆಂಪಿನ ಬಾಬತು	70	0	0
36.	ಚಿನ್ನದ ಚೂರುಗಳು ಸುಮಾರು 5 ವರಹ ತೂಕದ ಬಾಬತು	35	0	0
37.	ನಗದು ರೂಪಾಯಿಗಳು	159	0	0
38.	ನೂರು ರೂಪಾಯಿಗಳ ನೋಟು 3ಕ್ಕೆ ಮದ್ರಾಸು ಸರ್ಕಲ್ ಬಾಬತು ನಂಬರುಗಳು ಗೊತ್ತಿಲ್ಲ	300	0	0
39.	~~ಪಚ್ಚೇವುಂಗ್ರ 1ಕ್ಕೆ ತೊಗರೀ ಬ್ಯಾಳೇ ಅಗಲದ ಪಚ್ಚೇಭಂಗಾರದ ಗೂಡಿನ ಬಾಬತು~~	~~50~~	~~0~~	~~0~~
40.	ಚಿನ್ನದ ಸಂಣ ಚೆಂಡವಾಲೆ ದೇವರ ಬಾಬತು	3	0	0
41.	ಭಂಗಾರದ ವಾಕು ಜೊತೆ 1ಕ್ಕೆ ಸುಮಾರು 3 ವರಹ ತೂಕ ವಳ್ಳೀ ಭಂಗಾರ	21	0	0
42.	ನಾಲ್ಕು ಮುತ್ತುಗಳು ಹಾಕಿದ ಕಡಕು ಜೊತೆ	10	0	0
43.	ಹತ್ತಕಡಕಿನ ವಜ್ರದ ಹಲಿಗೆ ಜೊತೆ 1ಕ್ಕೆ ವಜ್ರಗಳು ಅವರೇ ಬ್ಯಾಳೇ ಅಗಲಕ್ಕೆಸ್ವಲ್ಪಕಮ್ಮಿಯಾಗಿತ್ತು	50	0	0
44.	ಬಿಡಿ ಯಮುನಾಕಲ್ಲು 2ಕ್ಕೆ ಸಿಹ್ಮದ ದುಡ್ಡಿನ ದುಡ್ಡಾಣಿ ಅಗಲ ಯಿದದ್ದು	2	0	0
45.	ಚೌಕಳೀ ಯಮುನಾಕಲ್ಲು 1ಕ್ಕೆ ಯಿದರ ಮೇಲೆ ಲಕ್ಷ್ಮೀನರಸಿಹ್ಮಯಂತ ಬಾಳಬಂದು ಅಕ್ಷರದಲ್ಲಿ ಕೆತ್ತಿ ಸುತ್ತಲೂ ಬೇಲ್ ಯಿರುತ್ತದೆ	5	0	0
46.	ಭಂಗಾರದ ವುಂಗರ 1ಕ್ಕೆ ಬೆಳ್ಳೀ ಬಿಲ್ಲೇಲಿ ಲಕ್ಷ್ಮೀ ವೆಂಕಟೇಶಪ್ರಸನ್ನಾಯಂತ ಬಾಳಬಂದು ಅಕ್ಷರದಲ್ಲಿ ಕೆತ್ತಿದೆ, ಭಂಗಾರ ಸುಮಾರು 3½ ವರಹ ತೂಕ ಚೊಕ್ಕ ಭಂಗಾರ	30	0	0
		1,588	0	0

ಬೆಳ್ಳೀ ಬಾಬತು ಮಾಲುಗಳು.

47.	ಬೆಳ್ಳಿ ಸಂಣದೀಪದ ಕಂಭ 1ಕ್ಕೆ ಸುಮಾರು 2 ರೂಪಾಯಿ ತೂಕದ್ದು.	2	0	0
48.	ಬೆಳ್ಳಿ ಸಂಣಘಾಲಿ ಹೂಜೇತರಹಾದ್ದು ಸುಮಾರು 3 ರೂಪಾಯಿ ತೂಕದ್ದು.	3	0	0
49.	ಬೆಳ್ಳಿ ಘಡಿಯಾರದ ಸರಪಣಿ 1ಕ್ಕೆ ಸುಮಾರು ಖರೀದಿ	27	0	0
50.	ಬೆಳ್ಳಿ ನಶ್ಯದ ಡಬ್ಬಿ 1ಕ್ಕೆ ಸುಮಾರು 3 ರೂಪಾಯಿ ತೂಕ.	5	0	0
51.	ಬೆಳ್ಳಿ ತುಂಡುಗಳು 2ಕ್ಕೆ ಸುಮಾರು 10—12 ರೂಪಾಯಿ ತೂಕ	12	0	0
52.	ಬೆಳ್ಳಿ ತಂಬಿಗೆ 35 ರೂಪಾಯಿ ತೂಕ ಬೇಲೂರು ತರಹಾದ್ದು	35	0	0
53.	ಬೆಳ್ಳಿ ಗುಂಡುತಟ್ಟೆ 25 ರೂಪಾಯಿ ತೂಕದ್ದು	25	0	0
54.	ಬೆಳ್ಳಿ ಬಟ್ಲು 3ಕ್ಕೆ ದೊಡ್ಡದು 1 ಅದಕ್ಕೆ ಸ್ವಲ್ಪ ಸಂಣದು 1 ಅದಕ್ಕೆ ಸಂಣದು 1ಕ್ಕೆ ಸಹ ಸುಮಾರು 26 ರೂಪಾಯಿ ತೂಕ	26	0	0
55.	ಬೆಳ್ಳಿ ಗೆಜ್ಜೆ ಸುತ್ತಿದ ಸರಪಣಿ ಅದರ ಕಡ್ಡೀ ಸಹ ಸುಮಾರು 7 ರೂಪಾಯಿ ತೂಕ	7	0	0
56.	ಬೆಳ್ಳಿ ವುದ್ಧರಣೆ ಸುಮಾರು 2 ರೂಪಾಯಿ ತೂಕದ್ದು	2	0	0
57.	ಬೆಳ್ಳಿ ಪಂಚಪಾತ್ರೆ 14 ರೂಪಾಯಿ ತೂಕದ್ದು	14	0	0
58.	ಜೋಂಬಾಯಿ ಬಳೆ ವಳಕ್ಕೆ ಹಾಕಿದ್ದ ಬೆಳ್ಳಿ ತಿರಪು 2ಕ್ಕೆ ಸುಮಾರು 1 ರೂಪಾಯಿ ತೂಕ	1	0	0
59.	ಬೆಳ್ಳಿ ಕಡಕಿನ ಗುಂಡಿನ ಜೊತೆ 1ಕ್ಕೆ	1	0	0
		160	0	0

ಚಿಲ್ಲರೆ ಸಾಮಾನುಗಳು.

		ರೂ.	ಆ.	ಪೈ.
60.	ಮುದ್ದಿನಕಾಳು ಘಾತ್ರದ ಹವಳದ ಸರ ಕುತ್ತಿಗ್ಗೆ ಹಾಕುವದು ಹಿತ್ತಾಳಿ ಸರಿಗೇಲಿ ಸುತ್ತಿಧೆ ಸುಮಾರು ಖರೀದಿ ಅದದು ಗೊತ್ತಿಲ್ಲ	2	0	0
61.	ಹಸರುಕಲ್ಲು ಹಾಕಿದ ಗಿಲ್ಟಿನ ಜಳತುಂಬು ಜೊತೆ 1ಕ್ಕೆ	2	0	0
62.	ಮದ್ರಾಸ್ ಬುಗಡಿ ಜೊತೆ 1ಕ್ಕೆ ಬೊಂಬಾಯಿ ಮುತ್ತು ಸುತ್ತಿಧೆ	7	0	0
63.	ಕೈಗೆ ಕಟ್ಟುವ ಹವಳ ಮಳ್ಳೇ ಬೆಳ್ಳೀಸರಿಗೇಲಿ ಸುತ್ತಿರುವದು ಸಣ್ಣ ಮುದ್ದಿನಕಾಳು ಘಾತ್ರದ ಹವಳಗಳು	2	0	0
64.	ಗಿಲ್ಟಿನ ಬಾಬತು ಕಂಠಿ ಗುಂಡುಗಳು 700ಕ್ಕೆ	30	0	0
65.	ಸಣ್ಣ ತುಳಶೀಮಣಿ ಸರ ಭಂಗಾರದ ಸರಿಗೇಲಿ ಸುತ್ತಿದೆ ಮುತ್ತು ಪಚ್ಚೆ ಕೆಂಪು ವಗೈರೆ ಹಾಕಿದ್ದು ಅದದು ಯಾವದೂ ಗೊತ್ತಿಲ್ಲ	60	0	0
66.	ಬಿಳೀ ಹರಳಿನದು, ಕೆಂಪು ಹರಳಿನದು, ಕೆಂಪು ಬಿಳಿ ಹರಳಿನದು, ಹಸರು ಹರಳಿನದು, ಮುಂಗ್ರಗಳು ಬಿಲೂಚೀ ಜನಗಳು ಮಾರುವದಕ್ಕೆ ತಂದದ್ದು	5	0	0
		108	10	0

ಬಟ್ಟೆಗಳು.

		ರೂ.	ಆ.	ಪೈ.
67.	ಬೆಂಗಳೂರು ಕಲಾಬತ್ತು ಅಂಚಿನ ಬುಗಡಿ ಶೀರೆ 1ಕ್ಕೆ ಮುಟ್ಟದ್ದು ಹೊಸದು ಪೈಟನೆ ಬಾಬತು ...	100	0	0
68.	ರೇಷ್ಮೆಗೂಡಿನ ಶಾಲ್ಯದ ಪಂಚೆ ಜೊತೆ 1ಕ್ಕೆ ಅಗಸನಿಗೆ ಹಾಕಿದ್ದು	14	0	0
69.	ಮದ್ರಾಸ್ ಕೆಂಪಿನ ಮಡಿಶೀರೆ 1ಕ್ಕೆ	3	0	0
70.	ರೇಷ್ಮೆಸಾಲಾರಿ ಬುಗಡಿ ಅಂಚಿನ ಕಂಚಿ ಶೀರೆ 1ಕ್ಕೆ ಹೊಸದು	18	0	0
71.	ರೇಷ್ಮೆ ಮುಂಗಿ ಕೊರ್ನಾಡು ಹೊಸ ಶೀರೆ 1ಕ್ಕೆ	18	0	0
72.	ಸಾಲಾರಿ ಕೊರ್ನಾಡು ಹೊಸ ಶೀರೆ 1ಕ್ಕೆ	12	0	0
73.	ಚೌಕಳಿ ನೂಲಂಚಿನ ಕೊರನಾಡು ಶೀರೆ 1ಕ್ಕೆ ಹೊಸದು	2	0	0
74.	ಬನಾರಸ್ ಬಾಬತು ಹೊಲದ ಕುಬಸ ಚಿನಡಿ ಬುಟ್ಟೆ ಇರುವದು ಕೆಂಪು ಚಿನಡಿ ಬಾಬತು ಕಲಾಬತ್ತು ಅಂಚು ಇರುತ್ತದೆ	10	0	0
75.	ಕೆಂಪು ಅಂಚಿನ ಬಿಳೀಗೆರೆ ಬಾಬತು ದೇಶದ ಖಣಕ್ಕೆ	1	8	0
76.	ಹಳದಿ ದಮಾಸ್ ಹೊಲದ ಕುಪಸ 1ಕ್ಕೆ	3	0	0
77.	ಗಂಟಿನಲ್ಲಿ ಕಟ್ಟಿದ್ದ ಬಾಕಿ ಕುಪಸಗಳು 20ಕ್ಕೆ ತಪ್ಶೀಲ್ ಗೊತ್ತಿಲ್ಲ	30	0	0
78.	ಬಿಳೆ ಫ್ಲಾನಲ್ ಕುಪಸ 1ಕ್ಕೆ	1	0	0
79.	ಬಿಳೆ ಟುವಲ್ 1ಕ್ಕೆ	0	6	0
80.	ಬಿಳೆ ಮಗ್ಗಲು ಹಾಸಿಗೆಗಳು 6ಕ್ಕೆ ವಗದ್ದು	4	8	0
81.	ಬಿಳೆ ಷರಾಯಿ 2ಕ್ಕೆ	5	0	0
82.	ಬಿಳೆ ದುಪ್ಪಟಿಗಳು 2ಕ್ಕೆ ವಗದ್ದು	6	0	0
83.	ಕರೀಅಂಚಿನ ಪಂಚೆಗಳು 4ಕ್ಕೆ ವಗದ್ದು.	6	0	0
84.	ಬಿಳೆ ಮಲ್ಲು ಪಂಚೆ 4ಕ್ಕೆ ವಗದ್ದು	4	0	0
85.	ಬಿಳೆ ಕೋಟುಗಳು 3ಕ್ಕೆ ವಗದ್ದು	6	0	0
86.	ಹೊದಿಯುವ ಸಣ್ಣ ಅಂಚಿನ ಪಂಚೆ 2ಕ್ಕೆ ವಗದ್ದು	4	0	0
87.	ಶಾಲ್ಯದ ದೊಡ್ಡ ಅಂಚಿನ ಪಂಚೆ ವಗದ್ದು	6	0	0
88.	ಬಿಳೆ ಕಬಜ 4ಕ್ಕೆ ವಗದ್ದು	4	0	0
89.	ಬಿಳೆ ಕೊಳ್ಳೇಗಾಲದ ಕಲಾಬತ್ತಿನ ರುಮಾಲು ನಾಲ್ಕು ಕಡೆ ಕೋರು ಇಧೆ ಪೈಕಿ ಯರಡುಕಡೆ ನೂಲು ಬರೀಸರಿಗೆ ಬುಗಡಿ ಇಧೆ ಇನ್ನೂ ಯರಡು ಕಡೆ ಕೋರುಗೂಡುಗಳು ಮತ್ತು ಬುಗಡಿ ವುಳ್ಳದ್ದು 7 ಮಳದ್ದು ಹೊಸದು ಮಂದುವಗೆ ಆಗಿಧೆ ಕೊರು ಯರಡು ಬೆಟ್ಟಗಲ ಇರುತ್ತದೆ. ..	40	0	0
90.	ರೇಷ್ಮೆ ಬಾಬತು ಅಂಚು ಇಲ್ಲದ ಗದ್ದೇಮಡಿ ರುಮಾಲ್ 1ಕ್ಕೆ	27	0	0
91.	ಮಧುರೆ ಕಲಾಬತ್ತು ಅಂಚಿನ ರುಮಾಲ್ 1ಕ್ಕೆ ..	35	0	0
92.	ಕರೀ ಕೊಳ್ಳೇಗಾಲದ ರುಮಾಲ್ 1ಕ್ಕೆ ನಾಲ್ಕು ಕಡೆ ಜರತಾರೀ ಗೂಡಿನ ಕೋರು ಇಧೆ ಯರಡು ಬೆಟ್ಟಗಲ ಅಂಚು	30	0	0
93.	ಬಿಳ ಮಲ್ಲು ರುಮಾಲ್ 2ಕ್ಕೆ	4	0	0
94.	ದಿಂಬಿನ ಬಿಳೇಚೀಲ 4ಕ್ಕೆ	2	0	0
95.	ಕೆಂಪು ಪೈಟಣಿ ಶೀರೆ ಕಲಾಬತ್ತು ಅಂಚಿನ ಶೆರಗುವುಳ್ಳದ್ದು, ಮುಟ್ಟದ್ದು	50	0	0
96.	ಯಂಟುಮಳದ ಶಾಯಿಗಂಬಿ ಕಲಾಬತ್ತು ಅಂಚಿನ ಪಂಚೆ ಹೊದ್ದದ್ದು 1ಕ್ಕೆ	6	0	0
97.	ಪಂಚೆ 8 ಮಳದ್ದು ವಗದ್ದು ಜೊತೆ 1ಕ್ಕೆ	2	0	0
	ಜುಮ್ಲ	3,310	6	0

ಮೇಲ್ಕಂಡ ಮಾಲುಗಳ ಕಿಮ್ಮತ್ತು ಮೊತ್ತ ಗೊತ್ತಿಲ್ಲ ಬಾಯಿಜ್ಞಾಪಕದ ಮೇಲೆ ಬರಸಿ ಇರುತ್ತೆ, ಕರಾರುವಾಕಾ ಜ್ಞಾಪಕ ಸಾಲದ್ದು, ಮೇಲ್ಕಂಡ ಮಾಲುಗಳು ಶಿವಾಯಿ ಇನ್ನೇನು ಹೋಗಿರುತ್ತದೆಂಬದು ಈಗ ಜ್ಞಾಪಕದಲ್ಲಿ ಇಲ್ಲಾ.

ದೊಡ್ಡಬಳ್ಳಾಪುರ ತಾಲ್ಲೂಕು ತೂಬಗೆರೆ ಸ್ಪೇಷ್ಪ ಸರಹದ್ದು ಹಾಡೋನಹಳ್ಳಿಯಲ್ಲಿ ಇದ್ದ ಹನುಮಿ ಯೆಂಬುವಳ ಚಹರೇಪಟ್ಟಿ.

ತಾರೀಖು 24ನೇ ಆಗಸ್ಟ್ 1896.

ಹೆಸರು ಹನುಮಿ, ಜಾತಿ ಮರಸುವಕ್ಕಲಿಗರು, ವಯಸ್ಸು 30—35 ವರುಷ, ಎಣಗೆಂಪು, ಗುಂಡು ಮುಖ, ಹಣೇಮೇಲೆ
(1) ಹಚ್ಚೆ ಇಧೆ. ನೂಲಿನ ಕರೀಸೀರೆ, ಬಿಳೀಸೀರೆ ವುಡತಕ್ಕವಳು, ಇವಳಿಗೆ ಹಾಡೋನಹಳ್ಳಿ ಹನುಮಂತಣ್ಣನ ಮಗ ಮರಿಯಪ್ಪ ಖಾಸಾ
ಅಂಣನಾಗಬೇಕು. ಇವಳನ್ನ ಕಣಿವೇ ಕೆಳಗೆ ಬುಲ್ಲಹಳ್ಳಿಗೆ ಮದುವೆ ಆಗಿತ್ತು. ಇವಳ ಗಂಡನ ಹೆಸರು ಸುಬ್ಬಣ್ಣ, ಇವ ಫವತಿಯಾಗಿ
ಧಾನೆ, ಜಾತಿ ಕೆಟ್ಟು ಹೋಗಿಧಾಳೆ, ಈಗ 6 ತಿಂಗಳ ಕೆಳಗೆ ಹಾಡೋನಹಳ್ಳಿಗೆ ಬಂದು ಹೋದವಳು ಪತ್ತೆ ಇಲ್ಲವೆಂದು ಹೇಳುತ್ತಾರೆ.

ಬಿ. ಕುಪ್ಪಸ್ವಾಮಿನಾಯಡು,
ಫರ್ ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಬಾಗೇಪಲ್ಲಿ ತಾಲ್ಲೂಕು ಕಚೇರಿಯಿಂದ.

ಇಸ್ತಿಹಾರ್‌ನಾಮೆ.

ತಾರೀಖು 18ನೇ ಆಗಸ್ಟ್ 1896.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಗ್ರಾಮಾಂತ್ರಗಳಲ್ಲಿ ಯಿರುವ ಕುರಂಗದಕಲ್ಲು 96—97ನೇ ದುರ್ಮುಖಿ ಸಂವತ್ಸರಕ್ಕೆ ದಾಖಲಾಗತಕ್ಕದ್ದನ್ನ 1896ನೇ ಇಸವಿ　ಮಾಹೆ　ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆ.

2. ಈ ಹರಾಜು ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರ್ರವರು ಮಾಡಿಸುತ್ತಾರೆ.

3. ಇಜಾರೆಯು ಪ್ರತಿ ಸಾಲ್ ಜುಲೈ ಲಾಗಾಯತು ಬಂದು ವರ್ಷದ ವರೆಗೆ ಯಿರತಕ್ಕದ್ದು.

4. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಾಂತಕ್ಕೋಸ್ಕರ ಸವಾಲ್ಮಾಡುತ್ತಾರೋ ಅಥವಾ ಯಿತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಿ ಅವರಿಂದ ಪಡಕೊಂಡುಇರುವ ಅಧಿಕಾರಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರನು ಹರಾಜುಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25ರೂ. ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ರೂಪಾಯಿ ಬಂದಕ್ಕೆ ವಂದಾಣೆ ಪ್ರಕಾರ ಆಗುವ ಲೋಕಲ್ ಸೆಸ್ಸ್ ಸಹಿತ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಫಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗು ಫಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ದುಸರಾ ಹರಾಜ್ ಮಾಡಲ್ಪಟ್ಟು ಅದರಿಂದ ವುಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

6. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾಯ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಲಿ ಅಥವಾ ಇಜಾರೆದಾರರಿಗೇ ವಿನಹ ಇತರರಿಗೆ ಮಾರುವದಕ್ಕಾಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

7. ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಕಾವಲ್ ಇಜಾರೆದಾರರ ಹಕ್ಕಿಗೆ ಆಟಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರ್ಕಾರದವರು ದರಖಾಸ್ತುಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುವದಿಲ್ಲ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರನು ಅಗಿಯಕೂಡದು. ಬಂದು ವೇಳೆ ಅಗದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಮಾಡಿಸಬೇಕು.

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ತುಮಕೂರ್ ಡಿಸ್ಟ್ರಿಕ್ಟು.

ತಾರೀಖು 31ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸ್ತ 1896–97ನೇ ಸಾಲಿಗೆ ಮದ್ದಗಿರಿ ತಾಲ್ಲೂಕು ಮತ್ತು ಕೊರ್ಟಗೆರೆ ಸಬ್ ತಾಲ್ಲೂಕಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಆಕಾರ ಕಂಡ ಫಡ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲ್‌ಗಳಲ್ಲಿಯೂ ದೊರೆಯುವ ಪಸಾರೆ ಜಿನಸಿಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನ 4—8—96 ಮತ್ತು 5—8—96ನೇ ತಾರೀಖುಗಳಲ್ಲಿ ಹರಾಜು ಮಾಡಿಸಲಾಗಿ ಕಂಸವಾಲ್ ಆದ್ದರಿಂದ ಸದರೀ ಹಕ್ಕುದಾರಿಯನ್ನ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಪುನಹ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾನ್ಹ 11 ಘಂಟೆಗೆ ಷುರುವಾಗುತ್ತೆ, ಹರಾಜು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ

ಮಂಜೂರಾತಿಗೆ ಒಳಪಟ್ಟಿರುತ್ತೆ. ಮದ್ದಗಿರಿ ತಾರೀಖು 29—9—96 ಮದ್ದಗಿರಿ, ಕೊರ್ಟಗೆರೆ ತಾರೀಖು 30—9—96 ಕೊರ್ಟಗೆರೆ.

2. ಚಡದರಖಾಸ್ತುದಾರನು ಹರಾಜು ಕೈದಾದ ಕೂಡ್ಲೆ ಹರಾಜ್ ಮೊಬಲಗು ಪ್ರತಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ಒಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜ್ ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ಸ್ ವಸೂಲ್ ಮಾಡಲ್ಪಡುವದು.

3. ಕ್ಲಿಪ್ತಕಾಲದ ಒಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಠೇವಣಿ ಇಟ್ಟ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ಒಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಫಾಯಿದೆ ಭಾಗ, ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಕೂಡದು.

5. ಗ್ರಾಮನು ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ತುಮಕೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟಮೆಂಟ್.

1896ನೇ ಇಸವಿ ಆಗಸ್ಟ್ ತಾರೀಖು 29ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಪೋದಲ್ಲಿ ಮತ್ತು ಗುಬ್ಬೀ ತಾಲ್ಲೂಕ್ ಚನ್ನಶೆಟ್ಟಿಹಳ್ಳಿ ಪ್ಲಾಂಟೇಷನಿನಲ್ಲಿರುವ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನ 1896ನೇ ಇಸವಿ ಸೆಪ್ಟಂಬರ್ ತಾರೀಖು 22ರಲ್ಲು ತುಮಕೂರು ಡಿಪೋದಲ್ಲಿಯೂ ತಾರೀಖು 24ರಲ್ಲು ಚನ್ನಶೆಟ್ಟಿಹಳ್ಳಿ ಪ್ಲಾಂಟೇಷನಿನಲ್ಲಿಯೂ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಪೊ.

ತರಹೆ.	ಸಂಖ್ಯೆ.	ಸಲೆ ಅಡಿ.	ಸಲೆ ಅಂಗುಲ.	ಸಲೆ ಸೆಂಟ್ಸ್.
ಕ್ಯಾಸರೀನ ಮರಗಳು ..	249	568	6	3
ಹಳೇ ಬಿದರುಗಳು ..	544			

ಗುಬ್ಬೀ ತಾಲ್ಲೂಕು ಚನ್ನಶೆಟ್ಟಿಹಳ್ಳಿ ಪ್ಲಾಂಟೇಷನ್.

ತರಹೆ.	ಸಂಖ್ಯೆ.	ಸಲೆ ಅಡಿ.	ಸಲೆ ಅಂಗುಲ.	ಸಲೆ ಸೆಂಟ್ಸ್.
ಕ್ಯಾಸರೀನ ಮರಗಳು ..	1190			

ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಷರತ್ತುಗಳು—ಹರಾಜ್ ಕೈದಾದ ಕೂಡ್ಲೆ ಕಾಲುಹಿಸ್ಸೇ ಮೊಬಲಗು ಠೇವಣಿ ತರೀಕ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ಹರಾಜ್ ತಾರೀಖು ಲಾಗಾಯತು 1 ವಾರದವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೆ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜ್‌ದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳೆಲ್ಲಾ ಹರಾಜು ತಾರೀಖು ಲಾಗಾಯತು 10 ದಿವಸದವಳಗಾಗಿ ಸಾಗಿಸಿಕೊಳ್ಳಬೇಕು. ಇತರ ತಪ್ಸೀಲುಗಳಿಗೆ 1895ನೇ ಇಸವಿ ಏಪ್ರೆಲ್ 25ನೇ ಮರ್ಕುಂ ಮೈಸೂರ್ ಗೆಜೆಟ್ 1ನೇ ಭಾಗದಲ್ಲಿ ಛಾಯಿಷಾಗಿರುವ 1895ನೇ ಇಸವಿ ಮಾರ್ಚಿ 15ನೇ ಮರ್ಕುಂ 15229ನೇ ನಂಬರು ಗವರ್ನಮೆಂಟ್ ನೋಟಿಫಿಕೇಷನ್ ನೋಡಿ.

ತಾರೀಖು 9ನೇ ಸೆಪ್ಟಂಬರ್ 1896ನೇ ಇಸವಿ.

ತುಮಕೂರು ಡಿಸ್ಟ್ರಿಕ್ಟ್ ಸ್ಟೇಟ್ ಫಾರೆಸ್ಟುಗಳ ಬಾಬತು ಕಲ್ಲುಹುವ್ವು ಮತ್ತು ಅರಗು ಜಮಾಯಿಸಿಕೊಳ್ಳತಕ್ಕ ಹಕ್ಕನ್ನ 1896ನೇ ಇಸವಿ ಸೆಪ್ಟಂಬರ್ 4ನೇ ತಾರೀಖಿನಲ್ಲಿ ಹರಾಜು ಮಾಡಲಿಲ್ಲವಾದ ಪ್ರಯುಕ್ತ ಪುನಹ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೇಲೆ ನಮೂದಿಸಲ್ಪಟ್ಟಿರುವ ಜಿನಸಿಗಳ ಹರಾಜನ್ನು 1896ನೇ ಇಸವಿ ಆಗಸ್ಟ್ 15ನೇ ಮರ್ಕುಂ ಮೈಸೂರ ಗೆಜೆಟ್ 2ನೇ ಭಾಗ 753, 754ನೇ ಪುಟಗಳಲ್ಲಿ ಛಾಪಿಸಿರುವ ಷರತ್ತುಗಳನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಲಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಸಬ್ ಅಸಿಸ್ಟೆಂಟ್ ಕನ್ಸರ್ವೇಟರವರಿಂದಲಾಗಲಿ 1896ನೇ ಇಸವಿ ಅಕ್ಟೋಬರ್ ತಾರೀಖು 3ನೇ ದಿವಿ 12 ಘಂಟೆಯಲ್ಲಿ ಬಹಿರಂಗವಾಗಿ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿನಲ್ಲಿ ಹರಾಜ್ ಮಾಡಲ್ಪಡುತ್ತೆ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

3 7 7

ಫ್ರೇಂಚ್‌ರಾಕ್ಸ್ ಸಬ್ ಡಿವಿಜನ್.

ಸಾಗುವಳಿಗೋಸ್ಕರ ಜಮೀನು ಹಿಡುವಳಿ ಹರಾಜು.

ತಾರೀಖು 1ನೇ ಆಗಸ್ಟ್ 1896.

ಇಸಿ ಹಾರ್.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನು ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

ಹರಾಜು ಕೈದಾದಕೂಡಲೆ ಚಡಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜು ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನು ಪಾವತಿ ಮಾಡಬೇಕು.

4. ಪೂರಾ ಹರಾಜು ಮೊಬಲಗನ್ನು ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜು ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನು ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನು ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುವದು.

5. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜು ಡೆಪ್ಯುಟಿ ಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದಪಕ್ಷದಲ್ಲಿ ಅಂಥಾ ಹರಾಜನ್ನು ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನು (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲಾ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನು. ಸರ್ವೆ ನಂಬರ್.	ಸ್ವತ್ತಿನ ವಿವರ. ಜಮೀನು. ಬಾಬು ಖುಷ್ಕಿ, ತರೀ, ಬಾಗಾಯತು ಅಥವಾ ಕಾಫಿ.	ಸ್ವತ್ತಿನ ವಿವರ. ಜಮೀನು. ವಿಸ್ತೀರ್ಣ.	ಸ್ವತ್ತಿನ ವಿವರ. ಜಮೀನು. ಆಕಾರ.	ಸ್ವತ್ತಿನ ವಿವರ. ಮರಗಳು ಭಾವಿಗಳು ವಗೈರೆ. ಕೂಡಿದ ಮಟ್ಟಿಗೂ ಕರಾರ್ವಾಕಾ ತಪ್ಸೀಲ್.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ	ಚಿಕ್ಕ ತರಲಿ ಗ್ರಾಮ	138	ತರೀ ಜಮೀನು	1—15	8—0—0		ಜಮೀನು ಬಳಿ 1896ನೇ ಇಸವಿ ಅಕ್ಟೋಬರ್ 30ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೇ ತಾಲ್ಲೂಕು ಅಮಲ್‌ದಾರ್ ಅಥವಾ ಫ್ರೇಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸರವರು.	
			139		1— 0	5—8—0				
					2—15	13—8—0				

ಇದರಿಂದ ತಿಳಿಯಪಡಿಸುವದೇನಂದರೆ,— ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಜಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಕೈದಾದ ಕೂಡ್ಲೆ ಜಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡೆಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈದು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ, ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರ್ತಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳೀ ಚೀಟಿ ಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರು.	ಬಾಬು ಖುಷ್ಕಿ, ತರೀ, ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ. ಕೂಡಿದ ಮಟ್ಟುಗೂ ಕರಾರ್ರಾಕಾ ತಪ್ಸೀಲ್.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕುಲ್ಪತ್ತಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ಕಡಹೆಂವಿಗೆ.	12	ತರೀ ಜಮೀನ್.	2— 6	12—0—0		ಜಮೀನ್‌ಗಳ ಬಳಿ 1896ನೇ ಇಸವಿ ಅಕ್ಟೋಬರ್ 28ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೇ ತಾಲ್ಲೂಕು ಅಮಲ್‌ದಾರ್ ಅಥವಾ ಫ್ರೇಜರ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.	
			13		2—10	12—0—0				
			100		2—9	2—0—0				
			101		1—18	6—0—0				
			102		1—38	8—8—0				
			103		2—5	12—0—0				
			104		2—10	13—0—0				
			105		2—23	15—0—0				
			106		2—11	13—0—0				
			107		2— 8	13—0—0				
			108		2—17	14—0—0				
			168		1—37	10—0—0				
			169		2— 0	11—0—0				
			65		0—34	2—12—0				
			14							
					28—26	144—4—0				

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇವರಡೀಲಿ ಕಂಡ ಜಮೀನ್ ಹಿಡವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಅಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಖೈದಾದಕೂಡಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ ಡೆಪ್ಯುಟಿಕಮಿಷನರು ಅವಶ್ಯಕವಾದ ಸಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿ ಕಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈದು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ.					ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ಮಾಡತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
			ಜಮೀನ್.				ಮರಗಳು ಭಾವಿಗಳು ವಗೈರೆ.			
			ಸರ್ವೆ ನಂಬರು.	ಪೋಟು ಖಾತೆ ಅಥವಾ ವಿಭಾಗದ ಜಮಾ ಹೆಸರು.	ವಿಸ್ತೀರ್ಣ.	ಆಕಾರ.	ಹೊಡೆದ ಸಂಖ್ಯೆಗೆ ಕಂದಾಯ ಕ್ರಮ.			
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ಐಚನಹಳ್ಳಿ.	107	ತರಿ ಜಮೀನು.	2— 9	12— 0—0		ಜಮಾಬಂದಿಗಳ ಬಳಿ 1896ನೇ ಇಸವಿ ಅಕ್ಟೋಬರ್ 29—30ನೇ ದಿವಸ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರು ಅಥವಾ ಫೈನಾನ್ಸ್ ಹೆಡ್ ಶಿರಸ್ತೇದಾರರು.	
			108		2—15	12— 0—0				
			109		1—32	9— 8—0				
			110		2—15	13— 0—0				
			111		2— 4	10— 0—0				
			112		1—19	8— 8—0				
			113		2—18	10— 0—0				
			114		2— 8	9— 8—0				
			115		1—17	7— 8—0				
			116		1—22	7— 8—0				
			117		2— 4	11— 0—0				
			118		2—12	12— 0—0				
			119		1—33	10— 0—0				
			120		0—32	4— 0—0				
			121		2— 3	12— 0—0				

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ.					ಹರಾಜ್ ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
			ಜಮೀನ್.				ಮರಗಳು ಭಾವಿಗಳು ವಗೈರೆ.			
			ಸರ್ವೆ ನಂಬರ್.	ಬಾಬು ಖುಷ್ಕಿ, ತರೀ, ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಅಕಾರ.	ಕೂಡಿದ ಮುಟ್ಟಿಗೂ ಕರಾರ್ವಾಕಾ ತಪ್ಸೀಲ್.			
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ಅನೆಗುಳ.	122	ತರೀ ಜಮೀನ್.	1—27	9—0—0		ಜಮೀನ್‌ಗಳ ಬಳಿ 1896ನೇ ಇಸವಿ ಅಕ್ಟೋಬರ್ 29—30ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರು ಅಥವಾ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸರವರು.	
			123		1—35	11—0—0				
			124		2— 9	13—0—0				
			125		1—34	10—0—0				
			203		2— 2	10—0—0				
			204		2— 8	11—0—0				
			205		2— 0	12—0—0				
			206		2— 1	12—0—0				
			207		2—13	13—0—0				
			208		2— 1	12—0—0				
			209		2—10	12—0—0				
			210		2— 9	13—0—0				
			211		1—34	11—0—0				
			212		1—28	9—8—0				
			213		1—13	7—8—0				
			214		2— 4	11—0—0				
			215		2— 8	13—0—0				
			216		1—27	9—8—0				
			217		1— 4	6—8—0				
			218		1— 6	6—8—0				
			219		2— 9	13—0—0				
			220		2—13	14—0—0				
			37		71-18	388—0—0				

ಪಿ. ಪಂಚನಾಥರಾವ್,
ಸಬ್ ಡಿವಿಜನ್ ಆಫಿಸರ್.

ಹಾಸನ ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 17ನೇ ಸೆಪ್ಟಂಬರ 1896.

1896ನೇ ಇಸವಿ ಫೆಬ್ರವರಿ ತಾರೀಖು 15ನೇ ರಾತ್ರಿ ಚಿಕ್ಕಬಳ್ಳಾಪುರದ ಸ್ಥಳದ ಹಾಲಿ ಚಿಲ್ಲರೆ ವ್ಯಾಪಾರ ಮಾಡಿಕೊಂಡು ಸಕಲೇಶಪುರದಲ್ಲಿ ಇರುವ ಶಿದ್ದಣ್ಣನ ಬಳಿಯಲ್ಲಿದ್ದ ಕೆಳಗೆ ನಮೂದಿಸಲ್ಪಟ್ಟು ಇರುವ ನೋಟುಗಳು ಹೋಗಿ ಇರುತ್ತೆ, ಇವುಗಳನ್ನ ಪತ್ತೇಮಾಡಿದವರಿಗೆ ಶೇಕಡಾ 10 ರೂಪಾಯಿನ ಮೇರೆಗೆ ಇನಾಂ ಕೊಡುತ್ತೇನೆಂದು ಪ್ರೊಪ್ಪಿ ಇರುತ್ತಾನ.

ನೋಟಿನ ತಪ್ಸೀಲ್.

ನಂಬರ್.	ಸರ್ಕಲ್.	ಮೊಬಲಗು.
ಟಿ. 65—87486	ಮದ್ರಾಸ್	ನೂರು ರೂಪಾಯಿ
ಡಿಟೋ—87487	ಡಿಟೋ	ಡಿಟೋ
ಡಿಟೋ—87488	ಡಿಟೋ	ಡಿಟೋ
78163	ಡಿಟೋ	ಡಿಟೋ

ಎಸ್. ಅಮಿರ್‌ಹರ್ಸ್ಟ್,
ಸೂಪರಿಂಟೆಂಡೆಂಟ್ ಆಫ್ ಪೊಲೀಸ್.

ಕಡೂರ್ ಡಿಸ್ಟ್ರಿಕ್ಟು ಫಾರೆಸ್ಟು ಇಲಾಖಾ.

ತಾರೀಖು 3ನೇ ಸೆಪ್ಟೆಂಬರ್ 1896.

ಇವರಡಿಕಂಡ ಡಿಪೋಗಳಿಗೆ ಅದಕ್ಕೆ ಎದುರಾಗಿ ಕಾಣಿಸಲ್ಪಟ್ಟ ಜಂಗಲಿಗಳಿಂದ ನಾಟಾಗಳನ್ನು, ಜೆಲಗುಗಳನ್ನು ಮತ್ತು ಕಿರಿಗಳುಗಳನ್ನು ಬರುವ 1897ನೇ ಇಸವಿ ಮೇ 31ನೇ ತಾರೀಖು ವೊಳಗಾಗಿ ಜವಾಯಿಸಿ ಕೊಡಲು ಯಿಷ್ಟವುಳ್ಳವರು ಟೆಂಡರಯಾನೆ ದರಖಾಸ್ತು ಕೊಡಬಹುದು.

ಡಿಪೋ ಹೆಸರು.	ತರಹೆ.	ಜವಾಯಿಸಿಕೊಡಬೇಕಾದ ಸಂಖ್ಯೆ.	ಯಾವ ಜಂಗಲಿಯಿಂದ ಜವಾಯಿಸಿ ಕೊಡತಕ್ಕದ್ದು ವಗೈರೆ.	ಅಂದಾಜಾ ಫಾಸಲೆ.
ಲಕ್ಕುವಳ್ಳಿ ..	ಮನ್ನಾಜಾತಿ ನಾಟಾ	* 200	ಹೊಸಹಳ್ಳಿ, ಕೋಳಿಗೋಡು ಕರಡಿಮಟ್ಟಿ ಡಿಸ್ಟ್ರಿಕ್ಟು ಜಂಗಲಿಗಳಿಂದ ಕೊರಮರ ಗುಡ್ಡಿ ಡಿಸ್ಟ್ರಿಕ್ಟು ಜಂಗಲ್	7ರ ಲಾಗಾಯತು 10 ಮೈಲಿಗಳು
	ಪೋಖ್ತೆಯಾದ ಹಳೀ ಮರದಂದ ಕಾಡುಜಾತಿ	* 100	ಸಾಮ್ರ ಡಿಸ್ಟ್ರಿಕ್ಟು ಜಂಗಲು ನಾವೆ ಸಮೀಪದ ಸ್ಟೇಟ್ ಫಾರೆಸ್ಟು	11ರ ಲಾಗಾಯತು 13 ಮೈಲಿಗಳು
ತರೀಕೆರೆ ..	ಸಾಗುವಾನಿ ಜೆಲಗು	* 300	ಗಂಟೆನ್ನಾಕನಕಣಿವೆ ಡಿಸ್ಟ್ರಿಕ್ಟು ಜಂಗಲ್ ಮತ್ತು ತ್ಯಾಗದ ಬ್ಯಾಗಿ ಡಿಸ್ಟ್ರಿಕ್ಟು ಜಂಗಲ್	5ರ ಲಾಗಾಯತು 7 ಮೈಲಿಗಳು
	ಮನ್ನಾಜಾತಿ ನಾಟಾ	* 50		6ರ ಲಾಗಾಯತು 10 ಮೈಲಿಗಳು
	ಕಾಡುಜಾತಿ	* 25		
	ಕಿರಿಗಳು	30,000	ವುಬ್ರಾಣಿ ಹಾದಿಕೆರೆ ಜಂಗಲ್	5ರ ಲಾ|| 8 ಮೈಲಿಗಳು
ಕಡೂರು ..	ಸಾಗುವಾನಿ ಜೆಲಗು	* 200	ದೊಡ್ಡನ ಗುಡ್ಡದ ಡಿಸ್ಟ್ರಿಕ್ಟು ಜಂಗಲ್	10ರ ಲಾಗಾಯತು 13 ಮೈಲಿಗಳು
	ಕಿರಿಗಳು	5000		
ಚಿಕ್ಕಮಗಳೂರು ..	ಜಂಗಲಿ ಜೆಲಗು	* 300	ಬಾಳೆಹೊನ್ನೂರು ರೋಡು ಕುಂದೂರು ಇಳಿ ಹೊಳೆ ಹಕ್ಕ ಮುಕ್ಕಿ ಡಿಸ್ಟ್ರಿಕ್ಟ ಜಂಗಲ್	15ರ ಲಾಗಾಯತು 20 ಮೈಲಿಗಳು
	ಕಿರಿಗಳು	20,000		
ಹೆಬ್ಬೆ ಡಿಪೋ ..	ಸಾಗುವಾನಿ ಮತ್ತು ಮನ್ನಾಜಾತಿ (ವಣ ನಾಟಾಗಳು)	* 200	ಹೆಬ್ಬೆ ಮತ್ತು ತೇಗೂರುಗುಡ್ಡ ಸ್ಟೇಟ್ ಮತ್ತು ಡಿಸ್ಟ್ರಿಕ್ಟು ಜಂಗಲ್	3ರ ಲಾಗಾಯತು 5 ಮೈಲಿಗಳು

* ಫಾರೆಸ್ಟು ಇಲಾಖೆಯಿಂದ ನಿರ್ಷಾ ಮಾಡಲ್ಪಟ್ಟವುಗಳು.

2. ಪ್ರತಿ ವೊಂದು ದರಖಾಸ್ತಿನ ಲಖೋಟೆಯ ಮೇಲೆಯೂ ಇಂಥಾ ಜಂಗಲಿಯಿಂದ ಇಂಥಾ ಡಿಪೋಕ್ಕೆ ತಯ್ಯಾರಿಯಿಂದ ಹೇರಿ ತಂದು ಕೊಡುವ ಬಗ್ಯೆ ದರಖಾಸ್ತುಯೆಂದು ಬರದು ರವಾನಿಸತಕ್ಕದ್ದು.

3. ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು 1896ನೇ ಇಸವಿ ಅಕ್ಟೋಬರ್ ತಾರೀಖು 10ರ ವರಿಗೆ ದರಖಾಸ್ತುಗಳನ್ನ ಹಿಡಿಯುತ್ತಾರೆ.

4. ಕಂಟ್ರಾಕ್ಟು ಮಾಡತಕ್ಕವರುಗಳು ಮೇಲೆ ಹೇಳಿದ ಜಂಗಲಿಗಳಿಂದ ವೊಂದು ಜಂಗಲಿಗಿಂತ ಹೆಚ್ಚಾದ ಜಂಗಲಿಗಳಿಂದ ತಯ್ಯಾರಿ ಯಿಂದ ನಾಟಾಗಳನ್ನು ಮತ್ತು ಬೊಂಬುಗಳನ್ನು ಕಡಿದು ತಯ್ಯಾರಿಯಿಂದ ಯಾವ ಯಾವ ಡಿಪೋಗಳಿಗೆ ರಫ್ತು ಮಾಡುವ ದಕ್ಕೆ ಆಗುತ್ತೋ ಅದನ್ನ ಪ್ರತ್ಯೇಕವಾಗಿ ನಮೂದಿಸತಕ್ಕದ್ದು. ನಾಟಾ ಮತ್ತು ಬೊಂಬುಗಳ ತಯ್ಯಾರಿ ಇದುವರಿಗೂ ಡಿಸ್ಟ್ರಿಕ್ಟಿನಲ್ಲಿ ಜಾರಿಯಲ್ಲಿ ಇರುವ ಮಾಮೂಲಿನಂತೆ ಇರಬೇಕು. ಅಲ್ಲದೆ ಫಾರೆಸ್ಟು ಇಲಾಖೆಯವರ ಅಪ್ಪಣೆ ಅನುಸರಿಸಿ ಇರಬೇಕು.

5. ನಾಟಾ ಜೆಲಗುಗಳ ವಿಚಾರದಲ್ಲಿ ಸಲೆ ಅಡಿ 1ಕ್ಕೆ ಇಷ್ಟರ ಅಂತೆ ಯಂತಲೂ ಗಳುಗಳ ಬಗ್ಯೆ 100ಕ್ಕೆ ಇಷ್ಟರಂತೆ ಯಂತಲೂ ನಮೂದಿಸಬೇಕು.

6. ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪ್ರತಿ ವೊಬ್ಬ ಕಂಟ್ರಾಕ್ಟುದಾರನೂ ತಾನು ಕ್ರಮವರಿತು ಬರದುಕೊಡಬೇಕಾದ ಬಾಂಡುಯಾನೆ ಮುಚ್ಚಳಿಕೆ ಅನುಸರಿಸಿ ಕೆಲಸ ನಡಿಸತಕ್ಕ ಖಾತರಿ ಬಗ್ಯೆ ವೊಂದುನೂರು ರೂಪಾಯಿಗಳನ್ನು ಠೇವಣಿ ಇಡಬೇಕು.

7. ಕೇವಲ ಕಮ್ಮಿ ದರಕ್ಕೆ ಕೊಡುವ ದರಖಾಸ್ತುಗಳನ್ನೇ ಆಗಲಿ ಮತ್ತ್ಯಾವ ತರಹೆ ದರಖಾಸ್ತುಗಳನ್ನೇ ಆಗಲಿ ಅಂಗೀಕರಿಸುವದಕ್ಕೆ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಬದ್ಧರಾಗಿರುವದಿಲ್ಲ. ದರಖಾಸ್ತುಗಳ ಮಂಜೂರಾತಿ ಮೈಸೂರು ಶೀಮೆಯ ಫಾರೆಸ್ಟು ಕನ್ಸರವೇಟರ್ ಸಾಹೆಬರವರ ಮಂಜೂರಿಗೆ ವಳಪಟ್ಟು ಇರುತ್ತೆ.

8. ಮೇಲೆ ಹೇಳಿರುವ ತಪ್ಶೀಲ್‌ಗಳಲ್ಲದೆ ಜಾಸ್ತೀ ಅಂಶಗಳನ್ನು ತಿಳಿಯಬೇಕೆಂದು ಅಪೇಕ್ಷಿಶಿದಲ್ಲಿ ಈ ತಪ್ಶೀಲ್‌ಗಳು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಆಫಿಸಿನಲ್ಲಿ ದೊರಿಯುತ್ತೆ.

ಬಿ. ಹೀರಾಶಿಂಗ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ಕಡೂರು ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 14ನೇ ಸೆಪ್ಟಂಬರ 1896ನೇ ಇಸವಿ.

ದಕ್ಷಿಣ ಕನ್ನಡಾಜಿಲ್ಲಾ ಪ್ರೊಬೇಷನರೀ ಡೆಪ್ಯುಟಿ ಮಾಜಿಸ್ಟ್ರೇಟರವರಿಂದ ತಲ್ಪಿದ ಈ ಕೆಳಗೆ ಕಂಡ ನೋಟಿಸನ್ನ ಸಮಸ್ತರಿಗೂ ತಿಳಿಯತಕ್ಕ ಬಗ್ಗೆ ಪ್ರಕಟಪಡಿಸಿ ಇದೆ. * * * *

ಹೆಚ್. ಹೆಚ್. ಸ್ಪಾರ್ಕ್ಸ್,
ಡಿಸ್ಟ್ರಿಕ್ಟ ಮಾಜಿಸ್ಟ್ರೇಟ.

ದಕ್ಷಿಣ ಕನ್ನಡಾಜಿಲ್ಲಾ ಪ್ರೊಬೇಷನರೀ ಡೆಪ್ಯುಟಿ ಮಾಜಿಸ್ಟ್ರೇಟ ಪಿ. ಧೊರೆಸಾಮಿ ಅಯ್ಯಂಗಾರ್ರವರು ಎಲ್ಲಾ ಜನರಿಗೂ ತಿಳಿಯಪಡಿಸುವದೇನಂದರೆ,—ಈ ಕೋರ್ಟು ಪ್ರಥಮ ದರ್ಯಾಪ್ತೀ ರಿಜಿಸ್ಟ್ರು ನಂ. 1–95 ಮೊಕದ್ದಮೆಯ ಮುದ್ದೈಲೆ ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಗೋಣಬೀಡು ಯಂಬಲ್ಲಿರುವ ದೇವಭಟ್ಟನ ಮಗ ಸ್ಮಾರ್ತಬ್ರಾಹ್ಮಣ ಬ್ರಾಹ್ಮಣ ವೃತ್ತಿಯ ಎಚ್. ಕೃಷ್ಣರಾಯನ ಅಂಗಶೋಧನೆಯಲ್ಲಿ ಶಿಕ್ಕಿದ್ದಾಗಿ ಪೊಲೀಸಿನವರಿಂದ ಹಾಜರು ಪಡಿಸೋಣಾದ ಈ ಕೆಳಗೆ ಕಾಣಿಸಿದ ಜಿಂದಗಿಗಳೂ ಮತ್ತು ಆತನ ಬಾಬತು ಸದರೀ ನಂಬರಿನಲ್ಲಿ ಹಾಜರಾದ ವಸ್ತ್ರದ ತುಂಡುಗಳು ಈ ಕೋರ್ಟಿನಲ್ಲಿ ಅಮಾನತ್ತಿನಲ್ಲಿರುವದನ್ನು ಮಂಗ್ಳೂರು ಟೌನ್ ಮಾಜಿಸ್ಟ್ರೇಟರ ಬಳಿಗೆ ರವಾನಿಸಿರುತ್ತದೆ. ಅದಕ್ಕೆ ದಾವೆ ಉಳ್ಳವರು ಈ ನೋಟಿಸ ಜಿಲ್ಲಾ ಗೆಜೆಟ್ಟಿನಲ್ಲಿ ಪ್ರಾಯಿಷಾಗುವ ತಾರೀಖಿನಿಂದ 6 ತಿಂಗಳ ಒಳಗೇ ಮಂಗ್ಳೂರು ಟೌನ್ ಮಾಜಿಸ್ಟ್ರೇಟರ ಮುಂದೆ ಹಾಜರಾಗಿ ದಾವೆ ಇದ್ದ ಪಕ್ಷದಲ್ಲಿ ಜಾಹಿರ್ಮಾಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಸದರೀ ಸೊತ್ತುಗಳು ಏಲಂ ಮಾಡಿ ಹುಟ್ಟಿ ಬಂದ ಐವಜನ್ನು ಸರಕಾರ ಲೆಖ್ಖಕ್ಕೆ ದಾಖಲುಮಾಡಲಾಧೀತು.

ಜಿಂದಗಿ ವಿವರ.

ಹಳ್ತು ವಸ್ತ್ರದ ತುಂಡುಗಳು 1, ಲಿಫಾಪೆಯಲ್ಲಿ ಹಾಕಿ ಇಟ್ಟ ಕಾಗದ ಪತ್ರಗಳು, ನಶ್ಯದ ಡಬ್ಬಿ 1, ಕಂಚಿನ ಶಾಯಿದವತಿ 1, ಸ್ಟೀಲ್‌ಮನೆ ಸಮೇತ ಹೆಂಡ್ಲು 1, ಕಪ್ಪು ಪೆನ್ಸಲ್ ತುಂಡುಗಳು 2, ಕರ್ಪೂರಸೂತಿನ ಸಂಣ ಕನ್ನಡಿ 1, ಕಬ್ಬಿಣದ ಬೀಗದಕೈ 1, ಡಿಂಮಿಣಿಕೀಲ 1, ತಾಂಬ್ರದ ಮಿನಲೇಟ 1, ನಗದಿ ಆಣೆ 4, ಪಾವಣೆಗಳು 6, ಪೈ 1, ಶಿಪ್ಪೆ ಇರುವ ಕಾಫೀ ಬೀಜ 1 ಸೇರಷ್ಟು ಆಧೀತು.

ಪಿ. ಧೊರೆಸಾಮಿ ಅಯ್ಯಂಗಾರ್,
ಡೆಪ್ಯುಟಿ ಮಾಜಿಸ್ಟ್ರೇಟ.

ನಗೆರದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸ॥ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 59.

ಮೃತಪಟ್ಟ ಸಾಗರಮಲ್‌ರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚನ್ನಗಿರಿಯಲ್ಲಿರುವ ಮಾರ್ವಾಡಿ ಪೇಮಾಜಿ, ಮೃತಪಟ್ಟ ಸದರೀ ಸಾಗರಮಲ್ಲರಿಗೆ ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಗಿರಿ ಸ್ಥಳದ ಪೇಮಾಜೀರು, ಜೋಧಪುರ ಜಿಲ್ಲಾ ಜೋಜಾವಾರದ ವಾಸಸ್ಥರಾಗಿ ಮೃತಪಟ್ಟ ಸಾಗರಮಲ್‌ರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ॥ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪೇಮಾಜೀರ ಅರ್ಜಿಯನ್ನು ಸ॥ 1896ನೇ ಇಸವಿ ಅಕ್ಟೋಬರ ತಿಂಗಳ ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಾಗರಮಲ್‌ರಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 61.

ಮೃತಪಟ್ಟ ಚಟ್ನಹಳ್ಳೀ ನಾಗಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶಿವಮೊಗ್ಗಾ ತಾಲ್ಲೂಕು ಕಸಬಾ ಮಾಗಣಿ ಅನುಪಿನಕಟ್ಟೆ ವಾಸಸ್ಥಳಾದ ಚನ್ನಮ್ಮನು, ಮೃತಪಟ್ಟ ಸದರಿ ನಾಗಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಅನುಪಿನಕಟ್ಟೇ ಸ್ಥಳದ ಚನ್ನಮ್ಮನು, ಅನುಪಿನಕಟ್ಟೆ ವಾಸಸ್ಥರಾಗಿ ಮೃತಪಟ್ಟ ನಾಗಪ್ಪನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ॥ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನಮ್ಮನವರ ಅರ್ಜಿಯನ್ನು 1896ನೇ ಇಸವಿ ಅಕ್ಟೋಬರ ತಿಂಗಳ ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1896ನೇ ಇಸವಿ ಆಗಸ್ಟ ತಿಂಗಳ ತಾರೀಖು 26ರಲ್ಲು ಕೋರ್ಟು ಮೊಹರ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟು ಜಡ್ಜಿ.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಫಾರೆಸ್ಟು ಇಲಾಖಾ.

ನೋಟಿಸ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಡಿಸ್ಟ್ರಿಕ್ಟಿಗೆ ಶೇರಿದ ಯಿದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ದೊರಿಯುವ ತಂಗಡಿ, ನಾಯಿಬೇಲ ಮತ್ತು ಕಕ್ಕೆಚಕ್ಕೆಗಳನ್ನ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಯಿಜಾರೆಯ ವಟ್ಟು ಸ್ವತಂತ್ರದ ಹಕ್ಕು ಬಹಿರಂಗವಾಗಿ ಹರಾಜು ಮೂಲಕ ಡೆಪ್ಯುಟಿ ಕಮ್ಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಆಫಿಸರ ಮೂಲಕ ವಿಕ್ರಯಿಸಲ್ಪಡುತ್ತೆ. ಹರಾಜ್ ತಾರೀಖು ಮತ್ತು ಹರಾಜು ನಡಿಸುವ ಸ್ಥಳ ವಗೈರೆ ತಪ್ಸೀಲುಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ನಂಬರು	ಹೋಬಳಿಗಳು.	ಹರಾಜ್ ತಾರೀಖು.	ಹರಾಜು ಹಾಕುವ ಸ್ಥಳ.	ಇಜಾರೆ ಹಕ್ಕಿನ ಕಾಲ.	ಷರಾ.
ಜಗಲೂರು ..	1	ಸೊಕ್ಕೆ	1896ನೇ ಇಸವಿ ಸೆಪ್ಟಂಬರ್ ತಾರೀಖು 24	ಜಗಲೂರು	1896ನೇ ಇಸವಿ ನವಂಬರು ಸರ್ರೀ ಲಾಗಾಯತು 1897ನೇ ಇಸವಿ ಜೂನ್ ಆಖೈರುವರೆಗೆ.	ತಾಲ್ಲೋಕುವಾರು ಮತ್ತು ಕಾವಲುವಾರಾಗಿ ಆಗಲಿ ಅಥವಾ ಹೋಬಳಿವಾರಾಗಲಿ ಹರಾಜು ನಡೆಯುವ ಆಫೀಸರರಿಗೆ ಸಮಾಸವು ತೋರಿದಂತೆ ಹರಾಜು ಹಾಕಲ್ಪಡುತ್ತದೆ.
	2	ಬಿಳಚೋಡು				
	3	ಜಗಲೂರು				
	4	ಅಮೃತಮಹಲ್ ಕಾವಲ್				
ದಾವಣಗೆರೆ ...	1	ದಾವಣಗೆರೆ	1896ನೇ ಇಸವಿ ಸೆಪ್ಟಂಬರ್ ತಾರೀಖು 28	ದಾವಣಗೆರೆ		
	2	ಆನಗೋಡು				
	3	ಮಾಯಕೊಂಡೆ				
	4	ಆಣಜಿ				
	5	ಹದಡಿ				
	6	ಹರಿಹರ				
	7	ಮಲೆಬೆನ್ನೂರು				
	8	ಅಮೃತಮಹಲ್ ಕಾವಲುಗಳು				
ಹೊಳಲ್ಕೆರೆ ...	1	ಹೊಳಲ್‌ಕೆರೆ	1896ನೇ ಇಸವಿ ಸೆಪ್ಟಂಬರ್ ತಾರೀಖು 30	ಹೊಳಲ್ಕೆರೆ		
	2	ರಾಮಗಿರಿ				
	3	ಭರಮನಾಯಕನದುರ್ಗ				
	4	ತಾಳ್ಯ				
	5	ಹೊಸದುರ್ಗ				
	6	ಬಾಗೂರು				
	7	ಅಮೃತಮಹಲ್ ಕಾವಲು				
ಮೊಳಕಾಲುಮುರು	1	ಮೊಳಕಾಲುಮುರು	ಡಿಟೋ	ಮೊಳಕಾಲ್ಮುರು		
	2	ದೇವಸಮುದ್ರ				
	3	ಅಮೃತಮಹಲ್ ಕಾವಲು				

2. ಮೇಲ್ಕಂಡ ತಾರೀಖಿನಲ್ಲಿ ಮಧ್ಯಾನ್ಹದ ಲಾಗಾಯತು ಸಾಯಿಂಕಾಲದವರಿಗೂ ಹರಾಜ್ ಕ್ರಮ ಜರಿಗಿಸುವದು.

3. ಮೇಲ್ಕಂಡ ವಟ್ಟು ಸ್ವತಂತ್ರದ ಇಜಾರೆ ಹಕ್ಕು ಆಖೈರು ಚಡದಖಾಸ್ತುದಾರ್ರುಗಳಿಗೆ ಕೊಡಲ್ಪಡುವದು. ಆದರೆ ಯಾವ ದರಖಾಸ್ತನ್ನೇಆಗಲಿ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಸಹ ಹರಾಜು ನಡಿಸುವ ಆಫಿಸರವರು ಮೊಖ್ತ್ಯಾರ್ರಾಗಿ ಯಿದ್ದಾರೆ. ಪೋಟಾಪೋಟಿಯಲ್ಲಿ ನಿಲ್ಲುವ ಆಖೈರು ಚಡಸವಾಲು ಮೊಬಲಗು ಮೇಲ್ಕಂಡ ಯಂಟು ತಿಂಗಳು ಕಾಲದಲ್ಲಿ ಕಡಿದು ಜಮಾ ಯಿಸಿಕೊಳ್ಳಲ್ಪಡುವ ಚಕ್ಕೆಯ ಖರೀದಿಯೆಂದು ಭಾವಿಸಲ್ಪಡುತ್ತದೆ.

4. ಇಜಾರೆ ಮಾಡಬೇಕೆಂದು ಆಪೇಕ್ಷಿಸುವವರು ತಾವೇ ಖುದ್ದುಬಂದು ಹರಾಜಿನಲ್ಲಿ ಚಡಸವಾಲು ಮಾಡಬಹುದು ಅಥವಾ ತಮ್ಮಿಂದ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರನ್ನಾಗಲಿ ಕಳುಹಿಸಬಹುದು. ಚಡ ಸವಾಲು ಮಾಡಲಪೇಕ್ಷೆವುಳ್ಳವರು ಖಾತರೀ ಬಗ್ಗ್ಯಾಗಿ ಐವತ್ತು ರೂಪಾಯಿಗಳನ್ನು ಹರಾಜ್ ಕಾಲದಲ್ಲಿ ಹರಾಜ್ ಮಾಡುವ ಆಫಿಸರವರಲ್ಲಿ ಠೇವಣಿ ಇಡಬೇಕು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರು ಹಾಜರುಮಾಡಿದ್ದ ಡಿಪಾಜಿಟ್ಟು ಮೊಬಲಗನ್ನ ಹರಾಜ್ ಖೈದಾದ ಕೂಡ್ಲೆ ಡಿಪಾಜಿಟ್ಟುದಾರ್ರಿಗೆ ವಾಪಸು ಮಾಡಲ್ಪಡುತ್ತದೆ. ಅಂಗೀಕರಿಸಲ್ಪಟ್ಟ ಸವಾಲುದಾರ್ರುಗಳು ತಮ್ಮ ಸವಾಲಿನ ಪೂರ್ಟು ಮೊಬಲಗಿನಲ್ಲಿ ಮೊದಲು ಹಾಜರ್ಮಾಡಿದ್ದ ಮೊಬಲಗು ಸೇರಿ ಕಾಲುಹಿಸ್ಸೆಯನ್ನು ಪಾವತಿ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಮೊದಲು ಇಟ್ಟುಇದ್ದ ಡಿಪಾಜಿಟ್ಟು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದೂ ಅಲ್ಲದೆ ಬಾಬನ್ನ ದುಸರಾ ಹರಾಜ್ ಮಾಡಿಸುವದರಲ್ಲಿ ವುಂಟಾಗುವ ನಷ್ಟಕ್ಕೂ ಈತನನ್ನೇ ಗುರಿಮಾಡಲ್ಪಡುತ್ತದೆ.

5. ಮೇಲ್ಕಂಡ ಮೇರಿಗೆ ನಡಿಸಲ್ಪಡಬೇಕಾಗಿ ಬರುವ ಯರಡನೇ ಹರಾಜಿನಲ್ಲಿ ಮೊದಲಿನ ಹರಾಜ್ ಚಡದರಖಾಸ್ತಿಗಿಂತ ಮೊಬಲಗು ಜಾಸ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಮೊಬಲಗು ಕಮ್ಮಿಯಾದಲ್ಲಿ ಅಂಥಾ ಮೊಬಲಗನ್ನ ಅವಲ್ ಚಡದರಖಾಸ್ತುದಾರನಿಂದ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲು ಮಾಡಲ್ಪಡುತ್ತದೆ.

6. ಇಜಾರೆ ಬಾಬತು ಟಾಕಿ ಮುಕ್ಕಾಲು ಹಿಸ್ಸೆಯನ್ನು ಇದೇ ಇಸವಿ ಅಕ್ಟೋಬರ್ ಮಾಹೆ ಆಖೈರುವೊಳಗಾಗಿ ಖಜಾನೆಗೆ ಪಾಖರ್ಲಾವಣಿ ಮಾಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ಠೇವಣಿಯು ಸರ್ಕಾರಕ್ಕೆ ದಂಡವಾಗಿ ಸೇರಿಸಿ ಕೊಳ್ಳಲ್ಪಡುತ್ತದೆ, ಅಲ್ಲದೆ ಚಕ್ಕೆ ಜಮಾಯಿಸುವ ಹಕ್ಕು ಸಹ ಪುನಃ ಹರಾಜು ಮಾಡಲ್ಪಡುತ್ತದೆ.

7. ಹರಾಜು ಮಂಜೂರಾದ ಮೂರು ದಿವಸಗಳೊಳಗಾಗಿ ಇಜಾರೆದಾರನು ಈ ಕೆಳಗೆ ನಮೂದಿಸುವ ಷರತ್ತುಗಳ ಪ್ರಕಾರ ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಮುಚ್ಚಳಿಕೆ ಬರದುಕೊಡಬೇಕು.

8. ಮೇಲ್ಕಂಡ ಮೇರೆ ಪೂರ್ತಿ ಮೊಬಲಗು ಇರಸಾಲು ಆದ ನಂತರ ಈ ಕೆಳಗೆ ನಮೂದಿಸಿರುವ ಷರತ್ತುಗಳು ಕಂಡು ಸರಿಯಾದ ಕಿಮ್ಮತಿನ ಛಾಪಾಕಾಗದದಲ್ಲಿ ಇದೇ ಇಸವಿ ನವಂಬರು ಗುರ್ನೇ ತಾರೀಖಿನಲ್ಲಿ ಕರಾರು ಬರದುಕೊಟ್ಟು ಅನಂತರ ಬಾಬು ಸುಫರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳ್ಯಾವವೆಂದರೆ:—

(1) ಒಂದುವರೆ ಅಡಿಕ್ಕಿಂತಲೂ ಎಳೇದಾದ ಗಿಡವನ್ನು ಕಡಿಯುವದಿಲ್ಲ.

(2) ಕಡಿಯುವ ವಿಶಿಷ್ಟ ಮೋಟೂ ಮತ್ತು ರೆಂಬೆಗಳಲ್ಲಿರುವ ಚಕ್ಕೆಯನ್ನು ನಿಶ್ಶೇಷವಾಗಿ ತೆಗದುಕೊಳ್ಳುತ್ತೇನೆ. ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಚಕ್ಕೆಯನ್ನು ತೆಗಿಯದೆ ಬಿಡುವದಿಲ್ಲ.

XI. ಸದರೀ ಅಂಗಡಿಗೆ ಬಂದೇ ಬಾಗಲಿರಬೇಕು, ಮತ್ತು ಸದರೀ ಕಟ್ಟಡದ ಹಿಂಭಾಗದಲ್ಲ್ಯಾದರೂ ಯಾ ಕೊನೇ ಭಾಗಗಳಲ್ಲ್ಯಾದರೂ ಟಟಕಿ ಇಡಕೂಡದು. ಮದ್ಯ ಮಾರುವ ಜಗಲಿಯು ಅಂಗಡಿಯೊಳಗೆ ಇರುವ ಜನಗಳು ಅಂಗಡಿ ಮುಂದ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆದುರಾಗಿರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

XII. ಮೇಲಿನ ಷರತ್ತುಗಳು ಮತ್ತು ನಿಬಂಧನೆಗಳ ಪೈಕಿ ಯಾವದನ್ನಾದರೂ ತಪ್ಪಿ ನಡದರೆ ಲೈಸೆನ್ಸ್‌ದಾರನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಆಪಾದಿಸಲ್ಪಟ್ಟ ಮೇಲೆ 1881ನೇ ಇಸವಿಯ XXIIನೇ ನಂಬರ ಆಕ್ಟು ಅನುಸರಿಸಿ ಜುರ್ಮಾನೆ ತರಲಿಕ್ಕೂ ಅಥವಾ ಸದರೀ ಆಕ್ಟಿನ 13ನೇ ಸೆಕ್ಷನ್ ಅನುಸರಿಸಿ ಲೈಸೆನ್ಸನ್ನ ಕಳೆದುಕೊಳ್ಳಲಿಕ್ಕೂ, ಯಾ ಇವೆರಡಕ್ಕೂ ಗುರಿಯಾಗತಕ್ಕದ್ದು.

XIII. ಈ ಲೈಸೆನ್ಸ್ 189 ನೇ ಇಸವಿ ನೇ ತಾರೀಖು ವರಿವಿಗೆ ಜಾರಿಯೇ ಹೊರ್ತು ತದನಂತರವಲ್ಲ, ಆದರೆ ಇದು 1881ನೇ ಇಸವಿಯ XXIIನೇ ನಂಬರ್ ಆಕ್ಟಿನ 13 ವ 14ನೇ ಸೆಕ್ಷನ್‌ಗಳನ್ನನುಸರಿಸಿ ಯಾವಾಗಲಾದರೂ ವಾಪಸ್ ತರಿಸಿಕೊಳ್ಳಲ್ಪಡಬಹುದು ಅಥವಾ ಬಿಟ್ಟುಬಿಡಲ್ಪಡಬಹುದು.

ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್,
ಡಿಸ್ಟ್ರಿಕ್ಟ್.

ಎದುರು ಒಡಂಡಿಕೆ.

ಈ ಕೆಳಗೆ ರುಜು ಮಾಡಿರುವ ಮೇಲ್ಕಂಡ ಲೈಸೆನ್ಸ್‌ದಾರ ವ ಬಿಕರೀದಾರ ಮತ್ತು ಬಳಿಯಿರುವ ಬೀರ್ ಅಂಗಡಿಗೆ ಸಂಬಂಧಪಟ್ಟ ಇತರರಾದ ನಾವುಗಳು ನಮ್ಮಗಳಿಗಾಗಿಯೂ, ನಮ್ಮ ವಾರಸ್‌ದಾರರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗಪಡೆದಂಥಾವರಿಗೋಸ್ಕರವೂ ಇದರ ದೆಸೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ಬರೆಯೋಣಾದ, ಛಾಪಿಸೋಣಾದ ವ ಹೇಳೋಣಾದ ಕರಾರುಗಳಿಗೂ, ಷರತ್ತುಗಳಿಗೂ ವೊಪ್ಪಿರುತ್ತೇವೆ.

ತಾರೀಖಿನ ದಿನ
ಕಮಿಷನರವರ ಆಫಿಸಿನಲ್ಲಿ ನಮಗಳ ರೂಬರೂ ರುಜು ವ ಮೊಹರ್ ನಿಸಿ ಪೊಪ್ಪಿಸಲ್ಪಟ್ಟಿರುತ್ತೆ. ಡಿಸ್ಟ್ರಿಕ್ಟು ಡೆಪ್ಯುಟಿ.
ಸಾಕ್ಷಿಗಳು.

1.
2.
3.

ಲೈಸೆನ್ಸ್‌ದಾರ್ ವ ಬಿಕರೀದಾರ್.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂ. 442. ತಾರೀಖು 18ನೇ ಸೆಪ್ಟಂಬರ್ 1896ನೇ ಇಸವಿ, ಬೆಂಗಳೂರು.

ಕೋಲಾರ್ಸ್ಪೇಟೆ ಸಬ್ ತಾಲ್ಲೂಕಿನಲ್ಲಿರುವ ರಾಮಗಿರಿ ಶ್ರೀರಾಮದೇವರ ದೇವಸ್ಥಾನಕ್ಕೆ ಮೊಕರರಾಗಿ ಇದ್ದ ಧರ್ಮದರ್ಶಿಗಳ ಪೈಕಿ (1) ಫವತಿಯಾದ ಲಿಂಗಣ್ಣಯ್ಯಗೆ ಬದಲಾಗಿ ಕನ್ನಡ ಸ್ಕೂಲ್ ಹೆಡ್ಮಾಸ್ಟರ್ ಸೂರಪ್ಪನವರನ್ನೂ (2) ಹಾಲಿ ಗೈರ್ ಹಾಜರಾಗಿರುವ ಕುಪ್ಪಸಾಮಿ ಮೊದಲಿಯಾರ್ರವರಿಗೆ ಬದಲಾಗಿ ಕೋಲಾರ್ಸ್ಪೇಟೆ ನಾರಾಯಣಸ್ವಾಮಿ ಮೊದಲಿಯಾರ್ರವರನ್ನೂ ಸಹ ಧರ್ಮದರ್ಶಿಗಳಾಗಿ ನೇಮಿಸಿ ಇದೆ.

ನಂ. 476. ತಾರೀಖು 22ನೇ ಸೆಪ್ಟಂಬರ್ 1896, ಬೆಂಗಳೂರು.

ಮಾಗಡಿ ತಾಲ್ಲೂಕು ತಿರುಮಲೆಯಲ್ಲಿರುವ ಶ್ರೀರಂಗನಾಥಸ್ವಾಮಿಯವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ ಈ ಲಾಗಾಯತು ಯರಡು ವರುಷಗಳ ಪರ್ಯಂತ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ.

1. ತಿರುಮಲೆಯಲ್ಲಿರುವ ಪೆನ್ಷನ್ ಶೇಕದಾರ್ ರಂಗಣ್ಣನವರು.
2. ಮ್ಯುನಿಸಿಪಲ್ ಮೆಂಬರ್ ಸೂರಪ್ಪನವರು.

ನಂ. 477.
ಕೋಲಾರ್ಸ್ಪೇಟೆ ಸಬ್ ತಾಲ್ಲೂಕು ಬಿಡದಿಯಲ್ಲಿರುವ ಛತ್ರಕ್ಕೆ ನೇಮಿಸಿ ಇದ್ದ ಧರ್ಮದರ್ಶಿಗಳ ಪೈಕಿ ಕಾಳಪ್ಪನೆಂಬವರು ಫವತಿಯಾದ ಸಬಬು ಅವರಿಗೆ ಬದಲಾಗಿ ಬಿಡದಿ ಗಂಗಶೆಟ್ಟರನ್ನ ಈ ಲಾಗಾಯತು 2 ವರುಷಗಳ ಪರ್ಯಂತರ ಧರ್ಮದರ್ಶಿಯಾಗಿ ನೇಮಿಸಿ ಇದೆ.

ಪಿ. ಶ್ರೀನಿವಾಸಾಚಾರು,
ಮುಜರಾಯಿ ಸೂಪರ್ಇಂಟೆಂಡೆಂಟ್ ಮತ್ತು ಸೆಕ್ರೆಟರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮಾ.

ತಾರೀಖು 23ನೇ ಸೆಪ್ಟಂಬರ್ 1896.

ನಂ. 809.—5065, ಹೆಸರಘಟ್ಟದ ವಾಟರ್ ಸಪ್ಲೈ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ ಮೆಸ್ಟರ್ ಆರ್. ಟಿ. ಸ್ಟಾಡ್ವೆಲ್ ಯವರಿಗೆ ಬರುವ ತಿಂಗಳ ಗುರ್ರೇ ತಾರೀಖು ಲಾಗಾಯತು ಯಾ ಅವರು ಹೊರಟ ತಾರೀಖಿನಾರಭ್ಯ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಸಿ. ಬರ್ನ, ಕರ್ನಲ್,
ಮೈಸೂರ್ ಗವರ್ನಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫಾಯಿಷ್ ಆದ್ದು. [ನಂ. 39.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 1, ಸನ್ 1896.

IIನೇ ಭಾಗ.

ಇಂಡ್ಯಾ ಗವರ್ನ್‌ಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ

ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಾಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್ಸರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್‍ರ್ಯಾಮ್‌ರವರ ಡಿಟೋ	,, 85

ಖರೀದೀದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 23ನೇ ಸೆಪ್ಟಂಬರ 1896.

ಬೆಂಗಳೂರು ಸಿಟಿ ಕೋಟೆ ಸರಹದ್ದು ಹೊಸ ತರುಗಿನಪೇಟೇಲಿ ಸರ್ವೆ ಇಲಾಖೇ ಕ್ಲಾಸರ ನಾರಾಯಣಜಯರಾವ ಯಂಬವರ ಮನೆ ಬಾಗಲಿಗೆ ಹಾಕಿದ್ದ ಬೀಗವನ್ನು ತಾರೀಖು 6—9—96ರಲ್ಲು ಯಾರೋ ತೆಗದುಬಿಟ್ಟು ವಳಗೆ ಪೆಟ್ಟಿಗೆಗಳಿಂದ ಕಳವು ಮಾಡಿ ಕೊಂಡು ಹೋದ ತಪ್ಸೀಲ್ ಪಟ್ಟಿ:—

		ಕ್ರಯ ರೂ.	ಆ.	ಪೈ.
1	ಕಲಾಬತು ಮೂರು ಬೊಟ್ಟು ಅಗಲ ಅಂಚು ಮತ್ತು ಒಂದು ಮಳ ಶರಗುವುಳ್ಳ ಕೆಂಪು ಪೀತಾಂಬ್ರ	100	0	0
2	ಲಕ್ಷ್ಮೀಶ್ವರದ ಕೆಂಪು ಅಂಚಿನ ರೇಷ್ಮೆ ಚಾರಖಾನೆ ಸೀರಿ ಒಂದು	22	0	0
3	ಪೂನಾದ್ದು ಬೆಳ್ಳಿಬಟ್ಟು ಇದರ ತೂಕ ರೂ. 16—2	19	0	0
4	ಡಿಟ್ಟೋ ಬೆಳ್ಳಿವುದ್ಧರಣೆ ತೂಕ ರೂ. 6—11—0	8	4	0
5	ಎರಡು ಬೆಳ್ಳಿಬಟ್ಲು ತೂಕ ರೂ. 11—10—0	14	0	0
6	ಬೆಳ್ಳೀದು ಬಟ್ಲು ಸಾದಾ ತೂಕ ರೂಪಾಯಿ 4—0—0	4	0	0
7	ಬೆಳ್ಳಿ ಕಾಲುಂಗರ 14—0—0 ರೂ. ತೂಕ	14	0	0
8	ಬೆಳ್ಳಿ ಡಾಬು 1ಕ್ಕೆ 16—0—0 ರೂ. ತೂಕ ..	16	0	0
9	ಅಪರಂಜಿ ಎಂಟು ಮೂಲೆ ವುಂಗ್ರ ತೂಕ ರೂ. 1—0—0	28	0	0
10	ಸವರ್ಣ ಬಾಬತು ಕೀಲ್ ಸಾದಾ ವುಂಗ್ರ ರೂ. 0—12—0 ತೂಕ ..	18	0	0
11	ಶಾಲ್ಯದ ರೇಷ್ಮೆ ಅಂಚಿನ ಹೊಸ ಪಂಚೆ	4	0	0
12	ಕಲಾಬತು ಕೆಂಪು ಶಾಲು	15	0	0
13	2 ಭಂಗಾರದ ಜೋಮಾಲೆ ಗುಂಡು ರೂ. 0—1—0 ತೂಕ ...	1	4	0
14	ಚಿನ್ನದ ಸಾದಾ ಗುಂಡುಗಳು ಸುಮಾರು 12 ಅಥವಾ 16	8	0	0
15	ಕಪ್ಪು ರೇಷ್ಮೇಲಿ ಕಟ್ಟಿದ ಹುಡುಗರಿಗೆ ಕಟ್ಟುವ ಗೆಜ್ಜೆಗಳು	8	0	0
16	ಬೆಳ್ಳಿ ನಶ್ಯದ ಡಬ್ಬಿ ರೂ. 2—0—0 ತೂಕ	4	0	0
17	ಬೆಳ್ಳಿ ದೀಪೆಸಿ ಮಂಗಳ ಗೌರಿ ಶೇರಿ ರೂ. 8—0—0 ತೂಕ	8	0	0
18	3 ಕುಬುಸಗಳು	3	0	0
	ಜಮ್ಲಾ ..	294	8	0

ಬಿ ಕುಪ್ಪುಸಾಮಿನಾಯುಡು,
ಫಾರ್ ಅಸಿಸ್ಟೆಂಟ್ ಸೂ॥ ಆಫ್ ಪೋಲೀಸ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇಸ್ತಿಹಾರ ನಾಮೆ.

ಬೆಂಗಳೂರು ಟೌನ್ ಮ್ಯುನಿಸಿಪಲ್ ರೆಗ್ಯುಲೇಷನ್ಗಳ ಇದರಡಿ ಬರುವ ಸೆಕ್ಷನ್ಗಳು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತವೆ.

ಪ್ರಸಿಡೆಂಟರಿಗೆ ಹೊಸಕಟ್ಟಣಗಳನ್ನು ಕುರಿತು ನೋಟಿಸ್ ಕೊಡಲ್ಪಡತಕ್ಕದ್ದು.

148. ಯಾವದಾದರೂ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಯಾವ ಕಟ್ಟಣವನ್ನಾದರೂ ಕಟ್ಟಿಸಲಿಕ್ಕೆ ಅಥವಾ ಪೋಲ್‌ಬಂದಿ ಮಾಡಿಸಲಿಕ್ಕೆ ಶುರೂ ಮಾಡುವದಕ್ಕೆ ಮುಂಚಿತವಾಗಿ ಅಂಥಾ ಕಟ್ಟಣವನ್ನು ಕಟ್ಟಿಸಲಿಕ್ಕೆ ಯಾ ಪೋಲ್‌ಬಂದಿ ಮಾಡಲಿಕ್ಕೆ ಖಾಯಿಷ್ ಮಾಡುವ ಮನುಷ್ಯನು ಆ ವಿಷಯವನ್ನು ಕುರಿತು ಬರವಣಿಗೆ ಮೂಲಕ ಪ್ರಸಿಡೆಂಟರಿಗೆ ನೋಟಿಸ್ ಕೊಡತಕ್ಕದ್ದಲ್ಲದೆ ಪ್ರಸಿಡೆಂಟರ ಹುಕುಂ ಅನುಸರಿಸಿ ನಿಷ್ಕರ್ಷೆ ಮಾಡೋಣಾದ ಒಂದು ಮಟ್ಟದ ವಿಷಯದಲ್ಲಿ ಅಂಥಾ ಕಟ್ಟಣದ ತಳಾದಿಯು ಯಲ್ಲಕ್ಕೂ ಕೀಳ್ಪಟ್ಟ ತಳವಂಶಿಯೂ ಯಾವ ಮಟ್ಟದ ಪ್ರಕಾರ ಹಾಕಲ್ಪಡುತ್ತೋ ಆ ಮಟ್ಟವನ್ನು ಕಾಣಿಸಿ ಒಂದು ಪ್ಲಾನ್ ಯಾನೆ ನಕಷೆಯು ಸದರೀ ನೋಟಿಸ್ ಸಂಗಡ ಕಳುಹಿಸತಕ್ಕದ್ದು: ಯಾವನು ಅಂಥಾ ನೋಟಿಸ್ ಕೊಡದೆ ತಪ್ಪುತ್ತಾನೋ ಅವನು ಐವತ್ತು ರೂಪಾಯಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ರಸ್ತೆಗಳು ನಡಿಯುತ್ತ ಇರುವಲ್ಲಿ ಅಡ್ಡ (ಮರ ವಗೈರೆ) ಕಟ್ಟಿಸತಕ್ಕದ್ದು.

175. ಯಾವದಾದರೂ ಬೀದಿಗೆ ಯಾ ಕಾಲುದಾರಿಗೆ ಅಡ್ಡವಾಗಿರುವ ಅಥವಾ ಅಂಥಾ ಕಾಮಗಾರಿಯಿಂದ ಅಸಂದರ್ಭ ವುಂಟಾಗಿರುವ ಸ್ಥಳದಲ್ಲಿ ಯಾವದಾದರೂ ಕಟ್ಟಣವನ್ನು ಕಟ್ಟಿಸಲಿಕ್ಕೆ ಅಥವಾ ಕೆಡವಿಸಲಿಕ್ಕೆ ಯಾವದಾದರೂ ಕಟ್ಟಣ ಹೊರಗಿನ ಭಾಗವನ್ನು ಬದಲಾಯಿಸಲಿಕ್ಕೆ ಯಾ ರಿಪೇರಿ ಮಾಡಿಸಲಿಕ್ಕೆ ಅಪೇಕ್ಷಿಸುವ ಪ್ರತಿ

ಮನುಷ್ಯನೂ ಅದು ಆರಂಭಿಸುವದಕ್ಕೆ ಪೂರ್ವವೂ, ಆ ಮೇರೆ ಮಾಡಲಿಕ್ಕೆ ಪ್ರೆಸಿಡೆಂಟರಿಂದ ಲಿಖಿತರೂಪವಾದ ಒಂದು ಲೈಸೆನ್ಸ್ ಮೊದಲು ತೆಗೆದುಕೊಂಡ ತರುವಾಯವೂ ಅಂಥಾ ಕೆಲಸಗಳು ನಡಿಸಲ್ಪಡುವ ಜಾಗಾಗಳಲ್ಲಿ ಬೀದಿಯಿಂದ ಅಥವಾ ಕಾಲ್ದಾರಿಯಿಂದ ಆ ಕಟ್ಟಣವನ್ನು ಪ್ರತ್ಯೇಕ ಪಡಿಸಲಿಕ್ಕೆ ಸಾಕಾಗಿರುವ ಮರೆಗಳು ಅಥವಾ ತಡೆಗಳು ನಾಟಿಸುವಂತೆ ಮಾಡಿ ಅಂಥಾ ಮರೆ ಅಥವಾ ತಡೆ ಜನಗಳ ಕ್ಷೇಮಕ್ಕೆ ಯಾ ಅನುಕೂಲಕ್ಕೆ ಜರೂರಿರುವಷ್ಟರ ಮಟ್ಟಿಗೆ ಪ್ರೆಸಿಡೆಂಟರಿಗೆ ಸಮಾಧಾನಕರವಾಗಿರುವಂತೆ ಬಂದೋಬಸ್ತಾಗಿಯೂ ನಿಲುವಾಗಿಯೂ ನಾಟಿಸಲ್ಪಟ್ಟಿರತಕ್ಕದ್ದು ಮಾತ್ರವಲ್ಲದೆ ರಾತ್ರಿ ಹೊತ್ತು ಆ ಬಳಿ ಸಾಕಾದಷ್ಟು ದೀಪಗಳು ಇಡಲ್ಪಡುವಂತೆ ಮಾಡತಕ್ಕದ್ದು. ಮತ್ತು ಈ ಸೆಕ್ಷನ್ ನಿಬಂಧನೆಗಳಿಗೆ ವಿರುದ್ಧವಾಗಿ ಯಾವ ಕಟ್ಟವನ್ನಾಗಲಿ ಕಟ್ಟಲಿಕ್ಕೆ ಯಾ ಕೆಡಸಲಿಕ್ಕೆ ಯಾ ಬದಲಾಯಿಸುವದಕ್ಕೆ ಆರಂಭಿಸಲ್ಪಡುವ, ಲೈಸೆನ್ಸ್ ಹೊಂದದೆ ಯಾವದಾದರೂ ಮರೆ, ಕಾಲಾವದಿ, ತಡೆ ವಗೈರೆ ಕಟ್ಟತಕ್ಕ ಅಥವಾ ನಾಟಿಸುವ ಅಥವಾ ಲೈಸೆನ್ಸ್ ಹೊಂದಿ ಇದ್ದು ಅಂಥಾ ತಡೆ ಯಾ ಮರೆ ನಡಿಸದೆಯೂ, ಮೇಲೆ ಕಂಡ ಕಾಲದಲ್ಲಿ ಸದರೀ ಮೇರೆ ಬಂದೋಬಸ್ತಾಗಿ ಇರುವಂತೆ ಮಾಡದೆಯೂ ತಪ್ಪುವ, ಅಥವಾ ಸದರೀ ಮೇರೆ ಯಾ ತಡೆ ಇರುತ್ತಾ ಇರುವಲ್ಲಿ ಅವುಗಳ ಬಳಿ ಸಾಕಾದಷ್ಟು ದೀಪಗಳನ್ನು ಇಡದ ಯಾ ಪ್ರೆಸಿಡೆಂಟರು ಹುಕುಂ ಮಾಡಿದ ಮೇಲೆ ಎಂಟು ದಿನಗಳೊಳಗೆ ಅವುಗಳನ್ನು ತೆಗಿಸಿಹಾಕದ ಪ್ರತಿ ಮನುಷ್ಯನೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಸದರೀ ಪ್ರೆಸಿಡೆಂಟರು ನೋಟಿಸ್ ಕೊಟ್ಟ ಇಪ್ಪತ್ತು ನಾಲ್ಕು ಘಂಟೆಯ ಹೊತ್ತಿಗೆ ತರುವಾಯ ಸದರೀ ತಕ್ಸೀರ್ ನಡಿಸಲ್ಪಡುತ್ತಾ ಇರುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಜಾಸ್ತಿ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಕಟ್ಟಣದ ಸಾಮಾನುಗಳು ಹರತಕ್ಕ ಸ್ಥಳಗಳಲ್ಲಾಗಲಿ ಅಗಿಯಲ್ಪಟ್ಟ ಸ್ಥಳಗಳಲ್ಲಾಗಲಿ ದೀಪ ಹಚ್ಚದೆ ಇದ್ದರೆ ಶಿಕ್ಷೆ.

177. ಪ್ರೆಸಿಡೆಂಟರ ಅಪ್ಪಣೆ ಇಲ್ಲದೇನೇ ಯಾವ ಮನುಷ್ಯನೂ ಯಾವ ಬೀದಿಯಲ್ಲಿ ಯಾವ ಕಟ್ಟಣದ ಸಾಮಾನುಗಳನ್ನೂ ಇಡಕೂಡದು, ಅಥವಾ ಹಳ್ಳ ತೆಗೆಯಲೂ ಕೂಡದು ಮತ್ತು ಯಾವ ಮನುಷ್ಯನಿಗಾಗಲಿ ಅಂಥಾ ಅಪ್ಪಣೆ ಕೊಡಲ್ಪಟ್ಟ ಪಕ್ಷಕ್ಕೆ ಆ ಸಾಮಾನುಗಳು ಆಚೆಗೆ ಸಾಗಿಸಲ್ಪಡುವ ಪರ್ಯಂತವಾಗಲಿ ಅನ್ಯಥಾ ಬಂದೋಬಸ್ತು ಮಾಡಲ್ಪಡುವವರಿಗಾಗಲಿ ಆ ಮನುಷ್ಯನು ತನ್ನ ಸ್ವಂತ ಲಾಗವಡಿನಿಂದಲೇ ಅಂಥಾ ಸಾಮಾನುಗಳಿಗೆ ಯಾ ಹಳ್ಳಕ್ಕೆ ಸಾಕಾಗಿರುವ ಮೇರೆ ತಡೆ ಹಾಕಿಸುವಂತೆಯೂ ಅವುಗಳ ಸುತ್ತೂ ಯಾವದಾದರೂ ಕಟ್ಟಿಗೆ ಕಟ್ಟಲ್ಪಡುವಂತೆಯೂ ಮಾಡುವದು ಮಾತ್ರವಲ್ಲದೆ ರಾತ್ರಿ ಹೊತ್ತು ಅದರ ಬಳಿ ಸಾಕಾದಷ್ಟು ದೀಪಗಳು ಇಡುವಂತೆಯೂ ಮಾಡತಕ್ಕದ್ದು. ಮತ್ತು ಅಂಥಾ ಅಪ್ಪಣೆ ಇಲ್ಲದೆ ಯಾವನು ಸಾಮಾನುಗಳನ್ನು ಇಡುತ್ತಾನೋ ಅಥವಾ ಹಳ್ಳ ತೆಗಿಯುತ್ತಾನೋ ಅಥವಾ ಅಂಥಾ ಸಾಮಾನುಗಳು ಹಳ್ಳಗಳು ಇರುವ ಸ್ಥಳದಲ್ಲಿ ತಡೆಕಟ್ಟಸದೆಯಾಗಲಿ ಆವರಣ ಕಲ್ಪಿಸದೆಯಾಗಲಿ ದೀಪ ಹಚ್ಚದೆಯಾಗಲಿ ತಪ್ಪುತ್ತಾನೋ ಅಥವಾ ಕೊಡಲ್ಪಟ್ಟ ಅಪ್ಪಣೆಯನ್ನು ಹಿಂದರಿಸಿಕೊಂಡಾಗ ಅಂಥಾ ಸಾಮಾನುಗಳನ್ನು ಮತ್ತೊಂದು ಸ್ಥಳಕ್ಕೆ ಸಾಗಿಸದೆಯಾಗಲಿ ಅಂಥಾ ಹಳ್ಳವನ್ನು ಮುಚ್ಚಿಸದೆಯಾಗಲಿ ಇರುತ್ತಾನೋ ಅಂಥಾ ಯಾವ ಮನುಷ್ಯನಾಗಲಿ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ ಪ್ರೆಸಿಡೆಂಟರು ನೋಟಿಸ ಕೊಟ್ಟ ಇಪ್ಪತ್ತು ನಾಲ್ಕು ಘಂಟೆಯ ಹೊತ್ತಿಗೆ ತರುವಾಯ ಆ ತಕ್ಸೀರ ನಡಿಸುತ್ತಾ ಇರುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಅಪಾಯಕರಗಳಾದ ಸ್ಥಳಗಳನ್ನೂ ರಿಪೇರಿ ಮಾಡಿಸತಕ್ಕದ್ದು ಆವರಣ ಯೇರ್ಪಡಿಸತಕ್ಕದ್ದು.

178. ಸರ್ಕಾರ್ ಜಮೀನಿನಲ್ಲಾಗಲಿ, ಜನಗಳ ಸ್ವಂತ ಜಮೀನಿನಲ್ಲಾಗಲಿ ಇರುವ ಯಾವದಾದರೂ ಕಟ್ಟಣ, ಕೆರೆ, ಬಾವಿ ಯಾ ಹಳ್ಳ ಯಾ ಇತರ ಪ್ರದೇಶವು, ಸಾಕಾದಷ್ಟು ರಿಪೇರಿ ಯಾ ಬಂದೋಬಸ್ತು ಯಾ ಆವರಣ ಇಂತಾದ್ದು ಇಲ್ಲದೆ ಇರುವದರಿಂದ ಜನಗಳಿಗೆ ಅಪಾಯಕರವಾಗಿದ್ದ ಪಕ್ಷಕ್ಕೆ, ಪ್ರೆಸಿಡೆಂಟರು, ಲಿಖಿತರೂಪವಾದ ನೋಟಿಸ್ ದ್ವಾರಾ, ಅದರ ದೆಶೆಯಿಂದ ಅಪಾಯ ವುಂಟಾಗದೆ ಇರುವಂತೆ ಅದು ರಿಪೇರಿ ಮಾಡಲ್ಪಡತಕ್ಕದ್ದೆಂತಲಾಗಲಿ ಬಂದೋಬಸ್ತು ಮಾಡಲ್ಪಡತಕ್ಕದ್ದೆಂತಲಾಗಲಿ ಸುತ್ತಲೂ ಆವರಣ ಕಟ್ಟಸಲ್ಪಡತಕ್ಕದ್ದೆಂತಲಾಗಲಿ ಸದರೀ ನಿವೇಶನಗಳ ಮಾಲೀಕನಿಗಾದರೂ ಅನುಭವದಾರನಿಗಾದರೂ ತಾಕೀದ್ ಮಾಡುವದು ಅವರಿಗೆ ನ್ಯಾಯವಾಗಿರತಕ್ಕದ್ದು, ಮತ್ತು ಆ ಮನುಷ್ಯನು ಇಪ್ಪತ್ತುನಾಲ್ಕು ಘಂಟೆಯ ಹೊತ್ತಿನೊಳಗೇ ಸದರೀ ತಾಕೀದ್ ಮಾಡಲ್ಪಟ್ಟ ಪ್ರಕಾರ ನಡಿಸದೆ ನಿರಾಕರಿಸಿದ ಪಕ್ಷಕ್ಕೆ ಅಥವಾ ವುಪೇಕ್ಷಿಸಿದರೆ ಅಥವಾ ಅದನ್ನು ತಕ್ಕ ಜಾಗ್ರತೆಯಿಂದ ಪೂರೈಸಲಿಕ್ಕೆ ತಪ್ಪಿಹೋದರೆ ಆ ಮನುಷ್ಯನು ಪ್ರತಿ ತಪ್ಪಿತಕ್ಕೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ, (ಆ ಪ್ರಕಾರ ಮಾಡಲಿಕ್ಕೆ) ದೇರಿ ಮಾಡುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು; ಮತ್ತು ಪ್ರೆಸಿಡೆಂಟರು ಸದರೀ ಕಟ್ಟಣ ಕೆಲಸ ವಗೈರೆ ಕಾಮಗಾರಿ ಮಾಡಿಸಲ್ಪಡುವಂತೆಯಾಗಲಿ, ಬಂದೋಬಸ್ತು ಮಾಡಲ್ಪಡುವಂತೆಯಾಗಲಿ, ಆವರಣ ಕಲ್ಪಿಸಲ್ಪಡುವಂತೆಯಾಗಲಿ ಮಾಡುವದು ಮೇಲೆ ಕಂಡ ದರೋಬಸ್ತು ಯಾ ಯಾವದಾದರೂ ಕೆಲಸಗಳಿಗಾಗಿ ತಮಗೆ ಯುಕ್ತ ತೋರುವ ಪ್ರಕಾರ ಜರೂರಾದ ದರೋಬಸ್ತು ಕೆಲಸಗಳನ್ನೂ ಮಾಡುವದು ಪ್ರೆಸಿಡೆಂಟರಿಗೆ ನ್ಯಾಯವಾಗಿರತಕ್ಕದ್ದು ಮತ್ತು ಆ ಬಗ್ಗೆ ಹಿಡಿದ ಲಾಗವಡು ಇವರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲಾಗತಕ್ಕದ್ದು.

ಖಸ್ಸೈ ಮನೆಯಲ್ಲಿ ಶಿವಾಯಿ ಅನ್ಯತ್ರ ಪಶುಗಳನ್ನು ಕೊಲ್ಲುವ ಬಗ್ಗೆ ಶಿಕ್ಷೆ.

182. ಲೈಸೆನ್ಸ್ ಕೊಡಲ್ಪಟ್ಟ ಖಸ್ಸೈ ಮನೆಯಲ್ಲಿ ಶಿವಾಯಿ (ಅನ್ಯತ್ರ) ಬೆಂಗಳೂರು ಷಹರ್ ಸರಹದ್ದಿನೊಳಗೆ ಯಾವ ಸ್ಥಳದಲ್ಲಾಗಲಿ, ಯಾವದಾದರೂ ಕುರಿಯನ್ನೂ, ಮೇಕೆಯನ್ನೂ, ಹಂದಿಯನ್ನೂ ಅಥವಾ ಯಾವದಾದರೂ ದನವನ್ನೂ (ಮಾಂಸ) ಮಾರತಕ್ಕ ಬಗ್ಗೆ, ಕೊಲ್ಲುವ, ಕುಯ್ಯುವ ಅಥವಾ ಚರ್ಮ ಸುಲಿಯುವ ಯಾವ ಮನುಷ್ಯನಾಗಲಿ ಪ್ರತಿ ಜಂತುವಿಗೂ ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗ ತಕ್ಕದ್ದು.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 15ನೇ ಸೆಪ್ಟಂಬರ್ 1896.

ಸರ್ಕಾರದ ಗಂಧದ ಕೋಠಿಗಳಲ್ಲಿ ಹಾಲಿ ಉಪಯೋಗದಲ್ಲಿರುವ ಪೌಂಡ್ ವಜನೀ ಬಟ್ಟಿಗೆ ಬದಲಾಗಿ ಇಂಗ್ಲಿಷ್ ಸ್ಟ್ಯಾಂಡರ್ಡ್ ಕರ್ರಂಟ್ ವಾಕಾ ಪೌಂಡ್ ವಜನಿ ಬಟ್ಟು 1ಕ್ಕೆ $38\frac{8}{9}$ ರೂಪಾಯಿ ತೂಕವುಳ್ಳ ಬಟ್ಟುಗಳು ಗವರ್ನ್‌ಮೆಂಟಿನವರ ಮಂಜೂರಾತೀ ಅನುಸರಿಸಿ, 1897ನೇ ಇಸವಿ ಲಾಗಾಯತು ಯಲ್ಲಾ ಕೋಠಿಗಳಲ್ಲಿಯೂ ಜಾರಿಯಲ್ಲಿ ತರಲ್ಪಡುತ್ತೆ. ಆದರೆ ಚಾಲತಿ 1896ನೇ ಡಿಸೆಂಬರ್ 31ನೇ ತಾರೀಖು ವಳಗೆ, ಖರೀದಿಗೆ ತೆಗದುಕೊಳ್ಳಲ್ಪಡುವ ಗಂಧ ಹಾಲಿ ಜಾರಿಯಲ್ಲಿರುವ ಪೌಂಡ್ ಬಟ್ಟುಗಳ ಪ್ರಕಾರವೇ ವಜನಿಯಿಂದ ಕೊಡಲ್ಪಡುವದು.

ಐಯ್ಯಿಂದಾ ಜಾರಿಯಲ್ಲಿ ಬರತಕ್ಕ ಒಂದೇವಿಧವಾದ ಇಂಗ್ಲಿಷ್ ವಜನೀ ಬಟ್ಟುಗಳು ಅವುಗಳ ಸರಿಯಾದ ತೂಕ ಸಹ ಇದರಡಿ ನಮೂದಿಸಲ್ಪಟ್ಟಿರುತ್ತೆ:—

ಔನ್ಸ್ 1ಕ್ಕೆ $2\frac{3}{7}\frac{1}{2}$ ರೂಪಾಯಿ ತೂಕ	ಹಂಡ್ರೆಡ್‌ವೆಯಿಟ್ 1ಕ್ಕೆ $4,355\frac{5}{9}$ ರೂಪಾಯಿ ತೂಕ.
ಪೌಂಡ್ 1ಕ್ಕೆ $38\frac{8}{9}$ ಡಿಟ್ಟೋ	ಟನ್ 1ಕ್ಕೆ $87,111\frac{1}{9}$ ಡಿಟ್ಟೋ

ಸ್ಟ್ಯಾಂಡರ್ಡ್ ಅಂದರೆ, ನಿಷ್ಕರ್ಷಿಸಲ್ಪಟ್ಟ ಕರಾರುವಾಕಾ ತ್ರಾಸು, ಬಟ್ಟುಗಳು ಪ್ರತಿ ಕೋಠಿಯಲ್ಲಿ ಹಾಜರಿರುತ್ತವೆ. ಇವುಗಳಿಂದ ಹಾಲಿ ವಜನೀ ಬಗ್ಗೆ ಉಪಯೋಗದಲ್ಲಿರುವ ಬಟ್ಟುಗಳನ್ನ ಅಜಮಾಯಿಷಿ ಮಾಡಿಕೊಳ್ಳಬಹುದಾಗಿರುತ್ತೆ

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟ್.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟ್ಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟ್ಟೋ ,,
ಹಾಸನ	ಹಾಸನ	7ನೇ ಡಿಟ್ಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟ್ಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟ್ಟೋ ,,
ಡಿಟ್ಟೋ	ಸಾಗರ	18ನೇ ಡಿಟ್ಟೋ ,,
ಡಿಟ್ಟೋ	ತೀರ್ಥಹಳ್ಳಿ	22ನೇ ಡಿಟ್ಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟ್ ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಗೆ ಮೈಸೂರು ಡಿಸ್ಟ್ರಿಕ್ಟ್ ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಗೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿದೆ.

ಹಳೇ ತರಹೆ ಪ್ರಕಾರ.

ಸಂದಲ್ ವಿವರ.	ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.
ಸಲಾಕಿ ಅವ್ವಲ್	1	..	..	5	..	15	..	..	..	15	..	...
ಡಿಟ್ಟೋ ದುಯಂ	..	5	1	5	2	5	3	5	1	..	..	2
ಡಿಟ್ಟೋ ಸಿಯಂ	1	10	7	10	5	5	12	15	8	..	4	..
ಡಿಟ್ಟೋ ಚಹರಂ	45	15	30	..	44	..	32	10	12	..	7	..
ಡಿಟ್ಟೋ ಪಂಚಂ	7	..	10	..	10	10	37	.	25	..	14	..
ಚಿಕ್ಕ ಸಲಾಕಿ	1	2	1	..	..	..	..	..	..	..	..	..
ದೊಡ್ಡ ಜಡಾ	21	..	{ 35	..	33	..	66	5	40	..	25	..
ಚಿಕ್ಕ ಜಡಾ	3	15			5	..	8	..	4	..	2	..
ಜಡದ ರಂಬೆ	1	5			7	..	..	..	...	..	...	..
ದೊಡ್ಡ ಜಜ್ಜು	18	..	{ 61	5	30	..	{ 94	..	65	..	43	..
ಚಿಕ್ಕ ಜಜ್ಜು	3	5			11	..						
ಬಗರದದ್ದು	2	15	6	..	5	5	26	.	9	..	13	10
ಐರ್ ವಾಜಿ ಗುಬಗರು	1	..	3	..	..	10	..	..	..	..	..	..
ಗರಗಸ ಬುಕಣಿ	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಟ	1	10	1	..	{ 6	5	{ 15	10	15	..	16	..
ಚಿಕ್ಕ ಡಿಟ್ಟೋ	..	..	2	..								
ಕೆತ್ತೆ ಐರ್ ಚಿಲ್ಟ	6	..	..	..	..	..	..	..	..	..	..	..
ಹತ್ರಿ ಚಿಲ್ಟ	1	6	..	..	..	..	..	..	..	..	..	...
ಮಿಲ್ಲ ಚಿಲ್ಟ	17	10	30	..	21	5	30	..	12	..	9	..
ಬಸೋಲ ಬುಕಣಿ	1	15	10	..	14	..	14	15	5	10	6	8
ಕೊಯತ ಚಿಲ್ಟ	..	..	1	10	3	10	9	..	2	..	1	..
ಜುಮ್ಲಾ	135	15	200	..	200	..	350	..	200	..	150	..

ಹೊಸ ಯಾ ಬೊಂಬಾಯಿ ತರಹೆ ಪ್ರಕಾರ.

ಸಂದಲ್ ವಿವರ.	ಹುಣಸೂರು ಕೋಠಿ.		ಶ್ರೀರಂಗಪಟ್ಟಣ ಕೋಠಿ.	
	ಟನ್.	ಹ.	ಟನ್.	ಹ.
ವಿಲಾಯಿತಿ ಬಡ	1	.	..	10
ಚೈನಾ ಬಡ	20	..	30	
ಪಂಚಂ	28	..	89	..
ಚಿಕ್ಕ ಸಲಾಕಿ, ಘೋಟ್ಲ (ಅವ್ವಲ್)	3	...	5	..
ಡಿಟ್ಟೋ (ದುಯಂ)	2	..	1	..
ಘಟ ಬಡಲ	50	..	30	..
ಜಡಾ (ಅವ್ವಲ್)	25	..	25	..
ಡಿಟ್ಟೋ (ದುಯಂ)	25	..	12	..
ಡಿಟ್ಟೋ (ಸಿಯಂ)	20	..	8	..
ಡಿಟ್ಟೋ (ಚಹರಂ)	7	..	7	..
ಜಜ್ಜು (ಅವ್ವಲ್)	50	...	25	..
ಡಿಟ್ಟೋ (ದುಯಂ)	40	15	15	..
ಬಗರದದ್ದು	5	..	12	..
ಐರ್ ಬಗರು	5	..	14	..
ಚಿರಿಯಾ	5	..	5	..
ಐರ್ ಚಿಲ್ಟ (ಅವ್ವಲ್)	4	..	6	..
ಡಿಟ್ಟೋ (ದುಯಂ)	6	..	6	10
ಹತ್ರಿ ಚಿಲ್ಟ	1	..	2	10
ಗರಗಸ ಬುಕಣಿ	1	..	..	10
ಮಿಲ್ಲ ಚಿಲ್ಟ	30	..	50	..
ಬಸೋಲಾ ಬುಕಣಿ	7	.	10	..
ಚೇಗು ಮಿಲ್ಲ	..	..	5	..
ಕಳೆದವರುಷದ ಜಡಾ	113	15	12	15
ಸ್ಪೆಷಲ್ ಕ್ಲಾಸ್	..	10	...	..
ಟೋಟಲ್	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂಡಲ್ ಬಿಕರಿ ಮಾಡುವ ಬಗ್ಗೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ಸ್ಸಂ 15230.—ಆರ್. ಎಫ್. 155.—92ನೇ ನಂಬರ್ ರೂಲ್ಸ್‌ಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಘಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷ್ಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಯಿತರ ಆಫಿಸರಿಂದ ಆಗಲಿ ಚೀಫ್ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಜಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕಿ ನಲ್ಲಿ ತಾನು ಖರಿದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಫ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಫ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲಿ ಪಾವತಿ ಮಾಡಲಿಕ್ಕೆ ಒಂದು ಲೆಟರ್ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫಿಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದಿಯನ್ನ 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫಿಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂಡಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫಿಸರರಿಗೆ ಯುಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಭಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರಿಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫಿಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಶೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಯಿಲ್ಲದರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫಿಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ವುಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡು-ಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಬೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಯಂದಿಗೂ ಯಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂಡಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಬೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂಡಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡೆದಂಥಾ ರಶೀದಿಯು ಹಣ ಪಾವತಿ ಆಯಿತೆಂಬುದಾಗಿ ಕ್ರಯಕ್ಕೆ ಕೊಟ್ಟ ಆಫಿಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫಿಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂಡಲ್ ತೂಕ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫಿಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರಿ ಹಾಜರಿಯಲ್ಲಿ ಡೆಪ್ಯುಟಿ ಕಮಿಷ್ನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನ ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫಿಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ಒಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀ

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಆವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆ ಖುಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ

8. ಮೇಲಿನ ಸೆಕ್ಷನ್ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ವುತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ಒಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ಒಂದಕ್ಕೆ ಟನ್ ಒಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ಒಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿ ದಾರನಿಗೆ 10 ದಿನಗಳ ವಾಯಿದೇ ನೋಟೀಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹೊಂದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್ಪೆಕ್ಟರ್ ಜನರಲ್ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್ಚಾರ್ಜ್ ಆಫೀಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್ಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಒಟ್ಟು ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಸೀಮೆಯು ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್ಛಾರ್ಜ್ ಫಾರೆಸ್ಟ್ ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್ಛಾರ್ಜ್ ಫಾರೆಸ್ಟ್ ಆಫೀಸರು ತನ್ನ ಸ್ವಂತ ಜವಾಬ್ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್ಸರವೇಟರ್ ಆಫ್ ಫಾರೆಸ್ಟ್ಸ್.

ತಾರೀಖು 10ನೇ ಜುಲೈ 1896.

1896ನೇ ಇಸವಿ ಜುಲೈ ತಾರೀಖು 9ನೇ ರಾತ್ರಿ ದೊಡ್ಡಬಳ್ಳಾಪುರದ ತಾಲ್ಲೂಕು ಶಿರಸ್ತೇದಾರು ಕ್ರಿಷ್ಣಪ್ಪನವರು ವಾಸಮಾಡುವ ಮನೇ ಪೂರ್ವದಿಕ್ಕಿನ ಗೋಡೆಗೆ ಕನ್ನಾಹಾಕಿ ಕೊಠಡೀಲಿ ಪೆಟ್ಟಿಗೆಗಳಲ್ಲಿ ಇದ್ದ ಮಾಲುಗಳು ಕಳವಾಗಿರುವದಾಗಿ ಬರಸಿದ ಮಾಲುಪಟ್ಟಿ.

ಭಂಗಾರದ ನಗಗಳು.

		ರೂ.	ಆ.	ಪೈ.
1.	ಹಸರು ಕಲ್ಲಿಗೆ ಕೆತ್ತಿಸಿಂಗಾರ ಹಾಕಿ ಕಟ್ಟಿದ ಸಣ್ಣ ಶಾವಂತಿಗೆಹುವ್ವು ಸುಮಾರು ಖರೀದಿ ..	25	0	0
2.	ಭಂಗಾರದ ರ್‍ಯಾಗಟೆ ಸುಮಾರು 8 ವರಹ ತೂಕ ಅಪರಂಜಿ ..	56	0	0
3.	ಭಂಗಾರದ ಜಡೆಕುಚ್ಚುಗಳು 3ಕ್ಕೆ ಸುಮಾರು 8 ವರಹ ತೂಕ ಅಪರಂಜಿ, ಪೋಣಿಸಿದ ಧಾರ ಕಿತ್ತು ಹೋಗಿದೆ	60	0	0

ಕ್ರ.	ವಿವರ	ರೂ.	ಆ.	ಪೈ.
4.	ಚಿನ್ನದ ಸರಟು ಅಡ್ಡಿಕೆ ಕೆಂಪಿನ ಪದಕ ಹಾಕಿಧೆ, ಕೆಂಪು ಯಿಷ್ಟೆಂಬದು ಗೊತ್ತಿಲ್ಲ, ಸುಮಾರು 6ವರಹ ತೂಕ ವಳ್ಳೆಭಂಗಾರ	70	0	0
5.	ಕೆಂಪಿನ ಚಂದ್ರಮುರು ಜೊತೆ 1ಕ್ಕೆ ಬೊಂಬಾಯಿ ಮುತ್ತು ಸುತ್ತಿಧೆ, ಕೆಂಪಿನ ಅದದು ಗೊತ್ತಿಲ್ಲ	250	0	0
6.	ಮುತ್ತಿನ ಜಾಲಿಸರಪಣಿ ಅದದು ಗೊತ್ತಿಲ್ಲ	10	0	0
7.	ಮುತ್ತಿನ ವಾಲೇಸರಪಣಿ ಜೊತೆ 1ಕ್ಕೆ ಭಂಗಾರದಲ್ಲಿ ಸುತ್ತಿದ ಅದದು ಮುತ್ತು 48 ಯಿರುತ್ತದೆ ಮುತ್ತು ವುದ್ದಿನಕಾಳುಫಾತ್ರ ಯಿರುತ್ತದೆ	120	0	0
8.	ಬಿಡಿಮುತ್ತಿನ ಸರಾ 2ಕ್ಕೆ ಅದದು ಗೊತ್ತಿಲ್ಲ, ಹೆಸರುಕಾಳುಫಾತ್ರದ ಮುತ್ತುಗಳು ವಳ್ಳೇದು ..	70	0	0
9.	ಭಂಗಾರದ ಶಾವಂತಿಗೆ ಹುವ್ವು ಚಿಕ್ಕದು, ಒಂದು ವರಹ ತೂಕ ರೋಜಾಹುವ್ವಿನ ಮಾದ್ರಿಬಾಬತು ..	6	0	0
10.	ಬುಗಡಿ ಸರಪಣಿ ವಳ್ಳೆಮುತ್ತಿನ ಬಾಬತು, ಅದದು ಗೊತ್ತಿಲ್ಲ	15	0	0
11.	ಏಳು ವಳ್ಳೇಮುತ್ತಿನಿಂದ ಕಳಸಾ ಮಾಡಿರುವ ಬುಗಡಿ ಜೊತೆ 1ಕ್ಕೆ ಕೆಳಗಡೆಗೆ ಸಣ್ಣಮುತ್ತು ಸುತ್ತಿಧೆ	100	0	0
12.	ಭಂಗಾರದ ಯಾಲಗಾಯಿ ಗಾಜಿವಗ್ಯೆರೆ ಅದದು 7ಕ್ಕೆ ಸುಮಾರು 7 ವರಹ ತೂಕ ವಳ್ಳೇ ಭಂಗಾರ ವಂದು ಹವಳದ ಜಲಿಕಾಯಿ ಸಹ	60	0	0
13.	ವಳ್ಳೇ ಬಿಡಿಮುತ್ತುಗಳು ಸುಮಾರು 50—60 ಹೆಸರು ಕಾಳುಫಾತ್ರದ್ದು ..	120	0	0
14.	ಹುಲಿವುಗುರಿಗೆ ಎರಡು ವರಹ ತೂಕದ ಭಂಗಾರಕಟ್ಟಿದ್ದು ವಳ್ಳೇಭಂಗಾರ ..	10	0	0
15.	ಕೆಂಪುಕಲ್ಲಿನ ಅರಳೆಲೆ ಸುಮಾರು ಖರೀದಿ ಕೆಂಪು ಅದದು ಗೊತ್ತಿಲ್ಲ ..	20	0	0
16.	ಮಕ್ಕಳಿಗೆ ಹಾಕುವ ಬಿಳೇ ಕಲ್ಲಿನ ಶಾವಂತಿಗೆ ಹುವ್ವು	2	0	0
17.	ಚಿನ್ನದ ಗುಂಡುಬಟ್ಟು ವಳ್ಳೇಚಿನ್ನ ಸುಮಾರು ಒಂದು ವರಹ ತೂಕ	7	0	0
18.	ಭಂಗಾರದ ಕೈಸರಪಣಿ ಭಂಗಾರ ಸುಮಾರು 22 ವರಹ ತೂಕ ರುಳಿಮಾದ್ರೀ ಬಾಬತು ..	140	0	0
19.	ಭಂಗಾರದ ಅಸಲಿ ಚೊಕ್ಕ ಭಂಗಾರ ಸುಮಾರು ಒಂದು ಪಾವುಉಳ್ಳದ್ದು	140	0	0
20.	ಭಂಗಾರದ ನಾಗರ ಗೆಜ್ಜೇ ಸುತ್ತಿರುವದು, ಸುಮಾರು 8 ವರಹ ತೂಕ	56	0	0
21.	ಭಂಗಾರದ ಬಟ್ಟು ಒಂದು ಸುಮಾರು ತೂಕ ಬಣ್ಣ ಗೊತ್ತಿಲ್ಲ	1	0	0
22.	ಕೆಂಪಿನ ಮೂಗಬಟ್ಟು ವಂದಕ್ಕೆ ಸುಮಾರು ಖರೀದಿ ತೊಗರಿಬ್ಯಾಳೆ ಅಗಲ ಕೆಂಪು ..	15	0	0
23.	ಭಂಗಾರದ ಜಡೇಕುಚ್ಚಿನ ಮೇಲೆ ಹಾಕತಕ್ಕಗುಂಡು 2 ಗೊಣಸು 2ಕ್ಕೆ ಸುಮಾರು $2\frac{1}{2}$ ವರಹ ತೂಕ	10	0	0
24.	ಭಂಗಾರದ ಸಣ್ಣ ಶಾವಂತಿಗೆ ಹುವ್ವು ಸುಮಾರು 2 ವರಹ ತೂಕ ವಳ್ಳೇಭಂಗಾರ ..	15	0	0
25.	ಇಕ್ಕೇರೀ ವರಹ 3ರಕ್ಕೆ	21	0	0
26.	ನಗದು ರೂಪಾಯಿಗಳು ಒಂದು ಬಟ್ಟೇಲಿಗಂಟುಕಟ್ಟಿಹಾಕಿತ್ತು	20	0	0
27.	ಭಂಗಾರದ ಫಾಂಚೀ ಬಾಬತು ಬಿಡಿ ಫಾಂಚಿಗಳು 8ಕ್ಕೆ ಸುಮಾರು ಖರೀದಿ ತೂಕ ಗೊತ್ತಿಲ್ಲ ..	8	0	0
28.	ದೊಡ್ಡ ಮುತ್ತುಗಳು 2ಕ್ಕೆ ಮುತ್ತು ಅವರೇಕಾಳು ಫಾತ್ರದ ಬಾಬತು	100	0	0
29.	ಕಾಗದದ ಭರಣೀಲಿಹಾಕಿದ್ದ ಬಾಕೀ ಮುತ್ತುಗಳು ವಳ್ಳೇದು ಸುಮಾರು 50ಕ್ಕೆ ವುದ್ದಿನ ಕಾಳು ಫಾತ್ರದ ಬಾಬತು	10	0	0
30.	ಹತ್ತಕಡಕಿನಗೂಡು ಚಿನ್ನದ ಬಾಬತು ಸುಮಾರು $2\frac{1}{2}$ ವರಹ ತೂಕದ್ದು ತಿರಪೂ ಮರಸುತ್ತೂ ಇಲ್ಲದ್ದು	20	0	0
31.	ಬಿಡಿಯಾಗಿದ್ದ ನೆಲ್ಲೀಕಾಯಿ ಮಾಟದ ಭಂಗಾರದ ಗುಂಡು 2 ತಾಳೀ ಗುಂಡು 1ಕ್ಕೆ ತೂಕ ಗೊತ್ತಿಲ್ಲ ಸುಮಾರು ಖರೀದಿ	12	0	0
32.	ಕಂಠೀಸರಕ್ಕೆ ಹಾಕಿದ್ದ ಚಿನ್ನದಕೊಕ್ಕೆ ಸರಿಗೆ ಸಹ ಸುಮಾರು $2\frac{1}{2}$ ವರಹ ತೂಕಕ್ಕೆ ..	14	0	0
33.	ಪಂಚರತ್ನದ ವುಂಗರ 1ಕ್ಕೆ	70	0	0
34.	ಚಿನ್ನದ ಗೂಡಿನ ವಜ್ರದವುಂಗ್ರ 1ಕ್ಕೆ ಅವರೇ ಬ್ಯಾಳೇ ಅಗಲಕ್ಕೆ ಸ್ವಲ್ಪ ಕಮ್ಮಿಯಾದ ವಜ್ರದ ಹಲಿಗೆ ವುಳ್ಳದ್ದಕ್ಕೆ	110	0	0
35.	ಚಿನ್ನದ ಗೂಡಿನ ಕೆಂಪಿನವುಂಗ್ರ 1ಕ್ಕೆ ಅವರೇಬ್ಯಾಳೇ ಅಗಲ ಕೆಂಪಿನ ಬಾಬತು ..	70	0	0
36.	ಚಿನ್ನದ ಚೂರುಗಳು ಸುಮಾರು 5 ವರಹ ತೂಕದ ಬಾಬತು	35	0	0
37.	ನಗದು ರೂಪಾಯಿಗಳು	159	0	0
38.	ನೂರು ರೂಪಾಯಿಗಳ ನೋಟು 3ಕ್ಕೆ ಮದ್ರಾಸು ಸರ್ಕಲ್ ಬಾಬತು ನಂಬರುಗಳು ಗೊತ್ತಿಲ್ಲ ..	300	0	0
39.	ಪಚ್ಚೇವುಂಗ್ರ 1ಕ್ಕೆ ತೊಗರೀ ಬ್ಯಾಳೇ ಅಗಲದ ಪಚ್ಚೇಭಂಗಾರದ ಗೂಡಿನ ಬಾಬತು ..	50	0	0
40.	ಚಿನ್ನದ ಸಣ್ಣ ಬೆಂಡವಾಲೆ ದೇವರ ಬಾಬತು	3	0	0
41.	ಭಂಗಾರದ ವಾಕು ಜೊತೆ 1ಕ್ಕೆ ಸುಮಾರು 3 ವರಹ ತೂಕ ವಳ್ಳೇ ಭಂಗಾರ ..	21	0	0
42.	ನಾಲ್ಕು ಮುತ್ತುಗಳು ಹಾಕಿದ ಕಡಕು ಜೊತೆ	10	0	0
43.	ಹತ್ತಕಡಕಿನ ವಜ್ರದ ಹಲಿಗೆ ಜೊತೆ 1ಕ್ಕೆ ವಜ್ರಗಳು ಅವರೇ ಬ್ಯಾಳೇ ಅಗಲಕ್ಕೆ ಸ್ವಲ್ಪಕಮ್ಮಿಯಾಗಿತ್ತು	50	0	0
44.	ಬಿಡಿ ಯಮುನಾಕಲ್ಲು 2ಕ್ಕೆ ಸಿಹ್ಮದ ದುಡ್ಡಿನ ದುದ್ಗಾಣಿ ಅಗಲ ಯಿದದ್ದು	2	0	0
45.	ಚೌಕಳೀ ಯಮುನಾಕಲ್ಲು 1ಕ್ಕೆ ಯಿದರ ಮೇಲೆ ಲಕ್ಷ್ಮೀನರಸಿಹ್ಮಯಂತ ಬಾಳಬಂದು ಅಕ್ಷರದಲ್ಲಿ ಕೆತ್ತಿ ಸುತ್ತಲೂ ಜೇಲ್ ಯಿರುತ್ತದೆ	5	0	0
46.	ಭಂಗಾರದ ವುಂಗರ 1ಕ್ಕೆ ಬೆಳ್ಳೀ ಬಿಲ್ಲೇಲಿ ಲಕ್ಷ್ಮೀ ವೆಂಕಟೇಶಪ್ರಸನ್ನಾಯಂತ ಬಾಳಬಂದು ಅಕ್ಷರದಲ್ಲಿ ಕೆತ್ತಿಧೆ, ಭಂಗಾರ ಸುಮಾರು $3\frac{1}{2}$ ವರಹ ತೂಕ ಚೊಕ್ಕ ಭಂಗಾರ	30	0	0
		1,588	0	0

		ರೂ.	ಆ.	ಪೈ.

ಬೆಳ್ಳೀ ಬಾಬತು ಮಾಲುಗಳು.

		ರೂ.	ಆ.	ಪೈ.
47.	ಬೆಳ್ಳಿ ಸಣ್ಣದೀಪದ ಕಂಭ 1ಕ್ಕೆ ಸುಮಾರು 2 ರೂಪಾಯಿ ತೂಕದ್ದು. ..	2	0	0
48.	ಬೆಳ್ಳಿ ಸಣ್ಣಥಾಲಿ ಹೂಜೀತರಹಾದ್ದು ಸುಮಾರು 3 ರೂಪಾಯಿ ತೂಕದ್ದು. ..	3	0	0
49.	ಬೆಳ್ಳಿ ಘಡಿಯಾರದ ಸರಪಣಿ 1ಕ್ಕೆ ಸುಮಾರು ಖರೀದಿ	27	0	0
50.	ಬೆಳ್ಳಿ ನಶ್ಯದ ಡಬ್ಬಿ 1ಕ್ಕೆ ಸುಮಾರು 3 ರೂಪಾಯಿ ತೂಕ.	5	0	0
51.	ಬೆಳ್ಳಿ ತುಂಡುಗಳು 2ಕ್ಕೆ ಸುಮಾರು 10—12 ರೂಪಾಯಿ ತೂಕ	12	0	0
52.	ಬೆಳ್ಳಿ ತಂಬಿಗೆ 35 ರೂಪಾಯಿ ತೂಕ ಬೇಲೂರು ತರಹಾದ್ದು	35	0	0
53.	ಬೆಳ್ಳಿ ಗುಂಡುತಟ್ಟೆ 25 ರೂಪಾಯಿ ತೂಕದ್ದು	25	0	0
54.	ಬೆಳ್ಳಿ ಬಟ್ಲು 3ಕ್ಕೆ ದೊಡ್ಡದು 1 ಅದಕ್ಕೆ ಸ್ವಲ್ಪ ಸಣ್ಣದು 1 ಅದಕ್ಕೆ ಸಣ್ಣದು 1ಕ್ಕೆ ಸಹ ಸುಮಾರು 26 ರೂಪಾಯಿ ತೂಕ	26	0	0
55.	ಬೆಳ್ಳಿ ಗೆಜ್ಜೆ ಸುತ್ತಿದ ಸರಪಣಿ ಅದರ ಕಡ್ಡೀ ಸಹ ಸುಮಾರು 7 ರೂಪಾಯಿ ತೂಕ ..	7	0	0
56.	ಬೆಳ್ಳಿ ವುದ್ಧರಣೆ ಸುಮಾರು 2 ರೂಪಾಯಿ ತೂಕದ್ದು	2	0	0
57.	ಬೆಳ್ಳಿ ಪಂಚಪಾತ್ರ 14 ರೂಪಾಯಿ ತೂಕದ್ದು	14	0	0
58.	ಬೊಂಬಾಯಿ ಬಳೆ ವಳಕ್ಕೆ ಹಾಕಿದ್ದ ಬೆಳ್ಳಿ ತಿರಪು 2ಕ್ಕೆ ಸುಮಾರು 1 ರೂಪಾಯಿ ತೂಕ ..	1	0	0
59.	ಬೆಳ್ಳಿ ಕಡಕಿನ ಗುಂಡಿನ ಜೊತೆ 1ಕ್ಕೆ	1	0	0
		160	0	0

ಚಿಲ್ಲರೆ ಸಾಮಾನುಗಳು.

		ರೂ.	ಆ.	ಪೈ.
60.	ವುದ್ದಿನಕಾಳು ಘಾತ್ರದ ಹವಳದ ಸರ ಕುತ್ತಿಗ್ಗೆ ಹಾಕುವದು ಹಿತ್ತಾಳೆ ಸರಿಗೇಲಿ ಸುತ್ತಿದೆ ಸುಮಾರು ಖರೀದಿ ಅದದು ಗೊತ್ತಿಲ್ಲ	2	0	0
61.	ಹಸರುಕಲ್ಲು ಹಾಕಿದ ಗಿಲ್ಟಿನ ಚಳತುಂಬು ಜೊತೆ 1ಕ್ಕೆ	2	0	0
62.	ಮದ್ರಾಸ್ ಬುಗಡಿ ಜೊತೆ 1ಕ್ಕೆ ಬೊಂಬಾಯಿ ಮುತ್ತು ಸುತ್ತಿದೆ ..	7	0	0
63.	ಕೈಗೆ ಕಟ್ಟುವ ಹವಳ, ವಳ್ಳೀ ಬೆಳ್ಳೀಸರಿಗೇಲಿ ಸುತ್ತಿರುವದು ಸಣ್ಣ ವುದ್ದಿನಕಾಳು ಘಾತ್ರದ ಹವಳಗಳು	2	0	0
64.	ಗಿಲ್ಟಿನ ಬಾಬತು ಕಂಠಿ ಗುಂಡುಗಳು 700ಕ್ಕೆ	30	0	0
65.	ಸಣ್ಣ ತುಳಶೀಮಣಿ ಸರ ಭಂಗಾರದ ಸರಿಗೇಲಿ ಸುತ್ತಿದೆ ಮುತ್ತು ಪಚ್ಚೆ ಕೆಂಪು ವಗೈರೆ ಹಾಕಿದ್ದು ಅದದು ಯಾವದೂ ಗೊತ್ತಿಲ್ಲ	60	0	0
66.	ಬಿಳೀ ಹರಳಿನದು, ಕೆಂಪು ಹರಳಿನದು, ಕೆಂಪು ಬಿಳಿ ಹರಳಿನದು, ಹಸರು ಹರಳಿನದು, ವುಂಗ್ರಗಳು ಬಿಲೂಚೀ ಜನಗಳು ಮಾರುವದಕ್ಕೆ ತಂದದ್ದು	5	0	0
		108	10	0

ಬಟ್ಟೆಗಳು.

		ರೂ.	ಆ.	ಪೈ.
67.	ಬೆಂಗಳೂರು ಕಲಾಬತ್ತು ಅಂಚಿನ ಬುಗಡಿ ಶೀರೆ 1ಕ್ಕೆ ವುಟ್ಟದ್ದು ಹೊಸದು ಪೈಟನೆ ಬಾಬತು ...	100	0	0
68.	ರೇಷ್ಮೆಗೂಡಿನ ಶಾಲ್ಯದ ಪಂಚೆ ಜೊತೆ 1ಕ್ಕೆ ಅಗಸನಿಗೆ ಹಾಕಿದ್ದು	14	0	0
69.	ಮದ್ರಾಸ್ ಕೆಂಪಿನ ಮಡಿಶೀರೆ 1ಕ್ಕೆ	3	0	0
70.	ರೇಷ್ಮೆಸಾಲಾರಿ ಬುಗಡಿ ಅಂಚಿನ ಕೆಂಪು ಶೀರೆ 1ಕ್ಕೆ ಹೊಸದು	18	0	0
71.	ರೇಷ್ಮೆ ಮುಂಗಿ ಕೊರ್ನಾಡು ಹೊಸ ಶೀರೆ 1ಕ್ಕೆ	18	0	0
72.	ಸಾಲಾರಿ ಕೊರ್ನಾಡು ಹೊಸ ಶೀರೆ 1ಕ್ಕೆ	12	0	0
73.	ಚೌಕಳಿ ನೂಲಂಚಿನ ಕೊರನಾಡು ಶೀರೆ 1ಕ್ಕೆ ಹೊಸದು	2	0	0
74.	ಬನಾರಸ್ ಬಾಬತು ಹೊಲದ ಕುಬುಸ ಚಿನಡಿ ಬಟ್ಟೆ ಇರುವದು ಕೆಂಪು ಚಿನಡಿ ಬಾಬತು ಕಲಾಬತ್ತು ಅಂಚು ಇರುತ್ತದೆ	10	0	0
75.	ಕೆಂಪು ಅಂಚಿನ ಬಿಳೀಗೆರೆ ಬಾಬತು ದೇಶದ ಖಣಕ್ಕೆ	1	8	0
76.	ಹಳದಿ ದಮಾಸ್ ಹೊಲದ ಕುಪಸ 1ಕ್ಕೆ	3	0	0
77.	ಗಂಟಿನಲ್ಲಿ ಕಟ್ಟಿದ್ದ ಬಾಕಿ ಕುಪಸಗಳು 20ಕ್ಕೆ ತಪ್ಸೀಲ್ ಗೊತ್ತಿಲ್ಲ	30	0	0
78.	ಬಿಳಿ ಫ್ಲಾನಲ ಕುಪಸ 1ಕ್ಕೆ	1	0	0
79.	ಬಿಳಿ ಟವಲ್ 1ಕ್ಕೆ	0	6	0
80.	ಬಿಳಿ ಮಗ್ಗಲು ಹಾಸಿಗೆಗಳು 6ಕ್ಕೆ ವಗದ್ದು	4	8	0
81.	ಬಿಳಿ ಷರಾಯಿ 2ಕ್ಕೆ	5	0	0
82.	ಬಿಳಿ ದುಪ್ಪಟಿಗಳು 2ಕ್ಕೆ ವಗದ್ದು	6	0	0
83.	ಕರೀಅಂಚಿನ ಪಂಚೆಗಳು 4ಕ್ಕೆ ವಗದ್ದು.	6	0	0
84.	ಬಿಳಿ ಮಲ್ಲು ಪಂಚೆ 4ಕ್ಕೆ ವಗದ್ದು	4	0	0
85.	ಬಿಳಿ ಕೋಟುಗಳು 3ಕ್ಕೆ ವಗದ್ದು	6	0	0
86.	ಹೊದಿಯುವ ಸಣ್ಣ ಅಂಚಿನ ಪಂಚೆ 2ಕ್ಕೆ ವಗದ್ದು	4	0	0
87.	ಶಾಲ್ಯದ ದೊಡ್ಡ ಅಂಚಿನ ಪಂಚೆ ವಗದ್ದು	6	0	0
88.	ಬಿಳಿ ಕಬಜ 4ಕ್ಕೆ ವಗದ್ದು	4	0	0

		ರೂ.	ಆ.	ಪೈ.
89.	ಬಿಳಿ ಕೊಳ್ಳೇಗಾಲದ ಕಲಾಬತ್ತಿನ ರುಮಾಲು ನಾಲ್ಕು ಕಡೆ ಕೋರು ಇದೆ ಪೈಕಿ ಯರಡುಕಡೆ ನೂಲು ಬರೀಸರಿಗೆ ಬುಗಡಿ ಇದೆ ಇನ್ನೂ ಯರಡು ಕಡೆ ಕೋರುಗೂಡುಗಳು ಮತ್ತು ಬುಗಡಿ ವುಳ್ಳದ್ದು 7 ಮಳದ್ದು ಹೊಸದು ವಂದುವಗೆ ಆಗಿದೆ ಕೊರು ಯರಡು ಬೆಟ್ಟಗಲ ಇರುತ್ತದೆ. ..	40	0	0
90.	ರೇಷ್ಮೆ ಬಾಬತ್ತು ಅಂಚು ಇಲ್ಲದ ಗದ್ದೇಮುಡಿ ರುಮಾಲ್ 1ಕ್ಕೆ	27	0	0
91.	ಮಧುರೆ ಕಲಾಬತ್ತು ಅಂಚಿನ ರುಮಾಲ್ 1ಕ್ಕೆ	35	0	0
92.	ಕರೀ ಕೊಳ್ಳೇಗಾಲದ ರುಮಾಲ್ 1ಕ್ಕೆ ನಾಲ್ಕು ಕಡೆ ಜರತಾರೀ ಗೂಡಿನ ಕೋರು ಇದೆ ಯರಡು ಬೆಟ್ಟಗಲ ಅಂಚು	30	0	0
93.	ಬಿಳಿ ಮಲ್ಲು ರುಮಾಲ್ 2ಕ್ಕೆ	4	0	0
94.	ದಿಂಬಿನ ಬಿಳೇಚೀಲ 4ಕ್ಕೆ	2	0	0
95.	ಕೆಂಪು ಪೈಟಣಿ ಶೀರೆ ಕಲಾಬತ್ತು ಅಂಚಿನ ಶೆರಗುವುಳ್ಳದ್ದು, ವುಟ್ಟದ್ದು	50	0	0
96.	ಯಂಟುಮಳದ ಶಾಯಿಗಂಬಿ ಕಲಾಬತ್ತು ಅಂಚಿನ ಪಂಚೆ ಹೊದ್ದದ್ದು 1ಕ್ಕೆ	6	0	0
97.	ಪಂಚೆ 8 ಮಳದ್ದು ವಗದ್ದು ಜೊತೆ 1ಕ್ಕೆ	2	0	0
	ಜುಮ್ಲಾ	3,310	6	0

ಮೇಲ್ಕಂಡ ಮಾಲುಗಳ ಕಿಮ್ಮತ್ತು ವೊತ್ತ ಗೊತ್ತಿಲ್ಲ ಬಾಯಿಜ್ಞಾಪಕದ ಮೇಲೆ ಬರಸಿ ಇರುತ್ತೆ, ಕರಾರುವಾಕಾ ಜ್ಞಾಪಕ ಸಾಲದು, ಮೇಲ್ಕಂಡ ಮಾಲುಗಳು ಸಿವಾಯಿ ಇನ್ನೇನು ಹೋಗಿರುತ್ತದೆಂಬದು ಈಗ ಜ್ಞಾಪಕದಲ್ಲಿ ಇಲ್ಲಾ.

ದೊಡ್ಡಬಳ್ಳಾಪುರ ತಾಲ್ಲೂಕು ತೂಬಗೆರೆ ಸ್ಟೇಷನ್ ಸರಹದ್ದು ಹಾಡೋನಹಳ್ಳಿಯಲ್ಲಿ ಇದ್ದ ಹನುಮಿ ಯಂಬುವಳ ಚಹರೇಪಟ್ಟಿ.

ತಾರೀಖು 24ನೇ ಆಗಸ್ಟ್ 1896.

ಹೆಸರು ಹನುಮಿ, ಜಾತಿ ಮೊರಸುವಕ್ಕಲಿಗರು, ವಯಸ್ಸು 30—35 ವರುಷ, ಎಣೆಗೆಂಪು, ಗುಂಡು ಮುಖ, ಹಣೇಮೇಲೆ (1) ಹಚ್ಚೆ ಇದೆ. ನೂಲಿನ ಕರೀಶೀರೆ, ಬಿಳೀಶೀರೆ ವುಡತಕ್ಕವಳು, ಇವಳಿಗೆ ಹಾಡೋನಹಳ್ಳಿ ಹನುಮಂತಣ್ಣನ ಮಗ ಮರಿಯಪ್ಪ ಖಾಸಾ ಅಣ್ಣನಾಗಬೇಕು. ಇವಳನ್ನ ಚಿಣವೇ ಕೆಳಗೆ ಬುಲ್ಲಹಳ್ಳಿಗೆ ಮದುವೆ ಆಗಿತ್ತು. ಇವಳ ಗಂಡನ ಹೆಸರು ಸುಬ್ಬಣ್ಣ, ಇವ ಘವತಿಯಾಗಿ ಧಾನೆ, ಜಾತಿ ಕೆಟ್ಟು ಹೋಗಿಧಾಳೆ, ಈಗ 6 ತಿಂಗಳ ಕೆಳಗೆ ಹಾಡೋನಹಳ್ಳಿಗೆ ಬಂದು ಹೋದವಳು ಪತ್ತೆ ಇಲ್ಲವೆಂದು ಹೇಳುತ್ತಾರೆ.

ಬಿ. ಕುಪ್ಪುಸಾಮಿನಾಯುಡು,
ಫಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಬಾಗೇಪಲ್ಲಿ ತಾಲ್ಲೂಕು ಕಚೇರಿಯಿಂದ.

ಇಸ್ತಿಹಾರ್‌ನಾಮೆ.

ತಾರೀಖು 18ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಗ್ರಾಮಾಂತ್ರಗಳಲ್ಲಿ ಯಿರುವ ಕುರಂಗದಕಲ್ಲು 96—97ನೇ ದುರ್ಮುಖಿ ಸಂವತ್ಸರಕ್ಕೆ ದಾಖಲಾಗತಕ್ಕದ್ದನ್ನ 1896ನೇ ಇಸವಿ ಮಾಹೆ ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆ.

2. ಈ ಹರಾಜು ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರ್ರವರು ಮಾಡಿಸುತ್ತಾರೆ.

3. ಇಜಾರೆಯು ಪ್ರತಿ ಸಾಲ್ ಜುಲೈ ಲಾಗಾಯತು ಒಂದು ವರ್ಷದ ವರೆಗೆ ಯಿರತಕ್ಕದ್ದು.

4. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ಮಾಡುತ್ತಾರೋ ಅಥವಾ ಯಿತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಿ ಅವರಿಂದ ಪಡಕೊಂಡುಇರುವ ಅಧಿಕಾರಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರನು ಹರಾಜುಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25ರೂ. ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ರೂಪಾಯಿ ಒಂದಕ್ಕೆ ಮಂದಾಣೆ ಪ್ರಕಾರ ಆಗುವ ಲೋಕಲ್ ಸೆಸ್ಸ್ ಸಹಿತ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ದುಸರಾ ಹರಾಜ್ ಮಾಡಲ್ಪಟ್ಟು ಅದರಿಂದ ವುಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

6. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾಯ ಹಿಡುವಳಿದಾರನ ಅನುಮತಿ ವಿನಹ ಅರಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರರಿಗೇ ವಿನಹ ಇತರರಿಗೆ ಮಾರುವದಕ್ಕಾಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

7. ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಕಾವಲ್ ಇಜಾರೆದಾರರ ಹಕ್ಕಿಗೆ ಆಟಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರ್ಕಾರದವರು ದರಖಾಸ್ತು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುವದಿಲ್ಲ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಮಾಡಿಸಬೇಕು.

H13

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 23ನೇ ಸೆಪ್ಟಂಬರ್ 1896.

1. ಕಂದಾಯದ ಬಾಕಿದಾರರಾದ ಹನುಮಂತರಾಯನಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಫಾರ್‌ಫಿಟ್ಟಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಸಿಡ್ಲಘಟ್ಟ ತಾಲ್ಲೂಕು ಅಮಲ್ದಾರ್ರ ಕಚೇರೀಲಿ 1896ನೇ ನವಂಬರ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1896—97ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 1,408—13—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿಮಾಡಲ್ಪಡದೆ ಹೋದ್ದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ, ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

414

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಸೀಲ್.									ಸರಕಾರಕ್ಕೆ ಬರಬೇಕಾದ ಕೊಟ್ಟೆಷ್ಟು ಹ ಬಗ್ಗೆ ಹೆಚ್ಚಿನಾದ ಬಾಕಿ ಮೊಬಲಗು.		
				ಕಟ್ಟಡಗಳು.		ಜಮೀನು.									
				ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಕಂದಾಯ.					
1	2	3	4	5	6	7	8	9		10			11		
					ರೂ. ಆ. ಪೈ.			ಎ.	ಗುಂ.	ರೂ.	ಆ.	ಪೈ.	ರೂ.	ಆ.	ಪೈ.
ಸಿಡ್ಲಘಟ್ಟ.	ಜಂಗಮಕೋಟೆ.	ಅಂಗಟಟ್ಟಿ ಕಾರಂಗಣಹಳ್ಳಿ ಗ್ರಾಮ.	ಹನುಮಂತ ರಾವ್.	..	0	ಪೂರಾ ಗ್ರಾಮ.	ಖುಷ್ಕೀ	302	28	516	8	0	1408	13	0
							ಬಾಗಾಯತು	18	28	106	0	0			
							ಪರಂಪೋಕ	92	14	1	8	0			
								413	30	624	0	0	ಹರಾಜ್ ತಾರೀಖು ವರಿವಿಗೆ ಬಡ್ಡಿ ಕೊಡಬೇಕು.		

* ಈ ಹರಾಜು ಹಿಂದಿನವರು ಮಾಡಿದ ಭೋಗ್ಯ ವಗೈರೆಗಳಿಂದ ಯೇನೂ ಬಾಧಕವಾಗುವದಿಲ್ಲ.

ತಾರೀಖು 13ನೇ ಆಗಸ್ಟ್ 1896ನೇ ಇಸವಿ.

ಲ್ಯಾಂಡ್ ರವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿ ಯಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರು ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜು ಕೈದಾದ ಕೂಡ್ಲೆ ಚಡಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣೀ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯಿತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರಿ ರಜಾ ದಿವಸವಾಗಿದ್ದರೆ, ಆ ತರುವಾಯ ಆಫೀಸು ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನು ಪಾವತಿಮಾಡಬೇಕು.

4. ಪೂರಾ ಹರಾಜು ಮೊಬಲಗನ್ನು ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ ಠೇವಣೀ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾಬಾಕಿ ವುಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸ್ವತ್ತು ಪುನಃ ಹರಾಜುಮಾಡಡುವದು ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನು ಸದರೀ ಸ್ವತ್ತಿಗೇ ಆಗಲಿ ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜು ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ ಯಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣಾದರಿಂದ ವಿಶೇಷ ತೊಂದರೆ ವುಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರು ಆವಶ್ಯಕವಾದ ಶಿಫಾರಸ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡೆಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾಗಿದ್ದಲ್ಲಿ ಆ ಮೇರೆ ಕಮ್ಮಿಯಾದಷ್ಟು ಮೊಬಲಗನ್ನು ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿ ಯಂತೆ ವಸೂಲ್ಮಾಡಲ್ಪಡುವದು.

5. ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟಿಯಿರುತ್ತೆ.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್‌ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು. ಹಾಗಿಲ್ಲದೆ ಯಿದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜ್ ಖಾಯಂ ಆದ ನಂತರ ಜಮೀನನ್ನು ಹಿಡುವಳಿಯಲ್ಲಿ ಯಿಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿ ಯಾನೆ ಬರಹಮೂಲಕವಾದ ಅಪ್ಪಣೆಯನ್ನು (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ (ಡಿ) ಯಲ್ಲಿ ಕಂಡ 2ನೇ ನಂಬರು ಫಾರಂ) ಸವಾಲ್‌ದಾರನು ಅಮಲ್‌ದಾರ್‍ರಿಂದ ಹೊಂದುವನು.

ಚಿಕ್ಕಬಳ್ಳಾಪುರದ ತಾಲ್ಲೂಕು ಪೇರೇಸಂದ್ರದ ಹೋಬಳಿಯಲ್ಲಿ ಹೊಸದಾಗಿ ತಯಾರಾಗಿರುವ ರಾಮಸಾಗರ ಕೆರೇ ನೀರಿನಿಂದ ಸಾಗುವಳಿಗೆ ಬರುವ ಚಿಕ್ಕಬಳ್ಳಾಪುರದ ತಾಲ್ಲೂಕು ಪೇರೇಸಂದ್ರದ ಹೋಬಳಿ ಬೋಯಿನಹಳ್ಳೀ ಗ್ರಾಮದ ಸರ್ವೇ ನಂಬರುಗಳು ಹರಾಜು ಬಗ್ಗೆ ತಯಾರಾದ ತಪ್ಸೀಲ್ ತಖ್ತಾ.

415

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೇ ನಂಬರ್.	ಬಾಬು ತರೀ ಖುಷ್ಕೀ ಬಾಗಾಯಿತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ವಗೈರೆ. ಕೂಡಿದ ಮಟ್ಟ ಗೆಕರಾರ್ಯಾಕಾ ತಪ್ಶೀಲ್.	ಹರಾಜು ಸ್ಥಳ ತಾರೀಖು ಮತ್ತು ಕಾಲ.	ಹರಾಜು ನಡಿಸತಕ್ಕವರ ಹೆಸರು.	ಕುಪ್ಪವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊದಲಗು ಮತ್ತು ಇತರ ಷರಾ.	
1	2	3	4	5	6	7	8	9	10	11	
					ಎ. ಗುಂ.	ರೂ. ಆ. ಪೈ.					
ಚಿಕ್ಕಬಳ್ಳಾಪುರ	ಪೇಠೇಸಂದ್ರ	ಬೋಯಿನಹಳ್ಳಿ	1	ತರೀ	1—32	7 8 0	..	ಈ ಜಮೀನ್‌ಗಳ ಬಳಿ 1896ನೇ ಇಸವಿ ಅಕ್ಟೋಬರ್ 26 ಯಿಪ್ಪತ್ತಾರನೇ ತಾರೀಖು ಸೋಮವಾರ ದಿವಿ 11 ಘಂಟೆಗೆ.	ಚಿಕ್ಕಬಳ್ಳಾಪುರದ ಅಮಲ್‌ದಾರ್.		ಈ ಜಮೀನ್‌ಗಳು ಈಗ ಇರುವ ಹಳೇ ಕಾಲ್ವೇ ನೀರಿನಿಂದಲೇ ಸಾಗುವಳಿ ಮಾಡಿಕೊಳ್ಳಬೇಕಾಗಿರುತ್ತೆ.
			9	ಖುಷ್ಕೀ	3—19	5 8 0	..				
			11	ತರೀ	3—10	22 0 0	ಜಾಲಿಗಿಡ 1				
			27	ತರೀ	0—18	3 0 0	..				
			108	ತರೀ ಖುಷ್ಕೀ	1—29 0—23	10 0 0	ಜಾಲಿಗಿಡ 2				
			133	ತರೀ ಖುಷ್ಕೀ	1—17 0— 6	8 0 0	ಡಿಟೋ 3				
			134	ತರೀ ಖುಷ್ಕೀ	0—24 0—39	4 8 0	ಡಿಟೋ 1				
			127	ಖುಷ್ಕೀ	1—39	2 12 0	ಜಾಲೀ ಹುಂಗೀ ವಗೈರೇ 202				
			1 127	ಡಿಟೋ	1—22	2 0 0					
			2 127	ಡಿಟೋ	2— 6	3 0 0					
			3 127	ಡಿಟೋ	1—37	2 12 0					
			4 26	ಖರಾಬು	0—15	ಖರಾಬು	..				
			1 28	ಡಿಟೋ	1—25	ಖರಾಬು	..				

…ನ್ವೇ 26—28ನೇ ನಂಬರು ಖರಾಬು ಜಮೀನ್‌ಗಳಿಗೆ ಬಾಜೂ ಆಕಾರ ಕಂಡ ನಂಬರುಗಳ ದರದಂತೆ ದಾಖಲ್ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು.

…896ನೇ ಇಸವಿ ಆಗಸ್ಟ್ ತಾರೀಖು 11ರಲ್ಲು ನಡೆದ ತುಮಕೂರ್ ಡಿಸ್ಟ್ರಿಕ್ಟ್ ಫಂಡ್ ಬೋರ್ಡ್ ಪ್ರೊಸೀಡಿಂಗ್ಸ್.

ಅಫಿಷಿಯಲ್ ಮೆಂಬರುಗಳು ಹಾಜರ್.

…ಸ್ಟರ ಡಳಾಳ್ ಸಾಹೇಬರವರು ತುಮಕೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್.
„ ಮಿರ್ಕಮಾಲುದ್ದೀನ್ ಅಲ್ಲೀಖಾನ್ ಸಾಹೇಬರವರು ಟ್ರೆಜರಿ ಅಸಿಸ್ಟೆಂಟ್ ಕಮ್ಮಿಷನರ್.
3. „ ನಂಜಪ್ಪನವರು ತುಮಕೂರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರಜನ್.
4. „ ತುಮಕೂರ್ ತಾಲ್ಲೂಕು ಅಮಲ್‌ದಾರು ಮಹಮದ್ ರಜಾ ಸಾಹೇಬರವರು.
5. ಮೆಸ್ಟರ ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್‌ದಾರು ಕಂಠೀರವಾಚಾರು.
6. „ ಗುಬ್ಬೀ ತಾಲ್ಲೂಕು ಅಮಲ್‌ದಾರು ಸೀತಾರಾಮಯ್ಯನವರು.
7. „ ಪಾವಗಡ ತಾಲ್ಲೂಕು ಅಮಲ್‌ದಾರು ರಾಘವೇಂದ್ರರಾಯರು.
8. „ ತುಮಕೂರು ತಾಲ್ಲೂಕು ಅಮಲ್‌ದಾರು ಶಾಮರಾಯರು.

ಗೈರ್ ಹಾಜರ್.

1. ಮಿಸ್ಟರ್ ನಾರಾಯಣರಾವ್ ಡೆಪ್ಯುಟಿ ಕಮ್ಮಿಷನರ್.
2. ,, ಮಧ್ದಗಿರಿ ತಾಲ್ಲೂಕು ಅಮಲ್ದಾರ್ ಚಿವುಡಯ್ಯನವರು.
3. ಮಿಸ್ಟರ್ ಶಿರಾ ತಾಲ್ಲೂಕ್ ಅಮಲ್ದಾರ್ ವೇದಾಂತಬೋಗಂ ಅಯ್ಯಂಗಾರ್ರು.
4. ,, ತಿಪಟೂರು ತಾ|| ಅಮಲ್ದಾರ್ ಶೀತಾರಾಮಯ್ಯನವರು.

ನಾನ್ ಅಫಿಷಿಯಲ್ ಮೆಂಬರುಗಳು ಹಾಜರ್.

1. ಮಿಸ್ಟರ್ ರಾಮದಾಸಪ್ಪನವರು.
2. ,, ಶ್ರೀನಿವಾಸ ತಾತಾಚಾರ್ರು.
3. ಮಿಸ್ಟರ್ ಆಬಿದಲ್ಲೀ ಸಾಹೇಬರವರು.

ಗೈರ್ ಹಾಜರ್.

1. ಮಿಸ್ಟರ್ ಸೈಯದ್ ಮುಸ್ತಫ್ ಸಾಹೇಬರವರು.
2. ,, ಅಗಳಿ ಕೃಷ್ಣಪ್ಪನವರು.
3. ಮಿಸ್ಟರ್ ಚಿಕ್ಕಣಶೆಟ್ಟರು.
4. ,, ಗಂಗಣ್ಣಶೆಟ್ಟರು.

1. ಮಧ್ಧಗಿರಿ, ಸಿರಾ, ಪಾವಗಡ ಮತ್ತು ತುರ್ವೇಕೆರೆ ಲೋಕಲ್ ಫಂಡ್ ಡಿಸ್ಪೆನ್ಸರಿಗಳಲ್ಲಿ ನೀರು ತರತಕ್ಕ ನೌಕರರು ತಮ್ಮ ಕೆಲಸದೊಂದಿಗೆ ಅಡಿಗೆಯನ್ನು ಸಹ ಮಾಡುವದಕ್ಕೋಸ್ಕರ ಹಾಲಿ ಅವರಿಗೆ ಸಲ್ಲುತ್ತಲಿರುವ ಮಾಹೆಯಾನಾ ತಲಬು ಅಲ್ಲದೆ ಫೀ ಇಸಂಗೆ 3 ರೂಪಾಯಿನಂತೆ ಅಲೌನ್ಸ್ ಕೊಡಬೇಕೆಂಬುವದನ್ನು ಮಂಜೂರ್ಮಾಡಿಯೂ ಮತ್ತು ಲೋಕಲ್‍ಫಂಡ್ ಡಿಸ್ಪೆನ್ಸರಿಗಳಲ್ಲಿ ಕಾಯಿಲೆ ಜನರ ತಿಂಡೀಖರ್ಚು ಡಿಸ್ಟ್ರಿಕ್ಟು ಫಂಡಿಗೇನೇ ಪೂರ್ತಾ ಹ್ಯಾಗೆ ದಾಖಲಾಗುವದೋ ಬದಸ್ತೂರ್ ಮೇಲ್ಕಂಡ ಅಲೌನ್ಸ್ ಖರ್ಚು ಡಿಸ್ಟ್ರಿಕ್ಟು ಫಂಡಿಗೇನೆ ದಾಖಲ್ಮಾಡಬೇಕೆಂದು ತಲ್ಪಿದ 1896ನೇ ಇಸವಿ ಜುಲೈ 9ನೇ ಮುರ್ಕುಂ 462.—4 ಎಲ್. ಎಫ್. 112.—95ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸನ್ನು ಓದಲಾಯಿತು, ಮೇಲ್ಕಂಡ ಪ್ರೊಸೀಡಿಂಗ್ಸಿನಲ್ಲಿ ಗವರ್ನಮೆಂಟಿನವರು ಅಪ್ಪಣೆ ಕೊಡಿಸಿರುವಂತೆ ನಡಿಸಲು 1896—97ನೇ ಸಾಲಿನ ಡಿಸ್ಟ್ರಿಕ್ಟು ಫಂಡ ಸಪ್ಲಿಮೆಂಟಲ್ ಬಡ್ಜಟ್ಟಿನಲ್ಲಿ ಅಲೌನ್ಸಿಗಾಗಿ ಬೇಕಾಗುವ ಮೊಬಲಗನ್ನು ದಾಖಲ್ ಮಾಡಬೇಕೆಂದು ತೀರ್ಮಾನ ವಾಯಿತು.

2. ಭಾರಿಯಾದ ಮತ್ತು ಅವಶ್ಯಕವಾದ ಕಾಮಗಾರಿಗಳನ್ನು ನಡಿಸಬೇಕಾದ್ದಕ್ಕೆ ಡಿಸ್ಟ್ರಿಕ್ಟು ಫಂಡ್ ಬಾಬಿನಲ್ಲಿ ಸಾಲ್ ಬಸಾಲ್ ವಿಶೇಷವಾಗಿ ವುಳಿಯುವ ಮೊಬಲಗನ್ನು ಉಪಯೋಗಿಸಿಕೊಳ್ಳಬೇಕೆಂಬ ವುದ್ದಿಶ್ಯ, ಇಲ್ಲದ ಪಕ್ಷ ಸಾಲ್ ಆಖೈರಿನಲ್ಲಿ ಶೇಕಡಾ 30 ರೂಪಾಯಿಗೆ ಮೀರಿ ವುಳಿಯುವ ಮೊಬಲಗನ್ನು ವುಪಯುಕ್ತವಾದ ಕಾಮಗಾರಿಗಳಿಗೆ ಕ್ರಮೇಣ ವುಪಯೋಗಿಸುವದಕ್ಕಾಗಿ ಅಂಥಾ ಕಾಮಗಾರಿಗಳ ವಿಚಾರದಲ್ಲಿ ಗವರ್ನಮೆಂಟಿಗೆ ಬರದುಕೊಳ್ಳಬೇಕೆಂದು 1896ನೇ ಇಸವಿ ಜುಲೈ 1ನೇ ಮುರ್ಕುಂ 3 ಎಲ್. ಎಫ್. 280.—92ನೇ ನಂಬರ್ ಸೆಕ್ರಟೇರಿಯವರ ಅಫಿಷಿಯಲ್ ಮಿಮೋರಾಂಡಂನಲ್ಲಿ ಕೇಳಿ 1889ನೇ ಇಸವಿ ಡಿಸೆಂಬರ್ 6ನೇ ಮುರ್ಕುಂ 6861.—70—157ನೇ ನಂಬರ್ ಅಫಿಷಿಯಲ್ ಮಿಮೋರಾಂಡಮಿನ 9ನೇ ಪ್ಯಾರಾಕ್ಕೆ ಡೆಪ್ಯುಟಿ ಕಮ್ಮಿಷನರುಗಳು ನಿಗಾ ಕೊಡತಕ್ಕದ್ದೆಂದು ಬರಸಿರುವದನ್ನು ಓದಲಾಯಿತು. ಈ ವಿಚಾರ ನೋಟ್ ಮಾಡಬೇಕೆಂತಲೂ ಕಳದ ಸಾಲಿನ ನೀಮಕಲು ಕಾಮಗಾರಿಗಳನ್ನು ಪೂರೈಸುವದಕ್ಕೆ ಬೇಕಾಗುವ ಮೊಬಲಗನ್ನೂ ಮತ್ತು ಹುಲಿಯೂರುದುರ್ಗ, ಸಿರಾ ಮತ್ತು ಹುಳಿಯಾರದಲ್ಲಿ ಕಟ್ಟಬೇಕಾಗಿರುವ ಮುಸಾಫರ್‍ಖಾನೆಗೆ ಮೊಬಲಗನ್ನು ಸಹ ಸೇರಿಸಿ 1896—97ನೇ ಸಾಲಿಗೆ ವಂದು ಸಪ್ಲಿಮೆಂಟಲ್ ಡಿಸ್ಟ್ರಿಕ್ಟ್ ಫಂಡ ಬಡ್ಜಟ್ಟನ್ನು ಗವರ್ನಮೆಂಟಿಗೆ ಕಳುಹಿಸತಕ್ಕದ್ದೆಂತಲೂ ಸಹ ತೀರ್ಮಾನ ಮಾಡಲ್ಪಟ್ಟಿತು.

3. ಲೋಕಲ್ ಫಂಡ್ ಜನರಲ್ ಬಾಬಿನಿಂದ ಗವರ್ನಮೆಂಟಿನವರು ಹಣವನ್ನು ಕೊಡದ ಪಕ್ಷ ನಿಂತುಹೋಗುವ ವೂರು ಅಭಿವೃದ್ದಿಗೆ ಕಾರಣವಾದ ಮುಖ್ಯ ಕಾಮಗಾರಿಗಳು ಯಿದ್ದಲ್ಲಿ ಅಂಥಾ ಕಾಮಗಾರಿಗಳಿಗೆ ವಂದು ಲೀಸ್ಟನ್ನೂ ಮತ್ತು ಯಲ್ಲಿ ಅತ್ಯಾವಶ್ಯಕವಾಗಿ ನೀರಿನ ವಸ್ತಿ ವುಂಟಾಗಬೇಕೆಂದು ಇರುವದೋ ಅಂಥಾ ಗ್ರಾಮಗಳಲ್ಲಿ ತೆಗೆಯಬೇಕಾಗುವ ಶೀನೀರು ಭಾವಿಗಳಿಗೆ ವಂದು ಲೀಸ್ಟನ್ನೂ ಸಹ ಕೂಡಿದ ಮಟ್ಟಿನ ಜಾಗ್ರತೆಯಲ್ಲಿ ಕಳುಹಿಸಬೇಕೆಂತಲೂ ಮತ್ತು 1896—97ನೇ ಸಾಲಿಗೆ ಪ್ರತಿ ಲೋಕಲ್‍ಫಂಡ್ ಸರಕಲಿಗೆ ಲೋಕಲ್‍ಫಂಡ್ ಜನರಲ್ ಯಂಬ ಬಾಬಿನ ಹಣ ಯಷ್ಟು ಬೇಕಾಗುತ್ತೆಂಬುವದನ್ನು ನಮೂದಿಸಬೇಕೆಂದ್ದನ್ನೂ ಸಹ 1896ನೇ ಇಸವಿ ಏಪ್ರಿಲ್ 6ನೇ ಮುರ್ಕುಂ 11379.—86 ಎಲ್. ಎಫ್. 61.—95ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸನ್ನು ಓದಲಾಯಿ... ಟೂರು ಮತ್ತು ಕುಣಿಗಲ್ ತಾಲ್ಲೂಕು ಅಮಲ್ದಾರ್ರುಗಳು ನಮೂದಿಸಿರುವ ಕಾಮಗಾರಿಗಳ ವಿಚಾರದಲ್ಲಿ ಕೇಳಿರುವ ಹೇ... ಲಿಗಳನ್ನು ತರಿಸಿಕೊಂಡು ಕೂಡ್ಲೆ ಬೋರಡಿನವರು ವಪ್ಪಿರುವ ಕಾಮಗಾರಿಗಳ ಯರಡು ಲೀಸ್ಟನ್ನು ಗವರ್ನಮೆಂಟಿಗೆ ಕಳು... ದು ತೀರ್ಮಾನ ವಾಯಿತು.

4. ಶಿರಾ ತಾಲ್ಲೂಕಿನಲ್ಲಿ ದೊಡ್ಡೀದಾರರಿಗೆ ಸಲ್ಲಬೇಕಾದ ರುಸುಂ ಬಗ್ಗೆ 11—13—5 ರೂಪಾಯಿಗಳು ಜಾಸ್ತಿ ಖರ್ಚು... ವದರ ತಫ್ಸೀಲ್ ನಮೂದಿಸಿ ಸದರೀ ಖರ್ಚು ಯಾವ ಮೊಬಲಗಿನಿಂದ ಹೊರಳೇ ಆಗತಕ್ಕದ್ದೆಂದು ಬೋರಡಿನವರು ವಪ್ಪಿ... ಆ ಬಗ್ಗೆ ಬರಸಬೇಕೆಂದು ತಲ್ಪಿದ ಕಂಟ್ರೋಲರ್ ಸಾಹೇಬರವರ 1896ನೇ ಇಸವಿ ಆಗಸ್ಟ್ 4ನೇ ಮುರ್ಕುಂ 268ನೇ ನಂಬ... ಓದಲಾಗಿ ಸದರೀ ಜಾಸ್ತೀ ಖರ್ಚು 1895—96ನೇ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಡ್ಜಟ್ಟಿನ ಜನರಲ್ ಸೇವಿಂಗ್ಸಿನಲ್ಲಿ ಖರ್ಚು ಬೀಳ ತಕ್ಕದ್ದೆಂದು ತೀರ್ಮಾನವಾಯಿತು.

5. ಕುಣಿಗಲ್ ತಾಲ್ಲೂಕು ಅಮೃತೂರು ದೊಡ್ಡಕೆರೇ ಯೇರೀಮೇಲೆ ಹಾಲಿ ಇರುವ ಅಮೃತೂರಿಂದ ಹುಲಿಯೂರುದುರ್ಗಕ್ಕೆ ಹೋಗತಕ್ಕ ರಸ್ತೆಗೆ ಬದಲಾಗಿ ಅಮೃತೂರು ದೊಡ್ಡಕೆರೇ ಕೆಳಗೆ ಇರತಕ್ಕ ಗದ್ದೆಗಳಲ್ಲಿ ವಂದು ರಸ್ತೆಯನ್ನು ಹಾಕಲು 820 ರೂಪಾಯಿಗಳಿಗೆ ಅಂದಾಜು ಕಳುಹಿಸಿ ಇದನ್ನು ಲೋಕಲ್‍ಫಂಡ್ ಬೋರ್ಡಿನವರ ವಪ್ಪಿತಕ್ಕಾಗಿ ಯಿಡಿಸಬೇಕೆಂದು ಬರಸಿದ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ 1896ನೇ ಇಸವಿ ಮೇ 26ನೇ ಮುರ್ಕುಂ 457ನೇ ನಂಬರ್ ಲೆಟರನ್ನು ಓದಲಾಯಿತು. ಮುಂದಿನ ಮೀಟಿಂಗಿನಲ್ಲಿ ಈ ವಿಚಾರವನ್ನು ಯೋಚಿಸತಕ್ಕದ್ದೆಂದು ತೀರ್ಮಾನವಾಯಿತು.

6. ತುಮಕೂರು, ಪುರಡಗೆರೆ ರಸ್ತೆ 5ನೇ ಮೈಲಿ ಲಾಗಾಯತು ಅರೆಗುಜ್ಜನಹಳ್ಳಿ ಮೇಲೆ ಪುರಡಗೆರೆಗೆ ವಂದು ಭಂಡಿಜಾಡನ್ನೂ ಯಿರಕಸಂದ್ರದಿಂದ ಪಾವತ್ತೂರಿಗೆ ವಂದು ಭಂಡಿಜಾಡನ್ನೂ ಹಾಕತಕ್ಕದ್ದಕ್ಕೆ ಅಂದಾಜು ಕಳಿಸಿ ಬಂದ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ 1896ನೇ ಇಸವಿ ಜೂನ್ 1ನೇ ಮುರ್ಕುಂ 495ನೇ ನಂಬರ್ ಲೆಟರನ್ನು ಓದಲಾಯಿತು. ಈ ಕಾಮಗಾರಿಗೆ ಬೇಕಾಗುವ ಮೊಬಲಗನ್ನು 1896—97ನೇ ಸಾಲಿನ ಡಿಸ್ಟ್ರಿಕ್ಟ್‍ಫಂಡ್ ಸಪ್ಲಿಮೆಂಟಲ್ ಬಡ್ಜಟ್ಟಿನಲ್ಲಿ ಪಬ್ಲಿಕ್‍ವರ್ಕ್ಸ್ ಇಲಾಖೆಯವರಿಂದ ನಡಿಸಲ್ಪಡಬೇಕಾದ ಕಾಮಗಾರಿಗಳಲ್ಲಿ ಸೇರಿಸತಕ್ಕದ್ದೆಂದು ತೀರ್ಮಾನವಾಯಿತು.

417

7. ಸಿರಾ, ಹುಲಿಯೂರುದುರ್ಗ, ಹುಳಿಯಾರದಲ್ಲಿ ಕಟ್ಟಬೇಕಾಗಿರುವ ಮುಸಾಫರಖಾನೆಗಳ ಅಂದಾಜಾಗಳನ್ನ 1896—97ನೇ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಸಪ್ಲಿಮೆಂಟ್ ಬಜ್ಜೆಟ ಮಂಜೂರಾಗಿ ಬಂದ ತರುವಾಯ ಮಂಜೂರೀ ಬಗ್ಯೆ ಪುನಹ ಕಳುಹಿಸಲ್ಪಡುತ್ತೆ ಸಪ್ಲಿಮೆಂಟಲ್ ಬಜ್ಜೆಟ ಮಂಜೂರಾಗುವ ವರಿಗೂ ಸದರೀ ಅಂದಾಜಾಗಳನ್ನ ಚೀಫ್ ಇಂಜೀಯರ್ ಸಾಹೇಬರವರು ಮಂಜೂರ್ಮಾಡುವದಿಲ್ಲ ವೆಂದು ತಲ್ಪಿದ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ಆಗಸ್ಟ್ 1ನೇ ಮುರ್ಕ್ಕಂ 806ನೇ ನಂಬರ ಲೆಟರನ್ನ ವೋದಲಾಯಿತು. 1896—97ನೇ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಬಜ್ಜಟ್ಟನಲ್ಲಿ ಈ ಕಾಮಗಾರಿಗಳನ್ನ ಶೇರಿಸಬೇಕೆಂದು ತೀರ್ಮಾನವಾಯಿತು.

8. ಯಡಿಯೂರು, ತಿಪಟೂರ ರಸ್ತೆ 6—30ನೇ ಮೈಲಿಯಲ್ಲಿ ವೆಂದುನೂರು ರೂಪಾಯಿಗಳಲ್ಲಿ ಹಾಳಿ ಸುಟ್ಟಕಲ್ಲು ಮೊಹರಿ ಇರುವದನ್ನ ಮುಂದಕ್ಕೆ ಬಡಾಯಿಸತಕ್ಕದ್ದಕ್ಕೆ ಅಂದಾಜಾನಿಶಿ ಬರಸಿದ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ಆಗಸ್ಟ್ 1ನೇ ಮುರ್ಕ್ಕಂ 809ನೇ ನಂಬರ ಲೆಟರ ವೋದಲಾಯಿತು. 1896—97ನೇ ಸಾಲಿನ ಡಿಸ್ಟ್ರಿಕ್ಟ್ಫಂಡ್ ಬಜ್ಜಟ್ಟನಲ್ಲಿ ಈ ಕಾಮಗಾರಿಯನ್ನ ಶೇರಿಸತಕ್ಕದ್ದೆಂದು ತೀರ್ಮಾನವಾಯಿತು.

9. ತಿಪಟೂರು ತಾಲ್ಲೂಕು ನೊಣವಿನಕೆರೆ ಯಿಂದ ವಿಘ್ನಸಂತೆಗೆ ಇರತಕ್ಕ ಭಂಡಿಜಾಡನ್ನ ದುರಸ್ತು ಪಡಿಸುವೆದಕ್ಕೆ ತಯಾರಾದ 587 ರೂಪಾಯಿನ ಅಂದಾಜಾ 1895ನೇ ಇಸವಿ ಮೇ 1ನೇ ಮುರ್ಕ್ಕಂ 488ನೇ ನಂಬರ್ ಲೆಟರ್ ಕೂಡಾ ಯಡಿಯೂರ ರಾಜ ಬಗ್ಯೆ ಕಳುಹಿಸಿದ್ದ ಸಂಗತಿ ಯಿತ್ಯರ್ಥ ಪಡಿಸಬೇಕೆಂದು ತಲ್ಪಿದ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ಜುಲೈ 14ನೇ ಮುರ್ಕ್ಕಂ 740ನೇ ನಂಬರ್ ಡಾಕೆಟ್ಟನ್ನ ವೋದಲಾಯಿತು. ಮುಂದಿನ ಬಜ್ಜಟ ಮಿಾಟಂಗಿನ ವರಿಗೆ ಈ ವಿಚಾರ ನಿಲ್ಲಿಸಿರತಕ್ಕದ್ದೆಂದು ತೀರ್ಮಾನವಾಯಿತು.

10. 1896—97ನೇ ಸಾಲಿಗೆ ಪಬ್ಲಿಕವರ್ಕ್ಸ್ ಇಲಾಖೆ ಯಿಂದ ನಡಿಸಲ್ಪಡುವ ಕಾಮಗಾರಿಗಳಿಗೆ ವೆಂದು ರಿವ್ಯೆಜಡ್ ಬಜ್ಜಟ್ಟನ್ನ ಕಳುಹಿಸಿ ಇದನ್ನ ಬೋರ್ಡಿನವರ ಮಪ್ಪಿತಕ್ಕೆ ಇಟ್ಟು ನಂತರ ಗವರ್ನಮೆಂಟಿನ ಮಂಜೂರಾತಿ ಬಗ್ಯೆ ಕಳುಹಿಸಿ ಕೊಡಬೇಕೆಂದು ತಲ್ಪಿರುವ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ಆಗಸ್ಟ್ 8ನೇ ಮುರ್ಕ್ಕಂ 843ನೇ ನಂಬರ ಲೆಟರನ್ನ ವೋದಲಾಯಿತು. ಇದನ್ನ 1896--97ನೇ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಬಜ್ಜಟ್ಟನಲ್ಲಿ ಶೇರಿಸಬೇಕೆಂದು ತೀರ್ಮಾನವಾಯಿತು.

11. ತುಮಕೂರು ಡಿಸಪೆನ್ಸರಿಗೆ ಔಟಪೇಷಂಟ ವಾರಡು ಕಟ್ಟತಕ್ಕದಕ್ಕೆ 3,018 ರೂಪಾಯಿ ಖರ್ಚು ಬಿದ್ದಿರುವ ನಂದರ್ಭದಲ್ಲಿ 1893ನೇ ಇಸವಿ ಅಕ್ಟೋಬರ 16ನೇ ಮುರ್ಕ್ಕಂ 7041.—53 L. F. 117.—93ನೇ ನಂ. ಗವರ್ನಮೆಂಟ ಆರ್ಡರನ್ನ ಅನುಸರಿಸಿ, ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಫಂಡ್ ಬಾಬುಗಳಿಂದ ಕೊಡಿಸಬೇಕಾಗುವ ಮೊಬಲಗುಗಳನ್ನ ಕಂಟ್ರೋಲರ್ ಸಾಹೆಬರವರ ಮೂಲಕ ಪಬ್ಲಿಕ ವರಕ್ಸ ಇಲಾಖೆಯವರ ಸ್ವಾಧೀನದಲ್ಲಿ ಇಡಸಬೇಕೆಂತಲು ಈ ಮೊಬಲಗು ಮಂಜೂರಾಗಿರುವ 1896—97ನೇ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಬಜ್ಜಟ್ಟನಲ್ಲಿ ಶೇರದೆಯಿರುವ ಪಕ್ಷ—ಸಪ್ಲಿಮೆಂಟ ಬಜ್ಜಟ್ಟನಲ್ಲಿ ಶೇರಿಸಬೇಕೆಂತಲು ಬದಸ್ತೂರು, ಸದರೀ ಡಿಸಪೆನ್ಸರಿಗೆ ಒಂದು ಡೆಡಹಾಸ ಯಾ ಬಿದ್ದಹಟ್ಟಿಯನ್ನ 330 ರೂಪಾಯಿನ ಅಂದಾಜಾದಲ್ಲಿ ತಯಾರಾಗತಕ್ಕ ಮತ್ತು 540 ರೂಪಾಯಿ ಅಂದಾಜಾ ಖರ್ಚಿನಲ್ಲಿ ತಯಾರಾಗಬೇಕಾದ ಸದ್ರಿ ಡಿಸ್ಪೆನ್ಸರಿಗೆ ಬಡಾಯಿಸಿ ಕಟ್ಟತಕ್ಕ ಶಸ್ತ್ರಚಿಕಿತ್ಸೆಶಾಲೆ ಯಾ ಸರಜಿಕಲ್ ಆಪರೇಷನ ರೂಂಗಳಿಗೆ ತಗಲತಕ್ಕ ಖರ್ಚಿನ ಯರಡು ಫಂಡಿನ ಹಿಸ್ಸೇ ಮೊಬಲಗನ್ನ ಸಹ ಶೇರಿಸಬೇಕೆಂತಲೂ ಸಹ ಬರಸಿದ ಯಗ್ಜಿಕ್ಯೂಟಿವ್ ಯಿಂಜಿನಿಯರ್ ಸಾಹೇಬರವರ 1896ನೇ ಇಸವಿ ಆಗಸ್ಟ್ 11ನೇ ಮುರ್ಕ್ಕಂ 853ನೇ ನಂಬರು ಡಾಕೆಟ್ಟನ್ನ ವೋದಲಾಯಿತು. ಮೇಲ್ಕಂಡ ಕಾಮಗಾರಿಗಳಿಗೆ ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಲ್ಪಡಬೇಕಾಗುವ 3ರಲ್ಲಿ ಒಂದು ಹಿಸ್ಸೆ ಮೊಬಲಗು 1006—110 ಮತ್ತು 180 ರೂಪಾಯಿಗಳನ್ನ ಸಪ್ಲಿಮೆಂಟಲ್ ಬಜ್ಜಟ್ಟನಲ್ಲಿ ಕಂಟ್ರಿಬ್ಯೂಷನ ಯಂಬ ಹೆಡನಲ್ಲಿ ಶೇರಿಸತಕ್ಕದ್ದೆಂದು ತೀರ್ಮಾನವಾಯಿತು.

12. ತುಮಕೂರಲ್ಲಿ ಹೆಂಗಸರ ಮತ್ತು ಮಕ್ಕಳ ಡಿಸ್ಪೆನ್ಸರಿ ಯಿಟ್ಟಿರತಕ್ಕ ಮನೆ ಕೆಲವುಭಾಗ ಲೇಡಿ ಹಾಸ್ಪಿಟಲ್ ಅಸಿಸ್ಟೆಂ ...ಸಕ್ಕಾಗಿ ಉಪಯೋಗಿಸಿಕೊಂಡಿರುವದರ ಬಾಡಿಗೆ ಮಾಹೆಯಾನಾ ಆವರು ಕೊಡುತ್ತಲಿರುವ ಹತ್ತು ರೂಪಾಯಿಗಳನ್ನ ...ಗೆ ತಗ್ಗಿಸತಕ್ಕ ವಿಚಾರದಲ್ಲಿ ಬೋರ್ಡಿನವರ ಅಭಿಪ್ರಾಯ ತಿಳಯಲಪೇಕ್ಷಿತವಾದ 1896ನೇ ಇಸವಿ ಜೂನ 24ನೇ ಮುರ್ಕ್ಕಂ ...-L. F. 78—94ನೇ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸನ್ನವೋದಲಾಯಿತು, ಲೇಡಿ ಹಾಸ್ಪಿಟಲ್ ಅಸಿಸ್ಟೆಂಟರು ಹಾಲಿ ... ಲಿರುವ ಬಾಡಿಗೆಯನ್ನ ತಗ್ಗಿಸಲು ಬೋರ್ಡಿನವರು ಅಭಿಪ್ರಾಯ ಪಡುವದಿಲ್ಲವೆಂತಲು ವಂದು ವೆಳೆ ತಗ್ಗಿಸಿದಲ್ಲಿ ಈ ಮೊಬಲಗಿನ ...ರ ಯಾವ ಭಾಗವನ್ನಾದರೂ ಡಿಸ್ಟ್ರಿಕ್ಟ್ ಫಂಡಿನಿಂದ ಭರ್ತಿಮಾಡಲು ಆಗುವದಿಲ್ಲವೆಂತಲು ಸಹ ಗವರ್ನ್ಮೆಂಟಿಗೆ ಲೆಟರು ಬರಸತಕ್ಕದ್ದೆಂತ ತೀರ್ಮಾನವಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್ ಡಿಸ್ಟ್ರಿಕ್ಟ್ ಫಂಡ್ ಬೋರ್ಡ್.

ತಾರೀಖು 9ನೇ ಸೆಪ್ಟಂಬರ್ 1896ನೇ ಇಸವಿ.

ತುಮಕೂರು ಡಿಸ್ಟ್ರಿಕ್ಟ್ ಸ್ಟೇಟ್ ಫಾರೆಸ್ಟುಗಳ ಬಾಬತು ಕಲ್ಲುಹುವ್ವು ಮತ್ತು ಅರಗು ಜಮಾಯಿಸಿಕೊಳ್ಳತಕ್ಕ ಹಕ್ಕನ್ನ 1896ನೇ ಇಸವಿ ಸೆಪ್ಟಂಬರ್ 4ನೇ ತಾರೀಖಿನಲ್ಲಿ ಹರಾಜು ಮಾಡಲಿಲ್ಲವಾದ ಪ್ರಯುಕ್ತ ಪುನಹ ಇದರಿಂದ ಸಮಸ್ತ ಜನರಿಗೂ ತಿಳಿಯ ಪಡಿಸುವದೇನಂದರೆ,—ಮೇಲೆ ನಮೂದಿಸಲ್ಪಟ್ಟಿರುವ ಜಿನಸಿಗಳ ಹರಾಜನ್ನು 1896ನೇ ಇಸವಿ ಆಗಸ್ಟ್ 13ನೇ ಮುರ್ಕ್ಕಂ ಮೈಸೂರ ಗೆಜೆಟ 2ನೇ ಭಾಗ 753, 754ನೇ ಪುಟಗಳಲ್ಲಿ ಛಾಪಿಸಿರುವ ಷರತ್ತುಗಳನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಲಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಸಬ್ ಅಸಿಸ್ಟೆಂಟ್ ಕನ್ಸರ್ವೇಟರವರಿಂದಲಾಗಲಿ 1896ನೇ ಇಸವಿ ಅಕ್ಟೋಬರ್ ತಾರೀಖು 3ನೇ ದಿವಿ 12 ಘಂಟೆಯಲ್ಲಿ ಬಹಿರಂಗವಾಗಿ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿನಲ್ಲಿ ಹರಾಜ್ ಮಾಡಲ್ಪಡುತ್ತೆ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

418

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್.

ಸಾರುವಳಿಗೋಸ್ಕರ ಜಮೀನ್ ಹಿಡುವಳಿ ಹರಾಜು.

ತಾರೀಖು 1ನೇ ಆಗಸ್ಟ್ 1896.

ಇಸ್ತಿಹಾರ್.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡಿಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜು ಕೈದಾದಕೂಡ್ಲೆ ಚಡಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜು ತಾರೀಖು ಲಾಗಾಯತು 15ನೇ ದಿನದ ಸೂರ್‍ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್‍ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನು ಪಾವತಿ ಮಾಡಬೇಕು.

4. ಪೂರಾ ಹರಾಜು ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜು ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗೆಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡೆಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುವದು.

5. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜು ಡೆಪ್ಯುಟಿ ಕಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್‌ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಯೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲಾ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರ್.	ಖುಷ್ಕಿ, ತರಿ, ಬಾಗಾಯತು ಅಥವಾ ತೋಟ.	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ. ಕೊಡತಕ್ಕ ಮತ್ತು ಗುತ್ತಿಗೆ ಕರಾರಿನ ...	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ಮಾಡತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸ... ಸವಾಲ್ ಮೊಬಲಗು ... ಇತರ ಷರ...
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ	ಹಿರಿಕ್ಕೇರಿ ಗ್ರಾಮ	138 139	ತರಿ ಜಮೀನ್	1—15 1— 0 2—15	8—0—0 5—8—0 13—8—0		ಜಮೀನಿನ ಬಳಿ 1896ನೇ ಇಸವಿ ಅಕ್ಟೋಬರ 30ನೇ ದಿನ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ಅಥವಾ ಶೇಖದಾರ್ ರವರು.	

ಇದರಿಂದ ತಿಳಿಯಪಡಿಸುವದೇನಂದರೆ,— ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಕೈದಾದ ಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ ಆ ಮೇಲಿ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈದು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ, ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಯೆ ಸಾಗುವಳೀ ಚೀಟಿ ಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. — ಜಮೀನ್. — ಸರ್ವೆ ನಂಬರು.	ಸ್ವತ್ತಿನ ವಿವರ. — ಜಮೀನ್. — ಬಾಬು ಖುಷ್ಕಿ, ತರೀ, ಬಾಗಾಯತು ಅಥವಾ ಕಾಫಿ.	ಸ್ವತ್ತಿನ ವಿವರ. — ಜಮೀನ್. — ವಿಸ್ತೀರ್ಣ.	ಸ್ವತ್ತಿನ ವಿವರ. — ಜಮೀನ್. — ಆಕಾರ.	ಸ್ವತ್ತಿನ ವಿವರ. — ಮರಗಳು ಭಾವಿಗಳು ವಗೈರೆ. — ಕೂಡಿದ ಮಟ್ಟಿಗೂ ಕರಾರ್ವಾಕಾ ತಪ್ಸೀಲ್.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7.	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ಕಡಹಂವಿಗೆ.	12	ತರೀ ಜಮೀನ್.	2— 6	12—0—0		ಜಮೀನ್‌ಗಳ ಬಳಿ 1896ನೇ ಇಸವಿ ಅಕ್ಟೋಬರ್ 28ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೇ ತಾಲ್ಲೂಕು ಅಮಲ್‌ದಾರ್ ಅಥವಾ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.	
			13		2—10	12—0—0				
			100		2—9	2—0—0				
			101		1—18	6—0—0				
			102		1—38	8—8—0				
			103		2—5	12—0—0				
			104		2—10	13—0—0				
			105		2—23	15—0—0				
			106		2—11	13—0—0				
			107		2— 8	13—0—0				
			108		2—17	14—0—0				
			168		1—37	10—0—0				
			169		2— 0	11—0—0				
			65		0—34	2—12—0				
			14							
					28—26	144—4—0.				

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡಿಯಲ್ಲಿ ಕಂಡ ಜಮೀನ್ ಹಿಡವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಖೈದಾದಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ ಡೆಪ್ಯುಟಿಕಮಿಷನರು ಆವಶ್ಯಕವಾದ ಸಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲಿ ಕಮ್ಮಿಯಾದಷ್ಟು ಮೊಬಲಗನ್ನ ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿ ಕಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈದು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಯೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್ದಾರ್‍ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರು.	ಬಾಬು ಖುಷ್ಕೀ, ತರೀ ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಅಕಾರ.	ಮರಗಳು ಭಾವಿಗಳು ವಗೈರೆ. ಕೂಡಿದ ಮಟ್ಟಿಗೂ ಕರಾರ್ವಾಕಾ ತಪ್ಸೀಲ್.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪ್ಯಾಟೆ.	ಕಿಕ್ಕೇರಿ.	ಅನಗುಳ.	107	ತರೀ ಜಮೀನ್.	2— 9	12— 0—0		ಜಮೀನ್ಗಳ ಬಳಿ 1896ನೇ ಇಸವಿ ಅಕ್ಟೋಬರ್ 29—30ನೇ ದಿವಿ 11 ಘಂಟೆ.	ಕೃಷ್ಣರಾಜಪ್ಯಾಟೆ ತಾಲ್ಲೂಕು ಅಮಲ್‌ದಾರು ಅಥವಾ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.	
			108		2—15	12— 0—0				
			109		1—32	9— 8—0				
			110		2—15	13— 0—0				
			111		2— 4	10— 0—0				
			112		1—19	8— 8—0				
			113		2—18	10— 0—0				
			114		2— 8	9— 8—0				
			115		1—17	7— 8—0				
			116		1—22	7— 8—0				
			117		2— 4	11— 0—0				
			118		2—12	12— 0—0				
			119		1—33	10— 0—0				
			120		0—32	4— 0—0				
			121		2— 3	12— 0—0				

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರ್.	ಬಾಬು ಖುಷ್ಕಿ, ತರೀ, ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ. ಕೂಡಿದ ಮಟ್ಟಗೂ ಕರಾರ್ಖಾಕಾ ತಪ್ಶೀಲ್.	ಹರಾಜ್ ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮುತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ಅನಗುಳ.	122	ತರಿ ಜಮೀನ್	1—27	9—0—0		ಜಮೀನ್‌ಗಳ ಬಳಿ 1896ನೇ ಇಸವಿ ಅಕ್ಟೋಬರ್ 29—30ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರು, ಅಥವಾ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸರವರು.	
			123		1—35	11—0—0				
			124		2—9	13—0—0				
			125		1—34	10—0—0				
			203		2—2	10—0—0				
			204		2—8	11—0—0				
			205		2—0	12—0—0				
			206		2—1	12—0—0				
			207		2—13	13—0—0				
			208		2—1	12—0—0				
			209		2—10	12—0—0				
			210		2—9	13—0—0				
			211		1—34	11—0—0				
			212		1—28	9—8—0				
			213		1—13	7—8—0				
			214		2—4	11—0—0				
			215		2—8	13—0—0				
			216		1—27	9—8—0				
			217		1—4	6—8—0				
			218		1—6	6—8—0				
			219		2—9	13—0—0				
			220		2—13	14—0—0				
			37		71-18	388—0—0				

ಪಿ. ಪಂಚನಾಥರಾವ್,
ಸಬ್ ಡಿವಿಜನ್ ಆಫಿಸರ್.

ಹಾಸನ ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 17ನೇ ಸೆಪ್ಟಂಬರ್ 1896.

1896ನೇ ಇಸವಿ ಫಿಬ್ರುವರಿ ತಾರೀಖು 15ನೇ ರಾತ್ರೆ ಚಿಕ್ಕಬಳ್ಳಾಪುರದ ಸ್ಥಳದ ಹಾಲಿ ಚಿಲ್ಲರೆ ವ್ಯಾಪಾರ ಮಾಡಿಕೊಂಡು ಸಕಲೇಶಪುರದಲ್ಲಿ ಇರುವ ಸಿದ್ದಣ್ಣನ ಬಳಿಯಲ್ಲಿದ್ದ ಕೆಳಗೆ ನಮೂದಿಸಲ್ಪಟ್ಟು ಇರುವ ನೋಟುಗಳು ಹೋಗಿ ಇರುತ್ತೆ, ಇವುಗಳನ್ನ ಪತ್ತೆಮಾಡಿದವರಿಗೆ ಶೇಕಡಾ 10 ರೂಪಾಯಿನ ಮೇರಿಗೆ ಇನಾಂ ಕೊಡುತ್ತೇನೆಂದು ಪ್ರೌಷಿ ಇರುತ್ತಾನೆ.

ನೋಟಿನ ತಪ್ಸೀಲ್.

ನಂಬರ್.	ಸರ್ಕಲ್.	ಮೊಬಲಗು.
ಟಿ. 65—87486	ಮದ್ರಾಸ್	ನೂರು ರೂಪಾಯಿ
ಡಿಟೋ—87487	ಡಿಟೋ	ಡಿಟೋ
ಡಿಟೋ—87488	ಡಿಟೋ	ಡಿಟೋ
78163	ಡಿಟೋ	ಡಿಟೋ

ಎಸ್. ಅವಿಾರ್‌ಹರ್ಸ್ಟ,
ಸೂಪರಿಂಟೆಂಡೆಂಟ್ ಆಫ್ ಪೊಲೀಸ್.

ಕಡೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ತಾರೀಖು 3ನೇ ಸೆಪ್ಟಂಬರ್ 1896.

ಇದರಡಿಕಂಡ ಡಿಪೋಗಳಿಗೆ ಅದಕ್ಕೆ ಎದುರಾಗಿ ಕಾಣಿಸಲ್ಪಟ್ಟ ಜಂಗಲಿಗಳಿಂದ ನಾಟಾಗಳನ್ನು, ಬೆಲಗುಗಳನ್ನು ಮತ್ತು ಕಿರಿಗಳುಗಳನ್ನು ಬರುವ 1897ನೇ ಇಸವಿ ಮೇ 31ನೇ ತಾರೀಖು ವೊಳಗಾಗಿ ಜಮಾಯಿಸಿ ಕೊಡಲು ಯಿಷ್ಟವುಳ್ಳವರು ಟೆಂಡರ್ಯಾನೆ ದರಖಾಸ್ತು ಕೊಡಬಹುದು.

ಡಿಪೋ ಹೆಸರು.	ತರಹೆ.	ಜಮಾಯಿಸಿಕೊಡ ಬೇಕಾದ ಸಂಖ್ಯೆ.	ಯಾವ ಜಂಗಲಿಯಿಂದ ಜಮಾಯಿಸಿ ಕೊಡತಕ್ಕದ್ದು ವಗೈರೆ.	ಅಂದಾಜಾ ಫಾಸಲೆ.
ಲಕ್ಕವಳ್ಳಿ ..	ಮನ್ನಾಜಾತಿ ನಾಟಾ	* 200	ಹೊಸಹಳ್ಳಿ, ಕೋಳಿಗೋಡು ಕರಡಿಮಟ್ಟಿ ಡಿಸ್ಟ್ರಿಕ್ಟು ಜಂಗಲಿಗಳಿಂದ ಕೊರಮರ ಗುಡ್ಡ ಡಿಸ್ಟ್ರಿಕ್ಟು ಜಂಗಲ್	7ರ ಲಾಗಾಯತು 10 ಮೈಲಿಗಳು
	ಪೋಖ್ತೆಯಾದ ಹಳೇ ಮರದಿಂದ ಕಾಡುಜಾತಿ	* 100	ಸಾಮು ಡಿಸ್ಟ್ರಿಕ್ಟು ಜಂಗಲು ನಾವೆ ಸಮೀಪದ ಸ್ಟೇಟ್ ಫಾರೆಸ್ಟು	11ರ ಲಾಗಾಯತು 13 ಮೈಲಿಗಳು
ತರೀಕೆರೆ ..	ಸಾಗುವಾನಿ ಬೆಲಗು	* 300	ಗಂಟೆನ್ನಾಕನಕಣಿವೆ ಡಿಸ್ಟ್ರಿಕ್ಟು ಜಂಗಲ್ ಮತ್ತು ತ್ಯಾಗದ ಬ್ಯಾಗಿ ಡಿಸ್ಟ್ರಿಕ್ಟು ಜಂಗಲ್	5ರ ಲಾಗಾಯತು 7 ಮೈಲಿಗಳು
	ಮನ್ನಾಜಾತಿ ನಾಟಾ	* 50		6ರ ಲಾಗಾಯತು 10 ಮೈಲಿಗಳು
	ಕಾಡುಜಾತಿ	* 25		
	ಕಿರಿಗಳು	30,000 *	ವುಬ್ರಾಣಿ ಹಾದಿಕೆರೆ ಜಂಗಲ್	5ರ ಲಾ|| 8 ಮೈಲಿಗಳು.
ಕಡೂರು ..	ಸಾಗುವಾನಿ ಬೆಲಗು	200	ದೊಡ್ಡನ ಗುಡ್ಡದ ಡಿಸ್ಟ್ರಿಕ್ಟು ಜಂಗಲ್	10ರ ಲಾಗಾಯತು 13 ಮೈಲಿಗಳು
	ಕಿರಿಗಳು	5000 *		
ಚಿಕ್ಕಮಗಳೂರು ..	ಜಂಗಲಿ ಬೆಲಗು	300	ಬಾಳೇಹೊನ್ನೂರು ರೋಡು ಕುಂದೂರು ಇಳಿ ಹೊಳೆ ಹಕ್ಕಿ ಮುಕ್ಕಿ ಡಿಸ್ಟ್ರಿಕ್ಟು ಜಂಗಲ್	15ರ ಲಾಗಾಯತು 20 ಮೈಲಿಗಳು
	ಕಿರಿಗಳು	20,000 *		
ಹೆಬ್ಬೆ ಡಿಪೋ ..	ಸಾಗುವಾನಿ ಮತ್ತು ಮನ್ನಾಜಾತಿ (ವಣ ನಾಟಾಗಳು)	200	ಹೆಬ್ಬೆ ಮತ್ತು ತೇಗೂರುಗುಡ್ಡ ಸ್ಟೇಟ್ ಮತ್ತು ಡಿಸ್ಟ್ರಿಕ್ಟು ಜಂಗಲ್	3ರ ಲಾಗಾಯತು 5 ಮೈಲಿಗಳು

* ಫಾರೆಸ್ಟು ಇಲಾಖೆಯಿಂದ ನಿಷ್ಕರ್ಷೆ ಮಾಡಲ್ಪಟ್ಟವುಗಳು.

2. ಪ್ರತಿ ವೊಂದು ದರಖಾಸ್ತಿನ ಲಖೋಟೆಯ ಮೇಲೆಯೂ ಇಂಥಾ ಜಂಗಲಿಯಿಂದ ಇಂಥಾ ಡಿಪೋಕ್ಕೆ ತಯ್ಯಾರಿಯಿಂದ ಹೇರಿ ತಂದು ಕೊಡುವ ಬಗ್ಗೆ ದರಖಾಸ್ತುಯೆಂದು ಬರದು ರವಾನಿಸತಕ್ಕದ್ದು.

3. ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು 1896ನೇ ಇಸವಿ ಅಕ್ಟೋಬರ್ ತಾರೀಖು 10ರ ವರಿಗೆ ದರಖಾಸ್ತುಗಳನ್ನ ಹಿಡಿಯುತ್ತಾರೆ.

4. ಕಂಟ್ರಾಕ್ಟು ಮಾಡತಕ್ಕವರುಗಳು ಮೇಲೆ ಹೇಳಿದ ಜಂಗಲಿಗಳಿಂದ ವೊಂದು ಜಂಗಲಿಗಿಂತ ಹೆಚ್ಚಾದ ಜಂಗಲಿಗಳಿಂದ ತಯ್ಯಾರಿ ಯಿಂದ ನಾಟಾಗಳನ್ನು ಮತ್ತು ಬೊಂಬುಗಳನ್ನು ಕಡಿದು ತಯ್ಯಾರಿಯಿಂದ ಯಾವ ಯಾವ ಡಿಪೋಗಳಿಗೆ ರಪ್ತು ಮಾಡುವ ರಜೆ ಆಗುತ್ತೋ ಅದನ್ನ ಪ್ರತ್ಯೇಕವಾಗಿ ನಮೂದಿಸತಕ್ಕದ್ದು. ನಾಟಾ ಮತ್ತು ಬೊಂಬುಗಳ ತಯ್ಯಾರಿ ಇದುವರಿಗೂ ಡಿಸ್ಟ್ರಿಕ್ಟಿನಲ್ಲಿ ಜಾರಿಯಲ್ಲಿ ಇರುವ ಮಾಮೂಲಿನಂತೆ ಇರಬೇಕು. ಅಲ್ಲದೆ ಫಾರೆಸ್ಟು ಇಲಾಖೆಯವರ ಅಪ್ಪಣೆ ಅನುಸರಿಸಿ ಇರಬೇಕು.

5. ನಾಟಾ ಬೆಲಗುಗಳ ವಿಚಾರದಲ್ಲಿ ಸಲೆ ಅಡಿ 1ಕ್ಕೆ ಇಷ್ಟರ ಅಂತೆ ಯಂತಲೂ ಗಳುಗಳ ಬಗ್ಗೆ 100ಕ್ಕೆ ಇಷ್ಟರಂತೆ ಯಂತಲೂ ನಮೂದಿಸಬೇಕು.

6. ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪ್ರತಿ ವೊಬ್ಬ ಕಂಟ್ರಾಕ್ಟುದಾರನೂ ತಾನು ಕ್ರಮವರಿತ್ಯಾಬರದುಕೊಡಬೇಕಾದ ಬಾಂಡುಯಾನೆ ಮುಚ್ಚಳಿಕೆ ಅನುಸರಿಸಿ ಕೆಲಸ ನಡಿಸತಕ್ಕ ಖಾತರಿ ಬಗ್ಗೆ ವೊಂದುನೂರು ರೂಪಾಯಿಗಳನ್ನು ಠೇವಣಿ ಇಡಬೇಕು.

7. ಕೇವಲ ಕಮ್ಮಿ ದರಕ್ಕೆ ಕೊಡುವ ದರಖಾಸ್ತುಗಳನ್ನೇ ಆಗಲಿ ಮತ್ತ್ಯಾವ ತರಹೆ ದರಖಾಸ್ತುಗಳನ್ನೇ ಆಗಲಿ ಅಂಗೀಕರಿಸುವದಕ್ಕೆ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಬದ್ಧರಾಗಿರುವದಿಲ್ಲ. ದರಖಾಸ್ತುಗಳ ಮಂಜೂರಾತಿ ಮೈಸೂರು ಶೀಮೆಯ ಫಾರೆಸ್ಟು ಕನ್ಸರ್ವೇಟರ್ ಸಾಹೆಬರವರ ಮಂಜೂರಿಗೆ ವಳಪಟ್ಟು ಇರುತ್ತೆ.

8. ಮೇಲೆ ಹೇಳಿರುವ ತಪ್ಸೀಲ್‌ಗಳಲ್ಲದೆ ಜಾಸ್ತೀ ಅಂಶಗಳನ್ನು ತಿಳಿಯಬೇಕೆಂದು ಅಪೇಕ್ಷಿಸಿದಲ್ಲಿ ಈ ತಪ್ಸೀಲ್‌ಗಳು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಆಫಿಸಿನಲ್ಲಿ ದೊರಿಯುತ್ತೆ.

ಬಿ. ಹೀರಾಶಿಂಗ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

2423

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 4ನೇ ಸೆಪ್ಟಂಬರ್ 1896.

ಸನ್ 1896–97ನೇ ಸಾಲಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಪ್ಲಾಂಟೇಷನ್‌ಗಳಲ್ಲಿಯೂ ಪ್ರಾಯಲ್ ರಿಜರ್ವ್, ಗ್ರಾಮ ಫಾರೆಸ್ಟು ಮತ್ತು ಅಮೃತಮಹಲ್ ಕಾವಲುಗಳಲ್ಲಿಯೂ ದೊರೆಯುವ ಈಕೆಳಗೆ ನಮೂದು ಮಾಡಲ್ಪಟ್ಟ, ಪಸಾರೇ ಜಿನಸಿಗಳನ್ನ ಜಮಾಯಿಸಿಕೊಳ್ಳುವ ಹಕ್ಕುದಾರಿಯು ಈ ಕೆಳಗೆ ಕಂಡ ತಖ್ತೆಯಲ್ಲಿ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ, ಸ್ಥಳಗಳಲ್ಲಿಯೂ ತಾಲ್ಲೂಕು ಅಮಲ್ದಾರರು ಅಥವಾ ಡೆಪ್ಯುಟಿ ಅಮಲ್ದಾರರುಗಳ ರೂಬರೂ ತಾಲ್ಲೂಕುವಾರಾಗಿಯಾಗಲಿ ಅಥವಾ ಹೋಬಳಿವಾರಾಗಿಯಾಗಲಿ ಅಥವಾ ಮತ್ಯಾವ ರೀತಿಯಾಗಿ ಆಗಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ನಂ	ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಷರಾ.
1	ಚಿತ್ರದುರ್ಗ ..	2ನೇ ಅಕ್ಟೋಬರ್ 1896 ..	ಚಿತ್ರದುರ್ಗ	
2	ಚಳ್ಳಕೆರೆ .	24ನೇ ಸೆಪ್ಟಂಬರ್ 1896 ..	ಚಳ್ಳಕೆರೆ	
3	ಹಿರಿಯೂರು ..	27ನೇ ಡಿಟ್ಟೋ ಡಿಟ್ಟೋ ..	ಹಿರಿಯೂರು	
4	ಹೊಳಲ್ಕೆರೆ, ಹೊಸದುರ್ಗ ..	29ನೇ ಡಿಟ್ಟೋ ಡಿಟ್ಟೋ ..	ಹೊಳಲ್ಕೆರೆ	
5	ದಾವಣಗೆರೆ, ಹರಿಹರ ..	27ನೇ ಡಿಟ್ಟೋ ಡಿಟ್ಟೋ ..	ದಾವಣಗೆರೆ	
6	ಜಗಲೂರು ..	23ನೇ ಡಿಟ್ಟೋ ಡಿಟ್ಟೋ ..	ಜಗಲೂರು	
7	ಮೊಳಕಾಲ್ಮುರು ..	29ನೇ ಡಿಟ್ಟೋ ಡಿಟ್ಟೋ ..	ಮೊಳಕಾಲ್ಮುರು	

ಪಸಾರೆ ಜಿನಸಿಗಳ ವಿವರ.

1 ಜೇನು, 2 ಜೇನುಮೇಣ, 3 ಕಪಿಲಾರಂಗು, 4 ಗೇರುಪಪ್ಪು, 5 ಹುಣಸೇಹಣ್ಣು, 6 ಹೊಂಗೇಕಾಯಿ, 7 ಬ್ಯಾಲದಹಣ್ಣು 8 ಕಲ್ಲುಹುವ್ವು, 9 ಕಾಡುಹರಳು, 10 ಗೋಂದು, 11 ಮರಡಿಪಪ್ಪು, 12 ಶೀಗೇಕಾಯಿ, 13 ತಾರೇಕಾಯಿ, 14 ಪಪ್ಪಿಚಕ್ಕೆ, 15 ಅಳಲೇಕಾಯಿ, 16 ಶೀತಾಫಲ, 17 ಜಾಲಿಗುತ್ತ, 18 ಹೊಂಗೇ ಎಲೆ, 19 ಕಲ್ಲುಹುವ್ವು.

2 ದರಖಾಸ್ತುದಾರರು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನ ಠೇವಣಿ ಕಟ್ಟತಕ್ಕದ್ದು ಇದಕ್ಕೆ ತಪ್ಪಿದರೆ ಅವರನ್ನು ನಷ್ಟಕ್ಕೆ ಗುರಿ ಮಾಡಿಬಾಖಿ ದುಸರೇ ಹರಾಜು ಮಾಡಲ್ಪಡುವದು. ಆದರೆ ಅದರಿಂದ ವುಂಟಾಗುವ ಆದಾಯದಲ್ಲಿ ಸದರೀಯವರಿಗೆ ಏನೂ ದೊರಿಯಲಾರದು. ಹರಾಜು ಮಂಜೂರಾದ ಸಂಗತಿಯನ್ನ ಚಟಸವಾಲ್ದಾರ್ರಿಗೆ ತಿಳಿಸಿದ ಒಂದು ವಾರದೊಳಗಾಗಿ ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನ ಸದರೀಯವರು ಪಾವತಿ ಮಾಡತಕ್ಕದ್ದು. ಅಷ್ಟರಲ್ಲೇ ಹಣ ಪಾವತಿ ಮಾಡಲು ತಪ್ಪಿದರೆ ದರಖಾಸ್ತುದಾರ್ರು ಮೊದಲು ಪಾವತಿ ಮಾಡಿದ ಕಾಲು ಹಿಸ್ಸೆ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ತಪ್ಪಿಸಲಾದೀತು. ಪೂರಾ ಮೊಬಲಗು ಪಾವತಿಯಾದ ನಂತರ ಹರಾಜು ಕಾಲದಲ್ಲಿ ಘಾಯಿಷಾಗುವ ಷರತ್ತುಗಳ ಕಂಡು ದರಖಾಸ್ತುದಾರರು ಕರಾರು ಬರದುಕೊಡಬೇಕಾಗಿಧೆ. ಇದಕ್ಕೆ ತಪ್ಪಿದರೆ ಜಿನಸಿಯನ್ನ ರೂಢಿಸಲು ಅಪ್ಪಣೆ ಕೊಡಲ್ಪಡಲಾರದು, ಪೂರಾ ಹರಾಜು ಮೊಬಲಗಿನ ಮೇಲೆ ರೂಪಾಯಿಗೆ ಒಂದು ಆಣೆಯಂತೆ ಲೋಕಲ್‌ಸೆಸ್ ಕೊಡತಕ್ಕದ್ದು.

3. ಹರಾಜು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ವಳಪಟ್ಟಿರುತ್ತೆ.

4. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಲು ಹಕ್ಕಿರುವದಿಲ್ಲ.

5. ಇನಾಂದಾರರ, ಸ್ಥಿರಪಟ್ಟ ಹಕ್ಕುದಾರಿಗೆ ಇಜಾರೆದಾರ್ರು ಪ್ರವೇಶಿಸಕೂಡದು.

6. ಗ್ರಾಮ ಅಮರಾಯಿ ಫಲ ಹುಟ್ಟುವಳಿಯು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

7. ದರಖಾಸ್ತುದಾರರು ತಕ್ಕ ಸವಾಲ್ ಮಾಡದೆ ಹೋದರೆ ಹರಾಜು ಮಾಡುವ ಆಫಿಸರರು ಹರಾಜು ನಿಲ್ಲಿಸುವದಕ್ಕೂ ಅಥವಾ ಮುಂದೆ ಮತ್ತೊಂದು ವೇಳೆ ಹರಾಜು ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

ಯಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರು ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಷ್ ಮಾಹೇ ಯಾ ಕ್ವಾರ್ಟರಿಗೆ		ದಾಮಾಷಾಯಿ ಪ್ರಕಾರ ದರಗಳು
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮುರ್ರಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ವಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮುರ್ರಂ 24205—6—ಜಿ. 6200ನೇ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಫಿಕೇಟ್ ಬಗ್ಯೆ ನೋಟಿಸ್‌ಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸುಗಳಿಗೆ :—		
ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.		
ಡ್ಯೂಪ್ಲಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಸ್‌ಗಳಿಗೆ :—		
ಮೊದಲನೇ ಸಲಕ್ಕೆ ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ”	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—		
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..	0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸಕ್ರಿಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದ್‌ಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರು ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಯಿಲ್ಲ.

ಸಿ. ರಾಘವಾಚಾರ್‍ಲು,
ಮೈಸೂರ್ ಗೆಜೆಟ್ ಕಂಪೈಲರ್.

೪೧೫

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಪ್ರಸಿದ್ಧಿ ಮಾಡಲ್ಪಟ್ಟದ್ದು. [ನಂ. 40.

ಬೆಂಗಳೂರು, ಗುರುವಾರ, ಅಕ್ಟೋಬರ ತಾ॥ 8, ಸನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು.

3ನೇ ಭಾಗ—ಮೈಸೂರ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 9ನೇ ಸೆಪ್ಟಂಬರ 1896.

ನಂ. 2714.—ಪಿ. 420, ಸನ 1883ನೇ ಜುಲೈ 11ನೇ ಮರ್ಕುಂ 190ನೇ ನಂಬರ ಗವರ್ನಮೆಂಟಿನ ಈ ಕೆಳಗೆ ಕಂಡ ಇಸ್ತಿಹಾರನಾಮೆಯು ಸಕಲರ ತಿಳುವಳಿಕೆ ಬಗ್ಯೆ ಪುನಃ ಪ್ರಸಿದ್ಧಿ ಮಾಡಲ್ಪಟ್ಟಿರುತ್ತೆ:—

"ತಾಬೇದಾರೀ ಗವರ್ನಮೆಂಟ್ ಉದ್ಯೋಗಸ್ಥರುಗಳಿಂದ ಉದ್ಯೋಗಗಳು, ಬಡ್ತಿಗಳು ವ ಬಹಲಿಗಳು ಮತ್ತು ಹೆಚ್ಚಾದ ಪೆನ್ಷನ್‌ಗಳು ಇವುಗಳಿಗಾಗಿ ಅರ್ಜಿಗಳು ದಿವಾನರವರ ಆಫೀಸಿನಲ್ಲಿ ಬಾರಿಬಾರಿಗೂ ಕೊಡಲ್ಪಡುತ್ತಲಿವೆ. ಅಂಥಾ ಅರ್ಜಿಗಳಿಗೆ ಯಾವ ವಿಧವಾದ ಗಮನವೂ ಕೊಡುವದಿಲ್ಲ. ಅವುಗಳು ಆಯಾ ಇಲಾಖೆಗಳ ಮುಖ್ಯಸ್ಥರುಗಳ ಮೂಲಕ ಕಳುಹಿಸಲ್ಪಡಬೇಕು, ಅಥವಾ ಅರ್ಜೀದಾರನು ದಾಖಲಾಗಿದ್ದ ಇಲಾಖೆಯು ಮೂಕೂಫ್ ಮಾಡಲ್ಪಟ್ಟಿದ್ದರೆ ಆತನಿಗೆ ನವುಕರಿಗಾಗಿ ಅಪ್ಪಣೆಯಾಗಿದ್ದ ಇಲಾಖೆಯ ಮುಖ್ಯಸ್ಥರರ ಮೂಲಕ ಕಳುಹಿಸಲ್ಪಡಬೇಕು."

ತಾರೀಖು 8ನೇ ಸೆಪ್ಟಂಬರ್ 1896.

ನಂ. 3401.—ಲೋ. ಫಂ. 257—92, ಸನ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕಟ್ಟಡ ವ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಚಿತ್ರದುರ್ಗ ಮ್ಯುನಿಸಿಪಾಲಿಟಿಯಲ್ಲಿ ಅಯ್ಯಣ್ಣನ ಪೇಟೆಯಿಂದ ಪುರುಷೋತ್ತಮ ಪಂತನಕೆರೆಗೆ ಬಂದು ರಸ್ತೆಯನ್ನ ಹಾಕುವ ಬಗ್ಯಾಗಿ ಬೇಕಾಗಿರುತವೆ:—

ನಂಬರು.	ಮಾಲೀಕರ ಹೆಸರು.	ಜಮೀನ್ ಮತ್ತು ಮನೆಯ ತಪ್ಸೀಲು.	ತೆಗೆದುಕೊಳ್ಳಬೇಕಾದ ವಿಸ್ತೀರ್ಣ.			ಚಕ್ಕುಬಂದಿ.			
			ಪೂರ್ವಪಶ್ಚಿಮ	ಉತ್ತರದಕ್ಷಿಣ	ಒಟ್ಟು ಚದರಗಜ	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಗಜ	ಗಳು.					
1	ಶೆಟ್ಟಿ ಮಹಾಲಿಂಗಪ್ಪ	ಸಾಧಾರಣ ಹೆಂಚಿನ ಮನೆ	3	8	24	ಕಲ್ಲಿಕೃಷ್ಣಪ್ಪನ ಬೈಲು ಅಂಗಳ	ಮಾಲೀಕರ ಮನೆಯ ಮಿಕ್ಕಭಾಗ	ಅಯ್ಯಣ್ಣನಪೇಟೆ	ಮಾಲೀಕರ ಬೈಲು ಅಂಗಳ
2	ಡಿಟೋ	ಬೈಲು ಅಂಗಳ	3	41	123	ಡಿಟೋ	ಮಾಲೀಕರ ಮುಖ್ಯ ಕಟ್ಟಡ ಮತ್ತು ಭಾವಿ	ಮಾಲೀಕರ ಮೇಲ್ಕಂಡ ಹೆಂಚಿನ ಮನೆ	ವಕೀಲ್ ಶ್ರೀನಿವಾಸರಾಯರ ಹಿತ್ತಲು

ತಾರೀಖು 17ನೇ ಸೆಪ್ಟಂಬರ್ 1896.

ನಂ. 3785.—ಮಿ. 790. ಈ ವರುಷಕ್ಕಾಗಿ ದಸರಾ ರಜಾಗಳು 1896ನೇ ಅಕ್ಟೋಬರ್ 6ನೇ ಮಂಗಳವಾರದ ಲಾಗಾಯತು 23ನೇ ಶುಕ್ರವಾರದ ವರಿಗೆ ಉಭಯ ದಿನಗಳೂ ಶೇರಿ ಕೊಡಲ್ಪಡುವವು.

2. ಜರೂರಿಯಾತ್ ಕೆಲಸದ ಬಗ್ಯಾಗಿ ಇಲಾಖೆಗಳ ಮೊಖ್ತೇಸರರುಗಳಿಂದ ಏರ್ಪಾಡುಗಳು ಮಾಡಲ್ಪಡುವವು.

ತಾರಿಖು 9ನೇ ಸೆಪ್ಟಂಬರ್ 1896.

ನಂ. 3452.—ಲೋ. ಫಂ. 65—96, ಸನ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದಕ್ಕೆ ಜಂಟಿಸಿರುವ ಷೆಡ್ಯೂಲಿನಲ್ಲ ವಿವರಿಸಲ್ಪಟ್ಟ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ, ಸಕ್ಲೇಶಪುರದ ಷಹರ್ ಬಡಾಯಿಸುವ ಬಗ್ಯಾಗಿ ಬೇಕಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು.	ತೆಗೆದುಕೊಳ್ಳಬೇಕಾದ ಜಮೀನಿನ ತಪ್ಸೀಲು.				ಚಕ್ಕುಬಂದಿ.			
					ಸರ್ವೇ ನಂ.	ತಪ್ಸೀಲು.	ವಿಸ್ತೀರ್ಣ.	ಬೇರೀಜು.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
							ಎ. ಗುಂ.	ರೂ. ಆ. ಪೈ.				
ಹಾಸನ.	ಮಂಜರಾಬಾದ್.	ಸಕ್ಲೇಶಪುರ.	ಸಕ್ಲೇಶಪುರ.	ಚನ್ನಬಿನ್ ಸಕಣಿಗ	105	ಖುಷ್ಕೀ	3—10	1—4—0	ಸರ್ವೇ ನಂಬರ್ 107	ರಸ್ತೆ	ಸರ್ವೇ ನಂ. 103 ವ 104	ಸರ್ವೇ ನಂ. 106
				ಹುಚ್ಚಭೈರಬಿನ್ ಈರ	ಸರ್ವೇ ನಂ. 107ರಪೈಕಿ	ಡಿಟೋ	0—29	0—4—0	ಸರ್ವೇ ನಂಬರ್ 110ವ 111	ಸರ್ವೇ ನಂ. 105 ವ 106	ಸರ್ವೇ ನಂ. 108 ವ 39	ಸರ್ವೇ ನಂ. 111
				ಜೋಯಿಸ ಕೃಷ್ಣಭಟ್ಟ, ಹುಚ್ಚಭೈರ ಬಿನ್ ಈರ	ಡಿಟೋ	ಡಿಟೋ	0—30	0—4—0	..	..	..	..
				ನಿಂಗಾ ಬಿನ್ ಮರಿನಿಂಗ	ಡಿಟೋ	ಡಿಟೋ	0—30	0—4—0	..	..	..	..
				ಚನ್ನಾಬಿನ್ ಸಕಣಿಗ	ಡಿಟೋ	ಡಿಟೋ	3—16	0—4—0	..	..	..	..
							5—25	2—0—0				
				ಪಡವಲ್ ಬಿನ್ ಅಯ್ಯಾಸಾಮಿ	113	ಡಿಟೋ	0—29	0—4—0	ಸರ್ವೇನಂ. 112 ಗ್ರಾಮನಿವೇಶನ	ಸರ್ವೇ ನಂ. 111	ಸರ್ವೇ ನಂ. 111	ಸರ್ವೇ ನಂ. 115

ತಾ॥ 23ನೇ ಸೆಪ್ಟಂಬರ್ 1896.

ನಂ. 4126.—ಲೋ. ಫಂ. 65.—96, ಸ್ 1894ನೇ ಇಸವಿಯ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಇದರಡಿ ಕಂಡ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಗುಂಡ್ಲು ಪೇಟೆ ಟವನಿನಲ್ಲಿ ಕುರುಬರ ಬೀದೀ ಸಮೀಪ ವೊಂದು ರಸ್ತೆಯನ್ನು ವಿಸ್ತರಿಸುವ ಬಗ್ಯಾಗಿ ಬೇಕಾಗಿರುತ್ತೆ :—

ಡಿಸ್ಟ್ರಿಕ್ಟು—ಮೈಸೂರು	ಅನುಭವದಾರ—ಗಾಣಿಗರ ಪುಟ್ಟಶೆಟ್ಟಿ.	ಚೆಕ್ಕು ಬಂದಿ—
ತಾಲ್ಲೂಕು—ಗುಂಡ್ಲು ಪೇಟೆ	ಸರ್ವೆನಂ.—ಮುನಿಸಿಪಲ್ ಸರಹದ್ದಿನಲ್ಲಿರುವ ಜಮೀನ್.	ಉತ್ತರಕ್ಕೆ—ಕುರುಬರಕೇರೆ ರಸ್ತೆ
ಹೋಬಳಿ—ಕಸಬಾ	ವಿಸ್ತೀರ್ಣ—ಪೂರ್ವ ಪಶ್ಚಿಮ 30 ಗಜಗಳು, ಉತ್ತರ	ದಕ್ಷಿಣಕ್ಕೆ—ನೀಲಗಿರೀ ರಸೆ
ಗ್ರಾಮ—ಗುಂಡ್ಲು ಪೇಟೆ ಟೌನ್	ದಕ್ಷಿಣ—105 ಚದುರ ಗಜಗಳು. ಪೇರೀಜು—ಇಲ್ಲ.	ಪಶ್ಚಿಮಕ್ಕೆ—ದೊಡ್ಡಮಾದಶೆಟ್ಟಿ ಮನೆ
		ಪೂರ್ವಕ್ಕೆ—ಮಾದಶೆಟ್ಟರ ಅಂಗಡಿ, ಭಾವಿ ವಗ್ಯೆರೆ

ತಾರೀಖು 29ನೇ ಸೆಪ್ಟಂಬರ್ 1896.

ನಂ. 4391.—ಜು. 475, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ತುಮಕೂರು ಡಿಸ್ಟ್ರಿಕ್ಟ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಸಿ. ಶೇಷಾದ್ರಯ್ಯಂಗಾರ್‌ಯವರು 1ನೇ ಕ್ಲಾಸಿನ ಮಾಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 30ನೇ ಸೆಪ್ಟಂಬರ್ 1896.

ನಂ. 4481.—ಜು. 473, ಸ್ 1877ನೇ ಇಸವಿಯ IIIನೇ ನಂ. ರಿಜಿಸ್ಟ್ರೇಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಮೈಸೂರ್ ಗವರ್ನಮೆಂಟಿನವರು ಈ ಕೆಳಗೆ ಕಂಡ ನೇಮಣೂಕಿಗಳು ಹುಕುಂ ಮಾಡಿರುತ್ತಾರೆ.

1. ತುಮಕೂರು ಡಿಸ್ಟ್ರಿಕ್ಟು ರಿಜಿಸ್ಟ್ರಾರ್ರ ಆಫಿಸ ಹೆಡ್ ಕ್ಲಾರ್ಕ್ ಈ. ಎಸ್. ವೆಂಕಟರಮಣಅಯ್ಯರ್ ಯವರು, ಬೆಂಗಳೂರು ಸಿಟಿ ಸಬ್ ರಿಜಿಸ್ಟ್ರೀ ಆಫಿಸಿಗೆ ಬಡ್ತೀ ಮೇಲೆ ವರ್ಗಮಾಡಲ್ಪಟ್ಟ ಎ. ಟಿ. ನರಸಿಂಹಯ್ಯಂಗಾರ್, ಬಿ. ಎ., ಯವರಿಗೆ ಬದಲಾಗಿ, ತಿಪಟೂರು 3ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

2. ಆಜಮಾಯಿಷೀ ತರೀಕಾಗಿದ್ದ ಮಾಗಡಿಯ 3ನೇ ಗ್ರೇಡ್ ಸಬ್ ರಿಜಿಸ್ಟ್ರಾರ್ ಕೆ. ದೊರೆಸಾಮಿ ಅಯ್ಯಂಗಾರ್ ಬಿ. ಎ., ಯವರು ಸದರೀ ಉದ್ಯೋಗದಲ್ಲಿ ಖಾಯಂ ಮಾಡಲ್ಪಟ್ಟಿರುತ್ತಾರೆ.

3. ಸಿ. ಜಯರಾವ್, ಬಿ. ಎ., ಯವರು, ರಾಜೀನಾಮೆ ಕೊಡಲ್ಪಟ್ಟ ಎ. ಶಾಮರಾವ್, ಬಿ. ಎ., ಯವರಿಗೆ ಬದಲಾಗಿ, ನೆಲಮಂಗಲದ 3ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 4483.—ಜು. 484, ಒಂದನೇ ಕ್ಲಾಸ್ ಪೊಲೀಸ್ ಸೂಪರಿಂಟೆಂಡೆಂಟ್ ಮೆಸ್ಟರ್ ಡಿ. ದೇವರಾಜ ಅರಸಿನವರು ತಲಬಿಲ್ಲದ ರಜಾದ ಮೇಲಿರುವ ಕಾಲದಲ್ಲಿ ಈ ಕೆಳಗೆ ಕಂಡ ಆಕ್ಟಿಂಗ್ ಸಬ್ ಪ್ರೋಟಂ ಬಡ್ತಿಗಳು 1896ನೇ ಜೂನ್ 7ನೇ ತಾರೀಖು ಲಾಗಾಯತು ಹುಕುಂ ಮಾಡಲ್ಪಟ್ಟಿರುತವೆ:—.

ಮೆಸ್ಟರ್ ಸಿ. ಹಾರ್ಡಿಯವರು 2ನೇ ಕ್ಲಾಸ್ ಸೂಪರಿಂಟೆಂಡೆಂಟರಿಂದ 1ನೇ ಕ್ಲಾಸ್ ಸೂಪರಿಂಟೆಂಡೆಂಟರಾಗಿರತಕ್ಕದ್ದು.

ಮೆಸ್ಟರ್ ಡಿ. ಎ. ಬಲ್ಲಾರ್ಡ್ ಯವರು, 1ನೇ ಕ್ಲಾಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ 2ನೇ ಕ್ಲಾಸ್ ಸೂಪರಿಂಟೆಂಡೆಂಟರಾಗಿರತಕ್ಕದ್ದು.

ಮೆಸ್ಟರ್ ಜಿ. ಕೃಷ್ಣರಾವ್, ಬಿ. ಎ., ಯವರು, 2ನೇ ಕ್ಲಾಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಿಂದ 1ನೇ ಕ್ಲಾಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿರತಕ್ಕದ್ದು.

ನಂ. 4488.—ಜು. 487, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟು ಪೊಲೀಸ್ ಸೂಪರಿಂಟೆಂಡೆಂಟ್ ಮೆಸ್ಟರ್ ಸಿ. ಹಾರ್ಡಿಯವರಿಗೆ 1896ನೇ ಸೆಪ್ಟಂಬರ್ 23ನೇ ಮುಕ್ಕಾಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 4509.—ಜು. 495, ಅಸಿಸ್ಟೆಂಟ್ ಗವರ್ನಮೆಂಟ್ ಆಡ್ವೋಕೇಟರ ಉದ್ಯೋಗವು ಮೌಕೂಫ್ ಮಾಡಲ್ಪಟ್ಟಿರುವದರಿಂದ, 1892ನೇ ಏಪ್ರಿಲ್ 29ನೇ ಮುಕ್ಕಾಂ 47ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಅಸಿಸ್ಟೆಂಟ್ ಗವರ್ನಮೆಂಟ್ ಅಡ್ವೋಕೇಟರಿಗೆ ಕ್ರಿಮಿನಲ್ ಅಪ್ಪೀಲ್‌ಗಳು ವಗ್ಯೆರೆಗಳಲ್ಲಿ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 422 ವ 526ನೇ ಸೆಕ್ಷನ್‌ಗಳ ಮೇರೆ ಕೊಡಲ್ಪಡಬೇಕಾದ ವಗೈರೋಬಸ್ತು ನೋಟೀಸುಗಳೂ ಈ ಲಾಗಾಯತು ಮೈಸೂರ್ ಗವರ್ನಮೆಂಟ್ ಆಡ್ವೋಕೇಟರವರಿಗೆ ಕೊಡಲ್ಪಡತಕ್ಕದ್ದೆಂದು ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ.

ತಾರೀಖು 1ನೇ ಅಕ್ಟೋಬರ್ 1896.

ನಂ. 4553.—ಜು. 500, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟು ಯಕ್ಸ್ಟ್ರಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಸಿ. ಬಿ. ಶೇಷಗಿರಿರಾಯರಿಗೆ, 1ನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗಳು ಕೊಡಲ್ಪಟ್ಟಿರುತವೆ.

2. ಸದರೀಯವರು ಸದರೀ ಕೋಡಿನ 357ನೇ ಸೆಕ್ಷನ ಅನುಸರಿಸಿ, ಫಿರ್ಯಾದಿಗಳ ವ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ಸ್ವದಸ್ತೂರ ತೆಗೆದುಕೊಳ್ಳುವ ಒ.ಗ್ಯೆ ಸಹ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ತಾರೀಖು 10ನೇ ಸೆಪ್ಟಂಬರ 1896.

ನಂ. 2816.—ರೆ. 1019, ಸ್ 1890ನೇ ಜುಲೈ 22ನೇ ಮರ್ಕುಂ 150ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಘಾಯಿಷ್ ಮಾಡಲ್ಪಟ್ಟ ಲ್ಯಾಂಡ್ ರೆವಿನ್ಯೂ ಕೋಡಿನ ರೂಲುಗಳ XXX A.ನೇ ರೂಲಿನಂತೆ ಈ ಕೆಳಗೆ ಕಂಡದ್ದನ್ನು ಓದತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

"XXX A. ಅಮಲ್‌ದಾರ್ರುಗಳು ವ ಡೆಪ್ಯುಟಿ ಅಮಲ್‌ದಾರ್ರುಗಳ ಅಧಿಕಾರಗಳು.

(ಲ್ಯಾಂಡ್ ರೆವಿನ್ಯೂ ಕೋಡಿನ 135ನೇ ಸೆಕ್ಷನ.) ಕಟ್ಟಡ ನಿವೇಶನಗಳನ್ನ ಕೊಡುವ ವಿಷಯದಲ್ಲಿ ಅಮಲ್‌ದಾರ್ರು ವ ಡೆಪ್ಯುಟಿ ಅಮಲ್‌ದಾರ್ರುಗಳ ಅಧಿಕಾರಗಳು.

ಅಮಲ್‌ದಾರ್ರುಗಳು ನಿವೇಶನಗಳ ಕ್ರಯಗಳನ್ನ ಸದರೀ ಮೊಬಲಗು 10 ರೂಪಾಯಿಗಳಿಗೆ ಮೀರದಿದ್ದರೆ ಅಪ್ಪೀಲ್ ಯಾ ಪುನರ್ವಿಮರ್ಶೆಗೆ ವೊಳಪಟ್ಟು ಖಾಯಂ ಮಾಡಬಹುದು, ಪರಂತು ಬಹಿರಂಗವಾದ ಹರಾಜಿಗೆ ಬದಲಾಗಿ ಸರಕಾರ್ ಸವಾಲಿಗೆ ಕೊಡಬೇಕಾಗಿ ಉದ್ದೇಶಿಸಲ್ಪಟ್ಟ ನಿವೇಶನಗಳ ದರೋಬಸ್ತು ಸಂಗತಿಗಳೂ ಡೆಪ್ಯುಟಿ ಕಮಿಷನರವರ ಹುಕುಂ ಬಗ್ಗಾಗಿ ರಿಪೋರ್ಟು ಮಾಡಲ್ಪಡತಕ್ಕದ್ದು."

ತಾರೀಖು 11ನೇ ಆಗಸ್ಟ್ 1896.

ನಂ. 1618.—ಎಕ್ಸೈ. 64, ಸ್ 1881ನೇ ಇಸವಿಯ XXIIನೇ ನಂಬರ್ ಎಕ್ಸೈಜ್ ಆಕ್ಟಿನ 55ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರಗಳ ದೆಸೆಯಿಂದ ಕಂಟ್ರಿ ಬೀರು ಅಂಗಡಿಗಳ ಮಾರಾಟದ ಬಗ್ಗೆಯು ಮತ್ತು ಕಂಟ್ರಿ ಬೀರು ಯಾ ಪೋರ್ಟರು ಜಿಲ್ಲೆಯಾಗಿ ಮಾರುವದಕ್ಕೆ ಲೈಸೆನ್ಸಿಗಾಗಿಯೂ ನೋಟಿಸಿನ ಈ ಕೆಳಗೆ ಕಂಡ ನಮೂನೆಯನ್ನ ಮೈಸೂರು ಗವರ್ನಮೆಂಟಿನವರು ವಿಧಿಸಿರುತ್ತಾರೆ:—

ನೇ ವರುಷಕ್ಕಾಗಿ ಲ್ಲಿ ಇರತಕ್ಕ ಕಂಟ್ರಿ ಬೀರು ಅಂಗಡಿಗಳ ಹರಾಜು ನೋಟೀಸ್.

1. ಇದರಿಂದ ಪ್ರಸಿದ್ಧ ಪಡಿಸುಹದೇನಂದರೆ,—ಇದಕ್ಕೆ ಜಂಟಿಸಲ್ಪಟ್ಟ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮೂರು ಅಂಗಡಿಗಳ ಪ್ರತಿ ಒಂದರಲ್ಲೂ ಕಂಟ್ರಿ ಬೀರು ಯಾ ಪೋರ್ಟರು 189 ನೇ ಜುಲೈ 1ನೇ ತಾರೀಖಿನಿಂದ ಪ್ರಾರಂಭಿಸಿ 189 ನೇ ಜೂನ್ 30ನೇ ತಾರೀಖಿಗೆ ಆಖೈರಾಗುವ ಹನ್ನೆರಡು ತಿಂಗಳುಗಳ ಕಾಲಕ್ಕಾಗಿ ಬಿಕರಿ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಡಿಸ್ಟ್ರಿಕ್ಟು ಆಫಿಸಿನಲ್ಲಿ ನೇ ತಾರೀಖಿನಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರಿಂದ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಸವಾಲು ಮಾಡುವದಕ್ಕೆ ಪೂರ್ವ 50 ರೂಪಾಯಿ ಯಾ ಹರಾಜು ನಡಿಸತಕ್ಕ ಆಫಿಸರರಿಂದ ಗೊತ್ತುಮಾಡಲ್ಪಡಬಹುದಾದ ಇತರ ನ್ಯಾಯವಾದ ಮೊಬಲಗು ಠೇವಣಾತಿ ಇಡತಕ್ಕದ್ದು. ಪ್ರತಿ ಅಂಗಡಿಯೂ ಅಂಗೀಕರಿಸಲ್ಪಟ್ಟ ಜಡದರಖಾಸ್ತುದಾರರಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ವಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ತೋರಿಸದೆ ಮಂಜೂರು ಯಾ ತಳ್ಳಿಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್‌ಮಾಡಲ್ಪಟ್ಟ ದರಖಾಸ್ತು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿಯಾಗಲಿ ಯಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದಿರುವ ಮುಕ್ತಾಲೀಕರಾಗಲಿ ಹಾಜರಾಗಬೇಕು.

3. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ಮೇರೆ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸ್ ಮಾಡಲ್ಪಡುವವು. ಹರಾಜು ನಡೆಯುವ ಕಾಲದಲ್ಲಿ ಪ್ರತಿ ಅಂಗಡಿಗಾಗಿ ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರು ತಕ್ಷಣವೇ ಆ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣಿ ಇಡಬೇಕು. ಹಾಗೆ ಇಡಲಿಕ್ಕೆ ತಪ್ಪಿದಲ್ಲಿ 2ನೇ ಪ್ಯಾರಾ ಅನುಸರಿಸಿ ಆತನಿಂದ ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟು ಸದರೀ ಅಂಗಡಿಯು ಪುನಶ್ಚ ಮೇಲೆ ಕಂಡ ಷರತ್ತುಗಳಿಗೆ ಒಳಪಟ್ಟು ತಕ್ಷಣವೇ ಹರಾಜಾಗುವದಲ್ಲದೆ ಆತನು ಪುನಃ ಈ ಅಂಗಡಿಗಾಗಲಿ ಅಥವಾ ಇತರ ಯಾವ ಅಂಗಡಿಗಾಗಲಿ ಸವಾಲ್ ಮಾಡಕೂಡದು.

4. ಯಾರ ಹೆಸರಿಗೆ ಸದರೀ ಅಂಗಡಿಗಳು ಹರಾಜಿನಲ್ಲಿ ನಿಲ್ಲಲ್ಪಡುತ್ತೋ ಮತ್ತು 2 ವ 3ನೇ ಪ್ಯಾರಾಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜಿನ ತಾರೀಖು ಲಾಗಾಯತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟ ಪ್ರತಿ ಅಂಗಡಿಯ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಶೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣಿ ಕಟ್ಟಿಇದಕ್ಕೆ ಜಂಟಿಸಿರುವ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸನ್ನ ಪಡೆಯತಕ್ಕದ್ದು. ಮತ್ತು ಒಂದು ಎದುರು ಒಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಯದುರು ಒಡಂಬಡಿಕೆ ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್‌ದಾರಿ ಮೇಲೆ ಮರಳಿ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿದ್ದ ಪಕ್ಷಕ್ಕೆ ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ತರುವಾಯ ಕೊಂಡುಕೊಂಡವನು ಮೃತಪಟ್ಟರೆ ಜವಾಬ್‌ದಾರಿಯು ಆತನ ವಾರಸ್‌ದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

5. ಮೇಲಿನ ನಾಲ್ಕನೇ ಪ್ಯಾರಾ ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರಿ ಮೇಲೆ ನಡೆಯುತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ, ಮತ್ತು ದುಸರಾ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜು ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರಾ ಹರಾಜಿನಲ್ಲಿ ಜಡಸವಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತ ಬಾಕಿ ಉಳಿಯುವದರನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂಬರ್ಭದಲ್ಲಿ ದುಸರಾ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಗಿನಲ್ಲಿ ಸರ್ಕಾರಕ್ಕೆ

ದಂಡವಾಗಿ ಶೇರಿಸಿಕೊಂಡಿರುವ ಠೇವಣಿ ಮೊಬಲಗು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು. ಆದರೆ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಠೇವಣಿ ಮೊಬಲಗು ದುಸರಾ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಅಂಥಾ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೇನೇ ಜಮಾ ಮಾಡಿಕೊಳ್ಳಲ್ಪಡುವದು.

6. ಮೇಲಿನ 4ನೇ ಪ್ಯಾರಾ ಅನುಸರಿಸಿ ಪಡೆಯಬೇಕಾದ ಲೈಸೆನ್ಸ್ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಮೆಸ್ಸರ್ಸ್ ಲೀಷ್‌ಮ್ಯಾನ್ ಅಂಡ್ ಕೋ ಯವರಿಂದಲೂ ಅಥವಾ ಕಿರ್ಕಿಯಲ್ಲಿ ಮೆಸ್ಸರ್ಸ್ ವಿಕಾರ್ ಅಂಡ್ ಕೋ ಯವರಿಂದಲೂ ಕಾಯಿಸಲ್ಪಟ್ಟ ಕಂಟ್ರಿ ಬೀರು ಯಾ ಪೋರ್ಟರು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ತಾಲ್ಲೂಕು ಖಜಾನೆಗೆ 189 ನೇ ಜುಲೈ 1ಗಾಯಿತು ಪ್ರಾರಂಭಿಸಿ ಸರಿಯಾದ ತಿಂಗಳು ಗಟ್ಲೆ ಖಿಸ್ತುಗಳ ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿ ಒಂದು ಖಿಸ್ತು ಅದು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗಾಗಿ ಭಾವಿಸಲ್ಪಡತಕ್ಕದ್ದು. ಪ್ರತಿ ಒಂದು ತಿಂಗಳ ಗುತ್ತಿಗೆ ಮೊಬಲಗೂ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಪಾವತಿ ಮಾಡತಕ್ಕದ್ದು. ಲೈಸೆನ್ಸದಾರನಿಂದ ಠೇವಣಿ ಇಟ್ಟಿರುವ ಎರಡು ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯ ಕಡೇ ಎರಡು ತಿಂಗಳಿಗಾಗಿ ಕೊಡತಕ್ಕ ಗುತ್ತಿಗೆ ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡತಕ್ಕದ್ದು. ಸದರೀ ತಿಂಗಳ 20ನೇ ತಾರೀಖಿನೊಳಗಾಗಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳನುಸರಿಸಿ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡೀನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸದಾರನು ತಾನು ಕೊಡಬೇಕಾಗಿರುವ ಗುತ್ತಿಗೆ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ಯಾ ವಜಾ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(3) ಲೈಸೆನ್ಸದಾರನು ಆತನಿಂದ ಕೊಂಡುಕೊಳ್ಳಲ್ಪಟ್ಟ ಕಂಟ್ರಿ ಬೀರು ಯಾ ಪೋರ್ಟರ ಪ್ರತಿ ಗ್ಯಾಲನಿಗೂ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(4) ಲೈಸೆನ್ಸದಾರನಿಂದ ಕೊಂಡುಕೊಂಡು ಕಳುಹಿಸತಕ್ಕ ಕಂಟ್ರಿ ಬೀರು ಯಾ ಪೋರ್ಟರುಗಳು ಬ್ರೂಯರಿಯಿಂದ ತಾಲ್ಲೂಕು ಅಮಲ್ದಾರ್ರಿಗೆ ಸೀದಾ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯು ಇಮ್ಮಡಿಯಾಗಿರತಕ್ಕದ್ದು, ಅಸಲಿ ಪ್ರತಿಯು ತಾಲ್ಲೂಕು ಅಮಲ್ದಾರ್ರಿಗೂ ಮತ್ತು ಎರಡನೇ ಪ್ರತಿಯು ಎಕ್ಸೈಜ್ ಕಮಿಷನರಿಗೂ ಕಳುಹಿಸತಕ್ಕದ್ದು. ಮೇಲೆ ನಮೂದಿಸಲ್ಪಟ್ಟ ದರದ ಮೇರಿಗೆ ಹಾಸಲ್ ಮೊಬಲಗು ಗೊತ್ತಾದ ಚಲನಿನಲ್ಲಿ ಲೈಸೆನ್ಸದಾರನಿಂದ ಪಾವತಿ ಆದ ನಂತರ ಅಮಲ್ದಾರ್ರು ಸರಕನ್ನು ಲೈಸೆನ್ಸದಾರನು ತನ್ನ ಅಂಗಡಿಗೆ ಸಾಗಿಸಲು ತಮ್ಮಿಂದ ಯಾ ಈ ವಿಷಯದಲ್ಲಿ ಅವರಿಂದ ಅಧಿಕಾರ ಪಡೆದ ಇತರ ಆಫೀಸರರಿಂದ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(5) ಲ್ಲಿರತಕ್ಕ ಪ್ರತಿ ಅಂಗಡಿಯ ಲೈಸೆನ್ಸದಾರನೂ ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ತನ್ನ ಅಂಗಡಿಯ ಲೈಸೆನ್ಸಿನ ಕಾಲಕ್ಕಾಗಿ ವರುಷ ಒಂದಕ್ಕೆ 180 ರೂಪಾಯಿನ ದರದ ಮೇರಿಗೆ ಅಡ್ವಾನ್ಸಾಗಿ ರಿಜಿಸ್ಟ್ರೇಷನ್ ಫೀಯನ್ನು ಕೊಡತಕ್ಕದ್ದು.

(6) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನೆಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಖ್ಖಗಳು, ಬೀರು ಯಾ ಪೋರ್ಟರು ಸಾಗಿಸುವ ಬಗ್ಯೆ ಬೇಕಾದ ರಹದಾರಿಗಳು ಅಥವಾ ಪ್ಯಾಸುಗಳು ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(7) ಲೈಸೆನ್ಸದಾರನು 189 ನೇ ಜುಲೈ 1ನೇ ಮರ್ಲು ಮಿನಲ್ಲಿ ಸದರೀ ಅಂಗಡಿಯಲ್ಲಿ ಶಿಲ್ಕಿನಲ್ಲಿ ಉಳಿಯಬಹುದಾದ ಬಿಟ್ಟು ಹೋಗುವ ಲೈಸೆನ್ಸದಾರನಿಗೆ ಶೇರಿದ ಅಂಥಾ ಬೀರು ಯಾ ಪೋರ್ಟರನ್ನ ಎಕ್ಸೈಜ್ ಕಮಿಷನರವರಿಂದ ನಿಷ್ಕರ್ಷಿಸಲ್ಪಡಬಹುದಾದ ಲಾಗವಡು ಸದರೀಯವನಿಗೆ ಕೊಟ್ಟು ತೆಗದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

(8) ಲೈಸೆನ್ಸದಾರನು ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡಬಹುದಾದ ನಿಬಂಧನೆಗಳ ಮೇರೆ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(9) ಬಾಕಿ ಕರಾರುಗಳು ವ ಷರತ್ತುಗಳು ಇದಕ್ಕೆ ಲಗತ್ತಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸದಾರನಾಗಲಿ ಯಾ ಆತನ ತಿಳುವಳಿಕೆ ವ ಸಮ್ಮತಿಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ಅಥವಾ ಲೈಸೆನ್ಸದಾರನು ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಿಗಿಸಿದ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರು ಲೈಸೆನ್ಸದಾರನಿಗೆ ಅಂಥಾ ಪ್ರತಿ ಉಲ್ಲಂಘನೆ ಯಾ ಅಶ್ರದ್ಧೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಮತ್ತು ಲೈಸೆನ್ಸನ್ನ ರದ್ದುಮಾಡಿ ಸದರೀ ಲೈಸೆನ್ಸದಾರನ ಜವಾಬ್‌ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಃ ಹರಾಜು ಮಾಡಲಿಕ್ಕೂ ಮೊಖ್ತ್ಯಾರಾಗಿರತಕ್ಕದ್ದು. ಇದರಿಂದುಂಟಾಗುವ ಎಲ್ಲಾ ನಷ್ಟವನ್ನೂ ಲೈಸೆನ್ಸದಾರನು 189 ನೇ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರ ದೆಶೆಯಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಆತನಿಂದ ಭರ್ತೀ ಮಾಡಲ್ಪಡತಕ್ಕದ್ದು. ಗುತ್ತಿಗೆಯು ರದ್ದುಮಾಡಲ್ಪಟ್ಟಲ್ಲಿ ಪೂರಾ ಕಾಲದ ಗುತ್ತಿಗೆ ಮೊಬಲಗು ತಕ್ಷಣ ಪಾವತಿ ಮಾಡತಕ್ಕದ್ದು, ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಗಳಂತೆ ಎಲ್ಲಾ ನಷ್ಟಗಳ ಸಹಿತ ವಸೂಲ್ಮಾಡಲ್ಪಡತಕ್ಕದ್ದು.

8. ಮೇಲಿನ ಹಿಂದಿನ ಷರತ್ತಿನಲ್ಲಿ ವಿಧಿಸಲ್ಪಟ್ಟ ದಂಡನೆಗಳು ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೆ ಯಾ ರೂಲುಗಳಿಗೆ ವಿರೋಧವಾಗಿ ಮಾಡಲ್ಪಟ್ಟ ಯಾವ ತಕ್ಸೀರಿಗೂ ಲೈಸೆನ್ಸದಾರನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆನಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಷೆಡ್ಯೂಲ್,

ಸ್ಥಳದ ಹೆಸರು.	ಅಂಗಡಿಯ ಸೀರಿಯಲ್ ನಂಬರ್.	ಅಂಗಡಿ ಇರುವ ಸ್ಥಳ.		ಹಾಲೀ ಲೈಸೆನ್ಸ್ ದಾರರ ಹೆಸರುಗಳು.	ಖರ್ಚು.			ಗುತ್ತಿಗೆ.	ಷರಾ.
		ಡೋರ್ ನಂಬರ್.	ಸ್ಥಳ.				—ಯ 8 ತಿಂಗಳು.		
					ಪೀಪಾಯಿಗಳು	ಪೀಪಾಯಿಗಳು	ಪೀಪಾಯಿಗಳು	ರೂ.	

ಬೀರ್ ಲೈಸೆನ್ಸ್.

ಕಂಟ್ರಿ ಬೀರನ್ನು ಯಾ ಪೋರ್ಟರನ್ನು ಚಿಲ್ಲರೆಯಾಗಿ ಮಾರುವದಕ್ಕೆ ಲೈಸೆನ್ಸ್ (1881ನೇ ಇಸವಿಯ XXIIನೇ ನಂಬರ್ ಆಕ್ಟಿನ 12 ವ 13ನೇ ಸೆಕ್ಷನ್‌ಗಳನುಸರಿಸಿ ಕೊಡಲ್ಪಟ್ಟದ್ದು.)

1. ರಿಜಿಸ್ಟರ್ ನಂಬರ್. | 3. ಮಾರುವವನ ಹೆಸರು.
2. ಲೈಸೆನ್ಸ್‌ದಾರನ ಹೆಸರು. | 4. ಸ್ಥಳ.

ಕಂಟ್ರಿ ಬೀರ್ ಮತ್ತು ಪೋರ್ಟರನ್ನು ನಂಬರ ಅಂಗಡಿಯಲ್ಲಿ ಚಿಲ್ಲರೆಯಾಗಿ ಮಾರುವದಕ್ಕೋಸ್ಕರ ಗೆ ಈ ಕೆಳಗಿನ ಷರತ್ತುಗಳನುಸರಿಸಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆದ ನಾವು ಇದರಿಂದ ಅಧಿಕಾರವನ್ನು ಕೊಡುತ್ತೇವೆ:—

I. ಈ ಲೈಸೆನ್ಸ್ ಕ್ರಯ, ದಾನ, ಭೋಗ್ಯ ಅಥವಾ ಇನ್ನಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ, ಮತ್ತು ಇದರಲ್ಲಿ ನಮೂದಿರತಕ್ಕವರು ಶಿವಾಯಿ ಮತ್ತ್ಯಾವ ಜನರೂ ಇದರ ಆಧಾರದ ಮೇಲೆ ಕಾರ್ಯಗಳನ್ನ ನಡಸಲಿಕ್ಕೆ ಅಧಿಕಾರವಿರುವದಿಲ್ಲ.

II. ದುಕಾನ್‌ದಾರನು ಲೈಸೆನ್ಸ್‌ದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗಿರುತ್ತಾನೆ, ಅವು ಯಾವವಂದರೆ.

III. ಅವನು ಬೀರ್ ಯಾ ಪೋರ್ಟರನ್ನು ಪೀಪಾಯಿ ಅಥವಾ ಬುಡ್ಡಿಯಿಂದಾಗಲಿ ಅಂಗಡಿಯಲ್ಲಿ ಅಥವಾ ಹೊರಗಡೆಯಲ್ಲಿ ಕುಡಿಯಲಿಕ್ಕೆ ಮಾರಬೇಕೇ ಹೊರ್ತು ಇತರ ಯಾವ ತರಹೇದ ಬೀರ್ ಯಾ ಪೋರ್ಟರನ್ನಾಗಲಿ ಮಾರಕೂಡದು, ಮತ್ತು ಅಂಗಡಿಯ ಹೊರಗಡೆ ಕುಡಿಯಲಿಕ್ಕೆ ಮಾರುವ ಸಂದರ್ಭದಲ್ಲಿ ಯಕ್ಸೈಜ್ ಇಲಾಖೆಯವರಿಂದ ಕೊಡಲ್ಪಡುವ ರಹದಾರಿಗಳ ಆಧಾರದ ಮೇಲೆ ಮಾರತಕ್ಕದ್ದಲ್ಲದೆ ಸದರೀ ರಹದಾರಿಯಲ್ಲಿನ ಷರತ್ತುಗಳಂತೆ ಮಾರುವವನೂ ಮತ್ತು ಕೊಂಡುಕೊಳ್ಳುವವನೂ ಈ ಉಭಯತ್ರರೂ ಖಂಡಿತವಾಗಿ ನಡೆದುಕೊಳ್ಳಬೇಕು. ಅಂಥಾ ರಹದಾರಿಗಳ ಆಧಾರದಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಎರಡು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ಎಂಟು ಶೇರುಗಳಿಗಿಂತ ಹೆಚ್ಚಾಗಿರಕೂಡದು.

IV. ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಬೀರು ಯಾ ಪೋರ್ಟರು ಯಷ್ಟು ಮಟ್ಟಿಗಾದರೂ ಯಾವ ಯೂರೋಪಿಯನ್ ಅಥವಾ ನಾನ್ ಕಮ್ಮಿಷನ್ಡ್ ಆಫಿಸರಿಗಾದರೂ ಯಾ ಪ್ರೈವೇಟ್ ಸೋಲ್ಜರಿಗಾದರೂ ಅಥವಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಯಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅಥವಾ ಕೊಡಲೂ ಕೂಡದು, ಅವನು, ಅವಳು ಯಾ ಅವರುಗಳಿಗೆ ತನ್ನ ಅಂಗಡಿಯಲ್ಲಿ ಅಥವಾ ಅಂಗಡಿಯ ಆವರಣದಲ್ಲಿ ಬೀರು ಯಾ ಪೋರ್ಟರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿ ಯಾ ಅದಕ್ಕೆ ಶೇರಿದ ಆವರಣದಲ್ಲಿ ಜನಗಳು ಕುಡಿದು ನಿಷಾಹತ್ತಿ ಬೀಳುವಂತೆ ಯಾ ಅವರು ಅಕ್ರಮವಾಗಿ ನಡಿಯುವಂತೆ ಅವಕಾಶ ಕೊಡಕೂಡದು, ಮತ್ತು ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆ ಮಾಡಕೂಡದು. ವ್ಯಭಿಚಾರಿಗಳನ್ನಾಗಲಿ ಯಾ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ತಿಳಿದು ತನ್ನ ಅಂಗಡಿಗೆ ಬರುವಂತೆ ಯಾದರೂ ಅಥವಾ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಿಗಾದರೂ ಯಾ ಇತರರಿಗಾದರೂ ಅವರುಗಳು ಫರಾರಿಯಾದವರೆಂದು ತಿಳಿದು ಅಥವಾ ಅಂತವರೆಂದು ನಂಬುವದಕ್ಕೆ ಕಾರಣವಿದ್ದೂ ಅಂತವರಿಗೆ ತನ್ನ ಅಂಗಡಿಯಲ್ಲಿ ಪುನಃಪೂರ್ತಿಯಾಗಿ ಸ್ಥಳ ಕೊಡಲೂ ಕೂಡದು ಯಾ ಛಪಾಯಿಸಿ ಇಡಲೂ ಕೂಡದು. ಗುಮಾನೀ ನಡತೆಗಳುಳ್ಳ ಜನಗಳ ವಿಷಯಕವಾದ ವರ್ತಮಾನವನ್ನ ಮಾಜಿಸ್ಟ್ರೇಟರಿಗೆ ಯಾ ಪೊಲೀಸ್ ಆಫಿಸರರಿಗೆ ತಿಳಿಸಬೇಕು, ಮತ್ತು ಉದ್ಯೋಗದ ಮೇಲಿರುವಾಗ ಯಾವ ಪೋಲೀಸ್ ಆಫಿಸರರಿಗಾಗಲಿ, ರೈಲ್ವೆ ನೌಕರನಿಗಾಗಲಿ ಯಾ ಯಕ್ಸೈಜ್ ಆಫಿಸರರಿಗಾಗಲಿ ಬೀರು ಯಾ ಪೋರ್ಟರನ್ನು ಮಾರಲೂ ಕೂಡದು ಅಥವಾ ಕೊಡಲೂ ಕೂಡದು.

V. ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ವೊಂದು ಹಲಿಗೇಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರು ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರು ಸಹ ವ್ಯಕ್ತವಾಗಿ ಬರಸಿ ಇಡಬೇಕು.

VI. ಅವನು ಯಾವ ಪದಾರ್ಥಗಳನ್ನಾಗಲಿ ಬದಲಿಯಾಗಿಯಾದರೂ ಯಾ ಅಡಮಾನವಾಗಿಯಾದರೂ ತೆಗದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ವೊಂದಕ್ಕೆ ವೊಂದು ರೂಪಾಯಿನ ಲಾಗಾಯತು ವೊಂದು ರೂಪಾಯಿ ನಾಲ್ಕಾಣೇ ವರಿವಿಗೂ ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರವೂ ನಗದಾಗಿ ಹಣ ತೆಗೆದುಕೊಳ್ಳಬೇಕು.

VII. ಈ ಲೈಸೆನ್ಸ್ ಪ್ರಕಾರ ಮಾರುವ ಬೀರು ವ ಪೋರ್ಟರು ವೊಂದು ಹಾಗ್ಸ್ ಹೆಡ್‌ಯಾನೆ ಪೀಪಾಯಿಗೆ ಮಾಲ್ಟ್ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಶೇಕಡಾ 75ರಷ್ಟನ್ನೂ ಮತ್ತು ಕೆಂಟು ದೇಶದಲ್ಲಿ ಬೆಳದಂಥಾ ವಳ್ಳೇದಾಗಿರುವ 3 ಪೌಂಡ್ಸ್ ಹಾಪ್ಸ್ ಎಂಬ ಹುವ್ವುಗಳನ್ನೂ ಶೇರಿಸಬೇಕು, ಮತ್ತು ಮೇಲ್ಕಂಡ ಬೀರು ವ ಪೋರ್ಟರು ಭಟ್ಟೀ ಇಡಿಸತಕ್ಕವರಿಂದ ಖರೀದಿಗೆ ತಂದ ಹಾಗೆ ನೀರು ಬೆರಸದೆ ಯಾ ಇತರ ಪದಾರ್ಥ ಮಿಶ್ರಪಡಿಸಿ ಕೆಡಿಸದೆ ಅದೇ ತರಹೇದ್ದಾಗಿ ಮತ್ತು ಮಂದವಾಗಿರಬೇಕು. ಇಂಥಾ ಬೀರು ವ ಪೋರ್ಟರಿನ ಮಾದರಿಗಳು ಯಕ್ಸೈಜ್ ಇಲಾಖೆಯವರಿಂದ ಅಪೇಕ್ಷಿಸಿದಾಗ ತನಖಿ ಮತ್ತು ಅಜಮಾಯಿಷಿ ಮಾಡುವ ಬಗ್ಗ್ಯಾಗಿ ಭಟ್ಟೀ ಕಾರಖಾನೆಯಿಂದ ಶೀಸೆಯಲ್ಲಿ ಕಳುಹಿಸಲ್ಪಡತಕ್ಕದ್ದು.

VIII. ಸ್ಥಳಿಕ ಅಧಿಕಾರವುಳ್ಳ ಯಾವ ಮಾಜಿಸ್ಟ್ರೇಟ್ರಾಗಲಿ ಅಥವಾ ಮಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಯಾ ಯಾವ ಆಬ್‌ಕಾರಿ ಯಾ ಎಕ್ಸೈಜ್ ಆಫೀಸರಾಗಲಿ ಯಾವ ಹೊತ್ತಿನಲ್ಲಾದರೂ ಅಂಗಡಿಯೊಳಗೆ ಪ್ರವೇಶ ಮಾಡಿ ಸದರೀ ಆವರಣದಲ್ಲಿರುವ ಬೀರು ಯಾ ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸ್‌ದಾರನಿಂದಲೂ ವ ಮಾರುವವನಿಂದಲೂ ಇಡಲ್ಪಡಬೇಕಾದ ಅಂಗಡಿ ಲೆಖ್ಖಗಳನ್ನು ತನಿಖೀ ಮಾಡಲಿಕ್ಕೆ ಹಾಜರ್ಮಾಡಬೇಕು. ಅಂಥಾ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾ ಆಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೇನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರೂ ನಾಶಪಡಿಸತಕ್ಕದ್ದು.

IX. ಸದರೀ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು, ಮತ್ತು ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ ಮೇಲೆ ಹೊರ್ತು ಬೆಳಿಗ್ಯೆ 6 ಘಂಟೆಗೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

X. ಕಮ್ಮಿಸ್ಸರಿಯಾಟ್ ಇಲಾಖೆಗಾಗಿ ತರಲ್ಪಟ್ಟ ಮತ್ತು ಮಿಲಿಟೆರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಯಾವ ಕಾರಣದಿಂದಲೂ ಅಂಗಡಿಯಲ್ಲಿ ಮಾರಲಿಕ್ಕೆ ಕಳುಹಿಸಲ್ಪಡಕೂಡದು.

XI. ಸದರೀ ಅಂಗಡಿಗೆ ಒಂದೇ ಬಾಗಲಿರಬೇಕು, ಮತ್ತು ಸದರೀ ಕಟ್ಟಡದ ಹಿಂಭಾಗದಲ್ಲ್ಯಾದರೂ ಯಾ ಕೊನೇ ಭಾಗಗಳಲ್ಲ್ಯಾದರೂ ಟಕಿ ಇಡಕೂಡದು. ಮದ್ಯ ಮಾರುವ ಜಗಲಿಯು ಅಂಗಡಿಯೊಳಗೆ ಇರುವ ಜನಗಳು ಅಂಗಡಿ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆದುರಾಗಿರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

XII. ಮೇಲಿನ ಷರತ್ತುಗಳು ಮತ್ತು ನಿಬಂಧನೆಗಳ ಪೈಕಿ ಯಾವದನ್ನಾದರೂ ತಪ್ಪಿ ನಡದರೆ ಲೈಸೆನ್ಸ್‌ದಾರನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಆಪಾದಿಸಲ್ಪಟ್ಟ ಮೇಲೆ 1881ನೇ ಇಸವಿಯ XXIIನೇ ನಂಬರ ಆಕ್ಟು ಅನುಸರಿಸಿ ಜುರ್ಮಾನೆ ತೆರಲಿಕ್ಕೂ ಅಥವಾ ಸದರೀ ಆಕ್ಟಿನ 13ನೇ ಸೆಕ್ಷನ್ ಅನುಸರಿಸಿ ಲೈಸೆನ್ಸನ್ನು ಕಳೆದುಕೊಳ್ಳಲಿಕ್ಕೂ, ಯಾ ಇವೆರಡಕ್ಕೂ ಗುರಿಯಾಗತಕ್ಕದ್ದು.

XIII. ಈ ಲೈಸೆನ್ಸ್ 189 ನೇ ಇಸವಿ ನೇ ತಾರೀಖು ಪರಿವಿಗೆ ಜಾರಿಯೇ ಹೊರ್ತು ತದನಂತರವಲ್ಲ, ಆದರೆ ಇದು 1881ನೇ ಇಸವಿಯ XXIIನೇ ನಂಬರ್ ಆಕ್ಟಿನ 13 ವ 14ನೇ ಸೆಕ್ಷನ್‌ಗಳನ್ನನುಸರಿಸಿ ಯಾವಾಗಲಾದರೂ ವಾಪಸ್ ತರಿಸಿಕೊಳ್ಳಲ್ಪಡಬಹುದು ಅಥವಾ ಬಿಟ್ಟುಬಿಡಲ್ಪಡಬಹುದು.

ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್,
ಡಿಸ್ಟ್ರಿಕ್ಟು.

ಎದುರು ಒಡಂಡಿಕೆ.

ಈ ಕೆಳಗೆ ರುಜು ಮಾಡಿರುವ ಮೇಲ್ಕಂಡ ಲೈಸೆನ್ಸ್‌ದಾರ ವ ಬಿಕರೀದಾರ ಮತ್ತು ಬಳಿಯಿರುವ ಬೀರ್ ಅಂಗಡಿಗೆ ಸಂಬಂಧಪಟ್ಟ ಇತರರಾದ ನಾವುಗಳು ನಮ್ಮಗಳಿಗಾಗಿಯೂ, ನಮ್ಮ ವಾರಸ್ದಾರರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗಪಡೆದಂಥಾವರಿಗೋಸ್ಕರವೂ ಇದರ ದೆಸೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ಬರೆಯೋಣಾದ, ಛಾಪಿಸೋಣಾದ ವ ಹೇಳೋಣಾದ ಕರಾರುಗಳಿಗೂ, ಷರತ್ತುಗಳಿಗೂ ಒಪ್ಪಿರುತ್ತೇವೆ.

ತಾರೀಖಿನ ದಿನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ನಮಗಳ ರೂಬರೂ ರುಜು ವ ಮೊಹರ್ ನಿಸಿ ಒಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು.

1.
2.
3.

ಲೈಸೆನ್ಸ್‌ದಾರ್ ವ ಬಿಕರೀದಾರ್.

ತಾರೀಖು 23ನೇ ಸೆಪ್ಟಂಬರ್ 1896.

ನಂ. 3327.—ಯಕ್ಸೈ. 121, ಸರ್ 1895ನೇ ಇಸವಿ ಡಿಸೆಂಬರ್ 11ನೇ ಮುರ್ಕುಂ 5508.—ಯಕ್ಸೈ. 182ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1892ನೇ ಮಾರ್ಚಿ 30ನೇ ಮುರ್ಕುಂ 495ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಖಾಯಿಷ್ ಮಾಡಲ್ಪಟ್ಟ ರೂಲ್ಸಿನ XXIನೇ ರೂಲ್ 5ನೇ ಕ್ಲಾಜಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನು ಬದಲಾಗಿ ಸೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಅಜ್ಞಾಪಿಸುತ್ತಾರೆ:—

"(3) ಲೈಸೆನ್ಸ್‌ದಾರನಿಂದ ಯಿಡಲ್ಪಟ್ಟ ಠೇವಣಿ ಮೊಬಲಗು, ಇಜಾರೆ ಮಾಯಿದೆಯ ಆಖೈರ್ ಎರಡು ಮಾಹೆಗಳಲ್ಲಿ ಪಾವತಿ "ಯಾಗಬೇಕಾದ ಖಿಸ್ತುಗಳಿಗಾಗಿ, ತೆಗದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, "ಇಜಾರೆಯು ದುಸರಾ ಹರಾಜ್ ಯಾ ರದ್ದು ಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ "ದಂಡವಾಗಿ ತೆಗೆದುಕೊಳ್ಳಲ್ಪಡಬಹುದು, ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕೀಗೂ ಮತ್ತು ಇಜಾರೆಯು ಪುನಃ "ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಭರ್ತೀ ಮಾಡಲ್ಪಡಬಹುದು. ಹಾಗೆ "ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲೀ ಬಗ್ಯೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ, "ಲೈಸೆನ್ಸ್‌ದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸ್‌ದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊಬಲಗಿನ ಯಾವ "ರಿಮಿಷನ್ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು."

"(3A.) ಬಾಕೀ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ "ಮೊಬಲಗಿಗೆ ಪುನಃ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡೀ ದೇಖೀಲ್ ವಸೂಲ್ಮಾಡ "ಲ್ಪಡತಕ್ಕದ್ದು."

ನಂ. 3358.—ಯಕ್ಸೈ. 123, ಸನ 1895ನೇ ಡಿಸೆಂಬರ್ 11ನೇ ಮರ್ಕುಂ 5512—ಯಕ್ಸೈ. 183ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1893ನೇ ಜನವರಿ 14ನೇ ಮರ್ಕುಂ 11813—ರೆ. ಫೈ. 233ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಫಾಯಿಷ್ ಮಾಡಲ್ಪಟ್ಟ ರೂಲ್ಸಿನ Vನೇ ರೂಲ್ 6ನೇ ಕ್ಲಾಸಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಸೇರಿಸಲ್ಪಡತಕ್ಕದ್ದೆಂದು ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

“ (3) ಲೈಸೆನ್ಸದಾರನಿಂದ ಹಾಜರ್ಮಾಡಲ್ಪಟ್ಟ ಠೇವಣಿ ಮೊಬಲಗು, ಗುತ್ತಿಗೆ ವಾಯಿದೆಯ ಆಖೈರ್ ತಿಂಗಳು ಯಾ ತಿಂಗಳು
“ಗಳಲ್ಲಿ ಪಾವತಿಯಾಗಬೇಕಾದ ಖಿಸ್ತುಗಳ ಬಾಕಿಗಾಗಿ, ತೆಗೆದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿ
“ಯಮಗಳನುಸರಿಸಿ, ಇಜಾರೆಯು ದುಸರಾ ಹರಾಜ್ ಯಾ ರದ್ದುಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮಿಷನರವರ
“ಯುಕ್ತಾನುಸಾರ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕಿಗೂ ಮತ್ತು
“ಇಜಾರೆಯು ಪುನಃ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಉಪಯೋಗಿಸಲ್ಪ
“ಡಬಹುದು. ಹಾಗೆ ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಗೆ ಜಾರಿಯಲ್ಲಿರುವ
“ರೂಲ್ಸ್ ಅನುಸರಿಸಿ, ಲೈಸೆನ್ಸದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊ
“ಬಲಗಿನ ಯಾವ ರಿಮಿಷನ್ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು.”

“(3 A.) ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ
“ಮೊಬಲಗಿಗೆ ಪುನಃ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗವ ಬಡ್ಡೀ ದೇಖಿಲ್ ವಸೂಲ್ಮಾ
“ಡಲ್ಪಡತಕ್ಕದ್ದು.”

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂ. 486. ತಾರೀಖು 28—9—1896, ಬೆಂಗಳೂರು.

ಬೇಲೂರು ಕಸಬಾದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಛತ್ರಕ್ಕೂ ಮತ್ತು ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನ, ಅಮೃತೇಶ್ವರದೇವಸ್ಥಾನ, ಪಂಚಆಂಜನೇಯದೇವಸ್ಥಾನ ಈ ಮೂರು ದೇವಸ್ಥಾನಗಳಿಗೂ ಸಹ ಈ ಕೆಳಗೆ ನಮೂದಿಸುವವರನ್ನ ಯರಡು ವರುಷಗಳ ಪರ್ಯಂತರ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ಕಾಫಿ ಪ್ಲಾಂಟರ್ ಕಳಸಾಪುರದ ತಮ್ಮಯ್ಯನವರು.
(2) ಡಿಟ್ಟೋ ಕೇಶವದಾಸಯ್ಯಂಗಾರ್ರು.
(3) ಡಿಟ್ಟೋ ಪೆನ್ಷನ್ ರಿಕಾರ್ಡ್ ಕೀಪರ್ ರಾಮರಾಯರು.
(4) ಲಕ್ಕುಂದದ ಶಾನುಭಾಗ ಕೇಶವಯ್ಯಂಗಾರ್ರು.
(5) ಸಾಹುಕಾರ್ ಮತ್ತು ಕಾಫಿ ಪ್ಲಾಂಟರ್ ವೆಂಗಯ್ಯಶೆಟ್ಟರು.

ನಂ. 500. ತಾರೀಖು 30ನೇ ಸೆಪ್ಟಂಬರ್ 1896ನೇ ಇಸವಿ, ಬೆಂಗಳೂರು.

ಮಾಲೂರು ತಾಲ್ಲೂಕು ಚಿಕ್ಕ ತಿರುಪತಿಯಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಶ್ರೀ ವೆಂಕಟರಮಣ ಸ್ವಾಮಿಯವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ಕಲ್ಲುಕೆರೆಯಲ್ಲಿರುವ ಶಾನುಭಾಗ ಶೀತಾರಾಮಯ್ಯನವರು.
(2) ಜಗಪೇನಹಳ್ಳಿಯಲ್ಲಿರುವ ಶಾನುಭಾಗ ನಾರಣಪ್ಪನವರು.
(3) ಚಿಕ್ಕತಿರುಪತಿಯಲ್ಲಿರುವ ವೆಂಕಟರಮಣಗವುಡರು.
(4) ಸಂಪಂಗೆರೆಯಲ್ಲಿರುವ ಪಟೇಲ್ ತಿಮ್ಮರಾಯಗವುಡರು.

ಪಿ. ಶ್ರೀನಿವಾಸಾಚಾರ್ರು,
ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಸೆಕ್ರೆಟರಿ.

ಜಿಯೊಲಾಜಿಕಲ್.

ತಾರೀಖು 30ನೇ ಸೆಪ್ಟಂಬರ್ 1896.

ನಂ. 162.—1896—97, ಜಿಯೊಲಾಜಿಕಲ್ ಆಫೀಸ್ ಹೆಡ್‌ಕ್ಲಾರ್ಕ್ ಮಿಸ್ಟರ್ ಬಿ. ಸುಬ್ಬರಾವ್, ಬಿ. ಏ., ಯವರು, 1896ನೇ ಆಗಸ್ಟ್ ಗುರ್ರೇ ತಾರೀಖು ಲಾಗಾಯತು ಮೈಸೂರ ಜಿಯೊಲಾಜಿಕಲ್ ಇಲಾಖೆಯ ಅಸಿಸ್ಟೆಂಟ್ ಪ್ರಾಸ್ಪೆಕ್ಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜಿಬ್,
ಆರ್. ಬ್ರೂಸ್‌ಫುಟ್ಟಿ,
ಸೆಕ್ರೆಟರಿ.

423

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫಾಯಿಷ್ ಆದ್ದು. [ನಂ. 40.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 8, ಸನ್ 1896.

IIನೇ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ

ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್‌ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಷಿಯವರ ಕಾರ್‌ಖಾನೆ	ಒಂದಕ್ಕೆ 150
2	ಇಂಗ್ಲ್ಯಾಂಡ್ ಪೋರ್ಟರು ಬ್ರದರಸರ ಡಿಟ್ಟೋ	,, 170
1	ಮದ್ರಾಸ್ ಓಕ್ಸರವರ ಡಿಟ್ಟೋ	,, 250
1	ಡಿಟ್ಟೋ ಡಿಟ್ಟೋ ಡಿಟ್ಟೋ	,, 188
1	ಡಿಟ್ಟೋ ಬೋರ್ಯಾಪುರವರ ಡಿಟ್ಟೋ	,, 85

ಖರೀದಿದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ 10½ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 23ನೇ ಸೆಪ್ಟಂಬರ್ 1896.

ಬೆಂಗಳೂರು ಸಿಟಿ ಕೋಟೆ ಸರಹದ್ದು ಹೊಸ ತರುಗಿನಪ್ಯಾಟೇಲಿ ಸರ್ವೆ ಇಲಾಖೇ ಕ್ಲಾಸರ್ ನಾರಾಯಣಜಯರಾವ್ ಯಂಬವರ ಮನೆ ಬಾಗಲಿಗೆ ಹಾಕಿದ್ದ ಬೀಗವನ್ನು ತಾರೀಖು 6—9—96ರಲ್ಲು ಯಾರೋ ತೆಗದುಬಿಟ್ಟು ವಳಗೆ ಪೆಟ್ಟಿಗಿಗಳಿಂದ ಕಳವು ಮಾಡಿ ಕೊಂಡು ಹೋದ ತಪ್ಸೀಲ್ ಪಟ್ಟಿ:—

		ಕ್ರಯ ರೂ.	ಆ.	ಪೈ.
1	ಕಲಾಬತು ಮೂರು ಬೊಟ್ಟು ಅಗಲ ಅಂಚು ಮತ್ತು ಒಂದು ಮಳ ಶರಗುವುಳ್ಳ ಕೆಂಪು ಪೀತಾಂಬ್ರ	100	0	0
2	ಲಕ್ಷ್ಮೇಶ್ವರದ ಕೆಂಪು ಅಂಚಿನ ರೇಷ್ಮೆ ಚಾರಖಾನೆ ಸೀರಿ ಒಂದು	22	0	0
3	ಪೂನಾದ್ದು ಬೆಳ್ಳಿಬಟ್ಲು ಇದರ ತೂಕ ರೂ. 16—2	19	0	0
4	ಡಿಟೋ ಬೆಳ್ಳಿವುದ್ಧರಣಿ ತೂಕ ರೂ. 6—11—0	8	4	0
5	ಎರಡು ಬೆಳ್ಳಿಬಟ್ಲು ತೂಕ ರೂ. 11—10—0	14	0	0
6	ಬೆಳ್ಳೀದು ಬಟ್ಲು ಸಾದಾ ತೂಕ ರೂಪಾಯಿ 4—0—0	4	0	0
7	ಬೆಳ್ಳಿ ಕಾಲುಂಗರ 14—0—0 ರೂ. ತೂಕ	14	0	0
8	ಬೆಳ್ಳಿ ಡಾಬು 1ಕ್ಕೆ 16—0—0 ರೂ. ತೂಕ	16	0	0
9	ಅಪರಂಜಿ ಎಂಟು ಮೂಲೆ ವುಂಗ್ರ ತೂಕ ರೂ. 1—0—0	28	0	0
10	ಸವರ್ಣ ಬಾಬತು ಕೀಲ್ ಸಾದಾ ವುಂಗ್ರ ರೂ. 0—12—0 ತೂಕ	18	0	0
11	ಶಾಲ್ಯದ ರೇಷ್ಮೆ ಅಂಚಿನ ಹೊಸ ಪಂಚೆ	4	0	0
12	ಕಲಾಬತು ಕೆಂಪು ಶಾಲು	15	0	0
13	2 ಭಂಗಾರದ ಜೋಮಾಲೆ ಗುಂಡು ರೂ. 0—1—0 ತೂಕ	1	4	0
14	ಚಿನ್ನದ ಸಾದಾ ಗುಂಡುಗಳು ಸುಮಾರು 12 ಅಥವಾ 16	8	0	0
15	ಕಪ್ಪು ರೇಷ್ಮೆಲಿ ಕಟ್ಟಿದ ಹುಡುಗರಿಗೆ ಕಟ್ಟುವ ಗೆಜ್ಜೆಗಳು	8	0	0
16	ಬೆಳ್ಳಿ ನಶ್ಯದ ಡಬ್ಬಿ ರೂ. 2—0—0 ತೂಕ	4	0	0
17	ಬೆಳ್ಳಿ ದೀವೆಸಿ ಮಂಗಳ ಗೌರಿ ಶೇರಿ ರೂ. 8—0—0 ತೂಕ	8	0	0
18	3 ಕುಬಸಗಳು	3	0	0
	ಜುಮ್ಲಾ ..	294	8	0

ಬಿ. ಕುಪ್ಪುಸಾಮಿನಾಯುಡು,
ಫಾರ್ ಅಸಿಸ್ಟೆಂಟ್ ಸೂ॥ ಆಫ್ ಪೋಲೀಸ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇಸ್ತಿಹಾರ್ ನಾಮೆ.

ಬೆಂಗಳೂರು ಟೌನ್ ಮ್ಯುನಿಸಿಪಲ್ ರೆಗ್ಯುಲೇಷನ್‌ಗಳ ಇದರಡಿ ಬರುವ ಸೆಕ್ಷನ್‌ಗಳು ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

ಪ್ರಸಿಡೆಂಟರಿಗೆ ಹೊಸಕಟ್ಟಗಳನ್ನು ಕುರಿತು ನೋಟಿಸ್ ಕೊಡಲ್ಪಡತಕ್ಕದ್ದು.

148. ಯಾವದಾದರೂ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಯಾವ ಕಟ್ಟಣವನ್ನಾದರೂ ಕಟ್ಟಿಸಲಿಕ್ಕೆ ಅಥವಾ ಖೋಲ್‌ಬಂದಿ ಮಾಡಿಸಲಿಕ್ಕೆ ಷುರೂ ಮಾಡುವದಕ್ಕೆ ಮುಂಚಿತವಾಗಿ ಅಂಥಾ ಕಟ್ಟಣವನ್ನು ಕಟ್ಟಿಸಲಿಕ್ಕೆ ಯಾ ಖೋಲ್‌ಬಂದಿ ಮಾಡಲಿಕ್ಕೆ ಖಾಯಿಷ್ ಮಾಡುವ ಮನುಷ್ಯನು ಆ ವಿಷಯವನ್ನು ಕುರಿತು ಬರವಣಿಗೆ ಮೂಲಕ ಪ್ರಸಿಡೆಂಟರಿಗೆ ನೋಟಿಸ ಕೊಡತಕ್ಕದ್ದಲ್ಲದೆ ಪ್ರಸಿಡೆಂಟರ ಹುಕುಂ ಅನುಸರಿಸಿ ನಿಷ್ಕರ್ಷೆ ಮಾಡೋಣಾದ ಒಂದು ಮಟ್ಟದ ವಿಷಯದಲ್ಲಿ ಅಂಥಾ ಕಟ್ಟಣದ ತಳಾದಿಯು ಯಲ್ಲಕ್ಕೂ ಕೀಳ್ಪಟ್ಟ ತಳವರಶೆಯೂ ಯಾವ ಮಟ್ಟದ ಪ್ರಕಾರ ಹಾಕಲ್ಪಡುತ್ತೋ ಆ ಮಟ್ಟವನ್ನು ಕಾಣಿಸಿ ಒಂದು ಪ್ಲ್ಯಾನ್ ಯಾನೆ ನಕ್ಷೆಯು ಸದರೀ ನೋಟಿಸ್ ಸಂಗಡ ಕಳುಹಿಸತಕ್ಕದ್ದು: ಯಾವನು ಅಂಥಾ ನೋಟಿಸ್ ಕೊಡದೆ ತಪ್ಪುತ್ತಾನೋ ಅವನು ಐವತ್ತು ರೂಪಾಯಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ರಿಪೇರಿಗಳು ನಡಿಯುತ್ತಾ ಇರುವಲ್ಲ ಅಡ್ಡ (ಮರ ವಗೈರೆ) ಕಟ್ಟಿಸತಕ್ಕದ್ದು.

175. ಯಾವದಾದರೂ ಬೀದಿಗೆ ಯಾ ಕಾಲುದಾರಿಗೆ ಅಡ್ಡವಾಗಿರುವ ಅಥವಾ ಅಂಥಾ ಕಾಮಗಾರಿಯಿಂದ ಅಸಂದರ್ಭ ವುಂಟಾಗಿರುವ ಸ್ಥಳದಲ್ಲಿ ಯಾವದಾದರೂ ಕಟ್ಟಣವನ್ನು ಕಟ್ಟಿಸಲಿಕ್ಕೆ ಅಥವಾ ಕೆಡವಿಸಲಿಕ್ಕೆ ಯಾವದಾದರೂ ಕಟ್ಟಣ ಹೊರಗಿನ ಭಾಗವನ್ನು ಬದಲಾಯಿಸಲಿಕ್ಕೆ ಯಾ ರಿಪೇರಿ ಮಾಡಿಸಲಿಕ್ಕೆ ಅಪೇಕ್ಷಿಸುವ ಪ್ರತಿ

ಮನುಷ್ಯನೂ ಅದು ಆರಂಭಿಸುವದಕ್ಕೆ ಪೂರ್ವವೂ, ಆ ಮೇರೆ ಮಾಡಲಿಕ್ಕೆ ಪ್ರಸಿಡೆಂಟರಿಂದ ಲಿಖಿತರೂಪವಾದ ಒಂದು ಲೈಸೆನ್ಸ್ ಮೊದಲು ತೆಗೆದುಕೊಂಡ ತರುವಾಯವೂ ಅಂಥಾ ಕೆಲಸಗಳು ನಡಿಸಲ್ಪಡುವ ಜಾಗಾಗಳಲ್ಲಿ ಬೀದಿಯಿಂದ ಅಥವಾ ಕಾಲ್‌ದಾರಿಯಿಂದ ಆ ಕಟ್ಟಣವನ್ನು ಪ್ರತ್ಯೇಕ ಪಡಿಸಲಿಕ್ಕೆ ಸಾಕಾಗಿರುವ ಮರೆಗಳು ಅಥವಾ ತಡೆಗಳು ನಾಟಿಸುವಂತೆ ಮಾಡಿ ಅಂಥಾ ಮರೆ ಅಥವಾ ತಡೆ ಜನಗಳ ಕ್ಷೇಮಕ್ಕೆ ಯಾ ಅನುಕೂಲಕ್ಕೆ ಜರೂರಿರುವಷ್ಟರ ವರಿಗೆ ಪ್ರಸಿಡೆಂಟರಿಗೆ ಸಮಾಧಾನಕರವಾಗಿರುವಂತೆ ಬಂದೋಬಸ್ತಾಗಿಯೂ ನಿಲುವಾಗಿಯೂ ನಾಟಿಸಲ್ಪಟ್ಟಿರತಕ್ಕದ್ದು ಮಾತ್ರವಲ್ಲದೆ ರಾತ್ರಿ ಹೊತ್ತು ಆ ಬಳಿ ಸಾಕಾದಷ್ಟು ದೀಪಗಳು ಇಡಲ್ಪಡುವಂತೆ ಮಾಡತಕ್ಕದ್ದು. ಮತ್ತು ಈ ಸೆಕ್ಷನ್ ನಿಬಂಧನೆಗಳಿಗೆ ವಿರುದ್ಧವಾಗಿ ಯಾವ ಕಟ್ಟಣವನ್ನಾಗಲಿ ಕಟ್ಟಲಿಕ್ಕೆ ಯಾ ಕೆಡಸಲಿಕ್ಕೆ ಯಾ ಬದಲಾಯಿಸುವದಕ್ಕೆ ಆರಂಭಿಸಲ್ಪಡುವ, ಲೈಸೆನ್ಸ್ ಹೊಂದದೆ ಯಾಪಿದಾರೂ ಮರೆ, ಕಾಲಾವದಿ, ತಡೆ ವಗೈರೆ ಕಟ್ಟತಕ್ಕ ಅಥವಾ ನಾಟಿಸುವ ಅಥವಾ ಲೈಸೆನ್ಸ್ ಹೊಂದಿ ಇದ್ದು ಅಂಥಾ ತಡೆ ಯಾ ಮರೆ ನಡಿಸದೆಯೂ, ಮೇಲೆ ಕಂಡ ಕಾಲದಲ್ಲಿ ಸದರೀ ಮೇರೆ ಬಂದೋಬಸ್ತಾಗಿ ಇರುವಂತೆ ಮಾಡದೆಯೂ ತಪ್ಪುವ, ಅಥವಾ ಸದರೀ ಮೇರೆ ಯಾ ತಡೆ ಇರುತ್ತಾ ಇರುವಲ್ಲಿ ಅವುಗಳ ಬಳಿ ಸಾಕಾದಷ್ಟು ದೀಪಗಳನ್ನು ಇಡದ ಯಾ ಪ್ರಸಿಡೆಂಟರು ಹುಕುಂ ಮಾಡಿದ ಮೇಲೆ ಎಂಟು ದಿನಗಳೊಳಗೆ ಅವುಗಳನ್ನು ತೆಗಿಸಿಹಾಕದ ಪ್ರತಿ ಮನುಷ್ಯನೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಸದರೀ ಪ್ರಸಿಡೆಂಟರು ನೋಟೀಸ್ ಕೊಟ್ಟ ಇಪ್ಪತ್ತು ನಾಲ್ಕು ಘಂಟೆಯ ಹೊತ್ತಿಗೆ ತರುವಾಯ ಸದರೀ ತಕ್ಸೀರ್ ನಡಿಸಲ್ಪಡುತ್ತಾ ಇರುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಜಾಸ್ತಿ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಕಟ್ಟಣದ ಸಾಮಾನುಗಳು ಇರತಕ್ಕ ಸ್ಥಳಗಳಲ್ಲಾಗಲಿ ಅಗಿಯಲ್ಪಟ್ಟ ಸ್ಥಳಗಳಲ್ಲಾಗಲಿ ದೀಪ ಹಚ್ಚದೆ ಇದ್ದರೆ ಶಿಕ್ಷೆ.

177. ಪ್ರಸಿಡೆಂಟರ ಅಪ್ಪಣೆ ಇಲ್ಲದೇನೇ ಯಾವ ಮನುಷ್ಯನೂ ಯಾವ ಬೀದಿಯಲ್ಲಿ ಯಾವ ಕಟ್ಟಣದ ಸಾಮಾನುಗಳನ್ನೂ ಇಡಕೂಡದು, ಅಥವಾ ಹಳ್ಳ ತೆಗೆಯಲೂ ಕೂಡದು ಮತ್ತು ಯಾವ ಮನುಷ್ಯನಿಗಾಗಲಿ ಅಂಥಾ ಅಪ್ಪಣೆ ಕೊಡಲ್ಪಟ್ಟ ಪಕ್ಷಕ್ಕೆ ಆ ಸಾಮಾನುಗಳು ಆಚೆಗೆ ಸಾಗಿಸಲ್ಪಡುವ ಪರ್ಯಂತವಾಗಲಿ ಅನ್ಯಥಾ ಬಂದೋಬಸ್ತು ಮಾಡಲ್ಪಡುವವರಿಗಾಗಲಿ ಆ ಮನುಷ್ಯನು ತನ್ನ ಸ್ವಂತ ಲಾಗವಡಿನಿಂದಲೇ ಅಂಥಾ ಸಾಮಾನುಗಳಿಗೆ ಯಾ ಹಳ್ಳಕ್ಕೆ ಸಾಕಾಗಿರುವ ಮೇರೆ ತಡೆ ಹಾಕಿಸುವಂತೆಯೂ ಅವುಗಳ ಸುತ್ತೂ ಯಾವದಾದರೂ ಕಟ್ಟಿಗೆ ಕಟ್ಟಲ್ಪಡುವಂತೆಯೂ ಮಾಡುವದು ಮಾತ್ರವಲ್ಲದೆ ರಾತ್ರಿ ಹೊತ್ತು ಅದರ ಬಳಿ ಸಾಕಾದಷ್ಟು ದೀಪಗಳು ಇಡುವಂತೆಯೂ ಮಾಡತಕ್ಕದ್ದು. ಮತ್ತು ಅಂಥಾ ಅಪ್ಪಣೆ ಇಲ್ಲದೆ ಯಾವನು ಸಾಮಾನುಗಳನ್ನು ಇಡುತ್ತಾನೋ ಅಥವಾ ಹಳ್ಳ ತೆಗಿಯುತ್ತಾನೋ ಅಥವಾ ಅಂಥಾ ಸಾಮಾನುಗಳು ಹಳ್ಳಗಳು ಇರುವ ಸ್ಥಳದಲ್ಲಿ ತಡೆಕಟ್ಟಿಸದೆಯಾಗಲಿ ಆವರಣ ಕಲ್ಪಿಸದೆಯಾಗಲಿ ದೀಪ ಹಚ್ಚದೆಯಾಗಲಿ ತಪ್ಪುತ್ತಾನೋ ಅಥವಾ ಕೊಡಲ್ಪಟ್ಟ ಅಪ್ಪಣೆಯನ್ನು ಹಿಂದಿರಿಸಿಕೊಂಡಾಗ ಅಂಥಾ ಸಾಮಾನುಗಳನ್ನು ಮತ್ತೊಂದು ಸ್ಥಳಕ್ಕೆ ಸಾಗಿಸದೆಯಾಗಲಿ ಅಂಥಾ ಹಳ್ಳವನ್ನು ಮುಚ್ಚಿಸದೆಯಾಗಲಿ ಇರುತ್ತಾನೋ ಅಂಥಾ ಯಾವ ಮನುಷ್ಯನಾಗಲಿ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ ಪ್ರಸಿಡೆಂಟರು ನೋಟೀಸ್ ಕೊಟ್ಟ ಇಪ್ಪತ್ತು ನಾಲ್ಕು ಘಂಟೆಯ ಹೊತ್ತಿಗೆ ತರುವಾಯ ಆ ತಕ್ಸೀರ್ ನಡಿಸುತ್ತಾ ಇರುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಅಪಾಯಕರಗಳಾದ ಸ್ಥಳಗಳನ್ನೂ ರಿಪೇರಿ ಮಾಡಿಸತಕ್ಕದ್ದು ಆವರಣ ಯೇರ್ಪಡಿಸತಕ್ಕದ್ದು.

178. ಸರ್ಕಾರ್ ಜಮೀನಿನಲ್ಲಾಗಲಿ, ಜನಗಳ ಸ್ವಂತ ಜಮೀನಿನಲ್ಲಾಗಲಿ ಇರುವ ಯಾವದಾದರೂ ಕಟ್ಟಣ, ಕೆರೆ, ಬಾವಿ ಯಾ ಹಳ್ಳ ಯಾ ಇತರ ಪ್ರದೇಶವು, ಸಾಕಾದಷ್ಟು ರಿಪೇರಿ ಯಾ ಬಂದೋಬಸ್ತು ಯಾ ಆವರಣ ಇಂತಾದ್ದು ಇಲ್ಲದೆ ಇರುವದರಿಂದ ಜನಗಳಿಗೆ ಅಪಾಯಕರವಾಗಿದ್ದ ಪಕ್ಷಕ್ಕೆ, ಪ್ರಸಿಡೆಂಟರು, ಲಿಖಿತರೂಪವಾದ ನೋಟೀಸ್ ದ್ವಾರಾ, ಅದರ ದೆಶೆಯಿಂದ ಅಪಾಯ ಉಂಟಾಗದೆ ಇರುವಂತೆ ಅದು ರಿಪೇರಿ ಮಾಡಲ್ಪಡತಕ್ಕದ್ದೆಂತಲಾಗಲಿ ಬಂದೋಬಸ್ತು ಮಾಡಲ್ಪಡತಕ್ಕದ್ದೆಂತಲಾಗಲಿ ಸುತ್ತಲೂ ಆವರಣ ಕಟ್ಟಿಸಲ್ಪಡತಕ್ಕದ್ದೆಂತಲಾಗಲಿ ಸದರೀ ನಿವೇಶನಗಳ ಮಾಲೀಕನಿಗಾದರೂ ಅನುಭವದಾರನಿಗಾದರೂ ತಾಕೀದ್ ಮಾಡುವದು ಅವರಿಗೆ ನ್ಯಾಯವಾಗಿರತಕ್ಕದ್ದು, ಮತ್ತು ಆ ಮನುಷ್ಯನು ಇಪ್ಪತ್ತು ನಾಲ್ಕು ಘಂಟೆಯ ಹೊತ್ತಿನೊಳಗೇ ಸದರೀ ತಾಕೀದ್ ಮಾಡಲ್ಪಟ್ಟ ಪ್ರಕಾರ ನಡಿಸದೆ ನಿರಾಕರಿಸಿದ ಪಕ್ಷಕ್ಕೆ ಅಥವಾ ಉಪೇಕ್ಷಿಸಿದರೆ ಅಥವಾ ಅದನ್ನು ತಕ್ಕ ಜಾಗ್ರತೆಯಿಂದ ಪೂರೈಸಲಿಕ್ಕೆ ತಪ್ಪಿಹೋದರೆ ಆ ಮನುಷ್ಯನು ಪ್ರತಿ ತಪ್ಪಿತಕ್ಕೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ, (ಆ ಪ್ರಕಾರ ಮಾಡಲಿಕ್ಕೆ) ದೇರ್ ಮಾಡುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು; ಮತ್ತು ಪ್ರಸಿಡೆಂಟರು ಸದರೀ ಕಟ್ಟಣ ಕೆಲಸ ವಗೈರೆ ಕಾಮಗಾರಿ ಮಾಡಿಸಲ್ಪಡುವಂತೆಯಾಗಲಿ, ಬಂದೋಬಸ್ತು ಮಾಡಲ್ಪಡುವಂತೆಯಾಗಲಿ, ಆವರಣ ಕಲ್ಪಿಸಲ್ಪಡುವಂತೆಯಾಗಲಿ ಮಾಡುವದು ಮೇಲೆ ಕಂಡ ದರೋಬಸ್ತು ಯಾ ಯಾವದಾದರೂ ಕೆಲಸಗಳಿಗಾಗಿ ತಮಗೆ ಯುಕ್ತ ತೋರುವ ಪ್ರಕಾರ ಜರೂರಾದ ದರೋಬಸ್ತು ಕೆಲಸಗಳನ್ನೂ ಮಾಡುವದು ಪ್ರಸಿಡೆಂಟರಿಗೆ ನ್ಯಾಯವಾಗಿರತಕ್ಕದ್ದು ಮತ್ತು ಆ ಬಗ್ಯೆ ಹಿಡಿದ ಲಾಗವಡು ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲಾಗತಕ್ಕದ್ದು.

182. ಲೈಸೆನ್ಸ್ ಕೊಡಲ್ಪಟ್ಟ ಖಸ್ಸೈ ಮನೆಯಲ್ಲಿ ಶಿವಾಯಿ (ಅನ್ಯತ್ರ) ಬೆಂಗಳೂರು ಷಹರ್ ಸರಹದ್ದುಗಳೊಳಗೆ ಯಾವ ಸ್ಥಳದಲ್ಲಾಗಲಿ, ಯಾವದಾದರೂ ಕುರಿಯನ್ನೂ, ಮೇಕೆಯನ್ನೂ, ಹಂದಿಯನ್ನೂ ಅಥವಾ ಯಾವದಾದರೂ ದನವನ್ನೂ (ಮಾಂಸ) ಮಾರತಕ್ಕ ಬಗ್ಯೆ, ಕೊಲ್ಲುವ, ಕುಯ್ಯುವ ಅಥವಾ ಚರ್ಮ ಸುಲಿಯುವ ಯಾವ ಮನುಷ್ಯನಾಗಲಿ ಪ್ರತಿ ಜಂತುವಿಗೂ ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಖಸ್ಸೈ ಮನೆಯಲ್ಲಿ ಶಿವಾಯಿ ಅನ್ಯತ್ರ ಪಶುಗಳನ್ನು ಕೊಲ್ಲುವ ಬಗ್ಯೆ ಶಿಕ್ಷೆ.

ಟಿ. ಟಿ. ಲೆನಾರ್ಡ್,
ಪ್ರೆಸಿಡೆಂಟ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 15ನೇ ಸೆಪ್ಟಂಬರ್ 1896.

ಸರ್ಕಾರದ ಗಂಧದ ಕೋಠಿಗಳಲ್ಲಿ ಹಾಲಿ ಉಪಯೋಗದಲ್ಲಿರುವ ಪೌಣ್ ವಜನೀ ಬಟ್ಟಿಗೆ ಬದಲಾಗಿ ಇಂಗ್ಲಿಷ್ ಸ್ಟ್ಯಾಂಡರ್ಡ್ ಕರಾರ್ನಾಮಾ ಪೌಣ್ ವಜನಿ ಬಟ್ಟು 1ಕ್ಕೆ $38\frac{8}{9}$ ರೂಪಾಯಿ ತೂಕವುಳ್ಳ ಬಟ್ಟುಗಳು ಗವರ್ನ್‌ಮೆಂಟಿನವರ ಮಂಜೂರಾತೀ ಅನುಸರಿಸಿ, 1897ನೇ ಇಸವಿ ಲಾಗಾಯತು ಯಲ್ಲಾ ಕೋಠಿಗಳಲ್ಲಿಯೂ ಜಾರಿಯಲ್ಲಿ ತರಲ್ಪಡುತ್ತೆ. ಆದರೆ ಚಾಲತಿ 1896ನೇ ಡಿಸೆಂಬರ್ 31ನೇ ತಾರೀಖು ವಳಗೆ, ಖರೀದಿಗೆ ತೆಗದುಕೊಳ್ಳಲ್ಪಡುವ ಗಂಧ ಹಾಲಿ ಜಾರಿಯಲ್ಲಿರುವ ಪೌಣ್ ಬಟ್ಟುಗಳ ಪ್ರಕಾರವೇ ವಜನಿಯಿಂದ ಕೊಡಲ್ಪಡುವದು.

ಐಯ್ಯಿಂದಾ ಜಾರಿಯಲ್ಲಿ ಬರತಕ್ಕ ಒಂದೇವಿಧವಾದ ಇಂಗ್ಲಿಷ್ ವಜನೀ ಬಟ್ಟುಗಳು ಅವುಗಳ ಸರಿಯಾದ ತೂಕ ಸಹ ಇದರಡಿ ನಮೂದಿಸಲ್ಪಟ್ಟಿರುತ್ತೆ:—

ಔಣ್ಸ 1ಕ್ಕೆ $2\frac{3}{7}\frac{1}{2}$ ರೂಪಾಯಿ ತೂಕ	ಹಣ್ಡ್ರೆಡ್‌ವೆಯಿಟ್ 1ಕ್ಕೆ $4,355\frac{5}{9}$ ರೂಪಾಯಿ ತೂಕ.
ಪೌಣ್ 1ಕ್ಕೆ $38\frac{8}{9}$ ಡಿಟ್ಟೋ	ಟಣ್ 1ಕ್ಕೆ $87,111\frac{1}{9}$ ಡಿಟ್ಟೋ

ಸ್ಟ್ಯಾಂಡರ್ಡ್ ಅಂದರೆ, ನಿಷ್ಕರ್ಷಿಸಲ್ಪಟ್ಟ ಕರಾರ್ವಾಕಾ ತ್ರಾಸು, ಬಟ್ಟುಗಳು ಪ್ರತಿ ಕೋಠಿಯಲ್ಲಿ ಹಾಜರಿರುತ್ತವೆ. ಇವುಗಳಿಂದ ಹಾಲಿ ವಜನೀ ಬಗ್ಯೆ ಉಪಯೋಗದಲ್ಲಿರುವ ಬಟ್ಟುಗಳನ್ನು ಅಜಮಾಯಿಷಿ ಮಾಡಿಕೊಳ್ಳಬಹುದಾಗಿರುತ್ತೆ.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟ್ಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟ್ಟೋ ,,
ಹಾಸನ	ಹಾಸನ	7ನೇ ಡಿಟ್ಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟ್ಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟ್ಟೋ ,,
ಡಿಟ್ಟೋ	ಸಾಗರ	18ನೇ ಡಿಟ್ಟೋ ,,
ಡಿಟ್ಟೋ	ತೀರ್ಥಹಳ್ಳಿ	22ನೇ ಡಿಟ್ಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನು ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನು ಇದರಡಿ ವಿವರಿಸಿಥೆ.

437

ಹಳೇ ತರಹೆ ಪ್ರಕಾರ.

ಸಂದಲ್ ವಿವರ	ಬೆಂಗಳೂರು ಕೋರ್ಟಿ.		ಹಾಸನ ಕೋರ್ಟಿ.		ಚಿಕ್ಕಮಗಳೂರು ಕೋರ್ಟಿ.		ಶಿವಮೊಗ್ಗಾ ಕೋರ್ಟಿ.		ಸಾಗರ ಕೋರ್ಟಿ.		ತೀರ್ಥಹಳ್ಳಿ ಕೋರ್ಟಿ.	
	ಟ್ರ.	ಹ.	ಟ್ರ.	ಹ.	ಟ್ರ.	ಹ.	ಟ್ರ.	ಹ.	ಟ್ರ.	ಹ.	ಟ್ರ.	ಹ.
ಸಲಾಕಿ ಅವ್ವಲ್ ..	1	..	...	5	..	15	..	..		15	..	...
ಡಿಟ್ಟೋ ದುಯಂ ..	..	5	1	5	2	5	3	5	1	..	..	2
ಡಿಟ್ಟೋ ಸಿಯಂ ..	1	10	7	10	5	5	12	15	8	..	4	..
ಡಿಟ್ಟೋ ಚಹರಂ ..	45	15	30	..	44	..	32	10	12	..	7	..
ಡಿಟ್ಟೋ ಪಂಚಂ ..	7	..	10	..	10	10	37	.	25	..	14	..
ಚಿಕ್ಕ ಸಲಾಕಿ ..	1	2	1	..	..	..	..	..	..	..	..	..
ದೊಡ್ಡ ಜಡಾ ..	21	..			33	..	66	5	40	..	25	..
ಚಿಕ್ಕ ಜಡಾ ..	3	15	35	..	5	..	8	..	4	..	2	..
ಜಡದ ರಂಬೆ ..	1	5			7	..	..	..	...	..	...	..
ದೊಡ್ಡ ಜಜ್ಜು ..	18	..	61	5	30	..	94	..	65	..	43	..
ಚಿಕ್ಕ ಜಜ್ಜು ..	3	5			11	..						
ಬಗರದದ್ದು ..	2	15	6	..	5	5	26	.	9	..	13	10
ಐರ್ ವಾಚಿ ಗುಬಗರು ..	1	..	3	..	..	10	..	..	..	..	..	..
ಗರಗಸ ಬುಕಣಿ ..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಟ .	1	10	1	..	6	5	15	10	15	..	16	..
ಚಿಕ್ಕ ಡಿಟ್ಟೋ ..	..	..	2	..								
ಕೆತ್ನೆ ಐರ್ ಚಿಲ್ಟ ..	6	..	..	..	..	..	..	..	..	..	..	...
ಹತ್ರಿ ಚಿಲ್ಟ ..	1	6	..	..	..	..	..	.	..	..	..	..
ಮಿಲ್ವ ಚಿಲ್ಟ ..	17	10	30	..	21	5	30	..	12	..	9	..
ಬಸೋಲ ಬುಕಣಿ ..	1	15	10	..	14	..	14	15	5	10	6	8
ಕೊಯತ ಚಿಲ್ಟ ..	..	..	1	10	3	10	9	..	2	..	1	..
ಜುಮ್ಲಾ ..	135	15	200	..	200	..	350	..	200	..	150	..

ಹೊಸ ಯಾ ಬೊಂಬಾಯಿ ತರಹೆ ಪ್ರಕಾರ.

ಸಂದಲ್ ವಿವರ.	ಹುಣಸೂರು ಕೋರ್ಟಿ.		ಶ್ರೀರಂಗಪಟ್ಣ ಕೋರ್ಟಿ.	
	ಟ್ರ.	ಹ.	ಟ್ರ.	ಹ.
ವಿಲಾಯಿತಿ ಬಡ್ ..	1	.	..	10
ಚೈನಾ ಬಡ್ ..	20	..	30	.
ಪಂಚಂ ..	28	...	89	..
ಚಿಕ್ಕ ಸಲಾಕಿ, ಘೊಟ್ಲ (ಅವ್ವಲ್) ..	3	...	5	..
ಡಿಟ್ಟೋ (ದುಯಂ) ..	2	..	1	..
ಘಟಿ ಬಡಲ ..	50	..	30	..
ಜಡಾ (ಅವ್ವಲ್) ..	25	..	25	..
ಡಿಟ್ಟೋ (ದುಯಂ) ..	25	..	12	..
ಡಿಟ್ಟೋ (ಸಿಯಂ)	10	..	8	..
ಡಿಟ್ಟೋ (ಚಹರಂ) .	7	..	7	..
ಜಜ್ಜು (ಅವ್ವಲ್) ..	50	...	25	..
ಡಿಟ್ಟೋ (ದುಯಂ) ..	40	15	15	..
ಬಗರದದ್ದು ..	5	..	12	..
ಐರ್ ಬಗರು ..	5	..	14	..
ಚಿರಿಯಾ ..	5	..	5	..
ಐರ್ ಚಿಲ್ಟ (ಅವ್ವಲ್) ..	4	..	6	..
ಡಿಟ್ಟೋ (ದುಯಂ) ..	6	..	6	10
ಹತ್ರಿ ಚಿಲ್ಟ ..	1	..	2	10
ಗರಗಸ ಬುಕಣಿ ..	1	..	..	10
ಮಿಲ್ಲ ಚಿಲ್ಟ ..	30	..	50	..
ಬಸೋಲಾ ಬುಕಣಿ ..	7	.	10	..
ಚೇಗು ಮಿಲ್ವ ..	..	..	5	..
ಕಳದವರುಷದ ಜಡಾ	113	15	12	15
ಸ್ಪೆಷಲ್ ಕ್ಲಾಸ್ ..	..	10	...	..
ಟೋಟಲ್ .	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಗೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ನೂ ॥ 15ನೇ ಮುಕ್ಕಾಂ 15230.—ಆರ್. ಎಫ್. 155 -- 92ನೇ ನಂಬರ್ ರೂಲ್ಸ್‌ಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಪ್ರಾಮಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಯಿತರ ಆಫಿಸರಿಂದ ಆಗಲಿ ಶೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಜಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟ್ಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಫ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ್ ಆಫ್ ಅಡ್ವೈಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫಿಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದೀಯನ್ನ 5ನೇ ದಿನ ಅಖೈರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫಿಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫಿಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥವರುಗಳಿಂದ ಟಪ್ಪಾಲ್ ಮೂಲಕ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫಿಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರ್ರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಶೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಯಿಲ್ಲದರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆ ಯಾವದು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫಿಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ವುಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಬೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಯಂದಿಗೂ ಯಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟ್ ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಬೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು, ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫಿಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫಿಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫಿಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರಿ ಹಾಜರಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನ ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫಿಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿನೋಡಲ್ಪಟ್ಟ ಮರಗಳು ಒಣಗುವ ದೆಶೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀ

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫಿಸರವರು ಅಥವಾ ತೂಗುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫಿಸರು ತಮಗೆ ಅನುಕೂಲ ವಾದಸ್ಥೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫಿಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫಿಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ವಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ವಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿ ದಾರನಿಗೆ 10 ದಿನಗಳು ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣವ ಪೈಕಿ ಯೇನಾದರೂ ಉಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್‌ಸ್ಪೆಕ್ಟರ್ ಜನರಲ್‌ಯುವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಬಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜ್ ಆಫಿಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನ್‌ನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ಉಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಋಟ್ಟ ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಸೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್‌ಛಾರ್ಜ್ ಫಾರೆಸ್ಟ್ ಆಫಿಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫಿಸರೇ ಆಗಲಿ ಇವರ ಮಂಜೂರಾತಿನಿಂ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜ್ ಫಾರೆಸ್ಟ್ ಆಫಿಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೀ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್.

ತಾರೀಖು 10ನೇ ಜುಲೈ 1896.

1896ನೇ ಇಸವಿ ಜುಲೈ ತಾರೀಖು 9ನೇ ರಾತ್ರಿ ದೊಡ್ಡಬಳ್ಳಾಪುರದ ತಾಲ್ಲೂಕು ಶಿರಸ್ತೇದಾರು ಕ್ರಿಷ್ಣಪ್ಪನವರು ವಾಸಮಾಡುವ ಮನೇ ಪೂರ್ವದಿಕ್ಕಿನ ಗೋಡೆಗೆ ಕನ್ನಾಹಾಕಿ ಕೊಠಡೀಲಿ ಪೆಟ್ಟಿಗೆಗಳಲ್ಲಿ ಇದ್ದ ಮಾಲುಗಳು ಕಳವಾಗಿರುವದಾಗಿ ಬರೆಸಿದ ಮಾಲುಪಟ್ಟಿ.

ಭಂಗಾರದ ನಗಗಳು.

		ರೂ.	ಅ.	ಪೈ.
1.	ಹಸರು ಕಲ್ಲಿಗೆ ಕೆತ್ತಿಸಿಂಗಾರ ಹಾಕಿ ಕಟ್ಟಿದ ಸಂಣ ಶಾವಂತಿಗೆಹುವ್ವು ಸುಮಾರು ಖರೀದಿ ..	25	0	0
2.	ಭಂಗಾರದ ರ್‍ಯಾಗಟೆ ಸುಮಾರು 8 ವರಹ ತೂಕ ಅಸರಂಜಿ ..	56	0	0
3.	ಭಂಗಾರದ ಜಡೆಕುಚ್ಚುಗಳು 3ಕ್ಕೆ ಸುಮಾರು 8 ವರಹ ತೂಕ ಅಪರಂಜಿ, ಪೋಣಿಸಿದ ಧಾರ ಕಿತ್ತು ಹೋಗಿದೆ	60	0	0

		ರೂ.	ಆ.	ಪೈ.
4.	ಚಿನ್ನದ ಸರಟು ಅಡ್ಡಿಕೆ ಕೆಂಪಿನ ಪದಕ ಹಾಕಿಧೆ, ಕೆಂಪು ಯಿಷ್ಟೆಂಬದು ಗೊತ್ತಿಲ್ಲ, ಸುಮಾರು 6ವರಹ ತೂಕ ವಳ್ಳೆಭಂಗಾರ	70	0	0
5.	ಕೆಂಪಿನ ಚಂದ್ರಮುರು ಜೊತೆ 1ಕ್ಕೆ ಬೊಂಬಾಯಿ ಮುತ್ತು ಸುತ್ತಿಧೆ, ಕೆಂಪಿನ ಅದದು ಗೊತ್ತಿಲ್ಲ	250	0	0
6.	ಮುತ್ತಿನ ಜಾಲೆಸರಪಣಿ ಅದದು ಗೊತ್ತಿಲ್ಲ	10	0	0
7.	ಮುತ್ತಿನ ವಾಲೇಸರಪಣಿ ಜೊತೆ 1ಕ್ಕೆ ಭಂಗಾರದಲ್ಲಿ ಸುತ್ತಿದ ಅದದು ಮುತ್ತು 48 ಯಿರುತ್ತದೆ ಮುತ್ತು ವೃದ್ಧಿನಕಾಳುಘಾತ್ರ ಯಿರುತ್ತದೆ	120	0	0
8.	ಬಿಡಿಮುತ್ತಿನ ಸರಾ 2ಕ್ಕೆ ಅದದು ಗೊತ್ತಿಲ್ಲ, ಹೆಸರುಕಾಳುಘಾತ್ರದ ಮುತ್ತುಗಳು ವಳ್ಳೇದು ..	70	0	0
9.	ಭಂಗಾರದ ಶಾವಂತಿಗೆ ಹುವ್ವು ಚಿಕ್ಕದು, ಒಂದು ವರಹ ತೂಕ ರೋಜಾಹುವ್ವಿನ ಮಾದ್ರಿಬಾಬತು ..	6	0	0
10.	ಬುಗಡಿ ಸರಪಣಿ ವಳ್ಳೆಮುತ್ತಿನ ಬಾಬತು, ಅದದು ಗೊತ್ತಿಲ್ಲ	15	0	0
11.	ಏಳು ವಳ್ಳೇಮುತ್ತಿನಿಂದ ಕಳಸಾ ಮಾಡಿರುವ ಬುಗಡಿ ಜೊತೆ 1ಕ್ಕೆ ಕೆಳಗಡೆಗೆ ಸಂಣಮುತ್ತು ಸುತ್ತಿಧೆ	100	0	0
12.	ಭಂಗಾರದ ಯುಲಗಾಯಿ ಗಾಜಿನಗ್ಯೆರೆ ಅವದು 7ಕ್ಕೆ ಸುಮಾರು 7 ವರಹ ತೂಕ ವಳ್ಳೇ ಭಂಗಾರ ವಂದು ಹವಳದ ಜಲಿಕಾಯಿ ಸಹ	60	0	0
13.	ವಳ್ಳೇ ಬಿಡಿಮುತ್ತುಗಳು ಸುಮಾರು 50—60 ಹೆಸರು ಕಾಳುಘಾತ್ರದ್ದು ..	120	0	0
14.	ಹುಲಿನುಗರಿಗೆ ಎರಡು ವರಹ ತೂಕದ ಭಂಗಾರಕಟ್ಟಿದ್ದು ವಳ್ಳೇಭಂಗಾರ ..	10	0	0
15.	ಕೆಂಪುಕಲ್ಲಿನ ಅರಳೆಲೆ ಸುಮಾರು ಖರೀದಿ ಕೆಂಪು ಅದದು ಗೊತ್ತಿಲ್ಲ ..	20	0	0
16.	ಮಕ್ಕಳಿಗೆ ಹಾಕುವ ಬಿಳೇ ಕಲ್ಲಿನ ಶಾವಂತಿಗೆ ಹುವ್ವು	2	0	0
17.	ಚಿನ್ನದ ಗುಂಡುಬಟ್ಟು ವಳ್ಳೇಚಿನ್ನ ಸುಮಾರು ಒಂದು ವರಹ ತೂಕ	7	0	0
18.	ಭಂಗಾರದ ಕೈಸರಪಣಿ ಭಂಗಾರ ಸುಮಾರು 22 ವರಹ ತೂಕ ರುಳಿಮಾದ್ರೀ ಬಾಬತು ..	140	0	0
19.	ಭಂಗಾರದ ಅಸಲಿ ಜೋಕ್ಕ ಭಂಗಾರ ಸುಮಾರು ಒಂದು ಪಾವುಉಳ್ಳದ್ದು	140	0	0
20.	ಭಂಗಾರದ ನಾಗರ ಗೆಜ್ಜೇ ಸುತ್ತಿರುವದು, ಸುಮಾರು 8 ವರಹ ತೂಕ	56	0	0
21.	ಭಂಗಾರದ ಬಟ್ಟು ಒಂದು ಸುಮಾರು ತೂಕ ಬಂಣ ಗೊತ್ತಿಲ್ಲ	1	0	0
22.	ಕೆಂಪಿನ ಮೂಗಬಟ್ಟು ವಂದಕ್ಕೆ ಸುಮಾರು ಖರೀದಿ ತೊಗರಿಬ್ಯಾಳೆಅಗಲ ಕೆಂಪು ..	15	0	0
23.	ಭಂಗಾರದ ಜಡೇಕುಚ್ಚಿನ ಮೇಲೆ ಹಾಕತಕ್ಕಗುಂಡು 2 ಗೊಣಸು 2ಕ್ಕೆ ಸುಮಾರು $2\frac{1}{2}$ ವರಹ ತೂಕ	10	0	0
24.	ಭಂಗಾರದ ಸಂಣ ಶಾವಂತಿಗೆ ಹುವ್ವು ಸುಮಾರು 2 ವರಹ ತೂಕ ವಳ್ಳೇಭಂಗಾರ ..	15	0	0
25.	ಇಕ್ಕೇರೀ ವರಹ 3ರಕ್ಕೆ	21	0	0
26.	ನಗದು ರೂಪಾಯಿಗಳು ಒಂದು ಬಟ್ಟೇಲಿಗಂಟುಕಟ್ಟಿಹಾಕಿತ್ತು	20	0	0
27.	ಭಂಗಾರದ ಘಾಂಟೀ ಬಾಬತು ಬಿಡಿ ಘಾಂಟಿಗಳು 8ಕ್ಕೆ ಸುಮಾರು ಖರೀದಿ ತೂಕ ಗೊತ್ತಿಲ್ಲ ..	8	0	0
28.	ದೊಡ್ಡ ಮುತ್ತುಗಳು 2ಕ್ಕೆ ಮುತ್ತು ಅವರೇಕಾಳು ಘಾತ್ರದ ಬಾಬತು	100	0	0
29.	ಕಾಗದದ ಭರಣೀಲಿಹಾಕಿದ್ದಬಾಕೀ ಮುತ್ತುಗಳು ವಳ್ಳೇದು ಸುಮಾರು 50ಕ್ಕೆವೃದ್ಧಿನ ಕಾಳು ಘಾತ್ರದ ಬಾಬತು	10	0	0
30.	ಹತ್ತುಕಡಕಿನಗೂಡು ಚಿನ್ನದ ಬಾಬತು ಸುಮಾರು $2\frac{1}{2}$ ವರಹ ತೂಕದ್ದು ತಿರವೂ ಮರಸುತ್ತೂ ಇಲ್ಲದ್ದು	20	0	0
31.	ಬಿಡಿಯಾಗಿದ್ದ ನೆಲ್ಲೀಕಾಯಿ ಮೊಟದ ಭಂಗಾರದ ಗುಂಡು 2 ತಾಳೀ ಗುಂಡು 1ಕ್ಕೆ ತೂಕ ಗೊತ್ತಿಲ್ಲ ಸುಮಾರು ಖರೀದಿ	12	0	0
32.	ಕಂಠೀಸರಕ್ಕೆ ಹಾಕಿದ್ದ ಚಿನ್ನದಕೊಕ್ಕೆ ಸರಿಗೆ ಸಹ ಸುಮಾರು $2\frac{1}{2}$ ವರಹ ತೂಕಕ್ಕೆ ..	14	0	0
33.	ಪಂಚರತ್ನದ ವುಂಗರ 1ಕ್ಕೆ	70	0	0
34.	ಚಿನ್ನದ ಗೂಡಿನ ವಜ್ರದವುಂಗ್ರ 1ಕ್ಕೆ ಅವರೇ ಬ್ಯಾಳೇ ಅಗಲಕ್ಕೆ ಸ್ವಲ್ಪ ಕಮ್ಮಿಯಾದ ವಜ್ರದ ಹಲಿಗೆ ವುಳ್ಳದ್ದಕ್ಕೆ	110	0	0
35.	ಚಿನ್ನದ ಗೂಡಿನ ಕೆಂಪಿನವುಂಗ್ರ 1ಕ್ಕೆ ಅವರೇಬ್ಯಾಳೇ ಅಗಲ ಕೆಂಪಿನ ಬಾಬತು ..	70	0	0
36.	ಚಿನ್ನದ ಚೂರುಗಳು ಸುಮಾರು 5 ವರಹ ತೂಕದ ಬಾಬತು	35	0	0
37.	ನಗದು ರೂಪಾಯಿಗಳು	159	0	0
38.	ನೂರು ರೂಪಾಯಿಗಳ ನೋಟು 3ಕ್ಕೆ ಮದ್ರಾಸು ಸರ್ಕಲ್ ಬಾಬತು ನಂಬರುಗಳು ಗೊತ್ತಿಲ್ಲ ..	300	0	0
39.	ಪಚ್ಚೇವುಂಗ್ರ 1ಕ್ಕೆ ತೊಗರೀ ಬ್ಯಾಳೇ ಅಗಲದ ಪಚ್ಚೇಭಂಗಾರದ ಗೂಡಿನ ಬಾಬತು ..	50	0	0
40.	ಚಿನ್ನದ ಸಂಣ ಜೆಂಡವಾಲೆ ದೇವರ ಬಾಬತು	3	0	0
41.	ಭಂಗಾರದ ವಾಕು ಜೊತೆ 1ಕ್ಕೆ ಸುಮಾರು 3 ವರಹ ತೂಕ ವಳ್ಳೇ ಭಂಗಾರ ..	21	0	0
42.	ನಾಲ್ಕು ಮುತ್ತುಗಳು ಹಾಕಿದ ಕಡಕು ಜೊತೆ	10	0	0
43.	ಹತ್ತುಕಡಕಿನ ವಜ್ರದ ಹಲಿಗೆ ಜೊತೆ 1ಕ್ಕೆ ವಜ್ರಗಳು ಅವರೇ ಬ್ಯಾಳೇ ಅಗಲಕ್ಕೆ ಸ್ವಲ್ಪಕಮ್ಮಿಯಾಗಿತ್ತು	50	0	0
44.	ಬಿಡಿ ಯುಮುನಾಕಲ್ಲು 2ಕ್ಕೆ ಸಿಹ್ಮದ ದುಡ್ಡಿನ ದುದ್ಗಾಣಿ ಅಗಲ ಯಿದದ್ದು	2	0	0
45.	ಚೌಕಳೀ ಯುಮುನಾಕಲ್ಲು 1ಕ್ಕೆ ಯಿದರ ಮೇಲೆ ಲಕ್ಷ್ಮೀನರಸಿಹ್ಮಯಂತ ಬಾಳಬಂದು ಅಕ್ಷರದಲ್ಲಿ ಕೆತ್ತಿ ಸುತ್ತಲೂ ಬೇಲ್ ಯಿರುತ್ತದೆ	5	0	0
46.	ಭಂಗಾರದ ವುಂಗರ 1ಕ್ಕೆ ಬೆಳ್ಳೀ ಬಿಲ್ಲೇಲಿ ಲಕ್ಷ್ಮೀ ವೆಂಕಟೇಶಪ್ರಸನ್ನಾಯಂತ ಬಾಳಬಂದು ಅಕ್ಷರದಲ್ಲಿ ಕೆತ್ತಿಧೆ, ಭಂಗಾರ ಸುಮಾರು $3\frac{1}{2}$ ವರಹ ತೂಕ ಜೋಕ್ಕ ಭಂಗಾರ	30	0	0
		1,588	0	0

ಬೆಳ್ಳೀ ಬಾಬತು ಮಾಲುಗಳು.

		ರೂ.	ಆ.	ಪೈ.
47.	ಬೆಳ್ಳಿ ಸಣ್ಣದೀಪದ ಕಂಭ 1ಕ್ಕೆ ಸುಮಾರು 2 ರೂಪಾಯಿ ತೂಕದ್ದು. ..	2	0	0
48.	ಬೆಳ್ಳಿ ಸಣ್ಣಥಾಲಿ ಹೂಜೀತರಹಾದ್ದು ಸುಮಾರು 3 ರೂಪಾಯಿ ತೂಕದ್ದು. ..	3	0	0
49.	ಬೆಳ್ಳಿ ಘಡಿಯಾರದ ಸರಪಣಿ 1ಕ್ಕೆ ಸುಮಾರು ಖರೀದಿ	27	0	0
50.	ಬೆಳ್ಳಿ ನಸ್ಯದ ಡಬ್ಬಿ 1ಕ್ಕೆ ಸುಮಾರು 3 ರೂಪಾಯಿ ತೂಕ	5	0	0
51.	ಬೆಳ್ಳಿ ತುಂಡುಗಳು 2ಕ್ಕೆ ಸುಮಾರು 10—12 ರೂಪಾಯಿ ತೂಕ	12	0	0
52.	ಬೆಳ್ಳಿ ತಂಬಿಗೆ 35 ರೂಪಾಯಿ ತೂಕ ಬೇಲೂರು ತರಹಾದ್ದು	35	0	0
53.	ಬೆಳ್ಳಿ ಗುಂಡುತಟ್ಟೆ 25 ರೂಪಾಯಿ ತೂಕದ್ದು	25	0	0
54.	ಬೆಳ್ಳಿ ಬಟ್ಲು 3ಕ್ಕೆ ದೊಡ್ಡದು 1 ಅದಕ್ಕೆ ಸ್ವಲ್ಪ ಸಣ್ಣದು 1 ಅದಕ್ಕೆ ಸಣ್ಣದು 1ಕ್ಕೆ ಸಹ ಸುಮಾರು 26 ರೂಪಾಯಿ ತೂಕ	26	0	0
55.	ಬೆಳ್ಳಿ ಗೆಜ್ಜೆ ಸುತ್ತಿದ ಸರಪಣಿ ಅದರ ಕಡ್ಡೀ ಸಹ ಸುಮಾರು 7 ರೂಪಾಯಿ ತೂಕ ..	7	0	0
56.	ಬೆಳ್ಳಿ ಪುದ್ಧರಣಿ ಸುಮಾರು 2 ರೂಪಾಯಿ ತೂಕದ್ದು	2	0	0
57.	ಬೆಳ್ಳಿ ಪಂಚಪಾತ್ರೆ 14 ರೂಪಾಯಿ ತೂಕದ್ದು	14	0	0
58.	ಬೊಂಬಾಯಿ ಬಿಳೆ ಪಳಕ್ಕೆ ಹಾಕಿದ್ದ ಬೆಳ್ಳಿ ತಿರಪು 2ಕ್ಕೆ ಸುಮಾರು 1 ರೂಪಾಯಿ ತೂಕ ..	1	0	0
59.	ಬೆಳ್ಳಿ ಕಡಕಿನ ಗುಂಡಿನ ಜೊತೆ 1ಕ್ಕೆ	1	0	0
		160	0	0

ಚಿಲ್ಲರೆ ಸಾಮಾನುಗಳು.

		ರೂ.	ಆ.	ಪೈ.
60.	ಪುದ್ದಿನಕಾಳು ಘಾತ್ರದ ಹವಳದ ಸರ ಕುತ್ತಿಗ್ಗೆ ಹಾಕುವದು ಹಿತ್ತಾಳೆ ಸರಿಗೇಲಿ ಸುತ್ತಿದೆ ಸುಮಾರು ಖರೀದಿ ಅದದು ಗೊತ್ತಿಲ್ಲ	2	0	0
61.	ಹಸರುಕಲ್ಲು ಹಾಕಿದ ಗಿಲ್ಟಿನ ಜಳತುಂಬು ಜೊತೆ 1ಕ್ಕೆ	2	0	0
62.	ಮದ್ರಾಸ್ ಬುಗಡಿ ಜೊತೆ 1ಕ್ಕೆ ಬೊಂಬಾಯಿ ಮುತ್ತು ಸುತ್ತಿದೆ	7	0	0
63.	ಕೈಗ ಕಟ್ಟುವ ಹವಳ, ಪಳ್ಳೀ ಬೆಳ್ಳೀಸರಿಗೇಲಿ ಸುತ್ತಿರುವದು ಸಣ್ಣ ಪುದ್ದಿನಕಾಳು ಘಾತ್ರದ ಹವಳಗಳು	2	0	0
64.	ಗಿಲ್ಟಿನ ಬಾಬತು ಕಂಠಿ ಗುಂಡುಗಳು 700ಕ್ಕೆ	30	0	0
65.	ಸಣ್ಣ ತಾಳಶೀಮಣಿ ಸರ ಭಂಗಾರದ ಸರಿಗೇಲಿ ಸುತ್ತಿದೆ ಮುತ್ತು ಪಚ್ಚೆ ಕೆಂಪು ವಗೈರೆ ಹಾಕಿದ್ದು ಅದದು ಯಾವದೂ ಗೊತ್ತಿಲ್ಲ	60	0	0
66.	ಬಿಳೀ ಹರಳಿನದು, ಕೆಂಪು ಹರಳಿನದು, ಕೆಂಪು ಬಿಳೆ ಹರಳಿನದು, ಹಸರು ಹರಳಿನದು, ಪುಂಗ್ರಗಳು ಬಿಲೂಚೀ ಜನಗಳು ಮಾರುವದಕ್ಕೆ ತಂದದ್ದು	5	0	0
		108	10	0

ಬಟ್ಟೆಗಳು.

		ರೂ.	ಆ.	ಪೈ.
67.	ಬೆಂಗಳೂರು ಕಲಾಬತ್ತು ಅಂಚಿನ ಬುಗಡಿ ಶೀರೆ 1ಕ್ಕೆ ಪುಟ್ಟದ್ದು ಹೊಸದು ಪೈಟನೆ ಬಾಬತು ...	100	0	0
68.	ರೇಷ್ಮೆಗೂಡಿನ ಶಾಲ್ಯದ ಪಂಚೆ ಜೊತೆ 1ಕ್ಕೆ ಅಗಸನಿಗೆ ಹಾಕಿದ್ದು	14	0	0
69.	ಮದ್ರಾಸ್ ಕೆಂಪಿನ ಮಡಿಶೀರೆ 1ಕ್ಕೆ	3	0	0
70.	ರೇಷ್ಮೆಸಾಲಾರಿ ಬುಗಡಿ ಅಂಚಿನ ಕಂಚಿ ಶೀರೆ 1ಕ್ಕೆ ಹೊಸದು	18	0	0
71.	ರೇಷ್ಮೆ ಮುಂಗಿ ಕೊರ್ನಾಡು ಹೊಸ ಶೀರೆ 1ಕ್ಕೆ	18	0	0
72.	ಸಾಲಾರಿ ಕೊರನ್ನಾಡು ಹೊಸ ಶೀರೆ 1ಕ್ಕೆ	12	0	0
73.	ಚೌಕಳಿ ನೂಲಂಚಿನ ಕೊರನಾಡು ಶೀರೆ 1ಕ್ಕೆ ಹೊಸದು.	2	0	0
74.	ಬನಾರಸ್ ಬಾಬತು ಹೊಲದ ಕುಬಸ ಚಿನಡಿ ಬುಟ್ಟೆ ಇರುವದು ಕೆಂಪು ಚಿನಡಿ ಬಾಬತು ಕಲಾಬತ್ತು ಅಂಚು ಇರುತ್ತದೆ	10	0	0
75.	ಕೆಂಪು ಅಂಚಿನ ಬಿಳೀಗೆರೆ ಬಾಬತು ದೇಶದ ಖಣಕ್ಕೆ	1	8	0
76.	ಹಳದಿ ದಮಾಸ್ ಹೊಲದ ಕುಪಸ 1ಕ್ಕೆ	3	0	0
77.	ಗಂಟಿನಲ್ಲಿ ಕಟ್ಟಿದ್ದ ಬಾಕಿ ಕುಪಸಗಳು 20ಕ್ಕೆ ತಪ್ಸೀಲ್ ಗೊತ್ತಿಲ್ಲ	30	0	0
78.	ಬಿಳೆ ಫ್ಲ್ಯಾನಲ್ ಕುಪಸ 1ಕ್ಕೆ	1	0	0
79.	ಬಿಳೆ ಟವಲ್ 1ಕ್ಕೆ	0	6	0
80.	ಬಿಳೆ ಮಗ್ಗಲು ಹಾಸಿಗೆಗಳು 6ಕ್ಕೆ ವಗದ್ದು	4	8	0
81.	ಬಿಳೆ ಷರಾಯಿ 2ಕ್ಕೆ	5	0	0
82.	ಬಿಳೆ ದುಪ್ಪಟಿಗಳು 2ಕ್ಕೆ ವಗದ್ದು	6	0	0
83.	ಕರೀಅಂಚಿನ ಪಂಚೆಗಳು 4ಕ್ಕೆ ವಗದ್ದು.	6	0	0
84.	ಬಿಳೆ ಮಲ್ಲು ಪಂಚೆ 4ಕ್ಕೆ ವಗದ್ದು	4	0	0
85.	ಬಿಳೆ ಕೋಟುಗಳು 3ಕ್ಕೆ ವಗದ್ದು	6	0	0
86.	ಹೊದಿಯುವ ಸಣ್ಣ ಅಂಚಿನ ಪಂಚೆ 2ಕ್ಕೆ ವಗದ್ದು	4	0	0
87.	ಶಾಲ್ಯದ ದೊಡ್ಡ ಅಂಚಿನ ಪಂಚೆ ವಗದ್ದು	6	0	0
88.	ಬಿಳೆ ಕಬಚ 4ಕ್ಕೆ ವಗದ್ದು	4	0	0

		ರೂ.	ಆ.	ಪೈ.
89.	ಬಿಳಿ ಕೊಳ್ಳೇಗಾಲದ ಕಲಾಬತ್ತಿನ ರುಮಾಲು ನಾಲ್ಕು ಕಡೆ ಕೋರು ಇಧೆ ಪೈಕಿ ಯರಡು ಕಡೆ ನೂಲು ಬರೀಸರಿಗೆ ಬುಗಡಿ ಇಧೆ ಇನ್ನೂ ಯರಡು ಕಡೆ ಕೋರುಗೂಡುಗಳು ಮತ್ತು ಬುಗಡಿ ವುಳ್ಳದ್ದು 7 ಮಳದ್ದು ಹೊಸದು ಮಂದುವಗೆ ಆಗಿಧೆ ಕೊರು ಯರಡು ಪಟ್ಟಿಗಳ ಇರುತ್ತದೆ. ..	40	0	0
90.	ರೇಷ್ಮೆ ಬಾಬತು ಅಂಚು ಇಲ್ಲದ ಗದ್ದೇಮಡಿ ರುಮಾಲ್ 1ಕ್ಕೆ	27	0	0
91.	ವಧುರೆ ಕಲಾಬತ್ತು ಅಂಚಿನ ರುಮಾಲ್ 1ಕ್ಕೆ ..	35	0	0
92.	ಕರೀ ಕೊಳ್ಳೇಗಾಲದ ರುಮಾಲ್ 1ಕ್ಕೆ ನಾಲ್ಕು ಕಡೆ ಜರತಾರೀ ಗೂಡಿನ ಕೋರು ಇಧೆ ಯರಡು ಪಟ್ಟಿಗಲ ಅಂಚು	30	0	0
93.	ಬಿಳಿ ಮಲ್ಲು ರುಮಾಲ್ 2ಕ್ಕೆ	4	0	0
94.	ದಿಂಬಿನ ಬಿಳೀಚೀಲ 4ಕ್ಕೆ	2	0	0
95.	ಕೆಂಪು ಪಟ್ಟಣ ಶೀರೆ ಕಲಾಬತ್ತು ಅಂಚಿನ ಶೆರಗುವುಳ್ಳದ್ದು, ಪುಟ್ಟದ್ದು	50	0	0
96.	ಯಂಟುಮಳದ ಶಾಯಿಗಂಬಿ ಕಲಾಬತ್ತು ಅಂಚಿನ ಪಂಚೆ ಹೊದ್ದದ್ದು 1ಕ್ಕೆ	6	0	0
97.	ಪಂಚೆ 8 ಮಳದ್ದು ವಗದ್ದು ಜೊತೆ 1ಕ್ಕೆ	2	0	0
	ಜುಮ್ಲಾ	3,310	6	0

ಮೇಲ್ಕಂಡ ಮಾಲುಗಳ ಕಿಮ್ಮತು ಮೊತ್ತ ಗೊತ್ತಿಲ್ಲ ಬಾಯಿಜ್ಞಾಪಕದ ಮೇಲೆ ಬರೆಸಿ ಇರುತ್ತೆ, ಕರಾರುವಾಕಾ ಜ್ಞಾಪಕ ಸಾಲದು, ಮೇಲ್ಕಂಡ ಮಾಲುಗಳು ಸವಾಯಿ ಇನ್ನೇನು ಹೋಗಿರುತ್ತದೆಂಬದು ಈಗ ಜ್ಞಾಪಕದಲ್ಲಿ ಇಲ್ಲಾ.

ದೊಡ್ಡಬಳ್ಳಾಪುರ ತಾಲ್ಲೂಕು ತೂಬಗೆರೆ ಸ್ಟೇಷನ್ ಸರಹದ್ದು ಹಾಡೋನಹಳ್ಳಿಯಲ್ಲಿ ಇದ್ದ ಹನುಮಿ ಯಂಬುವಳ ಚಹರೇಪಟ್ಟಿ

ತಾರೀಖು 24ನೇ ಆಗಸ್ಟ್ 1896.

ಹೆಸರು ಹನುಮಿ, ಜಾತಿ ಮೊರಸುವಕ್ಕಲಿಗರು, ವಯಸ್ಸು 30—35 ವರುಷ, ಎಣಗೆಂಪು, ಗುಂಡು ಮುಖ, ಹಣೇಮೇಲೆ (1) ಹಚ್ಚೆ ಇಧೆ. ನೂಲಿನ ಕರೀಶೀರೆ, ಬಿಳೀಶೀರೆ ವುಡತಕ್ಕವಳು, ಇವಳಿಗೆ ಹಾಡೋನಹಳ್ಳಿ ಹನುಮಂತಣ್ಣನ ಮಗ ಮರಿಯಪ್ಪ ಖಾಸಾ ಅಣ್ಣನಾಗಬೇಕು. ಇವಳನ್ನ ಕಣಾವೇ ಕೆಳಗೆ ಬುಲ್ಲಹಳ್ಳಿಗೆ ಮದುವೆ ಆಗಿತ್ತು. ಇವಳ ಗಂಡನ ಹೆಸರು ಸುಬ್ಬಣ್ಣ, ಇವ ಭವತಿಯಾಗಿ ಧಾನೆ, ಜಾತಿ ಕೆಟ್ಟು ಹೋಗಿಧಾಳೆ, ಈಗ 6 ತಿಂಗಳ ಕೆಳಗೆ ಹಾಡೋನಹಳ್ಳಿಗೆ ಬಂದು ಹೋದವಳು ಪತ್ತೆ ಇಲ್ಲವೆಂದು ಹೇಳುತ್ತಾರೆ.

ಬಿ. ಕುಪ್ಪುಸಾಮಿನಾಯುಡು,
ಫೂರ್ ಡೆಪ್ಯುಟಿ ಕಮ್ಮಿಷನರ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರು 66.

ಅರ್ಜೀದಾರ ಬೆಂಗಳೂರು ಅರಳೇಪೇಟೆಯಲ್ಲಿ ಇರುವ ಹೊಸಕೋಟೆ ಸುಬ್ಬರಾವ್, ಬುದ್ಧಿಸ್ವಾಧೀನವಿಲ್ಲದ ಬೆಂಗಳೂರು ಅರಳೇಪೇಟೆ ಸ್ಥಳದ ವೆಂಕಟೇಶಯ್ಯನ ಆಸ್ತೀ ವಿಷಯದಲ್ಲಿ—

ಸದರೀ ಬುದ್ಧಿ ಸ್ವಾಧೀನವಿಲ್ಲದ ವೆಂಕಟೇಶಯ್ಯನಿಗೆ ಅಣ್ಣನ ಮಗನು ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಅರಳೇಪೇಟೆ ಸ್ಥಳದ ಹೊಸಕೋಟೆ ಸುಬ್ಬರಾವ್, ಬುದ್ಧಿ ಸ್ವಾಧೀನವಿಲ್ಲದ ವೆಂಕಟೇಶಯ್ಯನ ಆಸ್ತೀ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾನೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1896ನೇ ಇಸವಿ ನವಂಬರ್ 5ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಸ್ ಕೊಡಲಾಗಿಧೆ.

ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ 24ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1896—97ನೇ ಇಸವಿ ಮಿಸಲೇನಿಯುಸ್ ಅರ್ಜೀ ನಂಬರ್ 67.

ಮೃತಪಟ್ಟ ಶೀನಕ್ಕಮ್ಮನೆಂಬುವಳ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ವುಪ್ಪಾರಪೇಟೆಯಲ್ಲಿ ಇರುವ ವುಪ್ಪಾರ ಮೇಸ್ತ್ರಿ ಸುಬ್ಬಯ್ಯನ ಮಗ ಬಿಳಪ್ಪನು, ಮೃತಪಟ್ಟ ಸದರೀ ಶೀನಕ್ಕಮ್ಮ ನೆಂಬುವಳಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವುಪ್ಪಾರಪೇಟೆ ಸ್ಥಳದ ಬಿಳಪ್ಪನು, ಬೆಂಗಳೂರು ವುಪ್ಪಾರಪೇಟೇಲಿ ವಾಸಸ್ಥರಾಗಿ ಮೃತಪಟ್ಟ ಶೀನಕ್ಕಮ್ಮನ ಜಿಂದಗಿ ಒಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಿಳಪ್ಪನ ಅರ್ಜಿಯನ್ನು ಸರ್ 1896ನೇ ಇಸವಿ ನವೆಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೀನಕ್ಕಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1896ನೇ ಇಸವಿ ಸೆಪ್ಟಂಬರ್ ತಿಂಗಳ 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ಮಾರ್ಕೆಟ್‌ಬಳಿ ಯಿರುವ ಕಬ್ಬಿಣ ಕೆಲಸದ ಮಹಮ್ಮದ್‌ಮೂಸಾಸಾಬರ ವಿಷಯದಲ್ಲಿ—

ಸರ್ 1894—95ನೇ ಇಸವಿ ದಿವಾಳೀ ಕೇಸ್ ನಂಬರು 391.

ಹುಕುಂ,

ಮೇಲ್ಕಂಡ ಮಹಮ್ಮದ್ ಮೂಸಾಸಾಬಿಯು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜಿದಾರನಾದ ಮಹಮ್ಮದ್ ಮೂಸಾಸಾಬರ ಪರವಾಗಿ ಅಡ್ವೊಕೇಟ್ ಮೆಸ್ಸರ್ ಎಸ್. ಸುಬ್ಬರಾಯಗನ್ನೂ ಮತ್ತು ಸದರೀಯವರ ಲೇಣೇದಾರರಾದ 1ನೇ ಬೆಂಗಳೂರು ಗುಡಮಯ್ಯನ ಪೇಟೆಯಲ್ಲಿರುವ ಕುರುಬರ ಗಡ್ಡದಪ್ಪನವರ ಮಲ್ಲಣ್ಣನವರು, ಮತ್ತು 6ನೇ ಬೆಂಗಳೂರು ಮಾರ್ಕೆಟ್ ಬಳಿಯಿರುವ ಹಾಜಿಅಹಮ್ಮದ್‌ಸಾಬಿ ಫವತಿ, ಯಿವರ ವಾರಸುದಾರ್ ಅಬ್ದುಲ್‌ರಹಿಂಸಾಬರ ತರಫ್ ಅಡ್ವೊಕೇಟ್ ಮೆಸ್ಸರ್ ಎಸ್. ನರಸಿಹ್ಮಯ್ಯಂಗಾರ್ರು ಯದುರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ,—2ನೇ ಬೆಂಗಳೂರು ಮಾರ್ಕೆಟ್‌ಬಳಿ ಯಿರುವ ಮರಕೆಲಸದ ಪಾಪಣ್ಣನ ಹೆಂಡತಿ ಚಲುವಮ್ಮ, 3ನೇ ಬೆಂಗಳೂರು ಗೊಲ್ಲರಪೇಟೇಲಿರುವ ಸಾದರ ಮುನಿಶಾಮಪ್ಪ, 4ನೇ ಡಿಟ್ಟೋ ಪೇಟೇಲಿರುವ ಬಾಬಣ್ಣ, 5ನೇ ಬೆಂಗಳೂರು ತಿಗಳರ ಪೇಟೇಲಿರುವ ತಿಗಳರ ರಾಮಸ್ವಾಮಪ್ಪ, 7ನೇ ಬೆಂಗಳೂರು ಮಾರ್ಕೆಟ್ಟಿನಲ್ಲಿ ಯಿರುವ ಚೀನಾಅಂಗಡೀ ಅಬ್ದುಲ್‌ಖಾದರ್ ಮೇಕರಿ, 8ನೇ ಡಿಟ್ಟೋ ಕಳ್ಳೇಕಾಯಿ ಅಂಗಡಿ ಮಾನೋಜೀರಾವ್, 9ನೇ ಗಳುವಿನ ಅಂಗಡೀ ಬಜಾರದ ಮುನಿಶಾಮಿಶೆಟ್ಟಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮಹಮ್ಮದ್ ಮೂಸಾಸಾಬರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ತನ್ನ ಸಾಲಗಾರರಿಗೆ ಪಾವತಿಬಾಕಿ ಮಾಹೆಯಾನಾ ತಪ್ಪದೆ ಕೋರ್ಟಿಗೆ (5) ಐದು ರೂಪಾಯಿ ಹಾಜರ್ಮಾಡುವ ಷರತ್ತಿನ ಮೇಲೆ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನ ಬಿಡುಗಡೆ ಮಾಡಲಾಗಿರುತ್ತೆ ಯೆಂದು ಯಿದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸರ್ 1896ನೇ ಇಸವಿ ಫಿಬ್ರುವರಿ 22ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರು ನಮ್ಮ ದಸ್ತುಖತ್‌ನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ,

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಸಾಲಮಾಡಿದ ತಾರೀಖು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ಗುಡಮಯ್ಯನ ಪೇಟೇಲಿರುವ ಕುರುಬರ ಗಡ್ಡದಪ್ಪನವರ ಮಲ್ಲಣ್ಣ ..	91—1—6		ಬೆಂಗಳೂರು ಸಬ್ ಜಡ್ಜಿಯವರ ಕೋರ್ಟು 1892ನೇ ಇಸವಿ ಸ್ಮಾಲ್ ಕಾಜ್ 693ನೇ ನಂಬರ್ ಡಿಕ್ರೀ ಅಮಲ್‌ಜಾರಿ 1894—95ನೇ ಇಸವಿ 1174ನೇ ನಂಬರ್ ವಾರಂಟ್ ಮೇರೆಗೆ	
2	ಚಲುವಮ್ಮ ..	80—0—0		ಡಿಟ್ಟೋ	
3	ಸಾದರಮುನಿಶಾಮಿ ..	100—0—0		ಪತ್ರದ ಮೊಬಲಗು	
4	ಬಾಬಣ್ಣ ..	80—0—0		ಡಿಟ್ಟೋ	
5	ರಾಮಸ್ವಾಮಪ್ಪ ..	40—0—0		ಡಿಟ್ಟೋ	
6	ಅಬ್ದುಲ್‌ರಹಿಂಸಾಬಿ ..	120—0—0		ಡಿಟ್ಟೋ	
7	ಅಬ್ದುಲ್‌ಖಾದರ್ ಮೇಕರಿ ..	70—0—0		ಡಿಟ್ಟೋ	
8	ಮಾನೋಜೀರಾವು ..	30—0—0		ಡಿಟ್ಟೋ	
	ಮುನಿಶಾಮಿಶೆಟ್ಟಿ	30—0—0		ಡಿಟ್ಟೋ	

ಸರ್ 1896ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತುಖತ್ತುನಿಸಿ ಕೊಡಲ್ಪಟ್ಟಿದ್ದು ಯಿದೆ.

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 23ನೇ ಸೆಪ್ಟಂಬರ್ 1896.

1. ಕಂದಾಯದ ಬಾಕಿದಾರರಾದ ಹನುಮಂತರಾಯನಿಂದ ಬರಬೇಕಾದ ಜರ್ಮಿ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಫಾರ್ಫಿಟ್ಟಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಸಿಡ್ಲಘಟ್ಟ ತಾಲ್ಲೂಕು ಅಮಲ್ದಾರ್ರ ಕಚೇರೀಲಿ 1896ನೇ ನವಂಬರ್ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1896–97ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 1,408–13–0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿಮಾಡಲ್ಪಡದೆ ಹೋಗಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ, ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಮಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ ತರಿ ಬಾಗಾಯತು ವಗೈರೆ.	ವಿಸ್ತೀರ್ಣ.		ಕಂದಾಯ.			ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.		
1	2	3	4	5	6	7	8	9		10			11		
					ರೂ.ಆ.ಪೈ.			ಎ.	ಗುಂ.	ರೂ.	ಆ.	ಪೈ.	ರೂ.	ಆ.	ಪೈ.
ಸಿಡ್ಲಘಟ್ಟ.	ಜಂಗಮಕೋಟೆ.	ಅಂಗತಟ್ಟ ಕಾರಂಗಡ ಗ್ರಾಮ.*	ಹನುಮಂತರಾವ್.	..	0	ಪೂರಾ ಗ್ರಾಮ.	ಖುಷ್ಕಿ	302	28	516	8	0	1408	13	0
							ಬಾಗಾಯತು	18	28	106	0	0			
							ಪರಂಪೋಕ	92	14	1	8	0			
								413	30	624	0	0	ಹರಾಜ್ ತಾರೀಖು ವರಿವಿಗೆ ಬಡ್ಡಿ ಕೊಡಬೇಕು.		

* ಈ ಹರಾಜು ಹಿಂದಿನವರು ಮಾಡಿದ ಭೋಗ್ಯ ವಗೈರೆಗಳಿಂದ ಯೇನೂ ಬಾಧಕವಾಗುವದಿಲ್ಲ.

ತಾರೀಖು 13ನೇ ಆಗಸ್ಟ್ 1896ನೇ ಇಸವಿ.

ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡಿಲೀ ಕಂಡ ಜಪ್ತಿ ಹಿಡುವಳಿಯು ಕೆಳಗೆ ನಮೂದಿಸಿ ಯಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರು ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜು ಕೈದಾದ ಕೂಡ್ಲೆ ಚಡಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣೀ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯಿತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರಿ ರಜಾ ದಿವಸವಾಗಿದ್ದರೆ, ಆ ತರುವಾಯ ಆಫೀಸು ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನು ಪಾವತಿಮಾಡಬೇಕು.

4. ಪೂರಾ ಹರಾಜು ಮೊಬಲಗನ್ನು ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ ಠೇವಣೀ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾಬಾಕಿ ವುಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸ್ವತ್ತು ಪುನಃ ಹರಾಜುಮಾಡಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನು ಸದರೀ ಸ್ವತ್ತಿಗೇ ಆಗಲಿ ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜು ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ ಯಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣಾದರಿಂದ ವಿಶೇಷ ತೊಂದರೆ ವುಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರು ಆವಶ್ಯಕವಾದ ಶಿಫಾರಸ್ಸಿನೊಡನೆ ಗವರ್ನಮೆಂಟನವರ ಅಪ್ಪಣೆ ಪಡೆಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾಗಿದ್ದಲ್ಲಿ ಆ ಮೇರೆ ಕಮ್ಮಿಯಾದಷ್ಟು ಮೊಬಲಗನ್ನು ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿ ಯಂತೆ ವಸೂಲ್ಮಾಡಲ್ಪಡುವದು.

5. ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ವಳಪಟ್ಟುಯಿರುತ್ತೆ.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್‌ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು. ಹಾಗಿಲ್ಲದೆ ಯಿದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜ್ ಖಾಯಂ ಆದ ನಂತರ ಜಮೀನನ್ನು ಹಿಡುವಳಿಯಲ್ಲಿ ಯಿಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿ ಯಾನೆ ಬರಹಮೂಲಕವಾದ ಅಪ್ಪಣೆಯನ್ನು (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ (ಡಿ) ಯಲ್ಲಿ ಕಂಡ 2ನೇ ನಂಬರು ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

ಚಿಕ್ಕಬಳ್ಳಾಪುರದ ತಾಲ್ಲೂಕು ಪೆರೇಸಂದ್ರದ ಹೋಬಳಿಯಲ್ಲಿ ಹೊಸದಾಗಿ ತಯಾರಾಗಿರುವ ರಾಮಸಾಗರ ಕೆರೇ ನೀರಿನಿಂದ ಸಾಗುವಳಿಗೆ ಬರುವ ಚಿಕ್ಕಬಳ್ಳಾಪುರದ ತಾಲ್ಲೂಕು ಪೆರೇಸಂದ್ರದ ಹೋಬಳಿ ಬೋಯಿನಹಳ್ಳೀ ಗ್ರಾಮದ ಸರ್ವೇ ನಂಬರುಗಳು ಹರಾಜು ಮೈಯ್ಯ ತಯಾರಾದ ತಪ್ಸೀಲ್ ತಖ್ತಾ.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೇ ನಂಬರ್.	ಬಾಬು ತರೀ ಖುಷ್ಕೀ ಭಾಗಾಯಿತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ವಗೈರೆ. ಕೂಡಿದ ಮಟ್ಟಗೆಕರಾರ್ಖಾ ತಪ್ಸೀಲ್.	ಹರಾಜು ಸ್ಥಳ ತಾರೀಖು ಮತ್ತು ಕಾಲ.	ಹರಾಜು ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.	
1	2	3	4	5	6	7	8	9	10	11	
					ಎ. ಗುಂ.	ರೂ. ಆ. ಪೈ.					
ಚಿಕ್ಕಬಳ್ಳಾಪುರ	ಪೆರೇಸಂದ್ರ	ಬೋಯಿನಹಳ್ಳಿ	1	ತರೀ	1—32	7 8 0	..	ಈ ಜಮೀನ್‌ಗಳ ಬಳಿ 1896ನೇ ಇಸವಿ ಅಕ್ಟೋಬರ್ 26 ಯಿಪ್ಪತ್ತಾರನೇ ತಾರೀಖು ಸೋಮವಾರ ದಿವ 11 ಘಂಟೆಗೆ.	ಚಿಕ್ಕಬಳ್ಳಾಪುರದ ಅಮಲ್ದಾರ್.		ಈ ಜಮೀನ್‌ಗಳು ಈಗ ಇರುವ ಹಳೇ ಕಾಲ್ವೇ ನೀರಿನಿಂದಲೇ ಸಾಗುವಳಿ ಮಾಡಿಕೊಳ್ಳಬೇಕಾಗಿರುತ್ತೆ.
			9	ಖುಷ್ಕೀ	3—19	5 8 0	..				
			11	ತರೀ	3—10	22 0 0	ಜಾಲಿಗಿಡ 1				
			27	ತರೀ	0—18	3 0 0	..				
			108	ತರೀ ಖುಷ್ಕೀ	1—29 0—23	10 0 0	ಜಾಲಿಗಿಡ 2				
			133	ತರೀ ಖುಷ್ಕೀ	1—17 0— 6	8 0 0	ಡಿಟೋ 3				
			134	ತರೀ ಖುಷ್ಕೀ	0—24 0—39	4 8 0	ಡಿಟೋ 1				
			127	ಖುಷ್ಕೀ	1—39	2 12 0	ಜಾಲೀ ಹುಂಗೀ ವಗೈರೇ 202				
			1 127	ಡಿಟೋ	1—22	2 0 0					
			2 127	ಡಿಟೋ	2— 6	3 0 0					
			3 127	ಡಿಟೋ	1—37	2 12 0					
			4 26	ಖರಾಬು	0—15	ಖರಾಬು	..				
			1 28	ಡಿಟೋ	1—25	ಖರಾಬು	..				

ಸರ್ವೇ 26—28ನೇ ನಂಬರು ಖರಾಬು ಜಮೀನ್‌ಗಳಿಗೆ ಬಾಜೂ ಆಕಾರ ಕಂಡ ನಂಬರುಗಳ ದರದಂತೆ ದಾಖಲ್ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್.

ಸಾಗುವಳಿಗೋಸ್ಕರ ಜಮೀನ್ ಹಿಡುವಳಿ ಹರಾಜು.

ತಾರೀಖು 1ನೇ ಆಗಸ್ಟ್ 1896.

ಇಸ್ತಿಹಾರ್.

ಇದರಿಂದ ತಿಳಿಯಪಡಿಸುವದೇನೆಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಗಳು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2 ಹರಾಜು ಕೈದುದಕೂಡ್ಲೆ ಚಡಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜು ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜು ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜು ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರ್ನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯಾವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುವದು.

5. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜು ಡೆಪ್ಯುಟಿ ಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನಾರು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಯೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲಾ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರ.	ಸ್ವತ್ತಿನ ವಿವರ. ಜಮೀನ್. ಖಾಖು ಖುಷ್ಕೀ, ತರೀ, ಬಾಗಾಯತು ಅಥವಾ ಕಾಫಿ.	ಸ್ವತ್ತಿನ ವಿವರ. ಜಮೀನ್. ವಿಸ್ತೀರ್ಣ.	ಸ್ವತ್ತಿನ ವಿವರ. ಜಮೀನ್. ಅಕಾರ.	ಸ್ವತ್ತಿನ ವಿವರ. ಮರಗಳು ಭಾವಿಗಳು ವಗ್ಯೆರೆ. ಕೂಡಿದ ಮಟ್ಟಿಗೂ ಕರಾರ್ವಾಕಾ ತಪ್ಸೀಲ್.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ	ಚಿಕ್ಕತರಳಿ ಗ್ರಾಮ	138 139	ತರೀ ಜಮೀನ್	1—15 1— 0 2—15	8—0—0 5—8—0 13—8—0		ಜಮೀನ್ ಬಳಿ 1896ನೇ ಇಸವಿ ಅಕ್ಟೋಬರ್ 30ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್‌ದಾರ್ ಅಥವಾ ಫ್ರೀಹೋಲ್ಡ್ಸ್ ಸಬ್ ಡಿವಿಜನ್ ಆಫೀಸರವರು.	

MHB

ಇದರಿಂದ ತಿಳಿಯಪಡಿಸುವದೇನಂದರೆ,— ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡಿಯಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಕೈದಾದ ಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜು ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿಕಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈದು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ, ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಯೆ ಸಾಗುವಳೀ ಚೀಟಿ ಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್‌ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರು.	ಖಾಬು ಖುಷ್ಕಿ, ತರೀ, ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ. ಕೂಡಿದ ಪಟ್ಟಿಗೂ ಕರಾರ್ವಾಕಾ ತಪ್ಸೀಲ್.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕಲ್ಪನ್ನವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ಕಡಹಂವಿಗೆ.	12	ತರೀ ಜಮೀನ್.	2— 6	12—0—0		ಜಮೀನ್ಗಳ ಬಳಿ 1896ನೇ ಇಸವಿ ಅಕ್ಟೋಬರ್ 28ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೇ ತಾಲ್ಲೂಕು ಅಮಲ್ದಾರ್ ಅಥವಾ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.	
			13		2—10	12—0—0				
			100		2—9	2—0—0				
			101		1—18	6—0—0				
			102		1—38	8—8—0				
			103		2—5	12—0—0				
			104		2—10	13—0—0				
			105		2—23	15—0—0				
			106		2—11	13—0—0				
			107		2— 8	13—0—0				
			108		2—17	14—0—0				
			168		1—37	10—0—0				
			169		2— 0	11—0—0				
			'65		0—34	2-12—0				
			14							
					28—26	144—4—0				

ಇದರಿಂದ ತಿಳಿಯಪಡಿಸುವದೇನಂದರೆ,— ಲ್ಯಾಂಡ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇವರಡೀಲಿ ಕಂಡ ಜಮೀನ್ ಹಿಡವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಕೈದಾದಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ ಡೆಪ್ಯುಟಿಕಮ್ಮಿಷನರು ಆವಶ್ಯಕವಾದ ಸಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇಲೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿ ಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈದು ದಿವಸಗಳ ತರುವಾಯ ತಾಲ್ಲೂಕು ಅಮಲ್‌ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಯೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿಕಂಡ 2ನೇ ನಂಬರ ಫಾರಂ) ಸವಾಲ್‌ದಾರನು ಅಮಲ್ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್‌ದಾರು ಕೊಡುವ ಅಪ್ಪಣೆಯು ಲ್ಯಾಂಡ ರೆವಿನ್ಯೂಕೋಡ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ.					ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
			ಜಮೀನ್.				ವಾರಗಳು ಭಾವಿಗಳು ವಗ್ಯೆರೆ.			
			ಸರ್ವೆ ನಂಬರು.	ಬಾಬು ಖುಷ್ಕೀ, ತರೀ ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಕೂಡಿದ ಮಟ್ಟಿಗೂ ಕರಾರ್ವಾಕಾ ತಪ್ಸೀಲ್.			
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ಅನಗುಳ.	107	ತರೀ ಜಮೀನ್.	2— 9	12— 0—0		ಜಮೀನ್‌ಗಳ ಬಳಿ 1896ನೇ ಇಸವಿ ಅಕ್ಟೋಬರ್ 29—30ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್‌ದಾರು ಅಥವಾ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.	
			108		2—15	12— 0—0				
			109		1—32	9— 8—0				
			110		2—15	13— 0—0				
			111		2— 4	10— 0—0				
			112		1—19	8— 8—0				
			113		2—18	10— 0—0				
			114		2— 8	9— 8—0				
			115		1—17	7— 8—0				
			116		1—22	7— 8—0				
			117		2— 4	11— 0—0				
			118		2—12	12— 0—0				
			119		1—33	10— 0—0				
			120		0—32	4— 0—0				
			121		2— 3	12— 0—0				

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೆ ನಂಬರ್.	ಖಾಬು ಖುಷ್ಕಿ, ತರೀ, ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ. ಕೂಡಿದ ಮಟ್ಟಿಗೂ ಕರಾರ್ವಾಕಾ ತಪ್ಸೀಲ್.	ಹರಾಜ್ ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6	7	8	9	10	11
ಕೃಷ್ಣರಾಜಪೇಟೆ.	ಕಿಕ್ಕೇರಿ.	ಅನಗುಳ.	122	ತರಿ ಜಮೀನ್	1—27	9—0—0		ಜಮೀನ್ಗಳ ಬಳಿ 1896ನೇ ಇಸವಿ ಅಕ್ಟೋಬರ್ 29—30ನೇ ದಿವಿ 11 ಘಂಟೆ.	ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರು ಅಥವಾ ಫ್ರೆಂಕ್‌ರಾಕ್ಸ್ ಸಬ್ ಡಿವಿಜನ್ ಆಫಿಸರವರು.	
			123		1—35	11—0—0				
			124		2— 9	13—0—0				
			125		1—34	10—0—0				
			203		2— 2	10—0—0				
			204		2— 8	11—0—0				
			205		2— 0	12—0—0				
			206		2— 1	12—0—0				
			207		2—13	13—0—0				
			208		2— 1	12—0—0				
			209		2—10	12—0—0				
			210		2— 9	13—0—0				
			211		1—34	11—0—0				
			212		1—28	9—8—0				
			213		1—13	7—8—0				
			214		2— 4	11—0—0				
			215		[illegible]— 8	13—0—0				
			216		1—27	9—8—0				
			217		1— 4	6—8—0				
			218		1— 6	6—8—0				
			219		2— 9	13—0—0				
			220		2—13	14—0—0				
			37		71—18	388—0—0				

ಪಿ. ಪಂಚನಾಥರಾವ್,
ಸಬ್ ಡಿವಿಜನ್ ಆಫಿಸರ್.

ಹಾಸನ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 17ನೇ ಸೆಪ್ಟಂಬರ್ 1896.

1896ನೇ ಇಸವಿ ಫೆಬ್ರುವರಿ ತಾರೀಖು 15ನೇ ರಾತ್ರೆ ಚಿಕ್ಕಬಳ್ಳಾಪುರದ ಸ್ಥಳದ ಹಾಲಿ ಚಿಲ್ಲರೆ ವ್ಯಾಪಾರ ಮಾಡಿಕೊಂಡು ಸಕಲೇಶಪುರದಲ್ಲಿ ಇರುವ ತಿದ್ದಣ್ಣನ ಬಳಿಯಲ್ಲಿದ್ದ ಕೆಳಗೆ ನಮೂದಿಸಲ್ಪಟ್ಟು ಇರುವ ನೋಟುಗಳು ಹೋಗಿ ಇರುತ್ತೆ, ಇವುಗಳನ್ನ ಪತ್ತೆಮಾಡಿದವರಿಗೆ ಶೇಕಡಾ 10 ರೂಪಾಯಿನ ಮೇರಿಗೆ ಇನಾಂ ಕೊಡುತ್ತೇನೆಂದು ಪ್ರೊಪ್ರಿ ಇರುತ್ತಾನೆ.

ನೋಟಿನ ತಪ್ಸೀಲ್.

ನಂಬರ್.	ಸರ್ಕಲ್.	ಮೊಬಲಗು.
ಪಿ. 65—87486	ಮದ್ರಾಸ್	ನೂರು ರೂಪಾಯಿ
ಡಿಟೋ—87487	ಡಿಟೋ	ಡಿಟೋ
ಡಿಟೋ—87488	ಡಿಟೋ	ಡಿಟೋ
78163	ಡಿಟೋ	ಡಿಟೋ

ಎಸ್. ಅಮಿರ್‌ಹಸನ್,
ಸೂಪರಿಂಟೆಂಡೆಂಟ್ ಆಫ್ ಪೊಲೀಸ್.

451

ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮೈಸೂರ್ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 3ನೇ ಅಕ್ಟೋಬರ್ 1896.

ಮೈಸೂರು ಡಿಸ್ಟ್ರಿಕ್ಟ್ ಇದರಡಿ ಕಂಡ ಫಾರೆಸ್ಟುಗಳಿಂದ ಅವುಗಳ ಬಾಜುದಲ್ಲಿ ತೋರಿಸಲ್ಪಡುವ ಆಯಾ ಅಂಚೆಗಳಿಗೆ ಸ್ 1897ನೇ ಇಸವಿ ಜನವರಿ ತಾರೀಖು 15ರ ವಳಗಾಗಿ ವಣ ನಾಟೂ ಸಾಗಿಸುವದಕ್ಕೆ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಫಾರೆಸ್ಟ್.	ಅಂಚೆ.	ಲದ್ಯ ಮಾಡತಕ್ಕ ಮೊತ್ತ.	ಸರಾಸರಿ ಫಾಸಲೆ.
ಹೆಗ್ಗಡದೇವನಕೋಟೆ.	ಬೇಗೂರು ..	(1) ಗುಂಡ್ರೆ ..	2,000	
		(2) ಬೈರಿಗದ್ದೆ ..	4,000	
		(3) ವನಕೆಗುಂಡಿಮೂಳೆ ..	2,000	
	ಐನೂರುಮಾರಿಗುಡಿ ..	(1) ಕಲ್ಲುಕೆರೆ ..	4,000	
		(2) ವಾರಂಚಿ ..	2,000	
		(3) ಹಿಂಡುಸ್ತಾಲ್ ಕಟ್ಟೆ. ..	2,000	
	ಕಾಕನಕೋಟೆ ..	(1) ಆನೆಮೂಳೆ ..	2,000	
		(2) ತ್ಯಾಗದಮರದ ತಿಟ್ಟು ..	2,000	
		ಜುಮ್ಲಾ ..	20,000	

2. ತಮಾಂ ದರಖಾಸ್ತುಗಳೂ "ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಫಾರೆಸ್ಟುಗಳಿಂದ ಅಂಚೆಗಳಿಗೆ ಸಾಗಿಸುವದಕ್ಕೆ ಮಾತ್ರವೇ, ದರಖಾಸ್ತು" ಯೆಂಬುವದಾಗಿ ಮೇಲ್‌ವಿಳಾಸ ಬರದು ಮೊಹರುಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಫಾರೆಸ್ಟಿಗೂ 50 ರೂಪಾಯಿ ಬೆಲೆಯುಳ್ಳ ಕರ್ರೆನ್ಸೀನೋಟಾಗಲಿ, ಯಾ ಪ್ರೋನೋಟಾಗಲಿ ರವಾನಿಸಬೇಕು. ದರಖಾಸ್ತುಗಳು ಅಜಮಾಯಿಷಿಯಿಂದ ಮೇಲ್ಕಂಡ ಕರ್ರೆನ್ಸೀನೋಟುಗಳನ್ನ ವಾಪಸು ಮಾಡಲ್ಪಡುವವು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1896ನೇ ಇಸವಿ ಆಕ್ಟೋಬರು 31ನೇ ತಾರೀಖು ವರೆಗೆ ಅಂಗೀಕರಿಸಲ್ಪಡುವವು.

4. ದರಖಾಸ್ತುಮಾಡಲು ಇಷ್ಟವುಳ್ಳ ಕಂಟ್ರಾಕ್ಟುದಾರನು ಮೇಲ್ಕಂಡ ಫಾರೆಸ್ಟುಗಳ ಪೈಕಿ ವೊಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ, ತಯಾರಾದ್ದನ್ನ ಸಾಗಿಸುವದಕ್ಕೆ ಮಾತ್ರ ದರಖಾಸ್ತು ಮಾಡಿದ ಪಕ್ಷದಲ್ಲಿ ನಾಟುವನ್ನು ಪ್ರತಿ ವೊಂದು ಫಾರೆಸ್ಟಿನಿಂದಲೂ ಅಂಚೆಗಳಿಗೆ ಸಾಗಿಸುವದಕ್ಕೆ ಮಾತ್ರ, ವೊಪ್ಪಿಕೊಳ್ಳುವ, ಕಮ್ಮಿ ದರವನ್ನು ಬೇರೆ ಬೇರೆಯಾಗಿ ನಮೂದಿಸತಕ್ಕದ್ದು. ಸಲೆ ಅಡಿ 1ಕ್ಕೆ ಇಷ್ಟು ದರವೆಂತ ನಮೂದಿಸಬೇಕು.

5. ಸ್ 1897ನೇ ಇಸವಿ ಜನವರಿ 17ರ ವೊಳಗಾಗಿ ಮೇಲೆ ನಮೂದಿಸಿರುರ ಪೂರಾ ಮೊತ್ತವನ್ನು ಆಯಾಯ ಅಂಚೆಗಳಿಗೆ ಸಾಗಿಸಬೇಕು.

6. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡಮಕೊಳ್ಳುವ ಬಗ್ಯೆ ಜಾಮೀನ್ ತರೀಕ್ ಫಾರೆಸ್ಟ್ 1ಕ್ಕೆ 100 ರೂಪಾಯಿ ಪ್ರಕಾರ ಡಿಪಾಜಿಟ್ಟು ಕಟ್ಟತಕ್ಕದ್ದು. ಮೇಲ್ಕಂಡ ಷರತ್ತು ಮೇರೆ ನಡಿಯಲು ತಪ್ಪಿದಲ್ಲಿ ಠೇವಣೀ ಮೊಬಲಗನ್ನ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

7. ಬ್ಯಾಸಿಗೆ ಕಾಲದಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಮಾಡಲ್ಪಡುವ ಕಾಯಿದೆ ಕಾನೂನ್‌ಗಳಂತೆ ನಡಿಯಲು ಕಂಟ್ರಾಕ್ಟುದಾರನು ಬದ್ಧನಾಗಿರುವನು.

8. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಕಮ್ಮಿದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

9. ಸಾಮಾನುಗಳು ಸಾಗಿಸುವದಕ್ಕೆ ಗಾಡಿ, ರಸ್ತೆ ವಗೈರೇ ದಾರಿಗಳನ್ನು ಮಾಡಿಕೊಡಲು ಸರ್ಕಾರದವರು ಬದ್ಧರಾಗಿಲ್ಲವಾದ ಸಬಬು ವುದ್ದೇಸಿಸುವ ಕಂಟ್ರಾಕ್ಟುದಾರನೇ ಆತನ ಹಾತಲಾಗವಡಿನಿಂದ ತಕ್ಕ ಯೇರ್ಪಾಡುಗಳು ಮಾಡಿಕೊಳ್ಳತಕ್ಕದ್ದು. ಮರಗಳನ್ನು ಸಾಗಿಸದೆ, ಇರುದಪಕ್ಷ ಯಾವ ಸಬಬುಗಳನ್ನೂ ಅಂಗೀಕರಿಸಲಾರೆವು.

10. ವುದ್ದೇಸಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿನಲ್ಲಿ ವಿಚಾರಿಸಿ ತೆಗದುಕೊಳ್ಳಬಹುದು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ.

ಮೈಸೂರ ಗೆಜೆಟ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಿಷ ಮಾಹೇ ಯಾ ಕ್ವಾರ್ಟರಿಗೆ	ದಾಮಾಷಾಯಿ ಪ್ರಕಾರ ದರಗಳು			
ಚಾಲ್ತಿ ವರುಷದ ಗೆಜಿಟ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜಿಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮಕ್ಕಾಂ 155ನೇ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜಿಟ ಮೈಸೂರು ಶೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾಗಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ 21ನೇ ಮಕ್ಕಾಂ 24205—6—ಜಿ. 6200ನೇ ನಂಬರ ಗವರ್ನಮೆಂಟ ಆರ್ಡರ ಅನುಸರಿಸಿ ಮೇಲ್ಕಂಡ ರಿಯಾಯತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

ಸಿವಿಲ ಕೋರ್ಟಿನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಗೆ ನೋಟಿಸಗಳು:—		
ಮೊದಲನೇ ದಫಾ ಛಾಯಿಸ್ಪ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4
ಸಿವಿಲ ಪ್ರೊಸಿಡ್ಯೂರ ಕೋಡಿನ್ನ 347ನೇ ಸೆಕ್ಷನ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8
ಸಿವಿಲ ಪ್ರೊಸಿಡ್ಯೂರ ಕೋಡಿನ 354ನೇ ಸೆಕ್ಷನಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ ಚಾರ್ಜು ಪ್ರಕಟಿಸಲ್ಪಡುತವೆ.		
ಡ್ಯೂಪ್ಲಿಕೇಟ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ „ ..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳಪ್ರಕಾರ ಚಾರ್ಜು ಮಾಡಲ್ಪಡುತ್ತೆ:—		
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	0	4

ಷರಾ.—ಚಂದಾ ವಗೈರೇ ಬಗ್ಗೆ ಪೋಸ್ಟೇಜ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ ಆರ್ಡರ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜಿಟ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜಿಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜಿಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜಿಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಯಿಲ್ಲ.

ಸಿ. ರಾಘವಾಚಾರ್ಲು,
ಮೈಸೂರ ಗೆಜೆಟ ಕಂಪೈಲರ.

Mysore Govt. Central Press, Bangalore.—1896.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 41.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 15, ಸನ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.— ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ॥ 23ನೇ ಸೆಪ್ಟಂಬರ್ 1896.

ನಂ. 4126.—ಲೋ. ಫಂ. 65.—96, ಸನ್ 1894ನೇ ಇಸವಿಯ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಇದರಡಿ ಕಂಡ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಗುಂಡ್ಲುಪೇಟೆ ಟವನಿನಲ್ಲಿ ಕುರುಬರ ಬೀದೀ ಸಮೀಪ ವೊಂದು ರಸ್ತೆಯನ್ನು ವಿಸ್ತರಿಸುವ ಬಗ್ಯಾಗಿ ಬೇಕಾಗಿರುತ್ತೆ :—

ಡಿಸ್ಟ್ರಿಕ್ಟು—ಮೈಸೂರು
ತಾಲ್ಲೂಕು—ಗುಂಡ್ಲುಪೇಟೆ
ಹೋಬಳಿ—ಕಸಬಾ
ಗ್ರಾಮ—ಗುಂಡ್ಲುಪೇಟೆ ಟೌನ್

ಅನುಭವದಾರ—ಗಾಣಿಗರ ಪುಟ್ಟಶೆಟ್ಟಿ.
ಸರ್ವೇನಂ.—ಮುನಿಸಿಪಲ್ ಸರಹದ್ದಿನಲ್ಲಿರುವ ಜಮೀನ್.
ವಿಸ್ತೀರ್ಣ—ಪೂರ್ವ ಪಶ್ಚಿಮ 30 ಗಜಗಳು. ಉತ್ತರ ದಕ್ಷಿಣ—105 ಚದುರ ಗಜಗಳು. ಜೋಡಿ—ಇಲ್ಲ.

ಚಕ್ಕುಬಂದಿ—
ಉತ್ತರಕ್ಕೆ—ಕುರುಬರಕೇರೆ ರಸ್ತೆ
ದಕ್ಷಿಣಕ್ಕೆ—ನೀಲಗಿರೀ ರಸ್ತೆ
ಪಶ್ಚಿಮಕ್ಕೆ—ದೊಡ್ಡಮಾದಶೆಟ್ಟಿ ಮನೆ
ಪೂರ್ವಕ್ಕೆ—ಮಾದಶೆಟ್ಟರ ಅಂಗಡಿ, ಭಾವಿ ವಗೈರೆ

ತಾರೀಖು 29ನೇ ಸೆಪ್ಟಂಬರ್ 1896.

ನಂ. 4391.—ಜು. 475, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ತುಮಕೂರು ಡಿಸ್ಟ್ರಿಕ್ಟ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಸಿ. ಶೇಷಾದ್ರಯ್ಯಂಗಾರ್‌ಯವರು 1ನೇ ಕ್ಲಾಸಿನ ಮಾಜಿಸ್ಟ್ರೇಟರಾಗಿ ನೌಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 30ನೇ ಸೆಪ್ಟಂಬರ್ 1896.

ನಂ. 4509.—ಜು. 495, ಅಸಿಸ್ಟೆಂಟ್ ಗವರ್ನಮೆಂಟ್ ಅಡ್ವೊಕೇಟರ ಉದ್ಯೋಗವು ಮೌಕೂಫ್ ಮಾಡಲ್ಪಟ್ಟಿರುವದರಿಂದ, 1892ನೇ ಏಪ್ರಿಲ್ 29ನೇ ಮುಕ್ಕಾಂ 47ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಅಸಿಸ್ಟೆಂಟ್ ಗವರ್ನಮೆಂಟ್ ಅಡ್ವೊಕೇಟರಿಗೆ ಕ್ರಿಮಿನಲ್ ಅಪ್ಪೀಲ್‌ಗಳು ವಗೈರೆಗಳಲ್ಲಿ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 422 ವ 526ನೇ ಸೆಕ್ಷನ್‌ಗಳ ಮೇರೆ ಕೊಡಲ್ಪಡಬೇಕಾದ ದರೋಬಸ್ತು ನೋಟಿಸುಗಳೂ ಈ ಲಾಗಾಯತು ಮೈಸೂರ್ ಗವರ್ನಮೆಂಟ್ ಅಡ್ವೊಕೇಟರವರಿಗೆ ಕೊಡಲ್ಪಡತಕ್ಕದ್ದೆಂದು ಗವರ್ನ ಮೆಂಟಿನವರು ಅಪ್ಪಣೆ ಕೊಡುತ್ತಾರೆ.

ತಾರೀಖು 10ನೇ ಸೆಪ್ಟಂಬರ್ 1896.

ನಂ. 2816.—ರೆ. 1019, ಸರ್ 1890ನೇ ಜುಲೈ 22ನೇ ಮುಕ್ಕಾಂ 150ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಘಾಯಿಷ್ ಮಾಡಲ್ಪಟ್ಟ ಲ್ಯಾಂಡ್ ರೆವಿನ್ಯೂ ಕೋಡಿನ ರೂಲುಗಳ XXX A.ನೇ ರೂಲಿನಂತೆ ಈ ಕೆಳಗೆ ಕಂಡದ್ದನ್ನು ಓದತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

"XXX A. (ಲ್ಯಾಂಡ್ ರೆವಿನ್ಯೂ ಕೋಡಿನ 135ನೇ ಸೆಕ್ಷನ್.) ಕಟ್ಟಡ ನಿವೇಶನಗಳನ್ನ ಕೊಡುವ ವಿಷಯದಲ್ಲಿ ಅಮಲ್‌ದಾರ್ರು ವ ಡೆಪ್ಯುಟಿ ಅಮಲ್‌ದಾರ್ರುಗಳ ಅಧಿಕಾರಗಳು.

ಅಮಲ್‌ದಾರ್ರುಗಳು ವ ಡೆಪ್ಯುಟಿ ಅಮಲ್‌ದಾರ್ರುಗಳು ನಿವೇಶನಗಳ ಕ್ರಯಗಳನ್ನ ಸದರೀ ಮೊಬಲಗು 10 ರೂಪಾಯಿಗಳಿಗೆ ಮೀರದಿದ್ದರೆ ಅಪ್ಪೀಲ್ ಯಾ ಪುನರ್ವಿಮರ್ಶೆಗೆ ಒಳಪಟ್ಟು ಖಾಯಂ ಮಾಡಬಹುದು, ಪರಂತು ಬಹಿರಂಗವಾದ ಹರಾಜಿಗೆ ಬದಲಾಗಿ ಸರಕಾರ್ ಸವಾಲಿಗೆ ಕೊಡಬೇಕಾಗಿ ಉದ್ದೇಶಿಸಲ್ಪಟ್ಟ ನಿವೇಶನಗಳ ದರೋಬಸ್ತು ಸಂಗತಿಗಳೂ ಡೆಪ್ಯುಟಿ ಕಮ್ಮಿಷನರವರ ಹುಕುಂ ಬಗ್ಗ್ಯಾಗಿ ರಿಪೋರ್ಟು ಮಾಡಲ್ಪಡತಕ್ಕದ್ದು."

ತಾರೀಖು 11ನೇ ಆಗಸ್ಟ್ 1896.

ನಂ. 1618.—ಎಕ್ಸೈ. 64, ಸರ್ 1881ನೇ ಇಸವಿಯ XXIIನೇ ನಂಬರ್ ಎಕ್ಸೈಜ್ ಆಕ್ಟಿನ 55ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರಗಳ ದೆಸೆಯಿಂದ ಕಂಟ್ರಿ ಬೀರು ಅಂಗಡಿಗಳ ಮಾರಾಟದ ಬಗ್ಗ್ಯೂ ಮತ್ತು ಕಂಟ್ರಿ ಬೀರು ಯಾ ಪೋರ್ಟರು ಚಿಲ್ಲರೆಯಾಗಿ ಮಾರುವದಕ್ಕೆ ಲೈಸೆನ್ಸಿಗಾಗಿಯೂ ನೋಟಿಸಿನ ಈ ಕೆಳಗೆ ಕಂಡ ನಮೂನೆಯನ್ನ ಮೈಸೂರು ಗವರ್ನಮೆಂಟಿನವರು ವಿಧಿಸಿರುತ್ತಾರೆ:—

ನೇ ವರುಷಕ್ಕಾಗಿ ಲ್ಲಿ ಇರತಕ್ಕ ಕಂಟ್ರಿ ಬೀರು ಅಂಗಡಿಗಳ ಹರಾಜು ನೋಟೀಸ್.

1. ಇದರಿಂದ ಪ್ರಸಿದ್ಧ ಪಡಿಸುಹದೇನಂದರೆ,—ಇದಕ್ಕೆ ಜಂಟಿಸಲ್ಪಟ್ಟ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮೂರು ಅಂಗಡಿಗಳ ಪ್ರತಿ ಒಂದರಲ್ಲೂ ಕಂಟ್ರಿ ಬೀರು ಯಾ ಪೋರ್ಟರು 189 ನೇ ಜುಲೈ 1ನೇ ತಾರೀಖಿನಿಂದ ಪ್ರಾರಂಭಿಸಿ 189 ನೇ ಜೂನ್ 30ನೇ ತಾರೀಖಿಗೆ ಆಖೈರಾಗುವ ಹನ್ನೆರಡು ತಿಂಗಳುಗಳ ಕಾಲಕ್ಕಾಗಿ ಬಿಕರಿ ಮಾಡತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನು ಡಿಸ್ಟ್ರಿಕ್ಟು ಆಫಿಸಿನಲ್ಲಿ ನೇ ತಾರೀಖಿನಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಂದ ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರಿಂದ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಸವಾಲು ಮಾಡುವದಕ್ಕೆ ಪೂರ್ವ 50 ರೂಪಾಯಿ ಯಾ ಹರಾಜು ನಡಿಸತಕ್ಕ ಆಫಿಸರರಿಂದ ಗೊತ್ತುಮಾಡಲ್ಪಡಬಹುದಾದ ಇತರ ನ್ಯಾಯವಾದ ಮೊಬಲಗು ಠೇವಣಾತಿ ಇಡತಕ್ಕದ್ದು. ಪ್ರತಿ ಅಂಗಡಿಯೂ ಅಂಗೀಕರಿಸಲ್ಪಟ್ಟ ಚಡದರಖಾಸ್ತುದಾರರಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ತೋರಿಸದೆ ಮಂಜೂರು ಯಾ ತಳ್ಳಿಪಡಿಮಾಡಲು ಸ್ವಾತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿಯಾಗಲಿ ಯಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದಿರುವ ಮುಖ್ತಾಲೀಕರಾಗಲಿ ಹಾಜರಾಗಬೇಕು.

3. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ಮೇರೆ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸ್ ಮಾಡಲ್ಪಡುವವು. ಹರಾಜು ನಡೆಯುವ ಕಾಲದಲ್ಲಿ ಪ್ರತಿ ಅಂಗಡಿಗಾಗಿ ಯಾರ ಸವಾಲ ಅಂಗೀಕರಿಸಲ್ಪಡುತ್ತೋ ಅವರು ತಕ್ಷಣವೇ ಆ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣಿ ಇಡಬೇಕು. ಹಾಗೆ ಇಡಲಿಕ್ಕೆ ತಪ್ಪಿದಲ್ಲಿ 2ನೇ ಪ್ಯಾರಾ ಅನುಸರಿಸಿ ಆತನಿಂದ ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟು ಸದರೀ ಅಂಗಡಿಯು ಪುನಃ ಮೇಲೆ ಕಂಡ ಷರತ್ತುಗಳಿಗೆ ಒಳಪಟ್ಟು ತಕ್ಷಣವೇ ಹರಾಜಾಗುವದಲ್ಲದೆ ಆತನು ಪುನಃ ಈ ಅಂಗಡಿಗಾಗಲಿ ಅಥವಾ ಇತರ ಯಾವ ಅಂಗಡಿಗಾಗಲಿ ಸವಾಲ್ ಮಾಡಕೂಡದು.

4. ಯಾರ ಹೆಸರಿಗೆ ಸದರೀ ಅಂಗಡಿಗಳು ಹರಾಜಿನಲ್ಲಿ ನಿಲ್ಲಲ್ಪಡುತ್ತೋ ಮತ್ತು 2 ವ 3ನೇ ಪ್ಯಾರಾಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜಿನ ತಾರೀಖು ಲಾಗಾಯತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟ ಪ್ರತಿ ಅಂಗಡಿಯ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಶೇರಿಸಬೇಕಾಗಿರುತ್ತೋ ಅಷ್ಟು ಹೆಚ್ಚೀ ಮೊಬಲಗನ್ನು ಠೇವಣಿ ಕಟ್ಟಿ ಇದಕ್ಕೆ ಜಂಟಿಸಿರುವ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸನ್ನ ಪಡೆಯತಕ್ಕದ್ದು. ಮತ್ತು ಒಂದು ಎದುರು ಒಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಈ ರೀತಿಲಿ ಠೇವಣಿ ಇಡುವದಕ್ಕ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆ ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್‌ದಾರಿ ಮೇಲ ಮರಳಿ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರನಲ್ಲಿ ಕಂಡ ಹರಾಜು ಮೊದಲೇ ಪೂರೈಸಿದ್ದ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ತರುವಾಯ ಕೊಂಡುಕೊಂಡವನು ಮೃತಪಟ್ಟರೆ ಜವಾಬ್‌ದಾರಿಯು ಆತನ ವಾರಸ್ದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

5. ಮೇಲಿನ ನಾಲ್ಕನೇ ಪ್ಯಾರಾ ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರಿ ಮೇಲೆ ನಡಿಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ, ಮತ್ತು ದುಸರಾ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜು ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರಾ ಹರಾಜಿನಲ್ಲಿ ಖಡಸವಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತ ಬಾಕಿ ಉಳಿಯುವದರನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರಾ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಂಡಿರುವ ಠೇವಣಿ ಮೊಬಲಗು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜವಿರ್ಹಾ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು. ಆದರೆ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಠೇವಣಿ ಮೊಬಲಗು ದುಸರಾ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಅಂಥಾ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೇನೇ ಜಮಾ ಮಾಡಿಕೊಳ್ಳಲ್ಪಡುವದು.

6. ಮೇಲಿನ 4ನೇ ಪ್ಯಾರಾ ಅನುಸರಿಸಿ ಪಡೆಯಬೇಕಾದ ಲೈಸೆನ್ಸ್ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಮೆಸ್ಸರ್ಸ್ ಲೀಷ್‌ಮ್ಯಾನ್ ಅಂಡ್ ಕೋ ಯವರಿಂದಲೂ ಅಥವಾ ಕಿರ್ಕಿಯಲ್ಲಿ ಮೆಸ್ಸರ್ಸ್ ಮಾರ್ಕಿ ಅಂಡ್ ಕೋ ಯವರಿಂದಲೂ ಕಾಯಿಸಲ್ಪಟ್ಟ ಕಂಟ್ರಿ ಬೀರು ಯಾ ಪೋರ್ಟರು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ತಾಲ್ಲೂಕು ಖಜಾನೆಗೆ 189ನೇ ಜುಲೈ ಲಾಗಾಯತು ಪ್ರಾರಂಭಿಸಿ ಸರಿಯಾದ ತಿಂಗಳು ಗಟ್ಲೆ ಖಿಸ್ತುಗಳ ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿ ಒಂದು ಖಿಸ್ತು ಅದು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗಾಗಿ ಭಾವಿಸಲ್ಪಡತಕ್ಕದ್ದು. ಪ್ರತಿ ಒಂದು ತಿಂಗಳ ಗುತ್ತಿಗೆ ಮೊಬಲಗೂ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಪಾವತಿ ಮಾಡತಕ್ಕದ್ದು. ಲೈಸೆನ್ಸ್‌ದಾರನಿಂದ ಠೇವಣಿ ಇಟ್ಟಿರುವ ಎರಡು ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯು ಕಡೇ ಎರಡು ತಿಂಗಳಿಗಾಗಿ ಕೊಡತಕ್ಕ ಗುತ್ತಿಗೆ ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡತಕ್ಕದ್ದು. ಸದರೀ ತಿಂಗಳ 20ನೇ ತಾರೀಖಿನೊಳಗಾಗಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜವಿರ್ಹಾ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳನುಸರಿಸಿ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡೀನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಗುತ್ತಿಗೆ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ಯಾ ವಜಾ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(3) ಲೈಸೆನ್ಸ್‌ದಾರನು ಆತನಿಂದ ಕೊಂಡಕೊಳ್ಳಲ್ಪಟ್ಟ ಕಂಟ್ರಿ ಬೀರು ಯಾ ಪೋರ್ಟರ ಪ್ರತಿ ಗ್ಯಾಲನಿಗೂ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(4) ಲೈಸೆನ್ಸ್‌ದಾರನಿಂದ ಕೊಂಡುಕೊಂಡು ಕಳುಹಿಸತಕ್ಕ ಕಂಟ್ರಿ ಬೀರು ಯಾ ಪೋರ್ಟರು ಬ್ರೂಯರಿಯಿಂದ ತಾಲ್ಲೂಕು ಅಮಲ್‌ದಾರ್ರಿಗೆ ಸೀದಾ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯು ಇಮ್ಮಡಿಯಾಗಿರತಕ್ಕದ್ದು, ಅಸಲ್ ಪ್ರತಿಯು ತಾಲ್ಲೂಕು ಅಮಲ್‌ದಾರ್ರಿಗೂ ಮತ್ತು ಎರಡನೇ ಪ್ರತಿಯು ಎಕ್ಸೈಜ್ ಕಮಿಷನರಿಗೂ ಕಳುಹಿಸತಕ್ಕದ್ದು. ಮೇಲೆ ನಮೂದಿಸಲ್ಪಟ್ಟ ದರದ ಮೇರಿಗೆ ಹಾಸಲ್ ಮೊಬಲಗು ಗೊತ್ತಾದ ಚಲನಿನಲ್ಲಿ ಲೈಸೆನ್ಸ್‌ದಾರನಿಂದ ಪಾವತಿ ಆದ ನಂತರ ಅಮಲ್‌ದಾರ್ರು ಸರಕನ್ನು ಲೈಸೆನ್ಸ್‌ದಾರನು ತನ್ನ ಅಂಗಡಿಗೆ ಸಾಗಿಸಲು ತಮ್ಮಿಂದ ಯಾ ಈ ವಿಷಯದಲ್ಲಿ ಅವರಿಂದ ಅಧಿಕಾರ ಪಡೆದ ಇತರ ಆಫಿಸರರಿಂದ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(5) ಲ್ಲಿರತಕ್ಕ ಪ್ರತಿ ಅಂಗಡಿಯ ಲೈಸೆನ್ಸ್‌ದಾರನೂ ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ತನ್ನ ಅಂಗಡಿಯ ಲೈಸೆನ್ಸಿನ ಕಾಲಕ್ಕಾಗಿ ವರುಷ ಒಂದಕ್ಕೆ 180 ರೂಪಾಯಿನ ದರದ ಮೇರಿಗೆ ಅಡ್ವಾನ್ಸಾಗಿ ರಿಜಿಸ್ಟ್ರೇಷನ್ ಫೀಯನ್ನು ಕೊಡತಕ್ಕದ್ದು.

(6) ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು, ಮತ್ತು ಲೆಖ್ಖಗಳು, ಬೀರು ಯಾ ಪೋರ್ಟರು ಸಾಗಿಸುವ ಬಗ್ಯೆ ಬೇಕಾದ ರಹದಾರಿಗಳು ಅಥವಾ ಪ್ಯಾಸುಗಳು ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(7) ಲೈಸೆನ್ಸ್‌ದಾರನು 189 ನೇ ಜುಲೈ 1ನೇ ಮುಕ್ಕಾಮಿನಲ್ಲಿ ಸದರೀ ಅಂಗಡಿಯಲ್ಲಿ ಶಿಲ್ಕಿನಲ್ಲಿ ಉಳಿಯಬಹುದಾದ ಬಿಟ್ಟು ಹೋಗುವ ಲೈಸೆನ್ಸ್‌ದಾರನಿಗೆ ಶೇರಿದ ಅಂಥಾ ಬೀರು ಯಾ ಪೋರ್ಟರನ್ನ ಎಕ್ಸೈಜ್ ಕಮಿಷನರವರಿಂದ ನಿಷ್ಕರ್ಷಿಸಲ್ಪಡಬಹುದಾದ ಲಾಗವಡು ಸದರೀಯವನಿಗೆ ಕೊಟ್ಟು ತೆಗದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

(8) ಲೈಸೆನ್ಸ್‌ದಾರನು ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡಬಹುದಾದ ನಿಬಂಧನೆಗಳ ಮೇರೆ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(9) ಬಾಕಿ ಕರಾರುಗಳು ವ ಷರತ್ತುಗಳು ಇದಕ್ಕೆ ಲಗತ್ತಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸ್‌ದಾರನಾಗಲಿ ಯಾ ಆತನ ತಿಳುವಳಿಕೆ ವ ಸಮ್ಮತಿಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ಅಥವಾ ಲೈಸೆನ್ಸ್‌ದಾರನು ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಿಗಿಸಿದ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರು ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಉಲ್ಲಂಘನ ಯಾ ಅಶ್ರದ್ಧೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಮತ್ತು ಲೈಸೆನ್ಸನ್ನ ರದ್ದುಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಃ ಹರಾಜು ಮಾಡಲಿಕ್ಕೂ ಮೊಖ್ತ್ಯಾರಾಗಿರತಕ್ಕದ್ದು. ಇದರಿಂದುಂಟಾಗುವ ಎಲ್ಲಾ ನಷ್ಟವನ್ನೂ ಲೈಸೆನ್ಸ್‌ದಾರನು 1‑9 ನೇ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವವರ ದೆಸೆಯಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಆತನಿಂದ ಭರ್ತೀ ಮಾಡಲ್ಪಡತಕ್ಕದ್ದು. ಗುತ್ತಿಗೆಯು ರದ್ದುಮಾಡಲ್ಪಟ್ಟಲ್ಲಿ ಪೂರಾ ಕಾಲದ ಗುತ್ತಿಗೆ ಮೊಬಲಗು ತಕ್ಷಣ ಪಾವತಿ ಮಾಡತಕ್ಕದ್ದು, ಮತ್ತು ಅಂಥಾ ಮೊಬಲಗು ಜವಿರ್ಹಾ ಕಂದಾಯದ ಬಾಕಿಗಳಂತೆ ಎಲ್ಲಾ ನಷ್ಟಗಳ ಸಹಿತ ವಸೂಲ್ಮಾಡಲ್ಪಡತಕ್ಕದ್ದು.

8. ಮೇಲಿನ ಹಿಂದಿನ ಷರತ್ತಿನಲ್ಲಿ ವಿಧಿಸಲ್ಪಟ್ಟ ದಂಡನೆಗಳು ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೆ ಯಾ ರೂಲುಗಳಿಗೆ ವಿರೋಧವಾಗಿ ಮಾಡಲ್ಪಟ್ಟ ಯಾವ ತಕ್ಸೀರಿಗೂ ಲೈಸೆನ್ಸ್‌ದಾರನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಷೆಡ್ಯೂಲ್,

ಸ್ಥಳದ ಹೆಸರು.	ಅಂಗಡಿಯ ಸೀರಿಯಲ್ ನಂಬರ್.	ಅಂಗಡಿ ಇರುವ ಸ್ಥಳ.		ಹಾಲೀ ಲೈಸೆನ್ಸ್ ದಾರರ ಹೆಸರುಗಳು.	ಖರ್ಚು.			ಗುತ್ತಿಗೆ.	ಷರಾ.
		ಡೋರ್ ನಂಬರ್.	ಸ್ಥಳ.				—ಯ 8 ತಿಂಗಳು.		
					ಪೀಪಾಯಿಗಳು	ಪೀಪಾಯಿಗಳು	ಪೀಪಾಯಿಗಳು	ರೂ.	

ಬೀರ್ ಲೈಸೆನ್ಸ್.

ಕಂಟ್ರಿ ಬೀರನ್ನು ಯಾ ಪೋರ್ಟರನ್ನು ಚಿಲ್ಲರೆಯಾಗಿ ಮಾರುವದಕ್ಕೆ ಲೈಸೆನ್ಸ್ (1881ನೇ ಇಸವಿಯ XXIIನೇ ನಂಬರ್ ಆಕ್ಟಿನ 12 ವ 13ನೇ ಸೆಕ್ಷನ್‌ಗಳನುಸರಿಸಿ ಕೊಡಲ್ಪಟ್ಟದ್ದು.)

1. ರಿಜಿಸ್ಟರ್ ನಂಬರ್.
2. ಲೈಸೆನ್ಸ್‌ದಾರನ ಹೆಸರು.
3. ಮಾರುವವನ ಹೆಸರು.
4. ಸ್ಥಳ.

ಕಂಟ್ರಿ ಬೀರ್ ಮತ್ತು ಪೋರ್ಟರನ್ನು ನಂಬರ ಅಂಗಡಿಯಲ್ಲಿ ಚಿಲ್ಲರೆಯಾಗಿ ಮಾರುವದಕ್ಕೋಸ್ಕರ ಗೆ ಈ ಕೆಳಗಿನ ಷರತ್ತುಗಳನುಸರಿಸಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಆದ ನಾವು ಇದರಿಂದ ಅಧಿಕಾರವನ್ನು ಕೊಡುತ್ತೇವೆ:—

I. ಈ ಲೈಸೆನ್ಸ್ ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ, ಮತ್ತು ಇದರಲ್ಲಿ ನಮೂದಿರತಕ್ಕವರು ಶಿವಾಯಿ ಮತ್ಯಾವ ಜನರೂ ಇದರ ಆಧಾರದ ಮೇಲೆ ಕಾರ್ಯಗಳನ್ನ ನಡಿಸಲಿಕ್ಕೆ ಅಧಿಕಾರವಿರುವದಿಲ್ಲ.

II. ದುಕಾನ್‌ದಾರನು ಲೈಸೆನ್ಸ್‌ದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗಿರುತ್ತಾನೆ, ಅವು ಯಾವವಂದರೆ.

III. ಅವನು ಬೀರ್ ಯಾ ಪೋರ್ಟರನ್ನು ಪೀಪಾಯಿ ಅಥವಾ ಬುಡ್ಡಿಯಿಂದಾಗಲಿ ಅಂಗಡಿಯಲ್ಲಿ ಅಥವಾ ಹೊರಗಡೆಯಲ್ಲಿ ಕುಡಿಯಲಿಕ್ಕೆ ಮಾರಬೇಕೇ ಹೊರ್ತು ಇತರ ಯಾವ ತರಹೇದ ಬೀರ್ ಯಾ ಪೋರ್ಟರನ್ನಾಗಲಿ ಮಾರಕೂಡದು, ಮತ್ತು ಅಂಗಡಿಯ ಹೊರಗಡೆ ಕುಡಿಯಲಿಕ್ಕೆ ಮಾರುವ ಸಂದರ್ಭದಲ್ಲಿ ಯಕ್ಸೈಜ್ ಇಲಾಖೆಯವರಿಂದ ಕೊಡಲ್ಪಡುವ ರಹದಾರಿಗಳ ಆಧಾರದ ಮೇಲೆ ಮಾರತಕ್ಕದ್ದಲ್ಲದೆ ಸದರೀ ರಹದಾರಿಯಲ್ಲಿನ ಷರತ್ತುಗಳಂತೆ ಮಾರುವವನೂ ಮತ್ತು ಕೊಂಡುಕೊಳ್ಳುವನೂ ಈ ಉಭಯತ್ರರೂ ಖಂಡಿತವಾಗಿ ನಡೆದುಕೊಳ್ಳಬೇಕು. ಅಂಥಾ ರಹದಾರಿಗಳ ಆಧಾರದಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಎರಡು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ಎಂಟು ಸೇರುಗಳಿಗಿಂತ ಹೆಚ್ಚಾಗಿರಕೂಡದು.

IV. ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಬೀರು ಯಾ ಪೋರ್ಟರು ಯಷ್ಟು ಮಟ್ಟಿಗಾದರೂ ಯಾವ ಯೂರೋಪಿಯನ್ ಅಥವಾ ನಾನ್ ಕಮಿಷನೆಡ್ ಆಫಿಸರಿಗಾದರೂ ಯಾ ಪ್ರೈವೇಟ್ ಸೋಲ್ಜರಿಗಾದರೂ ಅಥವಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಯಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅಥವಾ ಕೊಡಲೂ ಕೂಡದು, ಅವನು, ಅವಳು ಯಾ ಅವರುಗಳಿಗೆ ತನ್ನ ಅಂಗಡಿಯಲ್ಲಿ ಅಥವಾ ಅಂಗಡಿಯ ಆವರಣದಲ್ಲಿ ಬೀರು ಯಾ ಪೋರ್ಟರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿ ಯಾ ಅದಕ್ಕೆ ಸೇರಿದ ಆವರಣದಲ್ಲಿ ಜನಗಳು ಕುಡಿದು ನಿಷಾಹತ್ತಿ ಬೀಳುವಂತೆ ಯಾ ಅವರು ಅಕ್ರಮವಾಗಿ ನಡಿಯುವಂತೆ ಅವಕಾಶ ಕೊಡಕೂಡದು, ಮತ್ತು ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆ ಮಾಡಕೂಡದು. ವ್ಯಭಿಚಾರಿಗಳನ್ನಾಗಲಿ ಯಾ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ತಿಳಿದು ತನ್ನ ಅಂಗಡಿಗೆ ಬರುವಂತೆ ಯಾದರೂ ಅಥವಾ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಿಗಾದರೂ ಯಾ ಇತರರಿಗಾದರೂ ಅವರುಗಳು ಫರಾರಿಯಾದವರೆಂದು ತಿಳಿದು ಅಥವಾ ಅಂತವರೆಂದು ನಂಬುವದಕ್ಕೆ ಕಾರಣವಿದ್ದೂ ಅಂತವರಿಗೆ ತನ್ನ ಅಂಗಡಿಯಲ್ಲಿ ಮನಃಪೂರ್ತಿಯಾಗಿ ಸ್ಥಳ ಕೊಡಲೂ ಕೂಡದು ಯಾ ಛಪಾಯಿಸಿ ಇಡಲೂ ಕೂಡದು. ಗುಮಾನೀ ನಡತೆಗಳುಳ್ಳ ಜನಗಳ ವಿಷಯಕವಾದ ವರ್ತಮಾನವನ್ನ ಮಾಜಿಸ್ಟ್ರೇಟರಿಗೆ ಯಾ ಪೋಲೀಸ್ ಆಫಿಸರರಿಗೆ ತಿಳಿಸಬೇಕು, ಮತ್ತು ಉದ್ಯೋಗದ ಮೇಲಿರುವಾಗ ಯಾವ ಪೋಲೀಸ್ ಆಫಿಸರರಿಗಾಗಲಿ, ರೈಲ್ವೆ ನೌಕರನಿಗಾಗಲಿ ಯಾ ಯಕ್ಸೈಜ್ ಆಫಿಸರರಿಗಾಗಲಿ ಬೀರು ಯಾ ಪೋರ್ಟರನ್ನು ಮಾರಲೂ ಕೂಡದು ಅಥವಾ ಕೊಡಲೂ ಕೂಡದು.

V. ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ವೊಂದು ಹಲಿಗೇಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರು ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರು ಸಹ ವ್ಯಕ್ತವಾಗಿ ಬರಸಿ ಇಡಬೇಕು.

VI. ಅವನು ಯಾವ ಪದಾರ್ಥಗಳನ್ನಾಗಲಿ ಬದಲಿಯಾಗಿಯಾದರೂ ಯಾ ಅಡಮಾನವಾಗಿಯಾದರೂ ತೆಗದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ವೊಂದಕ್ಕೆ ವೊಂದು ರೂಪಾಯಿನ ಲಾಗಾಯತು ವೊಂದು ರೂಪಾಯಿ ನಾಲ್ಕಾಣೇ ವರಿವಿಗೂ ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರವೂ ನಗದಾಗಿ ಹಣ ತೆಗೆದುಕೊಳ್ಳಬೇಕು.

VII. ಈ ಲೈಸೆನ್ಸ್ ಪ್ರಕಾರ ಮಾರುವ ಬೀರು ವ ಪೋರ್ಟರು ವೊಂದು ಹಾಗ್ಸ್ ಹೆಡ್‌ಯಾನೆ ಪೀಪಾಯಿಗೆ ಮಾಲ್ಟ್ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಸೇಕಡಾ 75ರಷ್ಟನ್ನೂ ಮತ್ತು ಕೆಂಟು ದೇಶದಲ್ಲಿ ಬೆಳದಂಥಾ ವಳ್ಳೇದಾಗಿರುವ 3 ಪೌಂಡ್ಸ್ ಹಾಪ್ಸ್ ಎಂಬ ಹುವ್ವುಗಳನ್ನೂ ಸೇರಿಸಬೇಕು, ಮತ್ತು ಮೇಲ್ಕಂಡ ಬೀರು ವ ಪೋರ್ಟರು ಭಟ್ಟೀ ಇಳಿಸತಕ್ಕವರಿಂದ ಖರೀದಿಗೆ ತಂದ ಹಾಗೆ ನೀರು ಬೆರಸದೆ ಯಾ ಇತರ ಪದಾರ್ಥ ಮಿಶ್ರಪಡಿಸಿ ಕೆಡಿಸದೆ ಅದೇ ತರಹೇದ್ದಾಗಿ ಮತ್ತು ಮಂದವಾಗಿರಬೇಕು. ಇಂಥಾ ಬೀರು ವ ಪೋರ್ಟರಿನ ಮಾದರಿಗಳು ಯಕ್ಸೈಜ್ ಇಲಾಖೆಯವರಿಂದ ಅಪೇಕ್ಷಿಸಿದಾಗ ತನಖಿ ಮತ್ತು ಆಜಮಾಯಿಷಿ ಮಾಡುವ ಬಗ್ಯಾಗಿ ಭಟ್ಟೀ ಕಾರಖಾನೆಯಿಂದ ಶೀಸೆಯಲ್ಲಿ ಕಳುಹಿಸಲ್ಪಡತಕ್ಕದ್ದು.

VIII. ಸ್ಥಳಿಕ ಅಧಿಕಾರವುಳ್ಳ ಯಾವ ಮಾಜಿಸ್ಟ್ರೇಟ್ರಾಗಲಿ ಅಥವಾ ಮಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಯಾ ಯಾವ ಆಬ್‌ಕಾರಿ ಯಾ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಾದರೂ ಅಂಗಡಿಯೊಳಗೆ ಪ್ರವೇಶ ಮಾಡಿ ಸದರೀ ಆವರಣದಲ್ಲಿರುವ ಬೀರು ಯಾ ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸದಾರನಿಂದಲೂ ವ ಮಾರುವವನಿಂದಲೂ ಇಡಲ್ಪಡಬೇಕಾದ ಅಂಗಡಿ ಲೆಖ್ಖಗಳನ್ನು ತನಿಖೀ ಮಾಡಲಿಕ್ಕೆ ಹಾಜರ್ಮಾಡಬೇಕು. ಅಂಥಾ ಲೆಖ್ಖಗಳು ಸಾಫಾ ಮತ್ತು ಕರಾರುವಾಕಾ ಆಗಿರಬೇಕಲ್ಲದೆ ವಿಧಾಯುಕವಾಗಿರುವ ನಮೂನೆಗಳಲ್ಲಿ ರೋಜೀನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರೂ ನಾಶಪಡಿಸತಕ್ಕದ್ದು.

IX. ಸದರೀ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು, ಮತ್ತು ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ ಮೇಲೆ ಹೊರ್ತು ಬೆಳಿಗ್ಯೆ 6 ಘಂಟೆಗೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

X. ಕಮ್ಮಿಸ್ಸರಿಯಾಟ್ ಇಲಾಖೆಗಾಗಿ ತರಲ್ಪಟ್ಟು ಮತ್ತು ಮಿಲಿಟೆರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಯಾವ ಕಾರಣದಿಂದಲೂ ಅಂಗಡಿಯಲ್ಲಿ ಮಾರಲಿಕ್ಕೆ ಕಳುಹಿಸಲ್ಪಡಕೂಡದು.

XI. ಸದರೀ ಅಂಗಡಿಗೆ ಒಂದೇ ಬಾಗಲಿರಬೇಕು, ಮತ್ತು ಸದರೀ ಕಟ್ಟಡದ ಹಿಂಭಾಗದಲ್ಲಾದರೂ ಯಾ ಕೊನೇ ಭಾಗಗಳಲ್ಲಾದರೂ ಕಿಟಕಿ ಇಡಕೂಡದು. ಮದ್ಯ ಮಾರುವ ಜಗಲಿಯು ಅಂಗಡಿಯೊಳಗೆ ಇರುವ ಜನಗಳು ಅಂಗಡಿ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆದುರಾಗಿರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

XII. ಮೇಲಿನ ಷರತ್ತುಗಳು ಮತ್ತು ನಿಬಂಧನೆಗಳ ಪೈಕಿ ಯಾವದನ್ನಾದರೂ ತಪ್ಪಿ ನಡದರೆ ಲೈಸೆನ್ಸದಾರನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಆಪಾದಿಸಲ್ಪಟ್ಟ ಮೇಲೆ 1881ನೇ ಇಸವಿಯ XXIIನೇ ನಂಬರ್ ಆಕ್ಟು ಅನುಸರಿಸಿ ಜುರ್ಮಾನೆ ತೆರಲಿಕ್ಕೂ ಅಥವಾ ಸದರೀ ಆಕ್ಟಿನ 13ನೇ ಸೆಕ್ಷನ್ ಅನುಸರಿಸಿ ಲೈಸೆನ್ಸನ್ನ ಕಳೆದುಕೊಳ್ಳಲಿಕ್ಕೂ, ಯಾ ಇವೆರಡಕ್ಕೂ ಗುರಿಯಾಗತಕ್ಕದ್ದು.

XIII. ಈ ಲೈಸೆನ್ಸ್ 189 ನೇ ಇಸವಿ ನೇ ತಾರೀಖು ವರಿವಿಗೆ ಜಾರಿಯೇ ಹೊರ್ತು ತದನಂತರವಲ್ಲ, ಆದರೆ ಇದು 1881ನೇ ಇಸವಿಯ XXIIನೇ ನಂಬರ್ ಆಕ್ಟಿನ 13 ವ 14ನೇ ಸೆಕ್ಷನ್‌ಗಳನ್ನನುಸರಿಸಿ ಯಾವಾಗಾಲಾದರೂ ವಾಪಸ್ ತರಿಸಿಕೊಳ್ಳಲ್ಪಡಬಹುದು ಅಥವಾ ಬಿಟ್ಟುಬಿಡಲ್ಪಡಬಹುದು.

ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್,
ಡಿಸ್ಟ್ರಿಕ್ಟು.

ಎದುರು ಒಡಂಡಿಕೆ.

ಈ ಕೆಳಗೆ ರುಜೂ ಮಾಡಿರುವ ಮೇಲ್ಕಂಡ ಲೈಸೆನ್ಸದಾರ ವ ಬಿಕರೀದಾರ ಮತ್ತು ಬಳಿಯಿರುವ ಬೀರ್ ಅಂಗಡಿಗೆ ಸಂಬಂಧಪಟ್ಟ ಇತರರಾದ ನಾವುಗಳು ನಮ್ಮಗಳಿಗಾಗಿಯೂ, ನಮ್ಮ ವಾರಸ್‌ದಾರರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗಪಡೆದಂಥಾವರಿಗೋಸ್ಕರವೂ ಇದರ ದೆಶೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ಬರೆಯೋಣಾದ, ಛಾಪಿಸೋಣಾದ ವ ಹೇಳೋಣಾದ ಕರಾರುಗಳಿಗೂ, ಷರತ್ತುಗಳಿಗೂ ಒಪ್ಪಿರುತ್ತೇವೆ.

ತಾರೀಖಿನ ದಿನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ನಮಗಳ ರೂಬರೂ ರುಜು ವ ಮೊಹರ್ ನಿಸಿ ಒಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು.

1.
2.
3.

ಲೈಸೆನ್ಸದಾರ್ ವ ಬಿಕರೀದಾರ್.

ತಾರೀಖು 23ನೇ ಸೆಪ್ಟಂಬರ್ 1896.

ನಂ. 3327.—ಯಕ್ಸೈ. 121, ಸರ್ 1895ನೇ ಇಸವಿ ಡಿಸೆಂಬರ್ 11ನೇ ಮಾರ್ಕಂ 5508.—ಯಕ್ಸೈ. 182ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1892ನೇ ಮಾರ್ಚಿ 30ನೇ ಮಾರ್ಕಂ 495ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಛಾಯಿಷ್ ಮಾಡಲ್ಪಟ್ಟ ರೂಲ್ಸಿನ XXIನೇ ರೂಲ್ 5ನೇ ಕ್ಲಾಜಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

"(3) ಲೈಸೆನ್ಸದಾರನಿಂದ ಯಿಡಲ್ಪಟ್ಟ ಠೇವಣಿ ಮೊಬಲಗು, ಇಜಾರೆ ವಾಯಿದೆಯ ಆಖೈರ್ ಎರಡು ಮಾಹೆಗಳಲ್ಲಿ ಪಾವತಿ "ಯಾಗಬೇಕಾದ ಖಿಸ್ತುಗಳಿಗಾಗಿ, ತೆಗದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, "ಇಜಾರೆಯು ದುಸರಾ ಹರಾಜ್ ಯಾ ರದ್ದು ಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ "ದಂಡವಾಗಿ ತೆಗೆದುಕೊಳ್ಳಲ್ಪಡಬಹುದು. ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕೀಗೂ ಮತ್ತು ಇಜಾರೆಯು ಪುನ "ಶ್ಚ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಭರ್ತೀ ಮಾಡಲ್ಪಡಬಹುದು. ಹಾಗೆ "ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲೀ ಬಗ್ಯಾಗಿ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ, "ಲೈಸೆನ್ಸದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊಬಲಗಿನ ಯಾವ "ರಿಮಿಷನ್ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು."

"(3A.) ಬಾಕೀ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ "ಮೊಬಲಗಿಗೆ ಪುನಶ್ಚ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡೀ ದೇಖೀಲ್ ವಸೂಲ್ಮಾಡ "ಲ್ಪಡತಕ್ಕದ್ದು."

ನಂ. 3358.—ಯಕ್ಸೈ. 123, ಸರ್ 1895ನೇ ಡಿಸೆಂಬರ್ 11ನೇ ಮಾರ್ಕಂ 5512.—ಯಕ್ಸೈ. 183ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1893ನೇ ಜನವರಿ 14ನೇ ಮಾರ್ಕಂ 11813.—ರೆ. ಫೈ. 233ನೇ ನಂಬರ ಇಸ್ತಿಹಾರ್‌ನಾಮೆ ಅನುಸರಿಸಿ, ಛಾಯಿಷ್ ಮಾಡಲ್ಪಟ್ಟ ರೂಲ್ಸಿನ Vನೇ ರೂಲ್ 6ನೇ ಕ್ಲಾಸಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸಲ್ಪಡತಕ್ಕದ್ದೆಂದು ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

"(3) ಲೈಸೆನ್ಸದಾರನಿಂದ ಹಾಜರ್ಮಾಡಲ್ಪಟ್ಟ ಠೇವಣಿ ಮೊಬಲಗು, ಗುತ್ತಿಗೆ ವಾಯಿದೆಯ ಆಖೈರ್ ತಿಂಗಳು ಯಾ ತಿಂಗಳು "ಗಳಲ್ಲಿ ಪಾವತಿಯಾಗಬೇಕಾದ ಖಿಸ್ತುಗಳ ಬಾಕಿಗಾಗಿ, ತೆಗೆದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿ "ಯಮಗಳನುಸರಿಸಿ, ಇಜಾರೆಯು ದುಸರಾ ಹರಾಜ್ ಯಾ ರದ್ದುಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮಿಷನರವರ "ಯುಕ್ತಾನುಸಾರ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕಿಗೂ ಮತ್ತು "ಇಜಾರೆಯು ಪುನಃ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಉಪಯೋಗಿಸಲ್ಪ "ಡಬಹುದು. ಹಾಗೆ ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಗೆ ಜಾರಿಯಲ್ಲಿರುವ "ರೂಲ್ಸ್ ಅನುಸರಿಸಿ, ಲೈಸೆನ್ಸದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊ "ಬಲಗಿನ ಯಾವ ರಿಮಿಷನ್ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು."

"(3 A.) ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ "ಮೊಬಲಗಿಗೆ ಪುನಃ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡಿ ದೇಖೀಲ್ ವಸೂಲ್ಮಾ "ಡಲ್ಪಡತಕ್ಕದ್ದು."

ತಾರೀಖು 4ನೇ ಅಕ್ಟೋಬರ್ 1896.

ನಂ. 3686.—ಆರ್. ಎಫ್. 51—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 165 ವ 188ನೇ ಆರ್ಟಿಕಲ್‌ಗಳ ಮೇರೆ, ಚನ್ನಪಟ್ಟಣದ ತಾಲ್ಲೂಕು ಅಮಲ್ದಾರ್ ಬಿ. ಕೃಷ್ಣರಾಯರಿಗೆ, 1896ನೇ ಇಸವಿ ಜುಲೈ 24ನೇ ಮಾರ್ಕಂ 845.—ಆರ್. 329ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯೊಡನೆ ಕೊಡೋಣಾದ ಯರಡು ತಿಂಗಳ ಪ್ರಿವಿಲೇಜ್ ರಜಾ 1896ನೇ ಇಸವಿ ಆಗಸ್ಟ್ 17ನೇ ತಾರೀಖಿನಾರಭ್ಯ ಅದೇ ಇಸವಿ ಸೆಪ್ಟಂಬರ್ 6ನೇ ತಾರೀಖು ವರಿಗೆ ಉಭಯ ದಿನಗಳೂ ಸೇರಿ 21 ದಿವಸಗಳ ಪರಿಯಂತ ಪ್ರಿವಿಲೇಜ್ ರಜಾದಂತೆ ಇದರಿಂದ ಬದಲಾಯಿಸಲ್ಪಡತಕ್ಕದ್ದು.

ನಂ. 3681.—ಆರ್. ಎಫ್. 52—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 172ನೇ ಆರ್ಟಿಕಲ್ ಮೇರೆ, ಹಾಸನದ ಡಿಸ್ಟ್ರಿಕ್ಟ್ ಆಲೂರು ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಎಸ್. ವೆಂಕಟರಮಣಯ್ಯನವರಿಗೆ, ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 10 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ಎಸ್. ವೆಂಕಟರಮಣಯ್ಯನವರು ರಜಾ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಾಸನ ತಾಲ್ಲೂಕು ಅಮಲ್ದಾರ್ರು ತಮ್ಮ ಸ್ವಂತ ಕೆಲಸಗಳೊಂದಿಗೆ ಸದರೀ ಸಬ್ ತಾಲ್ಲೂಕಿನ ಚಾರ್ಜನ್ನು ವಹಿಸಿ ಇರತಕ್ಕದ್ದು.

ತಾರೀಖು 9ನೇ ಅಕ್ಟೋಬರ್ 1896.

ಕ್ಯಾಂಪ್ ನಂ. 24.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಮೇರೆ ನಂಜನಗೂಡು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಸಿ. ವೆಂಕಟ್ರಾಯರು 2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ಕ್ಯಾ. ನಂ. 21. ತಾರೀಖು 10ನೇ ಮಾಹೆ ಅಕ್ಟೋಬರ್ 1896, ಮೈಸೂರು.

ಮೈಸೂರು ಷಹರಿನಲ್ಲಿ ಇರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ ಈ ಲಾಗಾಯತು ಎರಡು ವರುಷಗಳ ಪರ್ಯಂತರ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ಅಂಬಲೆ ಅಣ್ಣಯ್ಯಪಂಡಿತರು.

(2) ಸಂತೆಪೇಟೆಯಲ್ಲಿ ಇರುವ ಬಸಮಯ್ಯನವರು.

(3) ದೇವರಾಜಮೊಹಲ್ಲಾದಲ್ಲಿ ಇರುವ ದವಲತ್ತರಾಂ ಲಾಲಾಯವರು.

(4) ಡಿಟ್ಟೋ ಕೆಂಚಪ್ಪನವರು.

ಕ್ಯಾಂಪ್ ನಂ. 27. ತಾರೀಖು 12ನೇ ಅಕ್ಟೋಬರ್ 1896, ಮೈಸೂರು.

ಮೈಸೂರು ಕೋಟೆಯಲ್ಲಿರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ಕಿಲ್ಲೆ ವೆಂಕಟರಮಣಸ್ವಾಮಿಯವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಯನ್ನಾಗಿ ನೇಮಿಸಿದೆ.

ಕೋಟೆಯಲ್ಲಿರುವ ಲಕ್ಷ್ಮೀಕಾಂತ ಅರಸಿನವರು.

ಪಿ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಸೆಕ್ರೆಟರಿ.

459

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫ್ರಾಯಿಷ್ ಆದ್ದು. [ನಂ. 41.

ಬೆಂಗಳೂರು, ಗುರುವಾರ, ಆಕ್ಟೋಬರ್ ತಾ|| 15, ಸನ್ 1896.

IIನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಅದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ ಡಿಟೋ	„ 170
1	ಮದ್ರಾಸ್ ಓಕ್ಸರವರ ಡಿಟೋ	„ 250
1	ಡಿಟೋ ಡಿಟೋ ಡಿಟೋ	„ 188
1	ಡಿಟೋ ಬೋರ‍್ಯಾಪ್‌ರವರ ಡಿಟೋ	„ 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 23ನೇ ಸೆಪ್ಟಂಬರ್ 1896.

ಬೆಂಗಳೂರು ಸಿಟಿ ಕೋಟೆ ಸರಹದ್ದು ಹೊಸ ತರುಗಿನಪ್ಯಾಟೇಲಿ ಸರ್ವೆ ಇಲಾಖೆ ಕ್ಲಾಸರ್ ನಾರಾಯಣಜಯರಾವ್ ಯಂಬವರ ಮನೆ ಬಾಗಲಿಗೆ ಹಾಕಿದ್ದ ಬೀಗವನ್ನು ತಾರೀಖು 6—9—96ರಲ್ಲು ಯಾರೋ ತೆಗದುಬಿಟ್ಟು ವಳಗೆ ಪೆಟ್ಟಿಗೆಗಳಿಂದ ಕಳವು ಮಾಡಿ ಕೊಂಡು ಹೋದ ತಪ್ಸೀಲ್ ಪಟ್ಟಿ:—

		ಕ್ರಯ ರೂ.	ಆ.	ಪೈ.
1	ಕಲಾಬತು ಮೂರು ಬೊಟ್ಟು ಅಗಲ ಅಂಚು ಮತ್ತು ಒಂದು ಮಳ ಶರಗುವುಳ್ಳ ಕೆಂಪು ಪೀತಾಂಬ್ರ	100	0	0
2	ಲಕ್ಷ್ಮೇಶ್ವರದ ಕೆಂಪು ಅಂಚಿನ ರೇಷ್ಮೆ ಚಾರಖಾನೆ ಸೀರಿ ಒಂದು	22	0	0
3	ಪೂನಾದ್ದು ಬೆಳ್ಳಿಬಟ್ಲು ಇದರ ತೂಕ ರೂ. 16—2	19	0	0
4	ಡಿಟೋ ಬೆಳ್ಳಿವುದ್ಧರಣಿ ತೂಕ ರೂ. 6—11—0	8	4	0
5	ಎರಡು ಬೆಳ್ಳಿಬಟ್ಲು ತೂಕ ರೂ. 11—10—0	14	0	0
6	ಬೆಳ್ಳೀದು ಬಟ್ಲು ಸಾದಾ ತೂಕ ರೂಪಾಯಿ 4—0—0	4	0	0
7	ಬೆಳ್ಳಿ ಕಾಲುಂಗರ 14—0—0 ರೂ. ತೂಕ	14	0	0
8	ಬೆಳ್ಳಿ ಡಾಬು 1ಕ್ಕೆ 16—0—0 ರೂ. ತೂಕ	16	0	0
9	ಅಪರಂಜಿ ಎಂಟು ಮೂಲೆ ವುಂಗ್ರ ತೂಕ ರೂ. 1—0—0	28	0	0
10	ಸವರ್ಣ ಬಾಬತ್ತು ಕೀಲ್ ಸಾದಾ ವುಂಗ್ರ ರೂ. 0—12—0 ತೂಕ	18	0	0
11	ಶಾಲ್ಯದ ರೇಷ್ಮೆ ಅಂಚಿನ ಹೊಸ ಪಂಚೆ	4	0	0
12	ಕಲಾಬತು ಕೆಂಪು ಶಾಲು	15	0	0
13	2 ಭಂಗಾರದ ಜೋಮಾಲೆ ಗುಂಡು ರೂ. 0—1—0 ತೂಕ	1	4	0
14	ಚಿನ್ನದ ಸಾದಾ ಗುಂಡುಗಳು ಸುಮಾರು 12 ಅಥವಾ 16	8	0	0
15	ಕಪ್ಪು ರೇಷ್ಮೆಲಿ ಕಟ್ಟಿದ ಹುಡುಗರಿಗೆ ಕಟ್ಟುವ ಗೆಜ್ಜೆಗಳು	8	0	0
16	ಬೆಳ್ಳಿ ನಶ್ಯದ ಡಬ್ಬಿ ರೂ. 2—0—0 ತೂಕ	4	0	0
17	ಬೆಳ್ಳಿ ದೀವಸಿ ಮಂಗಳ ಗೌರಿ ಶೇರಿ ರೂ. 8—0—0 ತೂಕ	8	0	0
18	3 ಕುಬಸಗಳು	3	0	0
	ಜಮ್ಲಾ ..	294	8	0

ಬಿ. ಕುಪ್ಪುಸಾಮಿನಾಯುಡು,
ಫಾರ್ ಅಸಿಸ್ಟೆಂಟ್ ಸೂ॥ ಆಫ್ ಪೊಲೀಸ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇಸ್ತಿಹಾರ್ ನಾಮೆ.

ಬೆಂಗಳೂರು ಟೌನ್ ಮ್ಯುನಿಸಿಪಲ್ ರೆಗ್ಯುಲೇಷನ್‌ಗಳ ಇದರಡಿ ಬರುವ ಸೆಕ್ಷನ್‌ಗಳು ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

ಪ್ರಸಿಡೆಂಟರಿಗೆ ಹೊಸಕಟ್ಟಣಗಳನ್ನು ಕುರಿತು ನೋಟಿಸ್ ಕೊಡಲ್ಪಡತಕ್ಕದ್ದು.

148. ಯಾವದಾದರೂ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಯಾವ ಕಟ್ಟಣವನ್ನಾದರೂ ಕಟ್ಟಿಸಲಿಕ್ಕೆ ಅಥವಾ ಪೋಲ್‌ಬಂದಿ ಮಾಡಿಸಲಿಕ್ಕೆ ಷುರೂ ಮಾಡುವದಕ್ಕೆ ಮುಂಚಿತವಾಗಿ ಅಂಥಾ ಕಟ್ಟಣವನ್ನು ಕಟ್ಟಿಸಲಿಕ್ಕೆ ಯಾ ಪೋಲ್‌ಬಂದಿ ಮಾಡಲಿಕ್ಕೆ ಖಾಯಿಷ್ ಮಾಡುವ ಮನುಷ್ಯನು ಆ ವಿಷಯವನ್ನು ಕುರಿತು ಬರವಣಿಗೆ ಮೂಲಕ ಪ್ರಸಿಡೆಂಟರಿಗೆ ನೋಟಿಸ್ ಕೊಡತಕ್ಕದ್ದಲ್ಲದೆ ಪ್ರಸಿಡೆಂಟರ ಹುಕುಂ ಅನುಸರಿಸಿ ನಿಷ್ಕರ್ಷೆ ಮಾಡೋಣಾದ ಒಂದು ಮಟ್ಟದ ವಿಷಯದಲ್ಲಿ ಅಂಥಾ ಕಟ್ಟಣದ ತಳಾದಿಯು ಯಲ್ಲಕ್ಕೂ ಕೀಳ್ಪಟ್ಟ ತಳವರಶೆಯೂ ಯಾವ ಮಟ್ಟದ ಪ್ರಕಾರ ಹಾಕಲ್ಪಡುತ್ತೋ ಆ ಮಟ್ಟವನ್ನು ಕಾಣಿಸಿ ಒಂದು ಪ್ಲ್ಯಾನ್ ಯಾನೆ ನಕ್ಷೆಯು ಸದರೀ ನೋಟಿಸ್ ಸಂಗಡ ಕಳುಹಿಸತಕ್ಕದ್ದು: ಯಾವನು ಅಂಥಾ ನೋಟಿಸ್ ಕೊಡದೆ ತಪ್ಪುತ್ತಾನೋ ಅವನು ಐವತ್ತು ರೂಪಾಯಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ರಿಪೇರಿಗಳು ನಡಿಯುತ್ತಾ ಇರುವಲ್ಲಿ ಅಡ್ಡ (ಮರ ವಗ್ಯೆರೆ) ಕಟ್ಟಿಸತಕ್ಕದ್ದು.

175. ಯಾವದಾದರೂ ಬೀದಿಗೆ ಯಾ ಕಾಲುದಾರಿಗೆ ಅಡ್ಡವಾಗಿರುವ ಅಥವಾ ಅಂಥಾ ಕಾಮಗಾರಿಯಿಂದ ಅಸಂದರ್ಭ ವುಂಟಾಗಿರುವ ಸ್ಥಳದಲ್ಲಿ ಯಾವದಾದರೂ ಕಟ್ಟಣವನ್ನು ಕಟ್ಟಿಸಲಿಕ್ಕೆ ಅಥವಾ ಕೆಡವಿಸಲಿಕ್ಕೆ ಯಾವದಾದರೂ ಕಟ್ಟಣ ಹೊರಗಿನ ಭಾಗವನ್ನು ಬದಲಾಯಿಸಲಿಕ್ಕೆ ಯಾ ರಿಪೇರಿ ಮಾಡಿಸಲಿಕ್ಕೆ ಅಪೇಕ್ಷಿಸುವ ಪ್ರತಿ

ಮನುಷ್ಯನೂ ಅದು ಆರಂಭಿಸುವದಕ್ಕೆ ಪೂರ್ವವೂ, ಆ ಮೇರೆ ಮಾಡಲಿಕ್ಕೆ ಪ್ರೆಸಿಡೆಂಟರಿಂದ ಲಿಖಿತರೂಪವಾದ ಒಂದು ಲೈಸೆನ್ಸ್ ಮೊದಲು ತೆಗೆದುಕೊಂಡ ತರುವಾಯವೂ ಅಂಥಾ ಕೆಲಸಗಳು ನಡಿಸಲ್ಪಡುವ ಜಾಗಾಗಳಲ್ಲಿ ಬೀದಿಯಿಂದ ಅಥವಾ ಕಾಲ್‌ದಾರಿಯಿಂದ ಆ ಕಟ್ಟಣವನ್ನು ಪ್ರತ್ಯೇಕ ಪಡಿಸಲಿಕ್ಕೆ ಸಾಕಾಗಿರುವ ಮರೆಗಳು ಅಥವಾ ತಡೆಗಳು ನಾಟಿಸುವಂತೆ ಮಾಡಿ ಅಂಥಾ ಮರೆ ಅಥವಾ ತಡೆ ಜನಗಳ ಕ್ಷೇಮಕ್ಕೆ ಯಾ ಅನುಕೂಲಕ್ಕೆ ಜರೂರಿರುವಷ್ಟರ ವರೆಗೆ ಪ್ರೆಸಿಡೆಂಟರಿಗೆ ಸಮಾಧಾನಕರವಾಗಿರುವಂತೆ ಬಂದೋಬಸ್ತಾಗಿಯೂ ನಿಲುವಾಗಿಯೂ ನಾಟಿಸಲ್ಪಟ್ಟಿರತಕ್ಕದ್ದು ಮಾತ್ರವಲ್ಲದೆ ರಾತ್ರಿ ಹೊತ್ತು ಆ ಬಳಿ ಸಾಕಾದಷ್ಟು ದೀಪಗಳು ಇಡಲ್ಪಡುವಂತೆ ಮಾಡತಕ್ಕದ್ದು. ಮತ್ತು ಈ ಸೆಕ್ಷನ್ ನಿಬಂಧನೆಗಳಿಗೆ ವಿರುದ್ಧವಾಗಿ ಯಾವ ಕಟ್ಟಣವನ್ನಾಗಲಿ ಕಟ್ಟಲಿಕ್ಕೆ ಯಾ ಕೆಡಸಲಿಕ್ಕೆ ಯಾ ಬದಲಾಯಿಸುವದಕ್ಕೆ ಆರಂಭಿಸಲ್ಪಡುವ, ಲೈಸೆನ್ಸ್ ಹೊಂದದೆ ಯಾವದಾರೂ ಮರೆ, ಕಾಲಾವಧಿ, ತಡೆ ವಗೈರೆ ಕಟ್ಟತಕ್ಕ ಅಥವಾ ನಾಟಿಸುವ ಅಥವಾ ಲೈಸೆನ್ಸ್ ಹೊಂದಿ ಇದ್ದು ಅಂಥಾ ತಡೆ ಯಾ ಮರೆ ನಡಿಸದೆಯೂ, ಮೇಲೆ ಕಂಡ ಕಾಲದಲ್ಲಿ ಸದರೀ ಮೇರೆ ಬಂದೋಬಸ್ತಾಗಿ ಇರುವಂತೆ ಮಾಡದೆಯೂ ತಪ್ಪುವ, ಅಥವಾ ಸದರೀ ಮೇರೆ ಯಾ ತಡೆ ಇರುತ್ತಾ ಇರುವಲ್ಲಿ ಅವುಗಳ ಬಳಿ ಸಾಕಾದಷ್ಟು ದೀಪಗಳನ್ನು ಇಡದ ಯಾ ಪ್ರೆಸಿಡೆಂಟರು ಹುಕುಂ ಮಾಡಿದ ಮೇಲೆ ಎಂಟು ದಿನಗಳೊಳಗೆ ಅವುಗಳನ್ನು ತೆಗಿಸಿಹಾಕದ ಪ್ರತಿ ಮನುಷ್ಯನೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಸದರೀ ಪ್ರೆಸಿಡೆಂಟರು ನೋಟೀಸ್ ಕೊಟ್ಟ ಇಪ್ಪತ್ತು ನಾಲ್ಕು ಘಂಟೆಯ ಹೊತ್ತಿಗೆ ತರುವಾಯ ಸದರೀ ತಕ್ಸೀರ್ ನಡಿಸಲ್ಪಡುತ್ತಾ ಇರುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಜಾಸ್ತಿ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಕಟ್ಟಣದ ಸಾಮಾನುಗಳು ಇರತಕ್ಕ ಸ್ಥಳಗಳಲ್ಲಾಗಲಿ ಅಗಿಯಲ್ಪಟ್ಟ ಸ್ಥಳಗಳಲ್ಲಾಗಲಿ ದೀಪ ಹಚ್ಚದೆ ಇದ್ದರೆ ಶಿಕ್ಷೆ.

177. ಪ್ರೆಸಿಡೆಂಟರ ಅಪ್ಪಣೆ ಇಲ್ಲದೇನೇ ಯಾವ ಮನುಷ್ಯನೂ ಯಾವ ಬೀದಿಯಲ್ಲಿ ಯಾವ ಕಟ್ಟಣದ ಸಾಮಾನುಗಳನ್ನೂ ಇಡಕೂಡದು, ಅಥವಾ ಹಳ್ಳ ತೆಗೆಯಲೂ ಕೂಡದು ಮತ್ತು ಯಾವ ಮನುಷ್ಯನಿಗಾಗಲಿ ಅಂಥಾ ಅಪ್ಪಣೆ ಕೊಡಲ್ಪಟ್ಟ ಪಕ್ಷಕ್ಕೆ ಆ ಸಾಮಾನುಗಳು ಆಚೆಗೆ ಸಾಗಿಸಲ್ಪಡುವ ಪರ್ಯಂತವಾಗಲಿ ಅನ್ಯಥಾ ಬಂದೋಬಸ್ತು ಮಾಡಲ್ಪಡುವವರಿಗಾಗಲಿ ಆ ಮನುಷ್ಯನು ತನ್ನ ಸ್ವಂತ ಖರ್ಚಿನಿಂದಲೇ ಅಂಥಾ ಸಾಮಾನುಗಳಿಗೆ ಯಾ ಹಳ್ಳಕ್ಕೆ ಸಾಕಾಗಿರುವ ಮೇರೆ ತಡೆ ಹಾಕಿಸುವಂತೆಯೂ ಅವುಗಳ ಸುತ್ತೂ ಯಾವದಾದರೂ ಕಟ್ಟಿಗೆ ಕಟ್ಟಲ್ಪಡುವಂತೆಯೂ ಮಾಡುವದು ಮಾತ್ರವಲ್ಲದೆ ರಾತ್ರಿ ಹೊತ್ತು ಅದರ ಬಳಿ ಸಾಕಾದಷ್ಟು ದೀಪಗಳು ಇಡುವಂತೆಯೂ ಮಾಡತಕ್ಕದ್ದು. ಮತ್ತು ಅಂಥಾ ಅಪ್ಪಣೆ ಇಲ್ಲದೆ ಯಾವನು ಸಾಮಾನುಗಳನ್ನು ಇಡುತ್ತಾನೋ ಅಥವಾ ಹಳ್ಳ ತೆಗಿಯುತ್ತಾನೋ ಅಥವಾ ಅಂಥಾ ಸಾಮಾನುಗಳು ಹಳ್ಳಗಳು ಇರುವ ಸ್ಥಳದಲ್ಲಿ ತಡೆಕಟ್ಟಿಸದೆಯಾಗಲಿ ಆವರಣ ಕಲ್ಪಿಸದೆಯಾಗಲಿ ದೀಪ ಹಚ್ಚದೆಯಾಗಲಿ ತಪ್ಪುತ್ತಾನೋ ಅಥವಾ ಕೊಡಲ್ಪಟ್ಟ ಅಪ್ಪಣೆಯನ್ನು ಹಿಂದಿರಿಸಿಕೊಂಡಾಗ ಅಂಥಾ ಸಾಮಾನುಗಳನ್ನು ಮತ್ತೊಂದು ಸ್ಥಳಕ್ಕೆ ಸಾಗಿಸದೆಯಾಗಲಿ ಅಂಥಾ ಹಳ್ಳವನ್ನು ಮುಚ್ಚಿಸದೆಯಾಗಲಿ ಇರುತ್ತಾನೋ ಅಂಥಾ ಯಾವ ಮನುಷ್ಯನಾಗಲಿ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ ಪ್ರೆಸಿಡೆಂಟರು ನೋಟೀಸ್ ಕೊಟ್ಟ ಇಪ್ಪತ್ತು ನಾಲ್ಕು ಘಂಟೆಯ ಹೊತ್ತಿಗೆ ತರುವಾಯ ಆ ತಕ್ಸೀರ್ ನಡಿಸುತ್ತಾ ಇರುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಅಪಾಯಕರಗಳಾದ ಸ್ಥಳಗಳನ್ನೂ ರಿಪೇರಿ ಮಾಡಿಸತಕ್ಕದ್ದು ಆವರಣ ಏರ್ಪಡಿಸತಕ್ಕದ್ದು.

178. ಸರ್ಕಾರ್ ಜಮೀನಿನಲ್ಲಾಗಲಿ, ಜನಗಳ ಸ್ವಂತ ಜಮೀನಿನಲ್ಲಾಗಲಿ ಇರುವ ಯಾವದಾದರೂ ಕಟ್ಟಣ, ಕೆರೆ, ಬಾವಿ ಯಾ ಹಳ್ಳ ಯಾ ಇತರ ಪ್ರದೇಶವು, ಸಾಕಾದಷ್ಟು ರಿಪೇರಿ ಯಾ ಬಂದೋಬಸ್ತು ಯಾ ಆವರಣ ಇಂತಾದ್ದು ಇಲ್ಲದೆ ಇರುವದರಿಂದ ಜನಗಳಿಗೆ ಅಪಾಯಕರವಾಗಿದ್ದ ಪಕ್ಷಕ್ಕೆ, ಪ್ರೆಸಿಡೆಂಟರು, ಲಿಖಿತರೂಪವಾದ ನೋಟೀಸ್ ದ್ವಾರಾ, ಅದರ ದೆಸೆಯಿಂದ ಅಪಾಯ ಉಂಟಾಗದೆ ಇರುವಂತೆ ಅದು ರಿಪೇರಿ ಮಾಡಲ್ಪಡತಕ್ಕದ್ದೆಂತಲಾಗಲಿ ಬಂದೋಬಸ್ತು ಮಾಡಲ್ಪಡತಕ್ಕದ್ದೆಂತಲಾಗಲಿ ಸುತ್ತಲೂ ಆವರಣ ಕಟ್ಟಿಸಲ್ಪಡತಕ್ಕದ್ದೆಂತಲಾಗಲಿ ಸದರೀ ನಿವೇಶನಗಳ ಮಾಲೀಕನಿಗಾದರೂ ಅನುಭವದಾರನಿಗಾದರೂ ತಾಕೀದ್ ಮಾಡುವದು ಅವರಿಗೆ ನ್ಯಾಯವಾಗಿರತಕ್ಕದ್ದು, ಮತ್ತು ಆ ಮನುಷ್ಯನು ಇಪ್ಪತ್ತುನಾಲ್ಕು ಘಂಟೆಯ ಹೊತ್ತಿನೊಳಗೇ ಸದರೀ ತಾಕೀದ್ ಮಾಡಲ್ಪಟ್ಟ ಪ್ರಕಾರ ನಡಿಸದೆ ನಿರಾಕರಿಸಿದ ಪಕ್ಷಕ್ಕೆ ಅಥವಾ ಉಪೇಕ್ಷಿಸಿದರೆ ಅಥವಾ ಅದನ್ನು ತಕ್ಕ ಜಾಗ್ರತೆಯಿಂದ ಪೂರೈಸಲಿಕ್ಕೆ ತಪ್ಪಿಹೋದರೆ ಆ ಮನುಷ್ಯನು ಪ್ರತಿ ತಪ್ಪಿತಕ್ಕೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ, (ಆ ಪ್ರಕಾರ ಮಾಡಲಿಕ್ಕೆ) ದೇರ್ ಮಾಡುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು; ಮತ್ತು ಪ್ರೆಸಿಡೆಂಟರು ಸದರೀ ಕಟ್ಟಣ ಕೆಲಸ ವಗೈರೆ ಕಾಮಗಾರಿ ಮಾಡಿಸಲ್ಪಡುವಂತೆಯಾಗಲಿ, ಬಂದೋಬಸ್ತು ಮಾಡಲ್ಪಡುವಂತೆಯಾಗಲಿ, ಆವರಣ ಕಲ್ಪಿಸಲ್ಪಡುವಂತೆಯಾಗಲಿ ಮಾಡುವದು ಮೇಲೆ ಕಂಡ ಬಂದೋಬಸ್ತು ಯಾ ಯಾವದಾದರೂ ಕೆಲಸಗಳಿಗಾಗಿ ತಮಗೆ ಯುಕ್ತ ತೋರುವ ಪ್ರಕಾರ ಜರೂರಾದ ಬಂದೋಬಸ್ತು ಕೆಲಸಗಳನ್ನೂ ಮಾಡುವದು ಪ್ರೆಸಿಡೆಂಟರಿಗೆ ನ್ಯಾಯವಾಗಿರತಕ್ಕದ್ದು ಮತ್ತು ಆ ಬಗ್ಗೆ ಹಿಡಿದ ಖರ್ಚು ಇವರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲಾಗತಕ್ಕದ್ದು.

ಖಸ್ಸೈ ಮನೆಯಲ್ಲಿ ಶಿವಾಯಿ ಅನ್ಯತ್ರ ಪಶುಗಳನ್ನು ಕೊಲ್ಲುವ ಬಗ್ಯೆ ಶಿಕ್ಷೆ.

182. ಲೈಸೆನ್ಸ್ ಕೊಡಲ್ಪಟ್ಟ ಖಸ್ಸೈ ಮನೆಯಲ್ಲಿ ಶಿವಾಯಿ (ಅನ್ಯತ್ರ) ಬೆಂಗಳೂರು ಷಹರ್ ಸರಹದ್ದಿನೊಳಗೆ ಯಾವ ಸ್ಥಳದಲ್ಲಾಗಲಿ, ಯಾವದಾದರೂ ಕುರಿಯನ್ನೂ, ಮೇಕೆಯನ್ನೂ, ಹಂದಿಯನ್ನೂ ಅಥವಾ ಯಾವದಾದರೂ ದನವನ್ನೂ (ಮಾಂಸ) ಮಾರತಕ್ಕ ಬಗ್ಯೆ, ಕೊಲ್ಲುವ, ಕುಯ್ಯುವ ಅಥವಾ ಚರ್ಮ ಸುಲಿಯುವ ಯಾವ ಮನುಷ್ಯನಾಗಲಿ ಪ್ರತಿ ಜಂತುವಿಗೂ ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 15ನೇ ಸೆಪ್ಟಂಬರ್ 1896.

ಸರ್ಕಾರದ ಗಂಧದ ಕೋಠಿಗಳಲ್ಲಿ ಹಾಲಿ ಉಪಯೋಗದಲ್ಲಿರುವ ಪೌಂಡ್ ವಜನೀ ಬಟ್ಟಿಗೆ ಬದಲಾಗಿ ಇಂಗ್ಲಿಷ್ ಸ್ಟ್ಯಾಂಡರ್ಡ್ ಕರಾರ್ವಾಕಾ ಪೌಂಡ್ ವಜನಿ ಬಟ್ಟು 1ಕ್ಕೆ $38\frac{8}{9}$ ರೂಪಾಯಿ ತೂಕವುಳ್ಳ ಬಟ್ಟುಗಳು ಗವರ್ನಮೆಂಟಿನವರ ಮಂಜೂರಾತೀ ಅನುಸರಿಸಿ, 1897ನೇ ಇಸವಿ ಲಾಗಾಯತು ಯಲ್ಲಾ ಕೋಠಿಗಳಲ್ಲಿಯೂ ಜಾರಿಯಲ್ಲಿ ತರಲ್ಪಡುತ್ತೆ. ಆದರೆ ಚಾಲತಿ 1896ನೇ ಡಿಸೆಂಬರ್ 31ನೇ ತಾರೀಖು ವಳಗೆ, ಖರೀದಿಗೆ ತೆಗದುಕೊಳ್ಳಲ್ಪಡುವ ಗಂಧ ಹಾಲಿ ಜಾರಿಯಲ್ಲಿರುವ ಪೌಂಡ್ ಬಟ್ಟುಗಳ ಪ್ರಕಾರವೇ ವಜನಿಯಿಂದ ಕೊಡಲ್ಪಡುವದು.

ಐಯ್ಯಿಂದಾ ಜಾರಿಯಲ್ಲಿ ಬರತಕ್ಕ ಒಂದೇವಿಧವಾದ ಇಂಗ್ಲಿಷ್ ವಜನೀ ಬಟ್ಟುಗಳು ಅವುಗಳ ಸರಿಯಾದ ತೂಕ ಸಹ ಇದರಡಿ ನಮೂದಿಸಲ್ಪಟ್ಟಿರುತ್ತೆ:—

ಔನ್ಸ್ 1ಕ್ಕೆ $2\frac{3}{7}\frac{1}{2}$	ರೂಪಾಯಿ ತೂಕ	ಹಂಡ್ರೆಡ್‌ವೆಯಿಟ್ 1ಕ್ಕೆ $4,355\frac{5}{9}$	ರೂಪಾಯಿ ತೂಕ.
ಪೌಂಡ್ 1ಕ್ಕೆ $38\frac{8}{9}$	ಡಿಟೋ	ಟನ್ 1ಕ್ಕೆ $87,111\frac{1}{9}$	ಡಿಟೋ

ಸ್ಟ್ಯಾಂಡರ್ಡ್ ಅಂದರೆ, ನಿಷ್ಕರ್ಷಿಸಲ್ಪಟ್ಟ ಕರಾರ್ವಾಕಾ ತ್ರಾಸು, ಬಟ್ಟುಗಳು ಪ್ರತಿ ಕೋಠಿಯಲ್ಲಿ ಹಾಜರಿರುತ್ತವೆ. ಇವುಗಳಿಂದ ಹಾಲಿ ವಜನೀ ಬಗ್ಯೆ ಉಪಯೋಗದಲ್ಲಿರುವ ಬಟ್ಟುಗಳನ್ನ ಅಜಮಾಯಿಷಿ ಮಾಡಿಕೊಳ್ಳಬಹುದಾಗಿರುತ್ತೆ.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿಧೆ.

ಹಳೇ ತರಹೆ ಪ್ರಕಾರ.

ಸಂದಲ್ ವಿವರಿ		ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
		ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.
ಸಲಾಕಿ ಅವ್ವಲ್	..	1	..	..	5	..	15	..	..	..	15	..	...
ಡಿಟ್ಟೋ ದುಯಂ	..	..	5	1	5	2	5	3	5	1	..	..	2
ಡಿಟ್ಟೋ ಸಿಯಂ	..	1	10	7	10	5	5	12	15	8	..	4	..
ಡಿಟ್ಟೋ ಚಹರಂ	..	45	15	30	..	44	..	32	10	12	..	7	..
ಡಿಟ್ಟೋ ಪಂಚಂ	..	7	..	10	..	10	10	37	.	25	..	14	..
ಚಿಕ್ಕ ಸಲಾಕಿ	..	1	2	1	..	..	..	..	..	..	..	..	..
ದೊಡ್ಡ ಜಡಾ	..	21	..	} 35	} ..	33	..	66	5	40	..	25	..
ಚಿಕ್ಕ ಜಡಾ	..	3	15			5	..	8	..	4	..	2	..
ಜಡದ ರಂಬೆ	..	1	5			7	..	..	..	...	..	...	..
ದೊಡ್ಡ ಜಜ್ಜು	..	18	..	} 61	} 5	30	..	} 94	} ..	65	..	43	..
ಚಿಕ್ಕ ಜಜ್ಜು	..	3	5			11	..						
ಬಗರದದ್ದು	..	2	15	6	..	5	5	26	.	9	..	13	10
ಐರ್ ವಾಜ಼ಿ ಗುಬಗರು	..	1	..	3	..	..	10	..	..	..	..	..	..
ಗರಗಸ ಬುಕಣಿ	..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಟ	.	1	10	1	..	} 6	} 5	} 15	} 10	15	..	16	..
ಚಿಕ್ಕ ಡಿಟ್ಟೋ	..	..	..	2	..								
ಕೆತ್ತಿನ ಐರ್ ಚಿಲ್ಟ	..	6	..	..	..	..	..	..	..	..	..	..	...
ಹತ್ತಿ ಚಿಲ್ಟ	..	1	6	..	..	..	..	..	..	..	..	..	..
ಮಿಲ್ಟ ಚಿಲ್ಟ	..	17	10	30	..	21	5	30	..	12	..	9	..
ಬಸೋಲ ಬುಕಣಿ	..	1	15	10	..	14	..	14	15	5	10	6	8
ಕೊಯತ ಚಿಲ್ಟ	..	..	..	1	10	3	10	9	..	2	..	1	..
ಜುಮ್ಲಾ	..	135	15	200	..	200	..	350	..	200	..	150	..

ಹೊಸ ಯಾ ಬೊಂಬಾಯಿ ತರಹೆ ಪ್ರಕಾರ.

ಸಂದಲ್ ವಿವರ.		ಹುಣಸೂರು ಕೋಠಿ.		ಶ್ರೀರಂಗಪಟ್ಟಣ ಕೋಠಿ.	
		ಟನ್.	ಹ.	ಟನ್.	ಹ.
ವಿಲಾಯಿತಿ ಬಡ್	..	1	.	..	10
ಚೈನಾ ಬಡ್	..	20	..	30	
ಪಂಚಂ	..	28	..	89	..
ಚಿಕ್ಕ ಸಲಾಕಿ, ಫೋಟ್ಲ (ಅವ್ವಲ್)	..	3	...	5	..
ಡಿಟ್ಟೋ (ದುಯಂ)	..	2	..	1	..
ಫಟಿ ಬಡಲ	..	50	..	30	..
ಜಡಾ (ಅವ್ವಲ್)	..	25	..	25	..
ಡಿಟ್ಟೋ (ದುಯಂ)	..	25	..	12	..
ಡಿಟ್ಟೋ (ಸಿಯಂ)	.	20	..	8	..
ಡಿಟ್ಟೋ (ಚಹರಂ)	.	7	..	7	..
ಜಜ್ಜು (ಅವ್ವಲ್)	..	50	...	25	..
ಡಿಟ್ಟೋ (ದುಯಂ)	..	40	15	15	..
ಬಗರದದ್ದು	..	5	..	12	..
ಐರ್ ಬಗರು	..	5	..	14	..
ಚಿರಿಯಾ	..	5	..	5	..
ಐರ್ ಚಿಲ್ಟ (ಅವ್ವಲ್)	..	4	..	6	..
ಡಿಟ್ಟೋ (ದುಯಂ)	..	6	..	6	10
ಹತ್ತಿ ಚಿಲ್ಟ	..	1	..	2	10
ಗರಗಸ ಬುಕಣಿ	..	1	..	..	10
ಮಿಲ್ಲ ಚಿಲ್ಟ	..	30	..	50	..
ಬಸೋಲಾ ಬುಕಣಿ	..	7	.	10	..
ಚೇಗು ಮಿಲ್ಟ	..	..	..	5	..
ಕಳೆದವರುಷದ ಜಡಾ		113	15	12	15
ಸ್ಪೆಷಲ್ ಕ್ಲಾಸ್	..	..	10	...	..
ಟೋಟಲ್	..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಗೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮುರ್ಸ್ಸಂ 15230.—ಎಫ್. ಎಫ್. 155.—92ನೇ ನಂಬರ್ ರೂಲ್ಸಿಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಪಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಯಿತರ ಆಫೀಸರಿಂದ ಆಗಲಿ ಶೇರಿ ಫಾರೆಸ್ಟ್ ಆಫೀಸರವರಿಂದ ನಡಿಸಲ್ಪಡತಕ್ಕದ್ದು.

2. ಜಾಸ್ತಿದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟ್ಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫೀಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನು ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ್ ಆಫ್ ಅಡ್ವೈಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫೀಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದೀಯನ್ನು 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫೀಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫೀಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನು ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫೀಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫೀಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫೀಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಸೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಯಿಲ್ಲದ ರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ಒಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫೀಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫೀಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ವುಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಯೆಂದಿಗೂ ಯಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನು ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫೀಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫೀಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫೀಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ಒಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫೀಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ ಹಾಜರಿಯಲ್ಲಿ ಡೆಪ್ಯುಟಿ ಕಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫೀಸರಿಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನು ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫೀಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವವರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನು ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ಒಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನು ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀ

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲವಾದ್ದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳೆಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ವಂದಕ್ಕೆ 8 ಆಣೆಗಳ ಮೇರ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳು ವಾಯಿದೇ ನೋಟೀಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್‌ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜು ಆಫೀಸರಿಂದ ದಸ್ತಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡೆಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಜಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟೆ ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಸೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್‌ಛಾರ್ಜ್ ಫಾರೆಸ್ಟ್ ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜ್ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗೆದುಕೊಳ್ಳಲು ಇಛ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವು ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಗೌರೀಬಿದನೂರು ತಾಲ್ಲೂಕು ಮಂಚೇನಹಳ್ಳೀಲಿರುವ ಯಡಗೈ ಜಾಲೋನನ ವಿಷಯದಲ್ಲಿ—

ಸನ್ 1895—96ನೇ ಇಸವಿ ದಿವಾಳಿ ಕೇಸ್ ನಂಬರು 378.

ಹುಕ್ಕುಂ,

ಮೇಲ್ಕಂಡ ಜಾಲೋನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರರಾದ ಜಾಲೋನನ ಪರವಾಗಿ ಅಡ್ವೋಕೇಟ್ ಮೆಸ್ಟರ್. ಕೃಷ್ಣ ಮೂರ್ತಿರಾಯರಿಗಾಗಿ ಮೆಸ್ಟರ್ ಗಂಗಾಧರಯ್ಯನವರನ್ನೂ ಮತ್ತು ಸದರೀಯವರ ಲೇಣೇದಾರರಾದ ಮಳಿಗೆ ಮಲ್ಲಯ್ಯನ ತರಫ್ ಅಡ್ವೋಕೇಟ್ ಮೆಸ್ಟರ್ ಎಸ್. ರಾಮಸ್ವಾಮಯ್ಯಂಗಾರ್ರ ಯದುರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಜಾಲೋನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ರುಜುವಾತಾದ ಸಾಲದಪಟ್ಟಿ,

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೊರೆತ್ತು ದದಂ	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಗೋರಿಬಿದನೂರು ತಾಲ್ಲೂಕು ಮಂಚೇನಹಳ್ಳೀಲಿರುವ ಮಳಿಗೆ ಮಲ್ಲಯ್ಯ ..	135–15–0	..	ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟು 1895—96ನೇ ಇಸವಿ ಜಾರಿ 761ನೇ ನಂಬರ್ ವಾರಂಟ್ ಮೊಬಲಗು.	

ದಿವಾಳಿಯಾದ ಡಿಕ್ರಿ ದೇಣೇದಾರ ಗೋರೀಬಿದನೂರು ತಾಲ್ಲೂಕು ಮಂಚೇನಹಳ್ಳೀಲಿರುವ ನರಸಿಂಹನ ವಿಷಯದಲ್ಲಿ—

ಸನ್ 1895—96ನೇ ಇಸವಿ ದಿವಾಳಿ ಕೇಸ್ ನಂಬರು 379.

ಹುಕುಂ,

ಮೇಲ್ಕಂಡ ನರಸಿಂಹನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರರಾದ ನರಸಿಂಹನ ಪರವಾಗಿ ಅಡ್ವೊಕೇಟ್ ಮಿಸ್ಟರ್ ಕೃಷ್ಣಮೂರ್ತಿರಾಯರನ್ನೂ ಮತ್ತು ಸದರೀಯವರ ಲೇಣೇದಾರರಾದ ಮಳಿಗೆ ಮಲ್ಲಯ್ಯನ ತರಫ್ ಅಡ್ವೊಕೇಟ್ ಮಿಸ್ಟರ್ ಎಸ್. ರಾಮಸ್ವಾಮಯ್ಯಂಗಾರ್ರು ಯದುರಿಗೂ ದರ್‍ಯಾಫ್ತಿ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ನರಸಿಂಹನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ರುಜುವಾತಾದ ಸಾಲದಪಟ್ಟಿ,

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೊರೆಯುತ್ತದಂ	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಗೋರೀಬಿದನೂರು ತಾಲ್ಲೂಕು ಮಂಚೇನಹಳ್ಳಿಯಲ್ಲಿರುವ ಮಳಿಗೆ ಮಲ್ಲಯ್ಯ ..	135–15–0	..	ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟು 1895—96ನೇ ಇಸವಿ ಜಾರಿ 761ನೇ ನಂ. ವಾರಂಟ್ ಮೊಬಲಗು.	

ಸನ್ 1896ನೇ ಇಸವಿ ಜುಲೈ 4ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿದೆ.

ದಿವಾಳಿಯಾದ ಡಿಕ್ರೀ ದೇಣೇದಾರ ಕೋಲಾರ ತಾಲ್ಲೂಕು ಕಾಯಂಗುತ್ತಾ ಪಾರೆಹೊಸಹಳ್ಳಿಯಲ್ಲಿರುವ ಪಾಪನಹಳ್ಳಿಯ ರುದ್ರಪ್ಪನ ವಿಷಯದಲ್ಲಿ—

ಸನ್ 1895—96ನೇ ಇಸವಿ ದಿವಾಳಿ ಕೇಸ್ ನಂಬರು 271.

ಹುಕುಂ,

ಮೇಲ್ಕಂಡ ರುದ್ರಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರರಾದ ರುದ್ರಪ್ಪನನ್ನು ದರ್‍ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಖ್ಯಾಸ್ತೀ ನೋಟಿಸ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ,—1ನೇ ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ ಕಮರ್ಷಿಯಲ್ ಸ್ಟ್ರೀಟಿನಲ್ಲಿರುವ ಜವಳಿ ಅಂಗಡಿ ಹಾಜಿ ಜಾನ್ ಮಹಮ್ಮದ್‌ಶೇಟ್, ಹಾಜಿ ಅಬ್ದುಲ್ಲಾಶೇಟ್, 2ನೇ ಡಿಟೋ ಹಾಜಿ ಹೈದರ್‌ಖಾನ್‌ಸಾಬಿ ಕಂಪೆನಿ, 3ನೇ ಕೋಲಾರ ಕಠಾರಿಪಾಳ್ಯದಲ್ಲಿರುವ ಸರ್ಜಾಪುರದ ದೊಡ್ಡತಿಮ್ಮಯ್ಯ, 4ನೇ ಕೋಲಾರ ಡಿಸ್ಟ್ರಿಕ್ಟ ಮುಳಬಾಗಲ್‌ನಲ್ಲಿ ಇರುವ ವೈದ್ಯಂ ಕ್ರಿಷ್ಣಪ್ಪ, 5ನೇ ಡಿಟೋ ಅಡಿಕೆ ಮಳಿಗೆ ಮೇಡೂರು ನಂಜುಂಡಪ್ಪ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ರುದ್ರಪ್ಪನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನು ಸಿಖಾಲಸ್ ಮಾಡಲಾಗಿರುತ್ತೆ ಯೆಂದು ಯಿದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ರುಜುವಾತಾದ ಸಾಲದಪಟ್ಟಿ.

ನಂಬರ.	ಲೇಣೇದಾರರು ಅಥವಾ ದಾವಾದಾರರು ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	[illegible]	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ ಕಮರ್ಷಿಯಲ್ ಸ್ಟ್ರೀಟಿನಲ್ಲಿರುವ ಜವಳಿ ಅಂಗಡಿ ಹಾಜಿ ಜಾನ್ ಮಹಮ್ಮದ್‌ಶೇಟ್, ಹಾಜಿ ಅಬ್ದುಲ್ಲಾಶೇಟ್ ..	198—5—6	..	ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ ಜಡ್ಜಿಯವರ ಕೋರ್ಟು 1894–95ನೇ ಇಸವಿ ಸ್ಮಾಲ್‌ಕಾಜ್ 148ನೇ ನಂಬರ್ ಡಿಕರಿ ಮೊಬಲಗು.	
2	ಹಾಜಿ ಹೈದರ್‌ಖಾನ್‌ಸಾಬಿ ಕಂಪೆನಿ ..	140—0—0	..	ಪ್ರಾಂಸರಿ ನೋಟ ಬಾಬತು.	
3	ಕೋಲಾರದ ಕಠಾರಿಪಾಳ್ಯದಲ್ಲಿರುವ ಸರ್ಜಾಪುರದ ದೊಡ್ಡತಿಮ್ಮಯ್ಯ ..	86—0—0	..	ಕೋಲಾರದ ಮುನ್ಸಿಫ್ ಕೋರ್ಟ 1893-94ನೇ ಇಸವಿ ಅಸಲ್ 455ನೇ ನಂಬರ್ ಡಿಕರಿ ಮೊಬಲಗು.	
4	ವೈದ್ಯಂ ಕ್ರಿಷ್ಣಪ್ಪ ..	125—0—0	..	ಪತ್ರದ ಬಾಬತು.	
5	ನಂಜುಂಡಪ್ಪ ..	20—0—0	..	ಲೆಖ್ಖದ ಬಾಬತು.	

ಸನ್ 1896ನೇ ಇಸವಿ ಜೂನ್ 17ನೇ ತಾರೀಖಿನಲ್ಲಿ ಈ ಕೋರ್ಟ ಮೊಹರು ನಮ್ಮ ದಸ್ತಖತನಿಸಿ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರಿ ದೇಣೇದಾರ ತುಮಕೂರು ಡಿಸ್ಟ್ರಿಕ್ಟು ಗುಬ್ಬಿಯಲ್ಲಿರುವ ನಿಜಗಲ್ ಹುಚ್ಚವೀರಪ್ಪನ ಮಗ ಶಿದ್ದಪ್ಪನ ವಿಷಯದಲ್ಲಿ—

ಸನ್ 1894—95ನೇ ಇಸವಿ ದಿವಾಳಿ ವ್ಯಾಜ್ಯದ ನಂಬರ್ 257.

ಹುಕ್ಕುಂ,

ಮೇಲ್ಕಂಡ ಶಿದ್ದಪ್ಪನು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಈ ಕೋರ್ಟು ರೂಬರೂ ಅರ್ಜಿದಾರನ ಪರವಾಗಿ ಅಡ್ವೊಕೇಟ್ ಮೆಸ್ಟರ್ ಕೆ. ಟಿ. ನರಸಿಹ್ಮಯ್ಯಂಗಾರ್ಯವರ ಸಮಕ್ಷಮದಲ್ಲಿಯೂ ಮತ್ತು ಐದನೇ ಅರ್ಜಿದಾರನ ಲೇಣೇದಾರರಾದ 1ನೇ ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕು ಬುಕ್ಕಾಪಟ್ಟಣದಲ್ಲಿ ವಾಸವಾಗಿರುವ ಮದ್ದೋಡ ಬಸಪ್ಪನವರ ಮಗ ಮದ್ದೋಡಪ್ಪನ ತರಫ್ ಫಸ್ಟ್‌ಗ್ರೇಡ್ ಪ್ಲೀಡರ್ ಮೆಸ್ಟರ್ ಕ್ರಿಷ್ಣಪ್ಪನವರ ಮುದುರಾಗಿಯೂ ದರ್ಖ್ಯಾಸ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರಿಗೆ ಈ ದರ್ಖ್ಯಾಸ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ—2ನೇ ತುಮಕೂರು ಡಿಸ್ಟ್ರಿಕ್ಟು ಗುಬ್ಬಿಯಲ್ಲಿರುವ ಪೇಟೆ ನಂಜಪ್ಪ, 3ನೇ ತುಮಕೂರು ಡಿಸ್ಟ್ರಿಕ್ಟು ಗುಬ್ಬೀ ತಾಲ್ಲೂಕು ನಿಟ್ಟೂರು ಸಮ್ಮತು ಮತ್ತಿಗಟ್ಟದಲ್ಲಿರುವ ದೊಡ್ಡ ಬಸಪ್ಪನ ಮಗ ಪತ್ರೆಪ್ಪ.

ಸದರೀ ಶಿದ್ದಪ್ಪನು ದಿವಾಳಿಯಾದವನೆಂದುನ್ನೂ ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದುನ್ನೂ ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. 1ನೇ ಕ್ರೆಡಿಟರು ಮದೋಡಪ್ಪನು ಐರ್ಜ ದಿವಾಳಿಯಾದವನ ಜೆಂದಗಿಗೆ ರಿಸೀವರಾಗಿ ಮೊಕರರ್ ಮಾಡಲ್ಪಡತಕ್ಕದ್ದೆಂದುನ್ನೂ ಸದರೀ ರಿಸೀವರಾದವನು ವಡನೆ ತನ್ನ ರಿಸೀವರ ಕೆಲಸಗಳಿಗೆ ಪ್ರವೃತ್ತ ಪಡತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟು ಇಧೆ.

ಸನ 1896ನೇ ಇಸವಿ ಫಿಬ್ರುವರಿ 22ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಈ ಕೆಳಗಿನ ಪಟ್ಟಿಯಲ್ಲಿ ಕಂಡ ಜನರು ಅವರ ಹೆಸರಿಗೆ ಯದುರಾಗಿ ದಾಖಲಾಗಿ ಇರುವ ಸಾಲದ ಮೊಬಲಗುಗಳಿಗೆ ಲೇಣೇದಾರರೆಂದು ರುಜು ಮಾಡಿಧಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟು ಇಧೆ.

ನಂಬರು.	ಲೇಣೇದಾರ್‍ರ ಹೆಸರು ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜುವಾದ ಮೊಬಲಗು.	ಸಾಲಗಳ ಸ್ವಭಾವ ಪ್ರತಿಫಲ ಮತ್ತು ಏನಾದರೂ ಈಡು.
1	ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕು ಬುಕ್ಕಾಪಟ್ಟಣದಲ್ಲಿರುವ ಮದೋಡ ಬಸಪ್ಪನವರ ಮಗ ಮದೋಡಪ್ಪ. ..	427—0—0	ತುಮಕೂರು ಮುನ್ಸಿಫ್ ಕೋರ್ಟಿ 1890ನೇ ಇಸವಿ ಅಸಲ್ 14ನೇ ನಂಬರ್ ಡಿಕರಿ ಮೊಬಲಗ್.

ಸನ 1896ನೇ ಇಸವಿ ಜುಲೈ 1ನೇ ತಾರೀಖಿನಲ್ಲಿ ಈ ಕೋರ್ಟಿ ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿದೆ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಗರುಡಾಚಾರಿಯ ವಿಷಯದಲ್ಲಿ—

ಸನ 1895—96ನೇ ಇಸವಿ ದಿವಾಳಿ ವ್ಯಾಜ್ಯ ನಂಬರ್ 382.

ಹುಕ್ಕುಂ,

ಮೇಲ್ಕಂಡ ಗರುಡಾಚಾರಿಯು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಈ ಕೋರ್ಟಿನ ರೂಬರೂ ಅರ್ಜಿದಾರನ ಸಮಕ್ಷಮದಲ್ಲಿಯೂ ಮತ್ತು ಐರ್ಜ ಅರ್ಜಿದಾರನ ಲೇಣೇದಾರರಾದ 1ನೇ ಬೆಂಗಳೂರು ಚಿಕ್ಕಪೇಟೆ ವುತ್ತರಾದಿ ಮಠದಗಲ್ಲಿಯಲ್ಲಿರುವ ಬುಕ್ಕು ಡಿಪೋ ಲೇಟ್ ಮ್ಯಾನೇಜರ್ ನಾರಣಯ್ಯಂಗಾರ್‍ರು, 2ನೇ ಡಿಟೋ ಚಿಕ್ಕಪೇಟೆಯಲ್ಲಿ ಭಕ್ಷಿ ಗಂಗಯ್ಯನವರ ಮನೆ ಹತ್ತಿರ ಇರುವ ಹೊನ್ನಪ್ಪನ ಮಗ ಗಂಗಪ್ಪನವರ ಯದುರಾಗಿಯೂ ದರ್ಯಾಫ್ತೀ ಮಾಡಲ್ಪಟ್ಟಿತು.

ಸದರೀ ಗರುಡಾಚಾರಿಯು ದಿವಾಳಿಯಾದವನೆಂದುನ್ನೂ ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದುನ್ನೂ ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. 1ನೇ ಕ್ರೆಡಿಟರ್ ನಾರಣಯ್ಯಂಗಾರ್‍ರು ಐರ್ಜ ದಿವಾಳಿಯಾದವನ ಜೆಂದಗಿಗೆ ರಿಸೀವರಾಗಿ ಮೊಕರರ್ ಮಾಡಲ್ಪಡತಕ್ಕದ್ದೆಂದುನ್ನೂ ಸದರೀ ರಿಸೀವರಾದವನು ವಡನೆ ತನ್ನ ರಿಸೀವರ ಕೆಲಸಗಳಿಗೆ ಪ್ರವೃತ್ತ ಪಡತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟು ಇಧೆ.

ಈ ಕೆಳಗಿನ ಪಟ್ಟಿಯಲ್ಲಿ ಕಂಡ ಜನರು ಅವರ ಹೆಸರಿಗೆ ಯದುರಾಗಿ ದಾಖಲಾಗಿ ಇರುವ ಮೊಬಲಗುಗಳಿಗೆ ಲೇಣೇದಾರರೆಂದು ರುಜುವು ಮಾಡಿಧಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟು ಇಧೆ.

ನಂಬರು.	ಲೇಣೇದಾರ್‍ರ ಹೆಸರು ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜುವಾದ ಮೊಬಲಗು.	ಸಾಲಗಳಸ್ವಭಾವ ಪ್ರತಿಫಲ ಮತ್ತು ಏನಾದರೂ ಈಡು.
1	ಬೆಂಗಳೂರು ಚಿಕ್ಕಪೇಟೆ ವುತ್ತರಾದಿ ಮಠದಗಲ್ಲಿಯಲ್ಲಿರುವ ಬುಕ್ಕುಡಿಪೋ ಲೇಟ್ ಮ್ಯಾನೇಜರ್ ನಾರಣಯ್ಯಂಗಾರ್‍ರು. ..	116—15—9	ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿ 1895—96ನೇ ಇಸವಿ ಜಾರಿ 1682ನೇ ನಂ. ವಾರಂಟು ಮೊಬಲಗು.

ಸನ 1896ನೇ ಇಸವಿ ಜುಲೈ 20ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 23ನೇ ಸೆಪ್ಟಂಬರ 1896.

1. ಕಂದಾಯದ ಬಾಕಿದಾರರಾದ ಹನುಮಂತರಾಯನಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಫಾರ್‌ಫಿಟ್ಟಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಸಿಡ್ಲಘಟ್ಟ ತಾಲ್ಲೂಕು ಅಮಲ್ದಾರ್ ಕಚೇರೀಲಿ 1896ನೇ ನವಂಬರ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1896–97ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 1,408–13–0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲವಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು   ದಿವಸಗಳಲ್ಲಿ ಪಾವತಿಮಾಡಲ್ಪಡದೆ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುವಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ, ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸ್ವತ್ತಿನ ತಪ್ಶೀಲ್.									ಸರಕಾರಕ್ಕೆ ಬರಬೇಕಾದ [illegible] ಬಗ್ಗೆ ಸಲ್ಲತಕ್ಕ ಬಾಕಿ ಮೊಬಲಗು.		
				ಕಟ್ಟಡಗಳು.		ಜಮೀನು.									
				ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಬಾಬಿನ ಹೆಸರು.	ಖುಷ್ಕಿ, ತರಿ, ಬಾಗಾಯತು.	ವಿಸ್ತೀರ್ಣ.		ಆಕಾರ.					
1	2	3	4	5	6	7	8	9		10			11		
					ರೂ.ಆ.ಪೈ.			ಎ.	ಗುಂ.	ರೂ.	ಆ.	ಪೈ.	ರೂ.	ಆ.	ಪೈ.
ಶಿಡ್ಲಘಟ್ಟ.	ಜಂಗಮಕೋಟೆ.	ಅಂಗಟ್ಟ ಕಾಯಂಗುಂಟಾ ಗ್ರಾಮ.	ಹನುಮಂತ ರಾವ್.	..	0	ಪೂರಾ ಗ್ರಾಮ.	ಖುಷ್ಕಿ	302	28	516	8	0	1408	13	0
							ಬಾಗಾಯತು	18	28	106	0	0			
							ಪರಂಪೋಕ್	92	14	1	8	0			
								413	30	624	0	0	ಹರಾಜ್ ತಾರೀಖು ವರಿವಿಗೆ ಬಡ್ತಿ ಕೊಡಬೇಕು.		

* ಈ ಹರಾಜು ಹಿಂದಿನವರು ಮಾಡಿದ ಭೋಗ್ಯ ವಗೈರೆಗಳಿಂದ ಯೇನೂ ಬಾಧಕವಾಗುವದಿಲ್ಲ.

ತಾರೀಖು 13ನೇ ಆಗಸ್ಟ್ 1896ನೇ ಇಸವಿ.

ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿ ಯಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರು ಚಡಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜು ಕೈದಾದ ಕೂಡ್ಲೆ ಚಡಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣೀ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯಿತು 15ನೇ ದಿನದ ಸೂರ್ಯ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರಿ ರಜಾ ದಿವಸವಾಗಿದ್ದರೆ, ಆ ತರುವಾಯ ಆಫೀಸು ಖುಲ್ಲಾ ಆಗುವ ಮೊದಲನೇ ದಿನ ಸೂರ್ಯ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನು ಪಾವತಿಮಾಡಬೇಕು.

4. ಪೂರಾ ಹರಾಜು ಮೊಬಲಗನ್ನು ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ ಠೇವಣೀ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾಬಾಕಿ ವುಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸ್ವತ್ತು ಪುನಃ ಹರಾಜುಮಾಡುವದು ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನು ಸದರೀ ಸ್ವತ್ತಿಗೇ ಆಗಲಿ ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜು ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ ಯಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣಾದರಿಂದ ವಿಶೇಷ ತೊಂದರೆ ವುಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ ಡೆಪ್ಯುಟಿ ಕಮ್ಮಿಷನರು ಅವಶ್ಯಕವಾದ ಶಿಫಾರಸ್ಸಿನೊಡನೆ ಗವರ್ನಮೆಂಟನವರ ಅಪ್ಪಣೆ ಪಡೆಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾಗಿದ್ದಲ್ಲಿ ಆ ಮೇರೆ ಕಮ್ಮಿಯಾದಷ್ಟು ಮೊಬಲಗನ್ನು ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿ ಯಂತೆ ವಸೂಲ್ಮಾಡಲ್ಪಡುವದು.

5. ಹರಾಜು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ವಳಪಟ್ಟುಯಿರುತ್ತೆ.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಗೋಸ್ಕರ ಸವಾಲ್‌ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು. ಹಾಗಿಲ್ಲದೆ ಯಿದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜ್ ಖಾಯಂ ಆದ ನಂತರ ಜಮೀನನ್ನು ಹಿಡುವಳಿಯಲ್ಲಿ ಯಿಟ್ಟುಕೊಳ್ಳತಕ್ಕ ಬಗ್ಯೆ ಸಾಗುವಳಿ ಚೀಟಿ ಯಾನೆ ಬರಹಮೂಲಕವಾದ ಅಪ್ಪಣೆಯನ್ನು (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ (ಡಿ) ಯಲ್ಲಿ ಕಂಡ 2ನೇ ನಂಬರು ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

ಚಿಕ್ಕಬಳ್ಳಾಪುರದ ತಾಲ್ಲೂಕು ಪೆರೇಸಂದ್ರದ ಹೋಬಳಿಯಲ್ಲಿ ಹೊಸದಾಗಿ ತಯಾರಾಗಿರುವ ರಾಮಸಾಗರ ಕೆರೇ ನೀರಿನಿಂದ ಸಾಗುವಳಿಗೆ ಬರುವ ಚಿಕ್ಕಬಳ್ಳಾಪುರದ ತಾಲ್ಲೂಕು ಪೆರೇಸಂದ್ರದ ಹೋಬಳಿ ಬೋಯಿನಹಳ್ಳೀ ಗ್ರಾಮದ ಸರ್ವೇ ನಂಬರುಗಳು ಹರಾಜು ಬಗ್ಯೆ ತಯಾರಾದ ತಪ್ಶೀಲ್ ತಖ್ತಾ.

M71

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನು. ಸರ್ವೇ ನಂಬರ್.	ಬಾಬು ತರೀ ಖುಷ್ಕೀ ಬಾಗಾಯಿತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ವಗೈರೆ. ಕೂಡಿದ ಮಟ್ಟ ಗೆಕರಾರ್ವಾಕಾ ತಪ್ಸೀಲ್.	ಹರಾಜು ಸ್ಥಳ ತಾರೀಖು ಮತ್ತು ಕಾಲ.	ಹಾರಾಜು ನಡಿಸತಕ್ಕವರ ಹೆಸರು.	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ವೊಹಳಗು ಮತ್ತು ಇತರ ಷರಾ.
1	2	3	4	5	6	7	8	9	10	11
					ಎ. ಗುಂ.	ರೂ. ಆ. ಪೈ.				
ಚಿಕ್ಕಬಳ್ಳಾಪುರ	ಪೆರೇಸಂದ್ರ	ಬೋಯಿನಹಳ್ಳಿ	1	ತರೀ	1—32	7 8 0	..	ಈ ಜಮೀನುಗಳ ಬಳಿ 1896ನೇ ಇಸವಿ ಅಕ್ಟೋಬರ್ 26 ಯಿಪ್ಪತ್ತಾರನೇ ತಾರೀಖು ಸೋಮವಾರ ದಿವಿ 11 ಘಂಟೆಗೆ.	ಚಿಕ್ಕಬಳ್ಳಾಪುರದ ಅಮಲ್ದಾರ್.	ಈ ಜಮೀನುಗಳು ಈಗ ಇರುವ ಹಳೇ ಕಾಲ್ವೇ ನೀರಿನಿಂದಲೇ ಸಾಗುವಳಿ ಮಾಡಿಕೊಳ್ಳಬೇಕಾಗಿರುತ್ತೆ.
			9	ಖುಷ್ಕೀ	3—19	5 8 0	..			
			11	ತರೀ	3—10	22 0 0	ಜಾಲಿಗಿಡ 1			
			27	ತರೀ	0—18	3 0 0	..			
			108	ತರೀ ಖುಷ್ಕೀ	1—29 0—23	10 0 0	ಜಾಲಿಗಿಡ 2			
			133	ತರೀ ಖುಷ್ಕೀ	1—17 0— 6	8 0 0	ಡಿಟೋ 3			
			134	ತರೀ ಖುಷ್ಕೀ	0—24 0—39	4 8 0	ಡಿಟೋ 1			
			127	ಖುಷ್ಕೀ	1—39	2 12 0	ಜಾಲೀ ಹುಂಗೀ ವಗೈರೇ 202			
			1 127	ಡಿಟೋ	1—22	2 0 0				
			2 127	ಡಿಟೋ	2— 6	3 0 0				
			3 127	ಡಿಟೋ	1—37	2 12 0				
			4 26	ಖರಾಬು	0—15	ಖರಾಬು	..			
			1 28	ಡಿಟೋ	1—25	ಖರಾಬು	..			

ಸರ್ವೇ 26—28ನೇ ನಂಬರು ಖರಾಬು ಜಮೀನುಗಳಿಗೆ ಬಾಜೂ ಆಕಾರ ಕಂಡ ನಂಬರುಗಳ ದರದಂತೆ ದಾಖಲ್ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯುಟಿ ಕಮಿಷನರ್.

ನೋಟಿಸ್.

ಮೈಸೂರು ಮುನ್ಸೀಫ್ ಕೋರ್ಟಿನಲ್ಲಿ.

1896—97ನೇ ಇಸವಿ ಸಿವಲ್ ಸೂಟ್ ನಂಬರು 64.

ವಾದಿಗಳು—ಹುಣಸೂರು ಟವನಿನಲ್ಲಿಯಿರುವರು,

1. ಮೈಲಾಂಡಾಚಾರಿ ಮಗ ಕೂರಸಾಮಿ ಆಚಾರಿ
2. ಚಪ್ಪದ್ರಿ ಮತ್ತು ಯಜಮಾನ ದಾಸಪ್ಪಾಚಾರಿ
3. ಮರಗೆಲಸದ ಮುತ್ತುಸಾಮಿ ಆಚಾರಿ
4. ಮರಗೆಲಸದ ಸುಬ್ರಾಯಾಚಾರಿ
5. ಚಿನ್ನಗೆಲಸದ ನಾಗಾಚಾರಿ
6. ಚಿನ್ನಗೆಲಸದ ದಾಸಂಣಾಚಾರಿ

7. ಚಿನ್ನ ಕೆಲಸದ ಲಿಂಗಣ್ಣಾಚಾರಿ
8. ಚಿನ್ನ ಕೆಲಸದ ವೇಲಾಯುಧಾಚಾರಿ
9. ಮರಕೆಲಸದ ವೈಯಾಪುರಿಯಾಚಾರಿ
10. ಚಿನ್ನ ಕೆಲಸದ ದೊಡ್ಡ ಸುಬ್ಬಣ್ಣಾಚಾರಿ
11. ಹುಣಸೂರು ಟವರ್ಗೆ ಶೇರಿದ ಕಲ್ಲುಕುಣಿಕೆಯಲ್ಲಿರುವ ನರಸುಹ್ಮಾಚಾರಿ
12. ಡಿಟೋ ಲಕ್ಷ್ಮೀಪತಿಯಾಚಾರಿ
13. ಡಿಟೋ ಲಕ್ಕಣ್ಣಾಚಾರಿ
14. ಹುಣಸೂರಲ್ಲಿಯಿರುವ ಮರಗೆಲಸದ ಷಣ್ಮುಖಾಚಾರಿ ವಗೈರೆ

ಪ್ರತಿವಾದಿಗಳು—ಹುಣಸೂರಲ್ಲಿಯಿರುವವರು,

1. ರಾಮಸ್ವಾಮಿ ಆಚಾರಿ ಮಗ ಕುಳ್ಳಾಚಾರಿ
2. ಚಿನ್ನ ಕೆಲಸದ ಶೇಷಾಚಾರಿ
3. ಚಿನ್ನ ಕೆಲಸದ ಡಿಟೋ ನರಸಾಚಾರಿ
4. ಬಿಳಿಕೆರೆನಂಜಪ್ಪಾಚಾರಿ
5. ನಾರಾಯಣಸ್ವಾಮಿ ಆಚಾರಿ
6. ಡಿಟೋ ಕಂಚುಗಾರ ಅಮಯಪ್ಪಾಚಾರಿ
7. ಡಿಟೋ ಮರಕೆಲಸದ ಕಾಳಪ್ಪಾಚಾರಿ ವಗೈರೆ

ಸಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಹುಣಸೂರು ಟವನಿನಲ್ಲಿ ಯಿರುವ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

ಮೇಲ್ಕಂಡ ಮೊಕದ್ದಮೆಯಲ್ಲಿನ ವಾದಿಯಾದವರು, ಈ ಮೊಕದ್ದಮೆಯನ್ನು ತಮ್ಮ ಪರವಾಗಿಯೂ ಮತ್ತು ತಮ್ಮ ಜಾತಿ ಇತರ ಜನಗಳ ಪರವಾಗಿಯೂ ದಾವಾ ದಾಖಲ್ಮಾಡಲು ಕೋರ್ಟಿನವರ ಅಪ್ಪಣೆಯನ್ನು ಪ್ರಾರ್ಥಿಸಿದ್ದಾರೆಂದುನ್ನೂ 1—2ನೇ ವಾದೀರು ಈ ಛತ್ರದ ಸುಫರ್ದನ್ನು ಹೊಂದಲು, ಮತ್ತು ಈ ಛತ್ರಕ್ಕೆ ಬೀಗಹಾಕುವದು ತೆಗಿಯುವದು ವಗೈರೆಯನ್ನು ಈ ಛತ್ರದ ಇತರ ಆಡಳಿತಗಳನ್ನ ನಡಿಸಲು, ಹಕ್ಕುದಾರರೆಂತ್ತ ಹಕ್ಕು ಸ್ಥಾಪಿಸಿ ಪ್ರತಿವಾದೀರಿಂದ ಛತ್ರವನ್ನು ವಾದೀರ ಸುಫರ್ದಿಗೆ ಕೊಡಿಸಬೇಕೆಂತಲೂ ಮತ್ತು ಪ್ರತಿವಾದೀರೆಲ್ಲರೂ ಸಹ 1—2ನೇ ವಾದೀರ ಅನುಭವದಲ್ಲಿ ಹತ್ತು ಜನರಂತೆ ವುಪಾಕರ್ಮ, ಶಿವರಾತ್ರಿ, ಭಜನೆ, ಜಾತಿ ಪಂಚಾಯಿತಿ ವಗೈರೇ ಎಲ್ಲಾ ಕೆಲಸಗಳಿಗೂ ಸಹ ಈ ಛತ್ರಕ್ಕೆ ಪ್ರವೇಶಿಸಿ ಈ ಛತ್ರವನ್ನು ವುಪಯೋಗಿಸಬಹುದೆಂತ್ತಲೂ ಮತ್ತು ಮೈಸೂರು ಟವರ್ ಮೇಜಿಸ್ಟ್ರೇಟರವರು ಮಾಡಿದ 1894—95ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ 232ನೇ ನಂಬರು ಆರ್ಡರನ್ನು ರದ್ದುಪಡಿಸಿ ಹಾಲಿ ಪ್ರತಿವಾದೀರು, ವಾದೀರು ಛತ್ರಕ್ಕೆ ಪ್ರವೇಶಿಸಿ ಛತ್ರವನ್ನು ವುಪಯೋಗಿಸಲು ಇರುವ ಪ್ರತಿಬಂಧಕವನ್ನು ತಪ್ಪಿಸಬೇಕೆಂತಲೂ,

B. ಹಾಗೆ ವಾದೀರೊಬ್ಬರೇ ಸುಫರ್ದು ಹೊಂದಲು ಅಥವಾ 1—2ನೇ ವಾದೀರಲ್ಲಿ ಪ್ರವೇಶಿಸಬೇಕೆಂತ ಡಿಕ್ರಿಕೊಡಲು ಆಗುವದಿಲ್ಲವೆಂತ ಒಂದು ವೇಳೆ ಕೋರ್ಟಿನವರಿಗೆ ತೋರಿಬಂದಲ್ಲಿ ಪ್ರತಿವಾದೀರಂತೆ ವಾದೀರಿಗೂ ಈ ಛತ್ರದ ಜಂಟಿ ಸುಫರ್ದನ್ನು ಕೊಡಿಸಬೇಕೆಂತ್ತಲೂ,

C. ಈ ಮೊಕದ್ದಮೆ ಕೋರ್ಟು ಖರ್ಚು ಮತ್ತು ಕೋರ್ಟಿನವರಿಗೆ ಯುಕ್ತತೋರುವ ಇನ್ನೂ ಇತರ ಪರಿಹಾರಗಳಿಗೂ ಸಹ ದಾವಾ ದಾಖಲ್ಮಾಡಿರುತ್ತಾರೆಂದುನ್ನೂ ಸದರೀ ಮೊಕದ್ದಮೆ 1896ನೇ ಇಸವಿ ಆಕ್ಟೋಬರು 29ನೇ ತಾರೀಖಿಗೆ ಯಿಷ್ಯೂಬಗ್ಗೆ ಹಿಯರಿಂಗು ಯಿಟ್ಟು ಇರುವದರಿಂದ ಈ ಮೊಕದ್ದಮೆಕ್ಕೆ ಕಕ್ಷಿಗಾರನಾಗಿ ಶೇರಬೇಕೆಂದು ಯಿರುವ ಸಮಸ್ತ ಜನಗಳೂ ಈ ಕೋರ್ಟು ರೂಬರೂ ಮೇಲ್ಕಂಡ ತಾರೀಖಿಗೆ ಹಾಜರಾಗತಕ್ಕದ್ದೆಂದು ಪ್ರಸಿದ್ಧಪಡಿಸಿಥೆ.

31—8—96.

ವಿ. ರಂಗಾಚಾರ್,
ಮುನ್ಸೀಫ್.

ಫಾರೆಸ್ಟ್ ಡಿಪಾರ್ಟ್ಮೆಂಟ್ ಮೈಸೂರ್ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 3ನೇ ಅಕ್ಟೋಬರ್ 1896.

ಮೈಸೂರು ಡಿಸ್ಟ್ರಿಕ್ಟ್ ಇದರಡಿ ಕಂಡ ಫಾರೆಸ್ಟುಗಳಿಂದ ಅವುಗಳ ಬಾಜೂದಲ್ಲಿ ತೋರಿಸಲ್ಪಡುವ ಆಯಾ ಅಂಚೆಗಳಿಗೆ ಸನ್ 1897ನೇ ಇಸವಿ ಜನವರಿ ತಾರೀಖು 15ರ ವಳಗಾಗಿ ವಣ ನಾಟಾ ಸಾಗಿಸುವದಕ್ಕೆ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಫಾರೆಸ್ಟ್.	ಅಂಚೆ.	ಲದ್ಯೆ ಮಾಡತಕ್ಕಮೊತ್ತ.	ಸರಾಸರಿ ಫಾಸಲೆ.
ಹೆಗ್ಗಡದೇವನಕೋಟೆ.	ಬೇಗೂರು ..	(1) ಗುಂಡ್ರೆ ..	2,000	
		(2) ಜೈರಿಗದ್ದೆ ..	4,000	
		(3) ವನಕೆಗುಂಡಿಮಾಳ ..	2,000	
	ಐನೂರುಮಾರಿಗುಡಿ ..	(1) ಕಲ್ಲುಕೆರೆ ..	4,000	
		(2) ವಾರಂಚಿ ..	2,000	
		(3) ಹಿಂಡುಸ್ತಾಲ್ ಕಟ್ಟೆ ..	2,000	
	ಕಾಕನಕೋಟೆ ..	(1) ಆನೆಮಾಳ ..	2,000	
		(2) ತ್ಯಾಗದಮರದ ತಿಟ್ಟು ..	2,000	
		ಜುಮ್ಲಾ ..	20,000	

2. ತಮಾಂ ದರಖಾಸ್ತುಗಳೂ "ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಫಾರೆಸ್ಟುಗಳಿಂದ ಅಂಚೆಗಳಿಗೆ ಸಾಗಿಸುವದಕ್ಕೆ ಮಾತ್ರವೇ, ದರಖಾಸ್ತು" ಯಂಬುವದಾಗಿ ಮೇಲ್‌ವಿಳಾಸ ಬರದು ಮೊಹರುಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಫಾರೆಸ್ಟಿಗೂ 50 ರೂಪಾಯಿ ಬೆಲೆಯುಳ್ಳ ಕರೆನ್ಸೀನೋಟಾಗಲಿ, ಯಾ ಪ್ರೋನೋಟಾಗಲಿ ರವಾನಿಸಬೇಕು. ದರಖಾಸ್ತುಗಳು ಅಜಮಾಯಿಷಿಯಿಂದ ಮೇಲ್ಕಂಡ ಕರೆನ್ಸೀನೋಟುಗಳನ್ನ ವಾಪಸು ಮಾಡಲ್ಪಡುವವು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1896ನೇ ಇಸವಿ ಆಕ್ಟೋಬರು 31ನೇ ತಾರೀಖು ವರಿಗೆ ಅಂಗೀಕರಿಸಲ್ಪಡುವವು.

4. ದರಖಾಸ್ತುಮಾಡಲು ಇಚ್ಛೆವುಳ್ಳ ಕಂಟ್ರಾಕ್ಟುದಾರನು ಮೇಲ್ಕಂಡ ಫಾರೆಸ್ಟುಗಳ ಪೈಕಿ ವೊಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ, ತಯಾರಾದ್ದನ್ನ ಸಾಗಿಸುವದಕ್ಕೆ ಮಾತ್ರ, ದರಖಾಸ್ತು ಮಾಡಿದ ಪಕ್ಷದಲ್ಲಿ ನಾಟುವನ್ನು ಪ್ರತಿ ವೊಂದು ಫಾರೆಸ್ಟಿನಿಂದಲೂ ಅಂಚೆಗಳಿಗೆ ಸಾಗಿಸುವದಕ್ಕೆ ಮಾತ್ರ, ವೊಪ್ಪಿಕೊಳ್ಳುವ, ಕಮ್ಮಿ ದರವನ್ನು ಬೇರೆ ಬೇರೆಯಾಗಿ ನಮೂದಿಸತಕ್ಕದ್ದು. ಸಲೆ ಅಡಿ 1ಕ್ಕೆ ಇಷ್ಟು ದರವೆಂತ ನಮೂದಿಸಬೇಕು.

5. ಸರ್ 1897ನೇ ಇಸವಿ ಜನವರಿ 17ರ ವೊಳಗಾಗಿ ಮೇಲೆ ನಮೂದಿಸಿರುರ ಪೂರಾ ಮೊತ್ತವನ್ನು ಆಯಾಯ ಅಂಚೆಗಳಿಗೆ ಸಾಗಿಸಬೇಕು.

6. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡದುಕೊಳ್ಳುವ ಬಗ್ಯೆ ಜಾಮೀನ್ ತರೀಕ್ ಫಾರೆಸ್ಟ್ 1ಕ್ಕೆ 100 ರೂಪಾಯಿ ಪ್ರಕಾರ ಡಿಪಾಜಿಟ್ಟು ಕಟ್ಟತಕ್ಕದ್ದು. ಮೇಲ್ಕಂಡ ಷರತ್ತು ಮೇರೆ ನಡಿಯಲು ತಪ್ಪಿದಲ್ಲಿ ಠೇವಣೀ ಮೊಬಲಗನ್ನ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

7. ಬ್ಯಾಸಿಗೆ ಕಾಲದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಮಾಡಲ್ಪಡುವ ಕಾಯಿದೆ ಕಾನೂನ್‌ಗಳಂತೆ ನಡಿಯಲು ಕಂಟ್ರಾಕ್ಟುದಾರನು ಬದ್ಧನಾಗಿರುವನು.

8. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಕಮ್ಮಿದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟು ಕನ್‌ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

9. ಸಾಮಾನುಗಳು ಸಾಗಿಸುವದಕ್ಕೆ ಗಾಡಿ, ರಸ್ತೆ ವಗೈರೇ ದಾರಿಗಳನ್ನು ಮಾಡಿಕೊಡಲು ಸರ್ಕಾರದವರು ಬದ್ಧರಾಗಿಲ್ಲವಾದ ಸಬಬು ವುದ್ದೇಸಿಸುವ ಕಂಟ್ರಾಕ್ಟುದಾರನೇ ಆತನ ಹಾತ್‌ಲಾಗವಡಿನಿಂದ ತಕ್ಕ ಯೇರ್ಪಾಡುಗಳು ಮಾಡಿಕೊಳ್ಳತಕ್ಕದ್ದು. ಮರಗಳನ್ನು ಸಾಗಿಸದೆ, ಇರುದಪಕ್ಷ ಯಾವ ಸಬಬುಗಳನ್ನೂ ಅಂಗೀಕರಿಸಲಾರವು.

10. ವುದ್ದೇಸಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ವಿಚಾರಿಸಿ ತೆಗದುಕೊಳ್ಳಬಹುದು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಸಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ ನೋಟೀಸ್.

ಬೆಂಗಳೂರು ಸಬ್ ಡಿವಿಜನ್ ಮುನ್‌ಸಿಫ್ ಕೋರ್ಟ್.

ಸರ್ 1895—96ನೇ ಇಸವಿ ವೊರಿಜನಲ್ ನಂಬರ್ 900.

ವಾದಿಗಳು.	ಪ್ರತಿವಾದಿಗಳು.
ಕಾರ್ಕಾಹಳ್ಳಿ ತಾಲ್ಲೂಕು ಮರುಳವಾಡಿ ಗ್ರಾಮದಲ್ಲಿ ಇರುವವರು.	ಕಾರ್ಕಾನಹಳ್ಳಿ ತಾಲ್ಲೂಕು ಮರುಳವಾಡಿ ಗ್ರಾಮದಲ್ಲಿ ಇರುವವರು.
1ನೇ ಪಾಂಚಾಳದ ದೊಡ್ಡಾಚಾರಿ.	1ನೇ ಗಾಣಿಗರ ಜುಟ್ಟ.
2ನೇ ಪಾಂಚಾಳದ ಚವುಡಾಚಾರಿ.	2ನೇ 1ನೇ ಪ್ರತಿವಾದೀ ಹೆಂಡತಿ ಪುಟ್ಟನಂಜಮ್ಮ.
3ನೇ ಮಂಟೆಗಾಚಾರಿ.	

ಮೇಲ್ಕಂಡ ಮರುಳವಾಡಿ ಗ್ರಾಮದಲ್ಲಿ ಇರುವ ಗಣೇಶನದೇವಸ್ಥಾನವು ಡಿಟೋ ದೇವಸ್ಥಾನದ ಉತ್ತರಕಡೆ ಗೋಡೆ ಇದಕ್ಕೆ ಉತ್ತರದಲ್ಲಿ ಇರುವ ಖಾಲೀ ಜಮೀನ್ ಸಹ ವಾದಿಗಳೇ ಮೊದಲಾದ ಕುಲಸ್ತರಿಗೆ ಸೇರಿದ್ದಾದ್ದರಿಂದ ಪ್ರತಿವಾದಿಗಳಿಂದ ತಮ್ಮ ಸ್ವಾಧೀನಕ್ಕೆ ಬಿಡಿಸಿಕೊಡಬೇಕೆಂತ ಸದರೀ ವಾದಿಗಳು ಈ ಕೋರ್ಟಿನಲ್ಲಿ ದಾವಾ ತಂದು ಯಿರುವದ್ದರಿಂದಲೂ ಸದರೀ ಮರುಳವಾಡಿ ಗ್ರಾಮದ ಹತ್ತು ಜನ ಪಾಂಚಾಳದ ಮತಸ್ಥರಿಗೆ ಸಂಬಂಧಪಟ್ಟದ್ದೆಂತಲೂ ಸಹ ತಿಳಿಯಬರುವದರಿಂದ ಇದರಲ್ಲಿ ಹಕ್ಕು ಇರತಕ್ಕಂಥಾ ಯಲ್ಲಾ ಪಾಂಚಾಳದ ಜನಗಳೂ 1896ನೇ ಇಸವಿ ನವಂಬರ 10ನೇ ತಾರೀಖು ದಿವಿ 11 ಘಂಟೆಗೆ ಕೋರ್ಟುರೂಬರೂಬ್ ಹಾಜರಾಗಿ ಮೊಕದ್ದಮೆ ನಡಿಸಬಹುದೆಂತ ಇದರಿಂದ ಮೇಲ್ಕಂಡ ಸಮಸ್ತ ಪಾಂಚಾಳದ ಜನಗಳಿಗೆ ತಿಳಿಸಿ ಇದೆ.

ತಾರೀಖು 5ನೇ ಮಾಹೆ ಅಕ್ಟೋಬರ್
ಸರ್ 1896ನೇ ಇಸವಿ.

ಬಿ. ಶ್ರೀನಿವಾಸರಾವ್,
ಮುನ್ಸಿಫ್.

ತಾರೀಖು 26ನೇ ಆಗಸ್ಟು 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟಾಫಿಸ ಮನಿಆರ್‍ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಫ್ಸೀಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುಂಥಾ ಕೂಪರ್ಗಳಗೆ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ಮೊಬಲಗು ತೆಗದುಕೊಂಡು ರಶೀತಿ ಕೊಡುವ ಬಗ್ಯಾಗಿ ಅಪ್ಪಣೆ ಯಿಷುವದ್ದರಿಂದ ಇನ್ನು ಮೇಲೆ ಮೈಸೂರ್ ಸೀಮೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್‍ಡರ್ ಹೊರ್ತಾಗಿ ಅನ್ಯಥಾ ಆ ಬಗ್ಯಾಗಿ ಈ ಆಫಿಸಿಗೆ ಕಳುಹಿಸಲ್ಪಡುವ ಯಾವ ಮನಿಆರ್‍ಡರಾಗಲಿ ಈ ಆಫಿಸಿನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಶಕ್ಕೂ ನಿಗೆ ಕೊಡಲ್ಪಡಲಾರದು.

ಸಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪೈಲರ್.

Mysore Govt. Central Press, Bangalore.—1896.

475

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 42.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 22, ಸನ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು, ರಜಿಸ್ಟ್ರೇಷನ್ ವ ಎಜ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟೀಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ॥ 23ನೇ ಸೆಪ್ಟಂಬರ್ 1896.

ನಂ. 4126.—ಲೋ. ಫಂ. 65.—96, ಸನ್ 1894ನೇ ಇಸವಿಯ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಇದರಡಿ ಕಂಡ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಗುಂಡ್ಲುಪೇಟೆ ಟವನಿನಲ್ಲಿ ಕುರುಬರ ಬೀದೀ ಸಮೀಪ ವೊಂದು ರಸ್ತೆಯನ್ನು ವಿಸ್ತರಿಸುವ ಬಗ್ಯಾಗಿ ಬೇಕಾಗಿರುತ್ತೆ :—

ಡಿಸ್ಟ್ರಿಕ್ಟು—ಮೈಸೂರು
ತಾಲ್ಲೂಕು—ಗುಂಡ್ಲುಪೇಟೆ
ಹೋಬಳಿ—ಕಸಬಾ
ಗ್ರಾಮ—ಗುಂಡ್ಲುಪೇಟೆ ಟೌನ್

ಅನುಭವದಾರ—ಗಾಣಿಗರ ಪುಟ್ಟಶೆಟ್ಟಿ.
ಸರ್ವೆನಂ.—ಮುನಿಸಿಪಲ್ ಸರಹದ್ದಿನಲ್ಲಿರುವ ಜಮೀನ್.
ವಿಸ್ತೀರ್ಣ—ಪೂರ್ವ ಪಶ್ಚಿಮ 30 ಗಜಗಳು, ಉತ್ತರ ದಕ್ಷಿಣ—105 ಚದುರ ಗಜಗಳು. ಬೇರೀಜು—ಇಲ್ಲ.

ಚಕ್ಕುಬಂದಿ—
ಉತ್ತರಕ್ಕೆ—ಕುರುಬರಕೆರೆ ರಸ್ತೆ
ದಕ್ಷಿಣಕ್ಕೆ—ನೀಲಗಿರೀ ರಸ್ತೆ
ಪಶ್ಚಿಮಕ್ಕೆ—ದೊಡ್ಡಮಾದಶೆಟ್ಟಿ ಮನೆ
ಪೂರ್ವಕ್ಕೆ—ಮಾದಶೆಟ್ಟರ ಅಂಗಡಿ, ಭಾವಿ ವಗೈರೆ

ತಾರೀಖು 30ನೇ ಸೆಪ್ಟಂಬರ 1896.

ನಂ. 4509.—ಜು. 495, ಅಸಿಸ್ಟೆಂಟ್ ಗವರ್ನಮೆಂಟ್ ಅಡ್ವೋಕೇಟರ ಉದ್ಯೋಗವು ಮೌಕೂಫ್ ಮಾಡಲ್ಪಟ್ಟಿರುವದರಿಂದ, 1892ನೇ ಏಪ್ರಿಲ್ 29ನೇ ಮುರ್ಕ್ಕಂ 47ನೇ ನಂಬರ ಇಸ್ತಿಹಾರನಾಮೆ ಅನುಸರಿಸಿ, ಅಸಿಸ್ಟೆಂಟ್ ಗವರ್ನಮೆಂಟ್ ಅಡ್ವೋಕೇಟರಿಗೆ ಕ್ರಿಮಿನಲ್ ಅಪ್ಪೀಲ್‌ಗಳು ವಗೈರೆಗಳಲ್ಲಿ ಕ್ರಿಮಿನಲ್ ಪ್ರೊಸಿಡ್ಯೂರ ಕೋಡಿನ 422 ವ 526ನೇ ಸೆಕ್ಷನ್‌ಗಳ ಮೇರೆ ಕೊಡಲ್ಪಡಬೇಕಾದ ದರೋಬಸ್ತು ನೋಟಿಸುಗಳೂ ಈ ಲಾಗಾಯತು ಮೈಸೂರ್ ಗವರ್ನಮೆಂಟ್ ಅಡ್ವೋಕೇಟರವರಿಗೆ ಕೊಡಲ್ಪಡತಕ್ಕದ್ದೆಂದು ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ.

ತಾರೀಖು 23ನೇ ಸೆಪ್ಟಂಬರ 1896.

ನಂ. 3327.—ಯಕ್ಸೈ. 121, ಸರ್ 1895ನೇ ಇಸವಿ ಡಿಸೆಂಬರ 11ನೇ ಮುರ್ಕ್ಕಂ 5508.—ಯಕ್ಸೈ. 182ನೇ ನಂಬರ ಇಸ್ತಿಹಾರನಾಮೆಯಿಂದ ತಿದ್ದುಪಡಿಯಾದ ಮೇರೆ 1892ನೇ ಮಾರ್ಚಿ 30ನೇ ಮುರ್ಕ್ಕಂ 495ನೇ ನಂಬರ ಇಸ್ತಿಹಾರನಾಮೆ ಅನುಸರಿಸಿ, ಫಾಯಿಷ್ ಮಾಡಲ್ಪಟ್ಟ ರೂಲ್ಸಿನ XXIನೇ ರೂಲ್ 5ನೇ ಕ್ಲಾಜಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

"(3) ಲೈಸೆನ್ಸ್‌ದಾರನಿಂದ ಯಿಡಲ್ಪಟ್ಟ ಠೇವಣಿ ಮೊಬಲಗು, ಇಜಾರೆ ವಾಯಿದೆಯ ಆಖೈರ್ ಎರಡು ಮಾಹೆಗಳಲ್ಲಿ ಪಾವತಿ "ಯಾಗಬೇಕಾದ ಖಿಸ್ತುಗಳಿಗಾಗಿ, ತೆಗೆದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, "ಇಜಾರೆಯು ದುಸರಾ ಹರಾಜ್ ಯಾ ರದ್ದು ಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ "ದಂಡವಾಗಿ ತೆಗೆದುಕೊಳ್ಳಲ್ಪಡಬಹುದು. ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕೀಗೂ ಮತ್ತು ಇಜಾರೆಯು ಪುನ "ಶ್ಚ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಭರ್ತೀ ಮಾಡಲ್ಪಡಬಹುದು. ಹಾಗೆ "ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲೀ ಬಗ್ಗ್ಯಾಗಿ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ, "ಲೈಸೆನ್ಸ್‌ದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸ್‌ದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊಬಲಗಿನ ಯಾವ "ರಿಮಿಷನ್ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು."

"(3A.) ಬಾಕೀ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ "ಮೊಬಲಗಿಗೆ ಪುನಶ್ಚ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡೀ ದೇಖೀಲ್ ವಸೂಲ್ಮಾಡ "ಲ್ಪಡತಕ್ಕದ್ದು."

ನಂ. 3358.—ಯಕ್ಸೈ. 123, ಸರ್ 1895ನೇ ಡಿಸೆಂಬರ 11ನೇ ಮುರ್ಕ್ಕಂ 5512.—ಯಕ್ಸೈ. 183ನೇ ನಂಬರ ಇಸ್ತಿಹಾರನಾಮೆಯಿಂದ ತಿದ್ದುಪಡಿಯಾದ ಮೇರೆ 1893ನೇ ಜನವರಿ 14ನೇ ಮುರ್ಕ್ಕಂ 11813.—ಕೆ. ಫೈ. 233ನೇ ನಂಬರ ಇಸ್ತಿಹಾರನಾಮೆ ಅನುಸರಿಸಿ, ಫಾಯಿಷ್ ಮಾಡಲ್ಪಟ್ಟ ರೂಲ್ಸಿನ Vನೇ ರೂಲ್ 6ನೇ ಕ್ಲಾಸಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸಲ್ಪಡತಕ್ಕದ್ದೆಂದು ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

"(3) ಲೈಸೆನ್ಸ್‌ದಾರನಿಂದ ಹಾಜರ್ಮಾಡಲ್ಪಟ್ಟ ಠೇವಣಿ ಮೊಬಲಗು, ಗುತ್ತಿಗೆ ವಾಯಿದೆಯ ಆಖೈರ್ ತಿಂಗಳು ಯಾ ತಿಂಗಳು "ಗಳಲ್ಲಿ ಪಾವತಿಯಾಗಬೇಕಾದ ಖಿಸ್ತುಗಳ ಬಾಕಿಗಾಗಿ, ತೆಗೆದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿ "ಯಮಗಳನುಸರಿಸಿ, ಇಜಾರೆಯು ದುಸರಾ ಹರಾಜ್ ಯಾ ರದ್ದುಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ "ಯುಕ್ತಾನುಸಾರ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕಿಗೂ ಮತ್ತು "ಇಜಾರೆಯು ಪುನಶ್ಚ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಉಪಯೋಗಿಸಲ್ಪ "ಡಬಹುದು. ಹಾಗೆ ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಗ್ಯಾಗಿ ಜಾರಿಯಲ್ಲಿರುವ "ರೂಲ್ಸ್ ಅನುಸರಿಸಿ, ಲೈಸೆನ್ಸ್‌ದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸ್‌ದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊ "ಬಲಗಿನ ಯಾವ ರಿಮಿಷನ್ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು."

"(3 A.) ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ "ಮೊಬಲಗಿಗೆ ಪುನಶ್ಚ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡೀ ದೇಖೀಲ್ ವಸೂಲ್ಮಾ "ಡಲ್ಪಡತಕ್ಕದ್ದು."

ಹುಕುಂ ಬಮೋಜಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

477

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫ್ರಾಯಿಷ್ ಆದ್ದು. [ಸಂ. 42.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 22, ಸ್ನ 1896.

IIನೇ ಭಾಗ.

ಇಂಡ್ಯಾ ಗವರ್ನ್‌ಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ ಪೋರ್ಟರು ಬ್ರದರಸ್‌ರ ಡಿಟ್ಟೋ	,, 170
1	ಮದ್ರಾಸ್ ಓಕ್ಸರವರ ಡಿಟ್ಟೋ	,, 250
1	ಡಿಟ್ಟೋ ಡಿಟ್ಟೋ ಡಿಟ್ಟೋ	,, 188
1	ಡಿಟ್ಟೋ ಬೋರ್ರ್ಯಾಮರವರ ಡಿಟ್ಟೋ	,, 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಸೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ರಾಣಾಶಿಂಗನ ಪೇಟೆಯಲ್ಲಿರುವ ಬೆಸ್ತರ ಮೈಲಾರಪ್ಪನ ವಿಷಯದಲ್ಲಿ—

ಸರ್ 1895—96ನೇ ಇಸವಿ ದಿವಾಳಿ ಕೇಸ್ ನಂಬರ್ 127.

ಹುಕ್ಕುಂ.

ಮೇಲ್ಕಂಡ ಮೈಲಾರಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜಿದಾರನನ್ನು ಮತ್ತು ಸದರೀಯವರ ಲೇಣೇದಾರರಾದ 7ನೇ ಬೆಂಗಳೂರು ತಾಲ್ಲೂಕು ಕೆಂಗೇರಿಯಲ್ಲಿರುವ ಶಿವಾಚಾರದ ಮುದ್ದಪ್ಪ ಘವತಿ ಈತನ ಹೆಂಡತಿ ವೀರಮ್ಮನ ತರಫ್ ಅಡ್ವೋಕೇಟ್ ಮೆಸ್ಟರ್ ಕ್ರಿಷ್ಣಮೂರ್ತಿರಾಯರು, ಮತ್ತು 8ನೇ ಬೆಂಗಳೂರು ಕರ್ಣಾಟಕ ಬ್ಯಾಂಕ್ ಅಫಿಷಿಯಲ್ ಲಿಕ್ವಿಡೇಟರ್ ಸೀತಾರಾಮಯ್ಯನ ಯದುರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾಕಂದರೆ—1ನೇ ಬೆಂಗಳೂರು ಬಳ್ಳಾಪುರದ ಪೇಟೆಲಿ ಚವುಡೇಶ್ವರಿ ಗುಡಿಬಳಿ ಇರುವ ಮುನಿಗುರಪ್ಪ, 2ನೇ ಮುನಿಗುರಶೆಟ್ಟಿ, 3ನೇ ಬೆಂಗಳೂರು ರಾಣಾಶಿಂಗನಪೇಟೆಲಿರುವ ಮಣೇದ ರಾಮಣ್ಣ, 4ನೇ ಬೆಂಗಳೂರು ಅಕ್ಕಿ ಪೇಟೆಲಿರುವ ಚನ್ನಸಂದ್ರದ ಮುನಿಯಪ್ಪ, 5ನೇ ಬೆಂಗಳೂರು ಬಸ್ಸೆಟ್ಟಿ ಪೇಟೆಲಿರುವ ಪಟಗಾರ ಕಳಕಪ್ಪ, 6ನೇ ಬೆಂಗಳೂರು ಚಿಕ್ಕಪೇಟೆಲಿರುವ ಕತ್ರಿಡಿಕ್ಪಾಸ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮೈಲಾರಪ್ಪನು ಹೊಂದುವದಕ್ಕೆ ಹಕ್ಕುದರರಾಗುವದರ ಮೂಲಕ ತನ್ನ ಸಾಲಗಾರ್ರಿಗೆ ಪಾನತಿ ಬಗ್ಯೆ ಮಾಹೆಯಾನಾ ತಪ್ಪದೆ ಕೋರ್ಟಿಗೆ (2—0—0) ರೂಪಾಯಿ ಹಾಜರ್ಮಾಡುವ ಷರತ್ತಿನ ಮೇಲೆ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಯಿದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸರ್ 1896ನೇ ಇಸವಿ ಫಿಬ್ರವರಿ 17ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಮುಂಗಡ ಕೊಟ್ಟ ಮೊಬಲಗು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ಬಳ್ಳಾಪುರದ ಪೇಟೇಲಿ ಚವುಡೇಶ್ವರಿ ಗುಡಿಬಳಿ ಇರುವ 1ನೇ ಮುನಿಗುರಪ್ಪ 2ನೇ ಮುನಿಗುರುಶೆಟ್ಟಿ ..	346—8—4	..	ಬೆಂಗಳೂರು ಮುನ್ಸಿಫ್ ಕೋರ್ಟ್ 1895–96ನೇ ಇಸವಿ ಜಾರಿ 393ನೇ ನಂ. ವಾರಂಟ್ ಮೊಬಲಗು.	
2	ಮಣೇದ ರಾಮಣ್ಣ ..	80—0—0	..	ಡಿಕರಿ ಮೊಬಲಗು.	
3	ಚನ್ನಸಂದ್ರದ ಮುನಿಯಪ್ಪ ..	120—0—0	..	ಪತ್ರದ ಬಾಬತು.	
4	ಕಳಕಪ್ಪ ..	10—0—0	..	ಡಿಕರಿ ಬಾಬತು.	
5	ಕತ್ರಿ ಡಿಕ್ಪಾಸಾ ..	40—0—0	..	ಡಿಟೋ.	
6	ಶಿವಾಚಾರದ ಮುದ್ದಪ್ಪ ..	50—0—0	..	ಕಂತುಪತ್ರದ ಬಾಬತು.	
7	ಬೆಂಗಳೂರು ಕರ್ಣಾಟಕ್ ಬ್ಯಾಂಕ್ ಅಫಿಷಿಯಲ್ ಲಿಕ್ವಿಡೇಟರ್ ಶೀತಾರಾಮಯ್ಯನವರು ..	12—0—0	..	ಡಿಕರಿ ಬಾಬತು.	

ಸರ್ 1896ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 49.

ಮೃತಪಟ್ಟ ವೆಂಕಟರಮಣಪ್ಪನೆಂಬುವನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್‌ಗೆ ಶೇರಿದ ದೊಡ್ಡಕುಂಟೆಯಲ್ಲಿರುವ ದೇವಾಂಗದ ಲೋಕೈಯ್ಯನ ಮಗಳು ವೆಂಕಟಮ್ಮನು ಮೃತಪಟ್ಟ ಸದರೀ ವೆಂಕಟರಮಣಪ್ಪನಿಗೆ ತಮ್ಮನ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂ

ರು ಸಿವಿಲ್ ಅಂಡ್ ಮಿಲಿಟೆರಿ ಸ್ಥಳದ ವೆಂಕಟಮ್ಮನು ಬೆಂಗಳೂರು ಅರಳೇಪೇಟೆ ವಾಸಸ್ಥನಾಗಿ ಮೃತಪಟ್ಟ ವೆಂಕಟರಮಣಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ‌ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಮ್ಮನವರ ಅರ್ಜಿಯನ್ನು ಸ‌ 1896ನೇ ಇಸವಿ ನವೆಂಬರ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಪ್ಪನ ವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ‌ 1896ನೇ ಇಸವಿ ಅಕ್ಟೋಬರ್ ತಿಂಗಳ 1ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖಾ.

ನೋಟಿಸ.

ತಾರೀಖು 15ನೇ ಸೆಪ್ಟಂಬರ 1896.

ಸರ್ಕಾರದ ಗಂಧದ ಕೋಠಿಗಳಲ್ಲಿ ಹಾಲಿ ಉಪಯೋಗದಲ್ಲಿರುವ ಪಕ್ಕಾ ವಜನೀ ಬಟ್ಟಿಗೆ ಬದಲಾಗಿ ಇಂಗ್ಲಿಷ್ ಸ್ಟ್ಯಾಂಡರ್ಡ್ ಕರಾರ್‌ವಾಕಾ ಪಕ್ಕಾ ವಜನಿ ಬಟ್ಟು 1ಕ್ಕೆ $38\frac{8}{9}$ ರೂಪಾಯಿ ತೂಕವುಳ್ಳ ಬಟ್ಟುಗಳು ಗವರ್ನ್‌ಮೆಂಟಿನವರ ಮಂಜೂರಾತೀ ಅನುಸರಿಸಿ, 1897ನೇ ಇಸವಿ ಲಾಗಾಯತು ಯಲ್ಲಾ ಕೋಠಿಗಳಲ್ಲಿಯೂ ಜಾರಿಯಲ್ಲಿ ತರಲ್ಪಡುತ್ತೆ. ಆದರೆ ಚಾಲತಿ 1896ನೇ ಡಿಸೆಂಬರ 31ನೇ ತಾರೀಖು ವಳಗೆ, ಖರೀದಿಗೆ ತೆಗದುಕೊಳ್ಳಲ್ಪಡುವ ಗಂಧ ಹಾಲಿ ಜಾರಿಯಲ್ಲಿರುವ ಪಕ್ಕಾ ಬಟ್ಟುಗಳ ಪ್ರಕಾರವೇ ವಜನಿಯಿಂದ ಕೊಡಲ್ಪಡುವದು.

ಐಯ್ಯಿಂದಾ ಜಾರಿಯಲ್ಲಿ ಬರತಕ್ಕ ಒಂದೇವಿಧವಾದ ಇಂಗ್ಲಿಷ್ ವಜನೀ ಬಟ್ಟುಗಳು ಅವುಗಳ ಸರಿಯಾದ ತೂಕ ಸಹ ಇದರಡಿ ನಮೂದಿಸಲ್ಪಟ್ಟಿರುತ್ತೆ:—

ಟನ್ನ್ 1ಕ್ಕೆ $2\frac{3}{7}\frac{1}{2}$ ರೂಪಾಯಿ ತೂಕ	ಹಂಡ್ರೆಡ್‌ವೆಯಿಟ್ 1ಕ್ಕೆ $4,355\frac{5}{9}$ ರೂಪಾಯಿ ತೂಕ.
ಪಕ್ಕಾ 1ಕ್ಕೆ $38\frac{8}{9}$ ಡಿಟೋ	ಟನ 1ಕ್ಕೆ $87,111\frac{1}{9}$ ಡಿಟೋ

ಸ್ಟ್ಯಾಂಡರ್ಡ್ ಅಂದರೆ, ನಿಷ್ಕರ್ಷಿಸಲ್ಪಟ್ಟ ಕರಾರ್‌ವಾಕಾ ತ್ರಾಸು, ಬಟ್ಟುಗಳು ಪ್ರತಿ ಕೋಠಿಯಲ್ಲಿ ಹಾಜರಿರುತ್ತವೆ. ಇವುಗಳಿಂದ ಹಾಲಿ ವಜನೀ ಬಗ್ಯೆ ಉಪಯೋಗದಲ್ಲಿರುವ ಬಟ್ಟುಗಳನ್ನ ಅಜಮಾಯಿಷಿ ಮಾಡಿಕೊಳ್ಳಬಹುದಾಗಿರುತ್ತೆ.

ತಾರೀಖು 2ನೇ ಸೆಪ್ಟಂಬರ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ 1896.
ಡಿಟೋ	ಶ್ರೀರಂಗಪಟ್ಟಣ	1ನೇ ಡಿಸೆಂಬರ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿದೆ.

ಹಳೇ ತರಹೆ ಪ್ರಕಾರ.

ಸಂದಲ್ ವಿವರ	ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕ ಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
	ಟ್.	ಹ.	ಟ್.	ಹ.	ಟ್.	ಹ.	ಟ್.	ಹ.	ಟ್.	ಹ.	ಟ್.	ಹ.
ಸಲಾಕಿ ಅವ್ವಲ್ ..	1	..	..	5	..	15	..	..	..	15	..	...
ಡಿಟೋ ದುಯಂ ..	..	5	1	5	2	5	3	5	1	..	..	2
ಡಿಟೋ ಸಿಯಂ ..	1	10	7	10	5	5	12	15	8	..	4	..
ಡಿಟೋ ಚಹರಂ ..	45	15	30	..	44	..	32	10	12	..	7	..
ಡಿಟೋ ಪಂಚಂ ..	7	..	10	..	10	10	37	.	25	..	14	..
ಚಿಕ್ಕ ಸಲಾಕಿ ..	1	2	1	..	..	..	..	..	..	..	..	..
ದೊಡ್ಡ ಜಡಾ ..	21	..			33	..	66	5	40	..	25	..
ಚಿಕ್ಕ ಜಡಾ ..	3	15	35	..	5	..	8	..	4	..	2	..
ಜಡದ ರಂಬೆ ..	1	5			7	..	..	..	...	..	...	..
ದೊಡ್ಡ ಜಜ್ಜು ..	18	..	61	5	30	..	94	..	65	..	43	..
ಚಿಕ್ಕ ಜಜ್ಜು ..	3	5			11	..						
ಬಗರದದ್ದು ..	2	15	6	..	5	5	26	.	9	..	13	10
ಐರ್ ವಾಚೆ ಗುಬಗರು ..	1	..	3	..	..	10	..	..	..	..	..	..
ಗರಗಸ ಬುಕಣಿ ..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಟ .	1	10	1	..	6	5	15	10	15	..	16	..
ಚಿಕ್ಕ ಡಿಟೋ ..	..	..	2	..								
ಕೆತ್ನೆ ಐರ್ ಚಿಲ್ಟ ..	6	..	..	..	..	..	..	..	..	..	..	...
ಹತ್ತಿ ಚಿಲ್ಟ ..	1	6	..	..	..	..	..	..	..	..	..	..
ಮಿಲ್ವ ಚಿಲ್ಟ ..	17	10	30	..	21	5	30	..	12	..	9	..
ಬಸೋಲ ಬುಕಣಿ ..	1	15	10	..	14	..	14	15	5	10	6	8
ಕೊಯತ ಚಿಲ್ಟ ...	..	..	1	10	3	10	9	..	2	..	1	..
ಜುಮ್ಲಾ ..	135	15	200	..	200	..	350	..	200	..	150	..

ಹೊಸ ಯಾ ಬೊಂಬಾಯಿ ತರಹೆ ಪ್ರಕಾರ.

ಸಂದಲ್ ವಿವರ.	ಹುಣಸೂರು ಕೋಠಿ.		ಶ್ರೀರಂಗಪಟ್ಣ ಕೋಠಿ.	
	ಟ್.	ಹ.	ಟ್.	ಹ.
ವಿಲಾಯಿತಿ ಬಡ್ ..	1	.	...	10
ಚೈನಾ ಬಡ್ ..	20	..	30	
ಪಂಚಂ ..	28	..	89	..
ಚಿಕ್ಕ ಸಲಾಕಿ, ಘೊಟ್ಲ (ಅವ್ವಲ್) ..	3	...	5	..
ಡಿಟೋ (ದುಯಂ) ..	2	..	1	..
ಘಟೆ ಬಡಲ ..	50	..	30	..
ಜಡಾ (ಅವ್ವಲ್) ..	25	..	25	..
ಡಿಟೋ (ದುಯಂ) ..	25	..	12	..
ಡಿಟೋ (ಸಿಯಂ) ..	20	..	8	..
ಡಿಟೋ (ಚಹರಂ) ..	7	..	7	..
ಜಜ್ಜು (ಅವ್ವಲ್) ..	50	...	25	..
ಡಿಟೋ (ದುಯಂ) ..	40	15	15	..
ಬಗರದದ್ದು ..	5	..	12	..
ಐರ್ ಬಗರು ..	5	..	14	..
ಚಿರಿಯಾ ..	5	..	5	..
ಐರ್ ಚಿಲ್ಟ (ಅವ್ವಲ್) ..	4	..	6	..
ಡಿಟೋ (ದುಯಂ) ..	6	..	6	10
ಹತ್ತಿ ಚಿಲ್ಟ ..	1	..	2	10
ಗರಗಸ ಬುಕಣಿ ..	1	..	..	10
ಮಿಲ್ಲ ಚಿಲ್ಟ ..	30	..	50	..
ಬಸೋಲಾ ಬುಕಣಿ ..	7	.	10	..
ಚೇಗು ಮಿಲ್ವ ..	..	..	5	..
ಕಳೆದವರುಷದ ಜಡಾ	113	15	12	15
ಸ್ಪೆಷಲ್ ಕ್ಯಾಸ್ ..	..	10	...	..
ಟೋಟಲ್ ..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಯೆ ಇದರಡಿ ಕಂಡುಬರುವ ತಿದ್ದು ಪಾಟೂದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ಕುಂ 15230.—ಆರ್. ಎಫ್. 155.—92ನೇ ನಂಬರ್ ರೂಲ್ಸ್‌ಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಯೆ ಪ್ರಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜು ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷ್ನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಯಿತರ ಆಫಿಸರಿಂದ ಆಗಲಿ ಶೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಚಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ್ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫಿಸರರು ಒಂದು ರಸೀದಿಯನ್ನು ಕೊಡತಕ್ಕದ್ದು. ಆ ರಸೀದೀಯನ್ನ 5ನೇ ದಿನ ಆಖ್ಯೆರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫಿಸರರು ಆ ರಸೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫಿಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫಿಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಸೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಯಿಲ್ಲದ ರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫಿಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ವುಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಯಂದಿಗೂ ಯಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಸೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಚೀಟಿ ಕೊಟ್ಟ ಆಫಿಸರವರಿಂದ ಯಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫಿಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫಿಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ ಹಾಜರಿಯಲ್ಲಿ ಡೆಪ್ಯುಟಿ ಕಮಿಷ್ನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನ ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫಿಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ವಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀ

ರೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಗೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಗೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸಾರ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ವುತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ಲಾ—ಚಿಲ್ಲಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ ವಂಡಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿ ದಾರನಿಗೆ 10 ದಿನಗಳು ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್‌ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಗೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜ ಆಫೀಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟ ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ ಶೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್‌ಚಾರ್ಜ್ ಫಾರೆಸ್ಟ್ ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ ಇಲ್ಲದ ಪಕ್ಷದಲ್ಲಿ ಇನ್‌ಚಾರ್ಜ್ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್.

ನೋಟಿಸ.

ಮೈಸೂರು ಮುನ್‌ಶೀಫ್ ಕೋರ್ಟಿನಲ್ಲಿ.

1896—97ನೇ ಇಸವಿ ಸಿವಿಲ್ ಸೂಟ ನಂಬರು 64.

ವಾದಿಗಳು—ಹುಣಸೂರು ಟವನಿನಲ್ಲಿಯಿರುವವರು,

1. ವೈಲಾಂಡಾಚಾರಿ ಮಗ ಕುಂಠಸಾಮಿ ಆಚಾರಿ
2. ಚವುದ್ರಿ ಮತ್ತು ಯಜಮಾನ ದಾಸಪ್ಪಾಚಾರಿ
3. ಮರಗೆಲಸದ ಮುತ್ತುಸಾಮಿ ಆಚಾರಿ
4. ಮರಗೆಲಸದ ಸುಬ್ರಾಯಾಚಾರಿ
5. ಚಿನ್ನಗೆಲಸದ ನಾಗಾಚಾರಿ
6. ಚಿನ್ನಗೆಲಸದ ದಾಸಣ್ಣಾಚಾರಿ

7. ಚಿನ್ನ ಕೆಲಸದ ಲಿಂಗಣ್ಣಾಚಾರಿ
8. ಚಿನ್ನ ಕೆಲಸದ ವೇಲಾಯುಧಾಚಾರಿ
9. ಮರಕೆಲಸದ ವೈಯಾಪುರಿಯಾಚಾರಿ
10. ಚಿನ್ನ ಕೆಲಸದ ದೊಡ್ಡ ಸುಬ್ಬಣಾಚಾರಿ
11. ಹುಣಸೂರು ಟವರ್‌ಗೆ ಸೇರಿದ ಕಲ್ಲುಕಣಿಕೆಯಲ್ಲಿರುವ ನರಸುಹ್ಮಾಚಾರಿ
12. ಡಿಟೋ ಲಕ್ಷ್ಮೀಪತಿಯಾಚಾರಿ
13. ಡಿಟೋ ಲಕ್ಷ್ಮಣಾಚಾರಿ
14. ಹುಣಸೂರಲ್ಲಿಯಿರುವ ಮರಗೆಲಸದ ಷಣ್ಮುಖಾಚಾರಿ ವಗೈರ

ಪ್ರತಿವಾದಿಗಳು—ಹುಣಸೂರಲ್ಲಿಯಿರುವವರು,

1. ರಾಮಸ್ವಾಮಿ ಆಚಾರಿ ಮಗ ಕುಳ್ಳಾಚಾರಿ
2. ಚಿನ್ನ ಕೆಲಸದ ಶೇಷಾಚಾರಿ
3. ಚಿನ್ನ ಕೆಲಸದ ಡಿಟೋ ನರಸಾಚಾರಿ
4. ಬಿಳಿಕೆರೆನಂಜಪ್ಪಾಚಾರಿ
5. ನಾರಾಯಣಸಾಮಿ ಆಚಾರಿ
6. ಡಿಟೋ ಕಂಚುಗಾರ ಅಮ್ಮಯ್ಯಪ್ಪಾಚಾರಿ
7. ಡಿಟೋ ಮರಕೆಲಸದ ಕಾಳಪ್ಪಾಚಾರಿ ವಗೈರೆ

ಸಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಹುಣಸೂರು ಟವನಿನಲ್ಲಿ ಯಿರುವ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

ಮೇಲ್ಕಂಡ ಮೊಕದ್ದಮೆಯಲ್ಲಿನ ವಾದಿಯಾದವರು, ಈ ಮೊಕದ್ದಮೆಯನ್ನು ತಮ್ಮ ಪರವಾಗಿಯೂ ಮತ್ತು ತಮ್ಮ ಜಾತಿ ಇತರ ಜನಗಳ ಪರವಾಗಿಯೂ ದಾವಾ ದಾಖಲ್ಮಾಡಲು ಕೋರ್ಟಿನವರ ಅಪ್ಪಣೆಯನ್ನು ಪ್ರಾರ್ಥಿಸಿದ್ದಾರೆಂದುನ್ನೂ 1—2ನೇ ವಾದೀರು ಈ ಛತ್ರದ ಸುಫರ್ದನ್ನು ಹೊಂದಲು, ಮತ್ತು ಈ ಛತ್ರಕ್ಕೆ ಬೀಗಹಾಕುವದು ತೆಗಿಯುವದು ವಗೈರೆಯನ್ನು ಈ ಛತ್ರದ ಇತರ ಆಡಳಿತಗಳನ್ನ ನಡಿಸಲು, ಹಕ್ಕುದಾರರೆಂತ್ತ ಹಕ್ಕು ಸ್ಥಾಪಿಸಿ ಪ್ರತಿವಾದೀರಿಂದ ಛತ್ರವನ್ನು ವಾದೀರ ಸುಫರ್ದಿಗೆ ಕೊಡಿಸಬೇಕೆಂತಲೂ ಮತ್ತು ಪ್ರತಿವಾದೀರೆಲ್ಲರೂ ಸಹ 1—2ನೇ ವಾದೀರ ಅನುಭವದಲ್ಲಿ ಹತ್ತು ಜನರಂತೆ ಉಪಾಕರ್ಮ, ಶಿವರಾತ್ರಿ, ಭಜನೆ, ಜಾತಿ ಪಂಚಾಯಿತಿ ವಗೈರೇ ಎಲ್ಲಾ ಕೆಲಸಗಳಿಗೂ ಸಹ ಈ ಛತ್ರಕ್ಕೆ ಪ್ರವೇಶಿಸಿ ಈ ಛತ್ರವನ್ನು ಉಪಯೋಗಿಸಬಹುದೆಂತ್ತಲೂ ಮತ್ತು ಮೈಸೂರು ಟವರ್ ಮೇಜಿಸ್ಟ್ರೇಟರವರು ಮಾಡಿದ 1894—95ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ 232ನೇ ನಂಬರು ಆರ್ಡರನ್ನು ರದ್ದುಪಡಿಸಿ ಹಾಲಿ ಪ್ರತಿವಾದೀರು, ವಾದೀರು ಛತ್ರಕ್ಕೆ ಪ್ರವೇಸಿಸಿ ಛತ್ರವನ್ನು ಉಪಯೋಗಿಸಲು ಇರುವ ಪ್ರತಿಬಂಧಕವನ್ನು ತಪ್ಪಿಸಬೇಕೆಂತಲೂ,

B. ಹಾಗೆ ವಾದೀರೊಬ್ಬರೇ ಸುಫರ್ದು ಹೊಂದಲು ಅಥವಾ 1—2ನೇ ವಾದೀರಲ್ಲಿ ಪ್ರವೇಶಿಸಬೇಕೆಂತ ಡಿಕ್ರಿಕೊಡಲು ಆಗುವದಿಲ್ಲವೆಂತ ಒಂದು ವೇಳೆ ಕೋರ್ಟಿನವರಿಗೆ ತೋರಿಬಂದಲ್ಲಿ ಪ್ರತಿವಾದೀರಂತೆ ವಾದೀರಿಗೂ ಈ ಛತ್ರದ ಜಂಟಿ ಸುಫರ್ದನ್ನು ಕೊಡಿಸಬೇಕೆಂತ್ತಲೂ,

C. ಈ ಮೊಕದ್ದಮೆ ಕೋರ್ಟು ಖರ್ಚು ಮತ್ತು ಕೋರ್ಟಿನವರಿಗೆ ಯುಕ್ತತೋರುವ ಇನ್ನೂ ಇತರ ಪರಿಹಾರಗಳಿಗೂ ಸಹ ದಾವಾ ದಾಖಲ್ಮಾಡಿರುತ್ತಾರೆಂದುನ್ನೂ ಸದರೀ ಮೊಕದ್ದಮೆ 1896ನೇ ಇಸವಿ ಅಕ್ಟೋಬರು 29ನೇ ತಾರೀಖಿಗೆ ಯಿಷ್ಯೂಬಗ್ಗೆ ಹಿಯರಿಂಗು ಯಿಟ್ಟು ಇರುವದರಿಂದ ಈ ಮೊಕದ್ದಮೆಗೆ ಕಕ್ಷಿಗಾರನಾಗಿ ಸೇರಬೇಕೆಂದು ಯಿರುವ ಸಮಸ್ತ ಜನಗಳೂ ಈ ಕೋರ್ಟು ರೂಬರೂ ಮೇಲ್ಕಂಡ ತಾರೀಖಿಗೆ ಹಾಜರಾಗತಕ್ಕದ್ದೆಂದು ಪ್ರಸಿದ್ಧಪಡಿಸಿಥೆ.

31—8—96.

ಎ. ರಂಗಾಚಾರ್,
ಮುನ್ಸೀಫ್.

ಫಾರೆಸ್ಟ್ ಡಿಪಾರ್ಟಮೆಂಟ್ ಮೈಸೂರ್ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 3ನೇ ಅಕ್ಟೋಬರ 1896.

ಮೈಸೂರು ಡಿಸ್ಟ್ರಿಕ್ಟು ಇದರಡಿ ಕಂಡ ಫಾರೆಸ್ಟುಗಳಿಂದ ಅವುಗಳ ಬಾಜೂದಲ್ಲಿ ತೋರಿಸಲ್ಪಡುವ ಆಯಾ ಅಂಚೆಗಳಿಗೆ ಸನ್ 1897ನೇ ಇಸವಿ ಜನವರಿ ತಾರೀಖು 15ರ ವಳಗಾಗಿ ವಣ ನಾಟಾ ಸಾಗಿಸುವದಕ್ಕೆ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಫಾರೆಸ್ಟ್.	ಅಂಚೆ.	ಉದ್ದೇಶಮಾಡತಕ್ಕ ಮೊತ್ತ.	ಸರಾಸರಿ ಫಾಸಲೆ.
ಹೆಗ್ಗಡದೇವನಕೋಟೆ.	ಬೇಗೂರು ..	(1) ಗುಂಡ್ರೆ ..	2,000	
		(2) ಬೈರಿಗದ್ದೆ	4,000	
		(3) ವನಕೆಗುಂಡಿಮಾಳ ..	2,000	
	ಇನೂರುಮಾರಿಗುಡಿ ..	(1) ಕಲ್ಲುಕೆರೆ ..	4,000	
		(2) ವಾರಂಚಿ ..	2,000	
		(3) ಹಿಂಡುಸ್ತಾಲ್ ಕಟ್ಟೆ ..	2,000	
	ಕಾಕನಕೋಟೆ ..	(1) ಆನೆಮಾಳ ..	2,000	
		(2) ತ್ಯಾಗದಮರದ ತಿಟ್ಟು ..	2,000	
		ಜುಮ್ಲಾ ..	20,000	

2. ತಮ್ಮ ದರಖಾಸ್ತುಗಳೂ "ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಫಾರೆಸ್ಟುಗಳಿಂದ ಅಂಚೆಗಳಿಗೆ ಸಾಗಿಸುವದಕ್ಕೆ ಮಾತ್ರವೇ, ದರಖಾಸ್ತು" ಯಂಬುವದಾಗಿ ಮೇಲ್‌ವಿಳಾಸ ಬರದು ಮೊಹರುಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಫಾರೆಸ್ಟಿಗೂ 50 ರೂಪಾಯಿ ಬೆಲೆಯುಳ್ಳ ಕರ್ರೇನ್ಸೀನೋಟಾಗಲಿ, ಯಾ ಪ್ರೋನೋಟಾಗಲಿ ರವಾನಿಸಬೇಕು. ದರಖಾಸ್ತುಗಳು ಅಜಮಾಯಿಷಿಯಿಂದ ಮೇಲ್ಕಂಡ ಕರ್ರೇನ್ಸೀನೋಟುಗಳನ್ನ ವಾಪಸು ಮಾಡಲ್ಪಡುವವು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ 1896ನೇ ಇಸವಿ ಆಕ್ಟೋಬರು 31ನೇ ತಾರೀಖು ವರಿಗೆ ಅಂಗೀಕರಿಸಲ್ಪಡುವವು.

4. ದರಖಾಸ್ತುಮಾಡಲು ಇಚ್ಛೆವುಳ್ಳ ಕಂಟ್ರಾಕ್ಟುದಾರನು ಮೇಲ್ಕಂಡ ಫಾರೆಸ್ಟುಗಳ ಪೈಕಿ ವೊಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ, ತಯಾರಾದ್ದನ್ನ ಸಾಗಿಸುವದಕ್ಕೆ ಮಾತ್ರ, ದರಖಾಸ್ತು ಮಾಡಿದ ಪಕ್ಷದಲ್ಲಿ ನಾಟಾವನ್ನು ಪ್ರತಿ ವೊಂದು ಫಾರೆಸ್ಟಿನಿಂದಲೂ ಅಂಚೆಗಳಿಗೆ ಸಾಗಿಸುವದಕ್ಕೆ ಮಾತ್ರ, ವೊಪ್ಪಿಕೊಳ್ಳುವ, ಕಮ್ಮಿ ದರವನ್ನು ಬೇರೆ ಬೇರೆಯಾಗಿ ನಮೂದಿಸತಕ್ಕದ್ದು. ಸಲೆ ಅಡಿ 1ಕ್ಕೆ ಇಷ್ಟು ದರವೆಂತ ನಮೂದಿಸಬೇಕು.

5. ಸರ್ 1897ನೇ ಇಸವಿ ಜನವರಿ 17ರ ವೊಳಗಾಗಿ ಮೇಲೆ ನಮೂದಿಸಿರುರ ಪೂರಾ ಮೊತ್ತವನ್ನು ಆಯಾಯ ಅಂಚೆಗಳಿಗೆ ಸಾಗಿಸಬೇಕು.

6. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರೆದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡದುಕೊಳ್ಳುವ ಬಗ್ಯೆ ಜಾಮೀನ್ ತರೀಕ್ ಫಾರೆಸ್ಟು 1ಕ್ಕೆ 100 ರೂಪಾಯಿ ಪ್ರಕಾರ ಡಿಪಾಜಿಟ್ಟು ಕಟ್ಟತಕ್ಕದ್ದು. ಮೇಲ್ಕಂಡ ಷರತ್ತು ಮೀರೆ ನಡಿಯಲು ತಪ್ಪಿದಲ್ಲಿ ಠೇವಣೀ ಮೊಬಲಗನ್ನ ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುವದು.

7. ಬ್ಯಾಸಿಗೆ ಕಾಲದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಮಾಡಲ್ಪಡುವ ಕಾಯಿದೆ ಕಾನೂನ್‌ಗಳಂತೆ ನಡಿಯಲು ಕಂಟ್ರಾಕ್ಟುದಾರನು ಬದ್ಧನಾಗಿರುವನು.

8. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಕಮ್ಮಿದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟು ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

9. ಸಾಮಾನುಗಳು ಸಾಗಿಸುವದಕ್ಕೆ ಗಾಡಿ, ರಸ್ತೆ ವಗೈರೇ ದಾರಿಗಳನ್ನು ಮಾಡಿಕೊಡಲು ಸರ್ಕಾರದವರು ಬದ್ಧರಾಗಿಲ್ಲವಾದ ಸಬಬು ವುದ್ದೇಸಿಸುವ ಕಂಟ್ರಾಕ್ಟುದಾರನೇ ಆತನ ಹಾತಲಾಗವಡಿನಿಂದ ತಕ್ಕ ಯೇರ್ಪಾಡುಗಳು ಮಾಡಿಕೊಳ್ಳತಕ್ಕದ್ದು. ಮರಗಳನ್ನು ಸಾಗಿಸದೆ, ಇರುದಪಕ್ಷ ಯಾವ ಸಬಬುಗಳನ್ನೂ ಅಂಗೀಕರಿಸಲಾರವು.

10. ವುದ್ದೇಸಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ವಿಚಾರಿಸಿ ತೆಗದುಕೊಳ್ಳಬಹುದು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ನಗರದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 82.

ಮೃತಪಟ್ಟ ಚಿತ್ರದುರ್ಗದ ವಾಸಸ್ತ ತಿಂಮಪ್ಪಶಾಸ್ತ್ರಿ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚಿತ್ರದುರ್ಗದಲ್ಲಿರುವ ಕೃಷ್ಣಶಾಸ್ತ್ರಿ ಬಿನ್ ತಿಂಮಣ್ಣಶಾಸ್ತ್ರಿಯು ಮೃತಪಟ್ಟ ಸದರೀ ತಿಂಮಪ್ಪಶಾಸ್ತ್ರಿಯು ತನಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿತ್ರದುರ್ಗ ಸ್ಥಳದ ಕೃಷ್ಣಶಾಸ್ತ್ರಿ ಬಿನ್ ತಿಮ್ಮಣ್ಣಶಾಸ್ತ್ರಿಯು, ಚಿತ್ರದುರ್ಗದ ವಾಸಸ್ಥನಾಗಿ ಮೃತಪಟ್ಟ ತಿಮ್ಮಪ್ಪಶಾಸ್ತ್ರಿಯು ಜಿಂದಗಿ ಬಾಬ್ತಾಗಿ ಬರತಕ್ಕ 110 ರೂಪಾಯಿ ನಗದು 80 ರೂಪಾಯಿ ದಾಮಾಶಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ಕೃಷ್ಣಶಾಸ್ತ್ರಿಯು ಅರ್ಜಿಯನ್ನು 1896ನೇ ಇಸವಿ ನವಂಬರ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಪ್ಪಶಾಸ್ತ್ರಿಯು ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896—97ನೇ ಇಸವಿ ಅರ್ಜೀ ನಂಬರ 89.

ಮೃತಪಟ್ಟ ಶೃಂಗೇರಿ ಮೇಲ್‌ಪಾಲ್ ಸುಂಕುರಡಿ ವಾಸಸ್ಥರಾದ ಹಳೆ ಮನೆ ರಾಮಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಗಿರಿಯಮ್ಮ ಯಾನೆ ಸಾವಿತ್ರಮ್ಮ, ಮೃತಪಟ್ಟ ಸದರೀ ರಾಮಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಶೃಂಗೇರಿ ಮೇಲ್‌ಪಾಲ್ ಸುಂಕುರಡಿ ಸ್ಥಳದ ಗಿರಿಯಮ್ಮ ಯಾನೆ ಸಾವಿತ್ರಮ್ಮನವರು, ಸದರೀ ಸುಂಕುರಡಿ ವಾಸಸ್ಥರಾಗಿ ಮೃತಪಟ್ಟ ರಾಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 2000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗಿರಿಯಮ್ಮ ಯಾನೆ ಸಾವಿತ್ರಮ್ಮನವರ ಅರ್ಜಿಯನ್ನು 1896ನೇ ಇಸವಿ ನವಂಬರ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896ನೇ ಇಸವಿ ಸೆಪ್ಟಂಬರ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟಿನ ಮೊಹರ ನಿಶಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟು ಜಡ್ಜ್.

ತಾರೀಖು 26ನೇ ಆಗಸ್ಟ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟಾಫಿಸ್ ಮನಿಆರ್ಡರ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಪ್ಸೀಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುಂಥಾ ಕೂಪ್ಪನಗಳಗೆ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಿಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ಮೊಬಲಗು ತೆಗದುಕೊಂಡು ರಶೀತಿ ಕೊಡುವ ಬಗ್ಯಾಗಿ ಅಪ್ಪಣೆ ಯಿಸುವದ್ದರಿಂದ ಇನ್ನು ಮೇಲೆ ಮೈಸೂರ-ಶೀಮೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್ಡರ ಹೊರ್ತಾಗಿ ಅನ್ಯಥಾ ಆ ಬಗ್ಯಾಗಿ ಈ ಆಫಿಸಿಗೆ ಕಳುಹಿಸಲ್ಪಡುವ ಯಾವ ಮನಿಆರ್ಡರಾಗಲಿ ಈ ಆಫೀಸಿನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಶಕ್ಕೂ ನಿಗೆ ಕೊಡಲ್ಪಡಲಾರದು.

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು	
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮಕ್ಕಾಂ 155ನೇ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮರ್ರ್ಕುಂ 24205—6—ಜಿ. 6200ನೇ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸ್‌ಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ ..		2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ		1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸ್‌ಗಳಿಗೆ :—			
ಮೊದಲನೇ ಸಲಕ್ಕೆ		5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ		2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.			
ಡ್ಯೂಪ್ಲಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ :—			
ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„ ..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—			
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ಕ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..	..	0	4

ಷರಾ.—ಚಂದಾ ವಗೈರೇ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದುಗಳು ಇದರಡಿ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರತು. ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಲ್ಪಡುತ್ತೆಂಬ ಖಾತರ್ ಯಿಲ್ಲ.

ಸಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪೈಲರ್.

Mysore Govt. Central Press, Bangalore.—1896.

407

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಫಾಯಿಷ್ ಆದ್ದು [ನಂ. 43.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 29, ಸ॥ 1896.

ವಿ ಷ ಯ ಸೂ ಚಿ ಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ ವ ಯಜ್ಯು ಕೇಷನ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋ ರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ ವ ಸೆಷನ ಜಡ್ಜೀರು, ಡಿಸ್ಟ್ರಿ ಕ್ಟ ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ. ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಸ್ ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆ ಕ್ಟುಗಳು ವ ರೆಗ್ಯುಲೇಷನಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಫ್ರಿಸ್ಕ್ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ.

ತಾರೀಖು 2ನೇ ಅಕ್ಟೋಬರ 1896.

ನಂ. 4600.—ಜು. 505, ಬೆಂಗಳೂರು ಪೊಲೀಸ್ ಸೂಪರ್ರಿಂಟೆಂಡೆಂಟ್ ಮಿಸ್ಟರ್ ಡಿ. ದೇವರಾಜ ಅರಸಿನವರಿಗೆ, 1896ನೇ ಸೆಪ್ಟಂಬರ್ 24ನೇ ಮರ್ಕುಂ 4176.—ಜು. 434ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ 1896ನೇ ಸೆಪ್ಟಂಬರ 26ನೇ ತಾರೀಖು ವರಿ ಗೆ ಕೊಡಲ್ಪಟ್ಟಿದ್ದ ತಲಬಿಲ್ಲದ ರಜಾ 1896ನೇ ಅಕ್ಟೋಬರ 31ನೇ ತಾರೀಖಿನ ವರವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಪೊಲೀಸಿನ ಆಕ್ಟಿಂಗ್ ಸೂಪರ್ರಿಂಟೆಂಡೆಂಟ್ ಮಿಸ್ಟರ್ ಡಿ. ಎ. ಬಲ್ಲಾರ್ಡ್ ಯವರು ಸದರೀ ಮಿಸ್ಟರ್ ಡಿ. ದೇವರಾಜ ಅರಸಿನವರು ರಜಾ ದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಬೆಂಗಳೂರು ಡಿಸ್ಟ್ರಿಕ್ಟು ಪೊಲೀಸಿನ ಚಾರ್ಜಿನಲ್ಲಿ ಇರ ತಕ್ಕದ್ದು.

ತಾರೀಖು 5ನೇ ಅಕ್ಟೋಬರ 1896.

ನಂ. 4674.—ಜು. 518, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ ಅನುಸರಿಸಿ, ಹಾಸನ ಡಿಸ್ಟ್ರಿಕ್ಟ ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಫಿ. ಎಫ್. ಬವುರಿಂಗ್ ಯವರು 2ನೇ ಕ್ಲಾಸಿನ ಮಾಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 7ನೇ ಅಕ್ಟೋಬರ 1896, ಮೊಕ್ಕಾಂ ಮೈಸೂರು.

ನಂ. 3. ಮಿಸ್ಟರ್ ಎ. ಆರ್. ವೈದ್ಯನಾಥಶಾಸ್ತ್ರಿ, ಎಂ. ಎ., ಎಂ. ಬಿ. ವ ಸಿ. ಎಂ., ಯವರು ಅಸಿಸ್ಟೆಂಟ್ ಸರ್ಜ್ಜನಗಳ 2ನೇ ಕ್ಲಾಸಿನಿಂದ 1ನೇ ಕ್ಲಾಸಿಗೆ, 1896ನೇ ಸೆಪ್ಟೆಂಬರ 5ನೇ ಪುರಸ್ಕಂ ಲಾಗಾಯತು ಬಡ್ತೀ ಮಾಡಲ್ಪಟ್ಟಿರುತ್ತಾರೆ.

ನಂ. 6. ಸಾಗರದ ಆಕ್ಟಿಂಗ್ ಮುನ್ಸಿಫ್ ಮಿಸ್ಟರ್ ಎಸ್. ಶೇಷಗಿರಿರಾಯರು, ಸಬ್ ಪ್ರೋಟೆಂ ಸಬ್ ಜಡ್ಜರಾಗಿ ಬಡ್ತೀ ಮಾಡಲ್ಪಟ್ಟ ಮಿಸ್ಟರ್ ಎಸ್. ವೆಂಕಟವರದಯ್ಯಂಗಾರ್ರಿಗೆ ಬದಲಾಗಿ, 3ನೇ ಕ್ಲಾಸ್ ಮುನ್ಸಿಫರಾಗಿ ಸಬ್ ಪ್ರೋಟೆಂ ತರೀಕ್ ಮೊಕರರ್ರಾಡಲ್ಪಟ್ಟಿರುತ್ತಾರೆ.

ನಂ. 9. ಮುನ್ಸಿಫರುಗಳ ಈ ಕೆಳಗೆ ಕಂಡ ವರ್ಗಾವರ್ಗಿಗಳು ವ ನೇಮಣೂಕಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಮಿಸ್ಟರ್ ಸಿ. ಸುಬ್ಬರಾಯರು ತುಮಕೂರಿಂದ ಶ್ರೀರಂಗಪಟ್ಟಣಕ್ಕೆ; ಆದರೆ ಮಿಸ್ಟರ್ ಟಿ. ಜೆ. ವ್ಯಾಂಡರ್ಲೋರ್ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮೈಸೂರ್ ಸಬ್ ಡಿವಿಜನಿನ ಮುನ್ಸಿಫರಾಗಿ ಆಕ್ಟು ಮಾಡತಕ್ಕದ್ದು. ಮಿಸ್ಟರ್ ಬಸವಾರಾಧ್ಯರವರಿಗೆ ಚಾರ್ಜು ಒಪ್ಪಿಸಿದ ತರುವಾಯ ತಮ್ಮ ಕೆಲಸಕ್ಕೆ ಹೋಗಿ ಶೇರತಕ್ಕದ್ದು.

ಮಿಸ್ಟರ್ ಬಿ. ಬಸವಾರಾಧ್ಯರವರು ಸಾಗರದಿಂದ ತುಮಕೂರಿಗೆ ಕೂಡ್ಲೇ ಕೆಲಸದ ಮೇಲೆ ಹೋಗಿ ಶೇರತಕ್ಕದ್ದು.

ಮಿಸ್ಟರ್ ಎಸ್. ಶೇಷಗಿರಿರಾಯರು ಸಾಗರದಲ್ಲಿರತಕ್ಕದ್ದು.

ತಾರೀಖು 9ನೇ ಅಕ್ಟೋಬರ 1896, ಮೊಕ್ಕಾಂ ಮೈಸೂರು.

ನಂ. 12. ಮುನ್ಸಿಫರುಗಳ ಈ ಕೆಳಗೆ ಕಂಡ ಹಂಗಾಮಿ ವರ್ಗಾವರ್ಗಿ ವ ನೇಮಣೂಕಿ ಹುಕುಂ ಮಾಡಲ್ಪಟ್ಟಿರುತ್ತವೆ:—

ಮಿಸ್ಟರ್ ಎಸ್. ವರದರಾಜಯ್ಯಂಗಾರ್ರು ಚಿತ್ರದುರ್ಗದಿಂದ ಮೈಸೂರಿಗೆ, (ರಜಾದ ಮೇಲಿರುವ ಮಿಸ್ಟರ್ ವ್ಯಾಂಡರ್ಲೋರ್ಯವರಿಗೆ ಬದಲಾಗಿ) ಚಾರ್ಜು ಒಪ್ಪಿಸಿದ ತರುವಾಯ ಕೆಲಸದ ಮೇಲೆ ಹೋಗಿ ಶೇರತಕ್ಕದ್ದು.

ಮಿಸ್ಟರ್ ಕೆ. ಮೈಲಾರಿರಾವ್, ಬಿ. ಎ. ಬಿ. ಯಲ್., ಯವರು ಚಿತ್ರದುರ್ಗಕ್ಕೆ (ಮಿಸ್ಟರ್ ವರದರಾಜಯ್ಯಂಗಾರ್ರಿಗೆ ಬದಲಾಗಿ) ಕೂಡ್ಲೇ ಕೆಲಸದ ಮೇಲೆ ಹೋಗಿ ಶೇರತಕ್ಕದ್ದು.

ನಂ. 15. ಈ ಕೆಳಗೆ ಕಂಡ ಹಂಗಾಮಿ ವರ್ಗಾವರ್ಗಿಗಳು ವ ನೇಮಣೂಕಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಅಷ್ಟಗ್ರಾಮ ಡಿವಿಜನ್ ಡಿಸ್ಟ್ರಿಕ್ಟ ವ ಸೆಷನ್ಸ್ ಜಡ್ಜ್ ಮಿಸ್ಟರ್ ಸಿ. ಕ್ರೆಸ್ ಯವರು (ರಜಾದ ಮೇಲಿರುವ ಮಿಸ್ಟರ್ ಟಿ. ನರಹರಿರಾಯರಿಗೆ ಬದಲಾಗಿ) ನಂದೀದುರ್ಗ ಡಿವಿಜನಿನ ಡಿಸ್ಟ್ರಿಕ್ಟ ವ ಸೆಷನ್ಸ್ ಜಡ್ಜರಾಗಿರತಕ್ಕದ್ದು. ಕೂಡ್ಲೇ ಕೆಲಸದ ಮೇಲೆ ಹೋಗಿ ಶೇರತಕ್ಕದ್ದು.

ನಗರ ಡಿವಿಜನ್ ಡಿಸ್ಟ್ರಿಕ್ಟ ವ ಸೆಷನ್ಸ್ ಜಡ್ಜ್ ಮಿಸ್ಟರ್ ಬಿ. ತಿರುಮಲಾಚಾರ್ಲು, ಬಿ. ಎಲ್. ಯವರು ಅಷ್ಟಗ್ರಾಮ ಡಿವಿಜನಿನ ಡಿಸ್ಟ್ರಿಕ್ಟ ವ ಸೆಷನ್ಸ್ ಜಡ್ಜರಾಗಿರತಕ್ಕದ್ದು. ಕೂಡ್ಲೇ ಕೆಲಸದ ಮೇಲೆ ಹೋಗಿ ಶೇರತಕ್ಕದ್ದು.

ಅಷ್ಟಗ್ರಾಮ ಡಿವಿಜನ್ ಆಕ್ಟಿಂಗ್ ಡಿಸ್ಟ್ರಿಕ್ಟ ವ ಸೆಷನ್ಸ್ ಜಡ್ಜ್ ಮಿಸ್ಟರ್ ಎಂ. ರಾಮಸ್ವಾಮಿ ಅಯ್ಯರ್, ಬಿ. ಎ. ಬಿ. ಎಲ್., ಯವರು ನಗರ ಡಿವಿಜನಿನ ಡಿಸ್ಟ್ರಿಕ್ಟ ವ ಸೆಷನ್ಸ್ ಜಡ್ಜರಾಗಿ ಆಕ್ಟು ಮಾಡತಕ್ಕದ್ದು. ಕೂಡ್ಲೇ ಕೆಲಸದ ಮೇಲೆ ಹೋಗಿ ಶೇರತಕ್ಕದ್ದು.

ಮಿಸ್ಟರ್ ಪಿ. ಸಿಂಗ್ರಾಚಾರ್ರು (ಮಿಸ್ಟರ್ ಎಂ. ರಾಮಸ್ವಾಮಿ ಐಯ್ಯರ್ ಯವರಿಗೆ ಬದಲಾಗಿ) 2ನೇ ಕ್ಲಾಸ್ ಸಬಾರ್ಡಿನೇಟ್ ಜಡ್ಜರಾಗಿ ಆಕ್ಟಿಂಗ್ ತರೀಕ್ ಇರತಕ್ಕದ್ದು.

ಅಡ್ವೋಕೇಟ್ ಮಿಸ್ಟರ್ ಕೆ. ಮೈಲಾರಿರಾವ್, ಬಿ. ಎ. ಬಿ. ಎಲ್., ಯವರು (ಮಿಸ್ಟರ್ ಸಿಂಗ್ರಾಚಾರ್ರಿಗೆ ಬದಲಾಗಿ) ಸಬ್ ಪ್ರೋಟೆಂ ತರೀಕ್ ಕಡೇ ಗ್ರೇಡಿನಲ್ಲಿ ಮುನ್ಸಿಫರಾಗಿ ಆಕ್ಟು ಮಾಡತಕ್ಕದ್ದು.

ನಂ. 18. ತುಮಕೂರು ಮುನ್ಸಿಫ್ ಮಿಸ್ಟರ್ ಸಿ. ಸುಬ್ಬರಾಯರು ಶ್ರೀರಂಗಪಟ್ಟಣಕ್ಕೆ ವರ್ಗಮಾಡಲ್ಪಟ್ಟಿರುತ್ತಾರೆ, (ಮಿಸ್ಟರ್ ಬಸವಾರಾಧ್ಯರವರಿಗೆ ಚಾರ್ಜು ಒಪ್ಪಿಸಿದ ತರುವಾಯ ಕೆಲಸದ ಮೇಲೆ ಹೋಗಿ ಶೇರತಕ್ಕದ್ದು.)

ಇದು ಮಿಸ್ಟರ್ ಸುಬ್ಬರಾಯರನ್ನ ಮೈಸೂರಿಗೆ ವರ್ಗಮಾಡಿರುವದು ರದ್ದುಮಾಡುತ್ತೆ.

ನಂ. 21. ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 218ನೇ ಆರ್ಟಿಕಲ್ ಅನುಸರಿಸಿ, ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ ವ ಸೆಷನ್ಸ್ ಜಡ್ಜ್ ಮಿಸ್ಟರ್ ಟಿ. ನರಹರಿರಾವ್, ಎಂ. ಎಲ್., ಯವರಿಗೆ, ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಆರು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 14ನೇ ಅಕ್ಟೋಬರ 1896, ಮೊಕ್ಕಾಂ ಮೈಸೂರ್.

ನಂ. 35. ಸ್ ೧ 1896ನೇ ಅಕ್ಟೋಬರ 7ನೇ ಪುರಸ್ಕಂ ಕ್ಯಾಂಪ್ 9ನೇ ನಂಬರ್ ಇಸ್ತಿಹಾರನಾಮೆಯಲ್ಲಿ ತುಮಕೂರಿಗೆ ವರ್ಗಾಯಿಸಲ್ಪಟ್ಟಿದ್ದ ಮುನ್ಸಿಫ್ ಮಿಸ್ಟರ್ ಬಸವಾರಾಧ್ಯಯವರು ಹಂಗಾಮಿಯಾಗಿ ಶ್ರೀರಂಗಪಟ್ಟಣಕ್ಕೆ ನಿಯಮಿಸಲ್ಪಟ್ಟಿರುತ್ತಾರೆ, ಅಲ್ಲಿ ಸದರೀಯವರು ಮತ್ತೊಂದು ಹುಕುಂ ಕೊಡುವ ಪರಿಯಂತ ಆಕ್ಟ ಮಾಡತಕ್ಕದ್ದು.

ಕೂಡ್ಲೇ ಕೆಲಸಕ್ಕೆ ಹೋಗಿ ಶೇರತಕ್ಕದ್ದು.

ತಾರೀಖು 14ನೇ ಅಕ್ಟೋಬರ 1896.

ನಂ. 4787.—ಜು. 539, ಹಾಸನ ಡಿಸ್ಟ್ರಿಕ್ಟ್ಟ ಜನರಲ್ ಅಸಿಸ್ಟೆಂಟ ಕಮ್ಮಿಷನರ ವ 2ನೇ ಕ್ಲಾಸ್ ಮಾಜಿಸ್ಟ್ರೇಟ ಮೆಸ್ಟರ ಟಿ. ಪರಮಶಿವಅಯ್ಯರ್‌ಯವರಿಗೆ, 1859ನೇ ಇಸವಿಯ XIIIನೇ ನಂಬರ ಬ್ರೀಚ್ ಆಫ್ ಕಾಂಟ್ರಾಕ್ಟ್ ಆಕ್ಟಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನ ದಾರ್ಯಾಫ್ತೀ ಮಾಡುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ನಂ. 4789.—ಜು. 541, ಕ್ರಿಮಿನಲ್ ಪ್ರೊಸಿಡ್ಯೂರ ಕೋಡಿನ 12ನೇ ಸೆಕ್ಷನ ಅನುಸರಿಸಿ, ಹಾಸನದ ಜನರಲ್ ಅಸಿಸ್ಟೆಂಟ ಕಮ್ಮಿಷನರ ವ 2ನೇ ಕ್ಲಾಸ ಮಾಜಿಸ್ಟ್ರೇಟ ಮೆಸ್ಟರ ಟಿ. ಪರಮಶಿವಅಯ್ಯರ್‌ಯವರಿಗೆ ಸದರೀ ಕ್ಲಾಸಿನ ಮಾಜಿಸ್ಟ್ರೇಟರಿಗೆ ಗವರ್ನಮೆಂಟಿನವರು ಕೊಡಬಹುದಾದ ಜಾಸ್ತೀ ಅಧಿಕಾರವಾಗಿ 4ನೇ ಷೆಡ್ಯೂಲಿನಲ್ಲಿ ವಿವರಸಲ್ಪಟ್ಟ ಈ ಕೆಳಗೆ ಕಂಡ ಅಧಿಕಾರವು ಕೊಡಲ್ಪಟ್ಟಿರುತ್ತೆ.

1. ಕಮಿಟ್ ಮಾಡುವ ಬಗ್ಯೆ ದರ್ಯಾಫ್ತೀ ಮಾಡಲಿಕ್ಕೆ ಅಧಿಕಾರ, ಸೆಕ್ಷನ 206.

ತಾರೀಖು 23ನೇ ಸೆಪ್ಟಂಬರ 1896.

ನಂ. 3327.—ಯಕ್ಸೈ. 121, ಸ್ಟ 1895ನೇ ಇಸವಿ ಡಿಸೆಂಬರ 11ನೇ ಮುಕ್ಕಾಂ 5508.—ಯಕ್ಸೈ. 182ನೇ ನಂಬರ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1892ನೇ ಮಾರ್ಚಿ 30ನೇ ಮುಕ್ಕಾಂ 495ನೇ ನಂಬರ ಇಸ್ತಿಹಾರ್‌ನಾಮೆ ಅನುಸರಿಸಿ, ಘಾಯಿಷ್ ಮಾಡಲ್ಪಟ್ಟ ರೂಲ್ಸಿನ XXIನೇ ರೂಲ್ 5ನೇ ಕ್ಲಾಜಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸಲ್ಪಡತಕ್ಕದ್ದೆಂದು ಮೈಸೂರ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

"(3) ಲೈಸೆನ್ಸದಾರನಿಂದ ಯಿಡಲ್ಪಟ್ಟ ಠೇವಣಿ ಮೊಬಲಗು, ಇಜಾರೆ ವಾಯಿದೆಯ ಆಖ್ಯೆರ ಎರಡು ಮಾಹೆಗಳಲ್ಲಿ ಪಾವತಿ "ಯಾಗಬೇಕಾದ ಖಿಸ್ತುಗಳಿಗಾಗಿ, ತೆಗದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, "ಇಜಾರೆಯು ದುಸರಾ ಹರಾಜ್ ಯಾ ರದ್ದು ಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ "ದಂಡವಾಗಿ ತೆಗೆದುಕೊಳ್ಳಲ್ಪಡಬಹುದು. ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕೀಗೂ ಮತ್ತು ಇಜಾರೆಯು ಪುನ "ಶ್ಚ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಭರ್ತೀ ಮಾಡಲ್ಪಡಬಹುದು. ಹಾಗೆ "ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲೀ ಬಗ್ಯಾಗಿ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ, "ಲೈಸೆನ್ಸದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊಬಲಗಿನ ಯಾವ "ರಿಮಿಷನ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು."

"(3A.) ಬಾಕೀ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ "ಮೊಬಲಗಿಗೆ ಪುನಶ್ಚ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡೀ ದೇಖೀಲ್ ವಸೂಲ್ಮಾಡ "ಲ್ಪಡತಕ್ಕದ್ದು."

ನಂ. 3358.—ಯಕ್ಸೈ. 123, ಸ್ಟ 1895ನೇ ಡಿಸೆಂಬರ 11ನೇ ಮುಕ್ಕಾಂ 5512.—ಯಕ್ಸೈ. 183ನೇ ನಂಬರ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1893ನೇ ಜನವರಿ 14ನೇ ಮುಕ್ಕಾಂ 11813.—ರೆ. ಫೈ. 233ನೇ ನಂಬರ ಇಸ್ತಿಹಾರ್‌ನಾಮೆ ಅನುಸರಿಸಿ, ಘಾಯಿಷ್ ಮಾಡಲ್ಪಟ್ಟ ರೂಲ್ಸಿನ Vನೇ ರೂಲ್ 6ನೇ ಕ್ಲಾಸಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸಲ್ಪಡತಕ್ಕದ್ದೆಂದು ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

"(3) ಲೈಸೆನ್ಸದಾರನಿಂದ ಹಾಜರ್ಮಾಡಲ್ಪಟ್ಟ ಠೇವಣಿ ಮೊಬಲಗು, ಗುತ್ತಿಗೆ ವಾಯಿದೆಯ ಆಖ್ಯೆರ ತಿಂಗಳು ಯಾ ತಿಂಗಳು "ಗಳಲ್ಲಿ ಪಾವತಿಯಾಗಬೇಕಾದ ಖಿಸ್ತುಗಳ ಬಾಕಿಗಾಗಿ, ತೆಗದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿ "ಯಮಗಳನುಸರಿಸಿ, ಇಜಾರೆಯು ದುಸರಾ ಹರಾಜ್ ಯಾ ರದ್ದುಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ "ಯುಕ್ತಾನುಸಾರ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು. ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕಿಗೂ ಮತ್ತು "ಇಜಾರೆಯು ಪುನಶ್ಚ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಉಪಯೋಗಿಸಲ್ಪ "ಡಬಹುದು. ಹಾಗೆ ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಯಾಗಿ ಜಾರಿಯಲ್ಲಿರುವ "ರೂಲ್ಸ್ ಅನುಸರಿಸಿ, ಲೈಸೆನ್ಸದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊ "ಬಲಗಿನ ಯಾವ ರಿಮಿಷನ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು."

"(3 A.) ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ "ಮೊಬಲಗಿಗೆ ಪುನಶ್ಚ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡೀ ದೇಖೀಲ್ ವಸೂಲ್ಮಾ "ಡಲ್ಪಡತಕ್ಕದ್ದು."

ತಾರೀಖು 1ನೇ ಅಕ್ಟೋಬರ 1896.

ನಂ. 3565.—ರೆ. ಫೈ. 128.—95, ಮೈಸೂರ ಸರ್ವಿಸ ರೆಗ್ಯುಲೇಷನಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟ್ಟ ಅಸಿಸ್ಟೆಂಟ ಕಮ್ಮಿಷನರ ಮೆಸ್ಟರ ಎ. ವೆಂಕಟರಾಯರಿಗೆ, 1896ನೇ ಸೆಪ್ಟಂಬರ 21ನೇ ಮುಕ್ಕಾಮಿನಲ್ಲಿ ಪೊಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

2190

ತಾರೀಖು 30ನೇ ಸೆಪ್ಟಂಬರ್ 1896.

ನಂ. 3513.—ರೆ. 1202, ಸ್ರ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ ರಾಮಸಮುದ್ರ ನಾಲೆಯ 24ನೇ ಮೈಲಿಯಲ್ಲಿ ಕೊಳವಿಯಿಂದ ಪ್ರವಾಹದ ನೀರು ಹೋಗುವ ಬಗ್ಯೆ ವೊಂದು ನಾಲೆಯನ್ನ ತೆಗಿಯುವ ಬಗ್ಯಾಗಿ ಅವಶ್ಯಕವಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರನ ಹೆಸರು.	ಜಮೀನ್ ತಪ್ಸೀಲ್.			ಚೆಕ್ಕುಬಂದಿ.
					ಸರ್ವೆ ನಂಬರ್	ವಿವರ ಹೆ.	ಬೇಕಾದ ವಿಸ್ತೀರ್ಣ.	
ಮೈಸೂರು	ಎಡತೊರೆ.	ಎಡತೊರೆ.	ಎಡತೊರೆ.	ರಾಂಭಟ್ಟ.	35	ತರೀ	96 × 7 ಗಜಗಳು, $5\frac{1}{2}$ ಗುಂಟೆಗಳು.	ಪೂರ್ವಕ್ಕೆ—ಸರ್ವೆ ನಂ. 37. ಮತ್ತು. ದಕ್ಷಿಣಕ್ಕೆ—ಮನಗನಹಳ್ಳಿಯ ನಂ. 36. ಪಶ್ಚಿಮಕ್ಕೆ—ರಸ್ತೆ. ಉತ್ತರಕ್ಕೆ—ಎಡತೊರೆಯ ಸರ್ವೇ ನಂ. 41.
					41		170 × 7 ಗಜಗಳು, 10 ಗುಂಟೆಗಳು.	ದಕ್ಷಿಣಪಾರ್ಶ್ವಕ್ಕೆ—ನಂ. 35. ಪಶ್ಚಿಮಪಾರ್ಶ್ವಕ್ಕೆ—ರಸ್ತೆ. ಪೂರ್ವಪಾರ್ಶ್ವಕ್ಕೆ—ನಂ. 39, ಮತ್ತು. ಉತ್ತರಪಾರ್ಶ್ವಕ್ಕೆ—ನಂ. 41.

ತಾರೀಖು 5ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರ.

ನಂ. 4. ಸ್ರ 1896ನೇ ಸೆಪ್ಟಂಬರ್ 4ನೇ ಮುಕ್ಕಾಂ 2566.—ರೆ. ಫೈ. 37.—96ನೇ ಮತ್ತು ಸೆಪ್ಟಂಬರ್ 9ನೇ ಮುಕ್ಕಾಂ 2768.—ರೆ. ಫೈ. 37.—96ನೇ ನಂಬರುಗಳ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ರಜಾಕ್ಕೆ ಬದಲಾಗಿ ನೆಲಮಂಗಲದ ತಾಲ್ಲೂಕು ಅಮಲ್‌ದಾರ್ ಸಿ. ರಾಜಗೋಪಾಲಾಚಾರ್ಲು ಯವರಿಗೆ, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, 1896ನೇ ಆಗಸ್ಟ್ 28ನೇ ಮುಕ್ಕಾಂಲುಗಾಯತು ವೊಂದು ತಿಂಗಳೂ ಹದಿನೇಳು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ರೆವಿನ್ಯೂ ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟರ ಆಫೀಸ್ ಹೆಡ್‌ಕ್ವಾರ್ಟ್ ವ ಚನ್ನಪಟ್ಟಣದ ಆಕ್ಟಿಂಗ್ ಅಮಲ್‌ದಾರ್ ನರಸಿಂಹ ಶ್ರೀನಿವಾಸ್ ಪ್ರೋಟ್ಟಿನ್ ಯವರು, ಅಮಲ್‌ದಾರ್ ಬಿ. ಕೃಷ್ಣರಾಯರಿಗೆ ಚಾರ್ಜು ವೊಪ್ಪಿಸಿದ ತರುವಾಯ ಸದರೀ ಅಮಲ್‌ದಾರ್ ರಾಜಗೋಪಾಲಾಚಾರ್ಲು ಯವರು, ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ನೆಲಮಂಗಲದ ತಾಲ್ಲೂಕಿನ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟ್ ಮಾಡತಕ್ಕದ್ದು.

ತಾರೀಖು 9ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರು.

ನಂ. 3713.—ಫಾ. ಫೈ. 1.—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರ್ ಡಿಸ್ಟ್ರಿಕ್ಟಿಗೆ ಸೇರಿದ ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಮೆಸ್ಟರ್ ಪಿ. ಈ. ಬೇರ್ಸ್ ಯವರಿಗೆ, 1896ನೇ ಸೆಪ್ಟಂಬರ್ 16 ವ 17ನೇ ಮುಕ್ಕಾಂಗಳಲ್ಲಿ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 3772.—ರೆ. 1293, ಹಿರಿಯೂರು ತಾಲ್ಲೂಕಿನ, ಹಿರಿಯೂರು ಮತ್ತು ಜವನಗೊಂಡನಹಳ್ಳಿ ಹೋಬಳಿಗಳಲ್ಲಿರುವ ಈ ಕೆಳಗೆ ಕಂಡ ಗ್ರಾಮಗಳ ವರ್ಗಾವರ್ಗಿಯು ಗವರ್ನಮೆಂಟಿನವರು ಮಂಜೂರ್ಮಾಡಿರುತ್ತಾರೆ:—

ಗ್ರಾಮ.	ವರ್ಗಮಾಡಿರುವ ಹೋಬಳಿ.
ಆನೆಸಿದ್ರಿ (ಹಿರಿಯೂರು ಹೋಬಳಿ)	ಜವನಗೊಂಡನಹಳ್ಳಿ
ಆದಿವಾಲ (ಜವನಗೊಂಡನಹಳ್ಳಿ ಹೋಬಳಿ) ..	ಹಿರಿಯೂರು

ತಾರೀಖು 12ನೇ ಅಕ್ಟೋಬರ್ 1896.

ನಂ. 3781.—ರೆ. ಫೈ. 100—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟು ಮಂಡ್ಯ ತಾಲ್ಲೂಕು ಅಮಲ್‌ದಾರ್ ವಿ. ಎನ್. ಗುರುರಾಯರಿಗೆ, 1896ನೇ ಸೆಪ್ಟಂಬರ್ 30ನೇ ಮುಕ್ಕಾಮಿನಲ್ಲಿ ವೊಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

H91

ತಾರೀಖು 13ನೇ ಅಕ್ಟೋಬರ 1896, ಮೊಕ್ಕಾಂ ಮೈಸೂರು.

ನಂ. 3826.—ರ. 1317, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 188ನೇ ಆರ್ಟಿಕಲ್ ಅನುಸರಿಸಿ, ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ ಎಚ್. ಆರ್. ಶ್ರೀನಿವಾಸರಾಯರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳೂ ಹದಿನೆಂಟು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರ್ ಡಿಸ್ಟ್ರಿಕ್ಟು ಆಫೀಸ್ ರೆವಿನ್ಯೂ ಸಿರಸ್ತೇದಾರ್ ಕೃಷ್ಣಯ್ಯಂಗಾರ್ರು, ಸದರೀ ಶ್ರೀನಿವಾಸರಾಯರು, ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಗುಂಡ್ಲುಪೇಟೆ ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮಿಲಿಟರಿ.

ಇಸ್ತಿಹಾರ್ನಾಮಾ.

ತಾರೀಖು 3ನೇ ಅಕ್ಟೋಬರ 1896.

ಮೈಸೂರ್ ಪೈದಲ್ ಫೌಜಿನ 3ನೇ ಪಟಾಲಮಿನಲ್ಲಿ ಬಡ್ತಿ ಮಾಡಲ್ಪಟ್ಟ ಜಮಾದಾರ್ ಹುಚ್ಚ ಎಂಬವನಿಗೆ ಬದಲಾಗಿ, 1896ನೇ ಆಗಸ್ಟ್ ಗುರ್ರೇ ಲಾಗಾಯತು ಇದರಡಿಕಂಡ ಬಡ್ತಿಯು ಮಾಡಲ್ಪಟ್ಟಿದೆ:—

ಮಹಮ್ಮದ್ಖಾನರು, ಕಲರ್ ಹವಾಲ್ದಾರಿ ಯಿಂದ 2ನೇ ಗ್ರೇಡ್ ಜಮಾದಾರಿಗೆ.

ಮೈಸೂರ್ ಪೈದಲ್ ಫೌಜಿನ 3ನೇ ಪಟಾಲಮಿನಲ್ಲಿ ಪೆನ್ಷನ್ ಮೇಲೆ ನಿವೃತ್ತರಾದ ಜಮಾದಾರ್ ಮಹಮ್ಮದ್ ಹುಸೇನ್ಸಾಯವನಿಗೆ ಬದಲಾಗಿ 1896ನೇ ಸೆಪ್ಟಂಬರ 16ನೇ ಮುಕ್ಕಾಂ ಲಾಗಾಯತು ಇದರಡಿ ಕಂಡ ಬಡ್ತಿಯು ಮಾಡಲ್ಪಟ್ಟಿದೆ:—

ರಂಗರಾಯರು, ಕಲರ್ ಹವಾಲ್ದಾರಿ ಯಿಂದ 2ನೇ ಕ್ಲಾಸ್ ಜಮಾದಾರಿಗೆ.

ತಾರೀಖು 10ನೇ ಅಕ್ಟೋಬರ 1896.

ಘನವನ್ನು ಹೊಂದಿದ ಮಹಾರಾಜ್ಞೀ-ರೀಜಂಟ್ರವರು ಅರಮನೆ ಪೈದಲ್ ಫೌಜಿನಲ್ಲಿ 1896ನೇ ಸೆಪ್ಟಂಬರ ಗುರ್ರೇ ಲಾಗಾಯತು ಈ ಕೆಳಗೆ ಕಂಡ ಬಡ್ತಿಯು ಮಾಡಿರುತ್ತಾರೆ:—

ಎಂ. ನಾರಾಯಣರಾಜ್ ಅರಸಿನವರು, ಸುಬೇದಾರಿ ಯಿಂದ ಸುಬೇದಾರ್ ಮೇಜರಿಗೆ.

ಹುಕುಂ ಬಮೋಜೀಬ್,
ಪಿ. ಎಚ್. ಮೆಕ್ಇಂಟೈರ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಸೆಕ್ರೆಟರಿ.

M92

ಮೈಸೂರ ಗೆಜೆಟ್.

ನಂ. XXXI. ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 43.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 29, ಸನ್ 1896.

IIನೇ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಅಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಸಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ ಡಿಟೋ	„ 170
1	ಮದ್ರಾಸ್ ಓಕ್ಸರವರ ಡಿಟೋ	„ 250
1	ಡಿಟೋ ಡಿಟೋ ಡಿಟೋ	„ 188
1	ಡಿಟೋ ಬೋರ್ರ್ಯಾಮ್‌ರವರ ಡಿಟೋ	„ 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ವಿದ್ಯಾಭ್ಯಾಸದ ಇಲಾಖೆ.

ಮೈಸೂರು ದೇಶೀಯ ಪರೀಕ್ಷೆಗಳು.

ಸರ್ 1896ನೇ ಇಸವಿ ಅಕ್ಟೋಬರ್ ತಾರೀಖು 19.

ಪ್ರಕಟನ ಪತ್ರಿಕೆ.

ಮೈಸೂರು ದೇಶೀಯ ಪರೀಕ್ಷೆಗಳು ಸರ್ 1896ನೇ ಇಸವಿ ಡಿಸೆಂಬರ ತಿಂಗಳು ಮೊದಲನೇ ತಾರೀಖಿನಿಂದ ಆರಂಭವಾಗಿ ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳ (Head-quarters) ದಲ್ಲಿಯೂ ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಟಣದಲ್ಲಿಯೂ ನಡೆಯಿಸಲ್ಪಡುವವು:—

ಪರೀಕ್ಷೆಗಳು ಇದರಡೀಕಂಡ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವವು:—

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ.

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೊದಲನೇ ದಿವಸ	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ; ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1—30ರಿಂದ 2—30 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಭಾಷಾಂತರೀಕರಣ.—ಇಂಗ್ಲಿಷ್, ಸಂಸ್ಕೃತ; ಫಾರಸಿ .. ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳಂಥಾವರಿಗೆ	35
	2—35ರಿಂದ 3—5 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಉಕ್ತಲೇಖನ—ಇಂಗ್ಲಿಷ್; ಸಂಸ್ಕೃತ; ಫಾರಸಿ	10
	3—10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಕೈ ಬರೆವಣಿಗೆ.—ಇಂಗ್ಲಿಷ್; ಸಂಸ್ಕೃತ; ಫಾರಸಿ	10
	3—45ರಿಂದ 4—15 ವರೆಗೆ	ಹಿಂದುಸ್ತಾನಿ ಉಕ್ತಲೇಖನ	10
	4—20ರಿಂದ 4—50 ವರೆಗೆ	ಹಿಂದುಸ್ತಾನಿ ಕೈ ಬರೆವಣಿಗೆ	10
ಎರಡನೇ ದಿವಸ	10ರಿಂದ 1ರ ವರೆಗೆ	ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ ವ್ಯಾಕರಣ, ಭಾಷಾಗ್ರಂಥ ಮತ್ತು ಪ್ರಬಂಧರಚನೆ ..	100
		ಫಾರಸಿ ದ್ವಿತೀಯ ಭಾಷೆ— ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
	2ರಿಂದ 5 ವರೆಗೆ	ಸಂಸ್ಕೃತ ದ್ವಿತೀಯ ಭಾಷೆ— ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
		ಲಾಟಿನ್ ದ್ವಿತೀಯಭಾಷೆ— ಲಾಟಿನ್ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	120
		ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ತೆಲುಗು, ತಮಿಳು ಮತ್ತು ಹಿಂದುಸ್ತಾನಿ, ವ್ಯಾಕರಣ, ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ	100

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೂರನೇ ದಿವಸ	10ರಿಂದ 12 ವರೆಗೆ.	ಅಂಕಗಣಿತ	100
	12–5ರಿಂದ 12–35 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ, ತೆಲುಗು ಮತ್ತು ತಮಿಳು ಅಕ್ಷರ ಸಂಯೋಜನ ...	10
	12–40ರಿಂದ 1—10 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—ಕನ್ನಡ, ತೆಲುಗು ಮತ್ತು ತಮಿಳು ಕೈ ಬರೆವಣಿಗೆ	10
	2ರಿಂದ 4 ವರೆಗೆ	ರೇಖಾಗಣಿತ ಬೀಜಗಣಿತಗಳು	100
	4–5ರಿಂದ 4—35 ವರೆಗೆ	ಐಚ್ಛಿಕ ದ್ವಿತೀಯ ಭಾಷೆ— ಸಂಸ್ಕೃತ ಮತ್ತು ಫಾರಸಿ ಅಕ್ಷರ ಸಂಯೋಜನ	10
	4–40ರಿಂದ 5—10 ವರೆಗೆ	ಐಚ್ಛಿಕ ದ್ವಿತೀಯ ಭಾಷೆ— ಸಂಸ್ಕೃತ ಮತ್ತು ಫಾರಸಿ ಕೈ ಬರೆವಣಿಗೆ ..	10
ನಾಲ್ಕನೇ ದಿವಸ	10ರಿಂದ 1 ವರೆಗೆ	ಚರಿತ್ರೆ, ಭೂಗೋಳ ಶಾಸ್ತ್ರ ಮತ್ತು ಭೂಪಟ ಬರೆಯುವುದು ..	120
	2ರಿಂದ 3–30 ವರೆಗೆ	ವ್ಯವಸಾಯ ಶಾಸ್ತ್ರ	100
	3—35ರಿಂದ 5—5 ವರೆಗೆ	ಆರೋಗ್ಯ ಶಾಸ್ತ್ರ	100
ಐದನೇ ದಿವಸ	10ರಿಂದ 11—30 ವರೆಗೆ	ಕ್ಷೇತ್ರಗಣಿತ	100
	11–35ರಿಂದ 1—5 ವರೆಗೆ	ಪ್ರಾಕೃತಿಕ ಭೂಗೋಳ ಶಾಸ್ತ್ರ	100
	2ರಿಂದ 3–30 ವರೆಗೆ	ಹೊಲಿಗೆ	50
	3—35ರಿಂದ 5—5 ವರೆಗೆ	ಪಾಕಶಾಸ್ತ್ರ	50

ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆ.

ದಿನ.	ಘಂಟೆ.	ವಿಷಯ.		ಅಂಕಗಳು.	
ಮೊದಲನೇ ದಿನ	10—1	ಪ್ರಥಮ ಭಾಷೆ	ಗ್ರಂಥಗಳು	60	130
	2—4	ಅದೇ	ಪ್ರೌಢವ್ಯಾಕರಣ	40	
	4·5—5·5	ಅದೇ	ಪ್ರಬಂಧರಚನೆ	30	
ಎರಡನೇ ದಿನ	10—1	ದ್ವಿತೀಯ ಭಾಷೆ	ಗ್ರಂಥಗಳು, ವ್ಯಾಕರಣ, ಪದವಿನ್ಯಾಸ, ಭಾಷಾ ಶೈಲಿ	50	100
	2—5		ಭಾಷಾಂತರೀಕರಣ	50	
ಮೂರನೇ ದಿನ	10—12	ರೇಖಾಗಣಿತ, ಕ್ಷೇತ್ರಗಣಿತ		40	120
	1—3·30	ಅಂಕಗಣಿತ		50	
	3·35—5·5	ಬೀಜಗಣಿತ		30	
ನಾಲ್ಕನೇ ದಿನ	10—12	ಪ್ರಾಕೃತಿಕಶಾಸ್ತ್ರ (Physical science)		40	120
	1—3	ಆರೋಗ್ಯಶಾಸ್ತ್ರ		40	
	3·5—5·5	ಕೃಷಿಶಾಸ್ತ್ರ		40	
ಐದನೇ ದಿನ	10—1	ಚರಿತ್ರೆ		50	100
	2—5	ಭೂಗೋಳಶಾಸ್ತ್ರ		50	
				ಜುಮ್ಲಾ	570

ಪರೀಕ್ಷೆಯರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಆರನೇ ದಿನ ತತ್ಪೂರ್ವ ಪ್ರಕಟಿಸಲ್ಪಡುವ ಸ್ಥಳ, ಕಾಲಗಳಲ್ಲಿ ನಡೆಯುವುದು.

ಕರ್ನಾಟಕ ಪಂಡಿತಪರೀಕ್ಷೆ.

ದಿನ.	ಘಂಟೆ.	ವಿಷಯ.	ಅಂಕಗಳು.	
ಮೊದಲನೇ ದಿನ ..	10—1	ಕನ್ನಡ ವ್ಯಾಕರಣ	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ	80	
ಎರಡನೇ ದಿನ ..	10—1	ಕನ್ನಡ ಗ್ರಂಥಗಳು ಮೊದಲನೇಪತ್ರಿಕೆ	100	400
	2—5	ಅದೇ ಎರಡನೇ ಪತ್ರಿಕೆ	100	
ಮೂರನೇ ದಿನ ...	10—1	ಅದೇ ಮೂರನೇ ಪತ್ರಿಕೆ	100	
	2—5	ಅದೇ ನಾಲ್ಕನೇ ಪತ್ರಿಕೆ	100	
ನಾಲ್ಕನೇ ದಿನ ..	10—1	ಕನ್ನಡ ಪ್ರಬಂಧರಚನೆ	100	
	2—5	ಭಾಷಾಂತರೀಕರಣ	100	
ಐದನೇ ದಿನ ..	10—1	ಸಂಸ್ಕೃತ ವ್ಯಾಕರಣ	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ	120	
ಆರನೇ ದಿನ ..	10—1	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ	100	200
	2—5	ಅದೇ ಎರಡನೇ ಪತ್ರಿಕೆ	100	

ಇದರಡಿ ಕಂಡ ನಿಬಂಧನೆಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧಘಂಟೆ ಕಳದಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದ ನಂತರ ಪುನಃ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ಉಂಟಾಗಲಾರದು. ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವುದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವುದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರೆದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರಗಳನ್ನಾಗಲಿ, ತೆಗೆದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ, ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯ ಹೆಸರು ರೆಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನ ಬಿಸಾಡವಂತೆಯೂ ನಿಷೇಧಿಸಲ್ಪಟ್ಟರುತ್ತಾರೆ. ಕೆಟ್ಟುಹೋದ ವಿಸಿಷ್ಟ ಕಾಗದಗಳೂ ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ 89.

ಮೃತಪಟ್ಟ ದಾಸಪ್ಪನ ಹೆಡತಿ ಚಿನ್ನಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಶಿವಿಲ್ ಅಂಡ್ ಮಿಲಿಟೆರಿ ಸ್ಟೇಷನ್ ಚಿಕ್ಕ ಬಜಾರಿನಲ್ಲಿರುವ ಕಂಟಪ್ಪನ ದತ್ತುಮಗ ಹುಳ್ಳಿಳ್ಳಪ್ಪ ವುರಫ್ ವೆಂಕಟರಮಣಪ್ಪ, ಮೃತಪಟ್ಟ ಸದರೀ ದಾಸಪ್ಪನ ಹೆಂಡತಿ ಚಿನ್ನಮ್ಮನವರಿಗೆ ಭಾವನ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಸಿವಿಲ್ ಮಿಲಿಟೆರಿ ಸ್ಟೇಷನ್ ಸ್ಥಳದ ಹುಳ್ಳಿಳ್ಳಪ್ಪ ವುರಫ್ ವೆಂಕಟರಮಣಪ್ಪನು, ಬೆಟ್ಟಹಲಸೂರು ವಾಸಸ್ಥರಾಗಿ ಮೃತಪಟ್ಟ ಚಿನ್ನಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹುಳ್ಳಿಳ್ಳಪ್ಪ ವುರಫ್ ವೆಂಕಟರಮಣಪ್ಪನ ಅರ್ಜಿಯನ್ನು ಸನ್ 1896ನೇ ಇಸವಿ ನವಂಬರ್ ತಿಂಗಳ ತಾರೀಖು 5ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿನ್ನಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಅಕ್ಟೋಬರ್ ತಿಂಗಳ 17ನೇ ತಾರೀಖಿನಲ್ಲಿ ಕೋರ್ಟ್ ಮೊಹರನಿಶಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ 139.

ಮೃತಪಟ್ಟ ಅಡಿಕೆ ಮುನಿವೆಂಕಟಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕೋಲಾರದ ಕುರುಬರಪೇಟೆಯಲ್ಲಿರುವ ವೆಂಕಟರಮಣ ಮೈನರ್, ಗಾರ್ಡಿಯನ್ ತಾಯಿ ವೆಂಕಟಮ್ಮನು, ಮೃತಪಟ್ಟ ಸದರೀ ಮುನಿವೆಂಕಟಪ್ಪನಿಗೆ ವೆಂಕಟರಮಣನು ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಕೋಲಾರ ಸ್ಥಳದ ವೆಂಕಟಮ್ಮನು, ಕೋಲಾರದ ವಾಸಸ್ಥರಾಗಿ ಮೃತಪಟ್ಟ ಮುನಿವೆಂಕಟಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ವೆಂಕಟಮ್ಮನ ಅರ್ಜಿಯನ್ನು 1896ನೇ ಇಸವಿ ನವಂಬರು ತಿಂಗಳ ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿವೆಂಕಟಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ 143.

ಮೃತಪಟ್ಟ ಬಸಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿಯಲ್ಲಿ ಇರುವ ನಂಜುಂಡಪ್ಪನು, ಮೃತಪಟ್ಟ ಸದರೀ ಬಸಪ್ಪನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ವಡಿಗೇನಹಳ್ಳಿ ಸ್ಥಳದ ನಂಜುಂಡಪ್ಪನು, ವಡಿಗೇನಹಳ್ಳಿ ವಾಸಸ್ಥರಾಗಿ ಮೃತಪಟ್ಟ ಬಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜುಂಡಪ್ಪನವರ ಅರ್ಜಿಯನ್ನು ಸನ್ 1896ನೇ ಇಸವಿ ನವಂಬರ್ ತಿಂಗಳ ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟ್ಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ್ „
ಬೆಂಗಳೂರು	ಬೆಂಗಳೂರು	4ನೇ ಡಿಟ್ಟೋ „
ಹಾಸನ	ಹಾಸನ	7ನೇ ಡಿಟ್ಟೋ „
ಕಡೂರು	ಚಿಕ್ಕ ಮಗಳೂರು	10ನೇ ಡಿಟ್ಟೋ „
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟ್ಟೋ „
ಡಿಟ್ಟೋ	ಸಾಗರ	18ನೇ ಡಿಟ್ಟೋ „
ಡಿಟ್ಟೋ	ತೀರ್ಥಹಳ್ಳಿ	22ನೇ ಡಿಟ್ಟೋ „

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯು ಬಿಕರಿ ಬಗ್ಯೆ ಪದಗಿಸಲ್ಪಡುವ ಸಂದಲಿನ ತರಹೆಯಗಳ ಮೊತ್ತವನ್ನ ಇರಡಿ ವಿವರಿಸಿಧೆ.

487

ಸಂದಲ್ ವಿವರ	ಹಳೇ ತರಹೆ ಪ್ರಕಾರ.											
	ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
	ಟ.	ಹ.	ಟ.	ಹ.	ಟ.	ಹ.	ಟ.	ಹ.	ಟ.	ಹ.	ಟ.	ಹ.
ಸಲಾಕಿ ಅವ್ವಲ್ ..	1	..	..	5	..	15	..	..	..	15	..	...
ಡಿಟ್ಟೋ ದುಯಂ ..	..	5	1	5	2	5	3	5	1	..	..	2
ಡಿಟ್ಟೋ ಸಿಯಂ ..	1	10	7	10	5	5	12	15	8	..	4	..
ಡಿಟ್ಟೋ ಚಹರಂ ..	45	15	30	..	44	..	32	10	12	..	7	..
ಡಿಟ್ಟೋ ಪಂಚಂ ..	7	..	10	..	10	10	37	.	25	..	14	..
ಚಿಕ್ಕ ಸಲಾಕಿ ..	1	2	1	..	..	..	..	..	..	..	..	..
ದೊಡ್ಡ ಜಡಾ ..	21	..			33	..	66	5	40	..	25	..
ಚಿಕ್ಕ ಜಡಾ ..	3	15	35	..	5	..	8	..	4	..	2	..
ಜಡದ ರಂಬೆ ..	1	5			7	..	..	..	...	..	...	..
ದೊಡ್ಡ ಜಜ್ಜು ..	18	..	61	5	30	..	94	..	65	..	43	..
ಚಿಕ್ಕ ಜಜ್ಜು ..	3	5			11	..						..
ಬಗರದದ್ದು ..	2	15	6	..	5	5	26	.	9	..	13	10
ಐರ್ ವಾಜೆ ಗುಬಗರು ..	1	..	3	..	..	10	..	..	..	..	..	..
ಗರಗಸ ಬುಕಣಿ ..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಟ .	1	10	1	..	6	5	15	10	15	..	16	..
ಚಿಕ್ಕ ಡಿಟ್ಟೋ ..	..	..	2	..								..
ಕೆತ್ತನೆ ಐರ್ ಚಿಲ್ಟ ..	6	..	..	..	..	..	..	..	..	..	..	...
ಹತ್ರಿ ಚಿಲ್ಟ ..	1	6	..	..	..	..	..	..	..	..	..	..
ಮಿಲ್ವ ಚಿಲ್ಟ ..	17	10	30	..	21	5	30	..	12	..	9	..
ಬಸೋಲ ಬುಕಣಿ ..	1	15	10	..	14	..	14	15	5	10	6	8
ಕೊಯತ ಚಿಲ್ಟ ..	..	..	1	10	3	10	9	..	2	..	1	..
ಜುಮ್ಲಾ ..	135	15	200	..	200	..	350	..	200	..	150	..

ಸಂದಲ್ ವಿವರ.	ಹೊಸ ಯಾ ಬೊಂಬಾಯಿ ತರಹೆ ಪ್ರಕಾರ.			
	ಹುಣಸೂರು ಕೋಠಿ.		ಶ್ರೀರಂಗಪಟ್ಣ ಕೋಠಿ.	
	ಟ.	ಹ.	ಟ.	ಹ.
ವಿಲಾಯಿತಿ ಬಡ್ ..	1	.	..	10
ಚೈನಾ ಬಡ್ ..	20	..	30	
ಪಂಚಂ ..	28	..	89	..
ಚಿಕ್ಕ ಸಲಾಕಿ, ಘೋಟ್ಲ (ಅವ್ವಲ್) ..	3	...	5	..
ಡಿಟ್ಟೋ (ದುಯಂ) ..	2	..	1	..
ಘಟ್ ಬಡಲ ..	50	..	30	..
ಜಡಾ (ಅವ್ವಲ್) ..	25	..	25	..
ಡಿಟ್ಟೋ (ದುಯಂ) ..	25	..	12	..
ಡಿಟ್ಟೋ (ಸಿಯಂ) .	20	..	8	..
ಡಿಟ್ಟೋ (ಚಹರಂ) ..	7	..	7	..
ಜಜ್ಜು (ಅವ್ವಲ್) ..	50	...	25	..
ಡಿಟ್ಟೋ (ದುಯಂ) ..	40	15	15	..
ಬಗರದದ್ದು ..	5	..	12	..
ಐರ್ ಬಗರು ..	5	..	14	..
ಚಿರಿಯಾ ..	5	..	5	..
ಐರ್ ಚಿಲ್ಟ (ಅವ್ವಲ್) ..	4	..	6	..
ಡಿಟ್ಟೋ (ದುಯಂ) ..	6	..	6	10
ಹತ್ರಿ ಚಿಲ್ಟ ..	1	..	2	10
ಗರಗಸ ಬುಕಣಿ ..	1	..	..	10
ಮಿಲ್ಲ ಚಿಲ್ಟ ..	30	..	50	..
ಬಸೋಲಾ ಬುಕಣಿ ..	7	.	10	..
ಜೇಗು ಮಿಲ್ವ ..	..	..	5	..
ಕಳೆದವರುಷದ ಜಡಾ	113	15	12	15
ಸ್ಪೆಷಲ್ ಕ್ಲಾಸ್ ..	..	10	...	..
ಟೋಟಲ್ ..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಯೆ ಇದರಡಿ ಕಂಡುಬರುವ ತಿದ್ದುಪಾಟುದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ಸುಂ 15230.—ಆರ್. ಎಫ್. 155 —92ನೇ ನಂಬರ ರೂಲ್ಸಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಯಿತರ ಆಫಿಸರಿಂದ ಆಗಲಿ ಶೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಜಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ ನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ ಮೊಬಲಗಿಗಾಗಿ ಟ್ರೆಜರೀ ಆಫಿಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದೀಯನ್ನ 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫಿಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫಿಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯಾಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫಿಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಸೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಯಿಲ್ಲದ ರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫಿಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ವುಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಶೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಯಂದಿಗೂ ಯಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಶೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫಿಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫಿಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫಿಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ ಹಾಜರಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜ್ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನ ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫಿಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ವಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀ

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲವಾದ್ದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಹೂಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಗೆ ಖಾಯಿಷ್ ಮಾಡಿ ಆಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ವಂದಕ್ಕೆ 8 ಆಣೆಗಳ ಮೇರ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿ ದಾರನಿಗೆ 10 ದಿನಗಳು ಹಾಮಿಯೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೊಡ್ಲಿ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇವ ಖರ್ಚುಗಳ ವಸೂಲಿಬಗ್ಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ಉಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜ್ ಆಫೀಸರಿಂದ ದಸ್ತಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ಮಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ಮಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ಉಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ಮಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟು ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಶೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು, ಅಥವಾ ರೇಂಜ್ ಇನ್‌ಛಾರ್ಜ್ ಫಾರೆಸ್ಟ್ ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜ್ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,

ಫಾರ್ ಕನ್ಸರವೇಟರ್ ಆಫ್ ಫಾರೆಸ್ಟ್ಸ್.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 112.

ಮೃತಪಟ್ಟ ಮೈಲಾರ ಚಿಕ್ಕಲಿಂಗಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಲಾರ ನಂಜಪ್ಪನವರು, ಮೃತಪಟ್ಟ ಸದರೀ ಚಿಕ್ಕಲಿಂಗಣ್ಣನವರಿಗೆ ಮಗ ಆಗಬೇಕಾದ ಹಕ್ಕುದಾರಿ ಪೋಲಿ
ಮೈಸೂರು ಮಂಡಿಮೊಹಲ್ಲಾ ಸ್ಥಳದ ಸದರೀ ನಂಜಪ್ಪನವರು, ಸದರೀ ವಾರಸುದಾರರಾಗಿ ಮೃತಪಟ್ಟ ಚಿಕ್ಕಲಿಂಗಣ್ಣನವರ ಜಿಂದಗಿ ಬಗ್ಗಾ
ಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟ್
ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.
ಸದರೀ ದರಖಾಸ್ತುದಾರರಾದ ನಂಜಪ್ಪನವರ ಅರ್ಜಿಯನ್ನು ಸರ್ 1896ನೇ ಇಸವಿ ನವಂಬರ ತಿಂಗಳ ತಾರೀಖು 5ರಲ್ಲು ಕೇಳಿ
ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಚಾರಣೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಲಿಂಗಣ್ಣನವರ ಆಸಿ
ಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಅರ್ಜೀ ನಂಬರ 113.

ಮೃತಪಟ್ಟ ಮಾರೀಗುಡಿ ನಾರಣಯ್ಯಂಗಾರ್ ಮತ್ತು ಈತನ ಹೆಂಡತಿ ಆಸ್ತೀ ವಿಷಯದಲ್ಲಿ ಸಹ—

ಅರ್ಜೀದಾರು ಶ್ರೀನಿವಾಸರಂಗಾಚಾರು ಮೈನರ್, ಗಾರ್ಡಿಯನ್ ಅಜ್ಜಿ ನಾಚಾರಮ್ಮನವರು, ಮೃತಪಟ್ಟ ಸದರೀ ನಾರಣಯ್ಯಂಗಾರ್ರಿಗೆ ಮೈನರ ಮಗ, ತಾಯಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ಸ್ಥಳದ ಸದರೀ ನಾಚಾರಮ್ಮನವರು, ಸದರೀ ವಾಸಸ್ಥರಾಗಿ ಮೃತಪಟ್ಟ ನಾರಣಯ್ಯಂಗಾರು ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾಚಾರಮ್ಮನವರ ಅರ್ಜಿಯನ್ನು ಸನ್ 1896ನೇ ಇಸವಿ ನವಂಬರ ತಿಂಗಳ ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಯ್ಯಂಗಾರು ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಅರ್ಜೀ ನಂಬರ 114.

ಮೃತಪಟ್ಟ ಮುತ್ತಿಗೆರೆ ಶ್ರೀನಿವಾಸಯ್ಯಂಗ್ ಮತ್ತು ಈತನ ಮಗ ವೆಂಕಟನರಸುಹ್ಮಾಚಾರು ಆಸ್ತೀ ವಿಷಯದಲ್ಲಿ ಸಹ—

ಅರ್ಜೀದಾರು ಕಲ್ಯಾಣಮ್ಮ, ಪುರಫ್ ತಂಗಚ್ಚಮ್ಮನವರು, ಮೃತಪಟ್ಟ ಸದರೀ ಶ್ರೀನಿವಾಸಯ್ಯಂಗಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕತ್ತವಾಡಿಪುರ ಅಗ್ರಹಾರ ಸ್ಥಳದ ಸದರೀ ತಂಗಚ್ಚಮ್ಮನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸಯ್ಯಂಗಾರು ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತಂಗಚ್ಚಮ್ಮನವರ ಅರ್ಜಿಯನ್ನು 1896ನೇ ಇಸವಿ ನವಂಬರ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಯ್ಯಂಗಾರು ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896—97ನೇ ಇಸವಿ ಅರ್ಜೀ ನಂಬರ 115.

ಮೃತಪಟ್ಟ ಛತ್ತದಮಳಿಗೆ ಬಸವಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು 1ನೇ ನಂಜಯ್ಯ, 2ನೇ ಚವಡಮ್ಮ ಸಹ, ಮೃತಪಟ್ಟ ಸದರೀ ಬಸವಂಣನವರಿಗೆ ಮಗ, ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಮೈಸೂರ ಯಿಟ್ಟಿಗೆಗೂಡು ಸ್ಥಳದ ಸದರೀ ನಂಜಯ್ಯ, ಚವಡಮ್ಮ ಇವರುಗಳು, ಸದರೀ ವಾಸಸ್ಥರಾಗಿ ಮೃತಪಟ್ಟ ಬಸವಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಯ್ಯ, ಚವಡಮ್ಮ ಯಿವರುಗಳ ಅರ್ಜಿಯನ್ನು ಸನ್ 1896ನೇ ಇಸವಿ ನವಂಬರ ತಿಂಗಳ ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸವಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ಅಕ್ಟೋಬರು ತಿಂಗಳ 19ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟು ಜಡ್ಜ.

ನಗರದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ 81.

ಮೃತಪಟ್ಟ ಲೇಟ್ ಡೆಪ್ಯುಟಿ ಇನ್ಸ್ಪೆಕ್ಟರ A. C. ಸುಬ್ಬ್ರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕಡೂರು ತಾಲ್ಲೂಕು ಸಖ್ರಾಯಪಟ್ಟಣದ ಮಾಗಣಿ ಹೋಚಿಹಳ್ಳಿಯಲ್ಲಿರುವ ಮಹಾಲಕ್ಷ್ಮಮ್ಮ, ಸದರೀ ಹೋಚಿಹಳ್ಳಿಯಲ್ಲಿರುವ ಮಹಾಲಕ್ಷ್ಮಮ್ಮನು, ಮೃತಪಟ್ಟ ಸದರೀ A. C. ಸುಬ್ಬ್ರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ಕಡೂರು ತಾಲ್ಲೂಕು ಹೋಚಿಹಳ್ಳಿ ಸ್ಥಳದ ಮಹಾಲಕ್ಷ್ಮಮ್ಮ ಯಂಬವರು, ಮೈಸೂರಲ್ಲಿ ವಾಸಸ್ಥರಾಗಿ ಮೃತಪಟ್ಟ A. C. ಸುಬ್ಬ್ರಾಯರ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಮಹಾಲಕ್ಷ್ಮಮ್ಮ ಯಂಬವರ ಅರ್ಜಿಯನ್ನು 1896ನೇ ಇಸವಿ ನವಂಬರ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬ್ರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಶಿವಮೊಗ್ಗಾ ಮೊಕ್ಕಾಂ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ನ 1896—97ನೇ ಇಸವಿ ಮಿ॥ ಅರ್ಜೀ ನಂಬರ 87.

ಮೃತಪಟ್ಟ ಕೃಷ್ಣಾಬಾಯಿ ಯಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ತರೀಕೆರೆ ತಾಲ್ಲೂಕು ಲಕ್ಕುವಳ್ಳಿಯಲ್ಲಿರುವ ಫಾರೆಸ್ಟ್ ರೇಂಜರ್ ಕ್ರಿಷ್ಣರಾವ್, ಸದರೀ ಕ್ರಿಷ್ಣರಾವ್ ಯಂಬವರು, ಮೃತಪಟ್ಟ ಸದರೀ ಕೃಷ್ಣಾಬಾಯಿಗೆ ಭಾವನು ಆಗಬೇಕೆಂಬ ಹಕ್ಕುದಾರಿ ಮೇಲೆ ತರೀಕೆರೆ ತಾಲ್ಲೂಕು ಲಕ್ಕುವಳ್ಳಿ ಸ್ಥಳದ ಸದರೀ ಕ್ರಿಷ್ಣರಾಯರು, ಸಾಗರದಲ್ಲಿ ವಾಸಸ್ಥರಾಗಿ ಮೃತಪಟ್ಟ ಕೃಷ್ಣಾಬಾಯಿಯ ಜಿಂದಗಿ ಬಗ್ಯಾಗಿ ಬರತಕ್ಕ 231—11—0 ರೂಪಾಯಿ ಸ್ವಾಲವನ್ನು ವಸೂಲ್ ಮಾಡುವದಕ್ಕೆ ಸರ್ನ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕ್ರಿಷ್ಣರಾಯರ ಅರ್ಜಿಯನ್ನು 1896ನೇ ಇಸವಿ ನವೆಂಬರ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಾಬಾಯಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಶಿವಮೊಗ್ಗಾ ಮೊಕ್ಕಾಂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ಅಕ್ಟೋಬರ ತಿಂಗಳ 19ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮದಸ್ತಖತ್ತಿನೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟು ಜಡ್ಜಿ.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟಾಫಿಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಪ್ಸೀಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುಂಥಾ ಕೂಪನ್ನುಗಳಿಗೆ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ಮೊಬಲಗು ತೆಗದುಕೊಂಡು ರಶೀತಿ ಕೊಡುವ ಬಗ್ಯಾಗಿ ಅಪ್ಪಣೆ ಯಿರುವದ್ದರಿಂದ ಇನ್ನು ಮೇಲೆ ಮೈಸೂರ್ ಶೀಮೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್ಡರ್ ಹೊರ್ತಾಗಿ ಅನ್ಯಥಾ ಆ ಬಗ್ಯಾಗಿ ಈ ಆಫಿಸಿಗೆ ಕಳುಹಿಸಲ್ಪಡುವ ಯಾವ ಮನಿಆರ್ಡರುಗಲಿ ಈ ಆಫಿಸಿನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಶಕ್ಕೂ ನಿಗೆ ಕೊಡಲ್ಪಡಲಾರದು.

ಸಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪೈಲರ್.

ಮೈಸೂರ ಗೆಜೆಟ್.

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 29, 1896.

೪ನೇ ಭಾಗ.

ಸರ್ಕಾರಿ ಕಾಗದ ಪತ್ರಗಳು.

1896ನೇ ಇಸವಿ ಅಕ್ಟೋಬರ್ ತಾರೀಖು 19ನೇ ಸೋಮವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

ಶ್ರೀಮನ್ಮಹಾರಾಣೀ ರೀಜಂಟರವರ ಆಜ್ಞಾನುಸಾರವಾಗಿ 1895—96ನೇ ವರುಷದ ಬಾಬತು ಈ ಸಂಸ್ಥಾನದ ಜಮಾಖರ್ಚನ್ನು ಬಾಬುವಾರಾಗಿ ಮುಂದೆ ಬರುವ ತಖ್ತೆಯಲ್ಲಿ ನಮೂದಿಸಿರುತ್ತೆ :—

ಜಮಾ.

ಬಾಬುಗಳು.	ನಿಶ್ಚಿತ 1894—95.	ಶೋಧನೀಯ 1895—96.	ಮೊಕಾಬಿಲಾ.
	ರೂ.	ರೂ.	ರೂ.
ಲ್ಯಾಂಡ್ ರೆವಿನ್ಯು ಯಾನೆ ಜಮೀನ್ ಬಾಬು	95,75,557	97,68,358	+1,92,801
ಸ್ಟ್ಯಾಂಪು	7,10,533	7,64,163	+53,630
ಅಬ್ಕಾರಿ ... ಷರಾಬು	17,90,740	18,94,661	+1,03,921
ಸೇಂದಿ	13,50,104	14,33,254	+83,150
ಇತರ ಬಾಬುಗಳು	52,263	63,034	+10,771
ಸಾಯರ್	4,41,852	4,29,178	−12,674
ಮೊಹತರ್ಫಾ	2,64,533	2,66,504	+1,971
ಫಾರೆಸ್ಟ್ .. ಸಂದಲ್	8,57,746	8,01,043	−56,703
ಚಾಬೀನೆ	2,04,571	1,76,766	−27,805
ಚಿಲ್ಲರೆ ಫಾರೆಸ್ಟ್ ಉತ್ಪತ್ತಿ	2,79,103	2,84,085	+4,982
ಆನೆಗಳ ಪುರೋಖ್ತು	40,096	30,329	−9,767
ಭಂಗಾರದ ಗಣಿಗಳು	7,34,527	7,74,885	+40,358
ರೆಜಿಸ್ಟ್ರೇಷನ್	96,180	1,03,719	+7,539
ಅಮೃತಮಹಲ್	19,334	26,813	+7,479
ಗವರ್ನಮೆಂಟ್ ಪ್ರೋನೋಟ್ ಲೆಖ್ಖ	4,28,059	3,33,004	−95,055
ಮದರಾಸ್ ಬ್ಯಾಂಕಿನಲ್ಲಿ ಇಟ್ಟಿರುವ ಡಿಪಾಜಿಟ್ ಮೊಬಲಗಿನ ಬಡ್ಡಿ ..	1,03,249	91,005	−12,244
ಸರ್ಕಾರದಿಂದ ಕೊಟ್ಟ ಸಾಲದ ಮೇಲಿನ ಬಡ್ಡಿ, ಕಂದಾಯದ ಬಾಕೀ ಮೇಲಿನ ಬಡ್ಡಿ ದೇಖೀಲ್	38,785	34,238	−4,547
ಲಾ ಅಂಡ್ ಜಸ್ಟಿಸ್ .. ಕೋರ್ಟುಗಳು	58,192	56,203	−1,989
ಜೈಲುಗಳು	23,259	21,186	−2,073
ವಿದ್ಯಾಭ್ಯಾಸದ ಇಲಾಖೆ	87,835	91,968	+4,133
ಇತರ ಇಲಾಖೆಗಳು	19,345	37,991	+18,646
ಪಬ್ಲಿಕ ವರ್ಕ್ಸ್ ಯಾನೆ ಮರಹಮ್ಮತ್ ಇಲಾಖೆ	32,848	23,138	−9,710
ಖರ್ಜಜಮೆಗೆತಂದ ಹಿಂದಿನ ಸಾಲ್‌ಗಳ ಏಕರೇಜ್ ಕಂಟ್ರಿಬ್ಯೂಷನ್ ವಸೂಲಿ ..	1,47,296	..	−1,47,296
ಇತರ ಬಾಬುಗಳು	1,21,129	1,39,905	+18,776
ಜುಮ್ಲಾ......	174,77,136	176,45,430	+1,68,294
ಸಂಸ್ಥಾನದ ರೈಲ್ವೆಗಳು ... ಹುಟ್ಟುವಳಿ ಲೆಖ್ಖ	5,31,452	6,20,674	+89,222
ಹಿಂದಿನ ಸಾಲುಗಳ ಲೆಖ್ಖ ಸಮಜಾಯಿಷಿ..	42,902	..	−42,902
ಜುಮ್ಲಾ....	5,74,354	6,20,674	+46,320
ರೈಲ್ವೆಗಳು ಸೇರಿ ಒಟ್ಟು ಜುಮ್ಲಾ.....	180,51,490	182,66,104	+2,14,614

ಖರ್ಚು.

ಖರ್ಚಿನ ಬಾಬುವಾರು.	ನಿಶ್ಚಿತ 1894—95.	ಶೋಧನೀಯ 1895—96.	ಮೊಕಾಬಿಲಾ.
	ರೂ.	ರೂ.	ರೂ.
ಸಬ್‌ಸಿಡಿ ಯಾನೆ ಪಗದಿ	24,50,000	24,50,000	..
ಸಿವಿಲ್ ಲಿಸ್ಟ್ ಯಾನೆ ಅರಮನೆ ಇಲಾಖೇ ಖರ್ಚು	14,00,000	14,00,000	..
ರಾಜವಂಶ್ಯರಿಗೆ ಪೆನ್ಷನ್‌ಗಳು	..	80,000	+80,000
ಪೊಲಿಟಿಕಲ್ ಪೆನ್ಷನ್‌ಗಳು, ಜಹಗೀರಿಗೆ ಬದಲಾಗಿ ಕೊಡುವ ಅಲೋವೆನ್ಸ್‌ಗಳು ದೇಖೀಲ್	1,10,510	1,08,761	—1,749
ರೀಫಂಡ್ಸ್ ವ ಡ್ರಾಬ್ಯಾಕ್ಸ್ ಯಾನೆ ವಾಪಸು ಖರ್ಚು	2,21,304	2,64,202	+42,898
ಲ್ಯಾಂಡ್ ರವಿನ್ಯೂ ಸಿಬ್ಬಂದಿಗಳ ಖರ್ಚು	7,88,146	8,08,810	+20,664
ಗ್ರಾಮನೌಕರರ ವೇತನ	5,90,030	6,70,492	+80,462
ಸ್ಟಾಂಪು	32,793	41,346	+8,553
ಆಬ್‌ಕಾರಿ	1,72,354	1,79,790	+7,436
ಸಾಯರ್	13,174	13,778	+604
ಫಾರೆಸ್ಟ್, ಆನೇ ಖಂಗಡಿ ಬಾಬು ಸಹ	4,65,355	5,16,450	+51,095
ಭಂಗಾರದ ಗಣಿ	6,873	7,950	+1,077
ರೆಜಿಸ್ಟ್ರೇಷನ್	49,615	48,940	—675
ಅಮೃತಮಹಲ್	27,735	28,368	+633
ಬಡ್ಡಿ ಬಾಬತು	2,21,611	2,25,225	+3,614
ಜನರಲ್ ಅಡ್ಮಿನಿಸ್ಟ್ರೇಷನ್ ಯಾನೆ ಹುಜೂರು ಇಲಾಖೆ ಖರ್ಚು	3,20,992	4,00,506	+79,514
ಲಾ ಅಂಡ್ ಜಸ್ಟಿಸ್ — ಕೋರ್ಟುಗಳು	7,95,714	8,22,903	+27,189
ಲಾ ಅಂಡ್ ಜಸ್ಟಿಸ್ — ಜೈಲುಗಳು	79,838	76,523	—3,315
ಪೊಲೀಸ್	7,61,924	7,85,833	+23,909
ವಿದ್ಯಾಭ್ಯಾಸದ ಇಲಾಖೆ	4,84,170	5,00,632	+16,462
ಮುಜರಾಯಿ	3,38,616	3,26,695	—11,921
ಮೆಡಿಕಲ್ ಯಾನೆ ವೈದ್ಯಶಾಲೆಗಳ ಇಲಾಖೆ	2,55,296	3,11,588	+56,292
ಗವರ್ನ್‌ಮೆಂಟ್ ಬಂಗ್ಲೆಗಳು	1,31,347	59,152	—72,195
ಸೈಯಂಟಿಫಿಕ್ ಮತ್ತು ಚಿಲ್ಲರೆ ಇಲಾಖೆಗಳು	1,74,752	1,85,794	+11,042
ಸೂಪರಾನ್ಯುಯೇಷನ್ ಪೆನ್ಷನ್‌ಗಳು, ಗ್ರಾಟ್ಯೂಟಿಗಳು ವಗೈರೆ	2,78,276	2,62,420	—15,856
ಸಾದಿಲ್‌ವಾರ್ ಮತ್ತು ಛಾಪಾಖಾನೆ	1,59,232	2,06,159	+46,927
ಇಂಡ್ಯ ಗವರ್ನ್‌ಮೆಂಟ್ ಪ್ರೋನೋಟ್‌ಗಳನ್ನು ಖರೀದಿಗೆ ತೆಗೆಯುವಲ್ಲಿ ಕೊಟ್ಟ ನಫಾ ವಗೈರೆ	1,44,583	1,12,710	—31,873
ಇತರ ಬಾಬುಗಳು	4,32,862	2,89,401	—1,43,461
ಫ್ಯಾಮಿನ್ ರಿಲೀಫ್ ಯಾನೆ ಕ್ಷಾಮನಿವಾರಣೆ ಖರ್ಚು	89,638	6,291	—83,347
ಪಬ್ಲಿಕ್ ವರ್ಕ್ಸ್ ಯಾನೆ ಮರಹಮ್ಮತ್ ಮತ್ತು ಸ್ಪೆಷಿಯಲ್ ಸ್ಯಾನಿಟರಿ ಕಾಮಗಾರಿಗಳು	29,37,474	32,12,481	+2,75,007
ಫೌಜು	9,77,652	9,81,470	+3,818
ಜುಮ್ಲಾ......	149,11,866	153,84,670	+4,72,804
ಸಂಸ್ಥಾನದ ರೈಲ್ವೆಗಳು — ಮೈಸೂರು-ಹರಿಹರದ ಲೈನಿಗೆ ಖರ್ಚಾದ ಮೊಬಲಗಿಗೆ ಬಡ್ಡಿ	8,74,013	7,53,871	—1,20,142
ಸಂಸ್ಥಾನದ ರೈಲ್ವೆಗಳು — ಇತರ ರೈಲ್ವೆಗಳ ಮೂಲಧನದ ಲೆಖ್ಖದ ಬಾಬತು	1,52,763	1,17,311	—35,452
ಸಂಸ್ಥಾನದ ರೈಲ್ವೆಗಳು — 1886ನೇ ಸಾಲಿಗೆ ಹಿಂದಣ ಲೆಖ್ಖಾಚಾರ ಸಮಜಾಯಿಷಿ.	27,301	..	—27,301
ಸಂಸ್ಥಾನದ ರೈಲ್ವೆಗಳು — ರೈಲ್ವೆ ಸಾಲವನ್ನು ತೀರಿಸುವ ಫಂಡಿಗೆ ಪಾವತಿ	4,00,000	..	—4,00,000
ಜುಮ್ಲಾ......	14,54,077	8,71,182	—5,82,895
ಸ್ಟೇಟ್ ರೈಲ್ವೆಗಳು ಸೇರಿ ಒಟ್ಟು ಜುಮ್ಲಾ	163,65,943	162,55,852	—1,10,091

ಮೇಲ್ಕಂಡ ತಖ್ತೆಗಳನ್ನು ವಿಶದಗೊಳಿಸುವ ಸಂಗತಿಗಳನ್ನು ಹೇಳುವುದಕ್ಕೆ ಪೂರ್ವಭಾವಿಯಾಗಿ ತಿಳಿಸಬೇಕಾದ ವಿಷಯ ಬಂದಿದೆ. 1895—96ನೇ ಸಾಲಿನ ಲೆಖ್ಖ ಮುಂದೆ ವಿವರಿಸುವ ಕಾರಣಗಳಿಂದ ಇನ್ನೂ ಪೂರೈಸದೆ ಇರುವದ್ದರಿಂದ ಆ ಸಾಲಿಗೆ ತಖ್ತೆಗಳಲ್ಲಿ ಕೊಟ್ಟಿರುವ ಸಂಖ್ಯೆಗಳು ಸಮಿಾಪಸ್ಥ ಸಂಖ್ಯೆಗಳೇ ಹೊರತು ನಿಶ್ಚಿತ ಸಂಖ್ಯೆಗಳೆಂದು ತಿಳಿಯಕೂಡದು. ಖಿಸ್ತು ಬಂದಿ ಬಡಾವಣೆ ದೆಸೆಯಿಂದ ಈಗ್ಗೆ ಮೂರುವರುಷಗಳ ಕೆಳಗೆ ಸರ್ಕಾರಿ ಸಾಲು ಮಾರ್ಚಿತಿಂಗಳು 31ನೇ ತಾರೀಖಿನ ಬದಲಾಗಿ ಮೂರು ತಿಂಗಳು ಮುಂದಕ್ಕೆ ಅಂದರೆ ಜೂನ್ 30ರಲ್ಲಿ ಅಂತ್ಯವಾಗುವಂತೆ ಏರ್ಪಾಡು ಮಾಡಿಕೊಳ್ಳಬೇಕಾಗಿ ಬಂದದ್ದು ನಿಮಗೆ ತಿಳಿದೇ ಇದೆಯಷ್ಟೆ. ಇದರಿಂದ ಸರ್ಕಾರಿ ಸಾಲು ಆಖೈರಿಗೂ ದಸರಾಹಬ್ಬಕ್ಕೂ ಮಧ್ಯದಲ್ಲಿ ಮೊದಲಿದ್ದಂತೆ ಆರುತಿಂಗಳಿಗೆ ಬದಲಾಗಿ ಮೂರು ತಿಂಗಳು ಮಾತ್ರ ನಿಲ್ಲುತ್ತೆ. ಇಷ್ಟು ಸ್ವಲ್ಪಕಾಲದಲ್ಲಿ ಡಿಸ್ಟ್ರಿಕ್ಟ ಮತ್ತು ಡಿಪಾರ್ಟಮೆಂಟಲ್ ಆಫೀಸರುಗಳಿಂದ ಬೇಕಾದ ಸಮಜಾಯಿಷಿಗಳನ್ನು ತರಿಸಿಕೊಂಡು ಚರ್ಚೆಗೆ ಆಸ್ಪದವಿಲ್ಲದಂತೆ ಕ್ರಮವಾಗಿ ಲೆಖ್ಖವನ್ನು ಪೂರೈಸುವದಕ್ಕೆ ಶುದ್ಧಾಂಗವಾಗಿ ಅವಕಾಶಸಾಲದೆಂದು ಕಂಡುಬಂದಿದೆ. ಈಗ ಮೂರು ಸಾಲುಗಳಿಂದ ಆಯಾ ಸಾಲಿನ ಲೆಖ್ಖವನ್ನು ದಸರಾಹಬ್ಬಕ್ಕೆ ಮುಂಚೆ ಪೂರೈಸುವಂತೆ ಮಾಡಿದ ಪ್ರಯತ್ನವು ಅಕೌಂಟು ಇಲಾಖೆಯವರಿಗೆ ಅತ್ಯಂತ ಶ್ರಮಕಾರಿಯಾಗಿ ಪರಿಣಮಿಸಿತು. ಇದು ಅನೇಕ ವಿಧದಲ್ಲಿ ಅನಪೇಕ್ಷಿತವಾಗಿ ತೋರಿದ್ದರಿಂದ ಪ್ರಜಾಪ್ರತಿನಿಧಿಗಳ ವಾರ್ಷಿಕ ಸಭೆಯ ಉದ್ದಿಶ್ಯ ಕಳೆದ ಸಾಲಿನ ಅಂದಾಜ ಸಂಖೆಗಳನ್ನು ಇಟ್ಟುಕೊಳ್ಳಬೇಕಾಗಿದೆ ; ಅದಕ್ಕೆ ಹಿಂದಿನಸಾಲಿನ ಸಂಖ್ಯೆಗಳು ನಿಶ್ಚಿತವಾಗಿ ದೊರೆಯುತ್ತವೆ.

ಲ್ಯಾಂಡ್ ರೆವಿನ್ಯೂ—ಜಮಾ ಬಾಬುಗಳನ್ನುನೋಡಲಾಗಿ ಗಮನಕೊಡತಕ್ಕ ಮೊದಲನೇಬಾಬು ಲ್ಯಾಂಡ್ ರೆವಿನ್ಯೂ ಯಾನೆ ಜಮಿಾನು ಕಂದಾಯದ ಬಾಬಾಗಿದೆ. ವಸೂಲಾಗಿ ಜಮಾ ಬಂದ ಮೊಬಲಗಿನಲ್ಲಿ 1,92,801 ರೂ. ವೃದ್ಧಿಯಾಗಿದೆ. ಈ ಜಾಸ್ತಿ ಹುಟ್ಟುವಳಿಗೆ ಸಾಗುವಳಿ ಹೆಚ್ಚಿದ್ದೇ ಮುಖ್ಯಕಾರಣವಾಗಿದೆ. ಒಟ್ಟು 1,02,000 ರೂಪಾಯಿ ಆಕಾರಉಳ್ಳ 94,000 ಎಕರೆ ಬಂಜರುಜಮಿಾನು ಈ ಸಾಲಿನಲ್ಲಿ ಸಾಗುವಳಿಗೆ ತೆಗೆದುಕೊಳ್ಳಲ್ಪಟ್ಟಿತು. ತುಮಕೂರು ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿ ಸಾಗುವಳಿಯು ವಿಶೇಷವಾಗಿ ಹೆಚ್ಚಿತು. ಹಿಡುವಳಿ ಹಕ್ಕಿನ ವಿಕ್ರಯ, ಉಪ್ಪಿನ ಮೋಳೆ ಮತ್ತು ಇತರ ಚಿಲ್ಲರೆ ಬಾಬು ಇವುಗಳಿಂದಲೂ ಸ್ವಲ್ಪಮಟ್ಟಿಗೆ ವಸೂಲಿಯು ವೃದ್ಧಿಯಾಯಿತು ; ಮತ್ತು ಸಾಲ್ ಆಖೈರಿನಲ್ಲಿ ವಸೂಲಾಗಬೇಕಾಗಿ ನಿಂತ ಬಾಕಿಯು ವಿಚಾರಣೀಯವಾಗಿರಲಿಲ್ಲ. 1894—95ನೇ ಸಾಲಿನ ಕೊನೆಯಲ್ಲಿ 5,05,000 ರೂಪಾಯಿ ಬಾಕಿ ನಿಂತಿತ್ತು. 1895—96ರಲ್ಲಿ 4,90,000 ರೂಪಾಯಿ ವಸೂಲಾಗದೆ ಉಳಿದಿತ್ತು.

ಈಚೆಗೆ ಕೆಲವು ವರುಷಗಳಿಂದ ನಿರಂತರವಾಗಿ ಜಮಿಾನುಬಾಬಿನ ಹುಟ್ಟುವಳಿಯು ಹೆಚ್ಚುತ್ತ ಬಂದಿರುವದರಿಂದ, ಮಲ್ನಾಡು ಅಡಕೆ ತೋಟಗಳಿಗೆ ದಾಖಲಾಗಿರುವ ತೆರಿಗೆಯನ್ನು ರೈತರಿಗೆ ನಿಜವಾಗಿ ಸಾಹಾಯ್ಯವಾಗುವಂತೆ ತಗ್ಗಿಸುವದಕ್ಕೆ ಗೌರ್ನಮೆಂಟಿನವರಿಗೆ ನಿರ್ಣೀತವಾದ ಏರ್ಪಾಡುಗಳನ್ನು ಈಗ ಜಾರಿಯಲ್ಲಿ ತರಲು ಅನುಕೂಲವಾಯಿತು. ಈ ವಿಷಯವು ಕಳೆದಸಾಲುಗಳ ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚಿಸಲ್ಪಟ್ಟಿತ್ತು ಮತ್ತು ಅನೇಕ ವರ್ಷಗಳಿಂದ ವಿಚಾರಣೆಯಲ್ಲಿತ್ತು. ಈ ತೆರಿಗೆಯನ್ನು ತಗ್ಗಿಸುವ ವಿಷಯದಲ್ಲಿ ಆಗಿಂದಾಗ್ಗೆ ಕೊಡಲ್ಪಟ್ಟ ವಿರುದ್ಧಾಭಿಪ್ರಾಯಗಳನ್ನೆಲ್ಲ ಪ್ರಕೃತ ಚರ್ಚಿಸಲು ಅನವಶ್ಯಕ. ಆಯಾ ವರುಷದ ಉತ್ಪತ್ತಿಯ ಮೇಲೆ ವಸೂಲಾಗುವ ಸಾಯರ್ ಹಾಸಲನ್ನು ವಜಾಮಾಡುವದಕ್ಕೆ ಬದಲಾಗಿ ಕ್ಲುಪ್ತಪಡಿಸಿರುವ ಮತ್ತು ದುರ್ವಹವೆಂದು ಕಾಣುವ ಜಮಿಾನು ಕಂದಾಯವನ್ನು ಕಡಮೆಮಾಡುವದು ಉತ್ತಮವೆಂದು ಸಾಮಾನ್ಯವಾಗಿ ತೋಟದ ಹಿಡುವಳಿದಾರರೆಲ್ಲರೂ ಅಭಿಪ್ರಾಯಪಡುತ್ತಾರೆಂದು ವ್ಯಕ್ತವಾಗಿದೆ ; ಮತ್ತು ಮರ ತೆರಿಗೆ ಏರ್ಪಾಡಿಗೆ ಹಿಡುವಳಿದಾರರು ಒಪ್ಪಿದರೆ, ಮಿತವಾಗಿರುವ ಸಾಧಾರಣ ತರಿ ದರಗಳಂತೆ ಜಮಿಾನುಕಂದಾಯ ದಾಖಲಾಗಿ ಸಾಯರು ಸಂಪೂರ್ಣವಾಗಿ ವಜಾಆಗುವ ಅನುಕೂಲಗಳಿದ್ದರೂ ಅದು ಅವರಿಗೆ ಇಷ್ಟವಿಲ್ಲವೆಂದು ಸ್ಪಷ್ಟವಾಗಿದೆ. ಈಸಂದರ್ಭದಲ್ಲಿ ಜಮಿಾನು ತೆರಿಗೆಯನ್ನು ಕಡಮೆಮಾಡುವದು ಉತ್ತಮವೆಂದು ಎಣಿಸಿ ತೀರ್ಥಹಳ್ಳಿತಾಲ್ಲೂಕಿನಲ್ಲಿ ಅತ್ಯಂತಮಿತವಾಗಿಯೂ ಎಲ್ಲಾಭಾಗದಲ್ಲಿಯೂ ನ್ಯಾಯವಾಗಿ ಸರ್ವಸಮ್ಮತಿಯಾಗಿ ಜಾರಿಯಲ್ಲಿರುವ ದರಗಳನ್ನೇ, ಮುಖ್ಯವಾಗಿ ಅಡಿಕೆ ಉತ್ಪತ್ತಿಯಾಗುವ ಸೊರಬ, ಸಾಗರ, ನಗರ ಮತ್ತು ಕೊಪ್ಪ, ಈ ನಾಲ್ಕು ತಾಲ್ಲೂಕುಗಳಲ್ಲಿಯೂ ಜಾರಿಗೆ ತರತಕ್ಕದ್ದೆಂದು ಗೌರ್ನಮೆಂಟಿನಿಂದ ತೀರ್ಮಾನವಾಗಿದೆ. ಈ ತೀರ್ಮಾನವನ್ನು ಅನುಸರಿಸಿ ತೀರ್ಥಹಳ್ಳಿತಾಲ್ಲೂಕಿನಲ್ಲಿ ಒಟ್ಟು ಎಕರೆ ಉತ್ಪತ್ತಿಗೂ ಮತ್ತು ಎಕರೆ ಆಕಾರಕ್ಕೂ ಇರುವ ಪ್ರಮಾಣದಂತೆ ಮೇಲೆಹೇಳಿದ ನಾಲ್ಕು ತಾಲ್ಲೂಕುಗಳಲ್ಲಿ ಅಡಿಕೆತೋಟಗಳಿಗೆ ದಾಖಲಾಗಿರುವ ಜಮಿಾನು ತೆರಿಗೆ ದ... ಬದಲಾಯಿಸುವಂತೆ ರೆವೆನ್ಯೂ ಸರ್ವೆ ಸೂಪರಿಂಟೆಂಡೆಂಟರಿಗೆ ಬರಸಿದೆ. ಈ ಕೆಲಸವನ್ನು ಮುಂಬ...ರು... ಸಮಗಾಲದಲ್ಲಿ

ಪ್ರಾರಂಭಿಸಿ ಕ್ಷಿಪ್ರದಲ್ಲಿಯೇ ಪೂರೈಸುವ ತರದೂದು ನಡೆಸುತ್ತೆ. ಈ ಏರ್ಪಾಡಿನಿಂದ ಈಗಿನ ಲ್ಯಾಂಡ್ ರೆವಿನ್ಯೂ ಹುಟ್ಟುವಳಿಯು ಮುಂದೆ ಸ್ವಲ್ಪಕಡಮೆಯಾಗುತ್ತೆ; ಆದರೆ ಸರ್ಕಾರದವರ ದಯಾಲೋಚನೆಗೆ ಮುಖ್ಯವಾಗಿ ಅರ್ಹರಾದ ಬಾಗಾಯಿತು ಹಿಡುವಳಿದಾರ್ರಿಗೆ ಇದು ವಾಸ್ತವವಾದ ಉಪಕಾರವಾಗಿರುತ್ತೆ; ಈರೀತಿ ಉದ್ದೇಶಿಸಿರುವ ಸಹಾಯವು ಈಗಿನ ಅಡಿಕೆತೋಟದ ಕಂದಾಯದಲ್ಲಿ ಪೂರಾ ಸೇಕಡ 22ರಂತೆ ಆಗುತ್ತೆ.

ಸ್ಟಾಂಪುಗಳು.—ಜನರಲ್ ಮತ್ತು ಕೋರ್ಟುಫೀ ಸ್ಟಾಂಪುಗಳ ಹುಟ್ಟುವಳಿಯು ಸ್ವಲ್ಪ ವೃದ್ಧಿಯಾಗಿದೆ, ಈ ವೃದ್ಧಿಯು ಸಂಸ್ಥಾನದ ಎಲ್ಲಾಕಡೆಯಲ್ಲಿಯೂ ಸಮವಾಗಿ ಹಂಚಿಕೆಯಾಗಿದೆ. ಈರೀತಿ ಹೆಚ್ಚು ಹುಟ್ಟುವಳಿ ಆದದ್ದು 53,630 ರೂಪಾಯಿ.

ಆಬ್ಕಾರಿ.—ಆಬ್ಕಾರಿ ಬಾಬಿನಲ್ಲಿ ಹೆಚ್ಚುಹುಟ್ಟುವಳಿಯಾಗಿರುವ 1,97,842 ರೂಪಾಯಿನಲ್ಲಿ ಷರಾಬಿನಿಂದ 1,03,921 ರೂಪಾಯಿ, ಸೇಂದಿಯಿಂದ 83,150 ರೂಪಾಯಿ, ಮತ್ತು ಇತರ ಬಾಬುಗಳಿಂದ 10,771 ರೂಪಾಯಿ ಸೇರಿವೆ. ಸೇಂದಿಬಾಬಿನಲ್ಲಿ ಆದ ಹೆಚ್ಚುಹುಟ್ಟುವಳಿಯ ಪೈಕಿ ಹಿಂದಿನಸಾಲ್ ಬಾಕಿ ವಸೂಲಾದ 40,000 ರೂಪಾಯಿ ಜಾತಾ ನಿಂತ 43,000 ರೂಪಾಯಿ 1895—96ನೇ ಸಾಲಿನಲ್ಲಿ ಸೇಂದಿಫಿರಕಾಗಳ ಹರಾಜಿನಲ್ಲಿ ಪೋಟಾಪೋಟಿಯಿಂದ ಅಧಿಕವಾದ ಐನ್ ಉತ್ಪತ್ತಿಯಾಗಿದೆ. ಷರಾಬಿನಿಂದ ಹುಟ್ಟುವಳಿಯಾದ ಹೆಚ್ಚುವೊಬಲಗಿನಲ್ಲಿ ದುಕಾನು ಮತ್ತು ಫಿರ್ಕೆಗಳ ಹರಾಜಿನಿಂದ ಹೆಚ್ಚು ಗುತ್ತೆಗೆ 33,000 ರೂಪಾಯಿಯೂ ಮತ್ತು ಬಿಕರಿ ಜಾಸ್ತಿಯಾದ್ದರಿಂದ ಡ್ಯೂಟಿಮೂಲಕ ವಸೂಲಾದ 71,000 ರೂಪಾಯಿಯೂ ಸೇರಿವೆ.

ಷರಾಬು ಖರ್ಚು 426,573 ಗ್ಯಾಲನ್ನಿಂದ 443,486 ಗ್ಯಾಲನ್ಗೆ ಹೆಚ್ಚಿತು. ಅಂದರೆ 16,913 ಗ್ಯಾಲನ್ ಹೆಚ್ಚುಬಿಕರಿ ಆಯಿತು. ಈ ವೃದ್ಧಿಯು ಹಿಂದಣಸಾಲಿನ ವೃದ್ಧಿಯಲ್ಲಿ ಅರ್ಧಭಾಗವಾಗಿರುತ್ತೆ. ಹೆಚ್ಚುಬಿಕರಿಯು ಎಲ್ಲಾ ಸ್ಥಳಗಳಲ್ಲಿಯೂ ಏಕರೀತಿಯಾಗಿಲ್ಲ. ಭಾರಿ ಕಾರಖಾನೆಗಳಿರುವ ಬೆಂಗಳೂರು ಸಿಟಿ ಮತ್ತು ಕೋಲಾರದ ಭಂಗಾರದ ಗಣಿಯಲ್ಲಿ ದುಕಾನುಗಳ ಸಂಖ್ಯೆಯು ಹಿಂದಿನ ಸಾಲಿನಲ್ಲಿದ್ದಷ್ಟೇ ಇತ್ತು; ಆದರೆ ಈ ಎರಡುಪ್ರದೇಶಗಳಲ್ಲಿ ಒಟ್ಟು ಸಂಸ್ಥಾನದ ಹೆಚ್ಚು ಬಿಕರಿಯಲ್ಲಿ ಮೂರರಲ್ಲಿ ಒಂದು ಭಾಗದಂತೆ ಪ್ರತಿಯೊಂದರಲ್ಲಿಯೂ ಜಾಸ್ತಿ ಬಿಕರಿಯಾಯಿತು. ಗತ ಎರಡು ಸಾಲುಗಳ ವೃದ್ಧಿಯನ್ನು ಹೋಲಿಸಿ ನೋಡಲಾಗಿ ಕಾಫಿ ತಾಲ್ಲೂಕುಗಳಲ್ಲಿ ಸೇಕಡ 13·49ರಿಂದ 2·07ಕ್ಕೂ, ಬೆಂಗಳೂರು ಸಿಟಿ ಮತ್ತು ತಾಲ್ಲೂಕು, ಕೋಲಾರದ ಭಂಗಾರದ ಗಣಿ ಮತ್ತು ಮೈಸೂರು ಸಿಟಿ ಈ ಪ್ರಾಂತ್ಯಗಳಲ್ಲಿ ಸೇಕಡ 10·82ರಿಂದ 6·9ಕ್ಕೂ ಮತ್ತು ಸಂಸ್ಥಾನದ ಇತರ ಭಾಗಗಳಲ್ಲಿ ಸೇಕಡ 5·61ರಿಂದ 2ಕ್ಕೂ ಹೆಚ್ಚು ಬಿಕರಿಯಲ್ಲಿ ಕಡಮೆ ಕಂಡುಬಂದಿದೆ. 1894—95ನೇ ಸಾಲಿನ ಹೆಚ್ಚು ಬಿಕರಿಗಿಂತ 1895—96ನೇ ಸಾಲಿನ ಹೆಚ್ಚು ಬಿಕರಿಯು ಕಡಮೆಯಾದರೂ ಅದು ಗಣನೀಯವಾದ್ದಾಗಿಯೇ ಇದೆ; ಮಳೆ ಬೆಳೆಯು ಚೆನ್ನಾಗಿ ನಡೆಯುತ್ತಿರುವವರಿಗೂ ಮತ್ತು ಹೆಚ್ಚಾಗಿ ಕೂಲಿ ದೊರೆಯುತ್ತಿರುವವರಿಗೂ ಬಿಕರಿಯನ್ನು ಅಡ್ಡಿಮಾಡುವುದಕ್ಕೆ ತಕ್ಕ ಉಪಾಯವಿಲ್ಲವೆಂದು ಕಾಣುತ್ತೆ. ಕಳ್ಳತನದಿಂದ ಷರಾಬು ಇಳಿಸುತ್ತಾರೆಂದು ವ್ಯಕ್ತಪಟ್ಟ ಸ್ಥಳಗಳಲ್ಲಿ ಹೊರತು ಅನ್ಯತ್ರ ದುಕಾನುಗಳನ್ನು ಹೆಚ್ಚಿಸುವುದು ಹಾಲಿ ಜಾರೀಲಿರುವ ಏರ್ಪಾಡಿಗೆ ಅಸಮ್ಮತವೆನ್ನುವುದೂ ಮತ್ತು ಪಾನೀಕರಿಗೆ ಕೇವಲ ತೊಂದರೆ ಇಲ್ಲದಂತೆ ಎಷ್ಟರಮಟ್ಟಿಗೆ ಹೆಚ್ಚುಬೆಲೆ ತೆಗೆದುಕೊಳ್ಳಬಹುದೋ ಆಮಟ್ಟಿನ ಕ್ರಯಕ್ಕೆ ಷರಾಬು ಬಿಕರಿ ಮಾಡಲ್ಪಡುತ್ತೆನ್ನುವುದು ಸಹ ನಿಮಗೆ ತಿಳಿದಿದೆಯಷ್ಟೆ. ಬಿಕರಿ ಕ್ರಯವು ಡ್ರಾಮ್ 1ಕ್ಕೆ 1 ಆಣೆ 8 ಪೈಯಷ್ಟು ಅಂದರೆ 20 ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ ಒಂದಕ್ಕೆ ರೂ. 5—5—0ಯಷ್ಟು ಈಗಲೇ ಇದೆ. ಒಳದೇಶದಲ್ಲಿ ತಯಾರಾಗುವ ಷರಾಬು 20 ಡಿಗ್ರಿ ಅಂಡರ್‌ಪ್ರೂಫ್ ಗ್ಯಾಲನ್ನಿಗೆ ಈಗಲೇ ಇರುವ 4 ರೂಪಾಯಿ ಡ್ಯೂಟಿಯನ್ನು $4\frac{3}{4}$ ರೂಪಾಯಿಗೆ ಹೆಚ್ಚಿಸಿ ತನ್ಮೂಲಕ ಪಾನೀಕರಿಗೆ ಗ್ಯಾಲನ್ ಒಂದಕ್ಕೆ ರೂ. 5-5-0 ಇಂದ ರೂ. 6-6-0ಗೆ ಕ್ರಯವನ್ನು ಹೆಚ್ಚಿಸುವ ವಿಷಯವು ಈಗ ಗೌರ್ನಮೆಂಟಿನವರ ಆಲೋಚನೆಯಲ್ಲಿದೆ. ಡ್ಯೂಟಿಯನ್ನು $4\frac{3}{4}$ ರೂಪಾಯಿಗೆ ಹೆಚ್ಚಿಸಿದರೆ ಅದು 1894ನೇ ಇಸವಿ 8ನೇ ನಂಬರು ಇಂಡಿಯನ್ ಟಾರಿಫ್ ಆಕ್ಟುಪ್ರಕಾರ ಅನ್ಯದೇಶದಿಂದ ಬರುವ 20 ಡಿಗ್ರಿ ಅಂಡರ್‌ಪ್ರೂಫ್ ಷರಾಬಿಗೆ ಗ್ಯಾಲನ್ ಒಂದಕ್ಕೆ ವಸೂಲಾಗುವ ಬ್ರಿಟಿಷ್ ಕಸ್ಟಂಸ್ ಡ್ಯೂಟಿಗೆ ಸ್ವಲ್ಪ ಹೆಚ್ಚು ಕಡಮೆಯಾಗಿ ಸರಿಯಾಗುತ್ತೆ. ಈ ವಿಷಯವನ್ನು [illegible]ನಿಸುವ ಭಾಗದಲ್ಲಿ ಇಷ್ಟು ಅಧಿಕವಾದ ಬೆಲೆ ಅಂದರೆ ಗ್ಯಾಲನ್ 1ಕ್ಕೆ 6 ರೂ. 6 ಆ. ಅಂದರೆ ಡ್ರಾ[illegible] 1ಕ್ಕೆ 2 ಆಣೆಯಂತೆ ಕ್ರಯ ನಿಷ್ಕರ್ಷೆ ಮಾಡುವುದು ಸಾಮಾನ್ಯವಾಗಿ ಕೂಲಿಯಿಂದ

ಜೀವಿಸುವ ಪಾನಿಕರಿಗೆ ಎಷ್ಟರಮಟ್ಟಿಗೆ ವಿಶೇಷವಾದ ತೊಂದರೆಯನ್ನುಂಟುಮಾಡೀತು, ಅಥವ ಕಳ್ಳತನದಿಂದ ಷರಾಬನ್ನು ಹೊರಗಿನಿಂದ ತರುವುದಕ್ಕೆ ಯಾ ತಯಾರ್ಮಾಡುವುದಕ್ಕೆ ಎಷ್ಟರಮಟ್ಟಿಗೆ ಪ್ರತ್ಯಾಶೆಯನ್ನುಂಟು ಮಾಡೀತು ಎನ್ನುವುದನ್ನು ಆಲೋಚಿಸತಕ್ಕದ್ದು ಅವಶ್ಯಕವಾಗಿದೆ.

ಸಾಯರು.—ಸಾಯರು ಹುಟ್ಟುವಳಿಯಲ್ಲಿ 12,674 ರೂಪಾಯಿ ಕಡಮೆಯಾಯಿತು. ಮುಖ್ಯವಾಗಿ ಅಡಿಕೆಯ ಧಾರಣೆಯು ಗತಸಾಲಿನಲ್ಲಿ ಬಹಳ ದಿನಗಳವರಿಗೆ ಕಮ್ಮಿಯಾಗಿದ್ದದ್ದರಿಂದ ಹೀಗೆ ಹುಟ್ಟುವಳಿ ಕಡಮೆ ಯಾಗುವದಕ್ಕೆ ಕಾರಣವಾಯಿತು.

ಫಾರೆಸ್ಟ್.—ಆನೆಬಂಗಡಿ ವಿನಾ ಇತರ ಫಾರೆಸ್ಟ್‌ಬಾಬಿನ ಹುಟ್ಟುವಳಿಯಲ್ಲಿ ಸಂದಲ್ ಮತ್ತು ಚೌಬೀನೆ ಬಿಕರಿ ಕಡಮೆಯಾದ್ದರಿಂದ 79,526 ರೂಪಾಯಿ ಕಡಮೆಯಾಯಿತು. ಸಂದಲಿಗೆ ಪುನಃ ಹೋದ ವರುಷದಲ್ಲಿಯೂ ಗಿರಾಕಿ ಕಡಮೆಯಾದಕಾರಣ ಒಂದು ಲಕ್ಷ ರೂಪಾಯಿಗಿಂತಲೂ ಅಧಿಕವಾದ ಬೆಲೆಯುಳ್ಳ 292 ಟನ್ ಸಂದಲನ್ನು ಬಿಕರಿಮಾಡದೆ ಅಮಾನತ್ತು ನಿಲ್ಲಿಸಬೇಕಾಯಿತು.

ಆನೆಬಂಗಡಿ.—ಆನೆ ಹಿಡಿಯುವ ಪ್ರಯತ್ನ ಎರಡಾವರ್ತಿ ನಡೆಸಿದ್ದರಲ್ಲಿ 32 ಆನೆಗಳು ಸಿಕ್ಕಿದವು. ಮೊದಲಾ ವರ್ತಿನಡೆದದ್ದನ್ನು ಇಂಡಿಯಾದೇಶದ ವೈಸರಾಯಿ ಮತ್ತು ಗೌರನರ್ ಜನರಲ್ ಘನವನ್ನು ಹೊಂದಿದ ಲಾರ್ಡ್ ಎಲ್ಗಿನ್ ರವರು ಪರಾಂಬರಿಸಿದರು. ಎರಡನೇ ಆವರ್ತಿ ನಡೆದಾಗ ಮದರಾಸ್ ಗವರನರ್ ಘನವನ್ನು ಹೊಂದಿದ ಲಾರ್ಡ್ ವೆನ್‌ಲಾಕ್‌ರವರು ದಯಮಾಡಿಸಿದ್ದರು. ಬಂಗಡಿ ಉತ್ಪತ್ತಿಯು 30,329 ರೂಪಾಯಿಗೆ ತಗ್ಗಿತು. ಮುಖ್ಯವಾಗಿ ಚಾಮರಾಜನಗರದಲ್ಲಿ ನಡೆದ ಬಂಗಡಿಕೆಲಸವು ಫಲಕಾರಿಯಾಗದೆ ಹೋದ್ದರಿಂದಲೂ ಕಾಕನಕೋಟೆಯಲ್ಲಿ ಸಿಕ್ಕಿದ ಹಿಂಡುಗಳು ಸಣ್ಣವಾದ್ದರಿಂದಲೂ ಈ ಮೇರೆ ಕಡಮೆಯಾಗುವದಕ್ಕೆ ಕಾರಣವಾಯಿತು. ವಿಶೇಷವಾಗಿ ಕಾಕನ ಕೋಟೆ ಬಂಗಡಿಗೆ ನಡೆಸಿದ ರಿಪೇರಿಯಿಂದಲೂ, ಪೈರಿನ ನಷ್ಟಕ್ಕಾಗಿ ಪರಿಹಾರದ್ರವ್ಯ ಕೊಟ್ಟದ್ದರಿಂದಲೂ ಮತ್ತು ಶಿವಮೊಗ್ಗ ಕಡೂರು ಡಿಸ್ಟ್ರಿಕ್ಟಗಳಲ್ಲಿನ ಹಿಂದಿನ ಸಾಲ್ ಬಾಬತು ಖರ್ಚು ವ್ಯವಸ್ಥೆಯಾದ್ದರಿಂದಲೂ ಈ ಬಾಬಿನ ಖರ್ಚು ರೂಪಾಯಿ 77,623ಗೆ ಹೆಚ್ಚಿತು ಈ ಇಲಾಖೆಯಿಂದ ಗೌರನಮೆಂಟಿಗೆಲುಕ್ಸಾನ್ ಆಗುತ್ತಲಿದೆ. ಆನೆ ಹಿಂಡುಗಳು ಕಾಯಂ ಬಂಗಡಿ ಬಳಿಗೆ ಬರದೆ ತಪ್ಪಿಸಿಕೊಳ್ಳುವಂತೆ ಕಾಣುವದರಿಂದ ಬಹಳ ಶ್ರಮ ಮತ್ತು ಖರ್ಚಿನಿಂದ ಸಾಧ್ಯವಾದ ಬೇರೆರೀತಿಯಲ್ಲಿ ಇವುಗಳನ್ನು ಹಿಡಿಯಬೇಕಾಗಿಬಂದಿದೆ. ಇಷ್ಟು ಪ್ರಯಾಸಪಟ್ಟರೂ ಹಿಂಡುಗಳಲ್ಲಿ ಅಲ್ಪವಾದ ಸಂಖ್ಯೆ ಸಿಕ್ಕುತ್ತೆ. ಆದ್ದರಿಂದ ಮುಂದೆ ಕೆಲವು ವರುಷಗ ಳವರಿಗೆ ಬಂಗಡಿಕೆಲಸವನ್ನು ಮನ್ನಾಮಾಡೋಣದರ ಅವಶ್ಯಕತೆಯನ್ನು ಕುರಿತು ಗವರ್ನಮೆಂಟಿನವರು ಆಲೋ ಚನೆಗೆ ತರಬೇಕಾಗಿದೆ. ಆದರೆ ಈ ವಿಷಯದಲ್ಲಿ ತೀರ್ಮಾನ ಮಾಡುವದಕ್ಕೆ ಮುಂಚೆ ಪ್ರಾಯಶಃ ಕಮ್ಮಿಖ ರ್ಚಿನಿಂದ ಬಂಗಡಿಯಂತೆ ಫಲಕಾರಿಯಾಗಬಹುದೆಂದು ಇತರ ಸ್ಥಳಗಳ ಅನುಭವದಿಂದ ಕಂಡುಬರುವ ಬೇರೆ ರೀತಿಯಲ್ಲಿ ಜಂಗಲಿನಲ್ಲಿ ಆನೆಗಳನ್ನು ಸುತ್ತುಗಟ್ಟಿ ಹಿಡಿಯುವ ಪ್ರಯತ್ನವು ಒಂದು ವರುಷ ಅಜಮಾಯಿಷಿ ತರೀಖ್ ನಡಿಸಲ್ಪಡುತ್ತೆ.

ಭಂಗಾರದಗಣಿ.—ಭಂಗಾರದ ಗಣಿಕೆಲಸವು ವೃದ್ಧಿಯಾಗುತ್ತಲೇ ಇದೆ. 1894—95ನೇ ಸಾಲಿನಲ್ಲಿ 8,90,831 ಪೌಂಡು ಬೆಲೆ ಬಾಳುವಷ್ಟು ಚಿನ್ನ ಸಿಕ್ಕಿರುವಲ್ಲಿ 1895—96ನೇ ಸಾಲಿನಲ್ಲಿ 1,109,044 ಪೌಂಡು ಬಾಳು ವಷ್ಟು ಚಿನ್ನ ದೊರೆಯಿತು. ಇದರಮೇಲಿನ ರಾಜಾಯ 55,452 ಪೌಂಡುಗಳು ಅಂದರೆ 1895—96ನೆ ಸಾಲಿನ ಲ್ಲಿದ್ದ ದಾಮಾಷಾಯಿ ಧಾರಣೆಪ್ರಕಾರ 9,75,827 ರೂಪಾಯಿಯಾಯಿತು. ಆದರೆ ಸಾಲುಲೆಖ್ಖರುವಳಗೆ ವಸೂ ಲಾಗಿ ಲೆಖ್ಖಕ್ಕೆ ಜಮಾಬಂದದ್ದು 7,72,885 ರೂಪಾಯಿ ಮಾತ್ರವಾಗಿರುತ್ತೆ.

ಕಳೆದ ಎರಡು ಸಾಲುಗಳಲ್ಲಿ ಆಯಾ ಗಣಿಗಳಲ್ಲಿ ಆದ ಭಂಗಾರದ ಉತ್ಪತ್ತಿಯನ್ನು ಮುಂದಿನ ತಖ್ತೆ ಯಲ್ಲಿ ತೋರಿಸಿದೆ:—

ಭಂಗಾರದ ಗಣಿಯ ಕಂಪನಿಗಳ ಹೆಸರು.	1894—95.							1895—96.						
	ಉತ್ಪತ್ತಿಯಾದ ಗಟ್ಟಿ ಚಿನ್ನದ ತೂಕ. ಔನ್ಸುಗಳು.			ಸ್ಟ್ಯಾಂಡರ್ಡ್ ಚಿನ್ನದ ತೂಕ. ಔನ್ಸುಗಳು.	ಗೊತ್ತಾದ ಮೌಲ್ಯ. ಪೌಂಡುಗಳು.			ಉತ್ಪತ್ತಿಯಾದ ಗಟ್ಟಿ ಚಿನ್ನದ ತೂಕ. ಔನ್ಸುಗಳು.			ಸ್ಟ್ಯಾಂಡರ್ಡ್ ಚಿನ್ನದ ತೂಕ. ಔನ್ಸುಗಳು.	ಗೊತ್ತಾದ ಮೌಲ್ಯ. ಪೌಂಡುಗಳು.		
ಮೈಸೂರು ಗೋಲ್ಡ್ ಮೈನಿಂಗ್ ಕಂಪೆನಿ	58,504	13	9	58,416·890	227,044	14	7	91,129	16	10	91,496·879	355,657	9	1
ಉರಿಗಂ ,, ...	65,499	13	0	62,795·749	244,308	10	0	72,301	3	0	69,715·270	271,409	11	3
ನಂದೀದುರ್ಗ ,, ...	37,440	18	19	35,783·268	139,303	13	0	40,950	9	14	39,089·496	152,699	0	0
ಬಾಲಘಾಟ್ ,, ...	3,289	4	0	3,261·478	12,690	10	4	2,010	2	14	1,121·195	4,572	15	11
ನೈರ್ಕ ರೀಫ್ಸ್ ,, ...	1,162	5	0	1,037·019	4,031	0	8	311	7	0	258·694	1,004	3	8
ಛಾಂಪಿಯನ್ ರೀಫ್ಸ್ ,, ...	67,329	10	19	66,188·159	257,494	10	0	75,760	8	14	74,567·626	291,567	16	11
ಸೌತ್ ಈಸ್ಟ್ ಯರ್ರಕೊಂಡ ,, ...	177	0	0	142·612	555	19	10	..	..	..	..	..	..	..
ಗೋಲ್ಡ್ ಫೀಲ್ಡ್ಸ್ ಮೈಸೂರು ,, ...	53	7	4	50·313	195	5	8	261	3	4	200·628	779	10	6
ಮೈಸೂರು ವೆಸ್ಟ್ ,, ...	587	15	10½	574·454	2,158	11	9	3,381	4	9	3,184·259	12,289	3	6
ಮೈಸೂರು—ವೈನಾಡು ,, ...	587	15	10½	574·454	2,158	11	9	3,381	4	9	3,184·259	12,289	3	6
ಕೋರಮಂಡಲ ,, ...	229	3	5	228·833	890	3	8	1,655	13	0	1,627·761	6,326	16	2
ಹೊನ್ನಾಳಿ ,, ...	..	..	..	..	..	..	..	77	1	0	..	*285	0	0
ಕೆಂಪನಕೋಟೆ ,, ...	..	..	..	..	..	..	..	45	10	0	42·178	163	16	11
ಜುಮ್ಲಾ......	234,861	6	5	229,053·229	890,831	11	3	291,265	3	2	284,488·245	1,109,044	7	5
ಜಾಸ್ತಿ ..												218,212	16	2

*ಸರಾಸರಿ.

ಮೈಸೂರು, ಚಾಂಪಿರ್ಯ್ನ ರೀಫಸ್, ಉರಿಗ ಮತ್ತು ನಂದೀದುರ್ಗ ಈ ಕಂಪೆನಿಗಳು ಇತರ ಕಂಪೆನಿಗಳಿಗಿಂತ ಅತ್ಯುತ್ತಮ ಸ್ಥಿತಿಯಲ್ಲಿವೆ. ಮೈಸೂರು ವೆಸ್ಟ್ ಮತ್ತು ಮೈಸೂರು ವೈನಾಡ್ ಕಂಪೆನಿಗಳು ತೃಪ್ತಿಕರವಾಗಿ ವೃದ್ಧಿಯಾಗುತ್ತಲಿವೆ. ಕೋಲಾರದ ಗಣಿಗಳನ್ನು ಬಿಟ್ಟು ಅನ್ಯತ್ರ ಇರುವ ಕೆಂಪಿನಕೋಟೆ ಗಣಿಯು ಸಫಲ ವಾಗಲಿಲ್ಲ ಮತ್ತು ಹೊನ್ನಾಳಿ ಕಂಪೆನಿ ಕೆಲಸವು ತೃಪ್ತಿಕರವಾದ ರೀತಿಯಲ್ಲಿ ನಡೆಯಲಿಲ್ಲ.

ಸರ್ಕಾರಿ ಪತ್ರ ಮತ್ತು ಬ್ಯಾಂಕು ಡಿಪಾಜಿಟ್.—ಇಂಡಿಯಾ ಗೌರ್ನಮೆಂಟ್ ಪತ್ರಗಳ ಬಡ್ಡಿಯು ಸೇಕಡ 4ರಿಂದ 3½ಗೆ ಇಳಿದ್ದರಿಂದ ಸರಕಾರಿಪತ್ರ ಮತ್ತು ಬ್ಯಾಂಕು ಡಿಪಾಜಿಟಿನಿಂದ ಬಂದ ಬಡ್ಡಿ ಹುಟ್ಟುವಳಿಯು ಬಹಳ ಕಡಿಮೆಯಾಯಿತು. ಬಡ್ಡಿ ದರವು ಸಾಮಾನ್ಯವಾಗಿ ತಗ್ಗಿದಕಾರಣ, ಮದರಾಸ್ ಬ್ಯಾಂಕ್ ಡಿಪಾಜಿಟಮೇಲೆ ಬಂದ ಬಡ್ಡಿಯುಕೂಡಾ ಕಡಮೆಯಾಗಲು ಕಾರಣವಾಯಿತು.

ಸ್ಟೇಟ್ ರೈಲ್ವೆ—ಮುಂದೆ ಪ್ರತ್ಯೇಕವಾಗಿ ವಿವರಿಸುವ ಕಾರಣಗಳಿಂದ ರೈಲ್ವೆ ಹುಟ್ಟುವಳಿಯಲ್ಲಿ 89,222 ರೂಪಾಯಿ ಜಾಸ್ತಿಯಾಗಿದೆ.

ಒಟ್ಟು ನೋಡಿದ್ದೇ ಆದರೆ, ಲ್ಯಾಂಡ್ ರೆವಿನ್ಯು, ಆಬ್ಕಾರಿ, ಭಂಗಾರದಗಣಿ ಮತ್ತು ಸ್ಟ್ಯಾಂಪು ಈ ಬಾಬುಗಳಿಂದ 4¾ ಲಕ್ಷ ರೂಪಾಯಿನ ಮೇಲೆ ಹೆಚ್ಚು ಹುಟ್ಟುವಳಿಯಾಯಿತು. ಇದಕ್ಕೆ ಪ್ರತಿಯಾಗಿ ಫಾರೆಸ್ಟು ಮತ್ತು ಬಡ್ಡಿ ಬಾಬುಗಳಲ್ಲಿ ಎರಡು ಲಕ್ಷ ರೂಪಾಯಿನವರಿವಿಗೂ ಕಡಮೆಯಾಯಿತು. 1894—95ನೇ ಸಾಲಿನಲ್ಲಿ ಹಿಂದಿನ ಸಾಲ್ ಬಾಬತು ಏಕರೇಜ್ ಕಂಟ್ರಿಬ್ಯೂಷನ್ ವಸೂಲಿಯನ್ನು ಜಮೆಗೆ ತಂದದ್ದರಿಂದ ಆ ವರುಷದ ಹುಟ್ಟುವಳಿಗೆ ಸುಮಾರು 1⅛ ಲಕ್ಷ ರೂಪಾಯಿ ಏರಿತು. ಅದೇ ಪ್ರಕಾರ 1895—96ನೇ ಸಾಲಿನಲ್ಲೂ ಜಮೆಗೆ ತರುವದಕ್ಕೆ ಅವಕಾಶವಿಲ್ಲ. ರೈಲ್ವೆ ಹುಟ್ಟುವಳಿಯು ಹಿಂದಿನ ವರುಷಕ್ಕಿಂತ ಸ್ವಲ್ಪ ಹೆಚ್ಚಿತು. ಎಲ್ಲಾ ಬಾಬುಗಳ ದೇಖಿಲ್ ಹುಟ್ಟುವಳಿಯಲ್ಲಿ 2 ಲಕ್ಷ ರೂಪಾಯಿ ನಿವ್ವಳ ಜಾಸ್ತಿಯಾಯಿತು.

ಖರ್ಚು.—ರೈಲ್ವೇ ಬಾಬುಸಹಿತವಾಗಿ 1894—95ನೇ ಸಾಲಿನಲ್ಲಿ 1,63,65,943 ರೂಪಾಯಿ ಒಟ್ಟುಖರ್ಚಾ ಗಿರುವಲ್ಲಿ 1895—96ನೇ ಸಾಲಿನಲ್ಲಿ 1,62,55,852 ರೂಪಾಯಿ ಖರ್ಚಾಯಿತು. ಖರ್ಚಿನಲ್ಲಿ ಜಾಸ್ತಿಯಾದ ಮುಖ್ಯ ಬಾಬುಗಳನ್ನು ಕೆಳಗೆ ವಿವರಿಸಿದೆ:—

	ರೂ.
ಪೂರ್ವದ ಆಳಿದ ಮಹಾಸ್ವಾಮಿಯವರ ಮಕ್ಕಳಿಗೆ ಸರ್ಕಾರದಿಂದ ಕೊಡತಕ್ಕ ಪೆನ್ಷನ್‌ಗಳ ವಿಷಯವಾಗಿ ಆದ ಏರ್ಪಾಡಿನಪ್ರಕಾರ, ಜ್ಯೇಷ್ಠರಾದ ರಾಜಕುಮಾರಿಯರಿಗೆ ಹೋದ ಸಾಲಿನಲ್ಲಿ ಪಾವತಿಯಾಗಬೇಕಾಗಿಬಂದ ಮೊಬಲಗು "ರಾಜಕುಟುಂಬದವರಿಗೆ ಪೆನ್ಷನ್" ಎಂಬ ಬಾಬಿಗೆ ಹೆಚ್ಚು ಖರ್ಚು	80,000
ಹಿಂದಿನ ಸಾಲುಗಳಲ್ಲಿ ಏನ್ ಜಮೆಗೆ ಬಂದಿದ್ದ ಮೊಬಲಗು ಕೆಲವು ಇನಾಂದಾರರಿಗೆ ಪಾವತಿಯಾದ್ದರಿಂದ ಮುಖ್ಯವಾಗಿ "ವಾಪಸು ಪಾವತಿ" ಬಾಬಿಗೆ ಖರ್ಚು ಜಾಸ್ತಿ	42,898
ಅಮಲ್ದಾರ್ರ ಮತ್ತು ಡೆಪ್ಯುಟಿ ಅಮಲ್ದಾರ್ರ ಸಂಬಳಗಳನ್ನು ಜಾಸ್ತಿಮಾಡಿದ್ದರಿಂದ "ಲ್ಯಾಂಡ್ ರೆವಿನ್ಯೂ ಸಿಬ್ಬಂದಿ" ಎಂಬ ಬಾಬಿಗೆ ಮುಖ್ಯವಾಗಿ ಆದ ಹೆಚ್ಚು ಖರ್ಚು	20,664
ಈಚಿಗೆ ಸೆಟಲ್‌ಆದ ತಾಲ್ಲೂಕುಗಳಿಗೋಸ್ಕರ "ಗ್ರಾಮನೌಕರರ ವೇತನ" ಬಾಬಿಗೆ ಖರ್ಚು ಜಾಸ್ತಿ ..	80,462
ವಿಶೇಷವಾದ ಪ್ರವಾಹದಿಂದ ಹಾನಿ ಪಡೆದ ಕಾರ್ಕಕೋಟೆ ಖೆಡ್ಡಾವನ್ನು ಸರಿಮಾಡಿಸಿದ್ದು, ಶಿವಮೊಗ್ಗ ಕಡೂರು ಡಿಸ್ಟ್ರಿಕ್ಟುಗಳಲ್ಲಿ ನಡಿಸಿದ ಖೆಡ್ಡಾ ಕೆಲಸಗಳೂ, ಫಾರೆಸ್ಟು ಇಲಾಖೆಯ ಮುಖ್ಯಾಧಿಕಾರಕ್ಕೆ ಬೇರೆ ಆಫೀಸರನ್ನ ನೇಮಿಸಿದ್ದು ಈ ಮುಂತಾದ ಕಾರಣಗಳಿಂದ ಫಾರೆಸ್ಟ್ ಬಾಬಿಗೆ ಜಾಸ್ತಿ ಖರ್ಚು	51,095
ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿನಲ್ಲಿ ಮುಖ್ಯವಾಗಿ ಶ್ರೀಮನ್ಮಹಾರಾಜರವರ ವಿದ್ಯಾಭ್ಯಾಸ, ಕೌನ್ಸಿಲರ್‌ಗಳ ಸಂಬಳಗಳು ಮುಂತಾದ ಹೊಸಬಾಬುಗಳಿಂದ ಖರ್ಚು ಜಾಸ್ತಿ	79,514
ಬ್ರಿಜಲಾಲ್ ದಾಸ್ ಎಂಬುವರ ಸಾಲದ ಹಣದ ವಿಷಯವನ್ನು ವ್ಯವಸ್ಥೆ ಮಾಡುವುದಕ್ಕೂ ಸರ್ಕಾರಕ್ಕೆ ಬೇಕಾದ ಜಮೀನು ಗಳನ್ನ ಪಡೆಯುವದಕ್ಕೂ ಸಹ ಹೊಸ ಕೋರ್ಟುಗಳನ್ನು ಏರ್ಪಡಿಸಿದ್ದರಿಂದಲೂ, ಸಿಟಿಮೇಜಿಸ್ಟ್ರೇಟರ ಕೋ ರ್ಟಿನ ಖರ್ಚನ್ನು "ಲ್ಯಾಂಡ್ ರೆವಿನ್ಯೂ" ಬಾಬಿನಿಂದ ವರ್ಗಾಯಿಸಿದ್ದರಿಂದಲೂ, ಈ ಮುಂತಾದ ಕಾರಣಗ ಳಿಂದ 'ಕೋರ್ಟುಗಳ' ಬಾಬಿನಲ್ಲಿ ಜಾಸ್ತಿ ಖರ್ಚು	27,189
14,000 ರೂಪಾಯಿಗೆ ಬಂದೂಕುಗಳನ್ನು ಕೊಂಡುಕೊಂಡದ್ದರಿಂದಲೂ, ಕೆಲವು ಮುಖ್ಯವಾದ ಘಾಟಿರಸ್ತೆ ಗಳನ್ನು ಕಾಯುವದಕ್ಕೆ ತಳವಾರರನ್ನು ನೇಮಿಸಿದ್ದರಿಂದಲೂ 'ಪೊಲೀಸ್' ಬಾಬಿನ ಜಾಸ್ತಿ ಖರ್ಚು ..	23,909
ವಿದ್ಯಾಭ್ಯಾಸದ ಇಲಾಖೆಯು ಸಾಧಾರಣವಾಗಿ ವೃದ್ಧಿಯಾದ್ದರಿಂದ ಈ ಬಾಬಿನ ಖರ್ಚು ಜಾಸ್ತಿ ..	16,462
ಮುಖ್ಯವಾಗಿ ಯೂರೋಪು ಔಷಧಗಳನ್ನ ಹೆಚ್ಚಾಗಿ ಕೊಂಡದ್ದರಿಂದಲೂ ಹೊಸ ಕಟ್ಟಡಗಳ ದೆಶೆಯಿಂದಲೂ "ಮೆಡಿಕಲ್ (ವೈದ್ಯದ)" ಬಾಬಿಗೆ ಜಾಸ್ತಿ ಖರ್ಚು	56,292

"ಸೈಯಂಟಿಫಿಕ್ ಮತ್ತು ಚಿಲ್ಲರೆ ಇಲಾಖೆಗಳ" ಬಾಬಿನಲ್ಲಿ ಜಿಯೊಲಾಜಿಕಲ್ ಸರ್ವೆ ಇಲಾಖೆಯ ಸಿಬ್ಬಂದಿ ಸಾಮಗ್ರಿಗಳನ್ನು 1895—96ನೇ ಸಾಲಿನಿಂದ ಸಂಪೂರ್ಣವಾಗಿ ಜಾರೀಗೆ ತಂದದ್ದರಿಂದ ಖರ್ಚು ಹೆಚ್ಚಾದದ್ದು 11,042

"ಸಾದಿಲ್ವಾರ್ ಮತ್ತು ಛಾಪಾಖಾನೆ" ಬಾಬಿನಲ್ಲಿ ಕೋರ್ಟು ಕೆಲಸಕ್ಕೆ ನಿಯಮವಾದ ಕಾಗದವನ್ನು ಕೊಂಡದ್ದರಿಂದಲೂ, ಯೂರೋಪ್ ಸ್ಟೇಷನರಿ ಮತ್ತು ಛಾಪಾಖಾನೆಯ ಸಾಮಗ್ರಿಗಳನ್ನು ಹೆಚ್ಚಾಗಿ ತರಿಸಿದ್ದರಿಂದಲೂ ಜಾಸ್ತಿಯಾದ ಖರ್ಚು 46,927

ಮತ್ತು ಮುಂದೆ ವಿವರಿಸುವಂತೆ "ಪಬ್ಲಿಕ್ ವರ್ಕ್ಸ್" ಖರ್ಚು ಜಾಸ್ತಿ 2,75,007

ಎಕ್ಸ್‌ಛೇಂಜ್ ರೇಟೆಯಾನೆ ಪೌನ್ ಮತ್ತು ರೂಪಾಯಿನ ದಾಮಾಷಾಯಿ ಬೆಲೆ ಅನುಕೂಲವಾಗಿದ್ದ ಪ್ರಯುಕ್ತ ಇಂಗ್ಲೀಷ್‌ಸಾಲದಮೇಲೆ ಕೊಡತಕ್ಕ ಬಡ್ಡಿ ಕಮ್ಮಿಯಾಗಿ ಅದರಿಂದ ಸ್ವಲ್ಪಮಟ್ಟಿಗೂ, ಪ್ರತ್ಯೇಕ "ಸ್ಟರ್ಲಿಂಗ್ ಸಿಂಕಿಂಗ್ ಫಂಡ್" ಅಂದರೆ ಪೌನ್‌ನಲ್ಲಿ ಹಣವನ್ನು ಕೂಡಿಹಾಕುವ ವಿಷಯದಲ್ಲಿ ಇಂಡಿಯಾ ಗೌರ್ನಮೆಂಟಿಗೆ ಬರೆಸಿರುವದಕ್ಕೆ ಅವರ ಅಂಗೀಕಾರನಿರೀಕ್ಷಣೆಗೆ ಒಳಪಟ್ಟು ರೈಲ್ವೆಲೋನ್ ರಿಡೆಂಪಷನ್ ಫಂಡಿಗೆ ಸಾಲಿಯಾನ ಪಾವತಿಮಾಡುವ 4 ಲಕ್ಷ ರೂಪಾಯಿಯನ್ನು ಈ ಸಂವತ್ಸರ ತೆಗೆದಿಡಲಿಲ್ಲವಾಗಿ ಅದರಿಂದ ಮುಖ್ಯವಾಗಿಯೂ, ಈರೀತಿ ಎರಡು ಕಾರಣಗಳಿಂದ ರೈಲ್ವೆ ಬಾಬಿನಲ್ಲಿ ವಿಶೇಷವಾಗಿ ಖರ್ಚು ಕಮ್ಮಿ ಕಂಡುಬಂದಿದೆ.

ಬೆಳ್ಳಿನಾಣ್ಯದಲ್ಲಿರುವ ಈಗಿನ ಫಂಡನ್ನು ಸ್ಥಳೀಯ ರೈಲ್ವೆಸಾಲ ತೀರಿಸುವದಕ್ಕೆ ಬೇಕಾದ 20 ಲಕ್ಷದಮಟ್ಟಿಗೆ ನಿಲ್ಲಿಸಿ 1936ನೇ ಇಸವಿಯಲ್ಲಿ ವಾಪಸ್ ಪಾವತಿಮಾಡಬೇಕಾದ 12 ಲಕ್ಷ ಪೌನ್ ಸಾಲವನ್ನು ತೀರಿಸುವದಕ್ಕೆ "ಸ್ಟರ್ಲಿಂಗ್ ಸಿನ್‌ಕಿಂಗ್ ಫಂಡ್‌ಯಾನೆ" ಭಂಗಾರದ ನಾಣ್ಯದ ಫಂಡನ್ನು ಏರ್ಪಡಿಸುವ ಉದ್ದೇಶವಿರುತ್ತೆ. ಇದಕ್ಕೆ 1895ನೇ ಸಾಲ್‌ಲಾಗಾಯಿತು 1936ನೇ ಸಾಲ್‌ವರಿಗಿನ 42 ವರ್ಷಗಳಿಗೆ ಸಾಲೀಯಾನ ಈಗಿನ ದರಗಳಂತೆ ಸುಮಾರು $2\frac{1}{2}$ ಲಕ್ಷ ರೂಪಾಯಿಗೆ ಸಮನಾದ 14,630 ಪೌನ್‌ಗಳು ಬೇಕಾಗಿರುತ್ತೆ.

ಎಲ್ಲಾ ಬಾಬಿನ ನಿವ್ವಳ ಜಮಾಖರ್ಚುಗಳು ಈ ಕೆಳಗಿನ ಪಟ್ಟಿಗಳಲ್ಲಿ ತೋರಿಸಲ್ಪಟ್ಟವೆ:—

ನಂ॥ I.—1895-96ನೇ ಇಸವಿ ಬಾಬತು ಒಟ್ಟು ಮತ್ತು ನಿವ್ವಳ ಹುಟ್ಟುವಳಿ ತಖ್ತೆ.

ಹುಟ್ಟುವಳಿ ಬಾಬುಗಳು.	1895—96.				1894—95.
	ಒಟ್ಟು ಹುಟ್ಟುವಳಿ.	ವಾಪಸ್ ಖರ್ಚು.	ಆಯಾ ಬಾಬಿನ ಐನ್ ಖರ್ಚು.	ನಿವ್ವಳಹುಟ್ಟುವಳಿ.	ನಿವ್ವಳಹುಟ್ಟುವಳಿ.
	ರೂ.	ರೂ.	ರೂ.	ರೂ.	ರೂ.
1. ಲ್ಯಾಂಡ್ ರೆವಿನ್ಯು (ಜಮೀನ್‌ಬಾಬು) ..	97,68,358	1,80,641	14,79,302	81,08,415	80,27,285
2. ಸ್ಟ್ಯಾಂಪು	7,64,163	6,287	41,346	7,16,530	6,72,720
3. ಅಬ್‌ಕಾರಿ ..	33,90,949	43,301	1,79,790	31,67,858	30,16,018
4. ಸಾಯರ್	4,29,178	48	13,778	4,15,352	4,28,642
5. ಮೊಹತರ್ಫಾ	2,66,504	...	...	2,66,504	2,64,533
6. ಫಾರೆಸ್ಟ್. { ಐನ್ ಫಾರೆಸ್ಟುಬಗೆ ..	12,61,894	3,895	4,38,827	8,19,172	9,21,528
{ ಆನೆ ಬಂಗಡೀಬಗೆ ...	30,329	...	77,623	—47,294	—9,294
7. ಭಂಗಾರದ ಗಣಿ ಬಾಬತು ...	7,74,885	...	7,950	7,66,935	7,27,654
8. ರಿಜಸ್ಟ್ರೇಷನ್ „ ...	1,03,819	306	48,940	54,473	46,438
9. ಅಮೃತಮಹಲ್ „ ..	26, 13	...	28,368	—1,555	—8,401
10. ಪ್ರೋನೋಟುಗಳ ಮೂಲಕ ಇರತಕ್ಕ ಸರ್ಕಾರಿ ಹಣದಮೇಲಿನ ಮತ್ತು ಬ್ಯಾಂಕ್ ಡಿಪಾಜಿಟ್ ಬಾಬತು ಮೊಬಲಗಿನ ಮೇಲಿನ ಬಡ್ಡಿ ..	4,24,009	...	...	4,24,009	5,31,308
11. ಸರ್ಕಾರದಿಂದ ಕೊಟ್ಟ ಸಾಲದ ಮೇಲಿನ ಬಡ್ಡಿ ಮತ್ತು ಕಂದಾಯದ ಬಾಕಿ ಮೇಲಿನ ಬಡ್ಡೀ ಸಹ	34,238	...	...	34,238	38,785
12. ಇತರ ಚಿಲ್ಲರೆ ಬಾಬುಗಳಿಂದ ಹುಟ್ಟುವಳಿ.	1,39,905	29,724	...	1,10,181	2,31,062
ಜುಮ್ಲಾ......	174,14,944	2,64,202	23,15,924	148,34,818	148,88,278
13. ಸ್ಟೇಟ್ ರೈಲ್ವೆಗಳು ..	6,20,674	..	8,71,182	—2,50,508	-8,79,723
ಒಟ್ಟುಜುಮ್ಲಾ ಸ್ಟೇಟ್‌ರೈಲ್ವೆಗಳು ದೇಖೀಲ್ ..	180,35,618	2,64,202	31,87,106	145,84,310	140,08,555
IIನೇ ನಂಬರುಳ್ಳ ತಖ್ತೆ ಮೇರಿಗೆ ಐನ್ ಖರ್ಚು ವಜಾ ..				125,74,058	123,23,008
ನಿವ್ವಳ ಉಳಿದದ್ದು....				20,10,252	16,85,547

ನಂ॥ II.—1895-96ನೇ ಇಸವಿ ಬಾಬತು ಒಟ್ಟು ಮತ್ತು ನಿವ್ವಳ ಖರ್ಚಿನ ತಖ್ತೆ.

ಖರ್ಚು ಬಾಬುಗಳು.	1895—96.			1894—95.
	ಒಟ್ಟು ಖರ್ಚು.	ಆಯಾ ಬಾಬುಗಳ ಜಮೆ.	ನಿವ್ವಳ ಖರ್ಚು.	ನಿವ್ವಳ ಖರ್ಚು.
	ರೂ.	ರೂ.	ರೂ.	ರೂ.
1. ಸಬ್‌ಸಿಡಿ ಯಾನೆ ಪಗದಿ	24,50,000	..	24,50,000	24,50,000
2. ಸಿವಿಲ್ ಲಿಸ್ಟ್ ಯಾನೇ ಅರಮನೆ ಖರ್ಚು ...	14,00,000	..	14,00,000	14,00,000
3. ಪೊಲಿಟಿಕಲ್ ಪೆನ್ಷನ್‌ಗಳು	1,08,761	..	1,08,761	1,10,510
4. ರಾಜವಂಶ್ಯರಿಗೆ ಪೆನ್ಷನ್ ..	80,000	..	80,000	..
5. ವೈಸೂರು ರೈಲ್ವೆ ಸಾಲದ ಬಾಬತು 20 ಲಕ್ಷ ರೂಪಾಯಿ ಮೇಲಿನ ಬಡ್ಡಿ ..	1,01,420	..	1,01,420	1,01,700
6. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ ವೊಬಲಿಗಿನ ಮತ್ತು ಧರ್ಮದ ಫಂಡಿನ ಬಡ್ಡಿ	1,23,805	..	1,23,805	1,19,911
7. ಜನರಲ್ ಅಡ್ಮಿನಿಸ್ಟ್ರೇಷನ್ ಯಾನೆ ಹುಜೂರು ಇಲಾಖೆಗಳು	4,00,506	..	4,00,506	3,20,992
8. ಜುಡಿಷಿಯಲ್ ಖರ್ಚು { ಕೋರ್ಟುಗಳು ..	8,22,903	56,203	7,66,700	7,37,522
ಜೈಲುಗಳು ..	76,523	21,186	55,337	56,579
9. ಪೋಲೀಸ್	7,85,833	1,247	7,84,586	7,60,465
10. ವಿದ್ಯಾಭ್ಯಾಸದ ಇಲಾಖೆ	5,00,632	91,968	4,08,664	3,96,335
11. ಮುಜರಾಯಿ	3,26,695	..	3,26,695	3,38,616
12. ಮೆಡಿಕಲ್ (ವೈದ್ಯಶಾಲೆಯ) ಇಲಾಖೆ ...	3,11,588	15,762	2,95,826	2,48,246
13. ಗವರ್ನ್ಮೆಂಟ್ ಬಂಗ್ಲೆಗಳು ..	59,152	..	59,152	1,31,347
14. ಸೈಯಂಟಿಫಿಕ್ ವ ಚಿಲ್ಲರೆ ಇಲಾಖೆಗಳು ...	1,85,794	12,370	1,73,424	1,69,180
15. ಸೂಪರಾನ್ಯುಯೇಷನ್ ಪೆನ್ಷನ್, ಗ್ರಾಟ್ಯುಯಿಟಿ ವಗೈರೆ	2,62,420	..	2,62,420	2,78,276
16. ಸ್ಟೇಷನರಿ ಯಾನೆ ಸಾದಿಲ್‌ವಾರ್ ಮತ್ತು ಛಾಪಾಖಾನೆ	2,06,159	8,612	1,97,547	1,53,968
17. ಇಂಡಿಯಾ ಗವರ್ನ್ಮೆಂಟ್ ಪ್ರೋನೋಟುಗಳನ್ನ ಖರೀದಿಗೆ ತೆಗೆದುಕೊಂಡದ್ದರ ಮೇಲೆ ಕೊಟ್ಟ ನಫಾ ವಗೈರೆ	1,12,710	..	1,12,710	1,44,583
18. ಕ್ಷಾಮನಿವಾರಣೆ ಬಗ್ಗೆ ಖರ್ಚು ..	6,291	..	6,291	89,638
19. ಪಬ್ಲಿಕ್ ವರ್ಕ್ಸ್ ಯಾನೆ ಮರಹಮ್ಮತ್ ಇಲಾಖೆ ..	32,12,481	23,138	31,89,343	29,04,626
20. ಫಾಜ್ ಇಲಾಖೆ	9,81,470	..	9,81,470	9,77,652
21. ಇತರ ಬಾಬುಗಳು	2,89,401	..	2,89,401	4,32,862
ಜುಮ್ಲಾ....	128,04,544	2,30,486	125,74,058	123,23,008

ರೈಲ್ವೆಗೋಸ್ಕರ ಸರ್ಕಾರದಿಂದ ಕೊಡಬೇಕಾದ ನಷ್ಟದ ವೊಬಲಗು $2\frac{1}{2}$ ಲಕ್ಷ ರೂಪಾಯಿವಜಾ ಮಾಡಲಾಗಿ ಜಾತ ಈ ಸಂವತ್ಸರದಲ್ಲಿ ಖರ್ಚುಕಳೆದು ಸರ್ಕಾರಕ್ಕೆ 20 ಲಕ್ಷ ರೂಪಾಯಿ ಉಳಿದಿರುತ್ತೆ. ಇದರಲ್ಲಿ ವೇಲೆ ಹೇಳಿರುವಂತೆ ನಿಲ್ಲಿಸಿರುವ ರೈಲ್ವೇ ಸಾಲತೀರಿಸುವ ಧನವನ್ನ ಕಳೆದರೆ, 1894—95ನೇ ಸಾಲಿನಂತೆ ಹೋದವರ್ಷದಲ್ಲಿಯೂ ಸುಮಾರು 16 ಲಕ್ಷ ಉಳಿದಂತೆ ಆಗುತ್ತೆ.

ಸಂವತ್ಸರದ ಆದಿಯಲ್ಲಿ ಸಿಲ್ಕುನಿಂತಿದ್ದ 1,27,23,615 ರೂಪಾಯಿಗೆ, ಈಸಂವತ್ಸರದಲ್ಲಿ ಖರ್ಚುಜಾತ ಉಳಿದ 20,10,252 ರೂಪಾಯನ್ನು ಸೇರಿಸಿದರೆ 1896ನೇ ಜೂನ್ 30ರಲ್ಲಿ 1,47,33,867 ರೂಪಾಯಿ ಸಿಲ್ಕು ಉಳಿದಂತೆ ಆಯಿತು. ಇದರಪೈಕಿ, ರೂ. 98,57,800 ಇಂಡ್ಯಾ ಗವರ್ನಮೆಂಟಿನವರ ಪತ್ರಗಳು ವೈಸೂರು ರೈಲ್ವೆ ಪತ್ರಗಳು ಇವುಗಳಮೇಲೆಯೂ, ಬಾಕೀವೊಬಲಗು ಮದ್ರಾಸ್ ಬ್ಯಾಂಕ್ ಮತ್ತು ಸರ್ಕಾರದ

ಖಜಾನೆಗಳಲ್ಲಿ ನಗದಾಗಿಯೂ ಇದೆ. ಮೇಲೆ ವಿವರಿಸಿದಂತೆ 20 ಲಕ್ಷ ರೂಪಾಯಿಗೆ ತಗ್ಗಿಸಲುದ್ದೇಶಿಸಿರುವ ಈಗಿನ ರೈಲ್ವೇ ಸಾಲ ತೀರಿಸುವ ಫಂಡಿಗೆ ಸಂಬಂಧಪಟ್ಟ ಹಾಜರಿ ಶಿಲ್ಕು 28,69,395 ರೂಪಾಯಿ ಆಗಿರುತ್ತೆ.

ಜಮಾಖರ್ಚಿನ ಬಾಬನ್ನು ಮುಗಿಸುವುದಕ್ಕೆ ಮುಂಚೆ, ಹೋದ ಸಂವತ್ಸರದಲ್ಲಿ ಸರ್ಕಾರದ ರೈಲ್ವೆಗಳ ಆಡಳಿತದಲ್ಲಿ ತಕ್ಕಮಟ್ಟಿಗೆ ಲಾಭಬಂತೆಂಬ ಸಂತೋಷಕರವಾದ ಸಮಾಚಾರವನ್ನು ನಿಮಗೆ ತಿಳಿಸಬೇಕಾಗಿದೆ. ಇದರ ತಪ್ಸೀಲುಗಳನ್ನು ಕೆಳಗೆ ವಿವರಿಸಿದೆ :—

	ಸ. ಮ. ರೈಲ್ವೆ ಕರಾರಿನಪ್ರಕಾರ ಕೆಲಸ ನಡಿಸುತಿರುವುದು.		ಹಂಗಾಮಿ ಕರಾರುಗಳಪ್ರಕಾರ ಕೆಲಸ ನಡಿಸುತಿರುವದು.							
	ಮೈಸೂರು—ಹರಿಹರ್.		ಬೆಂಗಳೂರು—ಹಿಂದೂಪುರ್.		ಮೈಸೂರು—ನಂಜನಗೂಡು.		ಕೋಲಾರದ ಬಂಗಾರಗಣಿ.		ಜುಮ್ಲಾ.	
	1894-95.	1895-96.	1894-95.	1895-96.	1894-95.	1895-96.	1894-95.	1895-96.	1894-95.	1895-96.
1. ಜೂ॥ 30ವರಿಗೆ ಖರ್ಚಾದ ಮೂಲಧನ.	148,03,306	150,33,008	24,88,851	24,87,122	6,02,988	6,09,681	6,74,168	7,64,033	37,66,007	38,60,836
2. ಒಟ್ಟು ಹುಟ್ಟುವಳಿ ..	14,68,560	16,18,508	1,75,036	2,04,403	39,643	39,496	1,32,193	1,53,525	3,46,872	3,97,424
3. ಖರ್ಚು (ಸದರ್ನ ಮಹರಾಟ ರೈಲ್ವೆ ಪ್ರಾವಿಡೆಂಟ್ ಫಂಡ್ ಕಂಟ್ರಿಬ್ಯೂಷನ್ ವೊಬಲಗುಸಹಿತ)	9,76,211	9,31,308	1,12,946	1,14,476	25,862	22,352	76,908	88,836	2,15,716	2,25,664
4. ಒಟ್ಟು ಹುಟ್ಟುವಳಿಗೆ ಖರ್ಚಿನ ಶೇಕಡ ಮಾಮೂಲಾಯಿ	66·47	57·54	64·52	56·00	65·24	56·59	58·18	57·86	62·19	56·78
5. ಉಳಿದ ಆದಾಯ	4,92,349	6,87,200	62,090	89,927	13,781	17,144	55,285	64,689	1,31,156	1,71,760
6. ಮೂಲಧನಕ್ಕೆ ಶೇಕಡ ಆದಾಯ ..	3·33	4·57	2·49	3·62	2·26	2·81	8·20	72	3·48	4·45

ಖರ್ಚು ತಪ್ಸೀಲ್.—ಮೈಸೂರು—ಹರಿಹರದ ರೈಲ್ವೆ—	1894-95.	1895-96.
ಹಂಚತಕ್ಕ ಲಾಭದಲ್ಲಿ ಕಂಪನಿಯ ಕಾಲು ಹಿಸ್ಸೆ	1,23,096	1,71,767
ಇದು ಮೂಲಧನಕ್ಕೆ ಶೇಕಡ	0·83	1·14
ಇಂಗ್ಲಂಡಿನಲ್ಲಿ ತೆಗೆದುಕೊಂಡ 1,200,000 ಪೌನುಗಳಲ್ಲಿ ಖರ್ಚಾದವೊಬಲಗಿಗೆ ಕೊಡತಕ್ಕ ಬಡ್ಡಿ	8,03,929	7,60,493
ಇದು ಮೂಲಧನಕ್ಕೆ ಶೇಕಡ	5·43	5·06
ಒಟ್ಟು ಪಾವತಿ	9,27,025	9,32,260
ಮೂಲಧನಕ್ಕೆ ಒಟ್ಟು ಪಾವತಿಯ ಶೇಕಡ	6·26	6·20

ನಮ್ಮ ಎಲ್ಲಾ ರೈಲ್ವೇ ಲೈನ್‌ಗಳಲ್ಲೂ ಒಟ್ಟು ಹುಟ್ಟುವಳಿಯು ಹೆಚ್ಚಾದ್ದಲ್ಲದೆ ಅಂಥಾ ಹುಟ್ಟುವಳಿಗೆ ಆಡಳಿತದ ಖರ್ಚಿನ ದಾಮಾಷಾಯಿ ವಿಶೇಷವಾಗಿ ಕಮ್ಮಿಯಾಯಿತು. ಸದರ್ನ ಮರಾಟ ರೈಲ್ವೇ ಕರಾರಿಪ್ರಕಾರ ಕೆಲಸನಡೆಸುತ್ತಿರುವ ಮೈಸೂರು—ಹರಿಹರದ ಲೈನಿನಲ್ಲಿ ನಿವ್ವಳ ಆದಾಯ ಬಹಳ ವೃದ್ಧಿಯನ್ನು ಹೊಂದಿ 2 ಲಕ್ಷ ರೂಪಾಯಿವರಿವಿಗೂ ಆಯಿತು. ಈ ಲೈನಿನಲ್ಲಿ ಹಿಂದಣಸಾಲಿನಲ್ಲಿ ಮೂಲಧನಕ್ಕೆ ಶೇಕಡಾ 3·33 ನಿವ್ವಳ ಆದಾಯವಿದ್ದದ್ದು 1895–96ನೇ ಸಾಲಿನಲ್ಲಿ 4·57ಕ್ಕೆ ಹೆಚ್ಚಿತು. ಈಚೆಗೆ ತಯಾರಾದ ಮೀಟರ್‌ಗೇಜ್ ಯಾನೆ ಕಿರು ದಾಡ ಲೈನ್‌ಗಳ ಪೈಕಿ ಬೆಂಗಳೂರು—ಹಿಂದೂಪುರದ ಲೈನಿನಲ್ಲಿ ಮೂಲಧನಕ್ಕೆ ಶೇಕಡ 3·62 ರಂತೆಯೂ ಮೈಸೂರು—ನಂಜನಗೂಡು ಲೈನ್‌ನಲ್ಲಿ 2·81 ರಂತೆಯೂ ನಿವ್ವಳ ಆದಾಯಬಂದದ್ದಲ್ಲದೆ, ಸ್ಟಾಂಡರ್ಡ್ ಗೇಜ್‌ಯಾನೆ ವಿಶಾಲ ವಾದ ರಸ್ತೆಯುಳ್ಳ ಕೋಲಾರದ ಚಿನ್ನದ ಗಣಿಗಳ ಸಣ್ಣ ಲೈನಿನಲ್ಲಿ ಶೇಕಡ 8·72 ರಷ್ಟು ವಿಶೇಷವಾದ ಲಾಭಬಂತು. ಮೊತ್ತದಲ್ಲಿ ನೋಡಿದರೆ ರೈಲ್ವೆಗಳಿಂದ ಬಂದ ನಿವ್ವಳ ಆದಾಯವು ತುಂಬ ತೃಪ್ತಿಕರವಾ ದ್ದೆಂತ ಎಣಿಸಬೇಕು. ಆದರೆ ಸದರ್ನ ಮರಾಟ ರೈಲ್ವೆ ಕಂಟ್ರಾಕ್ಟುಪ್ರಕಾರ ಆಡಳಿತೆ ನಡೆಸಲ್ಪಡುವ ಮೈಸೂರು—ಹರಿಹರದ ಲೈನಿನಿಂದ ಸರಕಾರಕ್ಕೆ 2,45,060 ರೂಪಾಯಿಗಳು ನಷ್ಟ ಉಂಟಾಯಿತು. ಇದಕ್ಕೆರಡು ಕಾರಣಗಳುಂಟು ಯಾವವೆಂದರೆ—1ನೇದು, ರೂಪಾಯಿನ ಬೆಲೆ ಕಮ್ಮಿಯಾದ್ದರಿಂದ ಮೂಲಧನಕ್ಕೆ ಶೇಕಡ 5·06ರಂತೆ ಬಡ್ಡಿ ದರ ಹೆಚ್ಚಿದ್ದು; 2ನೇದು, ಮೂಲಧನಕ್ಕೆ ಶೇಕಡ 1·14ರಷ್ಟು ಆಗುವ ಕಂಪೆನಿಯ ಚತುರ್ಥಾಂಶದ ಆದಾಯ.

ಈಗ ನಿಮ್ಮ ಮುಂದೆ ಇರುವ ಚಾಲ್ತಿಸಾಲಿನ ಕಚ್ಚಾ *ಬಡ್ಜೆಟ್ಟಿನಲ್ಲಿ 1,71,02,000 ರೂಪಾಯಿನ ಖರ್ಚು ದಾಖಲ್ಮಾಡಲ್ಪಟ್ಟಿದೆ. ಆದರೆ ಮೇಲೆ ನಿಮಗೆ ವಿವರಿಸಿರುವಂತೆ—(1) ಉದ್ದೇಶಿಸಿರುವ ಸ್ಟರ್ಲಿಂಗ್ ಸಿಂಕಿಂಗ್ ಫಂಡು, (2) ಚಾಲ್ತಿ ಹುಟ್ಟುವಳಿಗೆ ಸಹಜವಾಗಿ ಖರ್ಚು ಹಾಕಕೂಡದ ಬೀರೂರು—ಶಿವಮೊಗ್ಗಾ ಲೈನು ತಯಾ ರ್‍ಮಾಡುವುದಕ್ಕೆ ಬೇಕಾಗುವ ಲಾಗವಡು, (3) ದೌಲತ್ತನ್ನು ಬಿಟ್ಟುಕೊಟ್ಟಂದಿನಿಂದ 15 ವರ್ಷಗಳವರಿವಿಗೂ ಬ್ರಿಟಿಷ್ ಗವರ್ನ್ಮೆಂಟಿನವರು ಔದಾರ್ಯದಿಂದ ವಸೂಲ್ಮಾಡದೆ ನಿಲ್ಲಿಸಿ ಇದ್ದು ಚಾಲತಿ ಸಾಲ್‌ಲಾಗಾಯಿತು ಕೊಡ ಬೇಕಾಗಿ ಬಂದಿರುವ ಹೆಚ್ಚಾದ ಪಗದಿಗೆ ಬೇಕಾಗುವ ಮೊಬಲಗು ಇವುಗಳನ್ನ ತಾಜಾ ಬಡ್ಜೆಟ್ಟಿನಲ್ಲಿ ಗಣ ನೆಗೆ ತೆಗದುಕೊಳ್ಳಬೇಕಾಗಿ ಬಂದೀತೆಂಬುವದನ್ನ ನಿಮಗೆ ತಿಳಿಸುವದು ಯುಕ್ತವಾಗಿರುತ್ತೆ.

ಭೂವ್ಯವಸಾಯದ ಬ್ಯಾಂಕುಗಳು.—ಹೋದವರ್ಷದ ಉಪನ್ಯಾಸದಲ್ಲಿ ನಿಮಗೆ ತಿಳಿಸಿದಂತೆ, ಭೂವ್ಯವಸಾಯಕ್ಕೆ ಸಹಾಯಕವಾದ ಬ್ಯಾಂಕುಗಳನ್ನು ಉಂಟುಮಾಡಿಕೊಳ್ಳುವುದಕ್ಕೆ ತಕ್ಕ ಕರಾರು ಮತ್ತು ನಿಬಂಧನೆಗಳ ನಮೂನೆಗಳನ್ನು ಪ್ರಚುರಪಡಿಸಲಾಯಿತು. ಇಂಥಾ ಬ್ಯಾಂಕುಗಳ ಪ್ರಯೋಜನವನ್ನು ಜನರು ಚೆನ್ನಾಗಿ ತಿಳಿದುಕೊಳ್ಳುತಿದಾರೆಂದು ವ್ಯಕ್ತಪಟ್ಟಿದೆ. ಈಗ ಸರ್ಕಾರದಿಂದ ಒಟ್ಟು ರೂಪಾಯಿ 2,19,000 ಸಾಲವಾಗಿ ಪಡೆದು ಕೆಲಸ ನಡಿಸುತಿರುವ 14 ಬ್ಯಾಂಕುಗಳಿವೆ. ಇನ್ನೂ 14 ಹೊಸ ಬ್ಯಾಂಕುಗಳನ್ನು ಸ್ಥಾಪಿಸಬೇಕೆಂಬ ಪ್ರಯತ್ನ ನಡೆಯುತಲಿರುವದಲ್ಲದೆ ಇವಕ್ಕೋಸ್ಕರ ಸರ್ಕಾರದಿಂದ 9,65,000 ರೂಪಾಯಿಯನ್ನು ಸಾಲವಾಗಿ ಕೇಳಿಕೊಂಡಿದಾರೆ. ಇವು ಸ್ಥಿರವಾಗಿ ನಿಂತು ದಿನೇದಿನೇ ಅಭಿವೃದ್ಧಿಯಾಗತಕ್ಕದ್ದು ಪ್ರಜೆಗಳಿಗೂ ಸರ್ಕಾರ ಕ್ಕೂ ಕೂಡ ಅತ್ಯಂತಾವಶ್ಯಕವಾಗಿರುವದರಿಂದ ಈ ಆಡಳಿತವನ್ನ ಇನ್ನೂ ಬಡಾಯಿಸುವದಕ್ಕೆ ಮುಂಚಿತವಾಗಿ ಇದರ ಮೇಲ್ವಿಚಾರಣೆಯ ಬಗ್ಗೆ ತಕ್ಕ ಬೇರೆ ಶಿಬ್ಬಂದಿಯನ್ನು ನೇಮಿಸುವ ವಿಷಯ ಆಲೋಚನೆಯಲ್ಲಿದೆ.

ಸರ್ಕಾರದ ಲೈಫ್ ಇನ್ಷ್ಯೂರೆನ್ಸ್.—ಈಗ ಜಾರಿಯಲ್ಲಿರುವ ಇನ್ಷ್ಯೂರೆನ್ಸ್ ಪತ್ರಗಳು 1645. ಇವುಗಳಿ ಗೋಸ್ಕರ ಸರ್ಕಾರದಿಂದ ಮುಂದೆ ತೆರಬೇಕಾಗುವ ಮೊತ್ತ ರೂಪಾಯಿ 15,29,986–4–0. ಈಗ ಸರ್ಕಾರಕ್ಕೆ ಇವಕ್ಕೋಸ್ಕರ ತಿಂಗಳಿಗೆ ರೂಪಾಯಿ 6,056–8–0 ವಸೂಲಾಗುತಲಿದೆ. ಈ ವರ್ಷದ ಆಖೈರಿನವರಿಗೆ 26,149 ರೂ. ಬೆಲೆಯುಳ್ಳ 21 ಪತ್ರಗಳ ಬಾಬತು ಹಣಗಳು ಪಾವತಿಯಾಗಿವೆ. ಈರೀತಿ ಕೊಡಲ್ಪಟ್ಟ ಹಣ ಮತ್ತು ಶಿಬ್ಬಂದಿ, ಸಾದಿಲ್ವಾರ್ ಖರ್ಚುಗಳೂ ಇವನ್ನೆಲ್ಲಾ ಕಳೆದು, ಈ ಇನ್ಷ್ಯೂರೆನ್ಸ್ ಫಂಡಿನ ಬಾಬತು ಸಾಲಾಖೈರಿಗೆ ಉಳಿದ ಶಿಲ್ಕು ರೂಪಾಯಿ 166,632. ಹೀಗೆ ಮಾಡಿರುವ ಏರ್ಪಾಡಿನ ಲಾಭ ನಷ್ಟದ ವಿಷಯವನ್ನು ನಿರ್ಧರಿಸಲು ಇಷ್ಟು ಶೀಘ್ರ ಸಾಧ್ಯವಿಲ್ಲ. ಇತರ ಸ್ಥಳಗಳಲ್ಲಿ ಸರಿಯಾದುದೆಂದು ಅನು ಭವದಿಂದ ನಿರ್ಧರಿಸಿರುವ ಮಾರ್ಗದಲ್ಲಿ ಇದರ ಆಡಳಿತಗಳನ್ನು ಇದುವರಿವಿಗೂ ನಡಿಸುತಲಿದೆ. ಕ್ಷಿಪ್ರದಲ್ಲಿ "ಆಕ್ಚುಯರಿ" ಯಾನೆ ಈ ವಿಷಯವನ್ನ ತಿಳಿದವರ ಮೂಲಕ ಈ ಆಡಳಿತದ ಪರಿಶೀಲನೆಯನ್ನು ಮಾಡಿಸುವದು ಅವಶ್ಯಕವಾಗುವದು. ಆದರೆ ಇದು ಪ್ರಥಮದಲ್ಲಿ ಲಾಭನಷ್ಟಗಳ ಯೋಚನೆಯಿಂದ ಮಾಡಿದ ಏರ್ಪಾಡ

*ಇದನ್ನ ಅಪೆಂಡಿಕ್ಸ್‌ನಲ್ಲಿ ನಮೂದಿಸಿರುತ್ತೆ.

ಲ್ಲವೆಂಬದನ್ನು ಮತ್ತು ಪೂರ್ವದ ಆಳಿದ ಮಹಾಸ್ವಾಮಿಯವರು ಸರ್ಕಾರದ ಉದ್ಯೋಗಸ್ಥರಲ್ಲಿ ಸಣ್ಣ ಕೆಲಸಗಳಲ್ಲಿರುವವರಿಗೆ ಜಾರಿಯಲ್ಲಿರುವ ನಿಬಂಧನೆಗಳಮೇರೆಗೆ ಸಲ್ಲತಕ್ಕ ಪೆನ್ಷನ ಗ್ರಾಟ್ಯೂಟಿಗಳಲ್ಲದೆ, ಇನ್ನೂ ಹೆಚ್ಚಾದ ಉಪಕಾರವನ್ನು ಮಾಡಬೇಕೆಂಬ ಕೃಪಾಪೂರ್ವಕವಾದ ಕುತೂಹಲದಿಂದುಂಟಾದದ್ದು ಎಂಬದನ್ನು ಸಹಾ ಸಾರ್ವದಾ ಜ್ಞಾಪಕದಲ್ಲಿ ಇಟ್ಟುಕೊಂಡಿರತಕ್ಕದ್ದಾಗಿದೆ.

ಲೋಕಲ್ ಮತ್ತು ಮ್ಯುನಿಸಿಪಲ್ ಫಂಡ.—ಸ್ಥಳೀಯ್ಯ ಕೆಲಸಗಳಿಗೋಸ್ಕರ ವಸೂಲಾದ ಹಣ ಸ್ವಲ್ಪಕಮ್ಮಿಯಾಗಿ ವಿಶಿಷ್ಟವು ಜಮೀನ ಕಂದಾಯ, ಸಾಯರ್, ಆಬ್ಕಾರಿ ಮತ್ತು ಚಿಲ್ಲರೆಬಾಬು ರೆವಿನ್ಯೂ, ಇವುಗಳಮೇಲೆ ರೂಪಾಯಿಗೆ ಒಂದಾಣೆಯಂತೆ ತೆರಿಗೆಯಿಂದ ಬಂದದ್ದು. ಜಮೀನ ಕಂದಾಯ ಮತ್ತು ಸಾಯರ್ ಈ ಎರಡು ಬಾಬುಗಳಮೇಲೆ ಸದರಿ ಸೆಸ್ಸು ಪ್ರತ್ಯೇಕವಾಗಿ ವಸೂಲಾಗುವ ಹೆಚ್ಚು ತೆರಿಗೆಯಾಗಿದೆ. ಉಳಿದ ಎಕ್ಸೈಸ್ ಮತ್ತು ಮಿಸಲೇನಿಯಸ್ ಈ ಬಾಬುಗಳಿಂದ ಸರ್ಕಾರಕ್ಕೆ ಬರತಕ್ಕ ಇರ್ಬ ಹುಟ್ಟುವಳಿಯಲ್ಲಿ ಸ್ಥಳೀಯ್ಯ ಪ್ರಯೋಜನಾರ್ಥವಾಗಿ, 17ರಲ್ಲೊಂದಂಶವನ್ನು ಕೊಟ್ಟಂತೆ ಆಗುವುದು. 1895—96ನೇ ಇಸವಿಯಲ್ಲಿ ಒಟ್ಟು ಈ ಬಾಬಿಗೆ ವಸೂಲಾದ ಮೊಬಲಗು :—

				ರೂ.
ಜಮೀನ ಕಂದಾಯದ ಸಂಬಂಧದ್ದು	..	..	..	6,58,048
ಸಾಯರ ಸಂಬಂಧದ್ದು	..	..	..	26,842
ಆಬ್ಕಾರೀ ಸಂಬಂಧದ್ದು	...	..	..	1,97,440
ಚಿಲ್ಲರೆ ಬಾಬಿನ ಸಂಬಂಧದ್ದು	..	..	..	10,534
			ಒಟ್ಟು....	8,92,864

ಈ ಒಟ್ಟು ಮೊಬಲಗಿನಲ್ಲಿ ಮಾಮೂಲ್‌ಪ್ರಕಾರ ಶೇಕಡಾ 24ರಷ್ಟು ಗ್ರಾಮಗಳಲ್ಲಿನ ವಿದ್ಯಾಭ್ಯಾಸಕ್ಕೋಸ್ಕರ ಕೊಡಲ್ಪಟ್ಟಿತು. ಜಮೀನ ಕಂದಾಯದಮೇಲೂ ಸಾಯರಿನ ಬಹುಭಾಗ ಉತ್ಪತ್ತಿಯಾಗುವ ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಸಾಯರ ಹುಟ್ಟುವಳಿಮೇಲೂ ವಸೂಲಾದ ಲೋಕಲ್ ಸೆಸ್ಸಿನ ಪೈಕಿ ಉಳಿದ ಸೇಕಡ 76ರಷ್ಟು ಮೊಬಲಗನ್ನು, ಆಯಾ ಲೋಕಲ್‌ಫಂಡ ಬೋರ್ಡಿನವರು ಖರ್ಚುಮಾಡಿಕೊಳ್ಳತಕ್ಕಬಗ್ಗೆ ಅವರ ಸುಪರ್ದಿಗೆ ಕೊಟ್ಟದ್ದಾಯಿತು. ಆಬಕಾರಿ ಮತ್ತು ಚಿಲ್ಲರೆ ಬಾಬು ಮತ್ತು ಶಿವಮೊಗ್ಗಾ ಮತ್ತು ಕಡೂರು ವಿನಹ ನಿಂತ ಡಿಸ್ಟ್ರಿಕ್ಟುಗಳ ಸಾಯರ್ ಇವುಗಳ ಮೇಲಿನ ಸೆಸ್ ಪೈಕಿ ಸೇಕಡ 76ರಷ್ಟು ಆಯಾ ಲೋಕಲ್‌ಬೋರ್ಡುಗಳ ಶಕ್ತಿಗೆಮೀರಿದ ವಿಶೇಷವಾಗಿ ಸ್ಥಳೀಯ್ಯ ಪ್ರಜಾಪ್ರಯೋಜಕವಾದ ಕಾರ್ಯಗಳಿಗಾಗಿ ವಿನಿಯೋಗಿಸಲು 'ಲೋಕಲ್ ಫಂಡ್ಸ ಜನರಲ್' ಎಂಬ ಲೆಖ್ಖಕ್ಕೆ ದಾಖಲಾಯಿತು.

ಮೇಲೆ ವಿವರಿಸಿರುವಂತೆ 1 ಆಣೆಯ ಸೆಸ್ಸಿನ ಹುಟ್ಟುವಳಿಯ ಶೇಕಡಾ 76ರಿಂದಲೂ ಇತರ ಚಿಲ್ಲರೆ ಬಾಬುಗಳಿಂದಲೂ ಲೋಕಲ್ ಬೋರ್ಡಿನವರ ವಶಕ್ಕೆ ಬಂದ ಮೊಬಲಗು ರೂಪಾಯಿ 6,51,649. ಇದಕ್ಕೆ ಖರ್ಚಿನ ತಪ್ಸೀಲು :—

				ರೂ.
ರಸ್ತೆಗಳು ಮತ್ತು ಇತರ ಕಾಮಗಾರಿಗಳಿಗೆ	..	..	..	.. 5,01,761
ಆರೋಗ್ಯಾಭಿವೃದ್ಧಿ, ವೈದ್ಯ ಮುಂತಾದ್ದು.	..	..	..	.. 1,33,159
			ಒಟ್ಟು....	6,34,920

'ಲೋಕಲ್‌ಫಂಡ್ಸ ಜನರಲ್' ಲೆಖ್ಖಕ್ಕೆ ಜಮೆಬಂದ ಮೊಬಲಗು ರೂ. 1,71,603ನ ಪೈಕಿ ಖರ್ಚಿಗೆ ತಪ್ಸೀಲು:—

			ರೂ.
1. ಡಿಸ್ಟ್ರಿಕ್ಟುಗಳ ಲೋಕಲ್ ಫಂಡ್ಸಗೆಕೊಟ್ಟ ಸಹಾಯದ್ರವ್ಯ	..	..	48,272
2. ಕುಡಿಯುವ ನೀರಿನ ಭಾವಿಗಳು ಮತ್ತು ಜನೋಪಯುಕ್ತವಾದ ಚಿಲ್ಲರೆ ಕಾಮಗಾರಿಗಳು ವಗೈರೆ		..	33,334
3. ಶಿಲ್ಪವಿದ್ಯಾಶಾಲೆ, ಕರ್ನಾಟಕ ಮತ್ತು ಯುನಾನಿ ವೈದ್ಯಶಾಲೆಗಳು	...	..	11,435
		ಒಟ್ಟು	...93,041

ಮ್ಯುನಿಸಿಪಲ್ ಫಂಡ—ಬೆಂಗಳೂರು ಮೈಸೂರು ಈ ಎರಡು ಮುಖ್ಯಷಹರು ಮ್ಯುನಿಸಿಪಾಲಿಟಿಗಳಲ್ಲಿ ಒಟ್ಟು ರೂಪಾಯಿ 2,78,588 ಹುಟ್ಟುವಳಿ ಆಯಿತು. ಸದರಿ ಷಹರುಗಳ ಪ್ರಜಾಸಂಖ್ಯೆ ಇಸಂ 1ಕ್ಕೆ ಸುಮಾರು 1 ರೂ. 12ಆ. 10½ಪೈ. ಆಗುತ್ತೆ ; ಉಳಿದ 106 ಮ್ಯುನಿಸಿಪಾಲಿಟಿಗಳಿಂದ ಇಸಂ 1ಕ್ಕೆ 14 ಆ. 8 ಪೈನ ದರವಾಗುವಂತೆ ಒಟ್ಟು ರೂಪಾಯಿ 3,55,954 ವಸೂಲಾಯಿತು.

ರಾಜ್ಯದಲ್ಲಿರುವ ಎಲ್ಲಾ ಮ್ಯುನಿಸಿಪಾಲಿಟಿಗಳಿಂದಲೂ ಸೇರಿ ರೂ. 6,10,230 ಖರ್ಚಾಯಿತು. ಇದರ ತಪ್ಸೀಲು :—

		ರೂ.		
1.	ಪಬ್ಲಿಕ್ ವರ್ಕ್ಸಿಗೆ	2,30,798	ಅಂದರೆ ಶೇಕಡ	37·82
2.	ಗ್ರಾಮ ಪಾಕೀಜು ಮುಂತಾದ ಕೆಲಸಕ್ಕೆ	1,20,119	„	19·68
3.	ವೈದ್ಯದ ಬಾಬಿಗೆ	39,945	„	6.55
4.	ವಿದ್ಯಾಭ್ಯಾಸಕ್ಕೆ	35,770	„	5·86
5.	ಚಿಲ್ಲರೆ ಖರ್ಚಿಗೆ	1,83,598	„	30·09
	ಒಟ್ಟು....	6,10,230		100

ಪಬ್ಲಿಕ್ ವರ್ಕ್ಸ್ ಅಂದರೆ ಮರಾಮತ್ ಕೆಲಸಗಳು—ಈ ಸಾಲಿನಲ್ಲಿ ನಡಿಸಿದ ಮರಾಮತ್ ಇಲಾಖೆಯ ಆಡಳಿತಗಳನ್ನು ಈಗ ವಿವರಿಸಲಾಗುತ್ತದೆ. ರೈಲ್ವೇ ವಿನಾ ಇತರ ಸಮಸ್ತ ಕಾಮಗಾರಿಗಳಿಗೂ ಹಿಂದಣಸಾಲಿನಲ್ಲಿ 34,01,894 ರೂಪಾಯಿಗಳು ಆದದ್ದು ಈ ಸಂವತ್ಸರದಲ್ಲಿ 40,30,021 ರೂಪಾಯಿಗಳಷ್ಟು ವಿಶೇಷವಾದ ಖರ್ಚಾಗಿದೆ. ಮೈಸೂರು ಮತ್ತು ಬೆಂಗಳೂರು ಈಷಹರುಗಳ ನೀರು ಸರಬರಾಯಿಯ ಕಾಮಗಾರಿಗಳಿಗೆ ಬಹಳ ಹೆಚ್ಚಾದ ಖರ್ಚಾದ್ದರಿಂದ ಮುಖ್ಯವಾಗಿ ಈ ವರ್ಷದ ಒಟ್ಟು ಖರ್ಚು ಇಷ್ಟು ಜಾಸ್ತಿಯಾಯಿತು. ಇವಕ್ಕೆ ಬೇಕಾದ ಯಂತ್ರಗಳು ನಲ್ಲಿಗಳು ಮುಂತಾದ ಸಾಮಗ್ರಿಗಳನ್ನು ತರಿಸುವುದಕ್ಕೆ ಯೂರೋಪಿನಿಂದ ಅವು ಹಡಗುಗಳಲ್ಲಿ ರಫ್ತಾದ ಕೂಡಲೇ ನಗದಾಗಿ ಹಣ ಕೊಡಲ್ಪಡಬೇಕಾಗಿ, ಅವಕ್ಕೋಸ್ಕರ ಬಹಳ ಹೆಚ್ಚಾದ ಖರ್ಚು ಬಿತ್ತು. ಆದ್ದರಿಂದ ಈ ಕಾಮಗಾರಿಗಳ ಒಟ್ಟು ಖರ್ಚಿನ ಪೈಕಿ ಹೆಚ್ಚಾದ ಅಂಶವು ಈ ವರ್ಷದ ಲೆಖ್ಖಕ್ಕೆ ಬಂದಿದೆ.

ಮೇಲೆಕಂಡ ಖರ್ಚು ಈ ಕೆಳಗೆ ಹೇಳಿರುವ ಬಾಬುಗಳಿಂದ ಕೊಡಲ್ಪಟ್ಟಿತು :—

	ರೂ.
ಜನರಲ್ ರೆವಿನ್ಯೂ ಯಾನೆ ಖಾಸ್ ಸರಕಾರಿ ಹಣದಿಂದ	32,33,502
ಡಿಸ್ಟ್ರಿಕ್ಟ್ ಫಂಡಿನಿಂದ	4,32,536
ಇರಿಗೇಷನ್ ಸೆಸ್ ಫಂಡಿನಿಂದ	3,00,955
ಅರಮನೇ ಮತ್ತು ಇತರ ಇಲಾಖೆಗಳಿಂದ	63,028
ಜುಮ್ಲಾ....	40,30,021

ಹೊಸಕಾಮಗಾರಿ ಮತ್ತು ರಿಪೇರಿ ಕೆಲಸಗಳು ಇವೆರಡಕ್ಕೂ ಆದ ಖರ್ಚನ್ನು ಬಾಬ್ವಾರಾಗಿ ಕೆಳಗೆ ವಿವರಿಸಿದೆ :—

	ರೂ.
ಹೆಸರಘಟ್ಟದಿಂದ ಬೆಂಗಳೂರು ಪಟ್ಟಣಕ್ಕೆ ನೀರು ಸರಬರಾಯಿಬಗ್ಯೆ ಚಾಮರಾಜ ವಾಟರ್ ವರ್ಕ್ಸಿಗೆ	7,13,550
ಕಾವೇರಿ ನದಿಯಿಂದ ಮೈಸೂರು ಪಟ್ಟಣಕ್ಕೆ ನೀರು ಸರಬರಾಯಿಬಗ್ಯೆ ವಾಣೀವಿಲಾಸದ ವಾಟರ್ ವರ್ಕ್ಸಿಗೆ	2,52,961
ಮಿಲಿಟರಿ ಇಲಾಖೆ ಕಟ್ಟಡಗಳ ಬಗ್ಯೆ	75,816
ಸಿವಿಲ್ ಕಟ್ಟಡಗಳ ಬಗ್ಯೆ	2,52,316
ರಸ್ತೆಗಳು	8,78,034
ಜನೋಪಯುಕ್ತವಾದ ಇತರ ಚಿಲ್ಲರೆ ಕಾಮಗಾರಿಗಳು	43,746
ನೀರಾವರಿ ಕಾಮಗಾರಿಗಳು	10,40,218
ಅಹನೀಸರಂಜಾಂ	17,040
ಸಿಬ್ಬಂದಿ	5,86,001
ಸ್ಯಾನಿಟರಿ ವರ್ಕ್ಸ್	1,12,020
ಸಸ್ಪೆನ್ಸ್ ಯಾನೆ ಅಮಾನತ್ ಲೆಖ್ಖದ ಬಗೆ	—4,709
ಜುಮ್ಲಾ....	39,66,993
ಅರಮನೆ ಮತ್ತು ಇತರ ಇಲಾಖೆಗಳಿಗೆ	63,028
ಒಟ್ಟು ಜುಮ್ಲಾ......	40,30,021

ಈ ಸಂವತ್ಸರದಲ್ಲಿ ನಡೆದ ಎಲ್ಲಾತರಹೆ ಕಾಮಗಾರಿಗಳ ವಿಷಯವಾಗಿ ಕೆಲವು ತಪ್ಸೀಲುಗಳನ್ನು ಕೆಳಗೆ ವಿವರಿಸಲಾಗುತ್ತದೆ :—

ಬೆಂಗಳೂರು ಮತ್ತು ಮೈಸೂರು ಷಹರುಗಳಿಗೆ ನೀರು ಸರಬರಾಯಿ.—ಚಾಮರಾಜಾಂಕಿತ ಮತ್ತು ವಾಣೀವಿಲಾಸಾಂಕಿತ ನೀರಿನ ಕಾಮುಗಾರಿಗಳು ಈಗ ಮುಗಿದಂತೆಯೇ ಆಯಿತೆನ್ನುವದನ್ನೂ ನಲ್ಲಿಗಳನ್ನಿಡುವುದೂ ಕಾರಂಜಿಗಳನ್ನು ಕಟ್ಟುವುದೂ ಆದಹಾಗೆಲ್ಲ ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ನೀರಿನ ಸರಬರಾಯಾಗುತ್ತಾ ಬರುತ್ತಿಂಬುವದನ್ನೂ ನಿಮಗೆ ತಿಳಿಸಲು ಬಹಳ ಸಂತೋಷವಾಗುತ್ತೆ. ನಮ್ಮ ಪೂರ್ವದ ಆಳಿದ ಮಹಾಸ್ವಾಮಿಯವರು ಮಾಡಿದ ಈ ಮಹದುಪಕಾರದಿಂದ ಪ್ರಜೆಗಳ ಕ್ಷೇಮಾರೋಗ್ಯಸಂಪದಗಳು ಬಹಳವಾಗಿ ಅಭಿವೃದ್ಧಿಯನ್ನು ಹೊಂದುವವೆಂಬುವದಕ್ಕೆ ಸಂದೇಹವಿಲ್ಲ. ಇವೆರಡಕ್ಕೂ ಕೂಡ 20 ಲಕ್ಷ ರೂಪಾಯಿಗಳು ಖರ್ಚಾಗಬಹುದಾಗಿ ಅಂದಾಜಾಗಿದೆ; ಇದರಲ್ಲಿ ಸುಮಾರು ಅರ್ಧ ಖರ್ಚು ಗತಸಾಲಿನಲ್ಲಿ ಆಯಿತು.

ಮಿಲಿಟೆರಿ ಕಟ್ಟಡಗಳು.—ಮಿಲಿಟೆರಿ ಕಾಮುಗಾರಿಗಳ ಬಾಬಿನಲ್ಲಿ, ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗೆ ಈ ಸ್ಥಳಗಳಲ್ಲಿ ಬಾರ್ ಫೌಜುಗಳಿಗೆ ಹೊಸ ಲೈನುಗಳು ಕಟ್ಟಲ್ಪಟ್ಟವು. ಆದರೆ ಸಂವತ್ಸರದ ಒಟ್ಟು ಖರ್ಚು ಪೈಕಿ ಸುಮಾರು ಅರ್ಧದಷ್ಟು ಹಣ ಇಂಪೀರಿಯಲ್ ಸರ್ವಿಸ್ ಫೌಜಿನವರಿಗೆ ಊರಿನಿಂದ ಹೊರಗೆ ಸ್ವಲ್ಪ ದೂರದಲ್ಲಿ ತಕ್ಕ ದಂಡಿನ ಪಾಳೆಯವನ್ನು (ಬ್ಯಾರಕ್ಸನ್ನು) ಕಟ್ಟುವುದಕ್ಕೆ ಬೇಕಾದ ಜಮೀನನ್ನು ಕೊಂಡುಕೊಳ್ಳುವುದಕ್ಕೋಸ್ಕರ ವಿನಿಯೋಗಿಸಲ್ಪಟ್ಟಿತು. ಸರಿಯಾದ ತಯಾರಿ ಮತ್ತು ಹತೋಟಿಗೋಸ್ಕರ ಈ ಉತ್ತಮ ತರಗತಿ ಫೌಜುಗಳನ್ನ ಪಟ್ಟಣದ ಸುತ್ತಾಗಿ ತುಂಬಿರುವ ಪ್ರದೇಶಗಳಿಗೆ ದೂರವಾಗಿ ಇರಿಸತಕ್ಕದ್ದು ಅವಶ್ಯಕವಾಗಿರುತ್ತೆ. ಆದ್ದರಿಂದ ಈಗಿರುವ ಬ್ಯಾರಕ್ಸನ್ನು ಮನ್ನಾಮಾಡಿ ಸರಿಯಾದ ಹೊಸ ಜಾಗದಲ್ಲಿ ಸ್ಥಾಪಿಸುವಂತೆ ನಿಷ್ಕರ್ಷೆಯಾಗಿದೆ. ಸುಮಾರು 4¾ ಲಕ್ಷ ಖರ್ಚು ಹಿಡಿಯಬಹುದಾದ ಹೊಸ ಬ್ಯಾರಕ್ಸ ಬಗ್ಗೆ ಅಂದಾಜು ಮಂಜೂರುಮಾಡಿರುತ್ತೆ. ಈ ಕಾಮುಗಾರಿ ಜರೂರೆಂದು ಇದನ್ನ ಸಾಧ್ಯವಾದಮಟ್ಟಿಗೂ ಜಾಗ್ರತೆಯಾಗಿ ಮುಗಿಸಬೇಕೆಂದು ಉದ್ದೇಶಿಸಿರುತ್ತೆ.

ಸಿವಿಲ್ ಬಿಲ್ಡಿಂಗ್ಸು.—"ಸಿವಿಲ್" ಕಟ್ಟಡಗಳಿಗೆ ಆದ 2,52,316 ರೂಪಾಯಿನ ಖರ್ಚಿನಪೈಕಿ, 1,76,304 ರೂಪಾಯಿ ಬೆಂಗಳೂರಲ್ಲಿ ಜಿಯಲಾಜಿಕಲ್ ಇಲಾಖೆಯ ಲ್ಯಾಬರೆಟರಿ ಎಂಬ ಕಟ್ಟಡ, ಆಳಿದ ಮಹಾಸ್ವಾಮಿಯವರ ಟ್ಯೂಟರವರಿಗೆ ವಾಸಗೃಹ, ಮೂರು ಹೊಸ ತಾಲ್ಲೂಕ್ ಕಚೇರಿಗಳು, ರಿಕಾರ್ಡಿನ ಕೊಠಡಿಗಳು ಮುಂತಾದ ಸರ್ಕಾರಿ ಇಲಾಖೆಗಳ ಹೊಸ ಕಟ್ಟಡಗಳಿಗೆ ಖರ್ಚಾಯಿತು.

ರಸ್ತೆಗಳು.—ರಸ್ತೆಗಳಿಗಾಗಿ 8,78,034. ರೂಪಾಯಿ ಖರ್ಚಾಯಿತು. 5091 ಮೈಲಿಯ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡದ್ದಾಯಿತು. ಇಷ್ಟು ಹೇರಳವಾದ ವಿಸ್ತೀರ್ಣವುಳ್ಳ ಹಳೆ ರಸ್ತೆಗಳಲ್ಲದೆ 102 ಮೈಲಿ ಹೊಸರಸ್ತೆಗಳು ಮತ್ತು ಎಡತೊರೆಯ ಬಳಿಯ ಕಾವೇರಿ ನದಿಗೆ ದೊಡ್ಡ ಸೇತುವೆ ಮತ್ತು ಅನೇಕ ಗ್ರಾವಲ್ ರಸ್ತೆಗಳಿಗೆ ಮೆಟ್ಲಿಂಗ್ ಕಾಮುಗಾರಿ ಸಹ ಮಾಡಲ್ಪಟ್ಟಿತು.

ಎಡತೊರೆಯ ಸೇತುವೆಯುನ್ನು ತೃಪ್ತಿಕರವಾಗಿ ಮುಗಿಸಿ ಉಪಯೋಗಕ್ಕೆ ತಂದದ್ದರಿಂದ ಆ ತಾಲ್ಲೂಕಿನ ಜನರಿಗೆಲ್ಲ ಅತ್ಯಂತ ಸೌಕರ್ಯವೂ ಆಹ್ಲಾದವೂ ಉಂಟಾಗಿರಬೇಕು. ಮೈಸೂರಿಂದ ಹಾಸನಕ್ಕೆ ಸುಲಭವಾಗಿ ಸಂಚರಿಸುವದಕ್ಕೆ ವಿಶೇಷವಾಗಿ ಅಡ್ಡಿಯಾಗಿರುವ ಹೇಮಾವತಿ ನದಿಗೆ ಹೊಳೆ ನರಸೀಪುರದ ಬಳಿಯಲ್ಲಿ ಎಡತೊರೆಯಂತೆ ಸೇತುವೆಯನ್ನು ಕಟ್ಟಿಸಲು ಈ ಚಾಲತಿ ವರ್ಷದಲ್ಲಿ ಪಬ್ಲಿಕ್ ವರ್ಕ್ಸ ಇಲಾಖೆಯವರು ಕೆಲಸ ಷುರುಮಾಡುವುದಕ್ಕೆ ಆಗಬಹುದೆಂದು ಕೋರಲ್ಪಡುತ್ತೆ. ಚಾಲತಿ ಸಾಲಿನಲ್ಲಿ ಷುರುಮಾಡಬೇಕೆಂದಿರುವ ಇನ್ನೊಂದು ದೊಡ್ಡ ಸೇತುವೆಯು ತಡಸದ ಬಳಿ ಭದ್ರಾನದಿಗೆ ಕಟ್ಟಬೇಕಾದ ಸೇತುವೆಯಾಗಿರುತ್ತೆ. ರೈಲ್ವೆಯಿಂದಲೂ ಇತರ ದೊಡ್ಡರಸ್ತೆಗಳಿಂದಲೂ ಕೊಪ್ಪದ ಬಳಿಯಣ ಕಾಫಿ ಪ್ರದೇಶಗಳಿಗೆ ಹೋಗಲು ಸೌಲಭ್ಯ ವಿಶೇಷವಾಗಿ ಈ ಸೇತುವೆಯಿಂದ ಉಂಟಾದೀತು.

ಇರಿಗೇಷನ.—ನೀರಾವರಿ ಕಾಮುಗಾರಿಗಳಿಗೆ ಆದ ಖರ್ಚು 10,40,218 ರೂಪಾಯಿ ಇದರಲ್ಲಿ 7,91,877 ರೂಪಾಯಿ ಜನರಲ್ ರೆವಿನ್ಯೂ ಅಂದರೆ ಖಾಸ ಸರ್ಕಾರೀ ಹಣಕ್ಕೂ, 2,48,341 ರೂಪಾಯಿ ಇರಿಗೇಷನ ಸೆಸ್ ಫಂಡಿಗೂ ಖರ್ಚುಬಿತ್ತು. ಒಟ್ಟಿನಲ್ಲಿ ಕಾಮುಗಾರಿ ತೃಪ್ತಿಕರವಾಗಿ ಈಗ ನಡದ್ದಲ್ಲದೆ ಕೆಲವು ಸಂವತ್ಸರಗಳಿಂದ ನಡೆಯುತ್ತಿದ್ದ ಅನೇಕ ಕಾಮುಗಾರಿಗಳು ಈಗ ಪೂರೈಸಿರುತ್ತವೆ.

ಬೆಂಗಳೂರು ಡಿವಿಜನಲ್ಲಿ 7 ದೊಡ್ಡಕೆರೆಗಳನ್ನು ದುರಸ್ತುಮಾಡಿ ಬಡಾಯಿಸುವ ಕಾಮುಗಾರಿನಡೆಯಿತು; ಅವುಗಳಲ್ಲಿ 6 ಪೂರೈಸಲ್ಪಟ್ಟವು.

ತುಮಕೂರಿನಲ್ಲಿ, 1 ಸಣ್ಣ ಅಣೆಕಟ್ಟು, 5 ದೊಡ್ಡ ಕೆರೆಗಳ ಬಡಾವಣೆ, ಮಾವತೂರ ಬಳಿಯಲ್ಲಿ ಗರುಡಾಚಲನದಿಗೆ ಅಡ್ಡಲಾಗಿ ಒಂದು ದೊಡ್ಡ ಹೊಸಕೆರೆಯ ಕಾಮಗಾರಿ ಇವು ನಡೆಯುತ್ತಿವೆ. ಬೋರನಕಣಿವೆ ಕೆರೆಯ ಕೆಳಗೆ ಕಾಲುವೆಗಳನ್ನು ಬಡಾಯಿಸಿ, ಅದರಿಂದುಂಟಾಗಬಹುದಾದ ಪೂರ್ಣಪ್ರಯೋಜನವನ್ನು ಹೊಂದುವ ಪ್ರಯತ್ನ ನಡೆಯುತ್ತಿದೆ.

ಚಿತ್ರದುರ್ಗದಲ್ಲಿ, ಉಡವಳ್ಳಿ ಮತ್ತು ಖಾತ್ರಾಳದ ದೊಡ್ಡ ಹೊಸಕೆರೆಗಳ ಕಾಮಗಾರಿಗಳು ಚೆನ್ನಾಗಿ ನಡೆದವು.

ಮೈಸೂರಿನಲ್ಲಿ ಹೊಳೆಸಾಲ್ (ತಲಕಾಡ) ನಾಲೆಯ ಬಡಾವಣೆ, ಮತ್ತು ನಂಜನಗೂಡಿನ ಹುಲ್ಲಹಳ್ಳಿ ಹೊಸನಾಲೆಯ ಕಾಮಗಾರಿ ಇವು ತ್ವರಿತದಿಂದ ನಡಿಸಲ್ಪಟ್ಟವು. ಅವುಗಳ ಕೆಳಗೆ ವಿಶೇಷ ವಿಸ್ತೀರ್ಣವುಳ್ಳ ಜಮೀನು ಈಗಾಗಲೇ ತರೀಸಾಗುವಳಿಗೆ ಬಂದಿದೆ.

ಫ್ರೆಂಚ್ ರಾಕ್ಸ್‌ನಲ್ಲಿ, ಕಲ್ಲಹಳ್ಳಿಯ ನಾಲೆಯ ಬಡಾವಣೆಯೂ 6 ದೊಡ್ಡಕೆರೆಗಳ ಜೀರ್ಣೋದ್ಧಾರದ ಕಾಮಗಾರಿಯೂ ತಕ್ಕಮಟ್ಟಿಗೆ ಚೆನ್ನಾಗಿ ನಡೆಯಿತು.

ಶಿವಮೊಗ್ಗೆಯಲ್ಲಿ, ನಡೆದ ಕಾಮಗಾರಿಗಳ ಪೈಕಿ ಭಾರೀದಾದ ಸೂಳೇಕೆರೆಯ ಕೆಳಗಣ ನಾಲೆಗಳ ಅಭಿವೃದ್ಧಿ ಮತ್ತು ಬಡಾವಣೆ ಮುಖ್ಯವಾದದ್ದಾಗಿರುತ್ತೆ.

ಕಡೂರಿನಲ್ಲಿ, ಕುಕ್ಸಂದ್ರದ ಭಾರಿತಲಾವು, ಬನ್ನೂರು ಅಣೆಕಟ್ಟು ಮತ್ತು ನಾಲೆಗಳೂ ಇವುಗಳ ಕಾಮಗಾರಿ ತೃಪ್ತಿಕರವಾಗಿ ನಡೆಯಿತು.

ಹಾಸನದಲ್ಲಿ, ಶ್ರೀರಾಮದೇವರ ದಕ್ಷಿಣ ನಾಲೆಯ ಬಡಾವಣೆಯು ಬಹಳ ಮಟ್ಟಿಗೆ ಮುಗಿದು ಅದರ ಕೆಳಗಿನ ಜಮೀನುಗಳು ಜಾಗ್ರತೆಯಾಗಿ ಸಾಗುವಳಿಗೆ ತೆಗೆದುಕೊಳ್ಳಲ್ಪಡುತ್ತಲಿವೆ.

ಹೊಸದಾದ ಚಾಮರಾಜನಾಲೆಯ ಆಡಳಿತಗಳನ್ನು ನಿರ್ವಹಿಸುವುದಕ್ಕೆ ಏರ್ಪಾಡಾದ ಅಳಲಕಟ್ಟೆಯ ನಾಲೆಯ ಡಿವಿಜನಲ್ಲಿ, ಕೆಲಸವು ಬಹಳ ಜಾಗ್ರತೆಯಾಗಿ ನಡೆಯಿತು. ಇದರಿಂದ ಸಾಲಿಗ್ರಾಮದ ನಾಲೆಗಳ ಆದಾಯವು ಬಹಳವಾಗಿ ಹೆಚ್ಚಾಗುತ್ತೆ. ಈ ಉತ್ಕೃಷ್ಟವಾದ ಕಾಮಗಾರಿಯು ಈ ವರ್ಷದಲ್ಲಿ ಮುಗಿದು ಹೋಗಬಹುದೆಂದು ನಿರೀಕ್ಷಿಸಿಕೊಂಡಿದೆ. ಆದರೆ ಈಗ ಯೋಚಿಸಿಕೊಂಡಿರುವಂತೆ ಅದನ್ನು ಇನ್ನೂ ಬಡಾಯಿಸುವದಕ್ಕೆ ಸಾಧ್ಯವಾದರೆ ಮುಂದೆಯೂ ಕೆಲಸ ನಡೆಯಬೇಕಾಗುವುದು.

ಸ್ಯಾನಿಟೇಷನ್.—ಸ್ಯಾನಿಟರಿ ಕಾಮಗಾರಿಗಳಿಗೆ ಆದ ಖರ್ಚು 1,12,020 ರೂಪಾಯಿ. ಇದು ಕ್ಲೋಸ್‌ಪೇಟೆ ಚಿಂತಾಮಣಿ, ಹುಣಸೂರು, ಎಡತೊರೆ, ನಂಜನಗೂಡು ಮತ್ತು ಚಿಕ್ಕಮಗಳೂರು ಇವುಗಳ ನೀರಿನ ಸರಬರಾಯಿಗೂ ಚಿತ್ರದುರ್ಗ, ಹರಿಹರ, ದಾವಣಗೆರೆ, ಕಡೂರು ಮತ್ತು ಶಿವಮೊಗ್ಗ ಈಸ್ಥಳಗಳಲ್ಲಿ ನಡೆದ ಮೋರಿ ವಗೈರೆ ಕಾಮಗಾರಿಗಳಿಗೂ ಖರ್ಚಾಯಿತು. ಬೆಂಗಳೂರು ವೆಸ್ಟರ್ನ್ ಎಕ್ಸ್‌ಟೆನ್ಷನ್‌ನಲ್ಲಿ ನಡೆದ ರಸ್ತೆ ಚರಂಡಿ ಕಾಮಗಾರಿಗಳು ಈ ಬಾಬಿನಲ್ಲಿ ಸೇರಿವೆ.

ರೈಲ್ವೆಗಳು.—ಅರಸೀಕೆರೆಯಿಂದ ಹಾಸನ ಮಂಜರಾಬಾದ್ ಮಾರ್ಗವಾಗಿ ಪಶ್ಚಿಮಸಮುದ್ರತೀರದಲ್ಲಿರುವ ಮಂಗಳೂರಿಗೆ ಮಾಡಬೇಕೆಂದಿರುವ ರೈಲ್ವೆಯ ಸರ್ವೆಯನ್ನು ಬ್ರಿಟಿಷ್ ಗವರ್ನಮೆಂಟಿನವರು ಮುಗಿಸಿದಾರೆ. ಘಾಟಿಯ ಪ್ರದೇಶದಲ್ಲಿ ಖರ್ಚು ಬಹಳ ಹೆಚ್ಚಾದೀತೆಂದು ತೋರುತ್ತೆ. ಆದ್ದರಿಂದ ಈ ಲೈನಿನಲ್ಲಿ ಎಷ್ಟುಮಟ್ಟಿಗೆ ಆಮದರಫ್ತು ನಡೆದೀತೆಂಬುವುದನ್ನು ವಿಚಾರಿಸಿ ತಿಳಿಯುವವರಿಗೂ ಈ ರೈಲ್ವೆಯ ವಿಷಯವನ್ನು ಫೈಸಲ್ಮಾಡದೆ ನಿಲ್ಲಿಸಿದೆ. ಈ ಮಧ್ಯದಲ್ಲಿ ಈ ರೈಲ್ವೆ ಪೈಕಿ ಒಂದು ಭಾಗವನ್ನು ಅಂದರೆ ಅರಸೀಕೆರೆಯಿಂದ ಹಾಸನದವರಿಗಿನ ಭಾಗವನ್ನು ಮಾಡಿಸಬೇಕೆಂದು ಸರ್ಕಾರಕ್ಕೆ ಕುತೂಹಲ ಉಂಟಾಗಿ, ಇದನ್ನು ನಡಿಸುವದಕ್ಕೆ ಅಪ್ಪಣೆಕೊಡಬೇಕೆಂದು ಇಂಡ್ಯಾಗವರ್ನಮೆಂಟಿಗೆ ಬರೆಸಿರುತ್ತೆ.

ಬೀರೂರಿನಿಂದ ಶಿವಮೊಗ್ಗೆವರಿಗೆ ರೈಲ್ ಹಾಕುವದನ್ನು ಇಂಡ್ಯಾಗವರ್ನಮೆಂಟಿನವರು ಈಚೆಗೆ ಒಪ್ಪಿದಾರೆ; ಆದ್ದರಿಂದ ಈ ಕಾಮಗಾರಿಬಗ್ಯೆ ಏರ್ಪಾಡುಗಳು ಹಾಲಿ ನಡಿಯುತಲಿವೆ.

ಮುಂದಿನ ಏರ್ಪಾಡು.—ರೈಲ್ವೆಗಳನ್ನು ಮಾಡುವುದೂ, ರಸ್ತೆಗಳನ್ನು ಅಭಿವೃದ್ಧಿಪಡಿಸುವುದೂ, ನೀರಾವರಿ ಕಾಮಗಾರಿಗಳನ್ನು ಬಡಾಯಿಸುವುದೂ, ಮುಖ್ಯವಾದ ನೀರಿನ ಸರಬರಾಯಿ ಮತ್ತು ಆರೋಗ್ಯಾಭಿವೃದ್ಧಿ ಕಾಮಗಾರಿ ನಡೆಸುವುದೂ ಈ ಮುಂತಾದ ಕೆಲಸಗಳ ಮೂಲಕ ದೇಶದ ಅಭಿವೃದ್ಧಿಗೋಸ್ಕರ ಹಿಂದಿನ 10—12 ವರ್ಷಗಳಿಂದ ಮಾಡಲ್ಪಡುತ್ತಿದ್ದ ಪ್ರಯತ್ನವು ಗತಸಾಲಿನಲ್ಲಿ ಕಡಿಮೆಯಾಗಲಿಲ್ಲವೆಂಬುವುದು ಮೇಲೆ ಸಂಕ್ಷೇಪವಾಗಿ ಸೂಚಿಸಿದ ಅಂಶಗಳಿಂದ ನಿಮಗೆ ವ್ಯಕ್ತವಾಗುತ್ತೆ. ಮುಂದೆ ಆಯಾ ಕಾಲದಲ್ಲಿ ಸರ್ಕಾರದ ದ್ರವ್ಯೋಪಪತ್ತಿಯು ಎಷ್ಟರಮಟ್ಟಿಗೆ ಅವಕಾಶಕೊಡುವುದೊ ಅಷ್ಟರಮಟ್ಟಿಗೂ ಇದೇರೀತಿಯಲ್ಲಿ ಧಾರಾಳವಾಗಿ ಆಡಳಿತವನ್ನು ನಡೆಸಬೇಕೆಂಬುವ ಅಭಿಪ್ರಾಯವಿರುತ್ತೆ. ಆದರೆ ಪಗದಿಯು ಚಾಲ್ತಿ ಸಾಲಿನಿಂದ

ಕೊಡಬೇಕಾಗುವುದರಿಂದ ಖರ್ಚು ತಗ್ಗಿಸುವ ಮಾರ್ಗವನ್ನು ಆಲೋಚಿಸುವುದರಲ್ಲಿ ಸರ್ಕಾರದ ಇಲಾಖೆಗಳ ಪೈಕಿ ವಿಶೇಷ ಖರ್ಚು ಮಾಡುವ ಇಲಾಖೆಯ ಅಡಳಿತಗಳನ್ನು ಕಡಿಮೆ ಮಾಡಬೇಕಾಗುತ್ತೆಂಬುವ ವಿಷಯ ಸ್ವಭಾವಿಕವಾಗಿ ಪ್ರಥಮತಃ ತೋರಿಬರುತ್ತೆ. ರೈಲ್ವೇವಿನಾ ಇತರ ಮರಹಮ್ಮತ್ ಕಾಮಗಾರಿಗಳಿಗೆ ಸಾಲೀಯಾನಾ ಗತ 5 ಸಂವತ್ಸರಗಳಿಂದ ಕೊಡುತ್ತಿದ್ದ 25 ಲಕ್ಷ ರೂಪಾಯಿಯನ್ನು ಮುಂದಿನ ಸಾಲುಗಳಲ್ಲಿ 15ಕ್ಕೆ ತಗ್ಗಿಸಬೇಕೆಂದು ನಿಶ್ಚೈಸಿರುತ್ತೆ. ಆದರೆ ಈರೀತಿ ಕಡಿಮೆ ಮಾಡೋಣದರಿಂದ ತಡೆಯಕೂಡದ ವಿಶೇಷ ಉಪಯೋಗಕರವಾದ ಅನೇಕ ದೊಡ್ಡ ಕಾಮಗಾರಿಗಳನ್ನು ಬಿಟ್ಟುಬಿಡಬೇಕಾಗಿ ಬಂದೀತಾದ್ದರಿಂದ ಅಂಥಾ ಕಾಮಗಾರಿಗಳಿಗಾಗಿ ಬೇಕಾಗುವ ಹಣವನ್ನು ಕೆಲವು ವರ್ಷಗಳವರಿವಿಗೂ ಸಾಲೀಯಾನಾ ಸ್ಪೆಷಲ್ ಗ್ರಾಂಟ್ ಮೂಲಕ ಒದಗಿಸುವುದು ಸರ್ಕಾರದವರ ಅಭಿಪ್ರಾಯವಾಗಿರುತ್ತೆ. ಈ ಸರಕಾರಿ ಹುಟ್ಟುವಳಿಯಿಂದ ಈ ವರುಷದಲ್ಲಿ ಮರಹಮ್ಮತ್ ಕಾಮಗಾರಿಗಳಿಗೆ ಕೊಡುವ ಮೊಬಲಗನ್ನು "ಸಾಮಾನ್ಯವಾದ ಖರ್ಚು" "ವಿಶೇಷವಾದ ಖರ್ಚು" ಎಂದು ಎರಡುವಿಧವಾಗಿ ವಿಂಗಡಿಸಿರುವುದಕ್ಕೆ ಇದೇ ಕಾರಣ.

ಭೂಶೋಧನಶಾಸ್ತ್ರದ ಇಲಾಖೆ.—ಸಂಚಾರಮೂಲಕವಾಗಿ ಶೋಧನೆಯ ಕೆಲಸವನ್ನು ಈ ಇಲಾಖೆಯವರು ಈ ವರ್ಷ ನಡಿಸಿದ್ದರಲ್ಲಿ, ಈ ರಾಜ್ಯದ ಲೋಹಸಂಪತ್ತಿನ ವಿಷಯವಾಗಿ ನಮಗೆ ಅನೇಕ ಸಂಗತಿಗಳು ನೂತನವಾಗಿ ತಿಳಿದವು. ಇದರ ಕೆಲಸವನ್ನು ಕಲಿತುಕೊಳ್ಳುವುದಕ್ಕೋಸ್ಕರ ನೇಮಕವಾಗಿರುವ ಅಪ್ರೆಂಟಿಸ್ ಜಿಯಾಲಜಿಸ್ಟ್ ಉದ್ಯೋಗಸ್ಥರನ್ನು ಸರಿಯಾಗಿ ತಯಾರ್ಮಾಡುವುದರಲ್ಲಿ ಬಹಳ ಶ್ರದ್ಧೆಯು ತೋರಿಸಲ್ಪಡುತ್ತಿದೆ. ಈ ವರ್ಷದಲ್ಲಿ ಸಂಚಾರದಿಂದ ಸುಮಾರು 500-ಚದುರ ಮೈಲಿಯಷ್ಟು ಪ್ರದೇಶಕ್ಕೆ ಶೋಧನೆಯ ಮೂಲಕ ಮ್ಯಾಪ್ ಅಂದರೆ ನಖಾಸೆ ತಯಾರ್ಮಾಡಲ್ಪಟ್ಟಿರುತ್ತೆ. ವಿಸ್ತಾರವಾದ ಪ್ರದೇಶದಲ್ಲಿ ಲೋಹಸಂಪತ್ತಿನವಿಷಯು ಹೀಗಿರಬಹುದೆಂದು ನಿಶ್ಚಯಿಸಲ್ಪಟ್ಟಿತು. ಚಿನ್ನದ ಗಣಿಗಳ ಅಜಮಾಯಿಷಿಯು ಈ ಇಲಾಖೆಯಲ್ಲಿ ನಡೆದ ಕೆಲಸದಲ್ಲೊಂದು ಮುಖ್ಯಾಂಶವಾಗಿರುತ್ತೆ. ಶೋಧನೆಯಿಂದ ಬಾಬಾಬುಡನ್ ಬೆಟ್ಟಗಳಲ್ಲಿಯೂ ಕಡೂರಿಗೆ ಪಶ್ಚಿಮದಿಕ್ಕಿನಲ್ಲಿರುವ ದೊಡ್ಡ ಬೆಟ್ಟಗಳಲ್ಲಿಯೂ ಧಾರ್ವಾಡಸಿಸ್ಟಮ್‍ನ ಮೇಲ್ಭಾಗದ ಪ್ರದೇಶದ ಗಣಿಗಳಲ್ಲಿ ಕಬ್ಬಿಣವು ವಿಶೇಷವಾಗಿ ದೊರೆಯುತ್ತೆಂದು ತಿಳಿದುಬಂದಿರುತ್ತೆ.

ನ್ಯಾಯವಿಚಾರಣೆ.—ಮದರಾಸ್ ಹೈಕೋರ್ಟಿನಲ್ಲಿ ಜಡ್ಜಿಯವರಾಗಿದ್ದು ಪೆನ್ಷನ್ ತೆಗೆದುಕೊಂಡ ಮಿ|| ಜಸ್ಟಿಸ್ ಜೆ. ಡಬ್ಲ್ಯು ಬೆಸ್ಟ್, ಬ್ಯಾರಿಸ್ಟರ್—ಅಟ್—ಲಾ ಯವರು ಮೈಸೂರು ಚೀಫ್‍ಜಡ್ಜಿಕೆಲಸಕ್ಕೆ ನೇಮಿಸಲ್ಪಟ್ಟು 1895ನೇ ಇಸವಿ ನವಂಬರ್ ತಿಂಗಳಲ್ಲಿ ಸದರಿ ಉದ್ಯೋಗದ ಛಾರ್ಜನ್ನು ಅದುವರಿಗೂ ಕೌನ್ಸಿಲರ್ ಕೆಲಸದೊಂದಿಗೆ ನಿರ್ವಹಿಸುತ್ತಿದ್ದ ರಾಜಧರ್ಮಪ್ರವೀಣ ಮಿ|| ಟಿ. ಆರ್. ಎ. ತಂಬೂಶೆಟ್ಟಿ, ಸಿ. ಐ. ಇ., ಯವರಿಂದ ವಹಿಸಿಕೊಂಡರು.

ಶಿವಮೊಗ್ಗೆಯಲ್ಲಿ ಹಂಗಾಮಿಯಾಗಿಟ್ಟಿದ್ದ ಸಬ್ ಜಡ್ಜಿಯ ಕೋರ್ಟನ್ನು 1895ನೇ ಇಸವಿಯ ಜುಲೈ 1ನೇ ತಾರೀಖಿನಿಂದ ತೆಗೆದು ಹಾಕಿತ್ತು; ಅದನ್ನು ಪುನಃ ಇಡಬೇಕಾಗಿ ಬಂತು. ಮುಖ್ಯ ಕಾಫಿತಾಲ್ಲೂಕುಗಳಾದ ಮಂಜರಾಬಾದ್ ಬೇಲೂರ್ ಇವುಗಳಮೇಲೆ ಅಧಿಕಾರವನ್ನು ಕೊಟ್ಟು ಒಬ್ಬ ಯೂರೋಪಿಯನ್ ಮೇಜಿಸ್ಟ್ರೇಟರನ್ನು ಸಕಲೇಶಪುರದಲ್ಲಿರುವಂತೆ ನೇಮಿಸಿರುತ್ತೆ.

ಈ ದೇಶದ ಸಿವಿಲ್ ವ್ಯಾಜ್ಯಗಳು ಹಿಂದಿನ ವರ್ಷಕ್ಕಿಂತ ಶೇಕಡಾ 11·72 ರಷ್ಟು ಜಾಸ್ತಿಯಾದವು. ಕ್ರಮವಾದ ದಾವೆಗಳು ಚಿಲ್ಲರೆ ವ್ಯಾಜ್ಯಗಳೂ ಇವೆರಡೂ ಸೇರಿ 34,620 ಇದ್ದದ್ದು 38,678 ಆದವು, ಇವುಗಳ ಬೆಲೆಯು 21⅓ ಲಕ್ಷ ಇದ್ದದ್ದು 32⅓ ಲಕ್ಷವಾಯಿತು.

ರಿಪೋರ್ಟಾದ ಅಪರಾಧಗಳ ಸಂಖ್ಯೆಯು ಹಿಂದಿನಸಾಲಿಗಿಂತ ಶೇಕಡ 4¾ರಷ್ಟು ಕಡಮೆಯಾಯಿತು. ಮತ್ತು ಭಾರಿ ಕೃತ್ಯಗಳ ವಿಷಯವಾದ ಫಿರ್ಯಾದುಗಳು ಹಿಂದಿನಸಾಲಿಗಿಂತಲೂ ಅಧಿಕವಾಗಿ ಸಫಲವಾದವು. ಕಾಫೀ ಪ್ರದೇಶಗಳಲ್ಲಿ ಕಾಫಿಯ ಕಳವನ್ನು ತಪ್ಪಿಸುವುದಕ್ಕೂ ಪತ್ತೆಮಾಡುವುದಕ್ಕೂ ಮಾಡಿದ ಏರ್ಪಾಡುಗಳು ಸಾಮಾನ್ಯತಃ ತೃಪ್ತಿಯನ್ನುಂಟುಮಾಡಿದವು.

ವಿಶೇಷ ಭಯಾಸ್ಪದವಾದ ರಸ್ತೆಗಳಲ್ಲಿ ಕಾವಲಿರುವದಕ್ಕೆ ರೆಗ್ಯುಲರ್ ಪೋಲೀಸಿನವರಿಗೆ ಕುಮ್ಮಕು ಮಾಡುವುದಕ್ಕೆ ಗ್ರಾಮದ ತಳವಾರರನ್ನು ನೇಮಿಸುವ ವಿಷಯದಲ್ಲಿ ಜಾರೀಗೆ ತಂದ ಏರ್ಪಾಡು ಈ ವರುಷ ಪೋಲೀಸ್ ಇಲಾಖೇಲಿ ಮಾಡಿದ ಏರ್ಪಾಡುಗಳ ಪೈಕಿ ಮುಖ್ಯವಾದ್ದಾಗಿದೆ. ಇಂಥಾ ರಸ್ತೆಗಳಲ್ಲಿ 19,694 ರೂ

ಖರ್ಚಿನೊಡನೆ 446 ಉಕ್ಕಡಗಳನ್ನು ಇಡಲಾಯಿತು. ಪೊಲೀಸ್ ಕಾನ್ಸ್ಟೇಬಲ್‌ಗಳ ಸಂಬಳವು ಪೊಲೀಸ್ ಇಲಾಖೆಯು 1873—74ನೇ ಸಂವತ್ಸರದಲ್ಲಿ ಮೊದಲು ಏರ್ಪಟ್ಟಾಗ ಠರಾಯಿಸಲ್ಪಟ್ಟಿತ್ತು. ಈಚೆಗೆ ದೇಶದಲ್ಲಿ ಧಾರಣೆವಾಸಿಗಳು ಜನರಿಗೆ ಇತರ ಕೆಲಸಗಳಲ್ಲಿ ಆಗುವ ಸಂಪಾದನೆ ಮುಂತಾದ ಅಂಶಗಳಲ್ಲಿ ಉಂಟಾಗಿರುವ ವ್ಯತ್ಯಸ್ತಗಳನ್ನು ನೋಡಿ, ಈ ಕಾನ್ಸ್ಟೇಬಲ್‌ಗಳ ಸಂಬಳಗಳನ್ನು ಈ ವರ್ಷದಿಂದ 6 ರೂಪಾಯಿ ಇದ್ದದ್ದನ್ನು 7 ರೂಪಾಯಿಗೂ 7 ಇದ್ದದ್ದನ್ನು 8ಕ್ಕೂ ಹೆಚ್ಚಿಸಿದೆ.

ಕೋಲಾರದ ಚಿನ್ನದ ಗಣಿಗಳು, ಕಾಫೀಪ್ರದೇಶಗಳು, ಬೆಂಗಳೂರುಷಹರು, ಈಸ್ಥಳಗಳ ಪೊಲೀಸಿನವರ ಸ್ಥಿತಿಯನ್ನು ಅಭಿವೃದ್ಧಿಪಡಿಸಬೇಕೆಂಬ ಉದ್ದೇಶದಿಂದ ಸ್ಪೆಷಲ್ ಇನ್‌ಸ್ಪೆಕ್ಟರುಗಳು ಮತ್ತು ಕಾನ್ಸ್ಟೇಬಲ್‌ಗಳು ಇವರುಗಳ ತಲಬ್‌ಬಡತಿ ಮಂಜೂರ್‌ಮಾಡಲ್ಪಟ್ಟಿತು.

ಇದರಡಿ ಕಂಡ ಸ್ಟೇಟ್ ರೈಲ್ವೆ ಲೈನುಗಳ ಮೇಲಿನ ಅಧಿಕಾರವು ಬ್ರಿಟಿಷ್ ಗವರ್ನಮೆಂಟಿನವರಿಗೆ ಒಪ್ಪಿಸಲ್ಪಟ್ಟಿತು.

(1) ಬೆಂಗಳೂರು—ಹರಿಹರದ ರೈಲ್ವೆ.

(2) ಯಶವಂತಪುರ—ಹಿಂದೂಪುರದ ಸರಹದ್ದಿನ ಲೈನು.

(3) ಕೋಲಾರದ ಚಿನ್ನದ ಗಣಿ ಲೈನು.

ರೆಜಿಸ್ಟ್ರೇಷನ್.—ರೆಜಿಸ್ಟ್ರು ಆದ ಪತ್ರಗಳ ಸಂಖ್ಯೆಯು 42,974ರಿಂದ 44,230ಕ್ಕೂ ಅವುಗಳಿಗೆ ಸಂಬಂಧಪಟ್ಟ ಸ್ವತ್ತಿನ ಬೆಲೆಯು 113½ ಲಕ್ಷ ರೂಪಾಯಿಯಿಂದ 135¾ ಲಕ್ಷಕ್ಕೂ ಹೆಚ್ಚಿದವು. ರೆಜಿಸ್ಟ್ರೇಷನ್ ಕೆಲಸಕ್ಕೆ ಸದಾ ಗಮನಕೊಡುವುದಕ್ಕೆ ಅಶಕ್ತರಾದ ತಾಲ್ಲೂಕು ನೌಕರರಿಗೆ ಬದಲಾಗಿ ಬೇರೆ ತಲಬಿನ ಮೇಲೆ ಸಬ್ ರಿಜಿಸ್ಟ್ರಾರರನ್ನ ನೇಮಿಸುವುದು ಕ್ರಮೇಣ ಜಾರೀಲಿ ತರಲ್ಪಡುತ್ತಲಿದೆ.

ವಿದ್ಯಾಭ್ಯಾಸ.—ಪ್ರಜಾವಿದ್ಯಾಭ್ಯಾಸವು ತೃಪ್ತಿಕರವಾಗಿ ಅಭಿವೃದ್ಧಿಹೊಂದುತಲಿದೆ. ಪಬ್ಲಿಕ್ ಸ್ಕೂಲುಗಳ ಸಂಖ್ಯೆಯು ಗತಸಾಲಿಗಿಂತ 111, ವಿದ್ಯಾರ್ಥಿಗಳ ಸಂಖ್ಯೆಯು 3,123 ಈರೀತಿ ಹೆಚ್ಚಾಯಿತು. ಸರ್ಕಾರೀ ಮತ್ತು ಇತರ ಎಲ್ಲಾ ಪಾಠಶಾಲೆಗಳಲ್ಲಿಯೂ ಓದುವವರು ಒಟ್ಟು 112,014 ಮಂದಿ; ಇವರಲ್ಲಿ 98,449 ಮಂದಿ ಹುಡುಗರು, 13,565 ಮಂದಿ ಹುಡುಗಿಯರು. ಓದತಕ್ಕ ವಯಸ್ಸಿನವರಾದ ಪುರುಷಪ್ರಜೆಯ ಪೈಕಿ ವಿದ್ಯಾಭ್ಯಾಸಮಾಡುವ ಹುಡುಗರು ಶೇಕಡ 26·97 ಮಂದಿ; ಓದತಕ್ಕ ವಯಸ್ಸಿನವರಾದ ಸ್ತ್ರೀಪ್ರಜೆಯ ಪೈಕಿ ಓದುವ ಹುಡುಗಿಯರು ಸೇಕಡ 3·75, ಈರೀತಿ ಇತ್ತು. ಕೀಳುಜಾತಿಯವರ ವಿದ್ಯಾಭ್ಯಾಸಕ್ಕೋಸ್ಕರ ಏರ್ಪಟ್ಟಿದ್ದ 40 ಪಾಠಶಾಲೆಗಳಲ್ಲಿ ಓದುತ್ತಿದ್ದವರು 1,483 ಮಂದಿ. ಈ ಸಂವತ್ಸರದಲ್ಲಿ ನೂತನವಾಗಿಮಾಡಿದ ಏರ್ಪಾಡುಗಳಲ್ಲಿ ಮುಖ್ಯವಾಗಿ ನಮೂದಾಗತಕ್ಕದ್ದು ಹಳ್ಳಿಗಳಲ್ಲಿ ಸ್ವತಂತ್ರವಾಗಿ ಇಟ್ಟುಕೊಂಡಿರುವ ಓದುವ ಮಠಗಳಿಗೆ ಸಹಾಯದ್ರವ್ಯವನ್ನು ಕೊಡುವುದು; ಇದರಿಂದ ಈಗಾಗಲೇ 57 ಮಠದವರು ಸಹಾಯವನ್ನು ಹೊಂದುತಿದಾರೆ. ವಿದ್ಯಾಭ್ಯಾಸಕ್ಕೆ ಒಟ್ಟಾಗಿ ಖರ್ಚಾದ 8,46,390 ರೂಪಾಯಿಗಳ ಪೈಕಿ ಇನ್ ಸರ್ಕಾರಿ ಹಣದಿಂದ ಕೊಟ್ಟದ್ದು 4,47,702 ರೂಪಾಯಿ ಜಾತಾಬಾಕಿ ಈ ಕೆಳಗೆ ನಮೂದಿಸುವ ಬಾಬುಗಳಿಂದ ಕೊಡಲ್ಪಟ್ಟಿತು.

	ರೂ.
ಲೋಕಲ್ ಫಂಡ್ಸ್‌ನಿಂದ	1,93,920
ಮ್ಯುನಿಸಿಪಲ್ ಹಣದಿಂದ	30,719
ವಿದ್ಯಾರ್ಥಿಗಳಿಂದ ವಸೂಲಾದ ಹಣ	92,570
ಇತರ ಬಾಬುಗಳಿಂದ	81,479

ಪ್ರಾಚೀನ ಲಿಪ್ಯನ್ವೇಷಣ—ಪುರಾತನ ಶಾಸನಾನ್ವೇಷಣದಿಂದ ಸುಮಾರು 9,000 ಶಾಸನಗಳು ಶೇಖರವಾಗಿವೆ. ಇವುಗಳನ್ನು ಛಾಪಿಸುವ ಕೆಲಸವು ತ್ವರ್‍ಯದಿಂದ ನಡಿಸಲ್ಪಡುತಿದೆ. ಇನು ವರಿಗೆ, 3,515 ಶಾಸನಗಳನ್ನು ಅಚ್ಚುಹಾಕಿದೆ. ಮೈಸೂರು ಡಿಸ್ಟ್ರಿಕ್ಟಿನ ಶಾಸನಗಳ ದ್ವಿತೀಯಭಾಗವು ಮುಗಿಯುತ್ತಾ ಬಂದಿದೆ. ಇದರಲ್ಲಿರುವ ಶಾಸನಗಳ ಸಂಖ್ಯೆ 880.

ದೊರೆತಿರುವ ಕನ್ನಡ ಗ್ರಂಥಗಳ ಪೈಕಿ ಅತ್ಯಂತ ಪುರಾತನ ಗ್ರಂಥವಾದ ನೃಪತುಂಗನ ಕವಿರಾಜಮಾರ್ಗವನ್ನು ಮುದ್ರಿಸುವ ಕೆಲಸವು ನಡೆಯುತ್ತಿದೆ; ಇದು ಒಂಬತ್ತನೇ ಶತಮಾನದಲ್ಲಿ ವಿರಚಿತವಾದ ಗ್ರಂಥ.

ಪುಸ್ತಕ ಭಂಡಾರ.—ಈ ಭಂಡಾರಕ್ಕೆ 325 ಸಂಸ್ಕೃತ, ಮತ್ತು 38 ಕನ್ನಡ ಕೈಬರವಣಿಗೆ ಗ್ರಂಥಗಳು, ಇವುಗಳನ್ನ ಹೊಸದಾಗಿ ಸೇರಿಸಲಾಯಿತು. ಈರೀತಿ ಸೇರಿಸಿದ ಸಂಸ್ಕೃತ ಗ್ರಂಥಗಳಲ್ಲಿ ಧನುರ್ವೇದವಿಷಯಕವಾದ ನೀತಿಪ್ರಕಾಶಿಕೆ ಎಂಬುವುದೊಂದು. ಸರ್ಕಾರದವರು ಪ್ರಚುರಗೊಳಿಸುತ್ತಿರುವ ಸಂಸ್ಕೃತ ಗ್ರಂಥಗಳಲ್ಲಿ ನಾಲ್ಕು ಪುಸ್ತಕಗಳನ್ನು ಹೊಸದಾಗಿ ಛಾಪಿಸಲಾಯಿತು.

ಮುಜರಾಯಿ.—ಮುಜರಾಯಿ ಇಲಾಖೆಯಲ್ಲಿ ವಿಶೇಷವಾಗಿ ಉಪಯೋಗಕರವಾದ ಕೆಲಸ ನಡೆಯಿತು. ಶಿಥಿಲವಾಗುತಲಿದ್ದ 59 ದೇವಸ್ಥಾನ ಧರ್ಮಶಾಲಾದಿ ಕಟ್ಟಡಗಳು ಜೀರ್ಣೋದ್ಧಾರ ಹೊಂದಿದವು. ನಗದೀಯಾತಿ ಇನಾಮುಗಳ ರಿಜಿಸ್ಟರ್‌ಗಳನ್ನು ತಿದ್ದುಪಾಟುಮಾಡಿ ಪುನಃ ಛಾಪಿಸಲಾಯಿತು. ನಾಲ್ಕು ಮಠಗಳಲ್ಲಿ ನೂತನವಾಗಿ ಪೀಠಕ್ಕೆ ಗುರುಗಳು ಬಂದದ್ದನ್ನ ಸರ್ಕಾರದವರು ಅಂಗೀಕರಿಸಿದರು. ಬೆಂಗಳೂರು, ಕೋಲಾರ, ತುಮ್ಕೂರು, ಮತ್ತು ಮೈಸೂರು ಈ ಡಿಸ್ಟ್ರಿಕ್ಟುಗಳಲ್ಲಿ ಮುಖ್ಯವಾದ ದೇವಸ್ಥಾನ ಛತ್ರಗಳ ಸ್ಥಿತಿಯನ್ನು ಅಭಿವೃದ್ಧಿಪಡಿಸಿ ಅವುಗಳ ಆಡಳಿತಗಳು ಚೆನ್ನಾಗಿ ನಡೆಯುವಂತೆ ಏರ್ಪಾಡುಮಾಡಲ್ಪಟ್ಟಿತು.

ವೈದ್ಯಶಾಲೆಗಳು.—ಈ ಸಂವತ್ಸರದಲ್ಲಿ ವಿಶೇಷವಾಗಿ ಸಾಂಕ್ರಾಮಿಕ ಉಪದ್ರವಗಳೇನೂ ಇಲ್ಲದೆ, ಪ್ರಜೆಗಳು ಆರೋಗ್ಯಸ್ಥಿತಿಯಲ್ಲಿಯೇ ಇದ್ದರು. 117 ಗವರ್ನಮೆಂಟಿನ ವೈದ್ಯಶಾಲೆಗಳಲ್ಲಿ ಚಿಕಿತ್ಸೆಯನ್ನು ಹೊಂದಿದವರು 7,16,112 ಮಂದಿ. ಇದರ ದಾಮಾಷಾಯಿಯು ಒಟ್ಟು ಜನಸಂಖ್ಯೆಗೆ 1,000ಕ್ಕೆ 148ರಂತೆ ಆಗುತ್ತೆ. ಬೆಂಗಳೂರು ಮೈಸೂರು ಈ ಷಹರುಗಳಲ್ಲಿರುವ ಸ್ತ್ರೀವೈದ್ಯಶಾಲೆಗಳಲ್ಲಿ 20,477 ಮಂದಿ ಹೆಂಗಸರು ಔಷಧವನ್ನು ತೆಗೆದುಕೊಂಡರು. ಇವರಲ್ಲಿ 481 ಜನ ಹೆರಿಗೆಯ ಸಂಬಂಧವಾದ ಚಿಕಿತ್ಸೆಯನ್ನು ಪಡೆದರು. ಇದರಿಂದ ಈ ವೈದ್ಯಶಾಲೆಗಳು ಎಂದಿನಂತೆಯೇ ಪ್ರಜಾಪ್ರಯೋಜನಕಾರಿಗಳಾಗಿವೆ ಎಂದು ವ್ಯಕ್ತವಾಗುತ್ತದೆ. ಮೈಸೂರು ಷಹರಿನಲ್ಲಿ ಪ್ರತ್ಯಕ್ಷವಾಗಿ ಸರ್ಕಾರದವರ ವಿಚಾರಣೆಗೆ ಒಳಪಟ್ಟ ಯೂರೋಪಿಯನ್ ವೈದ್ಯವಲ್ಲದೆ ಪೂರ್ವದ ಕರ್ನಾಟಕ ಮತ್ತು ಯುನಾನೀ ವೈದ್ಯಗಳೂ ಪ್ರಚಾರಗೊಳ್ಳುತ್ತಲಿವೆ.

ಕಾನೂನುಗಳ ನಿರ್ಧರಣೆ.—ಈ ಸಂವತ್ಸರ ಜಾರಿಗೆ ಬಂದ ರೆಗ್ಯುಲೇಷನ್ (ನ್ಯಾಯಶಾಸನ)ಗಳು :—

1895ನೇ ಇಸವಿಯ 2ನೇದು—ಮೈಸೂರು ಸೀಮೆಯಲ್ಲಿ ಜಾರಿಯಲ್ಲಿರುವ ಪೋಸ್ಟಾಫೀಸುಗಳ ಕಾನೂನನ್ನೂ ಬ್ರಿಟಿಷ್ ಇಂಡ್ಯಾದ ಕಾನೂನಿಗೆ ಅನುಸಾರವಾಗಿ ಮಾಡಿರುವುದು.

1895ನೇ ಇಸವಿಯ 3ನೇದು.—1882ನೇ ಇಸವಿಯ 6ನೇ ಸಂಖ್ಯೆಯ ಇಂಡ್ಯನ್ ಕಂಪನಿಗಳ ಆಕ್ಟೆಂಬ ಬ್ರಿಟಿಷ್ ಇಂಡ್ಯಾದ ಕಾನೂನನ್ನು ಮೈಸೂರಿನಲ್ಲಿ ಜಾರಿಗೆ ತರತಕ್ಕ ಬಗ್ಗೆ ಆದದ್ದು.

1896ನೇ ಇಸವಿಯ 1ನೇದು —ಮೈಸೂರು ಸರ್ಕಾರದಿಂದ ಬ್ರಿಜಲಾಲ್‌ದಾಸ್ ಎಂಬವರಿಗೆ ಕೊಡಬೇಕಾಗಿದ್ದ ಹಣದ ವಿಷಯವಾಗಿ ಆಖೈರ್ ಪೈಸಲ್ ಮಾಡುವುದಕ್ಕೋಸ್ಕರ ಒಂದು ಸ್ಪೆಷಲ್ ಕೋರ್ಟನ್ನೇರ್ಪಡಿಸತಕ್ಕದ್ದಕ್ಕೆ ಉಂಟಾದದ್ದು.

ಆಳಿದ ಮಹಾಸ್ವಾಮಿಯವರಾಗಿದ್ದ ಮುಮ್ಮಡಿ ಕೃಷ್ಣರಾಜಒಡೆಯರವರಿಗೆ ಸಾಲಕೊಟ್ಟಿದ್ದವರಪೈಕಿ ಬ್ರಿಜಲಾಲ್‌ದಾಸ್ ಎಂಬವರಿಗೆ ಸಲ್ಲಬೇಕೆಂದು 1864ನೇ ಡಿಶಂಬರ್ ತಿಂಗಳಲ್ಲಿ ಫೈಸಲಾಗಿದ್ದ ರೂ. 5,67,338-15-1ಪೈಯನ್ನು ಯಾರು ಹೊಂದತಕ್ಕವರೋ ಎಂಬಂಶ ಬಹುಕಾಲದಿಂದ ನಿರ್ಧರವಾಗಿರಲಿಲ್ಲ. ಇದನ್ನು ಪುನಃ ಜಿಜ್ಞಾಸವಿಲ್ಲದಂತೆ ತೀರ್ಮಾನಿಸಬೇಕೆಂದು ಸದರಿ 1896ನೇ ಇಸವಿ 1ನೇ ನಂಬರು ಕಾನೂನನ್ನು ಏರ್ಪಡಿಸಲಾಯಿತು. ಇದಕ್ಕನುಸಾರವಾಗಿ ನೇಮಕವಾದ ಸ್ಪೆಷಲ್ ಕೋರ್ಟಿನವರು ಈ ಹಣದ ವಿಷಯವಾಗಿ ಬಂದ ದಾವೆಗಳನ್ನೆಲ್ಲಾ ವಿಚಾರಮಾಡಿ ತಿರಸ್ಕರಿಸಿಬಿಟ್ಟಿದ್ದಾರೆ. ಆದರೂ ಮೊದಲು ಸಾಲಕೊಟ್ಟಿದ್ದಾತನು ಈ ಹಣದ ಪೈಕಿ ಮುಖ್ಯಭಾಗವನ್ನು ಧರ್ಮಖರ್ಚಿಗೆ ಉಪಯೋಗಿಸಬೇಕೆಂದಿದ್ದನು. ಆತನಿಗೆ ನ್ಯಾಯವಾದ ವಾರಸ್ದಾರರು ಯಾರೂ ಇಲ್ಲದ ಮಾತ್ರದಿಂದಲೇ, ಆಧರ್ಮಕಾರ್ಯಗಳಿಗೆ ಲೋಪವಾಗ ಬಾರದೆಂದು ಸರ್ಕಾರದವರು ಕುತೂಹಲವುಳ್ಳವರಾಗಿದಾರೆ. ಆದ್ದರಿಂದ ತಕ್ಕ ಧರ್ಮಗಳನ್ನು ಸ್ಥಾಪನೆಮಾಡಿ ಸರಿಯಾಗಿ ನಡಿಸಿಕೊಂಡುಬರಲು ಅವಶ್ಯಕವಾದ ಏರ್ಪಾಡುಗಳಿಗೆ ಕ್ಷಿಪ್ರದಲ್ಲಿಯೇ ತರದೂದ್ ನಡೆಸಲ್ಪಡುವುದು.

ಹಾಲಿ ಉದ್ದೇಶಿಸಿರುವ ಕಾನೂನುಗಳ ಪೈಕಿ ಚಿನ್ನದಗಣಿಯ ಉಪರಕ್ಷಣಾರ್ಥವಾಗಿ ಏರ್ಪಡಿಸಿರುವ ಕಾನೂನು ಪ್ರಾಮುಖ್ಯವಾದದ್ದು. ಇದನ್ನ ಮಂಜೂರಾತಿಯಬಗ್ಗೆ ಇಂಡಿಯಾಗವರ್ನಮೆಂಟಿಗೆ ಕಳುಹಿಸಿ ಕೊಟ್ಟಿದೆ. ಆಯಾಯ ಚಿನ್ನದ ಗಣಿ ಸಂಘಗಳವರು ಇದನ್ನ ವಿಶೇಷ ತೃಪ್ತಿಕರವಾದ್ದೆಂದು ಪರಿಭಾವಿಸುವಂತೆ ತಿಳಿಯಬರುತ್ತೆ. ಈ ಬಾಬಿಗೆ ಸಂಬಂಧಪಟ್ಟ ಮುಖ್ಯಾಂಶಗಳಿಗೆ ತಕ್ಕ ಸಂರಕ್ಷಣೆಯನ್ನು ಕಲ್ಪಿಸುವುದಕ್ಕೆ ಇದರಿಂದ ನಿಸ್ಸಂದೇಹವಾಗಿ ಅವಕಾಶ ಉಂಟಾಗಿರುತ್ತೆ.

ಬಹುಕಾಲದಿಂದಲೂ ತಕ್ಕ ಏರ್ಪಾಡನ್ನ ಮಾಡುವಭಾಗದಲ್ಲಿ ಸರ್ಕಾರದವರಿಗೆ ಆಸಕ್ತಿಯಿರುವ ಮತ್ತೊಂದು ಅಂಶವು ಕಾಫೀವ್ಯವಸಾಯಕ್ಕೆ ಸಂಬಂಧಪಟ್ಟದ್ದಾಗಿದೆ. ಕೂಲೀಜನರ ವಿಷಯದಲ್ಲಿ ಹಾಲಿಜಾರೀಲಿರುವ ಕಾನೂನಿನ ನ್ಯೂನತೆಯೂ, ಈ ಸೀಮೆಯಿಂದ ಹೊರಕ್ಕೆ ತಪ್ಪಿಸಿಕೊಂಡು ಹೋಗುವ ಕೂಲಿಗಳನ್ನ ಹಾಜರ್ ಪಡಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದೆ ಇರುವುದೂ, ಸಹ ಅನೇಕ ವರ್ಷಗಳಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ಈ ಎರಡನೇ ಅಂಶದಲ್ಲಿ ಮೈಸೂರು ಕಾಫೀಪ್ಲಾಂಟರುಗಳ ಸಂದರ್ಭಗಳನ್ನ ನೋಡಿದರೆ ಅವರಿಗೆ ವಾಸ್ತವ್ಯವಾಗಿ ಉಂಟಾಗಿರುವ ವಿಶೇಷ ಅನಾನುಕೂಲವು ಗಣನೀಯ್ಯವಾಗಿದೆ. ದಕ್ಷಿಣ ಹಿಂದೂಸ್ತಾನದಲ್ಲಿ ಕಾಫೀವ್ಯವಸಾಯಕ್ಕೆ ಸಂಬಂಧಪಟ್ಟ ಆಸಂದರ್ಭಗಳೆಲ್ಲಾ ಬ್ರಿಟಿಷ್ ಸರ್ಕಾರದಿಂದ ಪ್ರತ್ಯೇಕವಾಗಿ ಏರ್ಪಾಡಾದ ಒಂದು ಕಮಿಷ್ನಮೂಲಕ ವಿಚಾರಣೆ ಮಾಡಲ್ಪಟ್ಟಿರುವುದು ನಿಮಗೆ ತಿಳಿದಿದೆಯಷ್ಟೆ. ಈಗ ಉಂಟಾಗಿರುವ ಅನಾನುಕೂಲಗಳನ್ನ ತಪ್ಪಿಸುವಭಾಗದಲ್ಲಿ, ಚೆನ್ನಾಗಿ ಪರಿಶೀಲನೆ ಮಾಡುವುದರಿಂದಲೂ, ವಿವೇಚನಾ ಪೂರ್ವಕವಾದ ಸಲಹೆಯಿಂದಲೂ, ಆಗಬೇಕಾದದ್ದೆಲ್ಲಾ ಸದರಿ ಕಮಿಷ್ನನ ಪ್ರಯತ್ನಗಳ ಮೂಲಕ ನಡೆಯುವುದೆಂದು ನಾವು ದೃಢವಾಗಿ ತಿಳಿಯಬಹುದು. ಈ ಕಮಿಷ್ನಗೆ ಅಧ್ಯಕ್ಷರಾದ ನಮ್ಮ ರೆಸಿಡೆಂಟರವರು ಈ ವಿಷಯದಲ್ಲಿ ಶ್ರದ್ಧೆಯುಳ್ಳವರಾಗಿ ಅನುಭವತಃ ಬೇಕಾದ ಅಂಶಗಳನ್ನ ಅರಿತವರಾದಕಾರಣ ತನ್ಮೂಲಕ ಸಾಧ್ಯವಾದಷ್ಟರಲ್ಲಿ ನಿಮ್ಮ ಪ್ರಾರ್ಥನೆಯು ಸಫಲವಾಗಬಹುದೆಂಬ ನಿರೀಕ್ಷಣೆಯಿರುತ್ತೆ.

ಈ ಉಪನ್ಯಾಸವನ್ನು ಪೂರೈಸುವುದಕ್ಕೆ ಮೊದಲು ಸ್ವರ್ಗಸ್ಥರಾದ ಆಳಿದಮಹಾಸ್ವಾಮಿ ಶ್ರೀಚಾಮರಾಜೇಂದ್ರವಡೆಯರ್, ಜಿ. ಸಿ. ಎಸ್. ಐ. ಯವರ ಜ್ಞಾಪಕಾರ್ಥವಾಗಿ ಸರ್ಕಾರದಿಂದ ನಡಿಸಬೇಕೆಂದು ನಿಷ್ಕರ್ಷೆಮಾಡಿರುವ ಶ್ಲಾಘ್ಯವಾದ ಕಾರ್ಯಗಳನ್ನು ನಿಮಗೆ ತಿಳಿಸಬೇಕಾಗಿದೆ.

		ರೂ.
1.	ಮೈಸೂರಲ್ಲಿ ಅಶ್ವಾರೂಢರಾಗಿರುವಂತೆ ಆ ಮಹಾಸ್ವಾಮಿಯವರ ಪ್ರತಿಮೆ ..	1,00,000
2.	ಬಡವರಾದ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಟ್ಟು ಶಿಲ್ಪ ವಿದ್ಯವನ್ನು ಕಲಿಸುವ ವಿದ್ಯಾಶಾಲೆಯನ್ನು ಮೈಸೂರಲ್ಲಿ ಸ್ಥಾಪಿಸುವುದು	1,00,000
3.	ಕಲ್ಕತ್ತ, ತಿರುಪತಿ, ಶ್ರೀರಂಗಪಟ್ಣ ಈ ಸ್ಥಳಗಳಲ್ಲಿ, ಧರ್ಮಶಾಲೆಗಳು ಮತ್ತು ಮೈಸೂರಲ್ಲಿ ದೇವಸ್ಥಾನ	2,00,000
4.	ಇವುಗಳನ್ನೆಲ್ಲಾ ಮುಂದಕ್ಕೆ ಸರಿಯಾಗಿಟ್ಟುಕೊಂಡಿರುವುದಕ್ಕೆ	4,00,000
	ಜುಮ್ಲಾ....	8,00,000

ಕಳೆದ ವರ್ಷದ ಸಭೆಯಲ್ಲಿ ಎಲ್ಲರೂ ಅತ್ಯಂತ ಶ್ರದ್ಧೆಯಿಂದ ಅಂಗೀಕರಿಸಿ ಮಾಡಿಸಬೇಕೆಂದು ಕೋರಿದ ಅಶ್ವಾರೂಢವಾದ ಪ್ರತಿಮೆಯನ್ನು ಪ್ರಸಿದ್ಧ ಶಿಲ್ಪಿಯಾದ ಮೆ॥ ಆನ್ಸ್ಲೋಫೋರ್ಡ್ ಯವರು ಮಾಡುವುದಕ್ಕೆ ಷುರುಮಾಡಿಧಾರೆ. ಉಳಿದ ವಿಷಯಗಳನ್ನ ಕುರಿತು ತಕ್ಕ ಏರ್ಪಾಡು ನಡೆಯುತಲಿದೆ; ಅವೆಲ್ಲಾ ಸಾಧ್ಯವಾದಷ್ಟು ಜಾಗ್ರತೆಯಾಗಿ ನೆರವೇರಿಸಲ್ಪಡುವವು. ಇವಲ್ಲದೆ ಅಳ್ಳಕಟ್ಟೆಯಿಂದ ತಂದಿರುವ ಕಾವೇರಿನದಿಯ ದೊಡ್ಡ ಕಾಲುವೆಯೂ, ಬೆಂಗಳೂರಿಗೆ ನೀರಿನ ಸರಬರಾಯಿಗೋಸ್ಕರ ಮಾಡಿರುವ ಕಾಮಗಾರಿಯೂ ಸಹ ಪ್ರಜೆಗಳಿಗೆ ಅತ್ಯಂತ ಪ್ರಯೋಜನಕರವಾಗಿರುವ ಮಹಾಕಾರ್ಯಗಳು. ಇವೆರಡನ್ನೂ ಜನೋಪಯೋಗಾರ್ಥ ವಿವೇಚನಾಪೂರ್ವಕವಾಗಿ ಸ್ವರ್ಗಸ್ಥರಾದ ಮಹಾಸ್ವಾಮಿಯವರೇ ಉಪಕ್ರಮಿಸಿದರಾದ್ದರಿಂದ ಪ್ರಖ್ಯಾತವಾದ ಅವರ ರಾಜ್ಯಭಾರದ ಸ್ಮರಣೆಯು ಆಚಂದ್ರಾರ್ಕಸ್ಥಾಯಿಯಾಗಿ ನಿಲ್ಲುವಂತೆ ಮಾಡಲು ಇವು ತಕ್ಕಕಾರ್ಯಗಳೆಂದು, ಇವುಗಳನ್ನ ಪ್ರಜಾಪ್ರೀತಿಪಾತ್ರರಾದ ಅವರ ಹೆಸರಿನಿಂದ ಸ್ಥಾಪಿಸಲಾಯಿತು.

ಮೈಸೂರು,
19ನೇ ಅಕ್ಟೋಬರ್ 1896.

ಕೆ. ಶೇಷಾದ್ರಿ ಐಯರ್,
ಮೈಸೂರು ಸಂಸ್ಥಾನದ ದಿವಾನರು.

522

ಅಪ್ಪೆಂಡಿಕ್ಸ.

1896—97ನೇ ಇಸವಿಯ ಶೋಧನೀಯ ಬಡ್ಜೆಟ್ ಅಂದಾಜುಗಳು.

ಜಮಾಬಾಬುಗಳು.	ನಿಷ್ಕೃತ, 1894—95.	ಶೋಧನೀಯ, 1895—96.	ಅಂದಾಜುಗಳು, 1896—97.
	ರೂ.	ರೂ.	ರೂ.
ಲ್ಯಾಂಡ್ ರೆವಿನ್ಯೂ ಯಾನೆ ಜಮೀನ್ ಬಾಬು ..	95,57,323	97,45,807	96,00,000
ಉಪ್ಪಿನ ಮೋಳೆ ಕಂದಾಯ	18,234	22,551	22,000
ಸ್ಟಾಂಪು ..	7,10,533	7,64,163	7,35,000
ಅಬ್‌ಕಾರಿ—			
ಷರಾಬು ..	17,90,740	18,94,661	18,93,000
ಸೇಂದಿ ..	13,50,104	14,33,254	13,27,500
ಇತರಬಾಬುಗಳು ..	52,263	63,034	57,500
ಸಾಯರ್ ..	4,41,852	4,29,178	4,06,000
ಮೊಹತರ್ಫಾ ..	2,64,533	2,66,504	2,65,000
ಫಾರೆಸ್ಟ್—			
ಸಂದಲ್ ..	8,57,746	8,01,043	8,17,300
ಚೌಬೀನೆ ..	2,04,571	1,76,766	1,86,450
ಚಿಲ್ಲರೆಫಾರೆಸ್ಟ್ಬಾಬುಗಳು	2,79,103	2,84,085	2,46,250
ಆನೆಗಳ ಪುರೋಖ್ತು.	40,096	30,329	64,000
ಭಂಗಾರದ ಗಣಿಗಳು ..	7,34,527	7,74,885	7,25,000
ರೆಜಿಸ್ಟ್ರೇಷನ್ ..	96,180	1,03,719	97,000
ಅಮೃತಮಹಲ್ ..	19,334	26,813	29,000
ಸರ್ಕಾರಿ ಪತ್ರಗಳು ..	4,28,059	3,33,004	} 5,62,000
ಮದರಾಸ್ ಬ್ಯಾಂಕಿನಲ್ಲಿ ಇಟ್ಟಿರುವ ಡಿಪಾಜಿಟ್ ಮೊಬಲಗಿನ ಬಡ್ಡಿ ..	1,03,249	91,005	
ಸರ್ಕಾರದಿಂದಾ ಕೊಟ್ಟ ಸಾಲದ ಮೇಲಿನ ಬಡ್ಡಿ, ಕಂದಾಯದ ಬಾಕೀಮೇಲಿನಬಡ್ಡಿ ದೇಖಿಲ್ .	38,785	34,238	33,000
ಲಾ ಅಂಡ್ ಜಸ್ಟಿಸ್ ಯಾನೆ ಜುಡಿಷಿಯಲ್—			
ಕೋರ್ಟುಗಳು ..	58,192	56,203	} 80,000
ಜೈಲುಗಳು ..	23,259	21,186	
ಪೊಲೀಸ್ ..	1,459	1,247	2,000
ವಿದ್ಯಾಭ್ಯಾಸದ ಇಲಾಖೆ ..	87,835	91,968	86,000
ಮೆಡಿಕಲ್ ಯಾನೆ ವೈದ್ಯಶಾಲೆಗಳ ಇಲಾಖೆ ..	7,050	15,762	7,000
ಸೈಯಂಟಿಫಿಕ್ ಮತ್ತು ಚಿಲ್ಲರೆ ಇಲಾಖೆ ಗಳ ಬಗೆ ..	5,572	12,370	11,000
ಸಾದಿಲ್‌ವಾರ್ ಮತ್ತು ಛಾಪಾಖಾನೆ ..	5,264	8,612	5,000
ಪಬ್ಲಿಕ್ ವರ್ಕ್ಸ್ ಯಾನೆ ಮರಹಮ್ಮತ್ ಇಲಾಖೆ	32,848	23,138	20,000
ಇತರ ಬಾಬುಗಳು ..	2,68,425	1,39,905	1,10,000
ಜುಮ್ಲಾ......	174,77,136	176,45,430	173,87,000
ಸ್ಟೇಟ್‌ರೈಲ್ವೆಗಳು ..	5,74,354	6,20,674	6,52,000
ಒಟ್ಟುಜುಮ್ಲಾ ಸ್ಟೇಟ್‌ರೈಲ್ವೆಗಳದೇಖೀಲ್ ..	180,51,490	182,66,104	180,39,000
ಸಿವಿಲ್ ಅಂಡ್ ಮಿಲಿಟೆರಿ ಸ್ಟೇಷನ್ ಶೇಂದಿಹುಟ್ಟುವಳಿ ..	23,826	18,369	24,000
ಒಟ್ಟು ಜುಮ್ಲಾ ..	180,75,316	182,84,473	180,63,000

ಖರ್ಚಿನ ಬಾಬುವಾರು.	ನಿಷ್ಕೃತ, 1894—95.	ಶೋಧನೀಯ, 1895—96.	ಅಂದಾಜುಗಳು, 1896—97.
	ರೂ.	ರೂ.	ರೂ.
ಸಬ್‌ಸಿಡಿ ಯಾನೆ ಪಗದಿ ..	24,50,000	24,50,000	24,50,000
ಸಿವಿಲ್ ಲಿಸ್ಟ್ ಯಾನೆ ಅರಮನೆ ಇಲಾಖೇ ಖರ್ಚು ..	14,00,000	14,00,000	14,00,000
ರಾಜವಂಶ್ಯರಿಗೆ ಪೆನ್ಷನ್‌ಗಳು ..	..	80,000	80,000
ಪೊಲಿಟಿಕಲ್ ಪೆನ್ಷನ್‌ಗಳು, ಜಹಗೀರಿಗೆ ಬದಲಾಗಿ ಕೊಡುವ ಅಲೋವೆನ್ಸ್ ಗಳು ದೇಖೀಲ್..	1,10,510	1,08,761	1,21,000
ರೀಫಂಡ್ಸ್ ವ ಡ್ರಾಬ್ಯಾಕ್ಸ್ (ವಾಪಸುಖರ್ಚು ..	2,21,304	2,64,202	1,15,000
ಲ್ಯಾಂಡ್ ರೆವಿನ್ಯೂ ಸಿಬ್ಬಂದಿ ಬಾಬಿನ ಖರ್ಚು) ..	7,88,146	8,08,810	9,79,775
ಗ್ರಾಮನೌಕರರ ವೇತನ ..	5,90,030	6,70,492	6,25,225
ಸ್ಟಾಂಪು ..	32,793	41,346	73,0[illegible]
ಅಬ್‌ಕಾರಿ	1,72,354	1,79,790	1,81,000
ಸಾಯರ್	13,174	13,778	15,000
ಫಾರೆಸ್ಟ್, ಆನೇಬಂಗಡಿ ಬಾಬುಸಹ.	4,65,355	5,16,450	5,60,000
ಭಂಗಾರದ ಗಣಿಗಳ ಬಗೆ ..	6,873	7,950	..
ರಿಜಿಸ್ಟ್ರೇಷನ್ ..	49,615	48,940	57,000
ಅಮೃತಮಹಲ್ ..	27,735	28,368	30,060
ಬಡ್ಡಿಬಾಬು ..	2,21,611	2,25,225	2,31,000
ಅಡ್ಮಿನಿಸ್ಟ್ರೇಷನ್ ಯಾನೆ ಹುಜೂರು ಇಲಾಖೆ ಖರ್ಚು ..	3,20,992	4,00,506	4,02,731
ಲಾ ಅಂಡ್ ಜಸ್ಟಿಸ್—			
ಕೋರ್ಟುಗಳು ..	7,95,714	8,22,903	8,20,929
ಜೈಲುಗಳು .	79,838	76,523	98,071
ಪೊಲೀಸ್ ..	7,61,924	7,85,833	8,48,000
ವಿದ್ಯಾಭ್ಯಾಸದ ಇಲಾಖೆ ..	4,84,170	5,00,632	5,40,000
ಮುಜರಾಯಿ ..	3,38,616	3,26,695	3,49,000
ಮೆಡಿಕಲ್ ಯಾನೆ ವೈದ್ಯಶಾಲೆಗಳ ಇಲಾಖೆ .	2,55,296	3,11,588	3,02,[illegible]
ಗವರ್ನ್ಮೆಂಟ್ ಬಂಗಲೆಗಳು ..	1,31,347	59,152	56,[illegible]
ಸೈಯಂಟಿಫಿಕ್ ಮತ್ತು ಚಿಲ್ಲರೆ ಇಲಾಖೆಗಳು ..	1,74,752	1,85,794	2,00,94[illegible]
ಪೆನ್ಷನ್‌ಗಳು, ಗ್ರ್ಯಾಟ್ಯೂಟಿವಗೈರೆ.	2,78,276	2,62,420	2,82,000
ಸಾದಿಲ್ವಾರ್ ಮತ್ತು ಛಾಪಾಖಾನೆ..	1,59,232	2,06,159	1,62,766
ಇಂಡ್ಯ ಗವರ್ನ್ಮೆಂಟಿನ ಪ್ರೋನೋಟುಗಳನ್ನು ಖರೀದಿಗೆಕೊಟ್ಟ ನಫಾವಗೈರೆ ..	1,44,583	1,12,710	2,50,000
ಇತರ ಬಾಬುಗಳು ..	4,32,862	2,89,401	4,86,000
ಫ್ಯಾಮಿನ್ ರಿಲೀಫ್ ಯಾನೆ ಕ್ಷಾಮ ನಿವಾರಣೆ ಖರ್ಚಿನ ಬಗೆ, ಈ ವರುಷದಲೆಖ್ಖಕ್ಕೆ ದಾಖಲಾಗಿ ರತಕ್ಕದ್ದು ..	89,638	6,291	..
ಪಬ್ಲಿಕ್ ವರ್ಕ್ಸ್ ಯಾನೆ ಮರಹಮ್ಮತ್ ಮತ್ತು ಸ್ಪೆಷಿಯಲ್ ಸ್ಯಾನಿಟೆರಿ ಕಾಮಗಾರಿಗಳು ..	29,37,474	32,12,481	26,54,000
ಫೌಜು	9,77,652	9,81,470	10,02,000
ಜುಮ್ಲಾ . ..	149,11,866	153,84,670	153,73,000
ಸ್ಟೇಟ್ ರೈಲ್ವೆಗಳು. ..	14,54,077	12,71,182	12,05,000
ಬೀರೂರು ಶಿವಮೊಗ್ಗಾ ರೈಲ್ವೆಲೈನ್ ಹಾಕುವಬಗ್ಯೆ ..	..	..	5,00,000
ಒಟ್ಟು ಜುಮ್ಲಾ ರೈಲ್ವೆ ದೇಖೀಲ್ ..	163,65,943	166,55,852	170,78,000
ಸಿವಿಲ್ ಮತ್ತು ಮಿಲಿಟೆರಿಸ್ಟೇಷನ್‌ಗೆ ಸಲ್ಲತಕ್ಕ ಶೇಂದಿ ಹುಟ್ಟುವಳಿ ಬಾಬತು. ..	23,826	18,369	24,000
ಒಟ್ಟು ಜುಮ್ಲಾ....	163,89,769	166,74,221	171,02,000

523

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಸ್ ಆದ್ದು [ನಂ. 44.

ಬೆಂಗಳೂರು, ಗುರುವಾರ, ನವಂಬರ್ ತಾ|| ೫, ಸನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಯಿಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 23ನೇ ಅಕ್ಟೋಬರ್ 1896.

ನಂ. 4865.—ಜು. 551, ಕೋಲಾರದ ಗೋಲ್ಡ್‌ಫೀಲ್ಡ್ಸ್ ಸ್ಪೆಷಲ್ ಮಾಜಿಸ್ಟ್ರೇಟ್ ವ ಮುನಸಿಫ್ ಮೆಸ್ಟರ್ ಹ್ಯೂಂರೈಟ್ ಯವರಿಗೆ, 1896ನೇ ಸೆಪ್ಟಂಬರ್ 10ನೇ ಮಾರ್ಕುಂ 3516.—ಜು. 362ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಹನ್ನೆರಡು ದಿನಗಳ ಕ್ಯಾಜುಯಲ್ ರಜಾ ಪೈಕಿ ಐದು ದಿನಗಳು ಮಟ್ಟಿಗೆ ಉಪಯೋಗಿಸಿಕೊಂಡಿರುವದರಿಂದ ಉಪಯೋಗಿಸಿಕೊಳ್ಳದ ರಜಾಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 27ನೇ ಅಕ್ಟೋಬರ್ 1896. ಮೊಕ್ಕಾಂ ಮೈಸೂರು.

ಕ್ಯಾಂಪ್ ನಂ. 13.—ಚೀಫ್ ಸೆಕ್ರಿಟೆರಿಯವರಾದ ಮೆಸ್ಟರ್ ಟಿ. ಆನಂದರಾಯರಿಗೆ 1896ನೇ ಜುಲೈ 24ನೇ ಮಾರ್ಕುಂ 1346—ಮಿ. ಫೈ. 5—95ನೇ ನಂಬರ್ ಗವರ್ನ‌ಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ರಜಾ ಇನ್ನೂ ಮೂರು ತಿಂಗಳುಗಳವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 30ನೇ ಸೆಪ್ಟಂಬರ್ 1896.

ನಂ. 3513.—ರೆ. 1202, ಸ್ನ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷರ್ನ ರೆಗ್ಯುಲೇಷನಿನ 6ನೇ ಸೆಕ್ಷರ್ನ ನಿಯಮಗಳನುಸರಿಸಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಜಮೀರ್ನಗಳು ಸರ್ಕಾರ್ ಕೆಲಸಕ್ಕೆ ಅಂದರೆ ರಾಮಸಮುದ್ರ ನಾಲೆಯ 24ನೇ ಮೈಲಿಯಲ್ಲಿ ಕೊಳವಿಯಿಂದ ಪ್ರವಾಹದ ನೀರು ಹೋಗುವ ಬಗ್ಯೆ ಪೊಂದು ನಾಲೆಯನ್ನು ತೆಗಿಯುವ ಬಗ್ಯಾಗಿ ಅವಶ್ಯಕವಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರನ ಹೆಸರು.	ಜಮೀರ್ನ ತಪ್ಸೀಲ್.			ಚಕ್ಕುಬಂದಿ.
					ಸರ್ವೆ ನಂಬರ್	ವಿವರಣೆ.	ಬೇಕಾದ ವಿಸ್ತೀರ್ಣ.	
ಮೈಸೂರು	ಎಡತೊರೆ.	ಎಡತೊರೆ.	ಎಡತೊರೆ.	ರಾಂಭಟ್ಟ.	35	ತರೀ	96 × 7 ಗಜಗಳು, 5½ ಗುಂಟೆಗಳು.	ಪೂರ್ವಕ್ಕೆ—ಸರ್ವೆ ನಂ. 37. ಮತ್ತು. ದಕ್ಷಿಣಕ್ಕೆ—ಮೆನಗನಹಳ್ಳಿಯ ನಂ. 36. ಪಶ್ಚಿಮಕ್ಕೆ—ರಸ್ತೆ. ಉತ್ತರಕ್ಕೆ—ಎಡತೊರೆಯ ಸರ್ವೆ ನಂ. 41.
					41		170 × 7 ಗಜಗಳು, 10 ಗುಂಟೆಗಳು.	ದಕ್ಷಿಣಪಾರ್ಶ್ವಕ್ಕೆ—ನಂ. 35. ಪಶ್ಚಿಮಪಾರ್ಶ್ವಕ್ಕೆ—ರಸ್ತೆ. ಪೂರ್ವಪಾರ್ಶ್ವಕ್ಕೆ—ನಂ. 39, ಮತ್ತು. ಉತ್ತರಪಾರ್ಶ್ವಕ್ಕೆ—ನಂ. 41.

ತಾರೀಖು 16ನೇ ಅಕ್ಟೋಬರ 1896.

ನಂ. 3836.—ರೆ. 1322, ಸ್ನ 1894ನೇ ಇಸವಿಯ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವಿಜಿಷರ್ನ ರೆಗ್ಯುಲೇಷನಿನ 6ನೇ ಸೆಕ್ಷರ್ನ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀರ್ನಗಳು ಸರ್ಕಾರ್ ಕೆಲಸಕ್ಕೆ ಅಂದರೆ ಎಡಹಳ್ಳಿ ಸಬ್ ತಾಲ್ಲೂಕಿನಲ್ಲಿ ಭದ್ರಾಕ್ಕೆ ಅಡ್ಡವಾಗಿರುವ ಬಾಳೇಹೊನ್ನೂರು ಸೇತುವೆಯ ಕಟ್ಟೆ ವಗೈರೆ ಕಟ್ಟುವ ಬಗ್ಯಾಗಿ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ	ಹಿಡುವಳಿದಾರ್ರ ಹೆಸರು.	ಜಮೀನಿನ ತಪ್ಸೀಲು.				ಚಕ್ಕುಬಂದಿ.			
				ವಿವರಣೆ.	ಸರ್ವೇ ನಂ.	ವಿಸ್ತೀರ್ಣ.	ಬೇರೀಜು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎ. ಗುಂ.	ರೂ.ಆ.ಪೈ.				
ಕಡೂರು.	ಎಡಹಳ್ಳಿ.	ಕಣಬೂರು	ಲಿಂಗೇಗವುಡ	ತರೀ	1ರ ಭಾಗ	1—32	6-0-0	ಲಿಂಗೇಗವುಡನ ಖಾತೇಜಮೀರ್ನ ನಂ. 1 ತರೀ.	ವಸ್ತಾರಾ ಕೊಪ್ಪದ ಹೈರೋಡ್	ಸರ್ವೆ ನಂ. 107 ಖರಾಬ್	ಕಳಸಾ ರೋಡು
		ಡಿಟೋ	ಸಿರ್ವರ್ನಮೇಸ್ತ್ರಿ)	ತರೀ	108ರ ಭಾಗ	2—23	9-0-0	ವಸ್ತಾರಾ ಕೊಪ್ಪದ ಹೈರೋಡು	ನಂ. 108ರ ಭಾಗ	ನದಿಗೆ ಹೋಗುವ ಹಳೇ ರಸ್ತೆ	ವಸ್ತಾರಾ ಕೊಪ್ಪದ ಹೈರೋಡು
		ಕರಹಡ್ಲಿ	ಮಿ॥ ಕ್ಲಿಫರ್ಡ್	ಕಾಫಿ	1ರ ಭಾಗ	2—30	..	ಡಿಟೋ	ಭದ್ರಾನದಿ	ಕಾಫಿ ಜಮೀನು ನಂ. 11	ಕಾಫಿ ಜಮೀರ್ನ ನಂ. 12
		ಡಿಟೋ	ಡಿಟೋ	ಕಾಫಿ	12	3—8	5-0-0	ಸರ್ವೆ ನಂ. 11	ಡಿಟೋ	ಸರ್ವೆ ನಂ. 11	ಭದ್ರಾನದಿ ಮತ್ತು ವಸ್ತಾರಾ ಕೊಪ್ಪದ ಹೈರೋಡು

ತಾರೀಖು 9ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರು.

ನಂ. 3772.—ರೆ. 1293, ಹಿರಿಯೂರು ತಾಲ್ಲೂಕಿನ, ಹಿರಿಯೂರು ಮತ್ತು ಜವನಗೊಂಡನಹಳ್ಳಿ ಹೋಬಳಿಗಳಲ್ಲಿರುವ ಈ ಕೆಳಗೆ ಕಂಡ ಗ್ರಾಮಗಳ ವರ್ಗಾವರ್ಗಿಯು ಗವರ್ನ್‌ಮೆಂಟಿನವರು ಮಂಜೂರ್ಮಾಡಿರುತ್ತಾರೆ:—

ಗ್ರಾಮ.	ವರ್ಗಮಾಡಿರುವ ಹೋಬಳಿ.
ಆನೆಸಿದ್ರಿ (ಹಿರಿಯೂರು ಹೋಬಳಿ)	ಜವನಗೊಂಡನಹಳ್ಳಿ
ಆದಿವಾಲ (ಜವನಗೊಂಡನಹಳ್ಳಿ ಹೋಬಳಿ) ..	ಹಿರಿಯೂರು

ತಾರೀಖು 17ನೇ ಅಕ್ಟೋಬರ್ 1896.

ನಂ. 3886.—ರೆ. ಫೈ. 55.—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟು ಎಡತೊರೆ ತಾಲ್ಲೂಕು ಅಮಲ್‌ದಾರ್ ವಿ. ಕೃಷ್ಣರಾಯರಿಗೆ, 1896ನೇ ಸೆಪ್ಟಂಬರ್ 15ನೇ ಮರ್ಕ್ಕಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 24ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರು.

ನಂ. 3937.—ರೆ. 1354, ಸ್ 1888ನೇ ಇಸವಿಯ IVನೇ ರೆಗ್ಯುಲೇಷನಾದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ರಕಾರ ಅನುಸರಿಸಿ, ನಂಜನಗೂಡು ತಾಲ್ಲೂಕಿನಲ್ಲಿರುವ ಕೆಸ್ತ್ಯಾನೂರು, ಹಟ್ವಾಲಾ, ಮಂದನಹಳ್ಳಿ, ಮದ್ದೂರು ಮತ್ತು ಕಲ್ಲಹಳ್ಳಿ ಸರ್ವ ಇನಾಂ ಗ್ರಾಮಗಳಿಗೆ ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನ ಲಗಾವ್ ಮಾಡುವ ಬಗ್ಗೆ ಮೈಸೂರ್ ಗವರ್ನ್‌ಮೆಂಟಿನವರು ಆಜ್ಞಾಪಿಸಿರುತ್ತಾರೆ.

ನಂ. 3940.—ರೆ. ಫೈ. 33—96, ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಕೆ. ಶ್ರೀನಿವಾಸರಾಯರಿಗೆ, 1896ನೇ ಸೆಪ್ಟಂಬರ್ 5ನೇ ಮರ್ಕ್ಕಂ 2558—ರೆ. ಫೈ. 33—96 ಮತ್ತು ಸೆಪ್ಟಂಬರ್ 14ನೇ ಮರ್ಕ್ಕಂ 2893—ರೆ. ಫೈ. 33—96ನೇ ನಂಬರುಗಳ ಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆಗಳಲ್ಲಿ ಕೊಡಲ್ಪಟ್ಟದ್ದ ಎರಡು ತಿಂಗಳ ಪ್ರಿವಿಲೇಜ್ ರಜಾ ಇನ್ನೂ ಐದು ದಿನಗಳ ವರಿವಿಗೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ಕ್ಯಾಂಪ್ ನಂ. 68.　　ತಾರೀಖು 21ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರ್.

ಕೃಷ್ಣರಾಜಪೇಟೆ ತಾಲ್ಲೂಕು ಕಿಕ್ಕೇರಿಯಲ್ಲಿರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ಸುಬ್ರಾಯರ ಛತ್ರಕ್ಕೆ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇಧೆ:—

(1) ಕಿಕ್ಕೇರಿ ಶಾನುಭೋಗ ಸೀತಾರಾಮಯ್ಯನವರು.
(2) ಕಿಕ್ಕೇರಿಯಲ್ಲಿರುವ ಮುನ್ಷಿ ರಾಮಯ್ಯನವರ ಮಕ್ಕಳು ತಮ್ಮಯ್ಯನವರು.
(3) ಕೃಷ್ಣರಾಜಪೇಟೆ ರಂಗಯ್ಯಂಗಾರ್ರು.

ಕ್ಯಾಂ. ನಂ. 73.　　ತಾರೀಖು 2ನೇ ನವಂಬರ್ 1896ನೇ ಇಸವಿ, ಮೈಸೂರು.

ಯಡತೊರೆ ಕಸಬಾದಲ್ಲಿರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ಛತ್ರ ದೇವಸ್ಥಾನಗಳಿಗೆ ಮೊಕರರು ಆಗಿದ್ದ ಧರ್ಮದರ್ಶಿಗಳ ಪೈಕಿ ಶಿರಸ್ತೇದಾರ್ ನಂಜುಂಡಪ್ಪನವರು ಹಾಲಿ ಸ್ಥಳದಲ್ಲಿ ಇಲ್ಲದೆ ಇರುವದ್ದರಿಂದ ಅವರಿಗೆ ಬದಲಾಗಿ ಹಾಸ್ಪಿಟಲ್ ಅಸಿಸ್ಟೆಂಟ್ ಎಂ. ನಂಜುಂಡಯ್ಯನವರನ್ನ ಧರ್ಮದರ್ಶಿಯಾಗಿ ನೇಮಿಸಿ ಇಧೆ.

ವಿ. ಶ್ರೀನಿವಾಸಾಚಾರು,
ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಸೆಕ್ರಿಟರಿ.

ಮಿ ಲಿ ಟರಿ.

ಇಸ್ತಿಹಾರ್‌ನಾಮೆ.

ಮೈಸೂರು ಪೈದಲ್ ಫೌಜಿನ 3ನೇ ಪಟಾಲಮಿನಲ್ಲಿ 1896ನೇ ಅಕ್ಟೋಬರ್ ಗುರ್ರೇ ಲಾಗಾಯತು ಈ ಕೆಳಗೆ ಕಂಡ ಬಡ್ತಿಯು ಮಾಡಲ್ಪಟ್ಟಿದೆ:—

ಪೆನ್ಷನ್ ಮೇಲೆ ಕೆಲಸದಿಂದ ನಿವೃತ್ತರಾದ ಸುಬೇದಾರ್ ಸಯ್ಯದ್ ಹುಸೇನ್‌ಯವರಿಗೆ ಬದಲಾಗಿ ಸಬ್ದರ್‌ಹುಸೇನ್‌ಯವರು 1ನೇ ಗ್ರೇಡ್ ಜಮಾದಾರಿಯಿಂದ 2ನೇ ಗ್ರೇಡ್ ಸುಬೇದಾರಿಗೆ.

ಹುಕುಂ ಬಮೋಜಬ್,
ಪಿ. ಎಚ್. ಮೆಕ್ಕಿಂಟೈರ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಸೆಕ್ರಿಟರಿ.

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫ್ರಾಯಿಷ್ ಆದ್ದು. [ನಂ. 44.

ಬೆಂಗಳೂರು, ಗುರುವಾರ, ನವಂಬರ್ ತಾ॥ 5, ಸ್ನ 1896.

IIನೇ ಭಾಗ.

ಇಂಡ್ಯ ಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಷಿಯವರ ಕಾರ್ಖಾನೆ	ಪ್ರದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್ರ ಡಿಟೋ	„ 170
1	ಮದ್ರಾಸ್ ಓಕ್ಸರವರ ಡಿಟೋ	„ 250
1	ಡಿಟೋ ಡಿಟೋ ಡಿಟೋ	„ 188
1	ಡಿಟೋ ಬೋರ್ರ್ಯಾಮ್ರವರ ಡಿಟೋ	„ 85

ಖರೀದಿದಾರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸು

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ವಿದ್ಯಾಭ್ಯಾಸದ ಇಲಾಖೆ.

ಮೈಸೂರು ದೇಶೀಯ ಪರೀಕ್ಷೆಗಳು.

ಸ‌ನ 1896ನೇ ಇಸವಿ ಅಕ್ಟೋಬರ್ ತಾರೀಖು 19.

ಪ್ರಕಟನ ಪತ್ರಿಕೆ.

ಮೈಸೂರು ದೇಶೀಯ ಪರೀಕ್ಷೆಗಳು ಸ‌ನ 1896ನೇ ಇಸವಿ ಡಿಸೆಂಬರ್ ತಿಂಗಳು ಮೊದಲನೇ ತಾರೀಖಿನಿಂದ ಆರಂಭವಾಗಿ ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳ (Head-quarters) ದಲ್ಲಿಯೂ ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಟಣದಲ್ಲಿಯೂ ನಡೆಯಿಸಲ್ಪಡುವವು:—

ಪರೀಕ್ಷೆಗಳು ಇದರಡೀಕಂಡ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವವು:—

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ.

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೊದಲನೇ ದಿವಸ	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ; ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1–30ರಿಂದ 2—30 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಭಾಷಾಂತರೀಕರಣ.—ಇಂಗ್ಲಿಷ್, ಸಂಸ್ಕೃತ; ಫಾರಸಿ .. ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳಂಥಾವರಿಗೆ	35
	2–35ರಿಂದ 3–5 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಉಕ್ತಲೇಖನ—ಇಂಗ್ಲಿಷ್; ಸಂಸ್ಕೃತ; ಫಾರಸಿ	10
	3–10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಕೈ ಬರವಣಿಗೆ.—ಇಂಗ್ಲಿಷ್; ಸಂಸ್ಕೃತ; ಫಾರಸಿ	10
	3–45ರಿಂದ 4—15 ವರೆಗೆ	ಹಿಂದುಸ್ತಾನಿ ಉಕ್ತಲೇಖನ	10
	4–20ರಿಂದ 4—50 ವರೆಗೆ	ಹಿಂದುಸ್ತಾನಿ ಕೈ ಬರವಣಿಗೆ	10
ಎರಡನೇ ದಿವಸ	10ರಿಂದ 1ರ ವರೆಗೆ	ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ ವ್ಯಾಕರಣ, ಭಾಷಾಗ್ರಂಥ ಮತ್ತು ಪ್ರಬಂಧರಚನೆ ..	100
		ಫಾರಸಿ ದ್ವಿತೀಯ ಭಾಷೆ— ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
	2ರಿಂದ 5 ವರೆಗೆ	ಸಂಸ್ಕೃತ ದ್ವಿತೀಯ ಭಾಷೆ— ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
		ಲಾಟಿನ್ ದ್ವಿತೀಯಭಾಷೆ— ಲಾಟಿನ್ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	120
		ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ತೆಲುಗು, ತಮಿಳು ಮತ್ತು ಹಿಂದುಸ್ತಾನಿ, ವ್ಯಾಕರಣ, ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ	100

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೂರನೇ ದಿವಸ	10ರಿಂದ 12 ವರೆಗೆ.	ಅಂಕಗಣಿತ	100
	12–5ರಿಂದ 12–35 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ, ತೆಲುಗು ಮತ್ತು ತಮಿಳು ಅಕ್ಷರ ಸಂಯೋಜನ ...	10
	12–40ರಿಂದ 1–10 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—ಕನ್ನಡ, ತೆಲುಗು ಮತ್ತು ತಮಿಳು ಕೈ ಬರವಣಿಗೆ	10
	2ರಿಂದ 4 ವರೆಗೆ	ರೇಖಾಗಣಿತ ಬೀಜಗಣಿತಗಳು	100
	4–5ರಿಂದ 4–35 ವರೆಗೆ	ಐಚ್ಛಿಕ ದ್ವಿತೀಯ ಭಾಷೆ— ಸಂಸ್ಕೃತ ಮತ್ತು ಫಾರಸಿ ಅಕ್ಷರ ಸಂಯೋಜನ	10
	4–40ರಿಂದ 5–10 ವರೆಗೆ	ಐಚ್ಛಿಕ ದ್ವಿತೀಯ ಭಾಷೆ— ಸಂಸ್ಕೃತ ಮತ್ತು ಫಾರಸಿ ಕೈ ಬರವಣಿಗೆ ..	10
ನಾಲ್ಕನೇ ದಿವಸ	10ರಿಂದ 1 ವರೆಗೆ	ಚರಿತ್ರೆ, ಭೂಗೋಳ ಶಾಸ್ತ್ರ ಮತ್ತು ಭೂಪಟ ಬರೆಯುವುದು ..	120
	2ರಿಂದ 3–30 ವರೆಗೆ	ವ್ಯವಸಾಯ ಶಾಸ್ತ್ರ	100
	3—35ರಿಂದ 5—5 ವರೆಗೆ	ಆರೋಗ್ಯ ಶಾಸ್ತ್ರ	100
ಐದನೇ ದಿವಸ	10ರಿಂದ 11—30 ವರೆಗೆ	ಕ್ಷೇತ್ರಗಣಿತ	100
	11–35ರಿಂದ 1—5 ವರೆಗೆ	ಪ್ರಾಕೃತಿಕ ಭೂಗೋಳ ಶಾಸ್ತ್ರ	100
	2ರಿಂದ 3–30 ವರೆಗೆ	ಹೊಲಿಗೆ	50
	3—35ರಿಂದ 5—5 ವರೆಗೆ	ಪಾಕಶಾಸ್ತ್ರ	50

ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆ.

ದಿನ.	ಘಂಟೆ.	ವಿಷಯ.		ಅಂಕಗಳು.	
ಮೊದಲನೇ ದಿನ	10—1	ಪ್ರಥಮ ಭಾಷೆ	ಗ್ರಂಥಗಳು	60	130
	2—4	ಅದೇ	ಪ್ರಾಥವ್ಯಾಕರಣ	40	
	4·5—5·5	ಅದೇ	ಪ್ರಬಂಧರಚನೆ	30	
ಎರಡನೇ ದಿನ	10—1	ದ್ವಿತೀಯ ಭಾಷೆ	ಗ್ರಂಥಗಳು, ವ್ಯಾಕರಣ, ಪದವಿನ್ಯಾಸ, ಭಾಷಾ ಶೈಲಿ	50	100
	2—5		ಭಾಷಾಂತರೀಕರಣ	50	
ಮೂರನೇ ದಿನ	10—12	ರೇಖಾಗಣಿತ, ಕ್ಷೇತ್ರಗಣಿತ		40	120
	1—3·30	ಅಂಕಗಣಿತ		50	
	3·35—5·5	ಬೀಜಗಣಿತ		30	
ನಾಲ್ಕನೇ ದಿನ	10—12	ಪ್ರಾಕೃತಿಕಶಾಸ್ತ್ರ (Physical science)		40	120
	1—3	ಆರೋಗ್ಯಶಾಸ್ತ್ರ		40	
	3·5—5·5	ಕೃಷಿಶಾಸ್ತ್ರ		40	
ಐದನೇ ದಿನ	10—1	ಚರಿತ್ರೆ		50	100
	2—5	ಭೂಗೋಳಶಾಸ್ತ್ರ		50	
				ಜುಮ್ಲಾ	570

ಪರೀಕ್ಷೆಯರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಆರನೇ ದಿನ ತತ್ಪೂರ್ವ ಪ್ರಕಟಿಸಲ್ಪಡುವ ಸ್ಥಳ, ಕಾಲಗಳಲ್ಲಿ ನಡೆಯುವುದು.

ಕರ್ನಾಟಕ ಪಂಡಿತಪರೀಕ್ಷೆ.

ದಿನ.	ಘಂಟೆ.	ವಿಷಯ.	ಅಂಕಗಳು.	
ಮೊದಲನೇ ದಿನ ..	10—1	ಕನ್ನಡ ವ್ಯಾಕರಣ	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ	80	
ಎರಡನೇ ದಿನ ..	10—1	ಕನ್ನಡ ಗ್ರಂಥಗಳು ಮೊದಲನೇಪತ್ರಿಕೆ	100	400
	2—5	ಅದೇ ಎರಡನೇ ಪತ್ರಿಕೆ	100	
ಮೂರನೇ ದಿನ ...	10—1	ಅದೇ ಮೂರನೇ ಪತ್ರಿಕೆ	100	
	2—5	ಅದೇ ನಾಲ್ಕನೇ ಪತ್ರಿಕೆ	100	
ನಾಲ್ಕನೇ ದಿನ ..	10—1	ಕನ್ನಡ ಪ್ರಬಂಧರಚನೆ	100	
	2—5	ಭಾಷಾಂತರೀಕರಣ	100	
ಐದನೇ ದಿನ ..	10—1	ಸಂಸ್ಕೃತ ವ್ಯಾಕರಣ	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ	120	
ಆರನೇ ದಿನ ..	10—1	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ	100	200
	2—5	ಅದೇ ಎರಡನೇ ಪತ್ರಿಕೆ	100	

ಇದರಡಿ ಕಂಡ ನಿಬಂಧನೆಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧಘಂಟೆ ಕಳೆದಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದ ನಂತರ ಪುನಃ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ಉಂಟಾಗಲಾರದು. ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವುದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ನಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವುದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ನಾವ ವಿಧವಾದ ಕಾಗದ ಪತ್ರಗಳನ್ನಾಗಲಿ, ತೆಗೆದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ, ಅಥವಾ ಇನ್ನಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗೆದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯು ಹೆಸರು ರೆಜಿಸ್ಟರ್ ನಂಬರ್ ಇವುಗಳನ್ನು ಬರಿಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗೆದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಸಿಷ್ಟ ಕಾಗದಗಳೂ ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

530

ನಂದೀದುರ್ಗದ ಡಿವಿಜರ್ನ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1896—97ನೇ ಇಸವಿ ಮಿ|| ಅರ್ಜೀ ನಂಬರ 138.

ಮೃತಪಟ್ಟ ಒಕ್ಕಲಿಗರ ಪುಟ್ಟಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಬೆಂಗಳೂರು ತಾಲ್ಲೂಕು ಅಗರದ ಹೋಬಳಿ ಆವಲಹಳ್ಳಿಯಲ್ಲಿ ಇರುವ ನಂಜುಂಡಪ್ಪನು ಮೃತಪಟ್ಟ ಸದರೀ ಪುಟ್ಟಪ್ಪನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ಆವಲಹಳ್ಳಿ ಸ್ಥಳದ ನಂಜುಂಡಪ್ಪನವರು ಆವಲಹಳ್ಳಿ ವಾಸಸ್ಥರಾಗಿ ಮೃತಪಟ್ಟ ಪುಟ್ಟಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜುಂಡಪ್ಪನವರ ಅರ್ಜಿಯನ್ನು ಸರ್ 1896ನೇ ಇಸವಿ ನವಂಬರ್ ತಿಂಗಳ ತಾರೀಖು 26ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಅರ್ಜೀ ನಂಬರ 140.

ಮೃತಪಟ್ಟ ಪುಟ್ಟಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಮಾಗಡಿ ತಾಲ್ಲೂಕು ಮಾಗಡಿ ಕಸಬೆಯಲ್ಲಿರುವ ಕುರವಿನ 1ನೇ ಬೈರಣ್ಣ 2ನೇ ಚನ್ನಮ್ಮ. ಮೃತಪಟ್ಟ ಸದರೀ ಪುಟ್ಟಣ್ಣನವರಿಗೆ 1ನೇ ಅರ್ಜೀದಾರ ಚಿಕ್ಕಪ್ಪ 2ನೇ ಅರ್ಜೀದಾರಳು ಹೆಂಡತಿ ಆಗಬೇಕೆಂಬ ಹಕ್ಕುದಾರ ಮೇಲೆ ಮಾಗಡಿ ಕಸಬಾ ಸ್ಥಳದ 1ನೇ ಬೈರಣ್ಣ 2ನೇ ಚನ್ನಮ್ಮ ಮಾಗಡಿ ವಾಸಸ್ಥರಾಗಿ ಮೃತಪಟ್ಟ ಪುಟ್ಟಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬೈರಣ್ಣ, ಚನ್ನಮ್ಮನವರ ಅರ್ಜಿಯನ್ನು 1896ನೇ ಇಸವಿ ನವಂಬರು ತಿಂಗಳ ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲಲ್ಲಿ ಸದರೀ ಮೃತಪಟ್ಟ ಪುಟ್ಟಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896—97ನೇ ಇಸವಿ ಮಿ|| ಅರ್ಜೀ ನಂಬರ 142.

ಮೃತಪಟ್ಟ ವರದಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ನೆಲವಂಗಲದ ತಾಲ್ಲೂಕು ಸೋಂಪೆಕುಪ್ಪದ ಹೋಬಳಿ ಗುಂಡಮಗೆರೆಯಲ್ಲಿರುವ ಬೈಯ್ಯಮ್ಮನು ಮೃತಪಟ್ಟ ಸದರೀ ವರದಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ನೆಲವಂಗಲ ತಾಲ್ಲೂಕು ಗುಂಡಮಗೆರೆ ಸ್ಥಳದ ಬೈಯ್ಯಮ್ಮನವರು ಗುಂಡಮಗೆರೆ ವಾಸಸ್ಥರಾಗಿ ಮೃತಪಟ್ಟ ವರದಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬೈಯ್ಯಮ್ಮನವರ ಅರ್ಜಿಯನ್ನು ಸರ್ 1896ನೇ ಇಸವಿ ನವಂಬರ್ ತಿಂಗಳ ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವರದಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896ನೇ ಇಸವಿ ಅಕ್ಟೋಬರ್ ತಿಂಗಳ 28ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರಾಸ್,
ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವೆಂಬರ 1896.
ಡಿಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2\. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3\. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4\. ಪ್ರತಿ ಕೋಠಿಯಲ್ಲಿಯು ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ವೊತ್ತವನ್ನ ಇದರಡಿ ವಿವರಿಸಿಧೆ.

ಸಂದಲ್ ವಿವರ	ಹಳೇ ತರಹೆ ಪ್ರಕಾರ.											
	ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.
ಸಲಾಕಿ ಅವ್ವಲ್ ..	1	..	..	5	..	15	..	..		15	..	...
ಡಿಟ್ಟೋ ದುಯಂ ..	..	5	1	5	2	5	3	5	1	..	..	2
ಡಿಟ್ಟೋ ಸಿಯಂ ..	1	10	7	10	5	5	12	15	8	..	4	..
ಡಿಟ್ಟೋ ಚಹರಂ ..	45	15	30	..	44	..	32	10	12	..	7	..
ಡಿಟ್ಟೋ ಪಂಚಂ ..	7	..	10	..	10	10	37	.	25	..	14	..
ಚಿಕ್ಕ ಸಲಾಕಿ ..	1	2	1	..	..	..	..	..	..	..	..	..
ದೊಡ್ಡ ಜಡಾ ..	21	..			33	..	66	5	40	..	25	..
ಚಿಕ್ಕ ಜಡಾ ..	3	15	35	..	5	..	8	..	4	..	2	..
ಜಡೆದ ರಂಬೆ ..	1	5			7	..	...	..	...	..	...	..
ದೊಡ್ಡ ಜಜ್ಜು ..	18	..	61	5	30	..	94	..	65	..	43	..
ಚಿಕ್ಕ ಜಜ್ಜು ..	3	5			11	..						
ಬಗರದದ್ದು ..	2	15	6	..	5	5	26	.	9	..	13	10
ಐರ್ ವಾಚೆ ಗುಬಗರು ..	1	..	3	..	..	10	..	..	..	..	..	..
ಗರಗಸ ಬುಕಣಿ ..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಪ .	1	10	1	..	6	5	15	10	15	..	16	..
ಚಿಕ್ಕ ಡಿಟ್ಟೋ ..	..	..	2	..								
ಕೆತ್ತೆ ಐರ್ ಚಿಲ್ಪ ..	6	..	..	..		..	..	..	..	..	..	...
ಹತ್ರಿ ಚಿಲ್ಪ ..	1	6	..	..	..	..	..	..	..	..	..	..
ಮಿಲ್ವ ಚಿಲ್ಪ ..	17	10	30	..	21	5	30	..	12	..	9	..
ಬಸೋಲ ಬುಕಣಿ ..	1	15	10	..	14	..	14	15	5	10	6	8
ಕೊಯತ ಚಿಲ್ಪ ..	..	..	1	10	3	10	9	..	2	..	1	..
ಜುಮ್ಲಾ ..	135	15	200	..	200	.	350	..	200	..		

ಸಂದಲ್ ವಿವರ.	ಹೊಸ ಯಾ ಬೊಂಬಾಯಿ ತರಹೆ ಪ್ರಕಾರ.			
	ಹುಣಸೂರು ಕೋಠಿ.		ಶ್ರೀರಂಗಪಟ್ಣ ಕೋಠಿ.	
	ಟನ್.	ಹ.	ಟನ್.	ಹ.
ವಿಲಾಯಿತಿ ಬಡ್ ..	1	.	..	10
ಚೈನಾ ಬಡ್ ..	20	..	30	
ಪಂಚಂ ..	28	..	89	..
ಚಿಕ್ಕ ಸಲಾಕಿ, ಘೊಟ್ಲ (ಅವ್ವಲ್) ..	3	...	5	..
ಡಿಟ್ಟೋ (ದುಯಂ) ..	2	..	1	..
ಘಟ್ ಬಡಲ ..	50	..	30	..
ಜಡಾ (ಅವ್ವಲ್) ..	25	..	25	..
ಡಿಟ್ಟೋ (ದುಯಂ) ..	25	..	12	..
ಡಿಟ್ಟೋ (ಸಿಯಂ) .	20	..	8	..
ಡಿಟ್ಟೋ (ಚಹರಂ) .	7	..	7	..
ಜಜ್ಜು (ಅವ್ವಲ್) ..	50	...	25	..
ಡಿಟ್ಟೋ (ದುಯಂ) ..	40	15	15	..
ಬಗರದದ್ದು ..	5	..	12	..
ಐರ್ ಬಗರು ..	5	..	14	..
ಚಿರಿಯಾ ..	5	..	5	..
ಐರ್ ಚಿಲ್ಪ (ಅವ್ವಲ್) ..	4	..	6	..
ಡಿಟ್ಟೋ (ದುಯಂ) ..	6	..	6	10
ಹತ್ರಿ ಚಿಲ್ಪ ..	1	..	2	10
ಗರಗಸ ಬುಕಣಿ ..	1	..	..	10
ಮಿಲ್ಲ ಚಿಲ್ಪ ..	30	..	50	..
ಬಸೋಲಾ ಬುಕಣಿ ..	7	..	10	..
ಚೇಗು ಮಿಲ್ವ ..	..	..	5	..
ಕಳೆದವರುಷದ ಜಡಾ	113	15	12	15
ಸ್ಪೆಷಲ್ ಕ್ಲಾಸ್ ..	..	10	...	..
ಟೋಟಲ್ ..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಯೆ ಇಬರಡಿ ಕಂಡುಬರುವ ತಿದ್ದು ಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ರ್ರುಂ 15230.—ಆರ್. ಎಫ್. 155.—92ನೇ ನಂಬರ ರೂಲ್ಸ್‌ಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ನೊಕರರ್ಮಾಡಲ್ಪಟ್ಟ ಯಿತರ ಆಫಿಸರಿಂದ ಆಗಲಿ ಶೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಹಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದಿದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಆದರ ತಪ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾಧ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ ಆಫ್ ಅಡ್ವೈಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫಿಸರರು ಒಂದು ರಸೀದಿಯನ್ನು ಕೊಡತಕ್ಕದ್ದು. ಆ ರಶೀದಿಯನ್ನ 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫಿಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಆದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫಿಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫಿಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಶೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಯಿಲ್ಲದ ರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫಿಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ಉಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಯಂದಿಗೂ ಯಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫಿಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫಿಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫಿಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ ಹಾಜರಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನ ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫಿಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ವಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀ

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫಿಸರವರು ಅಥವಾ ತೂಗಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫಿಸರು ತಮಿಗೆ ಅನುಕೂಲವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫಿಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫಿಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ವುತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ವಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿ ದಾರನಿಗೆ 10 ದಿನಗಳು ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವವರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್ಪೆಕ್ಟರ್ ಜನರಲ್ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ.

9. ಫಾರೆಸ್ಟ್ ಇನ್ಚಾರ್ಜು ಆಫಿಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಒಟ್ಟು ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಶೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್ಛಾರ್ಜ್ ಫಾರೆಸ್ಟ್ ಆಫಿಸರರಿಂದ ಕೊಡಲ್ಪಡತಕ್ಕ ಲೈಸೆನ್ಸ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫಿಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್ಛಾರ್ಜ್ ಫಾರೆಸ್ಟ್ ಆಫಿಸರು ತಮ್ಮ ಸ್ವಂತ ಜವಾಬ್ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ತಾರೀಖು 15ನೇ ಸೆಪ್ಟಂಬ 1896.

ಸರ್ಕಾರದ ಗಂಧದ ಕೋಠಿಗಳಲ್ಲಿ ಹಾಲಿ ಉಪಯೋಗದಲ್ಲಿರುವ ಪೌನ್ ವಜನೀ ಬಟ್ಟಿಗೆ ಬದಲಾಗಿ ಇಂಗ್ಲಿಷ್ ಸ್ಟಾಂಡರ್ಡ್ ಕರಾರ್ವಾಕಾ ಪೌನ್ ವಜನಿ ಬಟ್ಟು 1ಕ್ಕೆ $38\frac{8}{9}$ ರೂಪಾಯಿ ತೂಕವುಳ್ಳ ಬಟ್ಟುಗಳು ಗವರ್ನಮೆಂಟಿನವರ ಮಂಜೂರಾತಿ ಅನುಸರಿಸಿ, 1897ನೇ ಇಸವಿ ಲಾಗಾಯತು ಯಲ್ಲಾ ಕೋಠಿಗಳಲ್ಲಿಯೂ ಜಾರಿಯಲ್ಲಿ ತರಲ್ಪಡುತ್ತೆ. ಆದರೆ ಚಾಲತಿ 1896ನೇ ಡಿಸೆಂಬರ್ 31ನೇ ತಾರೀಖು ವಳಗೆ, ಖರೀದಿಗೆ ತೆಗದುಕೊಳ್ಳಲ್ಪಡುವ ಗಂಧ ಹಾಲಿ ಜಾರಿಯಲ್ಲಿರುವ ಪೌನ್ ಬಟ್ಟುಗಳ ಪ್ರಕಾರವೇ ವಜನಿಯಿಂದ ಕೊಡಲ್ಪಡುವದು.

ಐಯ್ಯಿಂದಾ ಜಾರಿಯಲ್ಲಿ ಬರತಕ್ಕ ಒಂದೇವಿಧವಾದ ಇಂಗ್ಲಿಷ್ ವಜನೀ ಬಟ್ಟುಗಳು ಅವುಗಳ ಸರಿಯಾದ ತೂಕ ಸಹ ಇದರಡಿ ನಮೂದಿಸಲ್ಪಟ್ಟಿರುತ್ತೆ:—

ಟನ್ 1ಕ್ಕೆ $2\frac{3}{7}\frac{1}{2}$ ರೂಪಾಯಿ ತೂಕ	ಹನ್ಡ್ರೆಡ್ವೇಟ್ 1ಕ್ಕೆ $4,355\frac{5}{9}$ ರೂಪಾಯಿ ತೂಕ.
ಪೌನ್ 1ಕ್ಕೆ $38\frac{8}{9}$ ಡಿಟೋ	ಟನ್ 1ಕ್ಕೆ $87,111\frac{1}{9}$ ಡಿಟೋ

ಸ್ಟಾಂಡರ್ಡ್ ಅಂದರೆ, ನಿಷ್ಕರ್ಷಿಸಲ್ಪಟ್ಟ ಕರಾರ್ವಾಕಾ ತ್ರಾಸು, ಬಟ್ಟುಗಳು ಪ್ರತಿ ಕೋಠಿಯಲ್ಲಿ ಹಾಜರಿರುತ್ತವೆ. ಇವುಗಳಿಂದ ಹಾಲಿ ವಜನೀ ಬಗ್ಯೆ ಉಪಯೋಗದಲ್ಲಿರುವ ಬಟ್ಟುಗಳನ್ನ ಅಜಮಾಯಿಷಿ ಮಾಡಿಕೊಳ್ಳಬಹುದಾಗಿರುತ್ತೆ.

ಸಿ. ಅಪ್ಪಯ್ಯಾ,
ಫಾರ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

ನೋಟಿಸ್.

ತಾರೀಖು 27ನೇ ಅಕ್ಟೋಬರು 1896.

ಬೆಂಗಳೂರು ಡಿಸ್ಟ್ರಿಕ್ಟು 1ನೇ ಜನರಲ್ ಅಸಿಸ್ಟೆಂಟ್ ಕಮಿಷನರ ಮೆಸ್ಟರ್ ಏ. ನರಸಿಂಹಯ್ಯಂಗಾರ್ರವರು ಸೆಪ್ಟಂಬರ 17ನೇ ತಾರೀಖಿನಲ್ಲಿ ತಮ್ಮ ಮನೆಯು ಆಫೀಸ್ ರೂಮ್ ಮೇಜಿನ ಮೇಲೆ ಇಟ್ಟಿದ್ದ ಈ ಕೆಳಗಿನ ತಪ್ಸೀಲಿನಲ್ಲಿ ಕಂಡ ಘಡಿಯಾರ ಮತ್ತು ಸರಪಣಿ ಸಹ ಕಳವಾಗಿರುವದಾಗಿಯೂ ಇದನ್ನ ಪತ್ತೇಮಾಡಿ ಕೊಟ್ಟವರಿಗೆ 10 ರೂಪಾಯಿಗಳು ಇನಾಂ ಕೊಡುವದಾಗಿ ಬರೆಸಿರುತ್ತಾರೆ.

(ವಾಚ್ ಮತ್ತು ಸರಪಣಿಯ ತಪ್ಸೀಲ್.)

ಪಿ. ಆರ್. ಅಂಡ್ ಸನ್ಸ್, ರೈಲ್ವೆ ರೆಗ್ಯುಲೇಟರ ಎಂದು ಇಂಗ್ಲೀಷ್ ಅಕ್ಷರದಲ್ಲಿ ವಾಚ್ ಮೇಲೆ ಗುರ್ತು ಇದೆ. ಇದರ ಕ್ರಯ 25 ರೂಪಾಯಿ.

ಇದಕ್ಕೆ ಹಾಕಿ ಇರುವ ಭಂಗಾರದ ಸರಪಣಿಯು ಮೂರುಚಿಕ್ಕ ಸರಪಣಿಗಳು ಸಂಗಡ ಜಾಯಿಂಟ್ ಆಗಿಯು ಒಂದುಕಡೆ ಹಿತ್ತಾಳೆ ವುಂಗ್ರವು ಮತ್ತೊಂದುಕಡೆ ಭಂಗಾರದ ವುಂಗ್ರವು ಹಾಕಿದ್ದಾಗಿಯೂ ಇದೆ. ಇದು 9 ಇಂಚ್ ಉದ್ದ ಅಗಲ $\frac{3}{4}$ ಇಂಚ್ ಉಳ್ಳದ್ದಾಗಿಯೂ ಇದೆ. ಇದರ ಕ್ರಯ 40 ರೂಪಾಯಿಗಳು.

ಡನಿಂಗ್,
ಸೂಪರ್ಇಂಟೆಂಡೆಂಟ್ ಆಫ್ ಪೊಲೀಸ್.

ಕೋಲಾರ ಮುನ್ಸಿಫ್ ಕೋರ್ಟು ಸಂ॥ಕ್ಕೆ.

ಸನ್ 1895—96ನೇ ಇಸವಿ ಶಿವಿಲ್ ನಂಬರ್ 852.

ವಾದಿ ಮುಳಬಾಗಲ್ ತಾಲ್ಲೂಕು ನೊಂಬರಹಳ್ಳಿಲಿ ಇರುವ ಶಾಪೂರು ಕಿಜ್ಜಯ್ಯ.

ಪ್ರತಿವಾದಿಗಳು ಕೋಲಾರದಲ್ಲಿ ಇರುವರು.

1ನೇ ಅತಾರ್ ಪುಸವರ್ಸಾಬ್.
2ನೇ ಇವನ ದಾಯಾದಿ ಹರ್ಸಸಾಬ್.
3ನೇ ಅತಾರ್ ಮುಖ್ತುಂಸಾಬ್.
4ನೇ ಅತ್ತಾರ ಗವುಸ್‌ಸಾಬ್.
5ನೇ ಚವುದ್ರಿ ಮಹಂಮದ್ ಸಾಬ್.
6ನೇ ಸ್ಕೂಲ್ ಮಾಸ್ಟರ ಅಹಂಮದಲ್ಲಿ.

ವಾದಿಯು ಹೇಳಿಕೊಳ್ಳುವದೇನಂದರೆ,—ಕೋಲಾರದಲ್ಲಿ ಇರುವ ವಾದಿಬಗೆ ಮನೆ ಹಿತ್ತಲು ಜಮೀನು ಭಾವಿ ನೀರುಹೋಗತಕ್ಕ ದಾರಿ ಇವೆಲ್ಲಾ ಪ್ರತಿವಾದಿಗಳು ಆಕ್ರಮಿಸಿಕೊಂಡು ಮಶೀದಿಗೆ ಸೇರಿಸಿಕೊಂಡಿರುವ ನಿಮಿತ್ತ ಇವೆಲ್ಲಾ ಬರಮಾಡಿಸಿಕೊಡತಕ್ಕ ಬಗ್ಯೆ ಕೋಲಾರದಲ್ಲಿ 1896ನೇ ಇಸವಿ ಮಾರ್ಚಿ ಯಾ ಆ ಸುಮಾರು ಕಾಲದಲ್ಲಿ ವ್ಯಾಜ್ಯ ಕಾರಣ ಉಂಟಾಗಿ ಈ ದಾವಾ ತರಲ್ಪಟ್ಟಿರುತ್ತೆ.

ಬಿ. ವೆಂಕಟಾಚಾರ್,
ಮುನ್ಸಿಫ್.

ತುಮಕೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 28ನೇ ಅಕ್ಟೋಬರ್ 1896.

ಮೈಸೂರ್ ಗವರ್ನಮೆಂಟ್ ತುಮಕೂರು ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರ್‌ಗಳು ತಮ್ಮ ತಮ್ಮ ಸೇವಿಂಗ್ಸ್ ಬ್ಯಾಂಕ್ ಪ್ಯಾಸ್ ಬುಕ್ಕುಗಳನ್ನು 1895—96ನೇ ಇಸವಿಯ ಬಡ್ಡಿ ಮೊಬಲಗನ್ನು ದಾಖಲ್ಮಾಡುವದಕ್ಕೋಸ್ಕರ ಈ ಆಫೀಸಿಗೆ ಕಳುಹಿಸಿ ಕೊಡಬೇಕಾಗಿ ಕೇಳಿಕೊಳ್ಳಲ್ಪಟ್ಟಿದೆ.

ಟಿ. ಮೀರ್‌ಕಮಾಲುದ್ದೀನ್ಅಲಿಖಾನ್,
ಟ್ರೆಜರಿ ಆಫಿಸರ್.

ನಗರದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿ॥ ಅರ್ಜಿ ನಂಬರ 85.

ಮೃತಪಟ್ಟ ಶಿವಲಿಂಗಪ್ಪ ಯಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಜವಳಿ ಶಾಂತವೀರಪ್ಪ ಚನ್ನಗಿರಿವಾಸಸ್ಥ ಜವಳಿ ಶಾಂತವೀರಪ್ಪನು, ಮೃತಪಟ್ಟ ಸದರಿ ಶಿವಲಿಂಗಪ್ಪ ಯಂಬವರಿಗೆ ದೊಡಪ್ಪನ ಮಗನು ಆಗಪೇಕೆಂಬ ಹಕ್ಕು ದಾರಿ ಮೇಲೆ ಚನ್ನಗಿರೀ ಸ್ಥಳದ ಶಾಂತವೀರಪ್ಪ ಯಂಬವರು ಚನ್ನಗಿರಿ ವಾಸಸ್ಥರಾಗಿ ಮೃತಪಟ್ಟ ಶಿವಲಿಂಗಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 250 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಾಂತವೀರಪ್ಪಯಂಬರ ಅರ್ಜಿಯನ್ನು 1896ನೇ ಇಸವಿ ನವಂಬರ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿವಲಿಂಗಪ್ಪಯಂಬವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ಅಕ್ಟೋಬರ ತಿಂಗಳ 23ನೇ ತಾರೀಖಿನಲ್ಲಿ ಕೋರ್ಟು ಮೊಹರ ನಿಶಿ ನಮ್ಮದಸ್ತುಖತ್ತೊಡನೆ ಕೊಡೋಣಾಗಿದೆ.

ಎ. ವೆಂಕಟರಾವ್,
ಫಾರ ಡಿಸ್ಟ್ರಿಕ್ಟು ಜಡ್ಜಿ.

ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು.

ಇಸ್ತಿಹಾರ್‌ನಾಮೆ.

ತಾರೀಖು 6ನೇ ಅಕ್ಟೋಬರ್ ಸರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಬೈರೇದೇವರು ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸರ್ 1896ನೇ ಇಸವಿ ಡಿಸೆಂಬರ್ ತಾರೀಖು 7ನೇ ಸೋಮವಾರ ಹಗಲು 11 ಘಂಟೆಗೆ ಕಡೂರು ಡೆಪ್ಯುಟಿ ಕಮಿಷ್ನರ್ ಸಾಹೇಬರವರ ಮಂಜೂರಾತಿಗೆ ಒಳಪಡಿಸಿ ಕೊಪ್ಪ ತಾಲ್ಲೂಕು ಅಮಲ್‌ದಾರ್ರ ರೂಬರೂ ಹರಿಹರಪುರ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ಒಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಬಾಯಿಷ್ ಮಾಡುವ ಅಬ್ಬೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್‌ಸೆಟ್ ಪ್ರೈಸ್) ಪೈಕಿ ಯಾ ಜವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರ ರ‍್ಯಾರಾದರೂ ಪಡೆದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್‌ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜು ಖೈದಾದ ವಕ್ತನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರು ಡಿಪಾಜಿಟ್ ಮೊಬಲಗು ಭರ್ತಿಗೆ ಒಳಪಟ್ಟು ಅಬ್ಬೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಅಬ್ಬೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯಕ ಮಾಡಲ್ಪಟ್ಟ ಕಾಲದೊಳಗೆ ಖರೀದಿ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡದೆ ತಪ್ಪಿದರೆ ಡಿಪಾಜಿಟ್ ಮೊಬಲಗಿನಲ್ಲಿ ಖರೀದಿಗಾಗಿ ತಗಲಿರುವ ಖರ್ಚು ವಜಾ ಜಾತಾ ಬಾಕಿನಿಂತ ಠೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರತಕ್ಕದ್ದು. ಮತ್ತು ಸ್ವತ್ತು ಪುನಹ ವಿಕ್ರಯಿಸಲ್ಪಡುವ ಮನುಷ್ಯನ ಸ್ವತ್ತಿಗೆ ಇದ್ದ ಹಕ್ಕನ್ನು ಕಳದುಕೊಂಡದ್ದಲ್ಲದೆ ಅನಂತರ ಮೊಬಲಗಿನ ಯಾವ ಭಾಗದ ಹಕ್ಕು ಇಲ್ಲದವನಾಗಿ ಇರುತ್ತಾನೆ. ಪರಂತು ಈ ಷರತ್ತನ್ನು ಜಾರಿಯಲ್ಲಿ ತರತಕ್ಕದ್ದು. ಅಧಿಕವಾದ ತೊಂದರೆ ಇದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡೆಪ್ಯುಟಿ ಕಮಿಷನರಿಗೆ ತೋರಿಬಂದರೆ ಅಂಥಾವುಗಳನ್ನು ಸರಕಾರದ ಆರ್ಡರುಬಗ್ಗೆ ಶಿಫಾರಸ್ ಮಾಡತಕ್ಕದ್ದಕ್ಕೆ ಅರ್ಹರಾಗಿರುತ್ತಾರೆ. ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ಉತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನಲ್ಲಿ ಚಡದರಖಾಸ್ತು ಮಾಡಿ ತಪ್ಪಿಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಇಂಥಾ ವ್ಯತ್ಯಾಸದ ಮೊಬಲಗನ್ನು ಡೆಪ್ಯುಟಿ ಕಮಿಷನ್ನರವರು ಜಮೀನ್ ಕಂದಾಯದ ಬಾಕಿಯಂತೆ ವಸೂಲ್ ಮಾಡತಕ್ಕದ್ದು.

5. ಈ ನಿಬಂಧನೆಗಳಿಗೆ ಒಳಪಟ್ಟು ಹರಾಜಾದ ಜಮೀನನ್ನು ಷುರು ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನ್‌ನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ.		ಷರಾ.
				ವಿಸ್ತೀರ್ಣ.	ಆಕಾರ.	
112ರ ಪೈಕಿ.	ಕೊಠಡಿ ಯಸ್ಟೇಟ್ ಮೆಸ್ಸರ್' ಹೇ ಸಾಹೇಬರವರು.	ವೃತ್ರಕಾಮೇಷ್ಟ್ರಿ ಹಾಡ್ಯ, ಮೇಗುಂದ ಹೋಬಳಿ ಬೈರೇದೇವರು ಗ್ರಾಮ.	1 ಪೂರ್ವಕ್ಕೆ—ದೇವಸ್ಥಾನಕ್ಕೆ ಬಿಡಬೇಕೆಂತಾ ಗುರ್ತಿಸಿ ಇರುವ ಈ ನಂಬರು ಗಡಿ. 2 ಪಶ್ಚಿಮಕ್ಕೆ—ಹಳ್ಳಾ. 3 ದಕ್ಷಿಣಕ್ಕೆ—ನಂ. 111ನೇ ಖರಾಬುಗುಡ್ಡ 4 ಉತ್ತರಕ್ಕೆ—ಹಳ್ಳಾ.	62—2	..	

ತಿಳುವಳಿಕೆ ಷರಾ.—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರು ವಾಕಾ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೆ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೆ ಆಗಲಿ ಜಮೀನ ಹಿಡುವಳಿದಾರನು ಬದ್ಧ ವ ಅರ್ಹನಾಗಿರಬೇಕು.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು	
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಸ್ಕೂಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳ ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ವಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮರ್ಸ್ಕೂಂ 24205—6—ಜಿ. 6200ನೇ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸ್‌ಗಳು:—

	ರೂ.	ಆ.
ಮೊದಲನೇ ದಫಾ ಘಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸ್‌ಗಳಿಗೆ :—

	ರೂ.	ಆ.
ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯೂಪ್ಲಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ :—

		ರೂ.	ಆ.
ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	,, ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

			ರೂ.	ಆ.
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ ..	0	8
ಎರಡನೇ ದಫಾ	ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	..	..	0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದ್‌ಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಯಿಲ್ಲ.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟಾಫೀಸ್ ಮನಿಆರ್‌ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಪ್ಸೀಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುಂಥಾ ಕೂಪನ್‌ಗಳಗೆ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ವೊಬಲಗು ತೆಗದುಕೊಂಡು ರಸೀತಿ ಕೊಡುವ ಬಗ್ಗ್ಯಾಗಿ ಅಪ್ಪಣೆ ಯಿಸುವದ್ದರಿಂದ ಇನ್ನು ಮೇಲೆ ಮೈಸೂರ್ ಸೀಮೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್‌ಡರ್ ಹೊರ್ತಾಗಿ ಅನ್ಯಥಾ ಆ ಬಗ್ಗ್ಯಾಗಿ ಈ ಆಫೀಸಿಗೆ ಕಳುಹಿಸಲ್ಪಡುವ ಯಾವ ಮನಿಆರ್‌ಡರಾಗಲಿ ಈ ಆಫೀಸಿನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಶಕ್ಕೂ ನಿಗೆ ಕೊಡಲ್ಪಡಲಾರದು.

ಸಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪೈಲರ್.

Mysore Govt. Central Press, Bangalore.—1896.

538

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 45.

ಬೆಂಗಳೂರು, ಗುರುವಾರ, ನವಂಬರ ತಾ|| 12, ಸನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಯುಡ್ಯು ಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 2ನೇ ನವಂಬರ 1896.

ನಂ. 5133.—ಮಿ. 995, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗಾ ಸಿವಿಲ್ ಸರ್ಜನ್ ಮೆಸ್ಟರ್ ಪಿ. ಎಸ್. ಅಚ್ಯುತರಾವ್, ಎಲ್. ಎಂ. ವ ಎಸ್., ಯವರಿಗೆ 1896ನೇ ಸೆಪ್ಟಂಬರ್ 10ನೇ ಮುಕ್ಕಾಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 5159.—ಜು. 591, ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರಾದ ಮೆಸ್ಟರ್ ಬಿ. ತಿರುಮಲಾಚಾರ್ಲು, ಬಿ. ಎಲ್., ಯವರು 1896ನೇ ಅಕ್ಟೋಬರ 26ನೇ ಮುಕ್ಕಾಮಿನ ಪೂರ್ವಾಹ್ನದಲ್ಲಿ ಅಷ್ಟಗ್ರಾಮ ಡಿವಿಜನ್ ಡಿಸ್ಟ್ರಿಕ್ಟು ವ ಸೆಷನ್ಸ್ ಕೋರ್ಟಿನ ಚಾರ್ಜನ್ನು ವಹಿಸಿರುತ್ತಾರೆ.

ತಾರೀಖು 3ನೇ ನವಂಬರ 1896, ಮೊಕ್ಕಾಂ ಮೈಸೂರ್.

ನಂ. 5234.—ಮಿ. 1019, ಈ ಕೆಳಗೆ ಕಂಡ ಮೊಕರರಾತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ.—

ಕೆಲಸದಿಂದ ಪೆನ್ಷನ್‌ಮೇಲೆ ನಿವೃತ್ತರಾದ ಮೆಸ್ಟರ್ ಟಿ. ವಿಯರ್, ಐ. ಸಿ. ಎಸ್., ಯವರು, ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟು ಮತ್ತು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 30ನೇ ಸಕ

ರ್ಷ ಅನುಸರಿಸಿ ಫಾಸಿ ಸಜಾ ಶಿಕ್ಷೆಗೆ ಅರ್ಹವಲ್ಲದ ದರೋಬಸ್ತು ತಕ್ಸೀರುಗಳನ್ನು ಮಾಜಿಸ್ಟ್ರೇಟರಾಗಿ ದರ್ಯಾಫ್ತೀ ಮಾಡುವ ಬಗ್ಯೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷ್ನರ ಮೆಸ್ಟರ್ ಎಚ್. ಎಚ್. ಸ್ಪಾರ್ಕ್ಸ್ ಯವರು, ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್, ಗವರ್ನಮೆಂಟ್ ಪ್ರಸ್ ವ ಸ್ಟೇಷನರಿಯ ಸೂಪರಿಂಟೆಂಡೆಂಟ್ ಮತ್ತು ಮೈಸೂರ ಗೆಜೆಟ್ ಕಂಪೈಲರಾಗಿರತಕ್ಕದ್ದು. (ಚಾರ್ಜು ವೊಪ್ಪಿಸಿದ ತರುವಾಯ ಕೆಲಸಕ್ಕೆ ಹೋಗಿ ಸೇರತಕ್ಕದ್ದು.)

ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್ ಮೆಸ್ಟರ ಡಿ. ಪಿ. ಜೋಕ್ಸಿಯವರು, ಬೆಂಗಳೂರ ಸಿವಿಲ್ ಸರ್ಜ್ಯನರಾಗಿರತಕ್ಕದ್ದು. (ಚಾರ್ಜು ವೊಪ್ಪಿಸಿದ ತರುವಾಯ ಕೆಲಸಕ್ಕೆ ಹೋಗಿ ಸೇರತಕ್ಕದ್ದು.)

ತಾರೀಖು 30ನೇ ಸೆಪ್ಟಂಬರ್ 1896.

ನಂ. 3513.—ರೆ. 1202, ಸರ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷರ್ ರೆಗ್ಯುಲೇಷನಿನ 6ನೇ ಸೆಕ್ಷರ್ ನಿಯಮಗಳನುಸರಿಸಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಜಮೀನ್ಗಳು ಸರ್ಕಾರ ಕೆಲಸಕ್ಕೆ ಅಂದರೆ ರಾಮಸಮುದ್ರ ನಾಲೆಯ 24ನೇ ಮೈಲಿಯಲ್ಲಿ ಕೊಳವಿಯಿಂದ ಪ್ರವಾಹದ ನೀರು ಹೋಗುವ ಬಗ್ಯೆ ವೊಂದು ನಾಲೆಯನ್ನ ತೆಗಿಯುವ ಬಗ್ಯಾಗಿ ಅವಶ್ಯಕವಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರನ ಹೆಸರು.	ಜಮೀನ್ ತಪ್ಸೀಲ್.			ಚಕ್ಕುಬಂದಿ.
					ಸರ್ವೆ ನಂಬರ್	ವಿವರಣೆ.	ಬೇಕಾದ ವಿಸ್ತೀರ್ಣ.	
ಮೈಸೂರು	ಎಡತೊರೆ.	ಎಡತೊರೆ.	ಎಡತೊರೆ.	ರಾಂಭಟ್ಟ.	35	ತರೀ.	96 × 7 ಗಜಗಳು, 5½ ಗುಂಟೆಗಳು.	ಪೂರ್ವಕ್ಕೆ—ಸರ್ವೆ ನಂ. 37, ಮತ್ತು. ದಕ್ಷಿಣಕ್ಕೆ—ಮೆನಗನಹಳ್ಳಿಯ ನಂ. 36. ಪಶ್ಚಿಮಕ್ಕೆ—ರಸ್ತೆ. ಉತ್ತರಕ್ಕೆ—ಎಡತೊರೆಯ ಸರ್ವೆ ನಂ. 41.
					41		170 × 7 ಗಜಗಳು, 10 ಗುಂಟೆಗಳು.	ದಕ್ಷಿಣಪಾರ್ಶ್ವಕ್ಕೆ—ನಂ. 35. ಪಶ್ಚಿಮಪಾರ್ಶ್ವಕ್ಕೆ—ರಸ್ತೆ. ಪೂರ್ವಪಾರ್ಶ್ವಕ್ಕೆ—ನಂ. 39, ಮತ್ತು. ಉತ್ತರಪಾರ್ಶ್ವಕ್ಕೆ—ನಂ. 41.

ತಾರೀಖು 16ನೇ ಅಕ್ಟೋಬರ್ 1896.

ನಂ. 3836.—ರೆ. 1322, ಸರ್ 1894ನೇ ಇಸವಿಯ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವಿಜಿಷರ್ ರೆಗ್ಯುಲೇಷನಿನ 6ನೇ ಸೆಕ್ಷರ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನ್ಗಳು ಸರ್ಕಾರ್ ಕೆಲಸಕ್ಕೆ ಅಂದರೆ ಎಡಹಳ್ಳಿ ಸಬ್ ತಾಲ್ಲೂಕಿನಲ್ಲಿ ಭದ್ರಾಕ್ಕೆ ಅಡ್ಡವಾಗಿರುವ ಬಾಳೇಹೊನ್ನೂರು ಸೇತುವೆಯ ಕಟ್ಟೆ ವಗೈರೆ ಕಟ್ಟುವ ಬಗ್ಯಾಗಿ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ	ಹಿಡುವಳಿದಾರ್ರ ಹೆಸರು.	ಜಮೀನಿನ ತಪ್ಸೀಲು.				ಚಕ್ಕುಬಂದಿ.			
				ವಿವರಣೆ.	ಸರ್ವೇ ನಂ.	ವಿಸ್ತೀರ್ಣ.	ಬೇರೀಜು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎ. ಗುಂ.	ರೂ.ಆ.ಪೈ.				
ಕಡೂರು.	ಎಡಹಳ್ಳಿ.	ಕಣಬೂರು	ಲಿಂಗೇಗವುಡ	ತರೀ	1ರ ಭಾಗ	1—32	6–0–0	ಲಿಂಗೇಗವುಡನ ಖಾತೇಜಮೀನ್ ನಂ. 1 ತರೀ.	ವಸ್ತಾರಾ ಕೊಪ್ಪದ ಹೈರೋಡ್	ಸರ್ವೆ ನಂ. 107 ಖರಾಬ್	ಕಳಸಾ ರೋಡು
		ಡಿಟೋ	ಸಿರ್ವ್ಯ(ಮೇಸ್ತ್ರಿ)	ತರೀ	108ರ ಭಾಗ	2—23	9–0–0	ವಸ್ತಾರಾ ಕೊಪ್ಪದ ಹೈರೋಡು	ನಂ. 108ರ ಭಾಗ	ನದಿಗೆ ಹೋಗುವ ಹಳೇ ರಸ್ತೆ	ವಸ್ತಾರಾ ಕೊಪ್ಪದ ಹೈರೋಡು
		ಕರಹಳ್ಳಿ	ಮೆ॥ ಕ್ಲಿಫರ್ಡ್	ಕಾಫಿ	1ರ ಭಾಗ	2—30	..	ಡಿಟೋ	ಭದ್ರಾನದಿ	ಕಾಫಿ ಜಮೀನು ನಂ. 11	ಕಾಫಿ ಜಮೀನ್ ನಂ. 12
		ಡಿಟೋ	ಡಿಟೋ	ಕಾಫಿ	12	3—8	5–0–0	ಸರ್ವೆ ನಂ. 11	ಡಿಟೋ	ಸರ್ವೆ ನಂ. 11	ಭದ್ರಾನದಿ ಮತ್ತು ವಸ್ತಾರಾ ಕೊಪ್ಪದ ಹೈರೋಡು

ತಾರೀಖು 9ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರು.

ನಂ. 3772.—ರೆ. 1293, ಹಿರಿಯೂರು ತಾಲ್ಲೂಕಿನ, ಹಿರಿಯೂರು ಮತ್ತು ಜವನಗೊಂಡನಹಳ್ಳಿ ಹೋಬಳಿಗಳಲ್ಲಿರುವ ಈ ಕೆಳಗೆ ಕಂಡ ಗ್ರಾಮಗಳ ವರ್ಗಾವರ್ಗಿಯು ಗವರ್ನಮೆಂಟಿನವರು ಮಂಜೂರ್ಮಾಡಿರುತ್ತಾರೆ:—

ಗ್ರಾಮ.	ವರ್ಗಮಾಡಿರುವ ಹೋಬಳಿ.
ಅನೆಸಿದ್ರಿ (ಹಿರಿಯೂರು ಹೋಬಳಿ)	ಜವನಗೊಂಡನಹಳ್ಳಿ
ಆದಿವಾಲ (ಜವನಗೊಂಡನಹಳ್ಳಿ ಹೋಬಳಿ) ..	ಹಿರಿಯೂರು

ತಾರೀಖು 24ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರು.

ನಂ. 3937.—ರೆ. 1354, ಸನ್ 1888ನೇ ಇಸವಿಯ IVನೇ ರೆಗ್ಯುಲೇಷನಾದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ರಕಾರ ಅನುಸರಿಸಿ, ನಂಜಿನಗೂಡು ತಾಲ್ಲೂಕಿನಲ್ಲಿರುವ ಕನ್ಯಾನೂರು, ಹಬ್ಬಾಲಾ, ಮಂದನಹಳ್ಳಿ, ಮದ್ದೂರು ಮತ್ತು ಕಲ್ಲಹಳ್ಳಿ ಸರ್ವ ಇನಾಂ ಗ್ರಾಮಗಳಿಗೆ ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನು ಲಗಾವ್ ಮಾಡುವ ಬಗ್ಗೆ ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸಿರುತ್ತಾರೆ.

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ

ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

541

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಘಾಯಿಷ್ ಆದ್ದು. [ನಂ. 45.

ಬೆಂಗಳೂರು, ಗುರುವಾರ, ನವಂಬರ್ ತಾ॥ 12, ಸ್ಥ 1896.

IIನೇ ಭಾಗ.

ಇಂಡ್ಯಗವರ್ನ್ಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟು ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟು 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟು ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸರ ಡಿಟ್ಟೋ	,, 170
1	ಮದ್ರಾಸ್ ಓಕ್ಸರವರ ಡಿಟ್ಟೋ	,, 250
1	ಡಿಟ್ಟೋ ಡಿಟ್ಟೋ ಡಿಟ್ಟೋ	,, 188
1	ಡಿಟ್ಟೋ ಬೋರ್ರ್ಯಾಪುರವರ ಡಿಟ್ಟೋ	,, 85

ಖರೀದಿದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ವಿದ್ಯಾಭ್ಯಾಸದ ಇಲಾಖೆ.

ಮೈಸೂರು ದೇಶೀಯ ಪರೀಕ್ಷೆಗಳು.

ಸನ್ 1896ನೇ ಇಸವಿ ಅಕ್ಟೋಬರ್ ತಾರೀಖು 19.

ಪ್ರಕಟನ ಪತ್ರಿಕೆ.

ಮೈಸೂರು ದೇಶೀಯ ಪರೀಕ್ಷೆಗಳು ಸನ್ 1896ನೇ ಇಸವಿ ಡಿಸೆಂಬರ್ ತಿಂಗಳು ಮೊದಲನೇ ತಾರೀಖಿನಿಂದ ಆರಂಭವಾಗಿ ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳ (Head-quarters) ದಲ್ಲಿಯೂ ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಟಣದಲ್ಲಿಯೂ ನಡೆಯಿಸಲ್ಪಡುವವು:—

ಪರೀಕ್ಷೆಗಳು ಇದರಡೀಕಂಡ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವವು:—

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ.

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೊದಲನೇ ದಿವಸ	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ; ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1–30ರಿಂದ 2—30 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಭಾಷಾಂತರೀಕರಣ.—ಇಂಗ್ಲಿಷ್, ಸಂಸ್ಕೃತ; ಫಾರಸಿ .. ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳಂಥಾವರಿಗೆ	35
	2–35ರಿಂದ 3–5 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಉಕ್ತಲೇಖನ—ಇಂಗ್ಲಿಷ್; ಸಂಸ್ಕೃತ; ಫಾರಸಿ	10
	3–10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಕೈ ಬರವಣಿಗೆ.—ಇಂಗ್ಲಿಷ್; ಸಂಸ್ಕೃತ; ಫಾರಸಿ	10
	3–45ರಿಂದ 4—15 ವರೆಗೆ	ಹಿಂದುಸ್ತಾನಿ ಉಕ್ತಲೇಖನ	10
	4–20ರಿಂದ 4—50 ವರೆಗೆ	ಹಿಂದುಸ್ತಾನಿ ಕೈ ಬರವಣಿಗೆ	10
ಎರಡನೇ ದಿವಸ	10ರಿಂದ 1ರ ವರೆಗೆ	ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ ವ್ಯಾಕರಣ; ಭಾಷಾಗ್ರಂಥ ಮತ್ತು ಪ್ರಬಂಧರಚನೆ ..	100
		ಫಾರಸಿ ದ್ವಿತೀಯ ಭಾಷೆ— ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
	2ರಿಂದ 5 ವರೆಗೆ	ಸಂಸ್ಕೃತ ದ್ವಿತೀಯ ಭಾಷೆ— ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ. ..	100
		ಲಾಟಿನ್ ದ್ವಿತೀಯಭಾಷೆ— ಲಾಟಿನ್ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	120
		ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ತೆಲುಗು, ತಮಿಳು ಮತ್ತು ಹಿಂದುಸ್ತಾನಿ, ವ್ಯಾಕರಣ, ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ	100

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೂರನೇ ದಿವಸ	10ರಿಂದ 12 ವರೆಗೆ.	ಅಂಕಗಣಿತ	100
	12–5ರಿಂದ 12–35 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—ಕನ್ನಡ, ತೆಲುಗು ಮತ್ತು ತಮಿಳು ಅಕ್ಷರ ಸಂಯೋಜನ ...	10
	12–40ರಿಂದ 1–10 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—ಕನ್ನಡ, ತೆಲುಗು ಮತ್ತು ತಮಿಳು ಕೈ ಬರವಣಿಗೆ	10
	2ರಿಂದ 4 ವರೆಗೆ	ರೇಖಾಗಣಿತ ಬೀಜಗಣಿತಗಳು	100
	4–5ರಿಂದ 4–35 ವರೆಗೆ	ಐಚ್ಛಿಕ ದ್ವಿತೀಯ ಭಾಷೆ—ಸಂಸ್ಕೃತ ಮತ್ತು ಫಾರಸಿ ಅಕ್ಷರ ಸಂಯೋಜನ	10
	4–40ರಿಂದ 5–10 ವರೆಗೆ	ಐಚ್ಛಿಕ ದ್ವಿತೀಯ ಭಾಷೆ—ಸಂಸ್ಕೃತ ಮತ್ತು ಫಾರಸಿ ಕೈ ಬರವಣಿಗೆ . ..	10
ನಾಲ್ಕನೇ ದಿವಸ	10ರಿಂದ 1 ವರೆಗೆ	ಚರಿತ್ರೆ, ಭೂಗೋಳ ಶಾಸ್ತ್ರ ಮತ್ತು ಭೂಪಟ ಬರೆಯುವುದು ..	120
	2ರಿಂದ 3–30 ವರೆಗೆ	ವ್ಯವಸಾಯ ಶಾಸ್ತ್ರ	100
	3—35ರಿಂದ 5–5 ವರೆಗೆ	ಆರೋಗ್ಯ ಶಾಸ್ತ್ರ	100
ಐದನೇ ದಿವಸ	10ರಿಂದ 11–30 ವರೆಗೆ	ಕ್ಷೇತ್ರಗಣಿತ	100
	11–35ರಿಂದ 1–5 ವರೆಗೆ	ಪ್ರಾಕೃತಿಕ ಭೂಗೋಳ ಶಾಸ್ತ್ರ	100
	2ರಿಂದ 3–30 ವರೆಗೆ	ಹೊಲಿಗೆ	50
	3—35ರಿಂದ 5–5 ವರೆಗೆ	ಪಾಕಶಾಸ್ತ್ರ	50

ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆ.

ದಿನ.	ಘಂಟೆ.	ವಿಷಯ.		ಅಂಕಗಳು.	
ಮೊದಲನೇ ದಿನ	10—1	ಪ್ರಥಮ ಭಾಷೆ	ಗ್ರಂಥಗಳು	60	130
	2—4	ಅದೇ	ಪ್ರೌಢವ್ಯಾಕರಣ	40	
	4·5—5·5	ಅದೇ	ಪ್ರಬಂಧರಚನೆ	30	
ಎರಡನೇ ದಿನ	10—1	ದ್ವಿತೀಯ ಭಾಷೆ	ಗ್ರಂಥಗಳು, ವ್ಯಾಕರಣ, ಪದವಿನ್ಯಾಸ, ಭಾಷಾ ಶೈಲಿ	50	100
	2—5		ಭಾಷಾಂತರೀಕರಣ	50	
ಮೂರನೇ ದಿನ	10—12	ರೇಖಾಗಣಿತ, ಕ್ಷೇತ್ರಗಣಿತ		40	120
	1—3·30	ಅಂಕಗಣಿತ		50	
	3·35—5·5	ಬೀಜಗಣಿತ		30	
ನಾಲ್ಕನೇ ದಿನ	10—12	ಪ್ರಾಕೃತಿಕಶಾಸ್ತ್ರ (Physical science)		40	120
	1—3	ಆರೋಗ್ಯಶಾಸ್ತ್ರ		40	
	3·5—5·5	ಕೃಷಿಶಾಸ್ತ್ರ		40	
ಐದನೇ ದಿನ	10—1	ಚರಿತ್ರೆ		50	100
	2—5	ಭೂಗೋಳಶಾಸ್ತ್ರ		50	
				ಜುಮ್ಲಾ	570

ಪರೀಕ್ಷೆಯರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಆರನೇ ದಿನ ತತ್ಪೂರ್ವ ಪ್ರಕಟಿಸಲ್ಪಡುವ ಸ್ಥಳ, ಕಾಲಗಳಲ್ಲಿ ನಡೆಯುವುದು.

ಕರ್ನಾಟಕ ಪಂಡಿತಪರೀಕ್ಷೆ.

ದಿನ.	ಘಂಟೆ.	ವಿಷಯ.	ಅಂಕಗಳು.	
ಮೊದಲನೇ ದಿನ ..	10—1	ಕನ್ನಡ ವ್ಯಾಕರಣ	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ	80	
ಎರಡನೇ ದಿನ ..	10—1	ಕನ್ನಡ ಗ್ರಂಥಗಳು ಮೊದಲನೇಪತ್ರಿಕೆ	100	400
	2—5	ಅದೇ ಎರಡನೇ ಪತ್ರಿಕೆ	100	
ಮೂರನೇ ದಿನ ...	10—1	ಅದೇ ಮೂರನೇ ಪತ್ರಿಕೆ	100	
	2—5	ಅದೇ ನಾಲ್ಕನೇ ಪತ್ರಿಕೆ	100	
ನಾಲ್ಕನೇ ದಿನ ..	10—1	ಕನ್ನಡ ಪ್ರಬಂಧರಚನೆ	100	
	2—5	ಭಾಷಾಂತರೀಕರಣ	100	
ಐದನೇ ದಿನ ..	10—1	ಸಂಸ್ಕೃತ ವ್ಯಾಕರಣ	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ	120	
ಆರನೇ ದಿನ ..	10—1	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ	100	200
	2—5	ಅದೇ ಎರಡನೇ ಪತ್ರಿಕೆ	100	

ಇದರಡಿ ಕಂಡ ನಿಬಂಧನೆಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧಘಂಟೆ ಕಳೆದಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದ ನಂತರ ಪುನಃ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ಉಂಟಾಗಲಾರದು. ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವುದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವುದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ನ್ಯಾವ ವಿಧವಾದ ಕಾಗದ ಪತ್ರಗಳನ್ನಾಗಲಿ, ತೆಗೆದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ, ಅಥವಾ ಇನ್ನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗೆದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯು ಹೆಸರು ರೆಜಿಸ್ಟರ್ ನಂಬರ್ ಇವುಗಳನ್ನು ಬರಿಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗೆದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಸಿಷ್ಟ ಕಾಗದಗಳೂ ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸ್ 1896—97ನೇ ಇಸವಿ ಮಿ|| ಅರ್ಜೀ ನಂಬರ 141.

ಮೃತಪಟ್ಟ ನರಸಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶಿಡ್ಲಘಟ್ಟದ ತಾಲ್ಲೂಕು ಸಾದಲಿ ಹೋಬಳಿ ವೆಂಕಟಾಪುರದಲ್ಲಿರುವ ಚಿಕ್ಕರಾಮಂಣನು, ಮೃತಪಟ್ಟ ಸದರೀ ನರಸಂಣನವರಿಗೆ ಅಳಿಯ ಆಗಬೇಕೆಂಬ ಹಕ್ಕುದಾರಿ ಮೇಲೆ ವೆಂಕಟಾಪುರದ ಸ್ಥಳದ ಚಿಕ್ಕರಾಮಂಣನವರು, ವೆಂಕಟಾಪುರದ ವಾಸಸ್ಥರಾಗಿ ಮೃತಪಟ್ಟ ನರಸಂಣನವರ ಜಿಂದಗಿ ಬಗ್ಯೆಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕರಾಮಂಣನವರ ಅರ್ಜಿಯನ್ನು ಸ್ 1896ನೇ ಇಸವಿ ನವಂಬರ್ ತಿಂಗಳ ತಾರೀಖು 26 ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಂಣನವರ ಆಸ್ತಿಗೆ ಹಕ್ಕುದಾರಂದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1896ನೇ ಇಸವಿ ಅಕ್ಟೋಬರು ತಿಂಗಳ 29ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ಸಹಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರಸ್,
ಡಿಸ್ಟ್ರಿಕ್ಟ್ ಜಡ್ಜಿ.

ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 27ನೇ ಅಕ್ಟೋಬ 1896.

ಬೆಂಗಳೂರು ಡಿಸ್ಟ್ರಿಕ್ಟು 1ನೇ ಜನರಲ್ ಅಸಿಸ್ಟೆಂಟ್ ಕಮಿಷ್ನರ ಮಿಸ್ಟರ್ ಎ. ನರಸಿಂಹಯ್ಯಂಗಾರ್ರವರು ಸೆಪ್ಟಂಬರ್ 17ನೇ ತಾರೀಖಿನಲ್ಲಿ ತಮ್ಮ ಮನೆಯ ಆಫೀಸ್ ರೂಮ್ ಮೇಜಿನ ಮೇಲೆ ಇಟ್ಟಿದ್ದ ಈ ಕೆಳಗಿನ ತಪ್ಸೀಲಿನಲ್ಲಿ ಕಂಡ ಘಡಿಯಾರ ಮತ್ತು ಸರಪಣಿ ಸಹ ಕಳವಾಗಿರುವದಾಗಿಯೂ ಇದನ್ನ ಪತ್ತೇಮಾಡಿ ಕೊಟ್ಟವರಿಗೆ 10 ರೂಪಾಯಿಗಳು ಇನಾಂ ಕೊಡುವದಾಗಿ ಬರಸಿರುತ್ತಾರೆ.

(ವಾಚ್ ಮತ್ತು ಸರಪಣಿಯ ತಪ್ಸೀಲ್.)

ಪಿ. ಆರ್. ಅಂಡ್ ಸರ್ಸ್, ರೈಲ್ವೆ ರೆಗ್ಯುಲೇಟರ್ ಎಂದು ಇಂಗ್ಲೀಷ್ ಅಕ್ಷರದಲ್ಲಿ ವಾಚ್ ಮೇಲೆ ಗುರ್ತು ಇಧೆ ಇದರ ಕ್ರಯ 25 ರೂಪಾಯಿ.

ಇದಕ್ಕೆ ಹಾಕಿ ಇರುವ ಭಂಗಾರದ ಸರಪಣಿಯು ಮೂರುಚಿಕ್ಕ ಸರಪಣಿಗಳು ಸಂಗಡ ಜಾಯಿಂಟ್ ಆಗಿಯು ಒಂದುಕಡೆ ಹಿತ್ತಾಳಿ ವುಂಗ್ರವು ಮತ್ತೊಂದುಕಡೆ ಭಂಗಾರದ ವುಂಗ್ರವು ಹಾಕಿದ್ದಾಗಿಯೂ ಇಧೆ. ಇದು 9 ಇಂಚ್ ಉದ್ದ ಅಗಲ ¾ ಇಂಚ್ ಉಳ್ಳದ್ದಾಗಿಯೂ ಇಧೆ. ಇದರ ಕ್ರಯ 40 ರೂಪಾಯಿಗಳು.

ಡನಿಂಗ್,
ಸೂಪರಿಂಟೆಂಡೆಂಟ್ ಆಫ್ ಪೊಲೀಸ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ಮತ್ತು ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯೆರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4. ಪ್ರತಿ ಕೋಠಿಯಲ್ಲಿಯು ಬಿಕರಿ ಬಗ್ಯೆ ಪದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿಧೆ.

ಹಳೇ ತರಹೆ ಪ್ರಕಾರ.													
ಸಂಧಲ್ ವಿವರ		ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
		ಖ.	ಹ.	ಖ.	ಹ.	ಖ.	ಹ.	ಖ.	ಹ.	ಖ.	ಹ.	ಖ.	ಹ.
ಸಲಾಕಿ ಅವ್ವಲ್	..	1	..	..	5	..	15	..	..	..	15	..	...
ಡಿಟ್ಟೋ ದುಯಂ	..	..	5	1	5	2	5	3	5	1	..	..	2
ಡಿಟ್ಟೋ ಸಿಯಂ	..	1	10	7	10	5	5	12	15	8	..	4	..
ಡಿಟ್ಟೋ ಚಹರಂ	..	45	15	30	..	44	..	32	10	12	..	7	..
ಡಿಟ್ಟೋ ಪಂಚಂ	..	7	..	10	..	10	10	37	.	25	..	14	..
ಚಿಕ್ಕ ಸಲಾಕಿ	..	1	2	1	..	..	..	..	..	..	..	..	..
ದೊಡ್ಡ ಜಡಾ	..	21	..			33	..	66	5	40	..	25	..
ಚಿಕ್ಕ ಜಡಾ	..	3	15	35	..	5	..	8	..	4	..	2	..
ಜಡದ ರಂಬೆ	..	1	5			7	..	..	..	...	..	...	..
ದೊಡ್ಡ ಜಜ್ಜು	..	18	..	61	5	30	..	94	..	65	..	43	..
ಚಿಕ್ಕ ಜಜ್ಜು	..	3	5			11	..						
ಬಗರದದ್ದು	..	2	15	6	..	5	5	26	.	9	..	13	10
ಐರ್ ವಾಜಿ ಗುಬಗರು	..	1	..	3	..	..	10	..	..	..	..	..	..
ಗರಗಸ ಬುಕಣಿ	..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಪ	..	1	10	1	..	6	5	15	10	15	..	16	..
ಚಿಕ್ಕ ಡಿಟೋ	..	..	..	2	..								
ಕೆತ್ನೆ ಐರ್ ಚಿಲ್ಪ	..	6	..	..	..		..	..	..	..	..	..	...
ಹತ್ರಿ ಚಿಲ್ಪ	..	1	6	..	..	..	..	..	..	..	..	..	..
ಮಿಲ್ವ ಚಿಲ್ಪ	..	17	10	30	..	21	5	30	..	12	..	9	..
ಬಸೋಲ ಬುಕಣಿ	..	1	15	10	..	14	..	14	15	5	10	6	8
ಕೊಯತ ಚಿಲ್ಪ	..	..	..	1	10	3	10	9	..	2	..	1	..
ಜುಮ್ಲಾ	..	135	15	200	..	200	.	350	..	200	...	150	..

ಹೊಸ ಯಾ ಬೊಂಬಾಯಿ ತರಹೆ ಪ್ರಕಾರ.					
ಸಂದಲ್ ವಿವರ.		ಹುಣಸೂರು ಕೋಠಿ.		ಶ್ರೀರಂಗಪಟ್ಣ ಕೋಠಿ.	
		ಖ.	ಹ.	ಖ.	ಹ.
ವಿಲಾಯಿತಿ ಬಡ್	..	1	..	..	10
ಚೈನಾ ಬಡ್	..	20	..	30	.
ಪಂಚಂ	..	28	..	89	..
ಚಿಕ್ಕ ಸಲಾಕಿ, ಘೊಟ್ಲ (ಅವ್ವಲ್)	..	3	...	5	..
ಡಿಟೋ (ದುಯಂ)	..	2	..	1	..
ಘಟ್ ಬಡಲ	..	50	..	30	..
ಜಡಾ (ಅವ್ವಲ್)	..	25	..	25	..
ಡಿಟೋ (ದುಯಂ)	..	25	..	12	...
ಡಿಟೋ (ಸಿಯಂ)	..	20	..	8	..
ಡಿಟೋ (ಚಹರಂ)	..	7	..	7	..
ಜಜ್ಜು (ಅವ್ವಲ್)	..	50	...	25	..
ಡಿಟೋ (ದುಯಂ)	..	40	15	15	...
ಬಗರದದ್ದು	..	5	..	12	..
ಐರ್ ಬಗರು	..	5	..	14	..
ಚಿರಿಯಾ	..	5	..	5	..
ಐರ್ ಚಿಲ್ಪ (ಅವ್ವಲ್)	..	4	..	6	..
ಡಿಟೋ (ದುಯಂ)	..	6	..	6	10
ಹತ್ರಿ ಚಿಲ್ಪ	..	1	..	2	10
ಗರಗಸ ಬುಕಣಿ	..	1	..	..	10
ಮಿಲ್ಲ ಚಿಲ್ಪ	..	30	..	50	..
ಬಸೋಲಾ ಬುಕಣಿ	..	7	.	10	..
ಚೇಗು ಮಿಲ್ವ	..	..	..	5	..
ಕಳವವರುಷದ ಜಡಾ		113	15	12	15
ಸ್ಪೆಷಲ್ ಕ್ಲಾಸ್	..	..	10	...	..
ಟೋಟಲ್	..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಗೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮುರ್ರುಂ 15230.—ಆರ್. ಎಫ್. 155—92ನೇ ನಂಬರ್ ರೂಲ್ಸುಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಇತರ ಆಫೀಸರಿಂದ ಆಗಲಿ ಶೇರಿ ಫಾರೆಸ್ಟ್ ಆಫೀಸರವರಿಂದ ನಡಿಸಲ್ಪಡತಕ್ಕದ್ದು.

2. ಜಾಸ್ತಿದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟ್ಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫೀಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನು ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ್ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫೀಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದಿಯನ್ನು 5ನೇ ದಿನ ಆಪ್ಪೇರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫೀಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫೀಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನು ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫೀಸರರಿಗೆ ಯುಕ್ತಿಯಾರಿ ಇರತಕ್ಕದ್ದು. ಹಾಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಕೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫೀಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫೀಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ಬಾಬಿಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಇಲ್ಲದ ರಿಯಾಯಿತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ಒಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫೀಸರರು ಇಂಥಾ ತಮಾಮ್ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫೀಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ಉಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಗೆ ಪಾವತಿ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಎಂದಿಗೂ ಎಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿಯೊಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನು ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬುದಾಗಿ ಕ್ರಯಕ್ಕೆ ಕೊಟ್ಟ ಆಫೀಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫೀಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫೀಸರವರಿಗೆ ತಿಳಿಸುವದಕ್ಕೋಸ್ಕರ ಹೀಗೆ ಮಾಡಲ್ಪಡುವ ತಮಾಮ್ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ಒಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದ ಮರಗಳು ಫಾರೆಸ್ಟ್ ಆಫೀಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರಿ ಹಾಜರಿಯಲ್ಲಿ ಡೆಪ್ಯುಟಿ ಕಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫೀಸರಿಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯು ವಜಾ ಮಾಡಲ್ಪಡತಕ್ಕದ್ದು. ಏನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫೀಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕ ಪೂರ್ವವಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೆ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನು ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ಒಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನು ತೂಕ ಮಾಡುವಲ್ಲಿ ಹಾಜರಾಗುವಂತೆ ಏರ್

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡೆದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫಿಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫಿಸರು ತಮಗೆ ಅನುಕೂಲವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಗೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಗೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫಿಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫಿಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು, ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ಒಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ಒಂದಕ್ಕೆ ಟನ್ ಒಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ಒಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿ ದಾರನಿಗೆ 10 ದಿನಗಳ ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಗಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ಉಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಗೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜು ಆಫಿಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ಉಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟು ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ ಸೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷಬಾಷ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್‌ಚಾರ್ಜ್ ಫಾರೆಸ್ಟ್ ಆಫಿಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಇಲ್ಲದೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫಿಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಚಾರ್ಜ್ ಫಾರೆಸ್ಟ್ ಆಫಿಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ಉಂಟಾಗಿರತಕ್ಕದ್ದು.

ತಾರೀಖು 15ನೇ ಸೆಪ್ಟಂಬರು 1896.

ಸರ್ಕಾರದ ಗಂಧದ ಕೋಠಿಗಳಲ್ಲಿ ಹಾಲಿ ಉಪಯೋಗದಲ್ಲಿರುವ ಪೌಂಡ್ ವಜನೀ ಬಟ್ಟಿಗೆ ಬದಲಾಗಿ ಇಂಗ್ಲಿಷ್ ಸ್ಟ್ಯಾಂಡರ್ಡ್ ಕರಾರ್ವಾಕಾ ಪೌಂಡ್ ವಜನಿ ಬಟ್ಟು 1ಕ್ಕೆ $38\frac{8}{9}$ ರೂಪಾಯಿ ತೂಕವುಳ್ಳ ಬಟ್ಟುಗಳು ಗವರ್ನಮೆಂಟಿನವರ ಮಂಜೂರಾತಿ ಅನುಸರಿಸಿ, 1897ನೇ ಇಸವಿ ಲಾಗಾಯತು ಯಲ್ಲಾ ಕೋಠಿಗಳಲ್ಲಿಯೂ ಜಾರಿಯಲ್ಲಿ ತರಲ್ಪಡುತ್ತೆ. ಆದರೆ ಚಾಲತಿ 1896ನೇ ಡಿಸೆಂಬರ್ 31ನೇ ತಾರೀಖು ವಳಗೆ, ಖರೀದಿಗೆ ತೆಗದುಕೊಳ್ಳಲ್ಪಡುವ ಗಂಧ ಹಾಲಿ ಜಾರಿಯಲ್ಲಿರುವ ಪೌಂಡ್ ಬಟ್ಟುಗಳ ಪ್ರಕಾರವೇ ವಜನಿಯಿಂದ ಕೊಡಲ್ಪಡುವದು.

ಐಯ್ಯಿಂದಾ ಜಾರಿಯಲ್ಲಿ ಬರತಕ್ಕ ಒಂದೇವಿಧವಾದ ಇಂಗ್ಲಿಷ್ ವಜನೀ ಬಟ್ಟುಗಳು ಅವುಗಳ ಸರಿಯಾದ ತೂಕ ಸಹ ಇದರಡಿ ನಮೂದಿಸಲ್ಪಟ್ಟಿರುತ್ತೆ:—

ಔನ್ಸ್ 1ಕ್ಕೆ	$2\frac{31}{72}$ ರೂಪಾಯಿ ತೂಕ	ಹನ್‌ಡ್ರೆಡ್‌ವೇಟ್ 1ಕ್ಕೆ	$4,355\frac{5}{9}$ ರೂಪಾಯಿ ತೂಕ.
ಪೌಂಡ್ 1ಕ್ಕೆ	$38\frac{8}{9}$ ಡಿಟೋ	ಟನ್ 1ಕ್ಕೆ	$87,111\frac{1}{9}$ ಡಿಟೋ

ಸ್ಟ್ಯಾಂಡರ್ಡ್ ಅಂದರೆ, ನಿಷ್ಕರ್ಷಿಸಲ್ಪಟ್ಟ ಕರಾರ್ವಾಕಾ ತ್ರಾಸು, ಬಟ್ಟುಗಳು ಪ್ರತಿ ಕೋಠಿಯಲ್ಲಿ ಹಾಜರಿರುತ್ತವೆ. ಇವುಗಳಿಂದ ಹಾಲಿ ವಜನೀ ಬಗ್ಗೆ ಉಪಯೋಗದಲ್ಲಿರುವ ಬಟ್ಟುಗಳನ್ನ ಆಜಮಾಯಿಷಿ ಮಾಡಿಕೊಳ್ಳಬಹುದಾಗಿರುತ್ತೆ.

ಸಿ. ಅಪ್ಪಯ್ಯ,
ಫಾರ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

'5H9

ತುಮಕೂರು ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 28ನೇ ಅಕ್ಟೋಬರ್ 1896.

ಮೈಸೂರ ಗವರ್ನಮೆಂಟ ತುಮಕೂರು ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರಗಳು ತಮ್ಮ ತಮ್ಮ ಸೇವಿಂಗ್ಸ್ ಬ್ಯಾಂಕ್ ಪ್ಯಾಸ್ ಬುಕ್ಕುಗಳನ್ನು 1895—96ನೇ ಇಸವಿಯ ಬಡ್ಡಿ ಮೊಬಲಗನ್ನು ದಾಖಲ್ಮಾಡುವದಕ್ಕೋಸ್ಕರ ಈ ಆಫೀಸಿಗೆ ಕಳುಹಿಸಿ ಕೊಡಬೇಕಾಗಿ ಕೇಳಿಕೊಳ್ಳಲ್ಪಟ್ಟಿದೆ.

ಟಿ. ಮೀರ್‌ಕಮಾಲುದ್ದೀನ್‌ಅಲಿಖಾನ್,
ಟ್ರೆಜರಿ ಆಫಿಸರ.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 130.

ಮೃತಪಟ್ಟ ಶಿವಾಚಾರದ ಜಂಗಮ ನಿಂಗಣ್ಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚನ್ನಪ್ಪಯ್ಯ, ಈರಣ್ಣಯ್ಯ ಇವರಗಳು ಮೃತಪಟ್ಟ ಸದರೀ ನಿಂಗಣ್ಣಯ್ಯನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಅರಕಲಗೂಡು ತಾಲ್ಲೂಕು ಮಲ್ಲಪಟ್ಟಣದ ಹೋಬಳಿ ನಿಲಕುಂದದ ಗ್ರಾಮದ ಸ್ಥಳದ ಸದರೀ ಚನ್ನಪ್ಪಯ್ಯ, ಈರಣ್ಣಯ್ಯ ಇವರು ಸದರೀ ವಾಸಸ್ಥರಾಗಿ ಮೃತಪಟ್ಟ ನಿಂಗಣ್ಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನಪ್ಪಯ್ಯ, ಈರಣ್ಣಯ್ಯ ಇವರ ಅರ್ಜಿಯನ್ನು 1896ನೇ ಇಸವಿ ನವಂಬರ್ ತಿಂಗಳ ತಾರೀಖು 27ರಲ್ಲು ಕೇಳಿ ಸರ್ಟಫಿಕೇಟ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಿಂಗಣ್ಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಆರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896—97ನೇ ಇಸವಿ ಅರ್ಜೀ ನಂಬರ್ 131.

ಮೃತಪಟ್ಟ ದೊಡ್ಡೀಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕೆಂಪಮ್ಮ, ಮೃತಪಟ್ಟ ಸದರೀ ದೊಡ್ಡೀಗೌಡರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ನಾಗಮಂಗಲದ ತಾಲ್ಲೂಕು ನೆಲ್ಲಿಗೆರೆ ಹೋಬಳಿ ಚೀರಹಳ್ಳಿ ಗ್ರಾಮ ಸ್ಥಳದ ಸದರೀ ಕೆಂಪಮ್ಮನು, ಶ್ರೀರಂಗಪಟ್ಟಣದ ತಾಲ್ಲೂಕು ದೊಡ್ಡೇಗೌಡನ ಕೊಪ್ಪಲ್ ವಾಸಸ್ಥರಾಗಿ ಮೃತಪಟ್ಟ ದೊಡ್ಡೀಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪಮ್ಮನವರ ಅರ್ಜಿಯನ್ನು ಸರ್ 1896ನೇ ಇಸವಿ ನವಂಬರ್ ತಿಂಗಳ ತಾರೀಖು 27ರಲ್ಲು ಕೇಳಿ ಸರ್ಟಫಿಕೇಟ ಪಡೆಯತಕ್ಕ ಬಾಧ್ಯತೆಯು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡಿಗವುಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1896—97ನೇ ಇಸವಿ ಅರ್ಜೀ ನಂಬರ್ 133.

ಮೃತಪಟ್ಟ ಜಾನ್ ಮಹಮ್ಮದ್ ಶೇಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶಿಲೇಮಾನ್‌ತಯ್ಯಬ್ಜಿ ಶೇಟರು, ಮೃತಪಟ್ಟ ಸದರೀ ಜಾನ್‌ಮಹಮ್ಮದ್ ಶೇಟರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಕಂಟೋನ್ಮೆಂಟ್ ಸ್ಥಳದ ಸದರೀ ಶಿಲೇಮಾನ್‌ತಯ್ಯಬ್ಜಿ ಶೇಟರು, ಹಾಸನದ ವಾಸಸ್ಥರಾಗಿ ಮೃತಪಟ್ಟ ಜಾನ್ ಮಹಮ್ಮದ್ ಶೇಟರ ಜಿಂದಗಿ ಬಗ್ಯಾಗಿ ಬರತಕ್ಕ 5,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿಲೇಮಾನ್‌ತಯ್ಯಬ್ಜಿ ಶೇಟರ ಅರ್ಜಿಯನ್ನು ಸರ್ 1896ನೇ ಇಸವಿ ನವಂಬರ್ ತಿಂಗಳ ತಾರೀಖು 27ರಲ್ಲು ಕೇಳಿ ಸರ್ಟಫಿಕೇಟ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜಾನ್‌ಮಹಮ್ಮದ್ ಶೇಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1896ನೇ ಇಸವಿ ಅಕ್ಟೋಬರ್ ತಿಂಗಳ 19ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟು ಜಡ್ಜಿ.

ಕಡೂರು ಡಿಸ್ಟ್ರಿಕ್ಟು.

ಕೊಪ್ಪ ತಾಲ್ಲೂಕು.

ಇಸ್ತಿಹಾರ್‌ನಾಮೆ.

ತಾರೀಖು 6ನೇ ಅಕ್ಟೋಬರ್ ಸನ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಬೈರೇದೇವರು ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸನ್ 1896ನೇ ಇಸವಿ ಡಿಸೆಂಬರ್ ತಾರೀಖು 7ನೇ ಸೋಮವಾರ ಹಗಲು 11 ಘಂಟೆಗೆ ಕಡೂರು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಕೊಪ್ಪ ತಾಲ್ಲೂಕು ಅಮಲ್‌ದಾರ್ರ ರೂಬರೂ ಹರಿಹರಪುರ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಬಾಯಿಷ್ ಮಾಡುವ ಅಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್ಸೆಟ್ ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್‍ಯಾರಾದರೂ ಪಡೆದರೆ ದರಖಾಸ್ತುದಾರನ ಪೂರಾ ಶೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಶೇವಣಿ ಮೊಬಲಗನ್ನು ಹರಾಜು ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಪೂರು ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಅಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಅಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯಕ ಮಾಡಲ್ಪಟ್ಟ ಕಾಲದೊಳಗೆ ಖರೀದಿ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡದೆ ತಪ್ಪಿದರೆ ಡಿಪಾಜಿಟ್ ಮೊಬಲಗಿನಲ್ಲಿ ಖರೀದಿಗಾಗಿ ತಗಲಿರುವ ಖರ್ಚು ವಜಾ ಜಾತಾ ಬಾಕಿನಿಂತ ಶೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರತಕ್ಕದ್ದು. ಮತ್ತು ಸ್ವತ್ತು ಪುನಹ ವಿಕ್ರಯಿಸಲ್ಪಡುವ ಮನುಷ್ಯನ ಸ್ವತ್ತಿಗೆ ಇದ್ದ ಹಕ್ಕನ್ನು ಕಳದುಕೊಂಡದ್ದಲ್ಲದೆ ಅನಂತರ ಮೊಬಲಗಿನ ಯಾವ ಭಾಗದ ಹಕ್ಕು ಇಲ್ಲದವನಾಗಿ ಇರುತ್ತಾನೆ. ಪರಂತು ಈ ಷರತ್ತನ್ನು ಜಾರಿಯಲ್ಲಿ ತರತಕ್ಕದ್ದು. ಅಧಿಕವಾದ ತೊಂದರೆ ಇದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡೆಪ್ಯುಟಿ ಕಮ್ಮಿಷನರಿಗೆ ತೋರಿ ಬಂದರೆ ಅಂಥಾವುಗಳನ್ನು ಸರಕಾರದ ಆರ್ಡರುಬಗ್ಗೆ ಶಿಫಾರಸ್ ಮಾಡತಕ್ಕದ್ದಕ್ಕೆ ಅರ್ಹರಾಗಿರುತ್ತಾರೆ. ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ಉತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನಲ್ಲಿ ಚಡದರಖಾಸ್ತು ಮಾಡಿ ತಪ್ಪಿಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಇಂಥಾ ವ್ಯತ್ಯಾಸದ ಮೊಬಲಗನ್ನು ಡೆಪ್ಯುಟಿ ಕಮ್ಮಿಷನ್ನರವರು ಜಮೀನ್ ಕಂದಾಯದ ಬಾಕಿಯಂತೆ ವಸೂಲ್ ಮಾಡತಕ್ಕದ್ದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಪೂರು ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನ್‌ನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಪೂರಾ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜ್‌ದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ ವಿಸ್ತೀರ್ಣ.	ದರಖಾಸ್ತು ಜಮೀನಿನ ಆಕಾರ.	ಷರಾ.
112ರ ಪೈಕಿ.	ಕೊಠಡಿ ಯಸ್ಟೇಟ್ ಮೆಸ್ಸರ್ಸ್ ಹೇ ಸಾಹೇಬರವರು.	ಪುತ್ರಕಾಮೇಷ್ಟಿ ಹಾಡ್ಯ, ಮೇಗ.ಂದ ಹೋಬಳಿ ಬೈರೇದೇವರು ಗ್ರಾಮ.	1 ಪೂರ್ವಕ್ಕೆ—ದೇವಸ್ಥಾನಕ್ಕೆ ಬಿಡಲ್ಪಟ್ಟ ಕೆಂತಾ ಗುರ್ತಿಸಿ ಇರುವ ಈ ನಂಬರು ಗಡಿ. 2 ಪಶ್ಚಿಮಕ್ಕೆ—ಹಳ್ಳ. 3 ದಕ್ಷಿಣಕ್ಕೆ—ನಂ. 111ನೇ ಖರಾಬಗುಡ್ಡ 4 ಉತ್ತರಕ್ಕೆ—ಹಳ್ಳ.	62—2	..	

ತಿಳುವಳಿಕೆ ಷರಾ.—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಒಂದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರು ವಾಕಾ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೆ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೆ ಆಗಲಿ ಜಮೀನ್ ಹಿಡುವಳಿದಾರನು ಬದ್ಧ ವ ಅರ್ಹನಾಗಿರಬೇಕು.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮ್ಮಿಷನರ.

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಿಷ್ ಮಾಹೇ ಯಾ ಕ್ವಾರ್ಟರಿಗೆ			ದಾವಾಮಾಷಾಯಿ ಪ್ರಕಾರ ದರಗಳು	
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷರ್ಸ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮುರ್ಖಂ 155ನೇ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟಿ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳ ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮುಲ್ದಾರರಿಂದ ವಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮುರ್ಖಂ 24205—6—ಜಿ. 6200ನೇ ನಂಬರ ಗವರ್ನಮೆಂಟ ಆರ್ಡರ ಅನುಸರಿಸಿ ಮೇಲ್ಕಂಡ ರಿಯಾಯುತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಫಿಕೇಟ ಬಗ್ಗೆ ನೋಟೀಸಗಳು:—

		ರೂ.	ಆ.
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ	..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	.. ..	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷರ್ಷ ಅನುಸರಿಸಿ ದಿವಾಳೀ ಅಪ್ಲಿಕೇಷರ್ಷಗಳ ಬಗ್ಗೆ ನೋಟಿಸಗಳಿಗೆ :—			
ಮೊದಲನೇ ಸಲಕ್ಕೆ	.. .. ..	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	.. ..	2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷರ್ಷಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ ಚಾರ್ಜ ಪ್ರಕಟಿಸಲ್ಪಡುತವೆ.			
ಡ್ಯೂಪ್ಲಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫಿಸರಗಳು ಕೊಡುವ ನೋಟಸಗಳಿಗೆ :—			
ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	" ..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳಪ್ರಕಾರ ಚಾರ್ಜ ಮಾಡಲ್ಪಡುತ್ತೆ:—			
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	.. ..	0	4

ಷರಾ.—ಚಂದಾ ವಗೈರೇ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ, ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ವೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತವಮಾಂ ನೋಟಿಸ್ ವ ಇಸ್ತಿಹಾರ್ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ ಆಫಿಸಿಗೆ ತಲಪತಕ್ಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಯಿಲ್ಲ.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟಾಫಿಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಪ್ಸೀಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುಂಥಾ ಕೂಪರ್ಗಳಗೆ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ಮೊಬಲಗು ತೆಗದುಕೊಂಡು ರಶೀತಿ ಕೊಡುವ ಬಗ್ಗ್ಯಾಗಿ ಅಪ್ಪಣೆ ಯಿರುವದ್ದರಿಂದ ಇನ್ನು ಮೇಲೆ ಮೈಸೂರ್ ಶೀಮೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್ಡರ್ ಹೊರ್ತಾಗಿ ಅನ್ಯಥಾ ಆ ಬಗ್ಗ್ಯಾಗಿ ಈ ಆಫಿಸಿಗೆ ಕಳುಹಿಸಲ್ಪಡುವ ಯಾವ ಮನಿಆರ್ಡರುಗಲಿ ಈ ಆಫಿಸಿನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದದಲ್ಲಿ ಬರಿಯಲ್ಪಡುವ ಯಾವ ಅಂಶಕ್ಕೂ ನಿಗೆ ಕೊಡಲ್ಪಡಲಾರದು.

ತಾರೀಖು 3ನೇ ನವಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ಎರಡು ಮನೀ ಆರ್ಡರುಗಳು ಬಂದಿರುತ್ತವೆ. ಸದರೀ ಮನೀ ಆರ್ಡರಿ ಕೂಪರ್ಗಳಲ್ಲಿ ಮನೀ ಆರ್ಡರ್ ಕಳುಹಿಸಿದವರ ಹೆಸರು ವಿಳಾಸ ಯಾವ ಬಗ್ಗೆ ಮನೀ ಆರ್ಡರ್ ಕಳುಹಿಸಿದ್ದು ಈ ವಗೈರೆ ತಪಸೀಲುಗಳು ಇಲ್ಲ. ಸದರೀ ಮನೀ ಆರ್ಡರುಗಳು ಕಳುಹಿಸಿದವರು ಅವುಗಳನ್ನು ಯಾತಕ್ಕೋಸ್ಕರ ಕಳುಹಿಸಿರುತ್ತಾರೆಯೋ ಆ ತಪಸೀಲು ವಿವರವಾಗಿ ಈ ತಾರೀಖು ಲಾಗಾಯತು ಒಂದು ತಿಂಗಳು ಒಳಗಾಗಿ ತಿಳುಹಿಸುವದಲ್ಲದೆ ಅವುಗಳಿಗಾಗಿ ಪಡೆದಿರುವ ರಶೀತಿಯನ್ನು ಈ ಆಫಿಸಿನಲ್ಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಹಾಜರ್ಪಡಿಸದಿದ್ದರೆ ನಂತರ ಅಂಥವರ ಫಿರ್ಯಾದು ಅಂಗೀಕರಿಸಲಾರದು.

ಸಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪೈಲರ್.

ನೋಟೀಸ್.

ತಾರೀಖು 12—1—96.

ಕಡೂರು ತಾಲ್ಲೂಕು ಬ್ರಹ್ಮಸಮುದ್ರ ಗ್ರಾಮದ ಸರ್ವೇನಂಬರು 170—171—172ನೇ ಬಾಗಾಯತು ತೋಟಗಳು ಮತ್ತು ಖಾನೇಷುಮಾರೀ ನಂಬರು 11ನೇ ಹಂಚಿನಮನೆ ಇವುಗಳ ಮೇಲೆ ನನ್ನ ಮಗನಾದ ಶ್ರೀರಂಗಭಟ್ಟನ ಹಕ್ಕು ಯಿರುವದ್ದರಿಂದಲೂ ಈ ಸ್ವತ್ತುಗಳು ಪೂರ್ವಿಕರಿಂದ ಬಂದದ್ದಾದ್ದರಿಂದಲೂ, ಮತ್ತು ಪಿತರಾರ್ಜಿತವಾದ್ದರಿಂದಲೂ ಸಹ ನನ್ನ ಗಂಡದಿರಾದರಂಗಾಭಟ್ಟರವರು ಮತ್ತು ಸೂರ್ಯನಾರಾಯಣಭಟ್ಟರವರ ಮಕ್ಕಳು ಕೃಷ್ಣಪುರಾಣೀಕರವರೂ ಸಹ ಸಮಭಾಗವಾಗಿ ಅನುಭವಿಸುತ್ತಾರೆ. ಮೇಲ್ಕಂಡ ಸ್ವತ್ತುಗಳಿಗೆಲ್ಲಾ ನನ್ನ ಮಗ ಶ್ರೀರಂಗಭಟ್ಟನೇ ಪೂರಾ ಹಕ್ಕುದಾರನಾಗಿರುವದ್ದರಿಂದ ಈ ಸ್ವತ್ತುಗಳನ್ನು ಕೃಷ್ಣಪುರಾಣೀಕರವರು ಖರೀದಿ ಮಾಡುತ್ತಾರಾಗಿ ವರ್ತಮಾನ ಕೇಳುತ್ತೇನೆ. ಈ ಸ್ವತ್ತುಗಳನ್ನು ಯಾರು ಕ್ರಯಕ್ಕೆ ಪಡಿಯುತ್ತಾರೋ ಅವರು ಮುಂದೆ ಆಗತಕ್ಕ ಕೋರ್ಟ್ ಖರ್ಚು ವಗೈರೆ ನಷ್ಟಕ್ಕೆ ಸಹ ಬಾಧ್ಯರಾಗಿರುತ್ತಾರೆ. ಈಗ ಶ್ರೀರಂಗಭಟ್ಟನು 10 ವರುಷ ವಯಸ್ಸು ಳ್ಳವನಾಗಿದ್ದಾನೆ. ಆದ್ದರಿಂದ ಗಾರ್ಡಿಯನ್ನಾಗಿ ಈ ಸಂಗತಿಯನ್ನೆಲ್ಲಾ ಪ್ರಕಟಪಡಿಸಿ ಇರುತ್ತೇನೆ.

ನಂಜಮ್ಮನ ಗುರೇ ರುಜು.

Mysore Govt. Central Press, Bangalore.—1896.

593

ಮೈಸೂರ ಗೆಜೆಟ.

ಸಂ. XXXI.] ಸರ್ಕಾರದಿಂದ ಛಾಯಿಷ್ ಆದ್ದು [ನಂ. 46.

ಬೆಂಗಳೂರು, ಗುರುವಾರ, ನವಂಬರ ತಾ॥ 19, ಸ್ನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರಗಳು, ಫಾರೆಸ್ಟು, ರಜಿಸ್ಟ್ರೇಷ್ನ ವ ಯಿಡ್ಯು ಕೇಷ್ನ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ನ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ನಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 7ನೇ ನವಂಬರ 1896. (ಮೈಸೂರ.)

ನಂ. 5344.—ಜು. 612, ಮೆಸ್ಟರ್ ಎಂ. ರಾಮಸ್ವಾಮಿ ಅಯ್ಯರ್, ಬಿ. ಎ. ಬಿ. ಎಲ್. ಯವರು (ಮಾಹೆ ಮಜಕೂರು ಗುತ್ತಲಃಗಾಯತು ಸಬಾರ್ಡಿನೇಟ್ ಜಡ್ಜಿಗಳ ಎರಡನೇ ಕ್ಲಾಸಿನಿಂದ 1ನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ನಂ. 5347—ಜು. 615, ನಂದೀದುರ್ಗ ಡಿವಿಜ್ನ ಡಿಸ್ಟ್ರಿಕ್ಟು ವ ಸೆಷ್ನಸ್ ಜಡ್ಜರಾದ ಮೆಸ್ಟರ್ ಟಿ. ನರಹರಿರಾಯರವರು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕಾಹಿಲೆ ರಜಾದಲ್ಲಿರುವ ಕಾಲದಲ್ಲಿ ಈ ಕೆಳಗೆ ಕಂಡ ಹಂಗಾಮಿ ಬಡ್ತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ;—

(1) ಮೆಸ್ಟರ್ ಸಿ. ಕ್ರೆಸ್ ಯವರು ಡಿಸ್ಟ್ರಿಕ್ಟು ಜಡ್ಜಿಗಳ 2ನೇ ಕ್ಲಾಸಿನಿಂದ 1ನೇ ಕ್ಲಾಸಿಗೆ.
(2) ಮೆಸ್ಟರ್ ಬಿ. ತಿರುಮಲ ಚಾರ್ರು, ಬಿ. ಎಲ್., ಯವರು ಡಿಸ್ಟ್ರಿಕ್ಟು ಜಡ್ಜಿಗಳ 3ನೇ ಕ್ಲಾಸಿನಿಂದ 2ನೇ ಕ್ಲಾಸಿಗೆ.

ನಂ. 5350.—ಜು. 618, ಮೆಸ್ಟರ್ ಎಂ. ರಾಮಸ್ವಾಮಿ ಅಯ್ಯಗ್ ಯವರು ಡಿಸ್ಟ್ರಿಕ್ಟು ವ ಸೆಷ್ನಸ್ ಜಡ್ಜರಾಗಿ ಆಕ್ಟಿಂಗ ತರೀಕ ಕೆಲಸದ ಮೇಲಿರುವ ಕಾಲದಲ್ಲಿ ಮೆಸ್ಟರ್ ಎಸ್. ಆರ್. ಸುಬ್ಬರಾಯು ಐಯ್ಯರ್ ಯವರು ಸಬಾರ್ಡಿನೇಟ್ ಜಡ್ಜಿಗಳ 1ನೇ ಕ್ಲಾಸಿಗೆ ಹಂಗಾಮಿಯಾಗಿ ಬಡ್ತಿ ಮಾಡಲ್ಪಟ್ಟಿರುತ್ತಾರ.

ತಾರೀಖು 10ನೇ ನವಂಬರ್ 1896.

ನಂ. 5388—ಜ್ಯು. 629, ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮೆಸ್ಟರ್ ಡಿ. ದೇವರಾಜ ಅರಸಿನವರಿಗೆ, 1896ನೇ ಅಕ್ಟೋಬರ್ 2ನೇ ಮರ್ಕುಂ 4600—ಜ್ಯು. 505ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ತಲಬಿಲ್ಲದ ರಜಾ ಇನ್ನೂ ಎರಡು ತಿಂಗಳುಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ಪೋಲೀಸ್ ಆಕ್ಟಿಂಗ್ ಸೂಪರಿಂಟೆಂಡೆಂಟರಾದ ಮೆಸ್ಟರ್ ಡಿ. ಎ. ಬಲ್ಲಾರ್ಡ್ ಯವರು ಸದರೀ ಮೆಸ್ಟರ್ ಡಿ. ದೇವರಾಜ ಅರಸಿನವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 16ನೇ ನವೆಂಬರ್ 1896.

ನಂ. 5591.—ಜ್ಯು. 645, ಮುನ್ಸಿಫ್ ಮೆಸ್ಟರ್ ಬಿ. ಬಸವಾರಾಧ್ಯ, ಬಿ. ಎ., ಬಿ. ಎಲ್., ಯವರು ಅವರಿಗೆ 1896ನೇ ಸೆಪ್ಟಂಬರ್ 7ನೇ ಮರ್ಕುಂ 3389.—ಜ್ಯು. 346ನೇ ನಂಬರ್ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ್ ರಜಾದಿಂದ 1896ನೇ ಅಕ್ಟೋಬರ್ 21ನೇ ತಾರೀಖಿನ ಪೂರ್ವಾಹ್ನ ಶ್ರೀರಂಗಪಟ್ಟಣದಲ್ಲಿ ಕೆಲಸಕ್ಕೆ ವಾಪಸು ಬಂದಿರುವದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ ಒಂದು ತಿಂಗಳೂ ಮೂರುದಿವಸಗಳು ಯಿದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 5593.—ಜ್ಯು. 647, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ್ ಸಿಟಿ ಮಾಜಿಸ್ಟ್ರೇಟರಾದ ಮೆಸ್ಟರ್ ಎಸ್. ವೈದ್ಯನಾಥ ಅಯ್ಯರ್ ಯವರಿಗೆ ಮಾಹೆ ಮಜಕೂರ 16ನೇ ತಾರೀಖಿನ ಲಾಗಾಯತು ಹನ್ನೆರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 24ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರು.

ನಂ. 3937.—ರೆ. 1354, ಸನ್ 1888ನೇ ಇಸವಿಯ IVನೇ ರೆಗ್ಯುಲೇಷನ್ ಆದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರ ಅನುಸರಿಸಿ, ನಂಜನಗೂಡು ತಾಲ್ಲೂಕಿನಲ್ಲಿರುವ ಕನ್ಯಾನೂರು, ಹಟ್ವಾಳು, ಮಂದನಹಳ್ಳಿ, ಮದ್ದೂರು ಮತ್ತು ಕಲ್ಲಹಳ್ಳಿ ಸರ್ವ ಇನಾಂ ಗ್ರಾಮಗಳಿಗೆ ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನ ಲಗಾವ್ ಮಾಡುವ ಬಗ್ಯೆ ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸಿರುತ್ತಾರೆ.

ತಾರೀಖು 25ನೇ ಅಕ್ಟೋಬರ್ 1896.

ನಂ. 4041.—ರೆ. ಫೈ. 148.—95, ಈ ಕೆಳಗೆ ಕಂಡ ಗ್ರಾಮಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ.
1. ಕಾಹಳ್ಳಿ ..	ತಿರುಮಕೂಡ್ಲು ನರಸೀಪುರ. ..	ನಂಜನಗೂಡು.
2. ಹಾರೋಪುರ ..		
3. ಗಣಗನೂರು ..	ನಂಜನಗೂಡು. ..	ಚಾಮರಾಜನಗರ.

ತಾರೀಖು 29ನೇ ಅಕ್ಟೋಬರ್ 1896.

ನಂ. 4034.—ಫಾ. ಫೈ. 1—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟಿಗೆ ಸಳಿತವಾದ ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಮೆಸ್ಟರ್ ಪಿ. ಈ. ಬೆರ್ನರ್ ಯವರಿಗೆ, 1896ನೇ ಅಕ್ಟೋಬರ್ 2ನೇ ಮರ್ಕುಂ ಲಾಗಾಯತು ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ಅಶುದ್ಧ.

ನಂ. 4037.—ಫಾ. ಫೈ. 105.—95, ಸನ್ 1896ನೇ ಫೆಬ್ರವರಿ 20ನೇ ಮರ್ಕುಂ Iನೇ ಭಾಗದ ಮೈಸೂರ ಗೆಜೆಟ್ಟಿನ ಕನ್ನಡ ಭಾಗದಲ್ಲಿ ಪ್ರಾಯಿಷಾಗಿರುವ 1896ನೇ ಜನವರಿ 8ನೇ ಮರ್ಕುಂ 608.—ಫಾ. ಫೈ. 105.—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆಯ 8ನೇ ಪ್ಯಾರಾವಿನ 12ನೇ ಪಙ್ತಿಯಲ್ಲಿ "ಹಬ್ಬಿವರು ಒಂದ 100ಕ್ಕೆ" ಎಂಬ ಮಾತುಗಳ ಯಿದುರಿಗೆ " " ಎಂಬದಕ್ಕೆ "2—0—0" ಎಂಬದಾಗಿ ಓದತಕ್ಕದ್ದು.

ತಾರೀಖು 1ನೇ ನವಂಬರ್ 1896.

ನಂ. 4107.—ಫಾ. ಫೈ. 91—95, ಶಿಕಾರಿಪುರದ ಫಾರೆಸ್ಟ್ ಸಬ್ ಡಿವಿಜನ್ ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರ್ ಮೆಸ್ಟರ್ ಬಿ. ಶ್ರೀನಿವಾಸರಾಯರಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ 1896ನೇ ಆಗಸ್ಟ್ 15ನೇ ಮರ್ಕುಂ 1832.—ಫಾ. ಫೈ. 91.—95ನೇ ನಂಬರ್ ಇಸ್ತಿಹಾರನಾಮೆ ಅನುಸರಿಸಿ, ಕೊಡಲ್ಪಟ್ಟಿದ್ದ ಕಾಹಿಲೆ ರಜಾ ಇನ್ನೂ ಆರುವಾರಗಳ ವರವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

2. ಮೆಸ್ಟರ್ ಶ್ರೀನಿವಾಸರಾಯರು, ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಫಾರೆಸ್ಟುಗಳ ಯಕ್ಸ್ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರ್ ಮೆಸ್ಟರ್ ಜೆ. ಜೆ. ಮಾರ್ಟೀರೋಯವರು, ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರಾಗಿಯೂ ಮತ್ತು 2ನೇ ಗ್ರೇಡ್ ರೇಂಜರ್ ಮೆಸ್ಟರ್ ಎಂ. ಶ್ರೀನಿವಾಸರಾಯರು, ಫಾರೆಸ್ಟುಗಳ ಯಕ್ಸ್ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರಾಗಿಯೂ ಆಕ್ಟಿಂಗ್ ತರೀಕ ಇರತಕ್ಕದ್ದು.

ತಾರೀಖು 29ನೇ ಅಕ್ಟೋಬರ್ 1896.

ನಂ. 4024—ರೆ. 1388, ಸನ್ 1894ನೇ ಇಸವಿಯ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಬಾಬಾಬುಡನ್ ಬೆಟ್ಟದ ರಸ್ತೆಯನ್ನು ಬಿಡಾಭುಸುವ ಬಗ್ಗ್ಯಾಗಿ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಅನುಭವದಾರನ ಹೆಸರು.	ಜಮೀನ್ ತಪ್ಸೀಲು.				ಚಕ್ಕು ಬಂದಿ.			
					ಸರ್ವೆ ನಂ.	ಎಕರೆಗಳು.	ಗುಂಟೆಗಳು.	ಗಜಗಳು.	ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.
ಕಡೂರು.	ತರೀಕೆರೆ.	ಲಿಂಗದಹಳ್ಳಿ.	ಬಲ್ಲಾವರ	ರಾಮಪ್ಪ ..	48ರ ಭಾಗ	..	34	66	ನಂ. 48 ವ 27ರ ಭಾಗ	ನಂ. 48ರ ಭಾಗ	ನಂದಿಬಟ್ಲು ನಂ. 28ರ ಭಾಗ	ನಂ. 48 ವ 27ರ ಭಾಗ
			ನಂದಿಬಟ್ಲು	ಮೆಸ್ಟರ್ ಜಿ. ಆರ್. ಆಲಿವರ್ ..	28	..	5	88	ನಂ. 28ರ ಭಾಗ	ನಂ. 28 ಡಿಟೋ	ಬಲ್ಲಾವರದ ನಂ. 48	ನಂದಿಬಟ್ಲು ನಂ. 48ರ ಭಾಗ
			ಡಿಟೋ	ಕಲ್ಲೇಗವುಡ ..	90 ವ 29	..	23	66	ನಂ. 90 ಡಿಟೋ	ನಂ. 90 ವ 29 ಡಿಟೋ	ನಂದಿಬಟ್ಲು ನಂ. 30	ನಂ. 80ರ ಭಾಗ
			ಡಿಟೋ	ಕೆ. ರಂಗೇಗವುಡ ..	80	..	11	55	ನಂ. 80 ಡಿಟೋ	ನಂ. 80 ಡಿಟೋ	ನಂ. 29ರ ಎಲ್ಲೆ	ನಂ. 26ರ ಡಿಟೋ
			ಡಿಟೋ	ಡಿಟೋ ..	26	..	16	66	ನಂ. 26 ಡಿಟೋ	ನಂ. 26 ಡಿಟೋ	ನಂ. 80 ಮತ್ತು ನಂ. 26ರ ಭಾಗ	ನಂ. 81
			ಡಿಟೋ	ಎಲ್. ರಂಗೇಗವುಡ .	81	.	21	..	ನಂ. 81 ಡಿಟೋ	ನಂ. 81 ಡಿಟೋ	ನಂ. 26	ರೆಗಡ ಗ್ರಾಮದ ನಂ. 5
						1	38	33				
			ರೆಗಡ	ಟಿ. ಮೊಹಿದೀನ್‌ಸಾಬ್ ..	36	1	28	22	ನಂ. 36ರ ಭಾಗ	ನಂ 36ರ ಭಾಗ	ನಂ 4ರ ಎಲ್ಲೆ	ನಂ. 36ರ ಭಾಗ ಮತ್ತು ನಂ. 4ರ ಎಲ್ಲೆ
			ಡಿಟೋ	ಹಸನ್ ಅಹಮ್ಮದ್ ..	34	..	19	11	ನಂ. 34 ವ 4ರ ಭಾಗ	ನಂ. 33	ನಂ. 4	ನಂ. 34ರ ಭಾಗ
			ಡಿಟೋ	ಮೆಸ್ಟರ್ ಡಿ. ಹರ್ರಿ ..	33	..	11	55	ನಂ. 34	ನಂ. 33ರ ಭಾಗ	ನಂ. 33ರ ಭಾಗ	ನಂ. 35
			ಡಿಟೋ	ಹಯಾತ್‌ಖಾನ್‌ಸಾಬ್ ..	35	1	28	88	ನಂ. 35ರ ಭಾಗ	ನಂ. 35ರ ಭಾಗ	ನಂ. 35 ವ 35ರ ಭಾಗ	ನಂ. 35 ವ 32ರ ಭಾಗ
			ಡಿಟೋ	ಕರಿಗವುಡ ..	32	..	5	88	ನಂ. 32 ವ 31ರ ಭಾಗ	ನಂ. 32 ವ 22ರ ಭಾಗ	ನಂ. 35	ನಂ. 31
			ಡಿಟೋ	ಮೆಸ್ಟರ್ ಡಿ. ಹರ್ರಿ ..	31	1	3	88	ನಂ. 31ರ ಭಾಗ	ನಂ. 31ರ ಭಾಗ	ನಂ. 32	ನಂ. 1
						5	16	110				
				ಜುಮ್ಲಾ ತರೀಕೆರೆ ತಾಲ್ಲೂಕು ..		8	9	88				
	ಚಿಕ್ಕಮಗಳೂರು.	[illegible]	ಮೋಲಿನಹುಲ್‌ವತ್ತಿ	ಕರೇಗವುಡ	45	..	19	88	ನಂ. 45ರ ಭಾಗ	ನಂ. 45ರ ಭಾಗ	ನಂ. 44	ನಂ. 42
			ಡಿಟೋ	ಅಬ್ದುಲ್‌ಖಾದರ್ ..	40,41 ವ42	1	30	77	ನಂ. 40,41 ವ42 ಭಾಗ	ನಂ. 40,41 ವ 42ರ ಭಾ.	ನಂ. 45	ನಂ. 25
			ಡಿಟೋ	ಇನಸ್‌ಖಾನ್ .	25	1	3	33	ನಂ. 25ರ ಭಾಗ	ನಂ. 25ರ ಭಾಗ	ನಂ. 40	ನಂ. 25 ವ 23ರ ಭಾಗ
			ಡಿಟೋ	ಡಾಕ್ಟರ್ ಸ್ಮಿತ್ ..	16	2	7	99	ನಂ. 16ರ ಭಾಗ	ನಂ. 16 ವ 23ರ ಭಾಗ	ನಂ. 16 ವ 23ರಭಾಗ	ನಂ. 16ರ ಭಾಗ
						5	21	55				
			ಕೇರಿ ಮನೆ	ಮೆಸ್ಟರ್ ಆಲಿವರ್ ..	20	7	10	110	ನಂ. 20ರ ಭಾಗ	ನಂ. 20 ವ 80ರ ಭಾಗ	ನಂ 20 ವ 80ರ ಭಾಗ	ನಂ. 21ರ ಭಾಗ
				ಜುಮ್ಲಾ ಚಿಕ್ಕಮಗಳೂರುತಾಲ್ಲೂಕು ..	..	12	32	44				
				ಎರಡು ತಾಲ್ಲೂಕುಗಳ ಒಟ್ಟುಜುಮ್ಲಾ.	..	21	2	11				

ತಾರೀಖು 1ನೇ ಅಕ್ಟೋಬರ 1896.

ನಂ. 3573.—ಫಾ. ಫ್ರೈ. 166—95, ಸನ್ 1878ನೇ ಇಸವಿಯ ಫಾರೆಸ್ಟು ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ ಮೈಸೂರು ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಹದ್ದು ವಿಂಗಡಿಸಲ್ಪಟ್ಟ ಮತ್ತು ವ್ಯವಸ್ಥೆ ಮಾಡಲ್ಪಟ್ಟ ಫಾರೆಸ್ಟುಗಳು ವ ಪ್ಲಾಂಟೇಷನ್‌ಗಳು ಮೇಲ್ಕಂಡ ಫಾರೆಸ್ಟು ರೂಲ್ಸಿನ 1ನೇ ರೂಲ್ ಅನುಸರಿಸಿ ಸ್ಟೇಟ್ ಫಾರೆಸ್ಟುಗಳಾಗಿ ವಿಂಗಡಿಸಲ್ಪಟ್ಟಿರುತ್ತವೆ:—

ನಂಬರು	ಫಾರೆಸ್ಟುಗಳ ವ ಪ್ಲಾಂಟೇಷನ್‌ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
1	ಬೇಗೂರ ಫಾರೆಸ್ಟು (ಹೆಗ್ಗಡದೇವನ ಕೋಟೆ ತಾಲ್ಲೂಕು.)	ಷುಮಾರು 42 ಚದುರ ಮೈಲಿಗಳು.	ಉತ್ತರಕ್ಕೆ—ಡಿಮಾರ್ಕೇಷನ್ ಲೈನು ಗಂಟೂರ ವರಿವಿಗೆ ಪೂರ್ವ ದಿಕ್ಕಿನಲ್ಲಿ ಕಬ್ಬನಿ ನದಿಯನ್ನನುಸರಿಸಿ ನಂ. 1ರ ಈಶಾನ್ಯ ದಿಕ್ಕಿನ ಎಲ್ಲೆ ಉದ್ದಕ್ಕೂ ಆಗ್ನೇಯ ದಿಕ್ಕಿನಲ್ಲಿ ಹೊರಟು ಗಂಟೂರ ನಂ. 6ರ ದಕ್ಷಿಣ ಯಲ್ಲೆಗೆ ಹೋಗುತ್ತದೆ; ಅಲ್ಲಿಂದ ಹೊಸಹಳ್ಳಿಯ ನಂ. 47ರ ಉದ್ದಕ್ಕೂ ಪೂರ್ವಕ್ಕೆ ಹೋಗಿ ಮತ್ತು ಅಲ್ಲಿಂದ ಬೈರನಹಳ್ಳಿಯ ನಂ. 55ರ ದಕ್ಷಿಣ ಯಲ್ಲೆಯನ್ನು ಮತ್ತು ಬೇಗೂರ ನಂ. 48ರ ದಕ್ಷಿಣಯಲ್ಲೆಯನ್ನೂ ಅಲ್ಲಿಂದ ಕೆಂಚೇನಹಳ್ಳಿಯ ನಂ. 1ರ ಎಲ್ಲೆಯನ್ನೂ ಬಿಟ್ಟು ಹೋಗಿ ವಡಲಿಹಳ್ಳದ ಬಳಿ ಕೊನೆ ಮುಟ್ಟುತ್ತೆ. ದಕ್ಷಿಣಕ್ಕೆ—ಮಲಬಾರ್ ಸ್ಟೇಟ್ ಫಾರೆಸ್ಟು. ಪೂರ್ವಕ್ಕೆ—ವಡಲಿಹಳ್ಳ. ಪಶ್ಚಿಮಕ್ಕೆ—ಕಬ್ಬನಿ ನದಿ.
2	ಐನೂರುಮಾರಿ ಗುಡಿ ಫಾರೆಸ್ಟು.	ಷುಮಾರು $38\frac{2}{3}$ ಚದುರ ಮೈಲಿಗಳು.	ಉತ್ತರಕ್ಕೆ—ಲೈನು ವಡಲಿಹಳ್ಳದಿಂದ ಹೊರಟು ಬಂಕವಾಡಿಯ ನಂ. 36ರ ನೈರುತ್ಯ ಎಲ್ಲೆಯ ಉದ್ದಕ್ಕೂ ಹೋಗಿ ಸರ್ವೆ ನಂ. 35ರ ಸ್ವಲ್ಪ ಭಾಗದ ಅಡ್ಡವಾಗಿ ಹಿಂದೆ ಹೇಳಿರುವದರ ಸಣ್ಣ ಮೂಲೆಯನ್ನ ದಾಟಿ ಮತ್ತು ಬಂಕವಾಡಿಯ ನಂ. 34ರ ಅರ್ಧಕ್ಕೆ ಹೆಚ್ಚಾಗಿ ಸೇರಿಸಿಕೊಂಡು, ಅಲ್ಲಿಂದ ಚಿಕ್ಕ ಬಸಗೆಯ ನಂ. 2ರ ದಕ್ಷಿಣ ಎಲ್ಲೆಯನ್ನು ಬಿಟ್ಟು ಹೋಗಿ ಮತ್ತು ಅಲ್ಲಿಂದ ಮಲಿಯೂರ ನಂ. 8 ವ 11ರ ಉದ್ದಕ್ಕೂ ಮತ್ತು ಹೆರೆಹಳ್ಳಿಯ ನಂ. 38ರ ಉದ್ದಕ್ಕೂ ಮತ್ತು ಕರ್ನಗಾಲದ ನಂ. 27 ವ 28ರ ಉದ್ದಕ್ಕೂ ಹೋಗಿ ಮತ್ತು ಅಲ್ಲಿಂದ ಆಲನಹಳ್ಳಿಯ ನಂ. 6ರ ಉದ್ದಕ್ಕೂ ನಗ್ಗಾನದಿಗೆ ಈಶಾನ್ಯ ದಿಕ್ಕಿನಲ್ಲಿ ಹೋಗುತ್ತದೆ. ದಕ್ಷಿಣಕ್ಕೆ—ಮಲಬಾರ್ ಸ್ಟೇಟ್ ಫಾರೆಸ್ಟು. ಪೂರ್ವಕ್ಕೆ—ನಗ್ಗಾನದಿ. ಪಶ್ಚಿಮಕ್ಕೆ—ವಡಲಿಹಳ್ಳ.
3	ಮೇಟಿಕುಪ್ಪೆ ಫಾರೆಸ್ಟು.	40 ಚದುರ ಮೈಲಿಗಳು.	ಉತ್ತರಕ್ಕೆ—ಹುಣಸೂರಿಂದ ಮರ್ಕರ್ಕಲ್ ರಸ್ತೆ, ಸೊಲ್ಲಾಪುರದಿಂದ ಬಂಡಿಜಾಡು ಮತ್ತು ಬೇರಿಹೆಬ್ಬಳ್ಳದ ಮೂಲ ಇವುಗಳ ಸಂಗಮದವರಿವಿಗೆ, ವೀರನಹೊಸಹಳ್ಳಿ ಸ್ಟೇಟ್ ಫಾರೆಸ್ಟಿನ ಡಿಮಾರ್ಕೇಷನ್ ಲೈನ್ ಮತ್ತು ಮರ್ಕರ್ಕಲ್ ರಸ್ತೆ ಇವುಗಳ ಸಂಗಮದ ವರಿವಿಗೆ, ಈಶಾನ್ಯದಲ್ಲಿ ಬೇರಿಹೆಬ್ಬಳ್ಳದ ಮೂಲದಿಂದ $1\frac{1}{4}$ ಮೈಲಿ ಬಳಿಯ ಡಿಮಾರ್ಕೇಷನನ್ನ ಸಂಧಿಸುತ್ತೆ. ದಕ್ಷಿಣಕ್ಕೆ—ಕಾಕನಕೋಟೆ ಸ್ಟೇಟ್ ಫಾರೆಸ್ಟು. ಪೂರ್ವಕ್ಕೆ—1886ನೇ ಇಸವಿಯಲ್ಲಿ ಹೊಸದಾಗಿ ವಿಂಗಡಿಸಲ್ಪಟ್ಟ ಡಿಮಾರ್ಕೇಷನ್ ಲೈನು, ದಕ್ಷಿಣಕ್ಕೆ ಬೇರಿಹೆಬ್ಬಹಳ್ಳದಿಂದ ಹೊರಟು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:— (a) ಮಾಸಿಕಟ್ಟೆ ಹೆಬ್ಬಹಳ್ಳ, ಮಾಸಿಕಟ್ಟೆಇಂದ 3 ಫರ್ಲಾಂಗುಗಳು, (b) ಕುರುಬರ ಪಂಚಳ್ಳ, (c) ಜೇನ್ಕೋರೆಹಳ್ಳ, ಬಿದುರ್ತಲ್ ಕೊಲಚಿಯ ಪೂರ್ವಕ್ಕೆ ಷುಮಾರು ಒಂದು ಫರ್ಲಾಂಗು, (d) ನೇತಕಲ್ ಗುಡಿಹಳ್ಳ, ನೇತಕಲ್ ಗುಡಿಯ ಪಶ್ಚಿಮಕ್ಕೆ ಷುಮಾರು 2 ಫರ್ಲಾಂಗುಗಳು, (e) ಸರತಿನದಿ, ಪಕ್ಕಟ್ಟೆಯ ಪೂರ್ವಕ್ಕೆ ಷುಮಾರು ಒಂದು ಮೈಲಿ, (f) ಮದನಹಳ್ಳಿ ಕಾಡಿನಬಳಿ ಇರುವ ನಾಗರಹೊಳೆ ಮತ್ತು ಮೇಟಿಕುಪ್ಪೆ ಫಾರೆಸ್ಟಿನಲ್ಲಿ ಹೊಸದಾಗಿ ಏರ್ಪಟ್ಟ ಬ್ಲಾಕಿನ ಪೂರ್ವದಿಕ್ಕಿನ ಕೊನೆಯು ಮತ್ತು ಕೊಡಗಿಗೆ ಹೋಗುವ ಕಕ್ಕೆರೆ (ಕವಲಿದುರಿ) ಬಂಡಿಜಾಡಿನ ಬಳಿ ಕೊನೆ ಮುಟ್ಟುತ್ತದೆ. ಪಶ್ಚಿಮಕ್ಕೆ—(a) ಕೈಮಾರದಿಂದ ಕುತ್ತಡ್ ಮರ್ಕರ್ಕಲ್ ವರಿವಿಗೆ ಮಲಬಾರ್ ಫಾರೆಸ್ಟು, (b) ಕುತ್ತಡ್ ಮರ್ಕರ್ಕಲ್‌ನಿಂದ ಕರ್ವರೆ ಕಿರ್ಕಲ್ ವರಿವಿಗೆ ಕೊಡಗು ಫಾರೆಸ್ಟು ಮತ್ತು (c) ವೀರನಹೊಸಹಳ್ಳಿ ಸ್ಟೇಟ್ ಫಾರೆಸ್ಟು.

ನಂಬರು.	ಫಾರೆಸ್ಟುಗಳ ವ ಪ್ಲಾಂಟೇಷನ್‌ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
4	ಕಾಕನಕೋಟೆ ಫಾರೆಸ್ಟ್	55 ಚದುರ ಮೈಲಿಗಳು.	ಉತ್ತರಕ್ಕೆ—ಬಿಸಲವಾಡಿ ರಸ್ತೆ. ದಕ್ಷಿಣಕ್ಕೆ—ಉಡಬೂರು ಕಾಡಿನಿಂದ ಸಾದಿಕಹಳ್ಳದ ವರಿವಿಗೆ ಕಬ್ಬನಿ ನದಿ. ಪೂರ್ವಕ್ಕೆ—ಉಡ್ಬೂರ್ ಕಾಡಿನಿಂದ ಹೊರಟು (21 ಅಡಿಗಳ ಅಗಲದ) ಡಿಮಾರ್ಕೇಷನ್ ಲೈನಿನ ಉತ್ತರಕ್ಕೆ ಹೋಗಿ ತೆಂಕಲ್ ಗ್ರಾಮದ ಸರ್ವೆ ನಂ. 1ರನ್ನ ಸುತ್ತಿಕೊಂಡು, ಅಲ್ಲಿಂದ ಉಡ್ಬೂರ್ ನಂ. 1 ವ 4ರ ಉದ್ದಕ್ಕೂ ಕಾರಾಪುರದ ಸರ್ವೆ ನಂ. 1ರ ಉದ್ದಕ್ಕೂ ನಿಸ್ನೆ ಸರ್ವೆ ನಂ. 54 ವ 55ರ ಉದ್ದಕ್ಕೂ ಬೆಲ್ಲತ್ತೂರ ನಂ. 70 ವ 8ರ ದಕ್ಷಿಣ ಎಲ್ಲೆಯು ಸುತ್ತಲೂ ಅವುಗಳನ್ನ ಸುತ್ತಿಕೊಂಡು ಮತ್ತು ಹಿಂದೆ ಹೇಳಿದ್ದರ ಪೂರ್ವ ಎಲ್ಲೆಯು ಉದ್ದಕ್ಕೂ ಹಾದು, ಅಲ್ಲಿಂದ ಮಂಚಗೌಡನಹಳ್ಳಿಯ ನಂ. 17ರನ್ನ ಬಿಟ್ಟು ಅದರ ಮೂಲಕವಾಗಿಯೂ ಹಳ್ಳಿಮಗ್ಗಿಯ ನಂ. 17ರ ಮೂಲಕವಾಗಿಯೂ ವಾಯುವ್ಯ ದಿಕ್ಕಿನಲ್ಲಿ ಒಂದು ಮೂಲೆಯಿಂದ ಮತ್ತೊಂದು ಎದುರ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ—ಮಲಬಾರ್ ಸ್ಟೇಟ್ ಫಾರೆಸ್ಟು.
5	ಕಾರಾಪುರ ಪ್ಲಾಂಟೇಷನ್ (ತೇಗ)	8 ಎಕರೆಗಳು	ಉತ್ತರಕ್ಕೆ—ಮೈಸೂರು, ಮಾನಂತಾಡಿ ರಸ್ತೆ. ದಕ್ಷಿಣಕ್ಕೆ—ಗುಂಡತೂರು ಗ್ರಾಮ. ಪೂರ್ವಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 16. ಪಶ್ಚಿಮಕ್ಕೆ—ಸರ್ವೆ ನಂ. 17ನೇ ಖರಾಬ್.
6	ನಿಸ್ನೆ ಪ್ಲಾಂಟೇಷನ್ (ತೇಗ)	13½ ಎಕರೆಗಳು	ಉತ್ತರಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 45, 63 ವ 64. ದಕ್ಷಿಣಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 43. ಪೂರ್ವಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 41. ಪಶ್ಚಿಮಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 45.
7	ಆನೆಚೌಕೂರು ಪ್ಲಾಂಟೇಷನ್ ನಂ. 3 (ತೇಗ)	67 ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 14ನೇ ಖರಾಬ್. ದಕ್ಷಿಣಕ್ಕೆ—ಡಿಟೋ ಪೂರ್ವಕ್ಕೆ—ಡಿಟೋ. ಪಶ್ಚಿಮಕ್ಕೆ—ಸರ್ವೆ ನಂ. 15ನೇ ಖರಾಬ್.
8	ಮಂಚಗೌಡನಹಳ್ಳಿ ಪ್ಲಾಂಟೇಷನ್ ನಂ. 1 (ತೇಗ)	100 ಎಕರೆಗಳು	ಉತ್ತರಕ್ಕೆ—ಮಂಚೇಗೌಡನಹಳ್ಳಿ ಎಲ್ಲೆ ಲೈನು. ದಕ್ಷಿಣಕ್ಕೆ—ರಾಗಲಕುಪ್ಪೆ ಪ್ಲಾಂಟೇಷನ್. ಪೂರ್ವಕ್ಕೆ—ಮೈಸೂರು, ಮಾನಂತಾಡಿ ರಸ್ತೆ. ಪಶ್ಚಿಮಕ್ಕೆ—ಸರ್ವೆ ನಂ. 4ನೇ ಖರಾಬ್.
9	ಅಮೃತ ಮಹಲ್ ಪ್ಲಾಂಟೇಷನ್ ನಂ. 1 ಬ್ಲಾಕ (ತೇಗ)	55 ಎಕರೆಗಳು	ಉತ್ತರಕ್ಕೆ—ಅಂತರಸಂತೆ ಅಮೃತಮಹಲ್ ಕಾವಲಿನಲ್ಲಿರುವ ಅಗ್ನಿನಿರೋಧ ಲೈನು. ದಕ್ಷಿಣಕ್ಕೆ—ಕಪಿಲಾನದಿ. ಪೂರ್ವಕ್ಕೆ—ಅಮೃತ ಮಹಲ್ ಕಾವಲ್. ಪಶ್ಚಿಮಕ್ಕೆ—ಮೈಸೂರು, ಮಾನಂತಾಡಿ ರಸ್ತೆ, ಕಪಿಲಾನದಿಗೆ ಹೋಗುವ ಗಲ್ಲಿ.
10	ಡಿಟೋ ನಂ. 2	35 ಎಕರೆಗಳು	ಉತ್ತರಕ್ಕೆ—ಕಪಿಲಾನದಿಗೆ ಹೋಗುವ ಗಲ್ಲಿ. ದಕ್ಷಿಣಕ್ಕೆ—ಸುಂದಾಪುರದ ಗ್ರಾಮಸ್ಥರಿಗೆ ಕೊಟ್ಟಿರುವ ಅಮೃತ ಮಹಲ್ ಕಾವಲ್ ಪ್ಲಾಂಟೇಷನ್ ಜಮೀನು. ಪೂರ್ವಕ್ಕೆ—ಕಪಿಲಾನದಿ. ಪಶ್ಚಿಮಕ್ಕೆ—ಮೈಸೂರು, ಮಾನಂತಾಡಿ ರಸ್ತೆ.
11	ಕಪಿಲಾ ಪ್ಲಾಂಟೇಷನ್ ಬ್ಲಾಕ ನಂ. 1 (ತೇಗ)	50 ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 23ನೇ ಗೋಮಾಳ. ಪೂರ್ವಕ್ಕೆ—ಸರ್ವೆ ನಂ. 6, 16 ವ 22. ದಕ್ಷಿಣಕ್ಕೆ—ಆನಿಪುರದ ಎಲ್ಲೆಯು ಸರ್ವೆ ನಂ. 1. ಪಶ್ಚಿಮಕ್ಕೆ—ಕಪಿಲಾನದಿ.
12	ಡಿಟೋ ನಂ. 2	54¾ ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 19 ಮತ್ತು ಗುಂಡತೂರ ಎಲ್ಲೆ. ದಕ್ಷಿಣಕ್ಕೆ—ಆನಿಪುರ ಗ್ರಾಮದ ಸರ್ವೆ ನಂ. 1. ಪೂರ್ವಕ್ಕೆ—ಗುಂಡತೂರ ಎಲ್ಲೆ. ಪಶ್ಚಿಮಕ್ಕೆ—ಕಪಿಲಾನದಿ.

ನಂಬರು.	ಫಾರೆಸ್ಟುಗಳ ವ ಪ್ಲಾಂಟೇಷನ್‌ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕು ಬಂದಿ.
13	ಬಿಸಪ್ಪನಕಟ್ಟೆ ಪ್ಲಾಂಟೇಷನ್ (ಸಡಲ್)	$7\frac{1}{4}$ ಎಕರೆಗಳು	ಉತ್ತರಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 5/5 ವ 68. ದಕ್ಷಿಣಕ್ಕೆ—ಮೈಸೂರು, ಮಾನಂತಾಡಿ ರಸ್ತೆ. ಪೂರ್ವಕ್ಕೆ—ಸರ್ವೆ ನಂ. 43ನೇ ಖರಾಬ್. ಪಶ್ಚಿಮಕ್ಕೆ—ಬಿಸಪ್ಪನಕಟ್ಟೆ ಸರ್ವೆ ನಂ. 57.
14	ಹಂಪಾಪುರದ ಪ್ಲಾಂಟೇಷನ್ (ಸಂಡಲ್)	$327\frac{3}{4}$ ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 42ನೇ ಖರಾಬ್. ಪೂರ್ವಕ್ಕೆ—ಹರನಹಳ್ಳಿ ಮತ್ತು ವಂದನಹಳ್ಳಿ ಗ್ರಾಮಗಳ ಎಲ್ಲೆ [illegible]ಗಳು. ದಕ್ಷಿಣಕ್ಕೆ—ಸರ್ವೆ ನಂ. 43ನೇ ಖರಾಬಿನಲ್ಲಿರುವ ಅಗ್ನಿನಿರೋಧರೇಖೆ. ಪಶ್ಚಿಮಕ್ಕೆ—ಸರ್ವೆ ನಂ. 44, 34, 35, 37, 38, 41 ವ 40.
15	ವೀರನಹೊಸಹಳ್ಳಿ ಫಾರೆಸ್ಟು (ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳು)	ಸುಮಾರು 9 ಚದುರ ಮೈಲಿಗಳು	ಉತ್ತರಕ್ಕೆ—ಮೈಸೂರು ಕೊಡಗು ಎಲ್ಲೆಯಲ್ಲಿ ಲಕ್ಷ್ಮಣತೀರ್ಥ ನದಿ ತನ್ನ ಪಶ್ಚಿಮಕ್ಕೆ ತಾನೇ ಪೂರ್ವಕ್ಕೆ ಬೊಗ್ಗಿ ಗಡಿಯಾರದ ಮುಳ್ಳುಗಳ ಹಾಗೆ ಹೋಗುವ ಸ್ಥಳದಿಂದ ಹೊರಟು ಎಲ್ಲೆಯು ಲಕ್ಷ್ಮಣತೀರ್ಥ ನದಿಯ ಉದ್ದಕ್ಕೂ ಪೂರ್ವಕ್ಕೆ ಹೋಗಿ ಕೋನನ ಹೊಸಹಳ್ಳಿಯ ಗ್ರಾಮದ ಎಲ್ಲೆ ಕಟ್ಟಿನವರೆಗೆ ಕಾಚೋನಹಳ್ಳಿ ಜಂಗಲಿಗೆ ಸೇರಿದ ಹಾಗೆ ಹೋಗಿ ಅಲ್ಲಿಂದ ಅಗ್ನಿ ದಿಕ್ಕಿಗೆ ಹೊರಟು ಪುನಹಾ ಲಕ್ಷ್ಮಣತೀರ್ಥ ನದಿಗೆ ಸೇರುವ ಪರಿಯಂತ ಕೋನನ ಹೊಸಹಳ್ಳಿಯ ಸರ್ವೆ ಎಲ್ಲೆ ಕಟ್ಟಿನ ಉದ್ದಕ್ಕೂ ಹೋಗಿ ಮತ್ತು ಅಲ್ಲಿಂದ ಸದರೀ ನದಿಯ ಉದ್ದಕ್ಕೂ ಪೂರ್ವ ಪಾರ್ಶ್ವ, ದಕ್ಷಿಣ ಪಾರ್ಶ್ವ ಮತ್ತು ಪಶ್ಚಿಮ ಪಾರ್ಶ್ವ ಪಾಕಮಾಡಲ್ಪಟ್ಟ 7 ಗಜಗಳ ಡಿಮಾರ್ಕೇಷನ್ ಲೈನಿಗೆ ಸೇರುವವರೆವಿಗೆ ಹೊರಟು ಮತ್ತು ಕೂಲವಿಗೆಯ ಸರ್ವೆ ಎಲ್ಲೆ ಕಟ್ಟಿನ ಉದ್ದಕ್ಕೂ ದಕ್ಷಿಣ ಪಾರ್ಶ್ವ ಹಾದು ಮತ್ತು ಎರೆಕಟ್ಟೆ ಸಮೀಪ ಮೂರ್ಕಲ್‌ವೀರನ ಹೊಸಹಳ್ಳಿ ಫಾರೆಸ್ಟ್ ರಸ್ತೆಗೆ ಸೇರುವವರೆವಿಗೆ ಕಡಗತಲ್‌ಕಟ್ಟೆ ವ ಕುರುಬರ ಪಾರೆ ಮಾರ್ಗವಾಗಿ ಮುದಗನೂರು ಮತ್ತು ಚಿಕ್ಕಹೆಜ್ಜೂರುಗಳ ಸರ್ವೆ ಎಲ್ಲೆ ಕಟ್ಟುಗಳ ಉದ್ದಕ್ಕೂ ಆಗ್ನೇಯ ದಿಕ್ಕಿಗೆ ಹಾದು ಹೋಗುತ್ತದೆ. ಪೂರ್ವಕ್ಕೆ—ಮೇಲ್ಕಂಡ ಸ್ಥಳದಿಂದ ಪೂರ್ವ ಪಾರ್ಶ್ವದ ಎಲ್ಲೆಯು 7 ಗಜಗಳ ಡಿಮಾರ್ಕೇಷನ್ ಲೈನಿನ ಉದ್ದಕ್ಕೂ ಹಿತ್ತಲ್‌ಗೂಡು ಮಾಯೀಕಟ್ಟೆ ಪಾರೆ ಮಾರ್ಗವಾಗಿ ಅದು ಮೂರು ಹೆಬ್ಬಹಳ್ಳಗಳು ದಾಟಿ ಸೊಳ್ಳೆಪುರದ ಏರು ಹೆಬ್ಬಹಳ್ಳದ ದಕ್ಷಿಣಕ್ಕೆ ಇರುವ ಹುಣಸೂರು, ಹೆಗ್ಗಡದೇವನಕೋಟೆ ತಾಲ್ಲೂಕು ಎಲ್ಲೆ ಕಲ್ಲಿನಬಳಿ ಸೇರುವ ವರಿವಿಗೂ ಹೋಗುತ್ತದೆ. ದಕ್ಷಿಣಕ್ಕೆ—ಹಿಂದೆ ಹೇಳಿದ ಸ್ಥಳದಿಂದ ಎಲ್ಲೆಯು ದಕ್ಷಿಣಕ್ಕೆ ಅದು ಮೂರ್ಕಲ್ ಮೇಟಿಕುಪ್ಪೆ ಬಂಡಿದಾಡಿಗೆ ಸೇರುವ ವರಿವಿಗೂ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿರುವ ಡಿಮಾರ್ಕೇಷನ್ ಲೈನಿನ ಉದ್ದಕ್ಕೂ ಹೊರಟು ಅಲ್ಲಿಂದ ವಾಯವ್ಯ ದಿಕ್ಕಿಗೆ ಈ ಬಂಡಿದಾಡಿನ ಉದ್ದಕ್ಕೂ ಅದು ಕರಮಾಡು ಮೂರ್ಕಲ್ ಎಂಬದಾಗಿ ಕರಿಯಲ್ಪಟ್ಟ ಕೊಡಗು, ಹುಣಸೂರು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕುಗಳ ತ್ರಿಸಂಗಮ ಎಲ್ಲೆ ಕಂಬಗಳ ಬಳಿ ಸೇರುವ ವರಿವಿಗೂ ಹೋಗುತ್ತದೆ. ಪಶ್ಚಿಮಕ್ಕೆ—ಈ (ಕರಮಾಡು ಮೂರ್ಕಲ್) ಸ್ಥಳದಿಂದ ಎಲ್ಲೆಯು ಎಲ್ಲೆ ಕಂಬಗಳಿಂದಲೂ ಮತ್ತು ಗುಣಿಗಳಿಂದಲೂ ಹೊರಟ ಸ್ಥಳದ ವರಿವಿಗೆ ಗುರ್ತು ಮಾಡಿದ ಕೊಡಗು ವ ಮೈಸೂರ ಎಲ್ಲೆಯ ಉದ್ದಕ್ಕೂ ಆನಿಕಟ್ಟೆ ಹಳ್ಳ, ಚಾಡಿಕಟ್ಟೆ ಮತ್ತು ಭದ್ರಿಕಟ್ಟೆ ಕಲ್ಪತಿ ಮಾರ್ಗವಾಗಿ ಲಕ್ಷ್ಮಣತೀರ್ಥ ನದಿದಾಟಿ ಈಶಾನ್ಯ ಮತ್ತು ಉತ್ತರ ದಿಕ್ಕುಗಳಿಗೆ ಹೋಗುತ್ತದೆ.
16	ಚಾಮರಾಜನಗರದ ಫಾರೆಸ್ಟು (ಚಾಮರಾಜನಗರದ ತಾಲ್ಲೂಕು)	$98\frac{1}{2}$ ಚದುರ ಮೈಲಿಗಳು	ಉತ್ತರಕ್ಕೆ—ಕಟ್ಟೇಕಲ್ಲು ಆಲದಮರದ ಬಳಿ ಗೊತ್ತು ಮಾಡಿದ ಎಲ್ಲೆ ಗುರ್ತುಗಳಿಂದ ಲೈನು ಪೂರ್ವಕ್ಕೆ ಹೊರಟು ಸೂಳೆಕಲ್ ಬೆಟ್ಟವನ್ನ ಎಡಕ್ಕೆ ಬಿಟ್ಟುಕೊಂಡು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:—(a) ಕೊಂಗನ ಕಾಡು ಹನುಮನಕಲ್ಲು, (b) ಕಂಬಿಕಲ್ಲು ಕಣಿವೆಯ ಮೇಲ್‌ಭಾದಲ್ಲಿ ಗೊತ್ತು ಮಾಡಿದ ಎಲ್ಲೆ ಗುರ್ತು, (ಅಲ್ಲಿಂದ ಲೈನು ಸೇರುತ್ತದೆ.) (c) ಹೊರಟ ಸ್ಥಳವಾದ ಹೊನ್ನುಮತ್ತಿ ಬೆಟ್ಟದಬಳಿ ಗೊತ್ತು ಮಾಡಲ್ಪಟ್ಟ ಮುಗ್ಗುಗಡ್ಡೆ ಎಲ್ಲೆ ಗುರ್ತುಗಳು. ಪೂರ್ವಕ್ಕೆ—ಕೊಯಿಮುತ್ತೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳ ಫಾರೆಸ್ಟುಗಳ ಮಧ್ಯೆ ಕತರಾಯಿಸಿದ ಡಿಮಾರ್ಕೇಷನ್ ಲೈನು ಹೊನ್ನೆಮತ್ತಿ ಬೆಟ್ಟದ ಮೇಲೆ ಗೊತ್ತು ಮಾಡಿದ (ಮೂರ್ಗುಡ್ಡೆ) ಎಳಂದೂರು, ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲ್ಲೂಕುಗಳ ತ್ರಿಸಂಗಮ ಬಳಿ ಪ್ರಾರಂಭಿಸಿ ಹೊರಟು ಈ ಕೆಳಗೆ ಕಂಡ ಜನ್ನಾಗಿ ಕಾಣತಕ್ಕ ಕಡ್ಮಾರ್ಕುಗಳ ಉದ್ದಕ್ಕೂ ದಕ್ಷಿಣಕ್ಕೆ ಹೋಗುತ್ತದೆ:—(a) ಅತ್ತಿಮರದ ಕಣಿವೆ, (b) ದೇವಿಗೆರೆ, (c) ಕೆಂಚನಮಾರನ ಕಣಿವೆ, (d) ಗೆರೆಕಲ್ಲು ಮತ್ತು (e) ಬೆಳ್ಳಿ ಮುರಿಕಿರೆ.

ಸಂಖ್ಯೆ.	ಫಾರೆಸ್ಟುಗಳ ವ ಪ್ಲಾಂಟೇಷನ್‌ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
16	ಚಾಮರಾಜನಗರದ ಫಾರೆಸ್ಟು (ಚಾಮರಾಜನಗರದ ತಾಲ್ಲೂಕು)	98½ ಚದುರ ಮೈಲಿಗಳು	ದಕ್ಷಿಣಕ್ಕೆ—ಸೋಲ್ಕಂಡ ಹಳ್ಳಿಮುರಿ ಆರೆಯಿಂದ ಲೈನು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಪಶ್ಚಿಮಕ್ಕೆ ಹೋಗುತ್ತದೆ:—(a) ಸಿರಗೋಡಿಹಳ್ಳಿ, (b) ಚಿಟ್ಟನಕೊಪ್ಪದ ಮಲೆ, (c) ಹೊನ್ನುಹೊಳೆ (ಹುಣಸೂರು ಪಾರ್ಶ್ವದ ಕೊಯಿಮುತ್ತೂರು ಮತ್ತು ಮೈಸೂರು ಫಾರೆಸ್ಟುಗಳ ಮಧ್ಯೆ ಎಲ್ಲೆ ಲೈನು), (d) ಕೆರೆಪಾಳ್ಯದ ಬಳಿ ಗೊತ್ತುಮಾಡಿದ ಎಲೆ ಕಂಬ, (e) ಜೆಪ್ಪರದ ನಾಯಿಪೇಲದ ಬೆಟ್ಟ, (f) ದೇಬನಮಡು, (g) ದೊಡ್ಡನ ಆನೆಬೆಟ್ಟ, (h) ಪುಟ್ಟದ ಈರನ ಸೊಣ್ಣೆಬೆಟ್ಟ, (i) ಮೂಕನಪಾಳ್ಯದ ಎಲ್ಲೆ ಗುರ್ತುಗಳು, (j) ಗುಳಗುಡ್ಡೆ ಬೆಟ್ಟ, (k) ಕುಂಬಾರಗುಂಡಿ, (l) ಷುಮಾರು ಒಂದು ಮೈಲಿ ವರಿವಿಗೆ ಚಾಮರಾಜನಗರ, ಹಸನೂರು ರಸ್ತೆಯ ಪಾರ್ಶ್ವದಲ್ಲಿ ಗೊತ್ತುಮಾಡಿದ ಮೈಸೂರ್ ವ ಕೊಯಿಮುತ್ತೂರು ಫಾರೆಸ್ಟಿನ ಮಧ್ಯೆ ಇರುವ ಎಲ್ಲೆ ಗುರ್ತುಗಳು, (m) ಹೊನ್ನೇಗವುಡನಹಳ್ಳಿ ಮತ್ತು ಸಣ್ಣನಪುರದ ಎಲ್ಲೆ ಗುರ್ತುಗಳು, ಮತ್ತು (n) ಅತ್ತಿಕಲಿಪುರದ ಬಳಿ ಕತರಾಯಿಸಿರುವ ಹೊಸ ಡಿಮಾರ್ಕೇಷನ್ ವರಿವಿಗೆ ಮೈಸೂರು ವ ಕೊಯಿಮುತ್ತೂರು ಫಾರೆಸ್ಟುಗಳ ಮಧ್ಯೆ ಎಲ್ಲೆ ಗುರ್ತುಗಳು. ಪಶ್ಚಿಮಕ್ಕೆ—ಎಳಂದೂರು ಮತ್ತು ಚಾಮರಾಜನಗರದ ಎಲ್ಲೆ ಗುರ್ತುಗಳು ಗೊತ್ತುಮಾಡಿರುವ ಅತ್ತಿಕಲಿಪುರದಿಂದ ಕಟ್ಟೆಕಲ್ಲು ಆಲದ ಮರದ ವರಿವಿಗೆ ಹೊಸದಾಗಿ ಕತರಾಯಿಸಿದ ಡಿಮಾರ್ಕೇಷನ್ ಲೈನು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:—(1) ಹೊಂಗಲವಾಡಿಗೆ ರಸ್ತೆ, (2) ಅಲ್ಲಿಮರ್ಗ ಗುಡ್ಡ ಮತ್ತು (3) ಅಣ್ಣತಮ್ಮಂದಿರ ಗುಡ್ಡ.
17	ಪಡಲಾಪುರ ಪ್ಲಾಂಟೇಷನ್ (ಚಾಮರಾಜನಗರದ ತಾಲ್ಲೂಕು)	40 ಎಕರೆಗಳು	ಉತ್ತರಕ್ಕೆ—ಸರ್ಕಾರದ ಬಂಜರ್ ಜಮೀನು. ಪೂರ್ವಕ್ಕೆ—ಡಿಟೋ. ದಕ್ಷಿಣಕ್ಕೆ—ಹಾಸನೂರು, ಚಾಮರಾಜನಗರದ ರಸ್ತೆ. ಪಶ್ಚಿಮಕ್ಕೆ—ಸರ್ಕಾರದ ಬಂಜರ್ ಜಮೀನು. (ಇದು ಪಡಲಾಪುರದ ಬೇಚಿರಾಕ್ ಗ್ರಾಮದಲ್ಲಿರುತ್ತೆ ಮತ್ತು ಸರ್ವೆ ನಂ. 11, 12, 13, [illegible] 17, 18 ವ 20ರ ಭಾಗ ಅಡಗಿಸಿಕೊಂಡಿರುತ್ತೆ.)
18	ಮದ್ದೂರ ಪ್ಲಾಂಟೇಷನ್ (ಅಳಲೇಕಾಯಿ) ಗುಂಡ್ಲುಪೇಟೆ ತಾಲ್ಲೂಕು	460 ಎಕರೆಗಳು	ಉತ್ತರಕ್ಕೆ—ಮದ್ದೂರು ಗ್ರಾಮದ ಸರ್ವೆ ನಂ. 34ರ ಭಾಗ. ಪೂರ್ವಕ್ಕೆ—ಮದ್ದೂರ ಕೆರೆ. ದಕ್ಷಿಣಕ್ಕೆ—ಗುಂಡ್ಲುಪೇಟೆ, ಸುಲ್ತಾನರ ಬತೇರಿ ರಸ್ತೆ. ಪಶ್ಚಿಮಕ್ಕೆ—ಮದ್ದೂರ ಗ್ರಾಮದ ಸರ್ವೆ ನಂ. 34ರ ಭಾಗ.
19	ಹೊಂಗಹಳ್ಳಿ ಪ್ಲಾಂಟೇಷನ್	50 ಎಕರೆಗಳು	ಉತ್ತರಕ್ಕೆ—ಮಾಸಹಳ್ಳಿ ಗ್ರಾಮದ ಸರ್ವೆ ನಂ. 115ರ ಭಾಗ ಮತ್ತು ಹೊಂಗಹಳ್ಳಿ ಬಂಡಿಜಾಡು. ಪೂರ್ವಕ್ಕೆ—ಮಾಸಹಳ್ಳಿ ಗುಡ್ಡೆ. ದಕ್ಷಿಣಕ್ಕೆ—ಕುಣಿಗಲ್ ಗ್ರಾಮದ ಎಲ್ಲೆ. ಪಶ್ಚಿಮಕ್ಕೆ—ಮಾಸಹಳ್ಳಿ ಗ್ರಾಮದ ಸರ್ವೆ ನಂ. 115ರ ಭಾಗ ಮತ್ತು ಹೊಂಗಹಳ್ಳಿ ಬಂಡಿಜಾಡು.

ತಾರೀಖು 2ನೇ ನವಂಬರ್ 1896.

ನಂ. 4164—ರೆ. ಫೈ. 103-95, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಮಾಗಡಿ ತಾಲ್ಲೂಕು ಅಮಲ್‌ದಾರ್ ಎಂ. ಎ. ತಿರುಮಲಾಚಾರ್ಯರವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಎರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಶಿರಸ್ತೇದಾರ್ ಕೇಶವಯ್ಯಂಗಾರು, ಸದರೀ ತಿರುಮಲಾಚಾರ್ಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮಾಗಡಿ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ನೌಕರಿ ಮಾಡಲ್ಪಟ್ಟಿರುತ್ತಾರೆ.

ನಂ. 4098.—ಎಕ್ಸೈ. 156, ಮೈಸೂರ್ ಎಕ್ಸೈಜ್ ಕಮ್ಮಿಷನರವರಿಗೆ ಅಸಿಸ್ಟೆಂಟರಾದ ಮೆಸ್ಟರ್ ಎಂ. ವಿ. ದೇವಿಯವರ ಸರ್ಕಾರಿ ಹುದ್ದೆಯು 1896ನೇ ಅಕ್ಟೋಬರ್ 15ನೇ ತಾರೀಖು ಲಾಗಾಯತು "ಮೈಸೂರ ಡೆಪ್ಯುಟಿ ಎಕ್ಸೈಜ್ ಕಮ್ಮಿಷನರ್" ಹುದ್ದೆಗೆ ಬದಲಾಯಿಸಲ್ಪಟ್ಟಿದೆ.

ತಾರೀಖು 16ನೇ ಅಕ್ಟೋಬರ್ 1896.

ನಂ. 3836.—ರೆ. 1322, ಸನ 1894ನೇ ಇಸವಿಯ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವೆಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ ಎಡಹಳ್ಳಿ ಸಬ್ ತಾಲ್ಲೂಕಿನಲ್ಲಿ ಭದ್ರಾಕ್ಕೆ ಅಡ್ಡವಾಗಿರುವ ಬಾಳೇಹೊನ್ನೂರು ಸೇತುವೆಯ ಕಟ್ಟೆ ವಗೈರೆ ಕಟ್ಟುವ ಬಗ್ಗಾಗಿ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ	ಹಿಡುವಳಿದಾರ್ರ ಹೆಸರು.	ಜಮೀನಿನ ತಪ್ಸೀಲು.				ಚಕ್ಕುಬಂದಿ.			
				ವಿವರಣೆ.	ಸರ್ವೇ ನಂ.	ವಿಸ್ತೀರ್ಣ.	ಬೇರೀಜು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎ. ಗುಂ	ರೂ.ಆ.ಪೈ.				
ಕಡೂರು.	ಎಡಹಳ್ಳಿ.	ಕಣಬೂರು	ಲಿಂಗೇಗವುಡ	ತರೀ	1ರ ಭಾಗ	1—32	6–0–0	ಲಿಂಗೇಗವುಡನ ಖಾತೇಜಮೀನ್ ನಂ. 1 ತರೀ.	ವಸ್ತಾರಾ ಕೊಪ್ಪದ ಹೈರೋಡ್ ಬ್	ಸರ್ವೆ ನಂ. 107 ಖರಾಬು	ಕಳಸಾ ರೋಡು
		ಡಿಟೋ	ಸಿರ್ವಮೇಸ್ತ್ರಿ)	ತರೀ	108ರ ಭಾಗ	2—23	9–0–0	ವಸ್ತಾರಾ ಕೊಪ್ಪದ ಹೈರೋಡು	ನಂ. 108ರ ಭಾಗ	ನದಿಗೆ ಹೋಗುವ ಹಳೇ ರಸ್ತೆ	ವಸ್ತಾರಾ ಕೊಪ್ಪದ ಹೈರೋಡು
		ಕರಹಡ್ಲಿ	ಮೆ|| ಕ್ಲಿಫರ್ಡ್	ಕಾಫಿ	1ರ ಭಾಗ	2—30	..	ಡಿಟೋ	ಭದ್ರಾನದಿ	ಕಾಫಿ ಜಮೀನು ನಂ. 11	ಕಾಫಿ ಜಮೀನ್ ನಂ. 12
		ಡಿಟೋ	ಡಿಟೋ	ಕಾಫಿ	12	3—8	5–0–0	ಸರ್ವೆ ನಂ. 11	ಡಿಟೋ	ಸರ್ವೆ ನಂ. 11	ಭದ್ರಾನದಿ ಮತ್ತು ವಸ್ತಾರಾ ಕೊಪ್ಪದ ಹೈರೋಡು

ತಾರೀಖು 3ನೇ ನವಂಬರ್ 1896.

ನಂ. 4112.—ರೆ. ಫೈ. 33.—96, ಬೆಂಗಳೂ[illegible] ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಕೆ. ಶ್ರೀನಿವಾಸರಾಯರಿಗೆ, 1896ನೇ ಅಕ್ಟೋಬರ್ 24ನೇ ಮರ್ಕು 3940.—ರೆ. ಫೈ. 33.—1896—97ನೇ ನಂಬರಿನೊಡನೆ ಆಖೈರಾಗುವ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟಿದ್ದ ಎರಡು ತಿಂಗಳೂ ಐದು ದಿವಸಗಳ ಪ್ರಿವಿಲೀಜ್ ರಜಾವನ್ನ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕಾಹಿಲೆ ರಜಾಕ್ಕೆ ಬದಲಾಯಿಸಲ್ಪಟ್ಟು ಇನ್ನೂ ಆರು ವಾರಗಳ ವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 5ನೇ ನವಂಬರ್ 1896.

ನಂ. 4251.—ಫಾ. ಫೈ. 1—96, ತುಮಕೂರು ಡಿಸ್ಟ್ರಿಕ್ಟಿಗೆ ಬಳಿತವಾದ ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್ಸರ್‌ವೇಟರ್ ಮಿಸ್ಟರ್ ಪಿ. ಈ. ಬರ್ನರ್ಸ್‌ರವರಿಗೆ 1896ನೇ ಸೆಪ್ಟಂಬರ್ 5ನೇ ಮರ್ಕುಂ 2692—ಫಾ. ಫೈ. 1—96ನೇ ನಂಬರು ಇಸ್ತಿಹಾರ್ ನಾಮೆಯಲ್ಲಿ ಕೊಡಲ್ಪಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಇನ್ನು ಒಂದು ದಿನ ಜಾಸ್ತಿ ಮಾಡಲ್ಪಟ್ಟ ಯಾವತ್ಕಾಲವು ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಕ್ಯಾಜುಯಲ್ ರಜಾವಾಗಿ ಭಾವಿಸಲ್ಪಟ್ಟಿರುತ್ತೆ.

ತಾರೀಖು 8ನೇ ನವಂಬರ್ 1896.

ನಂ. 4232.—ರೆ. ಫೈ. 125.—95, ತರೀಕೆರೆ ತಾಲ್ಲೂಕು ಅಮಲ್ದಾರ್ ಎನ್. ಸುಬ್ಬರಾಯರಿಗೆ, 1896ನೇ ಆಗಸ್ಟ್ 24ನೇ ಮರ್ಕುಂ 2128.—ರೆ. ಫೈ. 125.—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಮೂರು ದಿವಸಗಳ ಕ್ಯಾಜುಯಲ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿದೆ.

ನಂ. 4236—ರೆ. ಫೈ. 37—96—7, ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಅಮಲ್ದಾರ್ ಸಿ. ರಾಜಗೋಪಾಲಾಚಾರ್ಲುಯವರು ಅವರಿಗೆ 1896ನೇ ಅಕ್ಟೋಬರ್ 5ನೇ ಮರ್ಕುಂ ಕ್ಯಾಂಪ್ 4ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ರಜಾವನ್ನ 1896ನೇ ಆಗಸ್ಟ್ 28ನೇ ತಾರೀಖಿನ ಪೂರ್ವಾಹ್ನದ ಲಾಗಾಯತು ಉಪಯೋಗಿಸಿಕೊಂಡು 1896ನೇ ಅಕ್ಟೋಬರ್ 10ನೇ ಮರ್ಕುಮಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸ ಬಂದಿರುವ ಸಬಬ್ ಉಪಯೋಗಿಕೊಳ್ಳದ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿದೆ.

ನಂ. 4239.—ರೆ. ಫೈ. 49—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟು ಮಳವಳ್ಳಿ ತಾಲ್ಲೂಕು ಅಮಲ್ದಾರ್ ಕೃಷ್ಣಅರಸಿನವರಿಗೆ 1896ನೇ ಸೆಪ್ಟಂಬರ್ 9ನೇ ಮರ್ಕುಮಿನಲ್ಲಿ ಒಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 8ನೇ ನವೆಂಬರ್ 1896.

ನಂ. 4242—ರೆ. ಫೈ. 138—95, ವ್ಯೈಸೂರ್ ಸರ್ವಿಸ್ ರೆಗ್ಯುಲೇಷ್ನಗಳ 172ನೇ ಆರ್ಟಿಕಲ್ ಅನುಸರಿಸಿ ತಿರುಮಕೂ
ಡ್ಲು ನರಸೀಪುರದ ತಾಲ್ಲೂಕು ಆಮಲ್‌ದಾರ್ ಜಿ. ಹನುಮಂತರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹದಿನೈ
ದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದೆ.

ತಾಲ್ಲೂಕು ಶಿರಸ್ತೇದಾರ್ ರಂಗಣ್ಣನವರು ಸದರೀ ಹನುಮಂತರಾಯರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹು
ಕುಂ ಕೊಡುವ ಪರಿಯಂತ ತಿರುಮಕೂಡ್ಲು ನರಸೀಪುರದ ತಾಲ್ಲೂಕಿನ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್
ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 10ನೇ ನವೆಂಬರ್ 1896.

ನಂ. 4215.—ರೆ. ಫೈ. 33—96—97, ಬೆಂಗಳೂರು ತಾಲ್ಲೂಕು ಅಮಲ್‌ದಾರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟರಾದ
ಪಿ. ಸೀತಾರಾಮಯ್ಯನವರು ಮೆಸ್ಟರ್ ಕೆ. ಶ್ರೀನಿವಾಸರಾಯರು, ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ
ಪರಿಯಂತ ಬೆಂಗಳೂರು ಡಿಸ್ಟ್ರಿಕ್ಟ್ ಆಸಿಸ್ಟೆಂಟ್ ಕಮ್ಮಿಷನರ್ ವ 1ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪ
ಟ್ಟಿರುತ್ತಾರೆ.

ತಾರೀಖು 11ನೇ ನವೆಂಬರ್ 1896.

ನಂ. 4248.—ಫಾ. ಫೈ. 26.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ನಗಳ 171ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ
ಗವರ್ನಮೆಂಟ್ ವೃಕ್ಷವರ್ಗದ ತೋಟಗಳ ಸೂಪರಿಂಟೆಂಡೆಂಟ್ ಮೆಸ್ಟರ್ ಜೆ. ಕ್ಯಾಮರ್ನ್ ಯವರಿಗೆ, ಮಹೆ ಮಜಕೂರ್ 13ನೇ ಮುರ್ಹು
ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದೆ.

ನಂ. 4255—ಫಾ. ಫೈ. 60—95, ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆಸ್ಟರ್ ಜಿ. ಈ. ರಿಕೆಟ್ಸ್‌ಯವರು ಅವ
ರಿಗೆ 1895ನೇ ಆಗಸ್ಟ್ 10ನೇ ಮುರ್ಹುಂ 1746—ಫಾ. 96ನೇ ನಂಬರ್ ಮತ್ತು ಡಿಶಂಬರ್ 13ನೇ ಮುರ್ಹುಂ 5491—ಫಾ. ಫೈ.
60—95ನೇ ನಂಬರ್ ಇಸ್ತಿಹಾರ್‌ನಾಮೆಗಳಲ್ಲಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ಕಾಹಿಲೆ ರಜಾದಿಂದ ಅಕ್ಟೋಬರ್
26ನೇ ಮುರ್ಹುಮಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸ್ ಬಂದದ್ದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ 26 ದಿನಗಳು
ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 12ನೇ ನವೆಂಬರ್ 1896.

ನಂ. 4312.—ರೆ. ಫೈ. 70—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ನಗಳ 172ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು
ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಅಮಲ್‌ದಾರ್ ಪಿ. ಕೃಷ್ಣಸಾಮಿ ಅಯ್ಯಂಗಾರ್ ಯವರಿಗೆ, 1896ನೇ
ನವೆಂಬರ್ 4ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಯಿತರ ತಾರೀಖಿನಾರಭ್ಯ ನಾಲ್ಕು ದಿನಗಳ ಕ್ಯಾಜು
ಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 14ನೇ ನವೆಂಬರ್ 1896.

ನಂ. 4349.—ರೆ. 1503, ಮೆಸ್ಟರ್ ಪಿ. ಸೀತಾರಾಮಯ್ಯನವರು ಬೇರೆಕೆಲಸದ ಮೇಲೆ ಇರುವ ಕಾಲದಲ್ಲಿ ಈ ಕೆಳಗೆ ಕಂ
ಡ ಹಂಗಾಮಿ ಏರ್ಪಾಡುಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಚೆನ್ನಪಟ್ಣ ತಾಲ್ಲೂಕು ಅಮಲ್‌ದಾರ್ ಬಾದಾಮಿ ಕೃಷ್ಣರಾಯರು ಬೆಂಗಳೂರು ತಾಲ್ಲೂಕು ಅಮಲ್‌ದಾರ್ರಾಗಿರತಕ್ಕದ್ದು.
(ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ಕ್ಲೋಸ್‌ಪೇಟೆ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಅಮಲ್‌ದಾರ್ ಪಿ. ಕೃಷ್ಣಸಾಮಿ ಅಯ್ಯಂಗಾರ್, ಬಿ. ಏ., ಯವರು, ಚನ್ನ
ಪಟ್ಣ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟ್ ಮಾಡತಕ್ಕದ್ದು. (ಕೂಡ್ಲೆ ಕೆಲಸದ ಮೇಲೆ ಹಾಜರಾಗ
ತಕ್ಕದ್ದು.)

ರೆವಿನ್ಯೂ ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟರವರ ಆಫಿಸಿನ ಹೆಡ್ ಕ್ಲಾರ್ಕ್ ನರಸಿಂಹ ಶ್ರೀನಿವಾಸಪೋಟ್ನಿಸ್‌ಯವರು, ಕ್ಲೋಸ್
ಪೇಟೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟ್ ಮಾಡತಕ್ಕದ್ದು. (ಕೂಡ್ಲೆ ಕೆಲಸದ ಮೇಲೆ
ಹಾಜರಾಗತಕ್ಕದ್ದು.)

ಹುಕುಂ ಬಮೋಜಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮಿ ಲಿ ಟೆ ರಿ .

ಇಸ್ತಿಹಾರ್‌ನಾಮಾ.

ತಾರೀಖು 10ನೇ ನವಂಬರ್ 1896.

ಮೈಸೂರ ಪೈದಲ್ ಫೌಜಿನ 3ನೇ ಪಟಾಲಮಿನಲ್ಲಿ 1896ನೇ ನವೆಂಬರ್ ಗುರ್‍ರೇ ಲಾಗಾಯತು ಈ ಕೆಳಗೆ ಕಂಡ ಬಡ್ತಿಯು ಮಾಡಲ್ಪಟ್ಟಿರುತ್ತೆ:—

ವೀರಾಸಾಮಿ, 1ನೇ ಗ್ರೇಡ್ ಹವಾಲ್ದಾರಿಯಿಂದ 2ನೇ ಗ್ರೇಡ್ ಜಮಾದಾರಿಗೆ.

ಹುಕುಂ ಬಮೋಜೀಬ್,

ಏ. ಎಚ್. ಮೆಕ್ಕಿಂಟೈರ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟೆರಿ ಸೆಕ್ರಟೆರಿ.

ಪಬ್ಲಿಕವರ್ಕ್ಸ.

ಇಸ್ತಿಹಾರ್‌ನಾಮಾ.

ತಾರೀಖು 16ನೇ ನವಂಬರ್ 1896.

ನಂ. 871.—5901, ಮೆಸ್ಟರ್ ಈ. ಟಿ. ಕ್ಯಾಂಬೆಲ್‌ಯವರು, 1896ನೇ ಅಕ್ಟೋಬರ್ 24ನೇ ಮುಕ್ಕಾಂ ಲಾಗಾಯತು 1ನೇ ಗ್ರೇಡ್ ಪ್ರೊಬೇಷನರಿ ಸಬ್ ಆಸಿಸ್ಟೆಂಟ್ ಇಂಜಿನಿಯರಾಗಿ ಮೊಕರರ್ಮಾಡಲ್ಪಟ್ಟು ಬೀರೂರು ಶಿವಮೊಗ್ಗಾ ರೈಲ್ವೆಗೆ ನಿಯಮಿಸಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್.

ಸಿ. ಬರ್ವ, ಕರ್ನಲ್,
ಮೈಸೂರ್ ಗವರ್ನಮೆಂಟ್ ಪಬ್ಲಿಕವರ್ಕ್ಸ ಇಲಾಖಾ ಸೆಕ್ರಟೆರಿ.

563

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಛಾಪಿಸಿಪ್ ಆದ್ದು. [ಸಂ. 46.

ಬೆಂಗಳೂರು, ಗುರುವಾರ, ನವಂಬರ್ ತಾ|| 19, ಸನ್ 1896.

IIನೇ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರನ್ಸ ಡಿಟೋ	,, 170
1	ಮದ್ರಾಸ್ ಓಕ್ಸ್‌ರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಜೋರ್‍ಯಾಮರವರ ಡಿಟೋ	,, 85

ಖರೀದೀದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 137.

ಮೃತಪಟ್ಟ ಚೌಡೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರಲ್ಲಿರುವ ಬಾರಲ್ಯೆನ್ ಸ್ಕೂಲ್ ಮಾಸ್ಟರು ನಂಜುಂಡಪ್ಪನು, ಮೃತಪಟ್ಟ ಸದರೀ ಚೌಡೇಗವುಡರಿಗೆ ಮಗನು ಆಗಬೇಕೆಂಬ ಹಕ್ಕುದಾರ ಮೇಲೆ ತುಮಕೂರು ಡಿಸ್ಟ್ರಿಕ್ಟು ತಿಪಟೂರು ತಾಲ್ಲೂಕು ಮಾಯಿಸಂಪ್ರದ ಸಮ್ಮತು ಕಾಡನೂರು ಮಾವಿನಕೆರೆ ಸ್ಥಳದ ನಂಜುಂಡಪ್ಪನು ಡಿಟೋ ಊರು ವಾಸಸ್ಥರಾಗಿ ಮೃತಪಟ್ಟ ಲೇಟ್ ಅಂಜೇ ಇನ್ಸ್‌ಪೆಕ್ಟರು ಚೌಡೇಗವುಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜುಂಡಪ್ಪನ ಅರ್ಜಿಯನ್ನು 1896ನೇ ಇಸವಿ ನವಂಬರು ತಿಂಗಳ ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚೌಡೆಗವುಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1896ನೇ ಇಸವಿ ನವಂಬರ್ ತಿಂಗಳ 11ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 161.

ಮೃತಪಟ್ಟ ಪಟೇಲ್ ತಿಮ್ಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ದೇವಂಡಹಳ್ಳಿಯಲ್ಲಿರುವ ರಾಮಸ್ವಾಮಿ ಮೈನರ್ ಗಾರ್ಡಿಯನ್ ಮೃತಪಟ್ಟ ಸದರೀ ತಿಮ್ಮಯ್ಯನ ಅಣ್ಣನ ಮಗ ದೊಡ್ಡಮುನಿಯಪ್ಪನು ಮೃತಪಟ್ಟ ಸದರಿ ತಿಮ್ಮಯ್ಯನೆಂಬವನಿಗೆ, ರಾಮಸ್ವಾಮಿಯು ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ದೇವಂಡಹಳ್ಳಿ ಸ್ಥಳದ ದೊಡ್ಡಮುನಿಯಪ್ಪ ದೇವಂಡಹಳ್ಳಿ ವಾಸಸ್ಥನಾಗಿ ಮೃತಪಟ್ಟ ಪಟೇಲ್ ತಿಮ್ಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ದೊಡ್ಡಮುನಿಯಪ್ಪನ ಅರ್ಜಿಯನ್ನು ಸ್ 1897ನೇ ಇಸವಿ ಜನವರಿ ತಿಂಗಳ ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ತಿಮ್ಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1896ನೇ ಇಸವಿ ನವಂಬರು ತಿಂಗಳ 10ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 144.

ಅರ್ಜೀದಾರ ತಿರಪತ್ತೂರು ತಾಲ್ಲೂಕು ವಾನಂಬಾಡಿಗೆ ಶೇರಿದ ಶಂಕರಪುರದಲ್ಲಿರುವ ಚಂಗಲರಾಯಪ್ಪನ ಮಗ ವೆಂಕಟಸುಬ್ಬರಾವ್ ಮೈನರಾದ ಮಾಲೂರು ತಾಲ್ಲೂಕು ತ್ಯಾಕಲ್ಲು ಸಮ್ಮತು ನಕ್ಕನಹಳ್ಳಿಯಲ್ಲಿ ಮೃತಪಟ್ಟ ನರಸಪ್ಪನ ಹೆಣ್ಣುಮಕ್ಕಳಾದ 1ನೇ ಭಾಗೀರಥಮ್ಮ, 2ನೇ ಶೀತಮ್ಮ ಯಿವರುಗಳ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೇ ಭಾಗೀರಥಮ್ಮ, 2ನೇ ಶೀತಮ್ಮ ಯಿವರಿಗೆ ಅರ್ಜೀದಾರ ವೆಂಕಟಸುಬ್ಬರಾವು 1ನೇ ಯವಳಿಗೆ ಗಂಡ ಮತ್ತು 2ನೇ ಯವಳಿಗೆ ಸೋದರಮಾವಾ ಆಗಬೇಕೆಂಬ ಹಕ್ಕಿನ ಮೇಲೆ ತಿರಪತ್ತೂರು ತಾಲ್ಲೂಕು ಶಂಕರಪುರದಲ್ಲಿರುವ ವೆಂಕಟಸುಬ್ಬರಾವು ಸದರೀ ಮೈನರುಗಳ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾನೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1896ನೇ ಇಸವಿ ನವಂಬರು ತಾರೀಖು 26ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟೀಸ್ ಕೊಡಲಾಗಿಧೆ.

1896ನೇ ಇಸವಿ ನವಂಬರ್ ತಿಂಗಳ 2ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರಸ್,
ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖಾ.

ನೋಟಿಸ್:

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಟಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4. ಪ್ರತಿ ಕೋಠಿಯಲ್ಲಿಯು ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನು ಇದರಡಿ ವಿವರಿಸಿಧೆ.

ಹಳೇ ತರಹೆ ಪ್ರಕಾರ.

ಸಂದಲ್ ವಿವರ	ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.
ಸಲಾಕಿ ಅವ್ವಲ್ ..	1	..	..	5	..	15	..	..	..	15	..	...
ಡಿಟೋ ದುಯಂ ..	..	5	1	5	2	5	3	5	1	..	..	2
ಡಿಟೋ ಸಿಯಂ ..	1	10	7	10	5	5	12	15	8	..	4	..
ಡಿಟೋ ಚಹರಂ ..	45	15	30	..	44	..	32	10	12	..	7	..
ಡಿಟೋ ಪಂಚಂ ..	7	..	10	..	10	10	37	.	25	..	14	..
ಚಿಕ್ಕ ಸಲಾಕಿ ..	1	2	1	..	..	..	..	..	..	..	..	..
ದೊಡ್ಡ ಜಡಾ ..	21	..			33	..	66	5	40	..	25	..
ಚಿಕ್ಕ ಜಡಾ ..	3	15	35	..	5	..	8	..	4	..	2	..
ಜಡದ ರಂಬೆ ..	1	5			7	..	...	..	...	..	...	..
ದೊಡ್ಡ ಜಜ್ಜು ..	18	..			30	..						
ಚಿಕ್ಕ ಜಜ್ಜು ..	3	5	61	5	11	..	94	..	65	..	43	..
ಬಗರದದ್ದು ..	2	15	6	..	5	5	26	.	9	..	13	10
ಐನ್ ವಾಚೆ ಗುಬಗರು ..	1	..	3	..	..	10	..	..	..	..	..	..
ಗೆರಗಸ ಬುಕಣಿ ..	..	2	..	5	..	10	1	..	..	15	9	..
ದೊಡ್ಡ ಐನ್ ಚಿಲ್ಪ ..	1	10	1	..								
ಚಿಕ್ಕ ಡಿಟೋ ..	..	..	2	..	6	5	15	10	15	..	16	..
ಕೆತ್ನೆ ಐನ್ ಚಿಲ್ಪ ..	6	..	..	..	..	..	..	..	..	..	..	...
ಹತ್ತಿ ಚಿಲ್ಪ ..	1	6	..	..	..	..	..	..	..	..	..	..
ಮಿಲ್ಪ ಚಿಲ್ಪ ..	17	10	30	..	21	5	30	..	12	..	9	..
ಬಸೋಲ ಬುಕಣಿ ..	1	15	10	..	14	..	14	15	5	10	6	8
ಕೊಯತ ಚಿಲ್ಪ ..	..	..	1	10	3	10	9	..	2	..	1	..
ಜುಮಾ ..	135	15	200	..	200	..	350	..	200	..	150	..

ಹೊಸ ಯಾ ಬೋಂಬಾಯಿ ತರಹೆ ಪ್ರಕಾರ.

ಸಂದಲ್ ವಿವರ.	ಹುಣಸೂರು ಕೋಠಿ.		ಶ್ರೀರಂಗಪಟ್ಣ ಕೋಠಿ.	
	ಟನ್.	ಹ.	ಟನ್.	ಹ.
ವಿಲಾಯಿತಿ ಬಡ ..	1	.	..	10
ಚೈನಾ ಬಡ ..	20	..	30	
ಪಂಚಂ ..	28	..	89	..
ಚಿಕ್ಕ ಸಲಾಕಿ, ಘೊಟ್ಲ (ಅವ್ವಲ್) ..	3	...	5	..
ಡಿಟೋ (ದುಯಂ) ..	2	..	1	..
ಘಟ ಬಡಲ ..	50	..	30	..
ಜಡಾ (ಅವ್ವಲ್) ..	25	..	25	..
ಡಿಟೋ (ದುಯಂ) ..	25	..	12	..
ಡಿಟೋ (ಸಿಯಂ) ..	20	..	8	..
ಡಿಟೋ (ಚಹರಂ) ..	7	..	7	..
ಜಜ್ಜು (ಅವ್ವಲ್) ..	50	...	25	..
ಡಿಟೋ (ದುಯಂ) ..	40	15	15	..
ಬಗರದದ್ದು ..	5	..	12	..
ಐನ್ ಬಗರು ..	5	..	14	..
ಚಿರಿಯಾ ..	5	..	5	..
ಐನ್ ಚಿಲ್ಪ (ಅವ್ವಲ್) ..	4	..	6	..
ಡಿಟೋ (ದುಯಂ) ..	6	..	6	10
ಹತ್ತಿ ಚಿಲ್ಪ ..	1	..	2	10
ಗರಗಸ ಬುಕಣಿ ..	1	..	..	10
ಮಿಲ್ಲ ಚಿಲ್ಪ ..	30	..	50	..
ಬಸೋಲಾ ಬುಕಣಿ ..	7	.	10	..
ಜೇಗು ಮಿಲ್ಪ ..	..	..	5	..
ಕಳೆದವರುಷದ ಜಡಾ	113	15	12	15
ಸ್ಪೆಷಲ್ ಕ್ಲಾಸ್ ..	..	10	...	..
ಟೋಟಲ್ ..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಗೆ ಇದರಡಿ ಕಂಡುಬರುವ ತಿದ್ದು
ಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ಸ್ಕುಂ 15230.—ಆರ್. ಎಫ್. 155 —92ನೇ ನಂಬರ್ ರೂಲ್ಸ್‌ಯಾನೆ
ನಿಬಂಧನೆಗಳು ಗವರ್ನ್‌ಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಇತರ
ಆಫಿಸರಿಂದ ಆಗಲಿ ಶೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಚಡದರಖಾಸ್ತು ದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದ
ರೆ ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ
ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಖ್ಮೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತ
ಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತ
ಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು
ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿ
ಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನು ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ
ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು
3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ್ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ
ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫಿಸರರು ಒಂದು ರಸೀದಿಯನ್ನು ಕೊಡತಕ್ಕದ್ದು.
ಆ ರಶೀದೀಯನ್ನು 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫಿಸರರು ಆ ರಶೀ
ದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನು ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ
ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ
ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫಿಸರರಿಗೆ ಯಖ್ತಿಯಾರಿ ಇರತಕ್ಕದ್ದು.
ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರ
ಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು
ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂ
ಥಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫಿಸರ ಹೆಸರಿಗೆ"
ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ
ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿ
ಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಸೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಇಲ್ಲದ
ರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆ
ಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ
ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫಿಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕ
ದ್ದು. ಮತ್ತು ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು.
ಉಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ
ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗ
ಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡ
ಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಎಂದಿಗೂ ಎಣಿಸಲ್ಪಡಕೂಡ
ದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು
ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವ
ರ್ನ್‌ಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ಯಾವ ಖಜಾನೆ
ಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿವಂದು ಕೋಠಿಯಲ್ಲ ಕೊಂಡು
ಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನು ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು, ಮತ್ತು ಇದ
ಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫಿಸರವರಿಂದ ಎಣಿಸಲ್ಪ
ಡತಕ್ಕದ್ದು. ಹುಜೂರು ಟ್ರೆಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫಿಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪ
ಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫಿಸರಿಂದ ಖುದ್ದಾಗಿಯಾಗಲಿ
ಯಾ ಅವರ ಗೈರ ಹಾಜರಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ಖುದ್ದು ತೂಗಿಸಲ್ಪಡ
ತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳ
ಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯು ವಜಾ ಮಾಡಲ್ಪಡತಕ್ಕದ್ದು. ಏನಾ
ದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫಿಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕ ಪೂರ್ತಿಯಾ
ಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೆ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನು ವಹಿಸ
ತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ಒಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾ
ದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನು ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀ

567

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡೆದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲ ವಾದ್ದಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿರ್ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಗೆ ತಗಲುವ ಲಾಗುವದು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವದೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ ಮರಗಳನ್ನು ಪಡೆಯುವ ಬಗ್ಗೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ನಿರ್ಬಂಧಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು, ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ಒಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ವಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳ ವಾಯಿದೇ ನೋಟೀಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಗ್ಯೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಗೆ ಲೈಸೆನ್ಸ.

9. ಫಾರೆಸ್ಟ್ ಇನ್‌ಛಾರ್ಜು ಆಫೀಸರಿಂದ ದಸ್ತಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟೆ ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಶೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಜ್ ಇನ್‌ಛಾರ್ಜ್ ಫಾರೆಸ್ಟ್ ಆಫೀಸರಿಂದ ಕೊಡಲ್ಪಡತಕ್ಕ ಲೈಸೆನ್ಸ ಇಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಹ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜ್ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಳ್ಳಂತಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್ಸರವೇಟರ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 27ನೇ ಅಕ್ಟೋಬರ 1896.

ಬೆಂಗಳೂರು ಡಿಸ್ಟ್ರಿಕ್ಟು 1ನೇ ಜನರಲ್ ಅಸಿಸ್ಟೆಂಟ್ ಕಮ್ಮಿಷನರ ಮಿಸ್ಟರ್ ಎನ್. ನರಸಿಂಹಯ್ಯಂಗಾರ್ರವರು ಸೆಪ್ಟಂಬರ 17ನೇ ತಾರೀಖಿನಲ್ಲಿ ತಮ್ಮ ಮನೆಯ ಆಫೀಸ ರೂಮ್ ಮೇಜಿನ ಮೇಲೆ ಇಟ್ಟಿದ್ದ ಈ ಕೆಳಗಿನ ತಪ್ಸೀಲಿನಲ್ಲಿ ಕಂಡ ಘಡಿಯಾರ ಮತ್ತು ಸರಪಣಿ ಸಹ ಕಳವಾಗಿರುವದಾಗಿಯೂ ಇದನ್ನ ಪತ್ತೇಮಾಡಿ ಕೊಟ್ಟವರಿಗೆ 10 ರೂಪಾಯಿಗಳು ಇನಾಂ ಕೊಡುವದಾಗಿ ಬರಸಿರುತ್ತಾರೆ.

(ವಾಚ್ ಮತ್ತು ಸರಪಣಿಯ ತಪ್ಸೀಲ್.)

ಪಿ. ಆರ್. ಅಂಡ್ ಸನ್ಸ, ರೈಲ್ವೆ ರೆಗ್ಯುಲೇಟರ ಎಂದು ಇಂಗ್ಲೀಷ್ ಅಕ್ಷರದಲ್ಲಿ ವಾಚ್ ಮೇಲೆ ಗುರ್ತು ಇದೆ. ಇದರ ಕ್ರಯ 25 ರೂಪಾಯಿ.

ಇದಕ್ಕೆ ಹಾಕಿ ಇರುವ ಭಂಗಾರದ ಸರಪಣಿಯು ಮೂರುಚಿಕ್ಕ ಸರಪಣಿಗಳು ಸಂಗಡ ಜಾಯಿಂಟ್ ಆಗಿಯು ವಂದುಕಡೆ ಹಿತ್ತಾಳಿ ಉಂಗ್ರವು ಮತ್ತೊಂದುಕಡೆ ಭಂಗಾರದ ಉಂಗ್ರವು ಹಾಕಿದ್ದಾಗಿಯೂ ಇದೆ. ಇದು 9 ಇಂಚ್ ಉದ್ದ ಅಗಲ $\frac{3}{4}$ ಇಂಚ್ ಉಳ್ಳದ್ದಾಗಿಯೂ ಇದೆ. ಇದರ ಕ್ರಯ 40 ರೂಪಾಯಿಗಳು.

ಡನಿಂಗ್,
ಸೂಪರಿಂಟೆಂಡೆಂಟ್ ಆಫ್ ಪೊಲೀಸ.

ನೋಟೀಸ್.

ತಾರೀಖು 12ನೇ ನವಂಬರ್ 1896ನೇ ಇಸವಿ, ಬೆಂಗಳೂರು.

ಸದರ್ ಮೆರಾಟಾ ರೈಲ್ವೆ ಗೂಡ್‌ಷಡ್ ಬಡಾವಣೆ ಬಗ್ಯೆ ತೆಗೆದುಕೊಂಡು ಯಿರುವ ಇದರಡಿ ಕಂಡಿರುವಂಥಾ ಕಟ್ಟಡ ಮತ್ತು ಖಾಲಿ ಜಮೀನ್‌ಗಳಿಗೆ ಠರಾವಾಗಿ ಫೈಸಲಾಗಿ ಯಿರುವ ಹಣವನ್ನು ಚಾಲ್ತಿ ಇಸವಿ ನವಂಬರ್ 30ನೇ ತಾರೀಖು ಲಾಗಾಯತು ಸ್ವಂತ ಕರ್ತರಿಗೆ ಪಾವತಿ ಮಾಡಲ್ಪಡುತ್ತೆ. ಈ ಕಂಪೆನ್ಸೇಷನ್ ಮೊಬಲಗಿಗಾಗಲೀ ಅಥವಾ ಆ ಪೈಕಿ ಯಾವ ಹಿಸ್ಸೆಗಾಗಲೀ ನ್ಯಾಯವಾದ ಹಕ್ಕು ಯಿರುವದಾಗಿ ಎಣಿಸುವ ಸಮಸ್ತರೂ ಈ ನವಂಬರ್ ತಿಂಗಳು 30ನೇ ತಾರೀಖು ವಳಗಾಗಿ ಸ್ವಂತವಾಗಿ ಆಗಲೀ ಅಧಿಕಾರ ಪಡೆದ ಮುತಾಲೀಕರ ಮೂಲಕವಾಗಿ ಆಗಲೀ ಈ ಕೆಳಗೆ ರುಜು ಮಾಡಿರುವರ ಅಥವಾ ಅವರ ಅಸಿಸ್ಟೆಂಟರ ರೂಬರೂ ತಮ್ಮ ತಮ್ಮ ಹಕ್ಕುಗಳನ್ನು ನಮೂದಿಸಿ ಅರ್ಜಿಗಳನ್ನು ಕೊಡಬೇಕು. ಮೇಲ್ಕಂಡ ವಾಯಿದೆ ತರುವಾಯು ಕಂಪೆನ್ಸೇಷನ್ ವಿಚಾರದಲ್ಲಿ ಯಾವ ವಿಧವಾದ ಹಕ್ಕೂ ಅಂಗೀಕರಿಸುವದಿಲ್ಲಾ, ತಿಳಿಯುವದು.

ಸದರ್ ಮರಾಟಾ ರೈಲ್ವೆ ಗೂಡ್‌ಷಡ್ ಗೋಸ್ಕರ ಬೆಂಗಳೂರು ಕಸಬಾ ಗೌಡನ ಪೇಟೆಯಲ್ಲಿ ತೆಗೆದುಕೊಂಡ ಕಟ್ಟಡ ಮತ್ತು ಖಾಲಿ ನಿವೇಶನಗಳು ಇವುಗಳಿಗಾಗಿ ಕೊಡಲ್ಪಟ್ಟ ಕಂಪೆನ್ಸೇಷನ್ ಮೊಬಲಗು ತೋರಿಸುವ ತಖ್ತೆ.

ಸೀರಿಯಲ್ ನಂಬರು.	ತಾಕು ನಂಬರು.	ಹಕ್ಕುದಾರನ ಹೆಸರು.	ತಾಕುಗಳ ಚದರ ಗಜಗಳ ವಿಸ್ತೀರ್ಣ	ತರಹೆ.	ಕೊಡಲ್ಪಟ್ಟ ಕಂಪೆನ್ಸೇಷನ್. ಜಮೀನ್ ಕ್ರಯ.			ಕಟ್ಟಡದ ಕ್ರಯ.			ಇತರ ಲಾಗವಡು.			ಜುಮ್ಲಾ.		
1	1	ಹೇಮಾಶಾಮಯ್ಯ	1034	ಖಾಲಿ ನಿವೇಶನ	1034	0	0	0	0	0	166	0	0	1200	0	0
2	4	ಹೇಮಾಶಾಮಯ್ಯ ಮತ್ತು ತಿಪ್ಪಯ್ಯ	668	ಡಿಟೋ	668	0	0	0	0	0	100	0	0	768	0	0
3	6	ಮೇಸ್ತ್ರೀ ನಾರಣಪ್ಪ	791	ಪಕ್ಕಾ ಚತಾ	791	0	0	2775	0	0	834	0	0	4400	0	0
4	8	ಮಂಚೇಪಲ್ಲಿ ಶೀತಾರಾಮಯ್ಯ ಮತ್ತು ಎಲ್ಲಪ್ಪ	946	ಖಾಲಿ ನಿವೇಶನ	946	0	0	0	0	0	142	0	0	1088	0	0
5	11 & 12	ಮೇಸ್ತ್ರೀ ಮರಿಯಪ್ಪ	2148	ಪಕ್ಕಾ ಚತಾ	2148	0	0	2923	0	0	929	0	0	6000	0	0
6	15 & ½ of No. 23	ರಾಮಣ್ಣನ ಮಗ ಲಿಂಗಣ್ಣ	2365½	ಖಾಲಿ ನಿವೇಶನ	2365	8	0	0	0	0	355	0	0	2720	8	0
7	No. 16 & ½ of No. 23 & ½ of No. 19	ಎಂಗಣಶೆಟ್ಟಿ	3624⅜	ಡಿಟೋ	3624	6	0	0	0	0	554	0	0	4178	6	0
8	½ of No. 19	ನರಹರಿರಾವ್	798½	ಡಿಟೋ	798	8	0	0	0	0	121	8	0	920	0	0
9	20	ಪುಟ್ಟಣ್ಣ	2006	ಪಕ್ಕಾ ಚತಾ	2006	0	0	5199	0	0	1545	0	0	8750	0	0
10	24	ಮುತ್ತಿನಕಂತೆ ಈಶ್ವರಸ್ವಾಮಿ	1928	ಕಲ್ಲಿನಿಂದ ಕಟ್ಟಿದಮಠ	1928	0	0	1143	0	0	929	0	0	4000	0	0
		ಜುಮ್ಲಾ	16309⅜		16309	6	0	12040	0	0	5675	8	0	34024	14	0

ವಿ. ಎನ್. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕೋಲಾರ್ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮಾ.

ತಾರೀಖು 2ನೇ ನವೆಂಬರ್ 1896ನೇ ಇಸವಿ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟ್, ಚಿಕ್ಕಬಳ್ಳಾಪುರ ತಾಲ್ಲೂಕು, ನಂದೀ ಸ್ಟೇಟ್ ಫಾರೆಸ್ಟಿನಲ್ಲಿ (ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರದ ರಸ್ತೆಗೆ ದಕ್ಷಿಣ ಪ್ರದೇಶದಲ್ಲಿರುವ) ಬಿದರುಗಳನ್ನು 1897ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು 1898ನೇ ಇಸವಿ ಜೂನ್ ಆಖೈರುವರಿಗೂ ಅಂದರೆ 18 ತಿಂಗಳು ವರಿಗೂ ಕಡದು ಸಾಗಿಸಿಕೊಳ್ಳತಕ್ಕ ಹಕ್ಕು ದಾರಿಯು 1896ನೇ ಇಸವಿ ಡಿಸೆಂಬರು ತಿಂಗಳು 15ನೇ ತಾರೀಖು ಮಧ್ಯಾಹ್ನ 12 ಘಂಟೆ ಸಮಯದಲ್ಲಿ ನಂದೀಮೊಕ್ಕಾಂನಲ್ಲಿ ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸರವರಿಂದ ಹರಾಜು ಮಾಡಲ್ಪಡುತ್ತೆ.

2. ಹರಾಜು ಫಾರೆಸ್ಟು ಇಲಾಖಾ ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

3. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ಠೇವಣಿ ಕಟ್ಟತಕ್ಕದ್ದು. ಇದಕ್ಕೆ ತಪ್ಪಿದರೆ ಅವನನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜು ಮಾಡಲ್ಪಡುವದು; ಆದರೆ, ಅದರಿಂದ ಉಂಟಾಗುವ ಆದಾಯದಲ್ಲಿ ಸದರೀ ಯವನಿಗೆ ಏನೂ ದೊರಿಯಲಾರದು. ಬಾಕಿ ಕೊಡಬೇಕಾದ ಮುಕ್ಕಾಲು ಹಿಸ್ಸೆಯನ್ನು ಮೂರು ಸಮ ಖಿಸ್ತಿನಲ್ಲಿ ಅಂದರೆ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿಮಾಡತಕ್ಕದ್ದು. ಯಾವ ಖಿಸ್ತನ್ನಾಗಲಿ ವಾಯಿದೆಗೆ ಸರಿಯಾಗಿ ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಡುವದಲ್ಲದೆ, ಕಂಟ್ರಾಕ್ಟರು ಕತರಾವಣೆಮಾಡಿ ಜಮಾಯಿಸಿರುವ ಬಿದರುಗಳನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲಾದೀತು. ಮತ್ತು ಇವನಿಂದ ಬರಬೇಕಾದ ಕಂಟ್ರಾಕ್ಟು ಹಣದ ಬಾಕಿಯನ್ನು ರೆವಿನ್ಯೂ ಕಂದಾಯದಂತೆ ಭಾವಿಸಿ ವಸೂಲ್ಮಾಡಲಾಧೀತು.

ಖಿಸ್ತುಗಳು.			ತಾರೀಖು.
I	..	..	1ನೇ ಮಾರ್ಚಿ 1897ನೇ ಇಸವಿ.
II	..	..	1ನೇ ಸೆಪ್ಟಂಬರ 1897ನೇ ಇಸವಿ.
III	..	..	5ನೇ ಜನವರಿ 1998ನೇ ಇಸವಿ.

4. ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿಯನ್ನು ಕಂಟ್ರಾಕ್ಟರಿಗೆ ತಿಳಿಯಪಡಿಸಿದ ಕೂಡ್ಲೆ ಇವನು ಮೇಲ್ಕಂಡ ಮತ್ತು ಈ ಕೆಳಗೆ ವಿವರಿಸಲ್ಪಟ್ಟ ಷರತ್ತುಗಳ ಕಂಡು ನಡದು ಕೊಳ್ಳತಕ್ಕಬಗ್ಯೆ ಛಾಪಾ ಕಾಗದದಲ್ಲಿ ಒಂದು ಮುಚ್ಚಳಿಕೆಯನ್ನು ಬರದು ಕೊಡತಕ್ಕದ್ದು.

5. ಹರಾಜು ಮಾಡಲ್ಪಡುವ ಪ್ರದೇಶದಲ್ಲಿ ಇರುವ ಒಣ ಬಿದರುಗಳನ್ನೆಲ್ಲಾ ಕಂಟ್ರಾಕ್ಟರು ಕತರಾವಣೆ ಮಾಡಿ ಅಥವಾ ಬೇರು ಸಹಿತ ಕಿತ್ತು ಸಾಗಿಸಿಕೊಂಡು ಹೋಗಬಹುದು, ಆದರೆ ಹಸೀ ಬಿದರ ಗಳನ್ನು ಕಡಿಯುವದರಲ್ಲಿ ಪ್ರತಿ ಯೊಂದು ಪೊದೆಯಲ್ಲಿಯೂ ಎಂಟು ಹಸೀ ಬಿದರುಗಳನ್ನು ಬಿಟ್ಟು ಮಿಕ್ಕವುಗಳನ್ನು ಸಾಧ್ಯವಾದ ಮಟ್ಟಿಗೂ ಭೂ ಮಟ್ಟಕ್ಕೆ ಸರಿಯಾಗಿ ಕಡಿಯತಕ್ಕದ್ದು.

6. ಫಾರೆಸ್ಟು ಇಲಾಖೆಯವರು ಮುಂಚಿತವಾಗಿ ಗುರ್ತು ಮಾಡಿಕೊಡುವ 100—200 ಎಕರೆ ವಿಸ್ತೀರ್ಣವುಳ್ಳ ಪ್ರತಿ ಯೊಂದು ಬ್ಲಾಕಿನಲ್ಲಿಯೂ ಒಂದು ಪ್ರದೇಶದಿಂದ ಪ್ರಾರಂಭಮಾಡಿ ಕ್ರಮವಾಗಿ ಕತರಾವಣೆಮಾಡಿಕೊಂಡು ಹೋಗಬೇಕೇ ಹೊರ್ತು ಯಾವ ಕಾರಣದಿಂದಲೇ ಯಾಗಲಿ ಜಂಗಲಿನ ಎಲ್ಲಾ ಪ್ರದೇಶದಲ್ಲಿಯೂ ಏಕಕಾಲದಲ್ಲಿ ಮನಸ್ವೀ ಕತರಾವಣೆ ಮಾಡಕೂಡದು.

7. ಕತರಾವಣೆ ಮಾಡಿದ ಪ್ರದೇಶದಿಂದ ಬಿದರುಗಳನ್ನು ರಫ್ತು ಮಾಡುವದಕ್ಕೆ ಮೊದಲೆ ಪ್ರತಿಯೊಂದು ಗಾಡಿಗೂ ಫಾರೆಸ್ಟು ಇಲಾಖೆಯವರಿಂದ ಒಂದು ವೇ ಪರಮಿಟ್ ಪಡಿಯತಕ್ಕದ್ದು. ವೇ ಪರಮಿಟ್ ಇಲ್ಲದ ಭರ್ತಿಗಾಡಿಗಳನ್ನು ಫಾರೆಸ್ಟು, ಪೋಲೀಸ್ ಅಥವಾ ರೆವಿನ್ಯೂ ನವುಕರರು ತಡೆ ಮಾಡಬಹುದು.

8. ಕಂಟ್ರಾಕ್ಟರಿಗೆ ಇಷ್ಟವಿದ್ದಲ್ಲಿ ಒಣ ಬಿದರುಗಳಿಂದಲಾಗಲಿ ಅಥವಾ ಅವುಗಳ ಬೇರುಗಳಿಂದಲಾಗಲಿ ಮಳೆಗಾಲದಲ್ಲಿ ಇದ್ದಲು ಸುಡುವದಕ್ಕೆ ಅಪ್ಪಣೆ ಕೊಡಲಾಧೀತು.

9. ಪ್ರತಿಯೊಂದು ಬ್ಲಾಕಿನಲ್ಲಿಯೂ ಕತರಾವಣೆ ಮಾಡುವ ಬಿದರುಗಳನ್ನು ತಲೆಕೊಂಬೆ ಮತ್ತು ರಂಬೆಗಳನ್ನು ಸಹ ಮತ್ತೊಂದು ಬ್ಲಾಕು ಗುರ್ತು ಮಾಡಲ್ಪಡುವದಕ್ಕೆ ತತ್ಪೂರ್ವವೆ ಫಾರೆಸ್ಟಿನಿಂದ ಹೊರಗೆ ಸಾಗಿಸತಕ್ಕದ್ದು. ತಪ್ಪಿದರೆ ಬಿಡಲ್ಪಟ್ಟ ಬಾಬನ್ನು ಸರ್ಕಾರದ ಫಾಯಿದೆ ಮೇಲೆ ನಿಗಾಮಿಟ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಗೆ ಯುಕ್ತ ತೋರಿದ ರೀತಿಯಲ್ಲಿ ವಿಲೇವಾರಿ ಮಾಡಲು ಅವರು ಸ್ವತಂತ್ರರಾಗಿರುತ್ತಾರೆ.

ಬಿ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ತುಮಕೂರು ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 28ನೇ ಅಕ್ಟೋಬರ್ 1896.

ಮೈಸೂರ ಗವರ್ನಮೆಂಟ್ ತುಮಕೂರು ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರ್‌ಗಳು, ತಮ್ಮ ತಮ್ಮ ಸೇವಿಂಗ್ಸ್ ಬ್ಯಾಂಕ್ ಪ್ಯಾಸ್ ಬುಕ್ಕುಗಳನ್ನು 1895—96ನೇ ಇಸವಿಯ ಬಡ್ಡಿ ಮೊಬಲಗನ್ನು ದಾಖಲ್ಮಾಡುವದಕ್ಕೋಸ್ಕರ ಈ ಆಫೀಸಿಗೆ ಕಳುಹಿಸಿ ಕೊಡಬೇಕಾಗಿ ಕೇಳಿಕೊಳ್ಳಲ್ಪಟ್ಟಿಧೆ.

ಟಿ. ಮಿರಕಮಾಲುದ್ದೀನ್‌ಅಲ್ಲಿಖಾನ್,
ಟ್ರೆಜರಿ ಆಫಿಸರ್.

ಫಾರೆಸ್ಟು ಡಿಪಾರ್ಟ್ಮೆಂಟ್.

ಸ್ನ 1896ನೇ ಇಸವಿ ನವಂಬರು ತಾರೀಖು 8ರಲ್ಲು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು, ಮದ್ದಗಿರಿ ಡಿಪೋಗಳಲ್ಲಿಯೂ, ಗುಬ್ಬಿ ತಾಲ್ಲೂಕು ಚನ್ನಶೆಟ್ಟಿಹಳ್ಳಿ ನಿಟಗುಂಟ ಪ್ಲಾಂಟೇಷನ್‌ಗಳಲ್ಲಿಯೂ, ಕೆಳಗೆ ನಮೂದಿಸಿರತಕ್ಕ ತಾರೀಖು ಮತ್ತು ಸ್ಥಳಗಳಲ್ಲಿ ಸಾಮಾನುಗಳನ್ನು ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜ್ ಮಾಡಲ್ಪಡುತ್ತೆ.

ತುಮಕೂರು ಡಿಪೋ 11ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಮಣ.	ಸೇರು.
		ಅಡಿ.	ಅಂಗುಲ.	ಸೆಂಟ್ಸ್.		
ಜೇನುತುಪ್ಪ ..	..	..	..	..	51	27
ಜೇನು ಮೇಣ ..	..	..	..	..	7	..
ತ್ಯಾಗದ ತೀರುಗಳು ..	171	208	7	6	..	..
ಕ್ಯಾಸರೀನ ತೀರುಗಳು ..	983	1737	3	3	..	..

ಮದ್ದಗಿರಿ ಡಿಪೋ 15ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಮಣ.	ಸೇರು.
		ಅಡಿ.	ಅಂಗುಲ.	ಸೆಂಟ್ಸ್.		
ಜೇನುತುಪ್ಪ ..	..	..	..	..	29	1
ಜೇನು ಮೇಣ ..	..	..	..	..	4	21
ತ್ಯಾಗದ ತೀರುಗಳು ..	299	280	10	3	..	..

ಗುಬ್ಬಿ ತಾಲ್ಲೂಕು ಚೆನ್ನಸೆಟ್ಟಿಹಳ್ಳಿ ನಿಟಗುಂಟ ಪ್ಲಾಂಟೇಷನ್, 21ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಷರಾ.
		ಅಡಿ.	ಅಂಗುಲ.	ಸೆಂಟ್ಸ್.	
ಕ್ಯಾಸರೀನ ತೀರುಗಳು ..	1841	..	..	..	ನಿಂತಿರುವ ಒಣ ಮರಗಳು.

ಷರತ್ತುಗಳು.—ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಹರಾಜು ಖೈದಾದ ಕೂಡ್ಲೆ ಕಾಲು ಹಿಸ್ಸೆ ಮೊಬಲಗು ಠೇವಣಿ ತರೀಕ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ಹರಾಜು ತಾರೀಖು ಲಾಗಾಯತು ಒಂದು ವಾರದ ವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೇ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜುದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳನ್ನೆಲ್ಲಾ ಹಣ ಪಾವತಿ ಮಾಡಿದ ತಾರೀಖು ಲಾಗಾಯತು 5 ದಿವಸಗಳೊಳಗಾಗಿ ಸಾಗಿಸಿಕೊಳ್ಳಬೇಕು. ಪ್ಲಾಂಟೇಷನ್‌ಗಳಲ್ಲಿ ಒಣಗಿ ನಿಂತಿರುವ ಕ್ಯಾಸರೀನ ಮರಗಳು ಗುರ್ತು ಮಾಡಿ ನಂಬರು ಹಾಕಲ್ಪಟ್ಟಿರುತ್ತವೆ. ಖರೀದಿದಾರನು ಗುರ್ತು ಮಾಡಿರುವ ಒಣ ಮರಗಳನ್ನ ಮಾತ್ರವೇ ಕಡಿದು 1896ನೇ ಇಸವಿ ಡಿಸೆಂಬರ್ ಆಖೈರ್ ವಳಗಾಗಿ ಸದರೀ ಮರಗಳನ್ನ ಪ್ಲಾಂಟೇಷನ್‌ಗಳ ಹದ್ದು ಬಸ್ತು ಹೊರಭಾಗದಲ್ಲಿರುವ ಫೈರ್‌ಲೈನ್ ಪ್ರದೇಶಕ್ಕೆ ಸಾಗಿಸಬೇಕು. ತರುವಾಯ ಆ ಮರಗಳು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಆಜಮಾಯಿಷಿ ಆದ ನಂತರ ಅವಶ್ಯಕವಾದ ರಹದಾರಿ ಸಹ 1897ನೇ ಇಸವಿ ಜನವರಿ 15ರ ವಳಗಾಗಿ ಸಾಗಿಸಬೇಕು. ಖರೀದಿದಾರನಾಗಲಿ ಅಥವಾ ಅವನ ಕಡೆ ಜನಗಳಾಗಲಿ ಯಾವ ವಿಧವಾದ ಅಕ್ರಮ ನಡಸಿದ್ದೇ ಆದರೆ ಖರೀದಿಗೆ ಪಡಕೊಂಡಿರತಕ್ಕ ಮರಗಳನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ 1878ನೇ ಇಸವಿ ಮೈಸೂರ್ ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನ್ ಪ್ರಕಾರ ಕ್ರಿಮಿನಲ್ ಶಿಕ್ಷೆಗೆ ಖರೀದಿದಾರನ್ನ ಗುರಿಮಾಡಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಮದ್ದಗಿರಿ ಸಬ್ ಡಿವಿಜನ್ ಮುನಸಿಫ್ ಕೋರ್ಟಿನಿಂದ.

ಸ್ನ 1894—95ನೇ ಇಸವಿ ಶಿವಿಲ್ ಒರಿಜನಲ್ ನಂಬರ್ 418.

ಮುನಸೀಫ್ ಡಿ. ಯಂ. ನರಸಿಂಗರಾವ್ ಯಸ್ಕ್ವಾಯರ್, ಬಿ. ಎ. ಬಿ. ಎಲ್. ಯವರ ರೂಬರೂಬ್.

ವಾದಿಗಳು.	ಪ್ರತಿವಾದಿ.
ಶಿರಾ ಕಸಬಾದಲ್ಲಿರುವರು 1ನೇ ಅಕ್ಕಬರ್‌ಸಾಬಿ. 2ನೇ ಇಮಾಮು ಮೊಹರ್ದಿನ್‌ಸಾಬಿ. 3ನೇ ಉಸುಮಾನ್‌ಸಾಬಿ. 4ನೇ ಅಕ್ಕಬರ್‌ಖಾನ್. 5ನೇ ಹೈದರ್‌ಸಾಬಿ.	ಶಿರಾದಲ್ಲಿರುವ ರಾಜಾಅಹಮದ್ ಸಾಬಿ.

ಶಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕು ಶಿರಾ ಕಸಬಾದಲ್ಲಿರುವ ಮಂಗಳವಾರಪೇಟೆಯಲ್ಲಿ ಪೂರ್ವಕ್ಕೆ ಆದ್ಯಪ್ಪನ ಮನೆ, ಪಶ್ಚಿಮಕ್ಕೆ ಶೇತುವೆನೀರು ಹೋಗುವನಾಲಾ, ಉತ್ತರಕ್ಕೆ ತಿರಗಾಡುವ ದಾರಿ, ದಕ್ಷಿಣಕ್ಕೆ ಹೈರೋಡ್ ಈ ಮಧ್ಯೆ ಇರುವ ನಿವೇಶನದಲ್ಲಿ ಮಹಂಮದಿ ಜಾತಿಜನಗಳು ಬಾರಾಯಿಮಾಮು ಪಂಜಾ ಕೂಡಿಸುವ ಆಷರಖಾನ ಜಾಗಕ್ಕೆ ಸಂಬಂಧಪಟ್ಟದ್ದೆಂತಲೂ (*b*) ಇತರರು 1ನೇ ಪ್ರತಿವಾದಿಗೆ ಕ್ರಯ ಮಾಡಲು ಯಾವ ವಿಧವಾದ ಹಕ್ಕೂ ಇಲ್ಲವೆಂತಲೂ (*c*) ಪ್ರತಿವಾದಿಯು ಇತರ ಜನಗಳಿಂದ ಪಡದು ಇರುವ ಕ್ರಯಸಾಧನದಂತೆ ಹೊಂದಿರುವ ಡಿಕ್ರಿಯು ಮತ್ತು ಕ್ರಯಪತ್ರವು ಅಸಿದ್ಧವಾಗಿರತಕ್ಕದ್ದೆಂತಲೂ (*d*) ಈ ಪ್ರತಿವಾದಿ ಯಿಂದ ವಾದಿಗಳು ಪೂರ್ವದಂತೆ ದಾವಾ ನಿವೇಶನವನ್ನ ತಮ್ಮ ಹಕ್ಕು ಸ್ಥಾಪನೆಯಿಂದ ಸ್ವಾಧೀನ ಮಾಡಿಕೊಂಡು ಅವಿಚ್ಛಿನವಾಗಿ ಸದರೀ ಪಂಜಾ ಕೂಡಿಸಲು ವಾದಿಗಳು ಅರುಹರೆಂತಲೂ ಮೇಲ್ಕಂಡ ವಾದಿಗಳು ಈ ಕೋರ್ಟಿನಲ್ಲಿ ದಾವೆ ಮಾಡಿದ್ಧಾರೆ.

ಈ ದಾವಾಕ್ಕೆ ಕಕ್ಷಿಗಾರರಾಗಿ ಶೇರಲಪೇಕ್ಷೆ ಇರುವ ದರೋಬಸ್ತು ಜನಗಳು ಈ ಮೊಕದ್ದಮ ಹಿಯರಿಂಗ್ ಯಿಟ್ಟು ಇರುವ 1896ನೇ ಇಸವಿ ಡಿಸೆಂಬರ್ 10ನೇ ತಾರೀಖು ದಿವಿ 11 ಘಂಟೆಗೆ ಮದ್ದಗಿರಿ ಮೊಕ್ಕಾಂ ನಮ್ಮ ಕೋರ್ಟು ರೂಬರೂಬ್ ಹಾಜರಾಗ ತಕ್ಕದ್ದಿಥೆ.

ತಾರೀಖು 13ನೇ ನವಂಬರ್ 1896ನೇ ಇಸವಿ.

ಡಿ. ಯಂ. ನರಸಿಂಗರಾವ್,
ಮುನ್ಸಿಫ್.

ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮೆ.

ಸ್ನ 1896ನೇ ಇಸವಿ ಅಕ್ಟೋಬರ್ ತಾರೀಖು 24ರಲ್ಲು.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಗುಂಡ್ಲು ತಾಲ್ಲೂಕು ಬೇರಂಬಾಡಿ ಮತ್ತು ಬಂಡಿಪುರದ ಜಂಗಲ್‌ಗಳಲ್ಲಿ ವಣ ಚೌಬೀನೆಯನ್ನು ಖರೀದಿಗೆ ಪಡಿಯಲು ಯಿಷ್ಟವುಳ್ಳವರು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಗೆ ಆಗಲಿ ಅಥವಾ ಗುಂಡ್ಲು ರೇಂಜಾಫಿಸರಿಗಾಗಲಿ ದರಖಾಸ್ತುಗಳನ್ನು ಕೊಡಬಹುದು.

2. ದರಖಾಸ್ತುದಾರ ಸದರೀ ಚೌಬೀನೆಯನ್ನು ಜಂಗಲ್‌ಗಳಲ್ಲಿ ತಯಾರು ಮಾಡಿಸಿ ಸಾಗಿಸಿಕೊಳ್ಳಬೇಕು. ಮತ್ತು ಈ ಭಾಗದಲ್ಲಿ ಜಾರಿಯಲ್ಲಿರುವ ರೂಲ್ಸ್‌ಗಳಿಗೆ ಬದ್ಧನಾಗಿರತಕ್ಕದ್ದು.

3. ಈ ಚೌಬೀನೆಗಳು ಮೈಸೂರು ಉಡ್ಡಯಾರಡ್ ಮತ್ತು ಗುಂಡ್ಲು ಡಿಪೋ ದರಗಳಂತೆ ಆಯಾಯ ಜಂಗಲ್ ತಯಾರಿ ಮತ್ತು ಲದ್ಯೆ ಛಾರ್ಜ್ ಜಾತಾ ಬಿಕರಿ ಮಾಡಲ್ಪಡುತ್ತವೆ.

4. ಖರೀದಿಗೆ ಪಡಿಯಲೂ ಇಷ್ಟವುಳ್ಳವರು ಈ ವಿಷಯವಾಗಿ ಜಾಸ್ತೀ ತಪ್ಶೀಲ್ ತಿಳಿಯಬೇಕೆಂದು ಕುತೂಹಲ ವಿದ್ದಲ್ಲಿ ಗುಂಡ್ಲು ರೇಂಜಾಫಿಸರಿಗೆ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಗೆ ಅರ್ಜಿ ಗುಜರಾಯಿಸಿ ಕೊಳ್ಳಬಹುದಾಗಿರುತ್ತೆ.

ಎಂ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಕಡೂರು ಡಿಸ್ಟ್ರಿಕ್ಟು.

ಕೊಪ್ಪ ತಾಲ್ಲೂಕು.

ಇಸ್ತಿಹಾರ್‌ನಾಮೆ.

ತಾರೀಖು 6ನೇ ಅಕ್ಟೋಬರ್ ಸ್ನ 1896ನೇ ಇಸವಿ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಭೈರೇದೇವರು ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ನ 1896ನೇ ಇಸವಿ ಡಿಸೆಂಬರ

ತಾರೀಖು 7ನೇ ಸೋಮವಾರ ಹಗಲು 11 ಘಂಟೆಗೆ ಕಡೂರು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಕೊಪ್ಪ ತಾಲ್ಲೂಕು ಅಮಲ್ದಾರ್ರ ರೂಬರೂ ಹರಿಹರಪುರ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಅಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್ಸೆಟ್ ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್‍ಯಾರಾದರೂ ಪಡೆದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜು ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರು ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಅಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಅಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯಕ ಮಾಡಲ್ಪಟ್ಟ ಕಾಲದೊಳಗೆ ಖರೀದಿ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡದೆ ತಪ್ಪಿದರೆ ಡಿಪಾಜಿಟ್ ಮೊಬಲಗಿನಲ್ಲಿ ಖರೀದಿಗಾಗಿ ತಗಲಿರುವ ಖರ್ಚು ವಜಾ ಜಾತಾ ಬಾಕಿನಿಂತ ಠೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರತಕ್ಕದ್ದು. ಮತ್ತು ಸ್ವತ್ತು ಪುನಹ ವಿಕ್ರಯಿಸಲ್ಪಡುವ ಮನುಷ್ಯನ ಸ್ವತ್ತಿಗೆ ಇದ್ದ ಹಕ್ಕನ್ನು ಕಳದುಕೊಂಡದ್ದಲ್ಲದೆ ಅನಂತರ ಮೊಬಲಗಿನ ಯಾವ ಭಾಗದ ಹಕ್ಕು ಇಲ್ಲದವನಾಗಿ ಇರುತ್ತಾನೆ. ಪರಂತು ಈ ಷರತ್ತನ್ನು ಜಾರಿಯಲ್ಲಿ ತರತಕ್ಕದ್ದು. ಅಧಿಕವಾದ ತೊಂದರೆ ಇದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡೆಪ್ಯುಟಿ ಕಮ್ಮಿಷನರಿಗೆ ತೋರಿಬಂದರೆ ಅಂಥಾವುಗಳನ್ನು ಸರಕಾರದ ಆರ್ಡರುಬಗ್ಗೆ ಶಿಫಾರಸ್ ಮಾಡತಕ್ಕದ್ದಕ್ಕೆ ಅರ್ಹರಾಗಿರುತ್ತಾರೆ. ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ಉತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನಲ್ಲಿ ಚಡದರಖಾಸ್ತು ಮಾಡಿ ತಪ್ಪಿಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಇಂಥಾ ವ್ಯತ್ಯಾಸದ ಮೊಬಲಗನ್ನು ಡೆಪ್ಯುಟಿ ಕಮ್ಮಿಷನರವರು ಜಮೀನ್ ಕಂದಾಯದ ಬಾಕಿಯಂತೆ ವಸೂಲ್ ಮಾಡತಕ್ಕದ್ದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರು ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನ್‌ನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ.		ಷರಾ.
				ವಿಸ್ತೀರ್ಣ.	ಆಕಾರ.	
112ರ ಪೈಕಿ.	ಕೊತಡಿ ಯಸ್ಟೇಟ್ ಮೆಸ್ಟರ್' ಹೇ ಸಾಹೇಬರವರು.	ಪುತ್ರಕಾಮೇಷ್ಟಿ ಹಾಡ್ಯ, ಮೇಗುಂಡ ಹೋಬಳಿ ಭೈರೇದೇವರು ಗ್ರಾಮ.	1 ಪೂರ್ವಕ್ಕೆ—ದೇವಸ್ಥಾನಕ್ಕೆ ಬಿಡಬೇಕೆಂತಾ ಗುರ್ತಿಸಿ ಇರುವ ಈ ನಂಬರು ಗಡಿ. 2 ಪಶ್ಚಿಮಕ್ಕೆ—ಹಳ್ಳ. 3 ದಕ್ಷಿಣಕ್ಕೆ—ನಂ. 111ನೇ ಖರಾಬಗುಡ್ಡ 4 ಉತ್ತರಕ್ಕೆ—ಹಳ್ಳ.	62—2	..	

ತಿಳುವಳಿಕೆ ಷರಾ.—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬರದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರು ವಾಕಾ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೆ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೆ ಆಗಲಿ ಜಮೀನ್ ಹಿಡುವಳಿದಾರನು ಬದ್ಧ ವ ಅರ್ಹನಾಗಿರಬೇಕು.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮ್ಮಿಷನರ್.

Mysore Govt. Central Press, Bangalore.—1896.

573

ಮೈಸೂರ ಗೆಜೆಟ್.

ನಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 47.

ಬೆಂಗಳೂರು, ಗುರುವಾರ, ನವಂಬರ್ ತಾ॥ 26, ಸ್ತ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಜ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 2ನೇ ಅಕ್ಟೋಬರ್ 1896.

ನಂ. 4602.—ಲೋ. ಫಂ. 92—96, ಮೈಸೂರ್ ಗವರ್ನ್‌ಮೆಂಟಿನವರು 1895ನೇ ಜೂನ್ 27ನೇ ಮರ್ಕುಂ 24999-25003.—ಲೋ. ಫಂ. 82—92ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಕರಿತಿಮ್ಮನಹಳ್ಳಿ ಮತ್ತು ಕೆಂಪಾಂಬುಧಿಕೆರೆ ಗ್ರಾಮಗಳ ಕೆಲವು ಭಾಗಗಳನ್ನು ಬೆಂಗಳೂರ್ ಷಹರಿನ ಮ್ಯುನಿಸಿಪಲ್ ಸರಹದ್ದಿನಲ್ಲಿ ಸದರೀ ಷಹರಿನ ಪಶ್ಚಿಮ ಬಡಾವಣೆಯ ಸಂಬಂಧದಿಂದ ಅಡಿಗಿಸಿಕೊಳ್ಳೋಣವು ಮಂಜೂರ್ಮಾಡಿರುವದರಿಂದ, 1886ನೇ ಏಪ್ರಿಲ್ 15ನೇ ಮರ್ಕುಮಿನ 35ನೇ ನಂಬರ್ ಇಸ್ತಿಹಾರ್ ನಾಮೆಯಿಂದ ತಿದ್ದುಪಡಿಯಾದ ಮೇರೆ 1883ನೇ ಸೆಪ್ಟಂಬರ್ 14ನೇ ಮರ್ಕುಮಿನ 235ನೇ ನಂಬರ್ ಇಸ್ತಿಹಾರಿನೊಡನೆ ಪ್ರಾಯಿಷ್ ಮಾಡಲ್ಪಟ್ಟ ಮೇಲ್ಕಂಡ ಷಹರಿನ ಮ್ಯುನಿಸಿಪಲ್ ಸರಹದ್ದುಗಳ ತಿದ್ದುಪಡಿಯಾದ ವಿವರಣೆಯ VI ವ VIIನೇ ಕ್ಲಾಜುಗಳಿಗೆ ಈ ಕೆಳಗೆ ಕಂಡ ಪ್ಯಾರಾಗಳು ಬದಲಾಯಿಸಲ್ಪಡತಕ್ಕದ್ದು, ಮತ್ತು 1885ನೇ ಸೆಪ್ಟಂಬರ್ 14ನೇ ಮರ್ಕುಮಿನ ಕ್ಯಾಂಪ್ ನಂ. 891ನೇ ಇಸ್ತಿಹಾರ್ ಅನುಸರಿಸಿ ಪ್ರಾಯಿಷ್ಮಾಡಲ್ಪಟ್ಟ XIನೇ ಕ್ಲಾಜಿಗೆ "ಮತ್ತು ಕರಿತಿಮ್ಮನಹಳ್ಳಿ ವ ಕೆಂಪಾಂಬುಧಿಕೆರೆ" ಎಂಬ ಮಾತುಗಳು ಸೇರಿಸಲ್ಪಡತಕ್ಕದ್ದು.

VI. ಈ ಸ್ಥಳದಿಂದ ಲೈನು ಭೋಗನಹಳ್ಳಿ ಗ್ರಾಮದ ಪಶ್ಚಿಮ ಎಲ್ಲೆ ಉದ್ದಕ್ಕೂ ಅದು ಮೈಸೂರ ರೋಡು (ಷಹರ್ ಎಲ್ಲೆ ಕಲ್ಲು VI) ಸಂಧಿಸುವವರಿವಿಗೆ ಹೋಗಿ, ಅಲ್ಲಿಂದ ರೋಡು ದಾಟಿ ಕರಿತಿಮ್ಮನಹಳ್ಳಿ ಗ್ರಾಮದ ರೆವಿನ್ಯೂ ಸರ್ವೆ ನಂ. 4, 2, 9, 10·

ವ 6 ಯಿವುಗಳ ಹೊರ ಪಾರ್ಶ್ವ ಮತ್ತು ಅದು ಹೊಸಷಹರ್ ಎಲ್ಲೆಕಲ್ಲು VIIರ ಬಳಿ ಗವಿಪುರ ಗ್ರಾಮದ ಈ ಶಾನ್ಯ ಮೂಲೆಯನ್ನು ಸಂಧಿಸುವವರಿಗೂ ಅವುಗಳನ್ನ ಸೇರಿಸಿಕೊಂಡು ಅಂಚಿನಲ್ಲಿ ಹಾದು ಹೋಗುತ್ತದೆ.

VII. ಹೊಸಷಹರ್ ಎಲ್ಲೆಕಲ್ಲು VIIರಿಂದ ಎಲ್ಲೆ ಲೈನು ಕೆಂಪಾಂಬುಧಿ ಕೆರೆಯ ರೆವಿನ್ಯೂ ಸರ್ವೆ ನಂಬರ್ 2 ಮತ್ತು ಗವಿಪುರ ಗ್ರಾಮದ ರೆವಿನ್ಯೂ ಸರ್ವೆ ನಂ. 3, 6, 8, 63, 46, 47, 62 ವ 48 ಯಿವುಗಳ ಪಶ್ಚಿಮ ಪಾರ್ಶ್ವ ಉದ್ದಕ್ಕೂ ಮತ್ತು ಗುಟ್ಟಹಳ್ಳಿ ಗ್ರಾಮದ ನೈಋತ್ಯ ಮೂಲೆಯನ್ನು ಸಂಧಿಸುವವರಿಗೂ ಅವುಗಳನು ಮತ್ತು ಗ್ರಾಮ ನಿವೇಶನವನ್ನ ಸೇರಿಸಿಕೊಂಡು ಹೊಸ ಷಹರ್ ಎಲ್ಲೆ ಕಲ್ಲು VIIIನ್ನ ಸಂಧಿಸುವವರೆಗೂ ಈ ಗ್ರಾಮದ ದಕ್ಷಿಣ ಎಲ್ಲೆಯನ್ನ ಅನುಸರಿಸಿ ಹೋಗುತ್ತದೆ; ಈ ಕಲ್ಲಿನಿಂದ ಷಹರ್ ಎಲ್ಲೆಯು ಕಾರಂಜಿ ಬಿಸನಹಳ್ಳಿಯ ಪಶ್ಚಿಮ ಮತ್ತು ಉತ್ತರ ಎಲ್ಲೆಗಳ ಅಂಚಿನಲ್ಲಿ ಷಹರ್ ಎಲ್ಲೆಕಲ್ಲು IXರ ಬಳಿಯಿರುವ ಕೊಮಾರ ಪಾಳ್ಯದ ಕೆರೆಯ ಕೋಡಿವರವಿಗೆ ಹೋಗುತ್ತದೆ.

ತಾರೀಖು 17ನೇ ನವಂಬರ್ 1896.

ನಂ. 5655.—ಜ್. 659, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್ ಮೆಸ್ಟರ್ ಡಿ. ಪಿ. ಚೋಕ್ಸಿಯವರಿಗೆ, 1896ನೇ ಅಕ್ಟೋಬರ್ 24ನೇ ಮೊದ್ಲುಂ ಲಾಗಾಯತು ಹನ್ನೆರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 18ನೇ ನವಂಬರ್ 1896.

ನಂ. 5673.—ಲೋ. ಫಂ. 372.—92, ಮೃತಪಟ್ಟ ಮೆಸ್ಟರ್ ಉರುವಕೊಂಡ ಚನ್ನವೀರಪ್ಪನವರ ಸ್ಥಳದಲ್ಲಿ ಮೆಸ್ಟರ್ ಮುರಿಗಪ್ಪನವರು ದಾವಣಗೆರೆ ಮ್ಯುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 5714.—ಜ್. 672, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲಿನ ನಿಯಮಗಳನುಸರಿಸಿ, ಮೈಸೂರ್ ಚೀಫ್ ಕೋರ್ಟ್ ರಿಜಿಸ್ಟ್ರಾರ್ ಮೆಸ್ಟರ್ ವಿ. ಎ. ರಾಜರತ್ನಮೊದಲಿಯಾರ್ರಿಗೆ, 1896ನೇ ನವಂಬರ 23ನೇ ಮೊದ್ಲುಂ ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಮೆಸ್ಟರ್ ವಿ. ಎ. ರಾಜರತ್ನ ಮೊದಲಿಯಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಡೆಪ್ಯುಟಿ ರಿಜಿಸ್ಟ್ರಾರ್ ಮೆಸ್ಟರ್ ಜೆ. ಕ್ಯಾಥ್ಯಾಯವರು ರಿಜಿಸ್ಟ್ರಾರಾಗಿಯೂ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ವ ಮಾನೇಜರ್ ಮೆಸ್ಟರ್ ಟಿ. ಆರ್. ಧನಸಾಮಿಚೆಟ್ಟಿಯವರು ಡೆಪ್ಯುಟಿ ರಿಜಿಸ್ಟ್ರಾರಾಗಿಯೂ ಆಕ್ಟ್ ಮಾಡತಕ್ಕದ್ದು.

ತಾರೀಖು 19ನೇ ನವಂಬರ್ 1896.

ನಂ. 5720.—ಲೋ. ಫಂ. 125.—92; ಸನ್ 1896ನೇ ಅಕ್ಟೋಬರ್ 16ನೇ ಮೊದ್ಲುಂ 3657.—8.—ಲೋ. ಫಂ. 67.—96ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಅನುಸರಿಸಿ ಏರ್ಪಟ್ಟ ಮೂಡಗೆರೆಯ ಮ್ಯುನಿಸಿಪಾಲಿಟಿಗಾಗಿ ಮೊಕರರ್ ಮಾಡಿದ ಉದ್ಯೋಗದಲ್ಲಿರುವ ಮತ್ತು ಉದ್ಯೋಗದಲ್ಲಿಲ್ಲದ ಈ ಕೆಳಗೆ ಕಂಡ ಮೆಂಬರುಗಳ ಪಟ್ಟಿಯು ಸಕಲರ ತಿಳುವಳಿಕೆ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಎಕ್ಸ್ ಅಫಿಷಿಯೋ.

1. ಮೂಡಗೆರೆಯ ಅಮಲ್‌ದಾರ್ರು ವೈಸ್ ಪ್ರೆಸಿಡೆಂಟರು.
2. ಪಬ್ಲಿಕ್‌ವರ್ಕ್ಸ್ ಇಲಾಖಾ ಸಬ್ ಡಿವಿಜನ್ ಆಫೀಸರರು ಮೆಂಬರು.
3. ಮೂಡಗೆರೆ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ಮೆಂಬರ್.

ಉದ್ಯೋಗಸ್ಥರಲ್ಲದವರು.

1. ಮೆಸ್ಟರ್ ದಾವೂದ್‌ಸಾಹೆಬರು ಸಾಹುಕಾರ್ ಮತ್ತು ಕಾಫಿಪ್ಲಾಂಟರು.
2. ಡಿಟೋ ರಾಮಚಂದ್ರರಾಯರು ವರ್ಷದಾರ್ ಡಿಟೋ.
3. ಡಿಟೋ ನಂಜಪ್ಪಚೆಟ್ಟಿ ಕಾಫಿಪ್ಲಾಂಟರು.
4. ಡಿಟೋ ಪುಟ್ಟಸಾಮಿಗವುಡರು ನಾಡ್ ಪಟೇಲರು.
5. ಡಿಟೋ ಆರ್ಕ್ಯಗದಾಸರು ದುಕಾಣ್‌ದಾರ್ರು.

ತಾರೀಖು 20ನೇ ನವಂಬರ್ 1896.

ನಂ. 5797. ಮಿ. 1109, ಮೈಸೂರ್ ಗವರ್ನಮೆಂಟಿನ ಸೀನಿಯರ್ ಸರ್ಜನ್ ವ ಸ್ಯಾನಿಟೆರಿ ಕಮ್ಮಿಷನರ್ ಸರ್ಜನ್ ಲೆಫ್ಟಿನೆಂಟ್ ಕರ್ನಲ್ ಪಿ. ಎಚ್. ಬೆನ್ಸನ್‌ಯವರು, 1896ನೇ ನವಂಬರ 6ನೇ ಮೊದ್ಲುಮಿನಲ್ಲಿ ಬೆಂಗಳೂರ ಸಿವಿಲ್ ಸರ್ಜನ್ ಮೆಸ್ಟರ್ ಡಿ. ಪಿ. ಚೋಕ್ಸಿಯವರಿಗೆ ಬೆಂಗಳೂರ ಗವರ್ನಮೆಂಟ್ ಸಿಟಿ ಆಸ್ಪತ್ರೆ, ಮಾತೃಸ್ಥಾನ ಮತ್ತು ಹೆಂಗಸರ ವ ಮಕ್ಕಳ ಆಸ್ಪತ್ರೆ ಇವುಗಳ ಚಾರ್ಜನ್ನು ಕೊಟ್ಟಿರುತ್ತಾರೆ.

ತಾರೀಖು 21ನೇ ನವಂಬರ್ 1896.

ನಂ. 5841.—ಜ್. 681, ಸಿವಿಲ್ ಪ್ರೊಸಿಡ್ಯೂರ್ ಕೋಡಿನ 360ನೇ ಸೆಕ್ಷನ್ ಅನುಸರಿಸಿ, ಶಿವಮೊಗ್ಗಾ ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿಗೆ ಸದರೀ ಕೋಡಿನ 344 ಪ್ರಾರಂಭಿಸಿ 359ರ ಸೆಕ್ಷನ್‌ಗಳಿಂದ ಡಿಸ್ಟ್ರಿಕ್ಟ್ ಕೋರ್ಟುಗಳಿಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನ ಗವರ್ನಮೆಂಟಿನವರು ಕೊಟ್ಟಿರುತ್ತಾರೆ.

ತಾರೀಖು 21ನೇ ನವಂಬರ್ 1896.

ನಂ. 5843.—ಜು. 683, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಕಡೂರ ತಾಲ್ಲೂಕು ಅಮಲ್ದಾರಿ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಟಿ. ಕೆ. ಸುಂದರರಾಜಯ್ಯಂಗಾರು 2ನೇ ಕ್ಲಾಸ ಮಾಜಿಸ್ಟ್ರೇಟರಾಗಿ ನೌಕರರ ಮಾಡಲ್ಪಟ್ಟಿರುತ್ತಾರೆ.

ನಂ. 5845.—ಜು. 685, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 37ನೇ ಸೆಕ್ಷನ್ ಅನುಸರಿಸಿ, ಹಾಸನದ ಜನರಲ್ ಡ್ಯೂಟಿ ಅಸಿಸ್ಟೆಂಟ್ ಕಮಿಷನರ್ ವ 1ನೇ ಕ್ಲಾಸ್ ಮಾಜಿಸ್ಟ್ರೇಟ್ ಮಿಸ್ಟರ್ ಜೆ. ಡಬ್ಲ್ಯೂ. ನೈಟ್ ಯವರಿಗೆ ಸದರೀ ಕ್ಲಾಸಿನ ಮಾಜಿಸ್ಟ್ರೇಟರಿಗೆ ಗವರ್ನಮೆಂಟಿನವರು ಕೊಡಬಹುದಾದ 4ನೇ ಷೆಡ್ಯೂಲಿನಲ್ಲಿ ಜಾಸ್ತಿ ಅಧಿಕಾರವಾಗಿ ವಿವರಿಸಲ್ಪಟ್ಟ ಈ ಕೆಳಗೆ ಕಂಡ ಅಧಿಕಾರ ಕೊಡಲ್ಪಟ್ಟಿರುತ್ತೆ.

ಎರಡು ವ ಮೂರನೇ ಕ್ಲಾಸುಗಳ ಮಾಜಿಸ್ಟ್ರೇಟರುಗಳಿಂದ ಶಿಕ್ಷಿಸಲ್ಪಟ್ಟದ್ದರ ಮೇಲೆ ಬರುವ ಅಪ್ಪೀಲುಗಳನ್ನು ದರ್ಯಾಫ್ತು ಮಾಡುವ ಬಗ್ಗೆ ಅಧಿಕಾರ, ಸೆಕ್ಷನ್ 407.

ನಂ. 5847.—ಜು. 687, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 210ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮಿಸ್ಟರ್ ಜಿ. ಡನ್ನಿಂಗ್ ಯವರಿಗೆ ಮಾಹೆ ಮಜಕೂರ್ 16ನೇ ಮೊದ್ಲುಗೊಂಡು ಲಾಗಾಯತು ಮೂರು ದಿನಗಳ ಪರೀಕ್ಷಾ ರಜಾ ಕೊಡಲ್ಪಟ್ಟಿತ್ತು.

ತಾರೀಖು 23ನೇ ನವಂಬರ್ 1896.

ನ. 5886.—ಜ. ಫೈ, 252—92, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರ್ ಇಂಪೀರಿಯಲ್ ಸರ್ವಿಸ್ ರೆಜಿಮೆಂಟ್ ಅಸಿಸ್ಟೆಂಟ್ ಸರ್ಜನ್ ಮಿಸ್ಟರ್ ಜಿ. ಜಿ. ನರೋನ್ಹಾ, ಎಲ್. ಎಂ. ಎಸ್., ಯವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಒಂಬತ್ತು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 5890.—ಮಿ. 1128, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಸಕ್ಲೇಶಪುರದ ಸಬ್ ಅಸಿಸ್ಟೆಂಟ್ ಸರ್ಜನ್ ಮಿಸ್ಟರ್ ವಿ. ಅಬ್ಬಾಯಿ ನಾಯುಡು, ಎಲ್. ಎಂ. ಎಸ್., ಯವರಿಗೆ 1896ನೇ ಸೆಪ್ಟಂಬರ್ 14ನೇ ಮೊದ್ಲುಗೊಂಡು ಲಾಗಾಯತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

2. ಹಾಸ್ಪಿಟಲ್ ಡಿಸ್ಪೆನ್ಸರಿಯ 1ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್ ಮುತ್ತುಸ್ವಾಮಿಪಿಳ್ಳೆಯವರು ಸದರೀ ಮಿಸ್ಟರ್ ಅಬ್ಬಾಯಿ ನಾಯುಡು ಯವರು ರಜಾದ ಮೇಲಿದ್ದ ಕಾಲದಲ್ಲಿ ಸಕ್ಲೇಶಪುರದ ಡಿಸ್ಪೆನ್ಸರಿಯ ಚಾರ್ಜಿನಲ್ಲಿದ್ದರು.

ತಾರೀಖು 2ನೇ ಆಕ್ಟೋಬರ್ 1896.

ನಂ. 3576.—ರೆ. 1228, ಮೈಸೂರ್ ಲ್ಯಾಂಡ್ ರೆವಿನ್ಯೂ ರೂಲ್ಸಿನ ಅಪೆಂಡಿಕ್ಸ್ ಎಚ್ಚಿನಲ್ಲಿ ಕಂಡ ರೂಲಿನ 1 ಮತ್ತು 4ನೇ ಪ್ಯಾರಾಗಳಿಗೆ ಈ ಕೆಳಗೆ ಕಂಡ ಜಾಸ್ತಿ ಅಂಶಗಳನ್ನು ಸೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

(1) ಪ್ಯಾರ 1ರ ಆಖೈರಿನಲ್ಲಿ ಸೇರಿಸತಕ್ಕದ್ದು "ಪರಂತು, ಗ್ರ್ಯಾಂಟು 50 ಎಕರೆಗಳಿಗೆ ಮೀರಲ್ಪಟ್ಟಾಗ ಅದು ಗವರ್ನಮೆಂಟಿನವರ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡತಕ್ಕದ್ದು."

(2) ಪ್ಯಾರಾ 4ರಲ್ಲಿ, "ಮತ್ತು" ವ "ಷಾತೂತು" ಎಂಬ ಮಾತುಗಳ ಮಧ್ಯದಲ್ಲಿ "ಕಾಫಿ" ಎಂಬ ಮಾತನ್ನು ಸೇರಿಸತಕ್ಕದ್ದು.

2. ಈ ಮೇರೆ ತಿದ್ದುಪಡಿಯಾದ ಎರಡು ಪ್ಯಾರಾಗಳು ಈ ಕೆಳಗೆ ಕಂಡಂತೆ ಓದತಕ್ಕದ್ದು:

"ಪ್ಯಾರಾ 1 ಜಂಗಲಿ ಮತ್ತು ಸಾದೆ ಲಾಯಖ್ ಮರಗಳನ್ನು ಹಾಕತಕ್ಕ ಬಗ್ಗೆ ಕೊಡುವದಕ್ಕೆ ಆಕ್ಷೇಪವಿಲ್ಲದಿರುವ ಸ್ಥಳದಲ್ಲಿ ಈ ಕೆಳಗೆ ನಮೂದಾಗುವ ತಾಲ್ಲೂಕುಗಳಲ್ಲಿ, ಕೊಡುವ ತಾರೀಖು ಲಾಗಾಯತು 20 ವರುಷಗಳ ವರಿವಿಗೂ ಕಂದಾಯ ಮೊಫಿಯಿಂದ ಆಕಾರ ಕಾಣದ ಸರ್ಕಾರೀ ಬಂಜರು ಜಮೀನು ಕೊಡಲ್ಪಡುವದು, ಆ ತರುವಾಯ ಪೂರಾ ಕಂದಾಯ ವಸೂಲ್ಮಾಡಲ್ಪಡುವದು. ಪರಂತು, ಗ್ರ್ಯಾಂಟು 50 ಎಕರೆಗಳಿಗೆ ಮೀರಲ್ಪಟ್ಟಾಗ ಅದು ಗವರ್ನಮೆಂಟಿನವರ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡತಕ್ಕದ್ದು."

"ಪ್ಯಾರಾ 4. ಜಮೀನು ಹೊಂದಿದವನು ಗಿಡಗಳ ಕೆಳಗೆ ಧಾನ್ಯ ಮುಂತಾದ ಇತರ ಪೈರುಗಳನ್ನು ಬೆಳದುಕೊಳ್ಳಬಹುದು. ಅಂತಾ ಸಾಗುವಳಿ ಬಗ್ಗೆ ಬೇಕಾಗುವ ನೀರನ್ನ ಸರ್ಕಾರದ ಜಲಾಧಾರವಲ್ಲದೆ ಖಾಸಗಿ ಜಲಾಧಾರದಿಂದ ತೆಗದುಕೊಳ್ಳುವ ಪಕ್ಷಕ್ಕೂ, ಮತ್ತು ಕಾಫಿ, ಷಾತೂತು, ಕಬ್ಬು, ಜಾಲಾರಿ ಯಾ ಅರಗಿನ ಗಿಡಗಳನ್ನು ಹಾಕದೆ ಇರುವ ಪಕ್ಷಕ್ಕೂ ಯಾವ ವಿಧವಾದ ಕಂದಾಯವು ದಾಖಲ್ಮಾಡಲ್ಪಡಲಾರದು. ಪರಂತು ಅವನು ಸಾಗುವಳಿ ಬಗ್ಯಾಗಲಿ ಯಾ ತೋಪು ಹಾಕತಕ್ಕ ಬಗ್ಯಾಗಲಿ ಸರ್ಕಾರ ಸಂಬಂಧವಾದ ಕೆರೆಗಳು ಯಾ ನಾಲೆಗಳು ಮುಂತಾದವುಗಳಿಂದ ನೀರನ್ನು ಉಪಯೋಗಿಸಿಕೊಳ್ಳಬೇಕೆಂತ ಅಪೇಕ್ಷಿಸಿದಲ್ಲಿ ಸರ್ಕಾರದ ನೀರಿನಿಂದ ತರೀ ಸಾಗುವಳಿ ಆಗುವ ಖುಷ್ಕಿ ಜಮೀನುಗಳ ಮೇಲೆ ವಾಡಿಕೆಯಾಗಿ ದಾಖಲಾಗುವ ನೀರು ಸರ್ದಿಯನ್ನು ಕೊಡತಕ್ಕದ್ದು."

ತಾರೀಖು 29ನೇ ಅಕ್ಟೋಬರ್ 1896.

ನಂ. 4024—ರೆ. 1388, ಸನ್ 1894ನೇ ಇಸವಿಯ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನುಗಳು ಸರ್ಕಾರಿ ಕೆಲಸಕ್ಕೆ ಅಂದರೆ ಬಾಬಾಬುಡನ್ ಬೆಟ್ಟದ ರಸ್ತೆಯನ್ನು ಬಿಡಾಯಿಸುವ ಬಗ್ಗೆಗೆ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಅನುಭವದಾರನ ಹೆಸರು.	ಜಮೀನ್ ತಪ್ಸೀಲು. ಸರ್ವೆ ನಂ.	ಎಕರೆಗಳು.	ಗುಂಟೆಗಳು.	ಗಜಗಳು.	ಚೆಕ್ಕುಬಂದಿ. ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.
ಕಡೂರು.	ತರೀಕೆರೆ.	ಲಿಂಗದಹಳ್ಳಿ.	ಬಲ್ಲವಾರ	ರಾಮಪ್ಪ ..	48ರ ಭಾಗ	..	34	66	ನಂ. 48 ವ 27ರ ಭಾಗ	ನಂ. 48ರ ಭಾಗ	ನಂದಿಬಟ್ಲ ನಂ. 28ರ ಭಾಗ	ನಂ. 48 ವ 27ರ ಭಾಗ
			ನಂದಿಬಟ್ಲು	ಮೆಸ್ಟರ್ ಜಿ. ಆರ್. ಆಲಿವರ್ ..	28	..	5	88	ನಂ. 28ರ ಭಾಗ	ನಂ. 28 ಡಿಟೋ	ಬಲ್ಲವಾರದ ನಂ. 28	ನಂದಿಬಟ್ಲ ನಂ. 48ರ ಭಾಗ
			ಡಿಟೋ	ಕಲ್ಲೇಗವುಡ ..	90 ವ 29	..	23	66	ನಂ. 90 ಡಿಟೋ	ನಂ. 90 ವ 29 ಡಿಟೋ	ನಂದಿಬಟ್ಲ ನಂ. 30	ನಂ. 80ರ ಭಾಗ
			ಡಿಟೋ	ಕೆ. ರಂಗೇಗವುಡ ..	80	..	11	55	ನಂ. 80 ಡಿಟೋ	ನಂ. 80 ಡಿಟೋ	ನಂ. 29ರ ಎಲ್ಲೆ	ನಂ. 26ರ ಡಿಟೋ
			ಡಿಟೋ	ಡಿಟೋ ..	26	..	16	66	ನಂ. 26 ಡಿಟೋ	ನಂ. 26 ಡಿಟೋ	ನಂ. 80 ಮತ್ತು ನಂ. 26ರ ಭಾಗ	ನಂ. 81
			ಡಿಟೋ	ಎಲ್. ರಂಗೇಗವುಡ ..	81	.	21	..	ನಂ, 81 ಡಿಟೋ	ನಂ. 81 ಡಿಟೋ	ನಂ. 26	ರೆಗಡ ಗ್ರಾಮದ ನಂ. 5
						1	38	33				
			ರೆಗಡ	ಟಿ. ಮೊಹದೀನ್‌ಸಾಬ್ ..	33	1	28	22	ನಂ. 36ರ ಭಾಗ	ನಂ. 36ರ ಭಾಗ	ನಂ. 4ರ ಎಲ್ಲೆ	ನಂ. 36ರ ಭಾಗ ಮತ್ತು ನಂ. 4ರ ಎಲ್ಲೆ
			ಡಿಟೋ	ಹಸನ್ ಅಹಮ್ಮದ್ ..	34	..	19	11	ನಂ. 34 ವ 4ರ ಭಾಗ	ನಂ. 33	ನಂ. 4	ನಂ. 34ರ ಭಾಗ
			ಡಿಟೋ	ಮೆಸ್ಟರ್ ಡಿ. ಹರ್ರಿ ..	33	..	11	55	ನಂ. 34	ನಂ. 33ರ ಭಾಗ	ನಂ. 33ರ ಭಾಗ	ನಂ. 35
			ಡಿಟೋ	ಹಯಾತ್‌ಖಾನ್‌ಸಾಬ್ ..	35	1	28	88	ನಂ. 35ರ ಭಾಗ	ನಂ. 35ರ ಭಾಗ	ನಂ. 35 ವ 35ರ ಭಾಗ	ನಂ. 35 ವ 32ರ ಭಾಗ
			ಡಿಟೋ	ಕರಿಗವುಡ ..	32	..	5	88	ನಂ. 32 ವ 31ರ ಭಾಗ	ನಂ. 32 ವ 22ರ ಭಾಗ	ನಂ. 35	ನಂ. 31
			ಡಿಟೋ	ಮೆಸ್ಟರ್ ಡಿ. ಹರ್ರಿ ..	31	1	3	88	ನಂ. 31ರ ಭಾಗ	ನಂ. 31ರ ಭಾಗ	ನಂ. 32	ನಂ. 1
						5	16	110				
				ಜುಮ್ಲಾ ತರೀಕೆರೆ ತಾಲ್ಲೂಕು ..		8	9	88				
ಚಿಕ್ಕ ಮಗಳೂರು.		ಜಾಗರ.	ಮೇಲಿನಹುಲ್ವತ್ತಿ	ಶಿವೇಗವುಡ ..	45	..	19	88	ನಂ. 45ರ ಭಾಗ	ನಂ. 45ರ ಭಾಗ	ನಂ. 44	ನಂ. 42
			ಡಿಟೋ	ಅಬ್ದುಲ್‌ಖಾದರ್ ..	40,41 ವ 42	1	30	77	ನಂ. 40,41 ವ 42 ಭಾಗ	ನಂ. 40,41 ವ 42ರ ಭಾ.	ನಂ. 45	ನಂ. 25
			ಡಿಟೋ	ಅನಸ್‌ಖಾನ್ ..	25	1	3	33	ನಂ. 25ರ ಭಾಗ	ನಂ. 25ರ ಭಾಗ	ನಂ. 40	ನಂ. 25 ವ 23ರ ಭಾಗ
			ಡಿಟೋ	ಡಾಕ್ಟರ್ ಸ್ಮಿತ್ ..	16	2	7	99	ನಂ. 16ರ ಭಾಗ	ನಂ. 16 ವ 23ರ ಭಾಗ	ನಂ. 16 ವ 23ರಭಾಗ	ನಂ. 16ರ ಭಾಗ
						5	21	55				
			ಕೆರ್ರಿ ಮನೆ	ಮೆಸ್ಟರ್ ಆಲಿವರ್ ..	20	7	10	110	ನಂ. 20ರ ಭಾಗ	ನಂ. 20 ವ 80ರ ಭಾಗ	ನಂ. 20 ವ 80ರ ಭಾಗ	ನಂ. 21ರ ಭಾಗ
				ಜುಮ್ಲಾ ಚಿಕ್ಕ ಮಗಳೂರುತಾಲ್ಲೂಕು ..	..	12	32	44				
				ಎರಡು ತಾಲ್ಲೂಕುಗಳ ಒಟ್ಟುಜುಮ್ಲಾ.	..	21	2	11				

ತಾರೀಖು 1ನೇ ಅಕ್ಟೋಬರ್ 1896.

ನಂ. 3573.—ಫಾ. ಫೈ. 166—95, ಸರ್ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ ಮೈಸೂರು ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಹದ್ದು ವಿಂಗಡಿಸಲ್ಪಟ್ಟ ಮತ್ತು ವ್ಯವಸ್ಥೆ ಮಾಡಲ್ಪಟ್ಟ ಫಾರೆಸ್ಟುಗಳು ವ ಪ್ಲಾಂಟೇಷನ್‌ಗಳು ಮೇಲ್ಕಂಡ ಫಾರೆಸ್ಟ್ ರೂಲ್ಸಿನ 1ನೇ ರೂಲ್ ಅನುಸರಿಸಿ ಸ್ಟೇಟ್ ಫಾರೆಸ್ಟುಗಳಾಗಿ ವಿಂಗಡಿಸಲ್ಪಟ್ಟಿರುತ್ತವೆ:—

ನಂಬರು	ಫಾರೆಸ್ಟುಗಳ ವ ಪ್ಲಾಂಟೇಷನ್‌ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
1	ಬೇಗೂರ ಫಾರೆಸ್ಟ್ (ಹೆಗ್ಗಡದೇವನ ಕೋಟೆ ತಾಲ್ಲೂಕು.)	ಸುಮಾರು 42 ಚದುರ ಮೈಲಿಗಳು.	ಉತ್ತರಕ್ಕೆ—ಡಿಮಾರ್ಕೇಷನ್ ಲೈನು ಗಂಟೂರ ವರಿವಿಗೆ ಪೂರ್ವ ದಿಕ್ಕಿನಲ್ಲಿ ಕಬ್ಬನಿ ನದಿಯನ್ನನುಸರಿಸಿ ನಂ. 1ರ ಈಶಾನ್ಯ ದಿಕ್ಕಿನ ಎಲ್ಲೆ ಉದ್ದಕ್ಕೂ ಆಗ್ನೇಯ ದಿಕ್ಕಿನಲ್ಲಿ ಹೊರಟು ಗಂಟೂರ ನಂ. 6ರ ದಕ್ಷಿಣ ಎಲ್ಲೆಗೆ ಹೋಗುತ್ತದೆ; ಅಲ್ಲಿಂದ ಜೊಸಹಳ್ಳಿಯ ನಂ. 47ರ ಉದ್ದಕ್ಕೂ ಪೂರ್ವಕ್ಕೆ ಹೋಗಿ ಮತ್ತು ಅಲ್ಲಿಂದ ಬೈರನಹಳ್ಳಿಯ ನಂ. 55ರ ದಕ್ಷಿಣ ಎಲ್ಲೆಯನ್ನು ಮತ್ತು ಬೇಗೂರ ನಂ. 48ರ ದಕ್ಷಿಣ ಎಲ್ಲೆಯನ್ನೂ ಅಲ್ಲಿಂದ ಕೆಂಚೇನಹಳ್ಳಿಯ ನಂ. 1ರ ಎಲ್ಲೆಯನ್ನೂ ಬಿಟ್ಟು ಹೋಗಿ ವಡಲಿಹಳ್ಳದ ಬಳಿ ಕೊನೆ ಮುಟ್ಟುತ್ತೆ. ದಕ್ಷಿಣಕ್ಕೆ—ಮಲಬಾರ್ ಸ್ಟೇಟ್ ಫಾರೆಸ್ಟ್. ಪೂರ್ವಕ್ಕೆ—ವಡಲಿಹಳ್ಳ. ಪಶ್ಚಿಮಕ್ಕೆ—ಕಬ್ಬನಿ ನದಿ.
2	ಐನೂರುಮಾರಿ ಗುಡಿ ಫಾರೆಸ್ಟ್.	ಸುಮಾರು $38\frac{2}{3}$ ಚದುರ ಮೈಲಿಗಳು.	ಉತ್ತರಕ್ಕೆ—ಲೈನು ವಡಲಿಹಳ್ಳದಿಂದ ಹೊರಟು ಬಂಕವಾಡಿಯ ನಂ. 36ರ ನೈಋತ್ಯ ಎಲ್ಲೆಯ ಉದ್ದಕ್ಕೂ ಹೋಗಿ ಸರ್ವೆ ನಂ. 35ರ ಸ್ವಲ್ಪ ಭಾಗದ ಅಡ್ಡವಾಗಿ ಹಿಂದೆ ಹೇಳಿರುವದರ ಸಣ್ಣ ಮೂಲೆಯನ್ನ ದಾಟ ಮತ್ತು ಬಂಕವಾಡಿಯ ನಂ. 34ರ ಅರ್ಧಕ್ಕೆ ಹೆಚ್ಚಾಗಿ ಸೇರಿಸಿಕೊಂಡು, ಅಲ್ಲಿಂದ ಚಿಕ್ಕ ಬಸಿಗೆಯ ನಂ. 2ರ ದಕ್ಷಿಣ ಎಲ್ಲೆಯನ್ನು ಬಿಟ್ಟು ಹೋಗಿ ಮತ್ತು ಅಲ್ಲಿಂದ ಮಲಿಯೂರ ನಂ. ೯ ವ 11ರ ಉದ್ದಕ್ಕೂ ಮತ್ತು ಹೆರೆಹಳ್ಳಿಯ ನಂ. 38ರ ಉದ್ದಕ್ಕೂ ಮತ್ತು ಕರ್ನಗಾಲದ ನಂ. 27 ವ 28ರ ಉದ್ದಕ್ಕೂ ಹೋಗಿ ಮತ್ತು ಅಲ್ಲಿಂದ ಆಲನಹಳ್ಳಿಯ ನಂ. 6ರ ಉದ್ದಕ್ಕೂ ನಗ್ಗುನದಿಗೆ ಈಶಾನ್ಯ ದಿಕ್ಕಿನಲ್ಲಿ ಹೋಗುತ್ತದೆ. ದಕ್ಷಿಣಕ್ಕೆ—ಮಲಬಾರ್ ಸ್ಟೇಟ್ ಫಾರೆಸ್ಟ್. ಪೂರ್ವಕ್ಕೆ—ನಗ್ಗುನದಿ. ಪಶ್ಚಿಮಕ್ಕೆ—ವಡಲಿಹಳ್ಳ.
3	ಮೇಟಿಕುಪ್ಪೆ ಫಾರೆಸ್ಟ್.	40 ಚದುರ ಮೈಲಿಗಳು.	ಉತ್ತರಕ್ಕೆ—ಹುಣಸೂರಿಂದ ಮುರ್ಕಲ್ ರಸ್ತೆ, ಸೊಳ್ಳಾಪುರದಿಂದ ಬಂಡಿಜಾಡು ಮತ್ತು ಬೇರೆಹೆಬ್ಬಳ್ಳದ ಮೂಲ ಇವುಗಳ ಸಂಗಮದವರಿವಿಗೆ, ವೀರನಹೊಸಹಳ್ಳಿ ಸ್ಟೇಟ್ ಫಾರೆಸ್ಟಿನ ಡಿಮಾರ್ಕೇಷನ್ ಲೈನ್ ಮತ್ತು ಮುರ್ಕಲ್ ರಸ್ತೆ ಇವುಗಳ ಸಂಗಮದ ವರಿವಿಗೆ, ಈಶಾನ್ಯದಲ್ಲಿ ಬೇರೆಹೆಬ್ಬಳ್ಳದ ಮೂಲದಿಂದ $1\frac{1}{4}$ ಮೈಲಿ ಬಳಿಯ ಡಿಮಾರ್ಕೇಷನನ್ನ ಸಂಧಿಸುತ್ತೆ. ದಕ್ಷಿಣಕ್ಕೆ—ಕಾಕನಕೋಟೆ ಸ್ಟೇಟ್ ಫಾರೆಸ್ಟ್. ಪೂರ್ವಕ್ಕೆ—1886ನೇ ಇಸವಿಯಲ್ಲಿ ಹೊಸದಾಗಿ ವಿಂಗಡಿಸಲ್ಪಟ್ಟ ಡಿಮಾರ್ಕೇಷನ್ ಲೈನು, ದಕ್ಷಿಣಕ್ಕೆ ಬೇರೆಹೆಬ್ಬಹಳ್ಳದಿಂದ ಹೊರಟು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:— (a) ಮಾಸಿಕಟ್ಟೆ ಹೆಬ್ಬಹಳ್ಳ, ಮಾಸಿಕಟ್ಟೆಯಿಂದ 3 ಫರ್ಲಾಂಗುಗಳು, (b) ಕುರುಬರ ಪಂಚಳ್ಳ, (c) ಜೇನ್ಬೋರೆಹಳ್ಳ, ಬಿಮರ್ತಲ್ ಕೊಲಚಿಯ ಪೂರ್ವಕ್ಕೆ ಸುಮಾರು ಒಂದು ಫರ್ಲಾಂಗು, (d) ನೇತಕಲ್ ಗುಡಿಹಳ್ಳ, ನೇತಕಲ್ ಗುಡಿಯ ಪಶ್ಚಿಮಕ್ಕೆ ಸುಮಾರು 2 ಫರ್ಲಾಂಗುಗಳು, (e) ಸರತಿನದಿ, ಪಟಕ್ಕಟ್ಟೆಯ ಪೂರ್ವಕ್ಕೆ ಸುಮಾರು ಒಂದು ಮೈಲಿ, (f) ಮದನಹಳ್ಳಿ ಕಾಡಿನಬಳಿ ಇರುವ ನಾಗರಹೊಳೆ ಮತ್ತು ಮೇಟಿಕುಪ್ಪೆ ಫಾರೆಸ್ಟಿನಲ್ಲಿ ಹೊಸದಾಗಿ ಏರ್ಪಟ್ಟ ಬ್ಲಾಕಿನ ಪೂರ್ವದಿಕ್ಕಿನ ಕೊನೆಯ ಮತ್ತು ಕೊಡಗಿಗೆ ಹೋಗುವ ಕಕ್ಕೆರ (ಕವಲಿದಾರಿ) ಬಂಡಿಜಾಡಿನ ಬಳಿ ಕೊನೆ ಮುಟ್ಟುತ್ತದೆ ಪಶ್ಚಿಮಕ್ಕೆ—(a) ಕೈಮಾರದಿಂದ ಕುತ್ತಡ ಮುರ್ಕಲ್ ವರಿವಿಗೆ ಮಲಬಾರ್ ಫಾರೆಸ್ಟು, (b) ಕುತ್ತಡ ಮುರ್ಕಲಿನಿಂದ ಕರ್ಮಾರೆ ಕಿರ್ಕಲ್ ವರಿವಿಗೆ ಕೊಡಗು ಫಾರೆಸ್ಟು ಮತ್ತು (c) ವೀನರಹೊಸಹಳ್ಳಿ ಸ್ಟೇಟ್ ಫಾರೆಸ್ಟು.

578

ನಂಬರು	ಫಾರಸ್ಟುಗಳ ವ ಪ್ಲಾಂಟೇಷನ್ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
4	ಕಾಕನಕೋಟೆ ಫಾರೆಸ್ಟ್	55 ಚದುರ ಮೈಲಿಗಳು.	ಉತ್ತರಕ್ಕೆ—ಬಿಸಲವಾಡಿ ರಸ್ತೆ. ದಕ್ಷಿಣಕ್ಕೆ—ಉಡಬೂರು ಕಾಡಿನಿಂದ ಸಾದಿಕರಹಳ್ಳದ ವರಿವಿಗೆ ಕಬ್ಬನಿ ನದಿ. ಪೂರ್ವಕ್ಕೆ—ಉಡ್ಬರ್ ಕಾಡಿನಿಂದ ಹೊರಟು (21 ಅಡಿಗಳ ಅಗಲದ) ಡಿಮಾರ್ಕೇಷನ್ ಲೈನಿನ ಉತ್ತರಕ್ಕೆ ಹೋಗಿ ತೆಂಕಲ್ ಗ್ರಾಮದ ಸರ್ವೆ ನಂ. 1ರನ್ನ ಸುತ್ತಿಕೊಂಡು, ಅಲ್ಲಿಂದ ಉಡ್ಬರ್ ನಂ. 1 ವ 4ರ ಉದ್ದಕ್ಕೂ ಕಾರಾಪುರದ ಸರ್ವೆ ನಂ. 1ರ ಉದ್ದಕ್ಕೂ ನಿಸ್ಸೆನ್ ಸರ್ವೆ ನಂ. 54 ವ 55ರ ಉದ್ದಕ್ಕೂ ಜೆಲ್ಲತ್ತೂರ ನಂ. 70 ವ 68ರ ದಕ್ಷಿಣ ಎಲ್ಲೆಯು ಸುತ್ತಲೂ ಅವುಗಳನ್ನ ಸುತ್ತಿಕೊಂಡು ಮತ್ತು ಹಿಂದೆ ಹೇಳಿದ್ದರ ಪೂರ್ವ ಎಲ್ಲೆಯ ಉದ್ದಕ್ಕೂ ಹಾದು, ಅಲ್ಲಿಂದ ಮಂಚಗೌಡನಹಳ್ಳಿಯ ನಂ. 17ರನ್ನ ಬಿಟ್ಟು ಅದರ ಮೂಲಕವಾಗಿಯೂ ಹಳ್ಳಿಮಗ್ಗಿಯ ನಂ. 17ರ ಮೂಲಕವಾಗಿಯೂ ವಾಯುವ್ಯ ದಿಕ್ಕಿನಲ್ಲಿ ವೊಂದು ಮೂಲೆಯಿಂದ ಮತ್ತೊಂದು ಎದುರ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ—ಮಲಬಾರ್ ಸ್ಟೇಟ್ ಫಾರೆಸ್ಟು.
5	ಕಾರಾಪುರ ಪ್ಲಾಂಟೇಷನ್ (ತೇಗ)	8 ಎಕರೆಗಳು	ಉತ್ತರಕ್ಕೆ—ಮೈಸೂರು, ಮಾನಂತಾಡಿ ರಸ್ತೆ. ದಕ್ಷಿಣಕ್ಕೆ—ಗುಂಡತೂರು ಗ್ರಾಮ. ಪೂರ್ವಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 16. ಪಶ್ಚಿಮಕ್ಕೆ—ಸರ್ವೆ ನಂ. 17ನೇ ಖರಾಬ್.
6	ನಿಸ್ಸೆನ್ ಪ್ಲಾಂಟೇಷನ್ (ತೇಗ)	$13\frac{1}{2}$ ಎಕರೆಗಳು	ಉತ್ತರಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 45, 63 ವ 64. ದಕ್ಷಿಣಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 43. ಪೂರ್ವಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 41. ಪಶ್ಚಿಮಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 45.
7	ಆನೆಚೌಕೂರು ಪ್ಲಾಂಟೇಷನ್ ನಂ. 3 (ತೇಗ)	67 ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 14ನೇ ಖರಾಬ್. ದಕ್ಷಿಣಕ್ಕೆ—ಡಿಟೋ. ಪೂರ್ವಕ್ಕೆ—ಡಿಟೋ. ಪಶ್ಚಿಮಕ್ಕೆ—ಸರ್ವೆ ನಂ. 15ನೇ ಖರಾಬ್.
8	ಮಂಚಗೌಡನಹಳ್ಳಿ ಪ್ಲಾಂಟೇಷನ್ ನಂ. 1 (ತೇಗ)	100 ಎಕರೆಗಳು	ಉತ್ತರಕ್ಕೆ—ಮಂಚೇಗೌಡನಹಳ್ಳಿ ಎಲ್ಲೆ ಲೈನು. ದಕ್ಷಿಣಕ್ಕೆ—ರಾಗಲಕುಪ್ಪೆ ಪ್ಲಾಂಟೇಷನ್. ಪೂರ್ವಕ್ಕೆ—ಮೈಸೂರು, ಮಾನಂತಾಡಿ ರಸ್ತೆ. ಪಶ್ಚಿಮಕ್ಕೆ—ಸರ್ವೆ ನಂ. 4ನೇ ಖರಾಬ್.
9	ಅಮೃತಮಹಲ್ ಪ್ಲಾಂಟೇಷನ್ ನಂ. 1 ಬ್ಲಾಕ್ (ತೇಗ)	55 ಎಕರೆಗಳು	ಉತ್ತರಕ್ಕೆ—ಅಂತರಸಂತೆ ಅಮೃತಮಹಲ್ ಕಾವಲಿನಲ್ಲಿರುವ ಅಗ್ನಿನಿರೋಧ ಲೈನು. ದಕ್ಷಿಣಕ್ಕೆ—ಕಪಿಲಾನದಿ. ಪೂರ್ವಕ್ಕೆ—ಅಮೃತ ಮಹಲ್ ಕಾವಲ್. ಪಶ್ಚಿಮಕ್ಕೆ—ಮೈಸೂರು, ಮಾನಂತಾಡಿ ರಸ್ತೆ, ಕಪಿಲಾನದಿಗೆ ಹೋಗುವ ಗಲ್ಲಿ.
10	ಡಿಟೋ ನಂ. 2	35 ಎಕರೆಗಳು	ಉತ್ತರಕ್ಕೆ—ಕಪಿಲಾನದಿಗೆ ಹೋಗುವ ಗಲ್ಲಿ. ದಕ್ಷಿಣಕ್ಕೆ—ಸುಂದಾಪುರದ ಗ್ರಾಮಸ್ತರಿಗೆ ಕೊಟ್ಟಿರುವ ಅಮೃತ ಮಹಲ್ ಕಾವಲ್ ಪ್ಲಾಂಟೇಷನ್ ಜಮೀನು. ಪೂರ್ವಕ್ಕೆ—ಕಪಿಲಾನದಿ. ಪಶ್ಚಿಮಕ್ಕೆ—ಮೈಸೂರು, ಮಾನಂತಾಡಿ ರಸ್ತೆ.
11	ಕಪಿಲಾ ಪ್ಲಾಂಟೇಷನ್ ಬ್ಲಾಕ್ ನಂ. 1 (ತೇಗ)	50 ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 23ನೇ ಗೋಮಾಳ. ಪೂರ್ವಕ್ಕೆ—ಸರ್ವೆ ನಂ. 6, 16 ವ 22. ದಕ್ಷಿಣಕ್ಕೆ—ಆನಿಪುರದ ಎಲ್ಲೆಯ ಸರ್ವೆ ನಂ. 1. ಪಶ್ಚಿಮಕ್ಕೆ—ಕಪಿಲಾನದಿ.
12	ಡಿಟೋ ನಂ. 2	$54\frac{3}{4}$ ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 19 ಮತ್ತು ಗುಂಡತೂರ ಎಲ್ಲೆ. ದಕ್ಷಿಣಕ್ಕೆ—ಆನಿಪುರ ಗ್ರಾಮದ ಸರ್ವೆ ನಂ. 1. ಪೂರ್ವಕ್ಕೆ—ಗುಂಡತೂರ ಎಲ್ಲೆ. ಪಶ್ಚಿಮಕ್ಕೆ—ಕಪಿಲಾನದಿ.

ನಂಬರು.	ಫಾರೆಸ್ಟುಗಳ ವ ಪ್ಲಾಂಟೇಷನುಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
13	ಬಿಸಪ್ಪನಕಟ್ಟೆ ಪ್ಲಾಂಟೇಷನ್ (ಸಂದಲ್)	$7\frac{1}{4}$ ಎಕರೆಗಳು	ಉತ್ತರಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 55 ವ 68. ದಕ್ಷಿಣಕ್ಕೆ—ಮೈಸೂರು, ಮಾನಂತವಾಡಿ ರಸ್ತೆ. ಪೂರ್ವಕ್ಕೆ—ಸರ್ವೆ ನಂ. 43ನೇ ಖರಾಬ್. ಪಶ್ಚಿಮಕ್ಕೆ—ಬಿಸಪ್ಪನಕಟ್ಟೆ ಸರ್ವೆ ನಂ. 57.
14	ಹಂಪಾಪುರದ ಪ್ಲಾಂಟೇಷನ್ (ಸಂದಲ್)	$327\frac{3}{4}$ ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 42ನೇ ಖರಾಬ್. ಪೂರ್ವಕ್ಕೆ—ಹರನಹಳ್ಳಿ ಮತ್ತು ಮಂದನಹಳ್ಳಿ ಗ್ರಾಮಗಳ ಎಲ್ಲೆ ಲೈನುಗಳು. ದಕ್ಷಿಣಕ್ಕೆ—ಸರ್ವೆ ನಂ. 43ನೇ ಖರಾಬಿನಲ್ಲಿರುವ ಅಗ್ನಿನಿರೋಧ ಲೈನು. ಪಶ್ಚಿಮಕ್ಕೆ—ಸರ್ವೆ ನಂ. 44, 34, 35, 37, 38, 41 ವ 40.
15	ವೀರನಹೊಸಹಳ್ಳಿ ಫಾರೆಸ್ಟು (ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳು)	ಸುಮಾರು 9 ಚದುರ ಮೈಲಿಗಳು	ಉತ್ತರಕ್ಕೆ—ಮೈಸೂರು ಕೊಡಗು ಎಲ್ಲೆಯಲ್ಲಿ ಲಕ್ಷ್ಮಣತೀರ್ಥ ನದಿ ತನ್ನಷ್ಟಕ್ಕೆ ತಾನೇ ಪೂರ್ವಕ್ಕೆ ಬೊಗ್ಗಿ ಗಡಿಯಾರದ ಮುಳ್ಳುಗಳ ಹಾಗೆ ಹೋಗುವ ಸ್ಥಳದಿಂದ ಹೊರಟು ಎಲ್ಲೆಯು ಲಕ್ಷ್ಮಣತೀರ್ಥ ನದಿಯ ಉದ್ದಕ್ಕೂ ಪೂರ್ವಕ್ಕೆ ಹೋಗಿ ಕೋನನ ಹೊಸಹಳ್ಳಿಯ ಗ್ರಾಮದ ಎಲ್ಲೆ ಕಟ್ಟಿನವರಿಗೆ ಕಾಚೋನಹಳ್ಳಿ ಜಂಗಲಿಗೆ ಸೇರಿದ ಹಾಗೆ ಹೋಗಿ ಅಲ್ಲಿಂದ ಅಗ್ನಿ ದಿಕ್ಕಿಗೆ ಹೊರಟು ಪುನಹಾ ಲಕ್ಷ್ಮಣತೀರ್ಥ ನದಿಗೆ ಸೇರುವ ಪರಿಯಂತ ಕೋನನ ಹೊಸಹಳ್ಳಿಯ ಸರ್ವೆ ಎಲ್ಲೆ ಕಟ್ಟಿನ ಉದ್ದಕ್ಕೂ ಹೋಗಿ ಮತ್ತು ಅಲ್ಲಿಂದ ಸದರೀ ನದಿಯ ಉದ್ದಕ್ಕೂ ಪೂರ್ವ ಪಾರ್ಶ್ವ, ದಕ್ಷಿಣ ಪಾರ್ಶ್ವ ಮತ್ತು ಪಶ್ಚಿಮ ಪಾರ್ಶ್ವ ಹಾಕಮಾಡಲ್ಪಟ್ಟ 7 ಗಜಗಳ ಡಿಮಾರ್ಕೇಷನ್ ಲೈನಿಗೆ ಸೇರುವವರಿವಿಗೆ ಹೊರಟು ಮತ್ತು ಕೊಲವಿಗೆಯ ಸರ್ವೆ ಎಲ್ಲೆಕಟ್ಟಿನ ಉದ್ದಕ್ಕೂ ದಕ್ಷಿಣ ಪಾರ್ಶ್ವ ಹಾದು ಮತ್ತು ಎರೆಕಟ್ಟೆ ಸಮೀಪ ಮಾರ್ಕಲ್‌ವೀರನ ಹೊಸಹಳ್ಳಿ ಫಾರೆಸ್ಟು ರಸ್ತೆಗೆ ಸೇರುವವರಿವಿಗೆ ಕಡಗತಲ್‌ಕಟ್ಟೆ ವ ಕುರುಬರ ಪಾರೆ ಮಾರ್ಗವಾಗಿ ಉದ್ದಗನೂರು ಮತ್ತು ಚಿಕ್ಕಹೆಜ್ಜೂರುಗಳ ಸರ್ವೆ ಎಲ್ಲೆಕಟ್ಟುಗಳ ಉದ್ದಕ್ಕೂ [illegible] ಯ ದಿಕ್ಕಿಗೆ ಹಾದು ಹೋಗುತ್ತದೆ. [illegible] ಸ್ಥಳದಿಂದ ಪೂರ್ವ ಪಾರ್ಶ್ವದ ಎಲ್ಲೆಯು 7 ಗಜಗಳ [illegible] ಉದ್ದಕ್ಕೂ ಹಿತ್ತಲ್‌ಗೂಡು ಮಾಯೀಸಿಕಟ್ಟೆ ಪಾರೆ ಮಾರ್ಗವಾಗಿ ಅದು ಮೂರು ಹೆಬ್ಬ ಹಳ್ಳಗಳು ದಾಟಿ ಸೊಳ್ಳೇಪುರದ ಏರು ಹೆಬ್ಬಹಳ್ಳದ ದಕ್ಷಿಣಕ್ಕೆ ಇರುವ ಹುಣಸೂರು, ಹೆಗ್ಗಡದೇವನಕೋಟೆ ತಾಲ್ಲೂಕು ಎಲ್ಲೆ ಕಲ್ಲನಬಳಿ ಸೇರುವ ವರಿವಿಗೂ ಹೋಗುತ್ತದೆ. ದಕ್ಷಿಣಕ್ಕೆ—ಹಿಂದೆ ಹೇಳಿದ ಸ್ಥಳದಿಂದ ಎಲ್ಲೆಯು ದಕ್ಷಿಣಕ್ಕೆ ಅದು ಮಾರ್ಕಲ್ ಮೇಟಿಕುಪ್ಪೆ ಬಂಡಿಜಾಡಿಗೆ ಸೇರುವ ವರಿವಿಗೂ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿರುವ ಡಿಮಾರ್ಕೇಷನ್ ಲೈನಿನ ಉದ್ದಕ್ಕೂ ಹೊರಟು ಅಲ್ಲಿಂದ ವಾಯವ್ಯ ದಿಕ್ಕಿಗೆ ಈ ಬಂಡಿಜಾಡಿನ ಉದ್ದಕ್ಕೂ ಅದು ಕರಮಾಡು ಮಾರ್ಕಲ್ ಎಂಬದಾಗಿ ಕರಿಯಲ್ಪಟ್ಟ ಕೊಡಗು, ಹುಣಸೂರು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕುಗಳ ತ್ರಿಸಂಗಮ ಎಲ್ಲೆ ಕಂಬಗಳ ಬಳಿ ಸೇರುವ ವರಿವಿಗೂ ಹೋಗುತ್ತದೆ. ಪಶ್ಚಿಮಕ್ಕೆ—ಈ (ಕರಮಾಡು ಮಾರ್ಕಲ್) ಸ್ಥಳದಿಂದ ಎಲ್ಲೆಯು ಎಲ್ಲೆ ಕಂಬಗಳಿಂದಲೂ ಮತ್ತು ಗುಣಿಗಳಿಂದಲೂ ಹೊರಟ ಸ್ಥಳದ ವರಿವಿಗ ಗುರ್ತು ಮಾಡಿದ ಕೊಡಗು ವ ಮೈಸೂರ ಎಲ್ಲೆಯ ಉದ್ದಕ್ಕೂ ಆಸಿಕಟ್ಟೆ ಹಳ್ಳ, ಬಾಡಿಕಟ್ಟೆ ಮತ್ತು ಭದ್ರಿಕಟ್ಟೆ ಕಲ್ಪಾತಿ ಮಾರ್ಗವಾಗಿ ಲಕ್ಷ್ಮಣತೀರ್ಥ ನದಿದಾಟಿ ಈಶಾನ್ಯ ಮತ್ತು ಉತ್ತರ ದಿಕ್ಕುಗಳಿಗೆ ಹೋಗುತ್ತದೆ.
16	ಚಾಮರಾಜನಗರದ ಫಾರೆಸ್ಟು (ಚಾಮರಾಜನಗರದ ತಾಲ್ಲೂಕು)	$98\frac{1}{2}$ ಚದುರ ಮೈಲಿಗಳು	ಉತ್ತರಕ್ಕೆ—ಕಟ್ಟೇಕಲ್ಲು ಆಲದಮರದ ಬಳಿ ಗೊತ್ತು ಮಾಡಿದ ಎಲ್ಲೆ ಗುರ್ತುಗಳಿಂದ ಲೈನು ಪೂರ್ವಕ್ಕೆ ಹೊರಟು ಸೂಳೆಕಲ್ ಜಟ್ಟಿವನ್ನು ಎಡಕ್ಕೆ ಬಿಟ್ಟುಕೊಂಡು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:—(a) ಕೊಂಗನ ಕಾಡು ಹನುಮನಕಲ್ಲು, (b) ಕಂಬುಕಲ್ಲು ಕಣಿವೆಯ ಮೇಲ್ಭಾಗದಲ್ಲಿ ಗೊತ್ತು ಮಾಡಿದ ಎಲ್ಲೆ ಗುರ್ತು, (ಅಲ್ಲಿಂದ ಲೈನು ಸೇರುತ್ತದೆ.) (c) ಹೊರಟ ಸ್ಥಳವಾದ ಹೊನ್ನುಮತ್ತಿ ಬೆಟ್ಟದಬಳಿ ಗೊತ್ತು ಮಾಡಲ್ಪಟ್ಟ ಮುಗ್ಗುಗಡ್ಡೆ ಎಲ್ಲೆ ಗುರ್ತುಗಳು. ಪೂರ್ವಕ್ಕೆ—ಕೊಯಿಮುತ್ತೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳ ಫಾರೆಸ್ಟುಗಳ ಮಧ್ಯೆ ಕತರಾಯಿಸಿದ ಡಿಮಾರ್ಕೇಷನ್ ಲೈನು ಹೊನ್ನೆಮತ್ತಿ ಬೆಟ್ಟದ ಮೇಲೆ ಗೊತ್ತು ಮಾಡಿದ (ಮೂಗುರ್ಗಡ್ಡೆ) ಎಳಂದೂರು, ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲ್ಲೂಕುಗಳ ತ್ರಿಸಂಗಮ ಬಳಿ ಪ್ರಾರಂಭಿಸಿ ಹೊರಟು ಈ ಕೆಳಗೆ ಕಂಡ ಚನ್ನಾಗಿ ಕಾಣತಕ್ಕ ಕಡ್ಮಾರ್ಕುಗಳ ಉದ್ದಕ್ಕೂ ದಕ್ಷಿಣಕ್ಕೆ ಹೋಗುತ್ತದೆ:—(a) ಅತ್ತಿಮರದ ಕಣಿವೆ, (b) ದೇವಿಗೆರೆ, (c) ಕೆಂಚನಮಾರನ ಕಣಿವೆ, (d) ಗೆರ್ಸೆಕಲ್ಲು ಮತ್ತು (e) ಬೆಳ್ಳ ಮುರಿಅಿ.

ನಂಬರು.	ಫಾರೆಸ್ಟುಗಳ ವ ಪ್ಲಾಂಟೇಷನ್‌ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
16	ಚಾಮರಾಜನಗರದ ಫಾರೆಸ್ಟು (ಚಾಮರಾಜನಗರದ ತಾಲ್ಲೂಕು)	98½ ಚದುರ ಮೈಲಿಗಳು	ದಕ್ಷಿಣಕ್ಕೆ—ಮೇಲ್ಕಂಡ ಜಳ್ಳಿಮುರಿ ಆರೆಯಿಂದ ಲೈನು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಪಶ್ಚಿಮಕ್ಕೆ ಹೋಗುತ್ತದೆ:—(*a*) ಸಿರೆಗೋಡಿಹಳ್ಳ, (*b*) ಚಿಟ್ಟನಕೊಪ್ಪದ ಮಲೆ, (*c*) ಹೊನ್ನುಹೊಳೆ (ಹುಣಸೂರು ಪಾರ್ಶ್ವದ ಕೊಯಿಮುತ್ತೂರು ಮತ್ತು ಮೈಸೂರು ಫಾರೆಸ್ಟುಗಳ ಮಧ್ಯೆ ಎಲ್ಲೆ ಲೈನು), (*d*) ಕರೆಪಾಳ್ಯದ ಬಳಿ ಗೊತ್ತುಮಾಡಿದ ಎಲ್ಲೆ ಕಂಬ, (*e*) ಜೆಪ್ಪರದ ನಾಯಿಬೇಲದ ಬೆಟ್ಟ, (*f*) ದೇಬನಮಡು, (*g*) ದೊಡ್ಡನ ಆನೆಪಟ್ಟ, (*h*) ಪುಟ್ಟದ ಈರನ ಸೊಣ್ಣೆಬೆಟ್ಟ, (*i*) ಮೂಕನಪಾಳ್ಯದ ಎಲ್ಲೆ ಗುರ್ತುಗಳು, (*j*) ಗುಳಗುಡ್ಡೆ ಬೆಟ್ಟ, (*k*) ಕುಂಬಾರಗುಂಡಿ, (*l*) ಷುಮಾರು ಒಂದು ಮೈಲಿ ವರಿವಿಗೆ ಚಾಮರಾಜನಗರ, ಹಸನೂರು ರಸ್ತೆಯ ಪಾರ್ಶ್ವದಲ್ಲಿ ಗೊತ್ತುಮಾಡಿದ ಮೈಸೂರ್ ವ ಕೊಯಿಮುತ್ತೂರು ಫಾರೆಸ್ಟಿನ ಮಧ್ಯೆ ಇರುವ ಎಲ್ಲೆ ಗುರ್ತುಗಳು, (*m*) ಹೊನ್ನೇಗವುಡನಹಳ್ಳಿ ಮತ್ತು ಸಣ್ಣನಪುರದ ಎಲ್ಲೆ ಗುರ್ತುಗಳು, ಮತ್ತು (*n*) ಆತ್ತಿಕಲಿಪುರದ ಬಳಿ ಕತರಾಯಿಸಿರುವ ಹೊಸ ಡಿಮಾರ್ಕೇಷನ್ ವರಿವಿಗೆ ಮೈಸೂರು ವ ಕೊಯಿಮುತ್ತೂರು ಫಾರೆಸ್ಟುಗಳ ಮಧ್ಯೆ ಎಲ್ಲೆ ಗುರ್ತುಗಳು. ಪಶ್ಚಿಮಕ್ಕೆ ಎಂದೂರು ಮತ್ತು ಚಾಮರಾಜನಗರದ ಎಲ್ಲೆ ಗುರ್ತುಗಳು ಗೊತ್ತುಮಾಡಿರುವ ಆತ್ತಿಕಲಿಪುರದಿಂದ ಕಟ್ಟೆಕಲ್ಲು ಆಲದ ಮರದ ವರಿವಿಗೆ ಹೊಸದಾಗಿ ಕತರಾಯಿಸಿದ ಡಿಮಾರ್ಕೇಷನ್ ಲೈನು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:—(1) ಹೊಂಗಲವಾಡಿಗೆ ರಸ್ತೆ, (2) ಅಲ್ಲಿಮರ್ಗ ಗುಡ್ಡ ಮತ್ತು (3) ಅಣ್ಣತಮ್ಮಂದಿರ ಗುಡ್ಡ.
17	ಪಡಲಾಪುರ ಪ್ಲಾಂಟೇಷನ್ (ಚಾಮರಾಜನಗರದ ತಾಲ್ಲೂಕು)	40 ಎಕರೆಗಳು	ಉತ್ತರಕ್ಕೆ—ಸರ್ಕಾರದ ಬಂಜರ್ ಜಮೀನು. ಪೂರ್ವಕ್ಕೆ—ಡಿಟ್ಟೋ. ದಕ್ಷಿಣಕ್ಕೆ—ಹಾಸನೂರು, ಚಾಮರಾಜನಗರದ ರಸ್ತೆ. ಪಶ್ಚಿಮಕ್ಕೆ—ಸರ್ಕಾರದ ಬಂಜರ್ ಜಮೀನು. (ಇದು ಪಡಲಾಪುರದ [illegible] ರುದಲ್ಲಿರುತ್ತೆ ಮತ್ತು ಸರ್ವೆ ನಂ. 11, 12, [illegible] 0ರ ಭಾಗ ಅಡಗಿಸಿಕೊಂಡಿರುತ್ತೆ.)
18	ಮದ್ದೂರ ಪ್ಲಾಂಟೇಷನ್ (ಅಳಲೇಕಾಯಿ) ಗುಂಡ್ಲುಪೇಟೆ ತಾಲ್ಲೂಕು	460 ಎಕರೆಗಳು	ಉತ್ತರಕ್ಕೆ—ಮದ್ದೂರು ಗ್ರಾಮದ ಸರ್ವೆ ನಂ. 34ರ ಭಾಗ. ಪೂರ್ವಕ್ಕೆ—ಮದ್ದೂರಿರ ಕೆರೆ. ದಕ್ಷಿಣಕ್ಕೆ—ಗುಂಡ್ಲುಪೇಟೆ, ಸುಲ್ತಾನರ ಬತೇರಿ ರಸ್ತೆ. ಪಶ್ಚಿಮಕ್ಕೆ—ಮದ್ದೂರ ಗ್ರಾಮದ ಸರ್ವೆ ನಂ. 34ರ ಭಾಗ.
19	ಹೊಂಗಹಳ್ಳಿ ಪ್ಲಾಂಟೇಷನ್	50 ಎಕರೆಗಳು	ಉತ್ತರಕ್ಕೆ—ಮೂಸಹಳ್ಳಿ ಗ್ರಾಮದ ಸರ್ವೆ ನಂ. 115ರ ಭಾಗ ಮತ್ತು ಹೊಂಗೆಹಳ್ಳಿ ಬಂಡಿಜಾಡು. ಪೂರ್ವಕ್ಕೆ—ಮೂಸಹಳ್ಳಿ ಗುಡ್ಡೆ. ದಕ್ಷಿಣಕ್ಕೆ—ಕುಣಿಗಲ್ ಗ್ರಾಮದ ಎಲ್ಲೆ. ಪಶ್ಚಿಮಕ್ಕೆ—ಮೂಸಹಳ್ಳಿ ಗ್ರಾಮದ ಸರ್ವೆ ನಂ. 115ರ ಭಾಗ ಮತ್ತು ಹೊಂಗೆಹಳ್ಳಿ ಬಂಡಿಜಾಡು.

ತಾರೀಖು 25ನೇ ಅಕ್ಟೋಬರ್ 1896.

ನಂ. 4041.—ರೆ. ಫೈ. 148—95, ಈ ಕೆಳಗೆ ಕಂಡ ಗ್ರಾಮಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ.
1. ಕಾಹಳ್ಳಿ ..	} ತಿರುಮುಕೂಡ್ಲು ನರಸೀಪುರ. ..	ನಂಜನಗೂಡು.
2. ಹಾರೋಪುರ ..		
3. ಗಣಗನೂರು ..	ನಂಜನಗೂಡು. ..	ಚಾಮರಾಜನಗರ.

ತಾರೀಖು 13ನೇ ನವಂಬರ್ 1896.

ನಂ. 4358.—ರೆ. ಫೈ. 72—96, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಮೈಸೂರ ಡಿಸ್ಟ್ರಿಕ್ಟ್ ಫ್ರೆಂಚ್‌ರಾಕ್ಸಿನ ಸಬ್ ಡಿವಿಜನ್ ಆಫಿಸರ್ ಮೆಸ್ಸರ್ ಪಂಚನಾಥರಾಯರಿಗೆ 1896ನೇ ನವಂಬರ್ 7ನೇ ಮಾರ್ಕಂನಲ್ಲಿ ಒಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 16ನೇ ನವಂಬರ್ 1896.

ನಂ. 4382.—ರೆ. 1526, ಡೆಪ್ಯುಟಿ ಕಮ್ಮಿಷನರ್ ಮೆ|| ಟಿ. ವಿಯರ್ ಯವರ ಕಡೂರು ಡಿಸ್ಟ್ರಿಕ್ಟು ವ ಟ್ರೆಜರಿಯ ಚಾರ್ಜನ್ನು ಮೆಸ್ಟರ್ ಎಚ್. ಎಚ್. ಸ್ಪಾರ್ಕ್ಸ್ ಯವರಿಂದ 1896ನೇ ನವಂಬರ್ 3ನೇ ಮಾರ್ಕ ಮಿನ ಮಧ್ಯಾಹ್ನಾತ್ಪರ ತೆಗೆದುಕೊಂಡಿರುತ್ತಾರೆ.

ತಾರೀಖು 1ನೇ ನವಂಬರ 1896.

ನಂ. 4181.—ಫಾ. ಫೈ. 39—95, ಸನೆ 78ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳ ಪ್ರಕಾರ ಮೈಸೂರ ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ, 1895ನೇ ಸಪ್ಟಂಬರ್ 4ನೇ ಮರ್ಕ್ಯುಂ 2574—ಫಾ. 141ನೇ ನಂಬರ್ ಗವರ್ನಮೆಂಟ ಇಸ್ತಿಹಾರ್‌ನಾಮೆ ಅನುಸರಿಸಿ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಈ ಕೆಳಗೆ ಕಂಡ ಚಕ್ಕುಬಂದಿ ಮಾಡಿ ಮತ್ತು ವ್ಯವಸ್ಥೆ ಮಾಡಲ್ಪಟ್ಟ ಪ್ಲಾಂಟೇಷನ್ ಮೇಲ್ಕಂಡ ಫಾರೆಸ್ಟ್ ರೂಲ್ಸಿನ 1ನೇ ರೂಲ್ ಮೇರೆ "ಸ್ಟೇಟ್ ಫಾರೆಸ್ಟ್" ಆಗಿ ವಿಂಗಡಿಸಲ್ಪಡತಕ್ಕದ್ದು:—

ನಂಬರು.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ.	ಚಕ್ಕುಬಂದಿ.
7	ಮತ್ತಾವಾರ ಸಂದಲ್ ರಿಜರ್ವ್, ಚಿಕ್ಕಮಗಳೂರ್ ತಾಲ್ಲೂಕು, ಸರ್ವೆ ನಂಬರ್ 93 (ಮತ್ತಾವಾರ) ಮತ್ತು 3 (ದಂಬದಹಳ್ಳಿ)	ಷುಮಾರು 146 ಎಕರೆಗಳು.	ಉತ್ತರಕ್ಕೆ—3 ಅಡಿ ಅಗಲ 3 ಅಡಿ ಆಳ ಉಳ್ಳ ಕಾಲುವೆ ಮತ್ತು 9 ಅಡಿ ಅಗಲವುಳ್ಳ ಪಾಕ್ ಮಾಡಲ್ಪಟ್ಟ ಲೈನು ಮತ್ತಾವಾರ ಗ್ರಾಮದ ಸರ್ವೆ ನಂ. 93ರಲ್ಲಿ ಒಂದು ಸ್ಥಳದಿಂದ ಹೊರಟು ಅದೇ ನಂಬರಿನ ಉದ್ದಕ್ಕೂ "ಬೊಮ್ಮನಕೆರೆ ಮತ್ತು ಚೌಡಮ್ಮನ ವನ"ಕ್ಕೆ ಸೇರಿದ ಹಾಗೆ ಉತ್ತರಕ್ಕೆ ಹೋಗುತ್ತವೆ. ಪೂರ್ವಕ್ಕೆ—ಉತ್ತರ ದಿಕ್ಕಿನಲ್ಲಿ ಕಾಲುವೆ ಮತ್ತು ಲೈನು ಕೊನೆ ಮುಟ್ಟುವ ಸ್ಥಳಗಳಿಂದ ಕಾಲುವೆ ಮತ್ತು ಪಾಕ್ಮಾಡಲ್ಪಟ್ಟ ಲೈನು ದಕ್ಷಿಣಕ್ಕೆ ಹೊರಟು ಮತ್ತಾವಾರ ಗ್ರಾಮದ ಸರ್ವೆ ನಂ. 93 ಮತ್ತು ದಂಬದಹಳ್ಳಿ ಗ್ರಾಮದ ನಂ. 3 ಇವುಗಳ ಉದ್ದಕ್ಕೂ ಹಾದು "ಭೈರಮ್ಮನ ಗೊಳಲಕ್ಕಿಕಟ್ಟೆ" ಎಂಬದಾಗಿ ಕರೆಯಲ್ಪಟ್ಟ ಒಂದು ಸ್ಥಳದಲ್ಲಿ ಅದೇ ನಂಬರಿನಲ್ಲಿ ಕೊನೆ ಮುಟ್ಟುತ್ತವೆ. ದಕ್ಷಿಣಕ್ಕೆ—"ಭೈರಮ್ಮನ ಗೊಳಲಕ್ಕಿಕಟ್ಟೆ" ಇಂದ ಕಾಲುವೆ ಮತ್ತು ಪಾಕ್ಮಾಡಲ್ಪಟ್ಟ ಲೈನು ಪಶ್ಚಿಮಕ್ಕೆ ತಿರುಗಿ ದಂಬದಹಳ್ಳಿಯ ಸರ್ವೆ ನಂ. 3ರ ಉದ್ದಕ್ಕೂ ಹಾದು ದಂಬದಹಳ್ಳಿಯಿಂದ ಆಲದ ಗದ್ದೆಗೆ ಹೋಗುವ ಕಾಲುದಾರಿಯನ್ನು ದಾಟಿ ಅದೇ ಗ್ರಾಮದ ಸರ್ವೆ ನಂ. 3ರಲ್ಲಿ ಕೊನೆಮುಟ್ಟುತ್ತವೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಕಾಲುವೆ ಮತ್ತು ಲೈನು ಈಶಾನ್ಯಕ್ಕೆ ತಿರುಗಿ ದಂಬದಹಳ್ಳಿಯ ಸರ್ವೆ ನಂ. 3 ಮತ್ತು ಮತ್ತಾವಾರದ ನಂ. 93 ಇವುಗಳ ಉದ್ದಕ್ಕೂ ಅವು ಹೊರಟ ಸ್ಥಳವನ್ನು ಸಂಧಿಸುವವರೆಗೂ ಹೋಗುತ್ತವೆ.

ತಾರೀಖು 17ನೇ ನವಂಬರ 1896.

ನಂ. 4403–ರೆ. 1532, ಇದರಡಿಕಂಡ ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿಗಳು ಹುಕ್ಕುಂ ಮಾಡಲ್ಪಟ್ಟಿರುತ್ತವೆ:—

ಮೆಸ್ಟರ್ ಎಂ. ಕೃಷ್ಣಯ್ಯಂಗಾರು ಶಿವಮೊಗ್ಗೆಯಿಂದ ಕೋಲಾರಕ್ಕೆ (ಕಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ಮೆಸ್ಟರ್ ಎಂ. ಹೊನ್ನಪ್ಪನಾಯಿಡು ಯವರು ಹಾಸನದಿಂದ ಶಿವಮೊಗ್ಗೆಗೆ (ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ಮೆಸ್ಟರ್ ವಿ. ಆರ್. ತ್ಯಾಗರಾಜಅಯ್ಯರ್ ಯವರು ಮೆಸ್ಟರ್ ಕೃಷ್ಣಯ್ಯಂಗಾರ್ರಿಗೆ ಚಾರ್ಜ್ ಒಪ್ಪಿಸಿದ ತಕ್ಷಣವೆ ಸೆಕ್ರೆಟರಿಯವರ ಆಫೀಸಿಗೆ ಸೇರತಕ್ಕದ್ದು.

ತಾರೀಖು 18ನೇ ನವಂಬರ 1896.

ನಂ. 4432.–ರೆ. 1548, ಇದರಡಿ ಕಂಡ ಡೆಪ್ಯುಟಿ ಕಮಿಷನರುಗಳ ವರ್ಗಾವರ್ಗಿಗಳು ಹುಕ್ಕುಂ ಮಾಡಲ್ಪಟ್ಟಿರುತ್ತವೆ:—

ಮೆಸ್ಟರ್ ಪಿ. ರಂಗಸ್ವಾಮಯ್ಯಂಗಾರ್ರು ಶಿವಮೊಗ್ಗೆಯಿಂದ ಕೋಲಾರಕ್ಕೆ (ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಯವರಿಗೆ ಚಾರ್ಜನ್ನು ಕೊಟ್ಟುಬಿಟ್ಟು ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಮೆಸ್ಟರ್ ಸಿ. ಮಾದಯ್ಯನವರು ಕೋಲಾರದಿಂದ ಮೈಸೂರಿಗೆ. (ಚಾರ್ಜು ಒಪ್ಪಿಸಿದ ತರುವಾಯು ಕೆಲಸದ ಮೇಲೆ ಹಾಜರಾಗತಕ್ಕದ್ದು.)

ಮೆಸ್ಟರ್ ಬಿ. ಕೆ. ವೆಂಕಟವರದಯ್ಯಂಗಾರ್ರು ಮೈಸೂರಿಂದ ಶಿವಮೊಗ್ಗೆಗೇ. ಚಾರ್ಜು ಒಪ್ಪಿಸಿದ ತರುವಾಯು ಕೆಲಸದ ಮೇಲೆ ಹಾಜರಾಗತಕ್ಕದ್ದು.)

ನಂ. 4444.—ಫೈ. 346, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಸ್ಟೇಟ್ ಹುಜೂರ್ ಟ್ರೆಜರಿಯ ಇನ್‌ಚಾರ್ಜು ಆಫೀಸರ್ ಮೆಸ್ಟರ್ ಪಿ. ವೀರಾಸಾಮಿ ಮೊದಲಿಯಾರ್ರಿಗೆ ಮಾಹೆವಾರು 19ನೇ ಮರ್ಕ್ಯುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಟ್ರೆಜರರ್ ಮೆಸ್ಟರ್ ರಾಯಲು ಚೆಟ್ಟಿಯವರು ಸದರೀ ಮೆಸ್ಟರ್ ವೀರಾಸಾಮಿ ಮೊದಲಿಯಾರ್ರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಟ್ರೆಜರಿಯ ಹಂಗಾಮಿ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 18—19ನೇ ನವಂಬರ 1896.

ನಂ. 4464.—ರೆ. ಫೈ. 77.—96, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಕೋಲಾರ್ ಡಿಸ್ಟ್ರಿಕ್ಟ್ ಗುಡಿಬಂಡ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್ ಸಿ. ಕೃಷ್ಣಮನಾಯಿಡು ಯವರಿಗೆ, 1896ನೇ ನವಂಬರ 10ನೇ ಮಾರ್ಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾವಧ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 20ನೇ ನಂಬಬರ 1896.

ನಂ. 4511.—ಫೈ 350, ಕಂಟ್ರೋಲರ್ ಆಫಿಸ ಮಾನೇಜರ ಮೆಸ್ಟರ ಟಿ. ವೈಯ್ಯಾಪುರಿ ಚೆಟ್ಟಿಯವರು 1896ನೇ ನವಂಬರ 11ನೇ ಮಾರ್ಕ್ಕಂ ಲಾಗಾಯತು ಸದರೀ ಆಫಿಸಿನ ಚೀಫ್ ಸೂಪರಿಂಟೆಂಡೆಂಟರಾಗಿ ಮೊಕರರ್ಮಾಡಲ್ಪರುತ್ತಾರೆ.

ನಂ. 4573.—ಫಾ. ಫೈ. 119—95, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರವೇಟರ್ ಮೆಸ್ಟರ ಎಚ್. ಮುತ್ತಪ್ಪನವರಿಗೆ 1896ನೇ ಅಕ್ಟೋಬರ 24ನೇ ಮಾರ್ಕ್ಕಂ ಲಾಗಾಯತು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 21ನೇ ನವಂಬರ 1896.

ನಂ. 4529.—ರೆ. 1574, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟ್ ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್ ಮೆಸ್ಟರ ಬಿ. ಜಿ. ಕೃಷ್ಣಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯ.ತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸಿಣಿಯಂ ಅಸಿಸ್ಟೆಂಟ್ ಕಮ್ಮಿಷನರ್ ಯವರು ಸದರೀ ಮೆಸ್ಟರ ಕೃಷ್ಣಯ್ಯಂಗಾರ್ರು ರಜಾದ ಮೇಲಿರುವ ಕಾಲದಲ್ಲಿ ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿ ಇರತಕ್ಕದ್ದು.

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟೆರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂ. 646. ತಾರೀಖು 18ನೇ ನವಂಬರ 1896. ಬೆಂಗಳೂರು.

ನಗರ ತಾಲ್ಲೂಕು ಮಸರೂರು ಮಾಗಣಿ ಕೆಂಚನಾಲಿ ಗ್ರಾಮದಲ್ಲಿ ಇರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ಶ್ರೀ ಮಾರಮ್ಮ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನು ಈ ಲಾಗಾಯತು 2 ವರುಷಗಳ ಪರ್ಯಂತರ ಧರ್ಮದರ್ಶಿಗಳಾಗಿ ನೇಮಿಸಿಇಧೆ.

1. ಶಾನುಭಾಗ ಬಾಳಪ್ಪನವರು.
2. ಚಿನವಳ್ಳಿ ಪಟೇಲ್ ಶಾಂತವೀರಪ್ಪನವರು.
3. ಜೋಳೂರು ಪಟೇಲ ನಾಗಪ್ಪನವರು.
4. ಕೆಂಚನಾಲಿ ಪಟೇಲ್ ಕಾಡಬಸಯ್ಯನವರು.

ವಿ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಸೆಕ್ರೆಟೆರಿ.

೬೮೩

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಛಾಯಿಸ್ ಆದ್ದು. [ಸಂ. 47.

ಬೆಂಗಳೂರು, ಗುರುವಾರ, ನವಂಬರ್ ತಾ॥ 26, ಸ್ತ 1896.

IIನೇ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ಪ್ರತಿಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್‍ರ್ಯಾಮರವರ ಡಿಟೋ	,, 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ 10½ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ 65.

ಮೃತಪಟ್ಟ ದೇವಾಂಗದ ಸೊಂಡೇಕೊಪ್ಪದ ನರಸಿಂಹಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ರಣವೀರಶೆಟ್ಟಿ ಪೇಟೆಯಲ್ಲಿರುವ ಭೋಗದ ನರಸಿಂಹಯ್ಯ ಮೈನರ ಗಾರ್ಡಿಯನ್ 1ನೇ ತಾಯಿ ರಾಮಕ್ಕ, 2ನೇ ಮಲತಾಯಿ ಮುನಿಯಮ್ಮ ಈ ಮೃತಪಟ್ಟ ಸದರೀ ಸೊಂಡೆಕೊಪ್ಪದ ನರಸಿಂಹಯ್ಯನವರಿಗೆ ಹೆಂಡತಿಯರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ರಣವೀರಶೆಟ್ಟಿ ಪೇಟೆ ಸ್ಥಳದ ಭೋಗದ ನರಸಿಂಹಯ್ಯ ಮೈನರ ಗಾರ್ಡಿಯನ್ 1ನೇ ರಾಮಕ್ಕ, 2ನೇ ಮುನಿಯಮ್ಮ ಡಿಟೋ ಪೇಟೆ ವಾಸಸ್ಥರಾಗಿ ಮೃತಪಟ್ಟ ಸೊಂಡೆಕೊಪ್ಪದ ನರಸಿಂಹಯ್ಯನವರ ಜಿಂದಗಿ ಬಗ್ಗೆಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ರಾಮಕ್ಕ, 2ನೇ ಮುನಿಯಮ್ಮ ಇವರ ಅರ್ಜಿಯನ್ನು 1896ನೇ ಇಸವಿ ಡಿಸೆಂಬರ ತಿಂಗಳ ತಾರೀಖು 17ರಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೊಂಡೆಕೊಪ್ಪದ ನರಸಿಂಹಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ನವೆಂಬರ ತಿಂಗಳ 13ನೇ ತಾರೀಖಿನಲ್ಲಿ ಕೋರ್ಟಿನ ಮೊಹರ ನಿ ನಮ್ಮ ದಸ್ತಖತ್ತುಡನೆ ಕೊಡೋಣಾಗಿದೆ.

ಸಿ. ಕ್ರಸ್,
ಡಿಸ್ಟ್ರಿಕ್ಟ ಜಡ್ಜ.

ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 23ನೇ ನವೆಂಬರ 1896.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೆಂಗಳೂರು ಸಿಟಿ. ಕಬ್ಬನ್ ಸಾಹೇಬರ ಪ್ಯಾಟೆಗೆ ಸೇರಿದ ಗುಂಪು ಟದಲ್ಲಿದ್ದು ಬೇವಾರ್ಸಿ ತರೀಕ ಮೃತಪಟ್ಟ ಸುಲ್ತಾನಮ್ಮನೆಂಬವಳ ಬಾಬತು ಐದನೇ ಗುಮ್ಮಟದ 5ನೇ ನಂಬರ ಗಲ್ಲಿಯಲ್ಲಿರುವ ಮ್ಯುನಿಸಿಪಲ್ ನಂಬರ 3, 4, 5, 6, 7, 8 ಮತ್ತು ಲಂಗಡಾ ಹುಸೇನಸಾಬಿ ಗಲ್ಲಿಯಲ್ಲಿ ಇರುವ ನಂಬರ 4 ಈ ನಂಬರಗಳುಳ್ಳ ಮನೆಗಳನ್ನು ಐದನೇ ಮನೆಗಳ ಬಳಿಯಲ್ಲಿ ಬೆಂಗಳೂರು ತಾಲ್ಲೂಕು ಅಮಲ್ದಾರ ರೂಬರೂ ಸನ್ ಮಜಕೂರು ಡಿಸೆಂಬರ ಮಾಹೆ 14ನೇ ತಾರೀಖು ದಿ॥ 11 ಘಂಟೆಗೆ ಹರಾಜ್ ಮಾಡಲ್ಪಡುತ್ತೆಯಾಗಿ ಆ ಕಾಲಕ್ಕೆ ಸರಿಯಾಗಿ ಖಾಯಿಷ್ಮಾಡತಕ್ಕವರು ಹಾಜರಾಗಿ ಛಡಸವಾಲ್ಮಾಡಿ ತೆಗೆದುಕೊಳ್ಳಬಹುದು. ಆ ರೀತಿ ತೆಗೆದುಕೊಂಡವರು ಹರಾಜ್ ಖೈದಾದ ಕೂಡಲೆ ಶೇಕಡಾ 25 ರೂಪಾಯಿಗಳ ಮೇರಿಗೆ ಡಿಪಾಜಿಟ್ ಹಾಜರ್ಮಾಡಬೇಕು. ತರುವಾಯ 15 ದಿವಸಗಳೊಳಗಾಗಿ ಪೂರಾ ಮೊಬಲಗು ಹಾಜರ್ಮಾಡಬೇಕು. ಡಿಸ್ಟ್ರಿಕ್ಟು ಮಾಜಿಸ್ಟ್ರೇಟರವರಿಂದ ಹರಾಜ್ ಮಂಜೂರಾಗಿ ಬಂದ ಬಳಿಕ ಮನೆಗಳು ಹರಾಜಿನಲ್ಲಿ ಪಡೆದವರ ಸುಪರ್ದು ಮಾಡಲಾದೀತು.

ಮೇಲೆ ನಮೂದಿಸಿರುವ ಡಿಪಾಜಿಟ್ ಮತ್ತು ಪೂರಾ ಮೊಬಲಗು ಹಾಜರ್ಮಾಡದೆ ತಪ್ಪಿದಲ್ಲಿ ಪುನಹಾ ಹರಾಜ್ ಮಾಡಲ್ಪಡುತ್ತೆ. ಲುಕ್ಸಾನ್ ಆದಲ್ಲಿ ಕಮ್ಮಿ ಬೀಳುವ ಮೊಬಲಗ್ಗೆ ಮೊದಲನೇ ಛಡಸವಾಲ್ದಾರನನ್ನು ಗುರಿಪಡಿಸಲ್ಪಡುತ್ತೆ.

ಎಂ. ಅಂಣಾಜಿರಾವ್,
ಘಾರ್ ಡೆಪ್ಯುಟಿ ಕಮ್ಮಿಷನರ ಮತ್ತು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 2ನೇ ಸೆಪ್ಟಂಬರ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವೆಂಬರ 1896.
ಡಿಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2\. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಗೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯೆರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3\. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4\. ಪ್ರತಿ ಕೋಠಿಯಲ್ಲಿಯು ವಿಕರಿ ಬಗ್ಗೆ ಪಡಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿದೆ.

ಹಳೇ ತರಹೆ ಪ್ರಕಾರ.

ಸಂದಲ್ ವಿವರ	ಬೆಂಗಳೂರು ಕೋರಿ.		ಹಾಸನ ಕೋರಿ.		ಚಿಕ್ಕಮಗಳೂರು ಕೋರಿ.		ಶಿವಮೊಗ್ಗಾ ಕೋರಿ.		ಸಾಗರ ಕೋರಿ.		ತೀರ್ಥಹಳ್ಳಿ ಕೋರಿ.	
	ಟ.	ಹ.	ಟ.	ಹ.	ಟ.	ಹ.	ಟ.	ಹ.	ಟ.	ಹ.	ಟ.	ಹ.
ಸಲಾಕಿ ಅವ್ವಲ್ ..	1	..	..	5	..	15	..	..		15	..	...
ಡಿಟೋ ದುಯಂ ..	..	5	1	5	2	5	3	5	1	..	..	2
ಡಿಟೋ ಸಿಯಂ ..	1	10	7	10	5	5	12	15	8	..	4	..
ಡಿಟೋ ಚಹರಂ ..	45	15	30	..	44	..	32	10	12	..	7	..
ಡಿಟೋ ಪಂಚಂ ..	7	..	10	..	10	10	37	.	25	..	14	..
ಚಿಕ್ಕ ಸಲಾಕಿ ..	1	2	1	..	..	..	..	..	..	..	..	..
ದೊಡ್ಡ ಜಡಾ ...	21	..			33	..	66	5	40	..	25	..
ಚಿಕ್ಕ ಜಡಾ ..	3	15	35	..	5	..	8	..	4	..	2	..
ಜಡದ ರಂಚೆ ..	1	5			7	..	..	..	...	..	...	..
ದೊಡ್ಡ ಜಜ್ಜು ..	18	..	61	5	30	..	94	..	65	..	43	..
ಚಿಕ್ಕ ಜಜ್ಜು ..	3	5			11	..						
ಬಗರದದ್ದು ..	2	15	6	..	5	5	26	.	9	..	13	10
ಐರ್ ವಾಜಕೆ ಗುಬಗರು ..	1	..	3	..	..	10	..	..	..	..	..	..
ಗರಗಸ ಬುಕಣಿ ..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಟ .	1	10	1	..	6	5	15	10	15	..	16	..
ಚಿಕ್ಕ ಡಿಟೋ ..	..	..	2	..								
ಕೆತ್ತೆ ಐರ್ ಚಿಲ್ಟ ..	6	..	..	..	.	..	..	..	..	..	..	...
ಹತ್ರಿ ಚಿಲ್ಟ ..	1	6	..	..	..	..	..	..	..	..	..	..
ಮಿಲ್ವ ಚಿಲ್ಟ ..	17	10	30	..	21	5	30	..	12	..	9	..
ಬಸೋಲಿ ಬುಕಣಿ ..	1	15	10	..	14	..	14	15	5	10	6	8
ಕೊಯಿತ ಚಿಲ್ಟ ..	..	.	1	10	3	10	9	..	2	..	1	..
ಜುಮ್ಲಾ ..	135	15	20[illegible]	[illegible]	200		350	..	200	..	150	..

ಹೊಸ ಯಾ ಬೋಂಬಾಯಿ ತರಹೆ ಪ್ರಕಾರ.

ಸಂಬಲ್ ವಿವರ.	ಹುಣಸೂರು ಕೋರಿ.		ಶ್ರೀರಂಗಪಟ್ಟಣ ಕೋರಿ.	
	ಟ.	ಹ.	ಟ.	ಹ.
ವಿಲಾಯಿತಿ ಬಡ್ ..	1	.	..	10
ಚೈನಾ ಬಡ್ ..	20	..	30	
ಪಂಚಂ ..	28	..	89	..
ಚಿಕ್ಕ ಸಲಾಕಿ, ಘೋಟ್ನ (ಅವ್ವಲ್) ..	3	...	5	..
ಡಿಟೋ (ದುಯಂ) ..	2	..	1	..
ಘಾಟ ಬಡಲ ..	50	..	30	..
ಜಡಾ (ಅವ್ವಲ್) ..	25	..	25	..
ಡಿಟೋ (ದುಯಂ) ..	25	..	12	..
ಡಿಟೋ (ಸಿಯಂ)	20	..	8	..
ಡಿಟೋ (ಚಹರಂ) .	7	..	7	..
ಜಜ್ಜು (ಅವ್ವಲ್) ..	50	...	25	..
ಡಿಟೋ (ದುಯಂ) ..	40	15	15	..
ಬಗರದದ್ದು ..	5	..	12	..
ಐರ್ ಬಗರು ..	5	..	14	..
ಚಿರಿಯಾ ..	5	..	5	..
ಐರ್ ಚಿಲ್ಟ (ಅವ್ವಲ್) ..	4	..	6	..
ಡಿಟೋ (ದುಯಂ) ..	6	..	6	10
ಹತ್ರಿ ಚಿಲ್ಟ ..	1	..	2	10
ಗರಗಸ ಬುಕಣಿ ..	1	..	..	10
ಮಿಲ್ಲ ಚಿಲ್ಟ ..	30	..	50	..
ಬಸೋಲಾ ಬುಕಣಿ ..	7	.	10	..
ಜೇಗು ಮಿಲ್ವ ..	..	..	5	..
ಕಳೆದವರುಷದ ಜಡಾ	113	15	12	15
ಸ್ಪೆಷಲ್ ಕ್ಲಾಸ್ ..	..	10	...	..
ಟೋಟಲ್ ..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಯೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮುರ್ಸಂ 15230.—ಆರ್. ಎಫ್. 155—92ನೇ ನಂಬರ ರೂಲ್ಸ್ಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಯೆ ಪ್ರಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಇತರ ಆಫಿಸರಿಂದ ಆಗಲಿ ಶೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಚಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟ್ಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಆದರ ತಪ್ಸೀಲ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನು ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫಿಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದೀಯನ್ನು 5ನೇ ದಿನ ಆಖ್ಯೆರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫಿಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನು ಬರೆದು ಅದಕ್ಕೆ ತಮ್ಮ ಚಿಕ್ಕ ಸ್ಯೆ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಆದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫಿಸರಂಗೆ ಯಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ 'ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫಿಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಶೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಇಲ್ಲದ ರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫಿಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ಉಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಎಂದಿಗೂ ಎಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನು ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫಿಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫಿಸರರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫಿಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ ಹಾಜರಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯು ವಜಾ ಮಾಡಲ್ಪಡತಕ್ಕದ್ದು. ಏನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫಿಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗ ಹೆಚ್ಚು ಕಡಿಮೆ ಸಂಭವಿಸದಂತೆ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸುಮಾಡಲ್ಪಟ್ಟ ಮರಗಳು ವಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲ ಹಾಜರಾಗುವಂತೆ ಖರೀ

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡೆದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲ ವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‍ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು, ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ಒಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ಒಂದಕ್ಕೆ ಟನ್ ಒಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ಒಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳ ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ಉಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್‍ಸ್ಪೆಕ್ಟರ್ ಜನರಲ್‍ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‍ಚಾರ್ಜ್ ಆಫೀಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‍ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‍ಗಳೂ ಉಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟೆ ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಶೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‍ಬಾಷ್ ಜನಗಳಿಂದ ಮಾರಲ್ಪಡಕೂಡದು ಅಥವಾ ರೇಂಜ್ ಇನ್‍ಛಾರ್ಜ್ ಫಾರೆಸ್ಟ್ ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಇಲ್ಲದೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‍ಛಾರ್ಜ್ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಜವಾಬ್‍ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛಿಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ಪಡೆದಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್‍ಸರ್ವೇಟರ್ ಆಫ್ ಫಾರೆಸ್ಟ್ಸ್.

ಕೋಲಾರ್ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮಾ.

ತಾರೀಖು 2ನೇ ನವೆಂಬರ್ 1896ನೇ ಇಸವಿ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟು, ಚಿಕ್ಕಬಳ್ಳಾಪುರ ತಾಲ್ಲೂಕು, ನಂದೀ ಸ್ಟೇಟ್ ಫಾರೆಸ್ಟಿನಲ್ಲಿ (ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ರಸ್ತೆಗೆ ದಕ್ಷಿಣ ಪ್ರದೇಶದಲ್ಲಿರುವ) ಬಿದರುಗಳನ್ನು 1897ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು 1898ನೇ ಇಸವಿ ಜೂನ್ ಆಖೈರುವರಿಗೂ ಅಂದರೆ 18 ತಿಂಗಳು ವರಿಗೂ ಕಡದು ಸಾಗಿಸಿಕೊಳ್ಳತಕ್ಕ ಹಕ್ಕುದಾರಿಯು 1896ನೇ ಇಸವಿ ಡಿಸೆಂಬರು ತಿಂಗಳು 15ನೇ ತಾರೀಖು ಮಧ್ಯಾಹ್ನ 12 ಘಂಟೆ ಸಮಯದಲ್ಲಿ ನಂದೀಮೊಕ್ಕಾಂನಲ್ಲಿ ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಹರಾಜು ಮಾಡಲ್ಪಡುತ್ತೆ.

2. ಹರಾಜು ಫಾರೆಸ್ಟು ಇಲಾಖಾ ಕನ್‍ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

3. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ಠೇವಣಿ ಕಟ್ಟತಕ್ಕದ್ದು. ಇದಕ್ಕೆ ತಪ್ಪಿದರೆ ಅವನನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜು ಮಾಡಲ್ಪಡುವದು; ಆದರೆ, ಅದರಿಂದ ಉಂಟಾಗುವ ಆದಾಯದಲ್ಲಿ ಸದರೀ ಯವನಿಗೆ ಏನೂ ದೊರಿಯಲಾರದು. ಬಾಕಿ ಕೊಡಬೇಕಾದ ಮುಕ್ಕಾಲು ಹಿಸ್ಸೆಯನ್ನು ಮೂರು ಸಮ ಖಿಸ್ತಿನಲ್ಲಿ ಅಂದರೆ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿಮಾಡತಕ್ಕದ್ದು. ಯಾವ ಖಿಸ್ತನ್ನಾಗಲಿ ವಾಯಿದೆಗೆ ಸರಿಯಾಗಿ ಪಾವತಿ

ಮಾಡಲು ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಡುವದಲ್ಲದೆ, ಕಂಟ್ರಾಕ್ಟರು ಕತರಾವಣೆಮಾಡಿ ಜಮಾಯಿಸಿರುವ ಬಿದರುಗಳನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲಾದೀತು. ಮತ್ತು ಇವನಿಂದ ಬರಬೇಕಾದ ಕಂಟ್ರಾಕ್ಟು ಹಣದ ಬಾಕಿಯನ್ನು ರೆವಿನ್ಯೂ ಕಂದಾಯದಂತೆ ಭಾವಿಸಿ ವಸೂಲ್ಮಾಡಲಾಧೀತು.

ಖಿಸ್ತುಗಳು.			ತಾರೀಖು.
I	..	..	1ನೇ ಮಾರ್ಚಿ 1897ನೇ ಇಸವಿ.
II	..	..	1ನೇ ಸೆಪ್ಟಂಬರ್ 1897ನೇ ಇಸವಿ.
III	..	..	5ನೇ ಜನವರಿ 1998ನೇ ಇಸವಿ.

4. ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿಯನ್ನು ಕಂಟ್ರಾಕ್ಟರಿಗೆ ತಿಳಿಯಪಡಿಸಿದ ಕೂಡ್ಲೆ ಇವನು ಮೇಲ್ಕಂಡ ಮತ್ತು ಈ ಕೆಳಗೆ ವಿವರಿಸಲ್ಪಟ್ಟ ಷರತ್ತುಗಳ ಕಂಡು ನಡದು ಕೊಳ್ಳತಕ್ಕಬಗ್ಗೆ ಛಾಪಾ ಕಾಗದದಲ್ಲಿ ಒಂದು ಮುಚ್ಚಳಿಕೆಯನ್ನು ಬರದು ಕೊಡತಕ್ಕದ್ದು.

5. ಹರಾಜು ಮಾಡಲ್ಪಡುವ ಪ್ರದೇಶದಲ್ಲಿ ಇರುವ ಒಣ ಬಿದರುಗಳನ್ನೆಲ್ಲಾ ಕಂಟ್ರಾಕ್ಟರು ಕತರಾವಣೆ ಮಾಡಿ ಅಥವಾ ಬೇರು ಸಹಿತ ಕಿತ್ತು ಸಾಗಿಸಿಕೊಂಡು ಹೋಗಬಹುದು, ಆದರೆ ಹಸೀ ಬಿದರ ಗಳನ್ನು ಕಡಿಯುವದರಲ್ಲಿ ಪ್ರತಿ ಯೊಂದು ಪೊದೆಯಲ್ಲಿಯೂ ಎಂಟು ಹಸೀ ಬಿದರುಗಳನ್ನು ಬಿಟ್ಟು ಮಿಕ್ಕವುಗಳನ್ನು ಸಾಧ್ಯವಾದ ಮಟ್ಟಿಗೂ ಭೂ ಮಟ್ಟಕ್ಕೆ ಸರಿಯಾಗಿ ಕಡಿಯತಕ್ಕದ್ದು.

6. ಫಾರೆಸ್ಟು ಇಲಾಖೆಯವರು ಮುಂಚಿತವಾಗಿ ಗುರ್ತು ಮಾಡಿಕೊಡುವ 100—200 ಎಕರೆ ವಿಸ್ತೀರ್ಣವುಳ್ಳ ಪ್ರತಿ ಯೊಂದು ಬ್ಲಾಕಿನಲ್ಲಿಯೂ ಒಂದು ಪ್ರದೇಶದಿಂದ ಪ್ರಾರಂಭಮಾಡಿ ಕ್ರಮವಾಗಿ ಕತರಾವಣೆಮಾಡಿಕೊಂಡು ಹೋಗಬೇಕೆ ಹೊರ್ತು ಯಾವ ಕಾರಣದಿಂದಲೇ ಯಾಗಲಿ ಜಂಗಲಿನ ಎಲ್ಲಾ ಪ್ರದೇಶದಲ್ಲಿಯೂ ಏಕಕಾಲದಲ್ಲಿ ಮನಸ್ವೀ ಕತರಾವಣೆ ಮಾಡಕೂಡದು.

7. ಕತರಾವಣೆ ಮಾಡಿದ ಪ್ರದೇಶದಿಂದ ಬಿದರುಗಳನ್ನು ರಪ್ತು ಮಾಡುವದಕ್ಕೆ ಮೊದಲೆ ಪ್ರತಿಯೊಂದು ಗಾಡಿಗೂ ಫಾರೆಸ್ಟು ಇಲಾಖೆಯವರಿಂದ ಒಂದು ವೇ ಪರಮಿಟ್ ಪಡಿಯತಕ್ಕದ್ದು. ವೇ ಪರಮಿಟ್ ಇಲ್ಲದ ಭರ್ತಿಗಾಡಿಗಳನ್ನು ಫಾರೆಸ್ಟು, ಪೋಲೀಸ್ ಅಥವಾ ರೆವಿನ್ಯೂ ನವುಕರರು ತಡೆ ಮಾಡಬಹುದು.

8. ಕಂಟ್ರಾಕ್ಟರಿಗೆ ಇಷ್ಟವಿದ್ದಲ್ಲಿ ಒಣ ಬಿದರುಗಳಿಂದಲಾಗಲಿ ಅಥವಾ ಅವುಗಳ ಬೇರುಗಳಿಂದಲಾಗಲಿ ಮಳೆಗಾಲದಲ್ಲಿ ಇದ್ದಲು ಸುಡುವದಕ್ಕೆ ಅಪ್ಪಣೆ ಕೊಡಲಾಧೀತು.

9. ಪ್ರತಿಯೊಂದು ಬ್ಲಾಕಿನಲ್ಲಿಯೂ ಕತರಾವಣೆ ಮಾಡುವ ಬಿದರುಗಳನ್ನು ತಲೆಕೊಂಬೆ ಮತ್ತು ರಂಬೆಗಳನ್ನು ಸಹ ಮತ್ತೊಂದು ಬ್ಲಾಕು ಗುರ್ತು ಮಾಡಲ್ಪಡುವದಕ್ಕೆ ತತ್ಪೂರ್ವವೆ ಫಾರೆಸ್ಟಿನಿಂದ ಹೊರಗೆ ಸಾಗಿಸತಕ್ಕದ್ದು. ತಪ್ಪಿದರೆ ಬಿಡಲ್ಪಟ್ಟ ಬಾಬನ್ನು ಸರ್ಕಾರದ ಖಾಯಿದೆ ಮೇಲೆ ನಿಗಾಯಿಟ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಗೆ ಯುಕ್ತ ತೋರಿದ ರೀತಿಯಲ್ಲ ವಿಲೇವಾರಿ ಮಾಡಲು ಅವರು ಸ್ವತಂತ್ರರಾಗಿರುತ್ತಾರೆ.

ಬಿ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್.

ತುಮಕೂರು ಡಿಸ್ಟ್ರಿಕ್ಟು.

ಫಾರೆಸ್ಟು ಡಿಪಾರ್ಟ್ಮೆಂಟ್.

ಸ್ 1896ನೇ ಇಸವಿ ನವಂಬರು ತಾರೀಖು 8ರಲ್ಲು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ,—ತುಮಕೂರು, ಮದ್ದಗಿರಿ ಡಿಪೋಗಳಲ್ಲಿಯೂ, ಗುಬ್ಬಿ ತಾಲ್ಲೂಕು ಚನ್ನಶೆಟ್ಟಿಹಳ್ಳಿ ನಿಟಗುಂಟ ಫಾರ್ಟೇಷನ್ಗಳಲ್ಲಿಯೂ, ಕೆಳಗೆ ನಮೂದಿಸಿರತಕ್ಕ ತಾರೀಖು ಮತ್ತು ಸ್ಥಳಗಳಲ್ಲಿ ಸಾಮಾನುಗಳನ್ನು ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಹರಾಜ್ ಮಾಡಲ್ಪಡುತ್ತೆ.

ತುಮಕೂರು ಡಿಪೋ 11ನೇ ಡಿಸೆಂಬರ್ 1896ನೇ ಇಸವಿ.

ತರಹೆ.		ನಂಬರ್.	ಸಲೆ.			ಮಣ.	ಸೇರು.	
			ಅಡಿ.	ಅಂಗುಲ.	ಸೆಂಟ್ಸ್.			
ಜೇನುತುಪ್ಪ	..	..	..	..	..	51	27	
ಜೇನು ಮೇಣ	..	..	..	..	..	7	..	
ತ್ಯಾಗದ ತೀರುಗಳು	..	171	208	7	6	..	..	
ಕ್ಯಾಸರೀನ ತೀರುಗಳು	..	983	1737	3	3	..	..	

ಮದ್ದಗಿರಿ ಡಿಪೋ 15ನೇ ಡಿಸೆಂಬರ್ 1896ನೇ ಇಸವಿ.

ತರಹೆ.		ನಂಬರ್.	ಸಲೆ.			ಮಣ.	ಸೇರು.
			ಅಡಿ.	ಅಂಗುಲ.	ಸೆಂಟ್ಸ್.		
ಜೇನುತುಪ್ಪ	..	..	..	..	..	29	1
ಜೇನು ಮೇಣ	..	..	..	..	..	4	21
ತ್ಯಾಗದ ತೀರುಗಳು	..	299	280	10	3	..	..

ಗುಬ್ಬಿ ತಾಲ್ಲೂಕು ಚನ್ನಸೆಟ್ಟಿಹಳ್ಳಿ ಸಿಟಿಗುಂಟ ಪ್ಲ್ಯಾಂಟೇಷನ್, 21ನೇ ಡಿಸೆಂಬರ್ 1896ನೇ ಇಸವಿ.

ತರಹೆ.		ನಂಬರ್.	ಸಲೆ.			ಷರಾ.
			ಅಡಿ.	ಅಂಗುಲ.	ಸೆಂಟ್ಸ್.	
ಕ್ಯಾಸರೀನ ತೀರುಗಳು	..	1841	..	..	..	ನಿಂತಿರುವ ವಣ ಮರಗಳು.

ಷರತ್ತುಗಳು.—ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಹರಾಜು ಖೈದ.ದ ಕೂಡ್ಲೆ ಕಾಲು ಹಿಸ್ಸೆ ಮೊಬಲಗು ಠೇವಣಿ ತರೀಕ್ ಹಾಜರ್‍ಮಾಡಬೇಕು. ಬಾಕಿ ಮೊಬಲಗನ್ನ ಹರಾಜು ತಾರೀಖು ಲಾಗಾಯತು ಒಂದು ವಾರದ ವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೇ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜುದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳನ್ನೆಲ್ಲಾ ಹಣ ಪಾವತಿ ಮಾಡಿದ ತಾರೀಖು ಲಾಗಾಯತು 5 ದಿವಸಗಳೊಳಗಾಗಿ ಸಾಗಿಸಿಕೊಳ್ಳಬೇಕು ಪ್ಲ್ಯಾಂಟೇಷನ್‍ಗಳಲ್ಲಿ ವಣಗಿ ನಿಂತಿರುವ ಕ್ಯಾಸರೀನ ಮರಗಳು ಗುರ್ತು ಮಾಡಿ ನಂಬರು ಹಾಕಲ್ಪಟ್ಟಿರುತ್ತವೆ. ಖರೀದಿದಾರನು ಗುರ್ತು ಮಾಡಿರುವ ವಣ ಮರಗಳನ್ನ ಮಾತ್ರವೇ ಕಡಿದು 1896ನೇ ಇಸವಿ ಡಿಸೆಂಬರ್ ಆಖೈರ್ ವಳಗಾಗಿ ಸದರೀ ಮರಗಳನ್ನ ಪ್ಲ್ಯಾಂಟೇಷನ್‍ಗಳ ಹದ್ದು ಬಸ್ತು ಹೊರಭಾಗದಲ್ಲಿರುವ ಫೈರ್‌ಲೈನ್ ಪ್ರದೇಶಕ್ಕೆ ಸಾಗಿಸಬೇಕು. ತರುವಾಯ ಆ ಮರಗಳು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಅಜಮಾಯಿಷಿ ಆದ ನಂತರ ಅವಶ್ಯಕವಾದ ರಹದಾರಿ ನಿಶಿ 1897ನೇ ಇಸವಿ ಜನವರಿ 15ರ ವಳಗಾಗಿ ಸಾಗಿಸಬೇಕು. ಖರೀದೀದಾರನಾಗಲಿ ಅಥವಾ ಅವನ ಕಡೆ ಜನಗಳಾಗಲಿ ಯಾವ ವಿಧವಾದ ಅಕ್ರಮ ನಡಸಿದ್ದೇ ಆದರೆ ಖರೀದಿಗೆ ಪಡದುಕೊಂಡಿರತಕ್ಕ ಮರಗಳನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ 1878ನೇ ಇಸವಿ ಮೈಸೂರ್ ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನ್ ಪ್ರಕಾರ ಕ್ರಿಮಿನಲ್ ಶಿಕ್ಷೆಗೆ ಖರೀದಿದಾರನ್ನ ಗುರಿಮಾಡಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್.

ಮದ್ದಗಿರಿ ಸಬ್ ಡಿವಿಜನ್ ಮುನಸಿಫ್ ಕೋರ್ಟಿನಿಂದ.

ಸನ್ 1894—95ನೇ ಇಸವಿ ಶಿವಿಲ್ ಒರಿಜನಲ್ ನಂಬರ್ 418.

ಮುನಸೀಫ್ ಡಿ. ಯಂ. ನರಸಿಂಗರಾವ್ ಯಸ್ಕ್ವಯರ್, ಬಿ. ಎ. ಬಿ. ಎಲ್. ರವರ ರೂಬರೂಬ್.

ವಾದಿಗಳು.	ಪ್ರತಿವಾದಿ.
ಶಿರಾ ಕಸಬಾದಲ್ಲಿರುವವರು 1ನೇ ಅಕ್ಬರ್‌ಸಾಬಿ. 2ನೇ ಇಮಾಮು ಹ. ಹರ್ದಿಸಾಬಿ. 3ನೇ ಉಸುಮಾನ್‍ಸಾಬಿ. 4ನೇ ಅಕ್ಬರ್‌ಖಾನ್. 5ನೇ ಹೈದರಸಾಬಿ.	ಶಿರಾದಲ್ಲಿರುವ ರಾಜಾಅಹಮದ್ ಸಾಬಿ.

ಶಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕು ಶಿರಾ ಕಸಬಾದಲ್ಲಿರುವ ಮಂಗಳವಾರಪೇಟೆಯಲ್ಲಿ ಪೂರ್ವಕ್ಕೆ ಆದ್ಯಪ್ಪನ ಮನೆ, ಪಶ್ಚಿಮಕ್ಕೆ ಶೇತುವೆನೀರು ಹೋಗುವನಾಲಾ, ಉತ್ತರಕ್ಕೆ ತಿರಗಾಡುವ ದಾರಿ, ದಕ್ಷಿಣಕ್ಕೆ ಹೈರೋಡ್ ಈ ಮಧ್ಯೆ ಇರುವ ನಿವೇಶನದಲ್ಲಿ ಮಹಮದಿ ಜಾತಿಜನಗಳು ಬಾರಾಯಿಮಾಮು ಪಂಜಾ ಕೂಡಿಸುವ ಆಷರ್‌ಖಾನ ಜಾಗಕ್ಕೆ ಸಂಬಂಧಪಟ್ಟದ್ದೆಂತಲೂ (b) ಇತರರು 1ನೇ ಪ್ರತಿವಾದಿಗೆ ಕ್ರಯ ಮಾಡಲು ಯಾವ ವಿಧ ವಾದ ಹಕ್ಕೂ ಇಲ್ಲವೆಂತಲೂ (c) ಪ್ರತಿವಾದಿಯು ಇತರ ಜನಗಳಿಂದ ಪಡದು ಇರುವ ಕ್ರಯಸಾಧನದಂತೆ ಹೊಂದಿರುವ ಡಿಕ್ರಿಯು ಮತ್ತು ಕ್ರಯಪತ್ರವು ಅಸಿದ್ಧವಾಗಿರತಕ್ಕದೆಂತಲೂ (d) ಈ ಪ್ರತಿವಾದಿ ಯಿಂದ ವಾದಿಗಳು ಪೂರ್ವದಂತೆ ದಾವಾ ನಿವೇಶನವನ್ನ ತಮ್ಮ

ಹಕ್ಕು ಸ್ಥಾಪನೆಯಿಂದ ಸ್ವಾಧೀನ ಮಾಡಿಕೊಂಡು ಅವಿಚ್ಛಿಂನವಾಗಿ ಸದರೀ ಪಂಜಾ ಕೊಡಿಸಲು ವಾದಿಗಳು ಅರುಹರೆಂತಲೂ ಮೇಲ್ಕಂಡ ವಾದಿಗಳು ಈ ಕೋರ್ಟಿನಲ್ಲಿ ದಾವೆ ಮಾಡಿಧಾರೆ.

ಈ ದಾವಾಕ್ಕೆ ಕಕ್ಷಿಗಾರರಾಗಿ ಸೇರಲಪೇಕ್ಷೆ ಇರುವ ದರೋಬಸ್ತು ಜನಗಳು ಈ ಮೊಕದ್ದಮೆ ಹಿಯರಿಂಗ್ ಯಿಟ್ಟು ಇರುವ 1896ನೇ ಇಸವಿ ಡಿಸೆಂಬರ್ 10ನೇ ತಾರೀಖು ದಿವಿ 11 ಘಂಟೆಗೆ ಮದ್ದಗಿರಿ ಮೊಕ್ಕಾಂ ನಮ್ಮ ಕೋರ್ಟು ರೂಬರೂಬ್ ಹಾಜರಾಗತಕ್ಕದ್ದಿಧೆ.

ತಾರೀಖು 13ನೇ ನವಂಬರ್ 1896ನೇ ಇಸವಿ.

ಡಿ. ಯಂ. ನರಸಿಂಗರಾವ್,
ಮುನ್ಸಿಫ್.

ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮೆ.

ಸರ್ 1896ನೇ ಇಸವಿ ಅಕ್ಟೋಬರ್ ತಾರೀಖು 24ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಗುಂಡ್ಲು ತಾಲ್ಲೂಕು ಬೇರಂಬಾಡಿ ಮತ್ತು ಬಂಡಿಪುರದ ಜಂಗಲ್‌ಗಳಲ್ಲಿ ಪಣ ಚೌಬೀನೆಯನ್ನು ಖರೀದಿಗೆ ಪಡೆಯಲು ಯಿಷ್ಟವುಳ್ಳವರು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರಿಗೆ ಆಗಲಿ ಅಥವಾ ಗುಂಡ್ಲು ರೇಂಜಾಫೀಸರಿಗಾಗಲಿ ದರಖಾಸ್ತುಗಳನ್ನು ಕೊಡಬಹುದು.

2. ದರಖಾಸ್ತುದಾರ ಸದರೀ ಚೌಬೀನೆಯನ್ನು ಜಂಗಲ್‌ಗಳಲ್ಲಿ ತಯಾರು ಮಾಡಿಸಿ ಸಾಗಿಸಿಕೊಳ್ಳಬೇಕು. ಮತ್ತು ಈ ಭಾಗದಲ್ಲಿ ಜಾರಿಯಲ್ಲಿರುವ ರೂಲ್ಸ್‌ಗಳಿಗೆ ಬದ್ಧನಾಗಿರತಕ್ಕದ್ದು.

3. ಈ ಚೌಬೀನೆಗಳು ಮೈಸೂರು ಉಡ್ಡಯಾರ್ಡ್ ಮತ್ತು ಗುಂಡ್ಲು ಡಿಪೋ ದರಗಳಂತೆ ಆಯಾಯ ಜಂಗಲ್ ತಯಾರಿ ಮತ್ತು ಲದ್ದೈ ಖರ್ಚು ಜಾತಾ ಬಿಕರಿ ಮಾಡಲ್ಪಡುತ್ತವೆ.

4. ಖರೀದಿಗೆ ಪಡೆಯಲೂ ಇಷ್ಟವುಳ್ಳವರು ಈ ವಿಷಯವಾಗಿ ಜಾಸ್ತೀ ತಪ್ಸೀಲ್ ತಿಳಿಯಬೇಕೆಂದು ಕುತೂಹಲ ವಿದ್ದಲ್ಲಿ ಗುಂಡ್ಲು ರೇಂಜಾಫೀಸರಿಗೆ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಗೆ ಅರ್ಜಿ ಗುಜರಾಯಿಸಿ ಕೊಳ್ಳಬಹುದಾಗಿರುತ್ತೆ.

ಎಂ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಫಾರೆಸ್ಟು ಇಲಾಖಾ.

ನೋಟಿಫಿಕೇಷನ್.

ಸರ್ 1878ನೇ ಇಸವಿ ಫಾರೆಸ್ಟ್ ರೂಲ್ಸ್ 37ನೇ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಬೆಂಕಿಪುರದ ಟ್ರಾವೆಲರ್ಸ್ ಬಂಗ್ಲೆ ಬಳಿ ಭದ್ರಾನದಿಯಲ್ಲಿ ಈ ಕೆಳಗೆ ನಮೂದಿಸಿರುವ ನಾಟಾ ತೇಲಿಬಂದು ಸಿಕ್ಕಿ ಇರುತ್ತೆ.

ಮೇಲ್ಕಂಡ ನಾಟಾಕ್ಕೆ ಹಕ್ಕು ವುಳ್ಳವರು ಈ ಇಸ್ತಿಹಾರ್ ತಾರೀಖು ಲಾಗಾಯತು ಎರಡು ತಿಂಗಳ ವೊಳಗಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕನ್ಸರ್ವೇಟರವರ ರೂಬರೂ ಖುದ್ದಾಗಿ ಆಗಲಿ ಅಥವಾ ಕ್ರಮವಾಗಿ ಅಧಿಕಾರ ಪಡೆದ ಮುಖ್ತಾಲೀಕನ ಮೂಲಕವಾಗಲಿ ಹಾಜರಾಗಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕು. ಆ ತಾರೀಖು ನಂತರ ಬರುವ ಹಕ್ಕುದಾರಿಯನ್ನು ಅಂಗೀಕರಿಸದೆ ಸರಕಾರದ ತರಫ್ ಸದರೀ ನಾಟಾವನ್ನು ಹರಾಜ್ ಮಾಡಲ್ಪಡುವದು.

ನಾಟಾ ತಪಸೀಲ್.

ನಂಬರ್.	ಜಾತಿ.	ಉಳತೆ ಲಾಂಬಿ ಅಡಿ.	ಸುತ್ತಳತೆ ಅಡಿ.	ಷರಾ.
1	ಸಾಗುವಾನಿ ನಾಟಾ ..	14 ಅಡಿ, 4 ಅಂಗುಲ	7 ಅಡಿ, 8 ಅಂಗುಲ	

ಸಿ. ನಾರಾಯಣರಾವ್,
ಡೆಪ್ಯುಟಿ ಕನ್ಸರ್ವೇಟರ್.

591

ಮೈಸೂರ ಗೆಜೆಟ್.

ಸರ್ಕಾರದಿಂದ ಪಬ್ಲಿಷ್ ಆದ್ದು.

ಬೆಂಗಳೂರು, ಗುರುವಾರ, ನವಂಬರ್ ತಾ|| 26, ಸನ್ 1896.

IIIನೇ ಭಾಗ.

ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ರೆಗ್ಯುಲೇಷನ್‌ಗಳು.

ಮೈಸೂರ್ ಗವರ್ನಮೆಂಟ್.

ಲೆಜಿಸ್ಲೆಟಿವ್ ಇಲಾಖಾ.

1896ನೇ ಇಸವಿಯ IIನೇ ನಂಬರ್ ರೆಗ್ಯುಲೇಷನ್.

(1896ನೇ ಇಸವಿ ಅಕ್ಟೋಬರ್ ತಾರೀಖು 27ನೇ ದಿನ ಮಂಜೂರಾದ್ದು.)

A REGULATION TO PROVIDE FOR THE IMPOSITION AND LEVY OF CERTAIN DUTIES ON COTTON GOODS IN THE TERRITORIES OF MYSORE.

ಮೈಸೂರ್ ಶೀಮೆಯಲ್ಲಿ ಅರಳೆ ಸರಕುಗಳ ಮೇಲೆ ಕೆಲವು ತೆರಿಗೆಗಳು ಮೊಕರರಾಗಿ ವಸೂಲ್ ಆಗತಕ್ಕ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ.

ಮೈಸೂರ್ ಶೀಮೆಯೊಳಗೆ ಅರಳೆ ಸರಕುಗಳ ಮೇಲೆ ಕೆಲವು ತೆರಿಗೆಗಳನ್ನು ಮೊಕರರ್ಮಾಡುವದು ಯುಕ್ತವಾದುದರಿಂದ ಘನವನ್ನೈದಿದ ಶ್ರೀಮನ್ಮಹಾರಾಣಿ ರೀಜಂಟರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೆ:—

PRELIMINARY.

ಅವತರಣಿಕೆ.

ಹೆಸರು, ವ್ಯಾಪ್ತಿ ವ ಶುರು.

1. (1) ಈ ರೆಗ್ಯುಲೇಷನ್ 1896ನೇ ಇಸವಿಯ ಮೈಸೂರ್ ಅರಳೆ ಸುಂಕಗಳ ರೆಗ್ಯುಲೇಷನ್ ಎಂಬದಾಗಿ ಕರೆಯಲ್ಪಡಬಹುದು.

(2) ಇದು ಮೈಸೂರ್ ಶೀಮೆಗೆಲ್ಲಾ ವ್ಯಾಪಿಸುತ್ತದೆ;

(3) ಇದು 1896ನೇ ಇಸವಿಯ ಡಿಸೆಂಬರ್ 1ನೇ ತಾರೀಖು ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು;

ಅರ್ಥ ವಿವರಣೆಗಳು.

2. ಈ ರೆಗ್ಯುಲೇಷನಿನಲ್ಲಿ ಸಂದರ್ಭಕ್ಕಾಗಲಿ ಪ್ರಮೇಯಕ್ಕಾಗಲಿ ಏನಾದರೂ ವಿರೋಧವಿದ್ದರೇನೇ ಶಿವಾಯಿ,—

(*a*) "ಡೆಪ್ಯುಟಿ ಕಮ್ಮಿಷನರ" ಅಂದರೆ ಒಂದು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ್ ಎಂದು ಅಥವಾ ಈ ರೆಗ್ಯುಲೇಷ೯ ಪ್ರಕಾರ ಡೆಪ್ಯುಟಿ ಕಮ್ಮಿಷನರಿನ ಯಲ್ಲಾ ಕೆಲಸಗಳನ್ನಾಗಲಿ ಅಥವಾ ಅವುಗಳ ಪೈಕಿ ಯಾವದನ್ನಾಗಲಿ ಮಾಡಲು ಮೈಸೂರ್ ಗವರ್ನಮೆಂಟಿನವರಿಂದ ಕ್ರಮವಾಗಿ ನೇಮಿಸಲ್ಪಡಬಹುದಾದ ಇತರ ಆಫಿಸರ್ ಎಂಬ ಅರ್ಥವಾಗುತ್ತದೆ;

(*b*) "ಅರಳೆ ನೂಲು" ಅಥವಾ "ನೂಲು" ಅಂದರೆ ಪೂರ್ಣವಾಗಿ ಯಾಗಲಿ ಕೊಂಚ ಭಾಗವಾಗಲಿ ಹತ್ತಿಯಿಂದ ಮಾಡಲ್ಪಟ್ಟ ನೂಲು ಎಂಬ ಅರ್ಥವಾಗುತ್ತದೆ;

(*c*) "ಅರಳೆ ಸರಕುಗಳು" ಅಥವಾ "ಸರಕುಗಳು" ಎಂಬುವದರಲ್ಲಿ ಪೂರ್ಣವಾಗಿ ಅಥವಾ ಕೊಂಚ ಭಾಗ ಅರಳೆ ಎಳೆಗಳಿಂದ ನೇಯಲ್ಪಟ್ಟ, ಹೆಣೆಯಲ್ಪಟ್ಟ ಯಾ ಇತರ ವಿಧವಾಗಿ ಮಾಡಲ್ಪಟ್ಟ (ಎಳೆ ಮತ್ತು ನೂಲು ವಿನಹ) ಎಲ್ಲಾ ಜರಿತಾರಿ ಬಟ್ಟೆಗಳು ಇತರ ಸಾಮಾನುಗಳು ಅಡಗಿರುತ್ತವೆ;

(*d*) "ಮಗ್ಗದ ಕಾರ್ಖಾನೆ" ಅಂದರೆ ಕೈಯಿಂದ ಅಲ್ಲದೆ ಇತರ ವಿಧದಿಂದ ನಡಿಸಲ್ಪಡುವ ಯಂತ್ರದ ಮೂಲಕ ಅರಳೇ ಸರಕುಗಳು ನೇಯಲ್ಪಡುವ, ಹೆಣೆಯಲ್ಪಡುವ ಅಥವಾ ಇತರ ಮಾರ್ಗದಲ್ಲಿ ತಯಾರು ಮಾಡಲ್ಪಡುವ ಯಾವದಾದರೂ ಕಟ್ಟಡ ಯಾ ಸ್ಥಳ ಎಂಬ ಅರ್ಥವಾಗುತ್ತದೆ, ಮತ್ತು ಅದು ಅಂಥಾ ಕಟ್ಟಡದ ಅಥವಾ ಸ್ಥಳದ ಪ್ರತಿ ಒಂದು ಭಾಗವನ್ನೂ ಅಡಗಿಸಿಕೊಂಡಿರುತ್ತದೆ;

(*e*) "ಕೋಠಿ" ಅಂದರೆ ಈ ರೆಗ್ಯುಲೇಷನಿಗನುಗುಣವಾಗಿ ಸರಕುಗಳನ್ನು ದಾಸ್ತಾನು ಮಾಡುವದಕ್ಕೆ ಲೈಸೆನ್ಸ ಮೂಲಕ ನೇಮಿಸಲ್ಪಟ್ಟ ಒಂದು ಸ್ಥಳವೆಂದು ಅರ್ಥವಾಗುತ್ತದೆ:

ಮೈಸೂರ ಶೀಮೆಯಲ್ಲಿ ಉತ್ಪತ್ತಿಯಾದ ಅರಳೇ ಸರಕುಗಳ ಮೇಲೆ ಸುಂಕ ಮೊಕರರಾಗೋಣ.

3. ಮೈಸೂರ್ ಶೀಮೆಯ ಪ್ರತಿ ಒಂದು ಮಗ್ಗದ ಕಾರ್ಖಾನೆಯಲ್ಲಿಯೂ ಅದರಲ್ಲಿ ಉತ್ಪತ್ತಿಯಾಗುವ ಸಮಸ್ತ ಅರಳೇ ಸರಕುಗಳಿಗೆ ಆ ಸರಕುಗಳ ಬೆಲೆಯ ಮೇಲೆ ಶೇಕಡಾ 3½ ದರದ ಪ್ರಕಾರ ಸುಂಕ ವಸೂಲ್ ಮಾಡಲ್ಪಡತಕ್ಕದ್ದು.

ಟಿಪ್ಪಣಿ.—ಸರಕುಗಳು ಮಗ್ಗದ ಕಾರ್ಖಾನೆಯ ವಠಾರದಿಂದ ಹೊರಗೆ ತರಲ್ಪಟ್ಟಾಗ ಈ ಪ್ರಕರಣದ ಅರ್ಥದ ಮೇರೆಗೆ ಉತ್ಪತ್ತಿಯಾದವು ಎಂದು ಎಣ್ಣಿಸಿಕೊಳ್ಳುತ್ತವೆ; ಆದರೆ ಸಣ್ಣ ಥಾನಗಳಾಗಿ ಅಲ್ಲದೆ ಇತರ ವಿಧವಾಗಿ ಸರಕುಗಳು ಮುಖ್ಯವಾಗಿ ಅಥವಾ ಬಿಕ್ಕಾಗಿ ತಯಾರಾಗಿ ವಿಕ್ರಯಿಸಲ್ಪಡುವ ಯಾವದಾದರೂ ಮಗ್ಗದ ಕಾರ್ಖಾನೆಯ ಸಂಗತಿಯಲ್ಲಿ ಮೈಸೂರ್ ಗವರ್ನಮೆಂಟಿನವರು ಅವುಗಳು ಸದರೀ ಕಾರ್ಖಾನೆಯ ನೇಯುವ ಭಾಗ ಅಥವಾ ಭಾಗಗಳಿಂದ ಹೊರಗೆ ತರಲ್ಪಟ್ಟಾಗ ಆ ಸರಕುಗಳು ಆ ಕಾರ್ಖಾನೆಯಲ್ಲಿ ಉತ್ಪತ್ತಿಯಾದಮೇತ ಎಣಿಸತಕ್ಕದ್ದೆಂದು ವಿಧಿಸಬಹುದು.

ಅಂಥಾ ಸರಕುಗಳ ನಿರಖು ಮೌಲ್ಯಗಳನ್ನು ನಿರ್ಣಯಿಸುವದಕ್ಕೆ ಗವರ್ನಮೆಂಟಿನವರಿಗೆ ಅಧಿಕಾರ.

4. (1) ಸದರೀ ಸುಂಕಗಳನ್ನು ವಸೂಲ್ಮಾಡುವ ಬಗ್ಯೆ ಮೈಸೂರ್ ಗವರ್ನಮೆಂಟಿನವರು ಆಗಿಂದಾಗ್ಯೆ ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾದ್ ಕೊಡುವದರ ಮೂಲಕ ಮೇಲೆ ಹೇಳಿದಂಥಾ ಸಮಸ್ತ ಸರಕುಗಳ ಅಥವಾ ಅವುಗಳ ಪೈಕಿ ಯಾವದಾದರೂ ಗೊತ್ತಾದ ತರಹಾವಿನ ಅಥವಾ ತರಹಾಗಳ ನಿರಖು ಮೌಲ್ಯಗಳನ್ನು ನಿರ್ಣಯಿಸಬಹುದು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವದಾದರೂ ನಿರಖು ಮೌಲ್ಯಗಳನ್ನು ಬದಲಾಯಿಸಬಹುದು.

(2) ಈ ರೆಗ್ಯುಲೇಷನಿನ ಉದ್ದೇಶಗಳ ಬಗ್ಯೆ ಅಂಥಾ ನಿರಖು ಮೌಲ್ಯವು ಯಾವದಕ್ಕೆ ಲಗಾವಾಗುತ್ತದೋ ಆ ಅರಳೇ ಸರಕುಗಳ "ನಿಜವಾದ ಮೌಲ್ಯ" ವಾಗಿರುತ್ತದೆಂದು ತಿಳಕೊಳ್ಳತಕ್ಕದ್ದು. ಆದರೆ ಮೇಲೆ ಹೇಳದ ಮೇರೆ ವಿನಹ ಅನ್ಯಥಾ ಸಮಸ್ತ ಸರಕುಗಳಿಗೆ ಈ ರೆಗ್ಯುಲೇ೯ ಪ್ರಕಾರ ಅವುಗಳ ನಿಜವಾದ ಮೌಲ್ಯದ ಮೇಲೆ ತೆರಿಗೆ ಮೊಕರರಾಗತಕ್ಕದ್ದು.

(3) ಈ ರೆಗ್ಯುಲೇಷನಿನ ಉದ್ದೇಶಗಳ ಬಗ್ಯೆ ನಿಜವಾದ ಮೌಲ್ಯವು ಈ ಕೆಳಗೆ ವಿವರಿಸಿರುವದೆಂದು ಭಾವಿಸಲ್ಪಡತಕ್ಕದ್ದು—

(a) ಅದೇ ಜಾತಿಯ ವ ತರದ ಸರಕುಗಳು ತಯಾರ್ಮಾಡಲ್ಪಟ್ಟ ಸಮಯದಲ್ಲಿ ವ ಸ್ಥಳದಲ್ಲಿ, ಅವುಗಳನ್ನು ತಯಾರ್ಮಾಡಿದ್ದಕ್ಕಾಗಿ ತೆರಬೇಕಾಗುವ ಸುಂಕದ ಮೊಬಲಗು ಅಲ್ಲದೆ ಬೇರೆ ಯಾವ ತರಹೇದ್ದಾದರೂ ವಜಾ ಅಥವಾ ಕಡಿಮೆಯಾಗುವಿಕೆ ಇಲ್ಲದೆ, ಅವುಗಳು ವಿಕ್ರಯಿಸಲ್ಪಡುವ ಅಥವಾ ವಿಕ್ರಯಿಸಲ್ಪಡಬಹುದಾದ ಕಿಮ್ಮತ್ತಿನಲ್ಲಿ ವ್ಯಾಪಾರದ ಕಮ್ಮಿಷನ್ ಕಳದು ಬಟ್ಟ ನಗದು ಕ್ರಯ;

(b) ಇಂಥಾ ಕ್ರಯವು ನಿರ್ಣಯಿಸಕೂಡದಾದ ಸಂಗತಿಗಳಲ್ಲಿ, ಅದೇ ಜಾತಿಯ ಮತ್ತು ತರದ ಸರಕುಗಳನ್ನು, ಮೇಲೆ ಕಾಣಿಸಿರುವುಗಳಲ್ಲದೆ ಬೇರೆ ಯಾವ ತರಹೇದ್ದಾದರೂ ವಜಾ ಅಥವಾ ಕಡಿಮೆಯಾಗುವಿಕೆ ಇಲ್ಲದೆ, ಅಂಥಾ ಸ್ಥಳದಲ್ಲಿ ಕೊಡುವದಕ್ಕೆ ತಗಲುವ ಖರ್ಚು.

ಉತ್ಪತ್ತಿಯಾದ ಅರಳೇ ಸರಕುಗಳ ತಿಂಗಳುಗಟ್ಲೆ ಲೆಕ್ಕಗಳನ್ನು ಮಗ್ಗದ ಕಾರ್ಖಾನೆಯ ಮಾಲೀಕರು ಕೊಡೋಣ.

5. (1) ಪ್ರತಿ ಒಂದು ಮಗ್ಗದ ಕಾರ್ಖಾನೆಯ ಮಾಲೀಕನು ಪ್ರತಿ ತಿಂಗಳಿಗೆ, ತನ್ನ ಗಿರಿಣಿಯಲ್ಲಿ ಕಳೆದ ತಿಂಗಳಲ್ಲಿ ಉತ್ಪತ್ತಿಯಾದ ಸಮಸ್ತ ಅರಳೇ ಸರಕುಗಳ ಒಂದು ಲೆಕ್ಕವನ್ನು ತಯಾರ್ಮಾಡಿ ಡೆಪ್ಯುಟಿ ಕಮ್ಮಿಷನರ ಬಳಿಗೆ ಕಳುಹಿಸತಕ್ಕದ್ದು ಅಥವಾ ತಯಾರ್ಮಾಡಿಸಿ ಕಳುಹಿಸುವ ಹಾಗೆ ಮಾಡತಕ್ಕದ್ದು; ಮತ್ತು ಅಂಥಾ ಲೆಕ್ಕದ ಕೆಳಗೆ ಅದರ ನಿಜತ್ವವನ್ನು ಕುರಿತ ಒಂದು ದೃಢಪತ್ರಿಕೆಯನ್ನು ಬರೆದು ಅದಕ್ಕೆ ರುಜು ಮಾಡತಕ್ಕದ್ದು.

(2) ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮಗಳಿಂದ ಅನ್ಯಥಾ ನಿರ್ದೇಶಿಸಲ್ಪಟ್ಟರೇನೇ ವಿನಹಾ, ಅಂಥಾ ಪ್ರತಿ ಒಂದು ಲೆಕ್ಕದಲ್ಲಿ ಪ್ರತಿ ಒಂದು ತರಹಾವಿನ ಸರಕುಗಳ ಬಗ್ಯೆ ಆ ಲೆಕ್ಕ ಯಾವ ಕಾಲದಬಗ್ಯಾಗಿರುತ್ತದೋ ಆ ಕಾಲದಲ್ಲಿ ಎಷ್ಟು ಮೊತ್ತ ಉತ್ಪತ್ತಿಯಾಗಿರುತ್ತದೆ ಎಂಬದನ್ನೂ ಅಂಥಾ ಸರಕಿನ ನಿಜವಾದ ಮೌಲ್ಯವನ್ನೂ ನಮೂದಿಸತಕ್ಕದ್ದು.

(3) ಅಂಥಾ ಪ್ರತಿ ಒಂದು ಲೆಕ್ಕದಲ್ಲಿ ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದಂಥಾ ಹೆಚ್ಚಾದ ವೃತ್ತಾಂತವಿರತಕ್ಕದ್ದು. ಮತ್ತು ಅದು ಸದರೀ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದಂಥಾ ನಮೂನೆಯಲ್ಲಿದ್ದು ಸರಿ ಹೌದೋ ಇಲ್ಲವೋ ಎಂಬದನ್ನು ನೋಡುವ ಬಗ್ಯೆ ಮೇಲೆ ಹೇಳಿದ ಮೇರೆಗೆ ನಿರ್ದೇಶಿಸಲ್ಪಡಬಹುದಾದ ಷರತ್ತುಗಳಿಗೆ ಒಳಗಾಗಿರತಕ್ಕದ್ದು.

(4) ಪ್ರತಿ ಒಂದು ಲೆಕ್ಕವು ಅದು ಯಾವಕಾಲದ ಬಗ್ಯಾಗಿರುತ್ತದೋ ಅದರ ಮೂರು ಅಥವಾ ಹೆಚ್ಚಾದರೆ ಏಳು ಕೆಲಸ ನಡಿಯುವ ದಿವಸಗಳ ಒಳಗಾಗಿ ಡೆಪ್ಯುಟಿ ಕಮ್ಮಿಷನರಿಗೆ ಜಾವತಿ ಮಾಡಲ್ಪಡತಕ್ಕದ್ದು ಅಥವಾ ಅವರ ವಿಳಾಸಕ್ಕೆ ಕಳುಹಿಸಿಕೊಡಲ್ಪಡತಕ್ಕದ್ದು; ಮತ್ತು ಇಂಥಾ ಲೆಕ್ಕಗಳಲ್ಲಿ ಷುರುವಿನದು 1896ನೇ ಇಸವಿಯ ಡಿಸೆಂಬರ್ ತಿಂಗಳಿಗಾಗಿರತಕ್ಕದ್ದು ಮತ್ತು ಈ ರೆಗ್ಯುಲೇಷನಿನ ಅಮಲ್ ಷುರು ಲಾಗಾಯತು ತಯಾರ್ ಮಾಡಿದ ಎಲ್ಲಾ ಸರಕುಗಳು ಅದರಲ್ಲಿ ಸೇರಿರತಕ್ಕದ್ದು.

ಟಿಪ್ಪಣಿ.—ಈ ಒಳಪ್ರಕರಣದಲ್ಲಿ "ಕೆಲಸನಡಿಯುವ ದಿವಸ" ಅಂದರೆ, ಆದಿತ್ಯವಾರಗಳು, ಸಂವತ್ಸರಾದಿ ದಿವಸ (ಜನವರಿ ಗುರ್ಲೀ), ಕ್ರಿಸ್ತನ ಜನ್ಮದಿನ (ಡಿಸೆಂಬರ್ 25) ವಿನಹ ಪ್ರತಿ ಒಂದು ದಿನ ಮೇಮ ಅರ್ಥವು: ಈ ಕಡೇ ಎರಡು ದಿವಸಗಳ ಪೈಕಿ ಯಾವದಾದರೂ ಒಂದು ಆದಿತ್ಯವಾರದ ದಿನ ಬಿದ್ದಲ್ಲಿ ಅದರ ಮಾರನೆ ಸೋಮವಾರ ಶಿವಾಯಿ ಎಂದು ಭಾವಿಸಬೇಕು; (ಕ್ರಿಸ್ತನ ಮರಣದಿನ) ಗುಡ್‌ಫ್ರೈಡೆ ಎಂಬ ದಿನವಲ್ಲದೆ ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರ್ ಮೂಲಕ ಪಬ್ಲಿಕ್ ರಜಾ ದಿನವೆಂದು ಮೈಸೂರ್ ಗವರ್ನಮೆಂಟಿನವರಿಂದ ನಿರೂಪಿಸಲ್ಪಡುವ ಇತರ ಯಾವ ದಿನವಾದರೂ ಅಂತಾದ್ದೂ ಶಿವಾಯಿ ಪ್ರತಿ ದಿನವೆಂದರ್ಥವು.

ಸುಂಕವನ್ನು ನಿರ್ಣಯಿಸಿ ಅದನ್ನು ಪಾವತಿ ಮಾಡಬೇಕಾಗಿ ನೋಟಿಸ ಕೊಡೋಣ.

6. (1) ಆ ಲೆಕ್ಕ ಯಾವ ಕಾಲಕ್ಕೆ ಸಂಬಂಧಿಸುತ್ತದೋ ಆ ಕಾಲಕ್ಕಾಗಿ ಪಾವತಿ ಯಾಗುವ ಸುಂಕಗಳನ್ನು ಮೈಸೂರ್ ಗವರ್ನಮೆಂಟಿನವರೇನಾದರೂ ನಿಬಂಧನೆಗಳನ್ನು ವಿಧಿಸಿದ್ದರೆ ಅಂಥಾ ನಿಬಂಧನೆಗಳಿಗೊಳಪಟ್ಟು ಡೆಪ್ಯುಟಿ ಕಮ್ಮಿಷನರವರು ಮೊಕರರ್ಮಾಡತಕ್ಕದ್ದು, ಮತ್ತು ಆ ಮೊಬಲಗನ್ನು ಕೂಡಲೇ ಪಾವತಿ ಮಾಡದಿದ್ದರೆ ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದ ನಮೂನೆಯಲ್ಲಿ ಒಂದು ನೋಟಿಸನ್ನು ಸದರೀ ನೋಟಿಸಿನ ಜಾರಿ ತಾರೀಖಿನಿಂದ ಹತ್ತು ದಿವಸಗಳೊಳಗಾಗಿ ಮೊಕರರಾದ ಮೊಬಲಗನ್ನು ಪಾವತಿ ಮಾಡತಕ್ಕದ್ದೆಂದು ಅದರಲ್ಲಿ ವಿಧಿಸಿ ಮಾಲೀಕನಮೇಲೆ ಜಾರಿ ಮಾಡಿಸತಕ್ಕದ್ದು.

(2) (1)ನೇ ಒಳಪ್ರಕರಣಕ್ಕನುಗುಣವಾದ ಒಂದು ನೋಟಿಸಿನ ಒಂದು ಪ್ರತಿಯನ್ನು ಮಗ್ಗದ ಕಾರ್ಖಾನೆಯ ಮಾಲೀಕನಿಗೆ ಯಾ ಅವನ ಮುತಾಲೀಕನಿಗೆ ಆತನು ಸಾಧಾರಣವಾಗಿ ಕೆಲಸ ನಡಿಸುವ ಸ್ಥಳದಲ್ಲಿ ಕೊಟ್ಟರೆ ಯಾ ತಲಿಪಿಸಿದರೆ ಅಥವಾ ಹೀಗೆ ಮಾಡಲಿಕ್ಕೆ ಅನುಕೂಲವಿಲ್ಲದಿದ್ದಲ್ಲಿ ಅದರ ಒಂದು ಪ್ರತಿಯನ್ನು ಕಾರ್ಖಾನೆಯ ಒಂದು ಹೊರ ಬಾಗಲಿಗೆ ಅಂಟಿಸಿದರೆ ಸದರೀ ನೋಟಿಸು ಕಾರ್ಖಾನೆಯ ಮಾಲೀಕನ ಮೇಲೆ ಜಾರಿ ಮಾಡಲ್ಪಟ್ಟ ಹಾಗಾಗುವದು.

ಪಾವತಿಯಾಗದಿರುವ ಸುಂಕವನ್ನು ಬರ ಮಾಡಿಕೊಳ್ಳೋಣ.

7. (1) ಈ ರೆಗ್ಯುಲೇಷನಿನ ಮೇರೆಗೆ ಪಾವತಿಯಾಗಬೇಕಾದ ಯಾವದಾದರೂ ಸುಂಕವು ಅದರ ಪಾವತಿ ಬಗ್ಯೆ ಮೇಲೆ ಹೇಳಿದಂಥಾ ನೋಟಿಸಿನಿಂದ ನಿರ್ಣಯಿಸಲ್ಪಟ್ಟ ಕಾಲದೊಳಗೆ ಪಾವತಿಯಾಗದಿದ್ದರೆ ಡೆಪ್ಯುಟಿ ಕಮ್ಮಿಷನರವರು ಅದರ ಬದಲಾಗಿ ಹಾಗೆ ಪಾವತಿಯಾಗದಿರುವ ಸುಂಕದ ಮೊಬಲಗಿನ ದುಗಣೀಗೆ ಮೀರದೆ ನ್ಯಾಯವಾಗಿ ಕೇಳಬಹುದೆಂದು ತಮಗೆ ಮುನಾಸಬು ತೋರುವ ಎಷ್ಟು ಮೊಬಲಗನ್ನಾದರೂ ವಸೂಲ್ಮಾಡಬಹುದು.

(2) (1) ನೇ ಉಪಪ್ರಕರಣಕ್ಕನುಗುಣವಾಗಿ ವಸೂಲ್ಮಾಡಲ್ಪಡತಕ್ಕ ಮೊಬಲಗುಗಳನ್ನೆಲ್ಲಾ ಜಮೀನ್ ಕಂದಾಯದ ಬಾಕಿಗಳ ವಸೂಲಿಬಗ್ಗ್ಯಾಗಿ ನಿಬಂಧಿಸಲ್ಪಟ್ಟಿರುವ ರೀತಿಯಲ್ಲಿ ವಸೂಲ್ಮಾಡತಕ್ಕದ್ದು.

Warehousing.

ಕೋಠಿಗಳಲ್ಲಿ ದಾಖಲ್ತು ಮಾಡೋಣ.

8. (1) ಮೈಸೂರ್ ಗವರ್ನ್‍ಮೆಂಟಿನವರು ಆರಲೇಸರಕುಗಳನ್ನು ದಾಸ್ತಾನು ಮಾಡುವದಕ್ಕೋಸ್ಕರ ಒಂದು ಕೋಠಿ ಎಂಬದಾಗಿ ಯಾವದಾದರೂ ಕೋಣೆಗೆ ಯಾ ಸ್ಥಳಕ್ಕೆ ಆಗಿಂದಾಗ್ಯೆ ಲೈಸೆನ್ಸು ಕೊಡಬಹುದು. ಅಂಥಾ ಲೈಸೆನ್ಸು ಸದರೀ ಕೋಠಿಗಳೊಳಕ್ಕೆ ಅಂಥಾ ಸರಕುಗಳನ್ನು ಶೇರಿಸುವ ಬಗ್ಗ್ಯೆ ಕೋಠಿಗಳಲ್ಲಿ ಸರಕುಗಳಿರುವಾಗ್ಯೆ ಅವುಗಳನ್ನು ಭದ್ರವಾಗಿ ಕಾಪಾಡುವ ಬಗ್ಗ್ಯೆ ಸರಕುಗಳನ್ನು ಕೋಠಿಯಿಂದ ಹೊರಕ್ಕೆ ಸಾಗಿಸೋಣ ಮತ್ತು ಅವುಗಳ ಮೇಲೆ ವಸೂಲಾಗಬೇಕಾದ ಸುಂಕಗಳ ವಸೂಲಿಬಗ್ಗ್ಯೆ ಮೈಸೂರ್ ಗವರ್ನ್‍ಮೆಂಟಿನವರಿಂದ ವಿಧಿಸಲ್ಪಡಬಹುದಾದ ಷರತ್ತುಗಳಿಗೊಳಪಟ್ಟಿರತಕ್ಕದ್ದು.

ಸರಕುಗಳನ್ನು ದಾಸ್ತಾನುಮಾಡುವ ಬಗ್ಗ್ಯೆ ಕೋಠಿಗಳಿಗೆ ಲೈಸೆನ್ಸು ಕೊಡೋಣ ಮತ್ತು ಆ ಬಗ್ಗ್ಯೆ ಫೀಸು.

(2) ಅಂಥಾ ಪ್ರತಿ ಕೋಠಿ ವಿಷಯದಲ್ಲಿ ಲೈಸೆನ್ಸು ಫೀಜು ಮತ್ತು ಇತರ ಮೊಬಲಗುಗಳನ್ನು ಈ ಬಗ್ಗ್ಯಾಗಿ ಮೈಸೂರ್ ಗವರ್ನ್‍ಮೆಂಟಿನವರಿಂದ ಮಾಡಲ್ಪಟ್ಟ ನಿಬಂಧನೆಗಳಿಂದ ತಾತ್ಕಾಲಿಕವಾಗಿ ವಿಧಾಯಕವಾದಷ್ಟನ್ನು ಲೈಸೆನ್ಸುದಾರನು ಕೊಡತಕ್ಕದ್ದು.

ಪರಂತು ಮೈಸೂರ್ ಗವರ್ನ್‍ಮೆಂಟಿನವರು ಯಾವದಾದರೂ ಗೊತ್ತಾದ ಕೋಠಿಯ ವಿಷಯವಾಗಿ ಅಂಥಾ ಪೂರಾ ಫೀಸನ್ನು ಯಾ ಇತರ ಪಾವತಿಗಳನ್ನು ಅಥವಾ ಅವುಗಳ ಎಷ್ಟನ್ನಾದರೂ ಅಂಶವನ್ನು ಮಾಫ್ ಮಾಡಬಹುದು.

9. (1) ಯಾವ ಮಗ್ಗದ ಕಾರ್ಖಾನೆಯಮಾಲೀಕನಾದರೂ ಯಾವ ಸರಕುಗಳ ವಿಷಯವಾಗಿ 3ನೇಪ್ರಕರಣದ ಮೇರೆಗೆ ಸುಂಕ ವಸೂಲ್ಮಾಡಲ್ಪಡಬಹುದಾಗಿದ್ದರೂ 6ನೇ ಪ್ರಕರಣದ ಮೇರೆಗೆ ಆದ್ಯಾಪಿ ಸುಂಕ ಮೊಕರರಾಗದೆ ಇರುತ್ತದೊ, ಆ ಸರಕುಗಳನ್ನು ಒಂದು ಕೋಠಿಯಲ್ಲಿ ದಾಸ್ತಾನು ಮಾಡಲಿಕ್ಕೆ ಅಪ್ಪಣೆ ಬಗ್ಗ್ಯಾಗಿ ಅರ್ಜಿ ಕೊಡಬಹುದು.

ಕೋಠಿಗಳಲ್ಲಿ ಸರಕುಗಳನ್ನು ದಾಸ್ತಾನು ಮಾಡಲಿಕ್ಕೆ ಅಪ್ಪಣೆ.

(2) ಅಂಥಾ ಅರ್ಜಿಯು ಬರಹಮೂಲಕವಾಗಿದ್ದು ಅದಕ್ಕೆ ಅರ್ಜಿದಾರನ ರುಜು ಇರತಕ್ಕದ್ದು ಮತ್ತು ಮೈಸೂರ್ ಗವರ್ನ್‍ಮೆಂಟಿನವರಿಂದ ನಿರ್ದೇಶಿಸಲ್ಪಡಬಹುದಾದ ನಮೂನೆಯಲ್ಲಿರತಕ್ಕದ್ದು.

10. ಯಾವದಾದರೂ ಸರಕುಗಳನ್ನು ಒಂದು ಕೋಠಿಯಲ್ಲಿ ದಾಸ್ತಾನುಮಾಡಿದಾಗ್ಯೆ ಯಾವ ಕಾಲದಲ್ಲಿ ಆ ಸರಕುಗಳು ಉತ್ಪತ್ತಿಯಾದವೋ ಆ ಕಾಲದ ಬಗ್ಗ್ಯೆ 5ನೇ ಪ್ರಕರಣಕ್ಕನುಗುಣವಾಗಿ ಕಳುಹಿಸುವ ಲೆಕ್ಕದಲ್ಲಿ ಯಾ ಆಕಾಲಕ್ಕೆ ಸಂಬಂಧಿಸುವ ಒಂದು ಪ್ರತ್ಯೇಕ ಲೆಕ್ಕದಲ್ಲಿ ಅದರ ಮೊತ್ತವನ್ನು ಮತ್ತು ತಪ್ಸೀಲನ್ನು ನಮೂದಿಸಿ ಅದು ಹಾಗೆ ದಾಸ್ತಾನು ಮಾಡಲ್ಪಟ್ಟಿರುತ್ತದೆಂದು ಕಾಣಿಸತಕ್ಕದ್ದು ಮತ್ತು ಸದರೀ ಸರಕುಗಳನ್ನು ಸುಂಕ ನಿರ್ಣಯಿಸಿ ವಸೂಲ್ ಮಾಡುವಾಗ್ಯೆ ಲೆಕ್ಕದಿಂದ ವಜಾಮಾಡತಕ್ಕದ್ದು.

ಹಾಗೆ ದಾಸ್ತಾನುಮಾಡಿದ ಸರಕುಗಳಿಗೆ ಸುಂಕದ ಮಾಫಿ.

Inspection.

ಮೇಲ್ವಿಚಾರಣೆ.

11. (1) ಡೆಪ್ಯುಟಿ ಕಮ್ಮಿಷನರು ಅಥವಾ ಈ ವಿಷಯದಲ್ಲಿ ಮೈಸೂರ್ ಗವರ್ನ್‍ಮೆಂಟಿನವರಿಂದ ಕ್ರಮವಾಗಿ ನೇಮಿಸಲ್ಪಟ್ಟ ಯಾರಾದರೂ ಆಫಿಸರು ಯಾವ ಮಗ್ಗದ ಕಾರ್ಖಾನೆಗೆ ಯಾದರೂ ಕೆಲಸ ನಡಿಯುವಾಗ್ಯೆ ನ್ಯಾಯವಾದ ಯಾವ ಕಾಲಗಳಲ್ಲಾಗಲಿ ನಿರಾಂತಕವಾಗಿ ಹೋಗಬಹುದು, ಮತ್ತು ಆ ವಿಷಯದಲ್ಲಿ ಮೈಸೂರ್ ಗವರ್ನ್‍ಮೆಂಟಿನವರ ಹುಕುಮಿಗೆ ಒಳಪಟ್ಟು ಯಾವದಾದರೂ ಮಗ್ಗದ ಕಾರ್ಖಾನೆಯ ಯಾವ ಭಾಗಕ್ಕಾದರೂ ಹೋಗಬಹುದು.

ಮಗ್ಗದ ಕಾರ್ಖಾನೆಗಳನ್ನು ಅಜಮಾಯಿಷಿ ಮಾಡಿ ರಿಕಾರ್ಡುಗಳ ಮತ್ತು ಲೆಕ್ಕಗಳ ನಕಲುಗಳನ್ನು ತೆಗೆದುಕೊಳ್ಳಲಿಕ್ಕೆ ಡೆಪ್ಯುಟಿಕಮ್ಮಿಷನರಿಗೆ ಅಧಿಕಾರ.

(2) ಅಂಥಾ ಯಾವ ಆಫೀಸರಾದರೂ ಯಾವ ಸಮಯದಲ್ಲಾಗಲಿ ಮಾಲೀಕನಿಗೆ ನೋಟಿಸು ಕೊಟ್ಟು ಯಾ ಕೊಡದೇನೇ ಯಾವ ಮಗ್ಗದ ಕಾರ್ಖಾನೆಯಲ್ಲಿ ಆಗಲಿ ನಡದ ಕೆಲಸಗಳ ಮತ್ತು ವಿಕ್ರಯಗಳ ರಿಕಾರ್ಡುಗಳನ್ನು ಅದರ ಲೆಕ್ಕಗಳನ್ನು ತನಿಖೆ ಮಾಡಿ ಯಾವ ಲೆಕ್ಕದ ನಿಜತ್ವವನ್ನು ಪರೀಕ್ಷಿಸುವ ಬಗ್ಗ್ಯೆ ಅಥವಾ ಈ ರೆಗ್ಯುಲೇಷನಿನ ಅಥವಾ ಇದಕ್ಕನುಗುಣವಾದ ಯಾವದಾದರೂ ಕ್ರಮಗಳ ಉದ್ದೇಶಗಳ ಬಗ್ಗ್ಯೆ ಅನುಭವ ಅವಶ್ಯವಿರುವ

ತಪ್ಶೀಲುಗಳನ್ನು ತಿಳಕೊಳ್ಳುವ ಬಗ್ಯೆ ಸದರೀ ಪೂರಾ ಅಥವಾ ಯಾವದಾದರೂ ರಿಕಾರ್ಡುಗಳ ಅಥವಾ ಲೆಕ್ಕಗಳ ನಕಲುಗಳನ್ನು ಅಥವಾ ಅವುಗಳ ಎಕ್ಸ್ಟ್ರಾಕ್ಟುಗಳನ್ನು ತೆಗೆದುಕೊಳ್ಳಬಹುದು.

(3) ಯಾವ ಮಗ್ಗದ ಕಾರ್ಖಾನೆಯ ಮಾಲೀಕನಾಗಲಿ ಯಾವದಾದರೂ ಒಂದು ವ್ಯಾಪಾರದ ರೀತಿಯ ವಿವರ ಯಾ ನಿಯಮಗಳು ಅಡಗಿ ಇರುವ ಯಾವದಾದರೂ ರಿಕಾರ್ಡನ್ನು ಅಥವಾ ಲೆಕ್ಕವನ್ನು ಡೆಪ್ಯುಟಿ ಕಮ್ಮಿಷನರ ಹುದ್ದೆಗಿಂತ ಕೀಳು ದರ್ಜೆಯ ಆಫಿಸರಿಗೆ ಒಪ್ಪಿಸುವದಕ್ಕೆ ಆಕ್ಷೇಪಿಸಬಹುದು; ಆದರೆ ಹಾಗೆ ಆಕ್ಷೇಪಿಸುವಪಕ್ಷದಲ್ಲಿ, ಮಾಲೀಕನು ತನ್ನ ಆಕ್ಷೇಪಣೆಯನ್ನು ಡೆಪ್ಯುಟಿ ಕಮ್ಮಿಷನರಿಗೆ ಕಳುಹಿಸುವದಕ್ಕಾಗಿ ಬರಹ ಮೂಲಕ ಆ ಆಫಿಸರ ಹತ್ತಿರ ಕೊಡಬೇಕು, ಮತ್ತು ಆ ಆಫಿಸರು ಡೆಪ್ಯುಟಿ ಕಮ್ಮಿಷನರ ಹುಕುಂ ನಿರೀಕ್ಷಣೆ ಮೇಲೆ ಆ ರಿಕಾರ್ಡನ್ನು ಅಥವಾ ಲೆಕ್ಕವನ್ನು ಕೂಡಲೆ ಆ ಸ್ಥಳದಲ್ಲಿಯೇ ಮೊಹರು ಮಾಡಿ ಇಡಬಹುದು.

ತಿಳಿದುಬಂದ ಸಮಾಚಾರವು ರಹಸ್ಯವಾಗಿರುತ್ತದೆಂದು ಎಣಿಸತಕ್ಕದ್ದು.

12. ಅಂಥಾ ಸಮಸ್ತ ನಕಲುಗಳು, ಎಕ್ಸ್ಟ್ರಾಕ್ಟುಗಳು ಮತ್ತು ಯಾವ ಮಗ್ಗದ ಕಾರ್ಖಾನೆ ತನಿಖೆ ಕಾಲದಲ್ಲಾಗಲಿ ಅಂಥಾ ಯಾವ ಆಫಿಸರಿಗಾದರೂ ತಿಳಿದುಬಂದ ಇತರ ಯಲ್ಲಾ ಸಮಾಚಾರವು ಖಂಡಿತವಾಗಿ ರಹಸ್ಯವಾಗಿದ್ದಾಗಿ ಎಣಿಸಲ್ಪಡತಕ್ಕದ್ದು, ಮತ್ತು ಅಂಥಾ ರಹಸ್ಯವನ್ನು ಮೇಲಧಿಕಾರಸ್ಥನಿಗಲ್ಲದೆ ಇತರ ಯಾವ ಮನುಷ್ಯನಿಗೂ ಪೂರ್ವಭಾವಿಯಾಗಿ ಮೈಸೂರ ಗವರ್ನಮೆಂಟಿನವರ ಬರಹ ಮೂಲಕವಾದ ಅನುಮತಿಯನ್ನು ಪಡೆದ ಹೊರ್ತು ಹೊರಪಡಿಸಕೂಡದು.

Offences and Penalties.
ತಕ್ಸೀರುಗಳು ಮತ್ತು ದಂಡನೆಗಳು.

ತಕ್ಸೀರುಗಳ ಬಗ್ಯೆ ದಂಡನೆಗಳು.

13. ಕೆಳಗಣ ಷೆಡ್ಯೂಲಿನ 1ನೇ ರಿಕಾಸೆಯಲ್ಲಿ ನಮೂದಿಸಲ್ಪಟ್ಟ ತಕ್ಸೀರುಗಳ ಬಗ್ಯೆ ಆಯಾ ತಕ್ಸೀರಿನ ವಿಷಯವಾಗಿ ಅದರ ಎರಡನೇ ರಿಕಾಸೆಯಲ್ಲಿ ನಮೂದಿಸಲ್ಪಟ್ಟಷ್ಟರ ಮಟ್ಟಿಗೆ ಶಿಕ್ಷೆಯನ್ನು ವಿಧಿಸಬಹುದು:—

1. ಈ ರೆಗ್ಯುಲೇಷನಿಗನುಗುಣವಾಗಿ ಏರ್ಪಟ್ಟ ಯಾವದಾದರೂ ಕ್ರಮಕ್ಕೆ ವಿರೋಧವಾಗಿ ನಡೆದುಕೊಳ್ಳೋಣ.	ಐನೂರು ರೂಪಾಯಿಗೆ ಮೀರದ ದಂಡ.
2. ಸುಂಕದ ಯಾ ಅದರ ಎಷ್ಟಾದರೂ ಭಾಗದ ಪಾವತಿಯನ್ನು ತಪ್ಪಿಸಿಕೊಳ್ಳುವ ಇರಾದೆಯಿಂದ ಈ ರೆಗ್ಯುಲೇಷನಿಗನುಗುಣವಾಗಿ ಸುಂಕಕ್ಕೆ ಗುರಿಯಾಗುವ ಯಾವದಾದರೂ ಸರಕನ್ನು ಛಪಾಯಿಸೋಣ ಅಥವಾ ಛಪಾಯಿಸಲಿಕ್ಕೆ ಪ್ರಯತ್ನ ಮಾಡೋಣ ಅಥವಾ ಗೊತ್ತಿದ್ದು ಛಪಾಯಿಸಲೀಸೋಣ ಯಾ ಛಪಾವಣೆಯನ್ನು ಪಡಗಿಸೋಣ.	ಅಂಥಾ ಸರಕು ಮುಟ್ಟುಗೋಳು ವಿಧಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು ಮತ್ತು ಆ ತಕ್ಸೀರು ಸಾಬೀತುಪಟ್ಟ ಪ್ರತಿ ಮನುಷ್ಯನು ಆ ಸರಕಿನ ಮೌಲ್ಯದ ಮೂರರಷ್ಟಕ್ಕೆ ಮೀರದ ದಂಡ ತೆರಲಿಕ್ಕೆ ಗುರಿಯಾಗಿರತಕ್ಕದ್ದು.
3. 5ನೇ ಪ್ರಕರಣದಿಂದ ವಿಧಿಸಲ್ಪಟ್ಟ ಯಾವದೊಂದು ಲೆಕ್ಕವನ್ನು ತಯಾರ್ ಮಾಡಲಿಕ್ಕೆ ತಪ್ಪೋಣ ಅಥವಾ ಅದಕ್ಕೆ ದಸ್ಕತ್ತು ಹಾಕಲಿಕ್ಕೆ ಅಥವಾ ಅವನ್ನು ಪೂರೈಸುವದಕ್ಕೆ ತಿರಸ್ಕರಿಸೋಣ.	ಒಂದು ಸಾವಿರ ರೂಪಾಯಿಗೆ ಮೀರದ ದಂಡ.
4. ತನಗೆ ತಿಳಿದ ಮಟ್ಟಿನ ಅಮಲಿಗೆ ಮತ್ತು ತನ್ನ ಒಳ್ಳೆ ನಂಬಿಕೆಗೆ ಸರಿಯಾಗಿ ನಿಜವಲ್ಲದ ಒಂದು ವಿವರವನ್ನು ಕಾಣಿಸಿ ಅಂಥಾ ಯಾವದೊಂದು ಲೆಕ್ಕವನ್ನು ತಯಾರ್ಮಾಡಿ ಕಳುಹಿಸೋಣ.	ಒಂದು ದೃಢಪತ್ರಿಕೆಯಲ್ಲಿ ಸುಳ್ಳು ಹೇಳಿಕೆಯನ್ನು ನಮೂದಿಸಿದ ಬಗ್ಯೆ ಇಂಡಿಯನ್ ಪೀನಲ್ ಕೋಡಿನ 199ನೇ ಪ್ರಕರಣದಲ್ಲಿ ನಿಬಂಧಿಸಿರುವ ದಂಡನೆ.
5. ಸುಂಕಕ್ಕೆ ಮೋಸ ಮಾಡುವ ಇರಾದೆಯಿಂದ ಗಿರಣಿಯಲ್ಲಿ ಇಡಲ್ಪಟ್ಟ ಯಾವದಾದರೂ ರಿಕಾರ್ಡನ್ನು ಯಾ ಲೆಕ್ಕದ ಪುಸ್ತಕವನ್ನು ಬದಲಾಯಿಸೋಣ ಯಾ ಸುಳ್ಳುಪಡಿಸೋಣ.	ಸೃಷ್ಟನೆಯನ್ನು ಮಾಡಿದ ಬಗ್ಯೆ ಇಂಡಿಯನ್ ಪೀನಲ್ ಕೋಡಿನ 465ನೇ ಪ್ರಕರಣದಲ್ಲಿ ನಿಬಂಧಿಸಲ್ಪಟ್ಟ ದಂಡನೆ.
6. 15ನೇ ಪ್ರಕರಣದಲ್ಲಿ ನಿಬಂಧಿಸಲ್ಪಟ್ಟ ಮೇರೆಗೆ ಮಾದಿರಿಗಳನ್ನು ಇಡುವದಕ್ಕೆ ನ್ಯಾಯವಾದ ಸಬಬಿಲ್ಲದೆ ತಪ್ಪೋಣ.	ಪ್ರತಿ ತಕ್ಸೀರಿನ ಬಗ್ಯೆ ಇನ್ನೂರು ರೂಪಾಯಿಗೆ ಮೀರದ ದಂಡನೆ.
7. ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮದಿಂದ ನಿರ್ದೇಶಿಸಲ್ಪಡಬಹುದಾದಂಥಾ ಸರಿಯಾದ ರಿಕಾರ್ಡುಗಳನ್ನು ಮತ್ತು ಲೆಕ್ಕದ ಪುಸ್ತಕಗಳನ್ನು ಇಡಲಿಕ್ಕೆ ತಪ್ಪೋಣ.	ಐನೂರು ರೂಪಾಯಿಗೆ ಮೀರದ ದಂಡ ಮತ್ತು ತಪ್ಪು ಸಾಬೀತಾದ ತಾರೀಖಿನ ನಂತರ ಆ ತಕ್ಸೀರು ಇನ್ನೂ ನಡೆಯುತ್ತಾ ಬರುವ ಪ್ರತಿ ದಿವಸದ ಬಗ್ಯೆ ಇಪ್ಪತ್ತು ರೂಪಾಯಿನ ಹೆಚ್ಚು ದಂಡನೆ.
8. ಈ ರೆಗ್ಯುಲೇಷನಿಗನುಗುಣವಾಗಿ ಏರ್ಪಟ್ಟ ಯಾವದಾದರೂ ಕ್ರಮದ ಮೇರೆಗೆ ತಯಾರ್ಮಾಡಿ ಕಳುಹಿಸಲ್ಪಡಬೇಕಾಗಿದ್ದ ಲೆಕ್ಕವನ್ನು ತಯಾರ್ಮಾಡಿ ಕಳುಹಿಸಲಿಕ್ಕೆ ತಪ್ಪೋಣ.	ಒಂದು ಸಾವಿರ ರೂಪಾಯಿಗೆ ಮೀರದ ದಂಡನೆ.

9. ಈ ರೆಗ್ಯುಲೇಷನಿಗನುಗುಣವಾಗಿ ಕೊಡಲ್ಪಟ್ಟ ಯಾವದಾದರೂ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಡೆಪ್ಯುಟಿ ಕಮಿಷನರನ್ನು ಅಥವಾ ಇತರ ಆಫಿಸರನ್ನು ಬುದ್ಧಿಪೂರ್ವಕವಾಗಿ ಆತಂಕ ಪಡಿಸೋಣ.	ಆರು ತಿಂಗಳಿಗೆ ಮೀರದ ಕೈದು ಅಥವಾ ಒಂದು ಸಾವಿರ ರೂಪಾಯಿಗೆ ಮೀರದ ಜುರ್ಮಾನೆ ಅಥವಾ ಎರಡೂ.
10. ಯಾವದಾದರೂ ಮಗ್ಗದಕಾರ್ಖಾನೆಯಲ್ಲಿ ಯಾವದಾದರೂ ಸರಕು ಯಾವ ಸ್ಥಳದಲ್ಲಿ, ಪೆಟ್ಟಿಗೆಯಲ್ಲಿ ಅಥವಾ ಮುಚ್ಚಳವಿರುವ ಪಾತ್ರೆಯಲ್ಲಿ ಛಪಾಯಿಸಿಟ್ಟದ್ದು ಕಂಡು ಬಂದು ಡೆಪ್ಯುಟಿ ಕಮಿಷನರಿಗೆ ಸಮಾಧಾನವಾಗುವಹಾಗೆ ಆ ಬಗ್ಗೆ ಸಬಬು ಕೊಡದಿದ್ದರೆ.	ಅಂಥಾ ಸರಕು ಮುಟ್ಟುಗೋಳು ವಿಧಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು.
11. ಲೆಕ್ಕದಲ್ಲಿ ದಾಖಲ್ಮಾಡಿದ ಮೊತ್ತಕ್ಕಿಂತ ಜಾಸ್ತಿಯಾಗಿ ಅಥವಾ ಆ ಲೆಕ್ಕದಲ್ಲಿರುವ ವಿವರಕ್ಕೆ ಸಂಬಂಧಿಸದೆ ಯಾವದಾದರೂ ಮಗ್ಗದ ಕಾರ್ಖಾನೆಯಲ್ಲಿ ಸರಕು ಕಂಡುಬಂದರೆ.	ಅಂಥಾ ಸರಕು ಮುಟ್ಟುಗೋಳು ವಿಧಿಸಲ್ಪಡಲಿಕ್ಕಾಗಲಿ ಅಥವಾ ಮೈಸೂರ್ ಗವರ್ನಮೆಂಟಿನವರು ವಿಧಿಸಬಹುದಾದಂಥಾ ಜಾಸ್ತಿ ಸುಂಕಕ್ಕಾಗಲಿ ಗುರಿಯಾಗಿರತಕ್ಕದ್ದು.
12. ಯಾವದಾದರೂ ಅರಳೇ ಸರಕುಗಳನ್ನು ಲೆಕ್ಕಮಾಡದೆಯಾಗಲಿ ಮೂಟೆ ಮೂಟೆಗಳಾಗಿಯಾಗಲಿ ಕೊಂಡು ಹೋಗುವಾಗ್ಯೆ ಸುಂಕಕ್ಕೆ ಹಾನಿ ಉಂಟಾಗುವ ಹಾಗೆ ಅದನ್ನು ಕುರಿತು ಯಾವದಾದರೂ ಲೋಪವನ್ನು ಅಥವಾ ಸುಳ್ಳು ವಿವರವನ್ನು ಕೊಟ್ಟದ್ದು ಕಂಡು ಹಿಡಿಯಲ್ಪಟ್ಟರೆ.	ಅಂಥಾ ಹೆಚ್ಚು ಕಡಮೆಯು ಘಟಾವೋಷಿಯಿಂದ ಆದದ್ದು ಎಂತ ಡೆಪ್ಯುಟಿ ಕಮಿಷನರಿಗೆ ಅಥವಾ ಇತರ ಆಫಿಸರಿಗೆ ಸಮಾಧಾನವಾಗುವ ಹಾಗೆ ರುಜುವಾದ ವಿನಹಾ ಹಾಗೆ ಲೋಪಮಾಡಿದ ಅಥವಾ ಸುಳ್ಳು ವಿವರ ಕೊಟ್ಟ ಮನುಷ್ಯನು ಅಂಥಾ ಲೋಪ ಅಥವಾ ಸುಳ್ಳು ವಿವರದಿಂದ ಮೈಸೂರ ಗವರ್ನಮೆಂಟಿಗೆ ಲುಕ್ಸಾನು ಆಗುತ್ತಿದ್ದ ಸುಂಕದ ಮೊಬಲಗಿನ ಹತ್ತು ಪಾಲಿಗೆ ಮೀರದಷ್ಟು ದಂಡನೆಗೆ ಗುರಿಯಾಗತಕ್ಕದ್ದು.
13. ಯಾವ ಡೆಪ್ಯುಟಿ ಕಮಿಷನರಾಗಲಿ ಅವರಿಗೆ ತಾಬೇದಾರರಾದ ಇತರ ಆಫಿಸರಾಗಲಿ ಈ ರೆಗ್ಯುಲೇಷನಿಗೆ ಅಥವಾ ಇದಕ್ಕನುಗುಣವಾಗಿ ಏರ್ಪಟ್ಟ ಯಾವದಾದರೂ ಕ್ರಮಕ್ಕೆ ವಿರೋಧವಾದ ಯಾವದೊಂದು ಕೃತ್ಯವನ್ನಾದರೂ ಮಾಡಿದರೆ ಅಥವಾ ಮಾಡತಕ್ಕ ಯಾವದಾದರೂ ಕೃತ್ಯವನ್ನು ಮಾಡದಿದ್ದರೆ ಅಥವಾ ಈ ರೆಗ್ಯುಲೇಷನಿಗನುಗುಣವಾಗಿ ತಮಗೆ ಕೊಡಲ್ಪಟ್ಟ ಅಧಿಕಾರವನ್ನು ಯಾವ ಮನುಷ್ಯನಿಗಾದರೂ ಹಾನಿ ಮಾಡುವ ಅಥವಾ ತೊಂದರೆ ಕೊಡುವ ಇರಾದೆಯಿಂದ ಉಪದ್ರಕರವಾಗಿಯೂ ಅನಾವಶ್ಯಕವಾಗಿಯೂ ನಡಿಸಿದರೆ.	ಅಂಥಾ ಡೆಪ್ಯುಟಿ ಕಮಿಷನರು ಅಥವಾ ಇತರ ಆಫಿಸರು ತಕ್ಸೀರು ಸಾಬೀತು ಪಟ್ಟಲ್ಲಿ ಐನೂರು ರೂಪಾಯಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.
14. ಈ ರೆಗ್ಯುಲೇಷನಿನ 12ನೇ ಪ್ರಕರಣದ ವಿಧಿಗಳಿಗೆ ವಿರೋಧವಾಗಿ ವರ್ತಮಾನವನ್ನು ಕೊಡೋಣ.	ಒಂದು ವರುಷದ ಪರ್ಯಂತ ಸಾದಾ ಕೈದು ಅಥವಾ 1000 ರೂಪಾಯಿ ವರೆಗೆ ಜುರ್ಮಾನೆ ಅಥವಾ ಎರಡೂ.

ಅಧಿಕಾರವಿರುವ ಮಾಜಿಸ್ಟ್ರೇಟರು.

14. (1) ಈ ರೆಗ್ಯುಲೇಷನಿಗೆ ವಿರೋಧವಾಗಿ ನಡಿಸಿದ ಸಮಸ್ತ ತಕ್ಸೀರುಗಳನ್ನು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್ ಮಾತ್ರವಾಗಲಿ ಒಂದನೇ ಕ್ಲಾಸ್ ಮಾಜಿಸ್ಟ್ರೇಟ್ ಮಾತ್ರವಾಗಲಿ ವಿಚಾರಣೆ ಮಾಡಬಹುದು.

ಸರಕುಗಳ ಮುಟ್ಟುಗೋಳು ಮಾಡಲ್ಪಡುವಾಗ್ಯೆ ಅವುಗಳ ಕಟ್ಟುವಾಸಗಳು ಮತ್ತು ಆ ಕಟ್ಟುಗಳೊಳಗಿರುವ ಸಾಮಗ್ರಿಗಳು ಸೇರಿದ್ದು.

(2) ಈ ರೆಗ್ಯುಲೇಷನಿನ ಪ್ರಕಾರ ಮುಟ್ಟುಗೋಳು ಮಾಡಲ್ಪಡುವ ಯಾವದಾದರೂ ಸರಕಿನಲ್ಲಿ ಅಂಥಾ ಸರಕು ದೊರಕುವ ಗಂಟು ಅಥವಾ ಮೂಟೆಯು ಯಾವ ಕಟ್ಟುವಾಸವಾಗಲಿ ಅದರೊಳಗೆ ಇರತಕ್ಕ ಇತರ ಸಮಸ್ತ ಸಾಮಗ್ರಿಗಳಾಗಲಿ ಸೇರಿದವಾಗಿರುತ್ತವೆ.

ಮತ್ತು ಸರಕು ಸಾಗಿಸುವದರಲ್ಲಿ ಉಪಯೋಗಿಸಲ್ಪಡುವ ವಾಹನಗಳು ಮತ್ತು ಜಾನವರುಗಳು ಸೇರಿದ್ದು.

ಈ ರೆಗ್ಯುಲೇಷನಿನಂತೆ ಮುಟ್ಟುಗೋಳಿಗೆ ಒಳಪಟ್ಟ ಯಾವದಾದರೂಸರಕನ್ನು ಒಯ್ಯುವ ಬಗ್ಗೆ ಉಪಯೋಗಿಸಲ್ಪಟ್ಟ ಪ್ರತಿ ಚಕಡಾ ಗಾಡಿ ಅಥವಾ ಇತರೋಪಾಯದ ವಾಹನ ಮತ್ತು ಪ್ರತಿ ಕುದುರೆ ಅಥವಾ ಇತರ ಜಾನವರು ಅದೇ ಮೇರಿಗೆ ಮುಟ್ಟುಗೋಳಿಗೊಳಗಾಗತಕ್ಕದ್ದು.

Miscellaneous.

ವಿವಿಧ ವಿಷಯ.

ಸರಕು ತಯಾರಿ ಕಾಲದಲ್ಲಿ ಮಗ್ಗದ ಕಾರ್ಖಾನೆಯ ಮಾಲೀಕರು ಕೆಲವು ಸರಕುಗಳ ಮಾದ್ರಿಗಳನ್ನು ತೆಗೆದಿಡತಕ್ಕದ್ದು ಮತ್ತು ಅವುಗಳು ಆಜಮಾಯಿಷಿ ಬಗ್ಯೆ ಒದಗತಕ್ಕದ್ದು.

15. (1) ಪ್ರತಿ ಮಗ್ಗದ ಕಾರ್ಖಾನೆಯ ಮಾಲೀಕನು, ಯಾವ ಸರಕುಗಳ ವಿಷಯವಾಗಿ ಸಿರಬು ಕ್ರಯ ನಿರ್ಣಯಿಸಲ್ಪಟ್ಟದಿಯೋ ಆ ಸರಕುಗಳಲ್ಲದೆ ಇತರ ಸರಕುಗಳ ಸಂಗತಿಯಲ್ಲಿ ಅವುಗಳನ್ನು ತಯಾರ್ಮಾಡುವ ಕಾಲದಲ್ಲಿ ಅವುಗಳ ಮಾದ್ರಿಯನ್ನು ಅಥವಾ ಮಾದ್ರಿಗಳನ್ನು ತೆಗೆದಿಟ್ಟು ಸದರೀ ಸರಕುಗಳು ಉತ್ಪತ್ತಿಯಾದನಂತರ ಕನಿಷ್ಟ ಪಕ್ಷ ಆರು ತಿಂಗಳ ವರೆಗೆ ಅಂಥಾ ಮಾದ್ರಿಗಳನ್ನು ನೋಡುವ ಬಗ್ಯೆ ಕಾಪಾಡತಕ್ಕದ್ದು.

(2) ಅಂಥಾ ಮಾದಿರಿಗಳು ಎಲ್ಲಾ ಸಮಯಗಳಲ್ಲಿಯೂ ಡೆಪ್ಯುಟಿ ಕಮಿಷನರ ಅಥವಾ 11ನೇ ಪ್ರಕರಣಕ್ಕನುಗುಣವಾಗಿ ನೇಮಿಸಲ್ಪಟ್ಟ ಯಾವ ಆಫಿಸರ ಅಜಮಾಯಿಷಿ ಬಗ್ಯೆ ಸಿಕ್ಕುವ ಹಾಗೆ ಇರತಕ್ಕದ್ದು. ಮತ್ತು ಸದರೀ ಸರಕುಗಳನ್ನೇ ಪರೀಕ್ಷಿಸಲು ಅನುಕೂಲವಾಗದಿದ್ದ ಪಕ್ಷದಲ್ಲಿ ಈ ರೆಗ್ಯುಲೇಷನಿನಂತೆ ಅವುಗಳ ಮೇಲೆ ವಸೂಲಾಗತಕ್ಕ ಸುಂಕವನ್ನು ಮೊಕರರ್ಮಾಡುವ ಬಗ್ಯಾಗಿ ಮೇಲ್ಕಂಡ ಮಾದಿರಿಗಳನ್ನು ಪರೀಕ್ಷಿಸಿದನಂತರ ಅಂಥಾ ಸರಕುಗಳ ಕಿಮ್ಮತ್ತನ್ನು ಠರಾಯಿಸೋಣ ಸಾಕಾಗಿರುತ್ತೆ.

(3) ಯಾವದಾದರೂ ನಿರ್ದೇಶಿಸಲ್ಪಟ್ಟ ಸಂಗತಿಯಲ್ಲಿ ಈ ಪ್ರಕರಣದ ಉದ್ದೇಶಗಳ ಬಗ್ಯೆ ಯಾವದು ಒಂದು ಸಾಕಾದ ಮಾದಿರಿಯಾಗಿರತಕ್ಕದ್ದೆಂಬದನ್ನು, ಮೈಸೂರ್ ಗವರ್ನಮೆಂಟಿನವರು ಒಂದು ನಿಬಂಧನೆಯ ದ್ವಾರಾ ವಿವರಿಸಬಹುದು.

ಈ ರೆಗ್ಯುಲೇಷನಿಗನುಗುಣವಾದ ಹುಕುಮುಗಳನ್ನು ತೆಗೆದು ಹಾಕಲಿಕ್ಕಾಗಲಿ ತಬ್ದಿಲ್ ಮಾಡಲಿಕ್ಕಾಗಲಿ ಗವರ್ನಮೆಂಟಿನವರಿಗೆ ಅಧಿಕಾರ.

16. ಈ ರೆಗುಲೇಷನಿಗನುಗುಣವಾಗಿ ಕೊಡೋಣಾದ ಯಾವದಾದರೂ ತೀರ್ಪಿನಿಂದಲಾಗಲಿ ಹುಕುಮಿನಿಂದಲಾಗಲಿ ನಷ್ಟಹೊಂದಿದ ಯಾವ ಮನುಷ್ಯನಾದರೂ ಅರ್ಜಿಕೊಟ್ಟಲ್ಲಿ ಮೈಸೂರ್ ಗವರ್ನಮೆಂಟಿನವರು ಅಂಥಾ ತೀರ್ಪನ್ನು ಅಥವಾ ಹುಕುಮನ್ನು ರದ್ದು ಮಾಡಬಹುದು ಅಥವಾ ತಬ್ದಿಲ್ ಮಾಡಬಹುದು.

ನಮೂನೆಗಳನನ್ನು ತೆಗೆದುಕೊಳ್ಳಲಿಕ್ಕೆ ಅಧಿಕಾರ.

17. (1) ಡೆಪ್ಯುಟಿ ಕಮಿಷನರಾಗಲಿ 11ನೇ ಪ್ರಕರಣಕ್ಕನುಗುಣವಾಗಿ ನೇಮಕಪಟ್ಟ ಆಫಿಸರಾಗಲಿ ಯಾವದಾದರೂ ಸರಕಿನ ನಮೂನೆಗಳನ್ನು ಪರೀಕ್ಷೆ ಬಗ್ಯೆ ಅಥವಾ ಅದರ ಮೌಲ್ಯವನ್ನು ನಿರ್ಣಯಿಸುವ ಬಗ್ಯೆ ಅಥವಾ ಇತರ ಯಾವದಾದರೂ ಅವಶ್ಯಕವಾದ ಉದ್ದೇಶದ ಬಗ್ಯೆ ತೆಗೆದುಕೊಳ್ಳಬಹುದು.

(2) ಮಾಲೀಕನು 11ನೇ ಪ್ರಕರಣಕ್ಕನುಗುಣವಾಗಿ ನೇಮಕಪಟ್ಟ ಆಫಿಸರಿಗೆ ಯಾವದಾದರೂ ನಮೂನೆಯನ್ನು ಕೊಡಬೇಕಾಗಿ ಕೇಳಲ್ಪಟ್ಟಲ್ಲಿ ಅಂಥಾ ನಮೂನೆಯನ್ನು ಡೆಪ್ಯುಟಿಕಮಿಷನರ ಹೆಸರಿಗೆ ವಿಳಾಸ ಬರೆದ ಒಂದು ಲಕೋಟೆಯಲ್ಲಿ ಹಾಕಿ ಮೊಹರು ಮಾಡತಕ್ಕದ್ದು; ಮತ್ತು ಅಂಥಾ ಸಂಗತಿಯಲ್ಲಿ ಸದರೀ ಆಫಿಸರು ಅಂಥಾ ಲಕೋಟೆಯನ್ನು ಬಜ್ಜಿನಸು ಡೆಪ್ಯುಟಿ ಕಮಿಷನರಿಗೆ ಕೊಡತಕ್ಕದ್ದು.

(3) ಅಂಥಾ ಪ್ರತಿ ನಮೂನೆಯನ್ನು ಸಾಧ್ಯವಿದ್ದರೆ ಮಾಲೀಕನಿಗೆ ವಾಪಸು ಕೊಡತಕ್ಕದ್ದು ಅಥವಾ ಅತನ ಅನುಮತಿಯಿಂದ ಡೆಪ್ಯುಟಿ ಕಮಿಷನರು ಅದನ್ನು ವಿಕ್ರಯಿಸಿ ಹುಟ್ಟುವಳಿಯಾದ ಐವಜನ್ನು ಮಾಲೀಕನ ಲೆಕ್ಕಕ್ಕೆ ದಾಖಲು ಮಾಡತಕ್ಕದ್ದು.

ಮಗ್ಗದ ಕಾರ್ಖಾನೆಯ ಮಾಲೀಕರು ರಿಕಾರ್ಡುಗಳನ್ನೂ ಲೆಕ್ಕಗಳನ್ನೂ ಇಡತಕ್ಕದ್ದು.

18. ಪ್ರತಿ ಮಗ್ಗದ ಕಾರ್ಖಾನೆಯ ಮಾಲೀಕನು ಈ ರೆಗ್ಯುಲೇಷನಿಗನುಗುಣವಾಗಿ ಏರ್ಪಟ್ಟ ಯಾವದಾದರೂ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದಂಥಾ ರಿಕಾರ್ಡುಗಳನ್ನು ಲೆಕ್ಕದ ಪುಸ್ತಕಗಳನ್ನೂ ಇಡತಕ್ಕದ್ದು.

ಯಂತ್ರದ ಮೂಲಕ ಉತ್ಪತ್ತಿಯಾದ ಅರಳೇ ಎಳೆಗಳ ಲೆಕ್ಕಗಳನ್ನು ಕಾಲಕಾಲಕ್ಕೆ ಮಗ್ಗದ ಕಾರ್ಖಾನೆಯ ಮಾಲೀಕರು ತಯಾರ್ಮಾಡಿ ಕಳುಹಿಸತಕ್ಕದ್ದು.

19. ಕೈ ಕೆಲಸದಿಂದಲ್ಲದೆ ಅನ್ಯಥಾ ನಡಿಸಲ್ಪಡುವ ಯಂತ್ರದಿಂದ ಅರಳೇ ನೂಲುಗಳು ತಯಾರ್ ಮಾಡಲ್ಪಡುವ ಪ್ರತಿ ಒಂದು ಮಗ್ಗದ ಕಾರ್ಖಾನೆಯ ಅಥವಾ ಸ್ಥಳದ ಮಾಲೀಕನು ಅಂಥಾ ಸಮಸ್ತ ನೂಲುಗಳ ಮೊತ್ತವನ್ನೂ ವಿವರವನ್ನೂ ಕುರಿತು ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮದಿಂದ ನಿರ್ದೇಶಿಸಲ್ಪಡಬಹುದಾದ ನಮೂನೆಯಲ್ಲಿ ಮತ್ತು ತಪ್ಸೀಲುಗಳೊಂದಿಗೂ ವಾಯಿದೆಗಳಂತೆಯೂ ಲೆಕ್ಕಗಳನ್ನು ಕಾಲಕಾಲಕ್ಕೆ ಸರಿಯಾಗಿ ತಯಾರ್ಮಾಡಿಸಿ ಡೆಪ್ಯುಟಿ ಕಮಿಷನರಿಗೆ ಕಳುಹಿಸತಕ್ಕದ್ದು.

ಕ್ರಮಗಳನ್ನು ಏರ್ಪಡಿಸಲಿಕ್ಕೆ ಗವರ್ನಮೆಂಟಿನವರಿಗೆ ಅಧಿಕಾರ.

20. (1) ಮೈಸೂರ್ ಗವರ್ನಮೆಂಟಿನವರು ಈ ರೆಗ್ಯುಲೇಷನಿಗನುಗುಣವಾಗಿ ಅಗಿಂದಾಗ್ಯೆ ಕ್ರಮಗಳನ್ನು ಏರ್ಪಡಿಸಬಹುದು—

(a) ಈ ರೆಗ್ಯುಲೇಷನಿನಿಂದ ಅಥವಾ ಇದರ ಮೇರೆಗೆ ವಿಧಿಸಲ್ಪಟ್ಟ ಯಾವದೊಂದು ಲೆಕ್ಕದ ನಮೂನೆಯನ್ನು ಆಯಾ ಲೆಕ್ಕದಲ್ಲಿ ನಮೂದಿಸತಕ್ಕ ತಪ್ಸೀಲುಗಳನ್ನು ಅದು ಸರಿಯಾಗಿದೆಯೆಂದು ದೃಢಪಡಿಸುವ ವಿಧವನ್ನು ಮತ್ತು ಅದರ ವಿಷಯವಾಗಿ ಅವಶ್ಯವಿರಬಹುದಾದ ಇತರ ಎಲ್ಲಾ ಷರತ್ತುಗಳನ್ನು ನಿರ್ದೇಶಿಸಿ;

(b) ನೂತನ ನೂಲುಗಳ ಲೆಕ್ಕಗಳನ್ನು ಕೊಡಬೇಕೆಂಬದಾಗಿ;

(c) ಡೆಪ್ಯುಟಿಕಮಿಷನರು 6ನೇ ಪ್ರಕರಣಕ್ಕನುಗುಣವಾಗಿ ಕೊಡತಕ್ಕ ನೋಟಿಸಿನ ನಮೂನೆಯನ್ನು ನಿರ್ದೇಶಿಸಿ;

(d) ಮಗ್ಗದ ಕಾರ್ಖಾನೆಗಳ ಅಜಮಾಯಿಷಿ ಮತ್ತು ಅದಕ್ಕೆ ಸಂಬಂಧಪಟ್ಟ ಡೆಪ್ಯುಟಿ ಕಮಿಷನರ ಮತ್ತು ಇತರ ಆಫಿಸರ ಅಧಿಕಾರಗಳನ್ನೂ ಕೆಲಸಗಳನ್ನೂ ಕ್ರಮಗೊಳಿಸಿ;

(e) ಕೋಠಿಗಳನ್ನು ಕುರಿತು ಈ ರೆಗ್ಯುಲೇಷನಿಗನುಗುಣವಾದ ನಿಬಂಧನೆಯನ್ನು ಮತ್ತು ಕೋಠಿಗಳಲ್ಲಿ ಸರಕುಗಳನ್ನು ದಾಸ್ತಾನುಮಾಡುವದನ್ನೂ ಅವುಗಳಿಂದ ಹೊರಗೆ ಕೊಂಡುಹೋಗುವದನ್ನೂ ಆ ವಿಷಯವಾಗಿ ಡೆಪ್ಯುಟಿ ಕಮ್ಮಿಷನರ ಅಧಿಕಾರಗಳನ್ನೂ ಕೆಲಸಗಳನ್ನೂ ಕ್ರಮಗೊಳಿಸಿ;

(f) ಈ ರೆಗ್ಯುಲೇಷನಿನ ಮೇರೆಗೆ ಮಗ್ಗದ ಕಾರ್ಖಾನೆಗಳ ಮಾಲೀಕರು ಇಡತಕ್ಕ ರಿಕಾರ್ಡುಗಳನ್ನೂ ಲೆಕ್ಕದಪುಸ್ತಕಗಳನ್ನೂ ನಿರ್ದೇಶಿಸಿ; ಮತ್ತು

(g) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ನಿಬಂಧನೆಗಳನ್ನು ಜಾರಿಯಲ್ಲಿ ತರುವದಕ್ಕೋಸ್ಕರ ಕ್ರಮಗಳನ್ನು ಏರ್ಪಡಿಸಬಹುದು.

(2) ಅಂಥಾ ಯಾವದಾದರೂ ಕ್ರಮವನ್ನು ಅದರಲ್ಲಿ ನಮೂದಿಸಲ್ಪಟ್ಟ ಯಾವದಾದರೂ ಸ್ಥಳಕ್ಕೆ ಯಾ ಸ್ಥಳಗಳಿಗೆ ಮಾತ್ರ ಲಗಾವುಮಾಡಬಹುದು.

ಒಪ್ಪಂದಗಳು ನಡೆದಿದ್ದರೆ ಸುಂಕ ಜಾಸ್ತಿ ಅಥವಾ ಕಮ್ಮಿಯನ್ನು ದಾಖಲ್ ಅಥವಾ ವಜಾ ಮಾಡಬೇಕು.

21. ಸರಕಿನ ಬಿಕ್ರಿಬಗ್ಗೆ ಒಪ್ಪಂದ ನಡೆಯುವಾಗ್ಯೆ ಸುಂಕ ದಾಖಲಾಗಬೇಕಾಗಿಲ್ಲದ ಪಕ್ಷದಲ್ಲಿ ಸುಂಕದ ಪಾವತಿ ವಿಚಾರವಾಗಿ ಯಾವ ಒಡಂಬಡಿಕೆಯೂ ಇಲ್ಲದೆ ಬಿಕ್ರಿ ಒಪ್ಪಂದ ನಡದ ನಂತರವಾಗಲಿ ಅಥವಾ ಒಪ್ಪಂದದ ಕಾಲದಲ್ಲಿ ಸುಂಕದಾಖಲಾಗಬೇಕಾಗಿದ್ದು ಅಂಥಾ ಸುಂಕವು ಸಂದ ಸರಿಕಿನ ಬಿಕ್ರಿಗಾಗಿ ಒಪ್ಪಂದ ನಡೆದ ನಂತರವಾಗಲಿ ಯಾವ ಸರಿಕಿನ ಮೇಲಾದರೂ ಈ ರೆಗ್ಯುಲೇಷನಿನ ಪ್ರಕಾರ ಸುಂಕ ಮೊಕರರಾದರೂ, ಹೆಚ್ಚಿಸಲ್ಪಟ್ಟರೂ, ತಗ್ಗಿಸಲ್ಪಟ್ಟರೂ ಅಥವಾ ಮಾಫ್‌ಮಾಡಲ್ಪಟ್ಟರೂ:—

(a) ಸಂದರ್ಭಾನುಸಾರ ಮೊಕರರಾದ ಅಥವಾ ಹೆಚ್ಚಿಸಲ್ಪಟ್ಟ ಸದರೀ ಸುಂಕವು ಪಾವತಿಮಾಡಲ್ಪಟ್ಟರೆ, ಬಿಕ್ರಿದಾರನು ಅಂಥಾ ಸುಂಕ ಅಥವಾ ಸುಂಕ ಜಾಸ್ತಿಗೆ ಸಮನಾದಷ್ಟುಮೊಬಲಗನ್ನು ಸದರೀ ಒಪ್ಪಂದದ ಖರೀದಿ ಮೊಬಲಗಿಗೆ ಸೇರಿಸಿಕೊಳ್ಳಬಹುದು ಮತ್ತು ಅವನು ಅಂತಾ ಹೆಚ್ಚು ಮೊಬಲಗನ್ನು ಕೊಡಲ್ಪಡುವದಕ್ಕೂ ಅದಕ್ಕಾಗಿ ದಾವೆಮಾಡಿ ಅದನ್ನು ವಸೂಲ್ಮಾಡಿಕೊಳ್ಳುವದಕ್ಕೂ ಹಕ್ಕುಳ್ಳವನಾಗಿರತಕ್ಕದ್ದು, ಮತ್ತು

(b) ಸಂದರ್ಭಾನುಸಾರ ಕಮ್ಮಿಮಾಡಲ್ಪಟ್ಟ ಸುಂಕ ಮಟ್ಟಿಗೆ ಕೊಡಲ್ಪಟ್ಟರೆ ಅಥವಾ ಮಾಫ್‌ಮಾಡಲ್ಪಟ್ಟ ಸುಂಕವು ಕೊಡಲ್ಪಡದೆ ಹೋದರೆ ಬೆಲೆಗೆ ಕೊಂಡವನು ಕಮ್ಮಿ ಅಥವಾ ಮಾಫಾದ ಸುಂಕಕ್ಕೆ ಸಮನಾಗಿ ಒಪ್ಪಂದದ ಖರೀದೀಲಿ ವಜಾಮಾಡಿ ಕೊಳ್ಳಬಹುದು, ಮತ್ತು ಅವನು ಅಂಥಾ ವಜಾ ಮೊಬಲಗನ್ನು ಕೊಡುವದಕ್ಕಾಗಲಿ ಅಥವಾ ಅದಕ್ಕಾಗಿ ದಾವಾವಿಗಾಗಲಿ ಒಳಗಾಗತಕ್ಕದ್ದಿಲ್ಲವು

ದಾಸ್ತಾನಿನಲ್ಲಿರುವ ಸರಕುಗಳನ್ನು ಕುರಿತು ನಿಬಂಧನೆ.

22. (1) ಈ ರೆಗ್ಯುಲೇಷನಿನ ಅಮಲ್ ಷುರುವಿನಲ್ಲಿ ಯಾವದೊಂದು ಮಗ್ಗದಕಾರ್ಖಾನೆಯ ವಠಾರದಲ್ಲಿರುವ ಮತ್ತು ಇದ್ದ ಹಾಗೆಯೇ ಅಥವಾ ಕಟ್ಟುಗಳಾಗಿ ಯಾಗಲಿ ಪ್ಯಾಕೆಟ್ಟುಗಳಾಗಿಯಾಗಲಿ ಮಡಾಯಿಸಲ್ಪಟ್ಟನಂತರ ಕಾರ್ಖಾನೆಯಿಂದ ಬಯ್ಯಲ್ಪಡಲಿಕ್ಕೆ ಸಿದ್ಧವಾಗಿರುವ ಯಾವ ಸರಕುಗಳ ಮೇಲಾದರೂ ಈ ರೆಗ್ಯುಲೇಷನಿಗನುಗುಣವಾಗಿ ಯಾವ ಸುಂಕವೂ ಮೊಕರರ್ಮಾಡಲ್ಪಡ ತಕ್ಕದ್ದಲ್ಲ.

ಪರಂತು ಈ ರೆಗ್ಯುಲೇಷನಿನ ಅಮಲ್ ಷುರುವಿನ ಲಾಗಾಯತು ಏಳು ದಿವಸಗಳೊಳಗೆ ಅಂಥಾ ಸರಕುಗಳ ಒಂದು ಪಟ್ಟಿಯನ್ನು ತಯಾರ್ಮಾಡಿ ಡೆಪ್ಯುಟಿ ಕಮ್ಮಿಷನರ ಬಳೀಲಿ ಒಪ್ಪಿಸತಕ್ಕದ್ದು.

(2) ಈ ರೆಗ್ಯುಲೇಷನಿನ 5ನೇ ಪ್ರಕರಣಕ್ಕನುಗುಣವಾಗಿ ತಯಾರ್ಮಾಡಲ್ಪಟ್ಟ ಸರಕುಗಳ ಉತ್ಪತ್ತಿಯನ್ನು ಕುರಿತ ಲೆಕ್ಕಗಳು ಇತರ ಸರಕುಗಳನ್ನು ಕುರಿತ ಲೆಕ್ಕಗಳಿಂದ ಪ್ರತ್ಯೇಕವಾಗಿರತಕ್ಕದ್ದು.

ಕೆ. ಶೇಷಾದ್ರಿ ಅಯ್ಯರ್,
ಮೈಸೂರು ಸಂಸ್ಥಾನದ ದಿವಾನರು.

599

ಮೈಸೂರ ಗೆಜೆಟ.

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಗುರುವಾರ, ನವಂಬರ ತಾ॥ 26, ಸನ್ 1896.

IVನೇ ಭಾಗ.

ಸರ್ಕಾರೀ ಕಾಗದ ಪತ್ರಗಳು.

Summary Of Advantages Obtainable By Men Enlisting In The Madras Army.

ಮದ್ರಾಸ್ ಫೌಜಿನಲ್ಲಿ ದಾಖಲಾಗುವಂಥವರಿಗೆ ಸಿಕ್ಕುವ ಪ್ರಯೋಜನಗಳ ಗೋಷ್ವಾರೆ.

ಸರಂಜಾಮುಗಳ ಬಗ್ಯೆ ಸಿಕ್ಕುವ ಹಣ—

ದಾಖಲಾದ ಕೂಡಲೆ	..	..	ರೂ. 30
ವರುಷ ಒಂದಕ್ಕೆ	..	..	,, 5

ತೊಡಿಗೆ—

ರೆಗ್ಯುಲೇಷನಿನಲ್ಲಿ ಹೇಳಿರುವ ಮೇರೆಗೆ.

ಸಂಬಳ—

ಸಂಬಳವು ಇತ್ತಲಾಗೆ ಹೆಚ್ಚಿಸೋಣಾಗಿ ಕೆಳಗೆ ಕಾಣಿಸಿದ ಮೇರೆಗೆ ಇರುತ್ತದೆ:—

	ರಾಹುತರು. ರೂ.	ಪಾಯಿದಳ. ರೂ.
ಶಿಪಾಯರ ತಿಂಗಳುಗಟ್ಲೆ ಸಂಬಳ, ದಾಖಲಾದ ಕೂಡಲೆ	11	9
ಒಳ್ಳೇ ನಡತೆಯುವನಾಗಿದ್ದು ಮೂರು ವರುಷಗಳ ಕದೀಮಿನಂತರ	12	10
,, ಆರು ,,	13	11
,, ಹತ್ತು ,,	14	12

ಕಮಿಷನ್ ಹೊಂದದ ಆಫಿಸರರ ತಿಂಗಳುಗಟ್ಲೆ ಸಂಬಳವು—

ರಾಹುತರ ಬಲದಲ್ಲಿ ರೂ. 18ರಿಂದ 26ರ ವರೆಗೆ.

ಪಾಯಿದಳದಲ್ಲಿ ರೂ. 14ರಿಂದ 20ರ ವರೆಗೆ.

ನೇಟಿವ್ ಆಫಿಸರರ ತಿಂಗಳುಗಟ್ಲೆ ಸಂಬಳವು—

ರಾಹುತರ ಬಲದಲ್ಲಿ ರೂ. 50ರಿಂದ 150ರ ವರೆಗೆ.

ಪಾಯಿದಳದಲ್ಲಿ ರೂ. 40ರಿಂದ 100ರ ವರೆಗೆ.

ಬಡ್ತಿ—
ಶಿಪಾಯಿರೊಳಗಿಂದ ಆರಿಸಲ್ಪಟ್ಟು ನಾನ್ ಕಮ್ಮಿಷನ್ಡ್ ಆಫಿಸರರಾಗಿ ಬಡ್ತಿ ಕೊಡಲ್ಪಡುವದು.
ನಾನ್ ಕಮ್ಮಿಷನ್ಡ್ ಆಫಿಸರರೊಳಗಿಂದ ಆರಿಸಲ್ಪಟ್ಟು ನೇಟಿವ್ ಆಫಿಸರರಾಗಿ ಬಡ್ತಿ ಕೊಡಲ್ಪಡುವದು.
ಪ್ರಯಾಣದ ವೇಳೆ ಸರ್ಕಾರದ ಖರ್ಚಿನಿಂದ ಕೊಂಡು ಹೋಗೋಣ ಅಥವಾ ಭತ್ತೆ ಕೊಡೋಣ.

ನಾನ್ ಕಮ್ಮಿಷನ್ಡ್ ಆಫಿಸರರಿಗೆ ದರ್ಜೆಯು ಸಂಬಳದ ವಿನಹಾ ತಿಂಗಳಿಗೆ ಹತ್ತು ರೂಪಾಯಿವರೆಗೆ ಹೆಚ್ಚಿಗೆ ದೊರಕುವ ಬೇರೆ ಬೇರೆ ರೆಜಿಮೆಂಟಲ್ ಉದ್ಯೋಗಗಳು ಸಿಕ್ಕಲಿಕ್ಕೆ ಆಸ್ಪದ ಉಂಟು.

ಪ್ರತಿ ಒಂದು ರಾಹುತರ ರೆಜಿಮೆಂಟಿನಲ್ಲಿ ಕುದುರೆಗಳನ್ನು ತರ್ಬೀಯತು ಮಾಡುವ ತಿಂಗಳು ಒಂದಕ್ಕೆ—ರೂ. 3—8—0 ಮತ್ತು ರೂ. 5—4—0 ಸಂಬಳವಿರುವ ಎಂಟು ಉದ್ಯೋಗಗಳಿರುತ್ತವೆ. ಇವು ಶಿಪಾಯಿಗೆ ಸಿಕ್ಕಬಹುದು.

ಅಕ್ಕಿ ಪ್ರಿಯವಾದಾಗ್ಯೆ ಕಾಂಪೆನ್‌ಸೇಷನ್ ಯಾನೆ ಭತ್ತೆ.

ಆಯುಧಗಳನ್ನು ಉಪಯೋಗಿಸುವಲ್ಲಿ ಮತ್ತು ಸೈನ್ಯಕ್ಕೆ ಸಂಬಂಧಪಟ್ಟ ನಿಶಾನಿಗಳನ್ನು ತೋರಿಸುವಲ್ಲಿ ಚಮತ್ಕಾರವನ್ನು ತೋರಿಸಿದ ಬಗ್ಯೆ ಇನಾಮುಗಳು.

ಸೋಲ್ಜರನ ಕುಟುಂಬದವರಿಗೆ ಸಹಾ ವೈದ್ಯರು ಹಣ ತೆಗದುಕೊಳ್ಳದೇನೆ ಬಂದು ಚಿಕಿತ್ಸೆ ಮಾಡುವರು.
ರೆಜಿಮೆಂಟಲ್ ಶಾಲೆಯಲ್ಲಿ ಉಚಿತವಾಗಿ ಇಂಗ್ಲಿಷ್ ವ ದೇಶಭಾಷೆ ವಿದ್ಯಾಭ್ಯಾಸ.
ಬಾಡಿಗೆ ಇಲ್ಲದೆ ಬಿಡಾರ ಯಾ ಆ ಬಗ್ಯೆ ಹಣ.
ಪರಾಯಿ ನೌಕರಿಗೆ ಹೋಗುವಾಗ್ಯೆ ಊಟ ಮಾಫಿ, ಭತ್ತೆ ವ ಹೆಚ್ಚಿಗೆ ತೊಡಿಗೆಗಳು.

ಒಂದರೆ ಸಂದರ್ಭಗಳಲ್ಲಿ ತಂದೆಗೆ ಯಾ ತಾಯಿಗೆ ಯಾ ವಿಧವೆಗೆ ಯಾ ಮಗನಿಗೆ ಯಾ ಮಗಳಿಗೆ ದರ್ಜೆ ಪ್ರಕಾರ ತಿಂಗಳಿಗೆ ರೂ. 2—12—0 ರಿಂದ ರೂ. 36ರ ವರೆಗೆ ಪೆನ್‌ಷನ್.

ಯುದ್ಧದಲ್ಲಿ ಶೂರತ್ವ ತೋರಿಸಿದವರಿಗೆ ಆರ್ಡರ್ ಆಫ್ ಮೆರಿಟ್ ಎಂಬ ಬಿರುದು ಮತ್ತು ಅದರೊಡನೆ ಸಾಧಾರಣ ಸಂಬಳ ಯಾ ಪೆನ್‌ಷನ್ ವಿನಹಾ ಹೆಚ್ಚಿಗೆ, ದರ್ಜೆ ಪ್ರಕಾರ ತಿಂಗಳಿಗೆ ರೂ. 1—13—4ರಿಂದ ರೂ. 60ರ ವರೆಗೆ ವರ್ಷಾಶನ.

21 ವರುಷಗಳ ನೌಕರಿನಂತರ ದರ್ಜೆ ಪ್ರಕಾರ ತಿಂಗಳಿಗೆ ರೂ. 4ರಿಂದ ರೂ. 30ರ ವರೆಗೆ ಮತ್ತು 32 ವರುಷಗಳ ನೌಕರಿ ನಂತರ ದರ್ಜೆ ಪ್ರಕಾರ ತಿಂಗಳಿಗೆ ರೂ. 7ರಿಂದ ರೂ. 50ರ ವರೆಗೆ ಪೆನ್‌ಷನ್.

ದೇಹಸ್ಥಿತಿಯಿಂದ ನೌಕರಿ ಬಗ್ಯೆ ಅಶಕ್ತರಾದ ಮನುಷ್ಯರಿಗೆ ನೌಕರಿ ಮೇರೆಗೆ 3 ತಿಂಗಳಿಂದ 12 ತಿಂಗಳ ವರೆಗಿನ ಸಂಬಳ ಗ್ರಾಟ್ಯೂಟಿಯಾಗಿ ಕೊಡೋಣ.

3 ವರುಷಕ್ಕಿಂತ ಹೆಚ್ಚು ಕಾಲ ನೌಕರಿಯಲ್ಲಿದ್ದರೆ ಮತ್ತು ದಳಪು ಅಗತ್ಯವಿರುವ ಮಂದಿಗಿಂತ ಸೇಕಡಾ ಐದರ ಮೇರೆಗೆ ಜಾಡಿ ಮೆಯಾಗದಿದ್ದರೆ ಕೇಳಿಕೊಂಡಾಗ ನಿರ್ಬಂಧವಿಲ್ಲದೆ ಬಿಡುಗಡೆ ಪಡಿಸೋಣ.

ಅಸ್ವಸ್ಥದ ದೆಶೆಯಿಂದ ರಜಾಪಡಕೊಂಡು ಮನೆಗೆ ಹೋಗುವಾಗ ಮತ್ತು ವಾಪಸು ಬರುವಾಗ ದಾರಿ ಖರ್ಚು.

ದೇಹ ಪ್ರಕೃತಿಯು ದೆಶೆಯಿಂದ ನೌಕರಿ ಬಗ್ಯೆ ಅಶಕ್ತರೆಂಬದರಿಂದ ಪೆನ್‌ಷನ್ ಕೊಡಲ್ಪಟ್ಟಾಗ, ಅಸಮರ್ಥರೆಂತ ಮಾಡಲ್ಪಟ್ಟಾಗ ಯಾ ಬರ್ತರಫ್ ಮಾಡಲ್ಪಟ್ಟಾಗ ಮನೆಗೆ ಹೋಗುವ ದಾರಿಖರ್ಚು.

ಸ್ಟೇಷನು ಬದಲಾಯಿಸಲ್ಪಟ್ಟಾಗ ಮತ್ತು ಗಂಡನು ಪರಾಯಿ ನೌಕರಿಯಲ್ಲಿದ್ದಾಗ ಹೆಂಡತಿ ಮಕ್ಕಳಿಗೆ ದಾರಿಖರ್ಚು.
ಜನವರಿ ಹಬ್ಬ (ವರುಷದ ಷುರುವಿನ ದಿನ) ದ ಬಗ್ಯೆ ಮತ್ತು ಶ್ರೀ ಮಹಾರಾಣಿಯವರು ಹುಟ್ಟಿದ ದಿನದ ಬಗ್ಯೆ ಭತ್ತೆ.
ಬರ್ಮಿ ಯಾ ಶಾನ್ ಭಾಷೆಗಳಲ್ಲಿ ಎಲಿಮೆಂಟರಿ ಸ್ಟ್ಯಾಂಡರ್ಡ್ (ಮೂಲದರ್ಜೆ) ಪರೀಕ್ಷೆ ಪ್ಯಾಸಾದ ಬಗ್ಯೆ ರೂ. 180, ಮತ್ತು ಲೋವರ್ ಸ್ಟ್ಯಾಂಡರ್ಡ್ ಪ್ಯಾಸಾದ ಬಗ್ಯೆ ರೂ. 360 ಇನಾಮು.

ವರ್ಷಾಶನಗಳ ವ ಬಹುಮಾನಗಳ ಸಮೇತ ಒಳ್ಳೇ ನಡತೆ ಬಗ್ಗಿನ ಮೆಡಲ್‌ಗಳು. ಪ್ರತಿ ದಳದಲ್ಲಿಯು ಹವಲ್ದಾರರಿಗೆ ರೂ. 25ರ ವರ್ಷಾಶನದ ಸಮೇತ ಒಂದು ಬೆಳ್ಳಿಯ ಮೆಡಲು.

ಪ್ರತಿ ದಳದ ರ್ಯಾಂಕ್ ಅಂಡ್ ಫೈಲ್ ಅಂದರೆ ಎಲ್ಲಾ ಶಿಪಾಯಿರ ಬಗ್ಯೆ ವರುಷಂ ಪ್ರತಿ ರೂ. 25ರ ವರ್ಷಾಶನದ ಸಮೇತ ಎರಡು ಬೆಳ್ಳಿಯ ಮೆಡಲ್‌ಗಳು.

ಜಖಂ ಹೊಂದಿದ ಬಗ್ಯೆ ಗ್ರಾಟ್ಯೂಟಿಗಳು ಮತ್ತು ಪೆನ್‌ಷನ್‌ಗಳು ಈ ಪೆನ್‌ಷನ್‌ಗಳು ದರ್ಜೆಯು ವ ಜಖಮಿನ ಸ್ವಭಾವದ ಮೇರೆಗೆ ತಿಂಗಳಿಗೆ ರೂ. 3—4—0 ರಿಂದ ರೂ. 19ರ ವರೆಗೆ ಆಗಿರುತ್ತವೆ.

RESERVE.

ರಿಜರ್ವ್ ಅಂದರೆ ಜರೂರಾತಿ ಬಗ್ಯೆ ಇಡಲ್ಪಟ್ಟಂಥವರು.

ಐದರಿಂದ ಹನ್ನೆರಡುವರುಷಗಳ ವರೆಗೆ ನೌಕರಿಯಲ್ಲಿದ್ದು, ಒಳ್ಳೇ ನಡತೆಯುಳ್ಳ ಸೋಲ್ಜರರು ರಿಜರ್ವಿನಲ್ಲಿ ಸೇರಲಿಕ್ಕೆ ಕೇಳಬಹುದು. ಆಗ ಅವರು ತಿಂಗಳಿಗೆ ರೂ. 3ರ ಪ್ರಕಾರ ರಿಜರ್ವ್ ಸಂಬಳ ಪಡಕೊಂಡು ತಮ್ಮ ಮನೆಗಳಲ್ಲಿ ವಾಸಮಾಡಿರಬಹುದು.

ರಿಜರ್ವ್ ಮನುಷ್ಯರು ಯುದ್ಧದ ನೌಕರಿ ಬಗ್ಯೆ ಮತ್ತು ವರುಷಾವಧಿ ಟ್ರೈನಿಂಗ್ ಅಂದರೆ ತರ್ಬೀಯತಿನ ಬಗ್ಯೆ ತಮ್ಮ ದಳಗಳಲ್ಲಿ ಪುನಹಾ ಕರಕೊಳ್ಳಲ್ಪಡಲಿಕ್ಕೆ ಬದ್ಧರಾಗಿರುತ್ತಾರೆ. ಆಗ ಅವರು ರಿಜರ್ವ್ ಸಂಬಳದ ಬದಲಾಗಿ ಸೋಲ್ಜರರಾಗಿ ಪೂರ್ಣ ಸಂಬಳವನ್ನು ಹೊಂದುವರು.

ಷರಾ—ಹೆಚ್ಚಿನ ವಿವರಗಳು ಪೋಸ್ಟ್‌ಮಾಸ್ಟರ್ (ಠಾಣ್ಯದ ಮುಖ್ಯ ಉದ್ಯೋಗಸ್ಥ)ರಿಗೆ ಅರ್ಜಿ ಮಾಡೋಣಾದಲ್ಲಿ ಸಿಕ್ಕುವವು.

NOTIFICATION.

ಇಸ್ತಿಹಾರ್‌ನಾಮೆ.

ADVANTAGES OBTAINABLE BY MEN ENLISTING IN THE MADRAS ARMY.

ಮದ್ರಾಸ ಫೌಜಿನಲ್ಲಿ ದಾಖಲಾಗುವಂಥವರಿಗೆ ಸಿಕ್ಕುವ ಪ್ರಯೋಜನಗಳು.

1. ದಾಖಲಾದ ಕೂಡಲೇ ಅವಶ್ಯವಿರುವ ಸರಂಜಾಮುಗಳ ಬಗ್ಯೆ ಸಿಕ್ಕುವ ಹಣ ರೂ. 30.
2. ವರುಷಂ ಪ್ರತಿ ಸಿಕ್ಕುವ ಅರ್ಧ ಮೌಂಟಿಂಗ್ ಭತ್ತೆ ಬಗ್ಯೆ ಸಿಕ್ಕುವ ಹಣ ರೂ. 5, ಮೂರು ತಿಂಗಳಿಗೆ ಒಂದಾವರ್ತಿ ರೂ. 1—4—0 ಪ್ರಕಾರ ಕೊಡೋಣಾಗುವದು (a).
3. ತೊಡಿಗೆ.

ರಾಹುತರು.—ನೇಟಿವ್ ಆಫಿಸರರ ವಿನಹಾ ಇತರ ಎಲ್ಲಾ ದರ್ಜೆಯವರಿಗೆ ಒಂದುವರುಷ ಸರ್ಜ್ ಎಂಬ ಒಂದುತರದ ಸಕಲಾತಿಯ ಅಲ್ಖಲಿಕ್ ಎಂಬ ಒಂದು ತೊಡಿಗೆಯೂ ಮತ್ತೊಂದು ವರುಷ ಬಟ್ಟೆಯ ಒಂದು ಇಜಾರು ಮತ್ತು ವರುಷಂಪ್ರತಿ 3 ರೂಪಾಯಿ, 5 ಆಣೆ, 11 ಪೈ ಕ್ರಯಬಾಳುವ ಬಾಕಿ ತೊಡಿಗೆಗಳು ಸಿಕ್ಕುವವು.

ಐದು ವರುಷಕ್ಕೊಮ್ಮೆ ಭುಜಗಳಮೇಲೆ ಧರಿಸುವ ಉಕ್ಕಿನ ಸರಪಣಿಗಳು (ನೇಟಿವ್ ಆಫಿಸರರಿಗೆ ವಿನಹಾ).
ಐದು ವರುಷಕ್ಕೊಮ್ಮೆ ಹುಟಿಂಗ್ ಸ್ಪರ್ಸ್‌ಗಳ ಒಂದು ಜೋಡು ಸಿಕ್ಕುವದು.

ಪ್ರತಿ ಮನುಷ್ಯನಿಗೆ ಎರಡು ವರುಷಕ್ಕೆ ಒಂದಾವರ್ತಿ ರೂ. 3—8—0 ಪ್ರಕಾರ ಒಂದು ಜೋಡು ಬೂಟ್ಸ್ ಬಗ್ಯೆ ಭತ್ತೆ.	ನೇಟಿವ್ ಆಫಿಸರರಿಗೆ ಮೊಣಕಾಲು ವರಿಗಿನ ಬೂಟ್ಸ್ ಬಗ್ಯೆ, ಇತರ ಶಿಪಾಯರಿಗೆ ಮಣಿಗಂಟು ವರೆಗಿನ ಹೆಚ್ಚಿಗಿನ ಒಂದು ಜೋಡು ಬೂಟ್ಸ್ ಮತ್ತು ಪಟ್ಟಿಗಳ ಬಗ್ಯೆ.

ಯುದ್ಧಕ್ಕೆ ಹೋಗುವಾಗ ಪ್ರತಿ ಮನುಷ್ಯನಿಗೆ ರೂ. 2—8—0 ಪ್ರಕಾರ ಒಂದೊಂದು ಜೋಡು ಬೂಟ್ಸುಗಳ ಬಗ್ಯೆ ಪ್ರತಿಫಲ ಸಿಕ್ಕುವದು.

ಪಾಯಿದಳದವರಿಗೆ.—ನೇಟಿವ್ ಆಫಿಸರರಲ್ಲದ ಎಲ್ಲ ಶಿಪಾಯವರಿಗೆ ಮೂರು ವರ್ಷಗಳಿಗೊಮ್ಮೆ ಒಂದು ಸರ್ಜಿನ ಜಾಕಿಟ್ ಅಂಗಿ ಮತ್ತು ಷರಾಯಿ ಮತ್ತು ವರ್ಷಂಪ್ರತಿ 3 ರೂ. 1 ಆಣೆ. 4 ಪೈ ಕ್ರಯಬಾಳುವ ಬಾಕಿ ಉಡಿಗೆ.

ಯುದ್ಧಕ್ಕೆ ಹೋಗುವಾಗ ಪ್ರತಿ ಯೊಬ್ಬನಿಗೆ ಒಂದುಜೋಡು ಬೂಟ್ಸಿನ ಬಗ್ಯೆ ಪ್ರತಿಫಲ ರೂ. 2—8—0.

4. ಶಿಪಾಯರ ತಿಂಗಳಗಟ್ಲೆ ಸಂಬಳ—

	ರಾಹುತರು. ರೂ.	ಪಾಯಿದಳ. ರೂ.
ದಾಖಲಾದ ಕೂಡಲೆ	11	9
ಒಳ್ಳೇನಡತೆಯಿದ್ದು ಮೂರು ವರುಷದ ನೌಕರಿಯನಂತರ ..	12	10
ಒಳ್ಳೇನಡತೆಯಿದ್ದು ಆರು ವರುಷದ ನೌಕರಿಯನಂತರ ..	13	11
,, ಹತ್ತು ,, ..	14	12

5. ನೇಟಿವ್ ಆಫಿಸರರ ವ ಕಮಿಷನ್ ಹೊಂದದ ಆಫಿಸರರ ತಿಂಗಳುಗಟ್ಲೆ ಸಂಬಳ—

	ರಾಹುತರು. ರೂ.	ಪಾಯಿದಳ. ರೂ.
ಸುಪೇದಾರರಿಗೆ 1ನೇ ದರ್ಜೆಯ ಪ್ರತಿ ಒಬ್ಬನಿಗೆ	150	100
,, 2ನೇ ದರ್ಜೆಯ ,, ...	110	80
ಜಮೇದಾರರಿಗೆ 1ನೇ ದರ್ಜೆಯ ,, ...	60	50
,, 2ನೇ ದರ್ಜೆಯ ,, ...	50	40
ಹವಲ್‌ದಾರರಿಗೆ ಪ್ರತಿ ಒಬ್ಬನಿಗೆ ,, ...	22	16
ಆ ದರ್ಜೆಯಲ್ಲಿ ಎರಡು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	23	17
ಆ ದರ್ಜೆಯಲ್ಲಿ ನಾಲ್ಕು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	24	18
ಆ ದರ್ಜೆಯಲ್ಲಿ ಆರು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ...	25	19
ಆ ದರ್ಜೆಯಲ್ಲಿ ಎಂಟು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	26	20
ನಾಯಕರು	18	14
ಆ ದರ್ಜೆಯಲ್ಲಿ ಎರಡು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	19	15
ಆ ದರ್ಜೆಯಲ್ಲಿ ನಾಲ್ಕು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	20	16

6. ಪ್ರಯಾಣ ಮಾಡುವಾಗ ಭತ್ತೆ ಸರಕಾರದಿಂದ ಬಂಡಿಗಳು ಒದಗಿಸಿ ಕೊಡಲ್ಪಡದೆ ಇದ್ದಲ್ಲಿ ಮತ್ತು ಹೊಸ ಸಿಪಾಯರನ್ನು ಸೇರಿಸಿಕೊಳ್ಳುವ ಕೆಲಸದಮೇಲೆ ಇದ್ದಾಗ್ಯೆ ಮತ್ತು ರೆಗ್ಯುಲೇಷನ್‌ಗಳಲ್ಲಿ ನಮೂದಿಸಲ್ಪಟ್ಟ ಇತರ ಬೇರೆಬೇರೆ ಸಂದರ್ಭಗಳಲ್ಲಿ.

ಭತ್ತೆ ತೆಗೆದುಕೊಳ್ಳಲ್ಪಟ್ಟಾಗ 8ನೇ ಕಲಮಿನಲ್ಲಿ ಹೇಳಲ್ಪಟ್ಟ ಧಾನ್ಯದಬಗ್ಗಿನ ಪ್ರತಿ ಫಲ ಕೊಡಲ್ಪಡಲಿಕ್ಕಿಲ್ಲ. ಆದರೆ ಕೆಲಸದ ಮೇಲೆ ಕಳುಹಿಸಲ್ಪಟ್ಟಾಗ ಯಾ ಯುದ್ಧಕ್ಕೆ ಹೋಗುವಾಗ ಎಲ್ಲಾ ಶಿಪಾಯರಿಗೆ ಭತ್ತೆಯಾಗಲಿ ಧಾನ್ಯದಬಗ್ಗಿನ ಪ್ರತಿ ಫಲ ವಾಗಲಿ

(a) ಈ ಅಲೋವೆನ್ಸು ಮೊದಲನೇ ವರುಷದ ನೌಕರಿ ಮುಗಿಯುವವರೆಗೆ ಕೊಡಲ್ಪಡಲಿಕ್ಕಿಲ್ಲ. ಆ ಮೇಲೆ ಸದರೀ ವರುಷದ ಬಾಕಿ ಮತ್ತು ನಂತರದ ಮೂರುತಿಂಗಳ ಅಲೋವೆನ್ಸು ಒಟ್ಟಿಗೆ ಕೊಡಲ್ಪಡುವದು.

ಇವುಗಳ ಪೈಕಿ ಯಾವದು ಹೆಚ್ಚೋ ಅದನ್ನು ತೆಗೆದುಕೊಳ್ಳುವ ಮುನಾಸಬು ಇರುತ್ತದೆ; ಆದರೆ ಯುದ್ಧಕಾಲದ ಭತ್ತೆ ವಿನಹಾ ಊಟದ ಖರ್ಚು ಯಾ ಆ ಬಗ್ಯೆ ಪ್ರತಿಫಲ ಸಿಕ್ಕುವ ದಳದವರು ಪರಾಯಿ ನೌಕರಿಯಲ್ಲಿದ್ದಾಗ ಯಾ ಸಮುದ್ರದ ಅತ್ತಕಡೆಯಲ್ಲಿ ಕೆಲಸದಮೇಲೆ ಇದ್ದಾಗ, ಅಂಥವರಿಗೆ ಈ ಕ್ರಮವು ಲಗಾವಾಗುವದಿಲ್ಲ.

	ತುರುಫ್ ಸವಾರರಿಗೆ ತಿಂಗಳುಗಟ್ಲೆ.			ಪಾಯಿಪಳದವರಿಗೆ ತಿಂಗಳುಗಟ್ಲೆ.		
	ರೂ.	ಆ.	ಪೈ.	ರೂ.	ಆ.	ಪೈ.
ಶಿಪಾಯರಿಗೆ ಪ್ರತಿ ಒಬ್ಬನಿಗೆ	1	8	0	1	8	0
ನಾಯಕರು ಡಿಟ್ಟೋ	4	0	0	5	0	0
ಹವಲ್ದಾರರು ಡಿಟ್ಟೋ	5	0	0	5	0	0
ಜಮೇದಾರರು ಡಿಟ್ಟೋ	8	0	0	7	8	0
ಸುಬೇದಾರರು ಡಿಟ್ಟೋ	30	0	0	14	3	3

7. ಹುದ್ದೆಯ ಸಂಬಳದ ವಿನಹಾ ಈ ಕೆಳಗಣ ಸ್ಟಾಫ್ ಅಲ್ಲೋವೆನ್ಸು ಸಿಕ್ಕುವ ರೆಜಿಮೆಂಟಲ್ ಉದ್ಯೋಗಗಳು—

	ತುರುಫ್ ಸವಾರ ತಿಂಗಳುಗಟ್ಲೆ.			ಪಾಯಿದಳ ತಿಂಗಳುಗಟ್ಲೆ.		
	ರೂ.	ಆ.	ಪೈ.	ರೂ.	ಆ.	ಪೈ.
ರಫ್ ರೈಡರ್ ಅಂದರೆ ಕುದುರೆ ಸವಾರಿ ಕಲಿಸುವವನಿಗೆ 1ನೇ ದರ್ಜೆಯ ಪ್ರತಿಒಬ್ಬನಿಗೆ	5	4	0	..		

	ರಾಹುತರ ಬಲ ತಿಂಗಳುಗಟ್ಲೆ.			ಪಾಯಿದಳ ತಿಂಗಳುಗಟ್ಲೆ.		
	ರೂ.	ಆ.	ಪೈ.	ರೂ.	ಆ.	ಪೈ.
ರಫ್ ರೈಡರ್ ಅಂದರೆ ಕುದುರೆ ಸವಾರಿ ಕಲಿಸುವವನಿಗೆ 2ನೇ ದರ್ಜೆಯ ಪ್ರತಿ ಒಬ್ಬನಿಗೆ	3	8	0	..		
ಕವಾತು ಕಲಿಸುವ ನಾಯಕ ಸ್ಟಾಫ್ ಅಲ್ಲೋವೆನ್ಸು ..	7	0	0	3	8	0
ಕವಾತು ಕಲಿಸುವ ಹವಲ್ದಾರ ಡಿಟ್ಟೋ ..	10	8	0	5	4	0
ಬಾವಟೆ ಹವಲ್ದಾರ, ಸ್ಟಾಫ್ ಅಲ್ಲೋವೆನ್ಸು ಪ್ರತಿ ಒಬ್ಬನಿಗೆ ..	0	0	0	2	0	0
ತೈನಾತಿ ಹವಲ್ದಾರ, ಸ್ಟಾಫ್ ಅಲ್ಲೋವೆನ್ಸು ಪ್ರತಿ ಒಬ್ಬನಿಗೆ ..	1	13	10	1	13	10
ರೆಜಿಮೆಂಟಲ್ ಹವಲ್ದಾರ, ಮೇಜರ್, ಸ್ಟಾಫ್ ಅಲ್ಲೋವೆನ್ಸು	10	0	0	10	0	0
ಸೈನ್ಯದ ಹವಲ್ದಾರ, ಮೇಜರು, ಸ್ಟಾಫ್ ಅಲ್ಲೋವೆನ್ಸು ಪ್ರತಿ ಒಬ್ಬನಿಗೆ	2	0	0	0	0	0
ಜಮೇದಾರ ಅಜುಟ್ಟೆಂಟ್, ಸ್ಟಾಫ್ ಅಲ್ಲೋವೆನ್ಸು ..	17	8	0	17	8	0
ಸುಬೇದಾರ ಮೇಜರ್, ಸ್ಟಾಫ್ ಅಲ್ಲೋವೆನ್ಸು ...	50	0	0	50	0	0

8. ತಮ್ಮ ರೆಜಿಮೆಂಟುಗಳೊಂದಿಗೆ ಹಾಜರಿರುವ ಮನುಷ್ಯರಿಗೆ, ನಿಯಂ ತರದ ಅಕ್ಕಿಯ ಮೌಲ್ಯವು ನಿರ್ಣಯಿಸಲ್ಪಟ್ಟ ಬಂದರೆ ದರಕ್ಕೆ ಮೀರಿದರೆ ಮತ್ತು ಭತ್ತೆ, ಊಟದ ಖರ್ಚು ಯಾ ಆಬಗ್ಯೆ ಪ್ರತಿಫಲ ಸಿಕ್ಕದಿದ್ದಾಗ ಅಕ್ಕಿ ಪ್ರಿಯವಾದದ್ದಕ್ಕೋಸ್ಕರ ಪರಿಹಾರ ದ್ರವ್ಯವು ಕೊಡಲ್ಪಡುವದು.

9. ಖಡ್ಗದ ವ ಈಟಿಯ ಸಾಧಕದಲ್ಲಿ ಕುಶಲತೆಯನ್ನು ಪಡೆದ ಯಾ ಒಳ್ಳೆಗುರಿ ಇಟ್ಟು ಗುಂಡು ಹೊಡೆಯುವ ಬಗ್ಯೆ ಪ್ರತಿ ಒಂದು ರೆಜಿಮೆಂಟಿನಲ್ಲಿ ವರುಷಂಪ್ರತಿ ಇನಾಮು ಕೊಡಲ್ಪಡುವವು.

10. ಅಸ್ವಸ್ಥದಲ್ಲಿ ಬಿದ್ದಾಗ್ಯೆ ಅವರಿಗೂ ಅವರ ಕುಟುಂಬದವರಿಗೂ ವೈದ್ಯ ಉದ್ಯೋಗಸ್ಥರು ಫೀಸು ತೆಗೆದುಕೊಳ್ಳದೇನೇ ಬಂದು ನೋಡುವರು.

11. ಶಿಪಾಯರ ವ ಅವರ ಮಕ್ಕಳ ವಿದ್ಯಾಭ್ಯಾಸದ ಬಗ್ಯೆ ಸರಕಾರದಿಂದ ಇಂಗ್ಲೀಷ್ ವ ದೇಶಭಾಷಾ ಶಾಲೆಗಳು ಇಡಲ್ಪಟ್ಟಿವೆ.

12. ಪೇಷರ್ಷ ವ ರಿಕ್ರೂಟು ಹುಡುಗರು.—ಪ್ರತಿ ಒಂದು ರಾಹುತರ ಬಲದ ರೆಜಿಮೆಂಟಿನಲ್ಲಿ ಹದಿನಾರು ರಿಕ್ರೂಟು ವ 14 ಪೇಷರ್ಷ ಹುಡುಗರೂ ಪ್ರತಿ ಒಂದು ಪಾಯಿದಳದ ರೆಜಿಮೆಂಟಿನಲ್ಲಿ 24 ಹೊಸ ಶಿಪಾಯಿ ವ 18 ಪೇಷರ್ಷ ಹುಡುಗರೂ (ದಿಕ್ಕಿಲ್ಲದ ಮಕ್ಕಳು ವ ದೊಡ್ಡ ಕುಟುಂಬವಿರುವ ಮಾಜಿ ಶಿಪಾಯರ ಹುಡುಗರು) ದಾಖಲ್ಮಾಡಲ್ಪಡುವರು. ಪ್ರತಿ ಒಬ್ಬ ರಿಕ್ರೂಟು ಹುಡುಗನಿಗೆ ತಿಂಗಳಿಗೆ 5 ರೂಪಾಯಿಯೂ ಪೇಷರ್ಷ ಹುಡುಗನಿಗೆ ½ ರೂಪಾಯಿಯೂ ಸಿಕ್ಕುವದು ಮತ್ತು ನಿಯಂ ತರದ ಅಕ್ಕಿಯ ಮೌಲ್ಯವು ನಿರ್ಣಯಿಸಲ್ಪಟ್ಟ ಬಂದರೆ ದರಕ್ಕೆ ಮೀರಿದರೆ ಪರಿಹಾರದ್ರವ್ಯ ಸಹ ಸಿಕ್ಕುವದು.

13. ದಂಡಿನಲ್ಲಿ ಸೇರುವದಕ್ಕೆ ಹೆಸರು ಬರಿಸಿಕೊಂಡಮೇಲೆ, ಅಥವಾ ಒಂದು ಹೊಸ ಠಾಣ್ಯಕ್ಕೆ ಹೋಗುವಾಗ್ಯೆ ಸರಕಾರದಿಂದ ಬಿಡಾರ ಕೊಡೋಣಾಗದಿರುವಲ್ಲಿ ಹಟ್ಟಿಂಗ್ ಮನಿ ಎಂಬ ಬಿಡಾರ ಮಾಡಿಕೊಳ್ಳಲಿಕ್ಕೆ ಕೊಡೋಣಾಗುವ ಹಣ—

	ರೂ.
ಶಿಪಾಯಿಯರು ಪ್ರತಿ ಒಬ್ಬನಿಗೆ	2
ನಾಯಕರು ಡಿಟ್ಟೋ	3
ಹವಲ್ದಾರರು ಡಿಟ್ಟೋ	4
ಜಮೇದಾರರು ಡಿಟ್ಟೋ	12
ಸುಬೇದಾರರು ಡಿಟ್ಟೋ	24

14. ಪರಾಯಿ ದೇಶದಲ್ಲಿ ಮತ್ತು ಯುದ್ಧದಲ್ಲಿ ನೌಕರಿ ಮಾಡುತ್ತಿರುವ ಸಮಯದಲ್ಲಿ, ಅಥವಾ ಸಮುದ್ರದ ಅತ್ತಕಡೆ ಚಾಕರಿ ಮಾಡುತ್ತಿರುವ ಸಮಯದಲ್ಲಿ ಕೆಲಸದಮೇಲೆ ಹೊರಡುವಾಗ್ಯೆ ಕರಾವಳಿಯ ಮೇಲೆ ಒಂದು ಬಂದರಿಂದ ಇನ್ನೊಂದು ಬಂದರಕ್ಕೆ ಹೋಗುವಾಗ್ಯೆ ಊಟದ ಖರ್ಚು ಮತ್ತು ಭತ್ತೆ.

ಪರಾಯಿ ದೇಶದಲ್ಲಿ ನೌಕರಿಬಗ್ಯೆ ಹಡಗವೇರುವಾಗ್ಯೆ ಕೆಳಗೆ ಬರೆದ ಸಾಮಾನುಗಳು ಉಚಿತವಾಗಿ ಕೊಡೋಣಾಗುವವು:—

1 ಜೋಡು ಊರಿನಲ್ಲಿ ಮಾಡಿದ ಬೂಟ್ಸು;	2 ಫ್ಲಾನೆಲ್ ವಿಜಾರುಗಳು;
1 ಕಂಬಳಿ;	2 ಫ್ಲಾನೆಲ್ ತುಂಡಂಗಿಗಳು;

ಬರ್ಮಾವಿನಲ್ಲಿ ಬೆಟ್ಟ ಪ್ರದೇಶಗಳಲ್ಲಿರುವಾಗ್ಯೆ ಹೆಚ್ಚಿಗೆ ಉಣ್ಣೆ ತೊಡಿಗೆ.

ಪರಾಯಿ ದೇಶದಲ್ಲಿ ನೌಕರಿ ಮಾಡುತ್ತಿರುವಾಗ್ಯೆ ಸರಕಾರದಿಂದ ಬಿಡಾರ; ವ ಬರ್ಮಾ ಮತ್ತು ಪೋರ್ಟಬ್ಲ್ಯಾರನಲ್ಲಿ ನೌಕರಿ ಮಾಡುತ್ತಿರುವಾಗ್ಯೆ ಬಾರಕ್ ಸಾಮಾನು ವ ವಿವಿಧ ತರದ ಬೇರೆ ಸಾಮಾನುಗಳು.

15. ಕೆಳಗೆ ಹೇಳಿರುವ ಪ್ರಕಾರ ಪೆನ್ಷನ್ ತಂದೆಗೆ ಯಾ ತಾಯಿಗೆ ಅಥವಾ ವಿಧವೆಗೆ ಅಥವಾ ಮಗನಿಗೆ ಯಾ ಮಗಳಿಗೆ ಕೆಳಗೆ ವಿವರಿಸಿದ ವಿದ್ಯಮಾನಗಳಲ್ಲಿ ಕೊಡೋಣಾಗುವವು:—

(a) ಯುದ್ಧಕಾಲದಲ್ಲಿ ಒಬ್ಬ ಸೋಲ್ಜರನು ಕೊಲ್ಲಲ್ಪಟ್ಟರೆ ಅಥವಾ ಘಾಯುಗಳಾದನಂತರ ಆರು ತಿಂಗಳೊಳಗೆ ಅಂಥಾ ಘಾಯುಗಳ ದೆಸೆಯಿಂದ ಸತ್ತರೆ.

(b) ಒಬ್ಬ ಸೋಲ್ಜರನು ಪರಾಯಿದೇಶದಲ್ಲಿ ನೌಕರಿ ಮಾಡುತ್ತಿರುವಾಗ್ಯೆ ಸತ್ತರೆ ಅಥವಾ ಅಲ್ಲಿಂದ ಬಂದನಂತರ ಅಂಥ ನೌಕರಿ ಸಮಯದಲ್ಲಿ ಅಥವಾ ಅದರ ದೆಸೆಯಿಂದ ಪ್ರಾಪ್ತವಾದ ಅಸ್ವಸ್ಥದ ಸಂಬಂಧ ಆಸ್ಪತ್ರಿಯಲ್ಲಿ ದಾಖಲಾದವನು ಅಲ್ಲಿಂದ ಬಿಡುಗಡೆಯಾಗುವ ಮುಂಚೆ ಸತ್ತರೆ—

		(a) ತಿಂಗಳಿಗೆ. ರೂ.	ಆ.	ಪೈ.	(b) ತಿಂಗಳಿಗೆ. ರೂ.	ಆ.	ಪೈ.
ಸುಬೇದಾರರ	ವಾರಿಸ್‌ದಾರರಿಗೆ	36	0	0	26	0	0
ಜಮೇದಾರರ	ಡಿಟೋ	13	13	0	8	8	0
ಹವಲ್‌ದಾರರ	ಡಿಟೋ	4	8	0	4	8	0
ನಾಯಕರ	ಡಿಟೋ	3	8	0	3	8	0
ಶಿಪಾಯಿಯರ	ಡಿಟೋ	2	12	0	2	12	0

16. ಯುದ್ಧದಲ್ಲಿ ಪರಾಕ್ರಮ ತೋರಿಸಿದ್ದಕ್ಕೆ ಯೋಗ್ಯತಾನುಸಾರವಾಗಿ ಇನಾಮು ಕೊಡುವ ಕ್ರಮ—

ತಿಂಗಳಿಗೆ.

		ಅವಲ್ ತರಹ. ರೂ.	ಆ.	ಪೈ.	ದುಯಂ ತರಹ. ರೂ.	ಆ.	ಪೈ.	ಸಿಯಂ ತರಹ. ರೂ.	ಆ.	ಪೈ.
ಸುಬೇದಾರರಿಗೆ ..	ರಾಹುತರ ಬಲ ..	60	0	0	40	0	0	20	0	0
	ಪಾಯಿದಳ ..	52	0	0	34	10	8	17	5	4
ಜಮೇದಾರರಿಗೆ ..	ರಾಹುತರ ಬಲ ..	24	0	0	16	0	0	8	0	0
	ಪಾಯಿದಳ ..	17	0	0	11	5	4	5	10	8
ಹವಲ್‌ದಾರರಿಗೆ ..	ರಾಹುತರ ಬಲ ..	15	0	0	10	0	0	5	0	0
	ಪಾಯಿದಳ ..	9	0	0	6	0	0	3	0	0
ನಾಯಕರಿಗೆ ..	ರಾಹುತರ ಬಲ ..	12	0	0	8	0	0	4	0	0
	ಪಾಯಿದಳ ..	7	0	0	4	10	8	2	5	4
ಶಿಪಾಯಿಯರಿಗೆ ..	ರಾಹುತರ ಬಲ ..	7	8	0	5	0	0	2	8	0
	ಪಾಯಿದಳ ..	5	8	0	3	10	8	1	13	4

ಮೇಲೆ ಹೇಳಿದ ಪ್ರಕಾರ ಇನಾಮು, ಅವರ ಸಂಬಳ ಯಾ ಪೆನ್ಷನ್ ಅಲ್ಲದೆ, ಯಾವ ಜೀವವೂ ಹೆಚ್ಚಿಗೆಯಾಗಿ ಕೊಡೋಣಾಗಿತು ಮತ್ತು ಗಂಡ ಸತ್ತ ನಂತರ ಮೂರು ವರುಷಗಳ ವರೆಗೆ ಅವರ ವಿಧವೆಯರಿಗೂ ಕೊಡೋಣಾಗುವದು.

17. ದೇಶಿಯ ಉದ್ಯೋಗಸ್ಥರಲ್ಲಿ ಕುಂದಿಲ್ಲದ ನಡತೆಯವರಾಗಿ ಪ್ರಖ್ಯಾತಿಗೊಂಡು ಬಹುಕಾಲ ನೌಕರಿ ಮಾಡಿದವರಿಗೆ ಕೊಡೋಣಾಗುವ ಬ್ರಿಟಿಷ್ ಇಂಡಿಯದ ಬಹುಮಾನ—

		ರೂ.
ಅವಲ್ ತರಗತಿ "ಸರ್ದಾರ್ ಬಹದೂರ್"	.. ..	2 ದಿವಸ 1ಕ್ಕೆ.
ದುಯಂ ತರಗತಿ "ಬಹದೂರ್"	.. ..	1 ,,

ಮೇಲೆ ಹೇಳಿದ ಭತ್ತೆಯು, ಸಂಬಳ ವ ಭತ್ತ ಯಾ ಪೆನ್ಷನ್ ಅಲ್ಲದೆ ಹೆಚ್ಚಿಗೆಯಾಗಿ ಯಾವ ಜೀವವೂ ಕೊಡೋಣಾಗುತ್ತದೆ.

18. ಪೆನ್ಷನ್—

	ಸಾಧಾರಣ ತರದ್ದು 21 ವರುಷ ಕದೀಮಿ ಆದ ನಂತರ. ರೂ.	ಮೇಲ್ ತರದ್ದು, ಪೆನ್ಷನ್ ತೆಗೆದುಕೊಳ್ಳುವ ವರೆಗೆ ಕುಂದಿಲ್ಲದ ನಡತೆಯುಳ್ಳವನಾಗಿ ಶ್ರೇಯಸ್ಕರವಾಗಿ ನೌಕರಿ ವ ಶ್ರದ್ಧೆಯಿಂದ ಕೆಲಸ ಮಾಡಿ 32 ವರುಷ ಕದೀಮಿ ಆದನಂತರ. ರೂ.
ಶಿಪಾಯಿಯರಿಗೆ	4	7
ನಾಯಕರಿಗೆ ವ ಹವಲ್‌ದಾರರಿಗೆ ..	7	12
ಜಮೇದಾರರಿಗೆ	15	25
ಸುಬೇದಾರರಿಗೆ	30	50

19. ದೇಹ ಪ್ರಕೃತಿ ಮೇರೆಗೆ ಕೆಲಸಕ್ಕೆ ಅಯೋಗ್ಯರೆಂದು ಹೇಳೋಣಾದವರಿಗೆ ಗ್ರಾಟ್ಯೂಟಿ:—

5 ವರುಷಗಳ ಮೇಲೆ	10 ವರುಷಗಳೊಳಗೆ	ಕದೀಮಿಯುಳ್ಳವರಿಗೆ	ತರಗತಿಯ ದಾಮಾಷೆಯಲ್ಲಿ	3 ತಿಂಗಳ ಸಂಬಳ
10 ,,	15 ,,	,,	,,	6 ,,
15 ,,	21 ,,	,,	,,	12 ,,

20. ರೆಜಿಮೆಂಟಿನಲ್ಲಿ ಅಗತ್ಯವುಳ್ಳ ಸಂಖ್ಯೆಗಿಂತ ಶೇಕಡಾ 5ರಷ್ಟು ಕಡಿಮೆ ಇಲ್ಲದಿರುವ ಸಂಗತಿಯಲ್ಲಿ, ಅಪೇಕ್ಷೆ ಮಾಡಿದರೆ 3 ವರುಷಕ್ಕಿಂತ ಹೆಚ್ಚು ಕದೀಮಿಯುಳ್ಳವರನ್ನ ಏನೂ ಆತಂಕವಿಲ್ಲದೆ ಡಿಸ್‌ಚಾರ್ಜು ಮಾಡೋಣಾದೀತು.

21. ದಾರಿ ಖರ್ಚು ದೇಶಿಯ ಸೋಲ್ಜರರಿಗೆ—

(i) ಅವರು ದಾಖಲಾದ ನಂತರ ತಮ್ಮ ಫೌಜನ್ನು ಸೇರಲಿಕ್ಕೆ ಹೋಗುವಾಗ್ಯೆ, ಕೆಲಸದ ಮೇಲೆ ಹೋಗುವಾಗ್ಯೆ, ಸರಕಾರಿ ಕಾರಣಗಳ ಮೇಲೆ ಒಂದು ರೆಜಿಮೆಂಟಿನಿಂದ ಇನ್ನೊಂದು ರೆಜಿಮೆಂಟಿಗೆ ವರ್ಗವಾಗಿ ಹೋಗುವಾಗ್ಯೆ, ಫರ್ಲೋ ವ ವೈದ್ಯ ಇಲಾಖೆಯ ಸರ್ಟಿಫಿಕೇಟಿನ ರಜಾದ ಮೇಲೆ ಹೋಗುವಾಗ್ಯೆ ವ ವಾಪಸ್ ಬರುವಾಗ್ಯೆ, ಪೆನ್ಷನ್ ಪಡಕೊಂಡು ಅಶಕ್ತಿಯವನಾಗಿ, ಅಥವಾ ಹೆಚ್ಚು ಕೆಲಸ ಮಾಡಲಿಕ್ಕೆ ದೇಹಪ್ರಕೃತಿ ಮೇರೆಗೆ ಅಯೋಗ್ಯನೆಂತ ಡಿಸ್‌ಚಾರ್ಜ್ ಮಾಡೋಣಾಗಿ ರೈಲ್ ಮಾರ್ಗವಾಗಿ ಮನೆಗೆ ಹೋಗುವಾಗ್ಯೆ.

ಅವರು ಕೆಲಸದ ಮೇಲೆ ಹೋಗುವಾಗ್ಯೆ, ಸರಕಾರಿ ಕಾರಣಗಳ ಮೇಲೆ ಒಂದು ರೆಜಿಮೆಂಟಿನಿಂದ ಇನ್ನೊಂದು ರೆಜಿಮೆಂಟಿಗೆ ವರ್ಗವಾಗಿ ಹೋಗುವಾಗ್ಯೆ, ವೈದ್ಯ ಇಲಾಖೆಯ ಅಧಿಕಾರಸ್ಥರು ಅಗತ್ಯವೆಂತ ತಿಳಕೊಳ್ಳುವದಾದರೆ, ವೈದ್ಯ ಇಲಾಖೆಯವರ ಸರ್ಟಿಫಿಕೇಟಿನ ರಜಾದ ಮೇಲೆ ಹೋಗುವಾಗ್ಯೆ ವ ವಾಪಸ್ ಬರುವಾಗ್ಯೆ, ಪೆನ್ಷನ್ ಪಡಕೊಂಡು, ಅಶಕ್ತಿಯವನಾಗಿ, ಅಥವಾ ಹೆಚ್ಚು ಕೆಲಸ ಮಾಡಲಿಕ್ಕೆ ದೇಹ ಪ್ರಕೃತಿ ಮೇರೆಗೆ ಅಯೋಗ್ಯವೆಂತ ಡಿಸ್‌ಚಾರ್ಜು ಮಾಡೋಣಾಗಿ ಹೋಗುವಾಗ್ಯೆ, ಸಮುದ್ರ ಮಾರ್ಗವಾಗಿ ಹೋಗಲಿಕ್ಕೆ; ಉಚಿತವಾಗಿ ಪಾಸ್ ಕೊಡೋಣಾದೀತು.

ದೇಶೀಯರುಳ್ಳ ಫೌಜಿನವರಿಗೆ, ಪೆನ್ಷನ್ ಪಡಕೊಂಡು ಯಾ ಡಿಸ್‌ಚಾರ್ಜು ಆಗಿ ಹೋಗುವಾಗ್ಯೆ, ಉಚಿತವಾಗಿ ಪಾಸು ಕೊಡೋಣಾಗದಿರುವ ಸಂಗತಿಯಲ್ಲಿ ಪ್ರತಿ ಹತ್ತು ಮೈಲಿಗಳಿಗೆ 3½ ಆಣೆ ಪ್ರಕಾರ ಪ್ರಯಾಣದ ಭತ್ತೆ ಕೊಡೋಣಾಗುತ್ತದೆ.

(ii) ದಳವು ಸಹಾಯಕ್ಕೆ ಹೋಗುವಾಗ್ಯೆ ಯಾ ಬೇರೆ ತರದ ಕಾಯಂ ಸ್ವಭಾವದ ಕೆಲಸದ ಮೇಲೆ ಹೋಗುವಾಗ್ಯೆ ದೇಶೀಯ ಸೋಲ್ಜರರ ಕುಟುಂಬವನ್ನು, ಅವರ ಸಂಗಡ ಹೋಗಲಿಕ್ಕೆ ಬಿಡೋಣಾದರೆ ರೈಲ್ ಮಾರ್ಗವಾಗಿ ಸಮುದ್ರ ಮಾರ್ಗವಾಗಿ ಹೋಗಲಿಕ್ಕೆ ಉಚಿತವಾಗಿ ಪಾಸ್ ಕೊಡೋಣಾಗುತ್ತದೆ. ಅಥವಾ ದಳವು ಇಂಡಿಯದ ಗಡಿ ಹೊರಗೆ ಪರಾಯಿ ದೇಶದಲ್ಲಿ ನೌಕರ ಯಾ ಯುದ್ಧಕ್ಕೆ ಹೋದ ಮೇಲೆ ಸದರೀ ಕುಟುಂಬದವರಿಗೆ ಮನೆಗೆ ಹೋಗುವ ಬಗ್ಯೆ ಅಥವಾ ಅಂಥ ಕೆಲಸದಿಂದ ವಾಪಸು ಬಂದಲ್ಲಿ ಪುನಹಾ ರೆಜಿಮೆಂಟಿಗೆ ಬಂದು ಸೇರುವಾಗ್ಯೆ ಅದೇ ರೀತಿ ನುಲ್ಲಿ ಉಚಿತವಾಗಿ ಪಾಸು ಕೊಡೋಣಾಗುವದು.

ದೇಶಿಯ ದಳಗಳು ಸಹಾಯಕ್ಕಾಗಿ ಭೂಮಾರ್ಗವಾಗಿ ಹೋಗುವಾಗ್ಯೆ ಅವರ ಕುಟುಂಬವು ಸಂಗಡಲೇ ಹೋಗುವ ಸಂಗತಿಯಲ್ಲಿ, ಅಥವಾ ಮದ್ರಾಸಿನ ಫೌಜುಗಳನ್ನು ಲೆಫ್ಟಿನೆಂಟ್ ಜನರಲ್ ಅವರನ್ನ ರೈಲ್ ಮಾರ್ಗವಾಗಿ ಯಾ ಬೇರೆ ವಿಧದ ವಾಹನಗಳ ಮೇಲೆ ಅವರ ಸ್ವಂತ ಖರ್ಚಿನಿಂದ ಹೋಗಲಿಕ್ಕೆ ಬಿಟ್ಟಲ್ಲಿ ದಳದವರು ಹೋದಷ್ಟು ದೂರಕ್ಕೆ ಮೊದಲಿನ ಗಾಡ ಬಾಡಿಗೆಗೂ ಪ್ರಕೃತದ ಗಾಡಿ ಬಾಡಿಗೆಗೂ ಇರುವ ವ್ಯತ್ಯಾಸವು ಕುಟುಂಬದವರ ಪ್ರಯೋಜನಾರ್ಥವಾಗಿ ಸರಕಾರದಿಂದ ಕೊಡೋಣಾಗುತ್ತದೆ.

ಷರಾ.—"ಕುಟುಂಬಗಳು" ಎಂಬ ಪದವು ಹೆಂಡತಿ ವ ಮಕ್ಕಳನ್ನು ಮಾತ್ರ ಅಡಗಿಸಿಕೊಳ್ಳುತ್ತದೆ ಮತ್ತು ಅದು ಸರಕಾರದಿಂದ ಅಂಗೀಕರಿಸೋಣಾಗಿ ರೆಜಿಮೆಂಟಿನಲ್ಲಿ ವಾಸವಾಗಿರಲಿಕ್ಕೆ ಬಿಡೋಣಾದ ಕುಟುಂಬಗಳಿಗೆ ಮಾತ್ರ ಲಗಾವಾಗುತ್ತದೆ.

22. ಜನವರಿ ಹಬ್ಬದ ಮೊದಲನೇ ದಿವಸ, ಶ್ರೀ ಮಹಾರಾಣಿಯವರ ಜನ್ಮ ದಿನ ಮತ್ತು ಸ್ಟೇಷನ್ ಮೊದಲಾದವುಗಳ ಕಮಾಂಡಿಂಗ್ ಆಫೀಸರರು ಕೊಡುವದು ನ್ಯಾಯವೆಂತ ತಿಳಕೊಳ್ಳುವ ಕಾಲಗಳಲ್ಲಿ, ಅಥವಾ ಸರಕಾರದವರಿಂದ ವಿಶೇಷವಾಗಿ ಹುಕುಂ ಕೊಡೋಣಾದ ಕಾಲಗಳಲ್ಲಿ ಆಯಾ ಗ್ರೇಡಗಳಿಗೆ ಕೊಡೋಣಾಗುವ ಭತ್ತೆಯ ದರದಲ್ಲಿ ಡ್ರೈ ಭತ್ತೆ ಎಂಬ ನಗದು ಭತ್ತೆ ಕೊಡೋಣಾಗುತ್ತದೆ.

23. ರೆಜಿಮೆಂಟಿಗೆ ಅಗತ್ಯವಿರುವ ಸಾಮಾನುಗಳ ಪೈಕಿ ಯಾವದಾದರೂ ಸಾಮಾನಿನ ಅನಿವಾರ್ಯವಾದ ನಷ್ಟದ ಬಗ್ಯೆ ಲುಕ್ಸಾನು ಕೊಡೋಣಾಗುತ್ತದೆ.

24. ರೆಜಿಮೆಂಟಿನ ಸಿಗ್ನಲರ ಪೈಕಿ ಪ್ರತಿ ಒಂದು ರೆಜಿಮೆಂಟಿನಲ್ಲಿ ಬಳ್ಳಿ ಹುಷಾರುಳ್ಳ ಎಂಟು ಮಂದಿಗೆ ವರುಷ 1ಕ್ಕೆ 5 ರೂಪಾಯಿ ದರದಲ್ಲಿ ಬೋನಸ್ ಕೊಡೋಣಾಗುತ್ತದೆ.

25. ಬರ್ಮಿ ಮತ್ತು ಶಾನ್ ಭಾಷೆಯ ಪರೀಕ್ಷೆಯಲ್ಲಿ ತೇರ್ಗಡೆಪಟ್ಟ ಬಗ್ಯೆ ದೇಶಿಯ ಉದ್ಯೋಗಸ್ಥರಿಗೆ ವ ಇತರರಿಗೆ ಇನಾಮು ಶಿಕ್ಕುತ್ತದೆ:—

		ರೂ.
ಬರ್ಮಿ ..	ಮೂಲ ದರ್ಜೆ	180
	ಕೆಳ ದರ್ಜೆ	360
ಶಾನ್ ..	ಮೂಲದ ರ್ಜೆ	180
	ಕೆಳ ದರ್ಜೆ	360

26. ವರುಷಾಶನದೊಡನೆ ವ ಇನಾಮಿನೊಡನೆ ಬಳ್ಳಿ ನಡತೆ ಬಗ್ಯೆ ಬಿರುದಿನ ಬಿಲ್ಲೆಗಳು ಕೊಡೋಣಾಗುತ್ತವೆ. ರೂಹುತರ ಯಾ ಪಾಯಿದಳದವರ ಪ್ರತಿ ಒಂದು ರೆಜಿಮೆಂಟಿನ ಹವಲ್‌ದಾರ ಮೇಜರನ ಸಹಿತ ಹವಲ್‌ದಾರರಿಗೆಲ್ಲ 25 ರೂಪಾಯಿ ವರುಷಾಶನದೊಡನೆ "ಶ್ರೇಯಸ್ಕರವಾದ ನೌಕರಿಯ ಬಗ್ಯೆ" ಎಂತ ಬರೆದಿರುವ ಬೆಳ್ಳಿಯ ಬಿರುದಿನ ಬಿಲ್ಲೆ ಕೊಡೋಣಾಗುತ್ತದೆ.

ರಾಹುತರ ವ ಪಾಯಿದಳದವರ ಪ್ರತಿ ಒಂದು ರೆಜಿಮೆಂಟಿಗೆ 25 ರೂಪಾಯಿ ವರುಷಾಶನದೊಡನೆ "ಹೆಚ್ಚು ಕದೀಮಿ ವ ಒಳ್ಳೆ ನಡತೆ ಬಗ್ಯೆ" ಎಂತ ಬರೆದಿರುವ ಬೆಳ್ಳಿಯ ಎರಡು ಬಿರುದಿನ ಬಿಲ್ಲೆಗಳು ಕೊಡೋಣಾಗುತ್ತವೆ.

27. (ನೇಟಿವ್ ಆಫಿಸರರ ವಿನಹಾ) ಸೋಲ್ಜರರು ಮೇಲೆ ಕ್ರಿಮಿನಲ್ ತಕ್ಸೀರುಗಳು ಹೊರಿಸಲ್ಪಟ್ಟಲ್ಲಿ ಮೂಲ ವಿಚಾರಣೆಯಲ್ಲಿಯೂ ಅಪ್ಪೀಲಿನಲ್ಲಿಯೂ ಡಿಫೆನ್ಸಿನ ಬಗ್ಯೆ ವಕೀಲರು ನೇಮಿಸಲ್ಪಡುವರು.

28. ಕಮಿಷನ್ ಹೊಂದಿದ ಆಫಿಸರನ ಸಮೇತವಾಗಿ ಒಬ್ಬ ನೇಟಿವ್ ಪೆನ್ಷನ್‌ದಾರನು ಗವರ್ನಮೆಂಟಿನವರ ಕೆಳಗೆ ಯಾವ ಉದ್ಯೋಗವನ್ನಾದರೂ ಪಡೆಯಬಹುದು; ಮತ್ತು ತನ್ನ ಪೆನ್ಷನ್ ವಿನಹಾ ಆ ಕೆಲಸದ ಬಗ್ಗಿನ ಸಂಬಳವನ್ನು ಪಡಕೊಳ್ಳಬಹುದು.

29. ಪಾಲಕ್ಕೋಸ್ಕರ ಕೈದಿನಲ್ಲಿಡಲ್ಪಟ್ಟ ಕಾಲದ ಬಗ್ಯೆ ಒಬ್ಬನು ತನ್ನ ಪೆನ್ಷನನ್ನು ಕಳಕೊಳ್ಳುವದಿಲ್ಲ.

30. ಪೆನ್ಷನ್‌ದಾರರ ತಾಬೆ ಇರುವ ಆಫಿಸರರು ಪೆನ್ಷನ್‌ದಾರರಿಂದ ತೆಗೆದುಕೊಳ್ಳಲ್ಪಟ್ಟ ಸಾಲಗಳ ಕುರಿತು ವಿಚಾರಣೆ ನಡಿಸ ಕೂಡದು.

31. ಪೆನ್ಷನ್ ಹೊಂದಿದ ಒಬ್ಬ ಸೋಲ್ಜರನು ತನ್ನ ಸ್ವಂತ ಇಚ್ಛೆಯ ಮೇರೆಗೆ ವ ಇನ್ನು ಹಲವು ವರುಷಗಳ ವರೆಗೆ ಕೆಲಸ ಮಾಡಲಿಕ್ಕೆ ಶಾರೀರಕ ತ್ರಾಣವುಳ್ಳವನೆಂಬದಾಗಿ ಗವರ್ನಮೆಂಟಿನವರಿಂದ ಉದ್ದಿಶ್ಯವಾದ ಸ್ಯಾಂಕ್ಷನನ್ನು ಪಡಕೊಂಡು ದಂಡಿನಲ್ಲಿ ಪುನಹಾ ದಾಖಲಾದರೆ ಆತನ ಹಿಂದಿನ ನೌಕರಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದು. ಆತನನ್ನು ಪುನಹಾ ಅಶಕ್ತರ ಲವಾಜಮೆಗೆ ಕಳುಹಿಸಿದರೆ ತಿರಿಗಿ ದಾಖಲು ಮಾಡಿಕೊಳ್ಳುವಾಗ್ಯೆ ಆತನಿಗೆ ಶಿಕ್ಕುತ್ತಿದ್ದ ಪೆನ್ಷನನ್ನಾಗಲಿ ತದನಂತರದ ನೌಕರಿಯ ದೆಶೆಯಿಂದ ಪಡಕೊಳ್ಳಲಿಕ್ಕೆ ಅರ್ಹನಾಗಬಹುದಾದ ಜಾಸ್ತಿ ಪೆನ್ಷನನ್ನಾಗಲಿ ಕೊಡಲಾಗುವದು.

32. ಒಬ್ಬ ಸುಬೇದಾರ ಮೇಜರನು ಅಶಕ್ತರ ಲವಾಜಮೆಗೆ ಕಳುಹಿಸಲ್ಪಟ್ಟರೆ ಅವನಿಗೆ ಸುಬೇದಾರನಾಗಿ ಎಷ್ಟು ವರುಷದ ನೌಕರಿ ಇದ್ದಾಗ್ಯೂ ಆಧಿಪತ್ಯ ನಡಿಸುವ ಜನರಲ್ ಆಫಿಸರನ ಉದ್ದಿಶ್ಯವಾದ ಶಿಫಾರಸಿನ ಮೇಲೆ ಆತನ ಪ್ರೈವೆಟ್ (ಹುದ್ದೆಯ) ಸಂಬಳ ಅಂದರೆ ತಿಂಗಳಿಗೆ 50 ರೂಪಾಯಿ ಕೊಡೋಣಾಗುವದು.

33. ನೇಟಿವ್ ಖಾಜಿನಲ್ಲಿ ಇಸಂಗಳನ್ನು ಕಡಿಮೆ ಮಾಡಿದ್ದಾಗ್ಯೆ ಪೊಲೀಸ್ ಶಿಬ್ಬಂದಿಗೆ ವರ್ಗಮಾಡಲ್ಪಟ್ಟ ಒಬ್ಬ ಸೋಲ್ಜರನಿಗೆ, ಪೊಲೀಸ್ ಶಿಬ್ಬಂದಿಯಲ್ಲಿಯ ಆತನ ವಗಾಂ ವರ್ಗಾಯಿ ಸ್ಯಾಂಕ್ಷನ್ ಮಾಡಲ್ಪಟ್ಟರೆ, ಆತನ ಮಿಲಿಟೆರಿ ನೌಕರಿಯ ಕಡಿಮೆಯು ಶಿಕ್ಕತಕ್ಕದ್ದು.

34. ಯುದ್ಧದಲ್ಲಿ ಆದ ಗಾಯುಗಳ ಮತ್ತು ಯುದ್ಧದಲ್ಲಿ ಅಲ್ಲದ ಅನ್ಯಥಾ ಮಿಲಿಟೆರಿ ಕೆಲಸಗಳನ್ನು ಮಾಡುವಾಗ್ಯೆ ಸಂಭವಿಸಿದ ಹಾನಿಗಳ ಬಗ್ಯೆ ಗ್ರಾಟ್ಯೂಟಿ ವ ಪೆನ್ಷನುಗಳು ಯೂರೋಪಿಯನ್ ಕಮಿಷನ್ಡ ಆಫಿಸರರಿಗೆ ಯಾವ ಕ್ರಮಗಳಿಗೆ ವ ಷರತ್ತುಗಳಿಗೆ ಅನುಸಾರವಾಗಿ ಕೊಡಲ್ಪಡುವವೋ ಆ ಕ್ರಮಗಳಿಗೆ ವ ಷರತ್ತುಗಳಿಗೆ ಅನುಸಾರವಾಗಿಯೇ ನೇಟಿವ್ ಕಮಿಷನ್ಡ ಆಫಿಸರರಿಗೂ ಕೊಡೋಣಾಗುವವು. ಅವುಗಳನ್ನು ಸಂಬಳ ವ ಅಲ್ಲೋವೆನ್ಸ್‌ಗಳಿಗೆ ಯಾ ಪೆನ್ಷನಿಗೆ ಕೂಡಿಸಿ ...ವಮಾಡಿಕೊಳ್ಳತಕ್ಕದ್ದು.

ಕಮಿಷನ್ ಹೊಂದದ ಆಫಿಸರರಿಗೂ ಸಮಸ್ತ ಇಲಾಖೆಗಳ ಮನುಷ್ಯರಿಗೂ ಕಮಿಷನ್ಡ ಆಫಿಸರರ ಸಂಗತಿಯಲ್ಲಿಯ ಹಾಗೆ ಪರಂತು ಬೇರೆಬೇರೆ ದರಗಳಲ್ಲಿ ಗಾಯಗಳ ವ ಹಾನಿಗಳ ಬಗ್ಗಿನ ಪೆನ್ಷನುಗಳು ಶಿಕ್ಕುವವು.

35. ಪರಾಯಿ ದೇಶದಲ್ಲಿ ನೌಕರಿ ಮಾಡುವಾಗ್ಯೆ ಕಾಣೆಯಾದ (ಫರಾರಿಯಾದವನಲ್ಲದ) ಮನುಷ್ಯನ ವಾರಸ್‌ದಾರನು ಪೆನ್ಷನ್ ಪಡಕೊಳ್ಳಲಿಕ್ಕೆ ಅರ್ಹನಾಗುತ್ತಾನೆ.

36. ಹನ್ನೆರಡು ತಿಂಗಳ ಭತ್ತೆಯನ್ನು ಕಳದು ಹನ್ನೆರಡು ತಿಂಗಳ ಸಂಬಳಕ್ಕೆ ಮಿಗಾರದಷ್ಟು ಗ್ರಾಟ್ಯೂಟಿಯು ಮಿಲಿಟೆರಿ ಕೆಲಸವನ್ನು ಮಾಡುವಾಗ್ಯೆ ಕೊಲ್ಲಲ್ಪಟ್ಟ ನೇಟಿವ್ ಕಮಿಷನ್ಡ ಆಫಿಸರರ ವಾರಸ್‌ದಾರರಿಗೆ ಕೊಡೋಣಾಗುವದು.

LINKED BATTALIONS (INFANTRY).

ಒಟ್ಟು ಕೂಡಿಸಲ್ಪಟ್ಟ ಪಟಾಲಗಳು (ಪಾಯಿದಳಗಳು).

1. ಮದ್ರಾಸ್ ಪಾಯಿದಳದ ರೆಜಿಮೆಂಟುಗಳು ಪ್ರತಿ ಒಂದು ಮೂರು ಪಟಾಲಗಳ ರೆಜಿಮೆಂಟಾಗಿ ಒಟ್ಟು ಕೂಡಿಸಲ್ಪಟ್ಟದ್ದಾವೆ; ಆದರೆ ಸ್ವಲ್ಪ ರೆಜಿಮೆಂಟುಗಳು ಎರಡು ಪಟಾಲಗಳ ರೆಜಿಮೆಂಟುಗಳಾಗಿ ಒಟ್ಟು ಕೂಡಿಸಲ್ಪಟ್ಟದಾವೆ.

2. ಯಾವದಾದರೂ ಒಂದು ಪಟಾಲದಲ್ಲಿ ಮಾಡಲ್ಪಟ್ಟ ಸಮಸ್ತ ದಾಖಲಾತಿಗಳು ಎರಡೂ ಯಾ ಮೂರು ಪಟಾಲಗಳ ಬಗ್ಯೆ ಆಗಿರುವವು, ಅಂದರೆ ರೆಜಿಮೆಂಟಿನ ಒಂದು ಪಟಾಲದ ಬಗ್ಯೆ ದಾಖಲಾದ ಒಬ್ಬ ಹೊಸ ಶಿಪಾಯಿಯು ಆತನು ರೆಜಿಮೆಂಟಿನ ಯಾವ ಪಟಾಲದಲ್ಲಿ ನೌಕರಿ ಮಾಡುತ್ತಾನೋ ಆ ಪಟಾಲಕ್ಕೆ ಯಾವ ಸಮಯದಲ್ಲಾದರೂ ಒಟ್ಟು ಕೂಡಿಸಲ್ಪಡಬಹುದಾದ ಇತರ ಪಟಾಲಗಳಲ್ಲಿ ನೌಕರಿ ಮಾಡಲಿಕ್ಕೆ ಗುರಿಯಾಗುತ್ತಾನೆ, ಮತ್ತು ಯುದ್ಧ ಕಾಲದಲ್ಲಿ ಅವಶ್ಯ ಬಿದ್ದರೆ ಅವನನ್ನು ಆ ಪಟಾಲಗಳಿಗೆ ವರ್ಗಮಾಡಬಹುದು. ಒಟ್ಟು ಕೂಡಿಸಲ್ಪಟ್ಟ ಒಂದು ಪಟಾಲಕ್ಕೆ ಯುದ್ಧಕಾಲದಲ್ಲಿ ವರ್ಗಮಾಡಲ್ಪಡುವ ಪದ್ಧತಿಯ ಹೊರ್ತು, ಶಿಪಾಯಿಯ ದಾಖಲಾತಿಯ ಕುರಿತ ಷರತ್ತುಗಳು ಪ್ರಕೃತ ಇದ್ದಹಾಗೆಯೆ ಇರುವವು.

ರೆಜಿಮೆಂಟುಗಳು ಈ ಕೆಳಗೆ ಕಾಣಿಸಿದ ಮೇರೆಗೆ ಒಟ್ಟು ಕೂಡಿಸಲ್ಪಟ್ಟಿರುತ್ತವೆ:—

1ನೇ (ಪಾಯನಿಯರ್ಸ್)	4ನೇ (ಪಾಯನಿಯರ್ಸ್)	21ನೇ (ಪಾಯನಿಯರ್ಸ್)
2ನೇ	15ನೇ	26ನೇ
3ನೇ	23ನೇ	
5ನೇ	16ನೇ	27ನೇ
6ನೇ	14ನೇ	
7ನೇ	19ನೇ	24ನೇ
8ನೇ	17ನೇ	25ನೇ
9ನೇ	11ನೇ	28ನೇ
13ನೇ	20ನೇ	22ನೇ

ORGANIZATION OF RESERVES (INFANTRY).

ರಿಜರ್ವುಗಳ ಏರ್ಪಾಡು (ಪಾಯಿದಳ).

1. ಆಕ್ಟೀವ್ ರಿಜರ್ವು ಪ್ರತಿ ಒಂದು ಪಟಾಲಕ್ಕೆ 160 ಮನುಷ್ಯರ ಮೇರೆಗೆ ಆಗಿರತಕ್ಕದ್ದು. ಅದರಲ್ಲಿ—

(a) ಎಲ್ಲಾ ತರಗತಿಗಳ ವ ಒಳ್ಳೇ ನಡತೆಯುಳ್ಳ ಮತ್ತು ಐದು ವರುಷಕ್ಕೆ ಕಡಿಮೆಯಾಗದಷ್ಟು ವ ಹನ್ನೆರಡು ವರುಷಕ್ಕೆ ಮೀರದಷ್ಟು ನೌಕರಿಯುಳ್ಳ ಮತ್ತು ಮುಖ್ಯ ಸೈನ್ಯದಿಂದ ರಿಜರ್ವಿಗೆ ಹೋಗಲಿಕ್ಕೆ ಉಮೇದವಾರಿ ಮಾಡಬಹುದಾದ ಶಿಪಾಯರು.

(b) 32 ವರುಷಕ್ಕೆ ಮೀರದಷ್ಟು ಪ್ರಾಯದವರು ಒಳ್ಳೇ ನಡತೆಯುಳ್ಳವರೂ ನಿರ್ದೇಶಿಸಲ್ಪಟ್ಟ ಜಾತಿಯವರೂ ಆಗಿದ್ದು ಮೂರು ವರುಷಕ್ಕೆ ಕಡಿಮೆಯಾಗದ ವ ಹನ್ನೆರಡು ವರುಷಕ್ಕೆ ಮೀರದ ನೌಕರಿ ಮಾಡಿದ ನಂತರ ದುರ್ನಡತೆಯ ಬಗ್ಗೆ ಅಲ್ಲದೆ ಇತರ ಯಾವದಾದರೂ ಕಾರಣದ ಬಗ್ಗೆ ಡಿಸ್ಚಾರ್ಜ್ ಮಾಡಲ್ಪಟ್ಟು ರಿಜರ್ವಿನ ಬಗ್ಗೆ ಪುನಹಾ ದಾಖಲಾಗಿರಬಹುದಾದ ಮನುಷ್ಯರು; ಸೇರಿರುತ್ತಾರೆ.

2. ಕಮಿಷನ್ ಹೊಂದದ ಆಫಿಸರರು ತಮ್ಮ ಪಟಾಲದ ಆಧಿಪತ್ಯವನ್ನು ನಡಿಸುವ ಆಫಿಸರನ ಅಪ್ಪಣೆಯನ್ನು ಪಡಕೊಂಡು ತಮ್ಮ ಹುದ್ದೆಗೆ ರಾಜೀಕೊಟ್ಟು ಸಿಪಾಯರಾಗಿ ರಿಜರ್ವಿಗೆ ವರ್ಗಮಾಡಲ್ಪಡಲಿಕ್ಕೆ ಸಮ್ಮತಿ ಪಟ್ಟರೆ ಮಾತ್ರ ರಿಜರ್ವಿನಲ್ಲಿ ಸೇರಬಹುದು.

3. ಪೂರಾ ರಿಜರ್ವು ಯಾ ಅದರ ಯಾವದಾದರೂ ಭಾಗವು ಎಲ್ಲಾ ಕಾಲಗಳಲ್ಲಿಯೂ ಗವರ್ನಮೆಂಟಿನವರ ಹುಕುಮಿಗನುಗುಣವಾಗಿ ಕೆಲಸದ ಬಗ್ಗೆ ಕರೆಯಲ್ಪಡಲಿಕ್ಕೂ ಅವಶ್ಯವಿರುವವರಿಗೆ ಮುಖ್ಯ ಸೈನ್ಯದ ಸಂಗಡ ಇಟ್ಟು ಕೊಳ್ಳಲ್ಪಡಲಿಕ್ಕೂ ಗುರಿಯಾಗಿರುತ್ತದೆ.

4. ಹೀಗೆ ಕೆಲಸದ ಬಗ್ಗೆ ಕರೆಯಲ್ಪಟ್ಟಾಗ ಸದರೀ ಮನುಷ್ಯರು ತರ್ಬೀಯತು ಮಾಡುವ ಸ್ಥಳಕ್ಕೆ ಹೋಗತಕ್ಕದ್ದು. ಮತ್ತು ತಮ್ಮ ಸ್ವಂತ ಪಟಾಲಕ್ಕೆ ಸೇರಿಸಲ್ಪಟ್ಟ ಯಾ ಇನ್ನು ಮುಂದೆ ಸೇರಿಸಲ್ಪಡ ಬಹುದಾದ ಯಾವದೊಂದು ಪಟಾಲದ ಸಂಗಡ ವ ಎಲ್ಲಿಯೂ ಕೆಲಸ ಮಾಡಲಿಕ್ಕೆ ಗುರಿಯಾಗಿರುವರು.

5. ರಿಜರ್ವಿನ ಸಿಪಾಯರು ಯುದ್ಧಕಾಲದಲ್ಲಿ ಯಾ ಸ್ವಲ್ಪ ಸಮಯದಲ್ಲಿಯೇ ಯುದ್ಧ ಸಂಭವಿಸೀತು ಎಂದು ಇಂಡಿಯಾ ಗವರ್ನಮೆಂಟಿನವರು ಅಭಿಪ್ರಾಯ ಪಡುವಾಗ್ಯೆ ಅಲ್ಲದೆ ಇತರ ಯಾವ ಸಮಯದಲ್ಲಾದರೂ ನೌಕರಿಯಿಂದ ಡಿಸ್ಚಾರ್ಜ್ ಮಾಡಲ್ಪಡಬೇಕಾಗಿ ಕೇಳಬಹುದು.

6. ಯುದ್ಧಕ್ಕೆ ಹೋಗತಕ್ಕ ಸೈನ್ಯದ ನೇಟಿವ್ ಶಿಪಾಯರು ಸಿವಿಲ್ ದಾವೆಗಳಲ್ಲಿ ತಮ್ಮ ವ್ಯಾಜ್ಯವನ್ನು ಪ್ರಥಮತಃ ತನಖೆ ಮಾಡಬೇಕೆಂದು ಯಾವ ಕ್ರಮಗಳಿಗನುಗುಣವಾಗಿ ಹಕ್ಕನ್ನು ಹೇಳಬಹುದೋ ಆ ಕ್ರಮಗಳು ರಿಜರ್ವಿನ ಮನುಷ್ಯರಿಗೂ ಲಗಾವಾಗುತ್ತವೆ.

ರಿಜರ್ವಿನ ಮನುಷ್ಯರು, ಅವರು ವಾಸಿಸುವ ಪ್ರದೇಶದಲ್ಲಿ ಜಾರಿಯಲ್ಲಿರುವ ಆಕ್ಟಿನ ನಿಬಂಧನೆಗಳಿಗನುಗುಣವಾಗಿ ಮಾಡತಕ್ಕ ಕಾಯಿದೆಯಿಂದ ಸ್ಥಾಪಿತವಾದ ಕೆಲಸದಿಂದ ವಿನಾಯಿಸಲ್ಪಟ್ಟಿರುತ್ತಾರೆ—

1873ನೇ ಇಸವಿಯ 8ನೇ ಆಕ್ಟು.
1877ನೇ ಇಸವಿಯ 13ನೇ ಆಕ್ಟು.
1858ನೇ ಇಸವಿಯ 1ನೇ ಮದ್ರಾಸ್ ಆಕ್ಟು.
1879ನೇ ಇಸವಿಯ 7ನೇ ಮುಂಬಾಯಿ ಆಕ್ಟು.

7. ಆಕ್ಟೀವ್ ರಿಜರ್ವಿನವರು ಈ ಕೆಳಗೆ ಕಾಣಿಸಿದವುಗಳ ವಿನಹಾ ಗವರ್ನಮೆಂಟಿನ ಕೆಳಗೆ ಇತರ ಸಿವಿಲ್ ಉದ್ಯೋಗಗಳನ್ನು ಪಡೆಯಲಿಕ್ಕೆ ಅರ್ಹರಾಗಿರುತ್ತಾರೆ:—

ಜೈಲ್ ವಾರ್ಡರರು (ಬಂದಿಖಾನೆಕಾವಲುಗಾರರು).
ಫಾರೆಸ್ಟ್ ಗಾರ್ಡುಗಳು.
ನಾರ್ತ ವೆಸ್ಟರ್ನ್ ರೈಲ್ವೆ ಸಿಬ್ಬಂದಿ.
ಆಯೋಧ್ಯೆ ಮತ್ತು ರೋಹಿಲಖಂಡ ರೈಲ್ವೆ ಸಿಬ್ಬಂದಿ.
ಯಾವದೊಂದು ರೈಲ್ವೆಯಲ್ಲಿ ಶಾಸ್ತ್ರೀಕ ಜ್ಞಾನ ಅಥವಾ ತರ್ಬೀಯತು ಅಗತ್ಯವಿರುವ ಕೆಲಸಗಳು ದೃಷ್ಟಾಂತಕ್ಕೆ ಪಾಯಿಂಟ್ಸ್‌ಮೆನ್ ಸಿಗ್ನಲ್ ಮೆನ್ ಅಥವಾ ಗ್ಯಾಂಗ್ಮೆನ್.

ಮೇಲೆ ಹೇಳಿದ ಉದ್ಯೋಗಗಳ ವಿನಹ ಇತರ ಉದ್ಯೋಗಗಳನ್ನು ನೋಡುವವರಿಗೆ ಅವರ ವರುಷಾವಧಿ ತರ್ಬೀಯತಿಗೆ ಹಾಜರಾಗಲಿಕ್ಕೆ ರಜಾ ಸಿಕ್ಕುವದು, ಆದರೆ ಅವಶ್ಯವಿದ್ದರೆ ಅವರು ಅಂಥಾ ಗೈರಹಾಜರಿ ಕಾಲದಲ್ಲಿ ಬದಲಿಯವರನ್ನು ಇಡಬೇಕಾಗಿ ಕೇಳಲ್ಪಡಬಹುದು.

8. ಒಂದು ಪಟಾಲವು ಕೆಲಸದ ಮೇಲೆ ಇರುವಾಗ್ಯೆ ಯಾ ಕೆಲಸದಬಗ್ಗೆ ತಯಾರಾಗಿರಬೇಕೆಂಬು ಎಚ್ಚರಿಕೆ ಕೊಡಲ್ಪಟ್ಟಾಗ್ಯೆ ವಿನಹಾ ಇತರ ಸಮಯದಲ್ಲಿ, ಪಟಾಲವು ಪೂರ್ಣವಾಗಿ ಭರ್ತಿಯಾಗಿರದಿದ್ದರೂ ಸಿಪಾಯರು ಸೈನ್ಯದ ಮುಖ್ಯಭಾಗದಿಂದ ಅಧಿಕಾರಗೊಳಿಸಲ್ಪಟ್ಟ ಸಂಖ್ಯೆಯಮಟ್ಟಿಗೆ ಆಕ್ಟೀವ್ ರಿಜರ್ವಿಗೆ ಹೋಗಬಹುದು.

9. ಆಕ್ಟೀವ್ ರಿಜರ್ವಿನ ಒಬ್ಬ ಸಿಪಾಯಿಯ ರಿಜರ್ವ ಸಂಬಳವು ತಿಂಗಳಿಗೆ 3 ರೂಪಾಯಿ ಯಾಗಿರುತ್ತದೆ.

10. ತರ್ಬೀಯತಿನ ಯಾ ಕೆಲಸದ ಬಗ್ಗೆ ಒಟ್ಟು ಕೂಡಿಸಲ್ಪಟ್ಟಾಗ್ಯೆ ಕೆಲಸಕ್ಕೆ ಯೋಗ್ಯವಾದ ರಿಜರ್ವಿನ ಸಿಪಾಯರು ಮುಖ್ಯ ಸೈನ್ಯದ ಸಂಗಡ ಇರುವಾಗ್ಯೆ ಅವರಿಗೆ ಸಿಕ್ಕುತ್ತಿದ್ದ ಪೂರಾ ಸಂಬಳ ವ ಒಳ್ಳೇನಡತೆಯ ಬಗ್ಗಿನ ಸಂಬಳವನ್ನು ಹೊಂದುವರು. ಹೀಗೆ ಪೂರಾ ಸಂಬಳವನ್ನು ಹೊಂದುವಾಗ್ಯೆ ಅವರ ರಿಜರ್ವಿನ ಸಂಬಳವು ನಿಂತುಹೋಗುವದು. ಸಿಪಾಯಿಯಾಗಿ ರಿಜರ್ವಿನಲ್ಲಿ ದಾಖಲಾದ ಒಬ್ಬ ಕಮಿಷನ್ ಹೊಂದದ ಆಫಿಸರನು (2ನೇ ಕಲಂ) ತರ್ಬೀಯತ್ತಿನ ಬಗ್ಗೆ ಸೇರಿಸಲ್ಪಟ್ಟಾಗ್ಯೆ ಯಾ ಕೆಲಸದಬಗ್ಗೆ ಕರೆಯಲ್ಪಟ್ಟಾಗ್ಯೆ ರಿಜರ್ವಿಗೆ ಅವನು ಹೋಗುವದಕ್ಕೆ ಸ್ವಲ್ಪ ಮುಂಚೆ, ಅವನ ನಡತೆಯು ಯಾ ನೌಕರಿ ಕಾಲವು ಒಬ್ಬ ಸಿಪಾಯಿಯಾಗಿ ಎಣಿಸಿದರೆ ಅವನು ಪಡಕೊಳ್ಳಲಿಕ್ಕೆ ಅರ್ಹನಾಗಿದ್ದ ಒಳ್ಳೇ ನಡತೆಯ ಸಂಬಳದ ದರವನ್ನು ಹೊಂದುವನು.

11. ಆಕ್ಟಿವ್ ರಿಜರ್ವಿನ ಸಿಪಾಯರು ತರ್ಬೀಯತಿನ ಯಾ ಕೆಲಸದ ಬಗ್ಯೆ ಕರೆಯಲ್ಪಟ್ಟಾಗ್ಯೆ ಜಿನಸುಗಳು ಪ್ರಿಯವಾದರೆ ಆ ಬಗ್ಯೆ ಪರಿಹಾರ ದ್ರವ್ಯವನ್ನು ಪಡಕೊಳ್ಳಲಿಕ್ಕೆ ಅರ್ಹರಾಗಿರುತ್ತಾರೆ. ವರುಷಾವಧಿ ತರ್ಬೀಯತಿನ ಕಾಲದ ಸಂಗತಿಯಲ್ಲಿ, ಯಾವ ತಿಂಗಳಿನ ಆಖೈರದಿವಸವು ಆ 31 ದಿವಸಗಳ ತರ್ಬೀಯತಿನಲ್ಲಿ ಬರುತ್ತದೋ ಆ ತಿಂಗಳಿನಲ್ಲಿದ್ದ ಕ್ರಯದವರೇಗೆ ಆ ಇಡೀ ಕಾಲದ ಬಗ್ಯೆ ಅಂಥಾ ಪರಿಹಾರ ದ್ರವ್ಯವು ಸಿಕ್ಕುವದು.

12. ತರ್ಬೀಯತಿನ ಬಗ್ಯೆ ಬಟ್ಟು ಕೊಡಿಸಲ್ಪಟ್ಟಾಗ್ಯೆ ಆ ಸ್ಥಳದ ಪಟಾಲಂದ ಆಧಿಪತ್ಯವನ್ನು ನಡಿಸುವ ಆಫಿಸರನಿಂದ ಅವರು ಬಾಕಿಯಲ್ಲಿದ್ದ ತಮ್ಮ ರಿಜರ್ವಿನ ಸಂಬಳವನ್ನು ಪಡಕೊಳ್ಳುವರು. ಸಲ್ಲತಕ್ಕದ್ದರ ಅರವಾಸಿಯು ಪ್ರತಿ ಒಬ್ಬ ಮನುಷ್ಯನಿಗೆ ಪ್ರಥಮ ಸರ್ತಿಗೆ ಹಾಜರಿ ನೋಡಿದಾಗ್ಯೆ ಸಿಕ್ಕುವದು; ಮತ್ತು ಉಳಿದ ಅಂಶವು, ಪೂರಾ ಸಂಬಳ, ಒಳ್ಳೇನಡತೆಯ ಬಗ್ಗಿನ ಸಂಬಳ, ಅಂಥಾ ತರ್ಬೀಯತಿನಕಾಲದಲ್ಲಿ ಜಿನಸುಗಳು ಪ್ರಿಯವಾದ ದೆಶೆಯಿಂದ ಅವರಿಂದ ಸಂಪಾದಿಸಲ್ಪಟ್ಟ ಪರಿಹಾರದ್ರವ್ಯ ವ ರೋಡ್ ಅಲೋವೆನ್ಸು ಸಹಾ (ಪ್ಯಾರಾ 21) ಸಲುವದು ಇದ್ದರ ಬಟ್ಟು ತರ್ಬೀಯತಿನ ಕಾಲದ ಅಂಖೈರದಲ್ಲಿ ಕೊಡಲ್ಪಡುವದು. ಯಾವ ಸಂದರ್ಭಗಳಲ್ಲಾದರೂ ರಿಜರ್ವಿನ ಸಂಬಳವು ಮುಂಗಡವಾಗಿ ಕೊಡಲ್ಪಡಲಿಕ್ಕಿಲ್ಲ.

13. ಡಿಸ್ಚಾರ್ಜ್ ಮಾಡಲ್ಪಟ್ಟು ಆಕ್ಟಿವ್ ರಿಜರ್ವಿಗೆ ಪುನಹಾ ದಾಖಲ್ಮಾಡಲ್ಪಟ್ಟ ಸಿಪಾಯರಿಗೆ ಅವರು ಡಿಸ್ಚಾರ್ಜ್ ಮಾಡಲ್ಪಡುವಾಗ್ಯೆ ಅವರಿಗೆ ಸಿಕ್ಕುತ್ತಿದ್ದ ಪೂರ್ಣ ಸಿಪಾಯಿಯ ಸಂಬಳವೂ, ಒಳ್ಳೇನಡತೆಯ ಸಂಬಳ ಏನಾದರೂ ಇದ್ದರೆ ಅದೂ, ಅವರು ತರ್ಬೀಯತಿನ ಬಗ್ಯೆ ಪಟಾಲಕ್ಕೆ ಸೇರಿದ್ದ ಕಾಲದಲ್ಲಿ ಜಿನಸು ಪ್ರಿಯವಾದದರಿಂದ ಸಲತಕ್ಕ ಪರಿಹಾರ ದ್ರವ್ಯವೂ ಸಹಾ ಸಿಕ್ಕುವದು.

14 ರಿಜರ್ವಿನ ಒಬ್ಬ ಸಿಪಾಯಿಯು ತನ್ನ ಮನೆಯಲ್ಲಿ ಮೃತಪಟ್ಟ ಸಂಗತಿಯಲ್ಲಿ ಆತನ ರಿಜರ್ವಿನ ಸಂಬಳವು ಮರಣದ ತಾರೀಖುವರೆಗೆ ಎಣಿಸಲ್ಪಡುವದು. ಆತನ ಸೊತ್ತಿನಲ್ಲಿ ಬಾಕಿ ಏನಾದರೂ ಇದ್ದರೆ ಅದನ್ನು ಆತನ ವಾರಿಸ್‌ದಾರನಿಗೆ ಅವನು ಮರಣದ ವಿಷಯವಾಗಿ ಮತ್ತು ತಾನೇ ಆತನ ವಾರಿಸ್‌ದಾರನಾದ ಮನುಷ್ಯನು ಎಂಬದರ ವಿಷಯವಾಗಿ ರುಜುವಾತನ್ನು ತಂದರೆ, ಕೊಡೋಣಾದೀತು.

15. ಆಕ್ಟಿವ್ ರಿಜರ್ವಿನಲ್ಲಿದ್ದು ಅಶಕ್ತರೆಂದು ಡಿಸ್ಚಾರ್ಜ್ ಮಾಡಲ್ಪಟ್ಟ ವ ಪೆನ್ಷನಿಗೆ ಅರ್ಹರಲ್ಲದ ಮನುಷ್ಯರಿಗೆ ಈ ಕೆಳಗಣ ದರದ ಮೇಲೆ ಗ್ರಾಟ್ಯೂಟಿಯು ಕೊಡಲ್ಪಡುವದು:—

		ಹುದ್ದೆಯ ವ ಒಳ್ಳೇನಡತೆಯ ಬಗ್ಗಿನ ಎಷ್ಟು ತಿಂಗಳ ಪೂರಾ ಸಂಬಳವೆಂಬದು.
ಕಲರ್ ವ ರಿಜರ್ವಿನಲ್ಲಿ 10 ವರುಷಕ್ಕೆ ಮೀರದಿದ್ದು ವರುಷ ನೌಕರಿನೋಡಿದ ಮನುಷ್ಯರು	5 ..	.. 3
ಕಲರ್ ವ ರಿಜರ್ವಿನಲ್ಲಿ 15 ವರುಷಕ್ಕೆ ಮೀರದಿದ್ದು ವರುಷ ನೌಕರಿನೋಡಿದ ಮನುಷ್ಯರು	10 ..	.. 6
ಕಲರ್ ವ ರಿಜರ್ವಿನಲ್ಲಿ 20 ವರುಷಕ್ಕೆ ಮೀರದಿದ್ದು ವರುಷ ನೌಕರಿನೋಡಿದ ಮನುಷ್ಯರು	15 ..	.. 9
ಕಲರ್ ವ ರಿಜರ್ವಿನಲ್ಲಿ 25 ವರುಷಕ್ಕೆ ಮೀರದಿದ್ದು ವರುಷ ನೌಕರಿನೋಡಿದ ಮನುಷ್ಯರು	20 ..	.. 12

16. ಆಕ್ಟಿವ್ ರಿಜರ್ವಿನ ಪೂರಾ ಮನುಷ್ಯರು ಸೈನ್ಯದಲ್ಲಿ ವ ರಿಜರ್ವಿನಲ್ಲಿ 25 ವರುಷದ ನೌಕರಿಯನ್ನು ಮುಗಿಸಿದನಂತರ ಮೆಡಿಕಲ್ ಬೋರ್ಡಿನ ಮುಂದೆ ಹಾಜರಾಗದ ತಿಂಗಳಿಗೆ 3 ರೂಪಾಯಿ ಪೆನ್ಷನ್ ಪಡಕೊಳ್ಳಲಿಕ್ಕೆ ಅರ್ಹರಾಗಿರುತ್ತಾರೆ.

17. ದಂಡಿನವರು ಮುಖ್ಯಸೈನ್ಯಕ್ಕೆ ಪುನಹಾ ವರ್ಗವಾಗಿ ಹೋಗುವಾಗ್ಯೆ, ಅವರು ರಿಜರ್ವಿನಲ್ಲಿರುವಾಗ್ಯೆ ತೆಗದುಕೊಂಡ ಸಂಬಳವನ್ನು ಯಾವ ಸಂಗತಿಯಲ್ಲಾದರೂ ವಾಪಸ್‌ಕೊಡುವ ಅಗತ್ಯವಿಲ್ಲ.

18. ತಮ್ಮ ಅರಿಕೆಮೇರೆಗೆನೇ ಮುಖ್ಯ ಸೈನ್ಯಕ್ಕೆ ಪುನಹಾ ಸೇರುವವರು ಬಿಡಾರಮಾಡಿಕೊಳ್ಳಲಿಕ್ಕೆ ಕೊಡೋಣಾಗುವ ಹಣವನ್ನು ಪಡಕೊಳ್ಳಲಿಕ್ಕೆ ಅರ್ಹರಾಗಲಿಕ್ಕಿಲ್ಲ.

19. 25 ವರುಷಗಳ ಕದೀಮಿನಂತರ ಕೊಡೋಣಾಗುವ ಪೆನ್ಷನ್ ಬಂದೇ ಮಾತ್ರ ರಿಜರ್ವಿನಲ್ಲಿ ಕೆಲಸ ಮಾಡುವದರಿಂದ ಹೊಂದುವ ಪೆನ್ಷನ್ ಆಗಿರುತ್ತದೆಂತ ಸ್ಪಷ್ಟವಾಗಿ ತಿಳಕೊಳ್ಳತಕ್ಕದ್ದು. ಆದರೆ, ಎಕ್ಟಿವ್ ರಿಜರ್ವಿನವರು ಯುದ್ಧಕ್ಕೆ ಕರೆಯಲ್ಪಟ್ಟಾಗ್ಯೆ, ಯುದ್ಧಸೈನ್ಯದಲ್ಲಿ ಕೆಲಸ ಮಾಡುವವರಿಗೆ ಸಿಕ್ಕುವ ಎಲ್ಲಾ ಆದಾಯಗಳನ್ನು ಹೊಂದಲಿಕ್ಕೆ ಅರ್ಹರಾಗುತ್ತಾರೆ; ಮತ್ತು ಅಂಥ ನೌಕರಿಯ ದೆಸೆಯಿಂದ ಅಶಕ್ತರಾದರೆ, ಈ ಮೂಲಕ ಸಾಧಾರಣತರದ ಪೆನ್ಷನ್ ಹೊಂದಲಿಕ್ಕೆ ಅರ್ಹರಾಗಬಹುದು.

20 ಪ್ರಥಮ ದಫೆಗೆ ರಿಜರ್ವಿನಲ್ಲಿ ಸೇರಿದವರನ್ನು, ಅವರು ಮನೆಗೆ ಹೋಗುವಾಗ್ಯೆ ರೈಲ್ ಮೇಲೆ ವ ದೋಣಿಮೇಲೆ ಹೋಗಲಿಕ್ಕೆ ಉಚಿತವಾಗಿ ಪಾಸ್ ಕೊಡೋಣಾಗುತ್ತದೆ; ಆದರೆ ಸಮುದ್ರ ಪ್ರಯಾಣವು ರೈಲ್ ಪ್ರಯಾಣಕ್ಕಿಂತ ಅಗ್ಗವಾದ ಸಂಗತಿಯಲ್ಲಿ ವಿನಹಾ, ದೃಷ್ಟಾಂತಕ್ಕೆ (ಬೊಂಬಾಯಿಯಿಂದ ಕರಾಚಿವರೆಗೆ) ಸಮುದ್ರಮಾರ್ಗವಾಗಿ ಹೋಗುವಾಗ್ಯೆ ಹಾಗೆ ಪಾಸ್ ಕೊಡೋಣಾಗುವದಿಲ್ಲ.

21. ತರ್ಬೀಯತಾಗಲಿಕ್ಕೆ ಯಾ ಕೆಲಸಕ್ಕೆ ಕರೆಯಲ್ಪಟ್ಟಾಗ್ಯೆ ಅವರು ಮನೆಯಿಂದ ಬರುವಾಗ್ಯೆ ವ ವಾಪಸ್ ಹೋಗುವಾಗ್ಯೆ, ರೈಲ್ ಮೇಲೆ ವ ದೋಣಿಮೇಲೆ ಹೋಗಲಿಕ್ಕೆ ಹಣ ಪಡಕೊಳ್ಳದೇನೇ ಪಾಸ್ ಕೊಡೋಣಾಗುವದು; ಮತ್ತು ರೈಲ್ ಮೇಲೆ ಯಾ ದೋಣಿಯಮೇಲೆ ಪ್ರಯಾಣಮಾಡಲಿಕ್ಕೆ ಕೂಡದಿರುವಷ್ಟು ದೂರಕ್ಕೆ 100 ಮೈಲಿಗೆ ಯಾ ಅದರ ಅಂಶಕ್ಕೆ 1 ರೂಪಾಯಿ ದರದಲ್ಲಿ ಮಾರ್ಗದ ಮೇಲಿನ ಭತ್ತೆ ಕೊಡೋಣಾಗುವದು. ಈ ಮಾರ್ಗದ ಮೇಲಿನ ಭತ್ತೆಯು ಪ್ರಥಮ ದಫೆಗೆ ರಿಜರ್ವಿನಲ್ಲಿ ಸೇರಿದವರಿಗೆ ಕೊಡೋಣಾಗುವದಿಲ್ಲ.

22. ತಮ್ಮ ಅರಿಕೆ ಮೇರೆಗೆ ಮುಖ್ಯಸೈನ್ಯಕ್ಕೆ ಪುನಹಾ ವರ್ಗಮಾಡಿಕೊಂಡವರನ್ನು ಪರಂತು ಪುನಹಾ ವರ್ಗಮಾಡಿ ಕೊಳ್ಳಲಿಕ್ಕೆ ಅರ್ಜಿಮಾಡಿದ ಸಮಯದಲ್ಲಿ ಅವರ ಪಟಾಲವು ಯುದ್ಧಕ್ಕೆ ಹೋಗಲಿಕ್ಕೆ ಹುಕುಂ ಕೊಡಲ್ಪಟ್ಟಿರುವ ಸಂಗತಿಯಲ್ಲಿ ವಿನಹಾ ಇತರ ಸಂಗತಿಯಲ್ಲಿ ಸೈನ್ಯಕ್ಕೆ ಸೇರುವದಕ್ಕೆ ಹಣ ಪಡಕೊಳ್ಳದೆ ಪಾಸ್ ಕೊಡೋಣಾಗಲಿಕ್ಕಿಲ್ಲ.

23. ಮುಖ್ಯ ಸೈನ್ಯದಿಂದ ರಿಜರ್ವಿಗೆ ಹೋಗುವವರಿಗೆ ಅವರ ಬಾಬತು ಕೆಳಗೆ ಹೇಳಿದ ಕಿಟ್ ಸಾಮಾನುಗಳ ಮೌಲ್ಯವಾಗಿ 25 ರೂಪಾಯಿ ಸಿಕ್ಕುವದು; ನಂತರ ಅವು ಸರಕಾರಿ ಸೊತ್ತಾಗಿರುವವು:—

1	ದೊಡ್ಡ ಅಂಗಿ.	1	ಜೋಡು ಕಮರ್ಬಂದ್
1	ಪಕ್ಡಿ.	1	ಕಟಿ ಚೀಲ.
1	ಮೇಲೆ ಹಾಕಿಕೊಳ್ಳುವ ಖಾಕಿ ಅಂಗಿ.	1	ನೀರುಹಾಕುವ ಬಾಟ್ಲಿ.
1	ನಂಬರಿನ ಅಂಕೆಗಳು.	1	ಜೋಡು ಬೂಟ್ಸು.
1	ಜೋಡು ಖಾಕಿ ಪೈಜಾಮುಎಂಬ ವಿಜಾರು	1	ಸಾಮಾನುಹಾಕುವ ಚೀಲ.

ಮೇಲ್ವಿಚಾರ ಮಾಡುವ ಬೋರ್ಡಿನವರು ಅವುಗಳು ದುರುಸ್ತು ಮಾಡತಕ್ಕವುಗಳು ಯಾ ನಿಷ್ಪ್ರಯೋಜನವಾದವುಗಳು ಎಂತ ಹೇಳಿದಾಗ್ಯೆ ಈ ಸಾಮಾನುಗಳು ದುರುಸ್ತು ಮಾಡೋಣಾಗುವವು ಯಾ ಹೊಸತು ಕೊಡೋಣಾಗುವವು; ಅಲ್ಲದಿದ್ದರೆ ಮೂರು ವರುಷಗಳನಂತರ ಮಾತ್ರ ಸರಕಾರಿ ಖರ್ಚಿನಿಂದ ಹೊಸತು ಕೊಡೋಣಾಗುವವು.

24. ಡಿಸ್‌ಚಾರ್ಜ್ ಮಾಡೋಣಾಗಿ ಪುನಹಾ ರಿಜರ್ವಿನಲ್ಲಿ ನೌಕರಿಬಗ್ಗೆ ಹೆಸರು ಬರಿಸಿಕೊಂಡವರಿಗೆ ಅವರು ಯಾವ ಪಟಾಲದ ರಿಜರ್ವಿಗೆ ಸೇರುತ್ತಾರೋ ಆ ಪಟಾಲದವರು 23ನೇ ಕಲಮಿನಲ್ಲಿ ಹೇಳಿದ ಕಿಟ್ ಸಾಮಾನುಗಳನ್ನು ಉಚಿತವಾಗಿ ಕೊಡುವರು.

25. ಎಕ್ಟಿವ್ ರಿಜರ್ವಿನವನೊಬ್ಬನು ಮುಖ್ಯ ಸೈನ್ಯಕ್ಕೆ ವರ್ಗಮಾಡೋಣಾದ್ದಲ್ಲಿ ಸರಕಾರಕ್ಕೆ 25 ರೂಪಾಯಿ ಕೊಡತಕ್ಕದ್ದು, ಆಗ್ಯೆ ಅವನ ರಿಜರ್ವಿನ ಎಲ್ಲಾ ಕಿಟ್ ಸಾಮಾನುಗಳು ಅವನ ಸ್ವಂತ ಸೊತ್ತಾಗುವವು.

26. ನೌಕರಿಬಗ್ಗೆ ಫೌಜಿಗೆ ಸೇರಿಸೋಣಾದಲ್ಲಿ, ಯುದ್ಧ ಸೈನ್ಯದಲ್ಲಿ ಕೆಲಸಮಾಡುವ ದೇಶಿಯ ಸೋಲ್ಜರರಿಗೆ ಕೊಡೋಣಾಗುವ ಎಲ್ಲಾ ಸಾಮಾನು ವ ಉಣ್ಣೆ ತೊಡಿಗೆಯು, ಎಕ್ಟಿವ್ ರಿಜರ್ವಿನವರಿಗೂ ಸಿಕ್ಕುವದು.

27. ಎಕ್ಟಿವ್ ರಿಜರ್ವಿನವರು ಪ್ರತಿ ವರುಷದಲ್ಲಿ 31 ದಿವಸಗಳ ಪರಿಯಂತ್ರ ತರ್ಬೀತಾಗಲಿಕ್ಕೆ ಕರೆಯಲ್ಪಡುವರು.

28. ಒಟ್ಟು ಕೂಡಿಸೋಣಾದ ಪಟಾಲದ ಪ್ರತಿ ಒಂದು ಗುಂಪಿಗೆ ವಿಂಗಡಿಸೋಣಾದ ರೆಜಿಮೆಂಟಿನ ಮಧ್ಯಸ್ಥಳದಲ್ಲಿ ತರ್ಬೀತಿನ ಕೆಲಸ ನಡಿಸೋಣಾಗುವದು.

29. ರಿಜರ್ವಿನವರು ತರ್ಬೀತಾಗಲಿಕ್ಕೆ ಕರೆಯಲ್ಪಡತಕ್ಕ ತಾರೀಖು ಯಾ ತಾರೀಖುಗಳು, ಅವರ ಪೇಸಾಯು ಸಂಬಂಧವಾದ ಆವಶ್ಯಕತೆಗಳಿಗೆ ವ ಬೇರೆ ಅನುಕೂಲತೆಗಳಿಗೆ ಸರಿಯಾಗುವಂತೆ, ಕಮಾಂಡಿಂಗ್ ಆಫಿಸರರಿಂದ ನಿಶ್ಚಯಿಸೋಣಾಗುವವು.

30. ಡಿಸ್‌ಚಾರ್ಜ್ ಮಾಡೋಣಾದವರು ರಿಜರ್ವಿಗೆ ಸೇರಲಿಕ್ಕೆ ಪುನಹಾ ಹೆಸರು ಬರಿಸಿಕೊಂಡಾಗ್ಯೆ ಅವರನ್ನ ಡಿಸ್‌ಚಾರ್ಜ್ ಮಾಡಿ ಒಂದು ವರುಷಕ್ಕಿಂತ ಹೆಚ್ಚಾದರೆ, ಅವರು ಯಾವ ಪಟಾಲದ ರಿಜರ್ವಿಗೆ ಸೇರಲಿಕ್ಕೆ ಹೆಸರು ಬರಿಸಿಕೊಂಡಿದ್ದಾರೋ ಆ ಪಟಾಲದ ಒಟ್ಟಿಗೆ ಮುಂದಾಗಿ ತರ್ಬೀಯತಾಗತಕ್ಕದ್ದು.

ತರ್ಬೀತಾಗ ಬೇಕಾದ ಕಾಲವು—

ರಿಜರ್ವಿಗೆ ಸೇರಲಿಕ್ಕೆ ಪುನಹಾ ಹೆಸರು ಬರಿಸಿಕೊಳ್ಳುವದಕ್ಕೆ ಮೊದಲು ಒಂದು ವರುಷಕ್ಕಿಂತ ಹೆಚ್ಚು ವ ಎರಡು ವರುಷಕ್ಕೆ ಕಡಿಮೆಯಾದರೆ, ಎರಡುತಿಂಗಳು.

ರಿಜರ್ವಿಗೆ ಸೇರಲಿಕ್ಕೆ ಪುನಹಾ ಹೆಸರು ಬರಿಸಿಕೊಳ್ಳುವದಕ್ಕೆ ಮೊದಲು ಎರಡು ವರುಷಕ್ಕಿಂತ ಹೆಚ್ಚು ವ ಮೂರು ವರುಷಕ್ಕೆ ಕಡಿಮೆಯಾದರೆ ಮೂರು ತಿಂಗಳು.

ಡಿಸ್‌ಚಾರ್ಜ್‌ಮಾಡಿ ಮೂರು ವರುಷಕ್ಕಿಂತ ಹೆಚ್ಚಾದರೆ, ನಾಲ್ಕು ತಿಂಗಳು ಆಗಿರುತ್ತದೆ.

31. ಎಕ್ಟಿವ್ ರಿಜರ್ವಿನವರು ಎಲ್ಲಾ ಸಂಗತಿಗಳಲ್ಲಿಯೂ ಸೋಲ್ಜರರಂತೆಯೇ ಇಂಡಿಯಾವಿನ ಆರ್ಟಿಕಲ್ಸ್ ಆಫ್ ವಾರ್ ಎಂಬ ಯುದ್ಧ ಸಂಬಂಧವಾದ ನಿಬಂಧನೆಗಳಿಗೊಳಪಟ್ಟಿರುತ್ತಾರೆ, ಮತ್ತು ಅವರು ಆ ನಿಬಂಧನೆಗಳಿಗೆ ವಿರುದ್ಧವಾಗಿ ಮಾಡಿದ ಯಾವದಾದರೂ ತಕ್ಸೀರಿನ ಬಗ್ಗೆ ಕೋರ್ಟ್ ಮಾರ್ಷಲಿನವರಿಂದ ವಿಚಾರಣೆ ಮಾಡಲ್ಪಟ್ಟು ಶಿಕ್ಷಿಸಲ್ಪಡಬಹುದು, ಅವರು—

(a) ಒಂದು ಸ್ಥಳದಲ್ಲಿ ಹಾಜರಾಗತಕ್ಕ ಬಗ್ಗೆ ಕ್ರಮಪ್ರಕಾರ ಹುಕುಮಾದನಂತರ, ಸಾಕಾದ ಸಬಬಿಲ್ಲದೆ ಹಾಜರಾಗಲಿಕ್ಕೆ ತಪ್ಪಿದ ಬಗ್ಗೆ;

(b) ಸಾಕಾದ ಸಬಬಿಲ್ಲದೆ, ರಿಜರ್ವಿಗೆ ಸಂಬಂಧಪಟ್ಟ ಯಾವದಾದರೂ ಹುಕುಮು ಯಾ ನಿಬಂಧನೆಗಳ ಪ್ರಕಾರ ನಡಕೊಳ್ಳಲಿಕ್ಕೆ ತಪ್ಪಿದ ಬಗ್ಗೆ;

(c) ರಿಜರ್ವಿನವರ ಸಂಬಳಕ್ಕೆ ಸಂಬಂಧಪಟ್ಟ ಹುಕುಮು ಯಾ ನಿಬಂಧನೆಗಳಿಗೆ ವಿರುದ್ಧವಾಗಿ ಮೋಸದಿಂದ ಸಂಬಳ ಯಾ ಬೇರೆ ಐವಜು ಪಡಕೊಂಡ ಬಗ್ಗೆ;

ಕ್ರಿಮಿನಲ್ ಅಧಿಕಾರವುಳ್ಳ ಸಿವಿಲ್ ಕೋರ್ಟಿನವರಿಂದ ವಿಚಾರಣೆ ಮಾಡೋಣಾಗಿ ಶಿಕ್ಷಿಸಲ್ಪಡಲಿಕ್ಕೆ ಗುರಿಯಾಗುತ್ತಾರೆ.

ಜೆ. ಎಫ್. ಪ್ರೈಸ್,
ಚೀಫ್ ಸಕ್ರೆಟರಿ

(A true translation.)

S. MANGESH RAU,
Canarese Translator to Government.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು [ನಂ. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 3, ಸ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇರ್ಷ ವ ಯಜ್ಯುಕೇರ್ಷ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 2ನೇ ಆಕ್ಟೋಬರ್ 1896.

ನಂ 4602.—ಲೋ. ಫಂ. 92—96, ಮೈಸೂರ್ ಗವರ್ನಮೆಂಟವರು 1895ನೇ ಜೂನ 27ನೇ ಮುರ್ಕುಂ 24999—25003.—ಲೋ. ಫಂ. 82—92ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಕರಿತಿಮ್ಮನಹಳ್ಳಿ ಮತ್ತು ಕೆಂಪಾಂಬುಧಿಕೆರೆ ಗ್ರಾಮಗಳ ಕೆಲವು ಭಾಗಗಳನ್ನು ಬೆಂಗಳೂರ್ ಷಹರಿನ ಮ್ಯುನಿಸಿಪಲ್ ಸರಹದ್ದಿನಲ್ಲಿ ಸದರೀ ಷಹರಿನ ಪಶ್ಚಿಮ ಬಡಾವಣೆಯ ಸಂಬಂಧದಿಂದ ಅಡಿಗಿಸಿಕೊಳ್ಳೋಣಾವು ಮಂಜೂರ್ಮಾಡಿರುವದರಿಂದ, 1886ನೇ ಏಪ್ರಿಲ್ 15ನೇ ಮುರ್ಕುಮಿನ 35ನೇ ನಂಬರ್ ಇಸ್ತಿಹಾರ್ ನಾಮೆಯಿಂದ ತಿದ್ದುಪಡಿಯಾದ ಮೇರೆ 1883ನೇ ಸೆಪ್ಟಂಬರ್ 14ನೇ ಮುರ್ಕುಮಿನ 235ನೇ ನಂಬರ್ ಇಸ್ತಿಹಾರಿನೊಡನೆ ಪ್ರಾಯಿಷ್ ಮಾಡಲ್ಪಟ್ಟ ಮೇಲ್ಕಂಡ ಷಹರಿನ ಮ್ಯುನಿಸಿಪಲ್ ಸರಹದ್ದುಗಳ ತಿದ್ದುಪಡಿಯಾದ ವಿವರಣೆಯ VI ವ VIIನೇ ಕ್ಲಾಜುಗಳಿಗೆ ಈ ಕೆಳಗೆ ಕಂಡ ಪ್ಯಾರಾಗಳು ಬದಲಾಯಿಸಲ್ಪಡತಕ್ಕದ್ದು, ಮತ್ತು 1885ನೇ ಸೆಪ್ಟಂಬರ್ 14ನೇ ಮುರ್ಕುಮಿನ ಕ್ಯಾಂಪ್ ನಂ. 891ನೇ ಇಸ್ತಿಹಾರ್ ಅನುಸರಿಸಿ ಪ್ರಾಯಿಷ್ಮಾಡಲ್ಪಟ್ಟ XIನೇ ಕ್ಲಾಜಿಗೆ "ಮತ್ತು ಕರಿತಿಮ್ಮನಹಳ್ಳಿವ ಕೆಂಪಾಂಬುಧಿಕೆರೆ" ಎಂಬ ಮಾತುಗಳು ಸೇರಿಸಲ್ಪಡತಕ್ಕದ್ದು.

VI. ಈ ಸ್ಥಳದಿಂದ ಲೈನು ಭೋಗನಹಳ್ಳಿ ಗ್ರಾಮದ ಪಶ್ಚಿಮ ಎಲ್ಲೆ ಉದ್ದಕ್ಕೂ ಅದು ಮೈಸೂರ ರೋಡು (ಷಹರ್ ಎಲ್ಲೆ ಕಲ್ಲು VI) ಸಂಧಿಸುವವರಿವಿಗೆ ಹೋಗಿ, ಅಲ್ಲಿಂದ ರೋಡು ದಾಟ ಕರಿತಿಮ್ಮನಹಳ್ಳಿ ಗ್ರಾಮದ ರೆವಿನ್ಯೂ ಸರ್ವೆ ನಂ. 4, 2, 9, 10

ವ 6 ಯಿವುಗಳ ಹೊರ ಪಾರ್ಶ್ವ ಮತ್ತು ಅದು ಹೊಸಷಹರ್ ಎಲ್ಲೆಕಲ್ಲು VIIರ ಬಳಿ ಗವಿಪುರ ಗ್ರಾಮದ ಈಶಾನ್ಯ ಮೂಲೆಯನ್ನು ಸಂಧಿಸುವವರೆವಿಗೂ ಅವುಗಳನ್ನ ಸೇರಿಸಿಕೊಂಡು ಅಂಚಿನಲ್ಲಿ ಹಾದು ಹೋಗುತ್ತದೆ.

VII. ಹೊಸಷಹರ್ ಎಲ್ಲೆಕಲ್ಲು VIIರಿಂದ ಎಲ್ಲೆ ಲೈನು ಕೆಂಪಾಂಬುಧಿ ಕೆರೆಯ ರೆವಿನ್ಯೂ ಸರ್ವೆ ನಂಬರ್ 2 ಮತ್ತು ಗವಿಪುರ ಗ್ರಾಮದ ರೆವಿನ್ಯೂ ಸರ್ವೆ ನಂ. 3, 6, 8, 63, 46, 47, 62 ವ 48 ಯಿವುಗಳ ಪಶ್ಚಿಮ ಪಾರ್ಶ್ವ ಉದ್ದಕ್ಕೂ ಮತ್ತು ಗುಟ್ಟಹಳ್ಳಿ ಗ್ರಾಮದ ನೈಋತ್ಯ ಮೂಲೆಯನ್ನು ಸಂಧಿಸುವವರಿಗೂ ಅವುಗಳನ್ನು ಮತ್ತು ಗ್ರಾಮ ನಿವೇಶನವನ್ನ ಸೇರಿಸಿಕೊಂಡು ಹೊರಟು ಷಹರ್ ಎಲ್ಲೆಕಲ್ಲು VIIIನ್ನ ಸಂಧಿಸುವವರೆಗೂ ಈ ಗ್ರಾಮದ ದಕ್ಷಿಣ ಎಲ್ಲೆಯನ್ನ ಅನುಸರಿಸಿ ಹೋಗುತ್ತದೆ; ಈ ಕಲ್ಲಿನಿಂದ ಷಹರ್ ಎಲ್ಲೆಯು ಕಾರಂಜಿ ಬಸನಹಳ್ಳಿಯ ಪಶ್ಚಿಮ ಮತ್ತು ಉತ್ತರ ಎಲ್ಲೆಗಳ ಅಂಚಿನಲ್ಲಿ ಷಹರ್ ಎಲ್ಲೆಕಲ್ಲು IXರ ಬಳಿಯಿರುವ ಕೊಮಾರ ಪಾಳ್ಯದ ಕೆರೆಯ ಕೋಡಿವರಿವಿಗೆ ಹೋಗುತ್ತದೆ.

ತಾರೀಖು 26ನೇ ನವಂಬರ್ 1896.

ನಂ. 6156—ಮಿ. 1148, ಸರ್ 1896ನೇ ಇಸವಿ ಅಕ್ಟೋಬರ್ 29ನೇ ಮುಕ್ಕಾಂ 7 ಸ್ಯಾನಿಟೆರಿ—370—379ನೇ ನಂಬರ್ ಇಂಡ್ಯ ಗವರ್ನಮೆಂಟ್ ಹೋಂ ಇಲಾಖಾ ಸೆಕ್ರೆಟರಿಯವರಿಂದ ಸ್ಥಳಿಕ ಗವರ್ನಮೆಂಟುಗಳಿಗೆ ಮತ್ತು ರಾಜ್ಯಭಾರಗಳಿಗೆ ಬರೆದ ಈ ಕೆಳಗೆ ಕಂಡ ಲೇಖನವು ಮೈಸೂರ್ ರೆಸಿಡೆಂಟರವರ ಮುಖಾಂತ್ರ ಬಂದು ತಲ್ಪಿದ್ದು ಸಕಲ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ:—

ಹೆಡ್ ಜಾಜಿನಲ್ಲಿ ಯಾತ್ರಿಕರುಗಳ ನಡವಳಿಕೆಯನ್ನು ಕುರಿತ

* ತಮ್ಮ ಲೇಖನ

† ಇಂಡ್ಯ ಗವರ್ನಮೆಂಟ್ ಹೋಂ ಇಲಾಖಾ ಸರ್ಕ್ಯುಲರ್ ನಂ. 3,—ಸ್ಯಾನಿಟೆರಿ 126–127, ತಾರೀಖು 11ನೇ ಮೇ 1896ರನ್ನನುಸರಿಸಿ ಐರೋಪ್ಯ ಯಾತ್ರಿಕರುಗಳಿಗೆ ರಹದಾರಿಗಳನ್ನ ತೆಗೆದುಕೊಳ್ಳುವದು ಯಾತೆಗದುಕೊಳ್ಳದೆ ಬಿಡುವದು ಅವರುಗಳ ಇಚ್ಛಾನುಸಾರವಾಗಿದ್ದಾಗ್ಯೂ, ಯಾವ ವಿಧವಾದ ರುಸುಂ ಕೊಡದೇನೆ ಇಂಡ್ಯಾವಿನಲ್ಲಿರುವ ದರೋಬಸ್ತು ಸ್ಥಳಿಕ ಅಧಿಕಾರಿಗಳಿಂದ ರಹದಾರಿಗಳು ದೊರಿಯಲ್ಪಡುವವೆಂತಲೂ, ಅಂಥಾ ರಹದಾರಿ ಇಲ್ಲದೆ ಹೆಡ್ ಜಾಜಿನಲ್ಲಿ ಯಾತ್ರಿಕರು ಇಳಿಯುವ ಪಕ್ಷಕ್ಕೆ ತುರ್ಕಿ ದೇಶದ ರಹದಾರಿ ವಿಧಿಗಳನುಸರಿಸಿ ಜಿದ್ದಾವಿನಲ್ಲಿ (ಸುಮಾರು ರೂ. 4—10—0ಗೆ ಸಮನಾದ) 40 ಪಿಯಾಸ್ಟರ್‌ಗಳ ದ್ವಿಗುಣ ರುಸುಂಗಳು, ಬ್ರಿಟಿಷ್ ಕಾನ್ಸಲರವರ ಆಫೀಸಿನಿಂದ ಒಂದು ರಹದಾರಿಯನ್ನು ಹೊಂದುವದಕ್ಕೆ ಪೂರ್ವವೇ, ಕೊಡಬೇಕಾದ್ದೆಂತಲೂ, ಮತ್ತು ಅಲ್ಲಿ ಸದರೀ ರಹದಾರಿಯನ್ನ ಪಡೆಯಲಿಕ್ಕೆ ತಪ್ಪಿದರೆ ತುರ್ಕಿ ದೇಶದಲ್ಲಿರುವ ಕ್ಷೇತ್ರಗಳಿಗೆ ಹೋಗುವದಕ್ಕೆ ಬಿಡಲ್ಪಡಲಾರರೆಂತಲೂ, ಘನವನ್ನು ಹೊಂದಿದ ಮಂತ್ರಾಲೋಚಕ ಸಮಾಜದಲ್ಲಿನ ಗವರ್ನರವರು ಇವರುಗಳ ಅಪ್ಪಣೆಯಿಂದ ಈ ಸಂಗತಿಗಳು ಸಾಧ್ಯವಾದ ಮಟ್ಟಿಗೆ ವಿಸ್ತಾರವಾಗಿ ಪ್ರಚುರಗೊಳಿಸಬೇಕೆಂತ ವಿಜ್ಞಾಪಿಸ ಹೇಳಿ ನನಗೆ ಅಪ್ಪಣೆಯಾಗಿರುತ್ತದೆ. ಆದ್ದರಿಂದ ಯಾತ್ರಿಕರಿಗೆ ಉಂಟಾಗುವ ತೊಂದರೆ, ಅನನುಕೂಲತೆ ಮತ್ತು ಅವರಿಗೆ ಸಂಭವಿಸುವ ಅನಾವಶ್ಯಕ ಖರ್ಚು ಇವುಗಳ ದೆಶೆಯಿಂದ ಬಿಡುಗಡೆ ಮಾಡುವ ಬಗ್ಗೆಯಾಗಿ ಅವರು ಇಂಡ್ಯ ದೇಶವನ್ನು ಬಿಡುವದಕ್ಕೆ ತತ್ಪೂರ್ವವೇ ರಹದಾರಿಗಳನ್ನ ಪಡೆದುಕೊಳ್ಳುವದು ಅವಶ್ಯಕವೆಂದು ಗವರ್ನಮೆಂಟಿನವರು ತಿಳಿಸುತ್ತಾರೆ.

* { ಮದ್ರಾಸ್ ನಂ. 611, ತಾ|| 11ನೇ ಜೂನ್ 1896.
ಬೊಂಬೈ ನಂ. 3288, ತಾ|| 27ನೇ ಜುಲೈ 1896.
ಬಂಗಾಳೆ ನಂ. 73 ಪಿ. ಡಿ., ತಾ|| 1ನೇ ಜೂನ್ 1896.
ಉತ್ತರ ಪಶ್ಚಿಮ ಪ್ರಾಂತ್ಯಗಳ ಮತ್ತು ಅಯೋಧ್ಯ ನಂ. 481, ತಾ|| 18ನೇ ಸೆಪ್ಟಂಬರ್ 1896.
ಪಂಜಾಬ್ ನಂ. 88—ಎಸ್., ತಾರೀಖು 2ನೇ ಜೂನ್ 1896.
ಮಧ್ಯ ಪ್ರಾಂತ್ಯಗಳ ನಂ. 6351, ತಾ|| 19ನೇ ಸೆಪ್ಟಂಬರ್ 1896.
ಬರ್ಮಾ ನಂ. 300—4 ಎಲ್.—3, ತಾ|| 9ನೇ ಜೂನ್ 1896.

† { ಆಸಾಂ ನಂ. 126, ತಾರೀಖು 11ನೇ ಮೇ 1896.
ಕೊಡಗು ನಂ. 127, ತಾರೀಖು 11ನೇ ಮೇ 1896.

* { ಹೈದರಾಬಾದಿನ ರೆಸಿಡೆಂಟರ ನಂ. 191, ತಾ|| 20ನೇ ಜುಲೈ 1896.

ಘನವಾದ ಲೆಫ್ಟಿನೆಂಟ್ ಗವರ್ನರ್ (ಚೀಫ್ ಕಮಿಷನರವರು.)

ಸರ್ 1883ನೇ ಸೆಪ್ಟಂಬರ್ 28ನೇ ಮುಕ್ಕಾಂ 9-329—339ನೇ ನಂಬರ್ ಈ ಇಲಾಖೆಯ ರೆಜೊಲ್ಯೂಷನಿನ 13ನೇ ಪ್ಯಾರಾವಿನಲ್ಲಿ ಸಬ್ ಡಿವಿಜನ್ ಸ್ಟೇಷನ್‌ಗಳಲ್ಲೂ, ತಾಲ್ಲೂಕು ಸ್ಟೇಷನ್‌ಗಳಲ್ಲೂ, ಮತ್ತು ಸದರಿ ಸ್ಟೇಷನ್‌ಗಳಲ್ಲೂ ರಹದಾರಿಗಳನ್ನ ಕೊಡುವ ಬಗ್ಗೆ ಸ್ಥಳಿಕ ಅಧಿಕಾರಿಗಳಿಗೆ ಅಪ್ಪಣೆಗಳನ್ನ ಕೊಡಲ್ಪಡತಕ್ಕದ್ದೆಂದು ಮಂತ್ರಾಲೋಚಕ ಸಮಾಜದಲ್ಲಿನ ಗವರ್ನರ್ ಜನರಲ್‌ಯವರು ಅಪೇಕ್ಷಿಸಿದ್ದಾರೆ. ಮಾಜಿಸ್ಟ್ರೇಟ್ ಅಧಿಕಾರಗಳನ್ನ ಚಲಾಯಿಸುವ ಯಾವ ಆಫೀಸರುಗಳಿ ರಹದಾರಿಗಳನ್ನ ರುಜು ಮಾಡುವ ಬಗ್ಗೆ ಸ್ಥಳಿಕ ಗವರ್ನಮೆಂಟುಗಳಿಂದ ಅಧಿಕಾರ ಕೊಡಲ್ಪಡಬಹುದೆಂದು ನಮೂದಿಸಲ್ಪಟ್ಟಿತ್ತು. ಈ ಮೇರೆ ಅಧಿಕಾರ ಪಡೆದಿರುವ ಸ್ಥಳಿಕ ಅಧಿಕಾರಿಗಳಿಗೆ ಸಾಕಾದಷ್ಟು ರಹದಾರಿ ನಮೂನೆಗಳನ್ನ ಸರಬರಾಯಿ ಮಾಡಲ್ಪಡಬಹುದೆಂದು ನಾನು ಕೇಳಿಕೊಳ್ಳುತ್ತೇನೆ.

2. ಸರ್ 1895ನೇ ಆಗಸ್ಟ್ 27ನೇ ಮುಕ್ಕಾಂ 9—ಸ್ಯಾನಿಟೆರಿ—252—261ನೇ ನಂ. ಹೋಂ ಇಲಾಖಾ ಸರ್ಕ್ಯುಲರ್ ಅನುಸರಿಸಿ ಆಮದ್ ರಫ್ತು ಟಿಕೆಟುಗಳನ್ನು ಮತ್ತು ಕ್ಷೇತ್ರಗಳಿಗೆ ಹೋಗಿ ಬರುವ ಬಗ್ಗೆ ಖರ್ಚಿಗೆ ಬೇಕಾದಷ್ಟು ದ್ರವ್ಯವನ್ನ ಸಂಗಡ ಇಟ್ಟುಕೊಂಡಿರುವದೂ ಅವಶ್ಯಕವೆಂತ ಪ್ರಸಿದ್ಧಪಡಿಸಬಹುದಾಗಿ ನಾನು ಹೇಳಬೇಕಾಗಿದೆ. ಬೇಕಾದ ಮಟ್ಟಿಗೆ ದ್ರವ್ಯವನ್ನೂ ಮತ್ತು ಆಮದ್ ರಫ್ತು ಟಿಕೆಟುಗಳನ್ನೂ ಸಂಗಡ ಇಟ್ಟುಕೊಳ್ಳುವದು ಇಂಡ್ಯ ಗವರ್ನಮೆಂಟಿನವರಿಂದ ನಿರ್ಬಂಧಪಡಿಸಲಾರದೆಂತಲೂ ಆದರೆ ಹೆಡ್‌ಜಾಜಿನಲ್ಲಿ ನಿರಾಧಾರವಾಗಿಯೂ ಮತ್ತು ತಮ್ಮ ತಮ್ಮ ಮನೆಗಳಿಗೆ ವಾಪಸು ಹೋಗುವದಕ್ಕೆ ಮಾರ್ಗವಿಲ್ಲದೆಯೂ ಹೋಗುವ ಯಾತ್ರಿಕರುಗಳಿಗೆ ಉಂಟಾಗುವ ಅನನುಕೂಲಗಳು ಇರುವದೆಂತಲೂ ಪರಿಷ್ಕಾರವಾಗಿ ತಿಳಿಸಬೇಕಾದ್ದು.

* * * * * *

ತಾರೀಖು 28ನೇ ನವಂಬರ್ 1896.

ನಂ. 6217.—ಜಾ. 708, ಈ ಕೆಳಗೆ ಕಂಡ ಪೊಲೀಸ್ ಸೂಪರಿಂಟೆಂಡೆಂಟರುಗಳ ಮತ್ತು ಅಸಿಸ್ಟಂಟ್ ಸೂಪರಿಂಟೆಂಡೆಂಟರ ಹಂಗಾಮಿ ನೇಮಣೂಕಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಮೆಸ್ಟರ್ ಡಿ. ದೇವರಾಜ ಅರಸಿನವರು ರಜಾದ ಮೇಲಿರುವ ಕಾಲದಲ್ಲಿ ಮೆಸ್ಟರ್ ಜಿ. ಡನ್ನಿಂಗ್‌ಯವರು ಬೆಂಗಳೂರು ಡಿಸ್ಟ್ರಿಕ್ಟಿಗೆ.
ಮೆಸ್ಟರ್ ಡಿ. ಎ. ಬಲ್ಲಾರ್ಡ್‌ಯವರ್ ಕೋಲಾರ ಗೋಲ್ಡ್‌ಫೀಲ್ಡಿಸಿಗೆ.
ಮೆಸ್ಟರ್ ಎಲ್. ಕೃಷ್ಣರಾಯರು ಚಿಕ್ಕಮಗಳೂರಲ್ಲೆ ಇರತಕ್ಕದ್ದು.

ತಾರೀಖು 27ನೇ ನವಂಬರ್ 1896.

ನಂ. 6155.—ಲೋ. ಫಂ. 90—92, ಮೃತಪಟ್ಟ ಮೆಸ್ಟರ್ ರಾಮಸ್ವಾಮಿ ಅಯ್ಯಂಗಾರ್ರ ಸ್ಥಳದಲ್ಲಿ ಜಮೀನ್ದಾರ್ ಮೆಸ್ಟರ್ ಯಜಮಾನ್ ವೆಂಕಟರಾಮಯ್ಯಂಗಾರು ಕಡಬದ ಮ್ಯುನಿಸಿಪಾಲಿಟಿಯ ಮೆಂಬರಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 2ನೇ ಅಕ್ಟೋಬರ್ 1896.

ನಂ. 3576.—ರೆ. 1228, ಮೈಸೂರ್ ಲ್ಯಾಂಡ್ ರೆವಿನ್ಯೂ ರೂಲ್ಸಿನ ಅಪೆಂಡಿಕ್ಸ್ ಎಜ್ಜಿನಲ್ಲಿ ಕಂಡ ರೂಲಿನ 1 ಮತ್ತು 4ನೇ ಪ್ಯಾರಾಗಳಿಗೆ ಈ ಕೆಳಗೆ ಕಂಡ ಜಾಸ್ತಿ ಅಂಶಗಳನ್ನು ಸೇರಿಸಲ್ಪಡತಕ್ಕದ್ದೆಂದು ಮೈಸೂರ ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

(1) ಪ್ಯಾರ 1ರ ಆಖೈರಿನಲ್ಲಿ ಸೇರಿಸತಕ್ಕದ್ದು "ಪರಂತು, ಗ್ರ್ಯಾಂಟು 50 ಎಕರೆಗಳಿಗೆ ಮೀರಲ್ಪಟ್ಟಾಗ ಅದು ಗವರ್ನಮೆಂಟಿನವರ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡತಕ್ಕದ್ದು."

(2) ಪ್ಯಾರಾ 4ರಲ್ಲಿ, "ಮತ್ತು" ವ "ಷಾತಊತು" ಎಂಬ ಮಾತುಗಳ ಮಧ್ಯದಲ್ಲಿ "ಕಾಫಿ" ಎಂಬ ಮಾತನ್ನು ಸೇರಿಸತಕ್ಕದ್ದು.

2. ಈ ಮೇರೆ ತಿದ್ದುಪಡಿಯಾದ ಎರಡು ಪ್ಯಾರಾಗಳು ಈ ಕೆಳಗೆ ಕಂಡಂತೆ ಓದತಕ್ಕದ್ದು;

"ಪ್ಯಾರಾ 1 ಜಂಗಲಿ ಮತ್ತು ಸಾದೆ ಟಿಂಬರ್ ಮರಗಳನ್ನು ಹಾಕತಕ್ಕ ಬಗ್ಯೆ ಕೊಡುವದಕ್ಕೆ ಅಕ್ಷೇಪವಿಲ್ಲದಿರುವ ಸ್ಥಳದಲ್ಲಿ ಈ ಕೆಳಗೆ ನಮೂದಾಗುವ ತಾಲ್ಲೂಕುಗಳಲ್ಲಿ, ಕೊಡುವ ತಾರೀಖು ಲಾಗಾಯತು 20 ವರುಷಗಳ ವರಿವಿಗೂ ಕಂದಾಯ ಮಾಫಿಯಿಂದ ಆಕಾರ ಕಾಣದ ಸರ್ಕಾರೀ ಬಂಜರು ಜಮೀನು ಕೊಡಲ್ಪಡುವದು, ಆ ತರುವಾಯ ಪೂರಾ ಕಂದಾಯ ವಸೂಲ್ಮಾಡಲ್ಪಡುವದು. ಪರಂತು, ಗ್ರ್ಯಾಂಟು 50 ಎಕರೆಗಳಿಗೆ ಮೀರಲ್ಪಟ್ಟಾಗ ಅದು ಗವರ್ನಮೆಂಟಿನವರ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡತಕ್ಕದ್ದು."

"ಪ್ಯಾರಾ 4. ಜಮೀನು ಹೊಂದಿದವನು ಗಿಡಗಳ ಕೆಳಗೆ ಧಾನ್ಯ ಮುಂತಾದ ಇತರ ಪೈರುಗಳನ್ನು ಬೆಳದುಕೊಳ್ಳಬಹುದು. ಅಂತಾ ಸಾಗುವಳಿ ಬಗ್ಯೆ ಬೇಕಾಗುವ ನೀರನ್ನ ಸರ್ಕಾರದ ಜಲಾಧಾರವಲ್ಲದೆ ಖಾಸಗಿ ಜಲಾಧಾರದಿಂದ ತೆಗೆದುಕೊಳ್ಳುವ ಪಕ್ಷಕ್ಕೂ, ಮತ್ತು ಕಾಫಿ, ಷಾತೂತು, ಕಬ್ಬು, ಜಾಲಾರಿ ಯಾ ಅರಗಿನ ಗಿಡಗಳನ್ನು ಹಾಕದೆ ಇರುವ ಪಕ್ಷಕ್ಕೂ ಯಾವ ವಿಧವಾದ ಕಂದಾಯವು ದಾಖಲ್ಮಾಡಲ್ಪಡಲಾರದು. ಪರಂತು ಅವನು ಸಾಗುವಳಿ ಬಗ್ಯಾಗಲಿ ಯಾ ತೋಪು ಹಾಕತಕ್ಕ ಬಗ್ಯಾಗಲಿ ಸರ್ಕಾರ ಸಂಬಂಧವಾದ ಕೆರೆಗಳು ಯಾ ನಾಲೆಗಳು ಮುಂತಾದವುಗಳಿಂದ ನೀರನ್ನು ಉಪಯೋಗಿಸಿಕೊಳ್ಳಬೇಕೆಂತ ಅಪೇಕ್ಷಿಸಿದಲ್ಲಿ ಸರ್ಕಾರದ ನೀರಿನಿಂತ ತರೀ ಸಾಗುವಳಿ ಆಗುವ ಖುಷ್ಕಿ ಜಮೀನುಗಳ ಮೇಲೆ ವಾಡಿಕೆಯಾಗಿ ದಾಖಲಾಗುವ ನೀರು ಸರ್ದಿಯನ್ನು ಕೊಡತಕ್ಕದ್ದು.

ತಾರೀಖು 23ನೇ ನವಂಬರ್ 1896.

ನಂ. 4678—ರೆ. ಪೈ. 76—96, ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 188ನೇ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟ ಹೊನ್ನಾಳಿ ತಾಲ್ಲೂಕು ಅಮಲ್ದಾರ್ ಎಚ್. ಗುಂಡಪ್ಪನವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಶಿವಮೊಗ್ಗೆಯ ಡಿಸ್ಟ್ರಿಕ್ಟು ಆಫಿಸ್ ರೆವಿನ್ಯೂ ಹೆಡ್ ಮುನಷಿ ಬಾಲಕೃಷ್ಣರಾಯರು ಸದರೀ ಎಚ್. ಗುಂಡಪ್ಪನವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹೊನ್ನಾಳಿ ತಾಲ್ಲೂಕಿನ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ನೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 25ನೇ ನವಂಬರ್ 1896.

ನಂ. 4730.—ರೆ. ಪೈ. 57—95, ಜಮೀನ್ ಆಬಾದ್ ಬಗ್ಯೆ ಸಾಲ ಕೊಡುವ ವಿಷಯಕವಾದ ರೆಗ್ಯುಲೇಷನ್ ಅನುಸರಿಸಿ ಕೊಡಲ್ಪಟ್ಟ ಸಾಲಗಳ ಮೇಲೆ ವಸೂಲ್ಮಾಡಲ್ಪಡತಕ್ಕ ಬಡ್ತಿಯು ಸಾಲಿಯಾನಾ ಶೇಕಡಾ 6ರಿಂದ 5ಕ್ಕೆ ತಗ್ಗಿಸಲ್ಪಡತಕ್ಕದ್ದೆಂತಲೂ ಮತ್ತು 1892ನೇ ಜನವರಿ 4ನೇ ಮುರ್ಕುಂ ಡಿ. 70 ಎ. ನೇ ನಂಬರ್ ಇಸ್ತಿಹಾರ್ನಾಮೆ ಅನುಸರಿಸಿ ಕೊಡಲ್ಪಟ್ಟ ರೂಲ್ಸಿನ 24ನೇ ರೂಲ್ ಒಂದನೇ ಪಜ್ಜೆಯಲ್ಲಿ "ಆರು" ಎಂಬ ಮಾತಿಗೆ "ಐದು" ಎಂಬ ಮಾತನ್ನು ಬದಲಾಗಿ ಸೇರಿಸತಕ್ಕದ್ದೆಂತಲೂ ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ.

ನಂ. 4765—ರೆ ಪೈ. 70—96, ಬೆಂಗಳೂರು ಡಿಸ್ಟ್ರಿಕ್ಟು ಕ್ಲೋಸ್‌ಪೇಟೆ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಎ. ಕೃಷ್ಣಸ್ವಾಮಯ್ಯಂಗಾರ್ ಯವರಿಗೆ 1896ನೇ ನವಂಬರ್ 12ನೇ ಮುರ್ಕುಂ 4312—ರೆ. ಪೈ. 70—96ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ರಜಾವನ್ನ ಮಾಹೆ ಮಜಕೂರು 5ನೇ ತಾರೀಖಿನಲ್ಲಿ ಉಪಯೋಗಿಸಿಕೊಂಡು ಮಾಹೆ ಮಜಕೂರು 6ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುವದರಿಂದ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ ಮೂರು ದಿನಗಳು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 4024—ರೆ. 1388, ಸನ್ 1894ನೇ ಇಸವಿಯ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಬಾಬಾಬುಡನ್ ಬೆಟ್ಟದ ರಸ್ತೆಯನ್ನು ಬಡಾಯಿಸುವ ಬಗ್ಗಾಗಿ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಅನುಭವದಾರನ ಹೆಸರು.	ಜಮೀನ್ ತಪ್ಸೀಲು. ಸರ್ವೆ ನಂ.	ಎಕರೆಗಳು.	ಗುಂಟೆಗಳು.	ಗಜಗಳು.	ಚಕ್ಕುಬಂದಿ. ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.
ಕಡೂರು.	ತರೀಕೆರೆ.	ಲಿಂಗದಹಳ್ಳಿ.	ಬಲ್ಲವಾರ	ರಾಮಪ್ಪ ..	48ರ ಭಾಗ	..	34	66	ನಂ. 48 ವ 27ರ ಭಾಗ	ನಂ. 48ರ ಭಾಗ	ನಂದಿಬಟ್ಲ ನಂ. 28ರ ಭಾಗ	ನಂ. 48 ವ 27ರ ಭಾಗ
			ನಂದಿಬಟ್ಲು	ಮಿಸ್ಟರ್ ಜಿ. ಆರ್. ಆಲಿವರ್ ..	28	..	5	88	ನಂ. 28ರ ಭಾಗ	ನಂ. 28 ಡಿಟ್ಟೋ	ಬಲ್ಲವಾರದ ನಂ. 48	ನಂದಿಬಟ ನಂ. 48ರ ಭಾಗ
			ಡಿಟ್ಟೋ	ಕಲ್ಲೇಗವುಡ ..	90 ವ 29	..	23	66	ನಂ. 90 ಡಿಟ್ಟೋ	ನಂ. 90 ವ 29 ಡಿಟ್ಟೋ	ನಂದಿಬಟ್ಲ ನಂ. 30	ನಂ. 80ರ ಭಾಗ
			ಡಿಟ್ಟೋ	ಕೆ. ರಂಗೇಗವುಡ ..	80	..	11	55	ನಂ. 80 ಡಿಟ್ಟೋ	ನಂ. 80 ಡಿಟ್ಟೋ	ನಂ. 29ರ ಎಲ್ಲೆ	ನಂ. 26ರ ಡಿಟ್ಟೋ
			ಡಿಟ್ಟೋ	ಡಿಟ್ಟೋ ..	26	..	16	66	ನಂ. 26. ಡಿಟ್ಟೋ	ನಂ. 26 ಡಿಟ್ಟೋ	ನಂ. 80 ಮತ್ತು ನಂ. 26ರ ಭಾಗ	ನಂ. 81
			ಡಿಟ್ಟೋ	ಎಲ್. ರಂಗೇಗವುಡ .	81	.	21	..	ನಂ, 81 ಡಿಟ್ಟೋ	ನಂ. 81 ಡಿಟ್ಟೋ	ನಂ. 26	ರೆಗಡ ಗ್ರಾಮದ ನಂ. 5
						1	38	33				
			ರೆಗಡ	ಟಿ. ಮೊಹರ್ದೀನ್‌ಸಾಬ್ ..	36	1	28	22	ನಂ. 36ರ ಭಾಗ	ನಂ. 36ರ ಭಾಗ	ನಂ. 4ರ ಎಲ್ಲೆ	ನಂ. 36ರ ಭಾಗ ಮತ್ತು ನಂ. 4ರ ಎಲ್ಲೆ
			ಡಿಟ್ಟೋ	ಹಸನ್ ಅಹಮ್ಮದ್ ..	34	..	19	11	ನಂ. 34 ವ 4ರ ಭಾಗ	ನಂ. 33	ನಂ. 4	ನಂ. 34ರ ಭಾಗ
			ಡಿಟ್ಟೋ	ಮಿಸ್ಟರ್ ಡಿ. ಹರ್ರಿ ..	33	..	11	55	ನಂ. 34	ನಂ. 33ರ ಭಾಗ	ನಂ. 33ರ ಭಾಗ	ನಂ. 35
			ಡಿಟ್ಟೋ	ಹಯಾತ್‌ಖಾನ್‌ಸಾಬ್ ..	35	1	28	88	ನಂ. 35ರ ಭಾಗ	ನಂ. 35ರ ಭಾಗ	ನಂ. 35 ವ 33ರ ಭಾಗ	ನಂ. 35 ವ 32ರ ಭಾಗ
			ಡಿಟ್ಟೋ	ಕರಿಗವುಡ ..	32	..	5	88	ನಂ. 32 ವ 31ರ ಭಾಗ	ನಂ. 32 ವ 22ರ ಭಾಗ	ನಂ. 35	ನಂ. 31
			ಡಿಟ್ಟೋ	ಮಿಸ್ಟರ್ ಡಿ. ಹರ್ರಿ ..	31	1	3	88	ನಂ. 31ರ ಭಾಗ	ನಂ. 31ರ ಭಾಗ	ನಂ. 32	ನಂ. 1
						5	16	110				
				ಜುಮ್ಲಾ ತರೀಕೆರೆ ತಾಲ್ಲೂಕು .		8	9	88				
ಚಿಕ್ಕಮಗಳೂರು.	ಜಾಗರ.		ಮೋಲಿನಹುಲ್‌ವತ್ತಿ	ವೀರೇಗವುಡ	45	..	19	88	ನಂ. 45ರ ಭಾಗ	ನಂ. 45ರ ಭಾಗ	ನಂ. 44	ನಂ. 42
			ಡಿಟ್ಟೋ	ಅಬ್ದುಲ್‌ಖಾದರ್ ..	40,41 ವ 42	1	30	77	ನಂ. 40,41 ವ 42 ಭಾಗ	ನಂ. 40,41 ವ 42ರ ಭಾ.	ನಂ. 45	ನಂ. 25
			ಡಿಟ್ಟೋ	ಇನಸ್‌ಖಾನ್ .. .	25	1	3	33	ನಂ. 25ರ ಭಾಗ	ನಂ. 25ರ ಭಾಗ	ನಂ. 40	ನಂ. 25 ವ 23ರ ಭಾಗ
			ಡಿಟ್ಟೋ	ಡಾಕ್ಟರ್ ಸ್ಮಿತ್ ..	16	2	7	99	ನಂ. 16ರ ಭಾಗ	ನಂ. 16 ವ 23ರ ಭಾಗ	ನಂ. 16 ವ 23ರಭಾಗ	ನಂ. 16ರ ಭಾಗ
						5	21	55				
			ಕೆರ್ರಿ ಮನೆ	ಮಿಸ್ಟರ್ ಆಲಿವರ್ .	20	7	10	110	ನಂ. 20ರ ಭಾಗ	ನಂ. 20 ವ 80ರ ಭಾಗ	ನಂ. 20 ವ 80ರ ಭಾಗ	ನಂ. 21ರ ಭಾಗ
				ಜುಮ್ಲಾ ಚಿಕ್ಕಮಗಳೂರುತಾಲ್ಲೂಕು ..		12	32	44				
				ಎರಡು ತಾಲ್ಲೂಕುಗಳ ಒಟ್ಟುಜುಮ್ಲಾ. ..		21	2	11				

ತಾರೀಖು 1ನೇ ಅಕ್ಟೋಬರ್ 1896.

ನಂ. 3573.—ಫಾ. ಫೈ. 166—95, ಸನ್ 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ ಮೈಸೂರು ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಹದ್ದು ವಿಂಗಡಿಸಲ್ಪಟ್ಟ ಮತ್ತು ವ್ಯವಸ್ಥೆ ಮಾಡಲ್ಪಟ್ಟ ಫಾರೆಸ್ಟ್‌ಗಳು ವ ಪ್ಲಾಂಟೇಶನ್‌ಗಳು ಮೇಲ್ಕಂಡ ಫಾರೆಸ್ಟ್ ರೂಲ್ಸಿನ Iನೇ ರೂಲ್ ಅನುಸರಿಸಿ ಸ್ಟೇಟ್ ಫಾರೆಸ್ಟುಗಳಾಗಿ ವಿಂಗಡಿಸಲ್ಪಟ್ಟಿರುತ್ತವೆ:—

ಸಂಖ್ಯೆ	ಫಾರೆಸ್ಟುಗಳ ವ ಪ್ಲಾಂಟೇಶನ್‌ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
1	ಬೇಗೂರ ಫಾರೆಸ್ಟ್ (ಹೆಗ್ಗಡದೇವನ ಕೋಟೆ ತಾಲ್ಲೂಕು.)	ಷುಮಾರು 42 ಚದುರ ಮೈಲಿಗಳು.	ಉತ್ತರಕ್ಕೆ—ಡಿಮಾರ್ಕೇಷನ್ ಲೈನು ಗಂಟೂರ ವರಿವಿಗೆ ಪೂರ್ವ ದಿಕ್ಕಿನಲ್ಲಿ ಕಬನಿ ನದಿಯನ್ನನುಸರಿಸಿ ನಂ. 1ರ ಈಶಾನ್ಯ ದಿಕ್ಕಿನ ಎಲ್ಲೆ ಉದ್ದಕ್ಕೂ ಆಗ್ನೇಯ ದಿಕ್ಕಿನಲ್ಲಿ ಹೊರಟು ಗಂಟೂರ ನಂ. 6ರ ದಕ್ಷಿಣ ಯಲ್ಲೆಗೆ ಹೋಗುತ್ತದೆ; ಅಲ್ಲಿಂದ ಹೊಸಹಳ್ಳಿಯ ನಂ. 47ರ ಉದ್ದಕ್ಕೂ ಪೂರ್ವಕ್ಕೆ ಹೋಗಿ ಮತ್ತು ಅಲ್ಲಿಂದ ಬೈರನಹಳ್ಳಿಯ ನಂ. 55ರ ದಕ್ಷಿಣ ಯಲ್ಲೆಯನ್ನು ಮತ್ತು ಬೇಗೂರ ನಂ. 48ರ ದಕ್ಷಿಣಯಲ್ಲೆಯನ್ನೂ ಅಲ್ಲಿಂದ ಕೆಂಚೇನಹಳ್ಳಿಯ ನಂ. 1ರ ಎಲ್ಲೆಯನ್ನೂ ಬಿಟ್ಟು ಹೋಗಿ ವಡಲಿಹಳ್ಳದ ಬಳಿ ಕೊನೆ ಮುಟ್ಟುತ್ತೆ. ದಕ್ಷಿಣಕ್ಕೆ—ಮಲಬಾರ್ ಸ್ಟೇಟ್ ಫಾರೆಸ್ಟ್. ಪೂರ್ವಕ್ಕೆ—ವಡಲಿಹಳ್ಳ. ಪಶ್ಚಿಮಕ್ಕೆ—ಕಬ್ಬನಿ ನದಿ.
2	ಐನೂರುಮಾರಿ ಗುಡಿ ಫಾರೆಸ್ಟ್.	ಷುಮಾರು $38\frac{2}{3}$ ಚದುರ ಮೈಲಿಗಳು.	ಉತ್ತರಕ್ಕೆ— ಲೈನು ವಡಲಿಹಳ್ಳದಿಂದ ಹೊರಟು ಬಂಕವಾಡಿಯ ನಂ. 36ರ ನೈಋತ್ಯ ಎಲ್ಲೆಯ ಉದ್ದಕ್ಕೂ ಹೋಗಿ ಸರ್ವೆ ನಂ. 35ರ ಸ್ವಲ್ಪ ಭಾಗದ ಅಡ್ಡವಾಗಿ ಹಿಂದೆ ಹೇಳಿರುವದರ ಸಣ್ಣ ಮೂಲೆಯನ್ನ ದಾಟಿ ಮತ್ತು ಬಂಕವಾಡಿಯ ನಂ. 34ರ ಅರ್ಧಕ್ಕೆ ಹೆಚ್ಚಾಗಿ ಸೇರಿಸಿಕೊಂಡು, ಅಲ್ಲಿಂದ ಚಿಕ್ಕ ಬಸೆಗೆಯ ನಂ. 2ರ ದಕ್ಷಿಣ ಎಲ್ಲೆಯನ್ನು ಬಿಟ್ಟು ಹೋಗಿ ಮತ್ತು ಅಲ್ಲಿಂದ ಮಲಿಯೂರ ನಂ. 8 ವ 11ರ ಉದ್ದಕ್ಕೂ ಮತ್ತು ಹೆರೆಹಳ್ಳಿಯ ನಂ. 38ರ ಉದ್ದಕ್ಕೂ ಮತ್ತು ಕರ್ನಗಾಲದ ನಂ. 27 ವ 28ರ ಉದ್ದಕ್ಕೂ ಹೋಗಿ ಮತ್ತು ಅಲ್ಲಿಂದ ಆಲನಹಳ್ಳಿಯ ನಂ. 6ರ ಉದ್ದಕ್ಕೂ ನಗ್ಗಾನದಿಗೆ ಈಶಾನ್ಯ ದಿಕ್ಕಿನಲ್ಲಿ ಹೋಗುತ್ತದೆ. ದಕ್ಷಿಣಕ್ಕೆ— ಮಲಬಾರ್ ಸ್ಟೇಟ್ ಫಾರೆಸ್ಟ್. ಪೂರ್ವಕ್ಕೆ—ನಗ್ಗಾ ನದಿ. ಪಶ್ಚಿಮಕ್ಕೆ—ವಡಲಿಹಳ್ಳ.
3	ಮೇಟಿಕುಪ್ಪೆ ಫಾರೆಸ್ಟ್.	40 ... ಲಿಗಳು.	...ತ ರಕ್ಕೆ—ಹುಣಸೂರಿಂದ ಮಾರ್ಕಲ್ ರಸ್ತೆ, ಸೊಲ್ಲಾಪುರದಿಂದ ಬಂಡೀಪಾಡು ...ೇರಿಹೆಬ್ಬಳ್ಳದ ಮೂಲ ಇವುಗಳ ಸಂಗಮದವರಿವಿಗೆ, ವೀರನಹೊಸ ಗಳ... ...ನ ಡಿಮಾರ್ಕೇಷನ್ ಲೈನ್ ಮತ್ತು ಮಾರ್ಕಲ್ ರಸ್ತೆ ಇವು ಬಳಿಯ ಡಿ... ...ಶಾನ್ಯದಲ್ಲಿ ಬೇರಿಹೆಬ್ಬಳ್ಳದ ಮೂಲದಿಂದ $1\frac{1}{4}$ ಮೈಲಿ ದಕ್ಷಿಣಕ್ಕೆ—ಕಾಕನಕೋ... ಪೂರ್ವಕ್ಕೆ—1886ನೇ ಇಸವಿಯಲ್ಲಿ... ಲೈನು ದಕ್ಷಿಣಕ್ಕೆ ಬೇರ್ಹೆಬ್ಬಹಳ್ಳದಿಂದ ... ...ಮಾರ್ಕೇಷನ್ ಉದ್ದಕ್ಕೂ ಹೋಗುತ್ತದೆ:— ...ಹಳ್ಳ (a) ಮಾಸಿಕಟ್ಟೆ ಹೆಬ್ಬಹಳ್ಳ, ಮಾಸಿಕಟ್ಟೆಇಂದ 3 ಫರ್ಲಾಂಗುಗಳು, (b) ಕುರುಬರ ಪಂಚಳ್ಳ, (c) ಜೇನ್ನೊಪ್ಪೇರೆಹಳ್ಳ, ಬಿದರ್ತಲ್ ಕೊಲಚಿಯ ಪೂರ್ವಕ್ಕೆ ಷುಮಾರು ವೊಂದು ಫರ್ಲಾಂಗು, (d) ನೇತಕಲ್ ಗುಡಿಹಳ್ಳ, ನೇತಕಲ್ ಗುಡಿಯ ಪಶ್ಚಿಮಕ್ಕೆ ಷುಮಾರು 2 ಫರ್ಲಾಂಗುಗಳು, (e) ಸರತಿನದಿ, ಪಚ್ಚಟ್ಟಿಯ ಪೂರ್ವಕ್ಕೆ ಷುಮಾರು ವೊಂದು ಮೈಲಿ, (f) ಮದನಹಳ್ಳಿ, ಕಾಡಿನಬಳಿ ಇರುವ ನಾಗರಹೊಳೆ ಮತ್ತು ಮೇಟಿಕುಪ್ಪೆ ಫಾರೆಸ್ಟಿನಲ್ಲಿ ಹೊಸದಾಗಿ ಏರ್ಪಟ್ಟ ಬ್ಲಾಕಿನ ಪೂರ್ವದಿಕ್ಕಿನ ಕೊನೆಯು ಮತ್ತು ಕೊಡಗಿಗೆ ಹೋಗುವ ಕಕ್ಕೆರ (ಕವಲಿದುರಿ) ಬಂಡೀಪಾಡಿನ ಬಳಿ ಕೊನೆ ಮುಟ್ಟುತ್ತದೆ. ಪಶ್ಚಿಮಕ್ಕೆ—(a) ಕೈವಾರದಿಂದ ಕುತ್ತಡ್ ಮಾರ್ಕಲ್ ವರಿವಿಗೆ ಮಲಬಾರ್ ಫಾರೆಸ್ಟು, (b) ಕುತ್ತಡ್ ಮಾರ್ಕಲಿನಿಂದ ಕರ್ಪುರೆ ಕಿರ್ಕಲ್ ವರಿವಿಗೆ ಕೊಡಗು ಫಾರೆಸ್ಟು ಮತ್ತು (c) ವೀನರಹೊಸಹಳ್ಳಿ ಸ್ಟೇಟ್ ಫಾರೆಸ್ಟು.

ನಂಬರು.	ಫಾರೆಸ್ಟುಗಳ ವ ಪ್ಲಾಂಟೇಷನ್‌ಗಳ ಹೆಸರುಗಳು.	ವಿಸ್ತೀರ್ಣ.	ಚೆಕ್ಕುಬಂದಿ.
4	ಕಾಕನಕೋಟೆ ಫಾರೆಸ್ಟ್	55 ಚದುರ ಮೈಲಿಗಳು.	ಉತ್ತರಕ್ಕೆ—ಬಿಸಲವಾಡಿ ರಸ್ತೆ. ದಕ್ಷಿಣಕ್ಕೆ—ಉಡಬೂರು ಕಾಡಿನಿಂದ ಸಾದಿಕಹಳ್ಳದ ವರಿವಿಗೆ ಕಬ್ಬನಿ ನದಿ. ಪೂರ್ವಕ್ಕೆ—ಉಪ್ಪರ್ ಕಾಡಿನಿಂದ ಹೊರಟು (21 ಅಡಿಗಳ ಅಗಲದ) ಡಿಮಾರ್ಕೇಷನ್ ಲೈನಿನ ಉತ್ತರಕ್ಕೆ ಹೋಗಿ ತೆಂಕಲ್ ಗ್ರಾಮದ ಸರ್ವೆ ನಂ. 1ರನ್ನ ಸುತ್ತಿಕೊಂಡು, ಅಲ್ಲಿಂದ ಉಪ್ಪರ್ ನಂ. 1 ವ 4ರ ಉದ್ದಕ್ಕೂ ಕಾರಾಪುರವ ಸರ್ವೆ ನಂ. 1ರ ಉದ್ದಕ್ಕೂ ನಿಸ್ಸೆನ್ ಸರ್ವೆ ನಂ. 54 ವ 55ರ ಉದ್ದಕ್ಕೂ ಬೆಲ್ಲತ್ತೂರ ನಂ. 70 ವ 68ರ ದಕ್ಷಿಣ ಎಲ್ಲೆಯ ಸುತ್ತಲೂ ಅವುಗಳನ್ನ ಸುತ್ತಿಕೊಂಡು ಮತ್ತು ಹಿಂದೆ ಹೇಳಿದ್ದರ ಪೂರ್ವ ಎಲ್ಲೆಯ ಉದ್ದಕ್ಕೂ ಹಾದು, ಅಲ್ಲಿಂದ ಮಂಚಗೌಡನಹಳ್ಳಿಯ ನಂ. 17ರನ್ನ ಬಿಟ್ಟು ಅದರ ಮೂಲಕವಾಗಿಯೂ ಹಳ್ಳಿಮಗ್ಗೆಯ ನಂ. 17ರ ಮೂಲಕವಾಗಿಯೂ ವಾಯುವ್ಯ ದಿಕ್ಕಿನಲ್ಲಿ ಪ್ರೊಂದು ಮೂಲೆಯಿಂದ ಮತ್ತೊಂದು ಎದುರ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ—ಮಲಬಾರ್ ಸ್ಟೇಟ್ ಫಾರೆಸ್ಟು.
5	ಕಾರಾಪುರ ಪ್ಲಾಂಟೇಷನ್ (ತೇಗ)	8 ಎಕರೆಗಳು	ಉತ್ತರಕ್ಕೆ—ಮೈಸೂರು, ಮಾನಂತಾಡಿ ರಸ್ತೆ. ದಕ್ಷಿಣಕ್ಕೆ—ಗುಂಡತೂರು ಗ್ರಾಮ. ಪೂರ್ವಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 16. ಪಶ್ಚಿಮಕ್ಕೆ—ಸರ್ವೆ ನಂ. 17ನೇ ಖರಾಬ್.
6	ನಿಸ್ಸೆನ್ ಪ್ಲಾಂಟೇಷನ್ (ತೇಗ)	$13\frac{1}{2}$ ಎಕರೆಗಳು	ಉತ್ತರಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 45, 63 ವ 64. ದಕ್ಷಿಣಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 43. ಪೂರ್ವಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 41. ಪಶ್ಚಿಮಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 45.
7	ಆನೆಚೌಕೂರು ಪ್ಲಾಂಟೇಷನ್ ನಂ. 3 (ತೇಗ)	67 ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 14ನೇ ಖರಾಬ್. ದಕ್ಷಿಣಕ್ಕೆ—ಡಿಟ್ಟೋ. ಪೂರ್ವಕ್ಕೆ—ಡಿಟ್ಟೋ. ಪಶ್ಚಿಮಕ್ಕೆ—ಸರ್ವೆ ನಂ. 15ನೇ ಖರಾಬ್.
8	ಮಂಚಗೌಡನಹಳ್ಳಿ ಪ್ಲಾಂಟೇಷನ್ ನಂ. 1 (ತೇಗ)	100 ಎಕರೆಗಳು	ಉತ್ತರಕ್ಕೆ—ಮಂಚೇಗೌಡನಹಳ್ಳಿ ಎಲ್ಲೆ ಲೈನು ದಕ್ಷಿಣಕ್ಕೆ—ರಾಗಲಕುಪ್ಪೆ ಪ್ಲಾಂಟೇಷ... ರಸ್ತೆ. ಪೂರ್ವಕ್ಕೆ—ಮೈಸೂರು ... ರಾಬ್. ಪಶ್ಚಿಮಕ್ಕೆ—ಸಗ...
9	ಅಮೃತ ಮಹಲ್ ಪ್ಲಾಂಟೇಷನ್ ನಂ. 1 ಬ್ಲಾಕ್ (ತೇಗ)	55 ಎಕರೆಗಳು	...ತ ಅಮೃತಮಹಲ್ ಕಾವಲಿನಲ್ಲಿರುವ ಅಗ್ನಿನಿರೋಧ ಲೈನು. ...ಪಿಲಾನದಿ. ...ಕ್ಕೆ—ಅಮೃತ ಮಹಲ್ ಕಾವಲ್. ಪಶ್ಚಿಮಕ್ಕೆ—ಮೈಸೂರು, ಮಾನಂತಾಡಿ ರಸ್ತೆ, ಕಪಿಲಾನದಿಗೆ ಹೋಗುವ ಗಲ್ಲಿ.
10		...ಎಕರೆಗಳು	ಉತ್ತರಕ್ಕೆ—ಕಪಿಲಾನದಿಗೆ ಹೋಗುವ ಗಲ್ಲಿ. ದಕ್ಷಿಣಕ್ಕೆ—ಸುಂದಾಪುರ ಗ್ರಾಮಸ್ತರಿಗೆ ಕೊಟ್ಟಿರುವ ಅಮೃತ ಮಹಲ್ ಕಾವಲ್ ಪ್ಲಾಂಟೇಷನ್ ಜಮೀನು. ಪೂರ್ವಕ್ಕೆ—ಕಪಿಲಾನದಿ. ಪಶ್ಚಿಮಕ್ಕೆ—ಮೈಸೂರು, ಮಾನಂತಾಡಿ ರಸ್ತೆ.
11	ಕಪಿಲಾ ಪ್ಲಾಂಟೇಷನ್ ಬ್ಲಾಕ್ ನಂ. 1 (ತೇಗ)	50 ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 23ನೇ ಗೋಮಾಳ. ಪೂರ್ವಕ್ಕೆ—ಸರ್ವೆ ನಂ. 6, 16 ವ 22. ದಕ್ಷಿಣಕ್ಕೆ—ಆನಿಪುರದ ಎಲ್ಲೆಯ ಸರ್ವೆ ನಂ. 1. ಪಶ್ಚಿಮಕ್ಕೆ—ಕಪಿಲಾನದಿ.
12	ಡಿಟ್ಟೋ ನಂ. 2	$54\frac{3}{4}$ ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 19 ಮತ್ತು ಗುಂಡತೂರ ಎಲ್ಲೆ. ದಕ್ಷಿಣಕ್ಕೆ—ಆನಿಪುರ ಗ್ರಾಮದ ಸರ್ವೆ ನಂ. 1. ಪೂರ್ವಕ್ಕೆ—ಗುಂಡತೂರ ಎಲ್ಲೆ. ಪಶ್ಚಿಮಕ್ಕೆ—ಕಪಿಲಾನದಿ.

ನಂಬರು.	ಫಾರೆಸ್ಟುಗಳ ವ ಪ್ಲಾಂಟೇಷನ್‌ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕುಬಂದಿ.
13	ಬಿಸಪ್ಪನಕಟ್ಟೆ ಪ್ಲಾಂಟೇಷನ್ (ಸದಲ್)	$7\frac{1}{4}$ ಎಕರೆಗಳು	ಉತ್ತರಕ್ಕೆ—ಸಾಗುವಳಿಯಲ್ಲಿರುವ ಸರ್ವೆ ನಂ. 55 ವ 68. ದಕ್ಷಿಣಕ್ಕೆ—ಮೈಸೂರು, ಮಾನಂತಾಡಿ ರಸ್ತೆ. ಪೂರ್ವಕ್ಕೆ—ಸರ್ವೆ ನಂ. 43ನೇ ಖರಾಬ್. ಪಶ್ಚಿಮಕ್ಕೆ—ಬಿಸಪ್ಪನಕಟ್ಟೆ ಸರ್ವೆ ನಂ. 57.
14	ಹಂಪಾಪುರದ ಪ್ಲಾಂಟೇಷನ್ (ಸಂದಲ್)	$327\frac{3}{4}$ ಎಕರೆಗಳು	ಉತ್ತರಕ್ಕೆ—ಸರ್ವೆ ನಂ. 42ನೇ ಖರಾಬ್. ಪೂರ್ವಕ್ಕೆ—ಹರನಹಳ್ಳಿ ಮತ್ತು ಪಾಂದನಹಳ್ಳಿ ಗ್ರಾಮಗಳ ಎಲ್ಲೆ ಲೈನುಗಳು. ದಕ್ಷಿಣಕ್ಕೆ—ಸರ್ವೆ ನಂ. 43ನೇ ಖರಾಬಿನಲ್ಲಿರುವ ಅಗ್ನಿನಿರೋಧ ಲೈನು. ಪಶ್ಚಿಮಕ್ಕೆ—ಸರ್ವೆ ನಂ. 44, 34, 35, 37, 38, 41 ವ 40.
15	ವೀರನಹೊಸಹಳ್ಳಿ ಫಾರೆಸ್ಟು (ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳು)	ಷುಮಾರು 9 ಚದುರ ಮೈಲಿಗಳು	ಉತ್ತರಕ್ಕೆ—ಮೈಸೂರು ಕೊಡಗು ಎಲ್ಲೆಯಲ್ಲಿ ಲಕ್ಷ್ಮಣತೀರ್ಥ ನದಿ ತನ್ನಷ್ಟಕ್ಕೆ ತಾನೇ ಪೂರ್ವಕ್ಕೆ ಬೊಗ್ಗಿ ಗಡಿಯಾರದ ಮುಳ್ಳುಗಳ ಹಾಗೆ ಹೋಗುವ ಸ್ಥಳದಿಂದ ಹೊರಟು ಎಲ್ಲೆಯು ಲಕ್ಷ್ಮಣತೀರ್ಥ ನದಿಯ ಉದ್ದಕ್ಕೂ ಪೂರ್ವಕ್ಕೆ ಹೋಗಿ ಕೋನನ ಹೊಸಹಳ್ಳಿಯ ಗ್ರಾಮದ ಎಲ್ಲೆ ಕಟ್ಟಿನವರಿಗೆ ಕಾಚೋನಹಳ್ಳಿ ಜಂಗಲಿಗೆ ಸೇರಿದ ಹಾಗೆ ಹೋಗಿ ಅಲ್ಲಿಂದ ಅಗ್ನಿ ದಿಕ್ಕಿಗೆ ಹೊರಟು ಪುನಹಾ ಲಕ್ಷ್ಮಣತೀರ್ಥ ನದಿಗೆ ಸೇರುವ ಪರಿಯಂತ ಕೋನನ ಹೊಸಹಳ್ಳಿಯ ಸರ್ವೆ ಎಲ್ಲೆ ಕಟ್ಟಿನ ಉದ್ದಕ್ಕೂ ಹೋಗಿ ಮತ್ತು ಅಲ್ಲಿಂದ ಸದರೀ ನದಿಯ ಉದ್ದಕ್ಕೂ ಪೂರ್ವ ಪಾರ್ಶ್ವ, ದಕ್ಷಿಣ ಪಾರ್ಶ್ವ ಮತ್ತು ಪಶ್ಚಿಮ ಪಾರ್ಶ್ವ ಪಾಕಮಾಡಲ್ಪಟ್ಟ 7 ಗಜಗಳ ಡಿಮಾರ್ಕೇಷನ್ ಲೈನಿಗೆ ಸೇರುವವರಿವಿಗೆ ಹೊರಟು ಮತ್ತು ಕೊಲವಿಗೆಯ ಸರ್ವೆ ಎಲ್ಲೆ ಕಟ್ಟಿನ ಉದ್ದಕ್ಕೂ ದಕ್ಷಿಣ ಪಾರ್ಶ್ವ ಹಾದು ಮತ್ತು ಎರೆಕಟ್ಟೆ ಸಮೀಪ ಮೂರ್ಕಲ್‌ವೀರನ ಹೊಸಹಳ್ಳಿ ಫಾರೆಸ್ಟು ರಸ್ತೆಗೆ ಸೇರುವವರಿವಿಗೆ ಕಡಗತಲ್‌ಕಟ್ಟೆ ವ ಕುರುಬರ ಖಾರೆ ಮಾರ್ಗವಾಗಿ ಮುದಗನೂರು ಮತ್ತು ಚಿಕ್ಕಹೆಜ್ಜೂರುಗಳ ಸರ್ವೆ ಎಲ್ಲೆ ಕಟ್ಟುಗಳ ಉದ್ದಕ್ಕೂ ಆಗ್ನೆಯ ದಿಕ್ಕಿಗೆ ಹಾದು ಹೋಗುತ್ತದೆ. ಪೂರ್ವಕ್ಕೆ—ಮೇಲ್ಕಂಡ ಸ್ಥಳದಿಂದ ಪೂರ್ವ ಪಾರ್ಶ್ವದ ಎಲ್ಲೆಯು 7 ಗಜಗಳ ಡಿಮಾರ್ಕೇಷನ್ ಲೈನಿನ ಉದ್ದಕ್ಕೂ ಹಿತ್ತಲ್‌ಗೂಡು ಮಾಯೀಸಿಕಟ್ಟೆ ಖಾರೆ ಮಾರ್ಗವಾಗಿ ಅದು ಮೂರು ಹಬ್ಬ ಹಳ್ಳಗಳು ದಾಟಿ ಸೊಳ್ಳೇಪುರದ ಜೇರು ಹೆಬ್ಬ ಹಳ್ಳದ ದಕ್ಷಿಣಕ್ಕೆ ಇರುವ ಹುಣಸೂರು, ಹೆಗ್ಗಡದೇವನಕೋಟೆ ತಾಲ್ಲೂಕು ಎಲ್ಲೆ ಕಲ್ಲಿನಬಳಿ ಸೇರುವ ವರಿವಿಗೂ ಹೋಗುತ್ತದೆ. ದಕ್ಷಿಣಕ್ಕೆ—ಹಿಂದೆ ಹೇಳಿದ ಸ್ಥಳದಿಂದ ಎಲ್ಲೆಯು ದಕ್ಷಿಣಕ್ಕೆ ಅದು ಮೂರ್ಕಲ್ ಮೇಟಿಕುಪ್ಪೆ ಬಂಡಿಜಾಡಿಗೆ ಸೇರುವ ವರಿವಿಗೂ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿರುವ ಡಿಮಾರ್ಕೇಷನ್ ಲೈನಿನ ಉದ್ದಕ್ಕೂ ಹೊರಟು ಅಲ್ಲಿಂದ ವಾಯುವ್ಯ ದಿಕ್ಕಿಗೆ ಈ ಬಂಡಿಜಾಡಿನ ಉದ್ದಕ್ಕೂ ಅದು ಕರಮಾಡು ಮೂರ್ಕಲ್ ಎಂಬದಾಗಿ ಕರಿಯಲ್ಪಟ್ಟ ಕೊಡಗು, ಹುಣಸೂರು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕುಗಳ ತ್ರಿಸಂಗಮ ಎಲ್ಲೆ ಕಂಬಗಳ ಬಳಿ ಸೇರುವ ವರಿವಿಗೂ ಹೋಗುತ್ತದೆ. ಪಶ್ಚಿಮಕ್ಕೆ—ಈ (ಕರಮಾಡು ಮೂರ್ಕಲ್) ಸ್ಥಳದಿಂದ ಎಲ್ಲೆಯು ಎಲ್ಲೆ ಕಂಬಗಳಿಂದಲೂ ಮತ್ತು ಗುಣಿಗಳಿಂದಲೂ ಹೊರಟ ಸ್ಥಳದ ವರಿವಿಗೆ ಗುರ್ತು ಮಾಡಿದ ಕೊಡಗು ವ ಮೈಸೂರ ಎಲ್ಲೆಯ ಉದ್ದಕ್ಕೂ ಆನಿಕಟ್ಟೆ ಹಳ್ಳ, ಚೌಡಿಕಟ್ಟೆ ಮತ್ತು ಭದ್ರಿಕಟ್ಟೆ ಕಲ್ಸಾತಿ ಮಾರ್ಗವಾಗಿ ಲಕ್ಷ್ಮಣತೀರ್ಥ ನದಿದಾಟಿ ಈಶಾನ್ಯ ಮತ್ತು ಉತ್ತರ ದಿಕ್ಕುಗಳಿಗೆ ಹೋಗುತ್ತದೆ.
16	ಚಾಮರಾಜನಗರದ ಫಾರೆಸ್ಟು (ಚಾಮರಾಜನಗರದ ತಾಲ್ಲೂಕು)	$98\frac{1}{2}$ ಚದುರ ಮೈಲಿಗಳು	ಉತ್ತರಕ್ಕೆ—ಕಟ್ಟೇಕಲ್ಲು ಆಲದಮರದ ಬಳಿ ಗೊತ್ತು ಮಾಡಿದ ಎಲ್ಲೆ ಗುರ್ತುಗಳಿಂದ ಲೈನು ಪೂರ್ವಕ್ಕೆ ಹೊರಟು ಸೂಳೆಕಲ್ ಬೆಟ್ಟವನ್ನು ಎಡಕ್ಕೆ ಬಿಟ್ಟುಕೊಂಡು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:—(a) ಕೊಂಗನಕಾಡು ಹನುಮನಕಲ್ಲು, (b) ಕಂಬುಕಲ್ಲು ಕಣಿವೆಯ ಮೇಲ್‌ಭಾಗದಲ್ಲಿ ಗೊತ್ತು ಮಾಡಿದ ಎಲ್ಲೆಗುರ್ತು, (ಅಲ್ಲಿಂದ ಲೈನು ಸೇರುತ್ತದೆ.) (c) ಹೊರಟ ಸ್ಥಳವಾದ ಹೊನ್ನುಮತ್ತಿ ಬೆಟ್ಟದಬಳಿ ಗೊತ್ತು ಮಾಡಲ್ಪಟ್ಟ ಮುಗ್ಗುಡ್ಡೆ ಎಲ್ಲೆ ಗುರ್ತುಗಳು. ಪೂರ್ವಕ್ಕೆ—ಕೊಯಿಮುತ್ತೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳ ಫಾರೆಸ್ಟುಗಳ ಮಧ್ಯೆ ಕತರಾಯಿಸಿದ ಡಿಮಾರ್ಕೇಷನ್ ಲೈನು ಹೊನ್ನುಮತ್ತಿ ಬೆಟ್ಟದ ಮೇಲೆ ಗೊತ್ತು ಮಾಡಿದ (ಮೂರ್ಗುಡ್ಡೆ) ಎಳಂದೂರು, ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲ್ಲೂಕುಗಳ ತ್ರಿಸಂಗಮ ಬಳಿ ಪ್ರಾರಂಭಿಸಿ ಹೊರಟು ಈ ಕೆಳಗೆ ಕಂಡ ಚನ್ನಾಗಿ ಕಾಣತಕ್ಕ ಕಡುಮಾರ್ಕುಗಳ ಉದ್ದಕ್ಕೂ ದಕ್ಷಿಣಕ್ಕೆ ಹೋಗುತ್ತದೆ:—(a) ಅತ್ತಿಮರದ ಕಣಿವೆ, (b) ದೇವಿಗೆರೆ, (c) ಕೆಂಚನಮಾರನ ಕಣಿವೆ, (d) ಗೆರ್ಸೆಕಲ್ಲು ಮತ್ತು (e) ಬೆಳ್ಳಿ ಮುರಿಅರೆ.

ನಂಬರು.	ಫಾರೆಸ್ಟುಗಳ ವ ಪ್ಲಾಂಟೇಷನ್ಗಳ ಹೆಸರುಗಳು.	ವಿಸ್ತೀರ್ಣ.	ಚಕ್ಕು ಬಂದಿ.
16	ಚಾಮರಾಜನಗರದ ಫಾರೆಸ್ಟು (ಚಾಮರಾಜನಗರದ ತಾಲ್ಲೂಕು)	98¾ ಚದುರ ಮೈಲಿಗಳು	ದಕ್ಷಿಣಕ್ಕೆ—ಮೇಲ್ಕಂಡ ಪಶ್ಚಿಮರಿ ಆರೆಯಿಂದ ಲೈನು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಪೂರ್ವಕ್ಕೆ ಹೋಗುತ್ತದೆ:—(a) ಸಿರೆಗೋಡಿಹಳ್ಳ, (b) ಚಿಟ್ಟನಕೊಪ್ಪದ ಮಳ, (c) ಹೊನ್ನುಹೊಳೆ (ಹುಣಸೂರು ಪಾರ್ಶ್ವದ ಕೊಯಿಮುತ್ತೂರು ಮತ್ತು ಮೈಸೂರು ಫಾರೆಸ್ಟುಗಳ ಮಧ್ಯೆ ಎಲ್ಲೆ ಲೈನು), (d) ಕರೆಪಾಳ್ಯದ ಬಳಿ ಗೊತ್ತುಮಾಡಿದ ಎಲ್ಲೆ ಕಂಬ, (e) ಚೆಪ್ಪರದ ನಾಯಿಬೇಲದ ಬೆಟ್ಟ, (f) ದೇಬನಮಡು, (g) ದೊಡ್ಡನ ಆನೆಬೆಟ್ಟ, (h) ಪುಟ್ಟದ ಈರನ ಸೊಣ್ಣೆಬೆಟ್ಟ, (i) ಮೂಕನಪಾಳ್ಯದ ಎಲ್ಲೆ ಗುರ್ತುಗಳು, (j) ಗುಳಗುಡ್ಡೆ ಬೆಟ್ಟ, (k) ಕುಂಬಾರಗುಂಡಿ, (l) ಸುಮಾರು ಒಂದು ಮೈಲಿ ವರಿವಿಗೆ ಚಾಮರಾಜನಗರ, ಹಸನೂರು ರಸ್ತೆಯ ಪಾರ್ಶ್ವದಲ್ಲಿ ಗೊತ್ತುಮಾಡಿದ ಮೈಸೂರ್ ವ ಕೊಯಿಮುತ್ತೂರು ಫಾರೆಸ್ಟಿನ ಮಧ್ಯೆ ಇರುವ ಎಲ್ಲೆ ಗುರ್ತುಗಳು, (m) ಹೊನ್ನೇಗವುಡನಹಳ್ಳಿ ಮತ್ತು ಸಣ್ಣನಪುರದ ಎಲ್ಲೆ ಗುರ್ತುಗಳು, ಮತ್ತು (n) ಅತ್ತಿಕಲಿಪುರದ ಬಳಿ ಕತರಾಯಿಸಿರುವ ಹೊಸ ಡಿಮಾರ್ಕೇಷನ್ ವರಿವಿಗೆ ಮೈಸೂರು ವ ಕೊಯಿಮುತ್ತೂರು ಫಾರೆಸ್ಟುಗಳ ಮಧ್ಯೆ ಎಲ್ಲೆ ಗುರ್ತುಗಳು. ಪಶ್ಚಿಮಕ್ಕೆ—ಎಳಂದೂರು ಮತ್ತು ಚಾಮರಾಜನಗರದ ಎಲ್ಲೆ ಗುರ್ತುಗಳು ಗೊತ್ತುಮಾಡಿರುವ ಅತ್ತಿಕಲಿಪುರದಿಂದ ಕಟ್ಟೆಕಲ್ಲು ಆಲದ ಮರದ ವರಿವಿಗೆ ಹೊಸದಾಗಿ ಕತರಾಯಿಸಿದ ಡಿಮಾರ್ಕೇಷನ್ ಲೈನು ಈ ಕೆಳಗೆ ಕಂಡ ಸ್ಥಳಗಳ ಉದ್ದಕ್ಕೂ ಹೋಗುತ್ತದೆ:—(1) ಹೊಂಗಲವಾಡಿಗೆ ರಸ್ತೆ, (2) ಅಲ್ಲಿಮರ್ದ ಗುಡ್ಡ ಮತ್ತು (3) ಅಣ್ಣತಮ್ಮಂದಿರ ಗುಡ್ಡ.
17	ಪಡಲಾಪುರ ಪ್ಲಾಂಟೇಷನ್ (ಚಾಮರಾಜನಗರದ ತಾಲ್ಲೂಕು)	40 ಎಕರೆಗಳು	ಉತ್ತರಕ್ಕೆ—ಸರ್ಕಾರದ ಬಂಚರ್ ಜಮೀನು. ಪೂರ್ವಕ್ಕೆ—ಡಿಟೋ. ದಕ್ಷಿಣಕ್ಕೆ—ಹಾಸನೂರು, ಚಾಮರಾಜನಗರದ ರಸ್ತೆ. ಪಶ್ಚಿಮಕ್ಕೆ—ಸರ್ಕಾರದ ಬಂಚರ್ ಜಮೀನು. (ಇದು ಪಡಲಾಪುರದ ಬೇಚಿರಾಕ್ ಗ್ರಾಮದಲ್ಲಿರುತ್ತೆ ಮತ್ತು ಸರ್ವೆ ನಂ. 11, 12, 13, 14, 15, 16, 17, 18 ವ 20ರ ಭಾಗ ಅಡಗಿಸಿಕೊಂಡಿರುತ್ತೆ.)
18	ಮದ್ದೂರ ಪ್ಲಾಂಟೇಷನ್ (ಅಳಲೇಕಾಯಿ) ಗುಂಡ್ಲುಪೇಟೆ ತಾಲ್ಲೂಕು	460 ಎಕರೆಗಳು	ಉತ್ತರಕ್ಕೆ—ಮದ್ದೂರು ಗ್ರಾಮದ ಸರ್ವೆ ನಂ. 34ರ ಭಾಗ. ಪೂರ್ವಕ್ಕೆ—ಮದ್ದೂರಿನ ಕೆರೆ. ದಕ್ಷಿಣಕ್ಕೆ—ಗುಂಡ್ಲುಪೇಟೆ, ಸುಲ್ತಾನರ ಬತೇರಿ ರಸ್ತೆ. ಪಶ್ಚಿಮಕ್ಕೆ—ಮದ್ದೂರ ಗ್ರಾಮದ ಸರ್ವೆ ನಂ. 34ರ ಭಾಗ.
19	ಹೊಂಗಹಳ್ಳಿ ಪ್ಲಾಂಟೇಷನ್	50 ಎಕರೆಗಳು	ಉತ್ತರಕ್ಕೆ—ಮಾಸಹಳ್ಳಿ ಗ್ರಾಮದ ಸರ್ವೆ ನಂ. 115ರ ಭಾಗ ಮತ್ತು ಹೊಂಗೆಹಳ್ಳಿ ಬಂಡಿಜಾಡು. ಪೂರ್ವಕ್ಕೆ—ಮಾಸಹಳ್ಳಿ ಗುಡ್ಡೆ. ದಕ್ಷಿಣಕ್ಕೆ—ಕುಣಿಗಲ್ ಗ್ರಾಮದ ಎಲ್ಲೆ. ಪಶ್ಚಿಮಕ್ಕೆ—ಮಾಸಹಳ್ಳಿ ಗ್ರಾಮದ ಸರ್ವೆ ನಂ. 115ರ ಭಾಗ ಮತ್ತು ಹೊಂಗೆಹಳ್ಳಿ ಬಂಡಿಜಾಡು.

ತಾರೀಖು 25ನೇ ಅಕ್ಟೋಬರ್ 1896.

ನಂ. 4041.—ರೆ. ಫೈ. 148—95, ಈ ಕೆಳಗೆ ಕಂಡ ಗ್ರಾಮಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ.
1. ಕಾಹಳ್ಳಿ ..	ತಿರುಮಕೂಡ್ಲು ನರಸೀಪುರ. ..	ನಂಜನಗೂಡು.
2. ಹಾರೋಪುರ ..		
3. ಗಣಗನೂರು ..	ನಂಜನಗೂಡು. ..	ಚಾಮರಾಜನಗರ.

ತಾರೀಖು 26ನೇ ನವಂಬರ್ 1896.

ನಂ. 4789.—ರೆ. 1661, ಮೈಸೂರ್ ಲ್ಯಾಂಡ್ ರೆವಿನ್ಯೂ ರೂಲ್ಸಿನ XXVIIನೇ ರೂಲ್ 1ನೇ ಪ್ಯಾರಾವಿಗೆ ಈ ಕೆಳಗೆ ಕಂಡ ನಿಯಮವನ್ನ ಸೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

"ಪರಂತು ಒಂದು ಸರ್ವೆ ನಂಬರ್ ಖುಷ್ಕಿ ವ ತರೀ ಜಮೀನುಗಳು ಸಹಿತವಾಗಲಿ ಯಾ ಖುಷ್ಕಿ ತರೀ ವ ಬಾಗಾಯತು ಜಮೀನುಗಳಾಗಲಿ ಅಡಗಿಸಿಕೊಂಡಿದ್ದ ಪಕ್ಷದಲ್ಲಿ, ಈ ರೂಲುಗಳನುಸರಿಸಿ ಮಾಡಲ್ಪಟ್ಟ ಯಾವ ವಿಭಾಗವು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರವರಿಂದ ಮಂಜೂರ್ ಮಾಡಲ್ಪಟ್ಟಿದ್ದ ಹೊರ್ತು ನೆರವೇರಿಸಲ್ಪಡಲಾರದು. ಸದರೀಯವರಿಗೆ ಇಂಥಾ ಪ್ರತಿ ಸಂಗತಿಯೂ ಪೈಮಾಯಿಷಿ ದಾಖಲೆಯೊಡನೆ ರಿಪೋರ್ಟ್ ಮಾಡಲ್ಪಡತಕ್ಕದ್ದು."

ತಾರೀಖು 1ನೇ ನವಂಬರ 1896.

ನಂ. 4181.—ಫಾ. ಫೈ. 39—95, ಸ್ನ 78ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳ ಪ್ರಕಾರ ಮೈಸೂರ ಗವರ್ನ್‌ಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ, 1895ನೇ ಸೆಪ್ಟಂಬರ 4ನೇ ಮಿತಿ ನಂ 2574—ಫಾ. 141ನೇ ನಂಬರ ಗವರ್ನ್‌ಮೆಂಟ ಇಸ್ತಿಹಾರನಾಮೆ ಅನುಸರಿಸಿ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಈ ಕೆಳಗೆ ಕಂಡ ಚಕ್ಕುಬಂದಿ ಮಾಡಿ ಮತ್ತು ವ್ಯವಸ್ಥೆ ಮಾಡಲ್ಪಟ್ಟ ಪ್ಲಾಂಟೇಷನ್ ಮೇಲ್ಕಂಡ ಫಾರೆಸ್ಟ್ ರೂಲ್ಸಿನ 1ನೇ ರೂಲ್ ಮೇರೆ "ಸ್ಟೇಟ್ ಫಾರೆಸ್ಟ್" ಆಗಿ ವಿಂಗಡಿಸಲ್ಪಡತಕ್ಕದ್ದು:—

ನಂಬರು.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ.	ಚಕ್ಕುಬಂದಿ.
7	ಮತ್ತಾವಾರ ಸಂಡಲ್ ರಿಜರ್ವ್, ಚಿಕ್ಕಮಗಳೂರ ತಾಲ್ಲೂಕು, ಸರ್ವೆ ನಂಬರ 93 (ಮತ್ತಾವಾರ) ಮತ್ತು 3 (ದಂಬದಹಳ್ಳಿ)	ಸುಮಾರು 146 ಎಕರೆಗಳು.	ಉತ್ತರಕ್ಕೆ—3 ಅಡಿ ಅಗಲ 3 ಅಡಿ ಆಳ ಉಳ್ಳ ಕಾಲುವೆ ಮತ್ತು 9 ಅಡಿ ಅಗಲ ವುಳ್ಳ ಪಾಕ್ ಮಾಡಲ್ಪಟ್ಟ ಲೈನು ಮತ್ತಾವಾರ ಗ್ರಾಮದ ಸರ್ವೆ ನಂ. 93ರಲ್ಲಿ ಒಂದು ಸ್ಥಳದಿಂದ ಹೊರಟು ಅದೇ ನಂಬರಿನ ಉದ್ದಕ್ಕೂ "ಬೊಮ್ಮನಕೆರೆ ಮತ್ತು ಚಾಡಮ್ಮನ ವನ"ಕ್ಕೆ ಸೇರಿದ ಹಾಗೆ ಉತ್ತರಕ್ಕೆ ಹೋಗುತ್ತವೆ. ಪೂರ್ವಕ್ಕೆ—ಉತ್ತರ ದಿಕ್ಕಿನಲ್ಲಿ ಕಾಲುವೆ ಮತ್ತು ಲೈನು ಕೊನೆ ಮುಟ್ಟುವ ಸ್ಥಳಗಳಿಂದ ಕಾಲುವೆ ಮತ್ತು ಪಾಕ್ಮಾಡಲ್ಪಟ್ಟ ಲೈನು ದಕ್ಷಿಣಕ್ಕೆ ಹೊರಟು ಮತ್ತಾವಾರ ಗ್ರಾಮದ ಸರ್ವೆ ನಂ. 93 ಮತ್ತು ದಂಬದಹಳ್ಳಿ ಗ್ರಾಮದ ನಂ. 3 ಇವುಗಳ ಉದ್ದಕ್ಕೂ ಹಾದು "ಭೈರಮ್ಮನ ಗೊಳಲಕ್ಕಿಕಟ್ಟೆ" ಎಂಬದಾಗಿ ಕರೆಯಲ್ಪಟ್ಟ ಒಂದು ಸ್ಥಳದಲ್ಲಿ ಅದೇ ನಂಬರಿನಲ್ಲಿ ಕೊನೆ ಮುಟ್ಟುತ್ತವೆ. ದಕ್ಷಿಣಕ್ಕೆ—"ಭೈರಮ್ಮನ ಗೊಳಲಕ್ಕಿಕಟ್ಟೆ" ಇಂದ ಕಾಲುವೆ ಮತ್ತು ಪಾಕ್ಮಾಡಲ್ಪಟ್ಟ ಲೈನು ಪಶ್ಚಿಮಕ್ಕೆ ತಿರುಗಿ ದಂಬದಹಳ್ಳಿಯ ಸರ್ವೆ ನಂ. 3ರ ಉದ್ದಕ್ಕೂ ಹಾದು ದಂಬದಹಳ್ಳಿಯಿಂದ ಆಲದ ಗದ್ದೆಗೆ ಹೋಗುವ ಕಾಲುದಾರಿಯನ್ನು ದಾಟಿ ಅದೇ ಗ್ರಾಮದ ಸರ್ವೆ ನಂ. 3ರಲ್ಲಿ ಕೊನೆಮುಟ್ಟುತ್ತವೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಕಾಲುವೆ ಮತ್ತು ಲೈನು ಈಶಾನ್ಯಕ್ಕೆ ತಿರುಗಿ ದಂಬದಹಳ್ಳಿಯ ಸರ್ವೆ ನಂ. 3 ಮತ್ತು ಮತ್ತಾವಾರದ ನಂ. 93 ಇವುಗಳ ಉದ್ದಕ್ಕೂ ಅವು ಹೊರಟ ಸ್ಥಳವನ್ನು ಸಂಧಿಸುವವರೆಗೂ ಹೋಗುತ್ತವೆ.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನ್‌ಮೆಂಟ ಸೆಕ್ರೆಟರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರನಾಮೆ.

ತಾರೀಖು 21ನೇ ನವಂಬರ 1896.

ನಂ. 919.—6099, ಮೈಸೂರ್ ಗವರ್ನ್‌ಮೆಂಟಿನವರು ಈ ಕೆಳಗೆ ಕಂಡ ನೊಕರರಾತಿಗಳನ್ನ ಮಾಡಿರುತ್ತಾರೆ:—

(1) 1ನೇ ಗ್ರೇಡ್ ಯಗ್ಜಿಕ್ಯೂಟಿವ್ ಇಂಜಿನಿಯರ್, ಇಂಪೀರಿಯಲ್, ಮೆಸ್ಟರ್ ಡಬ್ಲ್ಯೂ ಮುಕರ್ಜಿಯವರು 3ನೇ ಕ್ಲಾಸ್ ಸೂಪರಿಂಟೆಂಡಿಂಗ್ ಇಂಜಿನಿಯರ್ (ಲೋಕಲ್) ಆಗಿರತಕ್ಕದ್ದು. ಅವರು "ಪಶ್ಚಿಮ ಸರ್ಕಲ್"ಗೆ ನಿಯಮಿಸಲ್ಪಟ್ಟಿರುತ್ತಾರೆ, ಅದು ಸದರೀಯವರು ಫರ್ಲೋ ರಜಾದಿಂದ ವಾಪಸ್ ಬಂದ ಮೇಲೆ ಏರ್ಪಡಿಸಲ್ಪಡುವದು.

(2) 1ನೇ ಗ್ರೇಡ್ ಯಗ್ಜಿಕ್ಯೂಟಿವ್ ಇಂಜಿನಿಯರ್, ಲೋಕಲ್, ಮೆಸ್ಟರ್ ಆರ್. ಟಿ. ಸ್ಕೋಲ್ಡ್‌ವೆಲ್‌ಯವರು 3ನೇ ಕ್ಲಾಸ್ ಸೂಪರಿಂಟೆಂಡಿಂಗ್ ಇಂಜಿನಿಯರ್, ಲೋಕಲ್ ಆಗಿರತಕ್ಕದ್ದು, ಸದರೀಯವರು ಪ್ರಿವಿಲೀಜ್ ರಜಾದಿಂದ ವಾಪಸ್ ಬಂದ ನಂತರ ಏರ್ಪಡಿಸಲ್ಪಡತಕ್ಕ "ಪೂರ್ವ ಸರ್ಕಲ್"ಗೆ ನಿಯಮಿಸಲ್ಪಟ್ಟಿರುತ್ತಾರೆ.

(3) ಮೆಸ್ಟರ್ ಜೆ. ಜೆ. ಹ್ವೈಟ್ಲಿಯವರು ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಅಸಿಸ್ಟೆಂಟ ಚೀಫ್ ಇಂಜಿನಿಯರ್ ಮತ್ತು ಮೈಸೂರ್ ಗವರ್ನ್‌ಮೆಂಟ್ ಅಸಿಸ್ಟೆಂಟ್ ಸೆಕ್ರೆಟೆರಿಯಾಗಿರತಕ್ಕದ್ದು.

ತಾರೀಖು 26ನೇ ನವಂಬರ 1896.

ನಂ. 940—6200, ಎರಡನೇ ಗ್ರೇಡ್ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ಸಿ. ಹಲಗಯ್ಯಗವುಡ, ಎಲ್. ಸಿ. ಈ., ಯವರು ಮಾಹೆ ಮಜಕೂರು 1ನೇ ಮಿತಿ ನಂ ಲಾಗಾಯತು 3ನೇ ಗ್ರೇಡಿಗೆ ಕಂಪರಾಕ್ಕೆ ಹಾಕಲ್ಪಟ್ಟಿರುತ್ತಾರೆ.

ತಾರೀಖು 27ನೇ ನವೆಂಬರ 1896.

ನಂ. 972.—6259, ಮಾರೀಕಣಿವೆ ರೆಂಜ್ ಅಫಿಷಿಯೇಟಿಂಗ್ ಯಗ್ಜಿಕ್ಯೂಟಿವ್ ಇಂಜಿನಿಯರ್ ಮೆಸ್ಟರ್ ಬಿ. ಪಿ. ರಾಘವಲುನಾಯಡುಯವರಿಗೆ ಮಾಹೆ ಮಜಕೂರು 18ನೇ ತಾರೀಖು ಲಾಗಾಯತು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 30ನೇ ನವೆಂಬರ 1896.

ನಂ. 990.—6286, ಮೈಸೂರ ಪಬ್ಲಿಕ್ ವರ್ಕ್ಸ್ ವ ರೈಲವೆ ಅಕೌಂಟ್‌ಗಳ ಯಗ್ಜಾಮಿನರ್ ಮೆಸ್ಟರ್ ಸೆಂಟ್‌ಜಾರ್ಜ ಬೂರ್ಕ, ಎ. ಸಿ. ಈ., ಯವರಿಗೆ 1896ನೇ ಡಿಸೆಂಬರ ಗುರ್ರೆ ಲಾಗಾಯತು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಆರು ತಿಂಗಳ ಕಾಹಿಲೆ ರಜಾ ಕೊಡಲ್ಪಟ್ಟಿರುತ್ತೆ.

II. ಅಸಿಸ್ಟೆಂಟ್ ಎಗ್ಜಾಮಿನರ್ ಮೆಸ್ಟರ್ ಸಿ. ವರದರಾಜಪಿಳ್ಳೆಯವರು ಸದರೀ ಮೆಸ್ಟರ್ ಬೂರ್ಕಯವರು ರಜಾದ ಮೇಲಿರುವ ಕಾಲದಲ್ಲಿ ಮೈಸೂರ ಪಬ್ಲಿಕ್ ವರ್ಕ್ಸ್ ವ ರೈಲವೆ ಅಕೌಂಟ್‌ಗಳ ಯಗ್ಜಾಮಿನರಾಗಿ ಅಫಿಷಿಯೇಟಿಂಗ್ ತರೀಕ್ ಇರತಕ್ಕದ್ದು.

ಹುಕುಂ ಬಮೋಜೀಬ್.

ಸಿ. ಬರ್ವ, ಕರ್ನಲ್,

ಮೈಸೂರ ಗವರ್ನಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರೆಟರಿ.

೬೦೯

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫ್ರಾಯಿಷ್ ಆದ್ದು. [ನಂ. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 3, ಸನ್ 1896.

IIನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,–ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ ಡಿಟೋ	„ 170
1	ಮದ್ರಾಸ್ ಓಕ್ಸರವರ ಡಿಟೋ	„ 250
1	ಡಿಟೋ ಡಿಟೋ ಡಿಟೋ	„ 188
1	ಡಿಟೋ ಬೋರ್ರ್ಯಾಪರವರ ಡಿಟೋ	„ 85

ಖರೀದೀದಾರ್‍ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ಕೊರಚರಪಾಳ್ಯದಲ್ಲಿರುವ ಗನ್‌ಮೇಕರ್ ಮಹಮ್ಮದ್‌ಖಾಸಿಂನ ವಿಷಯದಲ್ಲಿ—
ಸರ್ 1895—96ನೇ ಇಸವಿ ದಿವಾಳಿ ಕೇಸ್ ನಂಬರ್ 349.

ಹುಕ್ಕುಂ,

ಮೇಲ್ಕಂಡ ಮಹಮ್ಮದ್‌ಖಾಸಿಂನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜಿದಾರನನ್ನು ಮತ್ತು ಸದರೀಯವರ ಲೇಣೇದಾರರಾದ 1ನೇ ಬೆಂಗಳೂರು ದೊಡ್ಡಪೇಟೆ ಜವಳಿ ಅಂಗಡಿ ಪಾವಡಿ ಮುದ್ದುರಾಮಯ್ಯನ ಯದುರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—2ನೇ ಗನ್‌ಮೇಕರ್ ಕೃಷ್ಣಸಿಂಗ್, 3ನೇ ಅಬ್ದುಲ್ ಹಕೀಂಸಾಬಿ, 4 (i) ಮುನಿಗುರಪ್ಪ (ii) ಮುನಿಗುರುಶೆಟ್ಟಿ, 5ನೇ ಮೊಹರ್ದೀಖಾನ್‌ಸಾಬ್ 6ನೇ ತವಕಲ್‌ಸಾಬಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮಹಮ್ಮದ್‌ಖಾಸಿಂನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸರ್ 1896ನೇ ಇಸವಿ ಅಕ್ಟೋಬರ್ 24ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತನಿಃ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಖರ್ಚಾಗಡ ಬಡ್ಡಿ	ಐಂತೆಜಡ್ಡಿ	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ದೊಡ್ಡಪೇಟೆ ಜವಳಿಅಂಗಡಿ ಪಾವಡಿ ಮುದ್ದುರಾಮಯ್ಯ ..	50—2—11	..		ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್ 1894–95ನೇ ಇಸವಿ ಸ್ಮಾಲ್॥ 2584ನೇ ನಂ. ಡಿಕರಿ ಪ್ರಕಾರ.	
2	ಬೆಂಗಳೂರು ಮಾರ್ಕೆಟ್ ಗನ್‌ಮೇಕರ್ ಕೃಷ್ಣಸಿಂಗ್ ..	800— 0—0 ಅಸಲ್	..		ಬಡ್ಡಿ ಪತ್ರದ ಬಗೆ ಲೆಖ್ಖಾಚಾರದ ಮೇರಿಗೆ ಬಡ್ಡಿ ಕೊಡಬೇಕು.	
	ಡಿಟ್ಟೋ ಯವರಿಗೆ ..	26—0—0	..		ಡಿಕರಿ ಪ್ರಕಾರ.	
3	ಬೆಂಗಳೂರು ಕಂಟೋನ್ಮೆಂಟ್ ಬೊಂಬು ಬಜಾರಿನಲ್ಲಿ ಗನ್‌ಮೇಕರ್ ಕೆಲಸ ಮಾಡುವ ಅಬ್ದುಲ್ ಹಕೀಂಸಾಬಿ ..	32—12—0	..		ಬೆಂಗಳೂರು ಕಂಟೋನ್ಮೆಂಟ್ ಸಿವಿಲ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್ 1895–96ನೇ ಇಸವಿ ಸಿವಿಲ್ 13ನೇ ನಂ. ಡಿಕರಿ ಪ್ರಕಾರ.	
4	ಬೆಂಗಳೂರು ರಾಮಣ್ಣನ ಪೇಟೇಲಿರುವ ದೇವಾಂಗದ ಮುನಿಗುರಪ್ಪ, ಮುನಿಗುರುಶೆಟ್ಟಿ	200—0—0 ಅಸಲ್	...		ಆಧಾರ ದಸ್ತಾವಜು ಬಗೆ ಲೆಖ್ಖಾಚಾರದಂತೆ ಬಡ್ಡಿ ಕೊಡಬೇಕು.	
5	ಬೆಂಗಳೂರು ಮಹಲ್‌ದಾರ್ ಪೇಟೇಲಿರುವ ಮೊಹರ್ದೀಖಾನ್‌ಸಾಬಿ	100—0—0	..		ಬೆಂಗಳೂರು ಕಲಾಸಿಪಾಳ್ಯದಲ್ಲಿರುವ ಹಸನ್ ಬೇಗ್ ವುರುಫ್ ಮಿರ್ಜಾಸಾಬರಿಗೆ ಬೆಂಗಳೂರು ಮುನ್ಸಿಫ್ ಕೋರ್ಟ್ 1893–94ನೇ ಇಸವಿ ಅಸಲ್ 179ನೇ ನಂ. ಡಿಕರಿ ಮೇರಿಗೆ ಪಾವತಿಗೆ ತೆಗೆದುಕೊಂಡದ್ದು.	
6	ಬೆಂಗಳೂರು ಕುಂಬಾರ ಪೇಟೇಲಿರುವ ತವಕಲ್ ಸಾಬಿ	228–14–8	..		ಬೆಂಗಳೂರ ಮುನ್ಸಿಫ್ ಕೋರ್ಟ್ 1893–94ನೇ ಇಸವಿ ಒರಜಿನಲ್ 769ನೇ ನಂ ಡಿಕರಿ ಪ್ರಕಾರ.	

ದಿವಾಳಿಯಾದ ಡಿಕ್ರಿ ದೇಣೇದಾರ ಕೋಲಾರದಲ್ಲಿರುವ ಗಿರಮಾಜಿರಾಮರಾಯನ ವಿಷಯದಲ್ಲಿ—
ಸರ್ 1895—96ನೇ ಇಸವಿ ದಿವಾಳಿ ವ್ಯಾಜ್ಯದ ನಂಬರು 376.

ಹುಕುಂ.

ಮೇಲ್ಕಂಡ ಗಿರಮಾಜಿರಾಮರಾಯನು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಈ ಕೋರ್ಟು ರೂಬರೂ ಅರ್ಜೀದಾರನ ಸಮಕ್ಷಮದಲ್ಲಿ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—1ನೇ ಕೋಲಾರದಲ್ಲಿರುವ ಪ್ಲೀಡರ್ ಓಬಳಾಚಾರ್ಯರು, 2ನೇ ಡಿಟ್ಟೋ ಸ್ಥಳದಲ್ಲಿರುವ ಪ್ಲೀಡರ್ ಗುರುರಾಯರು, 3ನೇ ಬವರಿಂಗ್‌ಪೇಟೆ ತಾಲ್ಲೂಕು ಐವಾದಿ ಹೊಸಹಳ್ಳಿಲಿರುವ ನರಸಿಂಹಾಚಾರ್ರು ಫವತಿ ಇವರ ಮಕ್ಕಳು ತಾತಾಚಾರ್ರು, ರಾಮಾಚಾರ್ರು, ರಾಮಾನುಜಲು ಮೈನರ್‌ಗಳು ಇವರ ಗಾರ್ಡಿಯನ್ ತಾಯಿ ಮಂಗಮ್ಮ.

ಸದರೀ ಗಿರವಾಜೀರಾಮರಾಯನು ದಿವಾಳಿಯಾದವನೆಂದುನ್ನು ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನು ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಕೋರ್ಟು ಮಜಕೂರ್ ಶಿರಸ್ತೇದಾರು ಮತ್ತು ನಾಜರನ್ನು ದಿವಾಳಿಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ ಮಾಡಲ್ಪಡತಕ್ಕದ್ದೆಂದುನ್ನು ಸದರೀ ರಿಸೀವರಾದವನು ಒಡನೆ ತನ್ನ ರಿಸೀವರ ಕೆಲಸಗಳಿಗೆ ಉದ್ಯುಕ್ತನಾಗತಕ್ಕದ್ದೆಂದುನ್ನು ಮತ್ತು ಸದರೀ ರಿಸೀವರನು ತಾನು ನಡೆಸಿದ ಕೆಲಸಗಳ ಪ್ರತಿ ಫಲಕ್ಕಾಗಿ ದಿವಾಳಿ ಯಾದವನ ಲೇಣೇದಾರರಿಗೆ ಬಟವಾಡೆ ಮಾಡಿದ ಮೊಬಲಗಿನ ಬಾಕಿ ಹಣದಲ್ಲಿ ದರ ಶೇಕಡಾ 5 ರೂಪಾಯಿ ಮೇರೆ ಕಮಿಶನ್ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನು ಸಹ ಹುಕುಂ ಮಾಡಲ್ಪಟ್ಟು, ಇದೆ.

ಸನ್ 1896ನೇ ಇಸವಿ ಆಗಸ್ಟ್ 21ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತನಿಸಿ ಕೊಡಲ್ಪಟ್ಟಿತು.

ದಿವಾಳಿಯಾದ ಡಿಕ್ರಿ ದೇಣೇದಾರ ಗೋರೀಬಿದನೂರು ತಾಲ್ಲೂಕು ಮಂಚೇನಹಳ್ಳಿಲಿರುವ ಲಕ್ಕಗನ ವಿಷಯದಲ್ಲಿ—

ಸನ್ 1895—96ನೇ ಇಸವಿ ದಿವಾಳಿ ಕೇಸ್ ನಂಬರ್ 381.

ಹುಕುಂ.

ಮೇಲ್ಕಂಡ ಲಕ್ಕಗನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜಿದಾರನಾದ ಲಕ್ಕಗನ ಪರವಾಗಿ ಆಡ್ವೊಕೇಟ್ ಮೆಸ್ಟರ್ ಕೃಷ್ಣಮೂರ್ತಿರಾಯರ ಯದುರಿಗೆ ದರ್‍ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್‍ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—ಗೋರೀಬಿದನೂರು ತಾಲ್ಲೂಕು ಮಂಚೇನಹಳ್ಳಿಲಿರುವ ಮಳಿಗೆ ಮಲ್ಲಯ್ಯ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಲಕ್ಕಗನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಬಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1896ನೇ ಇಸವಿ ಜುಲೈ 1ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದರ್ಜೆ ಪ್ರಕಾರ ಬದ್ದಂ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿ ಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಗೋರೀಬಿದನೂರು ತಾಲ್ಲೂಕು ಮಂಚೇನಹಳ್ಳಿಲಿರುವ ಮಳಿಗೆ ಮಲ್ಲಯ್ಯ ..	135–15–0	..	ಬೆಂಗಳೂರು ಮುನ್ಸಿಫ್ ಕೋರ್ಟು 1895—96ನೇ ಇಸವಿ ಜಾರಿ 761ನೇ ನಂಬರ್ ವಾರಂಟ್ ಮೊಬಲಗು.	

ಸಿ. ಕ್ರಸ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 23ನೇ ನವಂಬರ್ 1896.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೆಂಗಳೂರು ಸಿಟಿ. ಕಬ್ಬನ್ ಸಾಹೇಬರ ಪ್ಯಾಟೆಗೆ ಸೇರಿದ ಗುಂಪುಟದಲ್ಲಿದ್ದು ಜೇವಾರ್ಸು ತರೀಕ್ ಮೃತಪಟ್ಟ ಸುಲ್ತಾನಮ್ಮನೆಂಬವಳ ಬಾಬತು ಐರ್ಜ ಗುಮ್ಮಟದ 5ನೇ ನಂಬರ್ ಗಲ್ಲಿಯಲ್ಲಿರುವ ಮ್ಯುನಿಸಿಪಲ್ ನಂಬರ 3, 4, 5, 6, 7, 8 ಮತ್ತು ಲಂಗಡಾ ಹುಸೇನ್‌ಸಾಬಿ ಗಲ್ಲಿಯಲ್ಲಿ ಇರುವ ನಂಬರ 4 ಈ ನಂಬರ್‌ಗಳುಳ್ಳ ಮನೆಗಳನ್ನು ಐರ್ಜ ಮನೆಗಳ ಬಳಿಯಲಿ ಬೆಂಗಳೂರು ತಾಲ್ಲೂಕು ಅಮಲ್ದಾರ್ ರೂಬರೂ ಸನ್ ಮಜಕೂರು ಡಿಸೆಂಬರ್ ಮಾಹೆ 14ನೇ ತಾರೀಖು ದಿವಿ 11 ಘಂಟೆಗೆ ಹರಾಜ್ ಮಾಡಲ್ಪಡುತ್ತೆಯಾಗಿ ಆ ಕಾಲಕ್ಕೆ ಸರಿಯಾಗಿ ಖಾಯಿಸ್ಮಾಡತಕ್ಕವರು ಹಾಜರಾಗಿ ಛಡಸವಾಲ್ಮಾಡಿ ತೆಗದುಕೊಳ್ಳಬಹುದು. ಆ ರೀತಿ ತೆಗದುಕೊಂಡವರು ಹರಾಜ್ ಖೈದಾದ ಕೂಡ್ಲೆ ಶೇಕಡಾ 25 ರೂಪಾಯಿಗಳ ಮೇರಿಗೆ ಡಿಪಾಜಿಟ್ ಹಾಜರ್ಮಾಡಬೇಕು. ತರುವಾಯ 15 ದಿವಸಗಳೊಳಗಾಗಿ ಪೂರಾ ಮೊಬಲಗು ಹಾಜರ್ಮಾಡಬೇಕು. ಡಿಸ್ಟ್ರಿಕ್ಟು ಮಾಜಿಸ್ಟ್ರೇಟರವರಿಂದ ಹರಾಜ್ ಮಂಜೂರಾಗಿ ಬಂದ ಬಳಿಕ ಮನೆಗಳು ಹರಾಜಿನಲ್ಲಿ ಪಡದವರ ಸುಪರ್ದು ಮಾಡಲಾದೀತು.

ಮೇಲೆ ನಮೂದಿಸಿರುವ ಡಿಪಾಜಿಟ್ ಮತ್ತು ಪೂರಾ ಮೊಬಲಗು ಹಾಜರ್ಮಾಡದೆ ತಪ್ಪಿದಲ್ಲಿ ಪುನಃ ಹರಾಜ್ ಮಾಡಲ್ಪಡುತ್ತೆ. ಲುಕ್ಸಾನ್ ಆದಲ್ಲಿ ಕಮ್ಮಿ ಬೀಳುವ ಮೊಬಲಗ್ಗೆ ಮೊದಲನೇ ಛಡಸವಾಲ್ದಾರನನ್ನು ಗುರಿಪಡಿಸಲ್ಪಡುತ್ತೆ.

ಎಂ. ಅಂಣಾಜಿರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್.

ತಾರೀಖು 21ನೇ ನವಂಬರ್ 1896.

ಗವರ್ನಮೆಂಟಿನಿಂದ ಸಾದರಾದ 7—8—96ನೇ ಮರ್ಕ್ಕಂ 1994—6 ಮಿ. 329ನೇ ನಂಬರ್ ಪ್ರೊಸಿಡಿಂಗ್ಸ್ ಪ್ರಕಾರ ಲ್ಯಾಂಡ್ ಆಕ್ವಿಜಿಷರ್ ರೆಗ್ಯುಲೇಷನ್ 6ನೇ ಸೆಕ್ಷನ್ ನಿಯಮಗಳನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಇರುವ ಇದಕ್ಕೆ ಲಗತ್ತಾಗಿಡಲ್ಪಟ್ಟ ಸ್ಟೇಟಮೆಂಟಿನಲ್ಲಿ ನಮೂದಾದ ಜಮೀನುಗಳು ಸರಕಾರದ ಕೆಲಸಕ್ಕೆ ಅಂದರೆ ಹೆಸರಘಟ್ಟ ವಾಟರ್ ಪ್ರಾಜೆಕ್ಟಿಗಾಗಿ ಬೇಕಾಗಿರುತ್ತೆಂತ ಇದರಿಂದ ಪ್ರಕಟಪಡಿಸಿ ಇದೆ.

ಸೀರಿಯಲ್ ನಂಬರ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ತೆಗದುಕೊಳ್ಳತಕ್ಕ ಜಮೀನಿನ ವಿಸ್ತೀರ್ಣ. ಖುಷ್ಕಿ.		ತರೀ.		ಬಾಗಾಯತು.		ಆಕಾರ.			ಷರಾ.
1				ಆಂಜನೇಯಸ್ವಾಮಿ	1	1	26	..	..	..	..	2	5	..	
2				ಪಾಪಯ್ಯ ಬಿನ್ ಬೈಯಣ್ಣ	3	..	..	...	...	..	9	1	...	..	
3				ಮೆಳೆದಾಸಿ ಹೆಂಡತಿ ತಿಮ್ಮಿ	4	..	35	..	..	..	..	2	..	..	
4				ಮುನಿರಡ್ಡಿ ಬಿನ್ ಪಾಪೇಗವುಡ	5	..	28	...	..	..	..	1	5	8	
5				ಈರನಾಗರಡ್ಡಿ	7	9	7	..	..	..	..	14	8	10	
6				ಹನುಮಂತೈಯ್ಯ	19 ಪೈಕಿ	..	4	..	...	..	..	..	1	1	
7				ಪಾಪಯ್ಯ ಬಿನ್ ಬೈಯ್ಯಣ್ಣ	ಡಿಟ್ಟೋ	2	21	..	..	.	..	4	3	11	
8				ಮುನೆಪ್ಪ	ಡಿಟ್ಟೋ	3	34	..	..	..	..	6	8	..	
9				ಚಿನ್ನಾಗರಡ್ಡಿ	20 ಪೈಕಿ	3	16	..	..	..	..	5	4	..	
10				ಮುನಿರಡ್ಡಿ	ಡಿಟ್ಟೋ	2	8	..	..	..	..	3	4		
11				ನರಸಣ್ಣ	ಡಿಟ್ಟೋ	3	25	..	..	..	..	5	8		
12				ಮುತ್ತೂರು ನಂಜಮ್ಮ ವಗೈರೇರು	21	6	2	..	..	..	..	9	8		
13	ದೊಡ್ಡಬಳ್ಳಾಪುರ.	ಕಾಕೋಳು.	ಗೊಂಡ್ರಿಹಳ್ಳಿ.	ಈರನಾಗರಡ್ಡಿ	22	5	..	..	..	..	..	8		..	
14				ಮುನಿರಡ್ಡಿ	23 ಪೈಕಿ	2	..	..	..	..	..	3	8	7	
15				ಪಾಪಯ್ಯ ಬಿನ್ ಬೈಯಣ್ಣ	ಡಿಟ್ಟೋ	2	22	..	..	..	...	4	6	6	
16				ತಿಮ್ಮ ಬಿನ್ ಪಟ್ಲಗನ ತಿಮ್ಮ	ಡಿಟ್ಟೋ	3	5	..	..	..	..	5	8		
17				ಮುನಿರಡ್ತಿ	26	12	10	..	..	..	...	25	..	..	
18				ಹೊನ್ನಪ್ಪ	27	1	15	...	..	..	...	2	4	.	
19				ಕೋನೇರಾಚಾರ್ ಕೃಷ್ಣಾಚಾರ್	28	6	8	..	..	..	..	9	8	..	
20				ತಿಮ್ಮ ಬಿನ್ ಪಟ್ಲಗನ ತಿಮ್ಮ	29	3	25	..	..	..	..	5	8		
21				ನಾಗಪ್ಪ	30	7	9	..	..	.	..	11	..	..	
22				ವಡ್ಡರ ಗುರುವ	31 ಪೈಕಿ	10	3	..	..	...	..	12	..		
23				ಸಂಜೀವ ಬಿನ್ ಹನುಮಂತ	ಡಿಟ್ಟೋ	5	15	..	.	..	..	6	12	..	
24				ನಾಗಪ್ಪ	ಡಿಟ್ಟೋ	2	28	..	..	..	..	3	4	.	
25				ಹೊನ್ನಪ್ಪ	32 ಪೈಕಿ	2	22	...	..	..	..	4	..	..	

26	ದೊಡ್ಡಬಳ್ಳಾಪುರ.	ಕಸಬಾ.	ಗೊಂದಿಹಳ್ಳಿ.	ಪಾಪಯ್ಯ ಬಿನ್ ಬಯ್ಯಂಣ	32 ಪೈಕಿ	3	8	..	..	..	..	5	..	..
27				ಸಂಜೀವ ಬಿನ್ ಹನುಮಂತ	33 ಪೈಕಿ	5	12	..	..	..	..	8	..	..
28				ತಿಮ್ಮಿ ಮತ್ತು ಮುನಿತಿಮ್ಮಿ	33 ಪೈಕಿ	1	31	..	..	..	..	2	12	..
29				ಚಿನ್ನಾಗರಡ್ಡಿ	33 ಪೈಕಿ	4	2	..	..	..	..	6	4	..
30				ನರಸಿಹ್ಮಾಚಾರ್	36	4	20	..	..	..	..	5	..	..
31				ಈರನಾಗರಡ್ಡಿ	37 ಪೈಕಿ	6	23	..	..	..	..	11	8	..
32				ಪಾಪಯ್ಯ ಬಿನ್ ಬೈಯಂಣ	37 ಪೈಕಿ	3	33	..	..	..	..	6	8	..
33				ನಸಸಿಹ್ಮಾಚಾರ	38	..	..	..	..	3	2	30	..	..
34				ಮುಸಿರಡ್ಡಿ	39	5	3	..	..	..	..	8	..	..
35				ಆಂಜನೇಯಸ್ವಾಮಿ	40	3	9	..	..	..	..	4	..	..
36				ಮುನಿರಡ್ಡಿ	41	4	35	..	..	..	..	6	8	..
37				ಶ್ಯಾಂಪುರದ ಕ್ರಿಷ್ಣಾಚಾರ್ ವಗೈರೆ ನಾಲ್ಕು ಜನ	42	5	13	..	.	..	..	7	..	..
38				ಮೆಳೆರಾಶಿ ಹೆಂಡತಿ ತಿಮ್ಮಿ	44	1	29	..	..	..	..	2	4	..
39				ಮುನಿರಡ್ಡಿ	45	12	12	..	..	..	..	18	..	..
40				ಮಳೆದಾಶಿ ಬಿನ್ ತಳವಾರ	46	6	2	..	..	..	.	10	..	..
41				ಮುನಿರಡ್ಡಿ	47 ಪೈಕಿ	2	32	..	..	..	..	4	4	..
42				ಸಂಜೀವಾ	47 ಪೈಕಿ	..	2	..	..	..	..	..	4	..
43				ಶಾಮಂಣ ಶಾತ ಲಕ್ಷ್ಮಣಭಟ್ಟ	48	5	28	..	..	..	..	9	8	..
44				ತಿಮ್ಮ ಬಿನ್ ಪಟ್ಲಗನ ತಿಮ್ಮ	49	8	38	..	..	..	..	15	..	..
45				ಪಾಪಯ್ಯ ಬಿನ್ ಬಯ್ಯಂಣ	50	.	37	..	..	..	...	1	8	..
46				ತಿಮ್ಮರಡ್ಡಿ ಬಿನ್ ತಿಮ್ಮಪ್ಪ	51 ಪೈಕಿ	6	..	..	..	..	..	9	8	4
47				ಸಂಜೀವಾ	51 ಪೈಕಿ	2	24	..	..	..	..	4	3	5
48				ಮುನಿರಡ್ಡಿ	56	2	26	..	..	..	..	7	9	3
49				ಡಿಟೋ	61	6	3	..	..	..	..	8	..	..
				ಜುಮ್ಲಾ ..		201	30	..	..	3	11	346	14	..
1			ಹಾಡೋನಹಳ್ಳಿ.	ನರಸಂಣ	2	2	39	..	..	..	..	5	.	..
2				ಸದಾಶಿವಭಟ್ಟ, ಸುಬ್ರಾಯಸೋಮಯಾಜಿ, ವಾಸುದೇವಶಾಸ್ತ್ರಿ	4	3	11	..	..	..	..	4	8	..
3				ಸಂಜೀವನಹೆಂಡತಿ ನಾಗಿ	5 ಪೈಕಿ	2	6	..	..	..	..	2	12	..
4				ಹನುಮಂತ ಬಿನ್ ತಿಗಳರ ವೆಂಕಟ	5 ಪೈಕಿ	1	14	..	..	..	..	1	12	..
5				ಹನುಮಂತ ಬಿನ್ ಪಿಳ್ಳಕದರ	6 ಪೈಕಿ	3	32	..	..	..	..	5	..	..
6				ಸೊಣ್ಣಪ್ಪ ಬಿನ್ ಚಿಕ್ಕವೀರ	6 ಪೈಕಿ	5	17	..	..	..	..	7	..	..
7				ನರಸಂಣ	7	14	27	..	..	..	..	18	..	..
8				ಡಿಟೋ	8	6	17	..	..	..	..	9	..	..

ಸೀರಿಯಲ್ ನಂಬರು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರ್.	ತೆಗದುಕೊಳ್ಳತಕ್ಕ ಜಮೀನಿನ ವಿಸ್ತೀರ್ಣ. ಖುಷ್ಕಿ.		ತರೀ.		ಬಾಗಾಯತು.		ಆಕಾರ.			ಷರಾ.
9	ಹೊಳೆನರಸೀಪುರ.	ಹಳೇಕೋಟೆ.	ಹಾರೋಹಳ್ಳಿ.	ಸಿದ್ದನಂಜಯ್ಯ	12	1	34	..	..	..	..	3	8	..	
10				ಸೊಣ್ಣಪ್ಪ	16 ಪೈಕಿ	2	35	..	..	..	:	4	..	...	
11				ವ್ಯಾಸಂಣ	16 ಪೈಕಿ	3	24	..	30	..	..	8	.	..	
12				ನರಸಂಣ	19	9	23	..	..	..	..	14	..	..	
13				ವಾಸುದೇವಾಚಾರ್ ಮತ್ತು ಕೃಷ್ಣಾಚಾರ್	20	3	26	..	..	..	..	5	8	...	
14				ನರಸಂಣ	21	9	15	..	..	..	..	14	...	...	
15				ಕಾಳಯ್ಯನ ಹನುಮಂತ	22	7	13	.	..	..	..	11	..	..	
16				ಆಂಜನೇಯಸ್ವಾಮಿ	35	2	24	..	..	..	..	4	..	.	
17				ತಳವಾರಹನುಮಂತ	36	2	9	..	...	..	..	3	8	..	
18				ಸೀನಪ್ಪ ಬಿನ್ ಮಲ್ಲಂಣ	37	7	39	..	..	..	..	11	..	..	
19				ಸಿದ್ದನಂಜಯ್ಯ	38	8	28	..	..	..	..	13	..	...	
20				ಕುದುರೆಮುನಿಯ	39 ಪೈಕಿ	2	32	..	..	..	..	4	1	6	
21				ಕಾಳ ಬಿನ್ ಈರ	40 ಪೈಕಿ	2	19	..	..	..	..	4	1	2	
22				ಕಸ್ತಿಹಳ್ಳಿ ನರಸಿಹ್ಮ	41	2	3	..	..	..	..	3	...	..	
23				ನರಸಂಣ	43 ಪೈಕಿ	4	34	..	..	..	..	8	6	..	
24				ಕಾಳಾ ಬಿನ್ ಈರ	43 ಪೈಕಿ	2	19	..	.	..	..	4	5	8	
25				ಡಿಟ್ಟೋ	44	2	31	..	..	..	..	3	8	...	
26				ದೊಂಬಿದಾಸರ ವೆಂಕಟ	48	1	35	..	..	..	..	3	8	8	
27				ಸುಬ್ಬ	51	6	8	..	:	..	..	10	..	..	
28				ಮಲ್ಲರಡ್ಡಿ	52	..	35	..	..	..	..	1	11	10	
29				ನರಸಂಣ	80	5	21	..	..	..	6	8	8	..	
30				ಡಿಟ್ಟೋ	10	21	24	..	..	..	...	26	..	..	
31				ಕಾಳಯ್ಯನ ಹನುಮಂತ	24	6	5	..	..	..	..	8	8	..	
32				ಕಾಳಾ ಬಿನ್ ಈರ	25	15	11	..	..	..	..	21	..	..	
33				ಸೀತಾರಾಮಯ್ಯ	26	6	15	..	..	..	..	9	..	..	
34				ತೋಟದ್ಯಾವಂಣ	27 ಪೈಕಿ	5	4	..	..	..	..	6	12	..	
35				ದೊಂಬಿದಾಸರನಂಜ	32	11	21	..	..	..	..	16	..	..	
36				ರಂಗಂಣ	27 ಪೈಕಿ	14	32	..	..	..	..	19	4	..	
37				ನರಸಿಹ್ಮಾಚಾರ್ ಬಿನ್ ಅಹೋಬಳಾಚಾರ್	28	7	37	..	..	..	..	12	.	:	

38			ಹಾರೋಹಳ್ಳಿ.	ನಾಗಪ್ಪ ಬಿನ್ ಬುಸ್ಸಿಗ	...	..	29	7	3	..	..	..	..	12	..	...
39				ಹನುಮಂತ ಬಿನ್ ನಡುಪಿಗ	..	..	31 ಪೈಕಿ	9	2	..	..	..	..	11	12	...
40				ನಾಗಪ್ಪ ಬಿನ್ ಬುಸ್ಸಿಗ	..	..	ಡಿಟ್ಟೋ	6	18	..	..	..	..	8	4	...
41				ಮರಿರಾಜಪ್ಪ	..	..	33 ಪೈಕಿ	8	16	..	..	..	...	10	..	..
42				ಮುದ್ದ ಬಿನ್ ಸಿದ್ದ	.	..	ಡಿಟ್ಟೋ	3	18	..	..	..	..	4	...	.
43				ವ್ಯಾಸಣ್ಣ	..	..	81	11	11	..	..	..	..	16	..	..
44				ನರಸಿಂಹಾಚಾರ್ ಬಿನ್ ಅಹೋಬಲಾಚಾರ್	..	..	82	8	..	...	..	..	...	12	..	.
45				ಮತ್ತೂರು ಮುನಿಯ	..	..	83	7	36	...	..	..	..	12	...	..
46				ನರಸಿಂಹಾಚಾರ್	..	..	84	6	13	..	..	..	..	11	..	..
47				ನರಸಣ್ಣ	..	..	85	21	..	..	..	..	..	29	..	...
48				ಗಿಡ್ಡ ತಿಮ್ಮ	..	..	86 ಪೈಕಿ	6	10	...	..	..	...	8	12	...
49				ರಿಷ್ಡಿಗರ ಬೈಲಗ	..	..	ಡಿಟ್ಟೋ	4	38	..	..	..	..	6	12	...
50				ಕೃಷ್ಣೇಗವುಡ	..	..	ಡಿಟ್ಟೋ	5	17	..	..	..	..	7	8	..
51				ಸಿದ್ದನಂಜಯ್ಯ	.	..	87 ಪೈಕಿ	10	28	..	..	..	..	14	..	..
52				ಸಿರಿಹನುಮ	..	...	88	10	21	..	..	..	...	14	..	...
	ದೊಡ್ಡಬಳ್ಳಾಪುರ.	ಕಾಕೋಳು.			ಜುಮ್ಲಾ ..		...	347	10	..	30	..	6	491	..	10
1			ಚಿಕ್ಕದೇವನಪುರ.	ಹುಚ್ಚ ಬಿನ್ ಮಲಿಯ	..	..	60 ಪೈಕಿ	3	38	..	...	..	..	5	14	10
2				ಕೆಂಪಾ ಬಿನ್ ಸಿಂಗ	..	..	36 ಪೈಕಿ	4	31	..	..	..	..	7	12	..
3				ಡಿಟ್ಟೋ	..	..	37 ಪೈಕಿ	..	34	..	..	..	..	1		
4				ಸೀನಪ್ಪ	..	..	30 ಪೈಕಿ	3	16	..	..	..	..	7	..	2
5				ಮುನಿ ಮತ್ತು ಹನುಮಂತ	..	..	ಡಿಟ್ಟೋ	2	..	...	..	..	..	4	4	..
6				ಸುಬ್ಬಣ್ಣ ಬಿನ್ ರಾಮಣ್ಣ	..	.	34	..	28	..	..	..	..	1	...	
7				ವೆಂಕಟ	..	..	35 ಪೈಕಿ	1	25	..	..	..	..	2	9	8
8				ಅಂದಾನಪ್ಪ	..	..	ಡಿಟ್ಟೋ	4	1	..	..	..	..	6	12	...
9				ಸೀನಪ್ಪ	..	..	ಡಿಟ್ಟೋ	3	..	..	..	..	..	5	..	1
10				ಸೊಣ್ಣ ಬಿನ್ ಚಿಕ್ಕವೀರ	..	..	36 ಪೈಕಿ	2	29	..	..	..	..	4	4	...
11				ಡಿಟ್ಟೋ	..	..	37 ಪೈಕಿ	1	23	..	..	..	..	2	4	..
12				ಮುನಿಯ ಬಿನ್ ಮರಿಯ	..	..	ಡಿಟ್ಟೋ	1	24	..	..	..	..	2	8	...
13				ಅಂದಾನಪ್ಪ	..	..	ಡಿಟ್ಟೋ	1	23	..	..	..	..	2	4	..
14				ನಂಜನ ಹೆಂಡತಿ ಸೊಣ್ಣಿ	..	..	ಡಿಟ್ಟೋ	2	12	..	..	..	..	3	8	..
15				ಸೀನಪ್ಪ	..	..	ಡಿಟ್ಟೋ	..	16	..	..	..	..	..	8	..
16				ತಳವಾರ ತಿಮ್ಮ	..	..	38	3	18	..	..	..	..	5	..	..
17				ದಾಸೇನಹಳ್ಳಿ ಚನ್ನಪ್ಪ	..	..	52	13	37	..	..	..	..	16	..	..
18				ಭೀಮಣ್ಣ	..	..	53 ಪೈಕಿ	4	2	..	..	..	..	4	12	..

ಸೀರಿಯಲ್ ನಂಬರು.	ತಾಲ್ಲೋಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ತೆಗದುಕೊಳ್ಳತಕ್ಕ ಜಮೀನಿನ ವಿಸ್ತೀರ್ಣ. ಖುಷ್ಕಿ.		ತರೀ.		ಬಾಗಾಯತು.		ಆಕಾರ.			ಷರಾ.
19	ದೊಡ್ಡಬಳ್ಳಾಪುರ.	ಕಸಬಾ.	ಚಿಕ್ಕತುಮಕೂರು.	ಸೀನಪ್ಪ	53 ಪೈಕಿ	5	17	..	..	..	..	6	8	..	
20				ಕೆಂಪಣ್ಣ	54 ಪೈಕಿ	5	20	..	..	..	..	7	4	.	
21				ಮತ್ತಿಗೆರೆ ಕೆಂಪ	55	9	19	..	..	..	..	13	..	.	
22				ಸುಬ್ಬಣ್ಣ ಬಿನ್ ರಾಮಣ್ಣ	56	5	10	..	..	..	..	8	..	.	
23				ಚಿಕ್ಕ ಬಿನ್ ಕರಿಯ	57	10	23	..	..	..	..	18	..	..	
24				ಮುನಿಯ ಬಿನ್ ಚಿಕ್ಕ ಬೈರ	58 ಪೈಕಿ	5	24	..	..	..	..	9	4	...	
25				ಅನ್ನಪೂರ್ಣಮ್ಮ	ಡಿಟೋ	2	28	..	..	..	..	4	4	..	
26				ಮುನಿ ಮತ್ತು ಹನುಮಂತ	ಡಿಟೋ	2	32	..	..	..	..	4	12	..	
27				ಮುನಿಯ ಬಿನ್ ಹನುಮಂತ	ಡಿಟೋ	2	10	..	..	..	..	3	12	...	
28				ಪಟ್ವದ ನಾರಣಾಚಾರ್	59 ಪೈಕಿ	2	..	..	..	..	...	3	4	..	
29				ಹನಿಯೂರು ಸುಬ್ಬಯ್ಯ ಮತ್ತು ಇತರರು	ಡಿಟೋ	2	38	..	..	..	..	4	12	..	
30				ಹೊಳವನೂರು ಅಪ್ಪಣಾಚಾರ್	ಡಿಟೋ	2	16	..	..	..	..	4	..	..	
31				ಮುನಿ ಮತ್ತು ಹನುಮಂತ	60 ಪೈಕಿ	..	3	..	..	..	..	..	1	10	
32				ತಳವಾರ ತಿಮ್ಮ	61 ಪೈಕಿ	3	11	...	...	..	..	4	13	..	
33				ಗೋಪಾಲಸ್ವಾಮಿ	62	3	24	..	..	..	..	5	8	..	
34				ಬೀರಾ ಬಿನ್ ಮಲಿಯ	63 ಪೈಕಿ	1	1	..	..	..	..	1	10	8	
35				ಚಿಕ್ಕ ಬಿನ್ ಕರಿಯ	ಡಿಟೋ	2	2	..	..	..	..	3	5	6	
36				ಕೆಂಪ ಬಿನ್ ಸಿಂಗೆ	ಡಿಟೋ	..	6	..	..	..	..	..	3	10	
37				ಹನುಮಂತ ಬಿನ್ ವೀರಣ್ಣ	69 ಪೈಕಿ	3	34	..	..	..	..	6	4	7	
38				ಲಕ್ಕ ಬಿನ್ ಮುರಾರಿ	70 ಪೈಕಿ	..	35	..	..	..	..	1	4	..	
39				ಸುಬ್ಬಣ್ಣ ಬಿನ್ ರಾಮಣ್ಣ	ಡಿಟೋ	1	24	..	..	..	..	2	12	..	
40				ತಳವಾರ ತಿಮ್ಮ	71	3	16	..	..	..	..	5	8	...	
41				ಭಾಗೀರತಮ್ಮ	72	9	31	..	..	..	..	15	..	..	
42				ಕೆಂಪಣ್ಣ ಬಿನ್ ಸಿಂಗಪ್ಪ	73	4	6	..	..	..	..	6	..	..	
43				ಸುಬ್ಬಣ್ಣ ಬಿನ್ ರಾಮಣ್ಣ	78 ಪೈಕಿ	..	25	..	..	..	..	..	11	7	
44				ಯಲ್ಲಿಗನ ಹೆಂಡತಿ ದಾಸಿ	79 ಪೈಕಿ	5	12	..	..	..	..	8	2	3	
45				ಸಿದ್ದ ಬಿನ್ ತಿಮ್ಮ	ಡಿಟೋ	1	32	..	..	..	..	2	12	..	
46				ನಿಡುವಂದದ ಸಿದ್ದ	81	1	29	..	..	..	..	2	8	..	
47				ಗುರುವ	82	5	4	..	..	..	..	7	14	6	

48	ದೊಡ್ಡಬಳ್ಳಾಪುರ,	ಕಸಬಾ,	ತೂಬಗೆರೆ,	ಸಿದ್ದಾ ಬಿನ್ ತಿಮ್ಮ	83 ಪೈಕಿ	3	15	..	..	..	..	5	4	..
49				ಸುಬ್ಬಂಣ ಬಿನ್ ಬಿಚ್ಚಂಣ	74	18	1	..	..	..	..	28	...	...
50				ಸುಬ್ಬಂಣ ಬಿನ್ ರಾಮಂಣ	76	9	7	..	..	..	..	12	...	...
51				ಕುಳ್ಳಾ ಬಿನ್ ದಾಸಿ	83 ಪೈಕಿ	3	38	..	..	..	..	12	...	..
52				ಆಂಜನೇಯಸ್ವಾಮಿ	84 ಪೈಕಿ	1	22	..	..	..	..	6	1	3
53				ಕುಳ್ಳಾ ಬಿನ್ ದಾಸಿ	85 ಪೈಕಿ	3	36	..	..	...	..	2	10	10
54				ಸೀನಪ್ಪ	85 ಪೈಕಿ	2	12	..	..	..	..	5	12	..
55				ಸುಬ್ಬಂಣ ಬಿನ್ ಬಿಚ್ಚಂಣ	101 ಪೈಕಿ	8	26	..	..	..	..	3	6	9
56				ಚಿಕ್ಕಾ ಬಿನ್ ಕರಿಯಾ	39 ಪೈಕಿ	1	6	..	..	..	..	11	11	10
57				ರಾಜಯ್ಯ ಬಿನ್ ದೊಡ್ಡೀರ	39 ಪೈಕಿ	3	6	..	..	..	..	2	...	..
58				ಮುನಿಯ ಬಿನ್ ಪಾಪ	39 ಪೈಕಿ	3	6	..	..	..	..	5	4	..
59				ಕ್ರಿಷ್ಣರಾವ್ ಬಿನ್ ಮದ್ದೂರಾವ್	39 ಪೈಕಿ	2	6	..	..	..	..	5	4	..
60				ತಿಳುಭೈರಾ	40	14	..	..	..	..	..	3	8	..
61				ಮುನಿಯ ಬಿನ್ ಮರಿಯ	41	3	33	..	..	..	..	19	...	..
62				ತಿಮ್ಮ	43	2	14	..	..	..	..	5	..	...
63				ರಾಜಘಟ್ಟದ ಹನುಮಂತ	44	4	14	..	..	..	..	4	...	..
64				ಚನ್ನಪ್ಪನ ಮುನಿಯ	45 ಪೈಕಿ	4	17	..	..	..	..	7	8	..
65				ಸಿದ್ದಾಬೋಯಿ	46	35	23	..	..	..	..	8	..	..
66				ತಳವಾರ ಮುನಿವೆಂಕಟ	47 ಪೈಕಿ	8	22	..	...	..	...	42	..	..
67				ಆಂಜನೇಯಸ್ವಾಮಿ ಮತ್ತು ಗೋಪಾಲಸ್ವಾಮಿ ದೇವರ ಅರ್ಚಕ ವೆಂಕಟಾಚಲಯ್ಯ	47 ಪೈಕಿ	4	...	..	..	..	..	13	..	..
68				ಹುಚ್ಚೇಗವುಡ	47 ಪೈಕಿ	5	18	..	..	..	..	6	..	..
69				ಬೀರಾ ಬಿನ್ ಮಲಿಯಾ	49	27	9	..	..	..	..	8	4	...
70				ಸೀನಪ್ಪ	51 ಪೈಕಿ	25	33	..	..	..	..	26	.	..
71				ಚಿಕ್ಕಹನುಮಂತ	51 ಪೈಕಿ	2	3	..	..	..	..	32	..	..
72				ಭಂಡೀಮುನಿಯ	51 ಪೈಕಿ	2	31	..	..	..	..	2	8	...
73				ಮುನಿಯ ಬಿನ್ ಹನುಮಂತ	87 ಪೈಕಿ	1	17	..	..	..	..	3	8	..
74				ನಿಡುಮಂದದಸಿದ್ದಾ	87 ಪೈಕಿ	1	38	..	..	..	..	2	4	..
75				ಬೆಂಗಳೂರು ದಾಸಾ	87 ಪೈಕಿ	5	28	..	..	..	..	3	4	..
76				ತಿರುಮಳಾ, ಕೊಂಡ	87 ಪೈಕಿ	1	22	..	..	..	..	9	..	...
77				ಕೋಡಿಹಳ್ಳಿ ಚನ್ನವೀರಪ್ಪ	96	33	23	..	..	..	..	2	8	...
78				ಸೀನಪ್ಪ	98 ಪೈಕಿ	7	35	..	..	..	..	48	..	...
79				ನಿಬ್ಬೂರುಕೆಂಪ	98 ಪೈಕಿ	5	32	..	...	..	..	12	..	...
80				ತುಮಕೂರು ಸುಬ್ಬ	98 ಪೈಕಿ	6	..	..	..	..	..	8	12	...
81				ಹನುಮಂತರಾಯ ಬಿನ್ ನಂಜಾ	98 ಪೈಕಿ	8	27	..	..	..	..	9	..	...
												13	4	..
				ಜುಮ್ಲಾ ..		434	29	..	..	..	..	619	3	6

ವಿ. ಎನ್. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಸೆಂಟ್ರಲ್‌ಜೈಲ್.

ತಾರೀಖು 30ನೇ ನವೆಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರ ಸೆಂಟ್ರಲ್ ಜೈಲಿನಲ್ಲಿ ಖೈದು ಮಾಡಲ್ಪಟ್ಟು ಇರುವ ಕೈದಿಗಳ ಉಪಯೋ
ಗದ ಬಗ್ಗೆ ಸರ್ 1897ನೇ ಇಸವಿ ಫಿಬ್ರುವರಿ ಗುರ್ರೇ ಲಾಗಾಯತು 1898ನೇ ಇಸವಿ ಜನವರಿ 31ನೇ ತಾರೀಖಿನ ವರಿಗೂ ಆ 2 ದಿನ
ಗಳೂ ಸೇರಿ ಕೆಳಗೆ ನಮೂದು ಮಾಡುವ ಜಿನಸುಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್
ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರಿಂದ, ಸರ್ 1896ನೇ ಇಸವಿ ಡಿಸೆಂಬರ್ ತಾರೀ
ಖು 19ನೇ ಶನಿವಾರ ಹಗಲು 1 ಘಂಟೆ ವರಿಗೂ ತೆಗದುಕೊಳ್ಳಲ್ಪಡುವವು.

2. ಮೇಲೆ ನಮೂದು ಮಾಡಿರುವ ತಾರೀಖಿನ ನಂತರ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. ಟೆಂಡರುಗಳಿಗೆ ಈ ಕೆಳಗೆ ನಮೂದು ಮಾಡಿರುವಂತೆ ಬೇರೆಬೇರೆ ಮೇಲ್ ವಿಳಾಸ ಬರೆದು ಇರತಕ್ಕದ್ದು;—

1ನೇ ಧಾನ್ಯಕ್ಕೆ	..	...	ದರಖಾಸ್ತು
2ನೇ ಮಸಾಲೆ ಜಿನಸುಗಳಿಗೆ	..	..	ದರಖಾಸ್ತು
3ನೇ ಇತರ ಅವಶ್ಯಕವಾದ ಪದಾರ್ಥಗಳ ಬಗ್ಗೆ.			ದರಖಾಸ್ತು

4. ಧಾನ್ಯಕ್ಕೆ	...	...	ರೂಪಾಯಿ 200
ಮಸಾಲೆ ಜಿನಸುಗಳಿಗೆ		..	,, 50
ಇತರ ಅವಶ್ಯಕವಾದ ಪದಾರ್ಥಗಳಿಗೆ		..	,, 150

ಈ ಮೇರಿಗೆ ನಗದಾಗಿ ಆಗಲಿ, ಕರೆನ್ಸೀನೋಟಾಗಿ ಆಗಲಿ ಠೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿ
ಸಲ್ಪಡುವದಿಲ್ಲ.

5. ದರಖಾಸ್ತುಗಳು ಬೆಂಗಳೂರ್ ಸೆಂಟ್ರಲ್‌ಜೈಲ್ ಸೂಪರ್‌ಟೆಂಡೆಂಟರವರಿಂದ ಅವರ ಆಫಿಸಿನಲ್ಲಿ ಆ ಕಾಲದೊಳು ಹಾಜರಾ
ಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರುಗಳ ರೂಬರೂಬ್ ಮೇಲ್ಕಂಡ ತಾರೀಖು ಮತ್ತು ಘಂಟೆಯಲ್ಲಿ ಖುಲ್ಲಾ ಮಾಡಲ್ಪಡುವವು.

6. ಕೆಳಗೆ ವಿವರಿಸಿರುವ ಜಿನಸುಗಳನ್ನು ಸರಬರಾಯಿ ಮಾಡುವ ದರ ರೂಪಾಯಿ 1ಕ್ಕೆ ಇಷ್ಟು ಪೌಂಡ್ ಎಂತ ದರಖಾಸ್ತು
ಗಳಲ್ಲಿ ನಮೂದಾಗಬೇಕು. ಮತ್ತು ಜಿನಸುಗಳು ಒಳ್ಳೇದಾಗಿರಬೇಕು.

ಸಂವತ್ಸರಕ್ಕೆ ಬೇಕಾಗಬಹುದಾದ ಜಿನಸುಗಳ ಪಟ್ಟಿ.

1ನೇ ಧಾನ್ಯ.

				ಸುಮಾರು ಬೇಕಾದ್ದು.
ಅಕ್ಕಿ	..	..	...	56,000 ಪೌಂಡ್
ರಾಗಿ	...	...	...	240,000 ಪೌಂಡ್
ತೊಗರೀಬ್ಯಾಳೆ	..	..	...	11,000 ಪೌಂಡ್
ಅವರೇಬ್ಯಾಳೆ	...	..	...	19,000 ಪೌಂಡ್

2ನೇ ಮಸಾಲೆ ಜಿನಸುಗಳು.

* ಖಾರದ ಸಾಮಾನಿಗೆ ಬೇಕಾದ ಜಿನಸುಗಳು.

1	ಪೌಂಡ್	ಮೆಣಸಿನ ಕಾಯಿ
12	ಔನ್ಸ್	ಕೊತ್ತುಂಬರಿ ಬೀಜ
2	ಔನ್ಸ್	ಅರಿಸಿನ
1	,,	ಜೀರಿಗೆ
6	,,	ಮೆಣಸು
3	,,	ಪೋಸ್ತು ಕಾಯಿ
1	,,	ಮೆಂಥ್ಯ
1	,,	ಸಾಸಿವೆ
1	,,	ಕರಿಬೇವಿನಸೊಪ್ಪು

* ಖಾರದ ಸಾಮಾನು ಯಾ ಪುಡಿ 4,200 ಪೌಂಡ್.

ಈರುಳ್ಳಿ	..	6,000 ,,
ಬೆಳ್ಳುಳ್ಳಿ	..	600 ,,
ಹುಣಸೇಹಣ್ಣು	.	6,000 ,,
ಉಪ್ಪು	..	8,400 ,,
ಮೆಣಸು	..	100 ,,

3ನೇ ಇತರ ಅವಶ್ಯಕವಾದ ಪದಾರ್ಥಗಳು.

ಮೊಸರು	..	24,000 ಪೌಂಡ್.
ಒಳ್ಳೆಯಎಣ್ಣೆ	...	2,400 ,,
ತುಪ್ಪ	..	1,200 ,,
ತರಕಾರಿ	..	72,000 ,,
ರವೆ	..	200 ,,
ಸಕ್ಕರೆ	..	300 ,,
ಕಾಫಿ	..	50 ,,
ಟೀ	..	10 ,,

ರೊಟ್ಟಿ	..	1,000 ಪೌಂಡ್.
ಹಾಲು	..	4,500 ,,
ಶೀಗೇಕಾಯಿ	..	400 ,,
ಗೇರುಬೀಜ	..	300 ,,
ದೀಪದೆಣ್ಣೆ	..	350 ,,
ಪೊರಕೆಗಳು	..	1,500 ಆದದು
ಕೊಬ್ಬರಿ ಎಣ್ಣೆ	..	100 ಪೌಂಡ್

ಮೇಲೆ ನಮೂದು ಮಾಡಿರುವ ಜಿನಸಿನ ಮೊತ್ತಗಳು ಇಷ್ಟೇ ತೆಗದುಕೊಳ್ಳುತ್ತೇವೆಂದು ಖಾತರ್ ದೊರೆಯಲಾರದು.

7. ಕಂಟ್ರಾಕ್ಟುದಾರನು ಕೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು
ಕೈದಿಗಳಿಗೆ ಕೊಡಲ್ಪಡುವದು. ಹಾಗೆ ಸರಬರಾಯಿ ಆದ ರಾಗಿ ಹಿಟ್ಟಿಗೆ ಸರಿಯಾದ ರಾಗಿ ಇಷ್ಟೆಂದು ಲೆಖ್ಖ ಮಾಡಿ ಆ ರಾಗೀ ದರದ
ಮೇಲೆ ಹಣ ಪಾವತಿಯಾಗುತ್ತದೆ.

8. ಸೂಪರ್‌ಟೆಂಡೆಂಟರವರು ಅತ್ಯಂತ ಕಮ್ಮಿ ದರವನ್ನಾಗಲಿ ಅಥವಾ ಮತ್ತೆ ಯಾವ ದರವನ್ನೇ ಆಗಲಿ ಅಂಗೀಕರಿಸಲು
ಬದ್ಧರಾಗಿರುವದಿಲ್ಲ. ಮತ್ತು ಕಾರಣವನ್ನು ಹೇಳದೆ ಬೇಕಾದ ದರಖಾಸ್ತನ್ನು ತಿರಸ್ಕರಿಸಬಹುದು.

9. ಮಂಜೂರಾದ ದರಖಾಸ್ತುದಾರನ ಠೇವಣಿ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂ
ರಾದ ಸಂಗತಿ ಅವರಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವರು ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡುವದಕ್ಕೆ
ತಪ್ಪಿದರೆ, ಅಥವಾ ನಗದಾಗಿ ಆಗಲಿ ಗವರ್ನಮೆಂಟ್ ಬಾಂಡ್ ಮೂಲಕವಾಗಿಯಾಗಲಿ ಧಾನ್ಯಕ್ಕೆ 500 ರೂಪಾಯಿ.

ಮಸಾಲಿ ಜಿನಸಿಗೆ ..
ಇತರ ಅವಶ್ಯಕವಾದ ಪದಾರ್ಥಗಳಿಗೆ .. ರೂ. 100.
.. ರೂ. 300.
ಈ ಮೇರೆ ಜಾಮೀನ್ ಕೊಡಲು ತಪ್ಪಿದರೆ ಅಂಥಾ ಠೇವಣಿ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರರಿಗೆ ನಗದಾಗಿ ಅಡ್ವಾನ್ಸ್ ಏನೂ ಕೊಡುವದಿಲ್ಲ. ಸರಬರಾಯಿ ಮಾಡಲ್ಪಟ್ಟಂಥಾ ಸಾಮಾನ್ ಕಿಮ್ಮತ್ತು ಪ್ರತಿ ತಿಂಗಳ 1ನೇ ತಾರೀಖು ನಂತರ ಕಂಟ್ರಾಕ್ಟುದಾರರಿಗೆ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಪಾವತಿ ಮಾಡಲ್ಪಡುವದು.

11. ಪ್ರಿಗ್ರಾಣದ ಕೋಠಡಿಗಳ ಸ್ವಾಧೀನ ಕಂಟ್ರಾಕ್ಟುದಾರರಿಗೆ ಕೊಡಲ್ಪಡುವದು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನೂ ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲೂ ಇಟ್ಟಿರಬೇಕು. ಕೆಟ್ಟು ಹೋಗತಕ್ಕಂಥಾ ಪದಾರ್ಥಗಳು ಅಂದರೆ ತರಕಾರಿ ಮುಂತಾದ್ದು ಪ್ರತಿ ದಿನವೂ ಬೆಳಗಿನ 8 ಘಂಟೆಗೆ ಜೈಲ್‌ನಲ್ಲಿ ಹಾಜರ್ಮಾಡಬೇಕು.

12. ಈ ಕಂಟ್ರಾಕ್ಟು ಒಳಗುತ್ತಿಗೆಯಾಗಿ ಕೊಡಬಾರದು.

13. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಅಥವಾ ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ ಜೈಲ್ ಸೂಪರಿಂಟೆಂಡೆಂಟರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದೆ ಜುರ್ಮಾನೆ ಹಾಕುವರು ಮತ್ತು ಪದೇಪದೆ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡೆದರೆ ಆ ಕಂಟ್ರಾಕ್ಟು ರದ್ದು ಮಾಡಿ ಠೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಕ್ಕೊಳ್ಳಲ್ಪಟ್ಟೀತು.

14. ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡದ ಎಲ್ಲಾ ಪ್ರಮೇಯಗಳಲ್ಲೂ ಸೂಪರಿಂಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಆಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಖೈದಿಗಳ ವುಪಯೋಗಕ್ಕಾಗಿ ಬೇಕಾಗಿರುವ ಹಾಲನ್ನೂ ತರಕಾರಿಯನ್ನೂ ಮತ್ತು ತೋಟದ ಬೆಳಸನ್ನೂ ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಜೈಲ್‌ನಿಂದ ಕೊಂಡುಕೊಳ್ಳಲು ಬದ್ಧನಾಗಿರುವನು.

16. ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

17. ಕಂಟ್ರಾಕ್ಟುಗಳು ಮೈಸೂರ ದೇಶದ ಜೈಲುಗಳ ಇನ್‌ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು. ಇವರು ದರಖಾಸ್ತುಗಳು ಎಲ್ಲವನ್ನೇ ಆಗಲಿ ಅಥವಾ ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಅಧಿಕಾರವನ್ನು ಇಟ್ಟುಕೊಂಡಿದಾರೆ.

18. ಕಂಟ್ರಾಕ್ಟುದಾರರು ಈ ಕಂಟ್ರಾಕ್ಟು ತೆಗೆದುಕೊಂಡ ತರುವಾಯ, ತಮ್ಮ ಕರಾರು ಮೇರಿಗೆ ನಡೆಯಲು ಇಷ್ಟವಿಲ್ಲದವರಾಗಿದ್ದರೆ, ಅವರು ಕೊನೇಪಕ್ಷ ಒಂದು ತಿಂಗಳ ಮುಂಚಿತವಾಗಿ ನೋಟಿಸ್ ಕೊಟ್ಟು ತಮ್ಮ ಠೇವಣಾತಿ ಹಣವನ್ನ ಸರಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

19. ಆ ಪ್ರಕಾರ ಸದರೀ ಕಂಟ್ರಾಕ್ಟುದಾರರು ತಮ್ಮ ಕರಾರಿಗೆ ತಪ್ಪಿದ್ದರಿಂದ ಅಥವಾ ಅವರ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರಕಾರದವರು ಸ್ಥಳೀಯವಾದ ಬಾಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚುದರ ಕೊಟ್ಟು ತಕ್ಕೊಳ್ಳುವದರಿಂದ ಸರಕಾರದವರಿಗೆ ವುಂಟಾಗಬಹುದಾದ ನಷ್ಟವನ್ನ ಭರ್ತೀಮಾಡುವದಕ್ಕೂ ಸಹ ಬದ್ಧರಾಗಿರಬೇಕು.

ಷರಾ.—ಈ ಕಂಟ್ರಾಕ್ಟುಗಳಲ್ಲಿ ಯಾವ ವಿಧವಾದ ರಿಯಾಯತಿಯನ್ನೂ ಮಾಡೋಣಾಗಲಾರದು.

ಹೆಚ್. ಹೆಚ್. ಸ್ಪಾರ್ಕ್ಸ್,
ಸೂಪರಿಂಟೆಂಡೆಂಟ್ ಸೆಂಟ್ರಲ್ ಜೈಲ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ಮತ್ತು ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಮರಸು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4. ಪ್ರತಿ ಕೋಠಿಯಲ್ಲಿಯು ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿದೆ.

ಸಂದಲ್ ವಿವರ		ಹಳೇ ತರಹೆ ಪ್ರಕಾರ.											
		ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
		ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.
ಸಲಾಕಿ ಅವ್ವಲ್	..	1	..	..	5	..	15	..	..	..	15	..	...
ಡಿಟೋ ದುಯಂ	..	..	5	1	5	2	5	3	5	1	..	..	2
ಡಿಟೋ ಸಿಯಂ	..	1	10	7	10	5	5	12	15	8	..	4	..
ಡಿಟೋ ಚಹರಂ	..	45	15	30	..	44	..	32	10	12	..	7	..
ಡಿಟೋ ಪಂಚಂ	..	7	..	10	..	10	10	37	.	25	..	14	..
ಚಿಕ್ಕ ಸಲಾಕಿ	..	1	2	1	..	..	..	..	..	..	..	..	..
ದೊಡ್ಡ ಜಡಾ	..	21	..			33	..	66	5	40	..	25	..
ಚಿಕ್ಕ ಜಡಾ	..	3	15	35	..	5	..	8	..	4	..	2	..
ಜಡದ ರಂಬೆ	..	1	5			7	..	..	..	...	..	...	..
ದೊಡ್ಡ ಜಜ್ಜು	..	18	..	61	5	30	..	94	..	65	..	43	..
ಚಿಕ್ಕ ಜಜ್ಜು	..	3	5			11	..						
ಬಗರದದ್ದು	..	2	15	6	..	5	5	26	..	9	..	13	10
ಐರ್ ವಾಜಿ ಗುಬಗರು	..	1	..	3	..	..	10	..	..	..	..	..	..
ಗರಗನ ಬುಕಣಿ	..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಟ	..	1	10	1	..	6	5	15	10	15	..	16	..
ಚಿಕ್ಕ ಡಿಟೋ	..	..	..	2	..	..							
ಕೆತ್ತಿನ ಐರ್ ಚಿಲ್ಟ	..	6	..	..	..		..	..	..	..	..	..	...
ಹತ್ರಿ ಚಿಲ್ಟ	..	1	6	..	..	..	..	..	..	..	..	..	..
ಮಿಲ್ವ ಚಿಲ್ಟ	..	17	10	30	..	21	5	30	..	12	..	9	..
ಬಸೋಲ ಬುಕಣಿ	..	1	15	10	..	14	..	14	15	5	10	6	8
ಕೊಯತ ಚಿಲ್ಟ	..	..	..	1	10	3	10	9	..	2	..	1	..
ಜುಮ್ಲಾ	..	135	15	200	..	200	..	350	..	200	..	150	..

ಸಂದಲ್ ವಿವರ.		ಹೊಸ ಯಾ ಬೋಂಬಾಯಿ ತರಹೆ ಪ್ರಕಾರ.			
		ಹುಣಸೂರು ಕೋಠಿ.		ಶ್ರೀರಂಗಪಟ್ಟಣ ಕೋಠಿ.	
		ಟನ್.	ಹ.	ಟನ್.	ಹ.
ವಿಲಾಯಿತಿ ಬಡ್	..	1	.	..	10
ಚೈನಾ ಬಡ್	..	20	..	30	..
ಪಂಚಂ	..	28	..	89	..
ಚಿಕ್ಕ ಸಲಾಕಿ, ಘೋಟ್ಲ (ಅವ್ವಲ್)	..	3	...	5	..
ಡಿಟೋ (ದುಯಂ)	..	2	..	1	..
ಘೊಟ್ ಬಡಲ	..	50	..	30	..
ಜಡಾ (ಅವ್ವಲ್)	..	25	..	25	..
ಡಿಟೋ (ದುಯಂ)	..	25	..	12	..
ಡಿಟೋ (ಸಿಯಂ)	.	20	..	8	..
ಡಿಟೋ (ಚಹರಂ)	..	7	..	7	..
ಜಜ್ಜು (ಅವ್ವಲ್)	..	50	...	25	..
ಡಿಟೋ (ದುಯಂ)	..	40	15	15	..
ಬಗರದದ್ದು	..	5	..	12	..
ಐರ್ ಬಗರು	..	5	..	14	..
ಚಿರಿಯಾ	..	5	..	5	..
ಐರ್ ಚಿಲ್ಟ (ಅವ್ವಲ್)	..	4	..	6	..
ಡಿಟೋ (ದುಯಂ)	..	6	..	6	10
ಹತ್ರಿ ಚಿಲ್ಟ	..	1	..	2	10
ಗರಗಸ ಬುಕಣಿ	..	1	..	..	10
ಮಿಲ್ವ ಚಿಲ್ಟ	..	30	..	50	..
ಬಸೋಲಾ ಬುಕಣಿ	..	7	..	10	..
ಚೀಗು ಮಿಲ್ವ	..	..	..	5	..
ಕಳದವರುಷದ ಜಡಾ	..	113	15	12	15
ಸ್ಪೆಷಲ್ ಕ್ಲಾಸ್	..	..	10	...	..
ಟೋಟಲ್	..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಗೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮುರ್ಕ್ಕಂ 15230.—ಆರ್. ಎಫ್. 155—92ನೇ ನಂಬರ ರೂಲ್ಸುಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿಕೆ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಇತರ ಆಫಿಸರಿಂದ ಆಗಲಿ ಶೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಚಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ ಆಫಿಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ ಮೊಬಲಗಿಗಾಗಿ ಟ್ರೆಜರೀ ಆಫಿಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದೀಯನ್ನ 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟ ಆಫಿಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ ಆಫಿಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ ಆಫಿಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರಜಿಸ್ಟರ್ ಲಕೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫಿಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರ್ನೆಸೀ ನೋಟುಗಳು ಡಿಪಾಜಿಟ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫಿಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಶೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಇಲ್ಲದ ರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫಿಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ ಆಫಿಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ ಇನ್ಸ್ಪೆಕ್ಟರ ಜನರಲ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ ಇನ್ಸ್ಪೆಕ್ಟರ ಜನರಲಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ಉಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ ಇನ್ಸ್ಪೆಕ್ಟರ ಜನರಲಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಶೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಎಂದಿಗೂ ಎಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಶೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫಿಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫಿಸರವರು ಆಯಾ ಸಂಬಂಧಪಟ್ಟ ಫಾರೆಸ್ಟ ಆಫಿಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ ಇನ್ಸ್ಪೆಕ್ಟರ ಜನರಲಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ಒಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ ಆಫಿಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ ಹಾಜರಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯು ವಜಾ ಮಾಡಲ್ಪಡತಕ್ಕದ್ದು. ವಿನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫಿಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೆ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ವಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀ

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡೆದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲವಾದಾಗ್ಯೆ ಲಾಟುಗಳನ್ನು ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್ನುಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು, ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ನ ಒಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಪ್ಟಿ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ನ ವಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿ ದಾರನಿಗೆ 10 ದಿನಗಳ ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೊಡ್ಲಿ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನು ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನು ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್‌ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜು ಆಫೀಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟ ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಶೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು, ಅಥವಾ ರೇಂಜ್ ಇನ್‌ಛಾರ್ಜ್ ಫಾರೆಸ್ಟ್ ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಇಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜ್ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಜವಾಬ್ದಾರಿ ಮೇಲೆ ಖರೀದಿಗೆ ತೆಗೆದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್.

ಕೋಲಾರ್ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮಾ.

ತಾರೀಖು 2ನೇ ನವೆಂಬರ್ 1896ನೇ ಇಸವಿ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟು, ಚಿಕ್ಕಬಳ್ಳಾಪುರ ತಾಲ್ಲೂಕು, ನಂದೀ ಸ್ಟೇಟ್ ಫಾರೆಸ್ಟಿನಲ್ಲಿ (ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರದ ರಸ್ತೆಗೆ ದಕ್ಷಿಣ ಪ್ರದೇಶದಲ್ಲಿರುವ) ಬಿದರುಗಳನ್ನು 1897ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು 1898ನೇ ಇಸವಿ ಜೂನ್ ಆಖೈರುವರಿಗೂ ಅಂದರೆ 18 ತಿಂಗಳು ವರಿಗೂ ಕಡದು ಸಾಗಿಸಿಕೊಳ್ಳತಕ್ಕ ಹಕ್ಕುದಾರಿಯು 1896ನೇ ಇಸವಿ ಡಿಸೆಂಬರು ತಿಂಗಳು 15ನೇ ತಾರೀಖು ಮಧ್ಯಾಹ್ನ 12 ಘಂಟೆ ಸಮಯದಲ್ಲಿ ನಂದೀಮೊಕ್ಕಾಂನಲ್ಲಿ ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಹರಾಜು ಮಾಡಲ್ಪಡುತ್ತೆ.

2. ಹರಾಜು ಫಾರೆಸ್ಟು ಇಲಾಖಾ ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

3. ಖಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ಠೇವಣಿ ಕಟ್ಟತಕ್ಕದ್ದು. ಇದಕ್ಕೆ ತಪ್ಪಿದರೆ ಅವನನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜು ಮಾಡಲ್ಪಡುವದು; ಆದರೆ, ಅದರಿಂದ ಉಂಟಾಗುವ ಆದಾಯದಲ್ಲಿ ಸದರೀ ಯವನಿಗೆ ಏನೂ ದೊರಿಯಲಾರದು. ಬಾಕಿ ಕೊಡಬೇಕಾದ ಮುಕ್ಕಾಲು ಹಿಸ್ಸೆಯನ್ನು ಮೂರು ಸಮ ಕಿಸ್ತಿನಲ್ಲಿ ಅಂದರೆ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿಮಾಡತಕ್ಕದ್ದು. ಯಾವ ಕಿಸ್ತನ್ನಾಗಲಿ ವಾಯಿದೆಗೆ ಸರಿಯಾಗಿ ಪಾವತಿ

633

ಮಾಡಲು ತಪ್ಪಿದರೆ ಕಂಟ್ರ್ಯಾಕ್ಟು ರದ್ದು ಮಾಡಲ್ಪಡುವದಲ್ಲದೆ, ಕಂಟ್ರ್ಯಾಕ್ಟರು ಕತರಾವಣೆಮಾಡಿ ಜಮಾಯಿಸಿರುವ ಬಿದರುಗಳನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲಾಧೀತು. ಮತ್ತು ಇವನಿಂದ ಬರಬೇಕಾದ ಕಂಟ್ರ್ಯಾಕ್ಟು ಹಣದ ಬಾಕಿಯನ್ನು ರೆವಿನ್ಯೂ ಕಂದಾಯದಂತೆ ಭಾವಿಸಿ ವಸೂಲ್ಮಾಡಲಾಧೀತು.

ಖಿಸ್ತುಗಳು.			ತಾರೀಖು.
I	..	..	1ನೇ ಮಾರ್ಚಿ 1897ನೇ ಇಸವಿ.
II	..	..	1ನೇ ಸೆಪ್ಟಂಬರ 1897ನೇ ಇಸವಿ.
III	..	..	5ನೇ ಜನವರಿ 1998ನೇ ಇಸವಿ.

4. ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿಯನ್ನು ಕಂಟ್ರ್ಯಾಕ್ಟರಿಗೆ ತಿಳಿಯಪಡಿಸಿದ ಕೂಡ್ಲೆ ಇವನು ಮೇಲ್ಕಂಡ ಮತ್ತು ಈ ಕೆಳಗೆ ವಿವರಿಸಲ್ಪಟ್ಟ ಷರತ್ತುಗಳ ಕಂಡು ನಡದು ಕೊಳ್ಳತಕ್ಕ ಬಗ್ಯೆ ಛಾಪಾ ಕಾಗದದಲ್ಲಿ ಒಂದು ಮುಚ್ಚಳಿಕೆಯನ್ನು ಬರದು ಕೊಡತಕ್ಕದ್ದು.

5. ಹರಾಜು ಮಾಡಲ್ಪಡುವ ಪ್ರದೇಶದಲ್ಲಿ ಇರುವ ಒಣ ಬಿದರುಗಳನ್ನೆಲ್ಲಾ ಕಂಟ್ರ್ಯಾಕ್ಟರು ಕತರಾವಣೆ ಮಾಡಿ ಅಥವಾ ಬೇರು ಸಹಿತ ಕಿತ್ತು ಸಾಗಿಸಿಕೊಂಡು ಹೋಗಬಹುದು, ಆದರೆ ಹಸೀ ಬಿದರಗಳನ್ನು ಕಡಿಯುವದರಲ್ಲಿ ಪ್ರತಿ ಯೊಂದು ಪೊದೆಯಲ್ಲಿಯೂ ಎಂಟು ಹಸೀ ಬಿದರುಗಳನ್ನು ಬಿಟ್ಟು ಮಿಕ್ಕವುಗಳನ್ನು ಸಾಧ್ಯವಾದ ಮಟ್ಟಿಗೂ ಭೂ ಮಟ್ಟಕ್ಕೆ ಸರಿಯಾಗಿ ಕಡಿಯತಕ್ಕದ್ದು.

6. ಫಾರೆಸ್ಟ್ ಇಲಾಖೆಯವರು ಮುಂಚಿತವಾಗಿ ಗುರ್ತು ಮಾಡಿಕೊಡುವ 100—200 ಎಕರೆ ವಿಸ್ತೀರ್ಣವುಳ್ಳ ಪ್ರತಿ ಯೊಂದು ಬ್ಲಾಕಿನಲ್ಲಿಯೂ ಒಂದು ಪ್ರದೇಶದಿಂದ ಪ್ರಾರಂಭಮಾಡಿ ಕ್ರಮವಾಗಿ ಕತರಾವಣೆಮಾಡಿಕೊಂಡು ಹೋಗಬೇಕೆ ಹೊರ್ತು ಯಾವ ಕಾರಣದಿಂದಲೇ ಯಾಗಲಿ ಜಂಗಲಿನ ಎಲ್ಲಾ ಪ್ರದೇಶದಲ್ಲಿಯೂ ಏಕಕಾಲದಲ್ಲಿ ಮನಸ್ವೀ ಕತರಾವಣೆ ಮಾಡಕೂಡದು.

7. ಕತರಾವಣೆ ಮಾಡಿದ ಪ್ರದೇಶದಿಂದ ಬಿದರುಗಳನ್ನು ರಫ್ತು ಮಾಡುವದಕ್ಕೆ ಮೊದಲೆ ಪ್ರತಿಯೊಂದು ಗಾಡಿಗೂ ಫಾರೆಸ್ಟ್ ಇಲಾಖೆಯವರಿಂದ ಒಂದು ವೇ ಪರಮಿಟ್ ಪಡಿಯತಕ್ಕದ್ದು. ವೇ ಪರಮಿಟ್ ಇಲ್ಲದ ಭರ್ತಿಗಾಡಿಗಳನ್ನು ಫಾರೆಸ್ಟು, ಪೊಲೀಸ್ ಅಥವಾ ರೆವಿನ್ಯೂ ನವುಕರರು ತಡೆ ಮಾಡಬಹುದು.

8. ಕಂಟ್ರ್ಯಾಕ್ಟರಿಗೆ ಇಷ್ಟವಿದ್ದಲ್ಲಿ ಒಣ ಬಿದರುಗಳಿಂದಲಾಗಲಿ ಅಥವಾ ಅವುಗಳ ಬೇರುಗಳಿಂದಲಾಗಲಿ ಮಳೆಗಾಲದಲ್ಲಿ ಇದ್ದಲು ಸುಡುವದಕ್ಕೆ ಅಪ್ಪಣೆ ಕೊಡಲಾಧೀತು.

9. ಪ್ರತಿಯೊಂದು ಬ್ಲಾಕಿನಲ್ಲಿಯೂ ಕತರಾವಣೆ ಮಾಡುವ ಬಿದರುಗಕನ್ನು ತಲೆಕೊಂಬೆ ಮತ್ತು ರಂಬೆಗಳನ್ನು ಸಹ ಮತ್ತೊಂದು ಬ್ಲಾಕು ಗುರ್ತು ಮಾಡಲ್ಪಡುವದಕ್ಕೆ ತತ್ಪೂರ್ವವೆ ಫಾರೆಸ್ಟಿನಿಂದ ಹೊರಗೆ ಸಾಗಿಸತಕ್ಕದ್ದು. ತಪ್ಪಿದರೆ ಬಿಡಲ್ಪಟ್ಟ ಬಾಬನ್ನು ಸರ್ಕಾರದ ಫಾಯಿದೆ ಮೇಲೆ ನಿಗಾಯಿಟ್ಟು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಗೆ ಯುಕ್ತ ತೋರಿದ ರೀತಿಯಲ್ಲಿ ವಿಲೇವಾರಿ ಮಾಡಲು ಅವರು ಸ್ವತಂತ್ರರಾಗಿರುತ್ತಾರೆ.

ಬಿ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ.

ತುಮಕೂರು ಡಿಸ್ಟ್ರಿಕ್ಟು.

ಫಾರೆಸ್ಟು ಡಿಪಾರ್ಟ್ಮೆಂಟ.

ಸರ್ 1896ನೇ ಇಸವಿ ನವಂಬರು ತಾರೀಖು 8ರಲ್ಲು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು, ಮಧ್ದಗಿರಿ ಡಿಪೋಗಳಲ್ಲಿಯೂ, ಗುಬ್ಬಿ ತಾಲ್ಲೂಕು ಚನ್ನಶೆಟ್ಟಹಳ್ಳಿ ನಿಟಿಗುಂಟ ಪ್ಲಾಂಟೇಷನ್ಗಳಲ್ಲಿಯೂ; ಕೆಳಗೆ ನಮೂದಿಸಿರತಕ್ಕ ತಾರೀಖು ಮತ್ತು ಸ್ಥಳಗಳಲ್ಲಿ ಸಾಮಾನುಗಳನ್ನು ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜ್ ಮಾಡಲ್ಪಡುತ್ತೆ.

ತುಮಕೂರು ಡಿಪೋ 11ನೇ ಡಿಸೆಂಬರ 1896ನೇ ಇಸವಿ.

ತರಹೆ.		ನಂಬರ.	ಸಲೆ.			ಮಣ.	ಸೇರು.	
			ಅಡಿ.	ಅಂಗುಲ.	ಸೆಂಟ್ಸ.			
ಜೇನುತುಪ್ಪ	..	..	..	..	..	51	27	
ಜೇನು ಮೇಣ	..	..	..	..	..	7	..	
ತ್ಯಾಗದ ತೀರುಗಳು	..	171	208	7	6	..	..	
ಕ್ಯಾಸರೀನ ತೀರುಗಳು	..	983	1737	3	3	..	..	

ಮದ್ದಗಿರಿ ಡಿಪೋ 15ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಳಿ.			ಮಣ.	ಸೇರು.
		ಅಡಿ.	ಅಂಗುಲ.	ಸೆಂಟ್ಸ್.		
ಜೇನುತುಪ್ಪ ..	..	..	..	..	29	1
ಜೇನು ಮೇಣ ..	..	..	..	..	4	21
ತ್ಯಾಗದ ತೀರುಗಳು ..	299	280	10	3	..	..

ಗುಬ್ಬಿ ತಾಲ್ಲೂಕು ಚನ್ನಸಟ್ಟಹಳ್ಳಿ, ನಿಟಗುಂಟ ಪ್ಲಾರ್ಟೇಷನ್, 21ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಳಿ.			ಷರಾ.
		ಅಡಿ.	ಅಂಗುಲ.	ಸೆಂಟ್ಸ್.	
ಕ್ಯಾಸರೀನ ತೀರುಗಳು ..	1841	..	..	..	ನಿಂತಿರುವ ವಣ ಮರಗಳು.

ಷರತ್ತುಗಳು.—ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಹರಾಜು ಖೈದಾದ ಕೂಡ್ಲೆ ಕಾಲು ಹಿಸ್ಸೆ ಮೊಬಲಗು ಠೇವಣಿ ತರೀಕ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ಹರಾಜು ತಾರೀಖು ಲಾಗಾಯತು ಒಂದು ವಾರದ ವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೇ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜುದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳನ್ನೆಲ್ಲಾ ಹಣ ಪಾವತಿ ಮಾಡಿದ ತಾರೀಖು ಲಾಗಾಯತು 5 ದಿವಸಗಳೊಳಗಾಗಿ ಸಾಗಿಸಿಕೊಳ್ಳಬೇಕು. ಪ್ಲಾರ್ಟೇಷನ್‌ಗಳಲ್ಲಿ ವಣಗಿ ನಿಂತಿರುವ ಕ್ಯಾಸರೀನ ಮರಗಳು ಗುರ್ತು ಮಾಡಿ ನಂಬರು ಹಾಕಲ್ಪಟ್ಟಿರುತ್ತವೆ. ಖರೀದಿದಾರನು ಗುರ್ತು ಮಾಡಿರುವ ವಣ ಮರಗಳನ್ನ ಮಾತ್ರವೇ ಕಡಿದು 1896ನೇ ಇಸವಿ ಡಿಸೆಂಬರ್ ಆಖೈರ್ ವಳಗಾಗಿ ಸದರೀ ಮರಗಳನ್ನ ಪ್ಲಾರ್ಟೇಷನ್‌ಗಳ ಹದ್ದು ಬಿಸ್ತು ಹೊರಭಾಗದಲ್ಲಿರುವ ಫೈರ್‌ಲೈನ್ ಪ್ರದೇಶಕ್ಕೆ ಸಾಗಿಸಬೇಕು. ತರುವಾಯ ಆ ಮರಗಳು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಅಜಮಾಯಿಷಿ ಆದ ನಂತರ ಅವಶ್ಯಕವಾದ ರಹದಾರಿ ನಿಶಿ 1897ನೇ ಇಸವಿ ಜನವರಿ 15ರ ವಳಗಾಗಿ ಸಾಗಿಸಬೇಕು. ಖರೀದೀದಾರನಾಗಲಿ ಅಥವಾ ಅವನ ಕಡೆ ಜನಗಳಾಗಲಿ ಯಾವ ವಿಧವಾದ ಅಕ್ರಮ ನಡಸಿದ್ದೇ ಆದರೆ ಖರೀದಿಗೆ ಪಡದುಕೊಂಡಿರತಕ್ಕ ಮರಗಳನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ 1878ನೇ ಇಸವಿ ಮೈಸೂರ್ ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನ್ ಪ್ರಕಾರ ಕ್ರಿಮಿನಲ್ ಶಿಕ್ಷೆಗೆ ಖರೀದಿದಾರನ್ನ ಗುರಿಮಾಡಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಮದ್ದಗಿರಿ ಸಬ್ ಡಿವಿಜನ್ ಮುನಸಿಫ್ ಕೋರ್ಟಿನಿಂದ.
ಸರ್ 1894—95ನೇ ಇಸವಿ ಶಿವಿಲ್ ಒರಿಜನಲ್ ನಂಬರ್ 418.

ಮುನಸೀಫ್ ಡಿ. ಯಂ. ನರಸಿಂಗರಾವ್ ಯಸ್ಕ್ವಯರ್, ಬಿ. ಎ. ಬಿ. ಎಲ್. ರವರ ರೂಬರೂಬ್.

ವಾದಿಗಳು.	ಪ್ರತಿವಾದಿ.
ಶಿರಾ ಕಸಬಾದಲ್ಲಿರುವರು 1ನೇ ಅಕ್ಬರಸಾಬಿ. 2ನೇ ಇಮಾಮು ಮೊಹರ್ದಿನ್‌ಸಾಬಿ. 3ನೇ ಉಸುಮಾನ್‌ಸಾಬಿ. 4ನೇ ಅಕ್ಬರ್‌ಖಾನ್. 5ನೇ ಹೈದರಸಾಬಿ.	ಶಿರಾದಲ್ಲಿರುವ ರಾಜಾಅಹಮದ್ ಸಾಬಿ.

ಶಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ತುಮಕೂರು ಡಿಸ್ಟ್ರಿಕ್ಟ್ ಶಿರಾ ತಾಲ್ಲೂಕು ಶಿರಾ ಕಸಬಾದಲ್ಲಿರುವ ಮಂಗಳವಾರಪೇಟೆಯಲ್ಲಿ ಪೂರ್ವಕ್ಕೆ ಆದ್ಯಪ್ಪನ ಮನೆ, ಪಶ್ಚಿಮಕ್ಕೆ ಶೀತುವೆನೀರು ಹೋಗುವನಾಲಾ, ಉತ್ತರಕ್ಕೆ ತಿರಗಾಡುವ ದಾರಿ, ದಕ್ಷಿಣಕ್ಕೆ ಹೈರೋಡ್ ಈ ಮಧ್ಯೆ ಇರುವ ನಿವೇಶನದಲ್ಲಿ ಮಹಂಮದಿ ಜಾತಿಜನಗಳು ಬಾರಾಯಿಮಾನು ಪಂಜಾ ಕೂಡಿಸುವ ಆಷರ್‌ಖಾನ ಜಾಗಕ್ಕೆ ಸಂಬಂಧಪಟ್ಟದ್ದೆಂತಲೂ (*b*) ಇತರರು 1ನೇ ಪ್ರತಿವಾದಿಗೆ ಕ್ರಯ ಮಾಡಲು ಯಾವ ವಿಧವಾದ ಹಕ್ಕೂ ಇಲ್ಲವೆಂತಲೂ (*c*) ಪ್ರತಿವಾದಿಯು ಇತರ ಜನಗಳಿಂದ ಪಡದು ಇರುವ ಕ್ರಯಸಾಧನದಂತೆ ಹೊಂದಿರುವ ಡಿಕ್ರಿಯು ಮತ್ತು ಕ್ರಯಪತ್ರವು ಅಸಿದ್ಧವಾಗಿರತಕ್ಕದೆಂತಲೂ (*d*) ಈ ಪ್ರತಿವಾದಿ ಯಿಂದ ವಾದಿಗಳು ಪೂರ್ವದಂತೆ ದಾವಾ ನಿವೇಶನವನ್ನ ತಮ್ಮ

ಹಕ್ಕು ಸ್ಥಾಪನೆಯಿಂದ ಸ್ವಾಧೀನ ಮಾಡಿಕೊಂಡು ಅವಿಚ್ಛಿನ್ನವಾಗಿ ಸದರೀ ಪಂಜಾ ಕೊಡಿಸಲು ವಾದಿಗಳು ಅನುಸರೆಂತಲೂ ಮೇಲ್ಕಂಡ ವಾದಿಗಳು ಈ ಕೋರ್ಟಿನಲ್ಲಿ ದಾವೆ ಮಾಡಿಧಾರೆ.

ಈ ದಾವಾಕ್ಕೆ ಕಕ್ಷಿಗಾರರಾಗಿ ಶೇರಲಪೇಕ್ಷೆ ಇರುವ ದರೋಬಸ್ತು ಜನಗಳು ಈ ಮೊಕದ್ದಮೆ ಹಿಯರಿಂಗ್ ಯಿಟ್ಟು ಇರುವ 1896ನೇ ಇಸವಿ ಡಿಸೆಂಬರ 10ನೇ ತಾರೀಖು ದಿವಿ 11 ಘಂಟೆಗೆ ಮದ್ದಗಿರಿ ಮೊಕ್ಕಾಂ ನಮ್ಮ ಕೋರ್ಟು ರೂಬರೂಬ್ ಹಾಜರಾಗತಕ್ಕದ್ದಿಧೆ.

ತಾರೀಖು 13ನೇ ನವಂಬರ 1896ನೇ ಇಸವಿ.

ಡಿ. ಯಂ. ನರಸಿಂಗರಾವ್,
ಮುನ್ಸಿಫ್.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ಸನ್ 1896—97ನೇ ಸಾಲಿಗೆ (ಅಂದರೆ 1896ನೇ ಜುಲೈ ಗುರ್ರ್ಯ ಲಾಗಾಯತು 1897ನೇ ಜೂನ್ 30ರ ವರಿಗೆ) ಮದ್ದಗಿರಿ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಮದ್ದಗಿರಿ ತಾಲ್ಲೂಕು ಕಚೇರಿಯಲ್ಲಿ 1896ನೇ ಡಿಸೆಂಬರ 28ನೇ ತಾರೀಖಿನ ಬೆಳಿಗ್ಯೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರರು ಅಥವಾ ಶಿರಸ್ತೇದಾರರು ಹರಾಜು ಮಾಡಿಸುತ್ತಾರೆ.

3. ಖಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು; ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಖಡಸವಾಲ್ದಾರರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಅಮಲ್ದಾರರಿಂದ ಖಡಸವಾಲ್ದಾರರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಖಡಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಯಂತಾಗುವ ಲೋಕಲ್‌ಸೆಸ್ ದೇಖಿಲ್ ಖಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಯಿಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಹಾಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡದಿದ್ದರೂ ಅಥವಾ ಬಾಕಿ ಮೊಬಲಗು ಪಾವತಿ ಮಾಡದಿದ್ದರೂ ಸದರೀ ಹಕ್ಕುದಾರಿಯು ಖಡಸವಾಲ್ದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಟ್ಟು ಪುನಹ ವಿಕ್ರಯಿಸಲ್ಪಡುತ್ತೆ.

6. ಇಜಾರದಾರರು ಹಿಡುವಳಿ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರದಾರರ ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರರ ಆಕ್ಷೇಪಣೆ ತರವೇನು ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನು ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಯಿಷ್ಟುಮಣ ಕಲ್ಲುಗಳು ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲುಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್ದಾರರಿಂದ ಮಾಫಿ ಲೈಸೆನ್ಸನ್ನು ಪಡಿಯದೆ ಕಲ್ಲುಗಳನ್ನು ಇಜಾರೇದಾರರು ಸಾಗಿಸಕೂಡದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಅರ್ಜೀ ನಂಬರ 181.

ಅರ್ಜೀದಾರ ಅರಶೀಕೆರೆ ತಾಲ್ಲೂಕು ಕಸಬಾ ಹೋಬಳಿ ದುಮ್ಮೇನಹಳ್ಳಿ ಗ್ರಾಮದಲ್ಲಿರುವ ಶಿವಾಚಾರದ ಚಿಕ್ಕರಾಮೇಗವುಡನ ಮಗ ಪಟೇಲ್ ರಾಮಜ್ಜೇಗವುಡರು ಮೈನರಾದ ಸದರೀ ಸ್ಥಳದ ರಾಮಾ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರಾಮಾಗೆ ಅಜ್ಜ ಆಗಬೇಕೆಂಬ ಹಕ್ಕಿನ ಮೇಲೆ ಸದರೀ ದುಮ್ಮೇನಹಳ್ಳಿ ಗ್ರಾಮದ ಸ್ಥಳದ ಪಟೇಲ್ ರಾಮಜ್ಜೇಗವುಡರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1896ನೇ ಇಸವಿ ಡಿಸೆಂಬರ ತಾರೀಖು 14ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ ಕೊಡಲಾಗಿಧೆ.

1896ನೇ ಇಸವಿ ನವಂಬರ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1896—97ನೇ ಇಸವಿ ಅರ್ಜೀ ನಂಬರ 189.

ಮೃತಪಟ್ಟ ಚಿಕ್ಕಪದ್ಮಣ್ಣ ಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಪುಟ್ಟಸ್ವಾಮಿ ಶೆಟ್ಟರು ಮೃತಪಟ್ಟ ಸದರೀ ಚಿಕ್ಕಪದ್ಮಣ್ಣ ಶೆಟ್ಟರಿಗೆ ತಮ್ಮ ಆಗಬೇಕೆಂಬ ಹಕ್ಕುದಾರ ಮೇಲೆ ಹೆಗ್ಗಡದೇವನಕೋಟೆ ತಾಲ್ಲೂಕು ಕಸಬಾ ಸರಗೂರು ಸ್ಥಳದ ಸದರೀ ಪುಟ್ಟಸ್ವಾಮಿ ಶೆಟ್ಟರು ಸದರೀ ವಾಸಸ್ಥರಾಗಿ ಮೃತಪಟ್ಟ ಚಿಕ್ಕಪದ್ಮಣ್ಣಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 1000 ರೂ. ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

-ಸದರೀ ದರಖಾಸ್ತುದಾರರಾದ ಪುಟ್ಟಸ್ವಾಮಿಶೆಟ್ಟರ ಅರ್ಜಿಯನ್ನು 1896ನೇ ಇಸವಿ ಡಿಸೆಂಬರ್ ತಿಂಗಳ ತಾರೀಖು 14ರಲ್ಲು ಸೇಲಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಚಾರಣೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಪದ್ಮಣ್ಣ ಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಅರ್ಜೀ ನಂಬರ್ 202.

ಮೃತಪಟ್ಟ ಕಾವೇರಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಅಮ್ಮಣ್ಣಮ್ಮ ಪುರಫ್ ಮಹ ಲಕ್ಷ್ಮಮ್ಮನು, ಮೃತಪಟ್ಟ ಸದರೀ ಕಾವೇರಮ್ಮನವರಿಗೆ ತಂಗಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲಾ ಸ್ಥಳದ ಸದರೀ ಅಮ್ಮಣ್ಣಮ್ಮಪುರಫ್ ಮಹ ಲಕ್ಷ್ಮಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ಕಾವೇರಮ್ಮನವರ ಜೆಂದಗಿ ಬಗ್ಗ್ಯಾಗಿ ಬರತಕ್ಕ 200 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟಬಗ್ಗೆ ಈ ಕೋರ್ಟಿಗೆ ಬಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಮ್ಮಣ್ಣಮ್ಮಪುರಫ್ ಮಹಾಲಕ್ಷ್ಮಮ್ಮನವರ ಅರ್ಜಿಯನ್ನು ಸನ್ 1896ನೇ ಇಸವಿ ಡಿಸೆಂಬರ್ ತಿಂಗಳ ತಾರೀಖು 4ರಲ್ಲು ಸೇ. ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಚಾರಣೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾವೇರಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ನವಂಬರ್ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಂ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್ಲು,
ಡಿಸ್ಟ್ರಿಕ್ಟು ಜಡ್ಜ್.

ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟು ಇಲಾಖಾ.

ಇಸ್ತಿಹಾರ್‌ನಾಮೆ.

ಸನ್ 1896ನೇ ಇಸವಿ ಅಕ್ಟೋಬರ್ ತಾರೀಖು 24ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಗುಂಡ್ಲು ತಾಲ್ಲೂಕು ಬೇರಂಬಾಡಿ ಮತ್ತು ಬಂಡಿಪುರದ ಜಂಗಲ್‌ಗಳಲ್ಲಿ ವಣ ಚೌಬೀನೆಯನ್ನು ಖರೀದಿಗೆ ಪಡಿಯಲು ಯಿಷ್ಟವುಳ್ಳವರು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಗೆ ಆಗಲಿ ಅಥವಾ ಗುಂಡ್ಲು ರೇಂಜಾಫಿಸರಿಗಾಗಲಿ ದರಖಾಸ್ತುಗಳನ್ನು ಕೊಡಬಹುದು.

2. ದರಖಾಸ್ತುದಾರ ಸದರೀ ಚೌಬೀನೆಯನ್ನು ಜಂಗಲ್‌ಗಳಲ್ಲಿ ತಯಾರು ಮಾಡಿಸಿ ಸಾಗಿಸಿಕೊಳ್ಳಬೇಕು. ಮತ್ತು ಈ ಭಾಗದಲ್ಲಿ ಜಾರಿಯಲ್ಲಿರುವ ರೂಲ್ಸಿಗಳಿಗೆ ಬದ್ಧನಾಗಿರತಕ್ಕದ್ದು.

3. ಈ ಚೌಬೀನೆಗಳು ಮೈಸೂರು ಉಡ್ಡ್ ಯಾರ್ಡ್ ಮತ್ತು ಗುಂಡ್ಲು ಡಿಪೋ ದರಗಳಂತೆ ಆಯಾಯ ಜಂಗಲ್ ತಯಾರಿ ಮತ್ತು ಲದ್ಗೈ ಛಾರ್ಜು ಜಾತಾ ಬಿಕರಿ ಮಾಡಲ್ಪಡುತ್ತವೆ.

4. ಖರೀದಿಗೆ ಪಡಿಯಲೂ ಇಷ್ಟವುಳ್ಳವರು ಈ ವಿಷಯವಾಗಿ ಜಾಸ್ತೀ ತಪ್ಸೀಲ್ ತಿಳಿಯಬೇಕೆಂದು ಕುತೂಹಲವಿದ್ದಲ್ಲಿ ಗುಂಡ್ಲು ರೇಂಜಾಫಿಸರಿಗೆ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಗೆ ಅರ್ಜಿ ಗುಜರಾಯಿಸಿ ಕೊಳ್ಳಬಹುದಾಗಿರುತ್ತೆ.

ಎಂ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ನಗರದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರು 108.

ಅರ್ಜೀದಾರ ಸಾಗರದ ತಾಲ್ಲೂಕು ಕರೂರು ವಾಸಸ್ಥ ರಾಮಣ್ಣ ಎಂಬವರು ಮೈನರಾದ ಸಾಗರ ತಾಲ್ಲೂಕು ಕರೂರು ಸ್ಥಳದ ಸೂರಪ್ಪ, ಸುಬ್ಬಮ್ಮ ಇವರ ಆಸ್ತಿವಿಷಯದಲ್ಲಿ—

ಸದರೀ ಮೈನರಾದ ಸೂರಪ್ಪ, ಸುಬ್ಬಮ್ಮ ಇವರಿಗೆ ಅಣ್ಣನು ಆಗಬೇಕೆಂಬ ಹಕ್ಕಿನ ಮೇಲೆ ಸಾಗರ ತಾಲ್ಲೂಕು ಕರೂರು ಸ್ಥಳದಲ್ಲಿದ್ದ ಸೂರಯ್ಯನ ಅಯ್ಯಪ್ಪನ ಮಗನಾದ ಕರೂರು ರಾಮಣ್ಣನು ಸದರೀ ಮೈನರರ ಆಸ್ತಿ ಕಾಪಾಡುವದಕ್ಕೆ ಸರಟಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾನೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1896ನೇ ಇಸವಿ ನವಂಬರ್ ತಾರೀಖು 27ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟೀಸ್ ಕೊಡಲಾಗಿದೆ.

1896ನೇ ಇಸವಿ ನವಂಬರ್ ತಿಂಗಳ 2ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಫಾರೆಸ್ಟು ಇಲಾಖಾ.

ನೋಟಿಫಿಕೇಷನ್.

ಸನ್ 1878ನೇ ಇಸವಿ ಫಾರೆಸ್ಟು ರೂಲ್ಸ್ 37ನೇ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಬೆಂಕಿಪುರದ ಟ್ರಾವಲರಸ್ ಬಂಗ್ಲೆ ಬಳಿ ಭದ್ರಾನದಿಯಲ್ಲಿ ಈ ಕೆಳಗೆ ನಮೂದಿಸಿರುವ ನಾಟಾ ತೇಲಿಬಂದು ಸಿಕ್ಕಿ ಇರುತ್ತೆ.

ಮೇಲ್ಕಂಡ ನಾಟಾಕ್ಕೆ ಹಕ್ಕುಳ್ಳವರು ಈ ಸ್ತಿಹಾರ್ ತಾರೀಖು ಲಾಗಾಯತು ಎರಡು ತಿಂಗಳ ವಳಗಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕನ್ಸರ್ವೇಟರವರ ರೂಬರೂ ಖುದ್ದಾಗಿ ಆಗಲಿ ಅಥವಾ ಕ್ರಮವಾಗಿ ಅಧಿಕಾರ ಪಡೆದ ಮುಖ್ತಾರೀಕನ ಮೂಲಕವಾಗಲಿ ಹಾಜರಾಗಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕು. ಆ ತಾರೀಖು ನಂತರ ಬರುವ ಹಕ್ಕುದಾರಿಯನ್ನು ಅಂಗೀಕರಿಸದೆ ಸರಕಾರದ ತರಫ್ ಸದರೀ ನಾಟಾವನ್ನು ಹರಾಜು ಮಾಡಲ್ಪಡುವದು.

ನಾಟಾ ತಪಸೀಲ್.

ನಂಬರ್.	ಜಾತಿ.	ಅಳತೆ ಲಾಂಬಿ ಅಡಿ.	ಸುತ್ತಳತೆ ಅಡಿ.	ಷರಾ.
1	ಸಾಗುವಾನಿ ನಾಟಾ ..	14 ಅಡಿ, 4 ಅಂಗುಲ	7 ಅಡಿ, 8 ಅಂಗುಲ	

ಸಿ. ನಾರಾಯಣರಾವ್,
ಡೆಪ್ಯುಟಿ ಕನ್ಸರ್ವೇಟರ್.

ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು.

ಇಸ್ತಿಹಾರ್‌ನಾಮಾ.

19ನೇ ನವಂಬರ್ ಸರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಎಲಿಮೆಲಾಳು ಅಡಿಗೆಬೈಲ್ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಗ್ಯಾಗಿ ದರಖಾಸು ಬಂದಿರೋದರಿಂದ ಸರ್ 1897ನೇ ಇಸವಿ ಜನವರಿ ತಾರೀಖು 8ನೇ ಶುಕ್ರವಾರ ಹಗಲು 11 ಘಂಟೆಗೆ ಕಡೂರು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಕೊಪ್ಪ ತಾಲ್ಲೂಕು ಅಮಲ್ದಾರ್ರ ರೂಬರೂ ಹರಿಹರಪುರ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜ್ ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್ಪ್ರೈಸ್ ಯಾನೆ ನಿಯಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ ಥದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್ಸೆಟ್ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡೆದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ಮಹನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರು ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಥಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಥಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಥಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲು ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರು ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕು ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರು ಮೂರು ಸಾಲ್ ಆಕಾರ ವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ

ಸಾಗುವಳಿ ಆಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲೀ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಒರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಸೀಮೆ.	ದರಖಾಸ್ತು ಜಮಾಸಿನ,		ಷರಾ.
				ಕ್ರಮ	ಅಥವಾ	
ಯಲಹಂಕ ಹೋಬಳಿ 121ನೇ ನಂ. 33ನೇ ನಂ.	ಶ್ರೀಕಂಠ ಪುಟ್ಟಣ್ಣ ಶೆಟ್ಟರ ಸ. ಪುಟ್ಟ ಚಿಕ್ಕಣ್ಣ	ಶ್ರೀಗಂಧ ಕಾವಲ್ ಗ್ರಾಮ	ಹಾಲೀರೀ ಸರ್ವೆಯಿಂದ ಜಮೀನು ಮೇಲೆ ಹದ್ದುಬಸ್ತು ಮಾಡಿರುವಂತೆ ಬಾಂದು 6 ಕಲ್ಲು 6	100–38	100 ಅಥವಾ 150 ರೂಪಾಯಿಗಳು.	[illegible]
			ಹಾಲಿ ಸರ್ವೆಯಿಂದ ಗುರ್ತಿಸಿರುವಂತೆ ಬಾಂದು 6 ಕಲ್ಲು 6	32—2	(32 ಅಥವಾ 48)	

ತಿಳುವಳಿಕೆ ಷರಾ,—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಛಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗೂನೀಯುವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡೆಯುವದಕ್ಕೇ ಆಗಲಿ ಜಮೀನ್ ಹಿಡುವಳೀದಾರನು ಬದ್ಧನೂ ಅರ್ಹನಾಗಿರಬೇಕು.

ಟಿ. ವಿಯರ್,
ಡೆಪ್ಯುಟಿ ಕಮಿಷನರ್.

ಶಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ ನೋಟಿಸ್.
ಬೆಂಗಳೂರು ಮುನ್ಸಿಫ್ ಕೋರ್ಟು.

ಸ್ಟ 1896—97ನೇ ಇಸವಿ ಅಸಲು ನಂಬರು 358.

ವಾದಿಗಳು.

ಬೆಂಗಳೂರು ಚಿಕ್ಕಪ್ಯಾಟೆಯಲ್ಲಿರುವರು.

1 ಮತ್ತೂರು ನಾಗಪ್ಪ.

2 ಗೋಪಾಲಸ್ವಾಮಿದೇವಸ್ಥಾನದ ಅರ್ಚಕರು ಅನಂತಾಚಾರ್.

3 ಮಾನಪಲ್ಲಿ ಲಕ್ಷ್ಮೀನರಸಿಹ್ಮಶಾಸ್ತ್ರಿಗಳು.

4 ಲೇಟ್ ರಿಜಿಸ್ಟರ್ ಸುಬ್ಬಣ್ಣ.

ಪ್ರತಿವಾದಿಗಳು.

ಬೆಂಗಳೂರು ಚಿಕ್ಕಪ್ಯಾಟೆಯಲ್ಲಿರುವರು.

1 ಸೋಮಪ್ಪ.

2 ಮಾದಪ್ಪ.

ಬೆಂಗಳೂರು ಚಿಕ್ಕಪ್ಯಾಟೆಯಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಸೇರಿದ ದಾವಾ ಷೆಡ್ಯೂಲಿನಲ್ಲಿ ಕಂಡಜಮೀನನ್ನ ಪ್ರತಿವಾದಿಗಳು ಅಕ್ರಮ ಸ್ವಾಧೀನ ಪಡಿಸಿಕೊಂಡಿರುವಂತೆಯೂ, ಡಿಟೋ ಜಮೀನು ಹತ್ತೂಜನಕ್ಕೆ ಅಂದರೆ ಪಬ್ಲಿಕ್ಕಿಗೆ ಸೇರಿದ್ದಾಗಿರುತ್ತೆಂದುನ್ನು ಈ ಹತ್ತುಜನಗಳಿಗೋಸ್ಕರವಾಗಿ ತಾವುಗಳು ಈ ದಾವಾ ತಂದಿರುವದಾಗಿಯೂ ಡಿಟೋ ಹತ್ತುಜನಗಳಿಗೋಸ್ಕರವಾಗಿ ಸದರಿ ಜಮೀನನ್ನ ತಮ್ಮಗಳ ಸುಪರ್ದಿಗೆ ಬಿಡಿಸಿಕೊಡಬೇಕೆಂತಲೂ ಸಹ ಮೇಲ್ಕಂಡ ವಾದಿಗಳು ವ್ಯಾಜ್ಯ ನಡಿಸಲು ಈ ಕೋರ್ಟಿನ ಉತ್ತರವನ್ನ ಅಪೇಕ್ಷಿಸಿ ದಾವಾ ದಾಖಲ್ಮಾಡಿರುತ್ತಾರಾಗಿ ಈ ವಿಷಯದಲ್ಲಿ ಕಕ್ಷಿಗಾರರಾಗಿ ಶೇರುವದಕ್ಕೆ ಇಷ್ಟವುಳ್ಳ ಸಮಸ್ತ ಜನಗಳು ಸ್ಟ 1896ನೇ ಇಸವಿ ಡಿಸೆಂಬರು 8ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಮೊಕದ್ದಮೆ ನಡಿಸಬಹುದೆಂತ ಇದರಿಂದ ತಿಳಿಯಪಡಿಸಿರುತ್ತೆ.

ತಾರೀಖು 1ನೇ ಡಿಸೆಂಬರು 1896.
ಬೆಂಗಳೂರು.

ಬಿ. ಶ್ರೀನಿವಾಸರಾವ್.
ಮುನ್ಸೀಫ್.

ಬೆಂಗಳೂರು ಸೆಂಟ್ರಲ್ ಜೈಲ್.

ನೋಟಿಸ್.

ನೋಟಿಸ್ ಮೂಲಕ ತಿಳಿಯಪಡಿಸುವದೇನಂದರೆ.–1897ನೇ ಇಸವಿ ಫಿಬ್ರವರಿ ಗುರ್ರೇ ತಾರೀಖು ಲಾಗಾಯತು 1898ನೇ ಇಸವಿ ಜನವರಿ 31ನೇ ತಾರೀಖು ವರಿವಿಗೂ ಜೈಲಿನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಬೇಕಾದಂಥಾ ಎಲ್ಲಾ ರಖಂ ತುಪಟಗಳೂ ಮತ್ತು ಇತರ ಸಾಮಾನುಗಳನ್ನೂ ಹಾಜರು ಮಾಡಲು ಕಂಟ್ರಾಕ್ಟು ಪಡೆಯಲು ಇಷ್ಟವುಳ್ಳವರಿಂದ ಹಾಜರು ಮಾಡಲ್ಪಡುವ ಸೀಲ್ಡ್ ಕವರುನಿಸಿ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು 1897ನೇ ಇಸವಿ ಜನವರಿ 19ನೇ ಶನಿವಾರ ಬೆಳಗ್ಯೆ 10 ಘಂಟೇವರಿಗೂ ಅಂಗೀಕರಿಸುವರು.

2. ನಗದಾಗಿ 250 ರೂಪಾಯಿಗಳೇ ಆಗಲಿ ಅಥವಾ 250 ರೂಪಾಯಿಗಳಿಗೆ ತಕ್ಕ ನಡವಳಿಕೆಯಲ್ಲಿ ಇರುವ ನೋಟುಗಳನ್ನು ಆಗಲಿ ಡಿಪಾಜಿಟ್ ತರೀಕು ಹಾಜರು ಮಾಡದೇ ಇರುವಂಥಾ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

3. ದರಖಾಸ್ತುದಾರರಿಂದ ಹಾಜರು ಮಾಡಲ್ಪಡುವ ದರಖಾಸ್ತುಗಳ ಮೇಲ್ ಭಾಗದಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ "ಸಾಮಾನುಗಳು ತಯಾರಾಗತಕ್ಕ ಬಗ್ಯೆ ಬೇಕಾಗಿರುವ ಸಾಮಾನುಗಳನ್ನು ಸಪ್ಲೈ ಮಾಡತಕ್ಕ ಬಗ್ಯೆ ಕೊಟ್ಟ ದರಖಾಸ್ತು" ಎಂದು ನಮೂದಿಸಬೇಕು.

4. ಮೇಲ್ಕಂಡ ದಿನದಲ್ಲಿ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ತಮ್ಮ ಆಫಿಸಿನಲ್ಲಿ ಹಾಜರಿರುವ ದರಖಾಸ್ತುದಾರು ಯಾ ಅವರುಗಳ ಏಜಂಟುಗಳ ರೂಬರೂಬ್ ದರಖಾಸ್ತುಗಳನ್ನು ವಡದು ನೋಡುವರು.

5. ಯಾವ ದರಖಾಸ್ತನ್ನೇ ಆಗಲಿ ಕಾರಣ ನಮೂದಿಸದೆ ತಿರಸ್ಕರಿಸುವ ಅಧಿಕಾರವನ್ನು ಸೂಪರಿಂಟೆಂಡೆಂಟರವರು ವಹಿಸಿ ಇದ್ದಾರೆ.

6. ಎಲ್ಲಾ ದರಖಾಸ್ತುದಾರರೂ ಇದಕ್ಕೆ ಜಂಟಿಸಿರುವ ಫಾರಮಿನಲ್ಲಿ ಕಂಡಂತೆ ವಳ್ಳೇ ಸರಕುಗಳನ್ನು ಯಾವ ರೇಟಿನಲ್ಲಿ ಕೊಡುತ್ತಾರೋ ಅವುಗಳನ್ನು ತಮ್ಮ ದರಖಾಸ್ತಿನಲ್ಲಿ ನಮೂದಿಸಬೇಕು.

7. ಕಂಟ್ರಾಕ್ಟು ಯಾರ ಹೆಸರಿಗೆ ಮಂಜೂರಾಗುತ್ತೋ ಅವರಿಂದ ಹಾಜರ್ಮಾಡಲ್ಪಟ್ಟ ಡಿಪಾಜಿಟ್ ಮೊಬಲಗನ್ನು ವಾಪಸು ಕೊಡುವದಿಲ್ಲ. ಮತ್ತು ಸದರೀ ಯವರ ಕಂಟ್ರಾಕ್ಟು ಮಂಜೂರು ಮಾಡಲ್ಪಟ್ಟಿದೆ ಎಂದು ಅವರಿಗೆ ತಿಳಿಸಿದ ಒಂದು ವಾರದೊಳಗಾಗಿ ಕಂಟ್ರಾಕ್ಟ ಬಾಂಡು ಬರದು ಕೊಡದೇ ಹೋದರೂ ಅಥವಾ ಜಾಮೀನ್ ತರೀಕ್ ನಗದು 500 ರೂಪಾಯಿ ಅಥವಾ ಅದಕ್ಕೆ ತಕ್ಕ ಸರಕಾರದ ಬಾಂಡುಗಳನ್ನೇ ಆಗಲಿ ಹಾಜರು ಮಾಡದೇ ಹೋದರೂ ಡಿಟ್ಟೋ ಡಿಪಾಜಿಟ್ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

8. ಯಾವ ಮೊಬಲಗೂ ಅಡ್ವಾನ್ಸ್ ತರೀಕ್ ಕಂಟ್ರಾಕ್ಟುದಾರನಿಗೆ ಪ್ರತಿ ತಿಂಗಳಲ್ಲೂ ದೊರೆಯಲಾರದು. ಪ್ರತಿ ತಿಂಗಳಲ್ಲೂ ಕಂಟ್ರಾಕ್ಟುದಾರನಿಂದ ಹಾಜರು ಮಾಡಲ್ಪಟ್ಟ ಸಾಮಾನುಗಳ ಕ್ರಯವನ್ನು ಸೂಪರಿಂಟೆಂಡೆಂಟರವರು ಗುರ್ರೇ ತಾರೀಖು ಕಳದ ನಂತರ ಸಾಧ್ಯವಾದ ಮಟ್ಟಿಗೆ ಜಾಗ್ರತೆಯಾಗಿ ಕೊಡುವರು.

9. ಕಂಟ್ರಾಕ್ಟನ್ನು ಷಿಕಮೀ ಕಂಟ್ರಾಕ್ಟಾಗಿ ಕೊಡಕೂಡದು.

10. ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಷರತ್ತು ಮೇರೆ ನಡಿಯದೇ ತಪ್ಪಿದರೂ ಅಥವಾ ಕಮ್ಮಿ ರಖಂ ಸಾಮಾನುಗಳನ್ನು ಹಾಜರು ಮಾಡಿದರೂ, ಜೈಲ್ ಸೂಪರಿಂಟೆಂಡೆಂಟರವರು ಮುನಾಸಬ್ ಮೇರೆ 30 ರೂಪಾಯಿಗಳವರಿಗೂ ಜುರ್ಮಾನೇ ವಿಧಿಸಬಹುದು. ಹೀಗೆ ಪದೇ ಪದೇ ಮಾಡಿದರೆ ಕಂಟ್ರಾಕ್ಟನ್ನು ವಜಾಮಾಡಿ ಜಾಮೀನ್ ತರೀಕ್ ಕೊಟ್ಟ ಮೊಬಲಗನ್ನು ಸರಕಾರಕ್ಕೆ ತೆಗೆದುಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನು ಷರತ್ತಿಗೆ ವಿರೋಧವಾಗಿ ನಡೆದುಕೊಂಡರೆ ಆ ವಿಷಯದಲ್ಲಿ ಜೈಲ್ ಸೂಪರಿಂಟೆಂಡೆಂಟರು ಮಾಡುವ ಹುಕುಮೇ ಆಖೈರು ಹುಕುಂ ಆಗಿಯಿದೆ.

12. ಕಂಟ್ರಾಕ್ಟುದಾರನು ಅಪೇಕ್ಷಿಸಿದ ಪಕ್ಷದಲ್ಲಿ ನಾಶಪಡದೇ ಇರುವಂಥಾ ಪದಾರ್ಥಗಳನ್ನು ಇಟ್ಟುಕೊಳ್ಳಲು ಒಂದು ಕೊಠಡಿ ಕೊಡಲ್ಪಡುವದು. ಅಲ್ಲಿ ಸಾಮಾನು ಇಟ್ಟುಕೊಂಡು ಕೇಳಿದ ವೇಳೆ ಕೊಡಬಹುದು.

13. ಇನ್ನೂ ಇತರ ಸಂಗತಿಗಳು ವಿಚಾರಿಸಬೇಕಾಗಿದ್ದರೆ ಸೂಪರಿಂಟೆಂಡೆಂಟರವರ ಆಫಿಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

14. ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ಕಂಡ * ಮಾರ್ಕು ಮಾಡಿರುವ ಸಾಮಾನುಗಳ ನಮೂನೇ ಸಹ ದರಖಾಸ್ತು ಜೊತೆಯಲ್ಲಿ ಹಾಜರು ಮಾಡಬೇಕು.

15. ಮೇಲೆ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟು ಮತ್ತು 100 ರೂಪಾಯಿ ಡಿಪಾಜಿಟ್ ಕಟ್ಟಿದರೆ ಮೇಲ್ಕಂಡ ತಾರೀಖಿನಲ್ಲಿ ತುಪಟಗಳು ಹಾಜರು ಯಾ ಸಪ್ಲೈ ಮಾಡತಕ್ಕ ಬಗ್ಯೆ ಕೊಡುವ ಅಲಾಹಿದಾ ದರಖಾಸ್ತುಗಳನ್ನು ಅಂಗೀಕರಿಸಲ್ಪಡುವದು.

16. 25 ಪೌಂಡು ತೂಕವುಳ್ಳ ಮಣದ ಮೇಲೆ ದರ ನಮೂದಿಸಬೇಕು.

17. ಜಿನಸಿಗಳ ಸುಮಾರು ನಿಬಂಧನೆ ಈ ಕೆಳಗೆ ನಮೂದಿಸಿದೆ, ಆದರೆ ಇಷ್ಟೇ ಆಗುತ್ತೆಂದು ನಿರ್ಣಯಿಸಿ ಇಲ್ಲಾ.

ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.	ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
	ಪೌಂಡು		
ಸಣ್ಣ ಇಂಗ್ಲೀಷ್ ಟ್ವೈನ್ 3 ಪವನು ವುಳ್ಳ ಕಟ್ಟು .	50	ಜೇನುಮೇಣ (ಹಳದಿ) ..	30 ಪವನು
ಡಿಟೋ ದಪ್ಪವುಂಡೆ ಟ್ವೈನ್(ಬೆಂಗಾಲ್) ..	10	ಹುಣಸೆಹಣ್ಣು (ಕೊಳೆ ಕಲ್ಲುವಗೈರೆ ಇಲ್ಲದ್ದು) 25 ಪವನಿನ ಮಣಕ್ಕೆ	2000ಪವನು
ಹೊಲಿಯುವ ಟ್ವೈನ್ ಪವನಿಗೆ ..	20		
ಷೀಟುಗ್ಲೂ ಯಾನೆ ವಜ್ರ 25 ಪವನಿನ ಮಣಕ್ಕೆ ..	150	ಕೆಂಪುಸಾಬೂನು (ಬಿಲ್ಲೆಗಳು) ಡಿಟೋ ..	50 ಪವನು
ಸ್ಟಿಕ್ಕುಗ್ಲೂ ಯಾನೆ ವಜ್ರ 25 ಪವನಿನಮಣಕ್ಕೆ ..	200	*ಹಳದಿ ಹೂ ಡಿಟೋ ..	1,500 ಡಿ॥
ಅಳಲೇಕಾಯಿ ಡಿಟೋ ..	275	ಬಿಳೀಗೋಂದು (ಕೊಳೆ ಇಲ್ಲದ್ದು) ಡಿಟೋ ..	25 ಪವನು
*ಚಾಳು. (ಬಿಲ್ಲೆಯಾಗಿ) ಡಿಟೋ ..	1,200	ದೋಬಿ ಸ್ಯಾಂಡುಯಾನೆ ಮರಳು ಡಿಟೋ ..	200 ಮಣ
ಅಡಿಕೆ ಡಿಟೋ ..	50	ಪಸಿಯುತಕ್ಕ ಸೀಸ ಡಿಟೋ ..	75 ಪವನು
ಕಾಂಚು ಡಿಟೋ ..	50	ಟಂಕವು (ಬಿಗಾರ) ಡಿಟೋ ..	75 ಪವನು
ಹುಣಸೇಬೀಜ (ರೂಪಾಯಿಗೆ ಇಷ್ಟು ಸೇರೆಂದು) ..	300 ಸೇರು	ಸಾಲಿಮೊನಿಯಾಕ್ ಡಿಟೋ .	75 ಪವನು
ಹರಿದ್ರ 25 ಪವನಿನ ಮಣಕ್ಕೆ ..	200 ಪವನು	ಅರಪಾಲು ಡಿಟೋ ..	10 ಮಣ
ತಾಂಬ್ರದ ತಗಡು ನಾನಾತರ ದಪ್ಪದ್ದು ..	600	ಭತ್ತದ ಹೊಟ್ಟು ಡಿಟೋ ..	100 ಮಣ
ಹಿತ್ತಾಳೆ ತಗಡು ಡಿಟೋ ...	50	ನೀಲೇಬೀಜ ಡಿಟೋ ..	600 ಪವನು
ಪಟಕಾರವು 25 ಪವನಿನ ಮಣಕ್ಕೆ .	250	ಬಳ್ಳೀ ಗೋಧಿಹಿಟ್ಟು (ಅವಲ್) ಡಿಟೋ ..	250 ಪವನು
*ಅರಗು ಪಪ್ಪರ ಅಥವಾ ರಂಗೂನದು ಕಡ್ಡಿ ಇಲ್ಲದ್ದು	700 ಪವನು	ಅವ್ವಲ್ ಇದ್ದಲು (ಚೀಲಗಳಲ್ಲಿ) ಚೀಲಕ್ಕೆ ದರ.	150 ಚೀಲ
*ಕೆಂಪುವಾರ ಸಣ್ಣಗೆ ಸೀಳಿದ್ದು ..	200 ಪವನು	ಸೆಣಬಿನದಾರ ಒಂದು ಡಜನ್ ವುಂಡಗೆ ..	100 ವುಂಡೆ
ಬಿಳೀ ಶೀಮೆ ಸುಣ್ಣ ..	20 ಪವನು	ತೆಂಗಿನನಾರ (ಅವಲ್ ಕ್ವೈಲೀಕೋಟೇದು) 25 ಪವನಿನ ಮಣಕ್ಕೆ ..	10,000 ಪ॥
*ಅವಲ್‌ನೀಲಿ ಅವಲ್ ಮುಯ್ಯಮ್ ಮತ್ತು ಸಿಯ್ಯಂ ರಖಂ ..	150 ಪವನು	ಸವುದೆ (ಸಣ್ಣಗೆ ಸೀಳಿದ್ದು) ..	1,200 ಮಣ
ಅವಲ್‌ಟೂರು	6 ಪೀಪಾಯಿ	1ನೇ ರಖಂ ಚಿತ್ರದುರ್ಗದ ಕತ್ತರಿಸಿದ ಕುರಿ ತುಪಟ 25 ಪವನು ಮಣಕ್ಕೆ	1,500ಪವನು
ಮರದೆಣ್ಣೆ	3 ಮಣ		
ಗೋಪಿ	200 ಪವನು	ಪುಂಡೀನಾರು (ಬಿಳೀದು) 25 ಪವನು ಮಣಕ್ಕೆ	800 ಪವನು
ಅವಲ್ ಕೊಬ್ಬರಿಯಣ್ಣೆ .. .	56 ಪವನು	*ತೂತು ಇಲ್ಲದ ಅವಲ್ ಕೋಣನ ಚಕ್ಕಳ ..	10
ಅವ್ವಲ್ ಅಚ್ಚಳ್ಳೆಣ್ಣೆ	50 ಪವನು	ಡಿಟೋ ಹದಮಾಡಿದ ಎತ್ತಿನ ಚಕ್ಕಳ ..	10
ಅವ್ವಲ್ ದೀಪದಯಣ್ಣೆ	75 ಪವನು	ಡಿಟೋ ಡಿಟೋ ಸಾಧಾರಣದ್ದು ..	5
ಅವಲ್ ಬಿಳೀಬೆತ್ತ 1ನೇ ಕ್ಲಾಸು ..	350 ಪವನು	ದೊಡ್ಡ ಕುರಿ ಚಕ್ಕಳ ಡಿಟೋ ..	10
ಛಾಪೆಹಾಕುವ ಕೆಂಪುಶಾಯಿ ಒಂದು ಪವನ್ ಟಿನ್‌ಗೆ	20 ಟಿನ್	ಜೇಯಿಸಿದ ಅಗಸೇಬೀಜದ ಎಣ್ಣೆ $2\frac{1}{2}$ ಸೇರಿನ ಸೀಸಕ್ಕೆ	50 ಸೀಸೆ
ದಪ್ಪವಾದ ಬುಕ್ಕು ಬೈಂಡಿಂಗ್ ಕ್ಯಾಲಿಕೊ ಗಜಕ್ಕೆ	150 ಗಜ		
ತೊಳದ ದಪ್ಪ ಮತ್ತು ಅಗಲವುಳ್ಳ ಮಲ್‌ಮಲ್ ..	30 ಗಜ	ಟರ್ಪಂಟೈನ್ ಎಣ್ಣೆ ಡಿಟೋ ..	30 ಸೀಸೆ
ಅಗಲವಾದ ಮತ್ತು ದಪ್ಪವಾದ ಟರಕಿ ಕೆಂಪುಬಟ್ಟೆ	30 ಗಜ	ಗೋಪಾಲ್ ವಾರ್‌ನೀಷ್ ಡಿಟೋ ..	10 ಸೀಸೆ
ಬಂದುಅಡಿ ಅಗಲವುಳ್ಳ ಟೆಂಟುಗನಿ (ಚೀಲಕ್ಕೆ) ಗಜಕ್ಕೆ ..	100 ಗಜ	ಬ್ಲಾಕ್ ಜಪಾನ್ ಡಿಟೋ ...	10 ಸೀಸೆ
		ಅವಲ್ ಫ್ರೆಂಚುಪಾಲೀಷ್ ಸೀಸೆಕ್ಕೆ ...	50 ಸೀಸೆ
ನೇವೀಕ್ಯಾನ್ವಸ್ ನಂ. 1 ಗಜಕ್ಕೆ ..	30 ಗಜ	ಕಾಡಿಗೆ ಸೀಸೆಕ್ಕೆ	10 ಸೀಸೆ
ಡಿಟೋ ನಂ. 2 ಡಿಟೋ ..	5 ಗಜ	ಬಣಗಿದ ಕರ್ಪೂರ ಪವನಿಗೆ ..	20 ಪವನು
ಡಿಟೋ ನಂ. 3 ಡಿಟೋ ..	5 ಗಜ	ಛಾಪೆ ಹಾಕುವ ಕರೀಯಿಂಕಿ ಪವನ್ ಟಿನ್‌ಗೆ ..	50 ಟಿನ್
*ಬಾರ್ ಐರನು ಯಾನೆ ಕಬ್ಬಿಣ 25 ಪವನು ಮಣಕ್ಕೆ	200 ಪವನು	*ಬಿಳೀ ಮ್ಯೂಲ್‌ಟ್ವಿಸ್ಟು ಕಾಟನ್ ನಂ. 10 400 ಪವನು ಮೂಟೆಗೆ	5,000ಪವನು
ಹೂಪು ಐರನು ಡಿಟೋ ..	200 ಪವನು		
ಅರ ವಂದಕ್ಕೆ ..	50	* ಡಿಟೋ. ನಂ. 20, 10 ಪವನ್ ಮೂಟೆಗೆ ..	100 ಪವನು
ಹಳೇ ಹಿತ್ತಾಳೆ 25 ಪವನು ಮಣಕ್ಕೆ ..	200 ಪವನು	* ಡಿಟೋ ನಂ. 30, 5 ಪವನು ಮೂಟೆಗೆ ..	50 ಪವನು
*ಕತ್ತರಿಸಿದ ಮಂಡ್ಯದ ಬಿಳೀತುಪಟ 25 ಪವನು ಮಣಕ್ಕೆ 1ನೇ ರಖಂ ..	500 ಪವನು	* ಡಿಟೋ ನಂ. 40, ಡಿಟೋ ..	20 ಪವನು
		* ಕೆಂಪು ಹತ್ತಿ ನಂ. 40 ಇಂಗ್ಲಿಷ್ ಡಿಟೋ..	40 ಪವನು
*2ನೇ ರಖಂ ಕತ್ತರಿಸಿದ ಚಿತ್ರದುರ್ಗದ ತುಪಟ...	1,000ಪವನು	*ಹಳದಿಹತ್ತಿ ನಂ. 40 ಡಿಟೋ ..	20 ಪವನು
*ಕುರಿಮರಿ ತುಪಟ ಚಿತ್ರದುರ್ಗದ್ದು(ಬ್ಲಾಕುಕ್ಲೆಮಿ)	2,500ಪವನು	ಹಸರು ಹತ್ತಿ ನಂ. 40 ಡಿಟೋ ..	200 ಪವನು
*ಚುನಾಮುಯಾನೆ ಸ್ಕ್ರಿಮ್ಡ್ ಬ್ಲಾಕು ...	5,000ಪವನು	ಷೀಟು ಐರನು ಎಂಬ ಕಬ್ಬಿಣ 25ಪವನುಮಣಕ್ಕೆ	200 ಪವನು
ಡಿಟೋ ಬಿಳೀತುಪಟ ...	3,000ಪವನು	ಸತ್ತು 25 ಪವನು ಮಣಕ್ಕೆ ..	200 ಪವನು
*ಡಿಟ್ಟೋ ಮರಿ ತುಪಟ ...	1,000ಪವನು	*ಹಾಸಿಗ್ಗೆ ಗೌಸ್ ಹಾಕುವ ಬಟ್ಟೆ ಗಜಕ್ಕೆ ..	30 ಗಜ
ಡಿಟೋ ಗ್ರೇ ಯಾನೆ ಬಿಳೀ ತುಪಟ ...	3,000ಪವನು	*2ನೇ ರಖಂ ಮಂಡ್ಯದ ಕತ್ತರಿಸಿದ ಬಿಳೀತುಪಟ 25 ಪವನು ಮಣಕ್ಕೆ ..	1,500ಪವನು

ತುಪಟವನ್ನು ಕೆಲಸಕ್ಕೆ ಉಪಯೋಗಿಸುವದಕ್ಕೆ ಮುಂಚೆ ಅದು ಹೊಡೆದು ಕ್ಲೀನು ಮಾಡಿ ಮತ್ತು ತೊಳೆದು ಉಪಯೋಗಿಸಲ್ಪಡುತ್ತೆ. ತೇಗದಮರ, ಹೊನ್ನೇಮರ, ಕರೀಮರ ಮತ್ತು ರೋಜ್‌ವುಡ್ಡು ಮರ ಇವುಗಳ ತೊಲೆಗಳನ್ನು ಅಡಿಲೆಖ್ಖದಮೇಲೆ ತೆಗೆದುಕೊಳ್ಳುತ್ತೆ. ಇನ್ನೂ ಇತರ ಚಿಲ್ರೆ ಸರಕುಗಳನ್ನು ಕಂಟ್ರಾಕ್ಟುದಾರನು ಮಾರ್ಕೆಟ್ಟಿನಲ್ಲಿ-ಮಾರುವ ದರದಮೇರೆ ಸಪ್ಲೈ ಮಾಡತಕ್ಕದ್ದು.

ಹೆಚ್. ಹೆಚ್. ಸ್ಪಾರ್ಕ್ಸ್,

ಸೂಪರಿಂಟೆಂಡೆಂಟ್ ಸೆಂಟ್ರಲ್ ಜೈಲ್,

ಬೆಂಗಳೂರು.

641

ಮೈಸೂರ ಗೆಜೆಟ್.

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 3, ಸನ್ 1896.

IIIನೇ ಭಾಗ.

ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ರೆಗ್ಯುಲೇಷನ್‌ಗಳು.

ಮೈಸೂರ್ ಗವರ್ನಮೆಂಟ್.

ಲೆಜಿಸ್ಲೇಟಿವ್ ಇಲಾಖಾ.

1896ನೇ ಇಸವಿಯ IIನೇ ನಂಬರ್ ರೆಗ್ಯುಲೇಷನ್.

(1896ನೇ ಇಸವಿ ಅಕ್ಟೋಬರ ತಾರೀಖು 27ನೇ ದಿನ ಮಂಜೂರಾದ್ದು.)

A REGULATION TO PROVIDE FOR THE IMPOSITION AND LEVY OF CERTAIN DUTIES ON COTTON GOODS IN THE TERRITORIES OF MYSORE.

ಮೈಸೂರ್ ಶೀಮೆಯಲ್ಲಿ ಅರಳೆ ಸರಕುಗಳ ಮೇಲೆ ಕೆಲವು ತೆರಿಗೆಗಳು ಮೊಕರರಾಗಿ ವಸೂಲ್ ಆಗತಕ್ಕ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ.

ಮೈಸೂರ್ ಶೀಮೆಯೊಳಗೆ ಅರಳೆ ಸರಕುಗಳ ಮೇಲೆ ಕೆಲವು ತೆರಿಗೆಗಳನ್ನು ಮೊಕರರ್ಮಾಡುವದು ಯುಕ್ತವಾದುದರಿಂದ ಘನವನ್ನೈದಿದ ಶ್ರೀಮನ್ಮಹಾರಾಣಿ ರೀಜಂಟರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೆ:—

PRELIMINARY.

ಅವತರಣಿಕೆ.

ಹೆಸರು, ವ್ಯಾಪ್ತಿ ಮತ್ತು ಶುರು.

1. (1) ಈ ರೆಗ್ಯುಲೇಷನ್ 1896ನೇ ಇಸವಿಯ ಮೈಸೂರ್ ಅರಳೆ ಸುಂಕಗಳ ರೆಗ್ಯುಲೇಷನ್ ಎಂಬದಾಗಿ ಕರೆಯಲ್ಪಡಬಹುದು.

(2) ಇದು ಮೈಸೂರ್ ಶೀಮೆಗೆಲ್ಲಾ ವ್ಯಾಪಿಸುತ್ತದೆ;

(3) ಇದು 1896ನೇ ಇಸವಿಯ ಡಿಸೆಂಬರ್ 1ನೇ ತಾರೀಖು ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು;

ಅರ್ಥ ವಿವರಣೆಗಳು.

2. ಈ ರೆಗ್ಯುಲೇಷನಿನಲ್ಲಿ ಸಂದರ್ಭಕ್ಕಾಗಲಿ ಪ್ರಮೇಯಕ್ಕಾಗಲಿ ಏನಾದರೂ ವಿರೋಧವಿದ್ದರೇನೇಶಿವಾಯಿ,—

(a) "ಡೆಪ್ಯುಟಿ ಕಮ್ಮಿಷನರ" ಅಂದರೆ ಒಂದು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ್ ಎಂದು ಅಥವಾ ಈ ರೆಗ್ಯುಲೇಷನ್ ಪ್ರಕಾರ ಡೆಪ್ಯುಟಿ ಕಮ್ಮಿಷನರಿನ ಯಲ್ಲಾ ಕೆಲಸಗಳನ್ನಾಗಲಿ ಅಥವಾ ಅವುಗಳ ಪೈಕಿ ಯಾವದನ್ನಾಗಲಿ ಮಾಡಲು ಮೈಸೂರ್ ಗವರ್ನಮೆಂಟಿನವರಿಂದ ಕ್ರಮವಾಗಿ ನೇಮಿಸಲ್ಪಡಬಹುದಾದ ಇತರ ಆಫಿಸರ್ ಎಂಬ ಅರ್ಥವಾಗುತ್ತದೆ;

(b) "ಅರಳಿ ನೂಲು" ಅಥವಾ "ನೂಲು" ಅಂದರೆ ಪೂರ್ಣವಾಗಿ ಯಾಗಲಿ ಕೊಂಚ ಭಾಗವಾಗಲಿ ಹತ್ತಿಯಿಂದ ಮಾಡಲ್ಪಟ್ಟ ನೂಲು ಎಂಬ ಅರ್ಥವಾಗುತ್ತದೆ;

(c) "ಅರಳಿ ಸರಕುಗಳು" ಅಥವಾ "ಸರಕುಗಳು" ಎಂಬುವದರಲ್ಲಿ ಪೂರ್ಣವಾಗಿ ಅಥವಾ ಕೊಂಚ ಭಾಗ ಅರಳಿ ಎಳೆಗಳಿಂದ ನೇಯಲ್ಪಟ್ಟ, ಹೆಣೆಯಲ್ಪಟ್ಟ ಯಾ ಇತರ ವಿಧವಾಗಿ ಮಾಡಲ್ಪಟ್ಟ (ಎಳೆ ಮತ್ತು ನೂಲು ವಿನಹ) ಎಲ್ಲಾ ಜರಿತಾರಿ ಬಟ್ಟೆಗಳು ಇತರ ಸಾಮಾನುಗಳು ಅಡಗಿರುತ್ತವೆ;

(d) "ಮಗ್ಗದ ಕಾರ್ಖಾನೆ" ಅಂದರೆ ಕೈಯಿಂದ ಅಲ್ಲದೆ ಇತರ ವಿಧದಿಂದ ನಡಿಸಲ್ಪಡುವ ಯಂತ್ರದ ಮೂಲಕ ಅರಳೀ ಸರಕುಗಳು ನೇಯಲ್ಪಡುವ, ಹೆಣಿಯಲ್ಪಡುವ ಅಥವಾ ಇತರ ಮಾರ್ಗದಲ್ಲಿ ತಯಾರು ಮಾಡಲ್ಪಡುವ ಯಾವದಾದರೂ ಕಟ್ಟಡ ಯಾ ಸ್ಥಳ ಎಂಬ ಅರ್ಥವಾಗುತ್ತದೆ, ಮತ್ತು ಅದು ಅಂಥಾ ಕಟ್ಟಡದ ಅಥವಾ ಸ್ಥಳದ ಪ್ರತಿ ಒಂದು ಭಾಗವನ್ನೂ ಅಡಗಿಸಿಕೊಂಡಿರುತ್ತದೆ;

(e) "ಕೋಠಿ" ಅಂದರೆ ಈ ರೆಗ್ಯುಲೇಷನಿಗನುಗುಣವಾಗಿ ಸರಕುಗಳನ್ನು ದಾಸ್ತಾನು ಮಾಡುವದಕ್ಕೆ ಲೈಸೆನ್ಸ ಮೂಲಕ ನೇಮಿಸಲ್ಪಟ್ಟ ಒಂದು ಸ್ಥಳವೆಂದು ಅರ್ಥವಾಗುತ್ತದೆ:

ಮೈಸೂರ್ ಶೀಮೆಯಲ್ಲಿ ಉತ್ಪತ್ತಿಯಾದ ಅರಳೀ ಸರಕುಗಳ ಮೇಲೆ ಸುಂಕ ಮೊಕರರಾಗೋಣ.

3. ಮೈಸೂರ್ ಶೀಮೆಯ ಪ್ರತಿ ಒಂದು ಮಗ್ಗದ ಕಾರ್ಖಾನೆಯಲ್ಲಿಯೂ ಅದರಲ್ಲಿ ಉತ್ಪತ್ತಿಯಾಗುವ ಸಮಸ್ತ ಅರಳೀ ಸರಕುಗಳಿಗೆ ಆ ಸರಕುಗಳ ಬೆಲೆಯ ಮೇಲೆ ಶೇಕಡಾ 3½ ದರದ ಪ್ರಕಾರ ಸುಂಕ ವಸೂಲ್‌ಮಾಡಲ್ಪಡತಕ್ಕದ್ದು.

ಟಿಪ್ಪಣಿ.—ಸರಕುಗಳು ಮಗ್ಗದ ಕಾರ್ಖಾನೆಯ ವಠಾರದಿಂದ ಹೊರಗೆ ತರಲ್ಪಟ್ಟಾಗ ಈ ಪ್ರಕರಣದ ಅರ್ಥದ ಮೇರೆಗೆ ಉತ್ಪತ್ತಿಯಾದವು ಎಂದು ಎಣ್ಣಿಸಿಕೊಳ್ಳುತ್ತವೆ; ಆದರೆ ಸಣ್ಣ ಥರ್ಾಗಳಾಗಿ ಅಲ್ಲದೆ ಇತರ ವಿಧವಾಗಿ ಸರಕುಗಳು ಮುಖ್ಯವಾಗಿ ಅಥವಾ ಹೆಚ್ಚಾಗಿ ತಯಾರಾಗಿ ವಿಕ್ರಯಿಸಲ್ಪಡುವ ಯಾವದಾದರೂ ಮಗ್ಗದ ಕಾರ್ಖಾನೆಯ ಸಂಗತಿಯಲ್ಲಿ ಮೈಸೂರ್ ಗವರ್ನಮೆಂಟಿನವರು ಅವುಗಳು ಸದರೀ ಕಾರ್ಖಾನೆಯ ನೇಯುವ ಭಾಗ ಅಥವಾ ಭಾಗಗಳಿಂದ ಹೊರಗೆ ತರಲ್ಪಟ್ಟಾಗ ಆ ಸರಕುಗಳು ಆ ಕಾರ್ಖಾನೆಯಲ್ಲಿ ಉತ್ಪತ್ತಿಯಾದವೆಂತ ಎಣಿಸತಕ್ಕದ್ದೆಂದು ವಿಧಿಸಬಹುದು.

ಅಂಥಾ ಸರಕುಗಳ ನಿರಖು ಮೌಲ್ಯಗಳನ್ನು ನಿರ್ಣಯಿಸುವದಕ್ಕೆ ಗವರ್ನಮೆಂಟಿನವರಿಗೆ ಅಧಿಕಾರ.

4. (1) ಸದರೀ ಸುಂಕಗಳನ್ನು ವಸೂಲ್ಮಾಡುವ ಬಗ್ಯೆ ಮೈಸೂರ್ ಗವರ್ನಮೆಂಟಿನವರು ಆಗಿಂದಾಗ್ಯೆ ಸರ್ಕಾರಿ ಗೆಜಿಟ್ಟನಲ್ಲಿ ಇಸ್ತಿಹಾಹ್ ಕೊಡುವದರ ಮೂಲಕ ಮೇಲೆ ಹೇಳಿದಂಥಾ ಸಮಸ್ತ ಸರಕುಗಳ ಅಥವಾ ಅವುಗಳ ಪೈಕಿ ಯಾವದಾದರೂ ಗೊತ್ತಾದ ತರಹಾವಿನ ಅಥವಾ ತರಹಾಗಳ ನಿರಖು ಮೌಲ್ಯಗಳನ್ನು ನಿರ್ಣಯಿಸಬಹುದು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವದಾದರೂ ನಿರಖು ಮೌಲ್ಯಗಳನ್ನು ಬದಲಾಯಿಸಬಹುದು.

(2) ಈ ರೆಗ್ಯುಲೇಷನಿನ ಉದ್ದೇಶಗಳ ಬಗ್ಯೆ ಅಂಥಾ ನಿರಖು ಮೌಲ್ಯವು ಯಾವದಕ್ಕೆ ಲಗಾವಾಗುತ್ತದೋ ಆ ಅರಳೀ ಸರಕುಗಳ "ನಿಜವಾದ ಮೌಲ್ಯ" ವಾಗಿರುತ್ತದೆಂದು ತಿಳಕೊಳ್ಳತಕ್ಕದ್ದು. ಆದರೆ ಮೇಲೆ ಹೇಳಿದ ಮೇರೆ ವಿನಹ ಅನ್ಯಥಾ ಸಮಸ್ತ ಸರಕುಗಳಿಗೆ ಈ ರೆಗ್ಯುಲೇಷನ್ ಪ್ರಕಾರ ಅವುಗಳ ನಿಜವಾದ ಮೌಲ್ಯದ ಮೇಲೆ ತೆರಿಗೆ ಮೊಕರರಾಗತಕ್ಕದ್ದು.

(3) ಈ ರೆಗ್ಯುಲೇಷನಿನ ಉದ್ದೇಶಗಳ ಬಗ್ಯೆ ನಿಜವಾದ ಮೌಲ್ಯವು ಈ ಕೆಳಗೆ ವಿವರಿಸಿರುವದೆಂದು ಭಾವಿಸಲ್ಪಡತಕ್ಕದ್ದು—

(a) ಅದೇ ಜಾತಿಯ ವ ತರದ ಸರಕುಗಳು ತಯಾರ್‌ಮಾಡಲ್ಪಟ್ಟ ಸಮಯದಲ್ಲಿ ವ ಸ್ಥಳದಲ್ಲಿ, ಅವುಗಳನ್ನು ತಯಾರ್‌ಮಾಡಿದ್ದಕ್ಕಾಗಿ ತೆರಬೇಕಾಗುವ ಸುಂಕದ ಮೊಬಲಗು ಅಲ್ಲದೆ ಬೇರೆ ಯಾವ ತರಹೇದ್ದಾದರೂ ವಜಾ ಅಥವಾ ಕಡಿಮೆಯಾಗುವಿಕೆ ಇಲ್ಲದೆ, ಅವುಗಳು ವಿಕ್ರಯಿಸಲ್ಪಡುವ ಅಥವಾ ವಿಕ್ರಯಿಸಲ್ಪಡಬಹುದಾದ ಖಿಮ್ಮತಿನಲ್ಲಿ ವ್ಯಾಪಾರದ ಕಮ್ಮಿಷನ್ ಕಳದು ಬಿಟ್ಟ ನಗದು ಕ್ರಯ;

(b) ಇಂಥಾ ಕ್ರಯವು ನಿರ್ಣಯಿಸಕೂಡದಾದ ಸಂಗತಿಗಳಲ್ಲಿ, ಅದೇ ಜಾತಿಯ ಮತ್ತು ತರದ ಸರಕುಗಳನ್ನು, ಮೇಲೆ ಕಾಣಿಸಿದವುಗಳಲ್ಲದೆ ಬೇರೆ ಯಾವ ತರಹೇವಾರಿದರೂ ವಜಾ ಅಥವಾ ಕಡಿಮೆಯಾಗುವಿಕೆ ಇಲ್ಲದೆ, ಅಂಥಾ ಸ್ಥಳದಲ್ಲಿ ಕೊಡುವದಕ್ಕೆ ತಗಲುವ ಖರ್ಚು.

ಉತ್ಪತ್ತಿಯಾದ ಅರಳೇ ಸರಕುಗಳ ತಿಂಗಳುಗಟ್ಲೆ ಲೆಕ್ಕಗಳನ್ನು ಮಗ್ಗದ ಕಾರ್ಖಾನೆಯ ಮಾಲೀಕರು ಕೊಡೋಣ.

5. (1) ಪ್ರತಿ ಒಂದು ಮಗ್ಗದ ಕಾರ್ಖಾನೆಯ ಮಾಲೀಕನು ಪ್ರತಿ ತಿಂಗಳಿಗೆ, ತನ್ನ ಕಾರ್ಖಾನೆಯಲ್ಲಿ ಕಳೆದ ತಿಂಗಳಲ್ಲಿ ಉತ್ಪತ್ತಿಯಾದ ಸಮಸ್ತ ಅರಳೆ ಸರಕುಗಳ ಒಂದು ಲೆಕ್ಕವನ್ನು ತಯಾರ್ಮಾಡಿ ಡೆಪ್ಯುಟಿ ಕಮಿಷನರ ಬಳಿಗೆ ಕಳುಹಿಸತಕ್ಕದ್ದು ಅಥವಾ ತಯಾರ್ಮಾಡಿಸಿ ಕಳುಹಿಸುವ ಹಾಗೆ ಮಾಡತಕ್ಕದ್ದು; ಮತ್ತು ಅಂಥಾ ಲೆಕ್ಕದ ಕೆಳಗೆ ಅದರ ನಿಜತ್ವವನ್ನು ಕುರಿತ ಒಂದು ದೃಢಪತ್ರಿಕೆಯನ್ನು ಬರೆದು ಅದಕ್ಕೆ ರುಜು ಮಾಡತಕ್ಕದ್ದು.

(2) ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮಗಳಿಂದ ಅನ್ಯಥಾ ನಿರ್ದೇಶಿಸಲ್ಪಟ್ಟರೇನೇ ವಿನಹಾ, ಅಂಥಾ ಪ್ರತಿ ಒಂದು ಲೆಕ್ಕದಲ್ಲಿ ಪ್ರತಿ ಒಂದು ತರಹಾವಿನ ಸರಕುಗಳ ಬಗ್ಯೆ ಆ ಲೆಕ್ಕ ಯಾವ ಕಾಲದಬಗ್ಯಾಗಿರುತ್ತದೋ ಆ ಕಾಲದಲ್ಲಿ ಎಷ್ಟು ಮೊತ್ತ ಉತ್ಪತ್ತಿಯಾಗಿರುತ್ತದೆ ಎಂಬದನ್ನೂ ಅಂಥಾ ಸರಕಿನ ನಿಜವಾದ ಮೌಲ್ಯವನ್ನೂ ಸಮೂದಿಸತಕ್ಕದ್ದು.

(3) ಅಂಥಾ ಪ್ರತಿ ಒಂದು ಲೆಕ್ಕದಲ್ಲಿ ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದಂಥಾ ಹೆಚ್ಚಾದ ವೃತ್ತಾಂತವಿರತಕ್ಕದ್ದು. ಮತ್ತು ಅದು ಸದರೀ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದಂಥಾ ನಮೂನೆಯಲ್ಲಿದ್ದು ಸರಿ ಹೌದೋ ಇಲ್ಲವೋ ಎಂಬದನ್ನು ನೋಡುವ ಬಗ್ಯೆ ಮೇಲೆ ಹೇಳಿದ ಮೇರೆಗೆ ನಿರ್ದೇಶಿಸಲ್ಪಡಬಹುದಾದ ಷರತ್ತುಗಳಿಗೆ ಒಳಗಾಗಿರತಕ್ಕದ್ದು.

(4) ಪ್ರತಿ ಒಂದು ಲೆಕ್ಕವು ಅದು ಯಾವಕಾಲದ ಬಗ್ಯಾಗಿರುತ್ತದೋ ಅದರ ಮೂರು ಅಥವಾ ಹೆಚ್ಚಾದರೆ ಏಳು ಕೆಲಸ ನಡೆಯುವ ದಿವಸಗಳ ಒಳಗಾಗಿ ಡೆಪ್ಯುಟಿ ಕಮಿಷನರಿಗೆ ಪಾವತಿ ಮಾಡಲ್ಪಡತಕ್ಕದ್ದು ಅಥವಾ ಅವರ ವಿಳಾಸಕ್ಕೆ ಕಳುಹಿಸಿಕೊಡಲ್ಪಡತಕ್ಕದ್ದು; ಮತ್ತು ಇಂಥಾ ಲೆಕ್ಕಗಳಲ್ಲಿ ಷುರುವಿನದು 1896ನೇ ಇಸವಿಯ ಡಿಸೆಂಬರ್ ತಿಂಗಳಿಗಾಗಿರತಕ್ಕದ್ದು ಮತ್ತು ಈ ರೆಗ್ಯುಲೇಷನಿನ ಅಮಲ್ ಷುರು ಲಾಗಾಯತು ತಯಾರ್ ಮಾಡಿದ ಎಲ್ಲಾ ಸರಕುಗಳು ಅದರಲ್ಲಿ ಸೇರಿರತಕ್ಕದ್ದು.

ಟಿಪ್ಪಣಿ.—ಈ ಒಳಪ್ರಕರಣದಲ್ಲಿ "ಕೆಲಸ ನಡೆಯುವ ದಿವಸ" ಅಂದರೆ, ಆದಿತ್ಯವಾರಗಳು, ಸಂವತ್ಸರಾದಿ ದಿವಸ (ಜನವರಿ ಗುತ್ರೀ), ಕ್ರಿಸ್ತನ ಜನ್ಮದಿನ (ಡಿಸೆಂಬರ್ 25) ವಿನಹ ಪ್ರತಿ ಒಂದು ದಿನ ಎಂದು ಅರ್ಥವು: ಈ ಕಡೇ ಎರಡು ದಿವಸಗಳ ಪೈಕಿ ಯಾವದಾದರೂ ಒಂದು ಆದಿತ್ಯವಾರದ ದಿನ ಬಿದ್ದಲ್ಲಿ ಅದರ ಮಾರನೆ ಸೋಮವಾರ ಶಿವಾಯಿ ಎಂದು ಭಾವಿಸಬೇಕು; (ಕ್ರಿಸ್ತನ ಮರಣದಿನ) ಗುಡ್‌ಫ್ರೈಡೆ ಎಂಬ ದಿನವಲ್ಲದೆ ಸರ್ಕಾರಿ ಗೆಜೆಟ್ಟನಲ್ಲಿ ಇಸ್ತಿಹಾರ್ ಮೂಲಕ ಪಬ್ಲಿಕ್ ರಜಾ ದಿನವೆಂದು ಮೈಸೂರ್ ಗವರ್ನಮೆಂಟಿನವರಿಂದ ನಿರೂಪಿಸಲ್ಪಡುವ ಇತರ ಯಾವ ದಿನವಾದರೂ ಅಂಥಾದ್ದು ಶಿವಾಯಿ ಪ್ರತಿ ದಿನವೆಂದರ್ಥವು.

ಸುಂಕವನ್ನು ನಿರ್ಣಯಿಸಿ ಅದನ್ನು ಪಾವತಿ ಮಾಡಬೇಕಾಗಿ ನೋಟಿಸ ಕೊಡೋಣ.

6. (1) ಆ ಲೆಕ್ಕ ಯಾವ ಕಾಲಕ್ಕೆ ಸಂಬಂಧಿಸುತ್ತದೋ ಆ ಕಾಲಕ್ಕಾಗಿ ಪಾವತಿ ಯಾಗುವ ಸುಂಕಗಳನ್ನು ಮೈಸೂರ್ ಗವರ್ನಮೆಂಟಿನವರೇನಾದರೂ ನಿಬಂಧನೆಗಳನ್ನು ವಿಧಿಸಿದ್ದರೆ ಅಂಥಾ ನಿಬಂಧನೆಗಳಿಗೊಳಪಟ್ಟು ಡೆಪ್ಯುಟಿ ಕಮಿಷನರವರು ಮೊಕರರ್ಮಾಡತಕ್ಕದ್ದು, ಮತ್ತು ಆ ಮೊಬಲಗನ್ನು ಕೂಡಲೇ ಪಾವತಿ ಮಾಡದಿದ್ದರೆ ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದ ನಮೂನೆಯಲ್ಲಿ ಒಂದು ನೋಟಿಸನ್ನು ಸದರೀ ನೋಟಿಸಿನ ಜಾರಿ ತಾರೀಖಿನಿಂದ ಹತ್ತು ದಿವಸಗಳೊಳಗಾಗಿ ಮೊಕರರಾದ ಮೊಬಲಗನ್ನು ಪಾವತಿ ಮಾಡತಕ್ಕದ್ದೆಂದು ಅದರಲ್ಲಿ ವಿಧಿಸಿ ಮಾಲೀಕನಮೇಲೆ ಜಾರಿ ಮಾಡಿಸತಕ್ಕದ್ದು.

(2) (1)ನೇ ಒಳಪ್ರಕರಣಕ್ಕನುಗುಣವಾದ ಒಂದು ನೋಟಿಸಿನ ಒಂದು ಪ್ರತಿಯನ್ನು ಮಗ್ಗದ ಕಾರ್ಖಾನೆಯ ಮಾಲೀಕನಿಗೆ ಯಾ ಅವನ ಮುತಾಲೀಕನಿಗೆ ಅತನು ಸಾಧಾರಣವಾಗಿ ಕೆಲಸ ನಡಿಸುವ ಸ್ಥಳದಲ್ಲಿ ಕೊಟ್ಟರೆ ಯಾ ತಲಪಿಸಿದರೆ ಅಥವಾ ಹೀಗೆ ಮಾಡಲಿಕ್ಕೆ ಅನುಕೂಲವಿಲ್ಲದಿದ್ದಲ್ಲಿ ಅದರ ಒಂದು ಪ್ರತಿಯನ್ನು ಕಾರ್ಖಾನೆಯ ಒಂದು ಹೊರ ಬಾಗಲಿಗೆ ಅಂಟಿಸಿದರೆ ಸದರೀ ನೋಟಿಸು ಕಾರ್ಖಾನೆಯ ಮಾಲೀಕನ ಮೇಲೆ ಜಾರಿ ಮಾಡಲ್ಪಟ್ಟ ಹಾಗಾಗುವದು.

ಪಾವತಿಯಾಗದಿರುವ ಸುಂಕವನ್ನು ಬರ ಮಾಡಿಕೊಳ್ಳೋಣ.

7. (1) ಈ ರೆಗ್ಯುಲೇಷನಿನ ಮೇರೆಗೆ ಪಾವತಿಯಾಗಬೇಕಾದ ಯಾವದಾದರೂ ಸುಂಕವು ಅದರ ಪಾವತಿ ಬಗ್ಯೆ ಮೇಲೆ ಹೇಳಿದಂಥಾ ನೋಟಿಸಿನಿಂದ ನಿರ್ಣಯಿಸಲ್ಪಟ್ಟ ಕಾಲದೊಳಗೆ ಪಾವತಿಯಾಗದಿದ್ದರೆ ಡೆಪ್ಯುಟಿ ಕಮಿಷನರವರು ಅದರ ಬದಲಾಗಿ ಹಾಗೆ ಪಾವತಿಯಾಗದಿರುವ ಸುಂಕದ ಮೊಬಲಗಿನ ದುಗ್ಗಣೀಗೆ ಮೀರದೆ ನ್ಯಾಯವಾಗಿ ಕೇಳಬಹುದೆಂದು ತಮಗೆ ಮುನಾಸಬು ತೋರುವ ಎಷ್ಟು ಮೊಬಲಗನ್ನಾದರೂ ವಸೂಲ್ಮಾಡಬಹುದು.

(2) (1) ನೇ ಬಳಪ್ರಕರಣಕ್ಕನುಗುಣವಾಗಿ ವಸೂಲ್ಮಾಡಲ್ಪಡತಕ್ಕ ಮೊಬಲಗುಗಳನೆಲ್ಲಾ ಜಮೀನ್ ಕಂದಾಯದ ಬಾಕಿಗಳ ವಸೂಲಿಬಗ್ಗ್ಯಾಗಿ ನಿಬಂಧಿಸಲ್ಪಟ್ಟಿರುವ ರೀತಿಯಲ್ಲಿ ವಸೂಲ್ಮಾಡತಕ್ಕದ್ದು.

Warehousing.

ಕೋಠಿಗಳಲ್ಲಿ ದಾಸ್ತಾನು ಮಾಡೋಣ.

ಸರಕುಗಳನ್ನು ದಾಸ್ತಾನುಮಾಡುವ ಬಗ್ಗೆ ಕೋಠಿಗಳಿಗೆ ಲೈಸೆನ್ಸು ಕೊಡೋಣ ಮತ್ತು ಆ ಬಗ್ಗೆ ಫೀಸು.

8. (1) ಮೈಸೂರ್ ಗವರ್ನಮೆಂಟಿನವರು ಅರಳೀಸರಕುಗಳನ್ನು ದಾಸ್ತಾನು ಮಾಡುವದಕ್ಕೋಸ್ಕರ ಒಂದು ಕೋಠಿ ಎಂಬದಾಗಿ ಯಾವದಾದರೂ ಕೋಣೆಗೆ ಯಾ ಸ್ಥಳಕ್ಕೆ ಆಗಿಂದಾಗ್ಯೆ ಲೈಸೆನ್ಸು ಕೊಡಬಹುದು. ಅಂಥಾ ಲೈಸೆನ್ಸು ಸದರೀ ಕೋಠಿಗಳೊಳಕ್ಕೆ ಅಂಥಾ ಸರಕುಗಳನ್ನು ಶೇರಿಸುವ ಬಗ್ಗ್ಯಾ ಕೋಠಿಗಳಲ್ಲಿ ಸರಕುಗಳಿರುವಾಗ್ಯೆ ಅವುಗಳನ್ನು ಭದ್ರವಾಗಿ ಕಾಪಾಡುವ ಬಗ್ಗ್ಯಾ ಸರಕುಗಳನ್ನು ಕೋಠಿಯಿಂದ ಹೊರಕ್ಕೆ ಸಾಗಿಸೋಣ ಮತ್ತು ಅವುಗಳ ಮೇಲೆ ವಸೂಲಾಗಬೇಕಾದ ಸುಂಕಗಳ ವಸೂಲಿಬಗ್ಗ್ಯಾ ಮೈಸೂರ್ ಗವರ್ನಮೆಂಟಿನವರಿಂದ ವಿಧಿಸಲ್ಪಡಬಹುದಾದ ಷರತ್ತುಗಳಿಗೊಳಪಟ್ಟಿರತಕ್ಕದ್ದು.

(2) ಅಂಥಾ ಪ್ರತಿ ಕೋಠಿ ವಿಷಯದಲ್ಲಿ ಲೈಸೆನ್ಸು ಫೀಜು ಮತ್ತು ಇತರ ಮೊಬಲಗುಗಳನ್ನು ಈ ಬಗ್ಗ್ಯಾಗಿ ಮೈಸೂರ್ ಗವರ್ನಮೆಂಟಿನವರಿಂದ ಮಾಡಲ್ಪಟ್ಟ ನಿಬಂಧನೆಗಳಂತೆ ತಾತ್ಕಾಲಿಕವಾಗಿ ವಿಧಾಯಕವಾದಷ್ಟನ್ನು ಲೈಸೆನ್ಸುದಾರನು ಕೊಡತಕ್ಕದ್ದು.

ಪರಂತು ಮೈಸೂರ್ ಗವರ್ನಮೆಂಟಿನವರು ಯಾವದಾದರೂ ಗೊತ್ತಾದ ಕೋಠಿಯ ವಿಷಯವಾಗಿ ಅಂಥಾ ಪೂರಾ ಫೀಸನ್ನು ಯಾ ಇತರ ಪಾವತಿಗಳನ್ನು ಅಥವಾ ಅವುಗಳ ಎಷ್ಟನ್ನಾದರೂ ಅಂಶವನ್ನು ಮಾಫ್ ಮಾಡಬಹುದು.

ಕೋಠಿಗಳಲ್ಲಿ ಸರಕುಗಳನ್ನು ದಾಸ್ತಾನು ಮಾಡಲಿಕ್ಕೆ ಅಪ್ಪಣೆ.

9. (1) ಯಾವ ಮಗ್ಗದ ಕಾರ್ಖಾನೆಯಮಾಲೀಕನಾವರೂ ಯಾವ ಸರಕುಗಳ ವಿಷಯವಾಗಿ 5ನೇಪ್ರಕರಣದ ಮೇರೆಗೆ ಸುಂಕ ವಸೂಲ್ಮಾಡಲ್ಪಡಬಹುದಾಗಿದ್ದರೂ 6ನೇ ಪ್ರಕರಣದ ಮೇರೆಗೆ ಅದ್ಯಾಪಿ ಸುಂಕ ಮೊಕರರಾಗದೆ ಇರುತ್ತದೊ, ಆ ಸರಕುಗಳನ್ನು ಒಂದು ಕೋಠಿಯಲ್ಲಿ ದಾಸ್ತಾನು ಮಾಡಲಿಕ್ಕೆ ಅಪ್ಪಣೆ ಬಗ್ಗ್ಯಾಗಿ ಅರ್ಜಿ ಕೊಡಬಹುದು.

(2) ಅಂಥಾ ಅರ್ಜಿಯು ಬರಹಮೂಲಕವಾಗಿದ್ದು ಅದಕ್ಕೆ ಅರ್ಜಿದಾರನ ರುಜು ಇರತಕ್ಕದ್ದು ಮತ್ತು ಮೈಸೂರ್ ಗವರ್ನಮೆಂಟಿನವರಿಂದ ನಿರ್ದೇಶಿಸಲ್ಪಡಬಹುದಾದ ನಮೂನೆಯಲ್ಲಿರತಕ್ಕದ್ದು.

ಹಾಗೆ ದಾಸ್ತಾನುಮಾಡಿದ ಸರಕುಗಳಿಗೆ ಸುಂಕದ ಮಾಫಿ.

10. ಯಾವದಾದರೂ ಸರಕುಗಳನ್ನು ಒಂದು ಕೋಠಿಯಲ್ಲಿ ದಾಸ್ತಾನುಮಾಡಿದಾಗ್ಯೆ ಯಾವ ಕಾಲದಲ್ಲಿ ಆ ಸರಕುಗಳು ಉತ್ಪತ್ತಿಯಾದವೋ ಆ ಕಾಲದ ಬಗ್ಗೆ 5ನೇ ಪ್ರಕರಣಕ್ಕನುಗುಣವಾಗಿ ಕಳುಹಿಸುವ ಲೆಕ್ಕದಲ್ಲಿ ಯಾ ಆಕಾಲಕ್ಕೆ ಸಂಬಂಧಿಸುವ ಒಂದು ಪ್ರತ್ಯೇಕ ಲೆಕ್ಕದಲ್ಲಿ ಅವರ ಮೊತ್ತವನ್ನು ಮತ್ತು ತಪ್ಸೀಲನ್ನು ನಮೂದಿಸಿ ಅವು ಹಾಗೆ ದಾಸ್ತಾನು ಮಾಡಲ್ಪಟ್ಟಿರುತ್ತದೆಂದು ಕಾಣಿಸತಕ್ಕದ್ದು ಮತ್ತು ಸದರೀ ಸರಕುಗಳನ್ನು ಸುಂಕ ನಿರ್ಣಯಿಸಿ ವಸೂಲ್ ಮಾಡುವಾಗ್ಯೆ ಲೆಕ್ಕದಿಂದ ವಜಾಮಾಡತಕ್ಕದ್ದು.

Inspection.

ಮೇಲ್ವಿಚಾರಣೆ.

ಮಗ್ಗದ ಕಾರ್ಖಾನೆಗಳನ್ನು ಆಜಮಾಯಿಷಿ ಮಾಡಿ ರಿಕಾರ್ಡುಗಳ ಮತ್ತು ಲೆಕ್ಕಗಳ ನಕಲುಗಳನ್ನು ತೆಗೆದುಕೊಳ್ಳಲಿಕ್ಕೆ ಡೆಪ್ಯುಟಿಕಮ್ಮಿಷನರಿಗೆ ಅಧಿಕಾರ.

11. (1) ಡೆಪ್ಯುಟಿ ಕಮ್ಮಿಷನರು ಅಥವಾ ಈ ವಿಷಯದಲ್ಲಿ ಮೈಸೂರ್ ಗವರ್ನಮೆಂಟಿನವರಿಂದ ಕ್ರಮವಾಗಿ ನೇಮಿಸಲ್ಪಟ್ಟ ಯಾರಾದರೂ ಆಫಿಸರು ಯಾವ ಮಗ್ಗದ ಕಾರ್ಖಾನೆಗೆ ಯಾದರೂ ಕೆಲಸ ನಡೆಯುವಾಗ್ಯೆ ನ್ಯಾಯವಾದ ಯಾವ ಕಾಲಗಳಲ್ಲಾಗಲಿ ನಿರಾತಂಕವಾಗಿ ಹೋಗಬಹುದು, ಮತ್ತು ಆ ವಿಷಯದಲ್ಲಿ ಮೈಸೂರ್ ಗವರ್ನಮೆಂಟಿನವರ ಹುಕುಮಿಗೆ ಒಳಪಟ್ಟು ಯಾವದಾದರೂ ಮಗ್ಗದ ಕಾರ್ಖಾನೆಯ ಯಾವ ಭಾಗಕ್ಕಾದರೂ ಹೋಗಬಹುದು.

(2) ಅಂಥಾ ಯಾವ ಆಫಿಸರಾದರೂ ಯಾವ ಸಮಯದಲ್ಲಾಗಲಿ ಮಾಲೀಕನಿಗೆ ನೋಟಿಸು ಕೊಟ್ಟು ಯಾ ಕೊಡದೇನೇ ಯಾವ ಮಗ್ಗದ ಕಾರ್ಖಾನೆಯಲ್ಲಿ ಆಗಲಿ ನಡದ ಕೆಲಸಗಳ ಮತ್ತು ವಿಕ್ರಯಗಳ ರಿಕಾರ್ಡುಗಳನ್ನು ಅವರ ಲೆಕ್ಕಗಳನ್ನು ತನಿಖೆ ಮಾಡಿ ಯಾವ ಲೆಕ್ಕದ ನಿಜತ್ವವನ್ನು ಪರೀಕ್ಷಿಸುವ ಬಗ್ಗೆ ಅಥವಾ ಈ ರೆಗ್ಯುಲೇಷನಿನ ಅಥವಾ ಇದಕ್ಕನುಗುಣವಾದ ಯಾವದಾದರೂ ಕ್ರಮಗಳ ಉದ್ದೇಶಗಳ ಬಗ್ಗೆ ಅನುಭವ ಅವಶ್ಯವಿರುವ

ತಪ್ಶೀಲುಗಳನ್ನು ತಿಳಕೊಳ್ಳುವ ಬಗ್ಗೆ ಸದರೀ ಪೂರಾ ಅಥವಾ ಯಾವದಾದರೂ ರಿಕಾರ್ಡುಗಳ ಅಥವಾ ಲೆಕ್ಕಗಳ ನಕಲುಗಳನ್ನು ಅಥವಾ ಅವುಗಳ ಎಕ್ಸ್‌ಟ್ರಾಕ್ಟುಗಳನ್ನು ತೆಗೆದುಕೊಳ್ಳಬಹುದು.

(3) ಯಾವ ಮಗ್ಗದ ಕಾರ್ಖಾನೆಯ ಮಾಲೀಕನಾಗಲಿ ಯಾವದಾದರೂ ಒಂದು ವ್ಯಾಪಾರದ ರೀತಿಯ ವಿವರ ಯಾ ನಿಯಮಗಳು ಅಡಗಿ ಇರುವ ಯಾವದಾದರೂ ರಿಕಾರ್ಡನ್ನು ಅಥವಾ ಲೆಕ್ಕವನ್ನು ಡೆಪ್ಯುಟಿ ಕಮ್ಮಿಷನರ ಹುದ್ದೆಗಿಂತ ಕೀಳು ದರ್ಜೆಯ ಆಫೀಸರಿಗೆ ಒಪ್ಪಿಸುವದಕ್ಕೆ ಆಕ್ಷೇಪಿಸಬಹುದು; ಆದರೆ ಹಾಗೆ ಆಕ್ಷೇಪಿಸುವಪಕ್ಷದಲ್ಲಿ, ಮಾಲೀಕನು ತನ್ನ ಆಕ್ಷೇಪಣೆಯನ್ನು ಡೆಪ್ಯುಟಿ ಕಮ್ಮಿಷನರಿಗೆ ಕಳುಹಿಸುವದಕ್ಕಾಗಿ ಬರಹ ಮೂಲಕ ಆ ಆಫೀಸರ ಹತ್ತರ ಕೊಡಬೇಕು, ಮತ್ತು ಆ ಆಫೀಸರು ಡೆಪ್ಯುಟಿ ಕಮ್ಮಿಷನರ ಹುಕುಂ ನಿರೀಕ್ಷಣೆ ಮೇಲೆ ಆ ರಿಕಾರ್ಡನ್ನು ಅಥವಾ ಲೆಕ್ಕವನ್ನು ಕೂಡಲೆ ಆ ಸ್ಥಳದಲ್ಲಿಯೇ ಮೊಹರು ಮಾಡಿ ಇಡಬಹುದು.

ತಿಳಿದುಬಂದ ಸಮಾಚಾರವು ರಹಸ್ಯವಾಗಿರುತ್ತದೆಂದು ಎಣಿಸತಕ್ಕದ್ದು.

12. ಅಂಥಾ ಸಮಸ್ತ ನಕಲುಗಳು, ಎಕ್ಸ್‌ಟ್ರಾಕ್ಟುಗಳು ಮತ್ತು ಯಾವ ಮಗ್ಗದ ಕಾರ್ಖಾನೆ ತನಿಖೆ ಕಾಲದಲ್ಲಾಗಲಿ ಅಂಥಾ ಯಾವ ಆಫೀಸರಿಗಾದರೂ ತಿಳಿಯಬಂದ ಇತರ ಯಲ್ಲಾ ಸಮಾಚಾರವು ಖಂಡಿತವಾಗಿ ರಹಸ್ಯವಾದ್ದಾಗಿ ಎಣಿಸಲ್ಪಡತಕ್ಕದ್ದು, ಮತ್ತು ಅಂಥಾ ರಹಸ್ಯವನ್ನು ಮೇಲಧಿಕಾರಸ್ಥನಿಗಲ್ಲದೆ ಇತರ ಯಾವ ಮನುಷ್ಯನಿಗೂ ಪೂರ್ವಭಾವಿಯಾಗಿ ಮೈಸೂರ ಗವರ್ನಮೆಂಟಿನವರ ಬರಹ ಮೂಲಕವಾದ ಅನುಮತಿಯನ್ನು ಪಡೆದ ಹೊರ್ತು ಹೊರಪಡಿಸಕೂಡದು.

Offences and Penalties.
ತಕ್ಸೀರುಗಳು ಮತ್ತು ದಂಡನೆಗಳು.

ತಕ್ಸೀರುಗಳ ಬಗ್ಗೆ ದಂಡನೆಗಳು.

13. ಕೆಳಗಣ ಷೆಡ್ಯೂಲಿನ 1ನೇ ರಿಕಾನೆಯಲ್ಲಿ ನಮೂದಿಸಲ್ಪಟ್ಟ ತಕ್ಸೀರುಗಳ ಬಗ್ಗೆ ಆಯಾ ತಕ್ಸೀರಿನ ವಿಷಯವಾಗಿ ಅದರ ಎರಡನೇ ರಿಕಾನೆಯಲ್ಲಿ ನಮೂದಿಸಲ್ಪಟ್ಟಷ್ಟರ ಮಟ್ಟಿಗೆ ಶಿಕ್ಷೆಯನ್ನು ವಿಧಿಸಬಹುದು:—

1. ಈ ರೆಗ್ಯುಲೇಷನಿಗನುಗುಣವಾಗಿ ವಿರ್ಪಟ್ಟ ಯಾವದಾದರೂ ಕ್ರಮಕ್ಕೆ ವಿರೋಧವಾಗಿ ನಡೆದುಕೊಳ್ಳೋಣ.	ಐನೂರು ರೂಪಾಯಿಗೆ ಮೀರದ ದಂಡ.
2. ಸುಂಕದ ಯಾ ಅದರ ಎಷ್ಟಾದರೂ ಭಾಗದ ಪಾವತಿಯನ್ನು ತಪ್ಪಿಸಿಕೊಳ್ಳುವ ಇರಾದೆಯಿಂದ ಈ ರೆಗ್ಯುಲೇಷನಿಗನುಗುಣವಾಗಿ ಸುಂಕಕ್ಕೆ ಗುರಿಯಾಗುವ ಯಾವದಾದರೂ ಸರಕನ್ನು ಛಪಾಯಿಸೋಣ ಅಥವಾ ಛಪಾಯಿಸಲಿಕ್ಕೆ ಪ್ರಯತ್ನ ಮಾಡೋಣ ಅಥವಾ ಗೊತ್ತಿದ್ದು ಛಪಾಯಿಸಲೀಸೋಣ ಯಾ ಛಪಾವಣೆಯನ್ನು ವದಗಿಸೋಣ.	ಅಂಥಾ ಸರಕು ಮುಟ್ಟುಗೋಲು ವಿಧಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು ಮತ್ತು ಆ ತಕ್ಸೀರು ಸಾಬೀತುಪಟ್ಟ ಪ್ರತಿ ಮನುಷ್ಯನು ಆ ಸರಕಿನ ಮೌಲ್ಯದ ಮೂರರಷ್ಟಕ್ಕೆ ಮೀರದ ದಂಡ ತೆರಲಿಕ್ಕೆ ಗುರಿಯಾಗಿರತಕ್ಕದ್ದು.
3. 5ನೇ ಪ್ರಕರಣದಿಂದ ವಿಧಿಸಲ್ಪಟ್ಟ ಯಾವದೊಂದು ಲೆಕ್ಕವನ್ನು ತಯಾರ್ ಮಾಡಲಿಕ್ಕೆ ತಪ್ಪೋಣ ಅಥವಾ ಅದಕ್ಕೆ ದಸ್ತು ಹಾಕಲಿಕ್ಕೆ ಅಥವಾ ಅದನ್ನು ಪೂರೈಸುವದಕ್ಕೆ ತಿರಸ್ಕರಿಸೋಣ.	ಒಂದು ಸಾವಿರ ರೂಪಾಯಿಗೆ ಮೀರದ ದಂಡ.
4. ತನಗೆ ತಿಳಿದ ಮಟ್ಟಿನ ಆಮಲಿಗೆ ಮತ್ತು ತನ್ನ ಒಳ್ಳೆ ನಂಬಿಕೆಗೆ ಸರಿಯಾಗಿ ನಿಜವಲ್ಲದ ಒಂದು ವಿವರವನ್ನು ಕಾಣಿಸಿ ಅಂಥಾ ಯಾವದೊಂದು ಲೆಕ್ಕವನ್ನು ತಯಾರ್ಮಾಡಿ ಕಳುಹಿಸೋಣ.	ಒಂದು ದೃಢಪತ್ರಿಕೆಯಲ್ಲಿ ಸುಳ್ಳು ಹೇಳಿಕೆಯನ್ನು ನಮೂದಿಸಿದ ಬಗ್ಗೆ ಇಂಡಿಯನ್ ಪೀನಲ್ ಕೋಡಿನ 199ನೇ ಪ್ರಕರಣದಲ್ಲಿ ನಿಬಂಧಿಸಿರುವ ದಂಡನೆ.
5. ಸುಂಕಕ್ಕೆ ಮೋಸ ಮಾಡುವ ಇರಾದೆಯಿಂದ ಮಗ್ಗದ ಕಾರ್ಖಾನೆಯಲ್ಲಿಡಲ್ಪಟ್ಟ ಯಾವದಾದರೂ ರಿಕಾರ್ಡನ್ನು ಯಾ ಲೆಕ್ಕದ ಪುಸ್ತಕವನ್ನು ಬದಲಾಯಿಸೋಣ ಯಾ ಸುಳ್ಳುಪಡಿಸೋಣ.	ಸೃಷ್ಟನೆಯನ್ನು ಮಾಡಿದ ಬಗ್ಗೆ ಇಂಡಿಯನ್ ಪೀನಲ್ ಕೋಡಿನ 465ನೇ ಪ್ರಕರಣದಲ್ಲಿ ನಿಬಂಧಿಸಲ್ಪಟ್ಟ ದಂಡನೆ.
6. 15ನೇ ಪ್ರಕರಣದಲ್ಲಿ ನಿಬಂಧಿಸಲ್ಪಟ್ಟ ಮೇರೆಗೆ ಮಾದಿರಿಗಳನ್ನು ಇಡುವದಕ್ಕೆ ನ್ಯಾಯವಾದ ಸಬಬಿಲ್ಲದೆ ತಪ್ಪೋಣ.	ಪ್ರತಿ ತಕ್ಸೀರಿನ ಬಗ್ಗೆ ಇನ್ನೂರು ರೂಪಾಯಿಗೆ ಮೀರದ ದಂಡನೆ.
7. ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮದಿಂದ ನಿರ್ದೇಶಿಸಲ್ಪಡಬಹುದಾದಂಥಾ ಸರಿಯಾದ ರಿಕಾರ್ಡುಗಳನ್ನು ಮತ್ತು ಲೆಕ್ಕದ ಪುಸ್ತಕಗಳನ್ನು ಇಡಲಿಕ್ಕೆ ತಪ್ಪೋಣ.	ಐನೂರು ರೂಪಾಯಿಗೆ ಮೀರದ ದಂಡ ಮತ್ತು ತಪ್ಪು ಸಾಬೀತಾದ ತಾರೀಖಿನ ನಂತರ ಆ ತಕ್ಸೀರು ಇನ್ನೂ ನಡಿಯುತ್ತಾ ಬರುವ ಪ್ರತಿ ದಿವಸದ ಬಗ್ಗೆ ಇಪ್ಪತ್ತು ರೂಪಾಯಿನ ಹೆಚ್ಚು ದಂಡನೆ.
8. ಈ ರೆಗ್ಯುಲೇಷನಿಗನುಗುಣವಾಗಿ ವಿರ್ಪಟ್ಟ ಯಾವದಾದರೂ ಕ್ರಮದ ಮೇರೆಗೆ ತಯಾರ್ಮಾಡಿ ಕಳುಹಿಸಲ್ಪಡಬೇಕಾಗಿದ್ದ ಲೆಕ್ಕವನ್ನು ತಯಾರ್ಮಾಡಿ ಕಳುಹಿಸಲಿಕ್ಕೆ ತಪ್ಪೋಣ.	ಒಂದು ಸಾವಿರ ರೂಪಾಯಿಗೆ ಮೀರದ ದಂಡನೆ.

9. ಈ ರೆಗ್ಯುಲೇಷನಿಗನುಗುಣವಾಗಿ ಕೊಡಲ್ಪಟ್ಟ ಯಾವದಾದರೂ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಡೆಪ್ಯುಟಿ ಕಮಿಷನರನ್ನು ಅಥವಾ ಇತರ ಆಫಿಸರನ್ನು ಬುದ್ಧಿಪೂರ್ವಕವಾಗಿ ಆತಂಕ ಪಡಿಸೋಣ.	ಆರು ತಿಂಗಳಿಗೆ ಮೀರದ ಕೈದು ಅಥವಾ ಒಂದು ಸಾವಿರ ರೂಪಾಯಿಗೆ ಮೀರದ ಜುರ್ಮಾನೆ ಅಥವಾ ಎರಡೂ.
10. ಯಾವದಾದರೂ ಮಗ್ಗದ ಕಾರ್ಖಾನೆಯಲ್ಲಿ ಯಾವದಾದರೂ ಸರಕು ಯಾವ ಸ್ಥಳದಲ್ಲಿ, ಪೆಟ್ಟಿಗೆಯಲ್ಲಿ ಅಥವಾ ಮುಚ್ಚಳವಿರುವ ಪಾತ್ರೆಯಲ್ಲಿ ಇಡಲ್ಪಟ್ಟದ್ದು ಕಂಡು ಬಂದು ಡೆಪ್ಯುಟಿ ಕಮಿಷನರಿಗೆ ಸಮಾಧಾನವಾಗುವಹಾಗೆ ಆ ಬಗ್ಯೆ ಸಬಬು ಕೊಡದಿದ್ದರೆ.	ಅಂಥಾ ಸರಕು ಮುಟ್ಟುಗೋಳು ವಿಧಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು.
11. ಲೆಕ್ಕದಲ್ಲಿ ದಾಖಲ್ಮಾಡಿದ ಮೊತ್ತಕ್ಕಿಂತ ಜಾಸ್ತಿಯಾಗಿ ಅಥವಾ ಆ ಲೆಕ್ಕದಲ್ಲಿರುವ ವಿವರಕ್ಕೆ ಸಂಬಂಧಿಲ್ಲದೆ ಯಾವದಾದರೂ ಮಗ್ಗದ ಕಾರ್ಖಾನೆಯಲ್ಲಿ ಸರಕು ಕಂಡುಬಂದರೆ.	ಅಂಥಾ ಸರಕು ಮುಟ್ಟುಗೋಳು ವಿಧಿಸಲ್ಪಡಲಿಕ್ಕಾಗಲಿ ಅಥವಾ ಮೈಸೂರ್ ಗವರ್ನಮೆಂಟಿನವರು ವಿಧಿಸಬಹುದಾದಂಥಾ ಜಾಸ್ತಿ ಸುಂಕಕ್ಕಾಗಲಿ ಗುರಿಯಾಗಿರತಕ್ಕದ್ದು.
12. ಯಾವದಾದರೂ ಅರಳೀ ಸರಕುಗಳನ್ನು ಲೆಕ್ಕಮಾಡಿಯಾಗಲಿ ಮೂಟೆ ಮೂಟೆಗಳಾಗಿಯಾಗಲಿ ಕೊಂಡು ಹೋಗುವಾಗ್ಯೆ ಸುಂಕಕ್ಕೆ ಹಾನಿ ಉಂಟಾಗುವ ಹಾಗೆ ಅದನ್ನು ಕುರಿತು ಯಾವುದಾದರೂ ಲೋಪವನ್ನು ಅಥವಾ ಸುಳ್ಳು ವಿವರವನ್ನು ಕೊಟ್ಟದ್ದು ಕಂಡು ಹಿಡಿಯಲ್ಪಟ್ಟರೆ.	ಅಂಥಾ ಹೆಚ್ಚು ಕಡಮೆಯು ಘರಾಮೋಷಿಯಿಂದ ಆದದ್ದು ಎಂತ ಡೆಪ್ಯುಟಿ ಕಮಿಷನರಿಗೆ ಅಥವಾ ಇತರ ಆಫಿಸರಿಗೆ ಸಮಾಧಾನವಾಗುವ ಹಾಗೆ ರುಜುವಾದ ವಿನಹಾ ಹಾಗೆ ಲೋಪಮಾಡಿದ ಅಥವಾ ಸುಳ್ಳು ವಿವರ ಕೊಟ್ಟ ಮನುಷ್ಯನು ಅಂಥಾ ಲೋಪ ಅಥವಾ ಸುಳ್ಳು ವಿವರದಿಂದ ಮೈಸೂರ್ ಗವರ್ನಮೆಂಟಿಗೆ ಲುಕ್ಸಾನು ಆಗುತ್ತಿದ್ದ ಸುಂಕದ ಮೊಬಲಗಿನ ಹತ್ತು ಪಾಲಿಗೆ ಮೀರದಷ್ಟು ದಂಡನೆಗೆ ಗುರಿಯಾಗತಕ್ಕದ್ದು.
13. ಯಾವ ಡೆಪ್ಯುಟಿ ಕಮಿಷನರಾಗಲಿ ಅವರಿಗೆ ತಾಬೇದಾರರಾದ ಇತರ ಆಫಿಸರಾಗಲಿ ಈ ರೆಗ್ಯುಲೇಷನಿಗೆ ಅಥವಾ ಇದಕ್ಕನುಗುಣವಾಗಿ ಏರ್ಪಟ್ಟ ಯಾವದಾದರೂ ಕ್ರಮಕ್ಕೆ ವಿರೋಧವಾದ ಯಾವದೊಂದು ಕೃತ್ಯವನ್ನಾದರೂ ಮಾಡಿದರೆ ಅಥವಾ ಮಾಡತಕ್ಕ ಯಾವದಾದರೂ ಕೃತ್ಯವನ್ನು ಮಾಡದಿದ್ದರೆ ಅಥವಾ ಈ ರೆಗ್ಯುಲೇಷನಿಗನುಗುಣವಾಗಿ ತಮಿಗೆ ಕೊಡಲ್ಪಟ್ಟ ಅಧಿಕಾರವನ್ನು ಯಾವ ಮನುಷ್ಯನಿಗಾದರೂ ಹಾನಿ ಮಾಡುವ ಅಥವಾ ತೊಂದರೆ ಕೊಡುವ ಇರಾದೆಯಿಂದ ಉಪದ್ರಕರವಾಗಿಯೂ ಅನಾವಶ್ಯಕವಾಗಿಯೂ ನಡಿಸಿದರೆ	ಅಂಥಾ ಡೆಪ್ಯುಟಿ ಕಮಿಷನರು ಅಥವಾ ಇತರ ಆಫಿಸರು ತಕ್ಸೀರು ಸಾಬೀತು ಪಟ್ಟಲ್ಲಿ ಐನೂರು ರೂಪಾಯಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.
14. ಈ ರೆಗ್ಯುಲೇಷನಿನ 12ನೇ ಪ್ರಕರಣದ ವಿಧಿಗಳಿಗೆ ವಿರೋಧವಾಗಿ ವರ್ತಮಾನವನ್ನು ಕೊಡೋಣ.	ಒಂದು ವರುಷದ ಪರ್ಯಂತ ಸಾದಾ ಕೈದು ಅಥವಾ 1000 ರೂಪಾಯಿ ವರಿಗೆ ಜುರ್ಮಾನೆ ಅಥವಾ ಎರಡೂ.

ಅಧಿಕಾರವಿರುವ ಮಾಜಿಸ್ಟ್ರೇಟರು.

14. (1) ಈ ರೆಗ್ಯುಲೇಷನಿಗೆ ವಿರೋಧವಾಗಿ ನಡಿಸಿದ ಸಮಸ್ತ ತಕ್ಸೀರುಗಳನ್ನು ಡಿಸ್ಟ್ರಿಕ್ಟ ಮಾಜಿಸ್ಟ್ರೇಟ್ ಮಾತ್ರವಾಗಲಿ ಒಂದನೇ ಕ್ಲಾಸ ಮಾಜಿಸ್ಟ್ರೇಟ್ ಮಾತ್ರವಾಗಲಿ ವಿಚಾರಣೆ ಮಾಡಬಹುದು.

ಸರಕುಗಳ ಮುಟ್ಟುಗೋಳು ಮಾಡಲ್ಪಡುವಾಗ್ಯೆ ಅವುಗಳ ಕಟ್ಟುವಾಸಗಳು ಮತ್ತು ಆ ಕಟ್ಟುಗಳೊಳಗಿರುವ ಸಾಮುಗ್ರಿಗಳು ಸೇರಿದ್ದು.

(2) ಈ ರೆಗ್ಯುಲೇಷನಿನ ಪ್ರಕಾರ ಮುಟ್ಟುಗೋಳು ಮಾಡಲ್ಪಡುವ ಯಾವದಾದರೂ ಸರಕಿನಲ್ಲಿ ಅಂಥಾ ಸರಕು ದೊರಕುವ ಗಂಟು ಅಥವಾ ಮೂಟೆಯು ಯಾವ ಕಟ್ಟುವಾಸವಾಗಲಿ ಆದರೊಳಗೆ ಇರತಕ್ಕ ಇತರ ಸಮಸ್ತ ಸಾಮುಗ್ರಿಗಳಾಗಲಿ ಶೇರಿದವಾಗಿರುತ್ತವೆ

ಮತ್ತು ಸರಕು ಸಾಗಿಸುವದರಲ್ಲಿ ಉಪಯೋಗಿಸಲ್ಪಡುವ ವಾಹನಗಳು ಮತ್ತು ಜಾನುವರುಗಳು ಸೇರಿದ್ದು.

ಈ ರೆಗ್ಯುಲೇಷನಿನಂತೆ ಮುಟ್ಟುಗೋಳಿಗೆ ಒಳಪಟ್ಟ ಯಾವದಾದರೂ ಸರಕನ್ನು ಒಯ್ಯುವ ಬಗ್ಯೆ ಉಪಯೋಗಿಸಲ್ಪಟ್ಟ ಪ್ರತಿ ಚಕಡಾ ಗಾಡಿ ಅಥವಾ ಇತರೋಪಾಯದ ವಾಹನ ಮತ್ತು ಪ್ರತಿ ಕುದುರೆ ಅಥವಾ ಇತರ ಜಾನುವರು ಅದೇ ಮೇರಿಗೆ ಮುಟ್ಟುಗೋಳಿಗೊಳಗಾಗತಕ್ಕದ್ದು.

Miscellaneous.

ವಿವಿಧ ವಿಷಯ.

ಸರಕು ತಯಾರಿ ಕಾಲದಲ್ಲಿ ಮಗ್ಗದ ಕಾರ್ಖಾನೆಯ ಮಾಲೀಕರು ಕೆಲವು ಸರಕುಗಳ ಮಾದಿಗಳನ್ನು ತೆಗೆದಿಡತಕ್ಕದ್ದು ಮತ್ತು ಅವುಗಳು ಆಜಮಾಯಿಷಿ ಬಗ್ಯೆ ಒದಗತಕ್ಕದ್ದು.

15. (1) ಪ್ರತಿ ಮಗ್ಗದ ಕಾರ್ಖಾನೆಯ ಮಾಲೀಕನು, ಯಾವ ಸರಕುಗಳ ವಿಷಯವಾಗಿ ನಿರಖು ಕ್ರಯ ನಿರ್ಣಯಿಸಲ್ಪಟ್ಟಿದೆಯೋ ಆ ಸರಕುಗಳಲ್ಲದೆ ಇತರ ಸರಕುಗಳ ಸಂಗತಿಯಲ್ಲಿ ಅವುಗಳನ್ನು ತಯಾರ್ಮಾಡುವ ಕಾಲದಲ್ಲಿ ಅವುಗಳ ಮಾದಿಯನ್ನು ಅಥವಾ ಮಾದಿಗಳನ್ನು ತೆಗೆದಿಟ್ಟು ಸದರೀ ಸರಕುಗಳು ಉತ್ಪತ್ತಿಯಾದನಂತರ ಕನಿಷ್ಟ ಪಕ್ಷ ಆರು ತಿಂಗಳ ವರೆಗೆ ಅಂಥಾ ಮಾದಿಗಳನ್ನು ನೋಡುವ ಬಗ್ಯೆ ಕಾಪಾಡತಕ್ಕದ್ದು.

(2) ಅಂಥಾ ಮಾದ್ರಿಗಳು ಎಲ್ಲಾ ಸಮಯಗಳಲ್ಲಿಯೂ ಡೆಪ್ಯುಟಿ ಕಮ್ಮಿಷನರ ಅಥವಾ 11ನೇ ಪ್ರಕರಣಕ್ಕನುಗುಣವಾಗಿ ನೇಮಿಸಲ್ಪಟ್ಟ ಯಾವ ಆಫಿಸರ ಅಜಮಾಯಿಷಿ ಬಗ್ಯೆ ಸಿಕ್ಕುವ ಹಾಗೆ ಇರತಕ್ಕದ್ದು. ಮತ್ತು ಸದರೀ ಸರಕುಗಳನ್ನೇ ಪರೀಕ್ಷಿಸಲು ಅನುಕೂಲವಾಗದಿದ್ದ ಪಕ್ಷದಲ್ಲಿ ಈ ರೆಗ್ಯುಲೇಷನಿನಂತೆ ಅವುಗಳ ಮೇಲೆ ವಸೂಲಾಗತಕ್ಕ ಸುಂಕವನ್ನು ಮೊಕರರ್ಮಾಡುವ ಬಗ್ಯಾಗಿ ಮೇಲ್ಕಂಡ ಮಾದ್ರಿಗಳನ್ನು ಪರೀಕ್ಷಿಸಿದನಂತರ ಅಂಥಾ ಸರಕುಗಳ ಖಿಮ್ಮತ್ತನ್ನು ಠರಾಯಿಸೋಣ ಸಾಕಾಗಿರುತ್ತೆ.

(3) ಯಾವದಾದರೂ ನಿರ್ದೇಶಿಸಲ್ಪಟ್ಟ ಸಂಗತಿಯಲ್ಲಿ ಈ ಪ್ರಕರಣದ ಉದ್ದೇಶಗಳ ಬಗ್ಯೆ ಯಾವದು ಒಂದು ಸಾಕಾದ ಮಾದ್ರಿಯಾಗಿರತಕ್ಕದ್ದೆಂಬದನ್ನು, ಮೈಸೂರ್ ಗವರ್ನಮೆಂಟಿನವರು ಒಂದು ನಿಬಂಧನೆಯ ದ್ವಾರಾ ವಿವರಿಸಬಹುದು.

ಈ ರೆಗ್ಯುಲೇಷನಿಗನುಗುಣವಾದ ಹುಕುಮುಗಳನ್ನು ತೆಗೆದು ಹಾಕಲಿಕ್ಕಾಗಲಿ ತಬ್ದಿಲ್ ಮಾಡಲಿಕ್ಕಾಗಲಿ ಗವರ್ನಮೆಂಟಿನವರಿಗೆ ಅಧಿಕಾರ.

16. ಈ ರೆಗ್ಯುಲೇಷನಿಗನುಗುಣವಾಗಿ ಕೊಡೋಣಾದ ಯಾವದಾದರೂ ತೀರ್ಪಿನಿಂದಲಾಗಲಿ ಹುಕುಮಿನಿಂದಲಾಗಲಿ ನಷ್ಟ ಹೊಂದಿದ ಯಾವ ಮನುಷ್ಯನಾದರೂ ಅರ್ಜಿಕೊಟ್ಟಲ್ಲಿ ಮೈಸೂರ್ ಗವರ್ನಮೆಂಟಿನವರು ಅಂಥಾ ತೀರ್ಪನ್ನು ಅಥವಾ ಹುಕುಮನ್ನು ರದ್ದು ಮಾಡಬಹುದು ಅಥವಾ ತಬ್ದಿಲ್ ಮಾಡಬಹುದು.

ನಮೂನೆಗಳನ್ನು ತೆಗೆದುಕೊಳ್ಳಲಿಕ್ಕೆ ಅಧಿಕಾರ.

17. (1) ಡೆಪ್ಯುಟಿ ಕಮ್ಮಿಷನರಾಗಲಿ 11ನೇ ಪ್ರಕರಣಕ್ಕನುಗುಣವಾಗಿ ನೇಮಕಪಟ್ಟ ಆಫಿಸರಾಗಲಿ ಯಾವದಾದರೂ ಸರಕಿನ ನಮೂನೆಗಳನ್ನು ಪರೀಕ್ಷೆ ಬಗ್ಯೆ ಅಥವಾ ಅದರ ಮೌಲ್ಯವನ್ನು ನಿರ್ಣಯಿಸುವ ಬಗ್ಯೆ ಅಥವಾ ಇತರ ಯಾವದಾದರೂ ಅವಶ್ಯಕವಾದ ಉದ್ದೇಶದ ಬಗ್ಯೆ ತೆಗೆದುಕೊಳ್ಳಬಹುದು.

(2) ಮಾಲೀಕನು 11ನೇ ಪ್ರಕರಣಕ್ಕನುಗುಣವಾಗಿ ನೇಮಕಪಟ್ಟ ಆಫಿಸರಿಗೆ ಯಾವದಾದರೂ ನಮೂನೆಯನ್ನು ಕೊಡಬೇಕಾಗಿ ಕೇಳಲ್ಪಟ್ಟಲ್ಲಿ ಅಂಥಾ ನಮೂನೆಯನ್ನು ಡೆಪ್ಯುಟಿಕಮ್ಮಿಷನರ ಹೆಸರಿಗೆ ವಿಳಾಸ ಬರೆದ ಒಂದು ಲಕೋಟೆಯಲ್ಲಿ ಹಾಕಿ ಮೊಹರು ಮಾಡತಕ್ಕದ್ದು; ಮತ್ತು ಅಂಥಾ ಸಂಗತಿಯಲ್ಲಿ ಸದರೀ ಆಫಿಸರು ಅಂಥಾ ಲಕೋಟೆಯನ್ನು ಬಜಿನಸು ಡೆಪ್ಯುಟಿ ಕಮ್ಮಿಷನರಿಗೆ ಕೊಡತಕ್ಕದ್ದು.

(3) ಅಂಥಾ ಪ್ರತಿ ನಮೂನೆಯನ್ನು ಸಾಧ್ಯವಿದ್ದರೆ ಮಾಲೀಕನಿಗೆ ವಾಪಸು ಕೊಡತಕ್ಕದ್ದು ಅಥವಾ ಆತನ ಅನುಮತಿಯಿಂದ ಡೆಪ್ಯುಟಿ ಕಮ್ಮಿಷನರು ಅದನ್ನು ವಿಕ್ರಯಿಸಿ ಹುಟ್ಟುವಳಿಯಾದ ಐವಜನ್ನು ಮಾಲೀಕನ ಲೆಕ್ಕಕ್ಕೆ ದಾಖಲು ಮಾಡತಕ್ಕದ್ದು.

ಮಗ್ಗದ ಕಾರ್ಖಾನೆಯ ಮಾಲೀಕರು ರಿಕಾರ್ಡುಗಳನ್ನೂ ಲೆಕ್ಕಗಳನ್ನೂ ಇಡತಕ್ಕದ್ದು

18. ಪ್ರತಿ ಮಗ್ಗದ ಕಾರ್ಖಾನೆಯ ಮಾಲೀಕನು ಈ ರೆಗ್ಯುಲೇಷನಿಗನುಗುಣವಾಗಿ ಏರ್ಪಟ್ಟ ಯಾವದಾದರೂ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದಂಥಾ ರಿಕಾರ್ಡುಗಳನ್ನೂ ಲೆಕ್ಕದ ಪುಸ್ತಕಗಳನ್ನೂ ಇಡತಕ್ಕದ್ದು.

ಯಂತ್ರದ ಮೂಲಕ ಉತ್ಪತ್ತಿಯಾದ ಅರಳೇ ನೂಲುಗಳ ಲೆಕ್ಕಗಳನ್ನು ಕಾಲಕಾಲಕ್ಕೆ ಮಗ್ಗದ ಕಾರ್ಖಾನೆಯ ಮಾಲೀಕರು ತಯಾರ್ಮಾಡಿ ಕಳುಹಿಸತಕ್ಕದ್ದು.

19. ಕೈ ಕೆಲಸದಿಂದಲ್ಲದೆ ಅನ್ಯಥಾ ನಡಿಸಲ್ಪಡುವ ಯಂತ್ರದಿಂದ ಅರಳೇ ನೂಲುಗಳು ತಯಾರ್ ಮಾಡಲ್ಪಡುವ ಪ್ರತಿ ಒಂದು ಮಗ್ಗದ ಕಾರ್ಖಾನೆಯ ಅಥವಾ ಸ್ಥಳದ ಮಾಲೀಕನು ಅಂಥಾ ಸಮಸ್ತ ನೂಲುಗಳ ಮೊತ್ತವನ್ನೂ ವಿವರವನ್ನೂ ಕುರಿತು ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮದಿಂದ ನಿರ್ದೇಶಿಸಲ್ಪಡಬಹುದಾದ ನಮೂನೆಯಲ್ಲಿ ಮತ್ತು ತಪ್ಸೀಲುಗಳೊಂದಿಗೂ ವಾಯಿದೆಗಳಂತೆಯೂ ಲೆಕ್ಕಗಳನ್ನು ಕಾಲಕಾಲಕ್ಕೆ ಸರಿಯಾಗಿ ತಯಾರ್ಮಾಡಿಸಿ ಡೆಪ್ಯುಟಿ ಕಮ್ಮಿಷನರಿಗೆ ಕಳುಹಿಸತಕ್ಕದ್ದು.

ಕ್ರಮಗಳನ್ನು ಏರ್ಪಡಿಸಲಿಕ್ಕೆ ಗವರ್ನಮೆಂಟಿನವರಿಗೆ ಅಧಿಕಾರ.

20. (1) ಮೈಸೂರ್ ಗವರ್ನಮೆಂಟಿನವರು ಈ ರೆಗ್ಯುಲೇಷನಿಗನುಗುಣವಾಗಿ ಆಗಿಂದಾಗ್ಯೆ ಕ್ರಮಗಳನ್ನು ಏರ್ಪಡಿಸಬಹುದು,—

(a) ಈ ರೆಗ್ಯುಲೇಷನಿನಿಂದ ಅಥವಾ ಇದರ ಮೇರೆಗೆ ವಿಧಿಸಲ್ಪಟ್ಟ ಯಾವದೊಂದು ಲೆಕ್ಕದ ನಮೂನೆಯನ್ನು ಆಯಾ ಲೆಕ್ಕದಲ್ಲಿ ನಮೂದಿಸತಕ್ಕ ತಪ್ಸೀಲುಗಳನ್ನು ಅದು ಸರಿಯಾಗಿಧೆಯೆಂದು ದೃಢಪಡಿಸುವ ವಿಧವನ್ನು ಮತ್ತು ಅದರ ವಿಷಯವಾಗಿ ಅವಶ್ಯವಿರಬಹುದಾದ ಇತರ ಎಲ್ಲಾ ಷರತ್ತುಗಳನ್ನು ನಿರ್ದೇಶಿಸಿ;

(b) ನೂತ ನೂಲುಗಳ ಲೆಕ್ಕಗಳನ್ನು ಕೊಡಬೇಕೆಂಬದಾಗಿ;

c) ಡೆಪ್ಯುಟಿ ಕಮ್ಮಿಷನರು 6ನೇ ಪ್ರಕರಣಕ್ಕನುಗುಣವಾಗಿ ಕೊಡತಕ್ಕ ನೋಟಿಸಿನ ನಮೂನೆಯನ್ನು ನಿರ್ದೇಶಿಸಿ;

(d) ಮಗ್ಗದ ಕಾರ್ಖಾನೆಗಳ ಅಜಮಾಯಿಷಿ ಮತ್ತು ಅದಕ್ಕೆ ಸಂಬಂಧಪಟ್ಟ ಡೆಪ್ಯುಟಿ ಕಮ್ಮಿಷನರ ಮತ್ತು ಇತರ ಆಫಿಸರ ಅಧಿಕಾರಗಳನ್ನೂ ಕೆಲಸಗಳನ್ನೂ ಕ್ರಮಗೊಳಿಸಿ;

(e) ಕೋಠಿಗಳನ್ನು ಕುರಿತು ಈ ರೆಗ್ಯುಲೇಷನಿಗನುಗುಣವಾದ ನಿಬಂಧನೆಯನ್ನು ಮತ್ತು ಕೋಠಿಗಳಲ್ಲಿ ಸರಕುಗಳನ್ನು ದಾಸ್ತಾನುಮಾಡುವದನ್ನೂ ಅವುಗಳಿಂದ ಹೊರಗೆ ಕೊಂಡುಹೋಗುವದನ್ನೂ ಆ ವಿಷಯವಾಗಿ ಡೆಪ್ಯುಟಿ ಕಮ್ಮಿಷನರ ಅಧಿಕಾರಗಳನ್ನೂ ಕೆಲಸಗಳನ್ನೂ ಕ್ರಮಗೊಳಿಸಿ;

(f) ಈ ರೆಗ್ಯುಲೇಷನಿನ ಮೇರೆಗೆ ಮಗ್ಗದ ಕಾರ್ಖಾನೆಗಳ ಮಾಲೀಕರು ಇಡತಕ್ಕ ರಿಕಾರ್ಡುಗಳನ್ನೂ ಲೆಕ್ಕದಪುಸ್ತಕಗಳನ್ನೂ ನಿರ್ದೇಶಿಸಿ; ಮತ್ತು

(g) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ನಿಬಂಧನೆಗಳನ್ನು ಜಾರಿಯಲ್ಲಿ ತರುವದಕ್ಕೋಸ್ಕರ ಕ್ರಮಗಳನ್ನು ಏರ್ಪಡಿಸಬಹುದು.

(2) ಅಂಥಾ ಯಾವದಾದರೂ ಕ್ರಮವನ್ನು ಅದರಲ್ಲಿ ನಮೂದಿಸಲ್ಪಟ್ಟ ಯಾವದಾದರೂ ಸ್ಥಳಕ್ಕೆ ಯಾ ಸ್ಥಳಗಳಿಗೆ ಮಾತ್ರ ಲಗಾವುಮಾಡಬಹುದು.

ಒಪ್ಪಂದಗಳು ನಡೆದಿದ್ದರೆ ಸುಂಕ ಜಾಸ್ತಿ ಅಥವಾ ಕಮ್ಮಿಯನ್ನು ದಾಖಲ್ ಅಥವಾ ವಜಾ ಮಾಡಬೇಕು.

21. ಸರಕಿನ ಬಿಕ್ರಿಬಗ್ಗೆ ಒಪ್ಪಂದ ನಡೆಯುವಾಗ್ಯೆ ಸುಂಕ ದಾಖಲಾಗಬೇಕಾಗಿಲ್ಲದ ಪಕ್ಷದಲ್ಲಿ ಸುಂಕದ ಪಾವತಿ ವಿಚಾರವಾಗಿ ಯಾವ ಒಡಂಬಡಿಕೆಯೂ ಇಲ್ಲದೆ ಬಿಕ್ರಿ ಒಪ್ಪಂದ ನಡದ ನಂತರವಾಗಲಿ ಅಥವಾ ಒಪ್ಪಂದದ ಕಾಲದಲ್ಲಿ ಸುಂಕದಾಖಲಾಗಬೇಕಾಗಿದ್ದು ಅಂಥಾ ಸುಂಕವು ಸಂದ ಸರಿಕಿನ ಬಿಕ್ರಿಗಾಗಿ ಒಪ್ಪಂದ ನಡೆದ ನಂತರವಾಗಲಿ ಯಾವ ಸರಿಕಿನ ಮೇಲಾಗಲಿ ಈ ರೆಗ್ಯುಲೇಷನಿನ ಪ್ರಕಾರ ಸುಂಕ ಮೊಕರರರಾದರೂ, ಹೆಚ್ಚಿಸಲ್ಪಟ್ಟರೂ, ತಗ್ಗಿಸಲ್ಪಟ್ಟರೂ ಅಥವಾ ಮಾಫ್‌ಮಾಡಲ್ಪಟ್ಟರೂ:—

(a) ಸಂದರ್ಭಾನುಸಾರ ಮೊಕರರಾದ ಅಥವಾ ಹೆಚ್ಚಿಸಲ್ಪಟ್ಟ ಸದರೀ ಸುಂಕವು ಪಾವತಿಮಾಡಲ್ಪಟ್ಟರೆ, ಬಿಕ್ರಿದಾರನು ಅಂಥಾ ಸುಂಕ ಅಥವಾ ಸುಂಕ ಜಾಸ್ತೀಗೆ ಸಮನಾದಷ್ಟು ಮೊಬಲಗನ್ನು ಸದರೀ ಒಪ್ಪಂದದ ಖರೀದಿ ಮೊಬಲಗಿಗೆ ಸೇರಿಸಿಕೊಳ್ಳಬಹುದು ಮತ್ತು ಅವನು ಅಂತಾ ಹೆಚ್ಚು ಮೊಬಲಗನ್ನು ಕೊಡಲ್ಪಡುವದಕ್ಕೂ ಅದಕ್ಕಾಗಿ ದಾವೆಮಾಡಿ ಅದನ್ನು ವಸೂಲ್ಮಾಡಿಕೊಳ್ಳುವದಕ್ಕೂ ಹಕ್ಕುಳ್ಳವನಾಗಿರತಕ್ಕದ್ದು, ಮತ್ತು

(b) ಸಂದರ್ಭಾನುಸಾರ ಕಮ್ಮಿಮಾಡಲ್ಪಟ್ಟ ಸುಂಕ ಮಟ್ಟಿಗೆ ಕೊಡಲ್ಪಟ್ಟರೆ ಅಥವಾ ಮಾಫ್‌ಮಾಡಲ್ಪಟ್ಟ ಸುಂಕವು ಕೊಡಲ್ಪಡದೆ ಹೋದರೆ ಬೆಲೆಗೆ ಕೊಂಡವನು ಕಮ್ಮಿ ಅಥವಾ ಮಾಫಾದ ಸುಂಕಕ್ಕೆ ಸಮನಾಗಿ ಒಪ್ಪಂದದ ಖರೀದೀಲಿ ವಜಾಮಾಡಿ ಕೊಳ್ಳಬಹುದು, ಮತ್ತು ಅವನು ಅಂಥಾ ವಜಾ ಮೊಬಲಗನ್ನು ಕೊಡುವದಕ್ಕಾಗಲಿ ಅಥವಾ ಅದಕ್ಕಾಗಿ ದಾವಾವಿಗಾಗಲಿ ಒಳಗಾಗತಕ್ಕದ್ದಿಲ್ಲವು.

ದಾಸ್ತಾನಿನಲ್ಲಿರುವ ಸರಕುಗಳನ್ನು ಕುರಿತು ನಿಬಂಧನೆ.

22. (1) ಈ ರೆಗ್ಯುಲೇಷನಿನ ಅಮಲ್ ಷುರುವಿನಲ್ಲಿ ಯಾವದೊಂದು ಮಗ್ಗದಕಾರ್ಖಾನೆಯ ವಠಾರದಲ್ಲಿರುವ ಮತ್ತು ಇದ್ದ ಹಾಗೆಯೇ ಅಥವಾ ಕಟ್ಟುಗಳಾಗಿ ಯಾಗಲಿ ಪ್ಯಾಕೆಟ್ಟುಗಳಾಗಿಯಾಗಲಿ ಮಡಾಯಿಸಲ್ಪಟ್ಟನಂತರ ಕಾರ್ಖಾನೆಯಿಂದ ಬಯ್ಯಲ್ಪಡಲಿಕ್ಕೆ ಸಿದ್ಧವಾಗಿರುವ ಯಾವ ಸರಕುಗಳ ಮೇಲಾದರೂ ಈ ರೆಗ್ಯುಲೇಷನಿಗನುಗುಣವಾಗಿ ಯಾವ ಸುಂಕವೂ ಮೊಕರರ್ಮಾಡಲ್ಪಡ ತಕ್ಕದ್ದಲ್ಲ.

ಪರಂತು ಈ ರೆಗ್ಯುಲೇಷನಿನ ಅಮಲ್ ಷುರುವಿನ ಲಾಗಾಯತು ಏಳು ದಿವಸಗಳೊಳಗೆ ಅಂಥಾ ಸರಕುಗಳ ಒಂದು ಪಟ್ಟಿಯನ್ನು ತಯಾರ್ಮಾಡಿ ಡೆಪ್ಯುಟಿ ಕಮ್ಮಿಷನರ ಬಳೀಲಿ ಒಪ್ಪಿಸತಕ್ಕದ್ದು.

(2) ಈ ರೆಗ್ಯುಲೇಷನಿನ 5ನೇ ಪ್ರಕರಣಕ್ಕನುಗುಣವಾಗಿ ತಯಾರ್ಮಾಡಲ್ಪಟ್ಟ ಸರಕುಗಳ ಉತ್ಪತ್ತಿಯನ್ನು ಕುರಿತ ಲೆಕ್ಕಗಳು ಇತರ ಸರಕುಗಳನ್ನು ಕುರಿತ ಲೆಕ್ಕಗಳಿಂದ ಪ್ರತ್ಯೇಕವಾಗಿರತಕ್ಕದ್ದು.

ಕೆ. ಶೇಷಾದ್ರಿ ಅಯ್ಯರ್,
ಮೈಸೂರು ಸಂಸ್ಥಾನದ ದಿವಾನರು.

649

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಸ್ ಆದ್ದು.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 3, ಸನ್ 1896.

IVನೇ ಭಾಗ.

ಸರ್ಕಾರೀ ಕಾಗದ ಪತ್ರಗಳು.

Summary Of Advantages Obtainable By Men Enlisting In The Madras Army.

ಮದ್ರಾಸ್ ಫೌಜಿನಲ್ಲಿ ದಾಖಲಾಗುವಂಥವರಿಗೆ ಸಿಕ್ಕುವ ಪ್ರಯೋಜನಗಳ ಗೋಷ್ವಾರೆ.

ಸರಂಜಾಮುಗಳ ಬಗ್ಯೆ ಸಿಕ್ಕುವ ಹಣ—

ದಾಖಲಾದ ಕೂಡಲೆ .. .. ರೂ. 30

ವರುಷ ಬಂದಕ್ಕೆ

ತೊಡಿಗೆ— .. .. ,, 5

ರೆಗ್ಯುಲೇಷನಿನಲ್ಲಿ ಹೇಳಿರುವ ಮೇರೆಗೆ.

ಸಂಬಳ—

ಸಂಬಳವು ಇತ್ತಲಾಗೆ ಹೆಚ್ಚಿಸೋಣಾಗಿ ಕೆಳಗೆ ಕಾಣಿಸಿದ ಮೇರೆಗೆ ಇರುತ್ತದೆ:—

	ರಾಹುತರು.	ಪಾಯಿದಳ.
	ರೂ.	ರೂ.
ಶಿಪಾಯರ ತಿಂಗಳುಗಟ್ಲೆ ಸಂಬಳ, ದಾಖಲಾದ ಕೂಡಲೆ	11	9
ಒಳ್ಳೇ ನಡತೆಯುವನಾಗಿದ್ದು ಮೂರು ವರುಷಗಳ ಕದೀಮಿನಂತರ	12	10
,, ಆರು ,,	13	11
,, ಹತ್ತು ,,	14	12

ಕಮ್ಮಿಷನ್ ಹೊಂದದ ಆಫಿಸರರ ತಿಂಗಳುಗಟ್ಲೆ ಸಂಬಳವು—

ರಾಹುತರ ಬಲದಲ್ಲಿ ರೂ. 18ರಿಂದ 26ರ ವರೆಗೆ.

ಪಾಯಿದಳದಲ್ಲಿ ರೂ. 14ರಿಂದ 20ರ ವರೆಗೆ.

ನೇಟಿವ್ ಆಫಿಸರರ ತಿಂಗಳುಗಟ್ಲೆ ಸಂಬಳವು—

ರಾಹುತರ ಬಲದಲ್ಲಿ ರೂ. 50ರಿಂದ 150ರ ವರೆಗೆ.

ಪಾಯಿದಳದಲ್ಲಿ ರೂ. 40ರಿಂದ 100ರ ವರೆಗೆ.

ಬಡ್ತಿ—
ಶಿಪಾಯಿರೊಳಗಿಂದ ಆರಿಸಲ್ಪಟ್ಟ ನಾನ್ ಕಮ್ಮಿಷನ್ಡ್ ಆಫಿಸರರಾಗಿ ಬಡ್ತಿ ಕೊಡಲ್ಪಡುವದು.
ನಾನ್ ಕಮ್ಮಿಷನ್ಡ್ ಆಫಿಸರರೊಳಗಿಂದ ಆರಿಸಲ್ಪಟ್ಟ ನೇಟಿವ್ ಆಫಿಸರರಾಗಿ ಬಡ್ತಿ ಕೊಡಲ್ಪಡುವದು.
ಪ್ರಯಾಣದ ವೇಳೆ ಸರ್ಕಾರದ ಖರ್ಚಿನಿಂದ ಕೊಂಡು ಹೋಗೋಣ ಅಥವಾ ಭತ್ತೆ ಕೊಡೋಣ.

ನಾನ್ ಕಮ್ಮಿಷನ್ಡ್ ಆಫಿಸರರಿಗೆ ದರ್ಜೆಯ ಸಂಬಳದ ವಿನಹಾ ತಿಂಗಳಿಗೆ ಹತ್ತು ರೂಪಾಯಿವರೆಗೆ ಹೆಚ್ಚಿಗೆ ದೊರಕುವ ಬೇರೆ ಬೇರೆ ರೆಜಿಮೆಂಟಲ್ ಉದ್ಯೋಗಗಳು ಸಿಕ್ಕಲಿಕ್ಕೆ ಆಸ್ಪದ ಉಂಟು.

ಪ್ರತಿ ಒಂದು ರಾಹುತರ ರೆಜಿಮೆಂಟಿನಲ್ಲಿ ಕುದುರೆಗಳನ್ನು ತರ್ಬಿಯತು ಮಾಡುವ ತಿಂಗಳು, ಒಂದಕ್ಕೆ—ರೂ. 3—8—0 ಮತ್ತು ರೂ. 5—4—0 ಸಂಬಳವಿರುವ ಎಂಟು ಉದ್ಯೋಗಗಳಿರುತ್ತವೆ. ಇವು ಶಿಪಾಯಿರಿಗೆ ಸಿಕ್ಕಬಹುದು.

ಆಕ್ಟಿವ್ ಪ್ರಿಯವಾದಾಗ್ಯೆ ಕಾಂಪೆನ್ಸೇಷನ್ ಯಾನೆ ಭತ್ತೆ.

ಆಯುಧಗಳನ್ನು ಉಪಯೋಗಿಸುವಲ್ಲಿ ಮತ್ತು ಸೈನ್ಯಕ್ಕೆ ಸಂಬಂಧಪಟ್ಟ ನಿಶಾನಿಗಳನ್ನು ತೋರಿಸುವಲ್ಲಿ ಚಮತ್ಕಾರವನ್ನು ತೋರಿಸಿದ ಬಗ್ಯೆ ಇನಾಮುಗಳು.

ಸೋಲ್ಜರನ ಕುಟುಂಬದವರಿಗೆ ಸಹಾ ವೈದ್ಯರು ಹಣ ತೆಗದುಕೊಳ್ಳದೇನೆ ಬಂದು ಚಿಕಿತ್ಸೆ ಮಾಡುವರು.
ರೆಜಿಮೆಂಟಲ್ ಶಾಲೆಯಲ್ಲಿ ಉಚಿತವಾಗಿ ಇಂಗ್ಲಿಷ್ ವ ದೇಶಭಾಷೆ ವಿದ್ಯಾಭ್ಯಾಸ.
ಬಾಡಿಗೆ ಇಲ್ಲದೆ ಬಿಡಾರ ಯಾ ಆ ಬಗ್ಯೆ ಹಣ.
ಪರಾಯಿ ನೌಕರಿಗೆ ಹೋಗುವಾಗ್ಯೆ ಊಟ ಮಾಫಿ, ಭತ್ತೆ ವ ಹೆಚ್ಚಿಗೆ ತೊಡಿಗೆಗಳು.

ಒಂದರೆ ಸಂದರ್ಭಗಳಲ್ಲಿ ತಂದೆಗೆ ಯಾ ತಾಯಿಗೆ ಯಾ ವಿಧವೆಗೆ ಯಾ ಮಗನಿಗೆ ಯಾ ಮಗಳಿಗೆ ದರ್ಜೆ ಪ್ರಕಾರ ತಿಂಗಳಿಗೆ ರೂ. 2—12—0 ರಿಂದ ರೂ. 36ರ ವರೆಗೆ ಪೆನ್ಷನ್.

ಯುದ್ಧದಲ್ಲಿ ಶೂರತ್ವ ತೋರಿಸಿದವರಿಗೆ ಆರ್ಡರ್ ಆಫ್ ಮೆರಿಟ್ ಎಂಬ ಬಿರುದು ಮತ್ತು ಅದರೊಡನೆ ಸಾಧಾರಣ ಸಂಬಳ ಯಾ ಪೆನ್ಷನ್ ವಿನಹಾ ಹೆಚ್ಚಿಗೆ, ದರ್ಜೆ ಪ್ರಕಾರ ತಿಂಗಳಿಗೆ ರೂ: 1—13—4ರಿಂದ ರೂ. 60ರ ವರೆಗೆ ವರ್ಷಾಶನ.

21 ವರುಷಗಳ ನೌಕರಿನಂತರ ದರ್ಜೆ ಪ್ರಕಾರ ತಿಂಗಳಿಗೆ ರೂ. 4ರಿಂದ ರೂ. 30ರ ವರೆಗೆ ಮತ್ತು 32 ವರುಷಗಳ ನೌಕರಿ ನಂತರ ದರ್ಜೆ ಪ್ರಕಾರ ತಿಂಗಳಿಗೆ ರೂ. 7ರಿಂದ ರೂ. 50ರ ವರೆಗೆ ಪೆನ್ಷನ್.

ದೇಹಸ್ಥಿತಿಯಿಂದ ನೌಕರಿ ಬಗ್ಯೆ ಅಶಕ್ತರಾದ ಮನುಷ್ಯರಿಗೆ ನೌಕರಿ ಮೇರೆಗೆ 3 ತಿಂಗಳಿಂದ 12 ತಿಂಗಳ ವರೆಗಿನ ಸಂಬಳ ಗ್ರಾಟ್ಯೂಟಿಯಾಗಿ ಕೊಡೋಣ.

3 ವರುಷಕ್ಕಿಂತ ಹೆಚ್ಚು ಕಾಲ ನೌಕರಿಯಲ್ಲಿದ್ದರೆ ಮತ್ತು ದಳವು ಅಗತ್ಯವಿರುವ ಮಂದಿಗಿಂತ ಸೇಕಡಾ ಐದರ ಮೇರೆಗೆ ಕಡಿಮೆಯಾಗದಿದ್ದರೆ ಕೇಳಿಕೊಂಡಾಗ ನಿರ್ಬಂಧವಿಲ್ಲದೆ ಬಿಡುಗಡೆ ಪಡಿಸೋಣ.

ಅಸ್ವಸ್ಥದ ದೆಸೆಯಿಂದ ರಜಾಪಡಕೊಂಡು ಮನೆಗೆ ಹೋಗುವಾಗ ಮತ್ತು ವಾಪಸು ಬರುವಾಗ ದಾರಿ ಖರ್ಚು.

ದೇಹ ಪ್ರಕೃತಿಯ ದೆಸೆಯಿಂದ ನೌಕರಿ ಬಗ್ಯೆ ಅಶಕ್ತರೆಂಬದರಿಂದ ಪೆನ್ಷನ್ ಕೊಡಲ್ಪಟ್ಟಾಗ, ಅಸಮರ್ಥರೆಂತ ಮಾಡಲ್ಪಟ್ಟಾಗ ಯಾ ಬರ್ತರಫ್ ಮಾಡಲ್ಪಟ್ಟಾಗ ಮನೆಗೆ ಹೋಗುವ ದಾರಿಖರ್ಚು.

ಸ್ಟೇಷನು ಬದಲಾಯಿಸಲ್ಪಟ್ಟಾಗ ಮತ್ತು ಗಂಡನು ಪರಾಯಿ ನೌಕರಿಯಲ್ಲಿದ್ದಾಗ ಹೆಂಡತಿ ಮಕ್ಕಳಿಗೆ ದಾರಿಖರ್ಚು.
ಜನವರಿ ಹಬ್ಬ (ವರುಷದ ಷುರುವಿನ ದಿನ) ದ ಬಗ್ಯೆ ಮತ್ತು ಶ್ರೀ ಮಹಾರಾಣಿಯವರು ಹುಟ್ಟಿದ ದಿನದ ಬಗ್ಯೆ ಭತ್ತೆ.
ಬರ್ಮಿ ಯಾ ಶಾನ್ ಭಾಷೆಗಳಲ್ಲಿ ಎಲಿಮೆಂಟರಿ ಸ್ಟ್ಯಾಂಡಾರ್ಡ್ (ಮೂಲದರ್ಜೆ) ಪರೀಕ್ಷೆ ಪ್ಯಾಸಾದ ಬಗ್ಯೆ ರೂ. 180, ಮತ್ತು ಲೋವರ್ ಸ್ಟ್ಯಾಂಡಾರ್ಡ್ ಪ್ಯಾಸಾದ ಬಗ್ಯೆ ರೂ. 360 ಇನಾಮು.

ವರ್ಷಾಶನಗಳ ವ ಬಹುಮಾನಗಳ ಸಮೇತ ಒಳ್ಳೇ ನಡತೆ ಬಗ್ಗಿನ ಮೆಡಲ್‌ಗಳು. ಪ್ರತಿ ದಳದಲ್ಲಿಯ ಹವಲ್ದಾರರಿಗೆ ರೂ. 25ರ ವರ್ಷಾಶನದ ಸಮೇತ ಒಂದು ಬೆಳ್ಳಿಯ ಮೆಡಲು.

ಪ್ರತಿ ದಳದ ರ್‍ಯಾಂಕ್ ಅಂಡ್ ಫೈಲ್ ಅಂದರೆ ಎಲ್ಲಾ ಶಿಪಾಯಿರ ಬಗ್ಯೆ ವರುಷಂ ಪ್ರತಿ ರೂ. 25ರ ವರ್ಷಾಶನದ ಸಮೇತ ಎರಡು ಬೆಳ್ಳಿಯ ಮೆಡಲ್‌ಗಳು.

ಜಖಂ ಹೊಂದಿದ ಬಗ್ಯೆ ಗ್ರಾಟ್ಯೂಟಿಗಳು ಮತ್ತು ಪೆನ್ಷನ್‌ಗಳು ಈ ಪೆನ್ಷನ್‌ಗಳು ದರ್ಜೆಯ ವ ಜಖಮಿನ ಸ್ವಭಾವದ ಮೇರೆಗೆ ತಿಂಗಳಿಗೆ ರೂ. 3—4—0 ರಿಂದ ರೂ. 19ರ ವರೆಗೆ ಆಗಿರುತ್ತವೆ.

Reserve.

ರಿಜರ್ವ್ ಅಂದರೆ ಜರೂರಾತಿ ಬಗ್ಯೆ ಇಡಲ್ಪಟ್ಟಂಥವರು.

ಐದರಿಂದ ಹನ್ನೆರಡುವರುಷಗಳ ವರೆಗೆ ನೌಕರಿಯಲ್ಲಿದ್ದು, ಒಳ್ಳೇ ನಡತೆಯುಳ್ಳ ಸೋಲ್ಜರರು ರಿಜರ್ವಿನಲ್ಲಿ ಸೇರಲಿಕ್ಕೆ ಕೇಳಬಹುದು. ಆಗ ಅವರು ತಿಂಗಳಿಗೆ ರೂ. 3ರ ಪ್ರಕಾರ ರಿಜರ್ವ್ ಸಂಬಳ ಪಡಕೊಂಡು ತಮ್ಮ ಮನೆಗಳಲ್ಲಿ ವಾಸಮಾಡಿರಬಹುದು.

ರಿಜರ್ವ್ ಮನುಷ್ಯರು ಯುದ್ಧದ ನೌಕರಿ ಬಗ್ಯೆ ಮತ್ತು ವರುಷಾವಧಿ ಟ್ರೈನಿಂಗ್ ಅಂದರೆ ತರ್ಬಿಯತಿನ ಬಗ್ಯೆ ತಮ್ಮ ದಳಗಳಲ್ಲಿ ಪುನಹಾ ಕರಕೊಳ್ಳಲ್ಪಡಲಿಕ್ಕೆ ಬದ್ಧರಾಗಿರುತ್ತಾರೆ. ಆಗ ಅವರು ರಿಜರ್ವ್ ಸಂಬಳದ ಬದಲಾಗಿ ಸೋಲ್ಜರರಾಗಿ ಪೂರ್ಣ ಸಂಬಳವನ್ನು ಹೊಂದುವರು.

ಷರಾ—ಹೆಚ್ಚಿನ ವಿವರಗಳು ಪೋಸ್ಟ್‌ಮಾಸ್ಟರ್ (ಠಾಣ್ಯದ ಮುಖ್ಯ ಉದ್ಯೋಗಸ್ಥ)ರಿಗೆ ಅರ್ಜಿ ಮಾಡೋಣದಲ್ಲಿ ಸಿಕ್ಕುವವು.

NOTIFICATION.

ಇಸ್ತಿಹಾರ್‌ನಾಮೆ.

ADVANTAGES OBTAINABLE BY MEN ENLISTING IN THE MADRAS ARMY.

ಮದ್ರಾಸ್ ಫೌಜಿನಲ್ಲಿ ದಾಖಲಾಗುವಂಥವರಿಗೆ ಸಿಕ್ಕುವ ಪ್ರಯೋಜನಗಳು.

1. ದಾಖಲಾದ ಕೂಡಲೇ ಅವಶ್ಯವಿರುವ ಸರಂಜಾಮುಗಳ ಬಗ್ಯೆ ಸಿಕ್ಕುವ ಹಣ ರೂ. 30.
2. ವರುಷಂ ಪ್ರತಿ ಸಿಕ್ಕುವ ಅರ್ಧ ಮೌಂಟಿಂಗ್ ಭತ್ತೆ ಬಗ್ಯೆ ಸಿಕ್ಕುವ ಹಣ ರೂ. 5, ಮೂರು ತಿಂಗಳಿಗೆ ಒಂದಾವರ್ತಿ ರೂ. 1—4—0 ಪ್ರಕಾರ ಕೊಡೋಣಾಗುವದು (a).
3. ತೊಡಿಗೆ.

ರಾಹುತರು.—ನೇಟಿವ್ ಆಫಿಸರರ ವಿನಹಾ ಇತರ ಎಲ್ಲಾ ದರ್ಜೆಯವರಿಗೆ ಒಂದುವರುಷ ಸರ್ಜ್ ಎಂಬ ಒಂದುತರದ ಸಕಲಾತಿಯು ಅಲ್ಕಲಿಕ್ ಎಂಬ ಒಂದು ತೊಡಿಗೆಯೂ ಮತ್ತೊಂದು ವರುಷ ಬಟ್ಟೆಯ ಒಂದು ಇಜಾರು ಮತ್ತು ವರುಷಂಪ್ರತಿ 3 ರೂಪಾಯಿ, 5 ಆಣೆ, 11 ಪೈ ಕ್ರಯಬಾಳುವ ಬಾಕಿ ತೊಡಿಗೆಗಳು ಸಿಕ್ಕುವವು.

ಐದು ವರುಷಕ್ಕೊಮ್ಮೆ ಭುಜಗಳಮೇಲೆ ಧರಿಸುವ ಉಕ್ಕಿನ ಸರಪಣಿಗಳು (ನೇಟಿವ್ ಆಫಿಸರರಿಗೆ ವಿನಹಾ).
ಐದು ವರುಷಕ್ಕೊಮ್ಮೆ ಹಂಟಿಂಗ್ ಸ್ಪರ್ಸಗಳ ಒಂದು ಜೋಡು ಸಿಕ್ಕುವದು.

ಪ್ರತಿ ಮನುಷ್ಯನಿಗೆ ಎರಡು ವರುಷಕ್ಕೆ ಒಂದಾವರ್ತಿ ರೂ. 3—8—0 ಪ್ರಕಾರ ಒಂದು ಜೋಡು ಬೂಟ್ಸ ಬಗ್ಯೆ ಭತ್ತೆ.	ನೇಟಿವ್ ಆಫಿಸರರಿಗೆ ಮೊಣಕಾಲು ವರಿಗಿನ ಬೂಟ್ಸ ಬಗ್ಯೆ ಇತರ ಶಿಪಾಯರಿಗೆ ಮಣಿಗಂಟು ವರೆಗಿನ ಹೆಚ್ಚಿಗಿನ ಒಂದು ಜೋಡು ಬೂಟ್ಸ ಮತ್ತು ಪಟ್ಟಿಗಳ ಬಗ್ಯೆ.

ಯುದ್ಧಕ್ಕೆ ಹೋಗುವಾಗ ಪ್ರತಿ ಮನುಷ್ಯನಿಗೆ ರೂ. 2—8—0 ಪ್ರಕಾರ ಒಂದೊಂದು ಜೋಡು ಬೂಟ್ಸುಗಳ ಬಗ್ಯೆ ಪ್ರತಿಫಲ ಸಿಕ್ಕುವದು.

ಪಾಯಿದಳದವರಿಗೆ.—ನೇಟಿವ್ ಆಫಿಸರರಲ್ಲದ ಎಲ್ಲ ಶಿಪಾಯವರಿಗೆ ಮೂರು ವರ್ಷಗಳಿಗೊಮ್ಮೆ ಒಂದು ಸರ್ಜಿನ ಜಾಕಿಟ್ ಅಂಗಿ ಮತ್ತು ಷರಾಯಿ ಮತ್ತು ವರ್ಷಂಪ್ರತಿ 3 ರೂ. 1 ಆಣೆ. 4 ಪೈ ಕ್ರಯಬಾಳುವ ಬಾಕಿ ಉಡಿಗೆ.

ಯುದ್ಧಕ್ಕೆ ಹೋಗುವಾಗ ಪ್ರತಿ ಯೊಬ್ಬನಿಗೆ ಒಂದುಜೋಡು ಬೂಟ್ಸಿನ ಬಗ್ಯೆ ಪ್ರತಿಫಲ ರೂ. 2—8—0.

4. ಶಿಪಾಯರ ತಿಂಗಳಗಟ್ಲೆ ಸಂಬಳ—

	ರಾಹುತರು. ರೂ.	ಪಾಯಿದಳ. ರೂ.
ದಾಖಲಾದ ಕೂಡಲೆ	11	9
ಒಳ್ಳೇನಡತೆಯಿದ್ದು ಮೂರು ವರುಷದ ನೌಕರಿಯನಂತರ ..	12	10
ಒಳ್ಳೇನಡತೆಯಿದ್ದು ಆರು ವರುಷದ ನೌಕರಿಯನಂತರ ..	13	11
,, ಹತ್ತು ,, ..	14	12

5. ನೇಟಿವ್ ಆಫಿಸರರ ವ ಕಮ್ಮಿಷರ್ಷ ಹೊಂದದ ಆಫಿಸರರ ತಿಂಗಳುಗಟ್ಲೆ ಸಂಬಳ—

	ರಾಹುತರು. ರೂ.	ಪಾಯಿದಳ. ರೂ.
ಸುಪೇದಾರರಿಗೆ 1ನೇ ದರ್ಜೆಯು ಪ್ರತಿ ಒಬ್ಬನಿಗೆ	150	100
,, 2ನೇ ದರ್ಜೆಯು ,, ...	110	80
ಜಮೇದಾರರಿಗೆ 1ನೇ ದರ್ಜೆಯು ,, ...	60	50
,, 2ನೇ ದರ್ಜೆಯ ,, ...	50	40
ಹವಲ್ದಾರರಿಗೆ [illegible] ಬ್ಬನಿಗೆ ,, ...	22	16
ಆ ದರ್ಜೆಯಲ್ಲಿ ಎ[illegible]ಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	23	17
ಆ ದರ್ಜೆಯಲ್ಲಿ ನಾಲ್ಕು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	24	18
ಆ ದರ್ಜೆಯಲ್ಲಿ ಆರು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ...	25	19
ಆ ದರ್ಜೆಯಲ್ಲಿ ಎಂಟು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	26	20
ನಾಯಕರು	18	14
ಆ ದರ್ಜೆಯಲ್ಲಿ ಎರಡು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	19	15
ಆ ದರ್ಜೆಯಲ್ಲಿ ನಾಲ್ಕು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	20	16

6. ಪ್ರಯಾಣ ಮಾಡುವಾಗ ಭತ್ತೆ ಸರಕಾರದಿಂದ ಬಂಡಿಗಳು ಒದಗಿಸಿ ಕೊಡಲ್ಪಡದೆ ಇದ್ದಲ್ಲಿ ಮತ್ತು ಹೊಸ ಸಿಪಾಯರನ್ನು ಸೇರಿಸಿಕೊಳ್ಳುವ ಕೆಲಸದಮೇಲೆ ಇದ್ದಾಗ್ಯೆ ಮತ್ತು ರೆಗ್ಯುಲೇಷನ್ಗಳಲ್ಲಿ ನಮೂದಿಸಲ್ಪಟ್ಟ ಇತರ ಬೇರೆಬೇರೆ ಸಂದರ್ಭಗಳಲ್ಲಿ.

ಭತ್ತೆ ತೆಗೆದುಕೊಳ್ಳಲ್ಪಟ್ಟಾಗ 8ನೇ ಕಲಮಿನಲ್ಲಿ ಹೇಳಲ್ಪಟ್ಟ ಧಾನ್ಯದಬಗ್ಗಿನ ಪ್ರತಿ ಫಲ ಕೊಡಲ್ಪಡಲಿಕ್ಕಿಲ್ಲ. ಆದರೆ ಕೆಲಸದ ಮೇಲೆ ಕಳುಹಿಸಲ್ಪಟ್ಟಾಗ ಯಾ ಯುದ್ಧಕ್ಕೆ ಹೋಗುವಾಗ ಎಲ್ಲಾ ಶಿಪಾಯರಿಗೆ ಭತ್ತೆಯಾಗಲಿ ಧಾನ್ಯದಬಗಿನ ಪ್ರತಿ ಫಲ ವಾಗಲಿ

(a) ಈ ಅಲೊವೆನ್ಸು ಮೊದಲನೇ ವರುಷದ ನೌಕರಿ ಮುಗಿಯುವವರೆಗೆ ಕೊಡಲ್ಪಡಲಿಕ್ಕಿಲ್ಲ. ಆ ಮೇಲೆ ಸದರೀ ವರುಷದ ಬಾಕಿ ಮತ್ತು ನಂತರದ ಮೂರುತಿಂಗಳ ಅಲ್ಲೋವೆನ್ಸು ಒಟ್ಟಿಗೆ ಕೊಡಲ್ಪಡುವದು.

ಇವುಗಳ ಪೈಕಿ ಯಾವದು ಹೆಚ್ಚೋ ಅದನ್ನು ತೆಗೆದುಕೊಳ್ಳುವ ಮುನಾಸಬು ಇರುತ್ತದೆ; ಆದರೆ ಯುದ್ಧಕಾಲದ ಭತ್ತೆ ವಿನಹಾ ಊಟದ ಖರ್ಚು ಯಾ ಆ ಬಗ್ಯೆ ಪ್ರತಿಫಲ ಸಿಕ್ಕುವ ದಳದವರು ಪರಾಯಿ ನೌಕರಿಯಲ್ಲಿದ್ದಾಗ ಯಾ ಸಮುದ್ರದ ಅತ್ತಕಡೆಯಲ್ಲಿ ಕೆಲಸದಮೇಲೆ ಇದ್ದಾಗ, ಅಂಥವರಿಗೆ ಈ ಕ್ರಮವು ಲಾಗೂವಾಗುವದಿಲ್ಲ.

	ತುರುಫ್ ಸವಾರರಿಗೆ ತಿಂಗಳುಗಟ್ಲೆ.			ಪಾಯಿದಳದವರಿಗೆ. ತಿಂಗಳುಗಟ್ಲೆ.		
	ರೂ.	ಆ.	ಪೈ.	ರೂ.	ಆ.	ಪೈ.
ಶಿಪಾಯರಿಗೆ ಪ್ರತಿ ಒಬ್ಬನಿಗೆ	1	8	0	1	8	0
ನಾಯಕರು ಡಿಟ್ಟೋ	4	0	0	5	0	0
ಹವಲ್ದಾರರು ಡಿಟ್ಟೋ	5	0	0	5	0	0
ಜಮೇದಾರರು ಡಿಟ್ಟೋ	8	0	0	7	8	0
ಸುಬೇದಾರರು ಡಿಟ್ಟೋ	30	0	0	14	3	3

7. ಹುದ್ದೆಯ ಸಂಬಳದ ವಿನಹಾ ಈ ಕೆಳಗಣ ಸ್ಟಾಫ್ ಅಲೋವೆನ್ಸು ಸಿಕ್ಕುವ ರೆಜಿಮೆಂಟಲ್ ಉದ್ಯೋಗಗಳು —

	ತುರುಫ್ ಸವಾರ ತಿಂಗಳುಗಟ್ಲೆ.			ಪಾಯಿದಳ ತಿಂಗಳುಗಟ್ಲೆ.		
	ರೂ.	ಆ.	ಪೈ.	ರೂ.	ಆ.	ಪೈ.
ರಫ್ ರೈಡರ್ ಅಂದರೆ ಕುದುರೆ ಸವಾರಿ ಕಲಿಸುವವನಿಗೆ 1ನೇ ದರ್ಜೆಯ ಪ್ರತಿಒಬ್ಬನಿಗೆ	5	4	0	..		

	ರಾಹುತರ ಬಲ ತಿಂಗಳುಗಟ್ಲೆ.			ಪಾಯಿದಳ ತಿಂಗಳುಗಟ್ಲೆ.		
	ರೂ.	ಆ.	ಪೈ.	ರೂ.	ಆ.	ಪೈ.
ರಫ್ ರೈಡರ್ ಅಂದರೆ ಕುದುರೆ ಸವಾರಿ ಕಲಿಸುವವನಿಗೆ 2ನೇ ದರ್ಜೆಯ ಪ್ರತಿ ಒಬ್ಬನಿಗೆ	3	8	0	..		
ಕವಾತು ಕಲಿಸುವ ನಾಯಕ ಸ್ಟಾಫ್ ಅಲೋವೆನ್ಸು ..	7	0	0	3	8	0
ಕವಾತು ಕಲಿಸುವ ಹವಲ್ದಾರ ಡಿಟ್ಟೋ ..	10	8	0	5	4	0
ಬಾವಟೆ ಹವಲ್ದಾರ, ಸ್ಟಾಫ್ ಅಲೋವೆನ್ಸು ಪ್ರತಿ ಒಬ್ಬನಿಗೆ ..	0	0	0	2	0	0
ತೈನಾತಿ ಹವಲ್ದಾರ, ಸ್ಟಾಫ್ ಅಲೋವೆನ್ಸು ಪ್ರತಿ ಒಬ್ಬನಿಗೆ ..	1	13	10	1	13	10
ರೆಜಿಮೆಂಟಲ್ ಹವಲ್ದಾರ, ಮೇಜರ್, ಸ್ಟಾಫ್ ಅಲೋವೆನ್ಸು .	10	0	0	10	0	0
ಸೈನ್ಯದ ಹವಲ್ದಾರ, ಮೇಜರು, ಸ್ಟಾಫ್ ಅಲೋವೆನ್ಸು ಪ್ರತಿ ಒಬ್ಬನಿಗೆ	2	0	0	0	0	0
ಜಮೇದಾರ ಅಜುಟೆಂಟ್, ಸ್ಟಾಫ್ ಅಲೋವೆನ್ಸು ..	17	8	0	17	8	0
ಸುಬೇದಾರ ಮೇಜರ್, ಸ್ಟಾಫ್ ಅಲೋವೆನ್ಸು ...	50	0	0	50	0	0

8. ತಮ್ಮ ರೆಜಿಮೆಂಟುಗಳೊಂದಿಗೆ ಹಾಜರಿರುವ ಮನುಷ್ಯರಿಗೆ, ನಿಯಂ ತರದ ಅಕ್ಕಿಯ ಮೌಲ್ಯವು ನಿರ್ಣಯಿಸಲ್ಪಟ್ಟ ಬಂದರೆ ದರಕ್ಕೆ ಮೀರಿದರೆ ಮತ್ತು ಭತ್ತೆ, ಊಟದ ಖರ್ಚು ಯಾ ಆಬಗ್ಯೆ ಪ್ರತಿಫಲ ಸಿಕ್ಕದಿದ್ದಾಗ ಅಕ್ಕಿ ಪ್ರಿಯವಾದದ್ದಕೋಸ್ಕರ ಪರಿಹಾರ ದ್ರವ್ಯವು ಕೊಡಲ್ಪಡುವದು.

9. ಖಡ್ಗದ ವ ಈಟಿಯ ಸಾಧಕದಲ್ಲಿ ಕುಶಲತೆಯನ್ನು ಪಡೆದ ಯಾ ಬಳ್ಳಿಗುರಿ ಇಟ್ಟು ಗುಂಡು ಹೊಡೆಯುವ ಬಗ್ಯೆ ಪ್ರತಿ ಒಂದು ರೆಜಿಮೆಂಟಿನಲ್ಲಿ ವರುಷಂಪ್ರತಿ ಇನಾಮು ಕೊಡಲ್ಪಡುವವು.

10. ಅಸ್ವಸ್ಥದಲ್ಲಿ ಬಿದ್ದಾಗ್ಯೆ ಅವರಿಗೂ ಅವರ ಕುಟುಂಬದವರಿಗೂ ವೈದ್ಯ ಉದ್ಯೋಗಸ್ಥರು ಫೀಸು ತೆಗೆದುಕೊಳ್ಳದೇನೇ ಬಂದು ನೋಡುವರು.

11. ಶಿಪಾಯರ ವ ಅವರ ಮಕ್ಕಳ ವಿದ್ಯಾಭ್ಯಾಸದ ಬಗ್ಯೆ ಸರಕಾರದಿಂದ ಇಂಗ್ಲೀಷ್ ವ ದೇಶಭಾಷಾ ಶಾಲೆಗಳು ಇಡಲ್ಪಟ್ಟಿವೆ.

12. ಪೆನ್ಷನ್ ವ ರಿಕ್ರೂಟು ಹುಡುಗರು.—ಪ್ರತಿ ಒಂದು ರಾಹುತರ ಬಲದ ರೆಜಿಮೆಂಟಿನಲ್ಲಿ ಹದಿನಾರು ರಿಕ್ರೂಟು ವ 14 ಪೆನ್ಷನ್ ಹುಡುಗರೂ ಪ್ರತಿ ಒಂದು ಪಾಯಿದಳದ ರೆಜಿಮೆಂಟಿನಲ್ಲಿ 24 ಹೊಸ ಶಿಪಾಯಿ ವ 18 ಪೆನ್ಷನ್ ಹುಡುಗರೂ (ದಿಕ್ಕಿಲ್ಲದ ಮಕ್ಕಳು ವ ದೊಡ್ಡ ಕುಟುಂಬವಿರುವ ಮಾಜಿ ಶಿಪಾಯರ ಹುಡುಗರು) ದಾಖಲ್ಮಾಡಲ್ಪಡುವರು. ಪ್ರತಿ ಒಬ್ಬ ರಿಕ್ರೂಟು ಹುಡುಗನಿಗೆ ತಿಂಗಳಿಗೆ 5 ರೂಪಾಯಿಯೂ ಪೆನ್ಷನ್ ಹುಡುಗನಿಗೆ 4 ರೂಪಾಯಿಯೂ ಸಿಕ್ಕುವದು ಮತ್ತು ನಿಯಂ ತರದ ಅಕ್ಕಿಯ ಮೌಲ್ಯವು ನಿರ್ಣಯಿಸಲ್ಪಟ್ಟ ಬಂದರೆ ದರಕ್ಕೆ ಮೀರಿದರೆ ಪರಿಹಾರದ್ರವ್ಯ ಸಹ ಸಿಕ್ಕುವದು.

13. ದಂಡಿನಲ್ಲಿ ಸೇರುವದಕ್ಕೆ ಹೆಸರು ಬರಿಸಿಕೊಂಡಮೇಲೆ, ಅಥವಾ ಒಂದು ಹೊಸ ಠಾಣ್ಯಕ್ಕೆ ಹೋಗುವಾಗ್ಯೆ ಸರಕಾರದಿಂದ ಬಿಡಾರ ಕೊಡೋಣಾಗದಿರುವಲ್ಲಿ ಹಟ್ಟಿಂಗ್ ಮನಿ ಎಂಬ ಬಿಡಾರ ಮಾಡಿಕೊಳ್ಳಲಿಕ್ಕೆ ಕೊಡೋಣಾಗುವ ಹಣ—

	ರೂ.
ಶಿಪಾಯಿಯರು ಪ್ರತಿ ಒಬ್ಬನಿಗೆ	2
ನಾಯಕರು ಡಿಟ್ಟೋ	3
ಹವಲ್ದಾರರು ಡಿಟ್ಟೋ	4
ಜಮೇದಾರರು ಡಿಟ್ಟೋ	12
ಸುಬೇದಾರರು ಡಿಟ್ಟೋ	24

14. ಪರಾಯಿ ದೇಶದಲ್ಲಿ ಮತ್ತು ಯುದ್ಧದಲ್ಲಿ ನೌಕರಿ ಮಾಡುತ್ತಿರುವ ಸಮಯದಲ್ಲಿ, ಅಥವಾ ಸಮುದ್ರದ ಅತ್ತಕಡೆ ಚಾಕರಿ ಮಾಡುತ್ತಿರುವ ಸಮಯದಲ್ಲಿ ಕೆಲಸದಮೇಲೆ ಹೊರಡುವಾಗ್ಯೆ ಕರಾವಳಿಯ ಮೇಲೆ ಒಂದು ಬಂದರಿಂದ ಇನ್ನೊಂದು ಬಂದರಕ್ಕೆ ಹೋಗುವಾಗ್ಯೆ ಊಟದ ಖರ್ಚು ಮತ್ತು ಭತ್ತೆ.

ಪರಾಯಿ ದೇಶದಲ್ಲಿ ನೌಕರಿಬಗ್ಯೆ ಹಡಗೇರುವಾಗ್ಯೆ ಕೆಳಗೆ ಬರದ ಸಾಮಾನುಗಳು ಉಚಿತವಾಗಿ ಕೊಡೋಣಾಗುವವು:—

1 ಜೋಡು ಊರಿನಲ್ಲಿ ಮಾಡಿದ ಬೂಟ್ಸು;
1 ಕಂಬಳಿ;
2 ಫ್ಲಾನೆಲ್ ವಿಜಾರುಗಳು;
2 ಫ್ಲಾನೆಲ್ ತುಂಡಂಗಿಗಳು;

ಬರ್ಮಾವಿನಲ್ಲಿ ಪಟ್ಟ ಪ್ರದೇಶಗಳಲ್ಲಿರುವಾಗ್ಯೆ ಹೆಚ್ಚಿಗೆ ಉಂಣೆ ತೊಡಿಗೆ.

ಪರಾಯಿ ದೇಶದಲ್ಲಿ ನೌಕರಿ ಮಾಡುತ್ತಿರುವಾಗ್ಯೆ ಸರಕಾರದಿಂದ ಬಿಡಾರ; ವ ಬರ್ಮಾ ಮತ್ತು ಪೋರ್ಟ್‌ಬ್ಲ್ಯಾರ್‌ನಲ್ಲಿ ನೌಕರಿ ಮಾಡುತ್ತಿರುವಾಗ್ಯೆ ಬಾರಕ್ ಸಾಮಾನು ವ ವಿವಿಧ ತರದ ಬೇರೆ ಸಾಮಾನುಗಳು.

15. ಕೆಳಗೆ ಹೇಳಿರುವ ಪ್ರಕಾರ ಪೆನ್‌ಷನ್ ತಂದೆಗೆ ಯಾ ತಾಯಿಗೆ ಅಥವಾ ವಿಧವೆಗೆ ಅಥವಾ ಮಗನಿಗೆ ಯಾ ಮಗಳಿಗೆ ಕೆಳಗೆ ವಿವರಿಸಿದ ವಿದ್ಯಮಾನಗಳಲ್ಲಿ ಕೊಡೋಣಾಗುವವು:—

(a) ಯುದ್ಧಕಾಲದಲ್ಲಿ ಒಬ್ಬ ಸೋಲ್ಜರನು ಕೊಲ್ಲಲ್ಪಟ್ಟರೆ ಅಥವಾ ಘಾಯಗಳಾದನಂತರ ಆರು ತಿಂಗಳೊಳಗೆ ಅಂಥಾ ಘಾಯಗಳ ದೆಸೆಯಿಂದ ಸತ್ತರೆ.

(b) ಒಬ್ಬ ಸೋಲ್ಜರನು ಪರಾಯಿದೇಶದಲ್ಲಿ ನೌಕರಿ ಮಾಡುತ್ತಿರುವಾಗ್ಯೆ ಸತ್ತರೆ ಅಥವಾ ಅಲ್ಲಿಂದ ಬಂದನಂತರ ಅಂಥ ನೌಕರಿ ಸಮಯದಲ್ಲಿ ಅಥವಾ ಅದರ ದೆಸೆಯಿಂದ ಪ್ರಾಪ್ತವಾದ ಅಸ್ವಸ್ಥದ ಸಂಬಂಧ ಆಸ್ಪತ್ರಿಯಲ್ಲಿ ದಾಖಲಾದವನು ಅಲ್ಲಿಂದ ಬಿಡುಗಡೆಯಾಗುವ ಮುಂಚೆ ಸತ್ತರೆ—

	(a) ತಿಂಗಳಿಗೆ. ರೂ.	ಆ.	ಪೈ.	(b) ತಿಂಗಳಿಗೆ. ರೂ.	ಆ.	ಪೈ.
ಸುಬೇದಾರರ ವಾರಿಸ್ದಾರರಿಗೆ	36	0	0	26	0	0
ಜಮೇದಾರರ ಡಿಟೋ	13	13	0	8	8	0
ಹವಲ್ದಾರರ ಡಿಟೋ	4	8	0	4	8	0
ನಾಯಕರ ಡಿಟೋ	3	8	0	3	8	0
ಶಿಪಾಯಿಯರ ಡಿಟೋ	2	12	0	2	12	0

16. ಯುದ್ಧದಲ್ಲಿ ಪರಾಕ್ರಮ ತೋರಿಸಿದ್ದಕ್ಕೆ ಯೋಗ್ಯತಾನುಸಾರವಾಗಿ ಇನಾಮು ಕೊಡುವ ಕ್ರಮ—

		ತಿಂಗಳಿಗೆ. ಅವಲ್ ತರಹ. ರೂ.	ಆ.	ಪೈ.	ದುಯಂ ತರಹ. ರೂ.	ಆ.	ಪೈ.	ಸಿಯಂ ತರಹ. ರೂ.	ಆ.	ಪೈ.
ಸುಬೇದಾರರಿಗೆ ..	ರಾಹುತರ ಬಲ ..	60	0	0	40	0	0	20	0	0
	ಪಾಯಿದಳ ..	52	0	0	34	10	8	17	5	4
ಜಮೇದಾರರಿಗೆ ..	ರಾಹುತರ ಬಲ ..	24	0	0	16	0	0	8	0	0
	ಪಾಯಿದಳ ..	17	0	0	11	5	4	5	10	8
ಹವಲ್ದಾರರಿಗೆ ..	ರಾಹುತರ ಬಲ ..	15	0	0	10	0	0	5	0	0
	ಪಾಯಿದಳ ..	9	0	0	6	0	0	3	0	0
ನಾಯಕರಿಗೆ ..	ರಾಹುತರ ಬಲ ..	12	0	0	8	0	0	4	0	0
	ಪಾಯಿದಳ ..	7	0	0	4	10	8	2	5	4
ಶಿಪಾಯಿಯರಿಗೆ ..	ರಾಹುತರ ಬಲ ..	7	8	0	5	0	0	2	8	0
	ಪಾಯಿದಳ ..	5	8	0	3	10	8	1	13	4

ಮೇಲೆ ಹೇಳಿದ ಪ್ರಕಾರ ಇನಾಮು, ಅವರ ಸಂಬಳ ಯಾ ಪೆನ್‌ಷನ್ ಅಲ್ಲದೆ, ಯಾವ ಜ್ಞೀವಪೂ ಹೆಚ್ಚಿಗೆಯಾಗಿ ಕೊಡೋಣಾದೀತು ಮತ್ತು ಗಂಡ ಸತ್ತ ನಂತರ ಮೂರು ವರುಷಗಳ ವರೆಗೆ ಅವರ ವಿಧವೆಯರಿಗೂ ಕೊಡೋಣಾಗುವದು.

17. ದೇಶಿಯ ಉದ್ಯೋಗಸ್ಥರಲ್ಲಿ ಕುಂದಿಲ್ಲದ ನಡತೆಯವರಾಗಿ ಪ್ರಖ್ಯಾತಿಗೊಂಡು ಬಹುಕಾಲ ನೌಕರಿ ಮಾಡಿದವರಿಗೆ ಕೊಡೋಣಾಗುವ ಬ್ರಿಟಿಷ್ ಇಂಡಿಯಾದ ಬಹುಮಾನ—

	ರೂ.
ಅವಲ್ ತರಗತಿ "ಸರ್ದಾರ್ ಬಹದೂರ್"	2 ದಿವಸ 1ಕ್ಕೆ.
ದುಯಂ ತರಗತಿ "ಬಹದೂರ್"	1 "

ಮೇಲೆ ಹೇಳಿದ ಭತ್ತೆಯು, ಸಂಬಳ ವ ಭತ್ತೆ ಯಾ ಪೆನ್‌ಷನ್ ಅಲ್ಲದೆ ಹೆಚ್ಚಿಗೆಯಾಗಿ ಯಾವ ಜ್ಞೀವಪೂ ಕೊಡೋಣಾಗುತ್ತದೆ.

18. ಪೆನ್‌ಷನ್—

	ತಿಂಗಳಿಗೆ. ಸಾಧಾರಣ ತರದ್ದು 21 ವರುಷ ಕದೀಮಿ ಆದ ನಂತರ. ರೂ.	ಮೇಲ್ ತರದ್ದು, ಪೆನ್‌ಷನ್ ತೆಗದುಕೊಳ್ಳುವ ವರಗ ಕುಂದಿಲ್ಲದ ನಡತೆಯುಳ್ಳವನಾಗಿ ಶ್ರೇಯಸ್ಕರವಾಗಿ ನೌಕರಿ ವ ಶ್ರದ್ಧೆಯಿಂದ ಕೆಲಸ ಮಾಡಿ 32 ವರುಷ ಕದೀಮಿ ಆದನಂತರ. ರೂ.
ಶಿಪಾಯಿಯರಿಗೆ	4	7
ನಾಯಕರಿಗೆ ವ ಹವಲ್ದಾರರಿಗೆ ..	7	12
ಜಮೇದಾರರಿಗೆ	15	25
ಸುಬೇದಾರರಿಗೆ	30	50

19. ದೇಹ ಪ್ರಕೃತಿ ಮೇರೆಗೆ ಕೆಲಸಕ್ಕೆ ಅಯೋಗ್ಯರೆಂದು ಹೇಳೋಣಾದವರಿಗೆ ಗ್ರಾಟ್ಯೂಟಿ:—

5 ವರುಷಗಳ ಮೇಲೆ	10 ವರುಷಗಳೊಳಗೆ ಕದೀಮಿಯುಳ್ಳವರಿಗೆ			ತರಗತಿಯ ದಾಮಾಷೆಯಲ್ಲಿ	3 ತಿಂಗಳ ಸಂಬಳ		
10	,,	15	,,	,,	,,	6	,,
15	,,	21	,,	,,	,,	12	,,

20. ರೆಜಿಮೆಂಟಿನಲ್ಲಿ ಅಗತ್ಯವುಳ್ಳ ಸಂಖ್ಯೆಗಿಂತ ಶೇಕಡಾ 5ರಷ್ಟು ಕಡಿಮೆ ಇಲ್ಲದಿರುವ ಸಂಗತಿಯಲ್ಲಿ, ಅಪೇಕ್ಷೆ ಮಾಡಿದರೆ 3 ವರುಷಕ್ಕಿಂತ ಹೆಚ್ಚು ಕದೀಮಿಯುಳ್ಳವರನ್ನ ಏನೂ ಆತಂಕವಿಲ್ಲದೆ ಡಿಸ್‌ಚಾರ್ಜ್ ಮಾಡೋಣಾದೀತು.

21. ದಾರಿ ಖರ್ಚು ದೇಶಿಯ ಸೋಲ್ಜರರಿಗೆ—

(i) ಅವರು ದಾಖಲಾದ ನಂತರ ತಮ್ಮ ಫೌಜನ್ನು ಸೇರಲಿಕ್ಕೆ ಹೋಗುವಾಗ್ಯೆ, ಕೆಲಸದ ಮೇಲೆ ಹೋಗ.ವಾಗ್ಯೆ, ಸರಕಾರಿ ಕಾರಣಗಳ ಮೇಲೆ ಒಂದು ರೆಜಿಮೆಂಟಿನಿಂದ ಇನ್ನೊಂದು ರೆಜಿಮೆಂಟಿಗೆ ವರ್ಗವಾಗಿ ಹೋಗುವಾಗ್ಯೆ, ಫರ್ಲೋ ವ ವೈದ್ಯ ಇಲಾಖೆಯ ಸರ್ಟಿಫಿಕೇಟಿನ ರಜಾದ ಮೇಲೆ ಹೋಗುವಾಗ್ಯೆ ವ ವಾಪಸ್ ಬರುವಾಗ್ಯೆ, ಪೆನ್ಷನ್ ಪಡಕೊಂಡು ಅಶಕ್ತಿಯವನಾಗಿ, ಅಥವಾ ಹೆಚ್ಚು ಕೆಲಸ ಮಾಡಲಿಕ್ಕೆ ದೇಹಪ್ರಕೃತಿ ಮೇರೆಗೆ ಅಯೋಗ್ಯನೆಂತ ಡಿಸ್‌ಚಾರ್ಜ್ ಮಾಡೋಣಾಗಿ ರೈಲ್ ಮಾರ್ಗವಾಗಿ ಮನೆಗೆ ಹೋಗುವಾಗ್ಯೆ.

ಅವರು ಕೆಲಸದ ಮೇಲೆ ಹೋಗುವಾಗ್ಯೆ, ಸರಕಾರಿ ಕಾರಣಗಳ ಮೇಲೆ ಒಂದು ರೆಜಿಮೆಂಟಿನಿಂದ ಇನ್ನೊಂದು ರೆಜಿಮೆಂಟಿಗೆ ವರ್ಗವಾಗಿ ಹೋಗುವಾಗ್ಯೆ, ವೈದ್ಯ ಇಲಾಖೆಯ ಅಧಿಕಾರಸ್ಥರು ಅಗತ್ಯವೆಂತ ತಿಳಕೊಳ್ಳುವದಾದರೆ, ವೈದ್ಯ ಇಲಾಖೆಯವರ ಸರ್ಟಿಫಿಕೇಟಿನ ರಜಾದ ಮೇಲೆ ಹೋಗುವಾಗ್ಯೆ ವ ವಾಪಸ್ ಬರುವಾಗ್ಯೆ, ಪೆನ್ಷನ್ ಪಡಕೊಂಡು, ಅಶಕ್ತಿಯವನಾಗಿ, ಅಥವಾ ಹೆಚ್ಚು ಕೆಲಸ ಮಾಡಲಿಕ್ಕೆ ದೇಹ ಪ್ರಕೃತಿ ಮೇರೆಗೆ ಅಯೋಗ್ಯನೆಂತ ಡಿಸ್‌ಚಾರ್ಜ್ ಮಾಡೋಣಾಗಿ ಹೋಗುವಾಗ್ಯೆ, ಸಮುದ್ರ ಮಾರ್ಗವಾಗಿ ಹೋಗಲಿಕ್ಕೆ; ಉಚಿತವಾಗಿ ಪಾಸ್ ಕೊಡೋಣಾದೀತು.

ದೇಶೀಯರುಳ್ಳ ಫೌಜಿನವರಿಗೆ, ಪೆನ್ಷನ್ ಪಡಕೊಂಡು ಯಾ ಡಿಸ್‌ಚಾರ್ಜ್ ಆಗಿ ಹೋಗುವಾಗ್ಯೆ, ಉಚಿತವಾಗಿ ಪಾಸು ಕೊಡೋಣಾಗುವ ಸಂಗತಿಯಲ್ಲಿ ಪ್ರತಿ ಹತ್ತು ಮೈಲಿಗಳಿಗೆ $3\frac{1}{2}$ ಆಣೆ ಪ್ರಕಾರ ಪ್ರಯಾಣದ ಭತ್ತೆ ಕೊಡೋಣಾಗುತ್ತದೆ.

(ii) ದಳವು ಸಹಾಯಕ್ಕೆ ಹೋಗುವಾಗ್ಯೆ ಯಾ ಬೇರೆ ತರದ ಕಾಯಂ ಸ್ವಭಾವದ ಕೆಲಸದ ಮೇಲೆ ಹೋಗುವಾಗ್ಯೆ ದೇಶೀಯ ಸೋಲ್ಜರರ ಕುಟುಂಬವನ್ನು, ಅವರ ಸಂಗಡ ಹೋಗಲಿಕ್ಕೆ ಬಿಡೋಣಾದರೆ ರೈಲ ಮಾರ್ಗವಾಗಿ ಸಮುದ್ರ ಮಾರ್ಗವಾಗಿ ಹೋಗಲಿಕ್ಕೆ ಉಚಿತವಾಗಿ ಪಾಸ ಕೊಡೋಣಾಗುತ್ತದೆ. ಅಥವಾ ದಳವು ಇಂಡಿಯದ ಗಡಿ ಹೊರಗೆ ಪರಾಯಿ ದೇಶದಲ್ಲಿ ನಾಕರಿ ಯಾ ಯುದ್ಧಕ್ಕೆ ಹೋದ ಮೇಲೆ ಸದರೀ ಕುಟುಂಬದವರಿಗೆ ಮನೆಗೆ ಹೋಗುವ ಬಗ್ಯೆ ಅಥವಾ ಅಂಥ ಕೆಲಸದಿಂದ ವಾಪಸು ಬಂದಲ್ಲಿ ಪುನಹಾ ರೆಜಿಮೆಂಟಿಗೆ ಬಂದು ಸೇರುವಾಗ್ಯೆ ಅದೇ ರೀತಿಯಲ್ಲಿ ಉಚಿತವಾಗಿ ಪಾಸು ಕೊಡೋಣಾಗುವದು.

ದೇಶಿಯ ದಳಗಳು ಸಹಾಯಕ್ಕಾಗಿ ಭೂಮಾರ್ಗವಾಗಿ ಹೋಗುವಾಗ್ಯೆ ಅವರ ಕುಟುಂಬವು ಸಂಗಡಲೇ ಹೋಗುವ ಸಂಗತಿಯಲ್ಲಿ, ಅಥವಾ ಮದ್ರಾಸಿನ ಫೌಜುಗಳನ್ನು ಲೆಫ್ಟಿನೆಂಟ್ ಜನರಲ್ ಅವರನ್ನ ರೈಲ್ ಮಾರ್ಗವಾಗಿ ಯಾ ಬೇರೆ ವಿಧದ ವಾಹನಗಳ ಮೇಲೆ ಅವರ ಸ್ವಂತ ಖರ್ಚಿನಿಂದ ಹೋಗಲಿಕ್ಕೆ ಬಿಟ್ಟಲ್ಲಿ ದಳದವರು ಹೋಗದಷ್ಟು ದೂರಕ್ಕೆ ಮೊದಲಿನ ಗಾಡಿ ಬಾಡಿಗೆಗೂ ಪ್ರಕೃತದ ಗಾಡಿ ಬಾಡಿಗೆಗೂ ಇರುವ ವ್ಯತ್ಯಾಸವು ಕುಟುಂಬದವರ ಪ್ರಯೋಜನಾರ್ಥವಾಗಿ ಸರಕಾರದಿಂದ ಕೊಡೋಣಾಗುತ್ತದೆ.

ಷರಾ.—"ಕುಟುಂಬಗಳು" ಎಂಬ ಪದವು ಹೆಂಡತಿ ವ ಮಕ್ಕಳನ್ನು ಮಾತ್ರ ಅಡಗಿಸಿಕೊಳ್ಳುತ್ತದೆ ಮತ್ತು ಅದು ಸರಕಾರದಿಂದ ಅಂಗೀಕರಿಸೋಣಾಗಿ ರೆಜಿಮೆಂಟಿನಲ್ಲಿ ವಾಸವಾಗಿರಲಿಕ್ಕೆ ಬಿಡೋಣಾದ ಕುಟುಂಬಗಳಿಗೆ ಮಾತ್ರ ಲಗಾವಾಗುತ್ತದೆ.

22. ಜನವರಿ ಹಬ್ಬದ ಮೊದಲನೇ ದಿವಸ, ಶ್ರೀ ಮಹಾರಾಣಿಯವರ ಜನ್ಮ ದಿನ ಮತ್ತು ಸ್ಟ್ರೈಕ್ಷನ್ ಮೊದಲಾದವುಗಳ ಕಮಾಂಡಿಂಗ್ ಆಫೀಸರರು ಕೊಡುವದು ನ್ಯಾಯವೆಂತ ತಿಳಕೊಳ್ಳುವ ಕಾಲಗಳಲ್ಲಿ, ಅಥವಾ ಸರಕಾರದವರಿಂದ ವಿಶೇಷವಾಗಿ ಹುಕುಂ ಕೊಡೋಣಾದ ಕಾಲಗಳಲ್ಲಿ ಆಯಾ ಗ್ರೇಡುಗಳಿಗೆ ಕೊಡೋಣಾಗುವ ಭತ್ತೆಯ ದರದಲ್ಲಿ ಡ್ರೈ ಭತ್ತೆ ಎಂಬ ನಗದು ಭತ್ತೆ ಕೊಡೋಣಾಗುತ್ತದೆ.

23. ರೆಜಿಮೆಂಟಿಗೆ ಅಗತ್ಯವಿರುವ ಸಾಮಾನುಗಳ ಪೈಕಿ ಯಾವದಾದರೂ ಸಾಮಾನಿನ ಅನಿವಾರ್ಯವಾದ ನಷ್ಟದ ಬಗ್ಯೆ ಲುಕ್ಸಾನು ಕೊಡೋಣಾಗುತ್ತದೆ.

24. ರೆಜಿಮೆಂಟಿನ ಸಿಪ್ಪಾಯರ ಪೈಕಿ ಪ್ರತಿ ಒಂದು ರೆಜಿಮೆಂಟಿನಲ್ಲಿ ಬಹಳ ಹುಷಾರುಳ್ಳ ಎಂಟು ಮಂದಿಗೆ ವರುಷ 1ಕ್ಕೆ 5 ರೂಪಾಯಿ ದರದಲ್ಲಿ ಬೋನಸ್ ಕೊಡೋಣಾಗುತ್ತದೆ.

25. ಬರ್ಮಿ ಮತ್ತು ಶಾನ್ ಭಾಷೆಯ ಪರೀಕ್ಷೆಯಲ್ಲಿ ತೇರ್ಗಡೆಪಟ್ಟ ಬಗ್ಯೆ ದೇಶಿಯ ಉದ್ಯೋಗಸ್ಥರಿಗೆ ವ ಇತರರಿಗೆ ಇನಾಮು ಶಿಕ್ಕುತ್ತದೆ:—

					ರೂ.
ಬರ್ಮಿ ..	ಮೂಲ ದರ್ಜೆ	..	..	..	180
	ಕೆಳ ದರ್ಜೆ	..	..	..	360
ಶಾನ್ ..	ಮೂಲದ ರ್ಜೆ	..	..	..	180
	ಕೆಳ ದರ್ಜೆ	..	..	..	360

26. ವರುಷಾಶನದೊಡನೆ ವ ಇನಾಮಿನೊಡನೆ ಒಳ್ಳೆ ನಡತೆ ಬಗ್ಯೆ ಬಿರುದಿನ ಬಿಲ್ಲೆಗಳು ಕೊಡೋಣಾಗುತ್ತವೆ. ರಾಹುತರ ಯಾ ಪಾಯಿದಳದವರ ಪ್ರತಿ ಒಂದು ರೆಜಿಮೆಂಟಿನ ಹವಲ್ದಾರ್ ಮೇಜರನ ಸಹಿತ ಹವಲ್ದಾರರಿಗೆಲ್ಲ 25 ರೂಪಾಯಿ ವರುಷಾಶನದೊಡನೆ "ಶ್ರೇಯಸ್ಕರವಾದ ನಾಕರಿಯ ಬಗ್ಯೆ" ಎಂತ ಬರೆದಿರುವ ಬೆಳ್ಳಿಯ ಬಿರುದಿನ ಬಿಲ್ಲೆ ಕೊಡೋಣಾಗುತ್ತದೆ.

ರಾಹುತರ ವ ಪಾಯಿದಳದವರ ಪ್ರತಿ ಒಂದು ರೆಜಿಮೆಂಟಿಗೆ 25 ರೂಪಾಯಿ ವರುಷಾಶನದೊಡನೆ "ಹೆಚ್ಚು ಕದೀಮಿ ವ ಒಳ್ಳೆ ನಡತೆ ಬಗ್ಯೆ" ಎಂತ ಬರೆದಿರುವ ಬೆಳ್ಳಿಯ ಎರಡು ಬಿರುದಿನ ಬಿಲ್ಲೆಗಳು ಕೊಡೋಣಾಗುತ್ತವೆ.

27. (ನೇಟಿವ್ ಆಫಿಸರರ ವಿನಹಾ) ಸೋಲ್ಜರರು ಮೇಲೆ ಕ್ರಿಮಿನಲ್ ತಕ್ಸೀರುಗಳು ಹೊರಿಸಲ್ಪಟ್ಟಲ್ಲಿ ಮೂಲ ವಿಚಾರಣೆಯಲ್ಲಿ ಯೂ ಅಪ್ಪೀಲಿನಲ್ಲಿಯೂ ಡಿಫೆನ್ಸಿನ ಬಗ್ಯೆ ವಕೀಲರು ನೇಮಿಸಲ್ಪಡುವರು.

28. ಕಮ್ಮಿಷನ್ ಹೊಂದಿದ ಆಫಿಸರನ ಸಮ್ಮತವಾಗಿ ಒಬ್ಬ ನೇಟಿವ್ ಪೆನ್ಷನ್‌ದಾರನು ಗವರ್ನಮೆಂಟಿನವರ ಕೆಳಗೆ ಯಾವ ಉದ್ಯೋಗವನ್ನಾದರೂ ಪಡೆಯಬಹುದು; ಮತ್ತು ತನ್ನ ಪೆನ್ಷನ್ ವಿನಹಾ ಆ ಕೆಲಸದ ಬಗ್ಗಿನ ಸಂಬಳವನ್ನು ಪಡಕೊಳ್ಳಬಹುದು.

29. ಸಾಲಕ್ಕೋಸ್ಕರ ಕೈದಿನಲ್ಲಿಡಲ್ಪಟ್ಟ ಕಾಲದ ಬಗ್ಯೆ ಒಬ್ಬನು ತನ್ನ ಪೆನ್ಷನನ್ನು ಕಳಕೊಳ್ಳುವದಿಲ್ಲ.

30. ಪೆನ್ಷನ್‌ದಾರರ ತಾಬೆ ಇರುವ ಆಫಿಸರರು ಪೆನ್ಷನ್‌ದಾರರಿಂದ ತೆಗೆದುಕೊಳ್ಳಲ್ಪಟ್ಟ ಸಾಲಗಳ ಕುರಿತು ವಿಚಾರಣೆ ನಡಿಸ ಕೂಡದು.

31. ಪೆನ್ಷನ್ ಹೊಂದಿದ ಒಬ್ಬ ಸೋಲ್ಜರನು ತನ್ನ ಸ್ವಂತ ಇಚ್ಛೆಯ ಮೇರೆಗೆ ವ ಇನ್ನು ಹಲವು ವರುಷಗಳ ವರೆಗೆ ಕೆಲಸ ಮಾಡಲಿಕ್ಕೆ ಶಾರೀರಕ ತ್ರಾಣವುಳ್ಳವನೆಂಬದಾಗಿ ಗವರ್ನಮೆಂಟಿನವರಿಂದ ಉದ್ದಿಶ್ಯವಾದ ಸ್ಯಾಂಕ್ಷನನ್ನು ಪಡಕೊಂಡು ದಂಡಿನಲ್ಲಿ ಪುನಹಾ ದಾಖಲಾದರೆ ಆತನ ಹಿಂದಿನ ನೌಕರಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದು. ಆತನನ್ನು ಪುನಹಾ ಅಶಕ್ತರ ಲವಾಜಮೆಗೆ ಕಳುಹಿಸಿದರೆ ತಿರಿಗಿ ದಾಖಲು ಮಾಡಿಕೊಳ್ಳುವಾಗ್ಯೆ ಆತನಿಗೆ ಶಿಕ್ಕುತ್ತಿದ್ದ ಪೆನ್ಷನನ್ನಾಗಲಿ ತದನಂತರದ ನೌಕರಿಯ ದೆಶೆಯಿಂದ ಪಡಕೊಳ್ಳಲಿಕ್ಕೆ ಅರ್ಹನಾಗಬಹುದಾದ ಜಾಸ್ತಿ ಪೆನ್ಷನನ್ನಾಗಲಿ ಕೊಡಲಾಗುವದು.

32. ಒಬ್ಬ ಸುಬೇದಾರ ಮೇಜರನು ಅಶಕ್ತರ ಲವಾಜಮೆಗೆ ಕಳುಹಿಸಲ್ಪಟ್ಟರೆ ಅವನಿಗೆ ಸುಬೇದಾರನಾಗಿ ಎಷ್ಟು ವರುಷದ ನೌಕರಿ ಇದ್ದಾಗ್ಯೂ ಅಧಿಪತ್ಯ ನಡಿಸುವ ಜನರಲ್ ಆಫಿಸರನ ಉದ್ದಿಶ್ಯವಾದ ಶಿಫಾರಸಿನ ಮೇಲೆ ಆತನ ಪ್ರವೆಟ್ (ಹುದ್ದೆಯ) ಸಂಬಳ ಅಂದರೆ ತಿಂಗಳಿಗೆ 50 ರೂಪಾಯಿ ಕೊಡೋಣಾಗುವದು.

33. ನೇಟಿವ್ ಫೌಜಿನಲ್ಲಿ ಇಸಂಗಳನ್ನು ಕಡಿಮೆ ಮಾಡಿದ್ದಾಗ್ಯೆ ಪೋಲೀಸ್ ಶಿಬ್ಬಂದಿಗೆ ವರ್ಗಮಾಡಲ್ಪಟ್ಟ ಒಬ್ಬ ಸೋಲ್ಜರನಿಗೆ, ಪೋಲಿಸ್ ಶಿಬ್ಬಂದಿಯಲ್ಲಿಯ ಆತನ ವರ್ಗಾವರ್ಗಿಯು ಸ್ಯಾಂಕ್ಷನ್ ಮಾಡಲ್ಪಟ್ಟರೆ, ಆತನ ಮಿಲಿಟರಿ ನೌಕರಿಯ ಕಡಿಮೆಯು ಶಿಕ್ಕತಕ್ಕದ್ದು.

34. ಯುದ್ಧದಲ್ಲಿ ಆದ ಗಾಯಗಳ ಮತ್ತು ಯುದ್ಧದಲ್ಲಿ ಅಲ್ಲದೆ ಅನ್ಯಥಾ ಮಿಲಿಟರಿ ಕೆಲಸಗಳನ್ನು ಮಾಡುವಾಗ್ಯೆ ಸಂಭವಿಸಿದ ಹಾನಿಗಳ ಬಗ್ಯೆ ಗ್ರಾಚ್ಯೂಟಿ ವ ಪೆನ್ಷನುಗಳು ಯೂರೋಪಿಯನ್ ಕಮ್ಮಿಷನ್ಡ್ ಆಫಿಸರರಿಗೆ ಯಾವ ಕ್ರಮಗಳಿಗೆ ವ ಷರತುಗಳಿಗೆ ಅನುಸಾರವಾಗಿ ಕೊಡಲ್ಪಡುವವೋ ಆ ಕ್ರಮಗಳಿಗೆ ವ ಷರತ್ತುಗಳಿಗೆ ಅನುಸಾರವಾಗಿಯೇ ನೇಟಿವ್ ಕಮ್ಮಿಷನ್ಡ್ ಆಫಿಸರರಿಗೂ ಕೊಡೋಣಾಗುವವು. ಅವುಗಳನ್ನು ಸಂಬಳ ವ ಅಲ್ಲೋವೆನ್ಸ್‌ಗಳಿಗೆ ಯಾ ಪೆನ್ಷನಿಗೆ ಕೂಡಿಸಿ ಬರಮಾಡಿಕೊಳ್ಳತಕ್ಕದ್ದು.

ಕಮ್ಮಿಷನ್ ಹೊಂದದ ಆಫಿಸರರಿಗೂ ಸಮಸ್ತ ಇಲಾಖೆಗಳ ಮನುಷ್ಯರಿಗೂ ಕಮ್ಮಿಷನ್ಡ್ ಆಫಿಸರರ ಸಂಗತಿಯಲ್ಲಿಯ ಹಾಗೆ ಪರಂತು ಬೇರೆಬೇರೆ ದರಗಳಲ್ಲಿ ಗಾಯಗಳ ವ ಹಾನಿಗಳ ಬಗ್ಗಿನ ಪೆನ್ಷನುಗಳು ಶಿಕ್ಕುವವು.

35. ಪರಾಯಿ ದೇಶದಲ್ಲಿ ನೌಕರಿ ಮಾಡುವಾಗ್ಯೆ ಕಾಣೆಯಾದ (ಫರಾರಿಯಾದವನಲ್ಲದ) ಮನುಷ್ಯನ ವಾರಸ್‌ದಾರನು ಪೆನ್ಷನ್ ಪಡಕೊಳ್ಳಲಿಕ್ಕೆ ಅರ್ಹನಾಗುತ್ತಾನೆ.

36. ಹನ್ನೆರಡು ತಿಂಗಳ ಭತ್ತೆಯನ್ನು ಕಳದು ಹನ್ನೆರಡು ತಿಂಗಳ ಸಂಬಳಕ್ಕೆ ಬರಾಬರದಷ್ಟು ಗ್ರಾಚ್ಯೂಟಿಯು ಮಿಲಿಟರಿ ಕೆಲಸವನ್ನು ಮಾಡುವಾಗ್ಯೆ ಕೊಲ್ಲಲ್ಪಟ್ಟ ನೇಟಿವ್ ಕಮ್ಮಿಷನ್ಡ್ ಆಫಿಸರರ ವಾರಸ್‌ದಾರರಿಗೆ ಕೊಡೋಣಾಗುವದು.

LINKED BATTALIONS (INFANTRY).

ಒಟ್ಟು ಕೂಡಿಸಲ್ಪಟ್ಟ ಪಟಾಲಗಳು (ಪಾಯಿದಳಗಳು).

1. ಮದ್ರಾಸ್ ಪಾಯಿದಳದ ರೆಜಿಮೆಂಟುಗಳು ಪ್ರತಿ ಒಂದು ಮೂರು ಪಟಾಲಗಳ ರೆಜಿಮೆಂಟಾಗಿ ಒಟ್ಟು ಕೂಡಿಸಲ್ಪಟ್ಟಿದ್ದಾವೆ; ಆದರೆ ಸ್ವಲ್ಪ ರೆಜಿಮೆಂಟುಗಳು ಎರಡು ಪಟಾಲಗಳ ರೆಜಿಮೆಂಟುಗಳಾಗಿ ಒಟ್ಟು ಕೂಡಿಸಲ್ಪಟ್ಟಿದಾವೆ.

2. ಯಾವದಾದರೂ ಒಂದು ಪಟಾಲದಲ್ಲಿ ಮಾಡಲ್ಪಟ್ಟ ಸಮಸ್ತ ದಾಖಲಾತಿಗಳು ಎರಡೂ ಯಾ ಮೂರು ಪಟಾಲಗಳ ಬಗ್ಯೆ ಆಗಿರುವವು, ಅಂದರೆ ರೆಜಿಮೆಂಟಿನ ಒಂದು ಪಟಾಲದ ಬಗ್ಯೆ ದಾಖಲಾದ ಒಬ್ಬ ಹೊಸ ಶಿಪಾಯಿಯು ಆತನು ರೆಜಿಮೆಂಟಿನ ಯಾವ ಪಟಾಲದಲ್ಲಿ ನೌಕರಿ ಮಾಡುತ್ತಾನೋ ಆ ಪಟಾಲಕ್ಕೆ ಯಾವ ಸಮಯದಲ್ಲಾದರೂ ಒಟ್ಟು ಕೂಡಿಸಲ್ಪಡಬಹುದಾದ ಇತರ ಪಟಾಲಗಳಲ್ಲಿ ನೌಕರಿ ಮಾಡಲಿಕ್ಕೆ ಗುರಿಯಾಗುತ್ತಾನೆ, ಮತ್ತು ಯುದ್ಧ ಕಾಲದಲ್ಲಿ ಅವಶ್ಯ ಬಿದ್ದರೆ ಅವನನ್ನು ಆ ಪಟಾಲಗಳಿಗೆ ವರ್ಗಮಾಡಬಹುದು. ಒಟ್ಟು ಕೂಡಿಸಲ್ಪಟ್ಟ ಒಂದು ಪಟಾಲಕ್ಕೆ ಯುದ್ಧಕಾಲದಲ್ಲಿ ವರ್ಗಮಾಡಲ್ಪಡುವ ಪದ್ಧತಿಯ ಹೊರ್ತು, ಶಿಪಾಯಿಯ ದಾಖಲಾತಿಯ ಕುರಿತ ಷರತ್ತುಗಳು ಪ್ರಕೃತ ಇದ್ದಹಾಗೆಯೇ ಇರುವವು.

ರೆಜಿಮೆಂಟುಗಳು ಈ ಕೆಳಗೆ ಕಾಣಿಸಿದ ಮೇರೆಗೆ ಒಟ್ಟು ಕೂಡಿಸಲ್ಪಟ್ಟಿರುತ್ತವೆ:—

1ನೇ (ಪಾಯನಿಯರ್ಸ್)	4ನೇ (ಪಾಯನಿಯರ್ಸ್)	21ನೇ (ಪಾಯನಿಯರ್ಸ್)
2ನೇ	15ನೇ	26ನೇ
3ನೇ	23ನೇ	
5ನೇ	16ನೇ	27ನೇ
6ನೇ	14ನೇ	
7ನೇ	19ನೇ	24ನೇ
8ನೇ	17ನೇ	25ನೇ
9ನೇ	11ನೇ	28ನೇ
13ನೇ	20ನೇ	22ನೇ

ORGANIZATION OF RESERVES (INFANTRY).
ರಿಜರ್ವುಗಳ ಏರ್ಪಾಡು (ಪಾಯಿದಳ)

1. ಆಕ್ಟಿವ್ ರಿಜರ್ವು ಪ್ರತಿ ಒಂದು ಪಟಾಲಕ್ಕೆ 160 ಮನುಷ್ಯರ ಮೇರೆಗೆ ಆಗಿರತಕ್ಕದ್ದು. ಅದರಲ್ಲಿ—

(a) ಎಲ್ಲಾ ತರಗತಿಗಳ ವ ಒಳ್ಳೇ ನಡತೆಯುಳ್ಳ ಮತ್ತು ಐದು ವರುಷಕ್ಕೆ ಕಡಿಮೆಯಾಗದಷ್ಟು ವ ಹನ್ನೆರಡು ವರುಷಕ್ಕೆ ಮೀರದಷ್ಟು ನೌಕರಿಯುಳ್ಳ ಮತ್ತು ಮುಖ್ಯ ಸೈನ್ಯದಿಂದ ರಿಜರ್ವಿಗೆ ಹೋಗಲಿಕ್ಕೆ ಉಮೇದವಾರಿ ಮಾಡಬಹುದಾದ ಶಿಪಾಯರು.

(b) 32 ವರುಷಕ್ಕೆ ಮೀರದಷ್ಟು ಪ್ರಾಯದವರು ಒಳ್ಳೇ ನಡತೆಯುಳ್ಳವರೂ ನಿರ್ದೇಶಿಸಲ್ಪಟ್ಟ ಜಾತಿಯವರೂ ಆಗಿದ್ದು ಮೂರು ವರುಷಕ್ಕೆ ಕಡಿಮೆಯಾಗದ ವ ಹನ್ನೆರಡು ವರುಷಕ್ಕೆ ಮೀರದ ನೌಕರಿ ನೋಡಿದ ನಂತರ ದುರ್ನಡತೆಯ ಬಗ್ಗೆ ಅಲ್ಲದೆ ಇತರ ಯಾವದಾದರೂ ಕಾರಣದ ಬಗ್ಗೆ ಡಿಸ್ಚಾರ್ಜ್ ಮಾಡಲ್ಪಟ್ಟು ರಿಜರ್ವಿನ ಬಗ್ಗೆ ಪುನಹಾ ದಾಖಲಾಗಿರಬಹುದಾದ ಮನುಷ್ಯರು; ಶೇರಿರುತ್ತಾರೆ.

2. ಕಮ್ಮಿಷರ್ನ ಹೊಂದದ ಆಫಿಸರರು ತಮ್ಮ ಪಟಾಲದ ಆಧಿಪತ್ಯವನ್ನು ನಡಿಸುವ ಆಫಿಸರರ ಅಪ್ಪಣೆಯನ್ನು ಪಡಕೊಂಡು ತಮ್ಮ ಹುದ್ದೆಗೆ ರಾಜಿಕೊಟ್ಟು ಸಿಪಾಯರಾಗಿ ರಿಜರ್ವಿಗೆ ವರ್ಗಮಾಡಲ್ಪಡಲಿಕ್ಕೆ ಸಮ್ಮತಿ ಪಟ್ಟರೆ ಮಾತ್ರ ರಿಜರ್ವಿನಲ್ಲಿ ಸೇರಬಹುದು.

3. ಪೂರಾ ರಿಜರ್ವು ಯಾ ಅಪರ ಯಾವದಾದರೂ ಭಾಗವು ಎಲ್ಲಾ ಕಾಲಗಳಲ್ಲಿಯೂ ಗವರ್ನಮೆಂಟಿನವರ ಹುಕುಮಿಗನುಗುಣವಾಗಿ ಕೆಲಸದ ಬಗ್ಗೆ ಕರೆಯಲ್ಪಡಲಿಕ್ಕೂ ಅವಶ್ಯವಿರುವವರಿಗೆ ಮುಖ್ಯ ಸೈನ್ಯದ ಸಂಗಡ ಇಟ್ಟು ಕೊಳ್ಳಲ್ಪಡಲಿಕ್ಕೂ ಗುರಿಯಾಗಿರುತ್ತದೆ.

4. ಹೀಗೆ ಕೆಲಸದ ಬಗ್ಗೆ ಕರೆಯಲ್ಪಟ್ಟಾಗ ಸದರೀ ಮನುಷ್ಯರು ತರ್ಬೀಯತು ಮಾಡುವ ಸ್ಥಳಕ್ಕೆ ಹೋಗತಕ್ಕದ್ದು. ಮತ್ತು ತಮ್ಮ ಸ್ವಂತ ಪಟಾಲಕ್ಕೆ ಸೇರಿಸಲ್ಪಟ್ಟ ಯಾ ಇನ್ನು ಮುಂದೆ ಸೇರಿಸಲ್ಪಡ ಬಹುದಾದ ಯಾವದೊಂದು ಪಟಾಲದ ಸಂಗಡ ವ ಎಲ್ಲಿಯೂ ಕೆಲಸ ಮಾಡಲಿಕ್ಕೆ ಗುರಿಯಾಗಿರುವರು.

5. ರಿಜರ್ವಿನ ಸಿಪಾಯರು ಯುದ್ಧಕಾಲದಲ್ಲಿ ಯಾ ಸ್ವಲ್ಪ ಸಮಯದಲ್ಲಿಯೇ ಯುದ್ಧ ಸಂಭವಿಸೀತು ಎಂದು ಇಂಡಿಯಾ ಗವರ್ನಮೆಂಟಿನವರು ಅಭಿಪ್ರಾಯ ಪಡುವಾಗ್ಯೆ ಅಲ್ಲದೆ ಇತರ ಯಾವ ಸಮಯದಲ್ಲಾದರೂ ನೌಕರಿಯಿಂದ ಡಿಸ್ಚಾರ್ಜ್ ಮಾಡಲ್ಪಡಬೇಕಾಗಿ ಕೇಳಬಹುದು.

6. ಯುದ್ಧಕ್ಕೆ ಹೋಗತಕ್ಕ ಸೈನ್ಯದ ನೇಟಿವ್ ಶಿಪಾಯರು ಸಿವಿಲ್ ದಾವೆಗಳಲ್ಲಿ ತಮ್ಮ ವ್ಯಾಜ್ಯವನ್ನು ಪ್ರಥಮತಃ ತನಖೆ ಮಾಡಬೇಕೆಂದು ಯಾವ ಕ್ರಮಗಳಿಗನುಗುಣವಾಗಿ ಹಕ್ಕನ್ನು ಹೇಳಬಹುದೋ ಆ ಕ್ರಮಗಳು ರಿಜರ್ವಿನ ಮನುಷ್ಯರಿಗೂ ಲಗಾವಾಗುತ್ತವೆ.

ರಿಜರ್ವಿನ ಮನುಷ್ಯರು, ಅವರು ವಾಸಿಸುವ ಪ್ರದೇಶದಲ್ಲಿ ಜಾರಿಯಲ್ಲಿರುವ ಆಕ್ಟಿನ ನಿಬಂಧನೆಗಳಿಗನುಗುಣವಾಗಿ ಮಾಡತಕ್ಕ ಕಾಯಿದೆಯಿಂದ ಸ್ಥಾಪಿತವಾದ ಕೆಲಸದಿಂದ ವಿನಾಯಿಸಲ್ಪಟ್ಟಿರುತ್ತಾರೆ—

1873ನೇ ಇಸವಿಯ 8ನೇ ಆಕ್ಟು.
1877ನೇ ಇಸವಿಯ 13ನೇ ಆಕ್ಟು.
1858ನೇ ಇಸವಿಯ 1ನೇ ಮದ್ರಾಸ್ ಆಕ್ಟು.
1879ನೇ ಇಸವಿಯ 7ನೇ ಮುಂಬಾಯಿ ಆಕ್ಟು.

7. ಆಕ್ಟಿವ್ ರಿಜರ್ವಿನವರು ಈ ಕೆಳಗೆ ಕಾಣಿಸಿದವುಗಳ ವಿನಹಾ ಗವರ್ನಮೆಂಟಿನ ಕೆಳಗೆ ಇತರ ಸಿವಿಲ್ ಉದ್ಯೋಗಗಳನ್ನು ಪಡೆಯಲಿಕ್ಕೆ ಅರ್ಹರಾಗಿರುತ್ತಾರೆ:—

ಜೈಲ್ ವಾರ್ಡರರು (ಬಂದಿಖಾನೆಕಾವಲುಗಾರರು).
ಫಾರೆಸ್ಟ್ ಗಾರ್ಡುಗಳು.
ನಾರ್ತ್ ವೆಸ್ಟರ್ನ್ ರೈಲ್ವೆ ಸಿಬ್ಬಂದಿ.
ಆಯೋಧ್ಯೆ ಮತ್ತು ರೋಹಿಲಖಂಡ ರೈಲ್ವೆ ಸಿಬ್ಬಂದಿ.
ಯಾವದೊಂದು ರೈಲ್ವೆಯಲ್ಲಿ ಶಾಸ್ತ್ರೀಕ ಜ್ಞಾನ ಅಥವಾ ತರ್ಬೀಯತು ಅಗತ್ಯವಿರುವ ಕೆಲಸಗಳು ದೃಷ್ಟಾಂತಕ್ಕೆ ಪಾಯಿಂಟ್ಸ್‌ಮೆನ್ ಸಿಗ್ನಲ್ ಮೆನ್ ಅಥವಾ ಗ್ಯಾಂಗ್ಮೆನ್.

ಮೇಲೆ ಹೇಳಿದ ಉದ್ಯೋಗಗಳ ವಿನಹ ಇತರ ಉದ್ಯೋಗಗಳನ್ನು ನೋಡುವವರಿಗೆ ಅವರ ವರುಷಾವಧಿ ತರ್ಬೀಯತಿಗೆ ಹಾಜರಾಗಲಿಕ್ಕೆ ರಜಾ ಸಿಕ್ಕುವದು. ಆದರೆ ಅವಶ್ಯವಿದ್ದರೆ ಅವರು ಅಂಥಾ ಗೈರಹಾಜರಿ ಕಾಲದಲ್ಲಿ ಬದಲಿಯವರನ್ನು ಇಡಬೇಕಾಗಿ ಕೇಳಲ್ಪಡಬಹುದು.

8. ಒಂದು ಪಟಾಲವು ಕೆಲಸದ ಮೇಲೆ ಇರುವಾಗ್ಯೆ ಯಾ ಕೆಲಸದಬಗ್ಗೆ ತಯಾರಾಗಿರಬೇಕೆಂದು ಎಚ್ಚರಿಕೆ ಕೊಡಲ್ಪಟ್ಟಾಗ್ಯೆ ವಿನಹಾ ಇತರ ಸಮಯದಲ್ಲಿ, ಪಟಾಲವು ಪೂರ್ಣವಾಗಿ ಭರ್ತಿಯಾಗಿರದಿದ್ದರೂ ಸಿಪಾಯರು ಸೈನ್ಯದ ಮುಖ್ಯಭಾಗದಿಂದ ಅಧಿಕಾರಗೊಳಿಸಲ್ಪಟ್ಟ ಸಂಖ್ಯೆಯಮಟ್ಟಿಗೆ ಆಕ್ಟಿವ್ ರಿಜರ್ವಿಗೆ ಹೋಗಬಹುದು.

9. ಆಕ್ಟಿವ್ ರಿಜರ್ವಿನ ಒಬ್ಬ ಸಿಪಾಯಿಯ ರಿಜರ್ವ ಸಂಬಳವು ತಿಂಗಳಿಗೆ 3 ರೂಪಾಯಿ ಯಾಗಿರುತ್ತದೆ.

10. ತರ್ಬೀಯತಿನ ಯಾ ಕೆಲಸದ ಬಗ್ಗೆ ಬಟ್ಟು ಕೂಡಿಸಲ್ಪಟ್ಟಾಗ್ಯೆ ಕೆಲಸಕ್ಕೆ ಯೋಗ್ಯವಾದ ರಿಜರ್ವಿನ ಸಿಪಾಯರು ಮುಖ್ಯ ಸೈನ್ಯದ ಸಂಗಡ ಇರುವಾಗ್ಯೆ ಅವರಿಗೆ ಸಿಕ್ಕುತ್ತಿದ್ದ ಪೂರಾ ಸಂಬಳ ವ ಒಳ್ಳೇನಡತೆಯ ಒಗ್ಗಿನ ಸಂಬಳವನ್ನು ಹೊಂದುವರು. ಹೀಗೆ ಪೂರಾ ಸಂಬಳವನ್ನು ಹೊಂದುವಾಗ್ಯೆ ಅವರ ರಿಜರ್ವಿನ ಸಂಬಳವು ನಿಂತುಹೋಗುವದು. ಸಿಪಾಯಿಯಾಗಿ ರಿಜರ್ವಿನಲ್ಲಿ ದಾಖಲಾದ ಒಬ್ಬ ಕಮ್ಮಿಷನ್ ಹೊಂದದ ಆಫಿಸರನು (2ನೇ ಕಲಂ) ತರ್ಬೀಯತ್ತಿನ ಬಗ್ಗೆ ಸೇರಿಸಲ್ಪಟ್ಟಾಗ್ಯೆ ಯಾ ಕೆಲಸದಬಗ್ಗೆ ಕರೆಯಲ್ಪಟ್ಟಾಗ್ಯೆ ರಿಜರ್ವಿಗೆ ಅವನು ಹೋಗುವದಕ್ಕಿಂತ ಸ್ವಲ್ಪ ಮುಂಚೆ, ಅವನ ನಡತೆಯು ಯಾ ನೌಕರಿಕಾಲವು ಒಬ್ಬ ಸಿಪಾಯಿದಾಗಿ ಎಣಿಸಿದರೆ ಅವನು ಪಡಕೊಳ್ಳಲಿಕ್ಕೆ ಅರ್ಹನಾಗುತ್ತಿದ್ದ ಒಳ್ಳೇ ನಡತೆಯ ಸಂಬಳದ ದರವನ್ನು ಹೊಂದುವನು.

11. ಆಕ್ಟಿವ್ ರಿಜರ್ವಿನ ಸಿಪಾಯರು ತರ್ಬೀಯತಿನ ಯಾ ಕೆಲಸದ ಬಗ್ಯೆ ಕರೆಯಲ್ಪಟ್ಟಾಗ್ಯೆ ಜಿನಸುಗಳು ಪ್ರಿಯವಾದರೆ ಆ ಬಗ್ಯೆ ಪರಿಹಾರ ದ್ರವ್ಯವನ್ನು ಪಡಕೊಳ್ಳಲಿಕ್ಕೆ ಅರ್ಹರಾಗಿರುತ್ತಾರೆ. ವರುಷಾವಧಿ ತರ್ಬೀಯತಿನ ಕಾಲದ ಸಂಗತಿಯಲ್ಲಿ, ಯಾವ ತಿಂಗಳಿನ ಅಖೈರದಿವಸವು ಆ 31 ದಿವಸಗಳ ತರ್ಬೀಯತಿನಲ್ಲಿ ಬರುತ್ತದೋ ಆ ತಿಂಗಳಿನಲ್ಲಿದ್ದ ಕ್ರಯದವೇರೆಗೆ ಆ ಇಡೀ ಕಾಲದ ಬಗ್ಯೆ ಅಂಥಾ ಪರಿಹಾರ ದ್ರವ್ಯವು ಸಿಕ್ಕುವದು.

12. ತರ್ಬೀಯತಿನ ಬಗ್ಯೆ ಬಟ್ವು ಕೊಡಿಸಲ್ಪಟ್ಟಾಗ್ಯೆ ಆ ಸ್ಥಳದ ಪಟಾಲದ ಆಧಿಪತ್ಯವನ್ನು ನಡಿಸುವ ಆಫಿಸರನಿಂದ ಅವರು ಬಾಕಿಯಲ್ಲಿದ್ದ ತಮ್ಮ ರಿಜರ್ವಿನ ಸಂಬಳವನ್ನು ಪಡಕೊಳ್ಳುವರು. ಸಲ್ಲತಕ್ಕದ್ದರ ಅರವಾಸಿಯು ಪ್ರತಿ ಒಬ್ಬ ಮನುಷ್ಯನಿಗೆ ಪ್ರಥಮ ಸರ್ತಿಗೆ ಹಾಜರಿ ನೋಡಿದಾಗ್ಯೆ ಸಿಕ್ಕುವದು; ಮತ್ತು ಉಳಿದ ಅಂಶವು, ಪೂರಾ ಸಂಬಳ, ಒಳ್ಳೇನಡತೆಯ ಬಗ್ಯಿನ ಸಂಬಳ, ಅಂಥಾ ತರ್ಬೀಯತಿನಕಾಲದಲ್ಲಿ ಜಿನಸುಗಳು ಪ್ರಿಯವಾದ ದೆಶೆಯಿಂದ ಅವರಿಂದ ಸಂಪಾದಿಸಲ್ಪಟ್ಟ ಪರಿಹಾರದ್ರವ್ಯ ವ ರೋಡ್ ಅಲೋಯೆನ್ಸು ಸಹಾ (ಪ್ಯಾರಾ 21) ಸಲುವದು ಇದ್ದರೆ ಬಟ್ವು ತರ್ಬೀಯತಿನ ಕಾಲದ ಅಂತ್ಯದಲ್ಲಿ ಕೊಡಲ್ಪಡುವದು. ಯಾವ ಸಂದರ್ಭಗಳಲ್ಲಾದರೂ ರಿಜರ್ವಿನ ಸಂಬಳವು ಮುಂಗಡವಾಗಿ ಕೊಡಲ್ಪಡಲಿಕ್ಕಿಲ್ಲ.

13. ಡಿಸ್ಚಾರ್ಜ್ ಮಾಡಲ್ಪಟ್ಟು ಆಕ್ಟಿವ್ ರಿಜರ್ವಿಗೆ ಪುನಹಾ ದಾಖಲ್ಮಾಡಲ್ಪಟ್ಟ ಸಿಪಾಯರಿಗೆ ಅವರು ಡಿಸ್ಚಾರ್ಜ್ ಮಾಡಲ್ಪಡುವಾಗ್ಯೆ ಅವರಿಗೆ ಸಿಕ್ಕುತ್ತಿದ್ದ ಪೂರ್ಣ ಸಿಪಾಯಿಯ ಸಂಬಳವೂ, ಒಳ್ಳೆನಡತೆಯ ಸಂಬಳ ಏನಾದರೂ ಇದ್ದರೆ ಅದೂ, ಅವರು ತರ್ಬೀಯತಿನ ಬಗ್ಯೆ ಪಟಾಲಕ್ಕೆ ಸೇರಿದ್ದ ಕಾಲದಲ್ಲಿ ಜಿನಸು ಪ್ರಿಯವಾದುದರಿಂದ ಸಲತಕ್ಕ ಪರಿಹಾರ ದ್ರವ್ಯವೂ ಸಹಾ ಸಿಕ್ಕುವದು.

14. ರಿಜರ್ವಿನ ಒಬ್ಬ ಸಿಪಾಯಿಯು ತನ್ನ ಮನೆಯಲ್ಲಿ ಮೃತಪಟ್ಟ ಸಂಗತಿಯಲ್ಲಿ ಆತನ ರಿಜರ್ವಿನ ಸಂಬಳವು ಮರಣದ ತಾರೀಖುವರೆಗೆ ಎಣಿಸಲ್ಪಡುವದು. ಆತನ ಸೊತ್ತಿನಲ್ಲಿ ಬಾಕಿ ಏನಾದರೂ ಇದ್ದರೆ ಅದನ್ನು ಆತನ ವಾರಸ್ದಾರನಿಗೆ ಅವನು ಮರಣದ ವಿಷಯವಾಗಿ ಮತ್ತು ತಾನೇ ಆತನ ವಾರಿಸ್ಧಾರನಾದ ಮನುಷ್ಯನು ಎಂಬದರ ವಿಷಯವಾಗಿ ರುಜುವಾತನ್ನು ತಂದರೆ, ಕೊಡೋಣಾದೀತು.

15. ಆಕ್ಟಿವ್ ರಿಜರ್ವಿನಲ್ಲಿದ್ದು ಅಶಕ್ತರೆಂದು ಡಿಸ್ಚಾರ್ಜ್ ಮಾಡಲ್ಪಟ್ಟ ವ ಪೆನ್ಷನಿಗೆ ಅರ್ಹರಲ್ಲದ ಮನುಷ್ಯರಿಗೆ ಈ ಕೆಳಗಣ ದರದ ಮೇಲೆ ಗ್ರಾಟ್ಯೂಟಿಯು ಕೊಡಲ್ಪಡುವದು:—

			ಹುದ್ದೆಯ ವ ಒಳ್ಳೇನಡತೆಯ ಬಗ್ಗಿನ ಎಷ್ಟು ತಿಂಗಳ ಪೂರಾ ಸಂಬಳವೆಂಬದು.
ಕಲರ್ ವ ರಿಜರ್ವಿನಲ್ಲಿ 10 ವರುಷಕ್ಕೆ ಮೀರದಿದ್ದು 5 ವರುಷ ನೌಕರಿನೋಡಿದ ಮನುಷ್ಯರು	..	..	3
ಕಲರ್ ವ ರಿಜರ್ವಿನಲ್ಲಿ 15 ವರುಷಕ್ಕೆ ಮೀರದಿದ್ದು 10 ವರುಷ ನೌಕರಿನೋಡಿದ ಮನುಷ್ಯರು	..	..	6
ಕಲರ್ ವ ರಿಜರ್ವಿನಲ್ಲಿ 20 ವರುಷಕ್ಕೆ ಮೀರದಿದ್ದು 15 ವರುಷ ನೌಕರಿನೋಡಿದ ಮನುಷ್ಯರು	..	..	9
ಕಲರ್ ವ ರಿಜರ್ವಿನಲ್ಲಿ 25 ವರುಷಕ್ಕೆ ಮೀರದಿದ್ದು 20 ವರುಷ ನೌಕರಿನೋಡಿದ ಮನುಷ್ಯರು	..	..	12

16. ಆಕ್ಟಿವ್ ರಿಜರ್ವಿನ ಪೂರಾ ಮನುಷ್ಯರು ಸೈನ್ಯದಲ್ಲಿ ವ ರಿಜರ್ವಿನಲ್ಲಿ 25 ವರುಷದ ನೌಕರಿಯನ್ನು ಮುಗಿಸಿದನಂತರ ಮೆಡಿಕಲ್ ಬೋರ್ಡಿನ ಮುಂದೆ ಹಾಜರಾಗದ ತಿಂಗಳಿಗೆ 3 ರೂಪಾಯಿ ಪೆನ್ಷನ್ ಪಡಕೊಳ್ಳಲಿಕ್ಕೆ ಅರ್ಹರಾಗಿರುತ್ತಾರೆ.

17. ದಂಡಿನವರು ಮುಖ್ಯಸೈನ್ಯಕ್ಕೆ ಪುನಹಾ ವರ್ಗವಾಗಿ ಹೋಗುವಾಗ್ಯೆ, ಅವರು ರಿಜರ್ವಿನಲ್ಲಿರುವಾಗ್ಯೆ ತೆಗದುಕೊಂಡ ಸಂಬಳವನ್ನು ಯಾವ ಸಂಗತಿಯಲ್ಲ್ಯಾದರೂ ವಾಪಸ್‌ಕೊಡುವ ಅಗತ್ಯವಿಲ್ಲ.

18. ತಮ್ಮ ಅಣೆವೇರೆಗೆನೇ ಮುಖ್ಯ ಸೈನ್ಯಕ್ಕೆ ಪುನಹಾ ಸೇರುವವರು ಬಿಡಾರಮಾಡಿಕೊಳ್ಳಲಿಕ್ಕೆ ಕೊಡೋಣಾಗುವ ಹಣವನ್ನು ಪಡಕೊಳ್ಳಲಿಕ್ಕೆ ಅರ್ಹರಾಗಲಿಕ್ಕಿಲ್ಲ.

19. 25 ವರುಷಗಳ ಕರ್ದಿಮಿನಂತರ ಕೊಡೋಣಾಗುವ ಪೆನ್ಷನ್ ಬಂದೇ ಮಾತ್ರ ರಿಜರ್ವಿನಲ್ಲಿ ಕೆಲಸ ಮಾಡುವದರಿಂದ ಹೊಂದುವ ಪೆನ್ಷನ್ ಆಗಿರುತ್ತದೆಂತ ಸ್ಪಷ್ಟವಾಗಿ ತಿಳಕೊಳ್ಳತಕ್ಕದ್ದು. ಆದರೆ, ಎಕ್ಟಿವ್ ರಿಜರ್ವಿನವರು ಯುದ್ಧಕ್ಕೆ ಕರೆಯಲ್ಪಟ್ಟಾಗ್ಯೆ, ಯುದ್ಧಸೈನ್ಯದಲ್ಲಿ ಕೆಲಸ ಮಾಡುವವರಿಗೆ ಸಿಕ್ಕುವ ಎಲ್ಲಾ ಆದಾಯಗಳನ್ನು ಹೊಂದಲಿಕ್ಕೆ ಅರ್ಹರಾಗುತ್ತಾರೆ; ಮತ್ತು ಅಂಥ ನೌಕರಿಯ ದೆಸೆಯಿಂದ ಅಶಕ್ತರಾದರೆ, ಈ ಮೂಲಕ ಸಾಧಾರಣತರದ ಪೆನ್ಷನ್ ಹೊಂದಲಿಕ್ಕೆ ಅರ್ಹರಾಗಬಹುದು.

20. ಪ್ರಥಮ ದಫೆಗೆ ರಿಜರ್ವಿನಲ್ಲಿ ಸೇರಿದವರನ್ನು, ಅವರು ಮನೆಗೆ ಹೋಗುವಾಗ್ಯೆ ರೈಲ್ ಮೇಲೆ ವ ದೋಣಿಮೇಲೆ ಹೋಗಲಿಕ್ಕೆ ಉಚಿತವಾಗಿ ಪಾಸ್ ಕೊಡೋಣಾಗುತ್ತದೆ; ಆದರೆ ಸಮುದ್ರ ಪ್ರಯಾಣವು ರೈಲ್ ಪ್ರಯಾಣಕ್ಕಿಂತ ಅಗ್ಗವಾದ ಸಂಗತಿಯಲ್ಲಿ ವಿನಹಾ, ದೃಷ್ಟಾಂತಕ್ಕೆ (ಬೊಂಬಾಯಿಯಿಂದ ಕರಾಚಿವರಗೆ) ಸಮುದ್ರಮಾರ್ಗವಾಗಿ ಹೋಗುವಾಗ್ಯೆ ಹಾಗೆ ಪಾಸ್ ಕೊಡೋಣಾಗುವದಿಲ್ಲ.

21. ತರ್ಬೀತಾಗಲಿಕ್ಕೆ ಯಾ ಕೆಲಸಕ್ಕೆ ಕರೆಯಲ್ಪಟ್ಟಾಗ್ಯೆ ಅವರು ಮನೆಯಿಂದ ಬರುವಾಗ್ಯೆ ವ ವಾಪಸ್ ಹೋಗುವಾಗ್ಯೆ, ರೈಲ್ ಮೇಲೆ ವ ದೋಣಿಮೇಲೆ ಹೋಗಲಿಕ್ಕೆ ಹಣ ಪಡಕೊಳ್ಳದೇನೇ ಪಾಸ್ ಕೊಡೋಣಾಗುವದು; ಮತ್ತು ರೈಲ್ ಮೇಲೆ ಯಾ ದೋಣಿಯಮೇಲೆ ಪ್ರಯಾಣಮಾಡಲಿಕ್ಕೆ ಕೂಡದಿರುವಷ್ಟು ದೂರಕ್ಕೆ 100 ಮೈಲಿಗೆ ಯಾ ಅದರ ಅಂಶಕ್ಕೆ 1 ರೂಪಾಯಿ ದರದಲ್ಲಿ ಮಾರ್ಗದ ಮೇಲಿನ ಭತ್ತೆ ಕೊಡೋಣಾಗುವದು. ಈ ಮಾರ್ಗದ ಮೇಲಿನ ಭತ್ತೆಯು ಪ್ರಥಮ ದಫೆಗೆ ರಿಜರ್ವಿನಲ್ಲಿ ಸೇರಿದವರಿಗೆ ಕೊಡೋಣಾಗುವದಿಲ್ಲ.

22. ತಮ್ಮ ಅರಿಕೆ ಮೇರೆಗೆ ಮುಖ್ಯಸೈನ್ಯಕ್ಕೆ ಪುನಹಾ ವರ್ಗಮಾಡಿಕೊಂಡವರನ್ನು ಪರಂತು ಪುನಹಾ ವರ್ಗಮಾಡಿ ಕೊಳ್ಳಲಿಕ್ಕೆ ಅರ್ಜಿಮಾಡಿದ ಸಮಯದಲ್ಲಿ ಅವರ ಪಟಾಲವು ಯುದ್ಧಕ್ಕೆ ಹೋಗಲಿಕ್ಕೆ ಹುಕುಂ ಕೊಡಲ್ಪಟ್ಟಿರುವ ಸಂಗತಿಯಲ್ಲಿ ವಿನಹಾ ಇತರ ಸಂಗತಿಯಲ್ಲಿ ಸೈನ್ಯಕ್ಕೆ ಸೇರುವದಕ್ಕೆ ಹಣ ಪಡಕೊಳ್ಳದೆ ಪಾಸ್ ಕೊಡೋಣಾಗಲಿಕ್ಕಿಲ್ಲ.

23. ಮುಖ್ಯ ಸೈನ್ಯದಿಂದ ರಿಜರ್ವಿಗೆ ಹೋಗುವವರಿಗೆ ಅವರ ಬಾಬತು ಕೆಳಗೆ ಹೇಳಿದ ಕಿಟ್ ಸಾಮಾನುಗಳ ಮೌಲ್ಯವಾಗಿ 25 ರೂಪಾಯಿ ಸಿಕ್ಕುವದು; ನಂತರ ಅವು ಸರಕಾರಿ ಸೊತ್ತಾಗಿರುವವು:—

1 ದೊಡ್ಡ ಅಂಗಿ.
1 ಪಕ್ಡಿ.
1 ಮೇಲೆ ಹಾಕಿಕೊಳ್ಳುವ ಖಾಕಿ ಅಂಗಿ.
1 ನಂಬರಿನ ಅಂಕೆಗಳು.
1 ಜೋಡು ಖಾಕಿ ಪೈಜಾಮುಎಂಬ ವಿಜಾರು.
1 ಜೋಡು ಕಮರ್ಬಂದ್.
1 ಕಟಿ ಚೀಲ.
1 ನೀರುಹಾಕುವ ಬಾಟ್ಲು.
1 ಜೋಡು ಬೂಟ್ಸು.
1 ಸಾಮಾನುಹಾಕುವ ಚೀಲ.

ಮೇಲ್ವಿಚಾರ ಮಾಡುವ ಬೋರ್ಡಿನವರು ಅವುಗಳು ದುರುಸ್ತು ಮಾಡತಕ್ಕವುಗಳು ಯಾ ನಿಷ್ಪ್ರಯೋಜನವಾದವುಗಳು ಎಂತ ಹೇಳಿದಾಗ್ಯೆ ಈ ಸಾಮಾನುಗಳು ದುರುಸ್ತು ಮಾಡೋಣಾಗುವವು ಯಾ ಹೊಸತು ಕೊಡೋಣಾಗುವವು ಅಲ್ಲದಿದ್ದರೆ ಮೂರು ವರುಷಗಳನಂತರ ಮಾತ್ರ ಸರಕಾರಿ ಖರ್ಚಿನಿಂದ ಹೊಸತು ಕೊಡೋಣಾಗುವವು.

24. ಡಿಸ್‌ಚಾರ್ಜ್ ಮಾಡೋಣಾಗಿ ಪುನಹಾ ರಿಜರ್ವಿನಲ್ಲಿ ನಾಕರಿಬಗ್ಯೆ ಹೆಸರು ಬರಿಸಿಕೊಂಡವರಿಗೆ ಅವರು ಯಾವ ಪಟಾಲದ ರಿಜರ್ವಿಗೆ ಸೇರುತ್ತಾರೋ ಆ ಪಟಾಲದವರು 23ನೇ ಕಲಮಿನಲ್ಲಿ ಹೇಳಿದ ಕಿಟ್ ಸಾಮಾನುಗಳನ್ನು ಉಚಿತವಾಗಿ ಕೊಡುವರು.

25. ಎಕ್ಟಿವ್ ರಿಜರ್ವಿನವನೊಬ್ಬನು ಮುಖ್ಯ ಸೈನ್ಯಕ್ಕೆ ವರ್ಗಮಾಡೋಣಾದ್ದಲ್ಲಿ ಸರಕಾರಕ್ಕೆ 25 ರೂಪಾಯಿ ಕೊಡತಕ್ಕದ್ದು, ಆಗ್ಯೆ ಅವನ ರಿಜರ್ವಿನ ಎಲ್ಲಾ ಕಿಟ್ ಸಾಮಾನುಗಳು ಅವನ ಸ್ವಂತ ಸೊತ್ತಾಗುವವು.

26. ನಾಕರಿಬಗ್ಯೆ ಫೌಜಿಗೆ ಸೇರಿಸೋಣಾದಲ್ಲಿ, ಯುದ್ಧ ಸೈನ್ಯದಲ್ಲಿ ಕೆಲಸಮಾಡುವ ದೇಶಿಯ ಸೋಲ್ಜರರಿಗೆ ಕೊಡೋಣಾಗುವ ಎಲ್ಲಾ ಸಾಮಾನು ವ ಉಂಣೆ ತೊಡಿಗೆಯು, ಎಕ್ಟಿವ್ ರಿಜರ್ವಿನವರಿಗೂ ಸಿಕ್ಕುವದು.

27. ಎಕ್ಟಿವ್ ರಿಜರ್ವಿನವರು ಪ್ರತಿ ವರುಷದಲ್ಲಿ 31 ದಿವಸಗಳ ಪರಿಯಂತ್ರ ತರ್ಬೀತಾಗಲಿಕ್ಕೆ ಕರೆಯಲ್ಪಡುವರು.

28. ಬಟ್ಟು ಕೂಡಿಸೋಣಾದ ಪಟಾಲದ ಪ್ರತಿ ಒಂದು ಗುಂಪಿಗೆ ವಿಂಗಡಿಸೋಣಾದ ರೆಜಿಮೆಂಟಿನ ಮಧ್ಯಸ್ಥಳದಲ್ಲಿ ತರ್ಬೀತಿನ ಕೆಲಸ ನಡಿಸೋಣಾಗುವದು.

29. ರಿಜರ್ವಿನವರು ತರ್ಬೀತಾಗಲಿಕ್ಕೆ ಕರೆಯಲ್ಪಡತಕ್ಕ ತಾರೀಖು ಯಾ ತಾರೀಖುಗಳು, ಅವರ ಪೇಸಾಯ ಸಂಬಂಧವಾದ ಆವಶ್ಯಕತೆಗಳಿಗೆ ವ ಬೇರೆ ಅನುಕೂಲತೆಗಳಿಗೆ ಸರಿಯಾಗುವಂತೆ, ಕಮಾಂಡಿಂಗ್ ಆಫಿಸರರಿಂದ ನಿಶ್ಚಯಿಸೋಣಾಗುವವು.

30. ಡಿಸ್‌ಚಾರ್ಜ್ ಮಾಡೋಣಾದವರು ರಿಜರ್ವಿಗೆ ಸೇರಲಿಕ್ಕೆ ಪುನಹಾ ಹೆಸರು ಬರಿಸಿಕೊಂಡಾಗ್ಯೆ ಅವರನ್ನು ಡಿಸ್‌ಚಾರ್ಜ್ ಮಾಡಿ ಒಂದು ವರುಷಕ್ಕಿಂತ ಹೆಚ್ಚಾದರೆ, ಅವರು ಯಾವ ಪಟಾಲದ ರಿಜರ್ವಿಗೆ ಸೇರಲಿಕ್ಕೆ ಹೆಸರು ಬರಿಸಿಕೊಂಡಿದ್ದಾರೋ ಆ ಪಟಾಲದ ಬಟ್ಟಿಗೆ ಮುಂದಾಗಿ ತರ್ಬೀಯತಾಗತಕ್ಕದ್ದು.

ತರ್ಬೀತಾಗ ಬೇಕಾದ ಕಾಲವು—

ರಿಜರ್ವಿಗೆ ಸೇರಲಿಕ್ಕೆ ಪುನಹಾ ಹೆಸರು ಬರಿಸಿಕೊಳ್ಳುವದಕ್ಕೆ ಮೊದಲು ಒಂದು ವರುಷಕ್ಕಿಂತ ಹೆಚ್ಚು ವ ಎರಡು ವರುಷಕ್ಕೆ ಕಡಿಮೆಯಾದರೆ, ಎರಡುತಿಂಗಳು.

ರಿಜರ್ವಿಗೆ ಸೇರಲಿಕ್ಕೆ ಪುನಹಾ ಹೆಸರು ಬರಿಸಿಕೊಳ್ಳುವದಕ್ಕೆ ಮೊದಲು ಎರಡು ವರುಷಕ್ಕಿಂತ ಹೆಚ್ಚು ವ ಮೂರು ವರುಷಕ್ಕೆ ಕಡಿಮೆಯಾದರೆ ಮೂರು ತಿಂಗಳು.

ಡಿಸ್‌ಚಾರ್ಜ್‌ಮಾಡಿ ಮೂರು ವರುಷಕ್ಕಿಂತ ಹೆಚ್ಚಾದರೆ, ನಾಲ್ಕು ತಿಂಗಳು ಆಗಿರುತ್ತದೆ.

31. ಎಕ್ಟಿವ್ ರಿಜರ್ವಿನವರು ಎಲ್ಲಾ ಸಂಗತಿಗಳಲ್ಲಿಯೂ ಸೋಲ್ಜರರಂತೆಯೇ ಇಂಡಿಯಾವಿನ ಆರ್ಟಿಕಲ್ಸ್ ಆಫ್ ವಾರ್ ಎಂಬ ಯುದ್ಧ ಸಂಬಂಧವಾದ ನಿಬಂಧನೆಗಳಿಗೊಳಪಟ್ಟಿರುತ್ತಾರೆ, ಮತ್ತು ಅವರು ಆ ನಿಬಂಧನೆಗಳಿಗೆ ವಿರುದ್ಧವಾಗಿ ಮಾಡಿದ ಯಾವದಾದರೂ ತಕ್ಸೀರಿನ ಬಗ್ಯೆ ಕೋರ್ಟ್ ಮಾರ್ಷಲಿನವರಿಂದ ವಿಚಾರಣೆ ಮಾಡಲ್ಪಟ್ಟು ಶಿಕ್ಷಿಸಲ್ಪಡಬಹುದು, ಅವರು—

(a) ಒಂದು ಸ್ಥಳದಲ್ಲಿ ಹಾಜರಾಗತಕ್ಕ ಬಗ್ಯೆ ಕ್ರಮಪ್ರಕಾರ ಹುಕುಮಾದನಂತರ, ಸಾಕಾದ ಸಬಬಿಲ್ಲದೆ ಹಾಜರಾಗಲಿಕ್ಕೆ ತಪ್ಪಿದ ಬಗ್ಯೆ;

(b) ಸಾಕಾದ ಸಬಬಿಲ್ಲದೆ, ರಿಜರ್ವಿಗೆ ಸಂಬಂಧಪಟ್ಟ ಯಾವದಾದರೂ ಹುಕುಮು ಯಾ ನಿಬಂಧನೆಗಳ ಪ್ರಕಾರ ನಡಕೊಳ್ಳಲಿಕ್ಕೆ ತಪ್ಪಿದ ಬಗ್ಯೆ;

(c) ರಿಜರ್ವಿನವರ ಸಂಬಳಕ್ಕೆ ಸಂಬಂಧಪಟ್ಟ ಹುಕುಮು ಯಾ ನಿಬಂಧನೆಗಳಿಗೆ ವಿರುದ್ಧವಾಗಿ ಮೋಸದಿಂದ ಸಂಬಳ ಯಾ ಬೇರೆ ಐವಜು ಪಡಕೊಂಡ ಬಗ್ಯೆ;

ಕ್ರಿಮಿನಲ್ ಅಧಿಕಾರವುಳ್ಳ ಸಿವಿಲ್ ಕೋರ್ಟಿನವರಿಂದ ವಿಚಾರಣೆ ಮಾಡೋಣಾಗಿ ಶಿಕ್ಷಿಸಲ್ಪಡಲಿಕ್ಕೆ ಗುರಿಯಾಗುತ್ತಾರೆ.

ಜಿ. ಎಫ್. ಫ್ರೈಸ್,
ಚೀಫ್ ಸಕ್ರಿಟೆರಿ.

(A true translation.)

S. MANGESH RAU,
Canarese Translator to Government.

Mysore Govt. Central Press, Bangalore.—1896.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 49.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 10, ಸ್ನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷ್ನ ವ ಯುಡ್ಯುಕೇಷ್ನ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ನ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 2ನೇ ಅಕ್ಟೋಬರ್ 1896.

ನಂ. 4602.—ಲೋ. ಫಂ. 92—96, ಮೈಸೂರ್ ಗವರ್ನ್‌ಮೆಂಟಿನವರು 1895ನೇ ಜೂನ 27ನೇ ಮರ್ಕುಂ 24999–25003.—ಲೋ. ಫಂ. 82—92ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಕರಿತಿಮ್ಮನಹಳ್ಳಿ ಮತ್ತು ಕೆಂಪಾಂಬುಧಿಕೆರೆ ಗ್ರಾಮಗಳ ಕೆಲವು ಭಾಗಗಳನ್ನು ಬೆಂಗಳೂರ್ ಷಹರಿನ ಮ್ಯುನಿಸಿಪಲ್ ಸರಹದ್ದಿನಲ್ಲಿ ಸದರೀ ಷಹರಿನ ಪಶ್ಚಿಮ ಬಡಾವಣೆಯ ಸಂಬಂಧದಿಂದ ಅಡಿಗಿಸಿಕೊಳ್ಳೋಣವು ಮಂಜೂರ್ಮಾಡಿರುವದರಿಂದ, 1886ನೇ ಏಪ್ರಿಲ್ 15ನೇ ಮರ್ಕುಮಿನ 35ನೇ ನಂಬರ್ ಇಸ್ತಿಹಾರ್ ನಾಮೆಯಿಂದ ತಿದ್ದುಪಡಿಯಾದ ಮೇರೆ 1883ನೇ ಸೆಪ್ಟಂಬರ್ 14ನೇ ಮರ್ಕುಮಿನ 235ನೇ ನಂಬರ್ ಇಸ್ತಿಹಾರಿನೊಡನೆ ಪ್ರಾಯಿಷ್ ಮಾಡಲ್ಪಟ್ಟ ಮೇಲ್ಕಂಡ ಷಹರಿನ ಮ್ಯುನಿಸಿಪಲ್ ಸರಹದ್ದುಗಳ ತಿದ್ದುಪಡಿಯಾದ ವಿವರಣೆಯ VI ವ VIIನೇ ಕ್ಲಾಜುಗಳಿಗೆ ಈ ಕೆಳಗೆ ಕಂಡ ಪ್ಯಾರಾಗಳು ಬದಲಾಯಿಸಲ್ಪಡತಕ್ಕದ್ದು, ಮತ್ತು 1885ನೇ ಸೆಪ್ಟಂಬರ್ 14ನೇ ಮರ್ಕುಮಿನ ಕ್ಯಾಂಪ್ ನಂ. 891ನೇ ಇಸ್ತಿಹಾರ್ ಅನುಸರಿಸಿ ಪ್ರಾಯಿಷ್ಮಾಡಲ್ಪಟ್ಟ XIನೇ ಕ್ಲಾಜಿಗೆ "ಮತ್ತು ಕರಿತಿಮ್ಮನಹಳ್ಳಿವ ಕೆಂಪಾಂಬುಧಿಕೆರೆ" ಎಂಬ ಮಾತುಗಳು ಸೇರಿಸಲ್ಪಡತಕ್ಕದ್ದು.

VI. ಈ ಸ್ಥಳದಿಂದ ಲೈನು ಭೋಗನಹಳ್ಳಿ ಗ್ರಾಮದ ಪಶ್ಚಿಮ ಎಲ್ಲೆ ಉದ್ದಕ್ಕೂ ಅದು ಮೈಸೂರ ರೋಡು (ಷಹರ್ ಎಲ್ಲೆ ಕಲ್ಲು VI) ಸಂಧಿಸುವವರಿವಿಗೆ ಹೋಗಿ, ಅಲ್ಲಿಂದ ರೋಡು ದಾಟಿ ಕರಿತಿಮ್ಮನಹಳ್ಳಿ ಗ್ರಾಮದ ರೆವಿನ್ಯೂ ಸರ್ವೆ ನಂ. 4, 2, 9, 10

ವ 6 ಯಿವುಗಳ ಹೊರ ಪಾರ್ಶ್ವ ಮತ್ತು ಅದು ಹೊಸಷಹರ್ ಎಲ್ಲೆಕಲ್ಲು VIIರ ಬಳಿ ಗವಿಪುರ ಗ್ರಾಮದ ಈ ಶಾನ್ಯ ಮೂಲೆಯನ್ನು ಸಂಧಿಸುವವರಿವಿಗೂ ಅವುಗಳನ್ನ ಶೇರಿಸಿಕೊಂಡು ಅಂಚಿನಲ್ಲಿ ಹಾದು ಹೋಗುತ್ತದೆ.

VII. ಹೊಸಷಹರ್ ಎಲ್ಲೆಕಲ್ಲು VIIರಿಂದ ಎಲ್ಲೆ ಲೈನು ಕೆಂಪಾಂಬುಧಿ ಕೆರೆಯ ರೆವಿನ್ಯೂ ಸರ್ವೆ ನಂಬರ್ 2 ಮತ್ತು ಗವಿಪುರ ಗ್ರಾಮದ ರೆವಿನ್ಯೂ ಸರ್ವೆ ನಂ. 3, 6, 8, 63, 46, 47, 62 ವ 48 ಯಿವುಗಳ ಪಶ್ಚಿಮ ಪಾರ್ಶ್ವ ಉದ್ದಕ್ಕೂ ಮತ್ತು ಗುಟ್ಟಹಳ್ಳಿ ಗ್ರಾಮದ ನೈಋತ್ಯ ಮೂಲೆಯನ್ನು ಸಂಧಿಸುವವರಿಗೂ ಅವುಗಳನ್ನು ಮತ್ತು ಗ್ರಾಮ ನಿವೇಶನವನ್ನ ಸೇರಿಸಿಕೊಂಡು ಹೊರಟು ಷಹರ್ ಎಲ್ಲೆ ಕಲ್ಲು VIIIನ್ನ ಸಂಧಿಸುವವರಿಗೂ ಈ ಗ್ರಾಮದ ದಕ್ಷಿಣ ಎಲ್ಲೆಯನ್ನ ಅನುಸರಿಸಿ ಹೋಗುತ್ತದೆ; 'ಈ ಕಲ್ಲಿನಿಂದ ಷಹರ್ ಎಲ್ಲೆಯು ಕಾರಂಜಿ ಬಿಸನಹಳ್ಳಿಯ ಪಶ್ಚಿಮ ಮತ್ತು ಉತ್ತರ ಎಲ್ಲೆಗಳ ಅಂಚಿನಲ್ಲಿ ಷಹರ್ ಎಲ್ಲೆಕಲ್ಲು IXರ ಬಳಿಯಿರುವ ಕೊಮಾರ ಪಾಳ್ಯದ ಕೆರೆಯ ಕೋಡಿವರಿವಿಗೆ ಹೋಗುತ್ತದೆ.

ತಾರೀಖು 26ನೇ ನವಂಬರ್ 1896.

ನಂ. 6132.—ಲೋ. ಫಂ. 83—96, ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಜಂಟಿಸಲ್ಪಟ್ಟಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮನೆ ಮತ್ತು ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ ಮೈಸೂರ್ ಷಹರ್ ನಜರ್‌ಬಾದ್ ಮೊಹಲ್ಲಾ ಇಟ್ಟಿಗೆಗೂಡಿನಲ್ಲಿ ಮೆಸ್ಟರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆಯನ್ನ ಬಡಾಯಿಸುವ ಬಗ್ಯಾಗಿ ಬೇಕಾಗಿರುತ್ತವೆ:—

ಜಂಜರ್ ನಂ.	ಬೀದಿಯ ಹೆಸರು.	ಡೋರ್ ನಂಬರು.	ಮಾಲೀಕರ ಹೆಸರು.	ಅವಶ್ಯಕವಾಗಿರುವ ಸ್ವತ್ತಿನ ವಿವರ.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಚಕ್ಕು ಬಂದಿ.				ಷರಾ.
							ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	
1	ಇಟ್ಟಿಗೆಗೂಡಿನಲ್ಲಿ ಮೆಸ್ಟರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆ.	911	ನಂಜುಂಡಯ್ಯ, ಕುಪ್ಪುಸಾಮಿ ಮೊದಲಿಯಾರ್, ರಾಮಸ್ವಾಮಿ ಮೊದಲಿಯಾರ್ ಮತ್ತು ಚಾಮುಂಡವ್ವ.	ಆರು ಅಂಕಣಗಳ ಹೆಂಚಿನ ಮನೆ, ಮೂರು ಅಂಕಣಗಳ ಹೆಂಚಿನ ಕೈಸಾಲೆ, 1·44 ಚದುರದ ತಾರಸಿ ಮಾಡಲ್ಪಟ್ಟ ಭಾಗ ಮತ್ತು 6 ಅಂಕಣಗಳ ತಖ್ತ್‌ಪೋಷ್ ಮಾಡಲ್ಪಟ್ಟ ಭಾಗ.	64	$\frac{18+16}{2}$	ರಸ್ತೆ.	ರಸ್ತೆ.	ದುಂದಣ್ಣನ ಮನೆ.	ಗಲ್ಲಿ.	ಈ ಪ್ರದೇಶದಲ್ಲಿ ಮನೆಗಳು ಒಂದಕ್ಕೊಂದು ಬಹಳ ವತ್ತಾಗಿ ಮತ್ತು ಗಾಳಿ ಸಂಚಾರಕ್ಕೆ ಅಡಚಣೆಯಾಗಿದೆ. ಆದ್ದರಿಂದ ಸದರೀ ಪ್ರದೇಶವು ಅಭಿವೃದ್ಧಿಗೆ ಅವಶ್ಯಕವಾಗಿದೆ.

ತಾರೀಖು 5ನೇ ಡಿಸೆಂಬರ್ 1896.

ನಂ. 6513.—ಮಿ. 1223, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಮೈಸೂರ್ ಸಂಸ್ಥಾನಾಮುಳಿ ದರೋಬಸ್ತು ಪಬ್ಲಿಕ್ ಆಫೀಸುಗಳೂ ಕ್ರಿಸ್ತಮಸ್ ರಜಾಬಗ್ಯಾಗಿ, 1896ನೇ ಡಿಸೆಂಬರ್ 24ನೇ ಬೃಹಸ್ಪತಿವಾರದ ಲಾಗಾಯತು 1897ನೇ ಜನವರಿ 2ನೇ ಶನಿವಾರದ ವರಿಗೆ, ಉಭಯದಿನಗಳೂ ಶೇರಿ, ಬರಖಾಷ್ತು ಮಾಡಲ್ಪಡತಕ್ಕದ್ದು.

2. ಜರೂರಿಯಾತ್ ಕೆಲಸ ನಡಿಯುವ ಬಗ್ಯೆ ಇಲಾಖಾ ಮೊಖ್ತೆಸರರುಗಳಿಂದ ಏರ್ಪಾಡು ಮಾಡಲ್ಪಡತಕ್ಕದ್ದು.

3. ಈ ಇಸ್ತಿಹಾರ್‌ನಾಮೆಯು ತಾಲ್ಲೂಕು ಕಚೇರಿಗಳಿಗೂ ಮತ್ತು ಜಮಾಬಂದಿ ಕೆಲಸದಮೇಲಿರುವ ಆಫೀಸರುಗಳಿಗೂ ಲಗಾವಾಗುವದಿಲ್ಲ.

ನಂ. 6509.—ಲೋ. ಫಂ 65.—95, ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಕುರುವಳ್ಳಿ-ಬರಿಕೆರೆ ಬೀದಿಯು ಶಿವಮೊಗ್ಗಾ ಡಿಸ್ಟ್ರಿಕ್ಟ್ ತೀರ್ಥಹಳ್ಳಿ ಷಹರಿನ ಮ್ಯುನಿಸಿಪಲ್ ಸರಹದ್ದುಗಳಿಂದ ವಿನಾಯಿಸಲ್ಪಟ್ಟಿರುತ್ತೆ.

ತಾರೀಖು 2ನೇ ಡಿಸೆಂಬರ್ 1896.

ನಂ. 6331.—ಲೋ. ಫಂ. 65—96, ಸನ್ 1894ನೇ ಇಸವಿಯ ನಂ. VIIನೇ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ ಆಲೂರ್ ಷಹರ್ ಬಡಾವಣೆ ಬಗ್ಯಾಗಿ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಜಮೀನು ತಪಶೀಲು.				ಚಕ್ಕುಬಂದಿ.			
					ನಂಬ್ರು.	ತರಹ.	ವಿಸ್ತೀರ್ಣ.	ತೀರ್ವೆ.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
							ಎ. ಗುಂ	ರೂ. ಆ.				
ಹಾಸನ.	ಆಲೂರ್ ಸಬ್ ತಾಲ್ಲೂಕು.	ಆಲೂರು.	ಆಲೂರು.	ಹುಸೇನ್‌ಸಾಬಿ (ಅನುಭವದಾರರು) ಸುಬ್ಬೇಗೌಡ ಮತ್ತು ಬಸವೇಗೌಡ)	ಸರ್ವೆನಂಬರ್ 20ರ ಭಾಗ	ಖುಷ್ಕಿ	1—20	1—4	ಸರ್ವೆ ನಂಬರ್ 20ರ ಭಾಗ	ಕೊಳಕ್ಕೆ ಹೋಗುವ ರಸ್ತೆ	ಬಸವಲಿಂಗೇಗೌಡನ ಮತ್ತು ಇತರರ ಮನೆಗಳು	ಹಯಾತ'ಸಾಬಿಯ ಮತ್ತು ಇತರರ ಜಮೀನುಗಳು
				ಬಸವಲಿಂಗೇ ಗೌಡ	ಡಿಟೋ	ಡಿಟೋ	1—29	1—8	ಆಸ್ಪತ್ರೆಯ ಕಂಪೌಂಡ್	ಸುಬ್ಬೇಗೌಡನ ಬಸವೇಗೌಡನ ಮತ್ತು ಇತರರ ಜಮೀನುಗಳು	ಬಸವ ಲಿಂಗೇಗೌಡನ, ದಾಸೇಗೌಡನ, ಹುಚ್ಚೆಗೌಡನ ಮತ್ತು ಇತರರ ಮನೆಗಳು ಮತ್ತು ಹಿತ್ತಲುಗಳು	ಡಿಟೋ

ತಾರೀಖು 8ನೇ ಡಿಸೆಂಬರ್ 1896.

ನಂ. 6578.—ಲೋ. ಫಂ. 139—92, ಸನ್ 1892ನೇ ಇಸವಿಯ VIIIನೇ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ಮೇರೆ 1871ನೇ ಇಸವಿಯ 1ನೇ ನಂಬರ್ ಕಾಲ್ನಡೆಗಳ ಅಕ್ರಮ ಪ್ರವೇಶವನ್ನ ನಿರೋಧಪಡಿಸುವ ಬಗ್ಯೆ ಉಂಟಾದ ಆಕ್ಟಿನ 12ನೇ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರವನ್ನನುಸರಿಸಿ ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುವದೇನಂದರೆ, ಬೆಂಗಳೂರು ಷಹರ್ ಮ್ಯುನಿಸಿಪಾಲಿಟಿಯ ಸರಹದ್ದುಗಳಲ್ಲಿ ರಾತ್ರೆ 8 ಘಂಟೆಯಿಂದ ಪ್ರಾತಃಕಾಲ 4 ಘಂಟೆ ವರಿಗೂ ಅಕ್ರಮವಾಗಿ ಪ್ರವೇಶ ಮಾಡುವ ಕಾಲ್ನಡೆಗಳನ್ನ ಹಿಡಿದು ದೊಡ್ಡಿಗೆ ದಾಖಲಾದ ಪ್ರತಿ ರಾಸಿಗೂ ಈ ಕೆಳಗೆ ಕಂಡ ದರಗಳಂತೆ ಜುರ್ಮಾನೆಗಳು ವಸೂಲ್ಮಾಡಲ್ಪಡುವವು, ಹ್ಯಾಗಂದರೆ:—

ಆನೆಗೆ	ನಾಲ್ಕು ರೂಪಾಯಿಗಳು.
ಒಂಟೆ ಯಾ ಎಮ್ಮೆಗೆ	ಒಂದು ರೂಪಾಯಿ.
ಕುದುರೆ, ಹೆಣ್ಣು ಕುದುರೆ, ಖಸಿಯಾದ ಕುದರೆ, ತಟ್ಟು, ಕುದರೆ ಗಂಡುಮರಿ, ಕುದರೆ ಹೆಣ್ಣುಮರಿ, ಗೂಳಿ, ಎತ್ತು, ಆಕಳು ಯಾ ಕಡಸಿಗೆ ..	ಎಂಟಾಣೆಗಳು.
ಕರ, ಕತ್ತೆ ಯಾ ಹಂದಿಗೆ	ನಾಲ್ಕಾಣೆಗಳು.
ಟಗರು, ಹೆಣ್ಣು ಟಗರು, ಕುರಿ, ಕುರಿಮರಿ, ಮೇಕೆ ಯಾ ಮೇಕೆ ಮರಿಗೆ ..	ಎರಡು ಆಣೆಗಳು.

ತಾರೀಖು 2ನೇ ಆಕ್ಟೋಬರ್ 1896.

ನಂ. 3576.—ರೆ. 1228, ಮೈಸೂರ್ ಲ್ಯಾಂಡ್ ರೆವಿನ್ಯೂ ರೂಲ್ಸಿನ ಅಪೆಂಡಿಕ್ಸ್ ಎಚ್ಚಿನಲ್ಲಿ ಕಂಡ ರೂಲಿನ 1 ಮತ್ತು 4ನೇ ಪ್ಯಾರಾಗಳಿಗೆ ಈ ಕೆಳಗೆ ಕಂಡ ಜಾಸ್ತಿ ಅಂಶಗಳನ್ನು ಸೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

(1) ಪ್ಯಾರ 1ರ ಆಖೈರಿನಲ್ಲಿ ಸೇರಿಸತಕ್ಕದ್ದು "ಪರಂತು, ಗ್ರ್ಯಾಂಟು 50 ಎಕರೆಗಳಿಗೆ ಮೀರಲ್ಪಟ್ಟಾಗ ಅದು ಗವರ್ನಮೆಂಟಿನವರ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡತಕ್ಕದ್ದು."

(2) ಪ್ಯಾರಾ 4ರಲ್ಲಿ, "ಮತ್ತು" ವ "ಷಾತೂತು" ಎಂಬ ಮಾತುಗಳ ಮಧ್ಯದಲ್ಲಿ "ಕಾಫಿ" ಎಂಬ ಮಾತನ್ನು ಸೇರಿಸತಕ್ಕದ್ದು.

2. ಈ ಮೇರೆ ತಿದ್ದುಪಡಿಯಾದ ಎರಡು ಪ್ಯಾರಾಗಳು ಈ ಕೆಳಗೆ ಕಂಡಂತೆ ಓದತಕ್ಕದ್ದು;

"ಪ್ಯಾರಾ 1 ಜಂಗಲಿ ಮತ್ತು ಸಾದೆ ಲಾಯಖ್ ಮರಗಳನ್ನು ಹಾಕತಕ್ಕ ಬಗ್ಯೆ ಕೊಡುವದಕ್ಕೆ ಆಕ್ಷೇಪವಿಲ್ಲದಿರುವ ಸ್ಥಳದಲ್ಲಿ ಈ ಕೆಳಗೆ ನಮೂದಾಗುವ ತಾಲ್ಲೂಕುಗಳಲ್ಲಿ, ಕೊಡುವ ತಾರೀಖು ಲಾಗಾಯತು 20 ವರುಷಗಳ ವರಿವಿಗೂ ಕಂದಾಯ ಮಾಫಿಯಿಂದ ಆಕಾರ ಕಾಣದ ಸರ್ಕಾರೀ ಬಂಜರು ಜಮೀನು ಕೊಡಲ್ಪಡುವದು, ಆ ತರುವಾಯ ಪೂರಾ ಕಂದಾಯ ವಸೂಲ್ಮಾಡಲ್ಪಡುವದು. ಪರಂತು, ಗ್ರ್ಯಾಂಟು 50 ಎಕರೆಗಳಿಗೆ ಮೀರಲ್ಪಟ್ಟಾಗ ಅದು ಗವರ್ನಮೆಂಟಿನವರ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡತಕ್ಕದ್ದು."

"ಪ್ಯಾರಾ 4. ಜಮೀನು ಹೊಂದಿದವನು ಗಿಡಗಳ ಕೆಳಗೆ ಧಾನ್ಯ ಮುಂತಾದ ಇತರ ಪೈರುಗಳನ್ನು ಬೆಳದುಕೊಳ್ಳಬಹುದು. ಅಂತಾ ಸಾಗುವಳಿ ಬಗ್ಗೆ ಬೇಕಾಗುವ ನೀರನ್ನ ಸರ್ಕಾರದ ಜಲಾಧಾರವಲ್ಲದೆ ಖಾಸಗಿ ಜಲಾಧಾರದಿಂದ ತೆಗದುಕೊಳ್ಳುವ ಪಕ್ಷಕ್ಕೂ, ಮತ್ತು ಕಾಫಿ, ಷಾತೂತು, ಕಬ್ಬು, ಜಾಲಾರಿ ಯಾ ಅರಗಿನ ಗಿಡಗಳನ್ನು ಹಾಕದೆ ಇರುವ ಪಕ್ಷಕ್ಕೂ ಯಾವ ವಿಧವಾದ ಕಂದಾಯವು ದಾಖಲ್ಮಾಡಲ್ಪಡಲಾರದು. ಪರಂತು ಅವನು ಸಾಗುವಳಿ ಬಗ್ಗಾಗಲಿ ಯಾ ತೋಪು ಹಾಕತಕ್ಕ ಬಗ್ಗಾಗಲಿ ಸರ್ಕಾರ ಸಂಬಂಧವಾದ ಕೆರೆಗಳು ಯಾ ನಾಲೆಗಳು ಮುಂತಾದವುಗಳಿಂದ ನೀರನ್ನು ಉಪಯೋಗಿಸಿಕೊಳ್ಳಬೇಕೆಂತ ಅಪೇಕ್ಷಿಸಿದಲ್ಲಿ ಸರ್ಕಾರದ ನೀರಿನಿಂದ ತರೀ ಸಾಗುವಳಿ ಆಗುವ ಖುಷ್ಕಿ ಜಮೀನುಗಳ ಮೇಲೆ ವಾಡಿಕೆಯಾಗಿ ದಾಖಲಾಗುವ ನೀರು ಸರ್ದಿಯನ್ನು ಕೊಡತಕ್ಕದ್ದು.

ತಾರೀಖು 1ನೇ ನವಂಬರ್ 1896.

ನಂ. 4181.—ಫಾ. ಫೈ. 39—95, ಸನ್ 78ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳ ಪ್ರಕಾರ ಮೈಸೂರ ಗವರ್ನಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ, 1895ನೇ ಸೆಪ್ಟಂಬರ್ 4ನೇ ಮರ್ಕಂ 2574—ಫಾ. 141ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆ ಅನುಸರಿಸಿ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಈ ಕೆಳಗೆ ಕಂಡ ಚಕ್ಕುಬಂದಿ ಮಾಡಿ ಮತ್ತು ವ್ಯವಸ್ಥೆ ಮಾಡಲ್ಪಟ್ಟ ಪ್ಲಾಂಟೇಷನ್ ಮೇಲ್ಕಂಡ ಫಾರೆಸ್ಟ್ ರೂಲ್ಸಿನ 1ನೇ ರೂಲ್ ಮೇರೆ "ಸ್ಟೇಟ್ ಫಾರೆಸ್ಟ್" ಆಗಿ ವಿಂಗಡಿಸಲ್ಪಡತಕ್ಕದ್ದು:—

ನಂಬರು.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ.	ಚಕ್ಕುಬಂದಿ.
7	ಮತ್ತಾವಾರ ಸಂದಲ್ ರಿಜರ್ವ್, ಚಿಕ್ಕಮಗಳೂರ್ ತಾಲ್ಲೂಕು, ಸರ್ವೆ ನಂಬರ್ 93 (ಮತ್ತಾವಾರ) ಮತ್ತು 3 (ದಂಬದಹಳ್ಳಿ)	ಷುಮಾರು 146 ಎಕರೆಗಳು.	ಉತ್ತರಕ್ಕೆ—3 ಅಡಿ ಅಗಲ 3 ಅಡಿ ಆಳ ಉಳ್ಳ ಕಾಲುವೆ ಮತ್ತು 9 ಅಡಿ ಅಗಲವುಳ್ಳ ಪಾಕ್ ಮಾಡಲ್ಪಟ್ಟ ಲೈನು ಮತ್ತಾವಾರ ಗ್ರಾಮದ ಸರ್ವೆ ನಂ. 93ರಲ್ಲಿ ಒಂದು ಸ್ಥಳದಿಂದ ಹೊರಟು ಅದೇ ನಂಬರಿನ ಉದ್ದಕ್ಕೂ "ಬೊಮ್ಮನಕೆರೆ ಮತ್ತು ಚೌಡಮ್ಮನ ವನ"ಕ್ಕೆ ಸೇರಿದ ಹಾಗೆ ಉತ್ತರಕ್ಕೆ ಹೋಗುತ್ತವೆ. ಪೂರ್ವಕ್ಕೆ—ಉತ್ತರ ದಿಕ್ಕಿನಲ್ಲಿ ಕಾಲುವೆ ಮತ್ತು ಲೈನು ಕೊನೆ ಮುಟ್ಟುವ ಸ್ಥಳಗಳಿಂದ ಕಾಲುವೆ ಮತ್ತು ಪಾಕ್ಮಾಡಲ್ಪಟ್ಟ ಲೈನು ದಕ್ಷಿಣಕ್ಕೆ ಹೊರಟು ಮತ್ತಾವಾರ ಗ್ರಾಮದ ಸರ್ವೆ ನಂ. 93 ಮತ್ತು ದಂಬದಹಳ್ಳಿ ಗ್ರಾಮದ ನಂ. 3 ಇವುಗಳ ಉದ್ದಕ್ಕೂ ಹಾದು "ಪೈರಮ್ಮನ ಗೋಳಲಕ್ಕಿಕಟ್ಟೆ" ಎಂಬದಾಗಿ ಕರೆಯಲ್ಪಟ್ಟ ಒಂದು ಸ್ಥಳದಲ್ಲಿ ಅದೇ ನಂಬರಿನಲ್ಲಿ ಕೊನ ಮುಟ್ಟುತ್ತವೆ. ದಕ್ಷಿಣಕ್ಕೆ—"ಪೈರಮ್ಮನ ಗೋಳಲಕ್ಕಿಕಟ್ಟೆ" ಇಂದ ಕಾಲುವೆ ಮತ್ತು ಪಾಕ್ಮಾಡಲ್ಪಟ್ಟ ಲೈನು ಪಶ್ಚಿಮಕ್ಕೆ ತಿರುಗಿ ದಂಬದಹಳ್ಳಿಯ ಸರ್ವೆ ನಂ. 3ರ ಉದ್ದಕ್ಕೂ ಹಾದು ದಂಬದಹಳ್ಳಿಯಿಂದ ಆಲದ ಗದ್ದೆಗೆ ಹೋಗುವ ಕಾಲುದಾರಿಯನ್ನ ದಾಟಿ ಅದೇ ಗ್ರಾಮದ ಸರ್ವೆ ನಂ. 3ರಲ್ಲಿ ಕೊನೆಮುಟ್ಟುತ್ತವೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಕಾಲುವೆ ಮತ್ತು ಲೈನು ಈಶಾನ್ಯಕ್ಕೆ ತಿರುಗಿ ದಂಬದಹಳ್ಳಿಯ ಸರ್ವೆ ನಂ. 3 ಮತ್ತು ಮತ್ತಾವಾರದ ನಂ. 93 ಇವುಗಳ ಉದ್ದಕ್ಕೂ ಅವು ಹೊರಟ ಸ್ಥಳವನ್ನ ಸಂಧಿಸುವವರೆಗೂ ಹೋಗುತ್ತವೆ.

ತಾರೀಖು 26ನೇ ನವಂಬರ್ 1896.

ನಂ. 4789.—ರೆ. 1661, ಮೈಸೂರ್ ಲ್ಯಾಂಡ್ ರೆವಿನ್ಯೂ ರೂಲ್ಸಿನ XXVIIನೇ ರೂಲ್ 1ನೇ ಪ್ಯಾರಾವಿಗೆ ಈ ಕೆಳಗೆ ಕಂಡ ನಿಯಮವನ್ನ ಸೇರಿಸಲ್ಪಡತಕ್ಕದ್ದೆಂದು ಮೈಸೂರ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

"ಪರಂತು ಒಂದು ಸರ್ವೆ ನಂಬರ್ ಖುಷ್ಕಿ ವ ತರೀ ಜಮೀನ್ಗಳು ಸಹಿತವಾಗಲಿ ಯಾ ಖುಷ್ಕಿ ತರೀ ವ ಬಾಗಾಯತು ಜಮೀನ್ "ಗಳಾಗಲಿ ಅಡಗಿಸಿಕೊಂಡಿದ್ದ ಪಕ್ಷದಲ್ಲಿ, ಈ ರೂಲುಗಳನುಸರಿಸಿ ಮಾಡಲ್ಪಟ್ಟ ಯಾವ ವಿಭಾಗವು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ "ರವರಿಂದ ಮಂಜೂರ್ಮಾಡಲ್ಪಟ್ಟಿದ್ದ ಹೊರ್ತು ನೆರವೇರಿಸಲ್ಪಡಲಾರದು. ಸದರೀಯವರಿಗೆ ಇಂಥಾ ಪ್ರತಿ ಸಂಗತಿಯೂ ಕೈಫಿಯತ್ತು ದಾ "ಖಲೆಯೊಡನೆ ರಿಪೋರ್ಟು ಮಾಡಲ್ಪಡತಕ್ಕದ್ದು."

ನಂ. 4801—ರೆ. 1664, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಬೆಂಗಳೂರ್ ತಾಲ್ಲೂಕಿಗೆ ಸೇರಿದವಾಗಿದ್ದ "ಹಲಸೂರು ಹೋಬಳಿ" ಯನ್ನ ಇನ್ನು ಮೇಲೆ 1896ನೇ ಡಿಸೆಂಬರ್ ಗುರ್ರೆ ಲಾಗಾಯತು "ಕಸಬಾ ಬೆಂಗಳೂರು ಹೋಬಳಿ" ಎಂಬದಾಗಿ ಕರೆಯಲ್ಪಡತಕ್ಕದ್ದು.

ನಂ. 4802.—ರೆ. ಫೈ. 37—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 173ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ನೆಲಮಂಗಲ ತಾಲ್ಲೂಕು ಅಮಲ್ದಾರ್ ಸಿ. ರಾಜಗೋಪಾಲಾಚಾರ್ಲು ಯವರಿಗೆ 1896ನೇ ನವಂಬರ್ 21ನೇ ಮರ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಸಿರಸ್ತೇದಾರು ಸದರೀ ರಾಜಗೋಪಾಲಾಚಾರ್ಲು ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 26ನೇ ನವಂಬರ್ 1896.

ನಂ. 4905.—ಫಾ. ಫೈ. 27—95, ಸೆ 1896ನೇ ಇಸವಿ ಜೂನ್ 22ನೇ ಮುಕ್ಕಾಂ 14031.—ಮಿ. 2101ನೇ ನಂಬರ್ ಇಸ್ತಿಹಾರ್‌ನಾಮೆಯನ್ನು ತಿದ್ದುಪಡಿಮಾಡಿ, 1895ನೇ ಇಸವಿ ಡಿಸೆಂಬರ್ 13ನೇ ಮುಕ್ಕಾಂ 5491—ಫಾ. ಫೈ. 60—95ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರ್ ಮಿಸ್ಟರ್ ಜಿ. ಈ. ರಿಕ್ಕೆಟ್ಸಿಯವರಿಗೆ ಕೊಟ್ಟಿದ್ದ ರಜಾದಿಂದ ವಾಪಸು ಬಂದ 1896ನೇ ಅಕ್ಟೋಬರ್ 26ನೇ ತಾರೀಖು ಲಾಗಾಯತು ಫಾರೆಸ್ಟು ಆಫಿಸರುಗಳ ಈ ಕೆಳಗೆ ಕಂಡ ಬಡ್ತಿಗಳನ್ನು ವ ಯಥಾಸ್ಥಾನಕ್ಕೆ ಹೋಗುವದನ್ನು ಗವರ್ನಮೆಂಟಿನವರು ಅಪ್ಪಣೆಕೊಡುತ್ತಾರೆ:—

1. ಫಾರೆಸ್ಟುಗಳ ಎರಡನೇ ಕ್ಲಾಸ್ ಆಕ್ಟಿಂಗ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿಸ್ಟರ್ ಬಿ. ಹೀರಾಸಿಂಗ್ ಯವರು, ಸದರೀ ಕ್ಲಾಸ್‌ನಲ್ಲಿ ಖಾಯಂ ಮಾಡಲ್ಪಟ್ಟಿರುತ್ತಾರೆ.

2. ಮಿಸ್ಟರ್ ಸಿ. ಅಪ್ಪಯ್ಯನವರು, ಮಿಸ್ಟರ್ ರಸ್ಸೆಲ್‌ಯವರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಫಾರೆಸ್ಟುಗಳ 2ನೇ ಕ್ಲಾಸ್ ಅಸಿಸ್ಟೆಂಟ್ ಕನ್ಸರ್ವೇಟರಾಗಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

3. ಮಿಸ್ಟರ್ ಎಂ. ಜಿ. ರಾಮರಾಯರು, 2ನೇ ಕ್ಲಾಸಿನಲ್ಲಿ ಆಕ್ಟ್ ಮಾಡುತಲಿರುವ ಮಿಸ್ಟರ್ ಅಪ್ಪಯ್ಯನವರಿಗೆ ಬದಲಾಗಿ, 3ನೇ ಕ್ಲಾಸ್ ಅಸಿಸ್ಟೆಂಟ್ ಕನ್ಸರ್ವೇಟರಾಗಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

4. ಮೂರನೇ ಕ್ಲಾಸ್ ಆಕ್ಟಿಂಗ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿಸ್ಟರ್ ಕೆ. ಶಾಮಯ್ಯಂಗಾರ್ರು, ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಗ್ರೇಡಿಗೆ ವಾಪಸ್ ಬರತಕ್ಕದ್ದು.

ತಾರೀಖು 27ನೇ ನವಂಬರ್ 1896.

ನಂ. 4848.—ರೆ. ಫೈ. 52.—96, ಹಾಸನ ಡಿಸ್ಟ್ರಿಕ್ಟು ಆಲೂರ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ಟಿ. ವೆಂಕಟರಮಣಯ್ಯನವರು, 1896ನೇ ಅಕ್ಟೋಬರ್ 4ನೇ ಮುಕ್ಕಾಂ 3681.—ರೆ. ಫೈ. 52.—96ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಟ್ಟಿದ್ದ ರಜಾವನ್ನ ಮಾಹೆ ಮಜಕೂರ್ 7ನೇ ತಾರೀಖಿನ ಮಧ್ಯಾನ್ಹಾತ್ಪರದ ಲಾಗಾಯತು ಉಪಯೋಗಿಸಿಕೊಂಡು ಮಾಹೆ ಮಜಕೂರ್ 16ನೇ ಮುಕ್ಕಾಮಿನ ಪೂರ್ವಾನ್ಹದಲ್ಲಿ ಕೆಲಸಕ್ಕೆ ವಾಪಸ್ ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 28ನೇ ನವಂಬರ್ 1896.

ನಂ. 4887.—ರೆ. ಫೈ. 110.—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗದ ಡಿಸ್ಟ್ರಿಕ್ಟಿ ಯಕ್ಸಾಟ್ರ ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಮೀರ್ ನಿಜಾಮುದ್ದೀನ್ ಆಲಿಖಾನರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 30ನೇ ನವಂಬರ್ 1896.

ನಂ. 4914.—ರೆ. ಫೈ. 83.—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಅಮಲ್‌ದಾರ್ ಶಾಮಯ್ಯಂಗಾರ್ರಿಗೆ, 1896ನೇ ನವಂಬರ್ 14ನೇ ಮುಕ್ಕಾಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 4816.—ಫೈ. 373, ಗವರ್ನಮೆಂಟ್ ಆಸಿಸ್ಟೆಂಟ್ ಸೆಕ್ರೆಟೆರಿಯವರಾದ ಮಿಸ್ಟರ್ ಸಿ. ಶ್ರೀಕಂಠೇಶ್ವರ ಅಯ್ಯರ್, ಬಿ. ಏ., ಬಿ. ಎಲ್., ಯವರು ಕಂಟ್ರೋಲರವರ ಆಫಿಸಿನಲ್ಲಿ ಅಸಿಸ್ಟೆಂಟ್ ಕಂಟ್ರೋಲರೆಂಬ ಹುದ್ದೆಯಿಂದ ಕೆಲಸಕ್ಕಾಗಿ ಹಂಗಾಮಿ ತರೀಕ್ ನಿಯಮಿಸಲ್ಪಟ್ಟಿರುತ್ತಾರೆ. (ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ತಾರೀಖು 1ನೇ ಡಿಸೆಂಬರ್ 1896.

ನಂ. 4945.—ಫಾ. ಫೈ. 91.—95, ಶಿಕಾರಿಪುರದ ಫಾರೆಸ್ಟ್ ಸಬ್ ಡಿವಿಜನಿನ ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರ ಮಿಸ್ಟರ್ ಬಿ. ಶ್ರೀನಿವಾಸರಾಯರಿಗೆ, 1896ನೇ ನವಂಬರ 1ನೇ ಮುಕ್ಕಾಂ 4107.—ಫಾ. ಫೈ. 91.—95ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಮೆಡಿಕಲ್ ಸರ್ಟಿಫಿಕೇಟ್ ಮೇಲಿನ ರಜಾ ಇನ್ನೂ ಮೂರು ತಿಂಗಳುಗಳ ವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ. ಸದರೀ ರಜಾ ಪೂರೈಸಿದ ತರುವಾಯ ಅವರು ಕೆಲಸದ ಬಗ್ಗ್ಯಾಗಿ ಫಾರೆಸ್ಟುಗಳ ಕನ್ಸರ್ವೇಟರವರ ಹೆಡ್‌ಕ್ವಾರ್ಟರ್ ಆಫಿಸಿಗೆ ರಿಪೋರ್ಟ್ ಮಾಡತಕ್ಕದ್ದು.

2. ಸದರೀ ಮಿಸ್ಟರ್ ಬಿ. ಶ್ರೀನಿವಾಸರಾಯರು, ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಫಾರೆಸ್ಟುಗಳ ಯಕ್ಸಾಟ್ರ ಅಸಿಸ್ಟೆಂಟ್ ಕನ್ಸರ್ವೇಟರ್ ಮಿಸ್ಟರ್ ಜೆ. ಜೆ. ಮಾರ್ಟೀರೊ ಯವರು, ಅಸಿಸ್ಟೆಂಟ್ ಕನ್ಸರ್ವೇಟರಾಗಿಯೂ ಮತ್ತು 2ನೇ ಗ್ರೇಡ್ ರೇಂಜರ್ ಮಿಸ್ಟರ್ ಎಂ. ಶ್ರೀನಿವಾಸರಾಯರು, ಫಾರೆಸ್ಟುಗಳ ಯಕ್ಸಾಟ್ರ ಅಸಿಸ್ಟೆಂಟ್ ಕನ್ಸರ್ವೇಟರಾಗಿಯೂ ಆಕ್ಟಿಂಗ್ ತರೀಕ್ ಇರತಕ್ಕದ್ದು.

GGH

ತಾರೀಖು 5ನೇ ಡಿಸೆಂಬರ 1896.

ನಂ. 5093.—ಫೈ.—409, ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಎಂ. ಚಂಗಯ್ಯಶೆಟ್ಟಿಯವರು, ಮೈಸೂರ್ ವ್ಯವಸಾಯ ಸಂಬಂಧದ ಬ್ಯಾಂಕುಗಳ ಇನ್‌ಸ್ಪೆಕ್ಟರಾಗಿ ನೌಕರರ್ನ್ನಾಡಲ್ಪಟ್ಟಿರುತ್ತಾರೆ. (ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ತಾರೀಖು 2ನೇ ಡಿಸೆಂಬರ 1896.

ನಂ. 5008.—ರೆ. ಫೈ. 81—96, ಸ್ಟೇಟ್ ಹುಜೂರ್ ಟ್ರೆಜರಿಯ ಇನ್‌ಚಾರ್ಜ್ ಆಫಿಸರರಾದ ಮೆಸ್ಟರ್ ಎ. ವೀರಾಸಾಮಿ ಮೊದಲಿಯಾರ್ರ್ರಿಗೆ, 1896ನೇ ನವಂಬರ 18ನೇ ಮರ್ಸ್ಕುಂ 4444—ಫೈ. 346ನೇ ನಂಬರ ಗವರ್ನಮೆಂಟ್ ಇಸ್ತಿಹಾರನಾಮೆಯಲ್ಲಿ ಕೊಟ್ಟಿದ್ದ ಮೂರು ದಿನಗಳ ಕ್ಯಾಜುಯಲ್ ರಜಾ ಇನ್ನೂ ಎರಡು ದಿನಗಳು ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 5ನೇ ಡಿಸೆಂಬರ 1896.

ನಂ. 5110.-ರೆ. 1736, ವರ್ಗವಾಗಿ ಶಿವಮೊಗ್ಗೆಗೆ ಹುಕುಂ ಪ್ರಕಾರ ಹೋಗಬೇಕಾದ ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ಬಿ. ಕೆ. ವೆಂಕಟವರದಯ್ಯಂಗಾರ್ ಯವರಿಗೆ, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಮಾಹೆ ಮಜಕೂರು 4ನೇ ಮರ್ಸ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ, ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 5113.—ರೆ. ಫೈ. 81—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಸ್ಟೇಟ್ ಹುಜೂರ್ ಟ್ರೆಜರಿಯ ಇನ್‌ಚಾರ್ಜ್ ಆಫಿಸರ ಮೆಸ್ಟರ್ ಎ. ವೀರಾಸಾಮಿ ಮೊದಲಿಯಾರ್ರಿಗೆ, 1896ನೇ ಡಿಸೆಂಬರ 7ನೇ ಮರ್ಸ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹದಿನಾರು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಟ್ರೆಜರರ್ ಮೆಸ್ಟರ್ ಟಿ. ರಾಯಲು ಚೆಟ್ಟಿಯವರು ತಮ್ಮ ಕೆಲಸಗಳೊಂದಿಗೆ ಸದರೀ ಮೆಸ್ಟರ್ ವೀರಾಸಾಮಿ ಮೊದಲಿಯಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಖಜಾನಾ ಬಕ್ಷಿಯರಾಗಿ ಆಕ್ಟ್ ಮಾಡತಕ್ಕದ್ದು.

ನಂ. 5117.—ಫಾ. ಫೈ. 90—95, ಮೈಸೂರ್ ಡಿಸ್ಟ್ರಿಕ್ಟಿನ ಫಾರೆಸ್ಟ್‌ಗಳ ಡೆಪ್ಯುಟಿ ಕನ್‌ಸರ್ವೇಟರ್ ಮೆಸ್ಟರ್ ಟಿ. ಅಬ್ದುಲ್ ಕರಿಂಯವರು, ಅವರಿಗೆ 1896ನೇ ಸೆಪ್ಟಂಬರ 1ನೇ ಮರ್ಸ್ಕುಂ 2338—ಫಾ. ಫೈ. 90—95ನೇ ನಂಬರ ಇಸ್ತಿಹಾರನಾಮೆಯಲ್ಲಿ ಕೊಟ್ಟಿದ್ದ ಎರಡು ತಿಂಗಳೂ ಏಳು ದಿನಗಳ ಪ್ರಿವಿಲೇಜ್ ರಜಾವನ್ನು 1896ನೇ ಸೆಪ್ಟಂಬರ 8ನೇ ಮರ್ಸ್ಕುಮಿನ ಮಧ್ಯಾನ್ಹಾಪ್ಪರದ ಲಾಗಾಯತು ಉಪಯೋಗಿಸಿಕೊಂಡು 1896ನೇ ನವಂಬರ 12ನೇ ತಾರೀಖಿನ ಮಧ್ಯಾನ್ಹಾತ್ಪರ ಕೆಲಸದ ಮೇಲೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ ಮೂರು ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 5120.—ಫಾ. ಫೈ. 92-95, ಫಾರೆಸ್ಟ್‌ಗಳ ಅಸಿಸ್ಟೆಂಟ್ ಕನ್‌ಸರ್ವೇಟರ್ ಮೆಸ್ಟರ್ ವೈ. ಸೀತಾರಾಮಯ್ಯನವರು, ಅವರಿಗೆ 1896ನೇ ಮೇ 29ನೇ ಮರ್ಸ್ಕುಂ 10367—ಫಾ. ಫೈ. 92—95ನೇ ನಂಬರ ಇಸ್ತಿಹಾರನಾಮೆಯಲ್ಲಿ ಕೊಟ್ಟಿದ್ದ ಎರಡು ತಿಂಗಳೂ ಹದಿನಾರು ದಿನಗಳ ಪ್ರಿವಿಲೇಜ್ ರಜಾವನ್ನು 1896ನೇ ಜೂನ್ 7ನೇ ಮರ್ಸ್ಕುಂ ಲಾಗಾಯತು ಉಪಯೋಗಿಸಿಕೊಂಡು 1896ನೇ ಆಗಸ್ಟ 21ನೇ ತಾರೀಖಿನ ಪೂರ್ವಾನ್ಹದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ ಎರಡು ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

665

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫಾಯಿಷ್ ಆದ್ದು. [ನಂ. 49.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 10, ಸನ್ 1896.

IIನೇ ಭಾಗ.

ಇಂಡ್ಯಾ ಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಹೊರಡ್ಯೋಣಾದ

ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಷಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ ಡಿಟ್ಟೋ	,, 170
1	ಮದ್ರಾಸ್ ಓಕ್ಸರವರ ಡಿಟ್ಟೋ	,, 250
1	ಡಿಟ್ಟೋ ಡಿಟ್ಟೋ ಡಿಟ್ಟೋ	,, 188
1	ಡಿಟ್ಟೋ ಬೋರ್ರ್ಯಾಮ್‌ರವರ ಡಿಟ್ಟೋ	,, 85

ಖರೀದೀದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಸೆಂಟ್ರಲ್ ಜೈಲ್.

ನೋಟಿಸ್.

ನೋಟಿಸ್ ಮೂಲಕ ತಿಳಿಯಪಡಿಸುವದೇನಂದರೆ.—1897ನೇ ಇಸವಿ ಫಿಬ್ರುವರಿ ಗುರ್‍ರೇ ತಾರೀಖು ಲಾಗಾಯತು 1898ನೇ ಇಸವಿ ಜನವರಿ 31ನೇ ತಾರೀಖು ವರಿವಿಗೂ ಜೈಲಿನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಬೇಕಾದಂಥಾ ಎಲ್ಲಾ ರಖಂ ತುಪಟಗಳೂ ಮತ್ತು ಇತರ ಸಾಮಾನುಗಳನ್ನೂ ಹಾಜರು ಮಾಡಲು ಕಂಟ್ರಾಕ್ಟು ಪಡೆಯಲು ಇಷ್ಟವುಳ್ಳವರಿಂದ ಹಾಜರು ಮಾಡಲ್ಪಡುವ ಸೀಲ್ಡ್ ಕವರುನಿಸಿ ಇರುವ ದರಖಾಸ್ತು ಗಳನ್ನು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು 1897ನೇ ಇಸವಿ ಜನವರಿ 19ನೇ ಶನಿವಾರ ಬೆಳಿಗ್ಯೆ 10 ಘಂಟೇವರಿಗೂ ಅಂಗೀಕರಿಸುವರು.

2. ನಗದಾಗಿ 250 ರೂಪಾಯಿಗಳೇ ಆಗಲಿ ಅಥವಾ 250 ರೂಪಾಯಿಗಳಿಗೆ ತಕ್ಕ ನಡವಳಿಕೆಯಲ್ಲಿ ಇರುವ ನೋಟುಗಳನ್ನು ಆಗಲಿ ಡಿಪಾಜಿಟ ತರೀಕು ಹಾಜರು ಮಾಡದೇ ಇರುವಂಥಾ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

3. ದರಖಾಸ್ತುದಾರರಿಂದ ಹಾಜರು ಮಾಡಲ್ಪಡುವ ದರಖಾಸ್ತುಗಳ ಮೇಲ್ ಭಾಗದಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ "ಸಾಮಾನುಗಳು ತಯಾರಾಗತಕ್ಕ ಬಗ್ಯೆ ಬೇಕಾಗಿರುವ ಸಾಮಾನುಗಳನ್ನು ಸಪ್ಲೈ ಮಾಡತಕ್ಕ ಬಗ್ಯೆ ಕೊಟ್ಟ ದರಖಾಸ್ತು" ಎಂದು ನಮೂದಿಸಬೇಕು.

4. ಮೇಲ್ಕಂಡ ದಿನದಲ್ಲಿ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ತಮ್ಮ ಆಫಿಸಿನಲ್ಲಿ ಹಾಜರಿರುವ ದರಖಾಸ್ತುದಾರು ಯಾ ಅವರುಗಳ ಏಜಂಟುಗಳ ರೂಬರೂಬ್ ದರಖಾಸ್ತುಗಳನ್ನು ಪಡದು ನೋಡುವರು.

5. ಯಾವ ದರಖಾಸ್ತನ್ನೇ ಆಗಲಿ ಕಾರಣ ನಮೂದಿಸದೆ ತಿರಸ್ಕರಿಸುವ ಅಧಿಕಾರವನ್ನು ಸೂಪರಿಂಟೆಂಡೆಂಟರವರು ವಹಿಸಿ ಇದ್ದಾರೆ.

6. ಎಲ್ಲಾ ದರಖಾಸ್ತುದಾರರೂ ಇದಕ್ಕೆ ಜಂಟಿಸಿರುವ ಫಾರಮಿನಲ್ಲಿ ಕಂಡಂತೆ ವಳ್ಳೇ ಸರಕುಗಳನ್ನು ಯಾವ ರೇಟಿನಲ್ಲಿ ಕೊಡುತ್ತಾರೋ ಅವುಗಳನ್ನು ತಮ್ಮ ದರಖಾಸ್ತಿನಲ್ಲಿ ನಮೂದಿಸಬೇಕು.

7. ಕಂಟ್ರಾಕ್ಟು ಯಾರ ಹೆಸರಿಗೆ ಮಂಜೂರಾಗುತ್ತೋ ಅವರಿಂದ ಹಾಜರ್‍ಮಾಡಲ್ಪಟ್ಟ ಡಿಪಾಜಿಟ ಮೊಬಲಗನ್ನು ವಾಪಸು ಕೊಡುವದಿಲ್ಲ. ಮತ್ತು ಸದರೀ ಯವರ ಕಂಟ್ರಾಕ್ಟು ಮಂಜೂರು ಮಾಡಲ್ಪಟ್ಟಿದೆ ಎಂದು ಅವರಿಗೆ ತಿಳಿಸಿದ ಬಂದು ವಾರದೊಳಗಾಗಿ ಕಂಟ್ರಾಕ್ಟು ಬಾಂಡು ಬರದು ಕೊಡದೇ ಹೋದರೂ ಅಥವಾ ಜಾಮೀನ್ ತರೀಕ್ ನಗದು 500 ರೂಪಾಯಿ ಅಥವಾ ಅದಕ್ಕೆ ತಕ್ಕ ಸರಕಾರದ ಬಾಂಡುಗಳನ್ನೇ ಆಗಲಿ ಹಾಜರು ಮಾಡದೇ ಹೋದರೂ ಡಿಟೋ ಡಿಪಾಜಿಟ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

8. ಯಾವ ಮೊಬಲಗೂ ಅಡ್ವಾನ್ಸ ತರೀಕ್ ಕಂಟ್ರಾಕ್ಟುದಾರನಿಗೆ ಪ್ರತಿ ತಿಂಗಳಲ್ಲೂ ದೊರಯಲಾರದು. ಪ್ರತಿ ತಿಂಗಳಲ್ಲೂ ಕಂಟ್ರಾಕ್ಟುದಾರನಿಂದ ಹಾಜರು ಮಾಡಲ್ಪಟ್ಟ ಸಾಮಾನುಗಳ ಕ್ರಯವನ್ನು ಸೂಪರಿಂಟೆಂಡೆಂಟರವರು ಗುರ್‍ರೇ ತಾರೀಖು ಕಳದ ನಂತರ ಸಾಧ್ಯವಾದ ಮಟ್ಟಿಗೆ ಜಾಗ್ರತೆಯಾಗಿ ಕೊಡುವರು.

9. ಕಂಟ್ರಾಕ್ಟನ್ನು ಷಿಕಮೀ ಕಂಟ್ರಾಕ್ಟಾಗಿ ಕೊಡಕೂಡದು.

10. ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಷರತ್ತು ಮೇರೆ ನಡಿಯದೇ ತಪ್ಪಿದರೂ ಅಥವಾ ಕಮ್ಮಿ ರಖಂ ಸಾಮಾನುಗಳನ್ನು ಹಾಜರು ಮಾಡಿದರೂ, ಜೈಲ್ ಸೂಪರಿಂಟೆಂಡೆಂಟರವರು ಮುನಾಸಬ್ ಮೇರೆ 30 ರೂಪಾಯಿಗಳವರಿಗೂ ಜುರ್ಮಾನೇ ವಿಧಿಸಬಹುದು. ಹೀಗೆ ಪದೇ ಪದೇ ಮಾಡಿದರೆ ಕಂಟ್ರಾಕ್ಟನ್ನು ವಜಾಮಾಡಿ ಜಾಮೀನ್ ತರೀಕ್ ಕೊಟ್ಟ ಮೊಬಲಗನ್ನು ಸರಕಾರಕ್ಕೆ ತೆಗೆದುಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನು ಷರತ್ತಿಗೆ ವಿರೋಧವಾಗಿ ನಡೆದುಕೊಂಡರೆ ಆ ವಿಷಯದಲ್ಲಿ ಜೈಲ್ ಸೂಪರಿಂಟೆಂಡೆಂಟರು ಮಾಡುವ ಹುಕುಮೇ ಆಖೈರು ಹುಕುಂ ಆಗಿಯಿಧೆ.

12. ಕಂಟ್ರಾಕ್ಟುದಾರನು ಅಪೇಕ್ಷಿಸಿದ ಪಕ್ಷದಲ್ಲಿ ನಾಶಪಡದೇ ಇರುವಂಥಾ ಪದಾರ್ಥಗಳನ್ನ ಇಟ್ಟುಕೊಳ್ಳಲು ಬಂದು ಕೊಠಡಿ ಕೊಡಲ್ಪಡುವದು. ಅಲ್ಲಿ ಸಾಮಾನು ಇಟ್ಟುಕೊಂಡು ಕೇಳಿದ ವೇಳೆ ಕೊಡಬಹುದು.

13. ಇನ್ನೂ ಇತರ ಸಂಗತಿಗಳು ವಿಚಾರಿಸಬೇಕಾಗಿದ್ದರೆ ಸೂಪರಿಂಟೆಂಡೆಂಟರವರ ಆಫಿಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

14. ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ಕಂಡ * ಮಾರ್ಕು ಮಾಡಿರುವ ಸಾಮಾನುಗಳ ನಮೂನೇ ಸಹ ದರಖಾಸ್ತು ಜೊತೆಯಲ್ಲಿ ಹಾಜರು ಮಾಡಬೇಕು.

15. ಮೇಲೆ ನಮೂದಿಸಿರುವ ಷರತ್ತುಗಳಿಗೆ ಬಳಪಟ್ಟು ಮತ್ತು 100 ರೂಪಾಯಿ ಡಿಪಾಜಿಟ ಕಟ್ಟಿದರೆ ಮೇಲ್ಕಂಡ ತಾರೀಖಿನಲ್ಲಿ ತುಪಟಗಳು, ಹಾಜರು ಯಾ ಸಪ್ಲೈ ಮಾಡತಕ್ಕ ಬಗ್ಯೆ ಕೊಡುವ ಅಲಾಹಿದಾ ದರಖಾಸ್ತುಗಳನ್ನು ಅಂಗೀಕರಿಸಲ್ಪಡುವದು.

16. 25 ಪೌಂಡು ತೂಕವುಳ್ಳ ಮಣದ ಮೇಲೆ ದರ ನಮೂದಿಸಬೇಕು.

17. ಜಿನಸಿಗಳ ಸುಮಾರು ನಿಬಂಧನೆ ಈ ಕೆಳಗೆ ನಮೂದಿಸಿದೆ, ಆದರೆ ಇಷ್ಟೇ ಆಗುತ್ತೆಂದು ನಿರ್ಣಯಿಸಿ ಇಲ್ಲಾ.

ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
	ಪಾರ್ಸು
ಸಣ್ಣ ಇಂಗ್ಲಿಷ್ ಟ್ವೈನ್ 3 ಪವನು ವುಳ್ಳ ಕಟ್ಟು ..	50
ಡಿಟ್ಟೋ ದಪ್ಪವುಂಡೆ ಟ್ವೈನ್(ಬೆಂಗಾಲ್) ..	10
ಹೊಲಿಯುವ ಟ್ವೈನ್ ಪವನಿಗೆ ..	20
ಷೀಟುಗ್ಳೂ, ಯಾನೆ ವಜ್ರ 25 ಪವನಿನ ಮಣಕ್ಕೆ ..	150
ಸ್ಪೈಕ್ಸು ಗ್ಳೂ ಯಾನೆ ವಜ್ರ 25 ಪವನಿನಮಣಕ್ಕೆ ..	200
ಅಳಲೇಕಾಯಿ ಡಿಟ್ಟೋ ..	275
*ಚಾಳು. (ಬಿಲ್ಲೆಯಾಗಿ) ಡಿಟ್ಟೋ ..	1,200
ಡಿಕೆ ಡಿಟ್ಟೋ ..	50
...ಕು ಡಿಟ್ಟೋ ..	50
ಹುಣಸೇಬೀಜ (ರೂಪಾಯಿಗೆ ಇಷ್ಟು ಸೇರೆಂದು) ..	300 ಸೇರು
ಹರಿದ್ರ 25 ಪವನಿನ ಮಣಕ್ಕೆ ..	200 ಪವನು
ತಾಂಬ್ರದ ತಗಡು ನಾನಾತರ ದಪ್ಪದ್ದು ..	600
ಹಿತ್ತಾಳೆ ತಗಡು ಡಿಟ್ಟೋ ...	50
ಪಟಕಾರವು 25 ಪವನಿನ ಮಣಕ್ಕೆ ..	250
*ಅರಗು ಪೆಸ್ಪರ ಅಥವಾ ರಂಗೂನದು ಕಡ್ಡಿ ಇಲ್ಲದ್ದು	700 ಪವನು
*ಕೆಂಪುಮಾರ ಸಣ್ಣಗೆ ಸೀಳಿದ್ದು ..	200 ಪವನು
ಬಿಳೀ ಶೀಮೆ ಸುಣ್ಣ ..	20 ಪವನು
*ಅವಲ್‌ನೀಲಿ ಅವಲ್ ಮಿಡ್ಯ್ಯಮ್ ಮತ್ತು ಸಿಯ್ಯಂ ರಖಂ ..	150 ಪವನು
ಅವಲ್‌ಟೂರು	6 ಪೀಪಾಯಿ
ಮರದೆಣ್ಣೆ	3 ಮಣ
ಗೋಪಿ	200 ಪವನು
ಅವಲ್ ಕೊಬ್ಬರಿಯಣ್ಣೆ .. .	56 ಪವನು
ಅವ್ವಲ್ ಅಜ್ಜಳ್ಳೆಣ್ಣೆ	50 ಪವನು
ಅವ್ವಲ್ ದೀಪದಯಣ್ಣೆ	75 ಪವನು
ಅವಲ್ ಬಿಳೀಬೆತ್ತ 1ನೇ ಕ್ಲಾಸು ..	350 ಪವನು
ಛಾಪೆ ಹಾಕುವ ಕೆಂಪುಶಾಯಿ ಒಂದು ಪರ್ವ ಟಿನ್ನಿಗೆ	20 ಟಿನ್
ದಪ್ಪವಾದ ಬುಕ್ಕು ಬೈಂಡಿಂಗ್ ಕ್ಯಾಲಿಕೊ ಗಜಕ್ಕೆ	150 ಗಜ
ತೊಳದ ದಪ್ಪ ಮತ್ತು ಅಗಲವುಳ್ಳ ಮಲ್‌ಮಲ್ ..	30 ಗಜ
ಅಗಲವಾದ ಮತ್ತು ದಪ್ಪವಾದ ಟರಕಿ ಕೆಂಪುಬಟ್ಟೆ	30 ಗಜ
ಒಂದುಅಡಿ ಅಗಲವುಳ್ಳ ಟೆಂಟುಗನಿ (ಚೀಲಕ್ಕೆ) ಗಜಕ್ಕೆ ..	100 ಗಜ
ನೇವೀಕ್ಯಾನ್‌ವಸ್ ನಂ. 1 ಗಜಕ್ಕೆ ..	30 ಗಜ
ಡಿಟ್ಟೋ ನಂ. 2 ಡಿಟ್ಟೋ ..	5 ಗಜ
ಡಿಟ್ಟೋ ನಂ. 3 ಡಿಟ್ಟೋ ..	5 ಗಜ
*ಬಾರ್ ಐರನು ಯಾನೆ ಕಬ್ಬಿಣ25 ಪವನು ಮಣಕ್ಕೆ	200 ಪವನು
ಹೂಪುಐರನು ಡಿಟ್ಟೋ ..	200 ಪವನು
ಅರ ಮಂದಕ್ಕೆ ..	50
ಹಳೇ ಹಿತ್ತಾಳೆ 25 ಪವನು ಮಣಕ್ಕೆ ..	200 ಪವನು
*ಕತ್ತರಿಸಿದ ಮಂಡ್ಯದ ಬಿಳೀತುಪಟ 25 ಪವನು ಮಣಕ್ಕೆ 1ನೇ ರಖಂ ..	500 ಪವನು
*2ನೇ ರಖಂ ಕತ್ತರಿಸಿದ ಚಿತ್ರದುರ್ಗದ ತುಪಟ...	1,000ಪವನು
*ಕುರಿಮರಿ ತುಪಟ ಚಿತ್ರದುರ್ಗದ್ದು(ಬ್ಲಾಕು ಫೈಮಿ)	2,500ಪವನು
*ಚುನಾಮುಯಾನೆ ಸ್ಕ್ರುವ್ಡು ಬ್ಲಾಕು ...	5,000ಪವನು
ಡಿಟ್ಟೋ ಬಿಳೀತುಪಟ ...	3,000ಪವನು
*ಡಿಟ್ಟೋ ಮರಿ ತುಪಟ ...	1,000ಪವನು
ಡಿಟ್ಟೋ ಗ್ರೇ ಯಾನೆ ಬಿಳೀ ತುಪಟ ...	3,000ಪವನು

ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
ಜೇನುಮೇಣ (ಹಳದಿ) ..	30 ಪವನು
ಹುಣಸೆಹಣ್ಣು (ಕೊಳೆ ಕಲ್ಲುವಗೈರೆ ಇಲ್ಲದ್ದು) 25 ಪವನಿನ ಮಣಕ್ಕೆ	2000ಪವನು
ಕೆಂಪುಸಾಬೂನು (ಬಿಲ್ಲೆಗಳು) ಡಿಟ್ಟೋ ..	50 ಪವನು
*ಹಳದಿ ಹೂ ಡಿಟ್ಟೋ ..	1,500 ಡಿ||
ಬಿಳೀಗೋಂದು (ಕೊಳೆ ಇಲ್ಲದ್ದು) ಡಿಟ್ಟೋ ..	25 ಪವನು
ದೋಬಿ ಸ್ಯಾಂಡುಯಾನೆ ಮರಳುಡಿಟ್ಟೋ ..	200 ಮಣ
ಬಸಿಯುತಕ್ಕ ಸೀಸ ಡಿಟ್ಟೋ ..	75 ಪವನು
ಟಂಕವು (ಬಿಳಿಗಾರ) ಡಿಟ್ಟೋ ..	75 ಪವನು
ಸಾಲಿಮೊನಿಯಾಕ್ ಡಿಟ್ಟೋ .	75 ಪವನು
ಅರಪಾಲು ಡಿಟ್ಟೋ ..	10 ಮಣ
ಭತ್ತದ ಹೊಟ್ಟು ಡಿಟ್ಟೋ ..	100 ಮಣ
ನೀಲೀಬೀಜ ಡಿಟ್ಟೋ ..	600 ಪವನು
ಬಳ್ಳೇ ಗೋಧಿಹಿಟ್ಟು (ಅವಲ್) ಡಿಟ್ಟೋ ..	250 ಪವನು
ಅವ್ವಲ್ ಇದ್ದಲು (ಚೀಲಗಳಲ್ಲಿ) ಚೀಲಕ್ಕೆ ದರ.	150 ಚೀಲ
ಸೆಣಬಿನದಾರ ಒಂದು ಡಜನ್ ವುಂಡಗೆ ..	100 ವುಂಡೆ
ತೆಂಗಿನನಾರು (ಅವಲ್ ಕಳ್ಳೀಕೋಟೇದು) 25 ಪವನಿನ ಮಣಕ್ಕೆ ..	10,000 ಪ||
ಸವುದೆ (ಸಣ್ಣಗೆ ಸೀಳಿದ್ದು) ..	1,200 ಮಣ
1ನೇ ರಖಂ ಚಿತ್ರದುರ್ಗದ ಕತ್ತರಿಸಿದ ಕುರಿ ತುಪಟ 25 ಪವನು ಮಣಕ್ಕೆ	1,500ಪವನು
ವುಂಡೀನಾರು (ಬಿಳೀದು) 25 ಪವನು ಮಣಕ್ಕೆ	800 ಪವನು
*ತೂತು ಇಲ್ಲದ ಅವಲ್ ಕೋಣನ ಚಕ್ಕಳ ..	10
ಡಿಟ್ಟೋ ಹದಮಾಡಿದ ಎತ್ತಿನ ಚಕ್ಕಳ ..	10
ಡಿಟ್ಟೋ ಡಿಟ್ಟೋ ಸಾಧಾರಣದ್ದು ..	5
ದೊಡ್ಡ ಕುರಿ ಚಕ್ಕಳ ಡಿಟ್ಟೋ ..	10
ಜೇಯಿಸಿದ ಅಗಸೇಬೀಜದ ಎಂಣೆ $2\frac{1}{2}$ ಸೇರಿನ ಸೀಸೆಕ್ಕೆ	50 ಸೀಸೆ
ಟರ್‌ಪನ್‌ಟೈನ್ ಎಂಣೆ ಡಿಟ್ಟೋ ..	30 ಸೀಸೆ
ಗೋಪಾಲ್ ವಾರ್‌ನೀಷ್ ಡಿಟ್ಟೋ ..	10 ಸೀಸೆ
ಬ್ಲಾಕ್ ಜಪಾನ್ ಡಿಟ್ಟೋ ...	10 ಸೀಸೆ
ಅವಲ್ ಫ್ರೆಂಚುಪಾಲೀಷ್ ಸೀಸೆಕ್ಕೆ ...	50 ಸೀಸೆ
ಕಾಡಿಗೆ ಸೀಸೆಕ್ಕೆ	10 ಸೀಸೆ
ಬಣಗಿದ ಕರ್ಪೂರ ಪವನಿಗೆ ..	20 ಪವನು
ಛಾಪೆ ಹಾಕುವ ಕರೀಯಿಂಕಿ ಪರ್ವ ಟಿನ್ನಿಗೆ ..	50 ಟಿನ್
*ಬಿಳೀ ಮ್ಯೂಲ್‌ಟ್ವಿಸ್ಟು ಕಾರ್ಟನ್ ನಂ. 10 400 ಪವನು ಮೂಟೆಗೆ	5,000ಪವನು
* ಡಿಟ್ಟೋ ನಂ. 20, 10 ಪರ್ವ ಮೂಟೆಗೆ ..	100 ಪವನು
* ಡಿಟ್ಟೋ ನಂ. 30, 5 ಪವನು ಮೂಟೆಗೆ ..	50 ಪವನು
* ಡಿಟ್ಟೋ ನಂ. 40, ಡಿಟ್ಟೋ ..	20 ಪವನು
* ಕೆಂಪು ಹತ್ತಿ ನಂ. 40 ಇಂಗ್ಲಿಷ್ ಡಿಟ್ಟೋ..	40 ಪವನು
*ಹಳದಿಹತ್ತಿ ನಂ. 40 ಡಿಟ್ಟೋ ..	20 ಪವನು
ಹಸರು ಹತ್ತಿ ನಂ. 40 ಡಿಟ್ಟೋ ..	200 ಪವನು
ಷೀಟು ಐರನು ಎಂಬ ಕಬ್ಬಿಣ 25ಪವನುಮಣಕ್ಕೆ	200 ಪವನು
ಸತ್ತು 25 ಪವನು ಮಣಕ್ಕೆ ..	200 ಪವನು,
*ಹಾಸಿಗ್ಗೆ ಗೌಸ್ ಹಾಕುವ ಬಟ್ಟೆ ಗಜಕ್ಕೆ ..	30 ಗಜ
*2ನೇ ರಖಂ ಮಂಡ್ಯದ ಕತ್ತರಿಸಿದ ಬಿಳೀತುಪಟ 25 ಪವನು ಮಣಕ್ಕೆ ..	1,500ಪವನ

ತುಪಟವನ್ನು ಕೆಲಸಕ್ಕೆ ಉಪಯೋಗಿಸುವದಕ್ಕೆ ಮುಂಚೆ ಆದು ಹೊಡೆದು ಕ್ಲೀನು ಮಾಡಿ ಮತ್ತು ತೊಳೆದು ಉಪಯೋಗಿಸಲ್ಪಡುತ್ತೆ. ತೇಗದಮರ, ಹೊನ್ನೇಮರ, ಕರೀಮರ ಮತ್ತು ರೋಜ್‌ವುಡ್ಡು ಮರ ಇವುಗಳ ತೊಲೆಗಳನ್ನು ಅಡಿಲೆಖ್ಖದಮೇಲೆ ತೆಗೆದುಕೊಳ್ಳುತ್ತೆ. ಇನ್ನೂ ಇತರ ಚಿಲ್ರೆ ಸರಕುಗಳನ್ನು ಕಂಟ್ರಾಕ್ಟುದಾರನು ಮಾರ್ಕೆಟ್ಟಿನಲ್ಲಿ ಮಾರುವ ದರದಮೇಲೆ ಸಪ್ಲೈ ಮಾಡತಕ್ಕದ್ದು.

ತಾರೀಖು 30ನೇ ನವೆಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರ ಸೆಂಟ್ರಲ್ ಜೈಲಿನಲ್ಲಿ ಬೈದು ಮಾಡಲ್ಪಟ್ಟು ಇರುವ ಕೈದಿಗಳ ಉಪಯೋಗದ ಬಗ್ಯೆ ಸರ್ಕ 1897ನೇ ಇಸವಿ ಫೆಬ್ರುವರಿ ಗುರ್ರ್ರೀ ಲಾಗಾಯತು 1898ನೇ ಇಸವಿ ಜನವರಿ 31ನೇ ತಾರೀಖಿನ ವರೆಗೂ ಆ 2 ದಿನಗಳೂ ಸೇರಿ ಕೆಳಗೆ ನಮೂದು ಮಾಡುವ ಜಿನಸುಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರ ಸೆಂಟ್ರಲ್ ಜೈಲ್ ಸೂಪರ್ರಿಂಟೆಂಡೆಂಟರವರಿಂದ, ಸರ್ಕ 1896ನೇ ಇಸವಿ ಡಿಸೆಂಬರ್ ತಾರೀಖು 19ನೇ ಶನಿವಾರ ಹಗಲು 1 ಘಂಟೆ ವರಿಗೂ ತೆಗದುಕೊಳ್ಳಲ್ಪಡುವವು.

2. ಮೇಲೆ ನಮೂದು ಮಾಡಿರುವ ತಾರೀಖಿನ ನಂತರ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. ಟೆಂಡರುಗಳಿಗೆ ಈ ಕೆಳಗೆ ನಮೂದು ಮಾಡಿರುವಂತೆ ಬೇರೆಬೇರೆ ಮೇಲ್ ವಿಳಾಸ ಬರೆದು ಇರತಕ್ಕದ್ದು:—

1ನೇ ಧಾನ್ಯಕ್ಕೆ	ದರಖಾಸ್ತು
2ನೇ ಮಸಾಲೆ ಜಿನಸುಗಳಿಗೆ	ದರಖಾಸ್ತು
3ನೇ ಇತರ ಅವಶ್ಯಕವಾದ ಪದಾರ್ಥಗಳ ಬಗ್ಯೆ.	ದರಖಾಸ್ತು

4. ಧಾನ್ಯಕ್ಕೆ	ರೂಪಾಯಿ 200
ಮಸಾಲೆ ಜಿನಸುಗಳಿಗೆ ..	,, 50
ಇತರ ಅವಶ್ಯಕವಾದ ಪದಾರ್ಥಗಳಿಗೆ ..	,, 150

ಈ ಮೇರಿಗೆ ನಗದಾಗಿ ಆಗಲಿ, ಕರ್ರೆನ್ಸೀನೋಟಾಗಿ ಆಗಲಿ ಠೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲ.

5. ದರಖಾಸ್ತುಗಳು ಬೆಂಗಳೂರ ಸೆಂಟ್ರಲ್‌ಜೈಲ್ ಸೂಪರ್ರಿಂಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಆ ಕಾಲದೊಳು ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರುಗಳ ರೂಬರೂಬ್ ಮೇಲ್ಕಂಡ ತಾರೀಖು ಮತ್ತು ಘಂಟೆಯಲ್ಲಿ ಖುಲ್ಲಾ ಮಾಡಲ್ಪಡುವವು.

6. ಕೆಳಗೆ ವಿವರಿಸಿರುವ ಜಿನಸುಗಳನ್ನು ಸರಬರಾಯಿ ಮಾಡುವ ದರ ರೂಪಾಯಿ 1ಕ್ಕೆ ಇಷ್ಟು ಪೌಂಡ್ ಎಂತ ದರಖಾಸ್ತುಗಳಲ್ಲಿ ನಮೂದಾಗಬೇಕು. ಮತ್ತು ಜಿನಸುಗಳು ಒಳ್ಳೇದಾಗಿರಬೇಕು.

ಸಂವತ್ಸರಕ್ಕೆ ಬೇಕಾಗಬಹುದಾದ ಜಿನಸುಗಳ ಪಟ್ಟಿ.

1ನೇ ಧಾನ್ಯ.

				ಸುಮಾರು ಬೇಕಾದ್ದು.
ಅಕ್ಕಿ	..	..	...	56,000 ಪೌಂಡ್
ರಾಗಿ	...	...	...	240,000 ಪೌಂಡ್
ತೊಗರೀಬ್ಯಾಳೆ	..	..	...	11,000 ಪೌಂಡ್
ಅವರೇಬ್ಯಾಳೆ	...	..	...	19,000 ಪೌಂಡ್

2ನೇ ಮಸಾಲೆ ಜಿನಸುಗಳು.

* ಖಾರದ ಸಾಮಾನಿಗೆ ಬೇಕಾದ ಜಿನಸುಗಳು.

1	ಪೌಂಡ್	ಮೆಣಸಿನ ಕಾಯಿ
12	ಔನ್ಸ್	ಕೊತ್ತುಂಬರಿ ಬೀಜ
2	ಔನ್ಸ್	ಅರಿಸಿನ
1	,,	ಜೀರಿಗೆ
6	,,	ಮೆಣಸು
3	,,	ಪೋಸ್ತು ಕಾಯಿ
1	,,	ಮೆಂಥ್ಯ
1	,,	ಸಾಸಿವೆ
1	,,	ಕರಬೇವಿಸೊಪ್ಪು

* ಖಾರದ ಸಾಮಾನು ಯಾ ಪುಡಿ 4,200 ಪೌಂಡ್.

ಈರುಳ್ಳಿ	..	6,000 ,,
ಬೆಳ್ಳುಳ್ಳಿ	..	600 ,,
ಹುಣಸೇಹಣ್ಣು	.	6,000 ,,
ಉಪ್ಪು	..	8,400 ,,
ಮೆಣಸು	..	100 ,,

3ನೇ ಇತರ ಅವಶ್ಯಕವಾದ ಪದಾರ್ಥಗಳು.

ಮೊಸರು	..	24,000 ಪೌಂಡ್.
ಒಳ್ಳೆಯಣ್ಣೆ	...	2,400 ,,
ತುಪ್ಪ	..	1,200 ,,
ತರಕಾರಿ	..	72,000 ,,
ರವೆ	..	200 ,,
ಸಕ್ಕರೆ	..	300 ,,
ಕಾಫಿ	..	50 ,,
ಟೀ	..	10 ,,
ರೊಟ್ಟಿ	..	1,000 ಪೌಂಡ್.
ಹಾಲು	..	4,500 ,,
ಶೀಗೇಕಾಯಿ	..	400 ,,
ಗೇರುಬೀಜ	..	300 ,,
ದೀಪದೆಣ್ಣೆ	..	350 ,,
ಪೊರಕೆಗಳು	..	1,500 ಅದದು
ಕೊಬ್ಬರಿ ಎಣ್ಣೆ	..	100 ಪೌಂಡ್

ಮೇಲೆ ನಮೂದು ಮಾಡಿರುವ ಜಿನಸಿನ ಮೊತ್ತಗಳು ಇಷ್ಟೇ ತೆಗದುಕೊಳ್ಳುತ್ತೇವೆಂದು ಖಾತರ್ ದೊರೆಯಲಾರದು.

7. ಕಂಟ್ರಾಕ್ಟುದಾರನು ಕೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಕೈದಿಗಳಿಗೆ ಕೊಡಲ್ಪಡುವದು. ಹಾಗೆ ಸರಬರಾಯಿ ಆದ ರಾಗಿ ಹಿಟ್ಟಿಗೆ ಸರಿಯಾದ ರಾಗಿ ಇಷ್ಟೆಂದು ಲೆಖ್ಖ ಮಾಡಿ ಆ ರಾಗೀ ದರದ ಮೇಲೆ ಹಣ ಪಾವತಿಯಾದೀತು.

8. ಸೂಪರ್ರಿಂಟೆಂಡೆಂಟರವರು ಅತ್ಯಂತ ಕಮ್ಮಿ ದರವನ್ನಾಗಲಿ ಅಥವಾ ಮತ್ತೆ ಯಾವ ದರವನ್ನೇ ಆಗಲಿ ಅಂಗೀಕರಿಸಲು ಬದ್ಧರಾಗಿರುವದಿಲ್ಲ. ಮತ್ತು ಕಾರಣವನ್ನು ಹೇಳದೆ ಬೇಕಾದ ದರಖಾಸ್ತನ್ನು ತಿರಸ್ಕರಿಸಬಹುದು.

9. ಮಂಜೂರಾದ ದರಖಾಸ್ತುದಾರರ ಠೇವಣಿ ಮೊಬಲಗು ಇಟ್ಟು ಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವರು ಕಂಟ್ರಾಕ್ಟು ಮುಚ್ಚಳಿಕೆ ಬರೆದುಕೊಡುವದಕ್ಕೆ ತಪ್ಪಿದರೆ, ಅಥವಾ ನಗದಾಗಿ ಆಗಲಿ ಗವರ್ನಮೆಂಟ್ ಬಾಂಡ್ ಮೂಲಕವಾಗಿಯಾಗಲಿ ಧಾನ್ಯಕ್ಕೆ 500 ರೂಪಾಯಿ.

ಮಸಾಲೆ ಜಿನಸಿಗೆ .. .. ರೂ. 100.
ಇತರ ಅವಶ್ಯಕವಾದ ಪದಾರ್ಥಗಳಿಗೆ .. .. ರೂ. 300.
ಈ ಮೇರೆ ಜಾಮೀನ್ ಕೊಡಲು ತಪ್ಪಿದರೆ ಅಂಥಾ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

10. ಕಂಟ್ರಾಕ್ಟದಾರರಿಗೆ ನಗದಾಗಿ ಅಡ್ವಾನ್ಸ್ ಏನೂ ಕೊಡುವದಿಲ್ಲ. ಸರಬರಾಯಿ ಮಾಡಲ್ಪಟ್ಟಂಥಾ ಸಾಮಾನ್ ಕಿಮ್ಮತು ಪ್ರತಿ ತಿಂಗಳ 1ನೇ ತಾರೀಖು ನಂತರ ಕಂಟ್ರಾಕ್ಟುದಾರರಿಗೆ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಪಾವತಿ ಮಾಡಲ್ಪಡುವದು.

11. ಉಗ್ರಾಣದ ಕೊಠಡಿಗಳ ಸ್ವಾಧೀನ ಕಂಟ್ರಾಕ್ಟುದಾರರಿಗೆ ಕೊಡಲ್ಪಡುವದು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನೂ ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲೂ ಇಟ್ಟಿರಬೇಕು. ಕೆಟ್ಟು ಹೋಗತಕ್ಕಂಥಾ ಪದಾರ್ಥಗಳು ಅಂದರೆ ತರಕಾರಿ ಮುಂತಾದ್ದು ಪ್ರತಿ ದಿನವೂ ಬೆಳಗಿನ 8 ಘಂಟೆಗೆ ಜೈಲ್‌ನಲ್ಲಿ ಹಾಜರ್ಮಾಡಬೇಕು.

12. ಈ ಕಂಟ್ರಾಕ್ಟು ಒಳಗುತ್ತಿಗೆಯಾಗಿ ಕೊಡಬಾರದು.

13. ಕಂಟ್ರಾಕ್ಟದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಅಥವಾ ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ ಜೈಲ್ ಸೂಪರಿಂಟೆಂಡೆಂಟರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದೆ ಜುರ್ಮಾನೆ ಹಾಕುವರು ಮತ್ತು ಪದೇಪದೆ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡೆದರೆ ಆ ಕಂಟ್ರಾಕ್ಟು ರದ್ದು ಮಾಡಿ ಠೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಕ್ಕೊಳ್ಳಲ್ಪಟ್ಟೀತು.

14. ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡದ ಎಲ್ಲಾ ಪ್ರಮೇಯಗಳಲ್ಲೂ ಸೂಪರಿಂಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಆಖೈರಾಗಿರತಕ್ಕದ್ದು.

15. ಕಂಟ್ರಾಕ್ಟದಾರನು ಖೈದಿಗಳ ಉಪಯೋಗಕ್ಕಾಗಿ ಬೇಕಾಗಿರುವ ಹಾಲನ್ನೂ ತರಕಾರಿಯನ್ನೂ ಮತ್ತು ತೋಟದ ಬೆಳಸನ್ನೂ ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಜೈಲಿನಿಂದ ಕೊಂಡುಕೊಳ್ಳಲು ಬದ್ಧನಾಗಿರುವನು.

16. ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

17. ಕಂಟ್ರಾಕ್ಟುಗಳು ಮೈಸೂರ ದೇಶದ ಜೈಲುಗಳ ಇನ್ಸ್‌ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು. ಇವರು ದರಖಾಸ್ತುಗಳು ಎಲ್ಲವನ್ನೇ ಆಗಲಿ ಅಥವಾ ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಅಧಿಕಾರವನ್ನು ಇಟ್ಟುಕೊಂಡಿದಾರೆ.

18. ಕಂಟ್ರಾಕ್ಟುದಾರರು ಈ ಕಂಟ್ರಾಕ್ಟು ತೆಗದುಕೊಂಡ ತರುವಾಯ, ತಮ್ಮ ಕರಾರು ಮೇರಿಗೆ ನಡೆಯಲು ಇಷ್ಟವಿಲ್ಲದವರಾಗಿದ್ದರೆ, ಅವರು ಕೊನೇಪಕ್ಷ ಒಂದು ತಿಂಗಳ ಮುಂಚಿತವಾಗಿ ನೋಟಿಸ್ ಕೊಟ್ಟು ತಮ್ಮ ಠೇವಣಾತಿ ಹಣವನ್ನು ಸರಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

19. ಆ ಪ್ರಕಾರ ಸದರೀ ಕಂಟ್ರಾಕ್ಟುದಾರರು ತಮ್ಮ ಕರಾರಿಗೆ ತಪ್ಪಿದ್ದರಿಂದ ಅಥವಾ ಅವರ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರಕಾರದವರು ಸ್ಥಳೀಯವಾದ ಬಾಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚುದರ ಕೊಟ್ಟು ತಕ್ಕೊಳ್ಳುವದರಿಂದ ಸರಕಾರದವರಿಗೆ ಉಂಟಾಗಬಹುದಾದ ನಷ್ಟವನ್ನು ಭರ್ತೀಮಾಡುವದಕ್ಕೂ ಸಹ ಬದ್ಧರಾಗಿರಬೇಕು.

ಷರಾ.—ಈ ಕಂಟ್ರಾಕ್ಟುಗಳಲ್ಲಿ ಯಾವ ವಿಧವಾದ ರಿಯಾಯತಿಯನ್ನೂ ಮಾಡೋಣಾಗಲಾರದು.

ಹೆಚ್. ಹೆಚ್. ಸ್ಪಾರ್ಕ್ಸ್,
ಸೂಪರಿಂಟೆಂಡೆಂಟ್ ಸೆಂಟ್ರಲ್ ಜೈಲ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 2ನೇ ಸೆಪ್ಟಂಬರ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ಮತ್ತು ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.		
ಮೈಸೂರು	ಹುಣಸೂರು	28ನೇ	*	*
ಡಿಟೋ	ಶ್ರೀರಂಗಪಟ್ಣ	1ನೇ	*	*
ಬೆಂಗಳೂರು	ಬೆಂಗಳೂರು	4ನೇ	*	*
ಹಾಸನ	ಹಾಸನ	7ನೇ	*	*
ಕಡೂರು	ಚಿಕ್ಕಮಗಳೂರು	10ನೇ	ಡಿಸೆಂಬರ್	1896.
ಶಿವಮೊಗ್ಗಾ	ಶಿವಮೊಗ್ಗಾ	15ನೇ	ಡಿಟೋ	,,
ಡಿಟೋ	ಸಾಗರ	18ನೇ	ಡಿಟೋ	,,
ಡಿಟೋ	ತೀರ್ಥಹಳ್ಳಿ	22ನೇ	ಡಿಟೋ	,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜಮಾಯಿಷಿ ಬಗ್ಗೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಎರಡು ವಿಧವಾಗಿ ಸಂದಲನ್ನು ರಾಸು ಮಾಡಿಸಿರುತ್ತೆ.

3. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4. ಪ್ರತಿ ಕೋಠಿಯಲ್ಲಿಯು ಬಿಕರಿ ಬಗ್ಗೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನು ಇದರಡಿ ವಿವರಿಸಿಧೆ.

ಹಳೇ ತರಹೆ ಪ್ರಕಾರ.

ಸಂದಲ್ ವಿವರ		ಬೆಂಗಳೂರು ಕೋಠಿ.		ಹಾಸನ ಕೋಠಿ.		ಚಿಕ್ಕಮಗಳೂರು ಕೋಠಿ.		ಶಿವಮೊಗ್ಗಾ ಕೋಠಿ.		ಸಾಗರ ಕೋಠಿ.		ತೀರ್ಥಹಳ್ಳಿ ಕೋಠಿ.	
		ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.	ಟನ್.	ಹ.
ಸಲಾಕಿ ಅವ್ವಲ್	..	1	..	..	5	..	15	..	..	..	15	..	...
ಡಿಟೋ ದುಯಂ	..	..	5	1	5	2	5	3	5	1	..	..	2
ಡಿಟೋ ಸಿಯಂ	..	1	10	7	10	5	5	12	15	8	..	4	..
ಡಿಟೋ ಚಹರಂ	..	45	15	30	..	44	..	32	10	12	..	7	..
ಡಿಟೋ ಪಂಚಂ	..	7	..	10	..	10	10	37	.	25	..	14	..
ಚಿಕ್ಕ ಸಲಾಕಿ	..	1	2	1	..	..	..	..	..	..	..	..	..
ದೊಡ್ಡ ಜಡಾ	..	21	..	35	..	33	..	66	5	40	..	25	..
ಚಿಕ್ಕ ಜಡಾ	..	3	15			5	..	8	..	4	..	2	..
ಜಡದ ರಂಬೆ	..	1	5			7	..	..	..	...	..	...	..
ದೊಡ್ಡ ಜಜ್ಜು	..	18	..	61	5	30	..	94	..	65	..	43	..
ಚಿಕ್ಕ ಜಜ್ಜು	..	3	5			11	..						
ಬಗರದದ್ದು	..	2	15	6	..	5	5	26	.	9	..	13	10
ಐರ್ ವಾಚಿ ಗುಬಗರು	..	1	..	3	..	..	10	..	..	..	..	..	..
ಗರಗಸ ಬುಕಣಿ	..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಟ	.	1	10	1	..	6	5	15	10	15	..	16	..
ಚಿಕ್ಕ ಡಿಟೋ	..	..	..	2	..								
ಕೆತ್ನೆ ಐರ್ ಚಿಲ್ಟ	..	6	..	..	..	.	..	..	..	..	..	..	...
ಹತ್ರಿ ಚಿಲ್ಟ	..	1	6	..	..	..	..	..	.	..	..	..	..
ಮಿಲ್ವ ಚಿಲ್ಟ	..	17	10	30	..	21	5	30	..	12	..	9	..
ಬಸೋಲ ಬುಕಣಿ	..	1	15	10	..	14	..	14	15	5	10	6	8
ಕೊಯತ ಚಿಲ್ಟ	..	..	..	1	10	3	10	9	..	2	..	1	..
ಜುಮ್ಲಾ	..	135	15	200	..	200	..	350	..	200	..	150	..

ಹೊಸ ಯಾ ಬೋಂಬಾಯಿ ತರಹೆ ಪ್ರಕಾರ.

ಸಂದಲ್ ವಿವರ.		ಹುಣಸೂರು ಕೋಠಿ.		ಶ್ರೀರಂಗಪಟ್ಣ ಕೋಠಿ.	
		ಟನ್.	ಹ.	ಟನ್.	ಹ.
ವಿಲಾಯಿತಿ ಬಡ್	..	1	.	..	10
ಜೈನಾ ಬಡ್	..	20	..	30	
ಪಂಚಂ	..	28	..	89	..
ಚಿಕ್ಕ ಸಲಾಕಿ, ಘೊಟ್ಲ (ಅವ್ವಲ್)	..	3	...	5	..
ಡಿಟೋ (ದುಯಂ)	..	2	..	1	..
ಘಟ್ ಬಡಲ	..	50	..	30	..
ಜಡಾ (ಅವ್ವಲ್)	..	25	..	25	..
ಡಿಟೋ (ದುಯಂ)	..	25	..	12	..
ಡಿಟೋ (ಸಿಯಂ)		20	..	8	..
ಡಿಟೋ (ಚಹರಂ)	.	7	.	7	..
ಜಜ್ಜು (ಅವ್ವಲ್)	..	50	...	25	..
ಡಿಟೋ (ದುಯಂ)	..	40	15	15	..
ಬಗರದದ್ದು	..	5	..	12	..
ಐರ್ ಬಗರು	..	5	..	14	..
ಚಿರಿಯಾ	..	5	..	5	..
ಐರ್ ಚಿಲ್ಟ (ಅವ್ವಲ್)	..	4	..	6	..
ಡಿಟೋ (ದುಯಂ)	..	6	..	6	10
ಹತ್ರಿ ಚಿಲ್ಟ	..	1	..	2	10
ಗರಗಸ ಬುಕಣಿ	..	1	..	..	10
ಮಿಲ್ವ ಚಿಲ್ಟ	..	30	..	50	..
ಬಸೋಲಾ ಬುಕಣಿ	..	7	.	10	..
ಚೇಗು ಮಿಲ್ವ	..	..	..	5	..
ಕಳೆದವರುಷದ ಜಡಾ		113	15	12	15
ಸ್ಪೆಷಲ್ ಕ್ಲಾಸ್	..	..	10	...	..
ಟೋಟಲ್	..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಗೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ಸೂಂ 15230.—ಆರ್. ಎಫ್. 155—92ನೇ ನಂಬರ ರೂಲ್ಸಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಇತರ ಆಫೀಸರಿಂದ ಆಗಲಿ ಶೇರಿ ಫಾರೆಸ್ಟು ಆಫೀಸರವರಿಂದ ನಡಿಸಲ್ಪಡತಕ್ಕದ್ದು.

2. ಚಡಪರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟ್ಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟು ಆಫೀಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನು ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲೀ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ ಮೊಬಲಗಿಗಾಗಿ ಟ್ರೆಜರೀ ಆಫೀಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದಿಯನ್ನು 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟು ಆಫೀಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟು ಆಫೀಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟು ಆಫೀಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಮರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫೀಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫೀಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಸೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಇಲ್ಲದರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟು ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫೀಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟು ಆಫೀಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ಉಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಗೆ ಪಾವತಿ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು, ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಎಂದಿಗೂ ಎಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟೆ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿಯೊಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫೀಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫೀಸರವರು ಆಯಾ ಸಂಬಂಧಪಟ್ಟ ಫಾರೆಸ್ಟು ಆಫೀಸರವರಿಗೆ ತಿಳಿಸುವದಕ್ಕೋಸ್ಕರ ಹೀಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟು ಆಫೀಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ ಹಾಜರಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫೀಸರಿಂದಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯು ವಜಾ ಮಾಡಲ್ಪಡತಕ್ಕದ್ದು. ಏನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫೀಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೆ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ಒಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀ

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡೆದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫೀಸರವರು ಅಥವಾ ತೂಗಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫೀಸರು ತಮಗೆ ಅನುಕೂಲವಾದಾಗ್ಯೆ ಲಾಟುಗಳನ್ನು ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಬಾಯಿಷ್ ಮಾಡಿ ಆಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫೀಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು, ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ಒಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ವಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿ ದಾರನಿಗೆ 10 ದಿನಗಳು ವಾಯಿದೇ ನೋಟೀಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೊಡ್ಲಿ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್‌ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜು ಆಫೀಸರಿಂದ ದಸ್ತಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡೆಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತುಗಳ ಪ್ರಕಾರ ನಡೆಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಒಟ್ಟು ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಸೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್‌ಛಾರ್ಜ್ ಫಾರೆಸ್ಟ್ ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಇಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫೀಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜ್ ಫಾರೆಸ್ಟ್ ಆಫೀಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರು ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 23ನೇ ನವಂಬರ್ 1896.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೆಂಗಳೂರು ಸಿಟಿ. ಕಬ್ಬನ್ ಸಾಹೇಬರ ಪ್ಯಾಟೆಗೆ ಸೇರಿದ ಗುಂಮಟದಲ್ಲಿದ್ದು ಹೇವಾರ್ಸ್ ತರ್ಕೆ ಮೃತಪಟ್ಟ ಸುಲ್ತಾನಮ್ಮನೆಂಬವಳ ಬಾಬತು ಏರ್ಜ ಗುಮ್ಮಟದ 5ನೇ ನಂಬರ್ ಗಲ್ಲಿಯಲ್ಲಿರುವ ಮ್ಯುನಿಸಿಪಲ್ ನಂಬರ್ 3, 4, 5, 6, 7, 8 ಮತ್ತು ಲಂಗಡಾ ಹುಸೇನ್‌ಸಾಬಿ ಗಲ್ಲಿಯಲ್ಲಿ ಇರುವ ನಂಬರ್ 4 ಈ ನಂಬರ್‌ಗಳುಳ್ಳ ಮನೆಗಳನ್ನು ಏರ್ಜ ಮನೆಗಳ ಬಳಿಯಲ್ಲಿ ಬೆಂಗಳೂರು ತಾಲ್ಲೂಕು ಅಮಲ್ದಾರ್ ರೂಬರೂ ಸನ್ ಮಜಕೂರು ಡಿಸೆಂಬರ್ ಮಾಹೆ 14ನೇ ತಾರೀಖು ದಿವಿ 11 ಘಂಟೆಗೆ ಹರಾಜ್ ಮಾಡಲ್ಪಡುತ್ತೆಯಾಗಿ ಆ ಕಾಲಕ್ಕೆ ಸರಿಯಾಗಿ ಬಾಯಿಷ್ಮಾಡತಕ್ಕವರು ಹಾಜರಾಗಿ ಛಡಸವಾಲ್ಮಾಡಿ ತೆಗದುಕೊಳ್ಳಬಹುದು. ಆ ರೀತಿ ತೆಗದುಕೊಂಡವರು ಹರಾಜ್ ಖೈದಾದ ಕೂಡ್ಲೇ ಶೇಕಡಾ 25 ರೂಪಾಯಿಗಳ ಮೇರಿಗೆ ಡಿಪಾಜಿಟ್ ಹಾಜರ್ಮಾಡಬೇಕು. ತರುವಾಯ 15 ದಿವಸಗಳೊಳಗಾಗಿ ಪೂರಾ ಮೊಬಲಗು ಹಾಜರ್ಮಾಡಬೇಕು. ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರಿಂದ ಹರಾಜ್ ಮಂಜೂರಾಗಿ ಬಂದ ಬಳಿಕ ಮನೆಗಳು ಹರಾಜಿನಲ್ಲಿ ಪಡದವರ ಸುಪರ್ದು ಮಾಡಲಾದೀತು.

ಮೇಲೆ ನಮೂದಿಸಿರುವ ಡಿಪಾಜಿಟ್ ಮತ್ತು ಪೂರಾ ಮೊಬಲಗು ಹಾಜರ್ಮಾಡದೆ ತಪ್ಪಿದಲ್ಲಿ ಪುನಹಾ ಹರಾಜ್ ಮಾಡಲ್ಪಡುತ್ತೆ. ಲುಕ್ಸಾನ್ ಆವಲ್ಲಿ ಕಮ್ಮಿ ಬೀಳುವ ಮೊಬಲಗ್ಯೆ ಮೊದಲನೇ ಛಡಸವಾಲ್‌ದಾರನನ್ನು ಗುರಿಪಡಿಸಲ್ಪಡುತ್ತೆ.

ಎಂ. ಅಂಣಾಜಿರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ತಿಗಳರಪ್ಯಾಟೇಲಿರುವ ತಿಗಳರ ನಂಜುಂಡಪ್ಪನ ಮಗ ಮರಿಯಪ್ಪನ ವಿಷಯದಲ್ಲಿ—

ಸನ್ 1896—97ನೇ ಇಸವಿ ದಿವಾಳಿ ಕೇಸ್ ನಂಬರ್ 27.

ಹುಕುಂ.

ಮೇಲ್ಕಂಡ ಮರಿಯಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಮರಿಯಪ್ಪನನ್ನು ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತು ನೋಟಿಸ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಬೆಂಗಳೂರು ಗೊಲ್ಲರಪ್ಯಾಟೇಲಿರುವ ಗೊಲ್ಲರ ವೀರಂಣ 2ನೇ ಬೆಂಗಳೂರು ಕಂಟೋನ್ಮೆಂಟ್ ಜನರಲ್ ಬಜಾರಿನಲ್ಲಿರುವ ಷಾಪು ಮೈಗೊಂಡ ಮೊದಲಿಯಾರ್ರು 3ನೇ ಬೆಂಗಳೂರು ನಗರ್ತರಪೇಟೇಲಿರುವ ಸಂಪಂನಯ್ಯನವರ ನಂಜುಂಡಪ್ಪ 4ನೇ ಬೆಂಗಳೂರು ನಗರ್ತರಪೇಟೇಲಿರುವ ಕೋಟೆಮರಿಶಾಮಂಣ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮರಿಯಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1896ನೇ ಇಸವಿ ಅಕ್ಟೋಬರ್ 21ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬರಬೇಕಾದ ತೇದಿ ಮುದ್ದತು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಗೊಲ್ಲರ ವೀರಂಣ	139—13—6	..	ಬೆಂಗಳೂರು ಮುನ್ಸಿಫ್ ಕೋರ್ಟು 1894–95ನೇ ಇಸವಿ ಓ|| 925ನೇ ನಂ. ಡಿಕರಿ ಬಗ್ಗೆ.	
2	ಮೈಗೊಂಡ ಮೊದಲಿಯಾರ್ರು ..	50— 0—0	...	ಛಾಪಾ ತಮಸೂಕು ಬಗೆ.	
3	ಸಂಪಂನಯ್ಯನವರ ನಂಜುಂಡಪ್ಪ ..	20— 0—0	..	ಬೆಂಗಳೂರು ಸಬ್ ಜಡ್ಜಿಯವರ ಕೋರ್ಟು ಡಿಕರಿ ಬಗ್ಗೆ.	
4	ಕೋಟೆ ಮರಿಶಾಮಂಣ	820— 0—0	..	ಆಧಾರ ತಂಸೂಕು ಬಗೆ.	

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 162.

ಮೃತಪಟ್ಟ ಸೇಷಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಬೆಂಗಳೂರು ನಗರ್ತಪ್ಯಾಟೆಯಲ್ಲಿರುವ ಚಿಕ್ಕನಂಜಮ್ಮನು, ಮೃತಪಟ್ಟ ಸದರೀ ಸೇಷಪ್ಪನವರಿಗೆ. ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಡಿಟೋ ಸ್ಥಳದ ಚಿಕ್ಕನಂಜಮ್ಮನು ಡಿಟೋ ಬೆಂಗಳೂರು ನಗರ್ತಪ್ಯಾಟೆ ವಾಸಸ್ಥರಾಗಿ ಮೃತಪಟ್ಟ ಸೇಷಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚಿಕ್ಕನಂಜಮ್ಮನ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೇಷಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ನವಂಬರು ತಿಂಗಳ 27ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 177.

ಮೃತಪಟ್ಟ ಪ್ಲೀಡರ್ ಆನೆಕಲ್ಲು ವೆಂಕಟಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜಿದಾರಳು ಬೆಂಗಳೂರಲ್ಲಿರುವ ಕನಕವಲ್ಲಿಯಮ್ಮನು, ಮೃತಪಟ್ಟ ಸದರೀ ವೆಂಕಟಾಚಾರ್ಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಕನಕವಲ್ಲಿಯಮ್ಮನು ನೆಲಮಂಗಲ ವಾಸಸ್ಥರಾಗಿ ಮೃತಪಟ್ಟ ವೆಂಕಟಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಕನಕವಲ್ಲಿಯಮ್ಮನ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ-ಇದೆ.

ಸನ್ 1896ನೇ ಇಸವಿ ನವಂಬರ್ ತಿಂಗಳ 30ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರಸ್,
ಡಿಸ್ಟ್ರಿಕ್ಟ್ ಜಡ್ಜ್.

2 c

ತಾರೀಖು 21ನೇ ನವಂಬರ್ 1896.

ಗವರ್ನಮೆಂಟಿನಿಂದ ಸಾದರಾದ 7—8—96ನೇ ಮರ್ಕ್ಯಂ 1994—6 ಮಿ. 329ನೇ ನಂಬರ್ ಪ್ರೊಸಿಡಿಂಗ್ಸ್ ಪ್ರಕಾರ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನ್ 6ನೇ ಸೆಕ್ಷನ್ ನಿಯಮಗಳನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಇರುವ ಇದಕ್ಕೆ ಲಗತ್ತಾಗಿಡಲ್ಪಟ್ಟ ಸ್ಟೇಟ್‌ಮೆಂಟಿನಲ್ಲಿ ನಮೂದಾದ ಜಮೀನುಗಳು ಸರಕಾರದ ಕೆಲಸಕ್ಕೆ ಅಂದರೆ ಹೆಸರಘಟ್ಟ ವಾಟರ್ ಪ್ರಾಜೆಕ್ಟಿಗಾಗಿ ಬೇಕಾಗಿರುತ್ತೆಂತ ಇದರಿಂದ ಪ್ರಕಟಪಡಿಸಿ ಇದೆ.

ಸೀರಿಯಲ್ ನಂಬರ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ತೆಗದುಕೊಳ್ಳತಕ್ಕ ಜಮೀನಿನ ವಿಸ್ತೀರ್ಣ. ಖುಷ್ಕಿ.		ತರೀ.		ಬಾಗಾಯತು.		ಆಕಾರ.			ಷರಾ.
1	ದೊಡ್ಡಬಳ್ಳಾಪುರ.	ಕಸಬಾ.	ಗೊಂದಿಹಳ್ಳಿ.	ಆಂಜನೇಯಸ್ವಾಮಿ	1	1	26	..	..	..	..	2	5	..	
2				ಪಾಪಯ್ಯ ಬಿನ್ ಬೈಯಣ್ಣ	3	..	..	...	...	..	9	1	...	..	
3				ಮೆಳದಾಸಿ ಹೆಂಡತಿ ತಿಮ್ಮಿ	4	..	35	..	..	..	..	2	..	..	
4				ಮುನಿರಡ್ಡಿ ಬಿನ್ ಪಾಪೇಗವುಡ	5	..	28	...	..	..	..	1	5	8	
5				ಈರನಾಗರಡ್ಡಿ	7	9	7	..	..	..	..	14	8	10	
6				ಹನುಮಂತೈಯ್ಯ	19 ಪೈಕಿ	..	4	..	...	..	..	..	1	1	
7				ಪಾಪಯ್ಯ ಬಿನ್ ಬೈಯ್ಯಣ್ಣ	ಡಿಟ್ಟೋ	2	21	..	..	.	..	4	3	11	
8				ಮುನೆಪ್ಪ	ಡಿಟ್ಟೋ	3	34	..	..	..	..	6	8	..	
9				ಚಿನ್ನಾಗರಡ್ಡಿ	20 ಪೈಕಿ	3	16	..	..	..	..	5	4	..	
10				ಮುನಿರಡ್ಡಿ	ಡಿಟ್ಟೋ	2	8	..	..	..	..	3	4	..	
11				ನರಸಣ್ಣ	ಡಿಟ್ಟೋ	3	25	..	..	..	..	5	8	..	
12				ಮುತ್ತೂರು ನಂಜಮ್ಮ ವಗೈರೇರು	21	6	2	..	..	..	..	9	8		
13				ಈರನಾಗರಡ್ಡಿ	22	5	..	..	:	..	..	8	.	..	
14				ಮುನಿರಡ್ಡಿ	23 ಪೈಕಿ	2	..	..	..	..	..	3	8	7	
15				ಪಾಪಯ್ಯ ಬಿನ್ ಬೈಯಣ್ಣ	ಡಿಟ್ಟೋ	2	22	..	..	..	...	4	6	6	
16				ತಿಮ್ಮ ಬಿನ್ ಪಟ್ಲಗನ ತಿಮ್ಮ	ಡಿಟ್ಟೋ	3	5	..	..	..	..	5	8	..	
17				ಮುನಿರಡ್ಡಿ	26	12	10	..	..	..	...	25	..	..	
18				ಹೊನ್ನಪ್ಪ	27	1	15	...	..	..	..	2	4	.	
19				ಕೋನೇರಾಚಾರ್ ಕೃಷ್ಣಾಚಾರ್	28	6	8	..	..	..	..	9	8	..	
20				ತಿಮ್ಮ ಬಿನ್ ಪಟ್ಲಗನ ತಿಮ್ಮ	29	3	25	..	..	..	..	5	8	..	
21				ನಾಗಪ್ಪ	30	7	9	..	..	.	..	11	..	..	
22				ವಡ್ಡರ ಗುರುವ	31 ಪೈಕಿ	10	3	..	..	...	..	12	..	.	
23				ಸಂಜೀವ ಬಿನ್ ಹನುಮಂತ	ಡಿಟ್ಟೋ	5	15	..	.	..	..	6	12	..	
24				ನಾಗಪ್ಪ	ಡಿಟ್ಟೋ	2	28	..	..	..	..	3	4	..	
25				ಹೊನ್ನಪ್ಪ	32 ಪೈಕಿ	2	22	...	..	..	..	4	..	..	

26				ಪಾಪಯ್ಯ ಬಿನ್ ಬಯ್ಯಣ್ಣ	32 ಪೈಕಿ	3	8	..	..	..	..	5	..	..
27				ಸಂಜೀವ ಬಿನ್ ಹನುಮಂತ	33 ಪೈಕಿ	5	12	..	..	..	..	8	..	..
28				ತಿಮ್ಮ ಮತ್ತು ಮುನಿತಿಮ್ಮ	33 ಪೈಕಿ	1	31	..	..	..	..	2	12	..
29				ಚಿನ್ನಾಗರಡ್ಡಿ	33 ಪೈಕಿ	4	2	..	..	..	..	6	4	..
30				ನರಸಿಹ್ಮಾಚಾರ್	36	4	20	..	..	..	..	5	..	..
31				ಈರನಾಗರಡ್ಡಿ	37 ಪೈಕಿ	6	23	..	..	..	..	11	8	..
32				ಪಾಪಯ್ಯ ಬಿನ್ ಬೈಯಣ್ಣ	37 ಪೈಕಿ	3	33	..	..	..	..	6	8	..
33				ನರಸಿಹ್ಮಾಚಾರ್	38	..	..	..	..	3	2	30	..	..
34				ಮುನಿರಡ್ಡಿ	39	5	3	..	..	..	..	8	..	..
35				ಆಂಜನೇಯಸ್ವಾಮಿ	40	3	9	..	..	..	..	4	..	..
36				ಮುನಿರಡ್ಡಿ	41	4	35	..	..	..	..	6	8	..
37				ಶ್ಯಾಂಪುರದ ಕೃಷ್ಣಾಚಾರ್ ವಗೈರೆ ನಾಲ್ಕು ಜನ	42	5	13	..	.	..	..	7	..	..
38				ಮುಳಿರಾಶಿ ಹೆಂಡತಿ ತಿಮ್ಮಿ	44	1	29	..	..	..	..	2	4	..
39				ಮುನಿರಡ್ಡಿ	45	12	12	..	..	..	..	18	..	..
40				ಮಳದಾಶಿ ಬಿನ್ ತಳವಾರ	46	6	2	..	..	..	.	10	..	..
41	ದೊಡ್ಡಬಳ್ಳಾಪುರ.	ತೂಬಗೆರೆ.	ಗೊಂದಿಹಳ್ಳಿ.	ಮುನಿರಡ್ಡಿ	47 ಪೈಕಿ	2	32	..	..	..	..	4	4	..
42				ಸಂಜೀವಾ	47 ಪೈಕಿ	..	2	..	..	..	..	..	4	..
43				ಶಾಮಣ್ಣ ತಾತ ಲಕ್ಷ್ಮಣಭಟ್ಟ	48	5	28	..	..	..	..	9	8	..
44				ತಿಮ್ಮ ಬಿನ್ ಪಟ್ಲಗನ ತಿಮ್ಮ	49	8	38	..	..	..	..	15	..	..
45				ಪಾಪಯ್ಯ ಬಿನ್ ಬಯ್ಯಣ್ಣ	50	.	37	..	..	..	...	1	8	..
46				ತಿಮ್ಮರಡ್ಡಿ ಬಿನ್ ತಿಮ್ಮಪ್ಪ	51 ಪೈಕಿ	6	..	..	..	..	..	9	8	4
47				ಸಂಜೀವಾ	51 ಪೈಕಿ	2	24	..	..	..	..	4	3	5
48				ಮುನಿರಡ್ಡಿ	56	2	26	..	..	..	..	7	9	3
49				ಡಿಟೋ	61	6	3	..	..	..	..	8	..	..
				ಜಾಮ್ಲಾ ..		201	30	..	..	3	11	346	14	..
1				ನರಸಣ್ಣ	2	2	39	..	..	..	..	5	.	..
2				ಸದಾಶಿವಭಟ್ಟ, ಸುಬ್ರಾಯಸೋಮಯಾಜಿ, ವಾಸುದೇವಶಾಸ್ತ್ರಿ.	4	3	11	..	..	..	..	4	8	..
3			ಹಾಡೋನಹಳ್ಳಿ.	ಸಂಜೀವನಹೆಂಡತಿ ನಾಗಿ	5 ಪೈಕಿ	2	6	..	..	..	..	2	12	..
4				ಹನುಮಂತ ಬಿನ್ ತಿಗಳರ ವೆಂಕಟ	5 ಪೈಕಿ	1	14	..	..	..	..	1	12	..
5				ಹನುಮಂತ ಬಿನ್ ಪಿಳ್ಳಕದರ	6 ಪೈಕಿ	3	32	..	..	..	..	5	..	..
6				ಸೊಣ್ಣಪ್ಪ ಬಿನ್ ಚಿಕ್ಕವೀರ	6 ಪೈಕಿ	5	17	..	..	..	..	7	..	..
7				ನರಸಣ್ಣ	7	14	27	..	..	..	..	18	..	..
8				ಡಿಟೋ	8	6	17	..	..	..	..	9	..	..

ಸೀರಿಯಲ್ ನಂಬರ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರ್.	ತೆಗೆದುಕೊಳ್ಳತಕ್ಕ ಜಮೀನಿನ ವಿಸ್ತೀರ್ಣ. ಖುಷ್ಕಿ.		ತರೀ.		ಬಾಗಾಯತು.		ಆಕಾರ.			ಷರಾ.
9	ದೊಡ್ಡಬಳ್ಳಾಪುರ.	ಕಸಬಾ.	ಜಾಲಿಗೆ.	ಸಿದ್ದನಂಜಯ್ಯ ..	.. 12	1	34	..	..	..	..	3	8	..	
10				ಸೊಣ್ಣಪ್ಪ ..	.. 16 ಪೈಕಿ	2	35	..	..	..	..	4	..	..	
11				ವ್ಯಾಸಣ್ಣ ..	.. 16 ಪೈಕಿ	3	24	..	30	..	..	8	..	..	
12				ನರಸಣ್ಣ ..	.. 19	9	23	..	..	..	..	14	..	..	
13				ವಾಸುದೇವಾಚಾರ್ ಮತ್ತು ಕೃಷ್ಣಾಚಾರ್ ...	.. 20	3	26	..	..	..	..	5	8	..	
14				ನರಸಣ್ಣ ..	.. 21	9	15	..	..	..	..	14	..	..	
15				ಕಾಳಯ್ಯನ ಹನುಮಂತ ...	.. 22	7	13	..	..	..	..	11	..	..	
16				ಆಂಜನೇಯಸ್ವಾಮಿ ..	.. 35	2	24	..	..	..	..	4	..	..	
17				ತಳವಾರಹನುಮಂತ ..	.. 36	2	9	..	..	..	..	3	8	..	
18				ಸೀನಪ್ಪ ಬಿನ್ ಮಲ್ಲಣ್ಣ ..	.. 37	7	39	..	..	..	..	11	..	..	
19				ಸಿದ್ದನಂಜಯ್ಯ ..	.. 38	8	28	..	..	..	..	13	..	..	
20				ಕುದುರೆಮುನಿಯ ..	.. 39 ಪೈಕಿ	2	32	..	..	..	..	4	1	6	
21				ಕಾಳ ಬಿನ್ ಈರ ..	.. 40 ಪೈಕಿ	2	19	..	..	..	..	4	1	2	
22				ಕಕ್ಕೆಹಳ್ಳಿ ನರಸಿಹ್ಮ ..	... 41	2	3	..	..	..	..	3	..	..	
23				ನರಸಣ್ಣ ...	.. 43 ಪೈಕಿ	4	34	..	..	..	..	8	6	..	
24				ಕಾಳಾ ಬಿನ್ ಈರ ..	.. 43 ಪೈಕಿ	2	19	..	..	..	..	4	3	8	
25				ಡಿಟೋ ..	.. 44	2	31	..	..	..	..	3	8	..	
26				ದೊಂಬಿದಾಸರ ವೆಂಕಟ ..	.. 48	1	35	..	..	..	..	3	8	8	
27				ಸುಬ್ಬ ..	. 51	6	8	..	..	..	..	10	..	..	
28				ಮಲ್ಲರೆಡ್ಡಿ ..	.. 52	..	35	..	..	..	..	1	11	10	
29				ನರಸಣ್ಣ ..	.. 80	5	21	..	..	..	6	8	8	..	
30				ಡಿಟೋ. ..	.. 10	21	24	..	..	..	...	26	..	..	
31				ಕಾಳಯ್ಯನ ಹನುಮಂತ ...	.. 24	6	5	..	..	..	..	8	8	..	
32				ಕಾಳಾ ಬಿನ್ ಈರ ..	.. 25	15	11	..	..	..	..	21	..	..	
33				ಸೀತಾರಾಮಯ್ಯ ..	.. 26	6	15	..	..	..	..	9	..	..	
34				ತೋಟಿದ್ಯಾವಣ್ಣ ...	.. 27 ಪೈಕಿ	5	4	..	..	..	..	6	12	..	
35				ದೊಂಬಿದಾಸರನಂಜ ..	.. 32	11	21	..	..	..	..	16	..	..	
36				ರಂಗಣ್ಣ ..	.. 27 ಪೈಕಿ	14	32	..	..	..	..	19	4	..	
37				ನರಸಿಹ್ಮಾಚಾರ್ ಬಿನ್ ಅಹೋಬಳಾಚಾರ್ ..	.. 28	7	37	..	..	..	..	12	.	:	

679

38	ದೊಡ್ಡಬಳ್ಳಾಪುರ.	ಕಾಕೋಳು.	ಹಾರೋಹಳ್ಳಿ.	ನಾಗಪ್ಪ ಬಿನ್ ಬುಸ್ಸಿಗ	...	..	29	7	3	..	..	..	..	12	..	...
39				ಹನುಮಂತ ಬಿನ್ ನಡುಬಿಗ	..	..	31 ಪೈಕಿ	9	2	..	..	..	..	11	12	...
40				ನಾಗಪ್ಪ ಬಿನ್ ಬುಸ್ಸಿಗ	..	..	ಡಿಟ್ಟೋ	6	18	..	..	..	..	8	4	...
41				ಮರಿರಾಜಪ್ಪ	..	..	33 ಪೈಕಿ	8	16	..	..	..	...	10	...	.
42				ಮುದ್ದ ಬಿನ್ ಸಿದ್ದ	..	..	ಡಿಟ್ಟೋ	3	18	..	..	..	..	4	...	.
43				ವ್ಯಾಸಣ್ಣ	..	..	81	11	11	...	..	..	..	16	..	.
44				ನರಸಿಂಹಾಚಾರ್ ಬಿನ್ ಅಹೋಬಲಾಚಾರ್	..	..	82	8	..	...	..	..	..	12	...	..
45				ಮುತ್ತೂರು ಮುನಿಯ	..	..	83	7	36	..	..	..	..	12	..	..
46				ನರಸಿಂಹಾಚಾರ್	..	..	84	6	13	..	..	..	..	11	..	..
47				ನರಸಣ್ಣ	..	..	85	21	..	..	..	..	..	29	..	...
48				ಗಿಡ್ಡ ತಿಮ್ಮ	..	..	86 ಪೈಕಿ	6	10	..	..	..	..	8	12	..
49				ರಡ್ಡಿಗರ ಬೈಲಗ	..	..	ಡಿಟ್ಟೋ	4	38	..	..	..	..	6	12	..
50				ಕೃಷ್ಣೇಗವುಡ	..	..	ಡಿಟ್ಟೋ	5	17	..	..	..	..	7	8	..
51				ಸಿದ್ದನಂಜಯ್ಯ	..	..	87 ಪೈಕಿ	10	28	..	..	..	...	14	..	..
52				ಸಿರಿಹನುಮ	..	...	88	10	21	..	..	..	..	14	.	...
				ಜುಮ್ಲಾ		..	...	347	10	..	30	..	6	491	..	10
1			ಚಿಕ್ಕದೇವನಪುರ.	ಹುಚ್ಚ ಬಿನ್ ಮಲಿಯ	..	..	60 ಪೈಕಿ	3	38	..	...	..	..	5	14	10
2				ಕೆಂಪಾ ಬಿನ್ ಸಿಂಗ	..	..	36 ಪೈಕಿ	4	31	..	..	..	..	7	12	..
3				ಡಿಟ್ಟೋ	..	..	37 ಪೈಕಿ	..	34	..	..	..	..	1		
4				ಸೀನಪ್ಪ	..	..	30 ಪೈಕಿ	3	16	..	..	..	..	7	..	2
5				ಮುನಿ ಮತ್ತು ಹನುಮಂತ	..	..	ಡಿಟ್ಟೋ	2	..	...	..	..	..	4	4	..
6				ಸುಬ್ಬಣ್ಣ ಬಿನ್ ರಾಮಣ್ಣ	..	..	34	..	28	..	..	..	..	1	...	.
7				ವೆಂಕಟ	..	..	35 ಪೈಕಿ	1	25	..	..	..	..	2	9	8
8				ಅಂದಾನಪ್ಪ	..	..	ಡಿಟ್ಟೋ	4	1	..	..	..	..	6	12	...
9				ಸೀನಪ್ಪ	..	..	ಡಿಟ್ಟೋ	3	..	..	..	..	..	5	..	1
10				ಸೊಣ್ಣ ಬಿನ್ ಚಿಕ್ಕವೀರ	..	..	36 ಪೈಕಿ	2	29	..	..	..	..	4	4	...
11				ಡಿಟ್ಟೋ	..	..	37 ಪೈಕಿ	1	23	..	..	..	..	2	4	..
12				ಮುನಿಯ ಬಿನ್ ಮರಿಯ	..	..	ಡಿಟ್ಟೋ	1	24	..	..	..	..	2	8	...
13				ಅಂದಾನಪ್ಪ	..	..	ಡಿಟ್ಟೋ	1	23	..	..	..	..	2	4	..
14				ನಂಜನ ಹೆಂಡತಿ ಸೊಣ್ಣೆ	..	..	ಡಿಟ್ಟೋ	2	12	..	..	..	..	3	8	..
15				ಸೀನಪ್ಪ	..	..	ಡಿಟ್ಟೋ	..	16	..	..	..	..	..	8	..
16				ತಳವಾರ ತಿಮ್ಮ	..	..	38	3	18	..	..	..	..	5	..	..
17				ದಾಸೇನಹಳ್ಳಿ ಚೆನ್ನಪ್ಪ	..	..	52	13	37	..	..	..	..	16	..	..
18				ಭೀಮಣ್ಣ	..	..	53 ಪೈಕಿ	4	2	..	..	..	..	4	12	..

ಸೀರಿಯಲ್ ನಂಬರ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ತೆಗದುಕೊಳ್ಳತಕ್ಕ ಜಮೀನಿನ ವಿಸ್ತೀರ್ಣ.						ಆಕಾರ.			ಷರಾ.
						ಖುಷ್ಕಿ.		ತರೀ.		ಬಾಗಾಯತು.					
19				ಸೀನಪ್ಪ	53 ಪೈಕಿ	5	17	..	..	..	..	6	8	..	
20				ಕೆಂಪಣ್ಣ	54 ಪೈಕಿ	5	20	..	..	..	..	7	4		
21				ಮತ್ತಿಗೆರೆ ಕೆಂಪ	55	9	19	..	..	..	..	13	.	.	
22				ಸುಬ್ಬಣ್ಣ ಬಿನ್ ರಾಮಣ್ಣ	56	5	10	..	..	..	..	8	..	..	
23				ಚಿಕ್ಕ ಬಿನ್ ಕರಿಯ	57	10	23	..	..	..	..	18	..	..	
24				ಮುನಿಯ ಬಿನ್ ಚಿಕ್ಕ ಬೈರ	58 ಪೈಕಿ	5	24	..	..	..	..	9	4	...	
25				ಅನ್ನಪೂರ್ಣಮ್ಮ	ಡಿಟೋ	2	28	..	..	..	..	4	4	..	
26				ಮುನಿ ಮತ್ತು ಹನುಮಂತ	ಡಿಟೋ	2	32	..	..	..	..	4	12	..	
27				ಮುನಿಯ ಬಿನ್ ಹನುಮಂತ	ಡಿಟೋ	2	10	..	..	..	..	3	12	...	
28				ಪಟ್ಟದ ನಾರಣಾಚಾರ್	59 ಪೈಕಿ	2	..	..	..	..	...	3	4	..	
29				ಹನಿಯೂರು ಸುಬ್ಬಯ್ಯ ಮತ್ತು ಇತರರು ..	ಡಿಟೋ	2	38	..	..	..	..	4	12	..	
30	ದೊಡ್ಡಬಳ್ಳಾಪುರ.	ತೂಬಗೆರೆ.	ಚಿಕ್ಕತುಮಕೂರು.	ಹೊಳವನೂರು ಅಪ್ಪಣ್ಣಾಚಾರ್	ಡಿಟೋ	2	16	..	..	..	..	4	..	..	
31				ಮುನಿ ಮತ್ತು ಹನುಮಂತ	60 ಪೈಕಿ	..	3	..	..	..	..	..	1	10	
52				ತಳವಾರ ತಿಮ್ಮ	61 ಪೈಕಿ	3	11	...	...	..	..	4	13	..	
33				ಗೋಪಾಲಸ್ವಾಮಿ	62	3	24	..	..	..	..	5	8	..	
34				ಬೀರಾ ಬಿನ್ ಮಲಿಯ	63 ಪೈಕಿ	1	1	..	..	..	..	1	10	8	
35				ಚಿಕ್ಕ ಬಿನ್ ಕರಿಯ	ಡಿಟೋ	2	2	..	..	..	..	3	5	6	
36				ಕೆಂಪ ಬಿನ್ ಸಿಂಗ	ಡಿಟೋ	..	6	..	..	...	..	..	3	10	
37				ಹನುಮಂತ ಬಿನ್ ವೀರಣ್ಣ	69 ಪೈಕಿ	3	34	..	..	..	..	6	4	7	
38				ಲಕ್ಕ ಬಿನ್ ಮುರಾರಿ	70 ಪೈಕಿ	..	35	..	..	..	..	1	4	..	
39				ಸುಬ್ಬಣ್ಣ ಬಿನ್ ರಾಮಣ್ಣ	ಡಿಟೋ	1	24	..	..	..	..	2	12	..	
40				ತಳವಾರ ತಿಮ್ಮ	71	3	16	..	..	..	..	5	8	...	
41				ಭಾಗೀರತಮ್ಮ	72	9	31	..	..	..	..	15	..	..	
42				ಕೆಂಪಣ್ಣ ಬಿನ್ ಸಿಂಗಪ್ಪ	73	4	6	..	..	..	..	6	..	..	
43				ಸುಬ್ಬಣ್ಣ ಬಿನ್ ರಾಮಣ್ಣ	78 ಪೈಕಿ	..	25	..	..	..	..	..	11	7	
44				ಯಲ್ಲಗನ ಹೆಂಡತಿ ದಾಸಿ	79 ಪೈಕಿ	5	12	..	..	..	...	8	2	3	
45				ಸಿದ್ದಾ ಬಿನ್ ತಿಮ್ಮ	ಡಿಟೋ	1	32	..	..	..	..	2	12	..	
46				ನಿಡುವಂದದ ಸಿದ್ದ	81	1	29	..	..	..	..	2	8	..	
47				ಗುರುವ	82	5	4	..	..	..	..	7	14	6	

48	ದೊಡ್ಡಬಳ್ಳಾಪುರ	ಕಸಬಾ	ಚಿಕ್ಕತುಮಕೂರು	ಸಿದ್ದಾ ಬಿನ್ ತಿಮ್ಮ	83 ಪೈಕಿ	3	15	..	..	..	..	5	4	.
49				ಸುಬ್ಬಣ್ಣ ಬಿನ್ ಬಚ್ಚಣ್ಣ	74	18	1	..	..	..	..	28	...	...
50				ಸುಬ್ಬಣ್ಣ ಬಿನ್ ರಾಮಣ್ಣ	76	9	7	..	..	..	..	12	...	..
51				ಕುಳ್ಳಾ ಬಿನ್ ದಾಸಿ	83 ಪೈಕಿ	3	38	..	..	..	..	6	1	3
52				ಆಂಜನೇಯಸ್ವಾಮಿ	84 ಪೈಕಿ	1	22	..	..	..	..	2	10	10
53				ಕುಳ್ಳಾ ಬಿನ್ ದಾಸಿ	85 ಪೈಕಿ	3	36	..	..	...	..	5	12	..
54				ಸೀನಪ್ಪ	85 ಪೈಕಿ	2	12	..	..	...	..	3	6	9
55				ಸುಬ್ಬಣ್ಣ ಬಿನ್ ಬಚ್ಚಣ್ಣ	101 ಪೈಕಿ	8	26	..	..	..	..	11	11	10
56				ಚಿಕ್ಕಾ ಬಿನ್ ಕರಿಯ	39 ಪೈಕಿ	1	6	..	..	..	..	2	...	..
57				ರಾಜಯ್ಯ ಬಿನ್ ದೊಡ್ಡೀರ	39 ಪೈಕಿ	3	6	..	..	..	..	5	4	..
58				ಮುನಿಯ ಬಿನ್ ಪಾಪ	39 ಪೈಕಿ	3	6	..	..	..	..	5	4	..
59				ಕ್ರಿಷ್ಣರಾವ್ ಬಿನ್ ಮುದ್ದೂರಾವ್	39 ಪೈಕಿ	2	6	..	..	..	..	3	8	..
60				ತಿಳಂಭೈರಾ	40	14	..	..	..	..	..	19	...	..
61				ಮುನಿಯ ಬಿನ್ ಮರಿಯ	41	3	33	..	..	..	..	5	..	...
62				ತಿಮ್ಮ	43	2	14	..	..	..	..	4	...	..
63				ರಾಜಘಟ್ಟದ ಹನುಮಂತ	44	4	14	..	..	..	..	7	8	...
64				ಚನ್ನಪ್ಪನ ಮುನಿಯ	45 ಪೈಕಿ	4	17	..	..	..	..	8	..	..
65				ಸಿದ್ದಾಗೋಮಿ	46	35	23	..	..	..	..	42	..	..
66				ತಳವಾರ ಮುನಿವೆಂಕಟ	47 ಪೈಕಿ	8	22	..	...	..	..	13	..	..
67				ಆಂಜನೇಯಸ್ವಾಮಿ ಮತ್ತು ಗೋಪಾಲಸ್ವಾಮಿದೇವರ ಅರ್ಚಕ ವೆಂಕಟಾಚಲಯ್ಯ ..	47 ಪೈಕಿ	4	...	..	..	..	..	6	..	..
68				ಹುಚ್ಚೀರಗವುಡ	47 ಪೈಕಿ	5	18	..	..	..	..	8	4	...
69				ಜೀರಾ ಬಿನ್ ಮಲಿಯಾ	49	27	9	..	..	..	..	26	.	..
70				ಸೀನಪ್ಪ	51 ಪೈಕಿ	25	33	..	..	..	..	32	..	..
71				ಚಿಕ್ಕಹನುಮಂತ	51 ಪೈಕಿ	2	3	..	..	..	..	2	8	...
72				ಭಂಡೀಮುನಿಯ	51 ಪೈಕಿ	2	31	..	..	..	..	3	8	..
73				ಮುನಿಯ ಬಿನ್ ಹನುಮಂತ	87 ಪೈಕಿ	1	17	..	..	..	..	2	4	..
74				ನಿಡುವಂದದಸಿದ್ದಾ	87 ಪೈಕಿ	1	38	..	..	..	..	3	4	..
75				ಜಂಗಳೂರು ದಾಸಾ	87 ಪೈಕಿ	5	28	..	..	..	..	9	.	...
76				ತಿರುಮಳಾ, ಕೊಂಡ	87 ಪೈಕಿ	1	22	..	..	..	..	2	8	...
77				ಕೋಡಿಪಳ್ಳಿ ಚನ್ನವೀರಪ್ಪ	96	33	23	..	..	..	..	48	.	...
78				ಸೀನಪ್ಪ	98 ಪೈಕಿ	7	35	..	...	..	..	12	..	...
79				ನಿಬ್ಬೂರು ಕೆಂಪ	98 ಪೈಕಿ	5	32	..	..	..	..	8	12	...
80				ತುಮಕೂರು ಸುಬ್ಬ	98 ಪೈಕಿ	6	..	..	..	..	..	9	..	...
81				ಹನುಮಂತರಾಯ ಬಿನ್ ನಂಜಾ	98 ಪೈಕಿ	8	27	..	..	..	..	13	4	..
				ಜುಮ್ಲಾ ..		434	29	..	..	..	..	619	3	6

ವಿ. ಎನ್. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟ್.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ.—ಸ್ 1896—97ನೇ ಸಾಲಿಗೆ (ಅಂದರೆ 1896ನೇ ಜುಲೈ ಗುರೆ) ಲಾಗಾಯತು 1897ನೇ ಜೂನ್ 30ರ ವರಿಗೆ) ಮದ್ದಗಿರಿ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಮದ್ದಗಿರಿ ತಾಲ್ಲೂಕು ಕಚೇರಿಯಲ್ಲಿ 1896ನೇ ಡಿಸೆಂಬರ್ 28ನೇ ತಾರೀಖಿನ ಬೆಳಗ್ಗೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರು ಅಥವಾ ಶಿರಸ್ತೇದಾರು ಹರಾಜು ಮಾಡಿಸುತ್ತಾರೆ.

3. ಖಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು; ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಖಡಸವಾಲ್ದಾರರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಅಮಲ್ದಾರರಿಂದ ಖಡಸವಾಲ್ದಾರರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಖಡಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಯಂತಾಗುವ ಲೋಕಲ್‌ಸೆಸ್ ದೇಖೀಲ್ ಖಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಯಿಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಹಾಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡದಿದ್ದರೂ ಅಥವಾ ಬಾಕಿ ಮೊಬಲಗು ಪಾವತಿ ಮಾಡದಿದ್ದರೂ ಸದರೀ ಹಕ್ಕುದಾರಿಯು ಖಡಸವಾಲ್ದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಟ್ಟು ಪುನಹ ವಿಕ್ರಯಿಸಲ್ಪಡುತ್ತೆ.

6. ಇಜಾರದಾರು ಹಿಡುವಳಿ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರು ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರದಾರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರದಾರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರದಾರು ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರದಾರು ಆಕ್ಷೇಪಣೆ ತರವೇನು ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರದಾರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಯಿಷ್ಟುಮಣ ಕಲ್ಲುಗಳು ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಶೀಲ್‌ಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್ದಾರಿಂದ ಮಾಫಿ ಲೈಸೆನ್ಸನ್ನು ಪಡಿಯದೆ ಕಲ್ಲುಗಳನ್ನು ಇಜಾರದಾರು ಸಾಗಿಸಕೂಡದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ಸ್ 1878ನೇ ಇಸವಿ ಫಾರೆಸ್ಟ್ ರೂಲ್ಸ್ 37ನೇ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶಿವಮೊಗ್ಗಾ ಡಿಸ್ಟ್ರಿಕ್ಟ್ ಶಿವಮೊಗ್ಗಾ ತಾಲ್ಲೂಕು ಬೆಂಕಿಪುರದ ಟ್ರಾವಲರಸ್ ಬಂಗ್ಲೆ ಬಳಿ ಭದ್ರಾನದಿಯಲ್ಲಿ ಈ ಕೆಳಗೆ ನಮೂದಿಸಿರುವ ನಾಟಾ ತೇಲಿಬಂದು ಸಿಕ್ಕಿ ಇರುತ್ತೆ.

ಮೇಲ್ಕಂಡ ನಾಟಾಕ್ಕೆ ಹಕ್ಕುವುಳ್ಳವರು ಈ ಸ್ತಿಹಾರ್ ತಾರೀಖು ಲಾಗಾಯತು ಎರಡು ತಿಂಗಳ ವಳಗಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕನ್ಸರ್ವೇಟರವರ ರೂಬರೂ ಖುದ್ದಾಗಿ ಆಗಲಿ ಅಥವಾ ಕ್ರಮವಾಗಿ ಅಧಿಕಾರ ಪಡೆದ ಮುತಾಲೀಕನ ಮೂಲಕವಾಗಲಿ ಹಾಜರಾಗಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕು. ಆ ತಾರೀಖು ನಂತರ ಬರುವ ಹಕ್ಕುದಾರಿಯನ್ನು ಅಂಗೀಕರಿಸದೆ ಸರಕಾರದ ತರಫ್ ಸದರೀ ನಾಟಾವನ್ನು ಹರಾಜು ಮಾಡಲ್ಪಡುವದು.

ನಾಟಾ ತಪಸೀಲ್.

ನಂಬರ್.	ಜಾತಿ.	ಆಳತೆ ಲಾಂಬಿ ಅಡಿ.	ಸುತ್ತಳತೆ ಅಡಿ.	ಷರಾ.
1	ಸಾಗುವಾನಿ ನಾಟಾ ..	14 ಅಡಿ, 4 ಅಂಗುಲ	7 ಅಡಿ, 8 ಅಂಗುಲ	

ತಾರೀಖು 24ನೇ ನವಂಬರ್ 1896.

ಸ್ನ 1890ನೇ ಇಸವಿ ಫಿಬ್ರವರಿ ತಾರೀಖು 15ನೇ ಮೈಸೂರ್ ಗೆಜೆಟ್ 2ನೇ ಭಾಗದ ಪುಟದಲ್ಲಿ ಪ್ರಾಯಿಷ್ ಮಾಡಿರುವ ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ನೋಟಿಫಿಕೇಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಪೆಂಕಿಯಿಂದ ರಕ್ಷಿಸಲ್ಪಟ್ಟ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳನ್ನ 1897ನೇ ಇಸವಿ ಜನವರಿ 1ನೇ ತಾರೀಖು ಲಾಗಾಯತು ಮೇ ಆಖೈರ್ ವರಿಗೂ ಬಂದ್ ಮಾಡಲ್ಪಟ್ಟಿರುತ್ತೆ. ಅಂಬುಗಾರರಿಗೂ, ಷಿಕಾರಿಗಳಿಗೂ, ಪೇಟೆಗಾರರಿಗೂ ಸಹ ಲೈಸೆನ್ಸ್ ಕೊಡಲ್ಪಡುವದಿಲ್ಲ. ರೂಲ್ಸ್ ಅತಿಕ್ರಮಿಸಿ ಪ್ರವೇಶಿಸುವವರನ್ನ ಕ್ರಮವಾಗಿ ಸಿಕ್ಷಿಸಲ್ಪಡುತ್ತೆ.

ನಂಭರ್.	ಫಾರೆಸ್ಟುಗಳ ಹೆಸರು.	ತಾಲ್ಲೂಕುಗಳ ಹೆಸರು.
1	ಶಂಕರಗುಡ್ಡಾ, ಭೂತನಬೈಲ್ ಫಾರೆಸ್ಟು	ಶಿವಮೊಗ್ಗಾ, ತೀರ್ಥಹಳ್ಳಿ
2	ಪುರದಾಳ	ಶಿವಮೊಗ್ಗಾ
3	ಕುಂಚೇನಹಳ್ಳಿ	ಡಿಟ್ಟೋ
4	ಅನುಪಿನಕಟ್ಟೆ ಪ್ಲಾಂಟೇಷನ್	ಡಿಟ್ಟೋ
5	ಸಕ್ರೆಬೈಲ್ ಫಾರೆಸ್ಟು	ಡಿಟ್ಟೋ
6	ಡಿಟ್ಟೋ ಪ್ಲಾಂಟೇಷನ್	ಡಿಟ್ಟೋ ತೀರ್ಥಹಳ್ಳಿ
7	ಚೋರನಡಿಹಳ್ಳಿ	ಶಿವಮೊಗ್ಗಾ
8	ಆಯನೂರು ಪ್ಲಾಂಟೇಷನ್	ಡಿಟ್ಟೋ
9	ಆಲಕೊಳ ಡಿಟ್ಟೋ	ಡಿಟ್ಟೋ
10	ಕರ್ಲಕೊಪ್ಪ ಸಂಡಲ್ ಪ್ಲಾಂಟೇಷನ್	ಡಿಟ್ಟೋ
11	ಉಂಬಳಿ ಬೈಲ್ ಹುಣಸೆಕಟ್ಟೆ	ಡಿಟ್ಟೋ
12	ಆಲದಹಾರ	ಡಿಟ್ಟೋ
13	ಕುಂಶಿ	ಡಿಟ್ಟೋ
14	ಮಸರೂರು	ಡಿಟ್ಟೋ
15	ಕುಕ್ಕವಾಡಾ ಉಬ್ರಾಣಿ	ನಗರ
16	ಚನ್ನಗಿರಿ ಪ್ಲಾಂಟೇಷನ್	ಶಿವಮೊಗ್ಗಾ, ಚನ್ನಗಿರಿ, ತರೀಕೆರೆ
17	ತೆಲಗಡ್ಡೆ, ಅರತೆಲಗಡ್ಡೆ	ಚನ್ನಗಿರಿ
18	ಚಟ್ನದಕುರ್ಲಿ	ಸೊರಬ
19	ಸಿದ್ದೇಹಳ್ಳಿ ಪ್ಲಾಂಟೇಷನ್	ಡಿಟ್ಟೋ
20	ಹಳೆಸೊರಬ ಡಿಟ್ಟೋ	ಡಿಟ್ಟೋ
21	ಚಂದ್ರಗುತ್ತಿ	ಡಿಟ್ಟೋ
22	ಕವಡಿ	ಡಿಟ್ಟೋ
23	ಕವಲಿ	ಡಿಟ್ಟೋ
24	ತೊಗರಶಿ	ಶಿಕಾರಿಪುರ
25	ಬಸವನಂದಿಹಳ್ಳಿ	ಡಿಟ್ಟೋ
26	ಕಾಳೇನಹಳ್ಳಿ ಪ್ಲಾಂಟೇಷನ್	ಡಿಟ್ಟೋ
27	ಗಂಗವನಸರ ಸ್ಟೇಟ್ ಫಾರೆಸ್ಟು ಮತ್ತು ಹಾರೋಗೊಪ್ಪ ಯಿರೆ ಕಟ್ಟೆ ಕಾಪಿನ ಜಾಗಾ	ಡಿಟ್ಟೋ ಹೊನ್ನಾಳಿ
28	ಕರಡಿಬೆಟ್ಟ	ಡಿಟ್ಟೋ ಶಿವಮೊಗ್ಗಾ
29	ಚಂದ್ರಕಲ	ಸಿಕಾರಿಪುರ
30	ಬೆಳಂದೂರು	ಡಿಟ್ಟೋ
31	ಮಲಂದೂರು	ಸಾಗರ
32	ಮಲೆಬೆನ್ನೂರು	ಹೊನ್ನಾಳಿ, ದಾವಣಗೆರೆ

ಸಿ. ನಾರಾಯಣರಾವ್,
ಡೆಪ್ಯುಟಿ ಕನ್ಸರ್ವೇಟರ್.

ನಗರದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸ್ನ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 61.

ಮೃತಪಟ್ಟ ಚಟ್ನನಹಳ್ಳಿ ನಾಗಪ್ಪ ಯಂಬವರ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಶಿವಮೊಗ್ಗಾ ತಾಲ್ಲೂಕು ಕಸಬಾ ಮಾಗಣಿ ಅನುಪಿನಕಟ್ಟೆ ವಾಸಸ್ಥಳು ಚನ್ನಮ್ಮನು, ಮೃತಪಟ್ಟ ಸದರೀ ನಾ
ಗಪ್ಪ ಯಂಬವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಅನುಪಿನಕಟ್ಟೆ ಸ್ಥಳದ ಚನ್ನಮ್ಮ ಯಂಬವಳು, ಅನುಪಿನಕಟ್ಟೆ ವಾಸ
ಸ್ಥರಾಗಿ ಮೃತಪಟ್ಟ ನಾಗಪ್ಪ ಯಂಬವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ
ಸ್ನ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಪ್ರಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚನ್ನಮ್ಮ ಯಂಬವಳ ಅರ್ಜಿಯನ್ನು ಸ್ನ 1897ನೇ ಇಸವಿ ಜನವರಿ ತಿಂಗಳು ತಾರೀಖು 15
ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಪ್ಪ ಯಂಬವ
ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ನ 1896ನೇ ಇಸವಿ ಡಿಸೆಂಬರ್ ತಿಂಗಳ 1ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಿ ಅಯ್ಯರ್, ಡಿಸ್ಟ್ರಿಕ್ಟು ಜಡ್ಜು.

ಮೈಸೂರ್ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 3ನೇ ಡಿಸೆಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಲ್ಪಟ್ಟ ಪಂಕಿಯಿಂದ ತಡೆದ ಗವರ್ನಮೆಂಟ್ ಫಾರೆಸ್ಟ್ ವ ಪ್ಲಾಂಟೇಷನ್‌ಗಳು ಷಿಕಾರಿ ಮತ್ತು ಇತರ ಬ್ಯಾಟೆಗಳಿಗೆ 1897ನೇ ಇಸವಿ ಮೇ ಆಖೈರ್ ವರಿಗೆ ಬಂದ್ ಮಾಡಲ್ಪಟ್ಟಿರುತ್ತದೆ. ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರೀ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರ ಲಿಖಿತಮೂಲಕವಾದ ಹುಕುಂ ಪಡೆಯದೆ ಪ್ರವೇಶ ಮಾಡಕೂಡದು.

ತಾಲ್ಲೂಕು.	ಫಾರೆಸ್ಟ್ ವ ಪ್ಲಾಂಟೇಷನ್‌ಗಳ ಹೆಸರು.
ಹುಣಸೂರು ತಾಲ್ಲೂಕು	ವೀರನಹೊಸಹಳ್ಳಿ ಫಾರೆಸ್ಟ್
	ನಾಯಿಹಳ್ಳ ಸಂದಲ್ ಪ್ಲಾಂಟೇಷನ್
	ಗುರುಪುರ ಡಿಟೋ
	ಪಂಚವಳ್ಳಿ ಡಿಟೋ
	ದೊಡ್ಡಹರವೆ ಪ್ರೊಡಕ್ಷನ್ ಬ್ಲಾಕ್
	ಆನೇಚೌಕೂರು ಡಿಟೋ
	ವೀರನಹೊಸಹಳ್ಳಿ ಡಿಟೋ
ಹೆಗ್ಗಡದೇವನಕೋಟೆ ತಾಲ್ಲೂಕು	ಮೇಟಿಕುಪ್ಪೆ ಫಾರೆಸ್ಟ್
	ಕಾಕನಕೋಟೆ ಡಿಟೋ
	ಬೇಗೂರು ಡಿಟೋ
	ಐನೂರು ಮಾರೀಗುಡಿ ಡಿಟೋ
	ಕಾಕನಕೋಟೆ ಪ್ಲಾಂಟೇಷನ್
	ಮಾಸ್ತಿಗುಡಿ ಡಿಟೋ
	ಮಂಚೆಗವ್ವುಡನಹಳ್ಳಿ ಡಿಟೋ
	ಹಂಪಾಪುರ ಡಿಟೋ
ಗುಂಡ್ಲು ತಾಲ್ಲೂಕು	ಬೇರಂಬಾಡಿ ಫಾರೆಸ್ಟ್
	ಭಂಡಿಪುರ ಡಿಟೋ
	ಮದ್ದೂರು ಅಳಲೇ ಪ್ಲಾಂಟೇಷನ್
	ಹೊಂಗಹಳ್ಳಿ ಸಂದಲ್ ಪ್ಲಾಂಟೇಷನ್
ಚಾಮರಾಜನಗರದ ತಾಲ್ಲೂಕು	ಚಾಮರಾಜನಗರದ ಫಾರೆಸ್ಟ್

ಟಿ. ಅಬ್ದುಲ್‌ಕರೀಂ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್.

ಕಡೂರು ಡಿಸ್ಟ್ರಿಕ್ಟು.

ಕೊಪ್ಪ ತಾಲ್ಲೂಕು.

ಇಸ್ತಿಹಾರ್‌ನಾಮಾ.

19ನೇ ನವಂಬರ್ ಸ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಎಲಿಮೆಲಾಳು ಆಡಿಗೆ ಬೈಲ್ ಗ್ರಾಮದಲ್ಲಿ ಇರುವೆ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಗೆ ದರಖಾಸ್ತು ಬಂದಿರೋಣದರಿಂದ ಸ್ 1897ನೇ ಇಸವಿ ಜನವರಿ ತಾರೀಖು 8ನೇ ಶುಕ್ರವಾರ ಹಗಲು 11 ಘಂಟೆಗೆ ಕಡೂರು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಡಿಸಿ ಕೊಪ್ಪ ತಾಲ್ಲೂಕು ಅಮಲ್‌ದಾರ್ರ ರೂಬರೂ ಹರಿಹರಪುರ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜ್ ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ಒಳಪಟ್ಟು ಬಹಿರಂಗವಾದ ಹರಾಜ್ ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಛದರಖಾಸ್ತುದಾರನಿಗೆ ಮೂರು ವಾರಗಳೊಳಗೆ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಜವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್‍ಯಾರಾದರೂ ಪಡೆದರೆ ದರಖಾಸ್ತುದಾರನ ಷುರೂ ಕೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮುನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇಲೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರು ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಅಖೈರ್ ಛಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮ ಯಕ್ಕೆ ಮುಂಚೆಯೇ ಅಖೈರ್ ಛಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಛಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲು ಅವನಿಗೆ ನಷ್ಟಕ ರವಾಗಿಯೂ ಸದರೀ ಜಮೀನ್ಗಾ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರು ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕು ಇರಲಾರದು.

5. ಈ ನಿಬಂಧನೆಗಳಿಗೆ ಒಳಪಟ್ಟು ಹರಾಜಾದ ಜಮೀನನ್ನು ಷುರು ಮೂರು ಸಾಲ್ ಆಕಾರ ವಿಲ್ಲದೆ ಮು ಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನ್ಗಾನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲೀ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಒರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ.	ದರಖಾಸ್ತುದಾರನ ಹೆಸರು.	ಜಮೀನ್ಗಾ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಸೀಮೆ.	ದರಖಾಸ್ತು ಜಮೀನಿನ್ಸ — ವಿಸ್ತೀರ್ಣ.	ದರಖಾಸ್ತು ಜಮೀನಿನ್ಸ — ಆಕಾರ.	ಷರಾ.
ಯಲಿನಾಳು ಅರ್ಜಿ ನಂ. 121ನೇ ನಂ. 33ನೇ ನಂ.	ಕೆಂಚೊಂಡ ವಿಶ್ವೇಶ್ವರ ಸುಬ್ಬರ ಸ. ಪ್ಪ. ಬಿನ್ ಸಾಹುಕಾರರು.	ಮೆಗೊಂಡಿ ಹೋಬಳಿ ಎಲ್ಲಿಗ್ರಾಮ ಎ ಹಿಡಳು	ಹಾಲೀರೀ ಸರ್ವೆಯಿಂದ ಜಮೀನು ಮೇಲೆ ಹದ್ದುಬಸ್ತು ಮಾಡಿರುವಂತೆ ಬಾಂದು 6 ಕಲ್ಲು 6	100—38	100 ಅಥವಾ 150 ರೂಪಾಯಿಗಳು.	ಅನ್ನದ ದರಖಾಸ್ತು ದಾರರ ಮಾರಿಕೆ ಸಂಭ್ರ ಆಕಾರ ದಾಖಲು ಮಾಡಿದೆ.
			ಹಾಲಿ ಸರ್ವೆಯಿಂದ ಗುರ್ತಿಸಿರುವಂತೆ ಬಾಂದು 6 ಕಲ್ಲು 6	32—2	(32 ಅಥವಾ 48)	

ತಿಳುವಳಿಕೆ ಷರಾ,—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯುವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ್ಗಾ ಹಿಡುವಳೀದಾರನು ಬದ್ಧನ ಅರ್ಹನಾಗಿರಬೇಕು.

ಟಿ. ವಿಯರ್,
ಡೆಪ್ಯುಟಿ ಕಮ್ಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು ಫಾರೆಸ್ಟ್ ಇಲಾಖಾ.
ಇಸ್ತಿಹಾರ್‌ನಾಮೆ.

ತಾರೀಖು 1ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನ್‌ನಲ್ಲಿ ಕಂಡ ತಾಲ್ಲೂಕು ಖಜಾನೆಗಳಲ್ಲಿ ಸಂದಲ್ ತುಕಡಾಗಳು ಸ್ವಂತ ಉಪಯೋಗಕ್ಕೋಸ್ಕರ ಚಿಲ್ಲರೆಯಾಗಿ ಬಿಕರಿ ಮಾಡಲ್ಪಡುತ್ತೆ. ಇಷ್ಟವುಳ್ಳವರು ಕ್ರಯಕ್ಕೆ ಪಡಿಯಬಹುದು.

ದಾವಣಗೆರೆ, ಹೊಳಲಕೆರೆ, ಚಿತ್ರದುರ್ಗ.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್.

ನೋಟಿಸ್.

ಈ ಕೆಳಗೆ ನಮೂದಿಸಿರುವ ಪುಸ್ತಕವು ಬೆಂಗಳೂರು ಗವರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರಿಯುತ್ತದೆ.
1897ನೇ ಇಸವಿಯ ಸಂಸ್ಕೃತ ಲೋವರ್ ಸೆಕಂಡರಿ ಟೆಕಸ್ಟ್ ಬುಕ್ಕು. ಕ್ರಯ 2 ಆಣೆ.

ಎಸ್. ಅಬ್ದುಲ್ ಹೈ,
ಕ್ಯೂರೇಟರ್.

ನೋಟಿಸ್.

ಜನಗಳ ಉಪಯೋಗಕ್ಕೋಸ್ಕರ ನೇತ್ರಗಳಿಗೆ ಅವುಷಧಿ ಹಾಕತಕ್ಕ ಒಂದು ಸರ್ಕಾರದ ವೈದ್ಯಶಾಲೆಯು ಬೆಂಗಳೂರು ತಾಲ್ಲೂಕು ಕಚೇರಿ ರೋಡಿನಲ್ಲಿ ಸ್ಥಾಪಿಸಲ್ಪಟ್ಟಿರುತ್ತೆ. ಧರ್ಮಾರ್ಥವಾಗಿ, ಅಸಿಸ್ಟೆಂಟ್ ಸರ್ಜನ್ ಎಸ್. ವಿ. ರಾಮಸ್ವಾಮಿ ಅಯ್ಯಂಗಾರ್ರವರು, ನೇತ್ರ ರೋಗದಿಂದ ಪೀಡಿತರಾದವರನ್ನು ಪ್ರತಿ ದಿನವೂ ಬೆಳಿಗ್ಗೆ 7 ಘಂಟೆ ಲಾಗಾಯತು 11 ಘಂಟೆ ವರಿವಿಗು ಚಿಕಿತ್ಸೆ ಮಾಡುವರು.

ಪಿ. ಎಚ್. ಬೆರ್ನ್ಸ್, ಎಂ. ಬಿ.,
ಸೀನಿಯರ್ ಸರ್ಜನ್ ಯಾ ಸ್ಯಾನಿಟೆರಿ ಕಮ್ಮಿಷನರ್,
ಮೈಸೂರ್ ಗವರ್ನಮೆಂಟ್.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಪಿಷ್ ಆದ್ದು.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 10, ಸನ್ 1896.

IIIನೇ ಭಾಗ.

ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ರೆಗ್ಯುಲೇಷನ್‌ಗಳು.

ಮೈಸೂರ್ ಗವರ್ನಮೆಂಟ್.

ಲೆಜಿಸ್ಲೆಟಿವ್ ಇಲಾಖಾ.

1896ನೇ ಇಸವಿಯ IIನೇ ನಂಬರ್ ರೆಗ್ಯುಲೇಷನ್.

(1896ನೇ ಇಸವಿ ಅಕ್ಟೋಬರ್ ತಾರೀಖು 27ನೇ ದಿನ ಮಂಜೂರಾದ್ದು.)

A REGULATION TO PROVIDE FOR THE IMPOSITION AND LEVY OF CERTAIN DUTIES ON COTTON GOODS IN THE TERRITORIES OF MYSORE.

ಮೈಸೂರ್ ಶೀಮೆಯಲ್ಲಿ ಅರಳೆ ಸರಕುಗಳ ಮೇಲೆ ಕೆಲವು ತೆರಿಗೆಗಳು ಮೊಕರರಾಗಿ ವಸೂಲ್ ಆಗತಕ್ಕ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ.

ಮೈಸೂರ್ ಶೀಮೆಯೊಳಗೆ ಅರಳೆ ಸರಕುಗಳ ಮೇಲೆ ಕೆಲವು ತೆರಿಗೆಗಳನ್ನು ಮೊಕರರ್ಮಾಡುವದು ಯುಕ್ತವಾದುದರಿಂದ ಘನವನ್ತೈದಿದ ಶ್ರೀಮನ್‌ಮಹಾರಾಣಿ ರೀಜಂಟರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೆ:—

PRELIMINARY.

ಅವತರಣಿಕೆ.

ಹೆಸರು, ವ್ಯಾಪ್ತಿ ಮತ್ತು ಶುರು.

1. (1) ಈ ರೆಗ್ಯುಲೇಷನ್ 1896ನೇ ಇಸವಿಯ ಮೈಸೂರ್ ಅರಳೆ ಸುಂಕಗಳ ರೆಗ್ಯುಲೇಷನ್ ಎಂಬದಾಗಿ ಕರೆಯಲ್ಪಡಬಹುದು.

(2) ಇದು ಮೈಸೂರ್ ಶೀಮೆಗೆಲ್ಲಾ ವ್ಯಾಪಿಸುತ್ತದೆ ;

(3) ಇದು 1896ನೇ ಇಸವಿಯ ಡಿಸೆಂಬರ್ 1ನೇ ತಾರೀಖು ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು;

ಅರ್ಥ ವಿವರಣೆಗಳು.

2. ಈ ರೆಗ್ಯುಲೇಷನಿನಲ್ಲಿ ಸಂದರ್ಭಕ್ಕಾಗಲಿ ಪ್ರಮೇಯಕ್ಕಾಗಲಿ ಏನಾದರೂ ವಿರೋಧವಿದ್ದರೆ ನೇಶಿವಾಯಿ,—

(a) "ಡೆಪ್ಯುಟಿ ಕಮ್ಮಿಷನರ" ಅಂದರೆ ಒಂದು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ್ ಎಂದು ಅಥವಾ ಈ ರೆಗ್ಯುಲೇಷನ್ ಪ್ರಕಾರ ಡೆಪ್ಯುಟಿ ಕಮ್ಮಿಷನರಿನ ಯಲ್ಲಾ ಕೆಲಸಗಳನ್ನಾಗಲಿ ಅಥವಾ ಅವುಗಳ ಪೈಕಿ ಯಾವದನ್ನಾಗಲಿ ಮಾಡಲು ಮೈಸೂರ್ ಗವರ್ನ್ಮೆಂಟಿನವರಿಂದ ಕ್ರಮವಾಗಿ ನೇಮಿಸಲ್ಪಡಬಹುದಾದ ಇತರ ಆಫಿಸರ್ ಎಂಬ ಅರ್ಥವಾಗುತ್ತದೆ;

(b) "ಅರಳೆ ನೂಲು" ಅಥವಾ "ನೂಲು" ಅಂದರೆ ಪೂರ್ಣವಾಗಿ ಯಾಗಲಿ ಕೊಂಚ ಭಾಗವಾಗಲಿ ಹತ್ತಿಯಿಂದ ಮಾಡಲ್ಪಟ್ಟ ನೂಲು ಎಂಬ ಅರ್ಥವಾಗುತ್ತದೆ ;

(c) "ಅರಳೆ ಸರಕುಗಳು" ಅಥವಾ "ಸರಕುಗಳು" ಎಂಬುವದರಲ್ಲಿ ಪೂರ್ಣವಾಗಿ ಅಥವಾ ಕೊಂಚ ಭಾಗ ಅರಳೆ ಎಳೆಗಳಿಂದ ನೇಯಲ್ಪಟ್ಟ, ಹೆಣೆಯಲ್ಪಟ್ಟ ಯಾ ಇತರ ವಿಧವಾಗಿ ಮಾಡಲ್ಪಟ್ಟ (ಎಳೆ ಮತ್ತು ನೂಲು ವಿನಹ) ಎಲ್ಲಾ ಜರಿತಾರಿ ಬಟ್ಟೆಗಳು ಇತರ ಸಾಮಾನುಗಳು ಅಡಗಿರುತ್ತವೆ ;

(d) "ಮಗ್ಗದ ಕಾರ್ಖಾನೆ" ಅಂದರೆ ಕೈಯಿಂದ ಅಲ್ಲದೆ ಇತರ ವಿಧದಿಂದ ನಡಿಸಲ್ಪಡುವ ಯಂತ್ರದ ಮೂಲಕ ಅರಳೇ ಸರಕುಗಳು ನೇಯಲ್ಪಡುವ, ಹೆಣಿಯಲ್ಪಡುವ ಅಥವಾ ಇತರ ಮಾರ್ಗದಲ್ಲಿ ತಯಾರು ಮಾಡಲ್ಪಡುವ ಯಾವದಾದರೂ ಕಟ್ಟಡ ಯಾ ಸ್ಥಳ ಎಂಬ ಅರ್ಥವಾಗುತ್ತದೆ, ಮತ್ತು ಅದು ಅಂಥಾ ಕಟ್ಟಡದ ಅಥವಾ ಸ್ಥಳದ ಪ್ರತಿ ಒಂದು ಭಾಗವನ್ನೂ ಅಡಗಿಸಿಕೊಂಡಿರುತ್ತದೆ ;

(e) "ಕೋಠಿ" ಅಂದರೆ ಈ ರೆಗ್ಯುಲೇಷನಿಗನುಗುಣವಾಗಿ ಸರಕುಗಳನ್ನು ದಾಸ್ತಾನು ಮಾಡುವದಕ್ಕೆ ಲೈಸೆನ್ಸ ಮೂಲಕ ನೇಮಿಸಲ್ಪಟ್ಟ ಒಂದು ಸ್ಥಳವೆಂದು ಅರ್ಥವಾಗುತ್ತದೆ :

ಮೈಸೂರ್ ಶೀಮೆಯಲ್ಲಿ ಉತ್ಪತ್ತಿಯಾದ ಅರಳೇ ಸರಕುಗಳ ಮೇಲೆ ಸುಂಕ ಮೊಕರರಾಗೋಣ.

3. ಮೈಸೂರ್ ಶೀಮೆಯ ಪ್ರತಿ ಒಂದು ಮಗ್ಗದ ಕಾರ್ಖಾನೆಯಲ್ಲಿಯೂ ಅದರಲ್ಲಿ ಉತ್ಪತ್ತಿಯಾಗುವ ಸಮಸ್ತ ಅರಳೇ ಸರಕುಗಳಿಗೆ ಆ ಸರಕುಗಳ ಬೆಲೆಯ ಮೇಲೆ ಶೇಕಡಾ $3\frac{1}{2}$ ದರದ ಪ್ರಕಾರ ಸುಂಕ ವಸೂಲ್‌ಮಾಡಲ್ಪಡತಕ್ಕದ್ದು.

ಟಿಪ್ಪಣಿ.—ಸರಕುಗಳು ಮಗ್ಗದ ಕಾರ್ಖಾನೆಯ ವಠಾರದಿಂದ ಹೊರಗೆ ತರಲ್ಪಟ್ಟಾಗ ಈ ಪ್ರಕರಣದ ಅರ್ಥದ ಮೇರೆಗೆ ಉತ್ಪತ್ತಿಯಾದವು ಎಂದು ಎನ್ನಿಸಿಕೊಳ್ಳುತ್ತವೆ; ಆದರೆ ಸಣ್ಣ ಥಾನುಗಳಾಗಿ ಅಲ್ಲದೆ ಇತರ ವಿಧವಾಗಿ ಸರಕುಗಳು ಮುಖ್ಯವಾಗಿ ಅಥವಾ ಹೆಚ್ಚಾಗಿ ತಯಾರಾಗಿ ವಿಕ್ರಯಿಸಲ್ಪಡುವ ಯಾವದಾದರೂ ಮಗ್ಗದ ಕಾರ್ಖಾನೆಯ ಸಂಗತಿಯಲ್ಲಿ ಮೈಸೂರ್ ಗವರ್ನ್ಮೆಂಟಿನವರು ಅವುಗಳು ಸದರೀ ಕಾರ್ಖಾನೆಯ ನೇಯುವ ಭಾಗ ಅಥವಾ ಭಾಗಗಳಿಂದ ಹೊರಗೆ ತರಲ್ಪಟ್ಟಾಗ ಆ ಸರಕುಗಳು ಆ ಕಾರ್ಖಾನೆಯಲ್ಲಿ ಉತ್ಪತ್ತಿಯಾದವೆಂತ ಎಣಿಸತಕ್ಕದ್ದೆಂದು ವಿಧಿಸಬಹುದು.

ಅಂಥಾ ಸರಕುಗಳ ನಿರಖು ಮೌಲ್ಯಗಳನ್ನು ನಿರ್ಣಯಿಸುವದಕ್ಕೆ ಗವರ್ನ್ಮೆಂಟಿನವರಿಗೆ ಅಧಿಕಾರ.

4. (1) ಸದರೀ ಸುಂಕಗಳನ್ನು ವಸೂಲ್ಮಾಡುವ ಬಗ್ಗೆ ಮೈಸೂರ್ ಗವರ್ನ್ಮೆಂಟಿನವರು ಆಗಿಂದಾಗ್ಗೆ ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರ್ ಕೊಡುವದರ ಮೂಲಕ ಮೇಲೆ ಹೇಳಿದಂಥಾ ಸಮಸ್ತ ಸರಕುಗಳ ಅಥವಾ ಅವುಗಳ ಪೈಕಿ ಯಾವದಾದರೂ ಗೊತ್ತಾದ ತರಹಾವಿನ ಅಥವಾ ತರಹಾಗಳ ನಿರಖು ಮೌಲ್ಯಗಳನ್ನು ನಿರ್ಣಯಿಸಬಹುದು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವದಾದರೂ ನಿರಖು ಮೌಲ್ಯಗಳನ್ನು ಬದಲಾಯಿಸಬಹುದು.

(2) ಈ ರೆಗ್ಯುಲೇಷನಿನ ಉದ್ದೇಶಗಳ ಬಗ್ಗೆ ಅಂಥಾ ನಿರಖು ಮೌಲ್ಯವು ಯಾವದಕ್ಕೆ ಲಗಾವಾಗುತ್ತದೋ ಆ ಅರಳೇ ಸರಕುಗಳ "ನಿಜವಾದ ಮೌಲ್ಯ" ವಾಗಿರುತ್ತದೆಂದು ತಿಳಕೊಳ್ಳತಕ್ಕದ್ದು. ಆದರೆ ಮೇಲೆ ಹೇಳಿದ ಮೇರೆ ವಿನಹ ಅನ್ಯಥಾ ಸಮಸ್ತ ಸರಕುಗಳಿಗೆ ಈ ರೆಗ್ಯುಲೇಷನ್ ಪ್ರಕಾರ ಅವುಗಳ ನಿಜವಾದ ಮೌಲ್ಯದ ಮೇಲೆ ತೆರಿಗೆ ಮೊಕರರಾಗತಕ್ಕದ್ದು.

(3) ಈ ರೆಗ್ಯುಲೇಷನಿನ ಉದ್ದೇಶಗಳ ಬಗ್ಗೆ ನಿಜವಾದ ಮೌಲ್ಯವು ಈ ಕೆಳಗೆ ವಿವರಿಸಿರುವದೆಂದು ಭಾವಿಸಲ್ಪಡತಕ್ಕದ್ದು—

(a) ಅದೇ ಜಾತಿಯ ವ ತರದ ಸರಕುಗಳು ತಯಾರ್‌ಮಾಡಲ್ಪಟ್ಟ ಸಮಯದಲ್ಲಿ ವ ಸ್ಥಳದಲ್ಲಿ, ಅವುಗಳನ್ನು ತಯಾರ್‌ಮಾಡಿದ್ದಕ್ಕಾಗಿ ತೆರಬೇಕಾಗುವ ಸುಂಕದ ಮೊಬಲಗು ಅಲ್ಲದೆ ಬೇರೆ ಯಾವ ತರಹೇದ್ದಾದರೂ ವಜಾ ಅಥವಾ ಕಡಿಮೆಯಾಗುವಿಕೆ ಇಲ್ಲದೆ, ಅವುಗಳು ವಿಕ್ರಯಿಸಲ್ಪಡುವ ಅಥವಾ ವಿಕ್ರಯಿಸಲ್ಪಡಬಹುದಾದ ಖಿಮ್ಮತ್ತಿನಲ್ಲಿ ವ್ಯಾಪಾರದ ಕಮ್ಮಿಷನ್ ಕಳದು ಬಟ್ಟ ನಗದು ಕ್ರಯ ;

(b) ಇಂಥಾ ಕ್ರಯವು ನಿರ್ಣಯಿಸಕೂಡದಾದ ಸಂಗತಿಗಳಲ್ಲಿ, ಅದೇ ಜಾತಿಯ ಮತ್ತು ತರದ ಸರಕುಗಳನ್ನು, ಮೇಲೆ ಕಾಣಿಸಿದವುಗಳಲ್ಲದೆ ಬೇರೆ ಯಾವ ತರಹೇವಾರಿದರೂ ವಜಾ ಅಥವಾ ಕಡಿಮೆಯಾಗುವಿಕೆ ಇಲ್ಲದೆ, ಅಂಥಾ ಸ್ಥಳದಲ್ಲಿ ಕೊಡುವದಕ್ಕೆ ತಗಲುವ ಖರ್ಚು.

ಉತ್ಪತ್ತಿಯಾದ ಅರಳೇ ಸರಕುಗಳ ತಿಂಗಳುಗಟ್ಲೆ ಲೆಕ್ಕಗಳನ್ನು ಮಗ್ಗದ ಕಾರ್ಖಾನೆಯ ಮಾಲೀಕರು ಕೊಡೋಣ.

5. (1) ಪ್ರತಿ ಒಂದು ಮಗ್ಗದ ಕಾರ್ಖಾನೆಯ ಮಾಲೀಕನು ಪ್ರತಿ ತಿಂಗಳಿಗೆ, ತನ್ನ ಕಾರ್ಖಾನೆಯಲ್ಲಿ ಕಳೆದ ತಿಂಗಳಲ್ಲಿ ಉತ್ಪತ್ತಿಯಾದ ಸಮಸ್ತ ಅರಳೆ ಸರಕುಗಳ ಒಂದು ಲೆಕ್ಕವನ್ನು ತಯಾರ್ಮಾಡಿ ಡೆಪ್ಯುಟಿ ಕಮ್ಮಿಷನರ ಬಳಿಗೆ ಕಳುಹಿಸತಕ್ಕದ್ದು ಅಥವಾ ತಯಾರ್ಮಾಡಿಸಿ ಕಳುಹಿಸುವ ಹಾಗೆ ಮಾಡತಕ್ಕದ್ದು; ಮತ್ತು ಅಂಥಾ ಲೆಕ್ಕದ ಕೆಳಗೆ ಅವರ ನಿಜತ್ವವನ್ನು ಕುರಿತ ಒಂದು ದೃಢಪತ್ರಿಕೆಯನ್ನು ಬರೆದು ಅದಕ್ಕೆ ರುಜು ಮಾಡತಕ್ಕದ್ದು.

(2) ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮಗಳಿಂದ ಅನ್ಯಥಾ ನಿರ್ದೇಶಿಸಲ್ಪಟ್ಟರೇನೇ ವಿನಹಾ, ಅಂಥಾ ಪ್ರತಿ ಒಂದು ಲೆಕ್ಕದಲ್ಲಿ ಪ್ರತಿ ಒಂದು ತರಹಾವಿನ ಸರಕುಗಳ ಬಗ್ಯೆ ಆ ಲೆಕ್ಕ ಯಾವ ಕಾಲವಬಗ್ಯಾಗಿರುತ್ತದೋ ಆ ಕಾಲದಲ್ಲಿ ಎಷ್ಟು ಮೊತ್ತ ಉತ್ಪತ್ತಿಯಾಗಿರುತ್ತದೆ ಎಂಬದನ್ನೂ ಅಂಥಾ ಸರಕಿನ ನಿಜವಾದ ಮೌಲ್ಯವನ್ನೂ ನಮೂದಿಸತಕ್ಕದ್ದು.

(3) ಅಂಥಾ ಪ್ರತಿ ಒಂದು ಲೆಕ್ಕದಲ್ಲಿ ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದಂಥಾ ಹೆಚ್ಚಾದ ವೃತ್ತಾಂತವಿರತಕ್ಕದ್ದು. ಮತ್ತು ಅದು ಸದರೀ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದಂಥಾ ನಮೂನೆಯಲ್ಲಿದ್ದು ಸರಿ ಹೌದೋ ಇಲ್ಲವೋ ಎಂಬದನ್ನು ನೋಡುವ ಬಗ್ಯೆ ಮೇಲೆ ಹೇಳಿದ ಮೇರೆಗೆ ನಿರ್ದೇಶಿಸಲ್ಪಡಬಹುದಾದ ಷರತ್ತುಗಳಿಗೆ ಒಳಗಾಗಿರತಕ್ಕದ್ದು.

(4) ಪ್ರತಿ ಒಂದು ಲೆಕ್ಕವು ಅದು ಯಾವಕಾಲದ ಬಗ್ಯಾಗಿರುತ್ತದೋ ಅದರ ಮೂರು ಅಥವಾ ಹೆಚ್ಚಾದರೆ ಏಳು ಕೆಲಸ ನಡಿಯುವ ದಿವಸಗಳ ಒಳಗಾಗಿ ಡೆಪ್ಯುಟಿ ಕಮ್ಮಿಷನರಿಗೆ ಪಾವತಿ ಮಾಡಲ್ಪಡತಕ್ಕದ್ದು ಅಥವಾ ಅವರ ವಿಳಾಸಕ್ಕೆ ಕಳುಹಿಸಿಕೊಡಲ್ಪಡತಕ್ಕದ್ದು; ಮತ್ತು ಇಂಥಾ ಲೆಕ್ಕಗಳಲ್ಲಿ ಷುರುವಿನದು 1896ನೇ ಇಸವಿಯ ಡಿಸೆಂಬರ್ ತಿಂಗಳಿಗಾಗಿರತಕ್ಕದ್ದು ಮತ್ತು ಈ ರೆಗ್ಯುಲೇಷನಿನ ಅಮಲ್ ಷುರು ಲಾಗಾಯತು ತಯಾರ್ ಮಾಡಿದ ಎಲ್ಲಾ ಸರಕುಗಳು ಅದರಲ್ಲಿ ಸೇರಿರತಕ್ಕದ್ದು.

ಟಿಪ್ಪಣಿ.—ಈ ಒಳಪ್ರಕರಣದಲ್ಲಿ "ಕೆಲಸನಡಿಯುವ ದಿವಸ" ಅಂದರೆ, ಆದಿತ್ಯವಾರಗಳು, ಸಂವತ್ಸರಾದಿ ದಿವಸ (ಜನವರಿ ಗುರ್ರೇ), ಕ್ರಿಸ್ತನ ಜನ್ಮದಿನ (ಡಿಸೆಂಬರ್ 25) ವಿನಹ ಪ್ರತಿ ಒಂದು ದಿನ ವೆಂದು ಅರ್ಥವು: ಈ ಕಡೇ ಎರಡು ದಿವಸಗಳ ಪೈಕಿ ಯಾವದಾದರೂ ಒಂದು ಆದಿತ್ಯವಾರದ ದಿನ ಬಿದ್ದಲ್ಲಿ ಅದರ ಮಾರನೆ ಸೋಮವಾರ ಶಿವಾಯಿ ಎಂದು ಭಾವಿಸಬೇಕು; (ಕ್ರಿಸ್ತನ ಮರಣದಿನ) ಗುಡ್‌ಫ್ರೈಡೆ ಎಂಬ ದಿನವಲ್ಲದೆ ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರ್ ಮೂಲಕ ಪಬ್ಲಿಕ್ ರಜಾ ದಿನವೆಂದು ಮೈಸೂರ್ ಗವರ್ನಮೆಂಟಿನವರಿಂದ ನಿರೂಪಿಸಲ್ಪಡುವ ಇತರ ಯಾವ ದಿನವಾದರೂ ಅಂತಾದ್ದೂ ಶಿವಾಯಿ ಪ್ರತಿ ದಿನವೆಂದರ್ಥವು.

ಸುಂಕವನ್ನು ನಿರ್ಣಯಿಸಿ ಅದನ್ನು ಪಾವತಿ ಮಾಡಬೇಕಾಗಿ ನೋಟಿಸ್ ಕೊಡೋಣ.

6. (1) ಆ ಲೆಕ್ಕ ಯಾವ ಕಾಲಕ್ಕೆ ಸಂಬಂಧಿಸುತ್ತದೋ ಆ ಕಾಲಕ್ಕಾಗಿ ಪಾವತಿ ಯಾಗುವ ಸುಂಕಗಳನ್ನು ಮೈಸೂರ್ ಗವರ್ನಮೆಂಟಿನವರೇನಾದರೂ ನಿಬಂಧನೆಗಳನ್ನು ವಿಧಿಸಿದ್ದರೆ ಅಂಥಾ ನಿಬಂಧನೆಗಳಿಗೊಳಪಟ್ಟು ಡೆಪ್ಯುಟಿ ಕಮ್ಮಿಷನರವರು ಮೊಕರರ್ಮಾಡತಕ್ಕದ್ದು, ಮತ್ತು ಆ ಮೊಬಲಗನ್ನು ಕೂಡಲೇ ಪಾವತಿ ಮಾಡದಿದ್ದರೆ ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದ ನಮೂನೆಯಲ್ಲಿ ಒಂದು ನೋಟಿಸನ್ನು ಸದರೀ ನೋಟಿಸಿನ ಜಾರಿ ತಾರೀಖಿನಿಂದ ಹತ್ತು ದಿವಸಗಳೊಳಗಾಗಿ ಮೊಕರರಾದ ಮೊಬಲಗನ್ನು ಪಾವತಿ ಮಾಡತಕ್ಕದ್ದೆಂದು ಅದರಲ್ಲಿ ವಿಧಿಸಿ ಮಾಲೀಕನಮೇಲೆ ಜಾರಿ ಮಾಡಿಸತಕ್ಕದ್ದು.

(2) (1)ನೇ ಒಳಪ್ರಕರಣಕ್ಕನುಗುಣವಾದ ಒಂದು ನೋಟಿಸಿನ ಒಂದು ಪ್ರತಿಯನ್ನು ಮಗ್ಗದ ಕಾರ್ಖಾನೆಯ ಮಾಲೀಕನಿಗೆ ಯಾ ಅವನ ಮುತಾಲೀಕನಿಗೆ ಆತನು ಸಾಧಾರಣವಾಗಿ ಕೆಲಸ ನಡಿಸುವ ಸ್ಥಳದಲ್ಲಿ ಕೊಟ್ಟರೆ ಯಾ ತಲಿಪಿಸಿದರೆ ಅಥವಾ ಹೀಗೆ ಮಾಡಲಿಕ್ಕೆ ಅನುಕೂಲವಿಲ್ಲದಿದ್ದಲ್ಲಿ ಅದರ ಒಂದು ಪ್ರತಿಯನ್ನು ಕಾರ್ಖಾನೆಯ ಒಂದು ಹೊರ ಬಾಗಲಿಗೆ ಅಂಟಿಸಿದರೆ ಸದರೀ ನೋಟಿಸು ಕಾರ್ಖಾನೆಯ ಮಾಲೀಕನ ಮೇಲೆ ಜಾರಿ ಮಾಡಲ್ಪಟ್ಟ ಹಾಗಾಗುವದು.

ಪಾವತಿಯಾಗದಿರುವ ಸುಂಕವನ್ನು ಬರಮಾಡಿಕೊಳ್ಳೋಣ.

7. (1) ಈ ರೆಗ್ಯುಲೇಷನಿನ ಮೇರೆಗೆ ಪಾವತಿಯಾಗಬೇಕಾದ ಯಾವದಾದರೂ ಸುಂಕವು ಅದರ ಪಾವತಿ ಬಗ್ಯೆ ಮೇಲೆ ಹೇಳಿದಂಥಾ ನೋಟಿಸಿನಿಂದ ನಿರ್ಣಯಿಸಲ್ಪಟ್ಟ ಕಾಲದೊಳಗೆ ಪಾವತಿಯಾಗದಿದ್ದರೆ ಡೆಪ್ಯುಟಿ ಕಮ್ಮಿಷನರವರು ಅದರ ಬದಲಾಗಿ ಹಾಗೆ ಪಾವತಿಯಾಗದಿರುವ ಸುಂಕದ ಮೊಬಲಗಿನ ದುಗಣೀಗೆ ಮೀರದೆ ನ್ಯಾಯವಾಗಿ ಕೇಳಬಹುದೆಂದು ತಮಗೆ ಮುನಾಸಬು ತೋರುವ ಎಷ್ಟು ಮೊಬಲಗನ್ನಾದರೂ ವಸೂಲ್ಮಾಡಬಹುದು.

(2) (1) ನೇ ಉಪಪ್ರಕರಣಕ್ಕನುಗುಣವಾಗಿ ವಸೂಲ್ಮಾಡಲ್ಪಡತಕ್ಕ ಮೊಬಲಗುಗಳನ್ನೆಲ್ಲಾ ಜಮೀನ್ ಕಂದಾಯದ ಬಾಕಿಗಳ ವಸೂಲಿಬಗ್ಗ್ಯಾಗಿ ನಿಬಂಧಿಸಲ್ಪಟ್ಟಿರುವ ರೀತಿಯಲ್ಲಿ ವಸೂಲ್ಮಾಡತಕ್ಕದ್ದು.

Warehousing.

ಕೋಠಿಗಳಲ್ಲಿ ದಾಸ್ತಾನು ಮಾಡೋಣ.

ಸರಕುಗಳನ್ನು ದಾಸ್ತಾನುಮಾಡುವ ಬಗ್ಯೆ ಕೋಠಿಗಳಿಗೆ ಲೈಸೆನ್ಸು ಕೊಡೋಣ ಮತ್ತು ಆ ಬಗ್ಯೆ ಫೀಸು.

8. (1) ಮೈಸೂರ್ ಗವರ್ನಮೆಂಟಿನವರು ಅರಳೀಸರಕುಗಳನ್ನು ದಾಸ್ತಾನು ಮಾಡುವದಕ್ಕೋಸ್ಕರ ಬಂಧಿತ ಕೋಠಿ ಎಂಬದಾಗಿ ಯಾವದಾದರೂ ಕೋಣೆಗೆ ಯಾ ಸ್ಥಳಕ್ಕೆ ಆಗಿಂದಾಗ್ಯೆ ಲೈಸೆನ್ಸು ಕೊಡಬಹುದು. ಅಂಥಾ ಲೈಸೆನ್ಸು ಸದರೀ ಕೋಠಿಗಳೊಳಕ್ಕೆ ಅಂಥಾ ಸರಕುಗಳನ್ನು ಶೇರಿಸುವ ಬಗ್ಗ್ಯೆ ಕೋಠಿಗಳಲ್ಲಿ ಸರಕುಗಳಿರುವಾಗ್ಯೆ ಅವುಗಳನ್ನು ಭದ್ರವಾಗಿ ಕಾಪಾಡುವ ಬಗ್ಗ್ಯೆ ಸರಕುಗಳನ್ನು ಕೋಠಿಯಿಂದ ಹೊರಕ್ಕೆ ಸಾಗಿಸೋಣ ಮತ್ತು ಅವುಗಳ ಮೇಲೆ ವಸೂಲಾಗಬೇಕಾದ ಸುಂಕಗಳ ವಸೂಲಿಬಗ್ಗ್ಯೆ ಮೈಸೂರ ಗವರ್ನಮೆಂಟಿನವರಿಂದ ವಿಧಿಸಲ್ಪಡಬಹುದಾದ ಷರತ್ತುಗಳಿಗೊಳಪಟ್ಟಿರತಕ್ಕದ್ದು.

(2) ಅಂಥಾ ಪ್ರತಿ ಕೋಠಿ ವಿಷಯದಲ್ಲಿ ಲೈಸೆನ್ಸು ಫೀಜು ಮತ್ತು ಇತರ ಮೊಬಲಗುಗಳನ್ನು ಈ ಬಗ್ಗ್ಯಾಗಿ ಮೈಸೂರ್ ಗವರ್ನಮೆಂಟಿನವರಿಂದ ಮಾಡಲ್ಪಟ್ಟ ನಿಬಂಧನೆಗಳಿಂದ ತಾತ್ಕಾಲಿಕವಾಗಿ ವಿಧಾಯಕವಾದಷ್ಟನ್ನು ಲೈಸೆನ್ಸುದಾರನು ಕೊಡತಕ್ಕದ್ದು.

ಪರಂತು ಮೈಸೂರ ಗವರ್ನಮೆಂಟಿನವರು ಯಾವದಾದರೂ ಗೊತ್ತಾದ ಕೋಠಿಯ ವಿಷಯವಾಗಿ ಅಂಥಾ ಪೂರಾ ಫೀಸನ್ನು ಯಾ ಇತರ ಪಾವತಿಗಳನ್ನು ಅಥವಾ ಅವುಗಳ ಎಷ್ಟನ್ನಾದರೂ ಅಂಶವನ್ನು ಮಾಫ್ ಮಾಡಬಹುದು.

ಕೋಠಿಗಳಲ್ಲಿ ಸರಕುಗಳನ್ನು ದಾಸ್ತಾನು ಮಾಡಲಿಕ್ಕೆ ಅಪ್ಪಣೆ.

9. (1) ಯಾವ ಮಗ್ಗದ ಕಾರ್ಖಾನೆಯಮಾಲೀಕನಾದರೂ ಯಾವ ಸರಕುಗಳ ವಿಷಯವಾಗಿ 3ನೇಪ್ರಕರಣದ ಮೇರೆಗೆ ಸುಂಕ ವಸೂಲ್ಮಾಡಲ್ಪಡಬಹುದಾಗಿದ್ದರೂ 6ನೇ ಪ್ರಕರಣದ ಮೇರೆಗೆ ಅದ್ಯಾಪಿ ಸುಂಕ ಮೊಕರರಾಗದೆ ಇರುತ್ತದೊ, ಆ ಸರಕುಗಳನ್ನು ಒಂದು ಕೋಠಿಯಲ್ಲಿ ದಾಸ್ತಾನು ಮಾಡಲಿಕ್ಕೆ ಅಪ್ಪಣೆ ಬಗ್ಗ್ಯಾಗಿ ಅರ್ಜಿ ಕೊಡಬಹುದು.

(2) ಅಂಥಾ ಅರ್ಜಿಯು ಬರಹಮೂಲಕವಾಗಿದ್ದು ಅದಕ್ಕೆ ಅರ್ಜಿದಾರನ ರುಜು ಇರತಕ್ಕದ್ದು ಮತ್ತು ಮೈಸೂರ್ ಗವರ್ನಮೆಂಟಿನವರಿಂದ ನಿರ್ದೇಶಿಸಲ್ಪಡಬಹುದಾದ ಸಮೂನೆಯಲ್ಲಿರತಕ್ಕದ್ದು.

ಹಾಗೆ ದಾಸ್ತಾನುಮಾಡಿದ ಸರಕುಗಳಿಗೆ ಸುಂಕದ ಮಾಫಿ.

10. ಯಾವದಾದರೂ ಸರಕುಗಳನ್ನು ಒಂದು ಕೋಠಿಯಲ್ಲಿ ದಾಸ್ತಾನುಮಾಡಿದಾಗ್ಯೆ ಯಾವ ಕಾಲದಲ್ಲಿ ಆ ಸರಕುಗಳು ಉತ್ಪತ್ತಿಯಾದವೋ ಆ ಕಾಲದ ಬಗ್ಯೆ 5ನೇ ಪ್ರಕರಣಕ್ಕನುಗುಣವಾಗಿ ಕಳುಹಿಸುವ ಲೆಕ್ಕದಲ್ಲಿ ಯಾ ಆಕಾಲಕ್ಕೆ ಸಂಬಂಧಿಸುವ ಒಂದು ಪ್ರತ್ಯೇಕ ಲೆಕ್ಕದಲ್ಲಿ ಅದರ ಮೊತ್ತವನ್ನು ಮತ್ತು ತಪ್ಸೀಲನ್ನು ನಮೂದಿಸಿ ಅದು ಹಾಗೆ ದಾಸ್ತಾನು ಮಾಡಲ್ಪಟ್ಟಿರುತ್ತದೆಂದು ಕಾಣಿಸತಕ್ಕದ್ದು ಮತ್ತು ಸದರೀ ಸರಕುಗಳನ್ನು ಸುಂಕ ನಿರ್ಣಯಿಸಿ ವಸೂಲ್ ಮಾಡುವಾಗ್ಯೆ ಲೆಕ್ಕದಿಂದ ವಜಾಮಾಡತಕ್ಕದ್ದು.

Inspection.

ಮೇಲ್ವಿಚಾರಣೆ.

ಮಗ್ಗದ ಕಾರ್ಖಾನೆಗಳನ್ನು ಆಜಮಾಯಿಷಿ ಮಾಡಿ ರಿಕಾರ್ಡುಗಳ ಮತ್ತು ಲೆಕ್ಕಗಳ ನಕಲುಗಳನ್ನು ತೆಗೆದುಕೊಳ್ಳಲಿಕ್ಕೆ ಡೆಪ್ಯುಟಿಕಮ್ಮಿಷನರಿಗೆ ಅಧಿಕಾರ.

11. (1) ಡೆಪ್ಯುಟಿ ಕಮ್ಮಿಷನರು ಅಥವಾ ಈ ವಿಷಯದಲ್ಲಿ ಮೈಸೂರ್ ಗವರ್ನಮೆಂಟಿನವರಿಂದ ಕ್ರಮವಾಗಿ ನೇಮಿಸಲ್ಪಟ್ಟ ಯಾರಾದರೂ ಆಫಿಸರು ಯಾವ ಮಗ್ಗದ ಕಾರ್ಖಾನೆಗೆ ಯಾದರೂ ಕೆಲಸ ನಡಿಯುವಾಗ್ಯೆ ನ್ಯಾಯವಾದ ಯಾವ ಕಾಲಗಳಲ್ಲಾಗಲಿ ನಿರಾತಂಕವಾಗಿ ಹೋಗಬಹುದು, ಮತ್ತು ಆ ವಿಷಯದಲ್ಲಿ ಮೈಸೂರ ಗವರ್ನಮೆಂಟಿನವರ ಹುಕುಮಿಗೆ ಒಳಪಟ್ಟು ಯಾವದಾದರೂ ಮಗ್ಗದ ಕಾರ್ಖಾನೆಯ ಯಾವ ಭಾಗಕ್ಕಾದರೂ ಹೋಗಬಹುದು.

2 ಅಂಥಾ ಯಾವ ಆಫಿಸರಾದರೂ ಯಾವ ಸಮಯದಲ್ಲಾಗಲಿ ಮಾಲೀಕನಿಗೆ ನೋಟಿಸು ಕೊಟ್ಟು ಯಾ ಕೊಡದೇನೇ ಯಾವ ಮಗ್ಗದ ಕಾರ್ಖಾನೆಯಲ್ಲಿ ಆಗಲಿ ನಡದ ಕೆಲಸಗಳ ಮತ್ತು ವಿಕ್ರಯಗಳ ರಿಕಾರ್ಡುಗಳನ್ನು ಅದರ ಲೆಕ್ಕಗಳನ್ನು ತನಿಖೆ ಮಾಡಿ ಯಾವ ಲೆಕ್ಕದ ನಿಜತ್ವವನ್ನು ಪರೀಕ್ಷಿಸುವ ಬಗ್ಯೆ ಅಥವಾ ಈ ರೆಗ್ಯುಲೇಷನಿನ ಅಥವಾ ಇದಕ್ಕನುಗುಣವಾದ ಯಾವದಾದರೂ ಕ್ರಮಗಳ ಉದ್ದೇಶಗಳ ಬಗ್ಯೆ ಅನುಭವ ಅವಶ್ಯವಿರುವ

ತಪ್ಶೀಲುಗಳನ್ನು ತಿಳಕೊಳ್ಳುವ ಬಗ್ಯೆ ಸದರೀ ಪೂರಾ ಅಥವಾ ಯಾವದಾದರೂ ರಿಕಾರ್ಡುಗಳ ಅಥವಾ ಲೆಕ್ಕಗಳ ನಕಲುಗಳನ್ನು ಅಥವಾ ಅವುಗಳ ಎಕ್ಸ್ಟ್ರಾಕ್ಟುಗಳನ್ನು ತೆಗೆದುಕೊಳ್ಳಬಹುದು.

(3) ಯಾವ ಮಗ್ಗದ ಕಾರ್ಖಾನೆಯ ಮಾಲೀಕನಾಗಲಿ ಯಾವದಾದರೂ ಒಂದು ವ್ಯಾಪಾರದ ರೀತಿಯ ವಿವರ ಯಾ ನಿಯಮಗಳು ಅಡಗಿ ಇರುವ ಯಾವದಾದರೂ ರಿಕಾರ್ಡನ್ನು ಅಥವಾ ಲೆಕ್ಕವನ್ನು ಡೆಪ್ಯುಟಿ ಕಮಿಶ್ನರ ಹುದ್ದೆಗಿಂತ ಕೀಳು ದರ್ಜೆಯ ಆಫಿಸರಿಗೆ ಒಪ್ಪಿಸುವದಕ್ಕೆ ಆಕ್ಷೇಪಿಸಬಹುದು ; ಆದರೆ ಹಾಗೆ ಆಕ್ಷೇಪಿಸುವ ಪಕ್ಷದಲ್ಲಿ, ಮಾಲೀಕನು ತನ್ನ ಆಕ್ಷೇಪಣೆಯನ್ನು ಡೆಪ್ಯುಟಿ ಕಮಿಶ್ನರಿಗೆ ಕಳುಹಿಸುವದಕ್ಕಾಗಿ ಬರಹ ಮೂಲಕ ಆ ಆಫಿಸರ ಹತ್ತರ ಕೊಡಬೇಕು, ಮತ್ತು ಆ ಆಫಿಸರು ಡೆಪ್ಯುಟಿ ಕಮಿಶ್ನರ ಹುಕುಂ ನಿರೀಕ್ಷಣೆ ಮೇಲೆ ಆ ರಿಕಾರ್ಡನ್ನು ಅಥವಾ ಲೆಕ್ಕವನ್ನು ಕೂಡಲೆ ಆ ಸ್ಥಳದಲ್ಲಿಯೇ ಮೊಹರು ಮಾಡಿ ಇಡಬಹುದು.

12. ಅಂಥಾ ಸಮಸ್ತ ನಕಲುಗಳು, ಎಕ್ಸ್ಟ್ರಾಕ್ಟುಗಳು ಮತ್ತು ಯಾವ ಮಗ್ಗದ ಕಾರ್ಖಾನೆ ತನಿಖೆ ಕಾಲದಲ್ಲಾಗಲಿ ಅಂಥಾ ಯಾವ ಆಫಿಸರಿಗಾದರೂ ತಿಳಿಯಬಂದ ಇತರ ಯಲ್ಲಾ ಸಮಾಚಾರವು ಖಂಡಿತವಾಗಿ ರಹಸ್ಯವಾದ್ದಾಗಿ ಎಣಿಸಲ್ಪಡತಕ್ಕದ್ದು, ಮತ್ತು ಅಂಥಾ ರಹಸ್ಯವನ್ನು ಮೇಲಧಿಕಾರಸ್ಥನಿಗಲ್ಲದೆ ಇತರ ಯಾವ ಮನುಷ್ಯನಿಗೂ ಪೂರ್ವಭಾವಿಯಾಗಿ ಮೈಸೂರ ಗವರ್ನಮೆಂಟಿನವರ ಬರಹ ಮೂಲಕವಾದ ಅನುಮತಿಯನ್ನು ಪಡೆದ ಹೊರ್ತು ಹೊರಪಡಿಸಕೂಡದು.

ತಿಳಿದುಬಂದ ಸಮಾಚಾರವು ರಹಸ್ಯವಾಗಿರುತ್ತದೆಂದು ಎಣಿಸತಕ್ಕದ್ದು.

Offences and Penalties.

ತಕ್ಸೀರುಗಳು ಮತ್ತು ದಂಡನೆಗಳು.

13. ಕೆಳಗಣ ಷೆಡ್ಯೂಲಿನ 1ನೇ ರಿಕಾನೆಯಲ್ಲಿ ನಮೂದಿಸಲ್ಪಟ್ಟ ತಕ್ಸೀರುಗಳ ಬಗ್ಯೆ ಆಯಾ ತಕ್ಸೀರಿನ ವಿಷಯವಾಗಿ ಅದರ ಎರಡನೇ ರಿಕಾನೆಯಲ್ಲಿ ನಮೂದಿಸಲ್ಪಟ್ಟಷ್ಟರ ಮಟ್ಟಿಗೆ ಶಿಕ್ಷೆಯನ್ನು ವಿಧಿಸಬಹುದು :—

ತಕ್ಸೀರುಗಳ ಬಗ್ಯೆ ದಂಡನೆಗಳು.

1. ಈ ರೆಗ್ಯುಲೇಷನಿಗನುಗುಣವಾಗಿ ಏರ್ಪಟ್ಟ ಯಾವದಾದರೂ ಕ್ರಮಕ್ಕೆ ವಿರೋಧವಾಗಿ ನಡೆದುಕೊಳ್ಳೋಣ.	ಐನೂರು ರೂಪಾಯಿಗೆ ಮೀರದ ದಂಡ.
2. ಸುಂಕದ ಯಾ ಅದರ ಎಷ್ಟಾದರೂ ಭಾಗದ ಪಾವತಿಯನ್ನು ತಪ್ಪಿಸಿಕೊಳ್ಳುವ ಇರಾದೆಯಿಂದ ಈ ರೆಗ್ಯುಲೇಷನಿಗನುಗುಣವಾಗಿ ಸುಂಕಕ್ಕೆ ಗುರಿಯಾಗುವ ಯಾವದಾದರೂ ಸರಕನ್ನು ಛಪಾಯಿಸೋಣ ಅಥವಾ ಛಪಾಯಿಸಲಿಕ್ಕೆ ಪ್ರಯತ್ನ ಮಾಡೋಣ ಅಥವಾ ಗೊತ್ತಿದ್ದು ಛಪಾಯಿಸಲ್ಪಟ್ಟ ಸರಕನ್ನು ಯಾ ಛಪಾವಣಿಯನ್ನು ವದಗಿಸೋಣ.	ಅಂಥಾ ಸರಕು ಮುಟ್ಟುಗೋಳು ವಿಧಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು ಮತ್ತು ಆ ತಕ್ಸೀರು ಸಾಬೀತುಪಟ್ಟ ಪ್ರತಿ ಮನುಷ್ಯನು ಆ ಸರಕಿನ ಮೌಲ್ಯದ ಮೂರರಷ್ಟಕ್ಕೆ ಮೀರದ ದಂಡ ತೆರಲಿಕ್ಕೆ ಗುರಿಯಾಗಿರತಕ್ಕದ್ದು.
3. 5ನೇ ಪ್ರಕರಣದಿಂದ ವಿಧಿಸಲ್ಪಟ್ಟ ಯಾವದೊಂದು ಲೆಕ್ಕವನ್ನು ತಯಾರ್ ಮಾಡಲಿಕ್ಕೆ ತಪ್ಪೋಣ ಅಥವಾ ಅದಕ್ಕೆ ದಸ್ಕತ್ತು ಹಾಕಲಿಕ್ಕೆ ಅಥವಾ ಅದನ್ನು ಪೂರೈಸುವದಕ್ಕೆ ತಿರಸ್ಕರಿಸೋಣ.	ಒಂದು ಸಾವಿರ ರೂಪಾಯಿಗೆ ಮೀರದ ದಂಡ.
4. ತನಗೆ ತಿಳಿದ ಮಟ್ಟಿನ ಆಮಲಿಗೆ ಮತ್ತು ತನ್ನ ಒಳ್ಳೆ ನಂಬಿಕೆಗೆ ಸರಿಯಾಗಿ ನಿಜವಲ್ಲದ ಒಂದು ವಿವರವನ್ನು ಕಾಣಿಸಿ ಅಂಥಾ ಯಾವದೊಂದು ಲೆಕ್ಕವನ್ನು ತಯಾರ್ಮಾಡಿ ಕಳುಹಿಸೋಣ.	ಒಂದು ದೃಢಪತ್ರಿಕೆಯಲ್ಲಿ ಸುಳ್ಳು ಹೇಳಿಕೆಯನ್ನು ನಮೂದಿಸಿದ ಬಗ್ಯೆ ಇಂಡಿಯನ್ ಪೀನಲ್ ಕೋಡಿನ 199ನೇ ಪ್ರಕರಣದಲ್ಲಿ ನಿಬಂಧಿಸಿರುವ ದಂಡನೆ.
5. ಸುಂಕಕ್ಕೆ ಮೋಸ ಮಾಡುವ ಇರಾದೆಯಿಂದ ಮಗ್ಗದ ಕಾರ್ಖಾನೆಯಲ್ಲಿಡಲ್ಪಟ್ಟ ಯಾವದಾದರೂ ರಿಕಾರ್ಡನ್ನು ಯಾ ಲೆಕ್ಕದ ಪುಸ್ತಕವನ್ನು ಬದಲಾಯಿಸೋಣ ಯಾ ಸುಳ್ಳುಪಡಿಸೋಣ.	ಸೃಷ್ಟನೆಯನ್ನು ಮಾಡಿದ ಬಗ್ಯೆ ಇಂಡಿಯನ್ ಪೀನಲ್ ಕೋಡಿನ 465ನೇ ಪ್ರಕರಣದಲ್ಲಿ ನಿಬಂಧಿಸಲ್ಪಟ್ಟ ದಂಡನೆ.
6. 15ನೇ ಪ್ರಕರಣದಲ್ಲಿ ನಿಬಂಧಿಸಲ್ಪಟ್ಟ ಮೇರೆಗೆ ಮಾದಿರಿಗಳನ್ನು ಇಡುವದಕ್ಕೆ ನ್ಯಾಯವಾದ ಸಬಬಿಲ್ಲದೆ ತಪ್ಪೋಣ.	ಪ್ರತಿ ತಕ್ಸೀರಿನ ಬಗ್ಯೆ ಇನ್ನೂರು ರೂಪಾಯಿಗೆ ಮೀರದ ದಂಡನೆ.
7. ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮದಿಂದ ನಿರ್ದೇಶಿಸಲ್ಪಡಬಹುದಾದಂಥಾ ಸರಿಯಾದ ರಿಕಾರ್ಡುಗಳನ್ನು ಮತ್ತು ಲೆಕ್ಕದ ಪುಸ್ತಕಗಳನ್ನು ಇಡಲಿಕ್ಕೆ ತಪ್ಪೋಣ.	ಐನೂರು ರೂಪಾಯಿಗೆ ಮೀರದ ದಂಡ ಮತ್ತು ತಪ್ಪು ಸಾಬೀತಾದ ತಾರೀಖಿನ ನಂತರ ಆ ತಕ್ಸೀರು ಇನ್ನೂ ನಡೆಯುತ್ತಾ ಬರುವ ಪ್ರತಿ ದಿವಸದ ಬಗ್ಯೆ ಇಪ್ಪತ್ತು ರೂಪಾಯಿನ ಹೆಚ್ಚು ದಂಡನೆ.
8. ಈ ರೆಗ್ಯುಲೇಷನಿಗನುಗುಣವಾಗಿ ಏರ್ಪಟ್ಟ ಯಾವದಾದರೂ ಕ್ರಮದ ಮೇರೆಗೆ ತಯಾರ್ಮಾಡಿ ಕಳುಹಿಸಲ್ಪಡಬೇಕಾಗಿದ್ದ ಲೆಕ್ಕವನ್ನು ತಯಾರ್ಮಾಡಿ ಕಳುಹಿಸಲಿಕ್ಕೆ ತಪ್ಪೋಣ.	ಒಂದು ಸಾವಿರ ರೂಪಾಯಿಗೆ ಮೀರದ ದಂಡನೆ.

9. ಈ ರೆಗ್ಯುಲೇಷನಿಗನುಗುಣವಾಗಿ ಕೊಡಲ್ಪಟ್ಟ ಯಾವದಾದರೂ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಡೆಪ್ಯುಟಿ ಕಮಿಷನರನ್ನು ಅಥವಾ ಇತರ ಆಫಿಸರನ್ನು ಬುದ್ಧಿಪೂರ್ವಕವಾಗಿ ಆತಂಕ ಪಡಿಸೋಣ.	ಆರು ತಿಂಗಳಿಗೆ ಮೀರದ ಕೈದು ಅಥವಾ ಒಂದು ಸಾವಿರ ರೂಪಾಯಿಗೆ ಮೀರದ ಜುರ್ಮಾನೆ ಅಥವಾ ಎರಡೂ.
10. ಯಾವದಾದರೂ ಮಗ್ಗದಕಾರ್ಖಾನೆಯುಲ್ಲಿ ಯಾವದಾದರೂ ಸರಕು ಯಾವ ಸ್ಥಳದಲ್ಲಿ, ಪೆಟ್ಟಿಗೆಯುಲ್ಲಿ ಅಥವಾ ಮುಚ್ಚಳವಿರುವ ಪಾತ್ರೆಯುಲ್ಲಿ ಛಪಾಯಿಸಿಟ್ಟದ್ದು ಕಂಡು ಬಂದು ಡೆಪ್ಯುಟಿ ಕಮಿಷನರಿಗೆ ಸಮಾಧಾನವಾಗುವಹಾಗೆ ಆ ಬಗ್ಯೆ ಸಬಬು ಕೊಡದಿದ್ದರೆ.	ಅಂಥಾ ಸರಕು ಮುಟ್ಟುಗೋಲು ವಿಧಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು.
11. ಲೆಕ್ಕದಲ್ಲಿ ದಾಖಲ್ಮಾಡಿದ ಮೊತ್ತಕ್ಕಿಂತ ಜಾಸ್ತಿಯಾಗಿ ಅಥವಾ ಆ ಲೆಕ್ಕದಲ್ಲಿರುವ ವಿವರಕ್ಕೆ ಸಂಬೀಳದೆ ಯಾವದಾದರೂ ಮಗ್ಗದ ಕಾರ್ಖಾನೆಯುಲ್ಲಿ ಸರಕು ಕಂಡುಬಂದರೆ.	ಅಂಥಾ ಸರಕು ಮುಟ್ಟುಗೋಲು ವಿಧಿಸಲ್ಪಡಲಿಕ್ಕಾಗಲಿ ಅಥವಾ ಮೈಸೂರ್ ಗವರ್ನಮೆಂಟಿನವರು ವಿಧಿಸಬಹುದಾದಂಥಾ ಜಾಸ್ತಿ ಸುಂಕಕ್ಕಾಗಲಿ ಗುರಿಯಾಗಿರತಕ್ಕದ್ದು.
12. ಯಾವದಾದರೂ ಅರಳೇ ಸರಕುಗಳನ್ನು ಲೆಕ್ಕಮಾಡಿಯಾಗಲಿ ಮೂಟೆ ಮೂಟೆಗಳಾಗಿಯಾಗಲಿ ಕೊಂಡು ಹೋಗುವಾಗ್ಯೆ ಸುಂಕಕ್ಕೆ ಹಾನಿ ಉಂಟಾಗುವ ಹಾಗೆ ಅದನ್ನು ಕುರಿತು ಯಾವದಾದರೂ ಲೋಪವನ್ನು ಅಥವಾ ಸುಳ್ಳು ವಿವರವನ್ನು ಕೊಟ್ಟದ್ದು ಕಂಡು ಹಿಡಿಯಲ್ಪಟ್ಟರೆ.	ಅಂಥಾ ಹೆಚ್ಚು ಕಡಮೆಯು ಘರಾಮೋಷಿಯಿಂದ ಆದದ್ದು ಎಂತ ಡೆಪ್ಯುಟಿ ಕಮಿಷನರಿಗೆ ಅಥವಾ ಇತರ ಆಫಿಸರಿಗೆ ಸಮಾಧಾನವಾಗುವ ಹಾಗೆ ರುಜುವಾದ ವಿನಹಾ ಹಾಗೆ ಲೋಪಮಾಡಿದ ಅಥವಾ ಸುಳ್ಳು ವಿವರ ಕೊಟ್ಟ ಮನುಷ್ಯನು ಅಂಥಾ ಲೋಪ ಅಥವಾ ಸುಳ್ಳು ವಿವರದಿಂದ ಮೈಸೂರ್ ಗವರ್ನಮೆಂಟಿಗೆ ಲುಕ್ಸಾನು ಆಗುತ್ತಿದ್ದ ಸುಂಕದ ಮೊಬಲಗಿನ ಹತ್ತು ಪಾಲಿಗೆ ಮೀರದಷ್ಟು ದಂಡನೆಗೆ ಗುರಿಯಾಗತಕ್ಕದ್ದು.
13. ಯಾವ ಡೆಪ್ಯುಟಿ ಕಮಿಷನರಾಗಲಿ ಅವರಿಗೆ ತಾಬೇದಾರರಾದ ಇತರ ಆಫಿಸರಾಗಲಿ ಈ ರೆಗ್ಯುಲೇಷನಿಗೆ ಅಥವಾ ಇದಕ್ಕನುಗುಣವಾಗಿ ಏರ್ಪಟ್ಟ ಯಾವದಾದರೂ ಕ್ರಮಕ್ಕೆ ವಿರೋಧವಾದ ಯಾವದೊಂದು ಕೃತ್ಯವನ್ನಾದರೂ ಮಾಡಿದರೆ ಅಥವಾ ಮಾಡತಕ್ಕ ಯಾವದಾದರೂ ಕೃತ್ಯವನ್ನು ಮಾಡದಿದ್ದರೆ ಅಥವಾ ಈ ರೆಗ್ಯುಲೇಷನಿಗನುಗುಣವಾಗಿ ತಮಿಗೆ ಕೊಡಲ್ಪಟ್ಟ ಅಧಿಕಾರವನ್ನು ಯಾವ ಮನುಷ್ಯನಿಗಾದರೂ ಹಾನಿ ಮಾಡುವ ಅಥವಾ ತೊಂದರೆ ಕೊಡುವ ಇರಾದೆಯಿಂದ ಉಪದ್ರಕರವಾಗಿಯೂ ಅನಾವಶ್ಯಕವಾಗಿಯೂ ನಡಿಸಿದರೆ.	ಅಂಥಾ ಡೆಪ್ಯುಟಿ ಕಮಿಷನರು ಅಥವಾ ಇತರ ಆಫಿಸರು ತಕ್ಸೀರು ಸಾಬೀತು ಪಟ್ಟಲ್ಲಿ ಐನೂರು ರೂಪಾಯಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.
14. ಈ ರೆಗ್ಯುಲೇಷನಿನ 12ನೇ ಪ್ರಕರಣದ ವಿಧಿಗಳಿಗೆ ವಿರೋಧವಾಗಿ ವರ್ತಮಾನವನ್ನು ಕೊಡೋಣ.	ಒಂದು ವರುಷದ ಪರ್ಯಂತ ಸಾದಾ ಖೈದು ಅಥವಾ 1000 ರೂಪಾಯಿ ವರಿಗೆ ಜುರ್ಮಾನೆ ಅಥವಾ ಎರಡೂ.

ಅಧಿಕಾರವಿರುವ ಮಾಜಿಸ್ಟ್ರೇಟರು.

14. (1) ಈ ರೆಗ್ಯುಲೇಷನಿಗೆ ವಿರೋಧವಾಗಿ ನಡಿಸಿದ ಸಮಸ್ತ ತಕ್ಸೀರುಗಳನ್ನು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್ ಮಾತ್ರವಾಗಲಿ ಒಂದನೇ ಕ್ಲಾಸ್ ಮಾಜಿಸ್ಟ್ರೇಟ್ ಮಾತ್ರವಾಗಲಿ ವಿಚಾರಣೆ ಮಾಡಬಹುದು.

ಸರಕುಗಳ ಮುಟ್ಟುಗೋಲು ಮಾಡಲ್ಪಡುವಾಗ್ಯೆ ಅವುಗಳ ಕಟ್ಟುವಾಸಗಳು ಮತ್ತು ಆ ಕಟ್ಟುಗಳೊಳಗಿರುವ ಸಾಮಗ್ರಿಗಳು ಸೇರಿದ್ದು.

(2) ಈ ರೆಗ್ಯುಲೇಷನಿನ ಪ್ರಕಾರ ಮುಟ್ಟುಗೋಲು ಮಾಡಲ್ಪಡುವ ಯಾವದಾದರೂ ಸರಕಿನಲ್ಲಿ ಅಂಥಾ ಸರಕು ದೊರಕುವ ಗಂಟು ಅಥವಾ ಮೂಟೆಯು ಯಾವ ಕಟ್ಟುವಾಸವಾಗಲಿ ಅದರೊಳಗೆ ಇರತಕ್ಕ ಇತರ ಸಮಸ್ತ ಸಾಮಗ್ರಿಗಳಾಗಲಿ ಶೇರಿದವಾಗಿರುತ್ತವೆ.

ಮತ್ತು ಸರಕು ಸಾಗಿಸುವದರಲ್ಲಿ ಉಪಯೋಗಿಸಲ್ಪಡುವ ವಾಹನಗಳು ಮತ್ತು ಜಾನ್ವರುಗಳು ಸೇರಿದ್ದು.

ಈ ರೆಗ್ಯುಲೇಷನಿನಂತೆ ಮುಟ್ಟುಗೋಲಿಗೆ ಒಳಪಟ್ಟ ಯಾವದಾದರೂಸರಕನ್ನು ಒಯ್ಯುವ ಬಗ್ಯೆ ಉಪಯೋಗಿಸಲ್ಪಟ್ಟ ಪ್ರತಿ ಚಕಡಾ ಗಾಡಿ ಅಥವಾ ಇತರೋಪಾಯದ ವಾಹನ ಮತ್ತು ಪ್ರತಿ ಕುದುರೆ ಅಥವಾ ಇತರ ಜಾನ್ವರು ಅದೇ ಮೇರಿಗೆ ಮುಟ್ಟುಗೋಲಿಗೊಳಗಾಗತಕ್ಕದ್ದು.

Miscellaneous.

ವಿವಿಧ ವಿಷಯು.

ಸರಕು ತಯಾರಿ ಕಾಲದಲ್ಲಿ ಮಗ್ಗದ ಕಾರ್ಖಾನೆಯ ಮಾಲೀಕರು ಕೆಲವು ಸರಕುಗಳ ಮಾದ್ರಿಗಳನ್ನು ತೆಗೆದಿಡತಕ್ಕದ್ದು ಮತ್ತು ಅವುಗಳು ಅಜಮಾಯಿಷಿ ಬಗ್ಯೆ ಒದಗತಕ್ಕದ್ದು.

15. (1) ಪ್ರತಿ ಮಗ್ಗದ ಕಾರ್ಖಾನೆಯ ಮಾಲೀಕನು, ಯಾವ ಸರಕುಗಳ ವಿಷಯುವಾಗಿ ನಿರಖು ಕ್ರಯ ನಿರ್ಣಯಿಸಲ್ಪಟ್ಟಿಧಿಯೋ ಆ ಸರಕುಗಳಲ್ಲದೆ ಇತರ ಸರಕುಗಳ ಸಂಗತಿಯುಲ್ಲಿ ಅವುಗಳನ್ನು ತಯಾರ್ಮಾಡುವ ಕಾಲದಲ್ಲಿ ಅವುಗಳ ಮಾದ್ರಿಯನ್ನು ಅಥವಾ ಮಾದ್ರಿಗಳನ್ನು ತೆಗೆದಿಟ್ಟು ಸದರೀ ಸರಕುಗಳು ಉತ್ಪತ್ತಿಯಾದನಂತರ ಕನಿಷ್ಟ ಪಕ್ಷ ಆರು ತಿಂಗಳ ವರೆಗೆ ಅಂಥಾ ಮಾದ್ರಿಗಳನ್ನು ನೋಡುವ ಬಗ್ಯೆ ಕಾಪಾಡತಕ್ಕದ್ದು.

(2) ಅಂಥಾ ಮಾದ್ರಿಗಳು ಎಲ್ಲಾ ಸಮಯಗಳಲ್ಲಿಯೂ ಡೆಪ್ಯುಟಿ ಕಮ್ಮಿಷನರ ಅಥವಾ 11ನೇ ಪ್ರಕರಣಕ್ಕನುಗುಣವಾಗಿ ನೇಮಿಸಲ್ಪಟ್ಟ ಯಾವ ಆಫಿಸರ ಅಜಮಾಯಿಷಿ ಬಗ್ಯೆ ಸಿಕ್ಕುವ ಹಾಗೆ ಇರತಕ್ಕದ್ದು. ಮತ್ತು ಸದರೀ ಸರಕುಗಳನ್ನೇ ಪರೀಕ್ಷಿಸಲು ಅನುಕೂಲವಾಗದಿದ್ದ ಪಕ್ಷದಲ್ಲಿ ಈ ರೆಗ್ಯುಲೇಷನಿನಂತೆ ಅವುಗಳ ಮೇಲೆ ವಸೂಲಾಗತಕ್ಕ ಸುಂಕವನ್ನು ಮೊಕರರ್ಮಾಡುವ ಬಗ್ಯಾಗಿ ಮೇಲ್ಕಂಡ ಮಾದ್ರಿಗಳನ್ನು ಪರೀಕ್ಷಿಸಿದನಂತರ ಅಂಥಾ ಸರಕುಗಳ ಖಿಮ್ಮತ್ತನ್ನು ಠರಾಯಿಸೋಣ ಸಾಕಾಗಿರುತ್ತೆ.

(3) ಯಾವದಾದರೂ ನಿರ್ದೇಶಿಸಲ್ಪಟ್ಟ ಸಂಗತಿಯಲ್ಲಿ ಈ ಪ್ರಕರಣದ ಉದ್ದೇಶಗಳ ಬಗ್ಯೆ ಯಾವದು ಒಂದು ಸಾಕಾದ ಮಾದ್ರಿಯಾಗಿರತಕ್ಕದ್ದೆಂಬದನ್ನು, ಮೈಸೂರ್ ಗವರ್ನ್ಮೆಂಟನವರು ಒಂದು ನಿಬಂಧನೆಯ ದ್ವಾರಾ ವಿವರಿಸಬಹುದು.

ಈ ರೆಗ್ಯುಲೇಷನಿಗನುಗುಣವಾದ ಹುಕುಮುಗಳನ್ನು ತೆಗೆದು ಹಾಕಲಿಕ್ಕಾಗಲಿ ತಬ್ದಿಲ್ ಮಾಡಲಿಕ್ಕಾಗಲಿ ಗವರ್ನ್ಮೆಂಟನವರಿಗೆ ಅಧಿಕಾರ.

16. ಈ ರೆಗ್ಯುಲೇಷನಿಗನುಗುಣವಾಗಿ ಕೊಡಲ್ಪಟ್ಟಂಥಾದ ಯಾವದಾದರೂ ತೀರ್ಪಿನಿಂದಲಾಗಲಿ ಹುಕುಮಿನಿಂದಲಾಗಲಿ ನಷ್ಟಹೊಂದಿದ ಯಾವ ಮನುಷ್ಯನಾದರೂ ಅರ್ಜಿಕೊಟ್ಟಲ್ಲಿ ಮೈಸೂರ್ ಗವರ್ನ್ಮೆಂಟನವರು ಅಂಥಾ ತೀರ್ಪನ್ನು ಅಥವಾ ಹುಕುಮನ್ನು ರದ್ದು ಮಾಡಬಹುದು ಅಥವಾ ತಬ್ದಿಲ್ ಮಾಡಬಹುದು.

ನಮೂನೆಗಳನನ್ನು ತೆಗೆದುಕೊಳ್ಳಲಿಕ್ಕೆ ಅಧಿಕಾರ.

17. (1) ಡೆಪ್ಯುಟಿ ಕಮ್ಮಿಷನರಾಗಲಿ 11ನೇ ಪ್ರಕರಣಕ್ಕನುಗುಣವಾಗಿ ನೇಮಕಪಟ್ಟ ಆಫಿಸರಾಗಲಿ ಯಾವದಾದರೂ ಸರಕಿನ ನಮೂನೆಗಳನ್ನು ಪರೀಕ್ಷೆ ಬಗ್ಯೆ ಅಥವಾ ಅದರ ಮೌಲ್ಯವನ್ನು ನಿರ್ಣಯಿಸುವ ಬಗ್ಯೆ ಅಥವಾ ಇತರ ಯಾವದಾದರೂ ಅವಶ್ಯಕವಾದ ಉದ್ದೇಶದ ಬಗ್ಯೆ ತೆಗೆದುಕೊಳ್ಳಬಹುದು.

(2) ಮಾಲೀಕನು 11ನೇ ಪ್ರಕರಣಕ್ಕನುಗುಣವಾಗಿ ನೇಮಕಪಟ್ಟ ಆಫಿಸರಿಗೆ ಯಾವದಾದರೂ ನಮೂನೆಯನ್ನು ಕೊಡಬೇಕಾಗಿ ಕೇಳಲ್ಪಟ್ಟಲ್ಲಿ ಅಂಥಾ ನಮೂನೆಯನ್ನು ಡೆಪ್ಯುಟಿಕಮ್ಮಿಷನರ ಹೆಸರಿಗೆ ವಿಳಾಸ ಬರೆದ ಒಂದು ಲಕೋಟೆಯಲ್ಲಿ ಹಾಕಿ ಮೊಹರು ಮಾಡತಕ್ಕದ್ದು; ಮತ್ತು ಅಂಥಾ ಸಂಗತಿಯಲ್ಲಿ ಸದರೀ ಆಫಿಸರು ಅಂಥಾ ಲಕೋಟೆಯನ್ನು ಬಜ್ಜಿನಸು ಡೆಪ್ಯುಟಿ ಕಮ್ಮಿಷನರಿಗೆ ಕೊಡತಕ್ಕದ್ದು.

(3) ಅಂಥಾ ಪ್ರತಿ ನಮೂನೆಯನ್ನು ಸಾಧ್ಯವಿದ್ದರೆ ಮಾಲೀಕನಿಗೆ ವಾಪಸ-ಕೊಡತಕ್ಕದ್ದು ಅಥವಾ ಆತನ ಅನುಮತಿಯಿಂದ ಡೆಪ್ಯುಟಿ ಕಮ್ಮಿಷನರು ಅದನ್ನು ವಿಕ್ರಯಿಸಿ ಹುಟ್ಟುವಳಿಯಾದ ಐವಜನ್ನು ಮಾಲೀಕನ ಲೆಕ್ಕಕ್ಕೆ ದಾಖಲು ಮಾಡತಕ್ಕದ್ದು.

ಮಗ್ಗದ ಕಾರ್ಖಾನೆಯ ಮಾಲೀಕರು ರಿಕಾರ್ಡುಗಳನ್ನೂ ಲೆಕ್ಕಗಳನ್ನೂ ಇಡತಕ್ಕದ್ದು.

18. ಪ್ರತಿ ಮಗ್ಗದ ಕಾರ್ಖಾನೆಯ ಮಾಲೀಕನು ಈ ರೆಗ್ಯುಲೇಷನಿಗನುಗುಣವಾಗಿ ಏರ್ಪಟ್ಟ ಯಾವದಾದರೂ ಕ್ರಮಗಳಿಂದ ನಿರ್ದೇಶಿಸಲ್ಪಡಬಹುದಾದಂಥಾ ರಿಕಾರ್ಡುಗಳನ್ನೂ ಲೆಕ್ಕದ ಪುಸ್ತಕಗಳನ್ನೂ ಇಡತಕ್ಕದ್ದು.

ಯಂತ್ರದ ಮೂಲಕ ಉತ್ಪತ್ತಿಯಾದ ಅರಳೀ ನೂಲುಗಳ ಲೆಕ್ಕಗಳನ್ನು ಕಾಲಕಾಲಕ್ಕೆ ಮಗ್ಗದ ಕಾರ್ಖಾನೆಯ ಮಾಲೀಕರು ತಯಾರ್ಮಾಡಿ ಕಳುಹಿಸತಕ್ಕದ್ದು.

19. ಕೈ ಕೆಲಸದಿಂದಲ್ಲದೆ ಅನ್ಯಥಾ ನಡಿಸಲ್ಪಡುವ ಯಂತ್ರದಿಂದ ಅರಳೀ ನೂಲುಗಳು ತಯಾರ್ ಮಾಡಲ್ಪಡುವ ಪ್ರತಿ ಒಂದು ಮಗ್ಗದ ಕಾರ್ಖಾನೆಯ ಅಥವಾ ಸ್ಥಳದ ಮಾಲೀಕನು ಅಂಥಾ ಸಮಸ್ತ ನೂಲುಗಳ ಮೊತ್ತವನ್ನೂ ವಿವರವನ್ನೂ ಕುರಿತು ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕ್ರಮದಿಂದ ನಿರ್ದೇಶಿಸಲ್ಪಡಬಹುದಾದ ನಮೂನೆಯಲ್ಲಿ ಮತ್ತು ತಪ್ಸೀಲುಗಳೊಂದಿಗೂ ವಾಯಿದೆಗಳಂತೆಯೂ ಲೆಕ್ಕಗಳನ್ನು ಕಾಲಕಾಲಕ್ಕೆ ಸರಿಯಾಗಿ ತಯಾರ್ಮಾಡಿಸಿ ಡೆಪ್ಯುಟಿ ಕಮ್ಮಿಷನರಿಗೆ ಕಳುಹಿಸತಕ್ಕದ್ದು.

ಕ್ರಮಗಳನ್ನು ಏರ್ಪಡಿಸಲಿಕ್ಕೆ ಗವರ್ನ್ಮೆಂಟನವರಿಗೆ ಅಧಿಕಾರ.

20. (1) ಮೈಸೂರ್ ಗವರ್ನ್ಮೆಂಟನವರು ಈ ರೆಗ್ಯುಲೇಷನಿಗನುಗುಣವಾಗಿ ಆಗಿಂದಾಗ್ಯೆ ಕ್ರಮಗಳನ್ನು ಏರ್ಪಡಿಸಬಹುದು,—

(a) ಈ ರೆಗ್ಯುಲೇಷನಿನಿಂದ ಅಥವಾ ಇದರ ಮೇರೆಗೆ ವಿಧಿಸಲ್ಪಟ್ಟ ಯಾವದೊಂದು ಲೆಕ್ಕದ ನಮೂನೆಯನ್ನು ಆಯಾ ಲೆಕ್ಕದಲ್ಲಿ ನಮೂದಿಸತಕ್ಕ ತಪ್ಸೀಲುಗಳನ್ನು ಅದು ಸರಿಯಾಗಿಧೆಯೆಂದು ದೃಢಪಡಿಸುವ ವಿಧವನ್ನು ಮತ್ತು ಅದರ ವಿಷಯವಾಗಿ ಅವಶ್ಯ ಏರಬಹುದಾದ ಇತರ ಎಲ್ಲಾ ಷರತ್ತುಗಳನ್ನು ನಿರ್ದೇಶಿಸಿ;

(b) ನೂತ ನೂಲುಗಳ ಲೆಕ್ಕಗಳನ್ನು ಕೊಡಬೇಕೆಂಬದಾಗಿ;

c) ಡೆಪ್ಯುಟಿ ಕಮ್ಮಿಷನರು 6ನೇ ಪ್ರಕರಣಕ್ಕನುಗುಣವಾಗಿ ಕೊಡತಕ್ಕ ನೋಟಿಸಿನ ನಮೂನೆಯನ್ನು ನಿರ್ದೇಶಿಸಿ;

(d) ಮಗ್ಗದ ಕಾರ್ಖಾನೆಗಳ ಅಜಮಾಯಿಷಿ ಮತ್ತು ಅದಕ್ಕೆ ಸಂಬಂಧಪಟ್ಟ ಡೆಪ್ಯುಟಿ ಕಮ್ಮಿಷನರ ಮತ್ತು [illegible]ಸರ ಅಧಿಕಾರಗಳನ್ನೂ ಕೆಲಸಗಳ[illegible]ನ್ನು ಕ್ರಮಗೊಳಿಸಿ;

(e) ಕೋಠಿಗಳನ್ನು ಕುರಿತು ಈ ರೆಗ್ಯುಲೇಷನಿಗನುಗುಣವಾದ ನಿಬಂಧನೆಯನ್ನು ಮತ್ತು ಕೋಠಿಗಳಲ್ಲಿ ಸರಕುಗಳನ್ನು ದಾಸ್ತಾನುಮಾಡುವದನ್ನೂ ಅವುಗಳಿಂದ ಹೊರಗೆ ಕೊಂಡುಹೋಗುವದನ್ನೂ ಆ ವಿಷಯವಾಗಿ ಡೆಪ್ಯುಟಿ ಕಮ್ಮಿಷನರ ಅಧಿಕಾರಗಳನ್ನೂ ಕೆಲಸಗಳನ್ನೂ ಕ್ರಮಗೊಳಿಸಿ ;

(f) ಈ ರೆಗ್ಯುಲೇಷನಿನ ಮೇರೆಗೆ ಮಗ್ಗದ ಕಾರ್ಖಾನೆಗಳ ಮಾಲೀಕರು ಇಡತಕ್ಕ ರಿಕಾರ್ಡುಗಳನ್ನೂ ಲೆಕ್ಕದಪುಸ್ತಕಗಳನ್ನೂ ನಿರ್ದೇಶಿಸಿ ; ಮತ್ತು

(g) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ನಿಬಂಧನೆಗಳನ್ನು ಜಾರಿಯಲ್ಲಿ ತರುವದಕ್ಕೋಸ್ಕರ ಕ್ರಮಗಳನ್ನು ಏರ್ಪಡಿಸಬಹುದು.

(2) ಅಂಥಾ ಯಾವದಾದರೂ ಕ್ರಮವನ್ನು ಅದರಲ್ಲಿ ನಮೂದಿಸಲ್ಪಟ್ಟ ಯಾವದಾದರೂ ಸ್ಥಳಕ್ಕೆ ಯಾ ಸ್ಥಳಗಳಿಗೆ ಮಾತ್ರ ಲಗಾವುಮಾಡಬಹುದು.

ಒಪ್ಪಂದಗಳು ನಡೆದಿದ್ದರೆ ಸುಂಕ ಜಾಸ್ತಿ ಅಥವಾ ಕಮ್ಮಿಯನ್ನು ದಾಖಲ್ ಅಥವಾ ವಜಾ ಮಾಡಬೇಕು.

21. ಸರಕಿನ ಬಿಕ್ರಿಬಗ್ಗೆ ಒಪ್ಪಂದ ನಡೆಯುವಾಗ್ಯೆ ಸುಂಕ ದಾಖಲಾಗಬೇಕಾಗಿಲ್ಲದ ಪಕ್ಷದಲ್ಲಿ ಸುಂಕದ ಪಾವತಿ ವಿಚಾರವಾಗಿ ಯಾವ ಒಡಂಬಡಿಕೆಯೂ ಇಲ್ಲದೆ ಬಿಕ್ರಿ ಒಪ್ಪಂದ ನಡದ ನಂತರವಾಗಲಿ ಅಥವಾ ಒಪ್ಪಂದದ ಕಾಲದಲ್ಲಿ ಸುಂಕದಾಖಲಾಗಬೇಕಾಗಿದ್ದು ಅಂಥಾ ಸುಂಕವು ಸಂದ ಸರಕಿನ ಬಿಕ್ರಿಗಾಗಿ ಒಪ್ಪಂದ ನಡೆದ ನಂತರವಾಗಲಿ ಯಾವ ಸರಕ್ಕಿನ ಮೇಲಾಗಲಿ ಈ ರೆಗ್ಯುಲೇಷನಿನ ಪ್ರಕಾರ ಸುಂಕ ಮೊಕರರಾದರೂ, ಹೆಚ್ಚಿಸಲ್ಪಟ್ಟರೂ, ತಗ್ಗಿಸಲ್ಪಟ್ಟರೂ ಅಥವಾ ಮಾಫ಼ಮಾಡಲ್ಪಟ್ಟರೂ:—

(*a*) ಸಂದರ್ಭಾನುಸಾರ ಮೊಕರರಾದ ಅಥವಾ ಹೆಚ್ಚಿಸಲ್ಪಟ್ಟ ಸದರೀ ಸುಂಕವು ಪಾವತಿಮಾಡಲ್ಪಟ್ಟರೆ, ಬಿಕ್ರಿದಾರನು ಅಂಥಾ ಸುಂಕ ಅಥವಾ ಸುಂಕ ಜಾಸ್ತೀಗೆ ಸಮನಾದಷ್ಟುಮೊಬಲಗನ್ನು ಸದರೀ ಒಪ್ಪಂದದ ಖರೀದಿ ಮೊಬಲಗಿಗೆ ಸೇರಿಸಿಕೊಳ್ಳಬಹುದು ಮತ್ತು ಅವನು ಅಂತಾ ಹೆಚ್ಚು ಮೊಬಲಗನ್ನು ಕೊಡಲ್ಪಡುವವಕ್ಕೂ ಅದಕ್ಕಾಗಿ ದಾವೆಮಾಡಿ ಅದನ್ನು ವಸೂಲ್ಮಾಡಿಕೊಳ್ಳುವದಕ್ಕೂ ಹಕ್ಕುಳ್ಳವನಾಗಿರತಕ್ಕದ್ದು, ಮತ್ತು

(*b*) ಸಂದರ್ಭಾನುಸಾರ ಕಮ್ಮಿಮಾಡಲ್ಪಟ್ಟ ಸುಂಕ ಮಟ್ಟಿಗೆ ಕೊಡಲ್ಪಟ್ಟರೆ ಅಥವಾ ಮಾಫ಼ಮಾಡಲ್ಪಟ್ಟ ಸುಂಕವು ಕೊಡಲ್ಪಡದೆ ಹೋದರೆ ಬೆಲೆಗೆ ಕೊಂಡವನು ಕಮ್ಮಿ ಅಥವಾ ಮಾಫಾದ ಸುಂಕಕ್ಕೆ ಸಮನಾಗಿ ಒಪ್ಪಂದದ ಖರೀದೀಲಿ ವಜಾಮಾಡಿ ಕೊಳ್ಳಬಹುದು, ಮತ್ತು ಅವನು ಅಂಥಾ ವಜಾ ಮೊಬಲಗನ್ನು ಕೊಡುವದಕ್ಕಾಗಲಿ ಅಥವಾ ಅದಕ್ಕಾಗಿ ದಾವಾವಿಗಾಗಲಿ ಒಳಗಾಗತಕ್ಕದ್ದಿಲ್ಲವು.

ದಾಸ್ತಾನಿನಲ್ಲಿರುವ ಸರಕುಗಳನ್ನು ಕುರಿತು ನಿಬಂಧನೆ.

22. (1) ಈ ರೆಗ್ಯುಲೇಷನಿನ ಅಮಲ್ ಷುರುವಿನಲ್ಲಿ ಯಾವದೊಂದು ಮಗ್ಗದಕಾರ್ಖಾನೆಯ ವತಾರದಲ್ಲಿರುವ ಮತ್ತು ಇದ್ದ ಹಾಗೆಯೇ ಅಥವಾ ಕಟ್ಟುಗಳಾಗಿ ಯಾಗಲಿ ಪ್ಯಾಕೆಟ್ಟುಗಳಾಗಿಯಾಗಲಿ ಮಡಾಯಿಸಲ್ಪಟ್ಟನಂತರ ಕಾರ್ಖಾನೆಯಿಂದ ಒಯ್ಯಲ್ಪಡಲಿಕ್ಕೆ ಸಿದ್ಧವಾಗಿರುವ ಯಾವ ಸರಕುಗಳ ಮೇಲಾದರೂ ಈ ರೆಗ್ಯುಲೇಷನಿಗನುಗುಣವಾಗಿ ಯಾವ ಸುಂಕವೂ ಮೊಕರರ್ಮಾಡಲ್ಪಡತಕ್ಕದ್ದಲ್ಲ.

ಪರಂತು ಈ ರೆಗ್ಯುಲೇಷನಿನ ಅಮಲ್ ಷುರುವಿನ ಲಾಗಾಯತು ಏಳು ದಿವಸಗಳೊಳಗೆ ಅಂಥಾ ಸರಕುಗಳ ಒಂದು ಪಟ್ಟಿಯನ್ನು ತಯಾರ್ಮಾಡಿ ಡೆಪ್ಯುಟಿ ಕಮ್ಮಿಷನರ ಬಳೀಲಿ ಒಪ್ಪಿಸತಕ್ಕದ್ದು.

(2) ಈ ರೆಗ್ಯುಲೇಷನಿನ 5ನೇ ಪ್ರಕರಣಕ್ಕನುಗುಣವಾಗಿ ತಯಾರ್ಮಾಡಲ್ಪಟ್ಟ ಸರಕುಗಳ ಉತ್ಪತ್ತಿಯನ್ನು ಕುರಿತ ಲೆಕ್ಕಗಳು ಇತರ ಸರಕುಗಳನ್ನು ಕುರಿತ ಲೆಕ್ಕಗಳಿಂದ ಪ್ರತ್ಯೇಕವಾಗಿರತಕ್ಕದ್ದು.

ಕೆ. ಶೇಷಾದ್ರಿ ಅಯ್ಯರ್,
ಮೈಸೂರು ಸಂಸ್ಥಾನದ ದಿವಾನರು.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಸಿದ್ಧ ಆದ್ದು.

ಬೆಂಗಳೂರು, ಗುರುವಾರ, ಡಿಸೆಂಬರ ತಾ॥ 10, ಸನ್ 1896.

IVನೇ ಭಾಗ.

ಸರ್ಕಾರೀ ಕಾಗದ ಪತ್ರಗಳು.

Summary Of Advantages Obtainable By Men Enlisting In The Madras Army.

ಮದ್ರಾಸ್ ಫೌಜಿನಲ್ಲಿ ದಾಖಲಾಗುವಂಥವರಿಗೆ ಸಿಕ್ಕುವ ಪ್ರಯೋಜನಗಳ ಗೋಷ್ವಾರೆ.

ಸರಂಜಾಮುಗಳ ಬಗ್ಯೆ ಸಿಕ್ಕುವ ಹಣ—

ದಾಖಲಾದ ಕೂಡಲೆ	.. ..	ರೂ. 30
ವರುಷ ಬಂದಕ್ಕೆ	.. ..	,, 5

ತೊಡಿಗೆ—

ರೆಗ್ಯುಲೇಷನಿನಲ್ಲಿ ಹೇಳಿರುವ ಮೇರೆಗೆ.

ಸಂಬಳ—

ಸಂಬಳವು ಇತ್ತಲಾಗೆ ಹೆಚ್ಚಿಸೋಣಾಗಿ ಕೆಳಗೆ ಕಾಣಿಸಿದ ಮೇರೆಗೆ ಇರುತ್ತದೆ:—

	ರಾಹುತರು. ರೂ.	ಪಾಯಿದಳ. ರೂ.
ಶಿಪಾಯರ ತಿಂಗಳುಗಟ್ಲೆ ಸಂಬಳ, ದಾಖಲಾದ ಕೂಡಲೆ	11	9
ಒಳ್ಳೇ ನಡತೆಯುಳ್ಳವನಾಗಿದ್ದು ಮೂರು ವರುಷಗಳ ಕದೀಮಿನಂತರ	12	10
,, ಆರು ,,	13	11
,, ಹತ್ತು ,,	14	12

ಕಮ್ಮಿಷನ್ ಹೊಂದದ ಆಫಿಸರರ ತಿಂಗಳುಗಟ್ಲೆ ಸಂಬಳವು—

ರಾಹುತರ ಬಲದಲ್ಲಿ ರೂ. 18ರಿಂದ 26ರ ವರೆಗೆ.

ಪಾಯಿದಳದಲ್ಲಿ ರೂ. 14ರಿಂದ 20ರ ವರೆಗೆ.

ನೇಟಿವ್ ಆಫಿಸರರ ತಿಂಗಳುಗಟ್ಲೆ ಸಂಬಳವು—

ರಾಹುತರ ಬಲದಲ್ಲಿ ರೂ. 50ರಿಂದ 150ರ ವರೆಗೆ.

ಪಾಯಿದಳದಲ್ಲಿ ರೂ. 40ರಿಂದ 100ರ ವರೆಗೆ.

ಬಡ್ತಿ—

ಶಿಪಾಯಿರೊಳಗಿಂದ ಆರಿಸಲ್ಪಟ್ಟು ನಾನ್ ಕಮ್ಮಿಷನ್ಡ್ ಆಫಿಸರರಾಗಿ ಬಡ್ತಿ ಕೊಡಲ್ಪಡುವದು.
ನಾನ್ ಕಮ್ಮಿಷನ್ಡ್ ಆಫಿಸರರೊಳಗಿಂದ ಆರಿಸಲ್ಪಟ್ಟು ನೇಟಿವ ಆಫಿಸರರಾಗಿ ಬಡ್ತಿ ಕೊಡಲ್ಪಡುವದು.
ಪ್ರಯಾಣದ ವೇಳೆ ಸರ್ಕಾರದ ಖರ್ಚಿನಿಂದ ಕೊಂಡು ಹೋಗೋಣ ಅಥವಾ ಭತ್ತೆ ಕೊಡೋಣ.

ನಾನ್ ಕಮ್ಮಿಷನ್ಡ್ ಆಫಿಸರರಿಗೆ ದರ್ಜೆಯ ಸಂಬಳದ ವಿನಹಾ ತಿಂಗಳಿಗೆ ಹತ್ತು ರೂಪಾಯಿವರೆಗೆ ಹೆಚ್ಚಿಗೆ ದೊರಕುವ ಬೇರೆ ಬೇರೆ ರೆಜಿಮೆಂಟಲ್ ಉದ್ಯೋಗಗಳು ಸಿಕ್ಕಲಿಕ್ಕೆ ಆಸ್ಪದ ಉಂಟು.

ಪ್ರತಿ ಒಂದು ರಾಹುತರ ರೆಜಿಮೆಂಟಿನಲ್ಲಿ ಕುದುರೆಗಳನ್ನು ತರ್ಬೀಯತು ಮಾಡುವ ತಿಂಗಳು ಒಂದಕ್ಕೆ—ರೂ. 3—8—0 ಮತ್ತು ರೂ. 5—4—0 ಸಂಬಳವಿರುವ ಎಂಟು ಉದ್ಯೋಗಗಳಿರುತ್ತವೆ. ಇವು ಶಿಪಾಯಿರಿಗೆ ಸಿಕ್ಕಬಹುದು.

ಅಕ್ಕಿ ಪ್ರಿಯವಾದಾಗ್ಯೆ ಕಾಂಪೆನ್ಸೇಷನ್ಯಾನೆ ಭತ್ತೆ.

ಆಯುಧಗಳನ್ನು ಉಪಯೋಗಿಸುವಲ್ಲಿ ಮತ್ತು ಸೈನ್ಯಕ್ಕೆ ಸಂಬಂಧಪಟ್ಟ ನಿಶಾನಿಗಳನ್ನು ತೋರಿಸುವಲ್ಲಿ ಚಮತ್ಕಾರವನ್ನು ತೋರಿಸಿದ ಬಗ್ಯೆ ಇನಾಮುಗಳು.

ಸೋಲ್ಜರನ ಕುಟುಂಬದವರಿಗೆ ಸಹಾ ವೈದ್ಯರು ಹಣ ತೆಗದುಕೊಳ್ಳದೇನೆ ಬಂದು ಚಿಕಿತ್ಸೆ ಮಾಡುವರು.
ರೆಜಿಮೆಂಟಲ್ ಶಾಲೆಯಲ್ಲಿ ಉಚಿತವಾಗಿ ಇಂಗ್ಲಿಷ ವ ದೇಶಭಾಷೆ ವಿದ್ಯಾಭ್ಯಾಸ.
ಬಾಡಿಗೆ ಇಲ್ಲದೆ ಬಿಡಾರ ಯಾ ಆ ಬಗ್ಯೆ ಹಣ.
ಪರಾಯಿ ನೌಕರಿಗೆ ಹೋಗುವಾಗ್ಯೆ ಊಟ ಮಾಫಿ, ಭತ್ತೆ ವ ಹೆಚ್ಚಿಗೆ ತೊಡಿಗೆಗಳು.

ಒಂದರೆ ಸಂದರ್ಭಗಳಲ್ಲಿ ತಂದೆಗೆ ಯಾ ತಾಯಿಗೆ ಯಾ ವಿಧವೆಗೆ ಯಾ ಮಗನಿಗೆ ಯಾ ಮಗಳಿಗೆ ದರ್ಜೆ ಪ್ರಕಾರ ತಿಂಗಳಿಗೆ ರೂ. 2—12—0 ರಿಂದ ರೂ. 36ರ ವರೆಗೆ ಪೆನ್ಷನ್.

ಯುದ್ಧದಲ್ಲಿ ಶೂರತ್ವ ತೋರಿಸಿದವರಿಗೆ ಆರ್ಡರ್ ಆಫ್ ಮೆರಿಟ್ ಎಂಬ ಬಿರುದು ಮತ್ತು ಅದರೊಡನೆ ಸಾಧಾರಣ ಸಂಬಳ ಯಾ ಪೆನ್ಷನ್ ವಿನಹಾ ಹೆಚ್ಚಿಗೆ, ದರ್ಜೆ ಪ್ರಕಾರ ತಿಂಗಳಿಗೆ ರೂ. 1—13—4ರಿಂದ ರೂ. 60ರ ವರೆಗೆ ವರ್ಷಾಶನ.

21 ವರುಷಗಳ ನೌಕರಿನಂತರ ದರ್ಜೆ ಪ್ರಕಾರ ತಿಂಗಳಿಗೆ ರೂ. 4ರಿಂದ ರೂ. 30ರ ವರೆಗೆ ಮತ್ತು 32 ವರುಷಗಳ ನೌಕರಿ ನಂತರ ದರ್ಜೆ ಪ್ರಕಾರ ತಿಂಗಳಿಗೆ ರೂ. 7ರಿಂದ ರೂ. 50ರ ವರೆಗೆ ಪೆನ್ಷನ್.

ದೇಹಸ್ಥಿತಿಯಿಂದ ನೌಕರಿ ಬಗ್ಯೆ ಅಶಕ್ತರಾದ ಮನುಷ್ಯರಿಗೆ ನೌಕರಿ ಮೇರೆಗೆ 3 ತಿಂಗಳಿಂದ 12 ತಿಂಗಳ ವರೆಗಿನ ಸಂಬಳ ಗ್ರಾಟ್ಯೂಟಿಯಾಗಿ ಕೊಡೋಣ.

3 ವರುಷಕ್ಕಿಂತ ಹೆಚ್ಚು ಕಾಲ ನೌಕರಿಯಲ್ಲಿದ್ದರೆ ಮತ್ತು ದಳವು ಅಗತ್ಯವಿರುವ ಮಂದಿಗಿಂತ ಸೇಕಡಾ ಐದರ ಮೇರೆಗೆ ಕಡಿಮೆಯಾಗದಿದ್ದರೆ ಕೇಳಿಕೊಂಡಾಗ ನಿರ್ಬಂಧವಿಲ್ಲದೆ ಬಿಡುಗಡೆ ಪಡಿಸೋಣ.

ಅಸ್ವಸ್ಥದ ದೆಶೆಯಿಂದ ರಜಾಪಡಕೊಂಡು ಮನೆಗೆ ಹೋಗುವಾಗ ಮತ್ತು ವಾಪಸು ಬರುವಾಗ ದಾರಿ ಖರ್ಚು.

ದೇಹ ಪ್ರಕೃತಿಯ ದೆಶೆಯಿಂದ ನೌಕರಿ ಬಗ್ಯೆ ಅಶಕ್ತರೆಂಬದರಿಂದ ಪೆನ್ಷನ್ ಕೊಡಲ್ಪಟ್ಟಾಗ, ಅಸಮರ್ಥರೆಂತ ಮಾಡಲ್ಪಟ್ಟಾಗ ಯಾ ಬರ್ತರಫ್ ಮಾಡಲ್ಪಟ್ಟಾಗ ಮನೆಗೆ ಹೋಗುವ ದಾರಿಖರ್ಚು.

ಸ್ಟೇಷನು ಬದಲಾಯಿಸಲ್ಪಟ್ಟಾಗ ಮತ್ತು ಗಂಡನು ಪರಾಯಿ ನೌಕರಿಯಲ್ಲಿದ್ದಾಗ ಹೆಂಡತಿ ಮಕ್ಕಳಿಗೆ ದಾರಿಖರ್ಚು.
ಜನವರಿ ಹಬ್ಬ (ವರುಷದ ಷುರುವಿನ ದಿನ) ದ ಬಗ್ಯೆ ಮತ್ತು ಶ್ರೀ ಮಹಾರಾಣಿಯವರು ಹುಟ್ಟಿದ ದಿನದ ಬಗ್ಯೆ ಭತ್ತೆ.
ಬರ್ನ್ಯಾ ಯಾ ಶರ್ನಾ ಭಾಷೆಗಳಲ್ಲಿ ಎಲಿಮೆಂಟರಿ ಸ್ಟಾಂಡಾರ್ಡ (ಮೂಲದರ್ಜೆ) ಪರೀಕ್ಷೆ ಪ್ಯಾಸಾದ ಬಗ್ಯೆ ರೂ. 180, ಮತ್ತು ಲೋವರ್ ಸ್ಟಾಂಡಾರ್ಡ ಪ್ಯಾಸಾದ ಬಗ್ಯೆ ರೂ. 360 ಇನಾಮು.

ವರ್ಷಾಶನಗಳ ವ ಬಹುಮಾನಗಳ ಸಮೇತ ಒಳ್ಳೇ ನಡತೆ ಬಗ್ಗಿನ ಮೆಡಲ್‌ಗಳು. ಪ್ರತಿ ದಳದಲ್ಲಿಯ ಹವಲ್ದಾರರಿಗೆ ರೂ. 25ರ ವರ್ಷಾಶನದ ಸಮೇತ ಒಂದು ಬೆಳ್ಳಿಯ ಮೆಡಲು.

ಪ್ರತಿ ದಳದ ರ್‍ಯಾಂಕ್ ಅಂಡ್ ಫೈಲ್ ಅಂದರೆ ಎಲ್ಲಾ ಶಿಪಾಯಿರ ಬಗ್ಯೆ ವರುಷಂ ಪ್ರತಿ ರೂ. 25ರ ವರ್ಷಾಶನದ ಸಮೇತ ಎರಡು ಬೆಳ್ಳಿಯ ಮೆಡಲ್‌ಗಳು.

ಜಖಂ ಹೊಂದಿದ ಬಗ್ಯೆ ಗ್ರಾಟ್ಯೂಟಿಗಳು ಮತ್ತು ಪೆನ್ಷನ್‌ಗಳು ಈ ಪೆನ್ಷನ್‌ಗಳು ದರ್ಜೆಯ ವ ಜಖಮಿನ ಸ್ವಭಾವದ ಮೇರೆಗೆ ತಿಂಗಳಿಗೆ ರೂ. 3—4—0 ರಿಂದ ರೂ. 19ರ ವರೆಗೆ ಆಗಿರುತ್ತವೆ.

RESERVE.

ರಿಜರ್‌ವ್ ಅಂದರೆ ಜರೂರಾತಿ ಬಗ್ಯೆ ಇಡಲ್ಪಟ್ಟಂಥವರು.

ಐದರಿಂದ ಹನ್ನೆರಡುವರುಷಗಳ ವರೆಗೆ ನೌಕರಿಯಲ್ಲಿದ್ದು, ಒಳ್ಳೇ ನಡತೆಯುಳ್ಳ ಸೋಲ್ಜರರು ರಿಜರ್ವಿನಲ್ಲಿ ಸೇರಲಿಕ್ಕೆ ಕೇಳಬಹುದು. ಆಗ ಅವರು ತಿಂಗಳಿಗೆ ರೂ. 3ರ ಪ್ರಕಾರ ರಿಜರ್ವ್ ಸಂಬಳ ಪಡಕೊಂಡು ತಮ್ಮ ಮನೆಗಳಲ್ಲಿ ವಾಸಮಾಡಿರಬಹುದು.

ರಿಜರ್ವ್ ಮನುಷ್ಯರು ಯುದ್ಧದ ನೌಕರಿ ಬಗ್ಯೆ ಮತ್ತು ವರುಷಾವಧಿ ಟ್ರೈನಿಂಗ್ ಅಂದರೆ ತರ್ಬೀಯತಿನ ಬಗ್ಯೆ ತಮ್ಮ ದಳಗಳಲ್ಲಿ ಪುನಹಾ ಕರಕೊಳ್ಳಲ್ಪಡಲಿಕ್ಕೆ ಬದ್ಧರಾಗಿರುತ್ತಾರೆ. ಆಗ ಅವರು ರಿಜರ್ವ್ ಸಂಬಳದ ಬದಲಾಗಿ ಸೋಲ್ಜರರಾಗಿ ಪೂರ್ಣ ಸಂಬಳವನ್ನು ಹೊಂದುವರು.

ಷರಾ—ಹೆಚ್ಚಿನ ವಿವರಗಳು ಪೋಸ್ಟ್‌ಮಾಸ್ಟರ್ (ಠಾಣ್ಯದ ಮುಖ್ಯ ಉದ್ಯೋಗಸ್ಥ)ರಿಗೆ ಅರ್ಜಿ ಮಾಡೋಣದಲ್ಲಿ ಸಿಕ್ಕುವವು.

NOTIFICATION.

ಇಸ್ತಿಹಾರ್‌ನಾಮೆ.

ADVANTAGES OBTAINABLE BY MEN ENLISTING IN THE MADRAS ARMY.

ಮದ್ರಾಸ್ ಫೌಜಿನಲ್ಲಿ ದಾಖಲಾಗುವಂಥವರಿಗೆ ಸಿಕ್ಕುವ ಪ್ರಯೋಜನಗಳು.

---

1. ದಾಖಲಾದ ಕೂಡಲೇ ಅವಶ್ಯವಿರುವ ಸರಂಜಾಮುಗಳ ಬಗ್ಯೆ ಸಿಕ್ಕುವ ಹಣ ರೂ. 30.
2. ವರುಷಂ ಪ್ರತಿ ಸಿಕ್ಕುವ ಅರ್ಧ ಮೌಂಟಿಂಗ್ ಭತ್ತೆ ಬಗ್ಯೆ ಸಿಕ್ಕುವ ಹಣ ರೂ. 5, ಮೂರು ತಿಂಗಳಿಗೆ ಒಂದಾವರ್ತಿ ರೂ. 1—4—0 ಪ್ರಕಾರ ಕೊಡೋಣಾಗುವದು (a).
3. ತೊಡಿಗೆ.

ರಾಹುತರು.—ನೇಟಿವ್ ಆಫಿಸರರ ವಿನಹಾ ಇತರ ಎಲ್ಲಾ ದರ್ಜೆಯವರಿಗೆ ಒಂದುವರುಷ ಸರ್ಜ್ ಎಂಬ ಒಂದುತರದ ಸಕಲಾತಿಯ ಅಲ್ಕೆಲಿಕ್ ಎಂಬ ಒಂದು ತೊಡಿಗೆಯೂ ಮತ್ತೊಂದು ವರುಷ ಬಟ್ಟೆಯ ಒಂದು ಇಜಾರು ಮತ್ತು ವರುಷಂಪ್ರತಿ 3 ರೂಪಾಯಿ, 5 ಆಣೆ, 11 ಪೈ ಕ್ರಯಬಾಳುವ ಖಾಕಿ ತೊಡಿಗೆಗಳು ಸಿಕ್ಕುವವು.

ಐದು ವರುಷಕ್ಕೊಮ್ಮೆ ಭುಜಗಳಮೇಲೆ ಧರಿಸುವ ಉಕ್ಕಿನ ಸರಪಣಿಗಳು (ನೇಟಿವ್ ಆಫಿಸರರಿಗೆ ವಿನಹಾ).
ಐದು ವರುಷಕ್ಕೊಮ್ಮೆ ಹಂಟಿಂಗ್ ಸ್ಪರ್ಸ್‌ಗಳ ಒಂದು ಜೋಡು ಸಿಕ್ಕುವದು.

ಪ್ರತಿ ಮನುಷ್ಯನಿಗೆ ಎರಡು ವರುಷಕ್ಕೆ ಒಂದಾವರ್ತಿ ರೂ. 3—8—0 ಪ್ರಕಾರ ಒಂದು ಜೋಡು ಬೂಟ್ಸ್ ಬಗ್ಯೆ ಭತ್ತೆ.	ನೇಟಿವ್ ಆಫಿಸರರಿಗೆ ಮೊಣಕಾಲು ವರಿಗಿನ ಬೂಟ್ಸ್ ಬಗ್ಯೆ ಇತರ ಶಿಪಾಯರಿಗೆ ಮಣಿಗಂಟು ವರೆಗಿನ ಹೆಚ್ಚಿಗಿನ ಒಂದು ಜೋಡು ಬೂಟ್ಸ್ ಮತ್ತು ಪಟ್ಟೆಗಳ ಬಗ್ಯೆ.

ಯುದ್ಧಕ್ಕೆ ಹೋಗುವಾಗ ಪ್ರತಿ ಮನುಷ್ಯನಿಗೆ ರೂ. 2—8—0 ಪ್ರಕಾರ ಒಂದೊಂದು ಜೋಡು ಬೂಟ್ಸುಗಳ ಬಗ್ಯೆ ಪ್ರತಿ ಫಲ ಸಿಕ್ಕುವದು.

ಪಾಯಿದಳದವರಿಗೆ.—ನೇಟಿವ್ ಆಫಿಸರರಲ್ಲದ ಎಲ್ಲ ಶಿಪಾಯವರಿಗೆ ಮೂರು ವರ್ಷಗಳಿಗೊಮ್ಮೆ ಒಂದು ಸರ್ಜಿನ ಜಾಕಿಟ್ ಅಂಗಿ ಮತ್ತು ಷರಾಯಿ ಮತ್ತು ವರ್ಷಂಪ್ರತಿ 3 ರೂ. 1 ಆಣೆ. 4 ಪೈ ಕ್ರಯಬಾಳುವ ಖಾಕಿ ಉಡಿಗೆ.

ಯುದ್ಧಕ್ಕೆ ಹೋಗುವಾಗ ಪ್ರತಿ ಯೊಬ್ಬನಿಗೆ ಒಂದುಜೋಡು ಬೂಟ್ಸಿನ ಬಗ್ಯೆ ಪ್ರತಿಫಲ ರೂ. 2—8—0.

4. ಶಿಪಾಯರ ತಿಂಗಳಗಟ್ಲೆ ಸಂಬಳ—

	ರಾಹುತರು. ರೂ.	ಪಾಯಿದಳ. ರೂ.
ದಾಖಲಾದ ಕೂಡಲೆ	11	9
ಒಳ್ಳೇನಡತೆಯಿದ್ದು ಮೂರು ವರುಷದ ನೌಕರಿಯನಂತರ ..	12	10
ಒಳ್ಳೇನಡತೆಯಿದ್ದು ಆರು ವರುಷದ ನೌಕರಿಯನಂತರ ..	13	11
” ಹತ್ತು ” ..	14	12

5. ನೇಟಿವ್ ಆಫಿಸರರ ವ ಕಮ್ಮಿಷರ್ನ ಹೊಂದದ ಆಫಿಸರರ ತಿಂಗಳುಗಟ್ಲೆ ಸಂಬಳ—

	ರಾಹುತರು. ರೂ.	ಪಾಯಿದಳ. ರೂ.
ಸುಬೇದಾರರಿಗೆ 1ನೇ ದರ್ಜೆಯ ಪ್ರತಿ ಒಬ್ಬನಿಗೆ	150	100
” 2ನೇ ದರ್ಜೆಯ ”	110	80
ಜಮೇದಾರರಿಗೆ 1ನೇ ದರ್ಜೆಯ ”	60	50
” 2ನೇ ದರ್ಜೆಯ ”	50	40
ಹವಲ್‌ದಾರರಿಗೆ ಪ್ರತಿ ಒಬ್ಬನಿಗೆ ”	22	16
ಆ ದರ್ಜೆಯಲ್ಲಿ ಎರಡು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	23	17
ಆ ದರ್ಜೆಯಲ್ಲಿ ನಾಲ್ಕು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	24	18
ಆ ದರ್ಜೆಯಲ್ಲಿ ಆರು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ...	25	19
ಆ ದರ್ಜೆಯಲ್ಲಿ ಎಂಟು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	26	20
ನಾಯಕರು	18	14
ಆ ದರ್ಜೆಯಲ್ಲಿ ಎರಡು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	19	15
ಆ ದರ್ಜೆಯಲ್ಲಿ ನಾಲ್ಕು ವರುಷದ ನೌಕರಿಯನಂತರ ಪ್ರತಿ ಒಬ್ಬನಿಗೆ ..	20	16

6. ಪ್ರಯಾಣ ಮಾಡುವಾಗ ಭತ್ತೆ ಸರಕಾರದಿಂದ ಭಂಡಿಗಳು ಒದಗಿಸಿ ಕೊಡಲ್ಪಡದೆ ಇದ್ದಲ್ಲಿ ಮತ್ತು ಹೊಸ ಸಿಪಾಯರನ್ನು ಸೇರಿಸಿಕೊಳ್ಳುವ ಕೆಲಸದಮೇಲೆ ಇದ್ದಾಗ್ಯೆ ಮತ್ತು ರೆಗ್ಯುಲೇಷರ್ನಗಳಲ್ಲಿ ನಮೂದಿಸಲ್ಪಟ್ಟ ಇತರ ಬೇರೆಬೇರೆ ಸಂದರ್ಭಗಳಲ್ಲಿ.

ಭತ್ತೆ ತೆಗೆದುಕೊಳ್ಳಲ್ಪಟ್ಟಾಗ 8ನೇ ಕಲಮಿನಲ್ಲಿ ಹೇಳಲ್ಪಟ್ಟ ಧಾನ್ಯದಬಗ್ಗಿನ ಪ್ರತಿ ಫಲ ಕೊಡಲ್ಪಡಲಿಕ್ಕಿಲ್ಲ. ಆದರೆ ಕೆಲಸದ ಮೇಲೆ ಕಳುಹಿಸಲ್ಪಟ್ಟಾಗ ಯಾ ಯುದ್ಧಕ್ಕೆ ಹೋಗುವಾಗ ಎಲ್ಲಾ ಶಿಪಾಯರಿಗೆ ಭತ್ತೆಯಾಗಲಿ ಧಾನ್ಯದಬಗ್ಗಿನ ಪ್ರತಿ ಫಲ ವಾಗಲಿ

(a) ಈ ಅಲ್ಲೊವೆನ್ಸು ಮೊದಲನೇ ವರುಷದ ನೌಕರಿ ಮುಗಿಯುವವರೆಗೆ ಕೊಡಲ್ಪಡಲಿಕ್ಕಿಲ್ಲ. ಆ ಮೇಲೆ ಸದರೀ ವರುಷದ ಬಾಕಿ ಮತ್ತು ನಂತರದ ಮೂರುತಿಂಗಳ ಅಲ್ಲೊವೆನ್ಸು ಒಟ್ಟಿಗೆ ಕೊಡಲ್ಪಡುವದು.

ಇವುಗಳ ಪೈಕಿ ಯಾವದು ಹೆಚ್ಚೋ ಅದನ್ನು ತೆಗೆದುಕೊಳ್ಳುವ ಮುನಾಸಬು ಇರುತ್ತದೆ; ಆದರೆ ಯುದ್ಧಕಾಲದ ಭತ್ತೆ ವಿನಹಾ ಊಟದ ಖರ್ಚು ಯಾ ಆ ಬಗ್ಗೆ ಪ್ರತಿಫಲ ಸಿಕ್ಕುವ ದಳದವರು ಪರಾಯಿ ನೌಕರಿಯಲ್ಲಿದ್ದಾಗ ಯಾ ಸಮುದ್ರದ ಅತ್ತಕಡೆಯಲ್ಲಿ ಕೆಲಸದಮೇಲೆ ಇದ್ದಾಗ, ಅಂಥವರಿಗೆ ಈ ಕ್ರಮವು ಲಗಾವಾಗುವದಿಲ್ಲ.

	ತುರುಫ್ ಸವಾರರಿಗೆ ತಿಂಗಳುಗಟ್ಲೆ. ರೂ.	ಆ.	ಪೈ.	ಪಾಯಿದಳದವರಿಗೆ ತಿಂಗಳುಗಟ್ಲೆ. ರೂ.	ಆ.	ಪೈ.
ಶಿಪಾಯರಿಗೆ ಪ್ರತಿ ಒಬ್ಬನಿಗೆ	1	8	0	1	8	0
ನಾಯಕರು ಡಿಟೋ	4	0	0	5	0	0
ಹವಲ್ದಾರರು ಡಿಟೋ	5	0	0	5	0	0
ಜಮೇದಾರರು ಡಿಟೋ	8	0	0	7	8	0
ಸುಬೇದಾರರು ಡಿಟೋ	30	0	0	14	3	3

7. ಹುದ್ದೆಯ ಸಂಬಳದ ವಿನಹಾ ಈ ಕೆಳಗಣ ಸ್ಟಾಫ್ ಅಲೊವೆನ್ಸು ಶಿಕ್ಕುವ ರೆಜಿಮೆಂಟಲ್ ಉದ್ಯೋಗಗಳು—

	ತುರುಫ್ ಸವಾರ ತಿಂಗಳುಗಟ್ಲೆ. ರೂ.	ಆ.	ಪೈ.	ಪಾಯಿದಳ ತಿಂಗಳುಗಟ್ಲೆ. ರೂ.	ಆ.	ಪೈ.
ರಫ್ ರೈಡರ್ ಅಂದರೆ ಕುದುರೆ ಸವಾರಿ ಕಲಿಸುವವನಿಗೆ 1ನೇ ದರ್ಜೆಯ ಪ್ರತಿಒಬ್ಬನಿಗೆ	5	4	0	..		

	ರಾಹುತರ ಬಲ ತಿಂಗಳುಗಟ್ಲೆ. ರೂ.	ಆ.	ಪೈ.	ಪಾಯಿದಳ ತಿಂಗಳುಗಟ್ಲೆ. ರೂ.	ಆ.	ಪೈ.
ರಫ್ ರೈಡರ್ ಅಂದರೆ ಕುದುರೆ ಸವಾರಿ ಕಲಿಸುವವನಿಗೆ 2ನೇ ದರ್ಜೆಯ ಪ್ರತಿ ಒಬ್ಬನಿಗೆ	3	8	0	..		
ಕವಾತು ಕಲಿಸುವ ನಾಯಕ ಸ್ಟಾಫ್ ಅಲೊವೆನ್ಸು ..	7	0	0	3	8	0
ಕವಾತು ಕಲಿಸುವ ಹವಲ್ದಾರ ಡಿಟೋ ..	10	8	0	5	4	0
ಬಾವಟೆ ಹವಲ್ದಾರ, ಸ್ಟಾಫ್ ಅಲೊವೆನ್ಸು ಪ್ರತಿ ಒಬ್ಬನಿಗೆ ..	0	0	0	2	0	0
ತೈನಾತಿ ಹವಲ್ದಾರ, ಸ್ಟಾಫ್ ಅಲೊವೆನ್ಸು ಪ್ರತಿ ಒಬ್ಬನಿಗೆ ..	1	13	10	1	13	10
ರೆಜಿಮೆಂಟಲ್ ಹವಲ್ದಾರ, ಮೇಜರ್, ಸ್ಟಾಫ್ ಅಲೊವೆನ್ಸು ..	10	0	0	10	0	0
ಸೈನ್ಯದ ಹವಲ್ದಾರ, ಮೇಜರರು, ಸ್ಟಾಫ್ ಅಲೊವೆನ್ಸು ಪ್ರತಿ ಒಬ್ಬನಿಗೆ	2	0	0	0	0	0
ಜಮೇದಾರ ಅಜುಟ್ಯಾಂಟ್, ಸ್ಟಾಫ್ ಅಲೊವೆನ್ಸು ..	17	8	0	17	8	0
ಸುಬೇದಾರ ಮೇಜರ್, ಸ್ಟಾಫ್ ಅಲೊವೆನ್ಸು ...	50	0	0	50	0	0

8. ತಮ್ಮ ರೆಜಿಮೆಂಟುಗಳೊಂದಿಗೆ ಹಾಜರಿರುವ ಮನುಷ್ಯರಿಗೆ, ಕಿಯಂ ತರದ ಅಕ್ಕಿಯ ಮೌಲ್ಯವು ನಿರ್ಣಯಿಸಲ್ಪಟ್ಟ ಒಂದರೆ ದರಕ್ಕೆ ಮೀರಿದರೆ ಮತ್ತು ಭತ್ತೆ, ಊಟದ ಖರ್ಚು ಯಾ ಆಬಗ್ಗೆ ಪ್ರತಿಫಲ ಸಿಕ್ಕದಿದ್ದಾಗ ಅಕ್ಕಿ ಪ್ರಿಯವಾದದ್ದಕೋಸ್ಕರ ಪರಿಹಾರ ದ್ರವ್ಯವು ಕೊಡಲ್ಪಡುವದು.

9. ಖಡ್ಗರ ವ ಈಟಿಯ ಸಾಧಕದಲ್ಲಿ ಕುಶಲತೆಯನ್ನು ಪಡೆದ ಯಾ ಒಳ್ಳೆಗುರಿ ಇಟ್ಟು ಗುಂಡು ಹೊಡೆಯುವ ಬಗ್ಗೆ ಪ್ರತಿ ಒಂದು ರೆಜಿಮೆಂಟಿನಲ್ಲಿ ವರುಷಂಪ್ರತಿ ಇನಾಮು ಕೊಡಲ್ಪಡುವವು.

10. ಅಸ್ವಸ್ಥದಲ್ಲಿ ಬಿದ್ದಾಗ್ಯೆ ಅವರಿಗೂ ಅವರ ಕುಟುಂಬದವರಿಗೂ ವೈದ್ಯ ಉದ್ಯೋಗಸ್ಥರು ಫೀಸು ತೆಗೆದುಕೊಳ್ಳದೇನೇ ಬಂದು ನೋಡುವರು.

11. ಶಿಪಾಯರ ವ ಅವರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಸರಕಾರದಿಂದ ಇಂಗ್ಲೀಷ್ ವ ದೇಶಭಾಷಾ ಶಾಲೆಗಳು ಇಡಲ್ಪಟ್ಟಿವೆ.

12. ಪೆನ್ಷನ್ ವ ರಿಕ್ರೂಟು ಹುಡುಗರು.—ಪ್ರತಿ ಒಂದು ರಾಹುತರ ಬಲದ ರೆಜಿಮೆಂಟಿನಲ್ಲಿ ಹದಿನಾರು ರಿಕ್ರೂಟು ವ 14 ಪೆನ್ಷನ್ ಹುಡುಗರೂ ಪ್ರತಿ ಒಂದು ಪಾಯಿದಳದ ರೆಜಿಮೆಂಟಿನಲ್ಲಿ 24 ಹೊಸ ಶಿಪಾಯಿ ವ 18 ಪೆನ್ಷನ್ ಹುಡುಗರೂ (ದಿಕ್ಕಿಲ್ಲದ ಮಕ್ಕಳು ವ ದೊಡ್ಡ ಕುಟುಂಬವಿರುವ ಮಾಜಿ ಶಿಪಾಯರ ಹುಡುಗರು) ದಾಖಲ್ಮಾಡಲ್ಪಡುವರು. ಪ್ರತಿ ಒಬ್ಬ ರಿಕ್ರೂಟು ಹುಡುಗನಿಗೆ ತಿಂಗಳಿಗೆ 5 ರೂಪಾಯಿಯೂ ಪೆನ್ಷನ್ ಹುಡುಗನಿಗೆ 4 ರೂಪಾಯಿಯೂ ಶಿಕ್ಕುವದು ಮತ್ತು ಕಿಯಂ ತರದ ಅಕ್ಕಿಯ ಮೌಲ್ಯವು ನಿರ್ಣಯಿಸಲ್ಪಟ್ಟ ಒಂದರೆ ದರಕ್ಕೆ ಮೀರಿದರೆ ಪರಿಹಾರದ್ರವ್ಯ ಸಹ ಸಿಕ್ಕುವದು.

13. ದಂಡಿನಲ್ಲಿ ಶೇರುವದಕ್ಕೆ ಹೆಸರು ಬರಿಸಿಕೊಂಡಮೇಲೆ, ಅಥವಾ ಒಂದು ಹೊಸ ಠಾಣ್ಯಕ್ಕೆ ಹೋಗುವಾಗ್ಯೆ ಸರಕಾರದಿಂದ ಬಿಡಾರ ಕೊಡೋಣಾಗದಿರುವಲ್ಲಿ ಹಟ್ಟಿಂಗ್ ಮನಿ ಎಂಬ ಬಿಡಾರ ಮಾಡಿಕೊಳ್ಳಲಿಕ್ಕೆ ಕೊಡೋಣಾಗುವ ಹಣ—

	ರೂ.
ಶಿಪಾಯಿಯರು ಪ್ರತಿ ಒಬ್ಬನಿಗೆ	2
ನಾಯಕರು ಡಿಟೋ	3
ಹವಲ್ದಾರರು ಡಿಟೋ	4
ಜಮೇದಾರರು ಡಿಟೋ	12
ಸುಬೇದಾರರು ಡಿಟೋ	24

14. ಪರಾಯಿ ದೇಶದಲ್ಲಿ ಮತ್ತು ಯುದ್ಧದಲ್ಲಿ ನೌಕರಿ ಮಾಡುತ್ತಿರುವ ಸಮಯದಲ್ಲಿ, ಅಥವಾ ಸಮುದ್ರದ ಅತ್ತಕಡೆ ಚಾಕರಿ ಮಾಡುತ್ತಿರುವ ಸಮಯದಲ್ಲಿ ಕೆಲಸದಮೇಲೆ ಹೊರಡುವಾಗ್ಯೆ ಕರಾವಳಿಯ ಮೇಲೆ ಒಂದು ಬಂದರಿಂದ ಇನ್ನೊಂದು ಬಂದರಕ್ಕೆ ಹೋಗುವಾಗ್ಯೆ ಊಟದ ಖರ್ಚು ಮತ್ತು ಭತ್ತೆ.

ಪರಾಯಿ ದೇಶದಲ್ಲಿ ನೌಕರಿಬಗ್ಗೆ ಹಡಗನ್ನೇರುವಾಗ್ಯೆ ಕೆಳಗೆ ಬರೆದ ಸಾಮಾನುಗಳು ಉಚಿತವಾಗಿ ಕೊಡೋಣಾಗುವವು:—

1 ಜೋಡು ಊರಿನಲ್ಲಿ ಮಾಡಿದ ಬೂಟ್ಸು;	2 ಫ್ಲಾನೆಲ್ ವಿಜಾರುಗಳು;
1 ಕಂಬಳಿ;	2 ಫ್ಲಾನೆಲ್ ತುಂಡಂಗಿಗಳು;

ಬರ್ಮಾವಿನಲ್ಲಿ ಬೆಟ್ಟ ಪ್ರದೇಶಗಳಲ್ಲಿರುವಾಗ್ಯೆ ಹೆಚ್ಚಿಗೆ ಉಂಣೆ ತೊಡಿಗೆ.

ಪರಾಯಿ ದೇಶದಲ್ಲಿ ನಾಕರಿ ಮಾಡುತ್ತಿರುವಾಗ್ಯೆ ಸರಕಾರದಿಂದ ಬಿಡಾರ; ವ ಬರ್ಮಾ ಮತ್ತು ಪೋರ್ಟಬ್ಲ್ಯೆರನಲ್ಲಿ ನಾಕರಿ ಮಾಡುತ್ತಿರುವಾಗ್ಯೆ ಬಾರಕ್ ಸಾಮಾನು ವ ವಿವಿಧ ತರದ ಬೇರೆ ಸಾಮಾನುಗಳು.

15. ಕೆಳಗೆ ಹೇಳಿರುವ ಪ್ರಕಾರ ಪೆಂಷನ ತಂದೆಗೆ ಯಾ ತಾಯಿಗೆ ಅಥವಾ ವಿಧವೆಗೆ ಅಥವಾ ಮಗನಿಗೆ ಯಾ ಮಗಳಿಗೆ ಕೆಳಗೆ ವಿವರಿಸಿದ ವಿದ್ಯಮಾನಗಳಲ್ಲಿ ಕೊಡೋಣಾಗುವವು:—

(a) ಯುದ್ಧಕಾಲದಲ್ಲಿ ಒಬ್ಬ ಸೋಲ್ಜರನು ಕೊಲ್ಲಲ್ಪಟ್ಟರೆ ಅಥವಾ ಘಾಯಗಳಾದನಂತರ ಆರು ತಿಂಗಳೊಳಗೆ ಅಂಥಾ ಘಾಯಗಳ ದೆಸೆಯಿಂದ ಸತ್ತರೆ.

(b) ಒಬ್ಬ ಸೋಲ್ಜರನು ಪರಾಯಿದೇಶದಲ್ಲಿ ನಾಕರಿ ಮಾಡುತ್ತಿರುವಾಗ್ಯೆ ಸತ್ತರೆ ಅಥವಾ ಅಲ್ಲಿಂದ ಬಂದನಂತರ ಅಂಥ ನಾಕರಿ ಸಮಯದಲ್ಲಿ ಅಥವಾ ಅದರ ದೆಸೆಯಿಂದ ಪ್ರಾಪ್ತವಾದ ಅಸ್ವಸ್ಥದ ಸಂಬಂಧ ಆಸ್ಪತ್ರಿಯಲ್ಲಿ ದಾಖಲಾದವನು ಅಲ್ಲಿಂದ ಬಿಡುಗಡೆಯಾಗುವ ಮುಂಚೆ ಸತ್ತರೆ—

		(a) ತಿಂಗಳಿಗೆ. ರೂ.	ಆ.	ಪೈ.	(b) ತಿಂಗಳಿಗೆ. ರೂ.	ಆ.	ಪೈ.
ಸುಬೇದಾರರ ವಾರಿಸ್‌ದಾರರಿಗೆ	.. ..	36	0	0	26	0	0
ಜಮೇದಾರರ ಡಿಟೋ	.. ..	13	13	0	8	8	0
ಹವಲ್‌ದಾರರ ಡಿಟೋ	.. ..	4	8	0	4	8	0
ನಾಯಕರ ಡಿಟೋ	.. ..	3	8	0	3	8	0
ಶಿಪಾಯಿಯರ ಡಿಟೋ	.. ..	2	12	0	2	12	0

16. ಯುದ್ಧದಲ್ಲಿ ಪರಾಕ್ರಮ ತೋರಿಸಿದ್ದಕ್ಕೆ ಯೋಗ್ಯತಾನುಸಾರವಾಗಿ ಇನಾಮು ಕೊಡುವ ಕ್ರಮ—

ತಿಂಗಳಿಗೆ.

			ಅವಲ್ ತರಹ. ರೂ.	ಆ.	ಪೈ.	ದುಯಂ ತರಹ. ರೂ.	ಆ.	ಪೈ.	ಸಿಯಂ ತರಹ. ರೂ.	ಆ.	ಪೈ.
ಸುಬೇದಾರರಿಗೆ ..	ರಾಹುತರ ಬಲ	..	60	0	0	40	0	0	20	0	0
	ಪಾಯಿದಳ	..	52	0	0	34	10	8	17	5	4
ಜಮೇದಾರರಿಗೆ ..	ರಾಹುತರ ಬಲ	..	24	0	0	16	0	0	8	0	0
	ಪಾಯಿದಳ	..	17	0	0	11	5	4	5	10	8
ಹವಲ್‌ದಾರರಿಗೆ ..	ರಾಹುತರ ಬಲ	..	15	0	0	10	0	0	5	0	0
	ಪಾಯಿದಳ	..	9	0	0	6	0	0	3	0	0
ನಾಯಕರಿಗೆ ..	ರಾಹುತರ ಬಲ	..	12	0	0	8	0	0	4	0	0
	ಪಾಯಿದಳ	..	7	0	0	4	10	8	2	5	4
ಶಿಪಾಯಿಯರಿಗೆ ..	ರಾಹುತರ ಬಲ	..	7	8	0	5	0	0	2	8	0
	ಪಾಯಿದಳ	..	5	8	0	3	10	8	1	13	4

ಮೇಲೆ ಹೇಳಿದ ಪ್ರಕಾರ ಇನಾಮು, ಅವರ ಸಂಬಳ ಯಾ ಪೆಂಷನ ಅಲ್ಲದೆ, ಯಾವ ಜ್ಜೀವವೂ ಹೆಚ್ಚಿಗೆಯಾಗಿ ಕೊಡೋಣಾದೀತು ಮತ್ತು ಗಂಡ ಸತ್ತ ನಂತರ ಮೂರು ವರುಷಗಳ ವರೆಗೆ ಅವರ ವಿಧವೆಯರಿಗೂ ಕೊಡೋಣಾಗುವದು.

17. ದೇಶಿಯ ಉದ್ಯೋಗಸ್ಥರಲ್ಲಿ ಕುಂದಿಲ್ಲದ ನಡತೆಯವರಾಗಿ ಪ್ರಖ್ಯಾತಿಗೊಂಡು ಬಹುಕಾಲ ನಾಕರಿ ಮಾಡಿದವರಿಗೆ ಕೊಡೋಣಾಗುವ ಬ್ರಿಟಿಷ್ ಇಂಡಿಯದ ಬಹುಮಾನ—

			ರೂ.
ಅವಲ್ ತರಗತಿ "ಸರ್ದಾರ್ ಬಹದೂರ್"	..	..	2 ದಿವಸ 1ಕ್ಕೆ.
ದುಯಂ ತರಗತಿ "ಬಹದೂರ್"	..	..	1 "

ಮೇಲೆ ಹೇಳಿದ ಭತ್ತೆಯು, ಸಂಬಳ ವ ಭತ್ತೆ ಯಾ ಪೆಂಷನ ಅಲ್ಲದೆ ಹೆಚ್ಚಿಗೆಯಾಗಿ ಯಾವ ಜ್ಜೀವವೂ ಕೊಡೋಣಾಗುತ್ತದೆ.

18. ಪೆಂಷನ—

ತಿಂಗಳಿಗೆ.

			ಸಾಧಾರಣ ತರದ್ದು 21 ವರುಷ ಕದೀಮಿ ಆದ ನಂತರ. ರೂ.	ಮೇಲ್ ತರದ್ದು, ಪೆಂಷನ ತೆಗದುಕೊಳ್ಳುವ ವರೆಗೆ ಕುಂದಿಲ್ಲದ ನಡತೆಯುಳ್ಳವನಾಗಿ ಶ್ರೇಯಸ್ಕರವಾಗಿ ನಾಕರಿ ವ ಶ್ರದ್ಧೆಯಿಂದ ಕೆಲಸ ಮಾಡಿ 32 ವರುಷ ಕದೀಮಿ ಆದನಂತರ. ರೂ.
ಶಿಪಾಯಿಯರಿಗೆ	..	..	4	7
ನಾಯಕರಿಗೆ ವ ಹವಲ್‌ದಾರರಿಗೆ		..	7	12
ಜಮೇದಾರರಿಗೆ	..	..	15	25
ಸುಬೇದಾರರಿಗೆ	..	..	30	50

19. ದೇಹ ಪ್ರಕೃತಿ ಮೇರೆಗೆ ಕೆಲಸಕ್ಕೆ ಅಯೋಗ್ಯರೆಂದು ಹೇಳೋಣಾದವರಿಗೆ ಗ್ರಾಟ್ಯೂಟಿ:—

5 ವರುಷಗಳ ಮೇಲೆ	10 ವರುಷಗಳೊಳಗೆ ಕದೀಮಿಯುಳ್ಳವರಿಗೆ			ತರಗತಿಯ ದಾಮಾಷೆಯಲ್ಲಿ	3 ತಿಂಗಳ ಸಂಬಳ	
10 ,,	15	,,	,,	,,	6	,,
15 ,,	21	,,	,,	,,	12	,,

20. ರಜಿಮೆಂಟಿನಲ್ಲಿ ಅಗತ್ಯವುಳ್ಳ ಸಂಖ್ಯೆಗಿಂತ ಶೇಕಡಾ 5ರಷ್ಟು ಕಡಿಮೆ ಇಲ್ಲದಿರುವ ಸಂಗತಿಯಲ್ಲಿ, ಅಪೇಕ್ಷೆ ಮಾಡಿದರೆ 3 ವರುಷಕ್ಕಿಂತ ಹೆಚ್ಚು ಕದೀಮಿಯುಳ್ಳವರನ್ನ ಏನೂ ಆತಂಕವಿಲ್ಲದೆ ಡಿಸ್‌ಚಾರ್ಜ್ ಮಾಡೋಣಾದೀತು.

21. ದಾರಿ ಖರ್ಚು ದೇಶಿಯ ಸೋಲ್ಜರರಿಗೆ—

(i) ಅವರು ದಾಖಲಾದ ನಂತರ ತಮ್ಮ ಫೌಜನ್ನು ಸೇರಲಿಕ್ಕೆ ಹೋಗುವಾಗ್ಯೆ, ಕೆಲಸದ ಮೇಲೆ ಹೋಗುವಾಗ್ಯೆ, ಸರಕಾರಿ ಕಾರಣಗಳ ಮೇಲೆ ಒಂದು ರೆಜಿಮೆಂಟಿನಿಂದ ಇನ್ನೊಂದು ರೆಜಿಮೆಂಟಿಗೆ ವರ್ಗವಾಗಿ ಹೋಗುವಾಗ್ಯೆ, ಫರ್ಲೋ ವ ವೈದ್ಯ ಇಲಾಖೆಯ ಸರ್ಟಿಫಿಕೇಟಿನ ರಜಾದ ಮೇಲೆ ಹೋಗುವಾಗ್ಯೆ ವ ವಾಪಸ್ ಬರುವಾಗ್ಯೆ, ಪೆನ್ಷನ್ ಪಡೆಕೊಂಡು ಅಶಕ್ತಿಯವನಾಗಿ, ಅಥವಾ ಹೆಚ್ಚು ಕೆಲಸ ಮಾಡಲಿಕ್ಕೆ ದೇಹಪ್ರಕೃತಿ ಮೇರಿಗೆ ಅಯೋಗ್ಯನೆಂತ ಡಿಸ್‌ಚಾರ್ಜ್ ಮಾಡೋಣಾಗಿ ರೈಲ್ ಮಾರ್ಗವಾಗಿ ಮನೆಗೆ ಹೋಗುವಾಗ್ಯೆ.

ಅವರು ಕೆಲಸದ ಮೇಲೆ ಹೋಗುವಾಗ್ಯೆ, ಸರಕಾರಿ ಕಾರಣಗಳ ಮೇಲೆ ಒಂದು ರೆಜಿಮೆಂಟಿನಿಂದ ಇನ್ನೊಂದು ರೆಜಿಮೆಂಟಿಗೆ ವರ್ಗವಾಗಿ ಹೋಗುವಾಗ್ಯೆ, ವೈದ್ಯ ಇಲಾಖೆಯ ಅಧಿಕಾರಸ್ಥರು ಅಗತ್ಯವೆಂತ ತಿಳಕೊಳ್ಳುವದಾದರೆ, ವೈದ್ಯ ಇಲಾಖೆಯವರ ಸರ್ಟಿಫಿಕೇಟಿನ ರಜಾದ ಮೇಲೆ ಹೋಗುವಾಗ್ಯೆ ವ ವಾಪಸ್ ಬರುವಾಗ್ಯೆ, ಪೆನ್ಷನ್ ಪಡಕೊಂಡು, ಅಶಕ್ತಿಯವನಾಗಿ, ಅಥವಾ ಹೆಚ್ಚು ಕೆಲಸ ಮಾಡಲಿಕ್ಕೆ ದೇಹ ಪ್ರಕೃತಿ ಮೇರಿಗೆ ಅಯೋಗ್ಯವೆಂತ ಡಿಸ್‌ಚಾರ್ಜ್ ಮಾಡೋಣಾಗಿ ಹೋಗುವಾಗ್ಯೆ, ಸಮುದ್ರ ಮಾರ್ಗವಾಗಿ ಹೋಗಲಿಕ್ಕೆ; ಉಚಿತವಾಗಿ ಪಾಸ್ ಕೊಡೋಣಾದೀತು.

ದೇಶೀಯರುಳ್ಳ ಫೌಜಿನವರಿಗೆ, ಪೆನ್ಷನ್ ಪಡಕೊಂಡು ಯಾ ಡಿಸ್‌ಚಾರ್ಜ್ ಆಗಿ ಹೋಗುವಾಗ್ಯೆ, ಉಚಿತವಾಗಿ ಪಾಸು ಕೊಡೋಣಾಗದಿರುವ ಸಂಗತಿಯಲ್ಲಿ ಪ್ರತಿ ಹತ್ತು ಮೈಲಿಗಳಿಗೆ $3\frac{1}{3}$ ಆಣೆ ಪ್ರಕಾರ ಪ್ರಯಾಣದ ಭತ್ತೆ ಕೊಡೋಣಾಗುತ್ತದೆ.

(ii) ದಳವು ಸಹಾಯಕ್ಕೆ ಹೋಗುವಾಗ್ಯೆ ಯಾ ಬೇರೆ ತರದ ಕಾಯಂ ಸ್ವಭಾವದ ಕೆಲಸದ ಮೇಲೆ ಹೋಗುವಾಗ್ಯೆ ದೇಶೀಯ ಸೋಲ್ಜರರ ಕುಟುಂಬವನ್ನು, ಅವರ ಸಂಗಡ ಹೋಗಲಿಕ್ಕೆ ಬಿಡೋಣಾದರೆ ರೈಲ್ ಮಾರ್ಗವಾಗಿ ಸಮುದ್ರ ಮಾರ್ಗವಾಗಿ ಹೋಗಲಿಕ್ಕೆ ಉಚಿತವಾಗಿ ಪಾಸ್ ಕೊಡೋಣಾಗುತ್ತದೆ. ಅಥವಾ ದಳವು ಇಂಡಿಯದ ಗಡಿ ಹೊರಗೆ ಪರಾಯಿ ದೇಶದಲ್ಲಿ ನೌಕರಿ ಯಾ ಯುದ್ಧಕ್ಕೆ ಹೋದ ಮೇಲೆ ಸದರೀ ಕುಟುಂಬದವರಿಗೆ ಮನೆಗೆ ಹೋಗುವ ಬಗ್ಯೆ ಅಥವಾ ಅಂಥ ಕೆಲಸದಿಂದ ವಾಪಸು ಬಂದಲ್ಲಿ ಪುನಹಾ ರೆಜಿಮೆಂಟಿಗೆ ಬಂದು ಸೇರುವಾಗ್ಯೆ ಅದೇ ರೀತಿಯಲ್ಲಿ ಉಚಿತವಾಗಿ ಪಾಸು ಕೊಡೋಣಾಗುವದು.

ದೇಶೀಯ ದಳಗಳು ಸಹಾಯಕ್ಕಾಗಿ ಭೂಮಾರ್ಗವಾಗಿ ಹೋಗುವಾಗ್ಯೆ ಅವರ ಕುಟುಂಬವು ಸಂಗಡಲೇ ಹೋಗುವ ಸಂಗತಿಯಲ್ಲಿ, ಅಥವಾ ಮದ್ರಾಸಿನ ಫೌಜುಗಳನ್ನು ಲೆಫ್ಟಿನೆಂಟ್ ಜನರಲ್ ಅವರನ್ನ ರೈಲ್ ಮಾರ್ಗವಾಗಿ ಯಾ ಬೇರೆ ವಿಧದ ವಾಹನಗಳ ಮೇಲೆ ಅವರ ಸ್ವಂತ ಖರ್ಚಿನಿಂದ ಹೋಗಲಿಕ್ಕೆ ಬಿಟ್ಟಲ್ಲಿ ದಳದವರು ಹೋದಷ್ಟು ದೂರಕ್ಕೆ ಮೊದಲಿನ ಗಾಡಿ ಬಾಡಿಗೆಗೂ ಪ್ರಕೃತದ ಗಾಡಿ ಬಾಡಿಗೆಗೂ ಇರುವ ವ್ಯತ್ಯಾಸವು ಕುಟುಂಬದವರ ಪ್ರಯೋಜನಾರ್ಥವಾಗಿ ಸರಕಾರದಿಂದ ಕೊಡೋಣಾಗುತ್ತದೆ.

ಷರಾ.—"ಕುಟುಂಬಗಳು" ಎಂಬ ಪದವು ಹೆಂಡತಿ ವ ಮಕ್ಕಳನ್ನು ಮಾತ್ರ ಅಡಗಿಸಿಕೊಳ್ಳುತ್ತದೆ ಮತ್ತು ಅದು ಸರಕಾರದಿಂದ ಅಂಗೀಕರಿಸೋಣಾಗಿ ರೆಜಿಮೆಂಟಿನಲ್ಲಿ ವಾಸವಾಗಿರಲಿಕ್ಕೆ ಬಿಡೋಣಾದ ಕುಟುಂಬಗಳಿಗೆ ಮಾತ್ರ ಲಗಾವಾಗುತ್ತದೆ.

22. ಜನವರಿ ಹಬ್ಬದ ಮೊದಲನೇ ದಿವಸ, ಶ್ರೀ ಮಹಾರಾಣಿಯವರ ಜನ್ಮ ದಿನ ಮತ್ತು ಸ್ಪೈರ್ಷ ಮೊದಲಾದವುಗಳ ಕಮಾಂಡಿಂಗ್ ಆಫೀಸರರು ಕೊಡುವದು ನ್ಯಾಯವೆಂತ ತಿಳಕೊಳ್ಳುವ ಕಾಲಗಳಲ್ಲಿ, ಅಥವಾ ಸರಕಾರದವರಿಂದ ವಿಶೇಷವಾಗಿ ಹುಕುಂ ಕೊಡೋಣಾದ ಕಾಲಗಳಲ್ಲಿ ಆಯಾ ಗ್ರೇಡಿಗಳಿಗೆ ಕೊಡೋಣಾಗುವ ಭತ್ತೆಯ ದರದಲ್ಲಿ ಡ್ರೈ ಭತ್ತೆ ಎಂಬ ನಗದು ಭತ್ತೆ ಕೊಡೋಣಾಗುತ್ತದೆ.

23. ರೆಜಿಮೆಂಟಿಗೆ ಅಗತ್ಯವಿರುವ ಸಾಮಾನುಗಳ ಪೈಕಿ ಯಾವದಾದರೂ ಸಾಮಾನಿನ ಅನಿವಾರ್ಯವಾದ ನಷ್ಟದ ಬಗ್ಯೆ ಲುಕ್ಸಾನು ಕೊಡೋಣಾಗುತ್ತದೆ.

24. ರೆಜಿಮೆಂಟಿನ ಸಿಗ್ನಲರ ಪೈಕಿ ಪ್ರತಿ ಒಂದು ರೆಜಿಮೆಂಟಿನಲ್ಲಿ ಬಹಳ ಹುಷಾರುಳ್ಳ ಎಂಟು ಮಂದಿಗೆ ವರುಷ 1ಕ್ಕೆ 5 ರೂಪಾಯಿ ದರದಲ್ಲಿ ಬೋನಸ್ ಕೊಡೋಣಾಗುತ್ತದೆ.

25. ಬರ್ಮೀ ಮತ್ತು ಶಾನ್ ಭಾಷೆಯ ಪರೀಕ್ಷೆಯಲ್ಲಿ ತೇರ್ಗಡೆಪಟ್ಟ ಬಗ್ಯೆ ದೇಶೀಯ ಉದ್ಯೋಗಸ್ಥರಿಗೆ ವ ಇತರರಿಗೆ ಇನಾಮು ಶಿಕ್ಕುತ್ತದೆ:—

			ರೂ.
ಬರ್ಮೀ ..	ಮೂಲ ದರ್ಜೆ	.. .. ..	180
	ಕೆಳ ದರ್ಜೆ	.. .. ..	360
ಶಾನ್ ..	ಮೂಲ ದರ್ಜೆ	.. .. ..	180
	ಕೆಳ ದರ್ಜೆ	.. .. ..	360

26. ವರುಷಾಶನದೊಡನೆ ವ ಇನಾಮಿನೊಡನೆ ಬಹಳ ನಡತೆ ಬಗ್ಯೆ ಬಿರುದಿನ ಬಿಲ್ಲೆಗಳು ಕೊಡೋಣಾಗುತ್ತವೆ. ರಾಹುತರ ಯಾ ಪಾಯಿದಳದವರ ಪ್ರತಿ ಒಂದು ರೆಜಿಮೆಂಟಿನ ಹವಲ್‌ದಾರ್ ಮೇಜರನ ಸಹಿತ ಹವಲ್‌ದಾರರಿಗೆಲ್ಲ 25 ರೂಪಾಯಿ ವರುಷಾಶನದೊಡನೆ "ಶ್ರೇಯಸ್ಕರವಾದ ನೌಕರಿಯ ಬಗ್ಯೆ" ಎಂತ ಬರೆದಿರುವ ಬೆಳ್ಳಿಯ ಬಿರುದಿನ ಬಿಲ್ಲೆ ಕೊಡೋಣಾಗುತ್ತದೆ.

ರಾಹುತರ ವ ಪಾಯಿದಳದವರ ಪ್ರತಿ ಒಂದು ರೆಜಿಮೆಂಟಿಗೆ 25 ರೂಪಾಯಿ ವರುಷಾಶನದೊಡನೆ "ಹೆಚ್ಚು ಕದೀಮಿ ವ ಒಳ್ಳೆ ನಡತೆ ಬಗ್ಯೆ" ಎಂತ ಬರೆದಿರುವ ಬೆಳ್ಳಿಯ ಎರಡು ಬಿರುದಿನ ಬಿಲ್ಲೆಗಳು ಕೊಡೋಣಾಗುತ್ತವೆ.

27. (ನೇಟಿವ್ ಆಫಿಸರರ ವಿನಹಾ) ಸೋಲ್ಜರರು ಮೇಲೆ ಕ್ರಿಮಿನಲ್ ತಕ್ಸೀರುಗಳು ಹೊರಿಸಲ್ಪಟ್ಟಲ್ಲಿ ಮೂಲ ವಿಚಾರಣೆಯಲ್ಲಿಯೂ ಅಪ್ಪೀಲಿನಲ್ಲಿಯೂ ಡಿಫೆನ್ಸಿನ ಬಗ್ಯೆ ವಕೀಲರು ನೇಮಿಸಲ್ಪಡುವರು.

28. ಕಮ್ಮಿಷನ್ ಹೊಂದಿದ ಆಫಿಸರನ ಸಮ್ಮತವಾಗಿ ಒಬ್ಬ ನೇಟಿವ್ ಪೆನ್ಷನ್‌ದಾರನು ಗವರ್ನಮೆಂಟಿನವರ ಕೆಳಗೆ ಯಾವ ಉದ್ಯೋಗವನ್ನಾದರೂ ಪಡೆಯಬಹುದು; ಮತ್ತು ತನ್ನ ಪೆನ್ಷನ್ ವಿನಹಾ ಆ ಕೆಲಸದ ಬಗ್ಗಿನ ಸಂಬಳವನ್ನು ಪಡಕೊಳ್ಳಬಹುದು.

29. ಶಾಲಕ್ಕೋಸ್ಕರ ಕೈದಿನಲ್ಲಿಡಲ್ಪಟ್ಟ ಕಾಲದ ಬಗ್ಯೆ ಒಬ್ಬನು ತನ್ನ ಪೆನ್ಷನನ್ನು ಕಳಕೊಳ್ಳುವದಿಲ್ಲ.

30. ಪೆನ್ಷನ್‌ದಾರರ ತಾಬೆ ಇರುವ ಆಫಿಸರರು ಪೆನ್ಷನ್‌ದಾರರಿಂದ ತೆಗೆದುಕೊಳ್ಳಲ್ಪಟ್ಟ ಸಾಲಗಳ ಕುರಿತು ವಿಚಾರಣೆ ನಡಿಸಕೂಡದು.

31. ಪೆನ್ಷನ್ ಹೊಂದಿದ ಒಬ್ಬ ಸೋಲ್ಜರನು ತನ್ನ ಸ್ವಂತ ಇಚ್ಛೆಯ ಮೇರೆಗೆ ವ ಇನ್ನು ಹಲವು ವರುಷಗಳ ವರೆಗೆ ಕೆಲಸ ಮಾಡಲಿಕ್ಕೆ ಶಾರೀರಕ ತ್ರಾಣವುಳ್ಳವನೆಂಬದಾಗಿ ಗವರ್ನಮೆಂಟಿನವರಿಂದ ಉದ್ದಿಷ್ಟವಾದ ಸ್ಯಾಂಕ್ಷನನ್ನು ಪಡಕೊಂಡು ದಂಡಿನಲ್ಲಿ ಪುನಹಾ ದಾಖಲಾದರೆ ಆತನ ಹಿಂದಿನ ನೌಕರಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು. ಆತನನ್ನು ಪುನಹಾ ಅಶಕ್ತರ ಲವಾಜಮೆಗೆ ಕಳುಹಿಸಿದರೆ ತಿರಿಗಿ ದಾಖಲು ಮಾಡಿಕೊಳ್ಳುವಾಗ್ಯೆ ಆತನಿಗೆ ಶಿಕ್ಕುತ್ತಿದ್ದ ಪೆನ್ಷನನ್ನಾಗಲಿ ತದನಂತರದ ನೌಕರಿಯ ದೆಶೆಯಿಂದ ಪಡಕೊಳ್ಳಲಿಕ್ಕೆ ಅರ್ಹನಾಗಬಹುದಾದ ಜಾಸ್ತಿ ಪೆನ್ಷನನ್ನಾಗಲಿ ಕೊಡಲಾಗುವದು.

32. ಒಬ್ಬ ಸುಬೇದಾರ ಮೇಜರನು ಅಶಕ್ತರ ಲವಾಜಮೆಗೆ ಕಳುಹಿಸಲ್ಪಟ್ಟರೆ ಅವನಿಗೆ ಸುಬೇದಾರನಾಗಿ ಎಷ್ಟು ವರುಷದ ನೌಕರಿ ಇದ್ದಾಗ್ಯೂ ಆಧಿಪತ್ಯ ನಡಿಸುವ ಜನರಲ್ ಆಫಿಸರನ ಉದ್ದಿಷ್ಟವಾದ ಶಿಫಾರಸಿನ ಮೇಲೆ ಆತನ ಪ್ರೈವೆಟ್ (ಹುದ್ದೆಯ) ಸಂಬಳ ಅಂದರೆ ತಿಂಗಳಿಗೆ 50 ರೂಪಾಯಿ ಕೊಡೋಣಾಗುವದು.

33. ನೇಟಿವ್ ಫೌಜಿನಲ್ಲಿ ಇಸಂಗಳನ್ನು ಕಡಿಮೆ ಮಾಡಿದ್ದಾಗ್ಯೆ ಪೋಲೀಸ್ ಶಿಬ್ಬಂದಿಗೆ ವರ್ಗಮಾಡಲ್ಪಟ್ಟ ಒಬ್ಬ ಸೋಲ್ಜರನಿಗೆ, ಪೊಲಿಸ್ ಶಿಬ್ಬಂದಿಯಲ್ಲಿಯ ಆತನ ವರ್ಗಾವರ್ಗಿಯು ಸ್ಯಾಂಕ್ಷನ್ ಮಾಡಲ್ಪಟ್ಟರೆ, ಆತನ ಮಿಲಿಟರಿ ನೌಕರಿಯ ಕಡಿಮೆಯು ಶಿಕ್ಕತಕ್ಕದ್ದು.

34. ಯುದ್ಧದಲ್ಲಿ ಆದ ಗಾಯಗಳ ಮತ್ತು ಯುದ್ಧದಲ್ಲಿ ಅಲ್ಲದೆ ಅನ್ಯಥಾ ಮಿಲಿಟರಿ ಕೆಲಸಗಳನ್ನು ಮಾಡುವಾಗ್ಯೆ ಸಂಭವಿಸಿದ ಹಾನಿಗಳ ಬಗ್ಯೆ ಗ್ರಾಚ್ಯುಯಿಟಿ ವ ಪೆನ್ಷನುಗಳು ಯುರೋಪಿಯನ್ ಕಮ್ಮಿಷನ್ಡ್ ಆಫಿಸರರಿಗೆ ಯಾವ ಕ್ರಮಗಳಿಗೆ ವ ಷರತ್ತುಗಳಿಗೆ ಅನುಸಾರವಾಗಿ ಕೊಡಲ್ಪಡುವವೋ ಆ ಕ್ರಮಗಳಿಗೆ ವ ಷರತ್ತುಗಳಿಗೆ ಅನುಸಾರವಾಗಿಯೇ ನೇಟಿವ್ ಕಮ್ಮಿಷನ್ಡ್ ಆಫಿಸರರಿಗೂ ಕೊಡೋಣಾಗುವವು. ಅವುಗಳನ್ನು ಸಂಬಳ ವ ಅಲೋವೆನ್ಸ್‌ಗಳಿಗೆ ಯಾ ಪೆನ್ಷನಿಗೆ ಕೂಡಿಸಿ ಬರಮಾಡಿಕೊಳ್ಳತಕ್ಕದ್ದು.

ಕಮ್ಮಿಷನ್ ಹೊಂದದ ಆಫಿಸರರಿಗೂ ಸಮಸ್ತ ಇಲಾಖೆಗಳ ಮನುಷ್ಯರಿಗೂ ಕಮ್ಮಿಷನ್ಡ್ ಆಫಿಸರರ ಸಂಗತಿಯಲ್ಲಿಯ ಹಾಗೆ ಪರಂತು ಬೇರೆಬೇರೆ ದರಗಳಲ್ಲಿ ಗಾಯಗಳ ವ ಹಾನಿಗಳ ಬಗ್ಗಿನ ಪೆನ್ಷನುಗಳು ಶಿಕ್ಕುವವು.

35. ಪರಾಯಿ ದೇಶದಲ್ಲಿ ನೌಕರಿ ಮಾಡುವಾಗ್ಯೆ ಕಾಣೆಯಾದ (ಫರಾರಿಯಾದವನಲ್ಲದ) ಮನುಷ್ಯನ ವಾರಸ್‌ದಾರನು ಪೆನ್ಷನ್ ಪಡಕೊಳ್ಳಲಿಕ್ಕೆ ಅರ್ಹನಾಗುತ್ತಾನೆ.

36. ಹನ್ನೆರಡು ತಿಂಗಳ ಭತ್ತೆಯನ್ನು ಕಳದು ಹನ್ನೆರಡು ತಿಂಗಳ ಸಂಬಳಕ್ಕೆ ಮೀರದಷ್ಟು ಗ್ರಾಚ್ಯುಯಿಟಿಯು ಮಿಲಿಟರಿ ಕೆಲಸವನ್ನು ಮಾಡುವಾಗ್ಯೆ ಕೊಲ್ಲಲ್ಪಟ್ಟ ನೇಟಿವ್ ಕಮ್ಮಿಷನ್ಡ್ ಆಫಿಸರರ ವಾರಸ್‌ದಾರರಿಗೆ ಕೊಡೋಣಾಗುವದು.

LINKED BATTALIONS (INFANTRY).

ಒಟ್ಟು ಕೂಡಿಸಲ್ಪಟ್ಟ ಪಟಾಲಗಳು (ಪಾಯಿದಳಗಳು).

1. ಮದ್ರಾಸ್ ಪಾಯಿದಳದ ರೆಜಿಮೆಂಟುಗಳು ಪ್ರತಿ ಒಂದು ಮೂರು ಪಟಾಲಗಳ ರೆಜಿಮೆಂಟಾಗಿ ಒಟ್ಟು ಕೂಡಿಸಲ್ಪಟ್ಟದ್ದಾವೆ; ಆದರೆ ಸ್ವಲ್ಪ ರೆಜಿಮೆಂಟುಗಳು ಎರಡು ಪಟಾಲಗಳ ರೆಜಿಮೆಂಟುಗಳಾಗಿ ಒಟ್ಟು ಕೂಡಿಸಲ್ಪಟ್ಟದಾವೆ.

2. ಯಾವದಾದರೂ ಒಂದು ಪಟಾಲದಲ್ಲಿ ಮಾಡಲ್ಪಟ್ಟ ಸಮಸ್ತ ದಾಖಲಾತಿಗಳು ಎರಡೂ ಯಾ ಮೂರು ಪಟಾಲಗಳ ಬಗ್ಯೆ ಆಗಿರುವವು, ಅಂದರೆ ರೆಜಿಮೆಂಟಿನ ಒಂದು ಪಟಾಲದ ಬಗ್ಯೆ ದಾಖಲಾದ ಒಬ್ಬ ಹೊಸ ಶಿಪಾಯಿಯು ಆತನು ರೆಜಿಮೆಂಟಿನ ಯಾವ ಪಟಾಲದಲ್ಲಿ ನೌಕರಿ ಮಾಡುತ್ತಾನೋ ಆ ಪಟಾಲಕ್ಕೆ ಯಾವ ಸಮಯದಲ್ಲಾದರೂ ಒಟ್ಟು ಕೂಡಿಸಲ್ಪಡಬಹುದಾದ ಇತರ ಪಟಾಲಗಳಲ್ಲಿ ನೌಕರಿ ಮಾಡಲಿಕ್ಕೆ ಗುರಿಯಾಗುತ್ತಾನೆ, ಮತ್ತು ಯುದ್ಧ ಕಾಲದಲ್ಲಿ ಅವಶ್ಯ ಬಿದ್ದರೆ ಅವನನ್ನು ಆ ಪಟಾಲಗಳಿಗೆ ವರ್ಗಮಾಡಬಹುದು. ಒಟ್ಟು ಕೂಡಿಸಲ್ಪಟ್ಟ ಒಂದು ಪಟಾಲಕ್ಕೆ ಯುದ್ಧಕಾಲದಲ್ಲಿ ವರ್ಗಮಾಡಲ್ಪಡುವ ಪದ್ಧತಿಯ ಹೊರ್ತು, ಸಿಪಾಯಿಯ ದಾಖಲಾತಿಯ ಕುರಿತ ಷರತ್ತುಗಳು ಪ್ರಕೃತ ಇದ್ದಹಾಗೆಯೇ ಇರುವವು.

ರೆಜಿಮೆಂಟುಗಳು ಈ ಕೆಳಗೆ ಕಾಣಿಸಿದ ಮೇರೆಗೆ ಒಟ್ಟು ಕೂಡಿಸಲ್ಪಟ್ಟಿರುತ್ತವೆ: —

1ನೇ (ಪಾಯನಿಯರ್ಸ್)	4ನೇ (ಪಾಯನಿಯರ್ಸ್)	21ನೇ (ಪಾಯನಿಯರ್ಸ್)
2ನೇ	15ನೇ	26ನೇ
3ನೇ	23ನೇ	
5ನೇ	16ನೇ	27ನೇ
6ನೇ	14ನೇ	
7ನೇ	19ನೇ	24ನೇ
8ನೇ	17ನೇ	25ನೇ
9ನೇ	11ನೇ	28ನೇ
13ನೇ	20ನೇ	22ನೇ

Organization of Reserves (Infantry).

ರಿಜರ್ವುಗಳ ಏರ್ಪಾಡು (ಪಾಯಿದಳ).

1. ಆಕ್ಟೀವ್ ರಿಜರ್ವು ಪ್ರತಿ ಒಂದು ಪಟಾಲಕ್ಕೆ 160 ಮನುಷ್ಯರ ಮೇರೆಗೆ ಆಗಿರತಕ್ಕದ್ದು. ಅದರಲ್ಲಿ—

(a) ಎಲ್ಲಾ ತರಗತಿಗಳ ವ ಒಳ್ಳೇ ನಡತೆಯುಳ್ಳ ಮತ್ತು ಐದು ವರುಷಕ್ಕೆ ಕಡಿಮೆಯಾಗದಷ್ಟು ವ ಹನ್ನೆರಡು ವರುಷಕ್ಕೆ ಮೀರದಷ್ಟು ನೌಕರಿಯುಳ್ಳ ಮತ್ತು ಮುಖ್ಯ ಸೈನ್ಯದಿಂದ ರಿಜರ್ವಿಗೆ ಹೋಗಲಿಕ್ಕೆ ಉಮೇದವಾರಿ ಮಾಡಬಹುದಾದ ಶಿಪಾಯಿರು.

(b) 32 ವರುಷಕ್ಕೆ ಮೀರದಷ್ಟು ಪ್ರಾಯದವರು ಒಳ್ಳೇ ನಡತೆಯುಳ್ಳವರೂ ನಿರ್ದೇಶಿಸಲ್ಪಟ್ಟ ಜಾತಿಯವರೂ ಆಗಿದ್ದು ಮೂರು ವರುಷಕ್ಕೆ ಕಡಿಮೆಯಾಗದ ವ ಹನ್ನೆರಡು ವರುಷಕ್ಕೆ ಮೀರದ ನೌಕರಿ ನೋಡಿದ ನಂತರ ದುರ್ನಡತೆಯ ಬಗ್ಗೆ ಅಲ್ಲದೆ ಇತರ ಯಾವದಾದರೂ ಕಾರಣದ ಬಗ್ಗೆ ಡಿಶ್ಚಾರ್ಜ್ ಮಾಡಲ್ಪಟ್ಟು ರಿಜರ್ವಿನ ಬಗ್ಗೆ ಪುನಹಾ ದಾಖಲಾಗಿರಬಹುದಾದ ಮನುಷ್ಯರು; ಶೇರಿರುತ್ತಾರೆ.

2. ಕಮ್ಮಿಶನ್ ಹೊಂದದ ಆಫೀಸರರು ತಮ್ಮ ಪಟಾಲದ ಆಧಿಪತ್ಯವನ್ನು ನಡಿಸುವ ಆಫೀಸರನ ಅಪ್ಪಣೆಯನ್ನು ಪಡಕೊಂಡು ತಮ್ಮ ಹುದ್ದೆಗೆ ರಾಜಿಕೊಟ್ಟು ಸಿಪಾಯಿರಾಗಿ ರಿಜರ್ವಿಗೆ ವರ್ಗಮಾಡಲ್ಪಡಲಿಕ್ಕೆ ಸಮ್ಮತಿ ಪಟ್ಟರೆ ಮಾತ್ರ ರಿಜರ್ವಿನಲ್ಲಿ ಸೇರಬಹುದು.

3. ಪೂರಾ ರಿಜರ್ವು ಯಾ ಅದರ ಯಾವದಾದರೂ ಭಾಗವು ಎಲ್ಲಾ ಕಾಲಗಳಲ್ಲಿಯೂ ಗವರ್ನಮೆಂಟಿನವರ ಹುಕುಮಿಗನುಗುಣವಾಗಿ ಕೆಲಸದ ಬಗ್ಗೆ ಕರೆಯಲ್ಪಡಲಿಕ್ಕೂ ಅವಶ್ಯವಿರುವವರಿಗೆ ಮುಖ್ಯ ಸೈನ್ಯದ ಸಂಗಡ ಇಟ್ಟು ಕೊಳ್ಳಲ್ಪಡಲಿಕ್ಕೂ ಗುರಿಯಾಗಿರುತ್ತದೆ.

4. ಹೀಗೆ ಕೆಲಸದ ಬಗ್ಗೆ ಕರೆಯಲ್ಪಟ್ಟಾಗ ಸದರೀ ಮನುಷ್ಯರು ತರ್ಬೀಯತು ಮಾಡುವ ಸ್ಥಳಕ್ಕೆ ಹೋಗತಕ್ಕದ್ದು. ಮತ್ತು ತಮ್ಮ ಸ್ವಂತ ಪಟಾಲಕ್ಕೆ ಸೇರಿಸಲ್ಪಟ್ಟ ಯಾ ಇನ್ನು ಮುಂದೆ ಸೇರಿಸಲ್ಪಡ ಬಹುದಾದ ಯಾವದೊಂದು ಪಟಾಲದ ಸಂಗಡ ವ ಎಲ್ಲಿಯೂ ಕೆಲಸ ಮಾಡಲಿಕ್ಕೆ ಗುರಿಯಾಗಿರುವರು.

5. ರಿಜರ್ವಿನ ಸಿಪಾಯಿರು ಯುದ್ಧಕಾಲದಲ್ಲಿ ಯಾ ಸ್ವಲ್ಪ ಸಮಯದಲ್ಲಿಯೇ ಯುದ್ಧ ಸಂಭವಿಸೀತು ಎಂದು ಇಂಡಿಯಾ ಗವರ್ನಮೆಂಟಿನವರು ಅಭಿಪ್ರಾಯ ಪಡುವಾಗ್ಯೆ ಅಲ್ಲದೆ ಇತರ ಯಾವ ಸಮಯದಲ್ಲಾದರೂ ನೌಕರಿಯಿಂದ ಡಿಸ್ಚಾರ್ಜ್ ಮಾಡಲ್ಪಡಬೇಕಾಗಿ ಕೇಳಬಹುದು.

6. ಯುದ್ಧಕ್ಕೆ ಹೋಗತಕ್ಕ ಸೈನ್ಯದ ನೇಟಿವ್ ಶಿಪಾಯಿರು ಸಿವಿಲ್ ದಾವೆಗಳಲ್ಲಿ ತಮ್ಮ ವ್ಯಾಜ್ಯವನ್ನು ಪ್ರಥಮತಃ ತನಖೆ ಮಾಡಬೇಕೆಂದು ಯಾವ ಕ್ರಮಗಳಿಗನುಗುಣವಾಗಿ ಹಕ್ಕನ್ನು ಹೇಳಬಹುದೋ ಆ ಕ್ರಮಗಳು ರಿಜರ್ವಿನ ಮನುಷ್ಯರಿಗೂ ಲಗಾವಾಗುತ್ತವೆ.

ರಿಜರ್ವಿನ ಮನುಷ್ಯರು, ಅವರು ವಾಸಿಸುವ ಪ್ರದೇಶದಲ್ಲಿ ಜಾರಿಯಲ್ಲಿರುವ ಆಕ್ಟಿನ ನಿಬಂಧನೆಗಳಿಗನುಗುಣವಾಗಿ ಮಾಡತಕ್ಕ ಕಾಯಿದೆಯಿಂದ ಸ್ಥಾಪಿತವಾದ ಕೆಲಸದಿಂದ ವಿನಾಯಿಸಲ್ಪಟ್ಟಿರುತ್ತಾರೆ—

1873ನೇ ಇಸವಿಯ 8ನೇ ಆಕ್ಟು.	1858ನೇ ಇಸವಿಯ 1ನೇ ಮದ್ರಾಸ್ ಆಕ್ಟು.
1877ನೇ ಇಸವಿಯ 13ನೇ ಆಕ್ಟು.	1879ನೇ ಇಸವಿಯ 7ನೇ ಮುಂಬಾಯಿ ಆಕ್ಟು.

7. ಆಕ್ಟೀವ್ ರಿಜರ್ವಿನವರು ಈ ಕೆಳಗೆ ಕಾಣಿಸಿದವುಗಳ ವಿನಹಾ ಗವರ್ನಮೆಂಟಿನ ಕೆಳಗೆ ಇತರ ಸಿವಿಲ್ ಉದ್ಯೋಗಗಳನ್ನು ಪಡೆಯಲಿಕ್ಕೆ ಅರ್ಹರಾಗಿರುತ್ತಾರೆ:—

ಜೈಲ್ ವಾರ್ಡರರು (ಬಂದಿಖಾನೆಕಾವಲುಗಾರರು).
ಫಾರೆಸ್ಟ್ ಗಾರ್ಡುಗಳು.
ನಾರ್ತ್ ವೆಸ್ಟರ್ನ್ ರೈಲ್ವೆ ಸಿಬ್ಬಂದಿ.
ಅಯೋಧ್ಯೆ ಮತ್ತು ರೋಹಿಲಖಂಡ ರೈಲ್ವೆ ಸಿಬ್ಬಂದಿ.
ಯಾವದೊಂದು ರೈಲ್ವೆಯಲ್ಲಿ ಶಾಸ್ತ್ರೀಕ ಜ್ಞಾನ ಅಥವಾ ತರ್ಬೀಯತು ಅಗತ್ಯವಿರುವ ಕೆಲಸಗಳು ದೃಷ್ಟಾಂತಕ್ಕೆ ಪಾಯಿಂಟ್ಸ್‌ಮೆನ್ ಸಿಗ್ನಲ್ ಮೆನ್ ಅಥವಾ ಗ್ಯಾಂಗ್ಮೆನ್.

ಮೇಲೆ ಹೇಳಿದ ಉದ್ಯೋಗಗಳ ವಿನಹ ಇತರ ಉದ್ಯೋಗಗಳನ್ನು ನೋಡುವವರಿಗೆ ಅವರ ವರುಷಾವಧಿ ತರ್ಬೀಯತಿಗೆ ಹಾಜರಾಗಲಿಕ್ಕೆ ರಜಾ ಸಿಕ್ಕುವದು. ಆದರೆ ಅವಶ್ಯವಿದ್ದರೆ ಅವರು ಅಂಥಾ ಗೈರಹಾಜರಿ ಕಾಲದಲ್ಲಿ ಬದಲಿಯವರನ್ನು ಇಡಬೇಕಾಗಿ ಕೇಳಲ್ಪಡಬಹುದು.

8. ಒಂದು ಪಟಾಲವು ಕೆಲಸದ ಮೇಲೆ ಇರುವಾಗ್ಯೆ ಯಾ ಕೆಲಸದಬಗ್ಗೆ ತಯಾರಾಗಿರಬೇಕೆಂದು ಎಚ್ಚರಿಕೆ ಕೊಡಲ್ಪಟ್ಟಾಗ್ಯೆ ವಿನಹಾ ಇತರ ಸಮಯದಲ್ಲಿ, ಪಟಾಲವು ಪೂರ್ಣವಾಗಿ ಭರ್ತಿಯಾಗಿರದಿದ್ದರೂ ಸಿಪಾಯಿರು ಸೈನ್ಯದ ಮುಖ್ಯಭಾಗದಿಂದ ಅಧಿಕಾರಗೊಳಿಸಲ್ಪಟ್ಟ ಸಂಖ್ಯೆಯಮಟ್ಟಿಗೆ ಆಕ್ಟೀವ್ ರಿಜರ್ವಿಗೆ ಹೋಗಬಹುದು.

9. ಆಕ್ಟೀವ್ ರಿಜರ್ವಿನ ಒಬ್ಬ ಸಿಪಾಯಿಯ ರಿಜರ್ವ ಸಂಬಳವು ತಿಂಗಳಿಗೆ 3 ರೂಪಾಯಿ ಯಾಗಿರುತ್ತದೆ.

10. ತರ್ಬೀಯತಿನ ಯಾ ಕೆಲಸದ ಬಗ್ಗೆ ಒಟ್ಟು ಕೂಡಿಸಲ್ಪಟ್ಟಾಗ್ಯೆ ಕೆಲಸಕ್ಕೆ ಯೋಗ್ಯವಾದ ರಿಜರ್ವಿನ ಸಿಪಾಯಿರು ಮುಖ್ಯ ಸೈನ್ಯದ ಸಂಗಡ ಇರುವಾಗ್ಯೆ ಅವರಿಗೆ ಸಿಕ್ಕುತ್ತಿದ್ದ ಪೂರಾ ಸಂಬಳ ವ ಒಳ್ಳೇನಡತೆಯ ಬಗ್ಗಿನ ಸಂಬಳವನ್ನು ಹೊಂದುವರು. ಹೀಗೆ ಪೂರಾ ಸಂಬಳವನ್ನು ಹೊಂದುವಾಗ್ಯೆ ಅವರ ರಿಜರ್ವಿನ ಸಂಬಳವು ನಿಂತುಹೋಗುವದು. ಸಿಪಾಯಿಯಾಗಿ ರಿಜರ್ವಿನಲ್ಲಿ ದಾಖಲಾದ ಒಬ್ಬ ಕಮ್ಮಿಶನ್ ಹೊಂದದ ಆಫೀಸರನು (2ನೇ ಕಲಂ) ತರ್ಬೀಯತ್ತಿನ ಬಗ್ಗೆ ಸೇರಿಸಲ್ಪಟ್ಟಾಗ್ಯೆ ಯಾ ಕೆಲಸದಬಗ್ಗೆ ಕರೆಯಲ್ಪಟ್ಟಾಗ್ಯೆ ರಿಜರ್ವಿಗೆ ಅವನು ಹೋಗುವದಕ್ಕಿಂತ ಸ್ವಲ್ಪ ಮುಂಚೆ, ಅವನ ನಡತೆಯು ಯಾ ನೌಕರಿಕಾಲವು ಒಬ್ಬ ಸಿಪಾಯಿಯಾಗಿ ಎಣಿಸಿದರೆ ಅವನು ಪಡಕೊಳ್ಳಲಿಕ್ಕೆ ಅರ್ಹನಾಗುತ್ತಿದ್ದ ಒಳ್ಳೇ ನಡತೆಯ ಸಂಬಳದ ದರವನ್ನು ಹೊಂದುವನು.

11. ಆಕ್ಟಿವ್ ರಿಜರ್ವಿನ ಸಿಪಾಯಿರು ತರ್ಬೀಯತಿನ ಯಾ ಕೆಲಸದ ಬಗ್ಯೆ ಕರೆಯಲ್ಪಟ್ಟಾಗ್ಯೆ ಜಿನಸುಗಳು ಪ್ರಿಯವಾದರೆ ಆ ಬಗ್ಯೆ ಪರಿಹಾರ ದ್ರವ್ಯವನ್ನು ಪಡಕೊಳ್ಳಲಿಕ್ಕೆ ಅರ್ಹರಾಗಿರುತ್ತಾರೆ. ವರುಷಾವಧಿ ತರ್ಬೀಯತಿನ ಕಾಲದ ಸಂಗತಿಯಲ್ಲಿ, ಯಾವ ತಿಂಗಳಿನ ಆಖೈರದಿವಸವು ಆ 31 ದಿವಸಗಳ ತರ್ಬೀಯತಿನಲ್ಲಿ ಬರುತ್ತದೋ ಆ ತಿಂಗಳಿನಲ್ಲಿದ್ದ ಕ್ರಯದಮೇರೆಗೆ ಆ ಇಡೀ ಕಾಲದ ಬಗ್ಯೆ ಅಂಥಾ ಪರಿಹಾರ ದ್ರವ್ಯವು ಸಿಕ್ಕುವದು.

12. ತರ್ಬೀಯತಿನ ಬಗ್ಯೆ ಒಟ್ಟು ಕೂಡಿಸಲ್ಪಟ್ಟಾಗ್ಯೆ ಆ ಸ್ಥಳದ ಪಟಾಲದ ಅಧಿಪತ್ಯವನ್ನು ನಡಿಸುವ ಆಫಿಸರನಿಂದ ಅವರು ಬಾಕಿಯಲ್ಲಿದ್ದ ತಮ್ಮ ರಿಜರ್ವಿನ ಸಂಬಳವನ್ನು ಪಡಕೊಳ್ಳುವರು. ಸಲ್ಲತಕ್ಕದ್ದರ ಅರವಾಸಿಯು ಪ್ರತಿ ಒಬ್ಬ ಮನುಷ್ಯನಿಗೆ ಪ್ರಥಮ ಸರ್ತಿಗೆ ಹಾಜರಿ ನೋಡಿದಾಗ್ಯೆ ಸಿಕ್ಕುವದು; ಮತ್ತು ಉಳಿದ ಅಂಶವು, ಪೂರಾ ಸಂಬಳ, ಒಳ್ಳೇನಡತೆಯ ಬಗ್ಗಿನ ಸಂಬಳ, ಅಂಥಾ ತರ್ಬೀಯತಿನಕಾಲದಲ್ಲಿ ಜಿನಸುಗಳು ಪ್ರಿಯವಾದ ದೆಶೆಯಿಂದ ಅವರಿಂದ ಸಂಪಾದಿಸಲ್ಪಟ್ಟ ಪರಿಹಾರದ್ರವ್ಯ ವ ರೋಡ್ ಅಲೋವೆನ್ಸು ಸಹಾ (ಪ್ಯಾರಾ 21) ಸಲುವದು ಇದ್ದರೆ ಒಟ್ಟು ತರ್ಬೀಯತಿನ ಕಾಲದ ಅಂತ್ಯದಲ್ಲಿ ಕೊಡಲ್ಪಡುವದು. ಯಾವ ಸಂದರ್ಭಗಳಲ್ಲಾದರೂ ರಿಜರ್ವಿನ ಸಂಬಳವು ಮುಂಗಡವಾಗಿ ಕೊಡಲ್ಪಡಲಿಕ್ಕಿಲ್ಲ.

13. ಡಿಸ್ಚಾರ್ಜ್ ಮಾಡಲ್ಪಟ್ಟು ಆಕ್ಟಿವ್ ರಿಜರ್ವಿಗೆ ಪುನಹಾ ದಾಖಲ್ಮಾಡಲ್ಪಟ್ಟ ಸಿಪಾಯರಿಗೆ ಅವರು ಡಿಸ್ಚಾರ್ಜ್ ಮಾಡಲ್ಪಡುವಾಗ್ಯೆ ಅವರಿಗೆ ಸಿಕ್ಕುತ್ತಿದ್ದ ಪೂರ್ಣ ಸಿಪಾಯಿಯ ಸಂಬಳವೂ, ಒಳ್ಳೆನಡತೆಯ ಸಂಬಳ ಏನಾದರೂ ಇದ್ದರೆ ಅದೂ, ಅವರು ತರ್ಬೀಯತಿನ ಬಗ್ಯೆ ಪಟಾಲಕ್ಕೆ ಸೇರಿದ್ದ ಕಾಲದಲ್ಲಿ ಜಿನಸು ಪ್ರಿಯವಾದುದರಿಂದ ಸಲ್ಲತಕ್ಕ ಪರಿಹಾರ ದ್ರವ್ಯವೂ ಸಹಾ ಸಿಕ್ಕುವದು.

14. ರಿಜರ್ವಿನ ಒಬ್ಬ ಸಿಪಾಯಿಯು ತನ್ನ ಮನೆಯಲ್ಲಿ ಮೃತಪಟ್ಟ ಸಂಗತಿಯಲ್ಲಿ ಆತನ ರಿಜರ್ವಿನ ಸಂಬಳವು ಮರಣದ ತಾರೀಖುವರೆಗೆ ಎಣಿಸಲ್ಪಡುವದು. ಆತನ ಸೊತ್ತಿನಲ್ಲಿ ಬಾಕಿ ಏನಾದರೂ ಇದ್ದರೆ ಅದನ್ನು ಆತನ ವಾರಸ್‌ದಾರನಿಗೆ ಅವನು ಮರಣದ ವಿಷಯವಾಗಿ ಮತ್ತು ತಾನೇ ಆತನ ವಾರಿಸ್‌ದಾರನಾದ ಮನುಷ್ಯನು ಎಂಬದರ ವಿಷಯವಾಗಿ ರುಜುವಾತನ್ನು ತಂದರೆ, ಕೊಡೋಣಾದೀತು.

15. ಆಕ್ಟಿವ್ ರಿಜರ್ವಿನಲ್ಲಿದ್ದು ಅಶಕ್ತರೆಂದು ಡಿಸ್ಚಾರ್ಜ್ ಮಾಡಲ್ಪಟ್ಟ ವ ಪೆನ್ಷನಿಗೆ ಅರ್ಹರಲ್ಲದ ಮನುಷ್ಯರಿಗೆ ಈ ಕೆಳಗಣ ದರದ ಮೇಲೆ ಗ್ರಾಟ್ಯೂಟಿಯು ಕೊಡಲ್ಪಡುವದು:—

		ಹುದ್ದೆಯ ವ ಒಳ್ಳೇನಡತೆಯ ಬಗ್ಗಿನ ಎಷ್ಟು ತಿಂಗಳ ಪೂರಾ ಸಂಬಳವೆಂಬದು.
ಕಲರ್ ವ ರಿಜರ್ವಿನಲ್ಲಿ 10 ವರುಷಕ್ಕೆ ಮೀರದಿದ್ದು ವರುಷ ನೌಕರಿನೋಡಿದ ಮನುಷ್ಯರು	5	3
ಕಲರ್ ವ ರಿಜರ್ವಿನಲ್ಲಿ 15 ವರುಷಕ್ಕೆ ಮೀರದಿದ್ದು ವರುಷ ನೌಕರಿನೋಡಿದ ಮನುಷ್ಯರು	10	6
ಕಲರ್ ವ ರಿಜರ್ವಿನಲ್ಲಿ 20 ವರುಷಕ್ಕೆ ಮೀರದಿದ್ದು ವರುಷ ನೌಕರಿನೋಡಿದ ಮನುಷ್ಯರು	15	9
ಕಲರ್ ವ ರಿಜರ್ವಿನಲ್ಲಿ 25 ವರುಷಕ್ಕೆ ಮೀರದಿದ್ದು ವರುಷ ನೌಕರಿನೋಡಿದ ಮನುಷ್ಯರು	20	12

16. ಆಕ್ಟಿವ್ ರಿಜರ್ವಿನ ಪೂರಾ ಮನುಷ್ಯರು ಸೈನ್ಯದಲ್ಲಿ ವ ರಿಜರ್ವಿನಲ್ಲಿ 25 ವರುಷದ ನೌಕರಿಯನ್ನು ಮುಗಿಸಿದನಂತರ ಮೆಡಿಕಲ್ ಬೋರ್ಡಿನ ಮುಂದೆ ಹಾಜರಾಗದ ತಿಂಗಳಿಗೆ 3 ರೂಪಾಯಿ ಪೆನ್ಷನ್ ಪಡಕೊಳ್ಳಲಿಕ್ಕೆ ಅರ್ಹರಾಗಿರುತ್ತಾರೆ.

17. ದಂಡಿನವರು ಮುಖ್ಯಸೈನ್ಯಕ್ಕೆ ಪುನಹಾ ವರ್ಗವಾಗಿ ಹೋಗುವಾಗ್ಯೆ, ಅವರು ರಿಜರ್ವಿನಲ್ಲಿರುವಾಗ್ಯೆ ತೆಗದುಕೊಂಡ ಸಂಬಳವನ್ನು ಯಾವ ಸಂಗತಿಯಲ್ಲಾದರೂ ವಾಪಸ್‌ಕೊಡುವ ಅಗತ್ಯವಿಲ್ಲ.

18. ತಮ್ಮ ಅರಿಕೆಮೇರೆಗೆನೇ ಮುಖ್ಯ ಸೈನ್ಯಕ್ಕೆ ಪುನಹಾ ಸೇರುವವರು ಬಿಡಾರಮಾಡಿಕೊಳ್ಳಲಿಕ್ಕೆ ಕೊಡೋಣಾಗುವ ಹಣವನ್ನು ಪಡಕೊಳ್ಳಲಿಕ್ಕೆ ಅರ್ಹರಾಗಲಿಕ್ಕಿಲ್ಲ.

19. 25 ವರುಷಗಳ ಕದೀಮಿನಂತರ ಕೊಡೋಣಾಗುವ ಪೆನ್ಷನ್ ಒಂದೇ ಮಾತ್ರ ರಿಜರ್ವಿನಲ್ಲಿ ಕೆಲಸ ಮಾಡುವದರಿಂದ ಹೊಂದುವ ಪೆನ್ಷನ್ ಆಗಿರುತ್ತದೆಂತ ಸ್ಪಷ್ಟವಾಗಿ ತಿಳಕೊಳ್ಳತಕ್ಕದ್ದು. ಆದರೆ, ಎಕ್ಟಿವ್ ರಿಜರ್ವಿನವರು ಯುದ್ಧಕ್ಕೆ ಕರೆಯಲ್ಪಟ್ಟಾಗ್ಯೆ, ಯುದ್ಧಸೈನ್ಯದಲ್ಲಿ ಕೆಲಸ ಮಾಡುವವರಿಗೆ ಸಿಕ್ಕುವ ಎಲ್ಲಾ ಆದಾಯಗಳನ್ನು ಹೊಂದಲಿಕ್ಕೆ ಅರ್ಹರಾಗುತ್ತಾರೆ; ಮತ್ತು ಅಂಥ ನೌಕರಿಯ ದೆಸೆಯಿಂದ ಅಶಕ್ತರಾದರೆ, ಈ ಮೂಲಕ ಸಾಧಾರಣತರದ ಪೆನ್ಷನ್ ಹೊಂದಲಿಕ್ಕೆ ಅರ್ಹರಾಗಬಹುದು.

20. ಪ್ರಥಮ ದಫೆಗೆ ರಿಜರ್ವಿನಲ್ಲಿ ಸೇರಿದವರನ್ನು, ಅವರು ಮನೆಗೆ ಹೋಗುವಾಗ್ಯೆ ರೈಲ್ ಮೇಲೆ ವ ದೋಣಿಮೇಲೆ ಹೋಗಲಿಕ್ಕೆ ಉಚಿತವಾಗಿ ಪಾಸ್ ಕೊಡೋಣಾಗುತ್ತದೆ; ಆದರೆ ಸಮುದ್ರ ಪ್ರಯಾಣವು ರೈಲ್ ಪ್ರಯಾಣಕ್ಕಿಂತ ಅಗ್ಗವಾದ ಸಂಗತಿಯಲ್ಲಿ ವಿನಹಾ, ದೃಷ್ಟಾಂತಕ್ಕೆ (ಬೊಂಬಾಯಿಯಿಂದ ಕರಾಚಿವರಗೆ) ಸಮುದ್ರಮಾರ್ಗವಾಗಿ ಹೋಗುವಾಗ್ಯೆ ಹಾಗೆ ಪಾಸ್ ಕೊಡೋಣಾಗುವದಿಲ್ಲ.

21. ತರ್ಬೀತಾಗಲಿಕ್ಕೆ ಯಾ ಕೆಲಸಕ್ಕೆ ಕರೆಯಲ್ಪಟ್ಟಾಗ್ಯೆ ಅವರು ಮನೆಯಿಂದ ಬರುವಾಗ್ಯೆ ವ ವಾಪಸ್ ಹೋಗುವಾಗ್ಯೆ, ರೈಲ್ ಮೇಲೆ ವ ದೋಣಿಮೇಲೆ ಹೋಗಲಿಕ್ಕೆ ಹಣ ಪಡಕೊಳ್ಳದೇನೇ ಪಾಸ್ ಕೊಡೋಣಾಗುವದು; ಮತ್ತು ರೈಲ್ ಮೇಲೆ ಯಾ ದೋಣಿಯಮೇಲೆ ಪ್ರಯಾಣಮಾಡಲಿಕ್ಕೆ ಕೂಡದಿರುವಷ್ಟು ದೂರಕ್ಕೆ 100 ಮೈಲಿಗೆ ಯಾ ಅದರ ಅಂಶಕ್ಕೆ 1 ರೂಪಾಯಿ ದರದಲ್ಲಿ ಮಾರ್ಗದ ಮೇಲಿನ ಭತ್ತ ಕೊಡೋಣಾಗುವದು. ಈ ಮಾರ್ಗದ ಮೇಲಿನ ಭತ್ತೆಯು ಪ್ರಥಮ ದಫೆಗೆ ರಿಜರ್ವಿನಲ್ಲಿ ಸೇರಿದವರಿಗೆ ಕೊಡೋಣಾಗುವದಿಲ್ಲ.

22. ತಮ್ಮ ಅರಿಕೆ ಮೇರೆಗೆ ಮುಖ್ಯಸೈನ್ಯಕ್ಕೆ ಪುನಹಾ ವರ್ಗಮಾಡಿಕೊಂಡವರನ್ನು ಪರಂತು ಪುನಹಾ ವರ್ಗಮಾಡಿ ಕೊಳ್ಳಲಿಕ್ಕೆ ಅರ್ಜಿಮಾಡಿದ ಸಮಯದಲ್ಲಿ ಅವರ ಪಟಾಲವು ಯುದ್ಧಕ್ಕೆ ಹೋಗಲಿಕ್ಕೆ ಹುಕುಂ ಕೊಡಲ್ಪಟ್ಟಿರುವ ಸಂಗತಿಯಲ್ಲಿ ವಿನಹಾ ಇತರ ಸಂಗತಿಯಲ್ಲಿ ಸೈನ್ಯಕ್ಕೆ ಸೇರುವದಕ್ಕೆ ಹಣ ಪಡಕೊಳ್ಳದೆ ಪಾಸ್ ಕೊಡೋಣಾಗಲಿಕ್ಕಿಲ್ಲ.

23. ಮುಖ್ಯ ಸೈನ್ಯದಿಂದ ರಿಜರ್ವಿಗೆ ಹೋಗುವವರಿಗೆ ಅವರ ಬಾಬತು ಕೆಳಗೆ ಹೇಳಿದ ಕಿಟ ಸಾಮಾನುಗಳ ಮೌಲ್ಯವಾಗಿ 25 ರೂಪಾಯಿ ಸಿಕ್ಕುವದು; ನಂತರ ಅವು ಸರಕಾರಿ ಸೊತ್ತಾಗಿರುವವು:—

1 ದೊಡ್ಡ ಅಂಗಿ.	1 ಜೋಡು ಕಮರ್ಬಂದ್.
1 ಪಕ್ಡಿ.	1 ಕಟಿ ಚೀಲ.
1 ಮೇಲೆ ಹಾಕಿಕೊಳ್ಳುವ ಖಾಕಿ ಅಂಗಿ.	1 ನೀರುಹಾಕುವ ಬಾಟ್ಲು.
1 ನಂಬರಿನ ಅಂಕೆಗಳು.	1 ಜೋಡು ಬೂಟ್ಸು.
1 ಜೋಡು ಖಾಕಿ ಪೈಜಾಮುಎಂಬ ವಿಜಾರು.	1 ಸಾಮಾನುಹಾಕುವ ಚೀಲ.

ಮೇಲ್ವಿಚಾರ ಮಾಡುವ ಬೋರ್ಡಿನವರು ಅವುಗಳು ದುರುಸ್ತು ಮಾಡತಕ್ಕವುಗಳು ಯಾ ನಿಷ್ಪ್ರಯೋಜನವಾದವುಗಳು ಎಂತ ಹೇಳಿದಾಗ್ಯೆ ಈ ಸಾಮಾನುಗಳು ದುರುಸ್ತು ಮಾಡೋಣಾಗುವವು ಯಾ ಹೊಸತು ಕೊಡೋಣಾಗುವವು ಅಲ್ಲದಿದ್ದರೆ ಮೂರು ವರುಷಗಳನಂತರ ಮಾತ್ರ ಸರಕಾರಿ ಖರ್ಚಿನಿಂದ ಹೊಸತು ಕೊಡೋಣಾಗುವವು.

24. ಡಿಸ್ಚಾರ್ಜ್ ಮಾಡೋಣಾಗಿ ಪುನಹಾ ರಿಜರ್ವಿನಲ್ಲಿ ನೌಕರಿಬಗ್ಗ್ಯೆ ಹೆಸರು ಬರಿಸಿಕೊಂಡವರಿಗೆ ಅವರು ಯಾವ ಪಟಾಲದ ರಿಜರ್ವಿಗೆ ಸೇರುತ್ತಾರೋ ಆ ಪಟಾಲದವರು 23ನೇ ಕಲಮಿನಲ್ಲಿ ಹೇಳಿದ ಕಿಟ ಸಾಮಾನುಗಳನ್ನು ಉಚಿತವಾಗಿ ಕೊಡುವರು.

25. ಎಕ್ಟಿವ್ ರಿಜರ್ವಿನವನೊಬ್ಬನು ಮುಖ್ಯ ಸೈನ್ಯಕ್ಕೆ ವರ್ಗಮಾಡೋಣಾದ್ದಲ್ಲಿ ಸರಕಾರಕ್ಕೆ 25 ರೂಪಾಯಿ ಕೊಡತಕ್ಕದ್ದು, ಆಗ್ಯೆ ಅವನ ರಿಜರ್ವಿನ ಎಲ್ಲಾ ಕಿಟ ಸಾಮಾನುಗಳು ಅವನ ಸ್ವಂತ ಸೊತ್ತಾಗುವವು.

26. ನೌಕರಿಬಗ್ಗ್ಯೆ ಫೌಜಿಗೆ ಸೇರಿಸೋಣಾದಲ್ಲಿ, ಯುದ್ಧ ಸೈನ್ಯದಲ್ಲಿ ಕೆಲಸಮಾಡುವ ದೇಶೀಯ ಸೋಲ್ಜರರಿಗೆ ಕೊಡೋಣಾಗುವ ಎಲ್ಲಾ ಸಾಮಾನು ವ ಉಂಣೆ ತೊಡಿಗೆಯು, ಎಕ್ಟಿವ್ ರಿಜರ್ವಿನವರಿಗೂ ಸಿಕ್ಕುವದು.

27. ಎಕ್ಟಿವ್ ರಿಜರ್ವಿನವರು ಪ್ರತಿ ವರುಷದಲ್ಲಿ 31 ದಿವಸಗಳ ಪರಿಯಂತ್ರ ತರ್ಬೀತಾಗಲಿಕ್ಕೆ ಕರೆಯಲ್ಪಡುವರು.

28. ಒಟ್ಟು ಕೂಡಿಸೋಣಾದ ಪಟಾಲದ ಪ್ರತಿ ಒಂದು ಗುಂಪಿಗೆ ವಿಂಗಡಿಸೋಣಾದ ರಜಿಮೆಂಟಿನ ಮಧ್ಯಸ್ಥಳದಲ್ಲಿ ತರ್ಬೀತಿನ ಕೆಲಸ ನಡಿಸೋಣಾಗುವದು.

29. ರಿಜರ್ವಿನವರು ತರ್ಬೀತಾಗಲಿಕ್ಕೆ ಕರೆಯಲ್ಪಡತಕ್ಕ ತಾರೀಖು ಯಾ ತಾರೀಖುಗಳು, ಅವರ ಬೇಸಾಯ ಸಂಬಂಧವಾದ ಆವಶ್ಯಕತೆಗಳಿಗೆ ವ ಬೇರೆ ಅನುಕೂಲತೆಗಳಿಗೆ ಸರಿಯಾಗುವಂತೆ, ಕಮಾಂಡಿಂಗ್ ಆಫಿಸರರಿಂದ ನಿಶ್ಚಯಿಸೋಣಾಗುವವು.

30. ಡಿಸ್ಚಾರ್ಜ್ ಮಾಡೋಣಾದವರು ರಿಜರ್ವಿಗೆ ಸೇರಲಿಕ್ಕೆ ಪುನಹಾ ಹೆಸರು ಬರಿಸಿಕೊಂಡಾಗ್ಯೆ ಅವರನ್ನ ಡಿಸ್ಚಾರ್ಜ್ ಮಾಡಿ ಒಂದು ವರುಷಕ್ಕಿಂತ ಹೆಚ್ಚಾದರೆ, ಅವರು ಯಾವ ಪಟಾಲದ ರಿಜರ್ವಿಗೆ ಸೇರಲಿಕ್ಕೆ ಹೆಸರು ಬರಿಸಿಕೊಂಡಿದ್ದಾರೋ ಆ ಪಟಾಲದ ಒಟ್ಟಿಗೆ ಮುಂದಾಗಿ ತರ್ಬೀಯತಾಗತಕ್ಕದ್ದು.

ತರ್ಬೀತಾಗ ಬೇಕಾದ ಕಾಲವು—

ರಿಜರ್ವಿಗೆ ಸೇರಲಿಕ್ಕೆ ಪುನಹಾ ಹೆಸರು ಬರಿಸಿಕೊಳ್ಳುವದಕ್ಕೆ ಮೊದಲು ಒಂದು ವರುಷಕ್ಕಿಂತ ಹೆಚ್ಚು ವ ಎರಡು ವರುಷಕ್ಕೆ ಕಡಿಮೆಯಾದರೆ, ಎರಡುತಿಂಗಳು.

ರಿಜರ್ವಿಗೆ ಸೇರಲಿಕ್ಕೆ ಪುನಹಾ ಹೆಸರು ಬರಿಸಿಕೊಳ್ಳುವದಕ್ಕೆ ಮೊದಲು ಎರಡು ವರುಷಕ್ಕಿಂತ ಹೆಚ್ಚು ವ ಮೂರು ವರುಷಕ್ಕೆ ಕಡಿಮೆಯಾದರೆ ಮೂರು ತಿಂಗಳು.

ಡಿಸ್ಚಾರ್ಜ್ಮಾಡಿ ಮೂರು ವರುಷಕ್ಕಿಂತ ಹೆಚ್ಚಾದರೆ, ನಾಲ್ಕು ತಿಂಗಳು ಆಗಿರುತ್ತದೆ.

31. ಎಕ್ಟಿವ್ ರಿಜರ್ವಿನವರು ಎಲ್ಲಾ ಸಂಗತಿಗಳಲ್ಲಿಯೂ ಸೋಲ್ಜರರಂತೆಯೇ ಇಂಡಿಯಾವಿನ ಆರ್ಟಿಕಲ್ಸ್ ಆಫ್ ವಾರ್ ಎಂಬ ಯುದ್ಧ ಸಂಬಂಧವಾದ ನಿಬಂಧನೆಗಳಿಗೊಳಪಟ್ಟಿರುತ್ತಾರೆ, ಮತ್ತು ಅವರು ಆ ನಿಬಂಧನೆಗಳಿಗೆ ವಿರುದ್ಧವಾಗಿ ಮಾಡಿದ ಯಾವದಾದರೂ ತಕ್ಸೀರಿನ ಬಗ್ಗ್ಯೆ ಕೋರ್ಟು ಮಾರ್ಷಲಿನವರಿಂದ ವಿಚಾರಣೆ ಮಾಡಲ್ಪಟ್ಟು ಶಿಕ್ಷಿಸಲ್ಪಡಬಹುದು, ಅವರು—

(a) ಒಂದು ಸ್ಥಳದಲ್ಲಿ ಹಾಜರಾಗತಕ್ಕ ಬಗ್ಗ್ಯೆ ಕ್ರಮಪ್ರಕಾರ ಹುಕುಮಾದನಂತರ, ಸಾಕಾದ ಸಬಬಿಲ್ಲದೆ ಹಾಜರಾಗಲಿಕ್ಕೆ ತಪ್ಪಿದ ಬಗ್ಗ್ಯೆ;

(b) ಸಾಕಾದ ಸಬಬಿಲ್ಲದೆ, ರಿಜರ್ವಿಗೆ ಸಂಬಂಧಪಟ್ಟ ಯಾವದಾದರೂ ಹುಕುಮು ಯಾ ನಿಬಂಧನೆಗಳ ಪ್ರಕಾರ ನಡಕೊಳ್ಳಲಿಕ್ಕೆ ತಪ್ಪಿದ ಬಗ್ಗ್ಯೆ;

(c) ರಿಜರ್ವಿನವರ ಸಂಬಳಕ್ಕೆ ಸಂಬಂಧಪಟ್ಟ ಹುಕುಮು ಯಾ ನಿಬಂಧನೆಗಳಿಗೆ ವಿರುದ್ಧವಾಗಿ ಮೋಸದಿಂದ ಸಂಬಳ ಯಾ ಬೇರೆ ಐವಜು ಪಡಕೊಂಡ ಬಗ್ಗ್ಯೆ;

ಕ್ರಿಮಿನಲ್ ಅಧಿಕಾರವುಳ್ಳ ಸಿವಿಲ್ ಕೋರ್ಟಿನವರಿಂದ ವಿಚಾರಣೆ ಮಾಡೋಣಾಗಿ ಶಿಕ್ಷಿಸಲ್ಪಡಲಿಕ್ಕೆ ಗುರಿಯಾಗುತ್ತಾರೆ.

ಜೆ. ಎಫ್. ಫ್ರೈಸ್,
ಚೀಫ್ ಸೆಕ್ರೆಟರಿ.

(A true translation.)

S. MANGESH RAU,
Canarese Translator to Government.

Mysore Govt. Central Press, Bangalore.—1896.

703

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಫ್ರಾಯಿಷ್ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 17, ಸ್ತ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷ್ಣ ವ ಯಿಡ್ಯುಕೇಷ್ಣ ಇಣ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಣ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಣಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 5ನೇ ಡಿಸೆಂಬರ್ 1896.

ನಂ. 6513.—ಮಿ. 1223, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಮೈಸೂರ ಸಂಸ್ಥಾನಾಮುಳೆ ದರೋಬಸ್ತು ಪಬ್ಲಿಕ ಆಫಿಸುಗಳೂ ಕ್ರಿಸ್ತಮಸ ರಜಾಬಗ್ಯಾಗಿ, 1896ನೇ ಡಿಸೆಂಬರ್ 24ನೇ ಬೃಹಸ್ಪತಿವಾರದ ಲಾಗಾಯತು 1897ನೇ ಜನವರಿ 2ನೇ ಶನಿವಾರದ ವರಿಗೆ, ಉಭಯದಿನಗಳೂ ಸೇರಿ, ಬರಖಾಷ್ತು ಮಾಡಲ್ಪಡತಕ್ಕದ್ದು.

2. ಜರೂರಿಯಾತ್ ಕೆಲಸ ನಡಿಯುವ ಬಗ್ಯೆ ಇಲಾಖಾ ಮೊಖ್ತೆಸರರುಗಳಿಂದ ಏರ್ಪಾಡು ಮಾಡಲ್ಪಡತಕ್ಕದ್ದು.

3. ಈ ಇಸ್ತಿಹಾರ್‌ನಾಮೆಯು ತಾಲ್ಲೂಕು ಕಚೇರಿಗಳಿಗೂ ಮತ್ತು ಜಮಾಬಂದಿ ಕೆಲಸದಮೇಲಿರುವ ಆಫಿಸರುಗಳಿಗೂ ಲಗಾವಾಗುವದಿಲ್ಲ.

ಸಂ. 6509.—ಲೋ. ಫಂ. 65.—95, ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಕಾರುವಳ್ಳಿ-ಬರಿಕೆರೆ ಬೀದಿಯು ಶಿವಮೊಗ್ಗಾ ಡಿಸ್ಟ್ರಿಕ್ಟು ತೀರ್ಥಹಳ್ಳಿ ಷಹರಿನ ಮ್ಯುನಿಸಿಪಲ್ ಸರಹದ್ದುಗಳಿಂದ ವಿನಾಯಿಸಲ್ಪಟ್ಟಿರುತ್ತೆ.

ತಾರೀಖು 26ನೇ ನವಂಬರ್ 1896.

ನಂ. 6132.—ಲೋ. ಫಂ. 83—96, ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನೆಂದರೆ, ಇದರಡಿ ಜಂಟಿಸಲ್ಪಟ್ಟಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮನೆ ಮತ್ತು ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ ಮೈಸೂರ್ ಷಹರ್ ನಜರ್‌ಬಾದ್ ಮೊಹಲ್ಲಾ ಇಟ್ಟಿಗಗ್ಗೂಡಿನಲ್ಲಿ ಮೆಸ್ಟರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆಯನ್ನ ಬಡಾಯಿಸುವ ಬಗ್ಯಾಗಿ ಬೇಕಾಗಿರುತ್ತವೆ:—

ಜಂಜರ್ ನಂ.	ಬೀದಿಯ ಹೆಸರು.	ಡೋರ್ ನಂಬರು.	ಮಾಲೀಕರ ಹೆಸರು.	ಅವಶ್ಯಕವಾಗಿರುವ ಸ್ವತ್ತಿನ ವಿವರ.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಚಕ್ಕುಬಂದಿ.				ಷರಾ.
							ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	
1	ಇಟ್ಟಿಗಗ್ಗೂಡಿನಲ್ಲಿ ಮೆಸ್ಟರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆ.	911	ನಂಜುಂಡಯ್ಯ, ಕುಪ್ಪುಸಾಮಿ ಮೊದಲಿಯಾರ್, ರಾಮಸ್ವಾಮಿ ಮೊದಲಿಯಾರ್ ಮತ್ತು ಚಾಮುಂಡಮ್ಮ.	ಆರು ಅಂಕಣಗಳ ಹೆಂಚಿನ ಮನೆ, ಮೂರು ಅಂಕಣಗಳ ಹೆಂಚಿನ ಕೈಸಾಲೆ, 1·44 ಚದುರದ ತಾರಸಿ ಮಾಡಲ್ಪಟ್ಟ ಭಾಗ ಮತ್ತು 6 ಅಂಕಣಗಳ ತಖ್ತ್‌ಪೋಷ್ ಮಾಡಲ್ಪಟ್ಟ ಭಾಗ.	64	$\frac{18+16}{2}$	ರಸ್ತೆ.	ರಸ್ತೆ.	ದುಂದಣ್ಣನ ಮನೆ.	ಗಲ್ಲಿ.	ಈ ಪ್ರದೇಶದಲ್ಲಿ ಮನೆಗಳು ಒಂದಕ್ಕೊಂದು ಬಹಳ ವತ್ತಾಗಿ ಮತ್ತು ಗಾಳಿ ಸಂಚಾರಕ್ಕೆ ಅಡಚಣೆಯಾಗಿದೆ. ಆದ್ದರಿಂದ ಸದರೀ ಪ್ರದೇಶವು ಅಭಿವೃದ್ಧಿಗೆ ಅವಶ್ಯಕವಾಗಿದೆ.

ತಾರೀಖು 2ನೇ ಡಿಸೆಂಬರ್ 1896.

ನಂ. 6331.—ಲೋ. ಫಂ. 65—96, ಸರ್ 1894ನೇ ಇಸವಿಯ ನಂ. VIIನೇ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಟ್ಟ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ ಆಲೂರ್ ಷಹರ್ ಬಡಾವಣೆ ಬಗ್ಯಾಗಿ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಜಮೀನ್ ತಪಸೀಲು.				ಚಕ್ಕುಬಂದಿ.			
					ಸರ್ವೆ ನಂ.	ವಿವರ.	ಬೇಕಾದ ವಿಸ್ತೀರ್ಣ.	ಬೇರೀಜು.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
							ಎ. ಗುಂ.	ರೂ. ಆ.				
ಹಾಸನ.	ಆಲೂರ್ ಸಬ್ ತಾಲ್ಲೂಕು.	ಆಲೂರು.	ಆಲೂರು.	ಹುಸೇನ್‌ಸಾಬಿ (ಅನುಭವದಾರು) ಸುಬ್ಬೇಗೌಡ ಮತ್ತು ಬಸವೇಗೌಡ)	ಸರ್ವೆನಂಬರ್ 20ರ ಭಾಗ	ಖುಷ್ಕಿ	1—20	1—4	ಸರ್ವೆ ನಂಬರ್ 20ರ ಭಾಗ	ಕೊಳಕ್ಕೆ ಹೋಗುವ ರಸ್ತೆ	ಬಸವಲಿಂಗೇಗೌಡನ ಮತ್ತು ಇತರರ ಮನೆಗಳು	ಹಯಾತ್‌ಸಾಬಿಯ ಮತ್ತು ಇತರರ ಜಮೀನುಗಳು
				ಬಸವಲಿಂಗೇಗೌಡ	ಡಿಟ್ಟೋ	ಡಿಟ್ಟೋ	1—29	1—8	ಆಸ್ಪತ್ರೆಯ ಕಂಪೌಂಡ್	ಸುಬ್ಬೇಗೌಡನ ಬಸವೇಗೌಡನ ಮತ್ತು ಇತರರ ಜಮೀನ್‌ಗಳು	ಬಸವ ಲಿಂಗೇಗೌಡನ, ದಾಸೇಗೌಡನ, ಹುಚ್ಚೆಗೌಡನ ಮತ್ತು ಇತರರ ಮನೆಗಳು ಮತ್ತು ಹಿತ್ತಲುಗಳು	ಡಿಟ್ಟೋ

ತಾರೀಖು 8ನೇ ಡಿಸೆಂಬರ್ 1896.

ನಂ. 6578.—ಲೋ. ಫಂ. 139—92, ಸನ್ 1892ನೇ ಇಸವಿಯ VIIIನೇ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ಮೇರೆ 1871ನೇ ಇಸವಿಯ Iನೇ ನಂಬರ್ ಕಾಲ್ನಡೆಗಳ ಅಕ್ರಮ ಪ್ರವೇಶವನ್ನ ನಿರೋಧಪಡಿಸುವ ಬಗ್ಯೆ ಉಂಟಾದ ಆಕ್ಟಿನ 12ನೇ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರವನ್ನನುಸರಿಸಿ ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುವದೇನಂದರೆ, ಬೆಂಗಳೂರು ಷಹರ್ ಮ್ಯುನಿಸಿಪಾಲಿಟಿಯ ಸರಹದ್ದುಗಳಲ್ಲಿ ರಾತ್ರಿ 8 ಘಂಟೆಯಿಂದ ಪ್ರಾತಃಕಾಲ 4 ಘಂಟೆ ವರಿಗೂ ಅಕ್ರಮವಾಗಿ ಪ್ರವೇಶ ಮಾಡುವ ಕಾಲ್ನಡೆಗಳನ್ನ ಹಿಡಿದು ದೊಡ್ಡಿಗೆ ದಾಖಲಾದ ಪ್ರತಿ ರಾಸಿಗೂ ಈ ಕೆಳಗೆ ಕಂಡ ದರಗಳಂತೆ ಜುರ್ಮಾನೆಗಳು ವಸೂಲ್ಮಾಡಲ್ಪಡುವವು, ಹ್ಯಾಗಂದರೆ:—

ಆನೆಗೆ	ನಾಲ್ಕು ರೂಪಾಯಿಗಳು.
ಒಂಟೆ ಯಾ ಎಮ್ಮೆಗೆ	ಒಂದು ರೂಪಾಯಿ.
ಕುದುರೆ, ಹೆಣ್ಣು ಕುದುರೆ, ಖಸಿಯಾದ ಕುದರೆ, ತಟ್ಟು, ಕುದರೆ ಗಂಡುಮರಿ, ಕುದರೆ ಹೆಣ್ಣುಮರಿ, ಗೂಳಿ, ಎತ್ತು, ಆಕಳು ಯಾ ಕಡಸಿಗೆ ..	ಎಂಟಾಣೆಗಳು.
ಕರ, ಕತ್ತೆ ಯಾ ಹಂದಿಗೆ	ನಾಲ್ಕಾಣೆಗಳು.
ಟಗರು, ಹೆಣ್ಣು ಟಗರು, ಕುರಿ, ಕುರಿಮರಿ, ಮೇಕೆ ಯಾ ಮೇಕೆ ಮರಿಗೆ ..	ಎರಡು ಆಣೆಗಳು.

ತಾರೀಖು 24ನೇ ನವಂಬರ್ 1896.

ನಂ. 5973.—4.—ಲೋ. ಫಂ. 17.—96, ಬೆಂಗಳೂರು ವ ಮೈಸೂರು ಷಹರುಗಳ ಮ್ಯುನಿಸಿಪಾಲಿಟಿಗಳಲ್ಲಿ ಇತಃಪರ ಚುನಾವಣೆಗಳನ್ನ ನಡಿಸುವ ಬಗ್ಯೆ ಹಾಲಿ ಜಾರೀಲಿರುವ ರೂಲ್ಸಿಗೆ ಬದಲಾಗಿ ಈ ಕೆಳಗೆ ಕಂಡ ತಿದ್ದುಪಡಿಯಾದ ರೂಲ್ಸ್ ಜಾರೀಗೆ ತರುವ ಬಗ್ಯೆ ಮೈಸೂರ್ ಗವರ್ನಮೆಂಟಿನವರು ನಿಶ್ಚಯಿಸಿರುತ್ತಾರೆ;—

ರೂಲ್ಸ್.

I. ಮತ್ತೊಂದು ಹುಕುಂ ಕೊಡುವ ಪರಿಯಂತ, ಪ್ರೆಸಿಡೆಂಟರು ಮತ್ತು ಯಕ್ಸ್ ಆಫಿಷಿಯೋ ಮೆಂಬರ್‌ಗಳೂ ದೇಖೀಲ್ ಮ್ಯುನಿಸಿಪಲ್ ಕಮಿಷ್ಷನರುಗಳ ಒಟ್ಟು ಸಂಖ್ಯೆಯು, ಬೆಂಗಳೂರು ವ ಮೈಸೂರು ಷಹರುಗಳ ಪ್ರತಿ ಒಂದರಲ್ಲಿಯೂ 20 ಆಗಿರತಕ್ಕದ್ದು. ಇವರುಗಳ ಪೈಕಿ ಪ್ರತಿ ಮ್ಯುನಿಸಿಪಾಲಿಟಿಯೊಳಗೂ ಅರ್ಧ ಸಂಖ್ಯೆಯು ಕಂದಾಯ ಕೊಡುವವರಿಂದ ಚುನಾಯಿಸಲ್ಪಡತಕ್ಕದ್ದು, ಬಾಕಿ ಅರ್ಧ ಉದ್ಯೋಗತಃ ಆಗಲಿ ಯಾ ಹೆಸರಿನಿಂದಾಗಲಿ ಗವರ್ನಮೆಂಟಿನವರಿಂದ ಮೊಕರರ್ಮಾಡಲ್ಪಡತಕ್ಕದ್ದು. ಪ್ರತಿ ಡಿವಿಜನ್ನಲ್ಲಿಯೂ ಚುನಾಯಿಸಲ್ಪಡಬೇಕಾದ ಮೆಂಬರುಗಳ ಸಂಖ್ಯೆಯು ಪ್ರೆಸಿಡೆಂಟರವರಿಂದ ಪ್ರಸಿದ್ಧಪಡಿಸಲ್ಪಡತಕ್ಕದ್ದು.

II. ಮೈಸೂರು ಷಹರ್ ಮ್ಯುನಿಸಿಪಾಲಿಟಿಯಲ್ಲಿ ಬೆಂಗಳೂರಲ್ಲಿರುವ ಮೇರೆ ಅದೇ ಕೆಲಸಕ್ಕಾಗಿ ಬೇರೆ ಪ್ರೆಸಿಡೆಂಟರಿಲ್ಲದೆ ಇರುವದರಿಂದ ಡೆಪ್ಯುಟಿ ಕಮಿಷ್ಷನರವರು ತಾತ್ಕಾಲಕ್ಕೆ ರೆಗ್ಯುಲೇಷನ್ ಅನುಸರಿಸಿ ಸದರೀ ಮ್ಯುನಿಸಿಪಾಲಿಟಿಯ ಎಕ್ಸ್ ಅಫಿಷಿಯೋ ಪ್ರೆಸಿಡೆಂಟರಾಗಿಯೂ ಮತ್ತು ಗವರ್ನಮೆಂಟಿನಿಂದ ಮೊಕರರ್ಮಾಡಲ್ಪಟ್ಟ ವೈಸ್ ಪ್ರೆಸಿಡೆಂಟರು ಸದರೀ ಮ್ಯುನಿಸಿಪಾಲಿಟಿಯ ಒಬ್ಬ ಎಕ್ಸ್ ಅಫಿಷಿಯೋ ಮೆಂಬರುಗಳಾಗಿಯೂ ಯಿರತಕ್ಕದ್ದು.

III. ಒಬ್ಬ ಮ್ಯುನಿಸಿಪಲ್ ಕಮಿಷ್ಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹರಾಗಬೇಕಾದರೆ ಅವರು—

(*a*) ಪುರುಷರಾಗಿರಬೇಕು;

(*b*) 25 ವರುಷ ವಯಸ್ಸು ಪೂರೈಸಿರಬೇಕು;

(*c*) ವಿದ್ಯಾವಂತರಾಗಿರಬೇಕು;

(*d*) ಚುನಾಯಿಸಲ್ಪಡಬೇಕಾಗಿರುವ ಡಿವಿಜನಿನ ಮ್ಯುನಿಸಿಪಲ್ ಸರಹದ್ದುಗಳಲ್ಲಿ ವಾಸ ಮಾಡುತ್ತಿರಬೇಕು;

(*e*) ಚುನಾವಣೆಯ ಹಿಂದಿನ ವರುಷದಲ್ಲಿ ಸದರೀ ರೆಗ್ಯುಲೇಷನ್ ಅನುಸರಿಸಿ ತೆರಬೇಕಾದ ಮೊತ್ತದ ಮೊಬಲಗಿನಲ್ಲಿ 10 ರೂಪಾಯಿಗಳಿಗೆ ಕಡಿಮೆ ಇಲ್ಲದ ದರಗಳಾಗಲಿ, ತೆರಿಗೆಗಳಾಗಲಿ, ಜಮೀನ್ ಕಂದಾಯ ಯಾ ಮೊಹತರ್ಫಾ ಆಗಲಿ, ಇವುಗಳಲ್ಲಿ ಒಂದು ಯಾ ಹೆಚ್ಚು ಬಗೆಗಳ ಮೊಬಲಗನ್ನು ಷಹರ್ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು; ಅಥವಾ ಮೇಲ್ಕಂಡ ವರುಷದಲ್ಲಿ ಮನೆಯ ಯಾ ಅಂಗಡಿಯ ಯಾ ಇತರ ವಿಧ ಕಟ್ಟಡದ ಸ್ವಂತಗಾರರಾಗಿಯೂ, ಭೋಗ್ಯದಾರರಾಗಿಯೂ ಅಥವಾ ಬಾಡಿಗೆದಾರರಾಗಿಯೂ ಅನುಭವಿಸುತ್ತಿರಬೇಕು: ಮೇಲೆ ಹೇಳಿದ ಕಟ್ಟಡಕ್ಕೋಸ್ಕರ ಈ ಕ್ಲಾಜಿನ ಮೊದಲ್ಭಾಗದಲ್ಲಿ ಹೇಳಿರುವ ಮೊಬಲಗಲ್ಲದೆ 10 ರೂಪಾಯಿಗೆ ಕಡಿಮೆ ಯಿಲ್ಲದ ತೆರಿಗೆಯನ್ನ ಅಂಥಾ ವರುಷಕ್ಕಾಗಿ ಷಹರ್ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು. ಪರಂತು 1895ನೇ ಇಸವಿಯ IIIನೇ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರ್ಮಾಡಲ್ಪಟ್ಟ ಒಂದು ಕಂಪೆನಿಯಾಗಲಿ ಯಾ ಒಂದು ಅವಿಭಕ್ತ ಕುಟುಂಬವಾಗಲಿ ಈ ಕ್ಲಾಜಿನಲ್ಲಿ ವಿಧಿಸಲ್ಪಟ್ಟ ನಿಬಂಧನೆಗಳನ್ನ ಅದರಲ್ಲಿ ಹೇಳಿದ ಮೊಬಲಗುಗಳಿಗೆ ಎರಡರಷ್ಟಕ್ಕೆ ಕಡಿಮೆ ಇಲ್ಲದೆ ನೆರವೇರಿಸಿದ ತರುವಾಯ ಇತರ ಅವಶ್ಯಕವಾದ ಯೋಗ್ಯತೆಗಳುಳ್ಳ ಅದರ ಯಾವನೊಬ್ಬ ಮೆಂಬರಾಗಲಿ ಆ ಕಂಪೆನಿಯ ಯಾ ಆ ಕುಟುಂಬದ ವಾರಸ್ದಾರರಾಗಿ ಇರುವದರಿಂದ ಚುನಾವಣೆಗೆ ಅರ್ಹರಾಗಿರುತ್ತಾರೆ.

(*f*) ಇಂಡಿಯನ್ ಪಿನಲ್‌ಕೋಡ್ ಪ್ರಕಾರ 6 ತಿಂಗಳಿಗೆ ಕಡಿಮೆ ಇಲ್ಲದ ಕಾಲಕ್ಕೆ ಖೈದಿನೊಡನೆ ಶಿಕ್ಷಿಸಲ್ಪಡತಕ್ಕ ಒಂದು ತಕ್ಸೀರಿನಿಂದ ಆಪಾದಿಸಲ್ಪಟ್ಟಿರ ಕೂಡದು;

(*g*) ಚುನಾವಣೆ ತಾರೀಖಿನ ಹಿಂದೆ ಎರಡು ವರುಷದೊಳಗಾಗಿ ದಿವಾಳಿ ಖೋರರೆಂದು ಪ್ರಸಿದ್ಧಿ ಪಡಿಸಲ್ಪಟ್ಟಿರ ಕೂಡದು;

(*h*) ಸದರೀ ಮ್ಯುನಿಸಿಪಾಲಿಟಿಯ ಒಬ್ಬ ಆಫಿಸರಾಗಿಯಾಗಲಿ ಯಾ ನೌಕರರಾಗಿಯಾಗಲಿ ಕೆಲಸದಲ್ಲಿರಕೂಡದು;

(*i*) ಯಾವ ಜಾಯಿಂಟ್ ಸ್ಟಾಕ್ ಕಂಪೆನಿಯಲ್ಲಿಯೂ, ಮ್ಯುನಿಸಿಪಾಲಿಟಿಯೊಂದಿಗೆ ಅಥವಾ ಅದಕ್ಕಾಗಿ ನಡಿಸಲ್ಪಟ್ಟ ಕಂಟ್ರಾಕ್ಟು ವ ಕೆಲಸ ಯಿವಕ್ಕಾಗಿ ಭಾಗಸ್ಥರಾಗಿರುವದು ವಿನಹ ಅನ್ಯಥಾ ಮತ್ತ್ಯಾವ ಫಾಯಿದೆಯೂ ಉಳ್ಳಂಥಾವರಾಗಿ ಯಿರಕೂಡದು.

IV. ಪ್ರತಿ ಗಂಡಸರೂ ಚುನಾವಣಿ ಬಗ್ಯೆ ಅಭಿಪ್ರಾಯ ಕೊಡಲಿಕ್ಕೆ ಅರ್ಹರಾಗಬೇಕಾದರೆ ಅವರು 21 ವರುಷ ವಯಸ್ಸು ಪೂರೈಸಿಯೂ ಚುನಾಯಿಸಲ್ಪಡಬೇಕಾಗಿರುವ ಡಿವಿಜನಿನ ಸರಹದ್ದುಗಳಲ್ಲಿ ವಾಸ ಮಾಡುತ್ತಿರುವವರಾಗಿಯೂ ಈ ಕೆಳಗೆ ಕಂಡ ಷರತ್ತುಗಳ ಪೈಕಿ ಒಂದು ಯಾ ಹೆಚ್ಚು ಬಗೆಗಳು ನೆರವೇರಿಸಿದವರಾಗಿಯೂ ಯಿರಬೇಕು:—

(a) ಚುನಾವಣಿಯ ಹಿಂದಿನ ವರುಷದಲ್ಲಿ ಮ್ಯುನಿಸಿಪಲ್ ದರಗಳಾಗಲಿ ಯಾ ತೆರಿಗೆಗಳಾಗಲಿ ಯಾ ಗವರ್ನಮೆಂಟ್ ಜಮೀನ್ ಕಂದಾಯವಾಗಲಿ ಅಥವಾ ಆ ವರುಷಕ್ಕೆ ಮೊತ್ತದ ಮೊಬಲಗಿನಲ್ಲಿ 5 ರೂಪಾಯಿಗಳಿಗೆ ಕಡಿಮೆ ಇಲ್ಲದೆ ಮ್ಯುನಿಸಿಪಾಲಿಟಿಗೆ ಮೊಹತರ್ಫಾ ಜಮಾ ದಾಖಲಾಗಿಯಾಗಲಿ ಕೊಟ್ಟಿರಬೇಕು, ಅಥವಾ ಅವರು ಚುನಾವಣಿ ಬಗ್ಯೆ ಅಭಿಪ್ರಾಯ ಕೊಡಲಿಕ್ಕೆ ಅಪೇಕ್ಷಿಸುವ ಡಿವಿಜನಿನಲ್ಲಿ ಮೇಲ್ಕಂಡ ವರುಷದಲ್ಲಿ ಮನೆಯ, ಅಂಗಡಿಯ ಯಾ ಇತರ ಕಟ್ಟಡದ ಅನುಭವದಾರರು ಯಾ ಮಾಲೀಕರಾಗಿಯೂ ಬಾಡಿಗೆದಾರರು ಯಾ ಭೋಗ್ಯದಾರರಾಗಿಯೂ ಯಿರಬೇಕು; ಮೇಲ್ಕಂಡ ಕಟ್ಟಡಕ್ಕೋಸ್ಕರ ಸದರೀ ವರುಷಕ್ಕೆ 5 ರೂಪಾಯಿಗಳಿಗೆ ಕಡಿಮೆ ಇಲ್ಲದ ತೆರಿಗೆಯನ್ನು ಷಹರ್ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು.

(b) ಇಂಡ್ಯದ ಅಥವಾ ಇತರ ದೇಶದ ಯೂನಿವರ್ಸಿಟಿಯ ಗ್ರಾಜ್ಯುಯೇಟಾಗಿರಬೇಕು.

(c) ಚುನಾವಣಿ ನಡಿಯುವ ಹಿಂದಿನ ವರುಷಕ್ಕಾಗಿ ಷಹರ್ ಮ್ಯುನಿಸಿಪಾಲಿಟಿಗೆ ಮ್ಯುನಿಸಿಪಲ್ ರೆಗ್ಯುಲೇಷನ್ ಪ್ರಕಾರ ಆ ವರುಷಕ್ಕೆ ಕೊಡಬೇಕಾದ ತೆರಿಗೆಗಳ 20 ರೂಪಾಯಿಗಳಿಗೆ ಕಡಿಮೆ ಇಲ್ಲದ ಮೊತ್ತದ ಮೊಬಲಗನ್ನ ಕೊಟ್ಟಿದ್ದು 1895ನೇ ಇಸವಿಯ IIIನೇ ರೆಗ್ಯುಲೇಷನ್ ಮೇರೆ ರಿಜಿಸ್ಟರ್ ಮಾಡಲ್ಪಟ್ಟ ಯಾವ ಕಂಪೆನಿಯಿಂದಲಾಗಲಿ ಅಧಿಕಾರ ಹೊಂದಿರಬೇಕು ಯಾ ಅಂಥಾ ಕಂಪೆನಿಗೆ ಸೆಕ್ರೆಟೆರಿಯಾಗಿರಬೇಕು.

V. ಚುನಾಯಿಸಲ್ಪಟ್ಟ ಮ್ಯುನಿಸಿಪಲ್ ಕಮ್ಮಿಷನರು ಗವರ್ನಮೆಂಟಿನವರಿಂದ ತೆಗೆದುಹಾಕಲ್ಪಟ್ಟ ಅಥವಾ ಅನರ್ಹರಾದ ಸಂದರ್ಭದಲ್ಲಿ ವಿನಾ ಅವರು ಚುನಾಯಿಸಲ್ಪಟ್ಟ ತಾರೀಖು ಮೊದಲು ಎರಡು ವರುಷಗಳ ವರಿವಿಗೆ ಮತ್ತು ಅವರ ಸ್ಥಳದಲ್ಲಿ ಬೇರೊಬ್ಬರು ಚುನಾಯಿಸಲ್ಪಟ್ಟರೆಂದು ಪ್ರಕಟಿಸಲ್ಪಡುವ ಪರಿಯಂತರವೂ ಉದ್ಯೋಗದಲ್ಲಿರುವದಕ್ಕೆ ಅರ್ಹರಾಗಿರತಕ್ಕದ್ದು.

VI. ಮ್ಯುನಿಸಿಪಲ್ ಕಮ್ಮಿಷನರುಗಳ ಚುನಾವಣಿಯು ಸಾಧಾರಣವಾಗಿ ಎರಡು ವರುಷಗಳಿಗೊಂದಾವರ್ತಿ ಗವರ್ನಮೆಂಟಿನವರಿಂದ ಗೊತ್ತುಮಾಡಲ್ಪಡಬಹುದಾದ ಫಲಾನಾ ತಿಂಗಳು ಮತ್ತು ಫಲಾನಾತಾರೀಖು ಯಾ ತಾರೀಖುಗಳಲ್ಲಿ ನಡಿಸಲ್ಪಡತಕ್ಕದ್ದು. ಅಂಥಾ ಪ್ರತಿ ಚುನಾವಣಿಯೂ ಚೀಟಿ ಹಾಕುವದರ ಮೂಲಕ ನಡಿಸಲ್ಪಡತಕ್ಕದ್ದಲ್ಲದೆ ಅದು ಪ್ರೆಸಿಡೆಂಟರ ಮೇಲ್ವಿಚಾರಣೆಯಲ್ಲಾಗಲಿ ಅಥವಾ ಆ ಕೆಲಸಕ್ಕಾಗಿ ಅವರಿಂದ ನಿಯಮಿಸಲ್ಪಟ್ಟ ಇತರ ಆಫಿಸರ ಮೇಲ್ವಿಚಾರಣೆಯಲ್ಲಾಗಲಿ ಚುನಾವಣಿ ತಾರೀಖಿಗೆ ಅಧಮ ಪಕ್ಷ ವೊಂದು ತಿಂಗಳ ಮುಂಚಿತವಾಗಿ ಮೈಸೂರ ಗೆಜೆಟ್ಟಿನಲ್ಲಿ ನೋಟಿಸ ಮೂಲಕ ಪ್ರಸಿದ್ಧಪಡಿಸುವಂಥಾ ಸ್ಥಳದಲ್ಲಿಯೂ ಕಾಲದಲ್ಲಿಯೂ ನಡಿಸಲ್ಪಡತಕ್ಕದ್ದು.

VII. ಕಮ್ಮಿಷನರುಗಳಾಗಿ ಚುನಾಯಿಸಲ್ಪಡುವ ಬಗ್ಯೆ ಅರ್ಹರಾದ ಮನುಷ್ಯರ ಹೆಸರು ಮತ್ತು ಅಂಥಾ ಚುನಾವಣಿ ಬಗ್ಯೆ ಅಭಿಪ್ರಾಯ ಕೊಡಲು ಯೋಗ್ಯತಾಯುಳ್ಳ ಮನುಷ್ಯರ ಹೆಸರು ಸುದಾ ತೋರಿಸುವ ವೊಂದು ಪಟ್ಟಿಯು, ಚುನಾವಣಿ ಬಗ್ಯೆ ಗೊತ್ತುಮಾಡಲ್ಪಟ್ಟ ತಾರೀಖಿಗೆ ಮುಂಚಿತವಾಗಿ ಎರಡು ತಿಂಗಳಿಗೆ ಜಾಸ್ತಿಯಿಲ್ಲದೆ ಪ್ರೆಸಿಡೆಂಟರವರಿಂದ ಮೈಸೂರ ಗೆಜೆಟ್ಟಿನಲ್ಲಿ ಘಾಯಿಷ್ಮಾಡಲ್ಪಡತಕ್ಕದ್ದು.

VIII. ಚುನಾಯಿಸಲ್ಪಡುವ ಬಗ್ಯಾಗಲಿ ಅಥವಾ ಆ ಬಗ್ಯೆ ಅಭಿಪ್ರಾಯ ಕೊಡುವ ಬಗ್ಯಾಗಲಿ ಅರ್ಹರಾದ ಮನುಷ್ಯರ ಹೆಸರು VIIನೇ ಪ್ಯಾರಾದಲ್ಲಿ ನಮೂದಾದಪಟ್ಟಿಯಲ್ಲಿ ಬಿಡಲ್ಪಟ್ಟಿದ್ದರೆ, ಅವರು, ಸದರೀ ಪಟ್ಟಿಯು ಘಾಯಿಷ್ಮಾಡಲ್ಪಟ್ಟ ತಾರೀಖಿನ ಮೊದಲು ವೊಂದು ತಿಂಗಳೊಳಗಾಗಿ, ಅವರ ಹೆಸರನ್ನು ಸದರೀ ಪಟ್ಟಿಯಲ್ಲಿ ದಾಖಲ್ಮಾಡುವಂತೆ ಪ್ರೆಸಿಡೆಂಟರವರಿಗೆ ಅರ್ಜಿ ಬರೆದು ಕೊಳ್ಳತಕ್ಕದ್ದು. ಅಂಥಾ ಅರ್ಜಿಯು ದಾಖಲಾದ ತರುವಾಯ, ಪ್ರೆಸಿಡೆಂಟರು ಅರ್ಜಿದಾರನ ಹೆಸರನ್ನು ದಾಖಲ್ಮಾಡತಕ್ಕದ್ದೆಂತಾಗಲಿ ಯಾ ಅನ್ಯಥಾ ಆಗಲಿ ಹುಕುಂ ಮಾಡತಕ್ಕದ್ದಲ್ಲದೆ ಮತ್ತು ಸದರೀ ವಿಚಾರಣೆಯ ಖರ್ಚುಗಳ ಸಾವತೀ ವಿಷಯದಲ್ಲಿ ಸಹ ಅವರಿಗೆ ನ್ಯಾಯವಾಗಿ ತೋರುವಂತೆ ಹುಕುಂ ಮಾಡತಕ್ಕದ್ದು, ಮತ್ತು ಅಂಥಾ ಹುಕುಂ ಆಖೈರಾದ್ದಾಗಿರತಕ್ಕದ್ದು.

IX. ಚುನಾವಣಿಗೆ ಗೊತ್ತಾದ ತಾರೀಖಿಗೆ ಅಧಮ ಪಕ್ಷ ಮೂರು ವಾರಗಳ ಮುಂಚೆ ಯಾವ ಮನುಷ್ಯರಾದರೂ ಮೇಲ್ಕಂಡ ರೂಲ್ಸ್ ಅನುಸಾರವಾಗಿ ಒಬ್ಬ ಮ್ಯುನಿಸಿಪಲ್ ಕಮ್ಮಿಷನರಾಗುವದಕ್ಕೆ ಯಿಷ್ಟಪಡುವ ಪಕ್ಷಕ್ಕೆ ಅಂಥಾ ಮನುಷ್ಯರು ತಮ್ಮ ಹೆಸರನ್ನೂ ಮತ್ತು ತಾವು ಯಾವ ಡಿವಿಜನಿಗೆ ಮ್ಯುನಿಸಿಪಲ್ ಕಮ್ಮಿಷನರಾಗಿರುವ ಬಗ್ಯೆ ಅಪೇಕ್ಷಿಸುತ್ತಾರೋ ಅದನ್ನೂ ನಮೂದಿಸಿ ಪ್ರೆಸಿಡೆಂಟರಿಗೆ ಬರಹ ಮೂಲಕ ತಿಳಿಸತಕ್ಕದ್ದು. ತರುವಾಯ ಅಂಥಾ ಅರ್ಜಿದಾರರ ಪಟ್ಟಿಯು ಮೈಸೂರ ಗೆಜೆಟಿನಲ್ಲಿ ಘಾಯಿಷ್ಮಾಡಲ್ಪಡತಕ್ಕದ್ದಲ್ಲದೆ, ಚುನಾವಣಿ ಬಗ್ಯೆ ಗೊತ್ತಾದ ತಾರೀಖಿಗೆ ಅಧಮಪಕ್ಷ ಹತ್ತು ದಿನಗಳ ಮುಂಚಿತವಾಗಿ ಪ್ರತಿ ಯೊಬ್ಬ ಅಭಿಪ್ರಾಯಸ್ಥರಿಗೂ ಸಹ ಕಳುಹಿಸಲ್ಪಡತಕ್ಕದ್ದು.

X. ಚುನಾಯಿಸಲ್ಪಟ್ಟ ತರುವಾಯ, ಪ್ರೆಸಿಡೆಂಟರು, ಪ್ರತಿ ಚುನಾವಣಿಯಲ್ಲಿಯೂ ಉಮೇದವಾರರುಗಳನ್ನ ಅವರವರಿಗೋಸ್ಕರ ಕೊಡೋಣಾದ ಅಭಿಪ್ರಾಯಗಳ ಕ್ರಮಾನುಸಾರವಾಗಿ ವಿಂಗಡಿಸಿ, ಚುನಾಯಿಸಲ್ಪಡಬೇಕಾದ ಮ್ಯುನಿಸಿಪಲ್ ಕಮ್ಮಿಷನರುಗಳ ಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟು, ಅವರವರ ದರ್ಜೆ ಕ್ರಮವನ್ನನುಸರಿಸಿ ಚುನಾಯಿಸಲ್ಪಟ್ಟಂತೆ ತಿಳಿಸತಕ್ಕದ್ದು; ಪರಂತು ಯಾವ ಕಮ್ಮಿಷನರಾಗಲಿ, ಅವರಿಗೋಸ್ಕರ ಅಭಿಪ್ರಾಯ ಕೊಡುವ ಬಗ್ಯೆ ಅರ್ಹರಾದ ಜನಗಳ ವೊಟ್ಟು ಸಂಖ್ಯೆಯಲ್ಲಿ ಅಧಮಪಕ್ಷ $\frac{1}{8}$ನೇ ಸಂಖ್ಯೆಯುಳ್ಳ ಜನಗಳ ಅಭಿಪ್ರಾಯ ಪಡೆದ ಹೊರ್ತು ಚುನಾಯಿಸಲ್ಪಟ್ಟಂತೆ ಭಾವಿಸಲ್ಪಡತಕ್ಕದ್ದಲ್ಲ. ಒಂದೇ ಕೆಲಸಕ್ಕೆ ಎರಡು ಯಾ ಹೆಚ್ಚು ಉಮೇದವಾರರು ಸಮ ಸಂಖ್ಯೆಯ ಅಭಿಪ್ರಾಯ ಹೊಂದುವದಾದರೆ, ಪ್ರೆಸಿಡೆಂಟರು ಆ ಪೈಕಿ ಯಾರು ಚುನಾಯಿಸಲ್ಪಡತಕ್ಕದ್ದೋ ಅದನ್ನು ತೀರ್ಮಾನಿಸತಕ್ಕದ್ದು.

XI. ಚುನಾವಣಿ ಬಗ್ಯಾಗಿ ಉಮೇದವಾರರು ಯಿಲ್ಲದ ಪಕ್ಷದಲ್ಲಿ ಅಥವಾ ಅವರು ಅವಶ್ಯಕವಾದ ಕಮ್ಮಿ ಸಂಖ್ಯೆಯ ಅಭಿಪ್ರಾಯವನ್ನಾದರೂ ಪಡೆಯಲಿಕ್ಕೆ ತಪ್ಪಿದ ಪಕ್ಷದಲ್ಲಿ ಅಂಥಾ ನೇಮಣೂಕೆಯು ಗವರ್ನಮೆಂಟಿನವರಿಂದ ಭರ್ತಿ ಮಾಡಲ್ಪಡತಕ್ಕದ್ದು.

XII. ಯಾವ ಮ್ಯುನಿಸಿಪಲ್ ಕಮ್ಮಿಷನರಾದರೂ ಆವರ ರಾಜೀನಾಮೆಯನ್ನು ಪ್ರೆಸಿಡೆಂಟರಿಗೆ ವೊಪ್ಪಿಸಬಹುದು, ಮತ್ತು ಅಂಥಾ ರಾಜೀನಾಮೆಯು ಅಂಗೀಕರಿಸಲ್ಪಟ್ಟು ಯಾ ಅಂಥಾ ರಾಜೀನಾಮೆಯ ತಾರೀಖು ಲಾಗಾಯತು ಎರಡು ತಿಂಗಳು ಕಳೆದ ತರುವಾಯ ಅವರು ಸದರೀ ಉದ್ಯೋಗವನ್ನ ಖಾಲೀ ಮಾಡಿದಂತೆ ಭಾವಿಸಲ್ಪಡತಕ್ಕದ್ದು.

XIII. ಸಾಧಾರಣವಾಗಿ ನಡಿಯತಕ್ಕ ಎರಡು ಚುನಾವಣಿಗಳ ಮಧ್ಯಕಾಲಗಳಲ್ಲಿ ಮ್ಯುನಿಸಿಪಲ್ ಕಮ್ಮಿಷನರುಗಳ ಮರಣದಿಂದಾಗಲಿ, ರಾಜೀನಾಮೆಕೊಡುವಣದರಿಂದಾಗಲಿ, ತಗ್ಯೆರ್ ಯಾ ಯಿತರ ಕಾರಣದಿಂದಾಗಲಿ ಉದ್ಯೋಗ ಖಾಲಿಯಾದರೆ, ಉಳಿದ ಕಮ್ಮಿಷನರುಗಳು ಸದರೀ ಖಾಲಿಯನ್ನ ಗವರ್ನಮೆಂಟನವರ ಮಂಜೂರಾತಿಗೆ ಒಳಪಟ್ಟು, ವಿಧಿಸೋಣಾದ ಯೋಗ್ಯತೆಗಳುಳ್ಳ ಒಬ್ಬ ಮನುಷ್ಯರನ್ನು ಮೊಕರರ್ಮಾಡುವದರ ಮೂಲಕ ಖಾಲಿಯನ್ನ ಭರ್ತೀ ಮಾಡತಕ್ಕದ್ದು; ಮತ್ತು ಹಾಗೆ ಮೊಕರರ್ಮಾಡಲ್ಪಟ್ಟ ಮನುಷ್ಯರು, ಗವರ್ನಮೆಂಟನವರಿಂದ ತೆಗೆದುಹಾಕಲ್ಪಟ್ಟ ಹೊರ್ತು, ಖಾಲಿಯಾದ ಉದ್ಯೋಗದಲ್ಲಿದ್ದ ಮೆಂಬರು ಸಾಧಾರಣವಾಗಿ ಉದ್ಯೋಗದಲ್ಲಿರಬಹುದಾಗಿದ್ದ ಕಾಲದಪರಿಯಂತ ಉದ್ಯೋಗದಲ್ಲಿರುವದಕ್ಕೆ ಅರ್ಹರಾಗಿರತಕ್ಕದ್ದು.

ತಾರೀಖು 30ನೇ ನವಂಬರ 1896.

ಆಶುದ್ಧ.

ನಂ. 6233.—ಲೋ. ಫಂ. 17—96, ಸನ 1896ನೇ ನವಂಬರ 24ನೇ ಮರ್ಕುಂ 5973.-4 ಲೋ. ಫಂ. 17-96ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ IIIನೇ ರೂಲ್, (e) ಕ್ಲಾಜ್ 6ನೇ ಪಜ್ತಿಯಲ್ಲಿ "ಈ ಕ್ಲಾಜಿನ ಮೊದಲ್ಭಾಗದಲ್ಲಿ ಹೇಳಿರುವ ಮೊಬಲಗಲ್ಲದೆ" ಎಂಬ ಮಾತುಗಳನ್ನು ಬಿಟ್ಟುಬಿಡತಕ್ಕದ್ದು.

ತಾರೀಖು 11ನೇ ಡಿಸೆಂಬರ 1896.

ನಂ. 6746.—ಮಿ. 1277, ಮಿಸ್ಟರ್ ಕೆ. ಕೃಷ್ಣಅಯ್ಯರ್ ಯವರು, ಮಿಸ್ಟರ್ ಸಿ. ಶ್ರೀಕಂಠೇಶ್ವರ ಅಯ್ಯರ್ ಯವರು ಅಸಿಸ್ಟೆಂಟ್ ಕಂಟ್ರೋಲರಾಗಿ ಹಂಗಾಮಿ ತರೀಕ ಕೆಲಸದಲ್ಲಿರುವ ಕಾಲದಲ್ಲಿ, ದಿವಾನರವರಿಗೆ ಪ್ರೈವೇಟ್ ಸೆಕ್ರಿಟೆರಿಯಾದ ತಮ್ಮ ಕೆಲಸಗಳೊಂದಿಗೆ ಗವರ್ನಮೆಂಟ್ ಅಸಿಸ್ಟೆಂಟ್ ಸೆಕ್ರಿಟೆರಿಯಾಗಿ ಆಕ್ಟಿಂಗ್ ತರೀಕ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 12ನೇ ಡಿಸೆಂಬರ 1896.

ನಂ. 6775.—ಮಿ. 1281, ಮಿಸ್ಟರ್ ಎಂ. ಶ್ರೀನಿವಾಸರಾವ್, ಎಂ. ಏ., ಎಂ. ಬಿ., ಸಿ. ಎಂ. ವ ಬಿ. ಎಸ್. ಸಿ. (ಎಡಿಂಬರ್ಗ್) ಯವರು ಲೋಕಲ್ ಮೆಡಿಕಲ್ ನೌಕರಿಯಲ್ಲಿ 2ನೇ ಗ್ರೇಡ್ ಅಸಿಸ್ಟೆಂಟ್ ಸರ್ಜ್ಯನ್‌ರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 14ನೇ ಡಿಸೆಂಬರ 1896.

ನಂ. 6855.—ಜು. 781, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಪೋಲೀಸ್ ಸೂಪರಿಂಟೆಂಡೆಂಟ್ ಮಿಸ್ಟರ್ ಎಂ. ನಂಜರಾಜ ಅರಸಿನವರಿಗೆ, ಮಾಹೆ ಮಜಕೂರ್ 6ನೇ ಮರ್ಕುಂ ಲಾಗಾಯತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 26ನೇ ನವಂಬರ 1896.

ನಂ. 4789.—ರೆ. 1661, ಮೈಸೂರ್ ಲ್ಯಾಂಡ್ ರೆವಿನ್ಯೂ ರೂಲ್ಸಿನ XXVIIನೇ ರೂಲ್ 1ನೇ ಪ್ಯಾರೆಯಿಗೆ ಈ ಕೆಳಗೆ ಕಂಡ ನಿಯಮವನ್ನ ಶೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನಮೆಂಟನವರು ಆಜ್ಞಾಪಿಸುತ್ತಾರೆ:—

"ಪರಂತು ಒಂದು ಸರ್ವೆ ನಂಬರ್ ಖುಷ್ಕಿ ವ ತರೀ ಜಮೀನ್‌ಗಳು ಸಹಿತವಾಗಲಿ ಯಾ ಖುಷ್ಕಿ ತರೀ ವ ಬಾಗಾಯತು ಜಮೀನ್‌
"ಗಳಾಗಲಿ ಅಡಗಿಸಿಕೊಂಡಿದ್ದ ಪಕ್ಷದಲ್ಲಿ, ಈ ರೂಲುಗಳನುಸರಿಸಿ ಮಾಡಲ್ಪಟ್ಟ ಯಾವ ವಿಭಾಗವು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್
"ರವರಿಂದ ಮಂಜೂರ್ಮಾಡಲ್ಪಟ್ಟಿದ್ದ ಹೊರ್ತು ನೆರವೇರಿಸಲ್ಪಡಲಾರದು. ಸದರೀಯವರಿಗೆ ಇಂಥಾ ಪ್ರತಿ ಸಂಗತಿಯೂ ಸ್ಯೆಮಾಯಿಷಿ ದಾ
"ಖಲೆಯೊಡನೆ ರಿಪೋರ್ಟು ಮಾಡಲ್ಪಡತಕ್ಕದ್ದು."

ನಂ. 4801—ರೆ. 1664, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಬೆಂಗಳೂರ್ ತಾಲ್ಲೂಕಿಗೆ ಶಾಮಿಲಾಗಿದ್ದ "ಹಲಸೂರು ಹೋಬಳಿ" ಯನ್ನ ಇನ್ನು ಮೇಲೆ 1896ನೇ ಡಿಸೆಂಬರ್ ಗುರ್ರೆ ಲಾಗಾಯತು "ಕಸಬಾ ಬೆಂಗಳೂರು ಹೋಬಳಿ" ಎಂಬದಾಗಿ ಕರೆಯಲ್ಪಡತಕ್ಕದ್ದು.

ನಂ. 4802.—ರೆ. ಫೈ: 37—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 173ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಅಮಲ್ದಾರ್ ಸಿ. ರಾಜಗೋಪಾಲಾಚಾರ್ಲು ಯವರಿಗೆ 1896ನೇ ನವಂಬರ 21ನೇ ಮರ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಸಿರಸ್ತೇದಾರ್ರು ಸದರೀ ರಾಜಗೋಪಾಲಾಚಾರ್ಲು ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 5ನೇ ಡಿಸೆಂಬರ 1896.

ನಂ. 5221.—ರೆ. 1754, ಅಸಿಸ್ಟೆಂಟ ಕಮಿಷ್ನರ ಮೆಸ್ಟರ್ ಸಿ. ಬಿ. ಶೇಷಗಿರಿರಾಯರು ಡೆಪ್ಯುಟಿ ಕಮಿಷ್ನರ ಮೆಸ್ಟರ್ ಪಿ. ರಂಗಸ್ವಾಮಯ್ಯಂಗಾರ್ರಿಂದ 1896ನೇ ನವೆಂಬರ 25ನೇ ಮಾರ್ಕ್ಸಿನ ಪೂರ್ವಾಹ್ನದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಟ್ರೆಜರಿಯ ಚಾರ್ಜನ್ನು ತೆಗೆದುಕೊಂಡಿರುತ್ತಾರೆ.

ತಾರೀಖು 7ನೇ ಡಿಸೆಂಬರ 1896.

ನಂ. 5257.—ರೆ. ಫೈ. 100.—95, ಮಂಡ್ಯದ ತಾಲ್ಲೂಕು ಅಮಲ್ದಾರ ವಿ. ಎನ್. ಗುರುರಾಯರಿಗೆ, 1896ನೇ ಅಕ್ಟೋಬರ 12ನೇ ಮಾರ್ಕ್ಸಂ 3781.—ರೆ. ಫೈ. 100.—95ನೇ ನಂಬರ ಗವರ್ನಮೆಂಟ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಒಂದು ದಿನದ ಕ್ಯಾಜುಯಲ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 8ನೇ ಡಿಸೆಂಬರ 1896.

ನಂ. 5264.—ರೆ. 1767, ಡೆಪ್ಯುಟಿ ಕಮಿಷ್ನರ ಮೆಸ್ಟರ್ ಪಿ. ರಂಗಸ್ವಾಮಿ ಅಯ್ಯಂಗಾರ್ರು ಡೆಪ್ಯುಟಿ ಕಮಿಷ್ನರ ಮೆಸ್ಟರ್ ಸಿ. ಮಾದಯ್ಯನವರಿಂದ ಕೋಲಾರ ಡಿಸ್ಟ್ರಿಕ್ಟಿನ ಟ್ರೆಜರಿ ಚಾರ್ಜನ್ನು 1896ನೇ ನವೆಂಬರ 28ನೇ ಮಾರ್ಕ್ಸಿನ ಪೂರ್ವಾಹ್ನದಲ್ಲಿ ವಹಿಸಿರುತ್ತಾರೆ.

ನಂ. 5284—ರೆ. ಫೈ. 72—96, ಮೈಸೂರ ಸರ್ವಿಸ್ ರೆಗ್ಯುಲೇಷನ್ಸಗಳ 171ನೇ ಆರ್ಟಿಕಲ್ ಅನುಸರಿಸಿ ಮೈಸೂರ ಡಿಸ್ಟ್ರಿಕ್ಟಿ ಫ್ರೆಂಚರಾಕ್ಸ ಸಬ್ ಡಿವಿಜನ್ ಆಫಿಸರ ಮೆಸ್ಟರ್ ಪಂಚನಾಥರಾಯರಿಗೆ 1896ನೇ ನವೆಂಬರ 30ನೇ ಮಾರ್ಕ್ಸಂ ಲಾಗಾಯತು ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 5287—ರೆ. ಫೈ. 42—96, ಮೈಸೂರ ಸರ್ವಿಸ್ ರೆಗ್ಯುಲೇಷನ್ಸಗಳ 172ನೇ ಆರ್ಟಿಕಲ್ ಅನುಸರಿಸಿ ಮೈಸೂರ ಡಿಸ್ಟ್ರಿಕ್ಟಿ ಮಳವಳ್ಳಿ ತಾಲ್ಲೂಕಿನ ಅಮಲ್ದಾರ ಕೃಷ್ಣೋ ಅರಸಿನವರಿಗೆ 1896ನೇ ನವೆಂಬರ 7ನೇ ಮಾರ್ಕ್ಸಂ ಲಾಗಾಯತು ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 9ನೇ ಡಿಸೆಂಬರ 1896.

ನಂ. 5315—ರೆ. ಫೈ. 87—96, ಮೈಸೂರ ಸರ್ವಿಸ್ ರೆಗ್ಯುಲೇಷನ್ಸಗಳ 171ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿ ಯಕ್ಸ್ಟ್ರಾ ಅಸಿಸ್ಟೆಂಟ ಕಮಿಷ್ನರ ಮೆಸ್ಟರ್ ಅಬ್ದುಲ್ ಅಜೀಜ್ಯವರಿಗೆ 1896ನೇ ನವೆಂಬರ 30ನೇ ಮಾರ್ಕ್ಸಂ ಲಾಗಾಯತು ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 5318.—ರೆ. ಫೈ. 88—96, ಮೈಸೂರ ಸರ್ವಿಸ್ ರೆಗ್ಯುಲೇಷನ್ಸಗಳ 172ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿ ಮಾಲೂರುತಾಲ್ಲೂಕಿನ ಅಮಲ್ದಾರ ವಿ. ಎನ್. ಗೋಪಾಲರಾಯರಿಗೆ 1896ನೇ ನವೆಂಬರ 5ನೇ ಮಾರ್ಕ್ಸಂ ಲಾಗಾಯತು ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

2. ತಾಲ್ಲೂಕು ಶಿರಸ್ತೇದಾರ್ರು ಸದರೀ ಅಮಲ್ದಾರ್ರು ರಜಾದ ಮೇಲಿದ್ದ ಕಾಲದಲ್ಲಿ ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿ ಇದ್ದರು.

ತಾರೀಖು 10ನೇ ಡಿಸೆಂಬರ 1896.

ನಂ. 5370.—ರೆ. ಫೈ. 100.—95, ಮೈಸೂರ ಸರ್ವಿಸ್ ರೆಗ್ಯುಲೇಷನ್ಸಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟಿ ಮಂಡ್ಯ ತಾಲ್ಲೂಕಿನ ಅಮಲ್ದಾರ ವಿ. ಎನ್. ಗುರುರಾಯರಿಗೆ, 1896ನೇ ಡಿಸೆಂಬರ 2ನೇ ಮಾರ್ಕ್ಸಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 11ನೇ ಡಿಸೆಂಬರ 1896.

ನಂ. 5362.—ರೆ. 1797, ಡೆಪ್ಯುಟಿ ಕಮಿಷ್ನರ ಮೆಸ್ಟರ್ ಸಿ. ಮಾದಯ್ಯನವರು, 1896ನೇ ಡಿಸೆಂಬರ 3ನೇ ಮಾರ್ಕ್ಸಿನ ಮಧ್ಯಾಹ್ನಾತ್ಪರ ಮೈಸೂರ ಡಿಸ್ಟ್ರಿಕ್ಟಿನ ಟ್ರೆಜರಿಯ ಚಾರ್ಜನ್ನು ಮೆಸ್ಟರ್ ಬಿ. ಕೆ. ವೆಂಕಟವರದಯ್ಯಂಗಾರ್ರಿಂದ ತೆಗೆದುಕೊಂಡಿರುತ್ತಾರೆ.

ನಂ. 5367.—ರೆ. ಫೈ. 105.—95, ಮೈಸೂರ ಸರ್ವಿಸ್ ರೆಗ್ಯುಲೇಷನ್ಸಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರ ಡಿಸ್ಟ್ರಿಕ್ಟಿ ತಿಪಟೂರು ತಾಲ್ಲೂಕಿನ ಅಮಲ್ದಾರ ಬಿ. ಸೀತಾರಾಮಯ್ಯನವರಿಗೆ, 1896ನೇ ಡಿಸೆಂಬರ 25ನೇ ಮಾರ್ಕ್ಸಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಸಿರಸ್ತೇದಾರ್ರು ಸದರೀ ಬಿ. ಸೀತಾರಾಮಯ್ಯನವರು ರಜಾದಮೇಲಿರುವ ಕಾಲದಲ್ಲಿಯೂ ಮತ್ತೊಂದು ಹುಕುಂ ಕೊಡುವ ವರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

709

ತಾರೀಖು 11ನೇ ಡಿಸೆಂಬರ 1896.

ನಂ. 5402.—ರೆ. ಫೈ. 33.—96, ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ಶ್ರೀನಿವಾಸರಾಯರಿಗೆ, 1896ನೇ ನವಂಬರ 3ನೇ ಮರ್ಕುಂ 4112.—ರೆ. ಫೈ. 33.—96ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಖಾಹಿಲೆ ರಜಾ 1897ನೇ ಜನವರಿ 1ನೇ ತಾರೀಖಿನ ವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ನಂ. 5405.—ರೆ. ಫೈ. 50.—96, ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಕೊರಟಗೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ಬಿ. ವಾಸುದೇವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಮದ್ದಗಿರಿ ತಾಲ್ಲೂಕು ಅಮಲ್‌ದಾರ್ರು ತಮ್ಮ ಕೆಲಸಗಳೊಂದಿಗೆ ಸದರೀ ಡೆಪ್ಯುಟಿ ಅಮಲ್‌ದಾರ್ರು ರಜಾದ ಮೇಲಿರುವ ಕಾಲದಲ್ಲಿ ಕೊರಟಗೆರೆ ಸಬ್ ತಾಲ್ಲೂಕಿನ ಚಾರ್ಜಿನಲ್ಲಿ ಇರತಕ್ಕದ್ದು.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಪಬ್ಲಿಕವರ್ಕ್ಸ.

ಇಸ್ತಿಹಾರ್‌ನಾಮೆ.

ತಾರೀಖು 8ನೇ ಡಿಸೆಂಬರ 1896.

ನಂ. 1006.—6503, ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ವಿ. ರಂಗಸಾಮಿ ಅಯ್ಯಂಗಾರ್, ಬಿ. ಸಿ. ಈ., ಯವರು, ಯಗ್ಜಿಕ್ಯೂಟಿವ್ ಇಂಜಿನಿಯರ್ ಮೆಸ್ಟರ್ ಆರ್. ಟಿ. ಸ್ಕಾಲ್ಡ್‌ವೆಲ್‌ಯವರು ಪ್ರಿವಿಲೀಜ್ ರಜಾಪಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಹೆಸರಘಟ್ಟ ವಾಟರ್ ಸಪ್ಲೈ ಡಿವಿಜನಿನ ಯಗ್ಜಿಕ್ಯೂಟಿವ್ ಇಂಜಿನಿಯರಾಗಿ ಆಫಿಷಿಯೇಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಸಿ. ಬರ್ನ, ಕರ್ನಲ್,
ಮೈಸೂರ್ ಗವರ್ನಮೆಂಟ್ ಪಬ್ಲಿಕವರ್ಕ್ಸ ಇಲಾಖಾ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫಾಯಿಷ್ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 17, ಸನ್ 1896.

IIನೇ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ ಡಿಟೋ	,, 170
1	ಮದ್ರಾಸ್ ಓಕ್ಸ್‌ರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ಯಾಪುರವರ ಡಿಟೋ	,, 85

ಖರೀದಿದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಸೆಂಟ್ರಲ್ ಜೈಲ್.

ನೋಟಿಸ್.

ನೋಟಿಸ್ ಮೂಲಕ ತಿಳಿಯಪಡಿಸುವದೇನಂದರೆ.—1897ನೇ ಇಸವಿ ಫೆಬ್ರವರಿ ಗುರ್ಲೇ ತಾರೀಖು ಲಾಗಾಯತು 1898ನೇ ಇಸವಿ ಜನವರಿ 31ನೇ ತಾರೀಖು ವರಿವಿಗೂ ಜೈಲಿನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಬೇಕಾದಂಥಾ ಎಲ್ಲಾ ರಕಂ ತುಪಟಗಳೂ ಮತ್ತು ಇತರ ಸಾಮಾನುಗಳನ್ನೂ ಹಾಜರು ಮಾಡಲು ಕಂಟ್ರಾಕ್ಟು ಪಡೆಯಲು ಇಷ್ಟವುಳ್ಳವರಿಂದ ಹಾಜರು ಮಾಡಲ್ಪಡುವ ಸೀಲ್ಡು ಕವರುನಿಸಿ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು 1897ನೇ ಇಸವಿ ಜನವರಿ 19ನೇ ಶನಿವಾರ ಬೆಳಿಗ್ಯ 10 ಘಂಟೇವರಿಗೂ ಅಂಗೀಕರಿಸುವರು.

2. ನಗದಾಗಿ 250 ರೂಪಾಯಿಗಳನ್ನೇ ಆಗಲಿ ಅಥವಾ 250 ರೂಪಾಯಿಗಳಿಗೆ ತಕ್ಕ ನಡವಳಿಕೆಯಲ್ಲಿ ಇರುವ ನೋಟುಗಳನ್ನು ಆಗಲಿ ಡಿಪಾಜಿಟ್ ತರೀಕು ಹಾಜರು ಮಾಡದೇ ಇರುವಂಥಾ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

3. ದರಖಾಸ್ತುದಾರರಿಂದ ಹಾಜರು ಮಾಡಲ್ಪಡುವ ದರಖಾಸ್ತುಗಳ ಮೇಲ್ ಭಾಗದಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ "ಸಾಮಾನುಗಳು ತಯಾರಾಗತಕ್ಕ ಬಗ್ಯೆ ಬೇಕಾಗಿರುವ ಸಾಮಾನುಗಳನ್ನು ಸಪ್ಲೈ ಮಾಡತಕ್ಕ ಬಗ್ಯೆ ಕೊಟ್ಟ ದರಖಾಸ್ತು" ಎಂದು ನಮೂದಿಸಬೇಕು.

4. ಮೇಲ್ಕಂಡ ದಿನದಲ್ಲಿ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ತಮ್ಮ ಆಫಿಸಿನಲ್ಲಿ ಹಾಜರಿರುವ ದರಖಾಸ್ತುದಾರ್ರು ಯಾ ಅವರುಗಳ ಏಜಂಟುಗಳ ರೂಬರೂಬ್ ದರಖಾಸ್ತುಗಳನ್ನು ವಡದು ನೋಡುವರು.

5. ಯಾವ ದರಖಾಸ್ತನ್ನೇ ಆಗಲಿ ಕಾರಣ ನಮೂದಿಸದೆ ತಿರಸ್ಕರಿಸುವ ಅಧಿಕಾರವನ್ನು ಸೂಪರಿಂಟೆಂಡೆಂಟರವರು ವಹಿಸಿ ಇದ್ದಾರೆ.

6. ಎಲ್ಲಾ ದರಖಾಸ್ತುದಾರರೂ ಇದಕ್ಕೆ ಜಂಟಿಸಿರುವ ಫಾರಮಿನಲ್ಲಿ ಕಂಡಂತೆ ವಳ್ಳೇ ಸರಕುಗಳನ್ನು ಯಾವ ರೇಟಿನಲ್ಲಿ ಕೊಡುತ್ತಾರೋ ಅವುಗಳನ್ನು ತಮ್ಮ ದರಖಾಸ್ತಿನಲ್ಲಿ ನಮೂದಿಸಬೇಕು.

7. ಕಂಟ್ರಾಕ್ಟು ಯಾರ ಹೆಸರಿಗೆ ಮಂಜೂರಾಗುತ್ತೋ ಅವರಿಂದ ಹಾಜರ್ಮಾಡಲ್ಪಟ್ಟ ಡಿಪಾಜಿಟ್ ಮೊಬಲಗನ್ನು ವಾಪಸು ಕೊಡುವದಿಲ್ಲ. ಮತ್ತು ಸದರೀ ಯವರ ಕಂಟ್ರಾಕ್ಟು ಮಂಜೂರು ಮಾಡಲ್ಪಟ್ಟಿದೆ ಎಂದು ಅವರಿಗೆ ತಿಳಿಸಿದ ಒಂದು ವಾರದೊಳಗಾಗಿ ಕಂಟ್ರಾಕ್ಟು ಬಾಂಡು ಬರದು ಕೊಡದೇ ಹೋದರೂ ಅಥವಾ ಜಾಮಿನ್ಗಾ ತರೀಕ ನಗದು 500 ರೂಪಾಯಿ ಅಥವಾ ಅದಕ್ಕೆ ತಕ್ಕ ಸರಕಾರದ ಬಾಂಡುಗಳನ್ನೇ ಆಗಲಿ ಹಾಜರು ಮಾಡದೇ ಹೋದರೂ ಡಿಟ್ಟೋ ಡಿಪಾಜಿಟ್ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

8. ಯಾವ ಮೊಬಲಗೂ ಅಡ್ವಾನ್ಸ್ ತರೀಕ ಕಂಟ್ರಾಕ್ಟುದಾರನಿಗೆ ಪ್ರತಿ ತಿಂಗಳಲ್ಲೂ ದೊರೆಯಲಾರದು. ಪ್ರತಿ ತಿಂಗಳಲ್ಲೂ ಕಂಟ್ರಾಕ್ಟುದಾರನಿಂದ ಹಾಜರು ಮಾಡಲ್ಪಟ್ಟ ಸಾಮಾನುಗಳ ಕ್ರಯವನ್ನು ಸೂಪರಿಂಟೆಂಡೆಂಟರವರು ಗುರ್ಲೇ ತಾರೀಖು ಕಳದ ನಂತರ ಸಾಧ್ಯವಾದ ಮಟ್ಟಿಗೆ ಜಾಗ್ರತೆಯಾಗಿ ಕೊಡುವರು.

9. ಕಂಟ್ರಾಕ್ಟನ್ನು ಷಿಕಮಿ ಕಂಟ್ರಾಕ್ಟಾಗಿ ಕೊಡಕೂಡದು.

10. ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಷರತ್ತು ಮೇರೆ ನಡಿಯದೇ ತಪ್ಪಿದರೂ ಅಥವಾ ಕಮ್ಮಿ ರಕಂ ಸಾಮಾನುಗಳನ್ನು ಹಾಜರು ಮಾಡಿದರೂ, ಜೈಲ್ ಸೂಪರಿಂಟೆಂಡೆಂಟರವರು ಮುನಾಸಬ್ ಮೇರೆ 30 ರೂಪಾಯಿಗಳವರಿಗೂ ಜುರ್ಮಾನೇ ವಿಧಿಸಬಹುದು. ಹೀಗೆ ಪದೇ ಪದೇ ಮಾಡಿವರೆ ಕಂಟ್ರಾಕ್ಟನ್ನು ವಜಾಮಾಡಿ ಜಾಮಿನ್ಗಾ ತರೀಕ ಕೊಟ್ಟ ಮೊಬಲಗನ್ನು ಸರಕಾರಕ್ಕೆ ತೆಗೆದುಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನು ಷರತ್ತಿಗೆ ವಿರೋಧವಾಗಿ ನಡೆದುಕೊಂಡರೆ ಆ ವಿಷಯದಲ್ಲಿ ಜೈಲ್ ಸೂಪರಿಂಟೆಂಡೆಂಟರು ಮಾಡುವ ಹುಕುಮೇ ಆಖೈರು ಹುಕುಂ ಆಗಿಯಿಧೆ.

12. ಕಂಟ್ರಾಕ್ಟುದಾರನು ಅಪೇಕ್ಷಿಸಿದ ಪಕ್ಷದಲ್ಲಿ ನಾಶಪಡದೇ ಇರುವಂಥಾ ಪದಾರ್ಥಗಳನ್ನೇ ಇಟ್ಟುಕೊಳ್ಳಲು ಒಂದು ಕೊಠಡಿ ಕೊಡಲ್ಪಡುವದು. ಅಲ್ಲಿ ಸಾಮಾನು ಇಟ್ಟುಕೊಂಡು ಕೇಳಿದ ವೇಳೆ ಕೊಡಬಹುದು.

13. ಇನ್ನೂ ಇತರ ಸಂಗತಿಗಳು ವಿಚಾರಿಸಬೇಕಾಗಿದ್ದರೆ ಸೂಪರಿಂಟೆಂಡೆಂಟರವರ ಆಫಿಸಿನಲ್ಲಿ ಕೇಳಿ ತಿಳದುಕೊಳ್ಳಬಹುದು.

14. ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ಕಂಡ * ಮಾರ್ಕು ಮಾಡಿರುವ ಸಾಮಾನುಗಳ ನಮೂನೇ ಸಹ ದರಖಾಸ್ತು ಜೊತೆಯಲ್ಲಿ ಹಾಜರು ಮಾಡಬೇಕು.

15. ಮೇಲೆ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟು ಮತ್ತು 100 ರೂಪಾಯಿ ಡಿಪಾಜಿಟ್ ಕಟ್ಟದರೆ ಮೇಲ್ಕಂಡ ತಾರೀಖಿನಲ್ಲಿ ತುಪಟಗಳು ಹಾಜರು ಯಾ ಸಪ್ಲೈ ಮಾಡತಕ್ಕ ಬಗ್ಯೆ ಕೊಡುವ ಅಲಾಹಿದಾ ದರಖಾಸ್ತುಗಳನ್ನು ಅಂಗೀಕರಿಸಲ್ಪಡುವದು.

16. 25 ಪೌಂಡು ತೂಕವುಳ್ಳ ಮಣದ ಮೇಲೆ ದರ ನಮೂದಿಸಬೇಕು.

17. ಜಿನಸಿಗಳ ಸುಮಾರು ನಿಬಂಧನೆ ಈ ಕೆಳಗೆ ನಮೂದಿಸಿದೆ, ಆದರೆ ಇಷ್ಟೇ ಆಗುತ್ತೆಂದು ನಿರ್ಣಯಿಸಿ ಇಲ್ಲಾ.

ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
	ಪೌಂಡು
ಸಣ್ಣ ಇಂಗ್ಲೀಷ್ ಟ್ವೈನ್ 3 ಪವನು ವುಳ್ಳ ಕಟ್ಟು .	50
ಡಿಟ್ಟೋ ದಪ್ಪವುಂಡೆ ಟ್ವೈನ್(ಬೆಂಗಾಲ್) ..	10
ಹೊಲಿಯುವ ಟ್ವೈನ್ ಪವನಿಗೆ ..	20
ಷೀಟುಗ್ಲೂ, ಯಾನೆ ವಜ್ರ 25 ಪವನಿನ ಮಣಕ್ಕೆ ..	150
ಸ್ಟಿಕ್ಕುಗ್ಲೂ ಯಾನೆ ವಜ್ರ 25 ಪವನಿನಮಣಕ್ಕೆ ..	200
ಅಳಲೇಕಾಯಿ ಡಿಟ್ಟೋ ..	275
*ಚಾಳು. (ಬಿಲ್ಲೆಯಾಗಿ) ಡಿಟ್ಟೋ ..	1,200
ಅಡಿಕೆ ಡಿಟ್ಟೋ ..	50
ಕಾಂಚು ಡಿಟ್ಟೋ ..	50
ಹುಣಸೇಬೀಜ (ರೂಪಾಯಿಗೆ ಇಷ್ಟು ಸೇರೆಂದು) ..	300 ಸೇರು
ಹರಿದ್ರ 25 ಪವನಿನ ಮಣಕ್ಕೆ ..	200 ಪವನು
ತಾಂಬ್ರದ ತಗಡು ನಾನಾತರ ದಪ್ಪದ್ದು ..	600
ಹಿತ್ತಾಳೆ ತಗಡು ಡಿಟ್ಟೋ ...	50
ಪಟಕಾರವು 25 ಪವನಿನ ಮಣಕ್ಕೆ ..	250
*ಅರಗು ಪೆಪ್ಪರ ಅಥವಾ ರಂಗೂನದು ಕಡ್ಡಿ ಇಲ್ಲದ್ದು	700 ಪವನು
*ಕೆಂಪುವಾರ ಸಣ್ಣಗೆ ಸೀಳಿದ್ದು ..	200 ಪವನು
ಬಿಳೀ ಶೀಮೆ ಸುಣ್ಣ ..	20 ಪವನು
*ಅವಲ್‌ನೀಲಿ ಅವಲ ದುಯ್ಯಮ್ ಮತ್ತು ಸಿಯ್ಯಂ ರಖಂ ..	150 ಪವನು
ಅವಲ್‌ಟೂರು	6 ಪೀಪಾಯಿ
ಮರದೆಣ್ಣೆ	3 ಮಣ
ಗೋಪಿ	200 ಪವನು
ಅವಲ್ ಕೊಬ್ಬರಿಯಣ್ಣೆ .. .	56 ಪವನು
ಅವ್ವಲ್ ಅಚ್ಚಳ್ಳೆಣ್ಣೆ	50 ಪವನು
ಆವ್ವಲ್ ದೀಪದಯಣ್ಣೆ	75 ಪವನು
ಅವಲ್ ಬಿಳೀಬೆತ್ತ 1ನೇ ಕ್ಲಾಸು ..	350 ಪವನು
ಛಾಪೆ ಹಾಕುವ ಕೆಂಪುಶಾಯಿ ಒಂದು ಪರ್ವ ಟಿನ್ನಿಗೆ	20 ಟಿನ್
ದಪ್ಪವಾದ ಬುಕ್ಕು ಬೈಂಡಿಂಗ್ ಕ್ಯಾಲಿಕೊ ಗಜಕ್ಕೆ	150 ಗಜ
ತೆಳವ ದಪ್ಪ ಮತ್ತು ಅಗಲವುಳ್ಳ ಮಲ್‌ಮಲ್ ..	30 ಗಜ
ಅಗಲವಾದ ಮತ್ತು ದಪ್ಪವಾದ ಟರಕಿ ಕೆಂಪುಬಟ್ಟೆ	30 ಗಜ
ಒಂದುಅಡಿ ಅಗಲವುಳ್ಳ ಟೇಪುಗನಿ (ಚೀಲಕ್ಕೆ) ಗಜಕ್ಕೆ ..	100 ಗಜ
ನೇವೀಕ್ಯಾನ್‌ವಸ್ ನಂ. 1 ಗಜಕ್ಕೆ ..	30 ಗಜ
ಡಿಟ್ಟೋ ನಂ. 2 ಡಿಟ್ಟೋ ..	5 ಗಜ
ಡಿಟ್ಟೋ ನಂ. 3 ಡಿಟ್ಟೋ ..	5 ಗಜ
*ಬಾರ್ ಐರನು ಯಾನೆ ಕಬ್ಬಿಣ25 ಪವನು ಮಣಕ್ಕೆ	200 ಪವನು
ಹೂಪುಐರನು ಡಿಟ್ಟೋ ..	200 ಪವನು
ಅರ ಮಂದಕ್ಕೆ ..	50
ಹಳೇ ಹಿತ್ತಾಳೆ 25 ಪವನು ಮಣಕ್ಕೆ ..	200 ಪವನು
*ಕತ್ತರಿಸಿದ ಮಂಡ್ಯದ ಬಿಳೀತುಪಟ 25 ಪವನು ಮಣಕ್ಕೆ 1ನೇ ರಖಂ ..	500 ಪವನು
*2ನೇ ರಖಂ ಕತ್ತರಿಸಿದ ಚಿತ್ರದುರ್ಗದ ತುಪಟ...	1,000ಪವನು
*ಕುರಿಮರಿ ತುಪಟ ಚಿತ್ರದುರ್ಗದ್ದು(ಬ್ಲಾಕುಕ್ಲೈಮಿ)	2,500ಪವನು
*ಚುನಾಮುಯಾನೆ ಸ್ಕ್ರಾಪ್ಡು ಬ್ಲಾಕು ...	5,000ಪವನು
ಡಿಟ್ಟೋ ಬಿಳೀತುಪಟ ...	3,000ಪವನು
*ಡಿಟ್ಟೋ ಮರಿ ತುಪಟ ...	1,000 ಪವನು
ಡಿಟ್ಟೋ ಗ್ರೇ ಯಾನೆ ಬಿಳೀ ತುಪಟ ...	3,000ಪವನು

ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
ಜೇನುಮೇಣ (ಹಳದಿ) ..	30 ಪವನು
ಹುಣಸೆಹಣ್ಣು (ಕೊಳೆ ಕಲ್ಲುವಗೈರೆ ಇಲ್ಲದ್ದು) 25 ಪವನಿನ ಮಣಕ್ಕೆ	2000ಪವನು
ಕೆಂಪುಸಾಬೂನು (ಬಿಲ್ಲೆಗಳು) ಡಿಟ್ಟೋ ..	50 ಪವನು
*ಹಳದಿ ಹೂ ಡಿಟ್ಟೋ ..	1,500 ಡಿ||
ಬಿಳೀಗೋಂದು (ಕೊಳೆ ಇಲ್ಲದ್ದು) ಡಿಟ್ಟೋ ..	25 ಪವನು
ದೋಬಿ ಸ್ಯಾಂಡು ಯಾನೆ ಮರಳು ಡಿಟ್ಟೋ ..	200 ಮಣ
ಪಸಿಯುತಕ್ಕ ಸೀಸ ಡಿಟ್ಟೋ ..	75 ಪವನು
ಟಂಕವು (ಬಿಳಿಗಾರ) ಡಿಟ್ಟೋ ..	75 ಪವನು
ಸಾಲಿಮೊನಿಯಾಕ್ ಡಿಟ್ಟೋ .	75 ಪವನು
ಅರಪಾಲು ಡಿಟ್ಟೋ ..	10 ಮಣ
ಭತ್ತದ ಹೊಟ್ಟು ಡಿಟ್ಟೋ ..	100 ಮಣ
ನೀಲೀಬೀಜ ಡಿಟ್ಟೋ ..	600 ಪವನು
ಬಿಳೀ ಗೋಧಿಹಿಟ್ಟು (ಅವಲ್) ಡಿಟ್ಟೋ ..	250 ಪವನು
ಅವ್ವಲ್ ಇದ್ದಲು (ಚೀಲಗಳಲ್ಲಿ) ಚೀಲಕ್ಕೆ ದರ.	150 ಚೀಲ
ಸೆಣಬಿನದಾರ ಒಂದು ಡಜನ್ ವುಂಡಗೆ ..	100 ವುಂಡೆ
ತೆಂಗಿನನಾರು (ಅವಲ್ ಕಳ್ಳೀಕೋಟೇದು) 25 ಪವನಿನ ಮಣಕ್ಕೆ ..	10,000 ಪ||
ಸವುದೆ (ಸಣ್ಣಗೆ ಸೀಳಿದ್ದು) ..	1,200 ಮಣ
1ನೇ ರಖಂ ಚಿತ್ರದುರ್ಗದ ಕತ್ತರಿಸಿದ ಕುರಿ ತುಪಟ 25 ಪವನು ಮಣಕ್ಕೆ	1,500ಪವನು
ಪುಂಡೀನಾರು (ಬಿಳೀದು) 25 ಪವನು ಮಣಕ್ಕೆ	800 ಪವನು
*ತೂತು ಇಲ್ಲದ ಅವಲ್ ಕೋಣನ ಚಕ್ಕಳ ..	10
ಡಿಟ್ಟೋ ಹದಮಾಡಿದ ಎತ್ತಿನ ಚಕ್ಕಳ ..	10
ಡಿಟ್ಟೋ ಡಿಟ್ಟೋ ಸಾಧಾರಣದ್ದು ..	5
ದೊಡ್ಡ ಕುರಿ ಚಕ್ಕಳ ಡಿಟ್ಟೋ ..	10
ಬೇಯಿಸಿದ ಅಗಸೇಬೀಜದ ಎಂಣೆ $2\frac{1}{2}$ ಸೇರಿನ ಸೀಸೆಕ್ಕೆ	50 ಸೀಸೆ
ಟರ್ಪಂಟೈನ್ ಎಂಣೆ ಡಿಟ್ಟೋ ..	30 ಸೀಸೆ
ಗೋಪಾಲ್ ವಾರನೀಷ್ ಡಿಟ್ಟೋ ..	10 ಸೀಸೆ
ಬ್ಲಾಕ್ ಜಪಾನ್ ಡಿಟ್ಟೋ ...	10 ಸೀಸೆ
ಅವಲ್ ಫ್ರೆಂಚುಪಾಲೀಷ್ ಸೀಸೆಕ್ಕೆ ...	50 ಸೀಸೆ
ಕಾಡಿಗೆ ಸೀಸೆಕ್ಕೆ	10 ಸೀಸೆ
ಒಣಗಿದ ಕರ್ಪೂರ ಪವನಿಗೆ ..	20 ಪವನು
ಛಾಪೆ ಹಾಕುವ ಕರೀಯಿಂಕಿ ಪರ್ವ ಟಿನ್ನಿಗೆ ..	50 ಟಿನ್
*ಬಿಳೀ ಮ್ಯೂಲ್‌ಟ್ವಿಸ್ಟು ಕಾಟನ್ ನಂ. 10 400 ಪವನು ಮೂಟೆಗೆ	5,000ಪವನು
* ಡಿಟ್ಟೋ ನಂ. 20, 10 ಪರ್ವ ಮೂಟೆಗೆ ..	100 ಪವನು
* ಡಿಟ್ಟೋ ನಂ. 30, 5 ಪವನು ಮೂಟೆಗೆ ..	50 ಪವನು
* ಡಿಟ್ಟೋ ನಂ. 40, ಡಿಟ್ಟೋ ..	20 ಪವನು
* ಕೆಂಪು ಹತ್ತಿ ನಂ. 40 ಇಂಗ್ಲಿಷ್ ಡಿಟ್ಟೋ..	40 ಪವನು
*ಹಳದಿಹತ್ತಿ ನಂ. 40 ಡಿಟ್ಟೋ ..	20 ಪವನು
ಹಸರು ಹತ್ತಿ ನಂ. 40 ಡಿಟ್ಟೋ ..	200 ಪವನು
ಷೀಟು ಐರನು ಎಂಬ ಕಬ್ಬಿಣ 25ಪವನುಮಣಕ್ಕೆ	200 ಪವನು
ಸತ್ತು 25 ಪವನು ಮಣಕ್ಕೆ ..	200 ಪವನು
*ಹಾಸಿಗ್ಗೆ ಗೌಸ್ ಹಾಕುವ ಬಟ್ಟೆ ಗಜಕ್ಕೆ ..	30 ಗಜ
*2ನೇ ರಖಂ ಮಂಡ್ಯದ ಕತ್ತರಿಸಿದ ಬಿಳೀತುಪಟ 25 ಪವನು ಮಣಕ್ಕೆ ..	1,500ಪವನು

ತುಪಟವನ್ನು ಕೆಲಸಕ್ಕೆ ಉಪಯೋಗಿಸುವಪಕ್ಕೆ ಮುಂಚೆ ಆದು ಹೊಡೆದು ಕ್ಲೀನು ಮಾಡಿ ಮತ್ತು ತೊಳೆದು ಉಪಯೋಗಿಸಲ್ಪಡುತ್ತೆ. ತೇಗದಮರ, ಹೊನ್ನೇಮರ, ಕರೀಮರ ಮತ್ತು ರೋಜ್‌ವುಡ್ಡು ಮರ ಇವುಗಳ ತೊಲೆಗಳನ್ನು ಅಡಿಲೆಖ್ಖದಮೇಲೆ ತೆಗೆದುಕೊಳ್ಳುತ್ತೆ. ಇನ್ನೂ ಇತರ ಚಿಲ್ರೆ ಸರಕುಗಳನ್ನು ಕಂಟ್ರಾಕ್ಟುದಾರನು ಮಾರ್ಕೆಟ್ಟಿನಲ್ಲಿ ಮಾರುವ ದರದಮೇರೆ ಸಪ್ಲೈ ಮಾಡತಕ್ಕದ್ದು.

ತಾರೀಖು 30ನೇ ನವಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರ ಸೆಂಟ್ರಲ್ ಜೈಲನಲ್ಲಿ ಖೈದು ಮಾಡಲ್ಪಟ್ಟು ಇರುವ ಕೈದಿಗಳ ಉಪಯೋಗದ ಬಗ್ಗೆ ಸನ್ 1897ನೇ ಇಸವಿ ಫೆಬ್ರುವರಿ ಗುರ್ರೇ ಲಾಗಾಯತು 1898ನೇ ಇಸವಿ ಜನವರಿ 31ನೇ ತಾರೀಖಿನ ವರಿಗೂ ಆ 2 ದಿನಗಳೂ ಸೇರಿ ಕೆಳಗೆ ನಮೂದು ಮಾಡುವ ಜಿನಸುಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರ ಸೆಂಟ್ರಲ್ ಜೈಲ್ ಸೂಪರ್ರಿಟೆಂಡೆಂಟರವರಿಂದ, ಸನ್ 1896ನೇ ಇಸವಿ ಡಿಸೆಂಬರ್ ತಾರೀಖು 19ನೇ ಶನಿವಾರ ಹಗಲು 1 ಘಂಟೆ ವರಿಗೂ ತೆಗದುಕೊಳ್ಳಲ್ಪಡುವವು.

2. ಮೇಲೆ ನಮೂದು ಮಾಡಿರುವ ತಾರೀಖಿನ ನಂತರ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. ಟೆಂಡರುಗಳಿಗೆ ಈ ಕೆಳಗೆ ನಮೂದು ಮಾಡಿರುವಂತೆ ಬೇರೆಬೇರೆ ಮೇಲ್ ವಿಳಾಸ ಬರೆದು ಇರತಕ್ಕದ್ದು;—

1ನೇ ಧಾನ್ಯಕ್ಕೆ	ದರಖಾಸ್ತು
2ನೇ ಮಸಾಲೆ ಜಿನಸುಗಳಿಗೆ	ದರಖಾಸ್ತು
3ನೇ ಇತರ ಅವಶ್ಯಕವಾದ ಪದಾರ್ಥಗಳ ಬಗ್ಗೆ.	ದರಖಾಸ್ತು

4. ಧಾನ್ಯಕ್ಕೆ	ರೂಪಾಯಿ 200
ಮಸಾಲೆ ಜಿನಸುಗಳಿಗೆ ..	,, 50
ಇತರ ಅವಶ್ಯಕವಾದ ಪದಾರ್ಥಗಳಿಗೆ .	,, 150

ಈ ಮೇರಿಗೆ ನಗದಾಗಿ ಆಗಲಿ, ಕರೆನ್ಸೀನೋಟಾಗಿ ಆಗಲಿ ಠೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲ.

5. ದರಖಾಸ್ತುಗಳು ಬೆಂಗಳೂರ್ ಸೆಂಟ್ರಲ್‌ಜೈಲ್ ಸೂಪರ್ರಿಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಆ ಕಾಲದೊಳು ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರುಗಳ ರೂಬರೂಬ್ ಮೇಲ್ಕಂಡ ತಾರೀಖು ಮತ್ತು ಘಂಟೆಯಲ್ಲಿ ಖುಲ್ಲಾ ಮಾಡಲ್ಪಡುವವು.

6. ಕೆಳಗೆ ವಿವರಿಸಿರುವ ಜಿನಸುಗಳನ್ನು ಸರಬರಾಯಿ ಮಾಡುವ ದರ ರೂಪಾಯಿ 1ಕ್ಕೆ ಇಷ್ಟು ಪೌಂಡ್ ಎಂತ ದರಖಾಸ್ತುಗಳಲ್ಲಿ ನಮೂದಾಗಬೇಕು. ಮತ್ತು ಜಿನಸುಗಳು ಒಳ್ಳೇದಾಗಿರಬೇಕು.

ಸಂವತ್ಸರಕ್ಕೆ ಬೇಕಾಗಬಹುದಾದ ಜಿನಸುಗಳ ಪಟ್ಟಿ.

1ನೇ ಧಾನ್ಯ.

				ಸುಮಾರು ಬೇಕಾದ್ದು.
ಅಕ್ಕಿ	..	..	...	56,000 ಪೌಂಡ್
ರಾಗಿ	...	...	...	240,000 ಪೌಂಡ್
ತೊಗರೀಬ್ಯಾಳೆ	..	..	...	11,000 ಪೌಂಡ್
ಅವರೇಬ್ಯಾಳೆ	...	..	...	19,000 ಪೌಂಡ್

2ನೇ ಮಸಾಲೆ ಜಿನಸುಗಳು.

* ಖಾರದ ಸಾಮಾನಿಗೆ ಬೇಕಾದ ಜಿನಸುಗಳು.

1	ಪೌಂಡ್ ಮೆಣಸಿನ ಕಾಯಿ
12	ಔನ್ಸ್ ಕೊತ್ತುಂಬರಿ ಬೀಜ
2	ಔನ್ಸ್ ಅರಿಸಿನ
1	,, ಜೀರಿಗೆ
6	,, ಮೆಣಸು
3	,, ಪೋಸ್ತು ಕಾಯಿ
1	,, ಮೆಂಥ್ಯ
1	,, ಸಾಸಿವೆ
1	,, ಕರಿಬೇವಿಸೊಪ್ಪು

* ಖಾರದ ಸಾಮಾನು ಯಾ ಪುಡಿ 4,200 ಪೌಂಡ್.

ಈರುಳ್ಳಿ	..	6,000 ,,
ಬೆಳ್ಳುಳ್ಳಿ	..	600 ,,
ಹುಣಸೇಹಣ್ಣು	.	6,000 ,,
ಉಪ್ಪು	..	8,400 ,,
ಮೆಣಸು	..	100 ,,

3ನೇ ಇತರ ಅವಶ್ಯಕವಾದ ಪದಾರ್ಥಗಳು.

ಮೊಸರು	..	24,000 ಪೌಂಡ್.	ರೊಟ್ಟಿ	..	1,000 ಪೌಂಡ್.
ಒಳ್ಳೆಯಎಣ್ಣೆ	...	2,400 ,,	ಹಾಲು	..	4,500 ,,
ತುಪ್ಪ	..	1,200 ,,	ಶೀಗೇಕಾಯಿ	..	400 ,,
ತರಕಾರಿ	..	72,000 ,,	ಗೇರುಬೀಜ	..	300 ,,
ರವೆ	..	200 ,,	ದೀಪದೆಣ್ಣೆ	..	350 ,,
ಸಕ್ಕರೆ	..	300 ,,	ಪೊರಕೆಗಳು	..	1,500 ಅದದು
ಕಾಫಿ	..	50 ,,	ಕೊಬ್ಬರಿ ಎಣ್ಣೆ	..	100 ಪೌಂಡ್
ಟೀ	..	10 ,,			

ಮೇಲೆ ನಮೂದು ಮಾಡಿರುವ ಜಿನಸಿನ ಮೊತ್ತಗಳು ಇಷ್ಟೇ ತೆಗದುಕೊಳ್ಳುತ್ತೇವೆಂದು ಖಾತರ್ ದೊರೆಯಲಾರದು.

7. ಕಂಟ್ರಾಕ್ಟುದಾರನು ಕೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಕೈದಿಗಳಿಗೆ ಕೊಡಲ್ಪಡುವದು. ಹಾಗೆ ಸರಬರಾಯಿ ಆದ ರಾಗಿ ಹಿಟ್ಟಿಗೆ ಸರಿಯಾದ ರಾಗಿ ಇಷ್ಟೆಂಬು ಲೆಖ್ಖ ಮಾಡಿ ಆ ರಾಗೀ ದರದ ಮೇಲೆ ಹಣ ಪಾವತಿಯಾದೀತು.

8. ಸೂಪರ್ರಿಟೇಂಡೆಂಟರವರು ಅತ್ಯಂತ ಕಮ್ಮಿ ದರವನ್ನಾಗಲಿ ಅಥವಾ ಮತ್ತೆ ಯಾವ ದರವನ್ನೇ ಆಗಲಿ ಅಂಗೀಕರಿಸಲು ಬದ್ಧರಾಗಿರುವದಿಲ್ಲ. ಮತ್ತು ಕಾರಣವನ್ನು ಹೇಳದೆ ಬೇಕಾದ ದರಖಾಸ್ತನ್ನು ತಿರಸ್ಕರಿಸಬಹುದು.

9. ಮಂಜೂರಾದ ದರಖಾಸ್ತುದಾರರ ಠೇವಣಿ ಮೊಬಲಗು ಇಟ್ಟು ಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವರು ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡುವದಕ್ಕೆ ತಪ್ಪಿದರೆ, ಅಥವಾ ನಗದಾಗಿ ಆಗಲಿ ಗವರ್ನಮೆಂಟ್ ಬಾಂಡ್ ಮೂಲಕವಾಗಿಯಾಗಲಿ ಧಾನ್ಯಕ್ಕೆ 500 ರೂಪಾಯಿ.

ಮಸಾಲೆ ಜಿನಸಿಗೆ .. .. ರೂ. 100.
ಇತರ ಅವಶ್ಯಕವಾದ ಪದಾರ್ಥಗಳಿಗೆ .. ರೂ. 300.
ಈ ಮೇರೆ ಜಾಮೀನ್ ಕೊಡಲು ತಪ್ಪಿದರೆ ಅಂಥಾ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

10. ಕಂಟ್ರ್ಯಾಕ್ಟುದಾರರಿಗೆ ನಗದಾಗಿ ಅಡ್ವಾನ್ಸ್ ಏನೂ ಕೊಡುವದಿಲ್ಲ. ಸರಬರಾಯಿ ಮಾಡಲ್ಪಟ್ಟಂಥಾ ಸಾಮಾನ್ ಕಿಮ್ಮತ್ತು ಪ್ರತಿ ತಿಂಗಳ 1ನೇ ತಾರೀಖು ನಂತರ ಕಂಟ್ರ್ಯಾಕ್ಟುದಾರರಿಗೆ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಪಾವತಿ ಮಾಡಲ್ಪಡುವದು.

11. ಉಗ್ರಾಣದ ಕೊಠಡಿಗಳ ಸ್ವಾಧೀನ ಕಂಟ್ರ್ಯಾಕ್ಟುದಾರರಿಗೆ ಕೊಡಲ್ಪಡುವದು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನೂ ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲೂ ಇಟ್ಟಿರಬೇಕು. ಕೆಟ್ಟು ಹೋಗತಕ್ಕಂಥಾ ಪದಾರ್ಥಗಳು ಅಂದರೆ ತರಕಾರಿ ಮುಂತಾದ್ದು ಪ್ರತಿ ದಿನವೂ ಬೆಳಗಿನ 8 ಘಂಟೆಗೆ ಜೈಲ್‌ನಲ್ಲಿ ಹಾಜರ್ಮಾಡಬೇಕು.

12. ಈ ಕಂಟ್ರ್ಯಾಕ್ಟು ಒಳಗುತ್ತಿಗೆಯಾಗಿ ಕೊಡಬಾರದು.

13. ಕಂಟ್ರ್ಯಾಕ್ಟುದಾರನು ಅವನ ಕಂಟ್ರ್ಯಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಅಥವಾ ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ ಜೈಲ್ ಸೂಪರಿಂಟೆಂಡೆಂಟರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದೆ ಜುರ್ಮಾನೆ ಹಾಕುವರು ಮತ್ತು ಪದೇಪದೆ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡೆದರೆ ಆ ಕಂಟ್ರ್ಯಾಕ್ಟು ರದ್ದು ಮಾಡಿ ಠೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಕ್ಕೊಳ್ಳಲ್ಪಟ್ಟೀತು.

14. ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡದ ಎಲ್ಲಾ ಪ್ರಮೇಯಗಳಲ್ಲೂ ಸೂಪರಿಂಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಆಖೈರಾಗಿರತಕ್ಕದ್ದು.

15. ಕಂಟ್ರ್ಯಾಕ್ಟುದಾರನು ಖೈದಿಗಳ ಉಪಯೋಗಕ್ಕಾಗಿ ಬೇಕಾಗಿರುವ ಹಾಲನ್ನೂ ತರಕಾರಿಯನ್ನೂ ಮತ್ತು ತೋಟದ ಬೆಳಸನ್ನೂ ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಜೈಲಿನಿಂದ ಕೊಂಡುಕೊಳ್ಳಲು ಬದ್ಧನಾಗಿರುವನು.

16. ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

17. ಕಂಟ್ರ್ಯಾಕ್ಟುಗಳು ಮೈಸೂರ ದೇಶದ ಜೈಲುಗಳ ಇನ್ಸ್‌ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು. ಇವರು ದರಖಾಸ್ತುಗಳು ಎಲ್ಲವನ್ನೇ ಆಗಲಿ ಅಥವಾ ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಅಧಿಕಾರವನ್ನು ಇಟ್ಟುಕೊಂಡಿದಾರೆ.

18. ಕಂಟ್ರ್ಯಾಕ್ಟುದಾರರು ಈ ಕಂಟ್ರ್ಯಾಕ್ಟು ತೆಗದುಕೊಂಡ ತರುವಾಯ, ತಮ್ಮ ಕರಾರು ಮೇರಿಗೆ ನಡೆಯಲು ಇಷ್ಟವಿಲ್ಲದವರಾಗಿದ್ದರೆ, ಅವರು ಕೊನೇಪಕ್ಷ ಒಂದು ತಿಂಗಳ ಮುಂಚಿತವಾಗಿ ನೋಟಿಸ್ ಕೊಟ್ಟು ತಮ್ಮ ಠೇವಣಾತಿ ಹಣವನ್ನು ಸರಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

19. ಆ ಪ್ರಕಾರ ಸದರೀ ಕಂಟ್ರ್ಯಾಕ್ಟುದಾರರು ತಮ್ಮ ಕರಾರಿಗೆ ತಪ್ಪಿದ್ದರಿಂದ ಅಥವಾ ಅವರ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರಕಾರದವರು ಸ್ಥಳೀಯವಾದ ಬಾಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚುದರ ಕೊಟ್ಟು ತಕ್ಕೊಳ್ಳುವದರಿಂದ ಸರಕಾರದವರಿಗೆ ಉಂಟಾಗಬಹುದಾದ ನಷ್ಟವನ್ನು ಭರ್ತೀಮಾಡುವದಕ್ಕೂ ಸಹ ಬದ್ಧರಾಗಿರಬೇಕು.

ಷರಾ.—ಈ ಕಂಟ್ರ್ಯಾಕ್ಟುಗಳಲ್ಲಿ ಯಾವ ವಿಧವಾದ ರಿಯಾಯತಿಯನ್ನೂ ಮಾಡೋಣಾಗಲಾರದು.

ಹೆಚ್. ಹೆಚ್. ಸ್ಪಾರ್ಕ್ಸ್,
ಸೂಪರಿಂಟೆಂಡೆಂಟ್ ಸೆಂಟ್ರಲ್ ಜೈಲ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 2ನೇ ಸೆಪ್ಟಂಬರ 1896.

ಅದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.		
ಮೈಸೂರು	ಹುಣಸೂರು	28ನೇ	*	*
ಡಿಟೋ	ಶ್ರೀರಂಗಪಟ್ಣ	1ನೇ	*	*
ಬೆಂಗಳೂರು	ಬೆಂಗಳೂರು	4ನೇ	*	*
ಹಾಸನ	ಹಾಸನ	7ನೇ	*	*
ಕಡೂರು	ಚಿಕ್ಕಮಗಳೂರು	10ನೇ	*	*
ಶಿವಮೊಗ್ಗಾ	ಶಿವಮೊಗ್ಗಾ	15ನೇ	*	*
ಡಿಟೋ	ಸಾಗರ	18ನೇ	ಡಿಸೆಂಬರ	1896.
ಡಿಟೋ	ತೀರ್ಥಹಳ್ಳಿ	22ನೇ	ಡಿಟೋ	,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಆಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಎರಡು ವಿಧವಾಗಿ ಸಂದಲನ್ನು ರಾಸು ಮಾಡಿಸಿರುತ್ತೆ.

3. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4. ಪ್ರತಿ ಕೋಠಿಯಲ್ಲಿಯು ಬಿಕರಿ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನು ಇದರಡಿ ವಿವರಿಸಿದೆ.

ಹಳೇ ತರಹೆ ಪ್ರಕಾರ.

ಸಂದಲ್ ವಿವರ	ಬೆಂಗಳೂರು ಕೋಠಿ. ಟರ್.	ಹ.	ಹಾಸನ ಕೋಠಿ. ಟರ್.	ಹ.	ಚಿಕ್ಕಮಗಳೂರು ಕೋಠಿ. ಟರ್.	ಹ.	ಶಿವಮೊಗ್ಗಾ ಕೋಠಿ. ಟರ್.	ಹ.	ಸಾಗರ ಕೋಠಿ. ಟರ್.	ಹ.	ತೀರ್ಥಹಳ್ಳಿ ಕೋಠಿ. ಟರ್.	ಹ.
ಸಲಾಕಿ ಅವ್ವಲ್ ..	1	..	..	5	..	15	..	..	..	15	..	...
ಡಿಟೋ ದುಯಂ ..	..	5	1	5	2	5	3	5	1	..	..	2
ಡಿಟೋ ಸಿಯಂ ..	1	10	7	10	5	5	12	15	8	..	4	..
ಡಿಟೋ ಚಹರಂ ..	45	15	30	..	44	..	32	10	12	..	7	..
ಡಿಟೋ ಪಂಚಂ ..	7	..	10	..	10	10	37	.	25	..	14	..
ಚಿಕ್ಕ ಸಲಾಕಿ ..	1	2	1	..	..	..	..	..	..	..	..	..
ದೊಡ್ಡ ಜಡಾ ..	21	..			33	..	66	5	40	..	25	..
ಚಿಕ್ಕ ಜಡಾ ..	3	15	35	..	5	..	8	..	4	..	2	..
ಜ್ವಡಧ ರಂಪ್ಟೆ ..	1	5			7	..	..	..	...	..	...	..
ದೊಡ್ಡ ಜಜ್ಜು ..	18	..			30	..						
ಚಿಕ್ಕ ಜಜ್ಜು ..	3	5	61	5	11	..	94	..	65	..	43	..
ಬಗರದದ್ದು ..	2	15	6	..	5	5	26	.	9	..	13	10
ಐರ್ ವಾಜಿ ಗುಬಗರು ..	1	..	3	..	..	10	..	..	..	..	..	..
ಗರಗಸ ಬುಕಣಿ ..	..	2	..	5	..	10	1	..	..	15	9	..
ದೊಡ್ಡ ಐರ್ ಚಿಲ್ಲು .	1	10	1	..	6	5	15	10	15	..	16	..
ಚಿಕ್ಕ ಡಿಟೋ ..	..	..	2	..								
ಕೆತ್ನೆ ಐರ್ ಚಿಲ್ಲು ..	6	..	..	..	..	..	..	..	..	..	..	...
ಹತ್ರಿ ಚಿಲ್ಲು ..	1	6	..	..	..	..	..	..	..	..	..	..
ಮಿಲ್ವ ಚಿಲ್ಲು ..	17	10	30	..	21	5	30	..	12	..	9	..
ಬಸೋಲ ಬುಕಣಿ ..	1	15	10	..	14	..	14	15	5	10	6	8
ಕೊಯತ ಚಿಲ್ಲು ..	..	..	1	10	3	10	9	..	2	..	1	..
ಜುಮ್ಲಾ ..	135	15	200	..	200	..	350	..	200	..	150	..

ಹೊಸ ಯಾ ಬೊಂಬಾಯಿ ತರಹೆ ಪ್ರಕಾರ.

ಸಂದಲ್ ವಿವರ.	ಹುಣಸೂರು ಕೋಠಿ. ಟರ್.	ಹ.	ಶ್ರೀರಂಗಪಟ್ಣ ಕೋಠಿ. ಟರ್.	ಹ.
ವಿಲಾಯಿತಿ ಬಡ್ ..	1	.	..	10
ಚೈನಾ ಬಡ್ ..	20	..	30	.
ಪಂಚಂ ..	28	..	89	..
ಚಿಕ್ಕ ಸಲಾಕಿ, ಛೋಟ್ಲ (ಅವ್ವಲ್) ..	3	...	5	..
ಡಿಟೋ (ದುಯಂ) ..	2	..	1	..
ಘೌಟಿ ಬಡಲ ..	50	..	30	..
ಜಡಾ (ಅವ್ವಲ್) ..	25	..	25	..
ಡಿಟೋ (ದುಯಂ) ..	25	..	12	..
ಡಿಟೋ (ಸಿಯಂ) .	20	..	8	..
ಡಿಟೋ (ಚಹರಂ) ..	7	.	7	..
ಜಜ್ಜು (ಅವ್ವಲ್) ..	50	...	25	..
ಡಿಟೋ (ದುಯಂ) ..	40	15	15	..
ಬಗರದದ್ದು ..	5	..	12	..
ಐರ್ ಬಗರು ..	5	..	14	..
ಚಿರಿಯಾ ..	5	..	5	..
ಐರ್ ಚಿಲ್ಲು (ಅವ್ವಲ್) ..	4	..	6	..
ಡಿಟೋ (ದುಯಂ) ..	6	..	6	10
ಹತ್ರಿ ಚಿಲ್ಲು ..	1	..	2	10
ಗರಗಸ ಬುಕಣಿ ..	1	..	..	10
ಮಿಲ್ವ ಚಿಲ್ಲು ..	30	..	50	..
ಬಸೋಲಾ ಬುಕಣಿ ..	7	..	10	..
ಚೇಗು ಮಿಲ್ವ ..	..	..	5	..
ಕಳದವರುಷದ ಜಡಾ	113	15	12	15
ಸ್ಪೆಷಲ್ ಕ್ಲಾಸ್ ..	..	10	...	..
ಟೋಟಲ್ ..	450	..	371	15

5. ಮೈಸೂರು ದೇಶದಲ್ಲಿ ಬಹಿರಂಗವಾಗಿ ಹರಾಜು ಮೂಲಕ ಸಂದಲ್ ಬಿಕರಿ ಮಾಡುವ ಬಗ್ಯೆ ಇದರಡಿ ಕಂಡುಬರುವ ತಿದ್ದುಪಾಟಾದ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ಸ್ಕಂ 15230.—ಆರ್. ಎಫ್. 155—92ನೇ ನಂಬರ್ ರೂಲ್ಸ್‌ಯಾನೆ ನಿಬಂಧನೆಗಳು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಯೆ ಪ್ರಾಯಿಷ್ ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಇತರ ಆಫೀಸರಿಂದ ಆಗಲಿ ಶೇರಿ ಫಾರೆಸ್ಟ್ ಆಫೀಸರವರಿಂದ ನಡಿಸಲ್ಪಡತಕ್ಕದ್ದು.

2. ಚಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ ಡಿಟ್ಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪ್ಸೀಲ್ ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜು ಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫೀಸರವರಿಂದ ತೂಕ ಮಾಡಲ್ಪಡುವ ತನಕ ಹೀಗೆ ವಿಕ್ರಯಿಸಲ್ಪಟ್ಟ ಲಾಟು ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತಿ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದಿಸಿ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತಾರೀಖು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫೀಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದೀಯನ್ನ 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫೀಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫೀಸರರು ಆ ರಶೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫೀಸರರಿಗೆ ಯಖ್ತಿಯಾರಿ ಇರತಕ್ಕದ್ದು. ಹಾಂಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿ ಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫೀಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರ್ರೆನ್ಸೀ ನೋಟುಗಳು ಡಿಪಾಜಿಟ್ ತರೀಕ್ ಅಂಗೀಕರಿಸಲ್ಪಡುತ್ತೆ, ಅಲ್ಲದೆ ಸದರೀ ಆಫೀಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತಿ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಶೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲಿ ಅಥವಾ ಇತರರಿಗೆ ಇಲ್ಲದ ರಿಯಾಯತೀ ತೋರಿಸುವದಕ್ಕಾಗಲಿ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫೀಸರರು ಬಂದಂಥಾ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟ್ ಆಫೀಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಯವರಿಗೆ ತಿಳಿಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ಉಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತಿ ಮಾಡಲ್ಪಡತಕ್ಕದ್ದು. ಹಾಂಗೆ ಪಾವತಿ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು. ಮತ್ತು ಅದು ಪಾವತಿ ಮಾಡಲ್ಪಡಬೇಕಾದ ಮೊಬಲಗು ಪೈಕಿ ಒಂದು ಭಾಗವನ್ನಾಗಿ ಎಂದಿಗೂ ಎಣಿಸಲ್ಪಡಕೂಡದು. ಹಣ ಪಾವತಿಯಾಗದೆ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠೀ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೆಜರಿಯಲ್ಲಿ ಹಣ ಪಾವತಿ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರಿಯಲ್ಲಿ ಪಾವತಿ ಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರಿ ಯಿಂದ ಪಡದಂಥಾ ರಶೀದಿಯು ಹಣ ಪಾವತಿ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫೀಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫೀಸರವರು ಆಯಾ ಸಂಬಂಧಪಟ್ಟ ಫಾರೆಸ್ಟ್ ಆಫೀಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫೀಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ್ ಹಾಜರಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫೀಸರಿಂದಾಗಲಿ ಖುದ್ದು ತೂಗಿಸಲ್ಪಡ

ತಕ್ಕದ್ದು. ಪ್ರತಿ ಕೋಠಿಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀ ಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯು ವಜಾ ಮಾಡಲ್ಪಡತಕ್ಕದ್ದು. ಏನಾದರೂ ಕಮ್ಮಿಬಿದ್ದಲ್ಲಿ ತೂಕ ನಡಿಸುವ ಆಫಿಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೆ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ಒಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದಿದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀದಿದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡೆದ ಆತನ ಮುಕ್ತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫಿಸರವರು ಅಥವಾ ತೂಗಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫಿಸರು ತಮಿಗೆ ಅನುಕೂಲವಾದ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದಿದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದಿದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದಿದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದಿದಾರನಿಗೆ ಮರಗಳನ್ನು ಫಾರೆಸ್ಟ್ ಆಫಿಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫಿಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿವಿಗೂ ಯಾವ ಖರೀದಿದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು, ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ಒಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್ ವಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳು ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚಿನ ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್‌ಸ್ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜ್ ಆಫಿಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಖಿಲಾಫ್ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಬಟ್ಟಿ ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಶೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು, ಅಥವಾ ರೇಂಜ್ ಇನ್‌ಛಾರ್ಜ್ ಫಾರೆಸ್ಟ್ ಆಫಿಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಇಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫಿಸರೇ ಆಗಲಿ ಇವರ ಮಂಜೂರಾತಿನಿಕ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜ್ ಫಾರೆಸ್ಟ್ ಆಫಿಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್.

718

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 160.

ಮೃತಪಟ್ಟ ಕಾಮಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಬೆಂಗಳೂರು ಗೊಲ್ಲರಪ್ಯಾಟೆಗೆ ಸೇರಿದ ಅಕ್ಕೀಪ್ಯಾಟೆಲಿರುವ ನರಸಮ್ಮನು, ಮೃತಪಟ್ಟ ಸದರೀ ಕಾಮಣ್ಣನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಗೊಲ್ಲರಪೇಟೆಗೆ ಸೇರಿದ ಅಕ್ಕಿಪೇಟೆ ನರಸಮ್ಮನು, ಡಿಟೋ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಕಾಮಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನರಸಮ್ಮನ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾಮಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಡಿಸೆಂಬರ್ ತಿಂಗಳ 8ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 192.

ಮೃತಪಟ್ಟ ರಂಗಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ದೊಡ್ಡಬಳ್ಳಾಪುರದ ತಾಲ್ಲೂಕು ಹುಲಿಕುಂಟೆ ಸಮ್ಮತು ದೊಡ್ಡಬೆಳವಂಗ್ಲದಲ್ಲಿರುವ ಪಾತಿ ರಂಗಪ್ಪನ ಮಕ್ಕಳು 1ನೇ ಚಿಕ್ಕನರಸಿಂಹಯ್ಯ 2ನೇ ತಿಮ್ಮಪ್ಪಯ್ಯ ಮೈನರ್, ಮೈನರ್ ಗಾರ್ಡಿಯನ್ ಮತ್ತು ವಿಭಕ್ತ ದೊಡ್ಡಪ್ಪ, ಅರ್ಚಿಕ ನರಸಿಂಹಯ್ಯ, ಮೃತಪಟ್ಟ ಸದರೀ ರಂಗಪ್ಪನಿಗೆ ಮಕ್ಕಳು ಆಗವೇಕೆಂಬ ಹಕ್ಕುದಾರಿ ಮೇಲೆ ದೊಡ್ಡಬೆಳವಂಗ್ಲ ಸ್ಥಳದ ಅರ್ಚಿಕ ನರಸಿಂಹಯ್ಯನು ಡಿಟೋ ವಾಸಸ್ಥನಾಗಿ ಮೃತಪಟ್ಟ ರಂಗಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ಅರ್ಚಿಕ ನರಸಿಂಹಯ್ಯನ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಪ್ಪನ ಆಸ್ತಿಗೆಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896ನೇ ಇಸವಿ ಡಿಸೆಂಬರ್ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 195.

ಮೃತಪಟ್ಟ ಮೆ॥ ಎ. ಕೃಷ್ಣಸ್ವಾಮಯ್ಯಂಗಾರ್ರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಬೆಂಗಳೂರು ಹೈಗ್ರೌಂಡ್ ಸತ್ಯಾಲಯದಲ್ಲಿರುವ ಶ್ರೀನಿವಾಸರಾಘವಾಚಾರ್ ಮೈನರ್, ಗಾರ್ಡಿಯನ್ ಕಮಲಮ್ಮಾಳ್, ಮೃತಪಟ್ಟ ಸದರೀ ಮೆಸ್ಟರ್ ಎ. ಕೃಷ್ಣಸ್ವಾಮಯ್ಯಂಗಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಶ್ರೀನಿವಾಸರಾಘವಾಚಾರ್ ಮೈನರ್, ಗಾರ್ಡಿಯನ್ ಕಮಲಮ್ಮಾಳ್ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಮೆಸ್ಟರ್ ಎ. ಕೃಷ್ಣಸ್ವಾಮಯ್ಯಂಗಾರವರ್) ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸರಾಘವಾಚಾರ್ ಮೈನರ್, ಗಾರ್ಡಿಯನ್ ಕಮಲಮ್ಮಾಳ್ ಯವರ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರಿಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಮೆಸ್ಟರ್. ಎ. ಕೃಷ್ಣಸ್ವಾಮಯ್ಯಂಗಾರ್‌ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಡಿಸೆಂಬರ್ ತಿಂಗಳ 7ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರಾಸ್,
ಡಿಸ್ಟ್ರಿಕ್ಟ್ ಜಡ್ಜ್.

ತಾರೀಖು 21ನೇ ನವೆಂಬರ್ 1896.

ಗವರ್ನಮೆಂಟಿನಿಂದ ಸಾದರಾದ 7—8—96ನೇ ಮರ್ಕಂ 1994—6 ಮಿ. 329ನೇ ನಂಬರ್ ಪ್ರೊಸಿಡಿಂಗ್ಸ್ ಪ್ರಕಾರ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನ್ 6ನೇ ಸೆಕ್ಷನ್ ನಿಯಮಗಳನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಇರುವ ಇದಕ್ಕೆ ಲಗತ್ತಾಗಿಸಲ್ಪಟ್ಟ ಸ್ಟೇಟ್‌ಮೆಂಟಿನಲ್ಲಿ ನಮೂದಾದ ಜಮೀನುಗಳು ಸರಕಾರದ ಕೆಲಸಕ್ಕೆ ಅಂದರೆ ಹೆಸರಘಟ್ಟ ವಾಟರ್ ಪ್ರಾಜೆಕ್ಟಿಗಾಗಿ ಬೇಕಾಗಿರುತ್ತೆಂತ ಇದರಿಂದ ಪ್ರಕಟಪಡಿಸಿ ಇದೆ.

ಸೀರಿಯಲ್ ನಂಬರ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ತೆಗದುಕೊಳ್ಳತಕ್ಕ ಜಮೀನಿನ ವಿಸ್ತೀರ್ಣ. ಖುಷ್ಕಿ.		ತರೀ.		ಬಾಗಾಯತು.		ಆಕಾರ.			ಷರಾ.
1	ದೊಡ್ಡಬಳ್ಳಾಪುರ.	ತೂಬಗೆರೆ.	ಗೊಂಡಿಹಳ್ಳಿ.	ಆಂಜನೇಯಸ್ವಾಮಿ	1	1	26	..	..	..	..	2	5	..	
2				ಪಾಪಯ್ಯ ಬಿನ್ ಬೈಯಣ್ಣ	3	..	..	...	...	..	9	1	...	..	
3				ಮೆಳೆದಾಸಿ ಹೆಂಡತಿ ತಿಮ್ಮಿ	4	..	35	..	..	..	..	2	..	..	
4				ಮುನಿರಡ್ಡಿ ಬಿನ್ ಪಾಪೇಗವುಡ	5	..	28	...	..	..	..	1	5	8	
5				ಈರನಾಗರಡ್ಡಿ	7	9	7	..	..	..	..	14	8	10	
6				ಹನುಮಂತೈಯ್ಯ	19 ಪೈಕಿ	..	4	..	...	..	..	..	1	1	
7				ಪಾಪಯ್ಯ ಬಿನ್ ಬೈಯ್ಯಣ್ಣ	ಡಿಟ್ಟೋ	2	21	..	..	..	..	4	3	11	
8				ಮುನೆಪ್ಪ ... .. :	ಡಿಟ್ಟೋ	3	34	..	..	..	..	6	8	..	
9				ಚಿನ್ನಾಗರಡ್ಡಿ	20 ಪೈಕಿ	3	16	..	..	..	..	5	4	..	
10				ಮುನಿರಡ್ಡಿ	ಡಿಟ್ಟೋ	2	8	..	..	..	..	3	4	..	
11				ನರಸಣ್ಣ	ಡಿಟ್ಟೋ	3	25	..	..	..	..	5	8	..	
12				ಮುತ್ತೂರು ನಂಜಮ್ಮ ವಗೈರೇರು	21	6	2	..	..	..	..	9	8	..	
13				ಈರನಾಗರಡ್ಡಿ	22	5	..	..	:	..	..	8	..	..	
14				ಮುನಿರಡ್ಡಿ	23 ಪೈಕಿ	2	..	..	..	..	..	3	8	7	
15				ಪಾಪಯ್ಯ ಬಿನ್ ಬೈಯಣ್ಣ	ಡಿಟ್ಟೋ	2	22	..	..	..	...	4	6	6	
16				ತಿಮ್ಮ ಬಿನ್ ಪಟ್ಲಗನ ತಿಮ್ಮ	ಡಿಟ್ಟೋ	3	5	..	..	..	..	5	8	..	
17				ಮುನಿರಡ್ಡಿ	26	12	10	..	...	..	...	25	..	..	
18				ಹೊನ್ನಪ್ಪ	27	1	15	...	..	..	..	2	4	.	
19				ಕೋನೇರಾಚಾರ್ ಕೃಷ್ಣಾಚಾರ್	28	6	8	..	..	..	..	9	8	..	
20				ತಿಮ್ಮ ಬಿನ್ ಪಟ್ಲಗನ ತಿಮ್ಮ	29	3	25	..	...	..	..	5	8	..	
21				ನಾಗಪ್ಪ	30	7	9	..	..	.	..	11	..	..	
22				ವಡ್ಡರ ಗುರುವ	31 ಪೈಕಿ	10	3	..	..	...	..	12	..	.	
23				ಸಂಜೀವ ಬಿನ್ ಹನುಮಂತ	ಡಿಟ್ಟೋ	5	15	..	.	..	..	6	12	..	
24				ನಾಗಪ್ಪ	ಡಿಟ್ಟೋ	2	28	..	..	..	..	3	4	..	
25				ಹೊನ್ನಪ್ಪ	32 ಪೈಕಿ	2	22	...	..	..	..	4	..	..	

26				ಪಾಪಯ್ಯ ಬಿನ್ ಬಯ್ಯಂಣ	...	..	32 ಪೈಕಿ	3	8	..	..	..	..	5	..	..
27				ಸಂಜೀವ ಬಿನ್ ಹನುಮಂತ	..	..	33 ಪೈಕಿ	5	12	..	..	..	..	8	..	..
28				ತಿಮ್ಮಿ ಮತ್ತು ಮುನಿತಿಮ್ಮಿ	..	..	33 ಪೈಕಿ	1	31	..	..	..	..	2	12	..
29				ಚಿನ್ನಾಗರಡ್ಡಿ	..	..	33 ಪೈಕಿ	4	2	..	..	..	..	6	4	..
30				ನರಸಿಹ್ಮಾಚಾರ್	..	..	36	4	20	..	..	..	..	5	..	..
31				ಈರನಾಗರಡ್ಡಿ	..	..	37 ಪೈಕಿ	6	23	..	..	..	..	11	8	..
32				ಪಾಪಯ್ಯ ಬಿನ್ ಬೈಯಂಣ	..	..	37 ಪೈಕಿ	3	33	..	..	..	..	6	8	..
33				ನರಸಿಹ್ಮಾಚಾರ್	..	..	38	..	..	..	..	3	2	30	..	..
34				ಮುನಿರಡ್ಡಿ	..	..	39	5	3	..	..	..	..	8	..	..
35				ಆಂಜನೇಯಸ್ವಾಮಿ	..	..	40	3	9	..	..	..	..	4	..	..
36				ಮುನಿರಡ್ಡಿ	..	..	41	4	35	..	..	..	..	6	8	..
37				ಶ್ಯಾಂಪುರದ ಕ್ರಿಷ್ಣಾಚಾರ್ ವಗೈರೆ ನಾಲ್ಕು ಜನ		..	42	5	13	..	..	..	..	7	..	..
38				ಸುಳೆರಾಶಿ ಹೆಂಡತಿ ತಿಮ್ಮಿ	..	..	44	1	29	..	..	..	..	2	4	..
39				ಮುನಿರಡ್ಡಿ	..	..	45	12	12	..	..	..	..	18	..	..
40				ಮಳೆದಾಶಿ ಬಿನ್ ತಳವಾರ	..	..	46	6	2	..	..	..	..	10	..	..
41				ಮುನಿರಡ್ಡಿ	..	..	47 ಪೈಕಿ	2	32	..	..	..	..	4	4	..
42				ಸಂಜೀವಾ	..	..	47 ಪೈಕಿ	..	2	..	..	..	..	..	4	..
43	ಬೆಂಗಳೂರು.	ಕಸಬಾ.	ಗೊಂದಿಹಳ್ಳಿ.	ಶಾಮಂಣ ತಾತ ಲಕ್ಷ್ಮಣಭಟ್ಟ	..	..	48	5	28	..	..	..	..	9	8	..
44				ತಿಮ್ಮ ಬಿನ್ ಪಟ್ಲಗನ ತಿಮ್ಮ	..	..	49	8	38	..	..	..	..	15	..	..
45				ಪಾಪಯ್ಯ ಬಿನ್ ಬಯ್ಯಂಣ	..	..	50	.	37	..	..	..	...	1	8	..
46				ತಿಮ್ಮರಡ್ಡಿ ಬಿನ್ ತಿಮ್ಮಪ್ಪ	..	..	51 ಪೈಕಿ	6	..	..	..	..	..	9	8	4
47				ಸಂಜೀವಾ	..	..	51 ಪೈಕಿ	2	24	..	..	..	..	4	3	5
48				ಮುನಿರಡ್ಡಿ	..	..	56	2	26	..	..	..	..	7	9	3
49				ಡಿಟ್ಟೋ	..	..	61	6	3	..	..	..	..	8	..	..
				ಜುಮ್ಲಾ		..		201	30	..	..	3	11	346	14	..
1				ನರಸಂಣ	..	..	2	2	39	..	..	..	..	5	.	..
2				ಸದಾಶಿವಭಟ್ಟ, ಸುಬ್ರಾಯಸೋಮಯಾಜಿ, ವಾಸುದೇವಶಾಸ್ತ್ರಿ			4	3	11	..	..	..	..	4	8	..
3				ಸಂಜೀವನಹೆಂಡತಿ ನಾಗಿ	..	..	5 ಪೈಕಿ	2	6	..	..	..	..	2	12	..
4			ಹಾರೋಹಳ್ಳಿ.	ಹನುಮಂತ ಬಿನ್ ತಿಗಳರ ವೆಂಕಟ	..	..	5 ಪೈಕಿ	1	14	..	..	..	..	1	12	..
5				ಹನುಮಂತ ಬಿನ್ ಪಿಳ್ಳಕದರ	..	..	6 ಪೈಕಿ	3	32	..	..	..	..	5	..	..
6				ಸೊಣ್ಣಪ್ಪ ಬಿನ್ ಚಿಕ್ಕವೀರ	..	..	6 ಪೈಕಿ	5	17	..	..	..	..	7	..	..
7				ನರಸಂಣ	..	..	7	14	27	..	..	..	..	18	..	..
8				ಡಿಟ್ಟೋ	..	..	8	6	17	..	..	..	..	9	..	...

ಸೀರಿಯಲ್ ನಂಬರ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರ್.	ತೆಗದುಕೊಳ್ಳತಕ್ಕ ಜಮೀನಿನ ವಿಸ್ತೀರ್ಣ. ಖುಷ್ಕಿ.		ತರೀ.		ಬಾಗಾಯತು.		ಅಕಾರ.			ಷರಾ.
9	ದೊಡ್ಡಬಳ್ಳಾಪುರ.	ಕಾಕೋಳು.	ಮಾರೋಹಳ್ಳಿ.	ಸಿದ್ದನಂಜಯ್ಯ	12	1	34	..	..	..	..	3	8	..	
10				ಸೊಣ್ಣಪ್ಪ	16 ಪೈಕಿ	2	35	..	..	..	..	4	..	...	
11				ವ್ಯಾಸಂಣ	16 ಪೈಕಿ	3	24	..	30	..	..	8	..	..	
12				ನರಸಂಣ	19	9	23	..	..	..	..	14	..	..	
13				ವಾಸುದೇವಾಚಾರ್ ಮತ್ತು ಕೃಷ್ಣಾಚಾರ್	20	3	26	..	..	..	..	5	8	...	
14				ನರಸಂಣ	21	9	15	..	..	..	..	14	...	...	
15				ಕಾಳಯ್ಯನ ಹನುಮಂತ	22	7	13	..	..	..	..	11	..	..	
16				ಆಂಜನೇಯಸ್ವಾಮಿ	35	2	24	..	..	..	..	4	..	..	
17				ತಳವಾರಹನುಮಂತ	36	2	9	..	..	..	..	3	8	..	
18				ಸೀನಪ್ಪ ಬಿನ್ ಮಲ್ಲಂಣ	37	7	39	..	..	..	..	11	..	..	
19				ಸಿದ್ದನಂಜಯ್ಯ	38	8	28	..	..	..	..	13	..	...	
20				ಕುದುರೆಮುನಿಯ	39 ಪೈಕಿ	2	32	..	..	..	..	4	1	6	
21				ಕಾಳ ಬಿನ್ ಈರ	40 ಪೈಕಿ	2	19	..	..	..	..	4	1	2	
22				ಕಕ್ಕೆಹಳ್ಳಿ ನರಸಿಹ್ಮ	41	2	3	..	..	..	..	3	..	..	
23				ನರಸಂಣ	43 ಪೈಕಿ	4	34	..	..	..	..	8	6	..	
24				ಕಾಳಾ ಬಿನ್ ಈರ	43 ಪೈಕಿ	2	19	..	.	..	..	4	5	8	
25				ಡಿಟೋ	44	2	31	..	..	..	..	3	8	...	
26				ದೊಂಬಿದಾಸರ ವೆಂಕಟ	48	1	35	..	..	..	..	3	8	8	
27				ಸುಬ್ಬ	51	6	8	..	..	..	..	10	..	..	
28				ಮಲ್ಲರೆಡ್ಡಿ	52	..	35	..	..	..	6	1	11	10	
29				ನರಸಂಣ	80	5	21	..	..	..	..	8	8	..	
30				ಡಿಟೋ	10	21	24	..	..	..	...	26	..	..	
31				ಕಾಳಯ್ಯನ ಹನುಮಂತ	24	6	5	..	..	..	..	8	8	..	
32				ಕಾಳಾ ಬಿನ್ ಈರ	25	15	11	..	..	..	..	21	..	..	
33				ಸೀತಾರಾಮಯ್ಯ	26	6	15	..	..	..	..	9	..	..	
34				ತೋಟದ್ಯಾವಂಣ	27 ಪೈಕಿ	5	4	..	..	..	..	6	12	..	
35				ದೊಂಬಿದಾಸರನಂಜ	32	11	21	..	..	..	..	16	..	..	
36				ರಂಗಂಣ	27 ಪೈಕಿ	14	32	..	..	..	..	19	4	..	
37				ನರಸಿಹ್ಮಾಚಾರ್ ಬಿನ್ ಅಹೋಬಳಾಚಾರ್	28	7	37	..	..	..	..	12	.	:	

38			ಜಾರೆಹಳ್ಳಿ...	ನಾಗಪ್ಪ ಬಿನ್ ಬುಸ್ಸಿಗ	..	..	29	7	3	..	..	..	..	12	..	...
39				ಹನುಮಂತ ಬಿನ್ ನಡುಪಿಗ	..	..	31 ಪೈಕಿ	9	2	..	..	..	..	11	12	...
40				ನಾಗಪ್ಪ ಬಿನ್ ಬುಸ್ಸಿಗ	..	..	ಡಿಟ್ಟೋ	6	18	..	..	..	..	8	4	...
41				ಮರಿರಾಜಪ್ಪ	..	..	33 ಪೈಕಿ	8	16	..	..	..	...	10	..	..
42				ಮುದ್ದ ಬಿನ್ ಸಿದ್ದ	..	..	ಡಿಟ್ಟೋ	3	18	..	..	..	..	4	..	..
43				ವ್ಯಾಸಂಣ	..	..	81	11	11	..	..	..	..	16	..	..
44				ನರಸಿಂಹಾಚಾರ್ ಬಿನ್ ಅಹೋಬಲಾಚಾರ್	..	..	82	8	..	...	..	..	...	12	..	..
45				ಮೆತ್ತೂರು ಮುನಿಯ	..	..	83	7	36	...	..	..	..	12	...	..
46				ನರಸಿಂಹಾಚಾರ್	..	..	84	6	13	..	..	..	..	11	..	..
47				ನರಸಂಣ	..	..	85	21	..	..	..	..	..	29	..	...
48				ಗಿಡ್ಡತಿಮ್ಮ	..	..	86 ಪೈಕಿ	6	10	...	..	..	...	8	12	...
49				ರಡ್ಡಿಗರ ಬೈಲಗ	..	..	ಡಿಟ್ಟೋ	4	38	..	..	..	..	6	12	...
50				ಕೃಷ್ಣೇಗವುಡ	..	..	ಡಿಟ್ಟೋ	5	17	..	..	..	..	7	8	..
51				ಸಿದ್ದನಂಜಯ್ಯ	..	..	87 ಪೈಕಿ	10	28	..	..	..	..	14	..	..
52				ಸಿರಿಹನುಮ	..	...	88	10	21	..	..	..	...	14	.	...
					ಜುಮ್ಲಾ	..	...	347	10	..	30	..	6	491	..	10
1	ದೊಡ್ಡಬಳ್ಳಾಪುರ.	ತಾಕಲೋಟೆ.	ಚಿಕ್ಕದೇವನಪುರ.	ಹುಚ್ಚ ಬಿನ್ ಮಲಿಯ	..	..	60 ಪೈಕಿ	3	38	..	...	..	..	5	14	10
2				ಕೆಂಪಾ ಬಿನ್ ಸಿಂಗ	..	..	36 ಪೈಕಿ	4	31	..	..	..	..	7	12	..
3				ಡಿಟ್ಟೋ	..	..	37 ಪೈಕಿ	..	34	..	..	..	..	1		
4				ಸೀನಪ್ಪ	..	..	30 ಪೈಕಿ	3	16	..	..	..	..	7	..	
5				ಮುನಿ ಮತ್ತು ಹನುಮಂತ	..	..	ಡಿಟ್ಟೋ	2	..	...	..	..	..	4	..	2
6				ಸುಬ್ಬಂಣ ಬಿನ್ ರಾಮಂಣ	..	..	34	..	28	..	..	..	..	1	4	..
7				ವೆಂಕಟ	..	..	35 ಪೈಕಿ	1	25	..	..	..	..	2	...	
8				ಅಂದಾನಪ್ಪ	..	..	ಡಿಟ್ಟೋ	4	1	..	..	..	..	6	9	8
9				ಸೀನಪ್ಪ	..	..	ಡಿಟ್ಟೋ	3	..	..	..	..	..	5	12	...
10				ಸೊಂಣ ಬಿನ್ ಚಿಕ್ಕವೀರ	..	..	36 ಪೈಕಿ	2	29	..	..	..	..	4	..	1
11				ಡಿಟ್ಟೋ	..	..	37 ಪೈಕಿ	1	23	..	..	..	..	2	4	...
12				ಮುನಿಯ ಬಿನ್ ಮರಿಯ	..	..	ಡಿಟ್ಟೋ	1	24	..	..	..	..	2	4	..
13				ಅಂದಾನಪ್ಪ	..	..	ಡಿಟ್ಟೋ	1	23	..	..	..	..	2	8	...
14				ನಂಜನ ಹೆಂಡತಿ ಸೊಂಣಿ	..	..	ಡಿಟ್ಟೋ	2	12	..	..	..	..	3	4	..
15				ಸೀನಪ್ಪ	..	..	ಡಿಟ್ಟೋ	..	16	..	..	..	..	.	8	..
16				ತಳವಾರ ತಿಮ್ಮ	..	..	38	3	18	..	..	..	..	5	8	..
17				ದಾಸೇನಹಳ್ಳಿ ಚೆನ್ನಪ್ಪ	..	..	52	13	37	..	..	..	..	16	.	..
18				ಭೀಮಂಣ	..	..	53 ಪೈಕಿ	4	2	..	..	..	..	4	12	..

ಸೀರಿಯಲ್ ನಂಬರ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ತೆಗದುಕೊಳ್ಳತಕ್ಕ ಜಮೀನಿನ ವಿಸ್ತೀರ್ಣ. ಖುಷ್ಕಿ.		ತರೀ.		ಬಾಗಾಯತು.		ಆಕಾರ.			ಷರಾ.
19	ದೊಡ್ಡಬಳ್ಳಾಪುರ.	ಕಸಬಾ.	ಚಿಕ್ಕ ಬಸವನಪುರ.	ಸೀನಪ್ಪ	53 ಪೈಕಿ	5	17	..	..	..	..	6	8	..	
20				ಕೆಂಪಣ್ಣ	54 ಪೈಕಿ	5	20	..	..	..	..	7	4		
21				ಮತ್ತಿಗೆರೆ ಕೆಂಪ	55	9	19	..	..	..	..	13	..		
22				ಸುಬ್ಬಣ್ಣ ಬಿ॥ ರಾಮಣ್ಣ	56	5	10	..	..	..	..	8	..	..	
23				ಚಿಕ್ಕ ಬಿ॥ ಕರಿಯ	57	10	23	..	..	..	..	18	..	..	
24				ಮುನಿಯ ಬಿ॥ ಚಿಕ್ಕ ಬೈರ	58 ಪೈಕಿ	5	24	..	..	..	..	9	4	...	
25				ಅನ್ನಪೂರ್ಣಮ್ಮ	ಡಿಟ್ಟೋ	2	28	..	..	..	..	4	4	..	
26				ಮುನಿ ಮತ್ತು ಹನುಮಂತ	ಡಿಟ್ಟೋ	2	32	..	..	..	..	4	12	..	
27				ಮುನಿಯ ಬಿ॥ ಹನುಮಂತ	ಡಿಟ್ಟೋ	2	10	..	..	..	..	3	12	...	
28				ಜೆಟ್ಟದ ನಾರಣಾಚಾರ್	59 ಪೈಕಿ	2	..	..	..	..	...	3	4	..	
29				ಹನಿಯೂರು ಸುಬ್ಬಯ್ಯ ಮತ್ತು ಇತರರು	ಡಿಟ್ಟೋ	2	38	..	..	..	..	4	12	..	
30				ಹೊಳವನೂರು ಅಪ್ಪಣ್ಣಾಚಾರ್	ಡಿಟ್ಟೋ	2	16	..	..	..	..	4	..	..	
31				ಮುನಿ ಮತ್ತು ಹನುಮಂತ	60 ಪೈಕಿ	..	3	..	..	..	..	..	1	10	
32				ತಳವಾರ ತಿಮ್ಮ	61 ಪೈಕಿ	3	11	...	...	..	..	4	13	..	
33				ಗೋಪಾಲಸ್ವಾಮಿ	62	3	24	..	..	..	..	5	8	..	
34				ಬೀರಾ ಬಿ॥ ಮಲಿಯ	63 ಪೈಕಿ	1	1	..	..	..	..	1	10	8	
35				ಚಿಕ್ಕ ಬಿ॥ ಕರಿಯ	ಡಿಟ್ಟೋ	2	2	..	..	..	..	3	5	6	
36				ಕೆಂಪ ಬಿ॥ ಸಿಂಗ	ಡಿಟ್ಟೋ	..	6	..	..	...	..	..	3	10	
37				ಹನುಮಂತ ಬಿ॥ ವೀರಣ್ಣ	69 ಪೈಕಿ	3	34	..	..	..	..	6	4	7	
38				ಲಕ್ಕ ಬಿ॥ ಮುರಾರಿ	70 ಪೈಕಿ	..	35	..	..	..	..	1	4	..	
39				ಸುಬ್ಬಣ್ಣ ಬಿ॥ ರಾಮಣ್ಣ	ಡಿಟ್ಟೋ	1	24	..	..	..	..	2	12	..	
40				ತಳವಾರ ತಿಮ್ಮ	71	3	16	..	..	..	..	5	8	...	
41				ಭಾಗೀರತಮ್ಮ	72	9	31	..	..	..	..	15	..	..	
42				ಕೆಂಪಣ್ಣ ಬಿ॥ ಸಿಂಗಪ್ಪ	73	4	6	..	..	..	..	6	..	..	
43				ಸುಬ್ಬಣ್ಣ ಬಿ॥ ರಾಮಣ್ಣ	78 ಪೈಕಿ	..	25	..	..	..	..	..	11	7	
44				ಯಲ್ಲಿಗನ ಹೆಂಡತಿ ದಾಸಿ	79 ಪೈಕಿ	5	12	..	..	..	..	8	2	3	
45				ಸಿದ್ದಾ ಬಿ॥ ತಿಮ್ಮ	ಡಿಟ್ಟೋ	1	32	..	..	..	..	2	12	..	
46				ನಿಡುವಂದದ ಸಿದ್ದ	81	1	29	..	..	..	..	2	8	..	
47				ಗುರುವ	82	5	4	..	..	..	..	7	14	6	

48				ಸಿದ್ದಾ ಬಿನ್ ತಿಮ್ಮ	83 ಪೈಕಿ	3	15	..	..	..	..	5	4	.
49				ಸುಬ್ಬಣ್ಣ ಬಿನ್ ಬಚ್ಚಣ್ಣ	74	18	1	..	..	..	..	28	...	...
50				ಸುಬ್ಬಣ್ಣ ಬಿನ್ ರಾಮಣ್ಣ	76	9	7	..	..	..	..	12	...	..
51				ಕುಳ್ಳ ಬಿನ್ ದಾಸಿ	83 ಪೈಕಿ	3	38	..	..	..	..	6	1	3
52				ಆಂಜನೇಯಸ್ವಾಮಿ	84 ಪೈಕಿ	1	22	..	..	...	..	2	10	10
53				ಕುಳ್ಳ ಬಿನ್ ದಾಸಿ	85 ಪೈಕಿ	3	36	..	..	..	..	5	12	..
54				ಸೀನಪ್ಪ	85 ಪೈಕಿ	2	12	..	..	..	..	3	6	9
55				ಸುಬ್ಬಣ್ಣ ಬಿನ್ ಬಚ್ಚಣ್ಣ	101 ಪೈಕಿ	8	26	..	..	..	..	11	11	10
56				ಚಿಕ್ಕಾ ಬಿನ್ ಕರಿಯ	39 ಪೈಕಿ	1	6	..	..	..	..	2	...	..
57				ರಾಚಯ್ಯ ಬಿನ್ ದೊಡ್ಡೀರ	39 ಪೈಕಿ	3	6	..	..	..	..	5	4	..
58				ಮುನಿಯ ಬಿನ್ ಪಾಪ	39 ಪೈಕಿ	3	6	..	..	..	..	5	4	..
59				ಕೃಷ್ಣರಾವ್ ಬಿನ್ ಮದ್ಧೂರಾವ್	39 ಪೈಕಿ	2	6	..	..	..	..	3	8	..
60				ತಿಳುಭೈರಾ	40	14	..	..	..	..	..	19	...	..
61				ಮುನಿಯ ಬಿನ್ ಮರಿಯ	41	3	33	..	..	..	..	5	..	..
62				ತಿಮ್ಮ	43	2	14	..	..	..	..	4	..	...
63				ರಾಜಘಟ್ಟದ ಹನುಮಂತ	44	4	14	..	..	..	..	7	8	...
64	ದೊಡ್ಡಬಳ್ಳಾಪುರ.	ಕಾಕೋಳು.	ಚಿಕ್ಕಜಾಲ.	ಚನ್ನಪ್ಪನ ಮುನಿಯ	45 ಪೈಕಿ	4	17	..	..	..	..	8	..	..
65				ಸಿದ್ದಾಜೋಯಿ	46	35	23	..	..	..	..	42	..	..
66				ತಳವಾರ ಮುನಿವೆಂಕಟ	47 ಪೈಕಿ	8	22	..	..	..	..	13	..	..
67				ಆಂಜನೇಯಸ್ವಾಮಿ ಮತ್ತು ಗೋಪಾಲಸ್ವಾಮಿದೇವರ ಅರ್ಚಕ ವೆಂಕಟಾಚಲಯ್ಯ	47 ಪೈಕಿ	4	...	..	..	..	..	6	..	..
68				ಹುಚ್ಚೇಗವುಡ	47 ಪೈಕಿ	5	18	..	..	..	..	8	4	...
69				ಬೀರಾ ಬಿನ್ ಮಲಿಯಾ	49	27	9	..	..	..	..	26	.	..
70				ಸೀನಪ್ಪ	51 ಪೈಕಿ	25	33	..	..	..	..	32	..	..
71				ಚಿಕ್ಕ ಹನುಮಂತ	51 ಪೈಕಿ	2	3	..	..	..	..	2	8	...
72				ಭಂಡೀಮುನಿಯ	51 ಪೈಕಿ	2	31	..	..	..	..	3	8	..
73				ಮುನಿಯ ಬಿನ್ ಹನುಮಂತ	87 ಪೈಕಿ	1	17	..	..	..	..	2	4	..
74				ನಿಷುವಂದದಸಿದ್ದಾ	87 ಪೈಕಿ	1	38	..	..	..	..	3	4	..
75				ಬೆಂಗಳೂರು ದಾಸಾ	87 ಪೈಕಿ	5	28	..	..	..	..	9	..	...
76				ತಿರುಮಳಾ, ಕೊಂಡ	87 ಪೈಕಿ	1	22	..	..	..	..	2	8	...
77				ಕೋಡಿಹಳ್ಳಿ ಚನ್ನವೀರಪ್ಪ	96	33	23	..	..	..	..	48	.	...
78				ಸೀನಪ್ಪ	98 ಪೈಕಿ	7	35	..	...	..	.	12	..	...
79				ನಿಬ್ಬೂರುಕೆಂಪ	98 ಪೈಕಿ	5	32	..	..	..	..	8	12	...
80				ತುಮಕೂರು ಸುಬ್ಬ	98 ಪೈಕಿ	6	..	..	..	..	..	9	..	...
81				ಹನುಮಂತರಾಯ ಬಿನ್ ನಂಜಾ	98 ಪೈಕಿ	8	27	..	..	..	..	13	4	..
				ಜುಮ್ಲಾ..		434	29	..	..	..	..	619	3	6

ವಿ. ಎನ್. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

725

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮಾ.

ತಾರೀಖು 5ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟು ಮದ್ದಗಿರಿ ತಾಲ್ಲೂಕಿನಲ್ಲಿ 1896—97ನೇ ಸಾಲಿಗೆ ಕುರಂಗದ ಕಲ್ಲನ್ನು ಜಮಾಯಿಸತಕ್ಕ ಹಕ್ಕನ್ನು ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆಂದು 1896ನೇ ಇಸವಿ ಡಿಸೆಂಬರ್ 3ನೇ ಮುಕ್ಕಾಮಿನ ಮೈಸೂರ ಗೆಜೆಟ್ಟಿನ ಎರಡನೇ ಭಾಗದ 791ನೇ ನಂಬರ್ ಪುಟದಲ್ಲಿ ಕನ್ನಡದಲ್ಲಿ ಪ್ರಾಯಿಷ್ ಮಾಡಲ್ಪಟ್ಟಿರುವ ಇಸ್ತಿಹಾರನ್ನು ರದ್ದುಮಾಡಿ ಇರುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಮೈಸೂರ್ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 3ನೇ ಡಿಸೆಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಲ್ಪಟ್ಟ ಬೆಂಕಿಯಿಂದ ತಡೆದ ಗವರ್ನಮೆಂಟ್ ಫಾರೆಸ್ಟು ವ ಪ್ಲಾಂಟೇಷನ್‌ಗಳು ಷಿಕಾರಿ ಮತ್ತು ಇತರ ಬ್ಯಾಟೆಗಳಿಗೆ 1897ನೇ ಇಸವಿ ಮೇ ಆಖೈರ್ ವರಿಗೆ ಬಂದ್ ಮಾಡಲ್ಪಟ್ಟಿರುತ್ತದೆ. ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರೀ ಫಾರೆಸ್ಟು ವ ಪ್ಲಾಂಟೇಷನ್‌ಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಲಿಖಿತಮೂಲಕವಾದ ಹುಕುಂ ಪಡೆಯದೆ ಪ್ರವೇಶ ಮಾಡಕೂಡದು.

ತಾಲ್ಲೂಕು.	ಫಾರೆಸ್ಟು ವ ಪ್ಲಾಂಟೇಷನ್‌ಗಳ ಹೆಸರು.
ಹುಣಸೂರು ತಾಲ್ಲೂಕು	ವೀರನಹೊಸಹಳ್ಳಿ ಫಾರೆಸ್ಟು
	ನಾಯಿಹಳ್ಳ ಸಂದಲ್ ಪ್ಲಾಂಟೇಷನ್
	ಗುರುಪುರ ಡಿಟ್ಟೋ
	ಪಂಚವಳ್ಳಿ ಡಿಟ್ಟೋ
	ದೊಡ್ಡಹರವೆ ಪ್ರೊಡಕ್ಷನ್ ಬ್ಲಾಕ್
	ಆನೇಚೌಕೂರು ಡಿಟ್ಟೋ
	ವೀರನಹೊಸಹಳ್ಳಿ ಡಿಟ್ಟೋ
ಹೆಗ್ಗಡದೇವನಕೋಟೆ ತಾಲ್ಲೂಕು	ಮೇಟಿಕುಪ್ಪೆ ಫಾರೆಸ್ಟು
	ಕಾಕನಕೋಟೆ ಡಿಟ್ಟೋ
	ಬೇಗೂರು ಡಿಟ್ಟೋ
	ಐನೂರು ಮಾರೀಗುಡಿ ಡಿಟ್ಟೋ
	ಕಾಕನಕೋಟೆ ಪ್ಲಾಂಟೇಷನ್
	ಮಾಸ್ತಿಗುಡಿ ಡಿಟ್ಟೋ
	ಮಂಚಗವುಡನಹಳ್ಳಿ ಡಿಟ್ಟೋ
	ಹಂಪಾಪುರ ಡಿಟ್ಟೋ
ಗುಂಡ್ಲು ತಾಲ್ಲೂಕು	ಬೇರಂಬಾಡಿ ಫಾರೆಸ್ಟು
	ಭಂಡಿಪುರ ಡಿಟ್ಟೋ
	ಮದ್ದೂರು ಅಳಲೇ ಪ್ಲಾಂಟೇಷನ್
	ಹೊಂಗಹಳ್ಳಿ ಸಂದಲ್ ಪ್ಲಾಂಟೇಷನ್
ಚಾಮರಾಜನಗರದ ತಾಲ್ಲೂಕು	ಚಾಮರಾಜನಗರದ ಫಾರೆಸ್ಟು

ತಾರೀಖು 30—11—96.

ಮೈಸೂರು ಡಿಸ್ಟ್ರಿಕ್ಟು ಗುಂಡ್ಲುರೇಂಜ್ ಸ್ಟೇಟ್ ಫಾರೆಸ್ಟುಗಳಲ್ಲಿ ಜಮಾಯಿಸಲ್ಪಟ್ಟಿರುವ ಸುಮಾರು 1,000 ಗಾಡಿ ಬೋಜಾ ದನುವಿನ ಗೊಬ್ಬರವನ್ನ ಈ ಕೆಳಗೆ ನಮೂದಿಸುವ ಸ್ಥಳಗಳು ಮತ್ತು ತಾರೀಖುಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಹರಾಜು ಮೂಲಕ ವಿಕ್ರಯಿಸುತ್ತಾರೆ.

ಫಾರೆಸ್ಟ್ ಹೆಸರು.	ಮೊತ್ತಾ ಸುಮಾರು.	ಹರಾಜು ನಡಿಯುವ ಸ್ಥಳ.	ತಾರೀಖು.
ಭಂಡಿಪುರ	250 ಗಾಡಿ ಬೋಜಾ	ಗುಂಡ್ಲುಪೇಟೆ	11—1—97
ಬೇರಂಬಾಡಿ	85 ಡಿಟ್ಟೋ	ಡಿಟ್ಟೋ	13—1—97
ಚಾಮರಾಜನಗರ	330 ಡಿಟ್ಟೋ	ಚಾಮರಾಜನಗರ	17—1—97

ಷರತ್ತು.—1895ನೇ ಇಸವಿ ಮಾರ್ಚಿ ಮಾಹೆ 15ನೇ ಮುರ್ಕ್ಯುಮಿನ 15229.—ಆರ್. ಎಫ್. 155.—92ನೇ ನಂಬರ ಗವರ್ನಮೆಂಟ್ ನೋಟಿಫಿಕೇಷನ್ ಹರಾಜು ಕಾಲದಲ್ಲಿ ಓದಲ್ಪಡುತ್ತೆ.

ಟಿ. ಅಬ್ದುಲ್‌ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ.

ಶಿವಮೊಗ್ಗಾ ಡಿಸ್ಟ್ರಿಕ್ಟ್.
ಫಾರೆಸ್ಟ್ ಇಲಾಖಾ.
ನೋಟಿಫಿಕೇಷನ್.

ತಾರೀಖು 24ನೇ ನವಂಬರ 1896.

ಸನ್ 1890ನೇ ಇಸವಿ ಫಿಬ್ರುವರಿ ತಾರೀಖು 15ನೇ ಮೈಸೂರ್ ಗೆಜೆಟ್ 2ನೇ ಭಾಗದ ಪುಟದಲ್ಲಿ ಪ್ರಾಯಿಷ್ ಮಾಡಿರುವ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ನೋಟಿಫಿಕೇಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಬೆಂಕಿಯಿಂದ ರಕ್ಷಿಸಲ್ಪಟ್ಟ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳನ್ನ 1897ನೇ ಇಸವಿ ಜನವರಿ 1ನೇ ತಾರೀಖು ಲಾಗಾಯತು ಮೇ ಆಖೈರ್ ವರಿಗೂ ಬಂದ್ ಮಾಡಲ್ಪಟ್ಟಿರುತ್ತೆ. ಅಂಬುಗಾರರಿಗೂ, ಷಿಕಾರಿಗಳಿಗೂ, ಬೇಟೆಗಾರರಿಗೂ ಸಹ ಲೈಸೆನ್ಸ್ ಕೊಡಲ್ಪಡುವದಿಲ್ಲ. ರೂಲ್ಸ್ ಅತಿಕ್ರಮಿಸಿ ಪ್ರವೇಶಿಸುವವರನ್ನ ಕ್ರಮವಾಗಿ ಶಿಕ್ಷಿಸಲ್ಪಡುತ್ತೆ.

ನಂಬರ.	ಫಾರೆಸ್ಟುಗಳ ಹೆಸರು.	ತಾಲ್ಲೂಕುಗಳ ಹೆಸರು.
1	ಶಂಕರಗುಡ್ಡಾ, ಭೂತನಸ್ಥೈಲ್ ಫಾರೆಸ್ಟ್	ಶಿವಮೊಗ್ಗಾ, ತೀರ್ಥಹಳ್ಳಿ
2	ಪುರದಾಳ	ಶಿವಮೊಗ್ಗಾ
3	ಕುಂಚೇನಹಳ್ಳಿ	ಡಿಟ್ಟೋ
4	ಅನುಪಿನಕಟ್ಟೆ ಪ್ಲಾಂಟೇಷನ್	ಡಿಟ್ಟೋ
5	ಸಕ್ರೆಬೈಲ್ ಫಾರೆಸ್ಟ್	ಡಿಟ್ಟೋ ತೀರ್ಥಹಳ್ಳಿ
6	ಡಿಟ್ಟೋ ಪ್ಲಾಂಟೇಷನ್	ಶಿವಮೊಗ್ಗಾ
7	ಜೋರನೆಹಳ್ಳಿ	ಡಿಟ್ಟೋ
8	ಆಯನೂರು ಪ್ಲಾಂಟೇಷನ್	ಡಿಟ್ಟೋ
9	ಆಲಕೊಳ ಡಿಟ್ಟೋ	ಡಿಟ್ಟೋ
10	ಕರ್ಲಕೊಪ್ಪ ಸಂದಲ್ ಪ್ಲಾಂಟೇಷನ್	ಡಿಟ್ಟೋ
11	ಉಂಬಳೆ ಬೈಲ್ ಹುಣಸೆಕಟ್ಟೆ	ಡಿಟ್ಟೋ
12	ಆಲದಹಾರ	ಡಿಟ್ಟೋ
13	ಕುಂಶಿ	ಡಿಟ್ಟೋ
14	ಮಸರೂರು	ಡಿಟ್ಟೋ
15	ಕುಕ್ಕವಾಡಾ ಉಬ್ರಾಣಿ	ನಗರ
16	ಚನ್ನಗಿರಿ ಪ್ಲಾಂಟೇಷನ್	ಶಿವಮೊಗ್ಗಾ, ಚನ್ನಗಿರಿ, ತರೀಕೆರೆ
17	ತೆಲಗಡ್ಡೆ, ಅರತೆಲಗಡ್ಡೆ	ಚನ್ನಗಿರಿ
18	ಬೆಟ್ಟದಕರ್ಲಿ	ಸೊರಬ
19	ಸಿದ್ದೇಹಳ್ಳಿ ಪ್ಲಾಂಟೇಷನ್	ಡಿಟ್ಟೋ
20	ಹಳೆಸೊರಬ ಡಿಟ್ಟೋ	ಡಿಟ್ಟೋ
21	ಚಂದ್ರಗುತ್ತಿ	ಡಿಟ್ಟೋ
22	ಕವಡಿ	ಡಿಟ್ಟೋ
23	ಕವಲಿ	ಡಿಟ್ಟೋ
24	ತೊಗರಶಿ	ಶಿಕಾರಿಪುರ
25	ಬಸವನಂದಿಹಳ್ಳಿ	ಡಿಟ್ಟೋ
26	ಕಾಳೇನಹಳ್ಳಿ ಪ್ಲಾಂಟೇಷನ್	ಡಿಟ್ಟೋ
27	ಗಂಗವನಸರ ಸ್ಟೇಟ್ ಫಾರೆಸ್ಟ್ ಮತ್ತು ಹಾರೋಗೊಪ್ಪ ಯೆರೆ ಕಟ್ಟೆ ಕಾಪಿನ ಜಾಗಾ	ಡಿಟ್ಟೋ ಹೊನ್ನಾಳಿ
28	ಕರಡಿಪಟ್ಟ	ಡಿಟ್ಟೋ ಶಿವಮೊಗ್ಗಾ
29	ಚಂದ್ರಕಲ	ಸಿಕಾರಿಪುರ
30	ಬೆಳಂದೂರು	ಡಿಟ್ಟೋ
31	ಮಲಂದೂರು	ಸಾಗರ
32	ಮಲೆಬೆನ್ನೂರು	ಹೊನ್ನಾಳಿ, ದಾವಣಗೆರೆ

ಸಿ. ನಾರಾಯಣರಾವ್,
ಡೆಪ್ಯುಟಿ ಕನ್ಸರವೇಟರ.

ನಗರದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 130.

ಮೃತಪಟ್ಟ ದಾವಣಗೆರೆ ಭೀಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದಾವಣಗೆರೆ ನರಸಿಂಗರಾವ್, ಮೃತಪಟ್ಟ ಸದರೀ ದಾವಣಗೆರೆ ಭೀಮರಾಯರಿಗೆ ಹಿರೇಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ಸ್ಥಳದ ದಾವಣಗೆರೆ ನರಸಿಂಗರಾವ್ ಯಂಬುವರು ಚಿಕ್ಕಮಗಳೂರು ವಾಸಸ್ಥರಾಗಿ ಮೃತಪಟ್ಟ ಭೀಮರಾಯರ ಜಂದಗಿ ಬಗ್ಯಾಗಿ ಬರತಕ್ಕ 5,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದಾವಣಗೆರೆ ನರಸಿಂಗರಾಯರ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಾವಣಗೆರೆ ಭೀಮರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 131.

ಮೃತಪಟ್ಟ ಕಡೂರು ತಾಲ್ಲೂಕು ಬಿದರೆ ಮಾಗಣೆ ಗರಗದಹಳ್ಳಿ ಗ್ರಾಮದ ಬುಮ್ಮಿ ನಂಜಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರನು ಬುಮ್ಮಿ ಮರುಳಪ್ಪ ಯಂಬುವನು, ಮೃತಪಟ್ಟ ಸದರೀ ಬುಮ್ಮಿ ನಂಜಣ್ಣ ಯಂಬವನಿಗೆ ಹಿರೇ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಕಡೂರು ತಾಲ್ಲೂಕು ಬಿದರೆ ಮಾಗಣೆ ಗರಗದಹಳ್ಳಿ ಗ್ರಾಮದ ಸ್ಥಳದ ಬುಮ್ಮಿ ಮರುಳಪ್ಪ ಯಂಬವನು ಡಿಟೋ ತಾಲ್ಲೂಕು ಡಿಟೋ ಗ್ರಾಮದ ವಾಸಸ್ಥನಾಗಿ ಮೃತಪಟ್ಟ ಬುಮ್ಮಿ ನಂಜಣ್ಣ ಯಂಬವನ ಜಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಬುಮ್ಮಿ ಮರುಳಪ್ಪ ಯಂಬವನ ಅರ್ಜಿಯನ್ನು 1897ನೇ ಇಸವಿ ಜನವರಿ ತಿಂಗಳ ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬುಮ್ಮಿ ನಂಜಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ಡಿಸೆಂಬರ್ ತಿಂಗಳ 4ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಸಿ ನಮ್ಮ ದಸ್ತು ಖತ್ತಿನೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟು ಜಡ್ಜಿ.

ಕಡೂರು ಡಿಸ್ಟ್ರಿಕ್ಟು.

ಕೊಪ್ಪ ತಾಲ್ಲೂಕು.

ಇಸ್ತಿಹಾರ್‌ನಾಮಾ.

19ನೇ ನವಂಬರ್ ಸನ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಎಲೆಮಲಾಳು ಅಡಿಗೆಬೈಲ್ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸನ್ 1897ನೇ ಇಸವಿ ಜನವರಿ ತಾರೀಖು 8ನೇ ಶುಕ್ರವಾರ ಹಗಲು 11 ಘಂಟೆಗೆ ಕಡೂರು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಕೊಪ್ಪ ತಾಲ್ಲೂಕು ಅಮಲ್ದಾರ್ರ ರೂಬರೂ ಹರಿಹರಪುರ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಅಖೈರ್ ಧರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜ್ ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರ್ರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡೆದರೆ ದರಖಾಸ್ತುದಾರನ ಷುರೂ ಕೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟಪ್ರೈಸ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮುನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರು ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಅಪ್ಸೆಟ್ ಧಡದರಖಾಸು ದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಅಪ್ಸೆಟ್ ಧಡದರಖಾಸು ದಾರನು ಪಾವತಿ ಮಾಡತಕ್ಕದ್ದು. ಹಾಗೆ ಧಡದರಖಾಸು ದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲು ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನು ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರು ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕು ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರು ಮೂರು ಸಾಲ್ ಆಕಾರ ವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತಿ ಕೊಡುವದಕ್ಕೆ ಮುಂಚೆ ಜಮೀನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲೀ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಒರಪ ಮೂಲಕವಾಗಿ ಹರಾಜದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರು.	ದರಖಾಸ್ತು ದಾರನ ಹೆಸರು.	ಜಮೀನು ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಸಿಡಿ.	ದರಖಾಸ್ತು ಜಮೀನಿನ, ವಿಸ್ತೀರ್ಣ.	ಆಕಾರ.	ಷರಾ.
ಯಡೆಹಳ್ಳಿ 33ನೇ ನಂ. ಅಡಿಗೆ ಕ್ಷೈತ್ರ 121ನೇ ನಂ.	ಕೀರ್ತಿಕೊಂಡ ಎಸ್ಟೇಟು ಮಿಸ್ಟರ್ ಸಿ. ಎಚ್. ಬೋಸ್ಮ್ಯಾನ್ ಸಾಹೇಬರವರು.	ಮೇಗುಂಡಿ ಹೋಬಳಿ ಅಡಿಗೆಕ್ಷೈತ್ರ ಎರಿ ನಾಗಳು	ಹಾಲೀರೀ ಸರ್ವೆಯಿಂದ ಜಮೀನು ಮೇಲೆ ಹದ್ದುಬಸ್ತು ಮಾಡಿರುವಂತೆ ಬಾಂದು 6 ಕಲ್ಲು 6	100–38	100 ಅಥವಾ 150 ರೂಪಾಯಿಗಳು.	ಅಪ್ಸೆಟು ದರಖಾಸು ದಾರನ ಖಾತೆಗೆ ಸಂಬಂಧ ಆಕಾರ ದಾಖಲು ಮಾಡತಕ್ಕದ್ದು.
			ಹಾಲಿ ಸರ್ವೆಯಿಂದ ಗುರ್ತಿಸಿರುವಂತೆ ಬಾಂದು 6 ಕಲ್ಲು 6	32—2	(32 ಅಥವಾ 48)	

ತಿಳುವಳಿಕೆ ಷರಾ,—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಬ್ಜಾ ಆಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟಪ್ರೈಸ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟಪ್ರೈಸ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನು ಹಿಡುವಳೀದಾರನು ಬದ್ಧ ವ ಅರ್ಹನಾಗಿರಬೇಕು.

ಟಿ. ವಿಯರ್,
ಡೆಪ್ಯುಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು ಫಾರೆಸ್ಟು ಇಲಾಖಾ.
ಇಸ್ತಿಹಾರ್‌ನಾಮೆ.

ತಾರೀಖು 1ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನ್‌ನಲ್ಲಿ ಕಂಡ ತಾಲ್ಲೂಕು ಖಜಾನೆಗಳಲ್ಲಿ ಸಂದಲ್ ತುಕಡಾಗಳು ಸ್ವಂತ ಉಪಯೋಗಕ್ಕೋಸ್ಕರ ಚಿಲ್ಲರೆಯಾಗಿ ಬಿಕರಿ ಮಾಡಲ್ಪಡುತ್ತೆ.

ದಾವಣಗೆರೆ, ಹೊಳಲಕೆರೆ, ಚಿತ್ರದುರ್ಗ. ಇಷ್ಟಪಟ್ಟವರು ಕ್ರಯಕ್ಕೆ ಪಡಿಯಬಹುದು.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್.

ನೋಟಿಸ್.

ತಾರೀಖು 8ನೇ ಡಿಸೆಂಬರ್ 1896.

ಇದರಿಂದ ಡಿಸ್ಟ್ರಿಕ್ಟ್ಟು ವುಳೆ ಇರುವ ತಮಾಂ ತಾಲ್ಲೂಕು ಪೋಲೀಸಿನವರು ಮತ್ತು ಗ್ರಾಮ ನೌಕರರಿಗೂ ತಿಳಿಯಪಡಿಸುವದೇನಂದರೆ,—ಮಾರ್ಜಿನ್‌ನಲ್ಲಿ ನಮೂದಿಸುವ ತಾಲ್ಲೂಕುಗಳಲ್ಲಿರುವ ತಂಗಡಿ ಚಕ್ಕೆ ಜಮಾವಣೆ ಹಕ್ಕನ್ನು 1896ನೇ ನವಂಬರ್ ಗುರ್ರೇ ಲಾಗಾಯತು 1897ನೇ ಜೂನ್ ಆಖೈರ್ ವರಿವಿಗೆ ಹರಾಜು ಮಾಡಲ್ಪಟ್ಟಿದೆ. ಬಾಕಿ ತಾಲ್ಲೂಕುಗಳಲ್ಲಿ ತಂಗಡಿಚಕ್ಕೆ ಜಮಾಯಿಸಲು ಲೈಸೆನ್ಸ್ ಕೊಡುವದನ್ನು ಮನ್ನಾ ಮಾಡಿರುತ್ತೆ. ಮನ್ನಾ ಮಾಡಿರತಕ್ಕ ತಾಲ್ಲೂಕುಗಳ ಗ್ರಾಮದ ಸರಹದ್ದಿನಲ್ಲಿ ಸರ್ಕಾರಿ ಬಂಜರ್ ಜಮೀನಿನಲ್ಲಿ ಯಾರೂ ತಂಗಡಿಚಕ್ಕೆ ಜಮಾಯಿಸಕೂಡದು. ಹಾಗೆ ಜಮಾಯಿಸಿದಲ್ಲಿ ಕಳುವಿನಿಂದ ಜಮಾಯಿಸಿದಂತೆ ಭಾವಿಸಿ ಪೋಲೀಸಿನವರು ಮತ್ತು ಗ್ರಾಮ ನೌಕರರು ಕ್ರಮವಾಗಿ ತಾಲ್ಲೂಕು ಮ್ಯಾಜಿಸ್ಟ್ರೇಟರಲ್ಲಿ ಪ್ರಾಸಿಕ್ಯೂಷನ್ ಮಾಡಬೇಕು. ಇಂಥಾ ಮೊಕದ್ದಮೆ ಪತ್ತೇಮಾಡಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಿದಲ್ಲಿ ಅಂಥಾ ಪತ್ತೇ ತರದೂದು ನಡಿಸಿದವರಿಗೆ ಮುನಾಸಬ್ ಇನಾಂ ಕೊಡಲು ಸಿಫಾರಸ್ ಮಾಡಲಾಗುತ್ತೆ.

ಹೊಳಲಕೆರೆ,—ದಾವಣಗೆರೆ.
ಜಗಲೂರು,—ಮೊಳಕಾಲ್ಮೂರು.

ಎಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮಿಷ್ನರ್.

ಪ್ರಕಟನೆ.

ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರೆರಿಗೆ ಸಂಬಂಧಪಟ್ಟ ಈ ಕೆಳಗೆ ನಮೂದಿಸಿರುವ ಪುಸ್ತಕಗಳು ಬೆಂಗಳೂರು ಗವರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ.

		ರೂ. ಆ. ಪೈ.
ನಂ. 1.	ಆಪಸ್ತಂಭ ಗೃಹ್ಯಸೂತ್ರ	1-12—0
ನಂ. 2.	ಆಪಸ್ತಂಭ ಪರಿಭಾಷಾಸೂತ್ರ	1—0—0
ನಂ. 3.	ಮಾಧವಾಚಾರ್ಯ ಕೃತ ಧಾತುವೃತ್ತಿ. 2ನೇ ಸಂಪುಟ 1ನೇ ಭಾಗ ..	2—0—0
ನಂ. 4.	ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 1ನೇ ಸಂಪುಟ ..	2—8—0
ನಂ. 5.	ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 2ನೇ ಸಂಪುಟ ..	2—8—0
ನಂ. 6.	ಶ್ರೀಶಂಕರಾಚಾರ್ಯ ವಿರಚಿತ ದಕ್ಷಿಣಾಮೂರ್ತಿಸ್ತೋತ್ರ ..	1—4—0
ನಂ. 7.	ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 3ನೇ ಸಂಪುಟ ..	3—0—0
ನಂ. 8.	ಭಗವದ್ಗೀತ	2-12—0
ನಂ. 11.	ಸೌಂದರ್ಯಲಹರಿ	1—8—0

ತಾರೀಖು 7ನೇ ಡಿಸೆಂಬರ್ 1896ನೇ ಇಸವಿ
ಬೆಂಗಳೂರು.

ನೋಟಿಸ್.

ಈ ಕೆಳಗೆ ನಮೂದಿಸಿರುವ ಪುಸ್ತಕವು ಬೆಂಗಳೂರು ಗವರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರಿಯುತ್ತದೆ.

1897ನೇ ಇಸವಿಯ ಸಂಸ್ಕೃತ ಲೋವರ್ ಸೆಕಂಡರಿ ಟೆಕಸ್ಟ್ ಬುಕ್ಕು. ಕ್ರಯ 2 ಆಣೆ.

ಎಸ್. ಅಬ್ದುಲ್ ಹೈ,
ಕ್ಯೂರೇಟರ್.

ನೋಟಿಸ್.

ಜನಗಳ ಉಪಯೋಗಕ್ಕೋಸ್ಕರ ನೇತ್ರಗಳಿಗೆ ಔಷಧಿ ಹಾಕತಕ್ಕ ಒಂದು ಸರ್ಕಾರದ ವೈದ್ಯಶಾಲೆಯು ಬೆಂಗಳೂರು ತಾಲ್ಲೂಕು ಕಚೇರಿ ರೋಡಿನಲ್ಲಿ ಸ್ಥಾಪಿಸಲ್ಪಟ್ಟಿರುತ್ತೆ. ಧರ್ಮಾರ್ಥವಾಗಿ, ಅಸಿಸ್ಟೆಂಟ್ ಸರ್ಜನ್ ಎಸ್. ವಿ. ರಾಮಸ್ವಾಮಿ ಅಯ್ಯಂಗಾರ್ರವರು, ನೇತ್ರ ರೋಗದಿಂದ ಪೀಡಿತರಾದವರನ್ನು ಪ್ರತಿ ದಿನವೂ ಬೆಳಿಗ್ಗೆ 7 ಘಂಟೆ ಲಾಗಾಯತು 11 ಘಂಟೆ ವರಿವಿಗು ಚಿಕಿತ್ಸೆ ಮಾಡುವರು.

ಪಿ. ಎಚ್. ಬೆರ್ನರ್ಸ್, ಎಂ. ಬಿ.,
ಸೀನಿಯರ್ ಸರ್ಜನ್ ಯಾ ಸ್ಯಾನಿಟರಿ ಕಮಿಷ್ನರ್,
ಮೈಸೂರ್ ಗವರ್ನಮೆಂಟ್.

Mysore Govt. Central Press, Bangalore.—1896.

೭೩೦

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಸ್ಪ ಆದ್ದು. [ನಂ. 51.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 24, ಸನ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಯಜ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷ್ನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು.—

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 16ನೇ ಡಿಸೆಂಬರ್ 1896.

ನಂ. 6972.—ಲೋ. ಘಂ. 40.—92, ಮೆಸ್ಟರ್ ಟಿ. ಎಸ್. ಮಲ್ಲಿಕಾರ್ಜುನಯ್ಯನವರು, ರಾಜೀನಾಮೆ ಕೊಡಲ್ಪಟ್ಟ ಮೆಸ್ಟರ್ ಕೆ. ಮೈಲಾರಿರಾಯರ ಸ್ಥಳದಲ್ಲಿ ಕಿಲ್ಲೆಮೊಹಲ್ಲಕ್ಕಾಗಿ ಮೈಸೂರ್ ಷಹರ್ ಮ್ಯುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 7026.—ಜು. 792, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿ, ಚಾಮರಾಜನಗರದ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಎ. ಡಿ. ಕೃಷ್ಣಪ್ಪನವರು, 2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 7028.—ಜು. 794, ಚಾಮರಾಜನಗರದ ತಾಲ್ಲೂಕು ಅಮಲ್ದಾರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟರಾದ ಎ. ಡಿ. ಕೃಷ್ಣಪ್ಪನವರಿಗೆ, ಸನ್ 1859ನೇ ಇಸವಿಯ XIIIನೇ ಆಕ್ಟ (ಕಂಟ್ರಾಕ್ಟು ಉಲ್ಲಂಘನೆ ಬಗ್ಗೆ ಉಂಟಾದ ಆಕ್ಟು) ಅನುಸರಿಸಿ ಬರುವ ಮೊಕದ್ದಮೆಗಳನ್ನ ದರ್ಯಾಫ್ತಿ ಮಾಡಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ತಾರೀಖು 26ನೇ ನವಂಬರ 1896.

ನಂ. 6132.—ಲೋ. ಫಂ. 83—96, ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಜಂಟಿಸಲ್ಪಟ್ಟಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮನೆ ಮತ್ತು ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ ಮೈಸೂರ್ ಷಹರ್ ನಜರ್‌ಬಾದ್ ಮೊಹಲ್ಲಾ ಇಟ್ಟಿಗೂಡಿನಲ್ಲಿ ಮೆಸ್ಟರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆಯನ್ನ ಬಿಡಾಯಿಸುವ ಬಗ್ಯಾಗಿ ಬೇಕಾಗಿರುತ್ತವೆ:—

ಜಂಜರ್ ನಂ.	ಬೀದಿಯ ಹೆಸರು.	ಡೋರ್ ನಂಬರು.	ಮಾಲೀಕರ ಹೆಸರು.	ಅವಶ್ಯಕವಾಗಿರುವ ಸ್ವತ್ತಿನ ವಿವರ.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಷರಾ.
1	ಇಟ್ಟಿಗೂಡಿನಲ್ಲಿ ಮೆಸ್ಟರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆ.	911	ನಂಜುಂಡಯ್ಯ, ಕುಪ್ಪುಸಾಮಿ ಮೊದಲಿಯಾರ್, ರಾಮಸ್ವಾಮಿ ಮೊದಲಿಯಾರ್ ಮತ್ತು ಚಾಮುಂಡಮ್ಮ.	ಅರು ಅಂಕಣಗಳ ಹೆಂಚಿನ ಮನೆ, ಮೂರು ಅಂಕಣಗಳ ಹೆಂಚಿನ ಕೈಸಾಲೆ, 1·44 ಚದುರದ ತಾರಸಿ ಮಾಡಲ್ಪಟ್ಟ ಭಾಗ ಮತ್ತು 6 ಅಂಕಣಗಳ ತಖ್ತ್‌ಪೋಷ್ ಮಾಡಲ್ಪಟ್ಟ ಭಾಗ.	64	$\frac{18+16}{2}$	ರಸ್ತೆ.	ರಸ್ತೆ.	ದುಂದಣ್ಣನ ಮನೆ.	ಗಲ್ಲಿ.	ಈ ಪ್ರದೇಶದಲ್ಲಿ ಮನೆಗಳು ಒಂದಕ್ಕೊಂದು ಬಹಳ ವತ್ತಾಗಿ ಮತ್ತು ಗಾಳಿ ಸಂಚಾರಕ್ಕೆ ಅಡಚಣೆಯಾಗಿಧೆ. ಆದ್ದರಿಂದ ಸದರೀ ಪ್ರದೇಶವು ಅಭಿವೃದ್ಧಿಗೆ ಅವಶ್ಯಕವಾಗಿಧೆ.

ತಾರೀಖು 2ನೇ ಡಿಸೆಂಬರ್ 1896.

ನಂ. 6331.—ಲೋ. ಫಂ. 65—96, ಸನ್ 1894ನೇ ಇಸವಿಯ ನಂ. VIIನೇ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಟ್ಟ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ ಆಲೂರ್ ಷಹರ್ ಬಿಡಾವಣಿ ಬಗ್ಯಾಗಿ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು.	ಜಮೀನ್ ತಪಶೀಲು. ಸರ್ವೆ ನಂ.	ವಿವರ.	ಬೇಕಾದ ವಿಸ್ತೀರ್ಣ.	ಬೇರೀಜು.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
ಹಾಸನ.	ಆಲೂರ ಸಬ್ ತಾಲ್ಲೂಕು.	ಆಲೂರು.	ಆಲೂರು.	ಹುಸೇನಸಾಬಿ (ಅನುಭವದಾರು) ಸುಬ್ಬೇಗೌಡ ಮತ್ತು ಬಸವೇಗೌಡ)	ಸರ್ವೆನಂಬರ 20ರ ಭಾಗ	ಖುಷ್ಕಿ	ಎ. ಗುಂ. 1—20	ರೂ. ಆ. 1—4	ಸರ್ವೆ ನಂಬರ 20ರ ಭಾಗ	ಕೊಳಕ್ಕೆ ಹೋಗುವ ರಸ್ತೆ	ಬಸವಲಿಂಗೇಗೌಡನ ಮತ್ತು ಇತರರ ಮನೆಗಳು	ಹಯಾತ್‌ಸಾಬಿಯ ಮತ್ತು ಇತರರ ಜಮೀನುಗಳು
				ಬಸವಲಿಂಗೇಗೌಡ	ಡಿಟೋ	ಡಿಟೋ	1—29	1—8	ಆಸ್ಪತ್ರೆಯ ಕಂಪೌಂಡ್	ಸುಬ್ಬೇಗೌಡನ ಬಸವೇಗೌಡನ ಮತ್ತು ಇತರರ ಜಮೀನ್‌ಗಳು	ಬಸವ ಲಿಂಗೇಗೌಡನ, ದಾಸೇಗೌಡನ, ಹುಚ್ಚೆಗೌಡನ ಮತ್ತು ಇತರರ ಮನೆಗಳು ಮತ್ತು ಹಿತ್ತಲುಗಳು	ಡಿಟೋ

ತಾರೀಖು 24ನೇ ನವಂಬರ 1896.

ನಂ. 5973—4.—ಲೋ. ಫಂ. 17.—96, ಬೆಂಗಳೂರು ವ ಮೈಸೂರು ಷಹರುಗಳ ಮ್ಯುನಿಸಿಪಾಲಿಟಿಗಳಲ್ಲಿ ಇತಃಪರ ಚುನಾವಣೆಗಳನ್ನ ನಡಿಸುವ ಬಗ್ಯೆ ಹಾಲಿ ಜಾರೀಲಿರುವ ರೂಲ್ಸಿಗೆ ಬದಲಾಗಿ ಈ ಕೆಳಗೆ ಕಂಡ ತಿದ್ದುಪಡಿಯಾದ ರೂಲ್ಸ್ ಜಾರೀಗೆ ತರುವ ಬಗ್ಯೆ ಮೈಸೂರ್ ಗವರ್ನಮೆಂಟಿನವರು ನಿಶ್ಚಯಿಸಿರುತ್ತಾರೆ:—

ರೂಲ್ಸ್.

I. ಮುತ್ತೊಂದು ಹುಕುಂ ಕೊಡುವ ಪರಿಯಂತ, ಪ್ರೆಸಿಡೆಂಟರು ಮತ್ತು ಯುಕ್ಸ್ ಅಫಿಷಿಯೋ ಮೆಂಬರಗಳೂ ದೇಖೀಲ್ ಮ್ಯುನಿಸಿಪಲ್ ಕಮಿಷ್ಣನರುಗಳ ಒಟ್ಟು ಸಂಖ್ಯೆಯು, ಬೆಂಗಳೂರು ವ ಮೈಸೂರು ಷಹರುಗಳ ಪ್ರತಿ ವೊಂದರಲ್ಲಿಯೂ 20 ಆಗಿರ ತಕ್ಕದ್ದು. ಇವರುಗಳ ಪೈಕಿ ಪ್ರತಿ ಮ್ಯುನಿಸಿಪಾಲಿಟಿಯೊಳಗೂ ಅರ್ಧ ಸಂಖ್ಯೆಯು ಕಂದಾಯ ಕೊಡುವವರಿಂದ ಚುನಾಯಿಸಲ್ಪಡ ತಕ್ಕದ್ದು, ಬಾಕಿ ಅರ್ಧ ಉದ್ಯೋಗತಃ ಆಗಲಿ ಯಾ ಹೆಸರಿನಿಂದಾಗಲಿ ಗವರ್ನಮೆಂಟಿನವರಿಂದ ಮೊಕರರ್ಮಾಡಲ್ಪಡತಕ್ಕದ್ದು. ಪ್ರತಿ ಡಿವಿಜನ್ನಲ್ಲಿಯೂ ಚುನಾಯಿಸಲ್ಪಡಬೇಕಾದ ಮೆಂಬರುಗಳ ಸಂಖ್ಯೆಯು ಪ್ರೆಸಿಡೆಂಟರವರಿಂದ ಪ್ರಸಿದ್ಧಪಡಿಸಲ್ಪಡತಕ್ಕದ್ದು.

II. ಮೈಸೂರು ಷಹರ್ ಮ್ಯುನಿಸಿಪಾಲಿಟಿಯಲ್ಲಿ ಬೆಂಗಳೂರಲ್ಲಿರುವ ಮೇರೆ ಅದೇ ಕೆಲಸಕ್ಕಾಗಿ ಬೇರೆ ಪ್ರೆಸಿಡೆಂಟರಿಲ್ಲದೆ ಇರುವದರಿಂದ ಡೆಪ್ಯುಟಿ ಕಮಿಷ್ಣನರವರು ತಾತ್ಕಾಲಕ್ಕೆ ರೆಗ್ಯುಲೇಷನ್ ಅನುಸರಿಸಿ ಸದರೀ ಮ್ಯುನಿಸಿಪಾಲಿಟಿಯು ಎಕ್ಸ್ ಅಫಿಷಿಯೋ ಪ್ರಸಿಡೆಂಟರಾಗಿಯೂ ಮತ್ತು ಗವರ್ನಮೆಂಟಿನಿಂದ ಮೊಕರರ್ಮಾಡಲ್ಪಟ್ಟ ವೈಸ್ ಪ್ರೆಸಿಡೆಂಟರು ಸದರೀ ಮ್ಯುನಿಸಿಪಾಲಿಟಿಯು ಒಬ್ಬ ಎಕ್ಸ್ ಅಫಿಷಿಯೋ ಮೆಂಬರುಗಳಾಗಿಯೂ ಯಿರತಕ್ಕದ್ದು.

III. ಒಬ್ಬ ಮ್ಯುನಿಸಿಪಲ್ ಕಮಿಷ್ಣನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹರಾಗಬೇಕಾದರೆ ಅವರು—

(*a*) ಪುರುಷರಾಗಿರಬೇಕು;

(*b*) 25 ವರುಷ ವಯಸ್ಸು ಪೂರೈಸಿರಬೇಕು;

(*c*) ವಿದ್ಯಾವಂತರಾಗಿರಬೇಕು;

(*d*) ಚುನಾಯಿಸಲ್ಪಡಬೇಕಾಗಿರುವ ಡಿವಿಜನಿನ ಮ್ಯುನಿಸಿಪಲ್ ಸರಹದ್ದುಗಳಲ್ಲಿ ವಾಸ ಮಾಡುತ್ತಿರಬೇಕು;

(*e*) ಚುನಾವಣೆಯ ಹಿಂದಿನ ವರುಷದಲ್ಲಿ ಸದರೀ ರೆಗ್ಯುಲೇಷನ್ ಅನುಸರಿಸಿ ತೆರಬೇಕಾದ ಮೊತ್ತದ ಮೊಬಲಗಿನಲ್ಲಿ 10 ರೂಪಾಯಿಗಳಿಗೆ ಕಡಿಮೆ ಇಲ್ಲದ ದರಗಳಾಗಲಿ, ತೆರಿಗೆಗಳಾಗಲಿ, ಜಮೀನ್ ಕಂದಾಯ ಯಾ ಮೊಹತರ್ಫಾ ಆಗಲಿ, ಇವುಗಳಲ್ಲಿ ವೊಂದು ಯಾ ಹೆಚ್ಚು ಬಗೆಗಳ ಮೊಬಲಗನ್ನು ಷಹರ್ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು; ಅಥವಾ ಮೇಲ್ಕಂಡ ವರುಷದಲ್ಲಿ ಮನೆಯ ಯಾ ಅಂಗಡಿಯ ಯಾ ಇತರ ವಿಧಕಟ್ಟಡದ ಸ್ವಂತಗಾರರಾಗಿಯೂ, ಭೋಗ್ಯದಾರರಾಗಿಯೂ ಅಥವಾ ಬಾಡಿಗೆದಾರರಾಗಿಯೂ ಅನುಭವಿಸುತ್ತಿರಬೇಕು: ಮೇಲೆ ಹೇಳಿದ ಕಟ್ಟಡಕ್ಕೋಸ್ಕರ ಈ ಕ್ಲಾಜಿನ ಮೊದಲ್‌ಭಾಗದಲ್ಲಿ ಹೇಳಿರುವ ಮೊಬಲಗಲ್ಲದೆ 10 ರೂಪಾಯಿಗೆ ಕಡಿಮೆ ಯಿಲ್ಲದ ತೆರಿಗೆಯನ್ನ ಅಂಥಾ ವರುಷಕ್ಕಾಗಿ ಷಹರ್ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು. ಪರಂತು 1895ನೇ ಇಸವಿಯ IIIನೇ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರ್ಮಾಡಲ್ಪಟ್ಟ ವೊಂದು ಕಂಪನಿಯಾಗಲಿ ಯಾ ವೊಂದು ಅವಿಭಕ್ತ ಕುಟುಂಬವಾಗಲಿ ಈ ಕ್ಲಾಜಿನಲ್ಲಿ ವಿಧಿಸಲ್ಪಟ್ಟ ನಿಬಂಧನಗಳನ್ನ ಅದರಲ್ಲಿ ಹೇಳಿದ ಮೊಬಲಗುಗಳಿಗೆ ಎರಡರಷ್ಟಕ್ಕೆ ಕಡಿಮೆ ಇಲ್ಲದೆ ನೆರವೇರಿಸಿದ ತರುವಾಯ ಇತರ ಅವಶ್ಯಕವಾದ ಯೋಗ್ಯತೆಗಳುಳ್ಳ ಅದರ ಯಾವನೊಬ್ಬ ಮೆಂಬರಾಗಲಿ ಆ ಕಂಪೆನಿಯ ಯಾ ಆ ಕುಟುಂಬದ ವಾರಸ್‌ದಾರರಾಗಿ ಇರುವದರಿಂದ ಚುನಾವಣೆಗೆ ಅರ್ಹರಾಗಿರುತ್ತಾರೆ.

(*f*) ಇಂಡಿಯನ್ ಪಿನಲ್‌ಕೋಡ್ ಪ್ರಕಾರ 6 ತಿಂಗಳಿಗೆ ಕಡಿಮೆ ಇಲ್ಲದ ಕಾಲಕ್ಕೆ ಖೈದಿನೊಡನೆ ಸಿಕ್ಷಿಸಲ್ಪಡತಕ್ಕ ವೊಂದು ತಕ್ಸೀರಿನಿಂದ ಆಪಾದಿಸಲ್ಪಟ್ಟಿರ ಕೂಡದು;

(*g*) ಚುನಾವಣೆ ತಾರೀಖಿನ ಹಿಂದೆ ಎರಡು ವರುಷದೊಳಗಾಗಿ ದಿವಾಳಿ ಖೋರರೆಂದು ಪ್ರಸಿದ್ಧಿ ಪಡಿಸಲ್ಪಟ್ಟಿರ ಕೂಡದು;

(*h*) ಸದರೀ ಮ್ಯುನಿಸಿಪಾಲಿಟಿಯು ಒಬ್ಬ ಆಫಿಸರಾಗಿಯಾಗಲಿ ಯಾ ನೌಕರರಾಗಿಯಾಗಲಿ ಕೆಲಸದಲ್ಲಿರಕೂಡದು;

(*i*) ಯಾವ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿಯೂ, ಮ್ಯುನಿಸಿಪಾಲಿಟಿಯೊಂದಿಗೆ ಅಥವಾ ಅದಕ್ಕಾಗಿ ನಡಿಸಲ್ಪಟ್ಟ ಕಂಟ್ರಾಕ್ಟು ವ ಕೆಲಸ ಯಿವಕ್ಕಾಗಿ ಭಾಗಸ್ಥರಾಗಿರುವದು ವಿನಹ ಅನ್ಯಥಾ ಮತ್ಯಾವ ಫಾಯಿದೆಯೂ ಉಳ್ಳಂಥಾವರಾಗಿ ಯಿರಕೂಡದು.

IV. ಪ್ರತಿ ಗಂಡಸರೂ ಚುನಾವಣೆ ಬಗ್ಯೆ ಅಭಿಪ್ರಾಯ ಕೊಡಲಿಕ್ಕೆ ಅರ್ಹರಾಗಬೇಕಾದರೆ ಅವರು 21 ವರುಷ ವಯಸ್ಸು ಪೂರೈಸಿಯೂ ಚುನಾಯಿಸಲ್ಪಡಬೇಕಾಗಿರುವ ಡಿವಿಜನಿನ ಸರಹದ್ದುಗಳಲ್ಲಿ ವಾಸ ಮಾಡುತ್ತಿರುವವರಾಗಿಯೂ ಈ ಕೆಳಗೆ ಕಂಡ ಷರತ್ತುಗಳ ಪೈಕಿ ಒಂದು ಯಾ ಹೆಚ್ಚು ಬಗೆಗಳು ನೆರವೇರಿಸಿದವರಾಗಿಯೂ ಯಿರಬೇಕು:—

(*a*) ಚುನಾವಣೆಯ ಹಿಂದಿನ ವರುಷದಲ್ಲಿ ಮ್ಯುನಿಸಿಪಲ್ ದರಗಳಾಗಲಿ ಯಾ ತೆರಿಗೆಗಳಾಗಲಿ ಯಾ ಗವರ್ನಮೆಂಟ್ ಜಮೀನ್ ಕಂದಾಯವಾಗಲಿ ಅಥವಾ ಆ ವರುಷಕ್ಕೆ ಮೊತ್ತದ ಮೊಬಲಗಿನಲ್ಲಿ 5 ರೂಪಾಯಿಗಳಿಗೆ ಕಡಿಮೆ ಇಲ್ಲದೆ ಮ್ಯುನಿಸಿಪಾಲಿಟಿಗೆ ಮೊಹತರ್ಫಾ ಜಮಾ ದಾಖಲಾಗಿಯಾಗಲಿ ಕೊಟ್ಟಿರಬೇಕು, ಅಥವಾ ಅವರು ಚುನಾವಣೆ ಬಗ್ಯೆ ಅಭಿಪ್ರಾಯ ಕೊಡಲಿಕ್ಕೆ ಅಪೇಕ್ಷಿಸುವ ಡಿವಿಜನಿನಲ್ಲಿ ಮೇಲ್ಕಂಡ ವರುಷದಲ್ಲಿ ಮನೆಯ, ಅಂಗಡಿಯ ಯಾ ಇತರ ಕಟ್ಟಡದ ಅನುಭವದಾರ್‍ರು ಯಾ ಮಾಲೀಕರಾಗಿಯೂ ಬಾಡಿಗೆದಾರ್‍ರು ಯಾ ಭೋಗ್ಯದಾರರಾಗಿಯೂ ಯಿರಬೇಕು; ಮೇಲ್ಕಂಡ ಕಟ್ಟಡಕ್ಕೋಸ್ಕರ ಸದರೀ ವರುಷಕ್ಕೆ 5 ರೂಪಾಯಿಗಳಿಗೆ ಕಡಿಮೆ ಇಲ್ಲದ ತೆರಿಗೆಯನ್ನು ಷಹರ್ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು.

(*b*) ಇಂಡ್ಯದ ಅಥವಾ ಇತರ ದೇಶದ ಯೂನಿವರ್ಸಿಟಿಯ ಗ್ರಾಡ್ಯುಯೇಟಾಗಿರಬೇಕು.

(*c*) ಚುನಾವಣೆ ನಡಿಯುವ ಹಿಂದಿನ ವರುಷಕ್ಕಾಗಿ ಷಹರ್ ಮ್ಯುನಿಸಿಪಾಲಿಟಿಗೆ ಮ್ಯುನಿಸಿಪಲ್ ರೆಗ್ಯುಲೇಷನ್ ಪ್ರಕಾರ ಆ ವರುಷಕ್ಕೆ ಕೊಡಬೇಕಾದ ತೆರಿಗೆಗಳ 20 ರೂಪಾಯಿಗಳಿಗೆ ಕಡಿಮೆ ಇಲ್ಲದ ಮೊತ್ತದ ಮೊಬಲಗನ್ನ ಕೊಟ್ಟಿದ್ದು 1895ನೇ ಇಸವಿಯ IIIನೇ ರೆಗ್ಯುಲೇಷನ್ ಮೇರೆ ರಿಜಿಸ್ಟರ್ ಮಾಡಲ್ಪಟ್ಟ ಯಾವ ಕಂಪೆನಿಯಿಂದಲಾಗಲಿ ಅಧಿಕಾರ ಹೊಂದಿರಬೇಕು ಯಾ ಅಂಥಾ ಕಂಪೆನಿಗೆ ಸೆಕ್ರೆಟರಿಯಾಗಿರಬೇಕು.

V. ಚುನಾಯಿಸಲ್ಪಟ್ಟ ಮ್ಯುನಿಸಿಪಲ್ ಕಮ್ಮಿಷನರು ಗವರ್ನಮೆಂಟಿನವರಿಂದ ತೆಗದುಹಾಕಲ್ಪಟ್ಟು ಅಥವಾ ಅನರ್ಹರಾದ
ಸಂದರ್ಭದಲ್ಲಿ ವಿನಾ ಅವರು ಚುನಾಯಿಸಲ್ಪಟ್ಟ ತಾರೀಖು ಮೊದಲು ಎರಡು ವರುಷಗಳ ವರಿವಿಗೆ ಮತ್ತು ಅವರ ಸ್ಥಳದಲ್ಲಿ ಬೇರೊ
ಬ್ಬರು ಚುನಾಯಿಸಲ್ಪಟ್ಟರೆಂದು ಪ್ರಕಟಿಸಲ್ಪಡುವ ಪರಿಯಂತರವೂ ಉದ್ಯೋಗದಲ್ಲಿರುವದಕ್ಕೆ ಅರ್ಹರಾಗಿರತಕ್ಕದ್ದು.

VI. ಮ್ಯುನಿಸಿಪಲ್ ಕಮ್ಮಿಷನರುಗಳ ಚುನಾವಣೆಯು ಸಾಧಾರಣವಾಗಿ ಎರಡು ವರುಷಗಳಿಗೊಂದಾವರ್ತಿ ಗವರ್ನಮೆಂ
ಟಿನವರಿಂದ ಗೊತ್ತುಮಾಡಲ್ಪಡಬಹುದಾದ ಫಲಾನಾ ತಿಂಗಳು ಮತ್ತು ಫಲಾನಾತಾರೀಖು ಯಾ ತಾರೀಖುಗಳಲ್ಲಿ ನಡಿಸಲ್ಪಡತಕ್ಕದ್ದು.
ಅಂಥಾ ಪ್ರತಿ ಚುನಾವಣೆಯೂ ಚೀಟಿ ಹಾಕುವದರ ಮೂಲಕ ನಡಿಸಲ್ಪಡತಕ್ಕದ್ದಲ್ಲದೆ ಅದು ಪ್ರಸಿಡೆಂಟರ ಮೇಲ್ವಿಚಾರಣೆಯಲ್ಲಾಗಲಿ
ಅಥವಾ ಆ ಕೆಲಸಕ್ಕಾಗಿ ಅವರಿಂದ ನಿಯಮಿಸಲ್ಪಟ್ಟ ಇತರ ಆಫಿಸರ ಮೇಲ್ವಿಚಾರಣೆಯಲ್ಲಾಗಲಿ ಚುನಾವಣೆ ತಾರೀಖಿಗೆ ಅಥವ ಪಕ್ಷ
ವೊಂದು ತಿಂಗಳ ಮುಂಚಿತವಾಗಿ ಮೈಸೂರ ಗೆಜೆಟ್ಟಿನಲ್ಲಿ ನೋಟಿಸ್ ಮೂಲಕ ಪ್ರಸಿದ್ಧಪಡಿಸುವಂಥಾ ಸ್ಥಳದಲ್ಲಿಯೂ ಕಾಲದಲ್ಲಿಯೂ
ನಡಿಸಲ್ಪಡತಕ್ಕದ್ದು.

VII. ಕಮ್ಮಿಷನರುಗಳಾಗಿ ಚುನಾಯಿಸಲ್ಪಡುವ ಬಗ್ಯೆ ಅರ್ಹರಾದ ಮನುಷ್ಯರ ಹೆಸರು ಮತ್ತು ಅಂಥಾ ಚುನಾವಣೆ
ಬಗ್ಯೆ ಅಭಿಪ್ರಾಯ ಕೊಡಲು ಯೋಗ್ಯತಾಉಳ್ಳ ಮನುಷ್ಯರ ಹೆಸರು ಸುದಾ ತೋರಿಸುವ ವೊಂದು ಪಟ್ಟಿಯು, ಚುನಾವಣೆ ಬಗ್ಯೆ
ಗೊತ್ತುಮಾಡಲ್ಪಟ್ಟ ತಾರೀಖಿಗೆ ಮುಂಚಿತವಾಗಿ ಎರಡು ತಿಂಗಳಿಗೆ ಜಾಸ್ತಿಯಿಲ್ಲದೆ ಪ್ರೆಸಿಡೆಂಟರವರಿಂದ ಮೈಸೂರ ಗೆಜೆಟ್ಟಿನಲ್ಲಿ ಪ್ರಾಯಿ
ಷ್ಮಾಡಲ್ಪಡತಕ್ಕದ್ದು.

VIII. ಚುನಾಯಿಸಲ್ಪಡುವ ಬಗ್ಯಾಗಲಿ ಅಥವಾ ಆ ಬಗ್ಯೆ ಅಭಿಪ್ರಾಯ ಕೊಡುವ ಬಗ್ಯಾಗಲಿ ಅರ್ಹರಾದ ಮನುಷ್ಯರ
ಹೆಸರು VIIನೇ ಪ್ಯಾರಾದಲ್ಲಿ ನಮೂದಾದಪಟ್ಟಿಯಲ್ಲಿ ಬಿಡಲ್ಪಟ್ಟಿದ್ದರೆ, ಅವರು, ಸದರೀ ಪಟ್ಟಿಯು ಪ್ರಾಯಿಷ್ಮಾಡಲ್ಪಟ್ಟ ತಾರೀಖಿನ
ಮೊದಲು ವೊಂದು ತಿಂಗಳೊಳಗಾಗಿ, ಅವರ ಹೆಸರನ್ನು ಸದರೀ ಪಟ್ಟಿಯಲ್ಲಿ ದಾಖಲ್ಮಾಡುವಂತೆ ಪ್ರೆಸಿಡೆಂಟರವರಿಗೆ ಅರ್ಜಿ ಬರೆದು ಕೊ
ಳ್ಳತಕ್ಕದ್ದು. ಅಂಥಾ ಅರ್ಜಿಯು ದಾಖಲಾದ ತರುವಾಯ, ಪ್ರೆಸಿಡೆಂಟರು ಅರ್ಜೀದಾರನ ಹೆಸರನ್ನು ದಾಖಲ್ಮಾಡತಕ್ಕದ್ದೆಂತಾಗಲಿ ಯಾ
ಅನ್ಯಥಾ ಆಗಲಿ ಹುಕುಂ ಮಾಡತಕ್ಕದ್ದಲ್ಲದೆ ಮತ್ತು ಸದರೀ ವಿಚಾರಣೆಯ ಖರ್ಚುಗಳ ಪಾವತೀ ವಿಷಯದಲ್ಲಿ ಸಹ ಅವರಿಗೆ ನ್ಯಾಯ
ವಾಗಿ ತೋರುವಂತೆ ಹುಕುಂ ಮಾಡತಕ್ಕದ್ದು, ಮತ್ತು ಅಂಥಾ ಹುಕುಂ ಆಖ್ಯೆರಾದ್ದಾಗಿರತಕ್ಕದ್ದು.

IX. ಚುನಾವಣೆಗೆ ಗೊತ್ತಾದ ತಾರೀಖಿಗೆ ಅಥವ ಪಕ್ಷ ಮೂರು ವಾರಗಳ ಮುಂಚೆ ಯಾವ ಮನುಷ್ಯರಾದರೂ ಮೇಲ್ಕಂ
ಡ ರೂಲ್ಸ್ ಅನುಸಾರವಾಗಿ ಒಬ್ಬ ಮ್ಯುನಿಸಿಪಲ್ ಕಮ್ಮಿಷನರಾಗುವದಕ್ಕೆ ಯಿಷ್ಟಪಡುವ ಪಕ್ಷಕ್ಕೆ ಅಂಥಾ ಮನುಷ್ಯರು ತಮ್ಮ
ಹೆಸರನ್ನೂ ಮತ್ತು ತಾವು ಯಾವ ಡಿವಿಜನಿಗೆ ಮ್ಯುನಿಸಿಪಲ್ ಕಮ್ಮಿಷನರಾಗಿರುವ ಬಗ್ಯೆ ಅಪೇಕ್ಷಿಸುತ್ತಾರೋ ಅದನ್ನೂ ನಮೂದಿಸಿ
ಪ್ರೆಸಿಡೆಂಟರಿಗೆ ಬರಹ ಮೂಲಕ ತಿಳಿಸತಕ್ಕದ್ದು. ತರುವಾಯ ಅಂಥಾ ಅರ್ಜಿದಾರರ ಪಟ್ಟಿಯು ಮೈಸೂರ ಗೆಜೆಟಿನಲ್ಲಿ ಪ್ರಾಯಿಷ್ಮಾಡ
ಲ್ಪಡತಕ್ಕದ್ದಲ್ಲದೆ, ಚುನಾವಣೆ ಬಗ್ಯೆ ಗೊತ್ತಾದ ತಾರೀಖಿಗೆ ಅಥವಪಕ್ಷ ಹತ್ತು ದಿನಗಳ ಮುಂಚಿತವಾಗಿ ಪ್ರತಿ ಯೊಬ್ಬ ಅಭಿಪ್ರಾಯಸ್ಥ
ರಿಗೂ ಸಹ ಕಳುಹಿಸಲ್ಪಡತಕ್ಕದ್ದು.

X. ಚುನಾಯಿಸಲ್ಪಟ್ಟ ತರುವಾಯ, ಪ್ರೆಸಿಡೆಂಟರು, ಪ್ರತಿ ಚುನಾವಣೆಯಲ್ಲಿಯೂ ಉಮೇದ್ವಾರರುಗಳನ್ನ ಅವರವರಿಗೋಸ್ಕ
ರ ಕೊಡೋಣಾದ ಅಭಿಪ್ರಾಯಗಳ ಕ್ರಮಾನುಸಾರವಾಗಿ ವಿಂಗಡಿಸಿ, ಚುನಾಯಿಸಲ್ಪಡಬೇಕಾದ ಮ್ಯುನಿಸಿಪಲ್ ಕಮ್ಮಿಷನರುಗಳ ಸಂಖ್ಯೆ
ಯನ್ನು ದೃಷ್ಟಿಯಲ್ಲಿಟ್ಟು, ಅವರವರ ದರ್ಜೆ ಕ್ರಮವನ್ನನುಸರಿಸಿ ಚುನಾಯಿಸಲ್ಪಟ್ಟಂತೆ ತಿಳಿಸತಕದ್ದು; ಪರಂತು ಯಾವ ಕಮ್ಮಿ
ಷನರಾಗಲಿ, ಅವರಿಗೋಸ್ಕರ ಅಭಿಪ್ರಾಯ ಕೊಡುವ ಬಗ್ಯೆ ಅರ್ಹರಾದ ಜನಗಳ ವೊಟ್ಟು ಸಂಖ್ಯೆಯಲ್ಲಿ ಅಥವಪಕ್ಷ $\frac{1}{8}$ನೇ ಸಂಖ್ಯೆ
ಯುಳ್ಳ ಜನಗಳ ಅಭಿಪ್ರಾಯ ಪಡೆದ ಹೊರ್ತು ಚುನಾಯಿಸಲ್ಪಟ್ಟಂತೆ ಭಾವಿಸಲ್ಪಡತಕ್ಕದ್ದಲ್ಲ. ಒಂದೇ ಕೆಲಸಕ್ಕೆ ಎರಡು ಯಾ
ಹೆಚ್ಚು ಉಮೇದ್ವಾರರು ಸಮ ಸಂಖ್ಯೆಯ ಅಭಿಪ್ರಾಯ ಹೊಂದುವದಾದರೆ, ಪ್ರೆಸಿಡೆಂಟರು ಆ ಪೈಕಿ ಯಾರು ಚುನಾಯಿಸಲ್ಪಡತ
ಕ್ಕದ್ದೋ ಅದನ್ನು ತೀರ್ಮಾನಿಸತಕ್ಕದ್ದು.

XI. ಚುನಾವಣೆ ಬಗ್ಯಾಗಿ ಉಮೇದ್ವಾರರು ಯಿಲ್ಲದ ಪಕ್ಷದಲ್ಲಿ ಅಥವಾ ಅವರು ಆವಶ್ಯಕವಾದ ಕಮ್ಮಿ ಸಂಖ್ಯೆಯ
ಅಭಿಪ್ರಾಯವನ್ನಾದರೂ ಪಡೆಯಲಿಕ್ಕೆ ತಪ್ಪಿದ ಪಕ್ಷದಲ್ಲಿ ಅಂಥಾ ನೇಮಣೂಕೆಯು ಗವರ್ನಮೆಂಟಿನವರಿಂದ ಭರ್ತೀ ಮಾಡಲ್ಪಡ
ತಕ್ಕದ್ದು.

XII. ಯಾವ ಮ್ಯುನಿಸಿಪಲ್ ಕಮ್ಮಿಷನರಾದರೂ ಅವರ ರಾಜೀನಾಮೆಯನ್ನು ಪ್ರೆಸಿಡೆಂಟರಿಗೆ ವೊಪ್ಪಿಸಬಹುದು, ಮತ್ತು
ಅಂಥಾ ರಾಜೀನಾಮೆಯು ಅಂಗೀಕರಿಸಲ್ಪಟ್ಟು ಯಾ ಅಂಥಾ ರಾಜೀನಾಮೆಯ ತಾರೀಖು ಲಾಗಾಯತು ಎರಡು ತಿಂಗಳು ಕಳೆದ ತರುವಾ
ಯ ಅವರು ಸದರೀ ಉದ್ಯೋಗವನ್ನ ಖಾಲೀ ಮಾಡಿದಂದೆ ಭಾವಿಸಲ್ಪಡತಕ್ಕದ್ದು.

XIII. ಸಾಧಾರಣವಾಗಿ ನಡಿಯತಕ್ಕ ಎರಡು ಚುನಾವಣೆಗಳ ಮಧ್ಯಕಾಲಗಳಲ್ಲಿ ಮ್ಯುನಿಸಿಪಲ್ ಕಮ್ಮಿಷನರುಗಳ ಮರಣ
ದಿಂದಾಗಲಿ, ರಾಜೀನಾಮೆಕೊಡುವಣದರಿಂದಾಗಲಿ, ತಗೈರ್ ಯಾ ಯಿತರ ಕಾರಣದಿಂದಾಗಲಿ ಉದ್ಯೋಗ ಖಾಲಿಯಾದರೆ, ಉಳಿದ ಕಮ್ಮಿ
ಷನರುಗಳು ಸದರೀ ಖಾಲಿಯನ್ನ ಗವರ್ನಮೆಂಟಿನವರ ಮಂಜೂರಾತಿಗೆ ಒಳಪಟ್ಟು, ವಿಧಿಸೋಣಾದ ಯೋಗ್ಯತಾಗಳುಳ್ಳ ಒಬ್ಬ
ಮನುಷ್ಯರನ್ನು ನೌಕರರ್ಮಾಡುವದರ ಮೂಲಕ ಖಾಲಿಯನ್ನ ಭರ್ತೀ ಮಾಡತಕ್ಕದ್ದು; ಮತ್ತು ಹಾಗೆ ನೌಕರರ್ಮಾಡಲ್ಪಟ್ಟ ಮನು
ಷ್ಯರು, ಗವರ್ನಮೆಂಟಿನವರಿಂದ ತೆಗೆದುಹಾಕಲ್ಪಟ್ಟ ಹೊರ್ತು, ಖಾಲಿಯಾದ ಉದ್ಯೋಗದಲ್ಲಿದ್ದ ಮೆಂಬರು ಸಾಧಾರಣವಾಗಿ ಉದ್ಯೋ
ಗದಲ್ಲಿರಬಹುದಾಗಿದ್ದ ಕಾಲದಪರಿಯಂತ ಉದ್ಯೋಗದಲ್ಲಿರುವದಕ್ಕೆ ಅರ್ಹರಾಗಿರತಕ್ಕದ್ದು.

ತಾರೀಖು 8ನೇ ಡಿಸೆಂಬರ್ 1896.

ನಂ. 6578.—ಲೋ. ಫಂ. 139—92, ಸ್ನ 1892ನೇ ಇಸವಿಯ VIIIನೇ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ಮೇರೆ
1871ನೇ ಇಸವಿಯ Iನೇ ನಂಬರ್ ಕಾಲ್ನಡೆಗಳ ಆಕ್ರಮ ಪ್ರವೇಶವನ್ನ ನಿರೋಧಪಡಿಸುವ ಬಗ್ಯೆ ಉಂಟಾದ ಆಕ್ಟಿನ 12ನೇ ಸೆಕ್ಷ
ನ್ನಿಂದ ಕೊಡಲ್ಪಟ್ಟ ಅಧಿಕಾರವನ್ನನುಸರಿಸಿ ಮೈಸೂರ ಗವರ್ನಮೆಂಟಿನವರು ಆಜ್ಞಾಪಿಸುವದೇನಂದರೆ, ಬೆಂಗಳೂರು ಷಹರ್ ಮ್ಯುನಿಸಿ

ಪಾಲಿಟಿಯ ಸರಹದ್ದುಗಳಲ್ಲಿ ರಾತ್ರೆ 8 ಘಂಟೆಯಿಂದ ಪ್ರಾತಃಕಾಲ 4 ಘಂಟೆ ವರಿಗೂ ಅಕ್ರಮವಾಗಿ ಪ್ರವೇಶ ಮಾಡುವ ಕಾಲ್ನಡೆಗಳನ್ನು ಹಿಡಿದು ದೊಡ್ಡಿಗೆ ದಾಖಲಾದ ಪ್ರತಿ ರಾಸಿಗೂ ಈ ಕೆಳಗೆ ಕಂಡ ದರಗಳಂತೆ ಜುಲ್ಮಾನೆಗಳು ವಸೂಲ್ಮಾಡಲ್ಪಡುವವು, ಹ್ಯಾಗಂದರೆ:—

ಆನೆಗೆ	ನಾಲ್ಕು ರೂಪಾಯಿಗಳು.
ಒಂಟೆ ಯಾ ಎಮ್ಮೆಗೆ	ಒಂದು ರೂಪಾಯಿ.
ಕುದುರೆ, ಹೆಣ್ಣು ಕುದುರೆ, ಖಸಿಯಾದ ಕುದುರೆ, ತಟ್ಟು, ಕುದುರೆ ಗಂಡುಮರಿ, ಕುದುರೆ ಹೆಣ್ಣುಮರಿ, ಗೂಳಿ, ಎತ್ತು, ಆಕಳು ಯಾ ಕಡಸಿಗೆ ..	ಎಂಟಾಣೆಗಳು.
ಕರ, ಕತ್ತೆ ಯಾ ಹಂದಿಗೆ	ನಾಲ್ಕಾಣೆಗಳು.
ಟಗರು, ಹೆಣ್ಣು ಟಗರು, ಕುರಿ, ಕುರಿಮರಿ, ಮೇಕೆ ಯಾ ಮೇಕೆ ಮರಿಗೆ ..	ಎರಡು ಆಣೆಗಳು.

ತಾರೀಖು 18ನೇ ಡಿಸೆಂಬರ್ 1896.

ನಂ. 7131.—ಜು. 806, ಪೋಲೀಸ್ ಸೂಪರಿಂಟೆಂಡೆಂಟ್ ಮೆಸ್ಟರ್ ಜಿ. ಡನ್ನಿಂಗ್‌ಯವರಿಗೆ, 1896ನೇ ನವೆಂಬರ್ 21ನೇ ಮರ್‍ಸ್ಕಂ 5847.—ಜು. 687ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಮೂರು ದಿನಗಳ ಪರೀಕ್ಷಾ ರಜಾ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 21ನೇ ಡಿಸೆಂಬರ್ 1896.

ನಂ. 7262.—ಮಿ. ಫೈ. 252.—92, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನ ಅಸಿಸ್ಟೆಂಟ್ ಸರ್ಜನ್ ಮೆಸ್ಟರ್ ಜಿ. ಜಿ. ನರೋಹಾ, ಎಲ್. ಎಂ. ವ ಎಸ್., ಯವರಿಗೆ, 1896ನೇ ನವೆಂಬರ್ 23ನೇ ಮರ್‍ಸ್ಕಂ 5886.—ಜ. ಫೈ. 252.—92ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ರಜಾಕ್ಕೆ ಜಾಸ್ತಿಯಾಗಿ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಡಿಸೆಂಬರ್ 1896.

ನಂ. 7296.—ಜು. 825, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟು ಪೋಲೀಸಿನ ಚಾರ್ಜಿನಲ್ಲಿರುವ ಯಕ್ಟ್ರಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಹಂಜಾಹುಸೇನ್ ಯವರಿಗೆ, 1896ನೇ ಡಿಸೆಂಬರ್ 4ನೇ ಮರ್‍ಸ್ಕಂ ಲಾಗಾಯತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 26ನೇ ನವೆಂಬರ್ 1896.

ನಂ. 4801—ರೆ. 1664, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಬೆಂಗಳೂರ್ ತಾಲ್ಲೂಕಿಗೆ ಸೇರಿತವಾಗಿದ್ದ "ಹಲಸೂರು ಹೋಬಳಿ" ಯನ್ನು ಇನ್ನು ಮೇಲೆ 1896ನೇ ಡಿಸೆಂಬರ್ ಗುರ್‍ರೆ ಲಾಗಾಯತು "ಕಸಬಾ ಬೆಂಗಳೂರು ಹೋಬಳಿ" ಎಂಬದಾಗಿ ಕರೆಯಲ್ಪಡತಕ್ಕದ್ದು.

ತಾರೀಖು 12ನೇ ಡಿಸೆಂಬರ್ 1896.

ನಂ. 5420.—ರೆ. ಫೈ. 89.—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟು ಮಂಜಿರಾಬಾದ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಪಿ. ಎಫ್. ಬೌರಿಂಗ್ ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 14ನೇ ಡಿಸೆಂಬರ್ 1896.

ನಂ. 5458.—ರೆ. ಫೈ. 29.—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಗವರ್ನಮೆಂಟ್ ಚೀಫ್ ಅಸಿಸ್ಟೆಂಟ್ ಕಂಟ್ರೋಲರಾದ ಮೆಸ್ಟರ್ ಜೆ. ಆರ್. ಬ್ಯಾರೊ ಯವರಿಗೆ, 1896ನೇ ಡಿಸೆಂಬರ್ 2ನೇ ಮರ್‍ಸ್ಕಂ ಲಾಗಾಯತು ನಾಲ್ಕು ದಿನಗಳ ಕಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 5461.—ಎಕ್ಸೈ. 212, ಸನ್ 1881ನೇ ಇಸವಿಯ XXIIನೇ ನಂಬರ್ ಯಕ್ಸೈಜ್ ಆಕ್ಟಿನ 55ನೇ ಸೆಕ್ಷನ್ ಅನುಸರಿಸಿ, "ಪ್ರತ್ಯೇಕ ಸಾರಾಯಿ ಅಂಗಡಿ ಲೈಸೆನ್ಸ್ ಡಿ."ಯಲ್ಲಿ ಈ ಕೆಳಗೆ ಕಂಡದ್ದನ್ನು XII (*a*) ಷರತ್ತಿಗೆ ಬದಲಾಗಿ ಸೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ.

"ಲೈಸೆನ್ಸದಾರನು ಯಾ ಬಿಕರಿದಾರನು ತನ್ನ ಅಂಗಡಿಯಲ್ಲಿ ಗವರ್ನಮೆಂಟಿನವರಿಂದ ಸಪ್ಲೈ ಮಾಡಲ್ಪಟ್ಟ ಸಾರಾಯಿ ಶಿವಾಯಿ ಮತ್ತ್ಯಾವ ಸಾರಾಯಿಯನ್ನಾಗಲಿ ಯಿಟ್ಟುಕೊಂಡಿರಲೂ ಕೂಡದು, ಮಾರಾಟಕ್ಕೆ ಕೊಡಲೂ ಕೂಡದು ಯಾ ಮಾರಲೂ ಕೂಡದು, ವಿಶೇಷ ಅಪ್ಪಣೆ ಶಿವಾಯಿ 20° ಅಂಡರ್ ಪ್ರೂಫಿಗಿಂತ ಮತ್ತ್ಯಾವ ಹೆಚ್ಚು ಬಲವುಳ್ಳ ಸಾರಾಯಿಯನ್ನು ತನ್ನ ಅಂಗಡಿಯಲ್ಲಿ ಯಿಟ್ಟುಕೊಂಡಿರಲೂ ಕೂಡದು, ಮಾರಾಟಕ್ಕೆ ಕೊಡಲೂ ಕೂಡದು ಯಾ ಮಾರಲೂ ಕೂಡದು, ತನ್ನ ಅಂಗಡಿಯಲ್ಲಿ ಮಾರಾಟಕ್ಕಾಗಿ ಕೊಡಲ್ಪಡುವ ಮತ್ತು ಮಾರಲ್ಪಡುವ ಸಾರಾಯಿಯು ಬೆರಸದೆ ಮತ್ತು ಮಿಶ್ರ ಪಡಿಸಿ ಕೆಡಿಸದೆ ಯಿಟ್ಟಿರತಕ್ಕದ್ದು."

ತಾರೀಖು 16ನೇ ಡಿಸೆಂಬರ 1896.

ನಂ. 5482.—ಫಾ. ಫೈ. 10—95, ಈ ಕೆಳಗೆ ಕಂಡ ಇಸ್ತಿಹಾರ್‌ನಾಮೆಯನ್ನು ಮೈಸೂರ್ ಗವರ್ರ‍ಮೆಂಟಿನವರು ಘೋಯಿಷ ಮಾಡುತ್ತಾರೆ:—

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಚಾಮರಾಜನಗರ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ಆನೆಬಂಗಡಿ ಕೆಲಸಗಳು ನಡಿಯುತಲಿರುವದರ ದೆಸೆಯಿಂದ ಸದರೀ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟುಗಳಲ್ಲಿ ಎಲ್ಲಾ ವಿಧವಾದ ಷಿಕಾರಿ ಮಾಡುವಣ್ಣ, ಯಾ ಮೀನು ಹಿಡಿಯುವ ಬಗ್ಯೆ ಡೈನಾಮೈಟ್ ಎಂಬ ಮದ್ದು ಉಪಯೋಗಿಸುವಣ ಇವುಗಳನ್ನ ಮತ್ತೊಂದು ಇಸ್ತಿಹಾರ್ ಕೊಡುವವರಿಗೆ ಶುದ್ಧವಾಗಿ ನಿರೋಧಿಸಲ್ಪಟ್ಟಿರುತ್ತವೆ.

ಮೇಲ್ಕಂಡ ಫಾರೆಸ್ಟುಗಳಲ್ಲಿ ಷಿಕಾರಿಗೋಸ್ಕರ ಯಾ ಮೀನು ಹಿಡಿಯುವದಕ್ಕೋಸ್ಕರ ಮತ್ತು ಇತರ ಷಿಕಾರಿ ಕೆಲಸಗಳಿಗೋಸ್ಕರ, ಫಾರೆಸ್ಟುಗಳ ಕನ್ಸರ್‌ವೇಟರವರಿಂದಲಾಗಲಿ ಯಾ ಈ ವಿಷಯದಲ್ಲಿ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟ್ ಆಫೀಸರರಿಂದಲಾಗಲಿ ವಿಶೇಷ ಅಪ್ಪಣೆ ಪಡೆಯದೆ ಪ್ರವೇಶ ಮಾಡುವ ಜನಗಳು ಕ್ರಿಮಿನಲ್ ವಿಚಾರಣೆಗೆ ಗುರಿಯಾಗುವರು.

ತಾರೀಖು 17ನೇ ಡಿಸೆಂಬರ್ 1896.

ನಂ. 5511.—ರೆ. 1858, ಈ ಕೆಳಗೆ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಆಕ್ಟಿಂಗ್ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮ್ಮಿಷನರ ಮೆಸ್ಟರ್ ಪಿ. ಸೀತಾರಾಮಯ್ಯನವರು, ಬೆಂಗಳೂರಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ (ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಎಚ್. ರಾಮಾನುಜಯ್ಯಂಗಾರ್ರು, ಚಿತ್ರದುರ್ಗದಿಂದ ಮೈಸೂರು ಡಿಸ್ಟ್ರಿಕ್ಟಿಗೆ (ಚಾರ್ಜು ಒಪ್ಪಿಸಿದ ತರುವಾಯ ಕೆಲಸಕ್ಕೆ ಹೋಗಿ ಸೇರತಕ್ಕದ್ದು.)

ನಂ. 5561.—ರೆ. ಫೈ. 76—96, ಶಿವಮೊಗ್ಗಾ ಡಿಸ್ಟ್ರಿಕ್ಟು ಹೊನ್ನಾಳಿ ತಾಲ್ಲೂಕಿನ ಅಮಲ್‌ದಾರ್ ಎಚ್. ಗುಂಡಪ್ಪನವರಿಗೆ, 1896ನೇ ನವಂಬರ 24ನೇ ಮರ್ಕುಂ 4678—ರೆ. ಫೈ. 76—96ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ರಜಾವನ್ನ 1896ನೇ ನವಂಬರ 8ನೇ ಮರ್ಕುಮಿನ ಪೂರ್ವಾಹ್ನದ ಲಾಗಾಯತು ಉಪಯೋಗಿಸಿಕೊಂಡು 1896ನೇ ಡಿಸೆಂಬರ 5ನೇ ಮರ್ಕುಮಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ, ಉಪಯೋಗಿಸಿಕೊಳ್ಳದ ರಜಾ ಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 18ನೇ ಡಿಸೆಂಬರ 1896.

5539.—ರೆ. ಫೈ. 96—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸಗಳ 173ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟು ಸಿಡ್ಲಘಟ್ಟ ತಾಲ್ಲೂಕಿನ ಅಮಲ್‌ದಾರ್ ಸಿರಾ ಶ್ರೀನಿವಾಸರಾಯರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ. ಸದರೀ ಅಮಲ್‌ದಾರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರು ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ನಂ. 5595.—ರೆ. 1894, ಹಾಸನ ಡಿಸ್ಟ್ರಿಕ್ಟು ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ಬಿ. ಜಿ. ಕೃಷ್ಣಯ್ಯಂಗಾರ್‌ಯವರಿಗೆ, 1896ನೇ ನವಂಬರ 21ನೇ ಮರ್ಕುಂ 4529.—ರೆ. 1574ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ರಜಾವನ್ನ 1896ನೇ ನವಂಬರ 30ನೇ ಮರ್ಕುಮಿನ ಪೂರ್ವಾಹ್ನದ ಲಾಗಾಯತು ಉಪಯೋಗಿಸಿಕೊಂಡು 1896ನೇ ಡಿಸೆಂಬರ ಗುರ್ರೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸ ಬಂದಿರುತ್ತಾರಾಗಿ ಉಪಯೋಗಿಸಿ ಕೊಳ್ಳದ ರಜಾಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 19ನೇ ಡಿಸೆಂಬರ 1896.

ನಂ. 5606.—ಫಾ. ಫೈ. 27.—95, ಸರ್ 1896ನೇ ಜುಲೈ 27ನೇ ಮರ್ಕುಂ 944.—ಫಾ. ಫೈ. 27.—95ನೇ ನಂಬರ ಗವರ್ರ‍ಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್ಸರ್‌ವೇಟರಾಗಿ ಆಕ್ಟು ಮಾಡುವಂತೆ ನೊಕರರಾಗಿದ್ದ ಮೆಸ್ಟರ್ ಎಚ್. ಶ್ರೀನಿವಾಸರಾಯರು, 3ನೇ ಕ್ಲಾಸಿನ ಆಕ್ಟಿಂಗ್ ಅಸಿಸ್ಟೆಂಟ್ ಕನ್ಸರ್‌ವೇಟರರಾದ ಮೆಸ್ಟರ್ ಎಂ. ಜಿ. ರಾಮರಾಯರಿಗೆ ಬದಲಾಗಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಅದರಂತೆ ಸಬ್ ಪ್ರೋಟೆಮಾಗಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

ನಂ. 5609.—ಫಾ. ಫೈ. 62.—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟು ಕಾಕನಕೋಟೆ ರೇಂಜಿನ ಫಾರೆಸ್ಟುಗಳ ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕನ್ಸರ್‌ವೇಟರ್ ಮೆಸ್ಟರ ಎಂ. ಜಿ. ರಾಮರಾವ್, ಬಿ. ಎ. ಯವರಿಗೆ, 1896ನೇ ಡಿಸೆಂಬರ 15ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹದಿನೈದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಡಿಸೆಂಬರ 1896.

ನಂ. 5613,—ರೆ. ಫೈ. 120.—95—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸಗಳ 172ನೇ ಆರ್ಟಿಕಲ್ ಅನುಸರಿಸಿ, ಸಾಗರ ತಾಲ್ಲೂಕು ಅಮಲ್‌ದಾರ್ ಟಿ. ರಾಮಚಂದ್ರರಾಯರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹನ್ನೆರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ

ಇಲಾಖೆಗಳ ಗವರ್ರ‍ಮೆಂಟ್ ಸೆಕ್ರಿಟೆರಿ.

736

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮಾ.

ತಾರೀಖು 17ನೇ ಡಿಸೆಂಬರ್ 1896.

ನಂ. 1071.—6771, ಮೈಸೂರ ಪಬ್ಲಿಕ್ ವರ್ಕ್ಸ್ ಇಲಾಖಾ, ಲೋಕಲ್, ಅಪ್ಪರ ಸಬಾರ್ಡಿನೇಟ್ ಸಿಬ್ಬಂದಿಯಲ್ಲಿ 1896ನೇ ಅಕ್ಟೋಬರ್ ಗುರ್ರೆ ಲಾಗಾಯತು ಈ ಕೆಳಗೆ ಕಂಡ ಬಡ್ತಿಯು ಮಾಡಲ್ಪಟ್ಟಿರುತ್ತೆ:—

ಡಿವಿಜನ್.	ಹೆಸರು.	ಹಾಲಿ ಗ್ರೇಡು.	ಬಡ್ತಿಯಾದ ಗ್ರೇಡು.	ಬಡ್ತಿ ಸ್ವಭಾವ.	ಷರಾ.
ಮೈಸೂರು.	ಕೆ. ನಾರಾಯಣರಾಯರು.	2ನೇ ಗ್ರೇಡ್ ಓವರ್‌ಸಿಯರ್.	1ನೇ ಗ್ರೇಡ್ ಓವರ್‌ಸಿಯರ್.	ಕಾಯಂ.	ಖಾಲಿಬಿದ್ದ ಕೆಲಸ ಭರ್ತಿ ಬಗ್ಯೆ.

ಹುಕುಂ ಬಮೋಜಿಬ್,
ಸಿ. ಬರ್ನ, ಕರ್ನಲ್,
ಮೈಸೂರ್ ಗವರ್ನಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರೆಟರಿ.

ಮೈಸೂರ ಖನಿಜ ಇಲಾಖಾ.

ಇಸ್ತಿಹಾರ್‌ನಾಮಾ.

ತಾರೀಖು 14ನೇ ಡಿಸೆಂಬರ್ 1896, ಮೊಕ್ಕಾಂ ಹೊಳಲ್ಕೆರೆ.

ನಂ. ಸಿ. 2, ಮೆಸ್ಟರ್ ಕಿರ್ಕೇಡ್ ಲೀಯವರು, ಮೈಸೂರ ಖನಿಜ ಇಲಾಖೆಯ ರೆಜಿಸ್ಟ್ರಾರ್‌ರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜಿಬ್,
ಆರ್. ಬ್ರೂಸ್ ಫುಟ್,
ಗವರ್ನಮೆಂಟ್ ಸೆಕ್ರೆಟರಿ.

737

ಮೈಸೂರ ಗೆಜೆಟ್.

ಸಂ. XXXI. ಸರ್ಕಾರದಿಂದ ಫ್ರಾಯಿಷ್ ಆದ್ದು. [ನಂ. 51.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 24, ಸ್ರ 1896.

IIನೇ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡ್ಡೋಣಾದ

ಇಸ್ತಿಹಾರ್ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್:	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ ಡಿಟ್ಟೋ	„ 170
1	ಮದ್ರಾಸ್ ಓಕ್ಸರವರ ಡಿಟ್ಟೋ	„ 250
1	ಡಿಟ್ಟೋ ಡಿಟ್ಟೋ ಡಿಟ್ಟೋ	„ 188
1	ಡಿಟ್ಟೋ ಬೋರ್ಯಾಮ್‌ರವರ ಡಿಟ್ಟೋ	„ 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಇನಾಂ ಇಲಾಖಾ.

ಇಸ್ತಿಹಾರ್.

ತಾರೀಖು 15ನೇ ಡಿಸೆಂಬರ್ 1896.

(ನಂಬರ್ 3.)

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಚನ್ನರಾಯಪಟ್ಣ ತಾಲ್ಲೂಕಿನಲ್ಲಿ ಇರತಕ್ಕ ಚಿಲ್ಲರೆ ಇನಾಂಗಳ ಬಾಬತು (856) ಫೈನಲ್ ಟೈಟಲ್ ಡೀಡ್‌ಯಾನೆ ಕಾಯಂ ಪಟ್ಟೆಗಳು ಹಾಸನ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್‌ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್‌ಗಳು ಬಂದಮೇಲೆ ಅವುಗಳನ್ನ ತೆಗೆದುಕೊಳ್ಳುವ ಬಗ್ಯೆ ಸದರೀ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರರು ಅಂಥಾ ನೋಟೀಸ್‌ಗಳನ್ನ ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರೀ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೆ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಮಿ|| ಅರ್ಜೀ ನಂಬರ್ 214.

ಮೃತಪಟ್ಟ ನಂಜಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ದೊಡ್ಡಬಳ್ಳಾಪುರದ ಕಸಬಾದಲ್ಲಿರುವ ನೀಲಕಂಠಪ್ಪ ಮೈನರ್, ಗಾರ್ಡಿಯನ್ ಇವನ ಚಿಕ್ಕಪ್ಪ ವೀರಪ್ಪ, ಮೃತಪಟ್ಟ ಸದರೀ ನಂಜಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಡಿಟೋ ಸ್ಥಳದ ನೀಲಕಂಠಪ್ಪ ಮೈನರ್, ಗಾರ್ಡಿಯನ್ ವೀರಪ್ಪ ಡಿಟೊ ಸ್ಥಳದ ವಾಸಸ್ಥರಾಗಿ ಮೃತಪಟ್ಟ ನಂಜಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಚಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೀರಪ್ಪನವರ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಡಿಸೆಂಬರ್ ತಿಂಗಳ 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1896—97ನೇ ಇಸವಿ ಮಿ|| ಅರ್ಜೆ ನಂಬರ್ 215.

ಮೃತಪಟ್ಟ ಅನಂತಾಚಾರ್ರು ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಬೆಂಗಳೂರು ಹಲಸೂರು ಪೇಟೇಲಿರುವ ರಾಜಮ್ಮನು, ಮೃತಪಟ್ಟ ಸದರೀ ಅನಂತಾಚಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಡಿಟೋ ಸ್ಥಳದ ರಾಜಮ್ಮನು, ಡಿಟೋ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಚೀಫ್ ಕೋರ್ಟ್ ಲೇಟ್ ಹೆಡ್ ಟ್ರಾನ್ಸ್‌ಲೇಟರ್ ಅನಂತಾಚಾರ್ರು ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಚಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ರಾಜಮ್ಮನ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅನಂತಾಚಾರ್ರು ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಡಿಸೆಂಬರ್ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರಸ್,
ಡಿಸ್ಟ್ರಿಕ್ಟ್ ಜಡ್ಜ್.

ಇಸ್ತಿಹಾರ್‌ನಾಮೆ.

ತಾರೀಖು 21ನೇ ಡಿಸೆಂಬರ್ 1896ನೇ ಇಸವಿ.

ಚರ್ಮಕ್ಕೆ ಹದ ಕೊಡತಕ್ಕ ಬಗ್ಯೆ ಉಪಯೋಗಿಸಲ್ಪಡುವ ತಂಗಡಿ ವಗೈರೆ ಚಕ್ಕೆಯನ್ನು ಸರಕಾರದ ಅಪ್ಪಣೆ ಸಿವಾಯಿ ಜಮಾಯಿಸಿಕೊಂಡು ವ್ಯಾಪಾರ ನಡಿಸುತ್ತಾ ಇದ್ದ ಒಬ್ಬ ಮನುಷ್ಯನ ಮೇಲೆ ಕ್ರಿಮಿನಲ್ ತರಫ್ ಪ್ರಾಸಿಕ್ಯೂಷನ್ ನಡಿಸಿ ಸಿಕ್ಷೆ ವಿಧಿಸಿದ ಮೊಕದ್ದಮೆಯಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕು ಚೆಂಡಿಗಾನಹಳ್ಳಿ ಗ್ರಾಮದ ದೊಡ್ಡೀಗವುಡನೆಂಬವನು ಸರಕಾರಕ್ಕೆ ಮಾಡಿದ ಮೆಹನತ್ತಿಗೋಸ್ಕರ ಫಾರೆಸ್ಟ್ ಕನ್‌ಸರ್ವೇಟರ್ ಯವರು ಸಿಫಾರ್ಸು ಮೇಲೆ ಗವರ್ನಮೆಂಟನವರು ಮೆಹರ್ಬಾನ್ ಮಾಡಿ ಸದರೀ ದೊಡ್ಡೀಗವುಡನಿಗೆ ಸ್ಪೆಷಲ್ ಕೇಸ್ ತರೀಕ 50 ರೂಪಾಯಿ ಇನಾಂ 1896ನೇ ಇಸವಿ ಸೆಪ್ಟಂಬರ್ 14ನೇ ತಾರೀಖಿನ 2907—8 ಫಾ. ಫೈ. 107—95ನೇ ನಂಬರ್ ಪ್ರೊಸಿಡಿಂಗ್ಸ್‌ನಲ್ಲಿ ಸ್ಯಾಂಕ್ಷನ್ ಮಾಡಿ ಇರುವ ಸಂಗತಿ ಸಕಲರ ತಿಳುವಳಿಕೆ ಬಗ್ಯೆ ಈ ಮೂಲಕ ಪ್ರಸಿದ್ಧಪಡಿಸಿಧೆ.

ಸಿ. ಅಪ್ಪಯ್ಯ,
ಫಾರ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್.

739

ಬೆಂಗಳೂರ್ ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ್.

ತಾರೀಖು 15ನೇ ಡಿಸೆಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರ್ ಸಿಟಿ ವೆಸ್ಟರ್ನ ಯಕ್ಸ್ ಟೆನ್ಷನ್ ಎಂಬ ಪ್ರದೇಶವು ಇತಃಪರ ಚಾಮರಾಜೇಂದ್ರ ಪೇಟೆಯೆಂದು ಕರೆಯಲ್ಪಡುತ್ತೆ.

2. ಚಾಮರಾಜೇಂದ್ರ ಪೇಟೆಯ ಮೇರೆಗಳು.

ಉತ್ತರಕ್ಕೆ—ಮೈಸೂರ್ ರೋಡ್ (ಹೊಸ ತರಗಿನಪೇಟೆಯಿಂದ ಪ್ರಾರಂಭಿಸಿ ಅಗ್ರಹಾರದ ಕೆರೇ ರೋಡ ಸೇರುವವರಿವಿಗೂ)

ಪೂರ್ವಕ್ಕೆ—ತರಗುಪೇಟೆ (ಆಲ್ಬರ್ಟ್ ವಿಕ್ಟರ್ ರೋಡ್ ವರೆವಿಗೂ) ಮತ್ತು ಅಲ್ಲಿಂದ ಫೋರ್ಟ್‌ಗ್ಲೇಸಿಸ್ ರೋಡ್.

ದಕ್ಷಿಣಕ್ಕೆ—ಚಾಮರಾಜೇಂದ್ರ ಪೇಟೆಯ 5ನೇ ಮೆಯಿನ್ ರೋಡ್.

ಪಶ್ಚಿಮಕ್ಕೆ—ಚಾಮರಾಜೇಂದ್ರ ಪೇಟೆಯ 9ನೇ ಕ್ರಾಸ್ ಸ್ಟ್ರೀಟ್ ಎಂಬ ಅಡ್ಡಬೀದಿ.

3. ಚಾಮರಾಜೇಂದ್ರ ಪೇಟೆಯಲ್ಲಿ ಪೂರ್ವ ಪಶ್ಚಿಮವಾಗಿ ಹೋಗುವ ಮತ್ತು ಉತ್ತರದಿಂದ ಪ್ರಾರಂಭವಾಗುವ ಆರು ಮೇಯಿನ್ ರೋಡುಗಳೆಂಬ ಮುಖ್ಯ ರಸ್ತೆಗಳು ಈ ಕೆಳಗೆ ನಮೂದಿಸಿರುವ ಹೆಸರುಗಳಿಂದ ಕರೆಯಲ್ಪಡುವವು.

1. ನಂಬರ್ 1ನೇ ಮೆಯಿನ್‌ರೋಡ್ (ಉತ್ತರಪಾರ್ಶ್ವ ಮೈಸೂರ್ ರೋಡಿನ ಪಕ್ಕದಲ್ಲಿ).
2. ಆಲ್ಬರ್ಟ್ ವಿಕ್ಟರ್ ರೋಡ್.
3. ನಂಬರ್ 2ನೇ ಮೆಯಿನ್ ರೋಡ್.
4. ನಂಬರ್ 3ನೇ ಮೆಯಿನ್ ರೋಡ್.
5. ನಂಬರ್ 4ನೇ ಮೆಯಿನ್ ರೋಡ್.
6. ನಂಬರ್ 5ನೇ ಮೆಯಿನ್ ರೋಡ್.

4. ಉತ್ತರದಿಂದ ದಕ್ಷಿಣಕ್ಕೆ ಹೋಗುವ ಒಂಭತ್ತು ಅಡ್ಡಬೀದಿಗಳು ಈ ಕೆಳಗೆ ನಮೂದಿಸಿರುವಂತೆ ಕರೆಯಲ್ಪಡುವವು.

ನಂಬರ್ 1ನೇ ಕ್ರಾಸ್ ಸ್ಟ್ರೀಟ್ (ಪೂರ್ವಪಾರ್ಶ್ವ ಫೋರ್ಟ್ ಗ್ಲೇಸಿಸ್ ರೋಡಿಗೆ ಬಾಜು.)

ನಂಬರ್ 2ನೇ ಕ್ರಾಸ್ ಸ್ಟ್ರೀಟ್.
ನಂಬರ್ 3ನೇ ಕ್ರಾಸ್ ಸ್ಟ್ರೀಟ್.
ನಂಬರ್ 4ನೇ ಕ್ರಾಸ್ ಸ್ಟ್ರೀಟ್.
ನಂಬರ್ 5ನೇ ಕ್ರಾಸ್ ಸ್ಟ್ರೀಟ್.
ನಂಬರ್ 6ನೇ ಕ್ರಾಸ್ ಸ್ಟ್ರೀಟ್.
ನಂಬರ್ 7ನೇ ಕ್ರಾಸ್ ಸ್ಟ್ರೀಟ್.
ನಂಬರ್ 8ನೇ ಕ್ರಾಸ್ ಸ್ಟ್ರೀಟ್.
ನಂಬರ್ 9ನೇ ಕ್ರಾಸ್ ಸ್ಟ್ರೀಟ್. (ಪಶ್ಚಿಮಪಾರ್ಶ್ವ ಅತ್ಯಂತ ಕೊನೆಯಲ್ಲಿ.)

5. ಚಾಮರಾಜೇಂದ್ರ ಪೇಟೆಯಿಂದ ಬ್ಯಾರಕ್ಸ್‌ಗೆ ಹೋಗುವ ರಸ್ತೆಯು ಸೂಲ್ತಾನ್ ರೋಡ್ ಎಂದು ಕರೆಯಲ್ಪಡುವುದು.

ಟಿ. ಟಿ. ಲೆನಾರ್ಡ್,
ಪ್ರೆಸಿಡೆಂಟ್.

ಕೋಲಾರ್ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 14ನೇ ಡಿಸೆಂಬರ್ 1896.

1. ಜೋಡಿ ಬಾಕಿದಾರರಾದ ಶ್ರೀನಿವಾಸಾಚಾರ್ ವಗೈರೇರಿಂದ ಬರಬೇಕಾದ ಜೋಡಿ ಬಾಕಿಗಾಗಿ ಇದರಡಿ ನಮೂದಾಗುವ ಫಾರ್‌ಫಿಟ್ಟಾದ ಸ್ಥಿರಸ್ವತ್ತು ಕೋಲಾರ್ ಡಿಸ್ಟ್ರಿಕ್ಟು ಗೋರೀಬಿದನೂರ್ ತಾಲ್ಲೂಕು ಅಮಲ್‌ದಾರ್ರ ಕಚೇರೀಲಿ 1897ನೇ ಜನವರಿ 30ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಜೋಡಿ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 254—14—6 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೇ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

740

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು, ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯುಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಅಂದಾಜು ಕಿಮ್ಮತ್ತು.	ಸ್ವತ್ತಿನ ತಪ್ಸೀಲ್. ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ. ಖಂ.	ವಿಸ್ತೀರ್ಣ. ಕು.	ಜಮೀನು. ಆಕಾರ. ರೂ.	ಆಕಾರ. ಆ.	ಆಕಾರ. ಪೈ.	ಸರಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗ್ಯೈರೆ ಸಹಿತವಾದ ಬಾಕಿ ಮೊಬಲಗು. ರೂ.	ಆ.	ಪೈ.
1	2	3	4	5	6	7	8	9		10			11		
					ರೂ. ಆ. ಪೈ.										
ಗೋರೀಬಿದನೂರು.	ಮಂಚೇನಹಳ್ಳಿ	ರಾಗಿಮಾಕಲಹಳ್ಳಿ ಜೋಡಿ ಗ್ರಾಮ	ಪ್ರಾಣನಾಥಾಚಾರ್ಯ, ವಗ ಶ್ರೀನಿವಾಸಾಚಾರ್ ವಗ್ಯೈರೇರು.	..		ಪೂರಾ ಗ್ರಾಮ	ಖುಷ್ಕಿ	4	$2\frac{3}{4}$	339	4	0	254	14	6
							ತರೀ	22	$19\frac{1}{2}$				ಬಡ್ಡಿ ಸಹಿತ ಬರಬೇಕು.		
							ಬಾಗಾಯತು	0	$5\frac{3}{8}$						
							ಪರಂಪೋಕು	0	$3\frac{5}{8}$						
								27	$11\frac{1}{4}$						
							ಸರ್ಕಾರಕ್ಕೆ ಸಾಲಿಯಾನಾ ಬರಬೇಕಾದ್ದು.			254	14	6			

* ಈ ಹರಾಜಿಗೆ ಭೋಗ್ಯ ವಗ್ಯೈರೆ ಜೋಡಿದಾರು ಮಾಡಿರುವದರಿಂದ ಯೇನೂ ಬಾಧಕವಾಗುವದಿಲ್ಲ.

ಯಂ. ಕೃಷ್ಣಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1896—97ನೇ ಇಸವಿ ಅರ್ಜೀ ನಂಬರ್ 211.

ಮೃತಪಟ್ಟ ಹಾಜಿ ಕಲಂದರ ಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಫಾತ್ಮಾಬೀರು, ಮೃತಪಟ್ಟ ಸದರೀ ಹಾಜಿ ಕಲಂದರ ಸಾಬರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಡಿಸ್ಟ್ರಿಕ್ಟು ಕ್ಲೋಸ್‌ಪೇಟೆ ಸ್ಥಳದ ಸದರೀ ಫಾತ್ಮಾಬೀರು, ಸದರೀ ವಾಸಸ್ಥರಾಗಿ ಮೃತಪಟ್ಟ ಹಾಜಿ ಕಲಂದರ ಸಾಬರ ಜಿಂದಗಿ ಬಗ್ಯಾಗಿ ಬರತಕ್ಕ 250 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಫಾತ್ಮಾಬೀರ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಾಜಿ ಕಲಂದರಸಾಬರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಅರ್ಜೀ ನಂಬರ್ 212.

ಮೃತಪಟ್ಟ ಯೇ. ಶ್ರೀನಿವಾಸಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಎ. ಕೃಷ್ಣಸ್ವಾಮಿ, 2ನೇ ತಿರುಮಲಸ್ವಾಮಿ ಮೈನರಗಳು ಗಾರ್ಡಿಯನ್ ಎ. ನರಸುಹ್ಮಯ್ಯಂಗಾರ್ರವರು, ಮೃತಪಟ್ಟ ಸದರೀ ಶ್ರೀನಿವಾಸಯ್ಯಂಗಾರ್ರಿಗೆ ಮೈನರ್ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ಸದರೀ ನರಸುಹ್ಮಯ್ಯಂಗಾರ್ರವರು, ಸದರೀ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 5,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನರಸುಹ್ಮಯ್ಯಂಗಾರ್ರವರ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896—97ನೇ ಇಸವಿ ಅರ್ಜೀ ನಂಬರ್ 213.

ಮೃತಪಟ್ಟ ಸ್ವತಂತ್ರಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಾಸಿರುದ್ರಸ್ವಾಮಿಗಳು, ಮೃತಪಟ್ಟ ಸದರೀ ಸ್ವತಂತ್ರಪ್ಪನವರಿಗೆ ಹಕ್ಕುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಬೆಟ್ಟದಪುರದ ಹೋಬಳಿ ಮದ್ದೂರು ಸ್ಥಳದ ಸದರೀ ಕಾಸಿರುದ್ರಸ್ವಾಮಿಗಳವರು ಸದರೀ ವಾಸಸ್ಥರಾಗಿ ಮೃತಪಟ್ಟ ಸ್ವತಂತ್ರಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೆ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಾಸಿರುದ್ರಸ್ವಾಮಿಗಳ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರಿಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಸ್ವತಂತ್ರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1896ನೇ ಇಸವಿ ನವಂಬರ್ ತಿಂಗಳ 27ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ

ಸನ್ 1896—97ನೇ ಇಸವಿ ಅರ್ಜೀ ನಂಬರ್ 227.

ಮೃತಪಟ್ಟ ರಾಮಸ್ವಾಮೈಯರ್ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶಿಂಗಮ್ಮಾಳ್, ವರದಮ್ಮಾಳ್‌ಯವರು ಮೃತಪಟ್ಟ ಸದರೀ ರಾಮಸ್ವಾಮೈಯರ್ ಯವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಶ್ರೀರಾಂಪ್ಯಾಟೆ ಸ್ಥಳದ ಸದರೀ ವರದಮ್ಮನವರು, ಸದರೀ ವಾಸಸ್ಥನಾಗಿ ಮೃತಪಟ್ಟ ರಾಮಸ್ವಾಮೈಯರ್‌ಯವರ ಜಿಂದಗಿ ಬಗ್ಯಾಗಿ ಬರತಕ್ಕ 1000 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವರದಮ್ಮಾಳ್‌ಯವರ ಅರ್ಜಿಯನ್ನು ಸನ್ 1897ನೇ ಇಸವಿ ಜನವರಿ ತಿಂಗಳ ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಸ್ವಾಮೈಯರ್‌ಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಇದೆ.

1896ನೇ ಇಸವಿ ಡಿಸೆಂಬರ್ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟು ಜಡ್ಜ್.

ಮೈಸೂರ್ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 3ನೇ ಡಿಸೆಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಲ್ಪಟ್ಟ ಬೆಂಕಿಯಿಂದ ತಡೆದ ಗವರ್ನಮೆಂಟ್ ಫಾರೆಸ್ಟ್ ವ ಪ್ಲಾಂಟೇಷನ್‌ಗಳು ಷಿಕಾರಿ ಮತ್ತು ಇತರ ಬ್ಯಾಟೆಗಳಿಗೆ 1897ನೇ ಇಸವಿ ಮೇ ಆಖೈರ್ ವರಿಗೆ ಬಂದ್ ಮಾಡಲ್ಪಟ್ಟಿರುತ್ತದೆ. ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರೀ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ಲಿಖಿತಮೂಲಕವಾದ ಹುಕುಂ ಪಡೆಯದೆ ಪ್ರವೇಶ ಮಾಡಕೂಡದು.

ತಾಲ್ಲೂಕು.	ಫಾರೆಸ್ಟ್ ವ ಪ್ಲಾಂಟೇಷನ್‌ಗಳ ಹೆಸರು.
ಹುಣಸೂರು ತಾಲ್ಲೂಕು	ವೀರನಹೊಸಹಳ್ಳಿ ಫಾರೆಸ್ಟ್
	ನಾಯಿಹಳ್ಳ ಸಂದಲ್ ಪ್ಲಾಂಟೇಷನ್
	ಗುರುಪುರ ಡಿಟೋ
	ಪಂಚವಳ್ಳಿ ಡಿಟೋ
	ದೊಡ್ಡಹರವೆ ಪ್ರೊಡಕ್ಷನ್ ಬ್ಲಾಕ್
	ಆನೇಚೌಕೂರು ಡಿಟೋ
	ವೀರನಹೊಸಹಳ್ಳಿ ಡಿಟೋ
ಹೆಗ್ಗಡದೇವನಕೋಟೆ ತಾಲ್ಲೂಕು	ಮೇಟಿಕುಪ್ಪೆ ಫಾರೆಸ್ಟ್
	ಕಾಕನಕೋಟೆ ಡಿಟೋ
	ಬೇಗೂರು ಡಿಟೋ
	ಐನೂರು ಮಾರೀಗುಡಿ ಡಿಟೋ
	ಕಾಕನಕೋಟೆ ಪ್ಲಾಂಟೇಷನ್
	ಮಾಸ್ತಿಗುಡಿ ಡಿಟೋ
	ಮಂಚಗವುಡನಹಳ್ಳಿ ಡಿಟೋ
	ಹಂಪಾಪುರ ಡಿಟೋ
ಗುಂಡ್ಲು ತಾಲ್ಲೂಕು	ಬೇರಂಬಾಡಿ ಫಾರೆಸ್ಟ್
	ಭಂಡಿಪುರ ಡಿಟೋ
	ಮದ್ದೂರು ಅಳಲೇ ಪ್ಲಾಂಟೇಷನ್
	ಹೊಂಗಹಳ್ಳಿ ಸಂದಲ್ ಪ್ಲಾಂಟೇಷನ್
ಚಾಮರಾಜನಗರದ ತಾಲ್ಲೂಕು	ಚಾಮರಾಜನಗರದ ಫಾರೆಸ್ಟ್

ತಾರೀಖು 30—11—96.

ಮೈಸೂರು ಡಿಸ್ಟ್ರಿಕ್ಟು ಗುಂಡ್ಲುರೇಂಜ್ ಸ್ಟೇಟ್ ಫಾರೆಸ್ಟುಗಳಲ್ಲಿ ಜಮಾಯಿಸಲ್ಪಟ್ಟಿರುವ ಸುಮಾರು 1,000 ಗಾಡಿ ಬೋಜಾ ವನುವಿನ ಗೊಬ್ಬರವನ್ನು ಈ ಕೆಳಗೆ ನಮೂದಿಸುವ ಸ್ಥಳಗಳು ಮತ್ತು ತಾರೀಖುಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಹರಾಜು ಮೂಲಕ ವಿಕ್ರಯಿಸುತ್ತಾರೆ.

ಫಾರೆಸ್ಟ್ ಹೆಸರು.	ಮೊತ್ತಾ ಸುಮಾರು.	ಹರಾಜು ನಡಿಯುವ ಸ್ಥಳ.	ತಾರೀಖು.
ಭಂಡಿಪುರ	250 ಗಾಡಿ ಬೋಜಾ	ಗುಂಡ್ಲುಪೇಟೆ	11—1—97
ಬೇರಂಬಾಡಿ	85 ಡಿಟೋ	ಡಿಟೋ	13—1—97
ಚಾಮರಾಜನಗರ	330 ಡಿಟೋ	ಚಾಮರಾಜನಗರ	17—1—97

ಷರತ್ತು.—1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ಕುಮಿನ 15229.—ಆರ್. ಎಫ್. 155.—92ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ಹರಾಜು ಕಾಲದಲ್ಲಿ ಓದಲ್ಪಡುತ್ತೆ.

ಟಿ. ಅಬ್ದುಲ್‌ಕರೀಂ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.
ಫಾರೆಸ್ಟು ಇಲಾಖಾ.
ನೋಟಿಫಿಕೇಷನ್.

ತಾರೀಖು 24ನೇ ನವಂಬರ್ 1896.

ಸನ್ 1890ನೇ ಇಸವಿ ಫಿಬ್ರುವರಿ ತಾರೀಖು 15ನೇ ಮೈಸೂರ್ ಗೆಜೆಟ್ 2ನೇ ಭಾಗದ ಪುಟದಲ್ಲಿ ಫಾಯಿಷ್ ಮಾಡಿರುವ ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ನೋಟಿಫಿಕೇಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಬೆಂಕಿಯಿಂದ ರಕ್ಷಿಸಲ್ಪಟ್ಟ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳನ್ನ 1897ನೇ ಇಸವಿ ಜನವರಿ 1ನೇ ತಾರೀಖು ಲಾಗಾಯತು ಮೇ ಆಖೈರ್ ವರಿಗೂ ಬಂದ್ ಮಾಡಲ್ಪಟ್ಟಿರುತ್ತೆ. ಅಂಬುಗಾರರಿಗೂ, ಷಿಕಾರಿಗಳಿಗೂ, ಪೇಟೆಗಾರರಿಗೂ ಸಹ ಲೈಸೆನ್ಸ್ ಕೊಡಲ್ಪಡುವದಿಲ್ಲ. ರೂಲ್ಸ್ ಅತಿಕ್ರಮಿಸಿ ಪ್ರವೇಶಿಸುವವರನ್ನ ಕ್ರಮವಾಗಿ ಸಿಕ್ಷಿಸಲ್ಪಡುತ್ತೆ.

ನಂಬರ್.	ಫಾರೆಸ್ಟುಗಳ ಹೆಸರು.	ತಾಲ್ಲೂಕುಗಳ ಹೆಸರು.
1	ಶಂಕರಗುಡ್ಡಾ, ಭೂತನಬೈಲ್ ಫಾರೆಸ್ಟ್	ಶಿವಮೊಗ್ಗಾ, ತೀರ್ಥಹಳ್ಳಿ
2	ಪುರದಾಳ	ಶಿವಮೊಗ್ಗಾ
3	ಕುಂಚೇನಹಳ್ಳಿ	ಡಿಟ್ಟೋ
4	ಅನುಪಿನಕಟ್ಟೆ ಪ್ಲಾಂಟೇಷನ್	ಡಿಟ್ಟೋ
5	ಸಕ್ರೆಬೈಲ್ ಫಾರೆಸ್ಟ್	ಡಿಟ್ಟೋ ತೀರ್ಥಹಳ್ಳಿ
6	ಡಿಟ್ಟೋ ಪ್ಲಾಂಟೇಷನ್	ಶಿವಮೊಗ್ಗಾ
7	ಚೋರನಡಿಹಳ್ಳಿ	ಡಿಟ್ಟೋ
8	ಆಯನೂರು ಪ್ಲಾಂಟೇಷನ್	ಡಿಟ್ಟೋ
9	ಆಲಕೊಳ ಡಿಟ್ಟೋ	ಡಿಟ್ಟೋ
10	ಕರ್ಲಕೊಪ್ಪ ಸಂದಲ್ ಪ್ಲಾಂಟೇಷನ್	ಡಿಟ್ಟೋ
11	ಉಂಬಳಿ ಬೈಲ್ ಹುಣಸೆಕಟ್ಟೆ	ಡಿಟ್ಟೋ
12	ಆಲದಹಾರ	ಡಿಟ್ಟೋ
13	ಕುಂಶಿ	ಡಿಟ್ಟೋ
14	ಮಸರೂರು	ನಗರ
15	ಕಾಕ್ಕವಾಡಾ ಉಬ್ರಾಣಿ	ಶಿವಮೊಗ್ಗಾ, ಚನ್ನಗಿರಿ, ತರೀಕೆರೆ
16	ಚನ್ನಗಿರಿ ಪ್ಲಾಂಟೇಷನ್	ಚನ್ನಗಿರಿ
17	ತೆಲಗಡ್ಡೆ, ಅರತೆಲಗಡ್ಡೆ	ಸೊರಬ
18	ಬೆಟ್ಟದಕುರ್ಲಿ	ಡಿಟ್ಟೋ
19	ಸಿದ್ದೇಹಳ್ಳಿ ಪ್ಲಾಂಟೇಷನ್	ಡಿಟ್ಟೋ
20	ಹಳೆಸೊರಬ ಡಿಟ್ಟೋ	ಡಿಟ್ಟೋ
21	ಚಂದ್ರಗುತ್ತಿ	ಡಿಟ್ಟೋ
22	ಕವಡಿ	ಡಿಟ್ಟೋ
23	ಕವಲಿ	ಶಿಕಾರಿಪುರ
24	ತೊಗರಶಿ	ಡಿಟ್ಟೋ
25	ಬಸವನಂದಿಹಳ್ಳಿ	ಡಿಟ್ಟೋ
26	ಕಾಳೇನಹಳ್ಳಿ ಪ್ಲಾಂಟೇಷನ್	ಡಿಟ್ಟೋ
27	ಗಂಗವನಸರ ಸ್ಟೇಟ್ ಫಾರೆಸ್ಟ್ ಮತ್ತು ಹಾರೋಗೊಪ್ಪ ಯೆರೆ ಕಟ್ಟೆ ಕಾಪಿನ ಜಾಗಾ	ಡಿಟ್ಟೋ ಹೊನ್ನಾಳಿ
28	ಕರಡಿಬೆಟ್ಟ	ಡಿಟ್ಟೋ ಶಿವಮೊಗ್ಗಾ
29	ಚಂದ್ರಕಲ	ಸಿಕಾರಿಪುರ
30	ಬೆಳಂದೂರು	ಡಿಟ್ಟೋ
31	ಮಲಂದೂರು	ಸಾಗರ
32	ಮಲೆಬೆನ್ನೂರು	ಹೊನ್ನಾಳಿ, ದಾವಣಗೆರೆ

ಸಿ. ನಾರಾಯಣರಾವ್,
ಡೆಪ್ಯುಟಿ ಕನ್ಸರ್ವೇಟರ್.

ಚಿತ್ರದುರ್ಗ ಡಿಸ್ಟ್ರಿಕ್ಟು ಫಾರೆಸ್ಟು ಇಲಾಖಾ.
ಇಸ್ತಿಹಾರ್‌ನಾಮೆ.

ತಾರೀಖು 1ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನ್‌ನಲ್ಲಿ ಕಂಡ ತಾಲ್ಲೂಕು ಖಜಾನೆಗಳಲ್ಲಿ ಸಂದಲ್ ತುಕಡಾಗಳು ಸ್ವಂತ ಉಪಯೋಗಕ್ಕೋಸ್ಕರ ಚಿಲ್ಲರೆಯಾಗಿ ಬಿಕರಿ ಮಾಡಲ್ಪಡುತ್ತೆ. ಇಷ್ಟವುಳ್ಳವರು ಕ್ರಯಕ್ಕೆ ಪಡಿಯಬಹುದು.

ದಾವಣಗೆರೆ, ಹೊಳಲಕೆರೆ, ಚಿತ್ರದುರ್ಗ.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್.

ತಾರೀಖು 8ನೇ ಡಿಸೆಂಬರ್ 1896.

ಇದರಿಂದ ಡಿಸ್ಟ್ರಿಕ್ಟಿ ಮುಳೆ ಇರುವ ತಮಾಂ ತಾಲ್ಲೂಕು ಪೋಲೀಸಿನವರು ಮತ್ತು ಗ್ರಾಮ ನೌಕರರಿಗೂ ತಿಳಿಯಪಡಿಸುವದೇನಂದರೆ,—ಮಾರ್ಜಿನ್‌ನಲ್ಲಿ ನಮೂದಿಸುವ ತಾಲ್ಲೂಕುಗಳಲ್ಲಿರುವ ತಂಗಡಿ ಚಕ್ಕೆ ಜಮಾವಣೆ ಹಕ್ಕನ್ನು 1896ನೇ ನವಂಬರ್ ಗುರ್‍ರೇ ಲಾಗಾಯುತು 1897ನೇ ಜೂನ್ ಆಖೈರ್ ವರಿವಿಗೆ ಹರಾಜು ಮಾಡಲ್ಪಟ್ಟಿದೆ. ಬಾಕಿ ತಾಲ್ಲೂಕುಗಳಲ್ಲಿ ತಂಗಡಿಚಕ್ಕೆ ಜಮಾಯಿಸಲು ಲೈಸೆನ್ಸ್ ಕೊಡುವದನ್ನು ಮನ್ನಾ ಮಾಡಿರುತ್ತೆ. ಮನ್ನಾ ಮಾಡಿರತಕ್ಕ ತಾಲ್ಲೂಕುಗಳ ಗ್ರಾಮದ ಸರಹದ್ದಿನಲ್ಲಿ ಸರ್ಕಾರಿ ಬಂಜರ್ ಜಮೀನಿನಲ್ಲಿ ಯಾರೂ ತಂಗಡಿಚಕ್ಕೆ ಜಮಾಯಿಸಕೂಡದು. ಹಾಗೆ ಜಮಾಯಿಸಿದಲ್ಲಿ ಕಳುವಿನಿಂದ ಜಮಾಯಿಸಿದಂತೆ ಭಾವಿಸಿ ಪೋಲೀಸಿನವರು ಮತ್ತು ಗ್ರಾಮ ನೌಕರರು ಕ್ರಮವಾಗಿ ತಾಲ್ಲೂಕು ಮ್ಯಾಜಿಸ್ಟ್ರೇಟರಲ್ಲಿ ಪ್ರಾಸಿಕ್ಯೂಷನ್ ಮಾಡಬೇಕು. ಇಂಥಾ ಮೊಕದ್ದಮೆ ಪತ್ತೇಮಾಡಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಿದಲ್ಲಿ ಅಂಥಾ ಪತ್ತೇ ತರದೂದು ನಡಿಸಿದವರಿಗೆ ಮುನಾಸಬ್ ಇನಾಂ ಕೊಡಲು ಸಿಫಾರಸ್ ಮಾಡಲಾಗುತ್ತೆ.

ಹೊಳಲಕೆರೆ,—ದಾವಣಗೆರೆ.
ಜಗಲೂರು,—ಮೊಳಕಾಲ್ಮುರು.

ಎಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ನೋಟಿಸ್.

ತಾರೀಖು 17ನೇ ಡಿಸೆಂಬರ್ 1896.

ಚಿತ್ರದುರ್ಗದ ಡಿಸ್ಟ್ರಿಕ್ಟು ದಾವಣಗೆರೆ ಮತ್ತು ಹರಿಹರದ ಹಿಂದೂಸ್ತಾನಿ ಸರ್ಕಾರಿ ಗಂಡು ಹುಡುಗರ ಪಾಠಶಾಲೆಗಳಲ್ಲಿ ಮಾಹೆಯಾನಾ ಏಳು ರೂಪಾಯಿ ತಲಬಿನ ಮೇಲೆ ಮುನ್ಷಿ ಕೆಲಸವು ಖಾಲಿ ಇರುತ್ತೆ. ಕನ್ನಡ ಮತ್ತು ಹಿಂದೂಸ್ತಾನಿ ಭಾಷೆಗಳಲ್ಲಿ ಪರಿಶ್ರಮ ಉಳ್ಳವರು ಬೇಕಾಗಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟು ಮೊಳಕಾಲ್ಮೂರು ತಾಲ್ಲೂಕು ಕೋನಸಾಗರದಲ್ಲಿ ಮಾಹೆಯಾನಾ ಎಂಟು ರೂಪಾಯಿ ತಲಬುಳ್ಳ ಬೇಗಾರಿ (ಮಾದಿಗ) ಸ್ಕೂಲ್ ಉಪಾಧ್ಯಾಯ ಕೆಲಸ ಖಾಲಿ ಇರುತ್ತೆ.

ದರಖಾಸ್ತುದಾರರು ಕನ್ನಡದಲ್ಲಿ ಅಥವಾ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಲೋವರ್ ಸೆಕಂಡರಿ ಪರೀಕ್ಷೆ ಕೊಟ್ಟವರಾಗಿಯೂ ಮತ್ತು ಇಪ್ಪತ್ತೈದು ವರ್ಷ ವಯಸ್ಸಿಗೆ ಮೀರದವರಾಗಿಯೂ ಇರಬೇಕು. ದರಖಾಸ್ತುಗಳು ಈ ಕೆಳಗೆ ರುಜು ಮಾಡಿರತಕ್ಕವರ ಆಫೀಸಿಗೆ 1897ನೇ ಜನವರಿ ಆಖೈರ್ ಒಳಗಾಗಿ ತಲಪಬೇಕು.

ಕೆ. ರಂಗಪ್ಪ, ಚಿತ್ರದುರ್ಗದ ಡಿ|| ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರ್.

ಪ್ರಕಟನೆ.

ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಗೆ ಸಂಬಂಧಪಟ್ಟ ಈ ಕೆಳಗೆ ನಮೂದಿಸಿರುವ ಪುಸ್ತಕಗಳು ಬೆಂಗಳೂರು ಗವರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ.

	ರೂ. ಆ. ಪೈ.
ನಂ. 1. ಆಪಸ್ತಂಭ ಗೃಹ್ಯಸೂತ್ರ	1–12—0
ನಂ. 2. ಆಪಸ್ತಂಭ ಪರಿಭಾಷಾಸೂತ್ರ	1—0—0
ನಂ. 3. ಮಾಧವಾಚಾರ್ಯ ಕೃತ ಧಾತುವೃತ್ತಿ. 2ನೇ ಸಂಪುಟದ 1ನೇ ಭಾಗ ..	2—0—0
ನಂ. 4. ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 1ನೇ ಸಂಪುಟ ..	2—8—0
ನಂ. 5. ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 2ನೇ ಸಂಪುಟ ..	2—8—0
ನಂ. 6. ಶ್ರೀಶಂಕರಾಚಾರ್ಯ ವಿರಚಿತ ದಕ್ಷಿಣಾಮೂರ್ತಿಸ್ತೋತ್ರ ..	1—4—0
ನಂ. 7. ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 3ನೇ ಸಂಪುಟ ..	3—0—0
ನಂ. 8. ಭಗವದ್ಗೀತ	2–12—0
ನಂ. 11. ಸೌಂದರ್ಯಲಹರಿ	1—8—0

ತಾರೀಖು 7ನೇ ಡಿಸೆಂಬರ್ 1896ನೇ ಇಸವಿ }
ಬೆಂಗಳೂರು. }

ನೋಟಿಸ್.

ಈ ಕೆಳಗೆ ನಮೂದಿಸಿರುವ ಪುಸ್ತಕವು ಬೆಂಗಳೂರು ಗವರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರಿಯುತ್ತದೆ.

1897ನೇ ಇಸವಿಯ ಸಂಸ್ಕೃತ ಲೋವರ್ ಸೆಕಂಡರಿ ಟೆಕಸ್ಟ್ ಬುಕ್ಕು. ಕ್ರಯ 2 ಆಣೆ.

ಎಸ್. ಅಬ್ದುಲ್ ಹೈ,
ಕ್ಯೂರೇಟರ್.

ನೋಟಿಸ್.

ಜನಗಳ ಉಪಯೋಗಕ್ಕೋಸ್ಕರ ನೇತ್ರಗಳಿಗೆ ಅನುಷಧಿ ಹಾಕತಕ್ಕ ಒಂದು ಸರ್ಕಾರದ ವೈದ್ಯಶಾಲೆಯು ಬೆಂಗಳೂರು ತಾಲ್ಲೂಕು ಕಚೇರಿ ರೋಡಿನಲ್ಲಿ ಸ್ಥಾಪಿಸಲ್ಪಟ್ಟಿರುತ್ತೆ. ಧರ್ಮಾರ್ಥವಾಗಿ, ಅಸಿಸ್ಟೆಂಟ್ ಸರ್ಜನ್ ಎಸ್. ವಿ. ರಾಮಸ್ವಾಮಿ ಅಯ್ಯಂಗಾರ್ರವರು, ನೇತ್ರ ರೋಗದಿಂದ ಪೀಡಿತರಾದವರನ್ನು ಪ್ರತಿ ದಿನವೂ ಬೆಳಗ್ಗೆ 7 ಘಂಟೆ ಲಾಗಾಯತು 11 ಘಂಟೆ ವರಿವಿಗು ಚಿಕಿತ್ಸೆ ಮಾಡುವರು.

ಪಿ. ಎಚ್. ಬೆನ್ಸನ್, ಎಂ. ಬಿ.,
ಸೀನಿಯರ್ ಸರ್ಜನ್ ಯಾ ಸ್ಯಾನಿಟೇರಿ ಕಮಿಷನರ್,
ಮೈಸೂರ್ ಗವರ್ನಮೆಂಟ್.

ನೋಟೀಸ.

ಈ ಕೆಳಗೆ ಕಂಡ ಸ್ಟೇಷನ್‌ಗಳಲ್ಲಿ ಇರತಕ್ಕ ಗೌರ್ನಮೆಂಟ ಹಾರನೀಸ್ ಕುದುರೆಗಳಿಗೂ ಮತ್ತು ಟ್ರಾನ್ಸ ಪೋರ್ಟಪೋನಿ ವಗೈರೆಗೆ ಬೇಕಾಗುವ ಹುರಳಿಯನ್ನು ಇದರ ಕೆಳಗೆ ವಿವರಿಸಿರುತ್ತೆ.

ಬೆಂಗಳೂರು, ಮೈಸೂರಿಗೆ 1897ನೇ ಇಸವಿ ಏಪ್ರೇಲ್ ಗುರ್ರೆ ಲಾಗಾಯಿತು 1898ನೇ ಇಸವಿ ಮಾರ್ಚಿ ಆಖೈರ್‌ವರಿವಿಗೂ, ಕುಣಿಗಲಿಗೆ 1897ನೇ ಇಸವಿ ಜನವರಿ 15ನೇ ತಾರೀಖು ಲಾಗಾಯಿತು 1898ನೇ ಇಸವಿ ಜನವರಿ 14ನೇ ತಾರೀಖುವರಿವಿಗೂ, ಈ ಮೇರಿಗೆ ಸರಬರಾಯಿ ಮಾಡತಕ್ಕ ಕಂಟ್ರಾಕ್ಟಿಗೋಸ್ಕರ ಬರುವ ಶೀಲ್ ಮಾಡಲ್ಪಟ್ಟ ಟೆಂಡರುಗಳನ್ನ ೧೮೯೭ನೇ ಇಸವಿ ಜನವರಿ ೬ನೇ ತಾರೀಖು ಬುಧವಾರ ಹಗಲು 2 ಘಂಟೆಗಳವರಿವಿಗೂ, ಬೆಂಗಳೂರಲ್ಲಿ ಮಿಲಿಟರಿ ಸೆಕ್ರೆಟೆರಿ ಸಾಹೇಬರವರ ಆಫೀಸಿಗೆ ಬರಮಾಡಿಕೊಳ್ಳಲ್ಪಡುತ್ತಯಾಗಿ ದರಖಾಸ್ತುದಾರರು ತಮ್ಮ ತಮ್ಮ ದರಖಾಸ್ತಿನಲ್ಲಿ ಹುರಳಿಯನ್ನು ರೂಪಾಯಿ 1ಕ್ಕೆ ( ) ಇಷ್ಟು ಶೇರುಗಳಪ್ರಕಾರ ಕೊಡುತ್ತೇವೆಂದು ಬರೆಯಬೇಕು. ಮತ್ತು ಖಾತರಿ ಬಗ್ಗೆ ದರಖಾಸ್ತುಗಳ ಸಂಗಡ 100 ಒಂದು ನೂರು ರೂಪಾಯಿಗಳನ್ನ ಹಾಜರ್‌ಮಾಡಬೇಕು.

ಮಂಜೂರಾದ ದರಖಾಸ್ತುದಾರರು ಜಾಮೀನಿ ಬಗ್ಗೆ ಬೆಂಗಳೂರು, 500 ರೂ. ಮೈಸೂರ್, 500 ರೂ. ಕುಣಿಗಲ್, 1,000 ರೂ. ಈ ಪ್ರಕಾರ ಡಿಪಾಜಿಟ ಇಡಬೇಕು.

ರೋಜೀನಾ ಬೇಕಾಗುವಷ್ಟು ಹುರಳಿಯನ್ನು ಆಯಾಯ ಇನ್‌ಛಾರ್ಜ್ ಆಫೀಸರ್ರ ವಶಕ್ಕೆ ಆಯಾಯ ಸ್ಟೇಷನ್‌ನಲ್ಲಿ ಕೊಟ್ಟು ಅವರಿಂದ ರಶೀದಿ ಪಡಿಯಬೇಕು.

ಡಿಟ್ಟೋ ರಶೀದಿಗಳ ಪ್ರಕಾರ ತಿಂಗಳಿಗೆ ಒಂದು ದಫಾ ಬಿಲ್ ಅವರಲ್ಲಿ ಹಾಜರ್‌ಮಾಡಿದಲ್ಲಿ ಮೊಬಲಗು ಪಾವತಿ ಮಾಡುತ್ತಾರೆ.

ಮೇಲ್ಕಂಡ ಪ್ರಕಾರ ಸರಿಯಾಗಿ ಸರಬರಾಯಿ ಮಾಡದೆ ತಪ್ಪಿದಲ್ಲಿ ಆ ಕೂಡ್ಲೆ ಡಿಟ್ಟೋ. ಕಂಟ್ರಾಕ್ಟ ರದ್ದುಮಾಡಿ ಡಿಪಾಜಿಟ ಮೊಬಲಗು ಸರಕಾರಕ್ಕೆ ದಾಖಲ್‌ಮಾಡಲ್ಪಟ್ಟೀತು.

ಮೇಲ್ಕಂಡ ಪ್ರಕಾರ ಮೂರು ಸ್ಟೇಷನ್‌ಗಳಿಗೂ ಸೇರಿ ಆಗಲಿ ಅಥವಾ ಪ್ರತ್ಯೇಕ ಪ್ರತ್ಯೇಕವಾಗಿಯೇ ಆಗಲಿ ದರಖಾಸ್ತುಗಳು ಕಳುಹಿಸಬಹುದು.

ಈ ಬಾಬತು ಟೆಂಡರುಗಳನ್ನು ಯಾವ ಕಾರಣವನ್ನು ಹೇಳದೆ ಅಂಗೀಕರಿಸುವ ಅಥವಾ ನಿರಾಕರಿಸುವವ ಸ್ವಾತಂತ್ರ್ಯವನ್ನು ಮಿಲಟರಿ ಸೆಕ್ರೆಟೆರಿ ಸಾಹೇಬರವರು ವಹಿಸಿಕೊಂಡಿರುತ್ತಾರೆ.

ಸಾಲು 1ಕ್ಕೆ ಸುಮಾರು ಬೇಕಾಗುವ ಹುರಳಿ.

ಬೆಂಗಳೂರು	..	..	1,00,000 ಸೇರುಗಳು.
ಮೈಸೂರು	..	..	80,000 ಡಿಟ್ಟೋ.
ಕುಣಿಗಲ್	..	..	3,20,000 ಡಿಟ್ಟೋ.

ಮಿಲಿಟರಿ ಸೆಕ್ರೆಟೆರಿ ಆಫೀಸ್,
ತಾರೀಖು 18ನೇ ಮಾಹೆ ಡಿಸೆಂಬರ್,
1896ನೇ ಇಸವಿ ಮೊಕ್ಕಾಂ ಬೆಂಗಳೂರ್.

ಹೆಚ್. ಡ್ರಾ,
ಅಸಿಸ್ಟೆಂಟ ಸೆಕ್ರೆಟೆರಿ.

ಚಿತ್ರದುರ್ಗದ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 17ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1878ನೇ ಇಸವಿ ಜೂನ್ ತಾರೀಖು 3ನೇ ಫಾರೆಸ್ಟು ರೂಲ್ಸು 13ನೇ ಸೆಕ್ಷನ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣಿಸಿ ಇರುವ ಸ್ಟೇಟ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳು ಫಯರ್‌ಪ್ರೊಟೆಕ್ಷನ್ ಮಾಡುವದರಿಂದ 1897ನೇ ಇಸವಿ ಜನವರಿ 1ರ ಲಾಗಾಯಿತು ಜೂನ್ ಆಖೈರ್‌ವರಿಗೆ ಶಿಕಾರಿ ಮಾಡುವವರಿಗೆ ಜಂಗಲ್ ಪ್ರವೇಶ ಮನ್ನಾಮಾಡಿರುತ್ತೆ. ರೂಲ್ಸು ಅತಿಕ್ರಮಿಸಿ ಪ್ರವೇಶಿಸುವವರನ್ನು ಕ್ರಮವಾಗಿ ಪ್ರಾಶಿಕ್ಯೂಟ ಮಾಡಲ್ಪಡುತ್ತೆ.

1 ಜೋಗಿಮಟ್ಟಿ ಸ್ಟೇಟ ಫಾರೆಸ್ಟು.
2 ನೀರಥಡಿ ಸ್ಟೇಟ ಫಾರೆಸ್ಟು ಮತ್ತು ಪ್ಲಾಂಟೇಷನ್.
3 ಮಲೆಬೆನ್ನೂರು ಸ್ಟೇಟ ಫಾರೆಸ್ಟು.
4 ನೇರಲಗುಂದಿ ಪ್ಲಾಂಟೇಷನ್.

ಕೆ. ಶ್ಯಾಮೈಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ.

ಮೈಸೂರ ಗೆಜೆಟ್.

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 24, ಸನ್ 1896.

IIIನೇ ಭಾಗ.

ಮೈಸೂರ ಗವರ್ನಮೆಂಟ್ ಲೆಜಿಸ್ಲೇಟಿವ್ ಇಲಾಖಾ.

1896ನೇ ಇಸವಿಯ IIIನೇ ನಂಬರ್ ರೆಗ್ಯುಲೇಷನ್.

(1896ನೇ ಇಸವಿ ನವಂಬರ ತಾರೀಖು 5ನೇ ದಿನ ಮಂಜೂರಾದ್ದು.)

A Regulation to amend the Indian Limitation Act XV of 1877 as extended to Mysore by the Governor-General's Notification No. 174 J., dated 26th October 1877, and as amended by Act XII of 1879 as introduced into Mysore by the Government of India Notification No. 320, dated 19th November 1879.

1877ನೇ ಇಸವಿ ಅಕ್ಟೋಬರ್ 26ನೇ ಮರ್ಕೂಂ 174 J. ನಂಬರ್ ಗವರ್ನರ ಜನರಲ್‌ರವರ ಇಸ್ತಿಹಾರ್ ಪ್ರಕಾರ ಮೈಸೂರ್ ಶೀಮೆಯಲ್ಲಿ ಜಾರೀಗೆ ಬಂದು 1879ನೇ ಇಸವಿ ನವಂಬರ್ 19ನೇ ಮರ್ಕೂಂ 320ನೇ ನಂಬರ್ ಇಂಡಿಯಾ ಗವರ್ನಮೆಂಟಿನವರ ಇಸ್ತಿಹಾರ್ ಮೇರೆ ಮೈಸೂರ್ ಶೀಮೆಗೆ ತರಲ್ಪಟ್ಟ 1879ನೇ ಇಸವಿಯ XIIನೇ ನಂಬರ್ ಆಕ್ಟಿನಿಂದ ತಿದ್ದುಪಾಟಾದ 1877ನೇ ಇಸವಿಯ XVನೇ ನಂಬರ್ ಇಂಡಿಯನ್ ಲಿಮಿಟೇಷನ್ ಆಕ್ಟನ್ನು ತಿದ್ದುಪಡಿ ಮಾಡಲು ಹುಟ್ಟಿದ ರೆಗ್ಯುಲೇಷನ್.

ಮೈಸೂರ್ ಶೀಮೆಯಲ್ಲಿ ಜಾರಿಯಲ್ಲಿ ಇರುವಂತೆ ಇಂಡಿಯನ್ ಲಿಮಿಟೇಷನ್ ಆಕ್ಟು (1877ನೇ ಇಸವಿಯ XVನೇ ನಂಬರ್ ಆಕ್ಟು) ನ್ನು ತಿದ್ದುಪಡಿ ಮಾಡೋಣ ಯುಕ್ತವಾದುದರಿಂದ ಘನವನ್ನೈದಿದ ಶ್ರೀಮನ್ ಮಹಾರಾಣಿ ರೀಜಂಟರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೆ:—

1. ಸದರೀ ಆಕ್ಟಿನಲ್ಲೆಲ್ಲಾ "ಬ್ರಿಟಿಷ್ ಇಂಡಿಯಾ" ಎಂಬ ಶಬ್ದಗಳಿಗೆ ಬದಲಾಗಿ "ಮೈಸೂರ್ ಶೀಮೆ" ಎಂತಲೂ "ಹೈ ಕೋರ್ಟ್" ಎಂಬ ಮಾತುಗಳಿಗೆ ಬದಲಾಗಿ "ಚೀಫ್ ಕೋರ್ಟ್" ಎಂತಲೂ ಓದಿಕೊಳ್ಳತಕ್ಕದ್ದು.

747

2. 1ನೇ ಪ್ರಕರಣವಲ್ಲಿ "ಪರಂತು" ಎಂಬ ಮಾತಿನಿಂದ "ಲಾಗೂ ಆಗುವದಿಲ್ಲ" ಎಂಬ ಮಾತುಗಳ ವರಿಗಿನ ಮಾತುಗಳನ್ನು ಬಿಟ್ಟು ಬಿಟ್ಟು "1877ನೇ ಇಸವಿ ಅಕ್ಟೋಬರ್" ಎಂಬುವದಕ್ಕೆ ಬದಲಾಗಿ "1878ನೇ ಇಸವಿ ಜನವರಿ" ಎಂದು ಓದಿಕೊಳ್ಳತಕ್ಕದ್ದು.

3. 2ನೇ ಪ್ರಕರಣದಲ್ಲಿ 1ನೇ ಕಲಮನ್ನೂ, 2ನೇ ಕಲಮಿನಲ್ಲಿ "ಆದರೆ" ಎಂಬ ಮಾತನ್ನೂ 3ನೇ ಕಲಮನ್ನು ಸಹ ಬಿಟ್ಟು ಬಿಡತಕ್ಕದ್ದು.

4. 5ನೇ ಪ್ರಕರಣಾನಂತರ ಇದರಡಿ ಕಂಡ ಪ್ರಕರಣವನ್ನು ಶೇರಿಸಿ ಕೊಳ್ಳತಕ್ಕದ್ದು:—

"5A. ಚೀಫ್ ಕೋರ್ಟಿನ ಯಾವದಾದರೂ ಹುಕುಂ ಅಥವಾ ಆಚರಣೆ ಅಥವಾ ತೀರ್ಪಿನಿಂದ ಅಪೀ ಲ್ಯಾಂಟಿಯು ಅಥವಾ ಅರ್ಜೀದಾರನು ದಾರೀ ತಪ್ಪಿದ್ದರಿಂದ ಅಂತಾ ಅಪೀಲ್ ಅಥವಾ ಅರ್ಜೀಗೆ ವಿಧಾಯಕವಾಗಿ ರುವ ಕಾಲ ನಿಬಂಧನೆಯ ಪರಿಮಾಣ ಕಳದು ಹೋದ ತರುವಾಯ ಜಡ್ಜಿಮೆಂಟಿನ ಪುನರ್ವಿಮರ್ಶೆ ಬಗ್ಯಾಗಿ ಒಂದು ಅಪೀಲ್ ಅಥವಾ ಅರ್ಜಿಯು ದಾಖಲ್ಮಾಡಲ್ಪಟ್ಟಿರುತ್ತದೆಂದು ಕೋರ್ಟಿನವರಿಗೆ ತೃಪ್ತಿಯಾಗುವಂತೆ ತೋ ರಿಸಿ ಕೊಡಲ್ಪಟ್ಟಾಗ, ಅಂತಾ ಅಪೀಲ್ ಅಥವಾ ಅರ್ಜಿಯು, ಇತರತಃ ಕಾನೂಗೆ ಅನುಸಾರವಾಗಿದ್ದಲ್ಲಿ, ಆಬ ಗ್ಯಾಗಿ ವಿಧಿಸಲ್ಪಟ್ಟಿರುವ ಕಾಲ ನಿಬಂಧನೆಯ ಪರಿಮಾಣದೊಳಗೇನೆ ಹಾಜರ್ಮಾಡಲ್ಪಟ್ಟಂತೆ ಯೆಲ್ಲಾ ಕೋರ್ಟುಗ ಳಿಂದಲೂ ಯೆಲ್ಲಾ ಉದ್ದೇಶಗಳಿಗೋಸ್ಕರವಾಗಿಯೂ ಭಾವಿಸಲ್ಪಡತಕ್ಕದ್ದು."

5. Iನೇ ಷೆಡ್ಯೂಲನ್ನು ಬಿಟ್ಟು ಬಿಡತಕ್ಕದ್ದು.

6. IIನೇ ಷೆಡ್ಯೂಲಿನ 1, 4, 45 ಮತ್ತು 46ನೇ ನಿಬಂಧನೆಗಳನ್ನು ಬಿಟ್ಟು ಬಿಡತಕ್ಕದ್ದು.

7. 7ನೇ ನಿಬಂಧನೆಯ 1ನೇ ರಿಕಾನೆಯಲ್ಲಿ "ಈ ಷೆಡ್ಯೂಲಿನ 4ನೇ ನಂಬರಿನಿಂದ ನಿಬಂಧನೆಯಾಗದ" ಎಂಬ ಮಾತುಗಳನ್ನು ಬಿಟ್ಟು ಬಿಡತಕ್ಕದ್ದು.

8. 12ನೇ ನಿಬಂಧನೆಯ (b) ಕಲಂನಲ್ಲಿ "ಕಲೆಕ್ಟರ್" ಎಂಬ ಮಾತಿಗೆ ಬದಲು "ಡೆಪ್ಯುಟಿ ಕಮಿಷ ನರ್" ಎಂದು ಓದಿಕೊಳ್ಳತಕ್ಕದ್ದು.

9. 20ನೇ ನಿಬಂಧನೆಯ 1ನೇ ರಿಕಾನೆಯಲ್ಲಿರುವದಕ್ಕೆ ಬದಲಾಗಿ "ಮೃತಪಟ್ಟ ಒಬ್ಬ ಮನುಷ್ಯನಿಗೆ ನಡಿಸಲ್ಪಟ್ಟ ಅನ್ಯಾಯಗಳ ವಿಚಾರವಾಗಿ ದಾವೇ ಮಾಡುವದಕ್ಕೂ, ಮಾಡಲ್ಪಡುವದಕ್ಕೂ ಎಗ್ಜಿಕ್ಯೂಟರಗಳು, ಅಡ್ಮಿನಿಸ್ಟ್ರೇಟರಗಳು ಪ್ರತಿನಿಧಿಗಳನ್ನು ಸಹ ಸಮರ್ಥಗೊಳಿಸುವಂತಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವ ದಾದರೂ ಕಾನೂ ಪ್ರಕಾರ ಎಗ್ಜಿಕ್ಯೂಟರಗಳಿಂದ, ಅಡ್ಮಿನಿಸ್ಟ್ರೇಟರಗಳಿಂದ ಅಥವಾ ಪ್ರತಿನಿಧಿಗಳಿಂದ" ಎಂದು ಓದಿಕೊಳ್ಳತಕ್ಕದ್ದು.

10. 21ನೇ ನಿಬಂಧನೆಯಲ್ಲಿ "1855ನೇ ಇಸವಿ XIIIನೇ ನಂಬರ್ ಆಕ್ಟು" ಎಂಬ ಮಾತುಗಳಿಗೂ ಅಂಕಿಗಳಿಗೂ ಬದಲಾಗಿ "1892ನೇ ಇಸವಿ IIನೇ ನಂಬರ್ ರೆಗ್ಯುಲೇಷನ್" ಎಂದು ಓದಿಕೊಳ್ಳತಕ್ಕದ್ದು.

11. 33ನೇ ನಿಬಂಧನೆಯಲ್ಲಿ "(ಕೆಲವು ತಪ್ಪಿತಗಳ ಬಗ್ಯೆ ಎಗ್ಜಿಕ್ಯೂಟರಗಳು ಯಾ ಅಡ್ಮಿನಿಸ್ಟ್ರೇ ಟರಗಳು ಯಾ ವಾರಸದಾರರು ದಾವೇ ಮಾಡಲಿಕ್ಕೆ ಮತ್ತು ದಾವೇ ಮಾಡಲ್ಪಡಲಿಕ್ಕೆ ಉಂಟಾದ) 1855ನೇ ಇಸವಿ 12ನೇ ನಂಬರ್ ಆಕ್ಟಿಗನುಸುಗುಣವಾಗಿ" ಎಂಬ ಮಾತುಗಳು ಮತ್ತು ಅಂಕಿಗಳಿಗೆ ಬದಲಾಗಿ "ಒಬ್ಬ ಮೃತಪಟ್ಟ ಮನುಷ್ಯನಿಗೆ ಅಥವಾ ಮನುಷ್ಯನಿಂದ ನಡಿಸಲ್ಪಟ್ಟ ಅನ್ಯಾಯಗಳ ವಿಚಾರವಾಗಿ ದಾವೇ ಮಾಡಲು ಮತ್ತು ಮಾಡಲ್ಪಡಲು ಎಗ್ಜಿಕ್ಯೂಟರಗಳು ಅಡ್ಮಿನಿಸ್ಟ್ರೇಟರಗಳು ಅಥವಾ ಪ್ರತಿನಿಧಿಗಳನ್ನು ಸಮರ್ಥಗೊಳಿಸು ವಂತಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವದಾದರೂ ಕಾನೂನಿಗನುಗುಣವಾಗಿ" ಎಂದು ಓದಿಕೊಳ್ಳತಕ್ಕದ್ದು.

12. 47ನೇ ನಿಬಂಧನೆಯಲ್ಲಿ "40ನೇ ಚಾಪ್ಟರ್" ಎಂಬ ಮಾತು ಮತ್ತು ಅಂಕಿಗಳಿಗೆ ಬದಲಾಗಿ "12ನೇ ಅಧ್ಯಾಯವನ್ನು" ಎಂಬದಾಗಿಯೂ "ಯಾ ಮುಂಬಾಯಿ ಮಾಮಲತ್‍ದಾರ್ರುಗಳ ಕೋರ್ಟುಗಳ ಆಕ್ಟು" ಎಂಬ ಮಾತುಗಳಿಗೆ ಬದಲು ಅಥವಾ "1888ನೇ ಇಸವಿ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್" ಎಂ ದುನ್ನೂ ಓದಿಕೊಳ್ಳತಕ್ಕದ್ದು.

13. 84ನೇ ನಿಬಂಧನೆಯ 1ನೇ ರಿಕಾನೆಯಲ್ಲಿ "ಅಟ್ಟರ್ನಿಯ ಯಾ ವಕೀಲನ" ಮತ್ತು 3ನೇ ರಿಕಾನೆ ಯಲ್ಲಿ "ಅಟ್ಟರ್ನಿ ಯಾ ವಕೀಲ್" ಎಂಬ ಮಾತುಗಳಿಗೆ ಬದಲು "ಆಡ್ವೋಕೇಟಿನ ಅಥವಾ ಪ್ಲೀಡರಿನ" ಮತ್ತು "ಆಡ್ವೋಕೇಟ್ ಅಥವಾ ಪ್ಲೀಡರ್" ಎಂಬ ಮಾತುಗಳನ್ನು ಶೇರಿಸಿ ಕೊಳ್ಳತಕ್ಕದ್ದು.

14. 135ನೇ ನಿಬಂಧನೆಯಲ್ಲಿ "ರಾಯಲ್ ಚಾರ್ಟರಿಂದ ಸ್ಥಾಪಿತವಾಗದ ಒಂದು ಕೋರ್ಟನಲ್ಲಿ" ಎಂಬ ಮಾತುಗಳನ್ನು ಬಿಟ್ಟು ಬಿಡತಕ್ಕದ್ದು.

15. 146ನೇ ನಿಬಂಧನೆಯನ್ನು ಬಿಟ್ಟು ಬಿಡಬೇಕು.

16. 148ನೇ ನಿಬಂಧನೆಯ 3ನೇ ರಿಕಾನೆಯಲ್ಲಿರುವ ನಿಯಮವನ್ನು ಬಿಟ್ಟುಬಿಡತಕ್ಕದ್ದು.

17. 149ನೇ ನಿಬಂಧನೆಯಲ್ಲಿ "ಆಲೋಚನೆ ಸಭೆಯೊಳಗಣ ಇಂಡ್ಯ ದೇಶದ ಸ್ಟೇಟ ಸೆಕ್ರೆಟರಿಯವರಿಂದ ಯಾ" ಎಂಬ ಮಾತುಗಳಿಗೆ ಬದಲು "ಮೈಸೂರು ಗವರ್ನಮೆಂಟಿನವರಿಂದ ಅಥವಾ" ಎಂಬದಾಗಿ ಓದಿಕೊಳ್ಳತಕ್ಕದ್ದು.

18. 151ನೇ ನಿಬಂಧನೆಯಲ್ಲಿ "ಫೋರ್ಟ ವಿಲಿಯಂ (ಯಾನೆ ಕಲ್‌ಕತ್ತಾ) ಮದರಾಸ್ ವ ಮುಂಬೈ ಯಲ್ಲಿ ಈ ಸ್ಥಳಗಳ ಯಾವ ಹೈಕೋರ್ಟ" ಎಂಬ ಮಾತುಗಳಿಗೆ ಬದಲಾಗಿ "ಚೀಫ ಕೋರ್ಟ" ಎಂಬದಾಗಿ ಓದಿಕೊಳ್ಳಬೇಕು.

19. 153ನೇ ನಿಬಂಧನೆಯನ್ನು ಬಿಟ್ಟು ಬಿಡಬೇಕು.

20. 156ನೇ ನಿಬಂಧನೆಯಲ್ಲಿ "151-153 ಈ ನಂಬರುಗಳಿಂದ ವಿಧಿಸಲ್ಪಟ್ಟ ಸಂಗತಿಗಳಲ್ಲಿ" ಎಂಬ ಮಾತುಗಳು ಮತ್ತು ಅಂಕಿಗಳಿಗೆ ಬದಲಾಗಿ "151ನೇ ನಂಬರಿನಿಂದ ವಿಧಿಸಲ್ಪಟ್ಟ ಸಂಗತಿಯಲ್ಲಿ" ಯೆಂದು ಓದಿಕೊಳ್ಳತಕ್ಕದ್ದು.

21. 160ನೇ ನಿಬಂಧನೆಗೆ ತರುವಾಯ ಇದರಡಿ ಕಂಡದ್ದನ್ನು ಸೇರಿಸಿಕೊಳ್ಳಬೇಕು—

"160 A. ಒಂದು ಸ್ಮಾಲುಕಾಜು ಕೋರ್ಟನಿಂದ ಅಥವಾ ಸ್ಮಾಲುಕಾಜು ಕೋರ್ಟನ ಎಖ್ತ್ಯಾರಿ ಕೊಡಲ್ಪಟ್ಟ ಒಂದು ಕೋರ್ಟನವರು ಆ ಎಖ್ತ್ಯಾರಿ ನಡಿಸುವಾಗ್ಯೆ ಅವರಿಂದ ಕೊಡಲ್ಪಟ್ಟ ಜಡ್ಜಮೆಂಟಿನ ಪುನರ್ವಿಮರ್ಶೆ ಬಗ್ಯೆ.	ಡಿಟೋ	ಡಿಕ್ರಿ ಅಥವಾ ಹುಕುಮಿನ ತಾರೀಖು.

22. 161ನೇ ನಿಬಂಧನೆಯನ್ನು ಬಿಟ್ಟು ಕೊಳ್ಳತಕ್ಕದ್ದು.

23. 162ನೇ ನಿಬಂಧನೆಯಲ್ಲಿ "ಫೋರ್ಟ ವಿಲಿಯಂ, ಮದರಾಸ್, ವ ಮುಂಬೈ ಈ ಸ್ಥಳಗಳ ಯಾವ ಹೈ ಕೋರ್ಟಾಫ ಜುಡಿಕೇಚರಿಯವರು" ಯೆಂಬ ಮಾತುಗಳಿಗೆ ಬದಲಾಗಿ "ಚೀಫ ಕೋರ್ಟನವರು" ಯೆಂದು ಓದಿಕೊಳ್ಳಬೇಕು.

24. 171, 171A. ಮತ್ತು 171B. ನಿಬಂಧನೆಗಳನ್ನು ಬಿಟ್ಟು ಬಿಡತಕ್ಕದ್ದು.

25. 171 C. ನಿಬಂಧನೆಗೆ ಬದಲು ಇದರಡಿ ಕಂಡದ್ದನ್ನು ಸೇರಿಸಿಕೊಳ್ಳಬೇಕು :—

"171. ಸಿವಿಲ್ ಪ್ರೊಸೀಡ್ಯೂರ ಕೋಡಿನ 371ನೇ ಪ್ರಕರಣ ಪ್ರಕಾರವಾಗಲಿ, ಅದೇ ಕೋಡ ಅದೇ ಪ್ರಕರಣ ಮತ್ತು 582ನೇ ಪ್ರಕರಣದಂತೆ ವ್ಯಾಜ್ಯ ನಿಂತುಹೋಗಲು ಅಥವಾ ತಳ್ಳಪಡಿಯಾಗಲು ಹುಟ್ಟಿದ ಹುಕುಂ ರದ್ದಾಗುವಬಗ್ಯೆ ಹುಕುಂ ಆಗಬೇಕೆಂದು.	ಅರವತ್ತು ದಿವಸಗಳು.	ವ್ಯಾಜ್ಯ ನಿಂತುಹೋಗಲೆಂದು ಅಥವಾ ತಳ್ಳಪಡಿಯಾಗಲೆಂದು ಆದ ಹುಕುಮಿನ ತಾರೀಖು."

26. 173ನೇ ನಿಬಂಧನೆಯ 1ನೇ ರಿಕಾನೆಯಲ್ಲಿ "162ನೇ ನಂಬರ" ಯೆಂಬ ಮಾತು ಮತ್ತು ಅಂಕಿಗಳಿಗೆ ಮುಂಚೆ "160A. ನಂಬರು ಮತ್ತು" ಯೆಂಬ ಮಾತುಗಳು ಅಕ್ಷರ ಮತ್ತು ಅಂಕಿಗಳನ್ನು ಸೇರಿಸಿಕೊಳ್ಳಬೇಕು.

27. 173ನೇ ನಿಬಂಧನೆಗೆ ತರುವಾಯ ಇದರಡಿ ಕಂಡದ್ದನ್ನು ಸೇರಿಸತಕ್ಕದ್ದು:—

"173 A. ಸಿವಿಲ್ ಪ್ರೊಸೀಡ್ಯೂರಕೋಡ 258ನೇ ಪ್ರಕರಣ ಪ್ರಕಾರ ಹುಟ್ಟಬೇಕೆಂಬ ನೋಟೀಸಿನಲ್ಲಿ ಕಂಡ ಪಾವತೀ ಅಥವಾ ವ್ಯವಸ್ಥೆಯು, ಜಡ್ಜಮೆಂಟಿನ ಅಮಲ್‌ಜಾರಿಬಗ್ಯೆ ಪ್ರೋಸೆಸ್ಸು ಅಂತಾ ಪಾವತಿ ಅಥವಾ ವ್ಯವಸ್ಥೆ ಮಾಡಲ್ಪಟ್ಟ ಒಂದು ವರುಷದೊಳಗಾಗಿ ಅರ್ಜೀದಾರನಮೇಲೆ ಜಾರಿಯಾಗಿದ್ದರೆ, ಸ್ಥಾಪಿತವಾದಂತೆ ಯಾತಕ್ಕೆ ರಿಕಾರ್ಡು ಮಾಡಲ್ಪಡಕೂಡದೆಂಬಬಗ್ಯೆ ಕಾರಣವನ್ನು ತೋರಿಸುವದಕ್ಕೋಸ್ಕರ.	ಡಿಟೋ	ಅಂತಾ ಪ್ರೋಸೆಸ್ಸು ಜಾರಿಯಾದ ತಾರೀಖು ಲಾಗಾಯಿತು."

28. 175ನೇ ನಿಬಂಧನೆಗೆ ತರುವಾಯ ಇದರಡಿ ಕಂಡವನ್ನು ಶೇರಿಸಿಕೊಳ್ಳತಕ್ಕದ್ದು :—

"175 A. ಸಿವಿಲ್ ಪ್ರೊಸೀಡ್ಯೂರ್ ಕೋಡಿನ 365ನೇ ಪ್ರಕರಣ ಪ್ರಕಾರ ಒಬ್ಬ ಮೃತಪಟ್ಟ ಅಸಲ್ ವಾದಿಯ ಕಾಯಿದೆಗೆ ಸಮ್ಮತವಾದ ಪ್ರತಿನಿಧಿಯಿಂದಲಾಗಲಿ, ಅದೇ ಕೋಡಿನ ಅದೇ ಪ್ರಕರಣವಲ್ಲದೆ 582ನೇ ಪ್ರಕರಣದಂತೆಯೂ ಒಬ್ಬ ಮೃತಪಟ್ಟ ಅಸಲ್ ವಾದಿಯಾದ ಅಪ್ಪೀಲ್‌ವಾದಿಯ ಅಥವಾ ಅಸಲ್ ಪ್ರತಿವಾದಿಯಾದ ಅಪ್ಪೀಲ್ ವಾದಿಯ ಕಾಯಿದೆಗೆ ಸಮ್ಮತವಾದ ಪ್ರತಿನಿಧಿಯಿಂದಲಾಗಲಿ,	ಆರು ತಿಂಗಳು.	ಮೃತಪಟ್ಟ ಅಸಲ್ ವಾದಿಯ ಅಥವಾ ಮೃತಪಟ್ಟ ಅಸಲು ವಾದಿಯಾದ ಅಪೀಲ್‌ವಾದಿಯ ಅಥವಾ ಅಸಲು ಪ್ರತಿವಾದಿಯಾದ ಅಪೀಲ್ ಪ್ರತಿವಾದಿಯ ಮರಣದ ತಾರೀಖು.
175 B. ಸಿವಿಲ್ ಪ್ರೊಸಿಡ್ಯೂರ್ ಕೋಡಿನ 366ನೇ ಪ್ರಕರಣ ಪ್ರಕಾರ ಒಬ್ಬ ಅಸಲ್ ಪ್ರತಿವಾದಿಯಿಂದಲಾಗಲಿ, ಅದೇ ಕೋಡ್ ಅದೇ ಪ್ರಕರಣ ಮತ್ತು 582ನೇ ಪ್ರಕರಣದಂತೆ ಅಸಲ್‌ವಾದಿಯಾಗಿದ್ದ ಅಪ್ಪೀಲ್ ಪ್ರತಿವಾದಿಯಿಂದ ಅಥವಾ ಅಸಲು ಪ್ರತಿವಾದಿಯಾಗಿದ್ದ ಅಪ್ಪೀಲು ಪ್ರತಿವಾದಿಯಿಂದಲಾಗಲಿ,	ಡಿಟೋ	ಮೃತಪಟ್ಟ ಅಸಲ್ ವಾದಿಯ ಅಥವಾ ಮೃತಪಟ್ಟ ಅಸಲ್ ಪ್ರತಿವಾದಿಯಾದ ಅಪೀಲ್ವಾದಿಯ ಅಥವಾ ಅಸಲ್ವಾದಿಯಾದ ಅಪೀಲ್ವಾದಿಯ ಮರಣದ ತಾರೀಖು.
175 C. ಸಿವಿಲ್ ಪ್ರೊಸೀಡ್ಯೂರ್ ಕೋಡಿನ 368ನೇ ಪ್ರಕರಣ ಪ್ರಕಾರ ಒಬ್ಬ ಫೌತಿ ಅಸಲ್ ಪ್ರತಿವಾದಿಯ ನ್ಯಾಯ ಸಮ್ಮತವಾದ ಪ್ರತಿನಿಧಿಯನ್ನು ಒಬ್ಬ ಅಸಲ್ ಪ್ರತಿವಾದಿಯಾಗಿ ದಾಖಲ್ಮಾಡಿಸಿಕೊಳ್ಳುವಬಗ್ಯಾಗಲಿ, ಅದೇ ಕೋಡ್ ಅದೇ ಪ್ರಕರಣ ಮತ್ತು 582ನೇ ಪ್ರಕರಣ ಪ್ರಕಾರ ಒಬ್ಬ ಮೃತಗಟ್ಟ ಅಸಲ್ವಾದಿಯಾದ ಅಪ್ಪೀಲು ಪ್ರತಿವಾದಿಯ ಅಥವಾ ಅಸಲ್ ಪ್ರತಿವಾದಿಯಾದ ಅಪ್ಪೀಲ್ ಪ್ರತಿವಾದಿಯ ನ್ಯಾಯವಾದ ಪ್ರತಿನಿಧಿಯನ್ನು ಒಬ್ಬ ಅಸಲ್ ವಾದಿಯಾದ ಅಪ್ಪೀಲ್ ಪ್ರತಿವಾದಿಯನ್ನಾಗಿ ಅಥವಾ ಅಸಲ್ ಪ್ರತಿವಾದಿಯಾದ ಅಪ್ಪೀಲ್ ಪ್ರತಿವಾದಿಯಾಗಿ ದಾಖಲ್ಮಾಡಿಸಿಕೊಳ್ಳುವ ಬಗ್ಯಾಗಲಿ.	ಡಿಟೋ	ಮೃತಪಟ್ಟ ಅಸಲ್ ಪ್ರತಿವಾದಿಯ ಅಥವಾ ಗತಿಸಿದ ಅಸಲ್ವಾದಿಯಾದ ಅಪೀಲ್ ಪ್ರತಿವಾದಿಯ ಅಥವಾ ಅಸಲ್ ಪ್ರತಿವಾದಿಯಾದ ಅಪೀಲ್ ಪ್ರತಿವಾದಿಯ ಮರಣದ ತಾರೀಖು."

29. 177ನೇ ನಿಬಂಧನೆಯನ್ನೂ, 179ನೇ ನಿಬಂಧನೆಯ 1ನೇ ರಿಕಾನೆಯಲ್ಲಿ "180ನೇ ನಂಬರಿನಿಂದ ಅಥವಾ" ಯೆಂಬ ಮಾತುಗಳು ಮತ್ತು ಅಂಕಿಗಳನ್ನೂ, 180ನೇ ನಿಬಂಧನೆಯನ್ನೂ ಲೋಪ ಮಾಡಿಕೊಳ್ಳ ತಕ್ಕದ್ದು.

30. 177ನೇ ನಿಬಂಧನೆಗೆ ತರುವಾಯ ಇದರಡಿ ಕಂಡದ್ದನ್ನು ಶೇರಿಸಿ ಕೊಳ್ಳಬೇಕು :—

"177 A. ಸಿವಿಲ್ ಪ್ರೊಸೀಡ್ಯೂರ್ ಕೋಡಿನ 258ನೇ ಪ್ರಕರಣ ಪ್ರಕಾರ ಹುಟ್ಟ ಬೇಕೆಂಬ ನೋಟೀಸಿನಲ್ಲಿ ಕಂಡ ಪಾವತಿ ಅಥವಾ ವೆವಸ್ಥೆಯು, 173A ನಿಬಂಧನೆಯಲ್ಲಿ ವಿಧಿಸಲ್ಪಟ್ಟಿರುವ ಸಂದರ್ಭಗಳಲ್ಲಿ ಹೊರ್ತು ಇತರ ಸಂದರ್ಭಗಳಲ್ಲಿ, ದೃಢ ಪಟ್ಟಂತೆ ಯಾತಕ್ಕೆ ರಿಕಾರ್ಡು ಮಾಡಲ್ಪಡ ಕೂಡದೆಂಬುವದಕ್ಕೆ ಕಾರಣ ತೋರಿಸುವದಕ್ಕೋಸ್ಕರ.	ಒಂದು ವರುಷ.	ಸದರೀ ಪಾವತಿ ಅಥವಾ ವ್ಯವಸ್ಥೆಯು ಮಾಡಲ್ಪಟ್ಟಾಗ.

ಕೆ. ಶೇಷಾದ್ರಿ ಐಯ್ಯರ್,
ಮೈಸೂರ ಸಂಸ್ಥಾನದ ದಿವಾನರು.

THE INDIAN LIMITATION ACT, XV OF 1877.

As amended by Regulation III Of 1896.

ಇಂಡ್ಯನ್ ಲಿಮಿಟೇಷನ್ ಎಂಬ ಇಂಡ್ಯ ದೇಶದ ವ್ಯಾಜ್ಯಗಳು ವಗೈರೆಯ ಅವಧಿ ನಿರ್ಣಯವನ್ನು ಕುರಿತ,

1877ನೇ ಇಸವಿಯ 15ನೇ ನಂಬರ್ ಆಕ್ಟು.

1896ನೇ ಇಸವಿ IIIನೇ ನಂಬರ್ ರೆಗ್ಯುಲೇಷನ್ನಿಂದ ತಿದ್ದುಪಾಟಾವಂತೆ.

ಪೀಠಿಕೆ.

ವಿಷಯ ಸೂಚಿಕೆ.

1ನೇ ಭಾಗ.

ಅ ವ ತ ರ ಣಿ ಕೆ.

ಪ್ರಕರಣಗಳು.

1. ಚಿಕ್ಕ ಹೆಸರು.
ಆಕ್ಟಿನ ವ್ಯಾಪ್ತಿ.
ಷುರೂ.

2. 1871ನೇ ಇಸವಿ 9ನೇ ನಂಬರ ಆಕ್ಟಿಗೆ ದಾಖಲೆಗಳು.
ಪೂರ್ವವೇ ಉಂಟಾಗಿರುವ ಬಾಧ್ಯತೆಗಳನ್ನು ಉಳಿಸಿಕೊಳ್ಳುವಣ.
1872ನೇ ಇಸವಿಯ 9ನೇ ನಂಬರ ಆಕ್ಟಿನ 25ನೇ ಸೆಕ್ಷನನ್ನು ಉಳಿಸುವಣ.

3. ಅರ್ಥ ವಿವರಣೆಯ ಕಲಂ.

2ನೇ ಭಾಗ.

ದಾವೇಗಳ, ಅಪ್ಪೀಲುಗಳ ವ ಅರ್ಜೀಗಳ ಅವಧಿ.

4. ಅವಧಿ ನಿರ್ಣಯದ ವಾಯಿದೆ ಆದ ಅನಂತರ ದಾಖಲ್ ವಗೈರೇ ಮಾಡಲ್ಪಟ್ಟ ದಾವೆಗಳು ವಗೈರೇಯನ್ನು ಡಿಸಮಿಸ ಮಾಡುವಣ.

5. ವಾಯಿದೆ ತೀರಿಹೋಗುವಾಗ ಕೋರ್ಟು ಮುಚ್ಚಲ್ಪಟ್ಟಿದ್ದರೆ ನಿಯಮ.
ಪುನರ್ವಿಮರ್ಶೆ ಬಗ್ಯೆ ಕೊಡಲ್ಪಡುವ ಅಪ್ಪೀಲಗಳನ್ನು ವ ಅರ್ಜಿಗಳನ್ನು ಕುರಿತ ನಿಯಮ.

5 A. ತೀರ್ಪಿನ ಪುನರ್ವಿಮರ್ಶೆ ಬಗ್ಯೆ ಬರುವ ಕೆಲವು ಅಪ್ಪೀಲಗಳು ಅಥವಾ ಅರ್ಜಿಗಳಿಗೆ ಕಾಲ ನಿಬಂಧನೆ.

6. ವಿಶೇಷ ಮತ್ತು ಸ್ಥಳ ಕಾಲನಿಬಂಧನೆಯ ಕಾನೂನ್.

7. ನ್ಯಾಯತಃ ಉಂಟಾಗತಕ್ಕ ಅಶಕ್ತತೆ.
ದ್ವಿಗುಣವಾಗಿಯೂ ಅವಿಚ್ಛಿನ್ನವಾಗಿಯೂ ಉಂಟಾಗುವ ಅಶಕ್ತತೆಗಳು.
ವಾರಸದಾರನ ಅಶಕ್ತತೆ.

8. ಜೊತೆಗಾರನಾದ ಒಬ್ಬ ಲೇಣೇದಾರನ ಅಶಕ್ತತೆ.

9. ಕಾಲ ಅವಿಚ್ಛಿನ್ನವಾಗಿ ಗತಿಸುವಣ.

10. ಕಂಶೋಕ್ತವಾಗಿ ಮೊಕರರ್ ಆದ ಸ್ವತ್ತಿನ ಸಂರಕ್ಷಕರ ಮೇಲೆ ಮತ್ತು ಅವರ ವಾರಸ್ದಾರರ ಮೇಲಿನ ವ್ಯಾಜ್ಯಗಳು.

11. ಪರಾಯಿ ದೇಶದ ಕರಾರ್‌ಗಳ ಮೇಲೆ ವ್ಯಾಜ್ಯಗಳು.
ಅನ್ಯದೇಶದ ಅವಧಿ ನಿರ್ಣಯದ ಕಾನೂನು.

3ನೇ ಭಾಗ.

ಅವಧಿಯ ವಾಯಿದೆಯನ್ನು ಗಣಿಸುವಿಕೆ.

12. ದಾವಾ ಮಾಡುವ ಹಕ್ಕು ಹುಟ್ಟತಕ್ಕ ದಿವಸವನ್ನು ತಳ್ಳಿಬಿಡುವಣ.
ಅಪ್ಪೀಲಗಳು, ವ ಕೆಲವು ಅರ್ಜೀಗಳು ಇವುಗಳ ವಿಷಯದಲ್ಲಿ ತಳ್ಳುವಡಿಗಳು.

13. ಮೈಸೂರ ದೇಶದಲ್ಲಿ ಪ್ರತಿವಾದಿಯ ಗೈರಹಾಜು ಕಾಲವನ್ನು ತಳ್ಳಿಬಿಡುವಣ.

14. ಪ್ರಾಮಾಣಿಕವಾಗಿ ಅಧಿಕಾರ ಸರಹದ್ದಿಲ್ಲದ ಕೋರ್ಟಿನಲ್ಲಿ ದಾವಾ ಮಾಡುವ ಕಾಲವನ್ನು ತಳ್ಳಿಬಿಡುವಣ.
ಸಿವಿಲ್ ಪ್ರೊಸೀಡ್ಯೂರ್ ಕೋಡಿನ 20ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡುವ ಹುಕುಂ ಸಂಗತಿಯಲ್ಲಿ ಬದಸ್ತೂರ್ ತಳ್ಳಿ ಹಾಕುವಣ.
ಅರ್ಜೀ ವಿಷಯದಲ್ಲಿ ಬದಸ್ತೂರ್ ತಳ್ಳಿಬಿಡುವಣ.

15. ಇಂಜಂಕ್ಷನ್ ಯಾ ಹುಕುಂನಿಂದ ವ್ಯಾಜ್ಯದ ಆರಂಭ ನಿಂತಿದ್ದ ಕಾಲವನ್ನು ತಳ್ಳಿಹಾಕುವಣ.

ಪ್ರಕರಣಗಳು.

16. ಅಮಲ್‌ಜಾರೀ ವಿಕ್ರಯವನ್ನು ರದ್ದುಪಡಿಸಬೇಕೆಂದು ಡಿಕ್ರೀಬಾಬಿತು ದೇಣೇದಾರನು ಪ್ರಯತ್ನ ಪಡುವ ಕಾಲವನ್ನು ತಳ್ಳಿಹಾಕುವಣ.

17. ದಾವೇ ಮಾಡಲಿಕ್ಕೆ ಹಕ್ಕು ಉಂಟಾಗುವದಕ್ಕೆ ಮುಂಚೆ ಮರಣ ಹೊಂದುವದರಿಂದಾಗುವ ಫಲ.

18. ಮೋಸದಿಂದುಂಟಾಗುವ ಫಲ.

19. ಬರಹ ಮೂಲಕವಾದ ರಶೀತಿಯಿಂದ ಉಂಟಾಗುವ ಫಲ.

20. ಬಡ್ಡೀ ಕೊಡುವದರಿಂದ ಉಂಟಾಗುವ ಫಲ.

ಅಸಲಿನಲ್ಲಿ ಒಂದು ಭಾಗ ಕೊಡುವದರಿಂದುಂಟಾಗುವ ಫಲ.

ಅಡವಮಾನ ಜಮೀನಿನ ಹುಟ್ಟುವಳಿಯನ್ನು ಹೊಂದುವದರ ಫಲ.

21. ಅನೇಕಮಂದಿ ಸಮುದಾಯವಾದ ಕಂಟ್ರಾಕ್ಟರ್ ವಗೈರೇರ ಪೈಕಿ ಯಾವನಾದರೊಬ್ಬನು ರಸೀತಿ ಕೊಟ್ಟದ್ದರಿಂದ ಅಥವಾ ಮೊಬಲಗ್ ಪಾವತೀ ಮಾಡಿದ್ದರಿಂದ ಅದನ್ನು ಮತ್ತೊಬ್ಬನಿಗೆ ಹೊರಿಸತಕ್ಕದ್ದಲ್ಲವು.

22. ಹೊಸ ವಾದಿಯನ್ನಾಗಲಿ, ಹೊಸ ಪ್ರತಿವಾದಿಯನ್ನಾಗಲಿ, ಪ್ರತಿಯಾಗಿ ಯಿಡುವದರಿಂದ ಅಥವಾ ಹೆಚ್ಚಾಗಿ ಸೇರಿಸುವದರಿಂದ ಉಂಟಾಗುವ ಫಲ.

ಅಸಲ್‌ವಾದಿ ಸತ್ತರೆ ನಿಯಮ.

ಅಸಲ್‌ಪ್ರತಿವಾದಿ ಸತ್ತರೆ ನಿಯಮ.

23. ಕರಾರಿನ ಉಲ್ಲಂಘನೆಯನ್ನೂ ಕ್ರಮವನ್ನೂ ಬಾರ್‌ಬಾರ್ ನಡಿಸುವಣ.

24. ಮುಖ್ಯವಾದ ನಷ್ಟ ಉಂಟಾದ ಹೊರತು ದಾವೇ ತರಕೂಡದ ಒಂದು ಕೃತ್ಯಕ್ಕೋಸ್ಕರ ಈಡು ಹಣದ ಬಗ್ಯೆ ದಾವೆ.

25. ದಸ್ತಾವೇಜುಗಳಲ್ಲಿ ಸಮೂದಿಸಿ ಯಿರುವ ಕಾಲವನ್ನು ಗಣಿಸುವಿಕೆ.

4ನೇ ಭಾಗ.

ಸ್ವಾಧೀನತೆಯ ಮೂಲಕ ಸ್ವತ್ವವನ್ನು ಸಂಪಾದಿಸಿಕೊಳ್ಳುವಿಕೆ.

26. ಈಜ್‌ಮೆಂಟ್ಸ್ ಎಂಬ ಸುಲಭತ್ವಗಳ ಹಕ್ಕಿನ ಸಂಪಾದನೆ.

27. ಒಬ್ಬರ ಕೈಕೆಳಗಿನ ಅನುಭವದಲ್ಲಿರುವ ಮನೆ ಯಾ ಜಮೀನು, ಉತ್ತರೋತ್ತರ ಯಾರ ಸ್ವಾಧೀನವಾಗುವದೋ ಅಂತವರ ಪರವಾಗಿ ತಳ್ಳಿಹಾಕುವಣ.

28. ಸ್ವತ್ತಿಗೆ ಉಂಟಾಗಿರುವ ಹಕ್ಕು ನಿಂತು ಹೋಗುವಿಕೆ.

2ನೇ ಷೆಡ್ಯೂಲ್.

1 ದಾವೆಗಳು.—2 ಅಪ್ಪೀಲ್‌ಗಳು.—3 ಅರ್ಜಿಗಳು.

ವ್ಯಾಜ್ಯಗಳ ಅವಧಿ ನಿರ್ಣಯದ ಬಗ್ಯೆ, ಇತರ ಕೆಲಸಗಳ ಬಗ್ಯೆ, ಹುಟ್ಟಿದ ಆಕ್ಟು.

ಪೀಠಿಕೆ.

ವ್ಯಾಜ್ಯಗಳು, ಅಪ್ಪೀಲ್‌ಗಳು, ಮತ್ತು ಕೋರ್ಟುಗಳಿಗೆ ಕೊಡಲ್ಪಡುವ ಕೆಲವು ಅರ್ಜಿಗಳು, ಇವುಗಳ ಅವಧಿ ನಿರ್ಣಯಕ್ಕೆ ಸಂಬಂಧಪಟ್ಟ ಕಾನೂನನ್ನು ದುರಸ್ತು ಮಾಡುವದು ಯುಕ್ತವಾಗಿರುವದರಿಂದಲೂ ಮತ್ತು ಸ್ವಾಧೀನತೆಯ ದೆಶೆಯಿಂದ ಸರಾಗ ಮತ್ತು ಇತರ ಸ್ವತ್ತಿನ ಸ್ವತ್ವವನ್ನು ಸಂಪಾದಿಸುವ ಬಗ್ಯೆ ನಿಬಂಧನೆಗಳನ್ನು ವಿಧಿಸುವದು ಸಹಾ ಯುಕ್ತವಾಗಿರುವದರಿಂದಲೂ ಇದರಿಂದ ನಿರ್ಣಯಿಸುವ ದೇನಂದರೆ.—

1ನೇ ಭಾಗ.

ಅವತರಣಿಕೆ.

1. ಈ ಆಕ್ಟು "1877ನೇ ಇಸವಿಯ ಇಂಡಿಯನ್ ಲಿಮಿಟೇಷನ್ ಆಕ್ಟು." ಎಂತ ಕರೆಯಲ್ಪಡಬಹುದು.

ಚಿಕ್ಕಹೆಸರು.

ಆಕ್ಟಿನವ್ಯಾಪ್ತಿ. ಇದು ಮೈಸೂರ್ ಶೀಮೆಯಲ್ಲಿ ಸರ್ವತ್ರ ವ್ಯಾಪಿಸುತ್ತದೆ;

ಮತ್ತು 1878ನೇ ಇಸವೀ ಜನವರಿ ಗುರ್ರೇ ತಾರೀಖಿನಲ್ಲಿ ಅದು ಜಾರಿಯಲ್ಲಿ ಬರತಕ್ಕದ್ದು.

ಷುರೂ.

2. 1871ನೇ ಇಸವಿಯ ಇಂಡಿಯನ್ ಲಿಮಿಟೇಷನ್ ಆಕ್ಟಿನಲ್ಲಿ ನೋಡಲ್ಪಡುವ ತಮಾಂದಾಖಲೆಗಳೂ, ಈ ಆಕ್ಟಿನಲ್ಲಿ ನೋಡಿದಂತೆಯೇ ಓದಿಕೊಳ್ಳತಕ್ಕದ್ದು, ಈ ಆಕ್ಟಿನಲ್ಲಾಗಲಿ, ಆ ಆಕ್ಟಿನಲ್ಲಾಗಲಿ, ಅಡಗಿರುವ ಯಾವ ಅಂಶವೂ, ಸದರೀ ಆಕ್ಟು ಅನುಸರಿಸಿ ಅಥವಾ ಅದರಿಂದ ರದ್ದು ಮಾಡಲ್ಪಟ್ಟ ಯಾವ ಆಕ್ಟು ಅನುಸರಿಸಿಯಾಗಲಿ ಸಂಪಾದಿಸಲ್ಪಟ್ಟ ಯಾವ ಬಾಧ್ಯತೆಗಾಗಲಿ ಬಾಧಕವಾಗುವಂತೆ ಅಥವಾ ದಾವಾ ಮಾಡಲಿಕ್ಕೆ, ಅವಧಿ ಉಂಟು ಮಾಡಲ್ಪಟ್ಟ ಯಾವ ಬಾಧ್ಯತೆಯನ್ನಾಗಲಿ ಉಜ್ಜೀವಿಸುವಂತೆ ಮಾಡತಕ್ಕದ್ದಾಗಿ ಎಣಿಸಕೂಡದು, ಮತ್ತು ಇಂಡಿಯನ್ ಕಂಟ್ರಾಕ್ಟು ಆಕ್ಟಿನ 25ನೇ ಸೆಕ್ಷನಿಗೆ ಬಾಧಕವಾಗತಕ್ಕದ್ದಾಗಿ ಇದರಲ್ಲಿ ಅಡಗಿರುವ ಯಾವ ಅಂಶವನ್ನೂ ಎಣಿಸತಕ್ಕದ್ದಲ್ಲವು.

1871ನೇ ಇಸವಿಯ 9ನೇ ನಂಬರ ಆಕ್ಟಿಗೆ ದಾಖಲೆಗಳು.

ಪೂರ್ವವೇ ಉಂಟಾದ ಬಾಧ್ಯತೆಗಳನ್ನು ಉಳಿಸಿಕೊಳ್ಳುವಣ.

1872ನೇ ಇಸವಿಯ 9ನೇ ನಂಬರ ಆಕ್ಟಿನ 25ನೇ ಸೆಕ್ಷನನ್ನು ಉಳಿಸುವಣ.

3. ಈ ಆಕ್ಟಿನೊಳಗೆ, ಪ್ರಮೇಯಕ್ಕೆ ಯಾ ಸಂದರ್ಭಕ್ಕೆ ವಿರುದ್ಧವಾಗಿ ಏನೂ ಇಲ್ಲದೇ ಇದ್ದಪಕ್ಷಕ್ಕೆ—

ಅರ್ಥವಿವರಣೆಯ ಕಲಂ.

'ವಾದಿ' ಎಂಬದು ಯಾರಿಂದಾ ಅಥವಾ ಯಾರ ಮುಖಾಂತರವಾಗಿ ಒಬ್ಬ ವಾದಿಯೂ ದಾವಾಮಾಡಲಿಕ್ಕೆ ತನ್ನ ಹಕ್ಕನ್ನು ಪಡೆಯುತ್ತಾನೋ ಅಂತಾ ಮನುಷ್ಯನನ್ನು ಸಹ ಅಡಗಿಸಿಕೊಂಡಿರುತ್ತದೆ; ಮತ್ತು 'ಅರ್ಜೀದಾರ' ಎಂಬದು ಯಾರಿಂದ ಯಾ ಯಾರ ಮುಖಾಂತರ ಅರ್ಜೀಕೊಡುವ ಹಕ್ಕನ್ನು ಅರ್ಜೀದಾರ ಪಡೆಯುತ್ತಾನೋ ಅಂತವನನ್ನು ಸಹ ಅಡಗಿಸಿಕೊಂಡಿರುತ್ತದೆ. ಮತ್ತು 'ಪ್ರತಿವಾದಿ' ಎಂಬದು ಯಾವನ ದೆಸೆಯಿಂದ ಯಾ ಯಾವನ ಮೂಲಕ ಪ್ರತಿವಾದಿಯಾದವನು, ದಾವಾಮಾಡಲ್ಪಡತಕ್ಕ ದೇಣೆಯನ್ನು ಹೊಂದುತ್ತಾನೋ ಅಂತಾ ಯಾವ ಮನುಷ್ಯನನ್ನೂ ಅಡಗಿಸಿಕೊಂಡಿರುತ್ತೆ.

'ಈಜ್ಮೆಂಟ್' ಎಂಬದು ಒಂದು ಕರಾರಿನಿಂದ ಉಂಟಾಗದೆ ಪರಂತು ಒಬ್ಬ ಮನುಷ್ಯನು ಯಾವ ಹಕ್ಕಿನಿಂದ ಮತ್ತೊಬ್ಬನಿಗೆ ಸೇರಿದ ಜಮೀನ್ ಪೈಕಿ ಎಷ್ಟನ್ನಾಗಲಿ, ಮತ್ತೊಬ್ಬನ ಭೂಮಿಯಲ್ಲಿ ಬೆಳದಿರುವ ಅಥವಾ ಅದಕ್ಕೆ ಸೇರಿಸಲ್ಪಟ್ಟಿರುವ ಅಥವಾ ಅದರ ಮೇಲಿರುವ ಯಾವದನ್ನಾಗಲಿ ತನ್ನ ಸ್ವಂತ ಆದಾಯಕ್ಕಾಗಿ ಸಾಗಿಸಿಕೊಳ್ಳಲಿಕ್ಕೆ ಮತ್ತು ಉಪಯೋಗಿಸಿಕೊಳ್ಳಲಿಕ್ಕೆ ಅರ್ಹನಾಗಿರುತ್ತಾನೋ ಅಂತಾ ಹಕ್ಕನ್ನು ಸಹಾ ಅಡಗಿಸಿಕೊಂಡಿರುತ್ತೆ.

'ಬಿಲ್ ಆಫ್ ಎಕ್ಸ್‌ಚೇಂಜ್' ಎಂಬದು ಹುಂಡಿಯನ್ನು ಮತ್ತು ಚೆಕ್ಕನ್ನು ಸಹಾ ಅಡಗಿಸಿಕೊಂಡಿರುತದೆ.

'ಬಾಂಡ್' ಎಂಬ ಪತ್ರವು, ಯಾವ ದಸ್ತಾವೇಜಿನ ದೆಸೆಯಿಂದ, ನಮೂದಿಸಲ್ಪಟ್ಟ ಕೃತ್ಯವು ಸಂದರ್ಭಾನುಗುಣವಾಗಿ ನೆರವೇರಿಸಲ್ಪಟ್ಟರೆ ಅಥವಾ ನೆರವೇರಿಸಲ್ಪಡದೆ ಇದ್ದರೆ ಒಡಂಬಡಿಕೆ ರದ್ದಾಗತಕ್ಕದ್ದೆಂಬ ಷರತ್ತಿನ ಮೇಲೆ ಒಬ್ಬನು ಮತ್ತೊಬ್ಬನಿಗೆ ಹಣಕೊಡುವಂತೆ ಬದ್ಧನಾಗುತ್ತಾನೋ ಅಂತಾ ಯಾವ ದಸ್ತಾವೇಜನ್ನಾಗಲಿ ಅಡಗಿಸಿಕೊಂಡಿರುತದೆ.

'ಪ್ರಾಮಿಸೊರಿ ನೋಟ್' ಅಂದರೆ, ಯಾವ ದಸ್ತಾವೇಜಿನಿಂದ ಬರಕೊಡತಕ್ಕವನು ಗೊತ್ತಾದ ಒಂದು ಮೊಬಲಗನ್ನು ಮತ್ತೊಬ್ಬನಿಗೆ ಅದರಲ್ಲಿ ಕ್ಲುಪ್ತವಾದ ಕಾಲಕ್ಕೆ ಅಥವಾ ಕೇಳಿದಾಗ, ಅಥವಾ ಅಟ್ ಸೈಟನಲ್ಲಿ ಖಂಡಿತವಾಗಿ ಪಾವತಿ ಮಾಡುವಂತೆ ಬದ್ಧನಾಗುತ್ತಾನೋ ಅಂತಾ ಯಾವ ದಸ್ತಾವೇಜಾದರೂ ಯಂತ ಅರ್ಥವು.

'ಸ್ಥಿತಿ ಸಂರಕ್ಷಕ' ಎಂಬಮಾತು ಬಿನಾಮಿದಾರನನ್ನು ಯಾ ಅಡಮಾನದ ಮೊಬಲಗು ವಸೂಲ್ಮಾಡಿಕೊಂಡಮೇಲೆ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿರುವವನನ್ನು ಯಾ ತನಿಗೆ ಹಕ್ಕಿಲ್ಲದೆ ಇರುವಲ್ಲಿ ಅಕ್ರಮವಾಗಿ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡು ಇರುವವನನ್ನು ಅಡಗಿಸಿಕೊಂಡಿರುವದಿಲ್ಲ.

'ದಾವಾ' ಎಂಬ ಮಾತು ಒಂದು ಅಪ್ಪೀಲನ್ನಾಗಲಿ, ಅರ್ಜಿಯನ್ನಾಗಲಿ, ಅಡಗಿಸಿಕೊಂಡಿರುವದಿಲ್ಲ.

'ರಿಜಿಸ್ಟರಾದ' ಅಂದರೆ ಸಂದರ್ಭದಿಂದ ತಿಳಿಯ ಬರುವ ದಸ್ತಾವೇಜು ಹುಟ್ಟಿದ ಅಥವಾ ಡಿಕ್ರಿ ಯಾ ಹುಕ್ಕುಂ ಮಿಗೆ ರುಜುವಾಗುವ ಕಾಲದಲ್ಲಿ ವ ಸ್ಥಳದಲ್ಲಿ ಜಾರೀಲಿರುವ, ದಸ್ತಾವೇಜುಗಳ ರಿಜಿಸ್ಟರ್ ಬಗ್ಯೆ ಇರುವ ಕಾನೂನಿಗನುಗುಣವಾಗಿ ಮೈಸೂರ್ ಶೀಮೆಯಲ್ಲಿ ಕ್ರಮವಾಗಿ ರಿಜಿಸ್ಟರಾದ್ದು ಯಂತ ಅರ್ಥ ಕೊಡುತ್ತದೆ.

'ಪರಾಯಿ ದೇಶ' ಅಂದರೆ ಮೈಸೂರು ದೇಶವಲ್ಲದ ಇತರದೇಶವೆಂತ ಅರ್ಥವಾಗುತ್ತದೆ;

ಮತ್ತು ತಕ್ಕ ಜಾಗ್ರತೆಯಿಂದ ವ ಶ್ರದ್ಧೆಯಿಂದ ಮಾಡಲ್ಪಡದೆ ಇರುವದನ್ನು 'ವಾಜಬಿಯಾಗಿ' ಮಾಡಲ್ಪಡುವಂತಾದ್ದಾಗಿ ಯೆಣಿಸಲ್ಪಡಕೂಡದು.

2ನೇ ಭಾಗ.

ದಾವೆಗಳು, ಅಪ್ಪೀಲ್‌ಗಳು ವ ಅರ್ಜಿಗಳು ಇವುಗಳ ಅವಧಿ ನಿರ್ಣಯ.

ಅವಧಿ ನಿರ್ಣಯದ ವಾಯಿದೆಯಾದ ನಂತರ ದಾಖಲ್ ವಗೈರೆ ಮಾಡಿದ ದಾವೆ ಮುಂತಾದವುಗಳನ್ನು ಡಿಸ್‌ಮಿಸ್ ಮಾಡುವಿಕೆ.

4. ಐದು ಮೊದಲ್ಗೊಂಡು ಇಪ್ಪತ್ತೈದರ ವರಿಗಿನ ಪ್ರಕರಣಗಳಲ್ಲಿ ಅಡಗಿರುವ ನಿಬಂಧನೆಗಳಿಗೆ ಒಳಪಟ್ಟದ್ದಾಗಿ ಇದಕ್ಕೆ ಸೇರಿದ ಎರಡನೇ ಪಟ್ಟಿಯಲ್ಲಿ ವಿಧಿಸಲ್ಪಟ್ಟಿರುವ ಅವಧಿ ನಿರ್ಣಯದ ವಾಯಿದೆ ಯಾದ ನಂತರ ದಾಖಲ್ಮಾಡಲ್ಪಡುವ ಪ್ರತಿ ದಾವೆಯನ್ನೂ, ಹಾಜರ್ಮಾಡಲ್ಪಡುವ ಅಪ್ಪೀಲನ್ನು ಮತ್ತು ಕೊಡಲ್ಪಡುವಅರ್ಜಿಯನ್ನೂ ತಳ್ಳಿಹಾಕತಕ್ಕದ್ದು, ಎದುರು ಕಕ್ಷಿಗಾರನು ಅವಧಿನಿರ್ಣಯದ ಸಬಬನ್ನು ವಾದಿಸದೇ ಇದ್ದಾಗ್ಯೂ ಚಿಂತೆಯಿಲ್ಲ.

ಟಿಪ್ಪಣಿ.—ಸಧಾರಣ ಸಂಗತಿಗಳಲ್ಲಿ ದಾವಾ ಅರ್ಜಿಯನ್ನು ಕ್ರಮವಾದ ಆಫೀಸರರಲ್ಲಿ ಹಾಜರ್ಮಾಡಿದರೆ ವ್ಯಾಜ್ಯ ದಾಖಲಾಗುತ್ತದೆ; ಪಾಪರ್ ವಿಷಯದಲ್ಲಿ, ಪಾಪರಾಗಿ ದಾವೇ ಮಾಡಲಿಕ್ಕೆ ಅಪ್ಪಣೇ ಬಗ್ಗೆ ಅವನ ಅರ್ಜಿಯು ದಾಖಲಾದರೆ ವ್ಯಾಜ್ಯ ದಾಖಲಾಗುತ್ತೆ; ಮತ್ತು ಕೋರ್ಟಿನವರಿಂದ ಮುಚ್ಚಿ ಬಿಡಲ್ಪಡುತ್ತಿರುವ ಒಂದು ಕಂಪೆನಿಯಮೇಲೆ ತರತಕ್ಕ ವ್ಯಾಜ್ಯದ ವಿಷಯದಲ್ಲಿ, ದಾವೇದಾರನು ತನ್ನ ದಾವೆಯನ್ನು ಅಫಿಷಿಯಲ್ ಲಿಕ್ವಿಡೇಟರ್ ಎಂಬ ಉದ್ಯೋಗಸ್ಥನ ಬಳಿಗೆ ಪ್ರಥಮತಃ ಕಳುಹಿಸಿದಲ್ಲಿ ವ್ಯಾಜ್ಯ ದಾಖಲಾಗುತ್ತೆ.

ಉದಾಹರಣೆಗಳು.

(a) ನಿರ್ದೇಶಿಸಲ್ಪಟ್ಟ ಲಿಮಿಟೇಷನ್ ವಾಯಿದೆ ಯಾದ ನಂತರ ಒಂದು ದಾವೇ ದಾಖಲಾಗುತ್ತದೆ. ಲಿಮಿಟೇಷನ್ ಸಬಬನ್ನು ಪ್ರತಿವಾದಿ ವಾದಿಸದೆ ಇರುವದರಿಂದ ವಾದಿಯಕಡೆ ಫೈಸಲಾಯಿತು. ಪ್ರತಿವಾದಿ ಅಪ್ಪೀಲ್‌ಮಾಡುತ್ತಾನೆ. ಅಪ್ಪೀಲ್ ಕೋರ್ಟಿನವರು ವ್ಯಾಜ್ಯವನ್ನು ಡಿಸ್‌ಮಿಸ್ ಮಾಡಬೇಕು.

(b) ನಿರ್ದೇಶಿಸಲ್ಪಟ್ಟ ವಾಯಿದೆ ಯಾದ ನಂತರ ಹಾಜರ್ಮಾಡಿದ ಒಂದು ಅಪ್ಪೀಲ್ ಅಂಗೀಕಾರವಾಗಿ ರಿಜಿಸ್ಟರಾಗುತ್ತೆ. ಹಾಗಿದ್ದಾಗ್ಯೂ ಸದರೀ ಅಪ್ಪೀಲ್ ಡಿಸ್‌ಮಿಸ್ ಮಾಡಲ್ಪಡತಕ್ಕದ್ದು.

ವಾಯಿದೆ ತೀರಿ ಹೋಗುವಾಗ ಕೋರ್ಟು ಮುಚ್ಚಿದ್ದರೆ ನಿಯಮ.

5. ದಾವೇ, ಅಪ್ಪೀಲ್ ಯಾ ಅರ್ಜಿ ಇವುಗಳ ಬಗ್ಯೆ ನಿರ್ದೇಶಿಸೋಣಾದ ಲಿಮಿಟೇಷನ್ ವಾಯಿದೆಯು, ಕೋರ್ಟು ಮುಚ್ಚಿರುವ ದಿನದಲ್ಲಿ ಮುಗಿದು ಹೋದರೆ ಸದರೀ ಕೋರ್ಟು ಪುನಹ ಖುಲ್ಲಾ ಆಗುವ ದಿನದಲ್ಲಿ ಸದರೀ ದಾವೆಯನ್ನು ದಾಖಲ್ಮಾಡ ಬಹುದು; ಅಪ್ಪೀಲ್ ಹಾಜರ್ಮಾಡ ಬಹುದು ಯಾ ಅರ್ಜಿಯನ್ನು ಕೊಡಬಹುದು.

ಅಪ್ಪೀಲ್‌ಗಳಿಗೂ, ಅರ್ಜಿಗಳಿಗೂ, ಪುನರ್ವಿಮರ್ಶೆ ಬಗ್ಯೆ ನಿಯಮ.

ಯಾವ ಅಪ್ಪೀಲನ್ನಾಗಲಿ ಅರ್ಜಿಯನ್ನಾಗಲಿ ಜಡ್ಜ್‌ಮೆಂಟ್ ಯಾನೆ ಫೈಸಲ್ ಪುನರ್ವಿಮರ್ಶೆ ಬಗ್ಯೆ ಅದಕ್ಕಾಗಿ ನಿರ್ದೇಶಿಸೋಣಾದ ಲಿಮಿಟೇಷನ್ ವಾಯಿದೆ ಯಾದ ನಂತರ ಹಿಡಿಯ ಬಹುದು, ಯಾವಾಗಂದರೆ, ಅಪ್ಪಿಲ್ ಮಾಡುವವನು ಯಾ ಅರ್ಜೀದಾರನು ಸದರೀ ವಾಯಿದೆಯೊಳಗಾಗಿ ಅಪ್ಪೀಲ್ ಹಾಜರ್ಮಾಡದೆ ಇದ್ದದ್ದಕ್ಕೋಸ್ಕರ ಯಾ ಅರ್ಜೀಕೊಡದೇ ಇದ್ದದ್ದಕ್ಕೋಸ್ಕರ ತಕ್ಕ ಸಬಬು ತೋರಿಸಿ ಕೋರ್ಟಿನವರಿಗೆ ತೃಪ್ತಿ ಪಡಿಸಿದರೆ ಆಗ ಹಿಡಿಯ ಬಹುದು.

ತೀರ್ಪಿನ ಪುನರ್ವಿಮರ್ಶೆ ಬಗ್ಯೆ ಬರುವ ಕೆಲವು ಅಪ್ಪೀಲ್‌ಗಳು ಅಥವಾ ಅರ್ಜೀಗಳಿಗೆ ಕಾಲನಿಬಂಧನೆ.

5. A. ಚೀಫ್ ಕೋರ್ಟಿನ ಯಾವದಾದರೂ ಹುಕುಂ ಅಥವಾ ಆಚರಣೆ ಅಥವಾ ತೀರ್ಪಿನಿಂದ ಅಪ್ಪೀಲ್ ವಾದಿಯು ಅಥವಾ ಅರ್ಜೀದಾರನು ದಾರಿತಪ್ಪಿದ್ದರಿಂದ ಅಂತಾ ಅಪ್ಪೀಲ್ ಅಥವಾ ಅರ್ಜೀಗೆ ವಿಧಾಯಕವಾಗಿರುವ ಕಾಲನಿಬಂಧನೆಯ ಪರಿಮಾಣ ಕಳದು ಹೋದ ತರುವಾಯ ಜಡ್ಜ್‌ಮೆಂಟಿನ ಪುನರ್ವಿಮರ್ಶೆ ಬಗ್ಯಾಗಿ ಒಂದು ಅಪ್ಪೀಲ್ ಅಥವಾ ಅರ್ಜಿಯು ದಾಖಲ್ಮಾಡಲ್ಪಟ್ಟಿರುತ್ತದೆಂದು ಕೋರ್ಟಿನವರಿಗೆ ತೃಪ್ತಿಯಾಗುವಂತೆ ತೋರಿಸಿಕೊಡಲ್ಪಟ್ಟಾಗ, ಅಂತಾ ಅಪ್ಪೀಲ್ ಅಥವಾ ಅರ್ಜಿಯು, ಇತರತಃ ಕಾನೂನಿಗೆ ಅನುಸಾರವಾಗಿದ್ದಲ್ಲಿ, ಅದಬಗ್ಯಾಗಿ ವಿಧಿಸಲ್ಪಟ್ಟಿರುವ ಕಾಲನಿಬಂಧನೆಯ ಪರಿಮಾಣದೊಳಗೇನೆ ಹಾಜರ್ಮಾಡಲ್ಪಟ್ಟಂತೆ ಎಲ್ಲಾ ಕೋರ್ಟುಗಳಿಂದಲೂ ಎಲ್ಲಾ ಉದ್ದೇಶಗಳಿಗೋಸ್ಕರವಾಗಿಯೂ ಭಾವಿಸಲ್ಪಡತಕ್ಕದ್ದು.

6. ಈಗ ಯಾ ಇನ್ನು ಮೇಲೆ ಮೈಸೂರ್ ದೇಶದ ಯಾವ ಭಾಗದಲ್ಲಾಗಲಿ ಜಾರೀಗೆ ಬರತಕ್ಕ ಯಾವದಾದರೂ ವಿಶೇಷ ಯಾ ಸ್ಥಳಿಕ ಕ್ವಾನೂನ್ನಿಂದ ಒಂದು ಲಿಮಿಟೇಷ್ಞ ವಾಯಿದೆಯು ಯಾವದಾದರೂ ದಾವೆಗಾಗಲಿ ಅಪೀಲ್‌ಗಾಗಲಿ ಯಾ ಅರ್ಜೀಗಾಗಲಿ ವಿಶೇಷವಾಗಿ ನಿರ್ದೇಶಿಸಲ್ಪಟ್ಟದ್ದ ಪಕ್ಷಕ್ಕೆ ಇದರಲ್ಲಿ ಅಡಗಿರುವ ಯಾವದೂ ಹಾಂಗೆ ನಿರ್ದೇಶಿಸಲ್ಪಟ್ಟ ಅವಧಿಯನ್ನು ಬದಲಾಯಿಸುವದಿಲ್ಲವು.

ವಿಶೇಷ ಮತ್ತು ಸ್ಥಳಿಕ ಲಿಮಿಟೇಷ್ಞ ಕಾನೂ೯ಗಳು.

7. ದಾವೇ ಮಾಡಲಿಕ್ಕೆ ಅಥವಾ ಅರ್ಜೀಕೊಡಲಿಕ್ಕೆ ಅರ್ಹನಾದ ಒಬ್ಬ ಮನುಷ್ಯನು, ಲಿಮಿಟೇಷನನ್ನು ಗಣಿಸಬೇಕಾದ ಕಾಲದಲ್ಲಿ ಮೈನರಾಗಿದ್ದರೆ ಯಾ ಹುಚ್ಚನಾಗಿದ್ದರೆ ಯಾ ಹುಟ್ಟು ಹುಚ್ಚನಾಗಿದ್ದರೆ ಸದರೀ ಅಶಕ್ತತೆ ನಿವಾರಣೆಯಾದ ಮೇಲೆ ಇದರೊಂದಿಗೆ ಶೇರುವ ಪಟ್ಟಿಯು ಮೂರನೇ ಮದ್ದಿನಲ್ಲಿ ಆ ಬಗ್ಯೆ ವಿಧಿಸಲ್ಪಟ್ಟ ಕಾಲದ ಮೊದಲು ಅನ್ಯಥಾ ಅಂಗೀಕರಿಸೋಣಾಗಿರುವಂತೆ, ಅಶಕ್ತತೆ ತೀರಿದ ತರುವಾಯು ಅದೇವಾಯಿದೆ ಒಳಗಾಗಿ ವ್ಯಾಜ್ಯ ದಾಖಲ್ಮಾಡ ಬಹುದು.

ನ್ಯಾಯಾನು ಸಾರವಾದ ಅಶಕ್ತತೆ.

ಲಿಮಿಟೇಷನನ್ನು ಗಣಿಸಬೇಕಾದ ಕಾಲದಲ್ಲಿ ಅವನಿಗೆ ಅಂತಾ ಎರಡು ಅಶಕ್ತತೆ ಉಂಟಾಗಿದ್ದರೆ, ಅಥವಾ ಅವನ ಅಶಕ್ತತೆ ನಿವೃತ್ತಿಯಾಗುವದಕ್ಕೆ ಮುಂಚಿತವಾಗಿ ಮತ್ತೊಂದು ಅಶಕ್ತತೆ ಪ್ರಾಪ್ತವಾದರೆ ಉಭಯ ಅಶಕ್ತತೆಗಳೂ ನಿವಾರಣೆಯಾದ ಮೇಲೆ, ಅಶಕ್ತತೆ ಪ್ರಾಪ್ತವಾಗದೇ ಇದ್ದ ಪಕ್ಷದಲ್ಲಿ ಹಾಗೆ ವಿಧಿಸೋಣಾದ ಕಾಲದ ಲಾಗಾಯಿತು ಅನ್ಯಥಾ ಅಂಗೀಕರಿಸಲ್ಪಟ್ಟದ್ದಂತೆ ಅದೇ ಕಾಲದೊಳಗಾಗಿ ವ್ಯಾಜ್ಯ ದಾಖಲ್ಮಾಡ ಬಹುದು ಯಾ ಅರ್ಜೀಕೊಡಬಹುದು.

ಎರಡು ಮತ್ತು ಪರಂಪರಾ ಅಶಕ್ತತೆಗಳು.

ಅವನ ಮರಣದ ವರಿವಿಗೂ ಅಶಕ್ತತೆ ಇದ್ದರೆ ನ್ಯಾಯವಾದ ಅವನ ವಾರಸ್ ದಾರನು, ಮರಣದ ತರುವಾಯು ಅದೇ ವಾಯಿದೆಯೊಳಗಾಗಿ, ಹಾಗೆ ವಿಧಿಸಲ್ಪಟ್ಟ ಕಾಲದ ಮೊದಲು ಅನ್ಯಥಾ ಅಂಗೀಕರಿಸಲ್ಪಟ್ಟರಬಹುದಾದಂತೆ ವ್ಯಾಜ್ಯ ದಾಖಲ್ಮಾಡ ಬಹುದು ಅಥವಾ ಅರ್ಜಿಕೊಡಬಹುದು.

ಮರಣವಾಗುವ ತಾರೀಖಿನಲ್ಲಿ ಅಂತಾ ವಾರಸ್‌ದಾರನು ಯಾವದಾದರೊಂದು ಅಶಕ್ತತೆಯುಳ್ಳವನಾಗಿದ್ದರೆ ಈ ಸೆಕ್ಷನಿನ ಮೊದಲನೇ ಎರಡು ಪ್ಯಾರೆಗ್ರಾಫ್‌ಗಳಲ್ಲಿ ಅಡಗಿರತಕ್ಕ ನಿಬಂಧನೆಗಳು ಲಗಾವಾಗತಕ್ಕವು.

ವಾರಸ್‌ದಾರನ ಅಶಕ್ತತೆ.

ಈ ಸೆಕ್ಷನ್ನಲ್ಲಿ ಅಡಗಿರುವ ಯಾವ ಅಂಶವೂ, ಅಶಕ್ತತೆ ನಿವೃತ್ತಿಯಾದ ಅಥವಾ ಅಶಕ್ತತೆ ಉಂಟಾದ ಮನುಷ್ಯನ ಮರಣದ ಮದಲು, ಮೂರು ಸಂವತ್ಸರಗಳಗಿಂತ ಹೆಚ್ಚಾಗಿ (rights of per-emption) ಬಾಧ್ಯತೆಯನ್ನು ಜಾರಿಯಲ್ಲಿ ತರುವ ಬಗ್ಯೆ ತರಲ್ಪಡುವ ವ್ಯಾಜ್ಯಗಳಿಗೆ ಲಗಾವಾಗುವ ದಿಲ್ಲವು, ಅಥವಾ ಯಾವ ವಾಯಿದೆ ಯೊಳಗಾಗಿ ಯಾವ ವ್ಯಾಜ್ಯವಾಗಲಿ ತರಲ್ಪಡರಕ್ಕದ್ದೋ ಅಥವಾ ಅರ್ಜಿಕೊಡಲ್ಪಡತಕ್ಕದ್ದೋ ಅಂತಾ ಕಾಲವನ್ನು ಹೆಚ್ಚಿಸತಕ್ಕದಾಗಿ ಎಣಿಸಕೂಡದು.

ಉದಾಹರಣೆಗಳು.

(*a*) ಒಂದು ದೋಣಿಯ ಬಾಡಿಗೆ ಬಗ್ಯೆ ದಾವಾಮಾಡಲಿಕ್ಕೆ ಹಕ್ಕು A ಎಂಬನು ಮೈನರಾಗಿದ್ದ ಕಾಲದಲ್ಲಿ ಅವನಿಗೆ ಹುಟ್ಟುತ್ತೆ, ಹಾಂಗೆ ಹಕ್ಕು ಹುಟ್ಟಿದ ನಾಲ್ಕು ವರುಷಗಳ ತರುವಾಯ ಅವನು ಪ್ರಾಯ ಪ್ರಬುದ್ಧನಾಗುತ್ತಾನೆ, ಅವನು ಪ್ರಾಯ ಪ್ರಬುದ್ಧನಾದ ತಾರೀಖು ಲಾಗಾಯಿತು 3 ವರುಷಗಳೊಳಗಾಗಿ ಯಾವಕಾಲದಲ್ಲಾದರೂ ಅವನು ವ್ಯಾಜ್ಯವನ್ನು ದಾಖಲ್ಮಾಡ ಬಹುದು.

(*b*) ಯಾರಿಗೆ ಮೈನರಾಗಿದ್ದ ಕಾಲದಲ್ಲಿ ಮರಣ ಶಾಸನದ ಬಾಬತು ಆಸ್ತಿ ಬಗ್ಯೆ ದಾವಾಮಾಡಲಿಕ್ಕೆ ಹಕ್ಕು ಹುಟ್ಟಿತೋ ಅಂತಾ A ಎಂಬ ಮನುಷ್ಯನು, ಸದರೀ ಹಕ್ಕು ಹುಟ್ಟಿದ ತರುವಾಯ ಹನ್ನೊಂದು ವರುಷಗಳಿಗೆ ಪ್ರಾಯ ಪ್ರಬುದ್ಧನಾಗುತ್ತಾನೆ, A ಎಂಬವನು ಸಾಧಾರಣವಾದ ಕಾನೂನಿನ ಪ್ರಕಾರ ದಾವೇ ಮಾಡಲಿಕ್ಕೆ ಒಂದು ಸಂವತ್ಸರ ಮಾತ್ರಾ ಉಳದಿರುತ್ತೆ. ಆದರೆ ಈ ಸೆಕ್ಷನ್ ಅನುಸರಿಶಿ ಅವನಿಗೆ ಯೆರಡುವರುಷಗಳ ಜಾಸ್ತೀವಾಯಿದೆ ಕೊಡಲ್ಪಡುವದು; ಅಂತು ಅವನು ಪ್ರಾಯ ಪ್ರಬುದ್ಧನಾದ ತಾರೀಖಿನಿಂದ ವಟ್ಟು ಮೂರು ಸಂವತ್ಸರವಾಗುತ್ತಾಗಿ ಅದರೊಳಗಾಗಿ ಅವನು ದಾವೇ ತರಬಹುದು.

(*c*) Z ಎಂಬವನು ಮೈನರಾಗಿರುವ ಕಾಲದಲ್ಲಿ ದಾವೇಮಾಡಲಿಕ್ಕೆ ಅವನಿಗೆ ಹಕ್ಕು ಹುಟ್ಟುತ್ತದೆ, ಹಾಂಗೆ ಹುಟ್ಟಿದ ಬಳಕ ಪರಂತು Z ಎಂಬುವನು ಮೈನರಾಗಿರುವಲ್ಲಿಯೇ ಹುಚ್ಚನಾಗುತ್ತಾನೆ, Z ಎಂಬವನು ದಾವೇ ಮಾಡಲಿಕ್ಕಿರುವ ಕಾಲವು ಅವನಿಗೆ ಹುಚ್ಚು ಮತ್ತು ಅವ್ಯವಹಾರತೆ ಬಿಟ್ಟತಾರೀಖು ಲಾಗಾಯಿತು ಅವಗುಣ ಕಾಲ ಗತಿಸುತ ಬರುತ್ತೆ.

(*d*) X ಎಂಬವನು ಮೈನರಾಗಿರುವ ಕಾಲದಲ್ಲಿ ದಾವೇ ಮಾಡಲಿಕ್ಕೆ ಅವನಿಗೆ ಹಕ್ಕು ಹುಟ್ಟುತ್ತದೆ, ಪರಂತು X ಎಂಬವನು ಪ್ರಾಯ ಪ್ರಬುದ್ಧನಾಗುವದಕ್ಕೆ ಮುಂಚಿತವಾಗಿ ಸಾಯುತ್ತಾನೆ, ಮತ್ತು Y ಎಂಬ ಅವನ

ಮೈನರಾದ ಮಗನಿಂದ ಅನುವರ್ತಿಸಲ್ಪಡುತ್ತಾನೆ, Y ಎಂಬವನಿಗೆ ದಾವೇ ಮಾಡಲಿಕ್ಕಿರುವ ಕಾಲವು ಅವನು ಪ್ರಾಯ ಪ್ರಬುದ್ಧನಾದ ತಾರೀಖು ಲಾಗಾಯತು ಅವನ ಅವಗುಣಕ್ಕಾಗಿ ಕಾಲಗತಿಸುತ ಬರುತ್ತೆ.

(e) ವಂಶ ಪಾರಂಪರ್ಯವಾಗಿ ಬರತಕ್ಕ ಬಂದು ಉದ್ಯೋಗದ ಬಗ್ಗೆ ವ್ಯಾಜ್ಯಮಾಡಲಿಕ್ಕೆ A ಎಂಬವನಿಗೆ ಹಕ್ಕು ಹುಟ್ಟುತ್ತೆ, ಆಕಾಲದಲ್ಲಿ ಅವನು ಹುಟ್ಟು ಹುಚ್ಚನಾಗಿರುತ್ತಾನೆ. ಬಾಧ್ಯತೆ ಉಂಟಾದ ಆರು ಸಂವತ್ಸರಗಳ ತರುವಾಯ A ಎಂಬವನಿಗೆ ಬುದ್ಧಿ ಸ್ವಾಧೀನವಾಗುತ್ತೆ. ಸಾಧಾರಣವಾದ ಕಾನೂನಿನ ಪ್ರಕಾರ ದಾವೇ ಮಾಡಲಿಕ್ಕೆ ಹುಚ್ಚುತನ ನಿವೃತ್ತಿಯಾದ ತಾರೀಖಿನಿಂದ ಆರು ಸಂವತ್ಸರಗಳು A ಎಂಬವನಿಗೆ ಇರುತದೆ. ಈ ಪ್ರಕರಣಕ್ಕನುಗುಣವಾಗಿ ಜಾಸ್ತಿಯಾಗಿ ಕಾಲವು ಕೊಡತಕ್ಕದ್ದಿಲ್ಲವು.

(f) ಬಕ್ಕಲಿನಿಂದ ಸ್ವಾಧೀನತ್ವವನ್ನು ತೆಗೆದುಕೊಳ್ಳಲಿಕ್ಕೆ ಮೂಲ ಕರ್ಜನ ಹಾಗೆ ಫಿರ್ಯಾದು ಮಾಡತಕ್ಕ ಹಕ್ಕು ಹುಟ್ಟು ಹುಚ್ಚನಾದ A ಎಂಬವನಿಗೆ ಹುಟ್ಟುತ್ತದೆ. A ಎಂಬವನು ಬಾಧ್ಯತೆ ಹುಟ್ಟಿದ ಮೂರು ವರುಷದ ತರುವಾಯ ಸಾಯುತ್ತಾನೆ. ಸಾಯುವ ತನಕ ಹುಟ್ಟು ಹುಚ್ಚುತನವಿತ್ತು, A ಎಂಬವನ ಸಂಬಂಧವುಳ್ಳ ವಾರಸದಾರನು ಸಾಧಾರಣವಾದ ಕಾನೂನ ಮೇರಿಗೆ ದಾವೇ ಮಾಡಲಿಕ್ಕೆ A ಎಂಬವನು ಮೃತಪಟ್ಟ ತಾರೀಖುಲಾಗಾಯತು ಬಂಭತ್ತು ವರುಷಗಳು ಇರುತ್ತದೆ. ವಾರಸದಾರನು, ತನಿಗೆ ವಾರಸ ಬಾಧ್ಯತೆ ಬಂದಾಗ ಅಶಕ್ತನಾಗಿ ಇದ್ದರೆಯೇ ಹೊರತು ಈ ಪ್ರಕರಣ ಆ ಕಾಲವನ್ನು ಜಾಸ್ತೀಮಾಡುವದಿಲ್ಲ.

ಒಬ್ಬ ಜೊತೆಗಾರನಾದ ಲೇಣೇದಾರನ ಅಶಕ್ತತೆ.

8. ಅನೇಕರು ಶೇರಿ ಸಾಲ ಕೊಟ್ಟವರ ಪೈಕೀ ಯಾ ದಾವೇ ಮಾಡುವವರ ಪೈಕೀ ಒಬ್ಬನು ಅಂತಾ ಅಶಕ್ತತೆಯಲ್ಲಿದ್ದರೆ ಮತ್ತು ಸದರೀ ಮನುಷ್ಯನ ಸಮ್ಮತಿ ಇಲ್ಲದೇನೇ ಫೈಸಲ್ಮಾಡಿಕೊಳ್ಳಬಹುದಾಗಿದ್ದರೆ, ಅವರೆಲ್ಲರ ಅವಗುಣಕ್ಕಾಗಿ ಕಾಲಗತಿಸುವದು, ಆದರೆ ಅಂತಾ ಫೈಸಲಾಗ ಕೂಡದ್ದಾಗಿದ್ದರೆ ಅವರುಗಳ ಪೈಕೀ ಒಬ್ಬನು, ಇತರರ ಸಮ್ಮತಿ ಇಲ್ಲದೆ ಹಾಗೆ ಫೈಸಲಾಗುವವಕ್ಕೆ ಶಕ್ತನಾಗುವ ತನಕ ಅವರುಗಳ ಪೈಕೀ ಯಾರಿಗೂ ಅವಗುಣವಾಗಿ ಕಾಲ ಗತಿಸುವದಿಲ್ಲವು.

ಉದಾಹರಣೆಗಳು.

(a) B, C, D ಎಂಬವರು ಪಾಲುಗಾರರಾಗಿ ಸೇರಿ ಇರತಕ್ಕ ಬಂದು 'ಘರಂ' ಯಾನೆ ಕೋಠೀಗೆ A ಎಂಬುವನು ಸಾಲಕೊಡಬೇಕಾಗುತ್ತೆ, B ಹುಚ್ಚ ನಾಗಿರುತ್ತಾನೆ, C ಮೈನರಾಗಿರುತ್ತಾನೆ, B ಮತ್ತು C ಇವರುಗಳ ಸಮ್ಮತಿ ಇಲ್ಲದೆಯೇ D ಎಂಬವನು ಸಾಲ ಫೈಸಲ್ಮಾಡಿಕೊಳ್ಳಬಹುದು, B, C, D ಇವರುಗಳ ಅವಗುಣಕ್ಕಾಗಿ ಕಾಲಗತಿಸುತ್ತೆ.

(b) A ಎಂಬವನು E, F, ಮತ್ತು G ಎಂಬವರು ಭಾಗಸ್ಥರಾಗಿರುವ ಬಂದು ಕೋಠೀಗೆ ಸಾಲಕೊಡಬೇಕಾಗಿರುತ್ತೆ, E ಮತ್ತು F ಹುಚ್ಚರಾಗಿದ್ದಾರೆ, G ಮೈನರಾಗಿದ್ದಾನೆ, E ಎಂಬವನಿಗಾಗಲಿ F ಎಂಬವನಿಗಾಗಲಿ ಹುಚ್ಚುತನಬಿಡುವ ಪರ್ಯಂತ ಅಥವಾ G ಎಂಬುವನು ವ್ಯವಹಾರ ದೆಶೆಯನ್ನು ಹೊಂದುವ ತನಕ ಅವರ ಪೈಕೀ ಯಾರ ಅವಗುಣಕ್ಕಾಗಿ ಯಾಗಲಿ ಕಾಲ ಗತಿಸುವದಿಲ್ಲ.

ಅವಿಚ್ಛಿನ್ನವಾಗಿ ಗತಿಸುವ ಕಾಲ.

9. ಕಾಲ ಗತಿಸುವವಕ್ಕೆ ವೊಂದುಸಲ ಷುರುವಾದ ಮೇಲೆ ದಾವೇ ಮಾಡಲಿಕ್ಕೆ ಅನಂತರ ಸಂಭವಿಸುವ ಅಶಕ್ತತೆ ಯಾ ಅಸಮರ್ಥತೆ ಅದನ್ನು ನಿಲ್ಲಿಸಲಾರದು.

ಪರಂತು, ವೊಬ್ಬ ದೇಣೇದಾರನ ಸ್ಥಿತಿಯ ಬಗ್ಗೆ ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷನ್ ಎಂಬ ಅಧಿಕಾರ ಪತ್ರಿಕೆಗಳನ್ನು ಅವನ ಲೇಣೇದಾರನಿಗೆ ಕೊಟ್ಟಿದ್ದರೆ ಸಾಲವನ್ನು ವಸೂಲ್ಮಾಡಲಿಕ್ಕೆ ದಾವೆಗೆ ವಿಧಿಸಲ್ಪಟ್ಟಿರುವ ಕಾಲದ ಗತಿಸುವಣವು, ಸದರೀ ಅಧಿಕಾರ ನಡೆಯುವ ತನಕ ನಿಂತಿರತಕ್ಕದ್ದು.

ಕಂಟ್ರೋಕ್ಟವಾಗಿ ಮೋಕರರಾದ ಸ್ಥಿತಿ ಸಂರಕ್ಷಕರ ಮೇಲೆ ವ ಅವರ ಪ್ರತಿನಿಧಿಗಳು. ಮೇಲಿನ ವ್ಯಾಜ್ಯಗಳು.

10. ಭರವಸದ ಮೇಲೆ ಯಾವನಾದರೊಂದು ಮುಖ್ಯ ಕಾರ್ಯಕ್ಕಾಗಿ ಯಾರಲ್ಲಿ ಸ್ವತ್ತು ಇಡೋಣಾಗಿದ್ಯೆಯೋ ಆ ಮನುಷ್ಯನ ಮೇಲೆ ಯಾ ನ್ಯಾಯ ತಪ್ಪಿ ಇರತಕ್ಕ ಅವನ ಪ್ರತಿನಿಧಿಗಳ ಮೇಲೆ ಅಥವಾ (ಮೌಲ್ಯಕ್ಕಾಗಿ ಪರಭಾರೆ ಹೊಂದದ) ಪರಭಾರೇದಾರ್ರ ಮೇಲೆ ಸದರೀ ಸ್ವತ್ತು ವೊಂದು ಮುಖ್ಯ ಕಾರ್ಯದ ಬಗ್ಗೆ ಅವನ ಯಾ ಅವರ ಕೈಗೆ ಬರುವ ಬಗ್ಗೆ ಇದರ ಹಿಂದೆ ಏನು ಅಡಗಿದ್ದಾಗ್ಯೂ, ವ್ಯಾಜ್ಯ ತರಲಿಕ್ಕೆ ಎಷ್ಟು ದಿವಸವಾದಾಗ್ಯೂ ಲಿಮಿಟೇಷನ್ ಬಾಧಕವಿಲ್ಲ.

ಪರಾಯಿ ದೇಶದ ಕರಾರುಗಳ ಮೇಲೆ ವ್ಯಾಜ್ಯಗಳು.

11. ಪರಾಯಿ ದೇಶದಲ್ಲಿ ನಡೆದ ಕರಾರುಗಳ ಮೇಲೆ ಮೈಸೂರು ದೇಶದಲ್ಲಿ ತರಲ್ಪಡುವ ದಾವೆಗಳು ಈ ಆಕ್ಟಿನಿಂದ ವಿಧಿಸಲ್ಪಟ್ಟ ಕಾಯಿದೆಗಳಿಗೆ ಬಳಪಟ್ಟದ್ದಾಗಿವೆ.

ಪರಾಯಿ ದೇಶದಲ್ಲಿ ನಡೆದ ವೊಂದು ಕರಾರಿನ ಮೇಲೆ ಮೈಸೂರ್ ದೇಶದಲ್ಲಿ ತರಲ್ಪಡುವ ಒಂದು ದಾವೆಗೆ, ಅನ್ಯ ದೇಶದ ಯಾವ ಲಿಮಿಟೇಷನ್ ಕಾಯಿದೆಯೂ ಪ್ರತಿವಾದಿಗೆ ವಾದಿಸುವದಕ್ಕೆ ಆಸ್ಪದ ಕೊಡತಕ್ಕದ್ದಲ್ಲ. ಸದರೀ ಕಾಯಿದೆಯಿಂದ ಕರಾರು ಅಡಗಿಹೋಗಿ ಅಂತಾ ಕಾಯಿದೆಯಿಂದ ವಿಧಿಸಲ್ಪಟ್ಟಿರುವ ಕಾಲದಲ್ಲಿ ಆ ದೇಶದಲ್ಲಿ ಕಕ್ಷಿಗಾರರು ಅನ್ಯೋನ್ಯವಾಗಿ ವಾಸ ಮಾಡಿ ಇದ್ದರೇನೇ ಹೊರ್ತು ಆ ಪ್ರಕಾರ ವಾದಿಸುವದಕ್ಕೆ ಆ ಕಾಯಿದೆಯಿಂದ ಆಸ್ಪದ ಉಂಟಾಗುವದಿಲ್ಲ.

ಅನ್ಯ ದೇಶದ ಅವಧಿ ನಿರ್ಣಯದ ಕಾನೂನ್.

3ನೇ ಭಾಗ.

ಲಿಮಿಟೇಷನ್ ಕಾಯಿದೆಯನ್ನು ಗಣಿಸುವಿಕೆ.

ದಾವೇ ಮಾಡತಕ್ಕ ಹಕ್ಕು ಹುಟ್ಟುವ ದಿವಸವನ್ನ ತಳ್ಳಿ ಬಿಡುವಣ.

12. ಯಾವ ವ್ಯಾಜ್ಯದ ಬಗ್ಯಾಗಲಿ, ಅಪ್ಪೀಲಿನ ಬಗ್ಯಾಗಲಿ, ಅರ್ಜೀಬಗ್ಯಾಗಲಿ, ವಿಧಿಸಲ್ಪಟ್ಟಿರುವ ಲಿಮಿಟೇಷನ್ ಕಾಯಿದೆಯನ್ನು ಗಣಿಸುವಲ್ಲಿ ಯಾವ ದಿವಸದ ಮೊದಲು ಅಂತಾ ಕಾಲವನ್ನು ಗಣಿಸತಕ್ಕದ್ದೋ ಆ ದಿವಸವನ್ನು ತಳ್ಳಿ ಹಾಕತಕ್ಕದ್ದು.

ಅಪ್ಪೀಲ್‌ಗಳ ವ ಕೆಲವು ಅರ್ಜೀಗಳ ವಿಷಯದಲ್ಲಿ ತಳ್ಳುಪಡಿಗಳು.

ಅಪ್ಪೀಲ್ ಬಗ್ಯೆ, ಪಾಪರಾಗಿ (ಯಾನೆ ನಿರಾಧಾರಿಯಾಗಿ) ಅಪ್ಪೀಲ್ ಮಾಡಲಿಕ್ಕೆ ಅಪ್ಪಣೆಗೋಸ್ಕರ ಕೊಡಲ್ಪಡುವ ಅರ್ಜೀ ಬಗ್ಯೆ ಮತ್ತು ಜಡ್ಜಮೆಂಟಿನ ಪುನರ್ವಿಮರ್ಶೆಗಾಗಿ ಕೊಲ್ಪಡುವ ಅರ್ಜೀ ಬಗ್ಯೆ ವಿಧಿಸಲ್ಪಟ್ಟಿರುವ ಲಿಮಿಟೇಷನ್ ಕಾಯಿದೆಯನ್ನು ಗಣಿಸುವಲ್ಲಿ, ಅಪ್ಪೀಲ್ ಮಾಡಲ್ಪಟ್ಟ ಜಡ್ಜಿಮೆಂಟ್ ವೋದಿ ಹೇಳಿದ ದಿನವನ್ನು ಮತ್ತು ಅಪ್ಪೀಲ್ ಮಾಡಲ್ಪಟ್ಟ ಯಾ ರಿವ್ಯೂ ಖಾಯಿಷ್ ಮಾಡುವಂಥಾದ ಡಿಕ್ರಿಯು ಯಾ ಸಜಾನಾಮೆಯು ಯಾ ಹುಕ್ಕುಮಿನ ನಕಲನ್ನು ಪಡೆಯುವದಕ್ಕೆ ತಗಲಿದ ಕಾಲವನ್ನು ತಳ್ಳಿ ಹಾಕತಕ್ಕದ್ದು.

ಒಂದು ಡಿಕ್ರೀ ಮೇಲೆ ಅಪ್ಪೀಲ್ ಆದರೆ ಯಾ ಪುನರ್ವಿಮರ್ಶೆ ಖಾಯಿಷ್ ಮಾಡಲ್ಪಟ್ಟರೆ ಯಾವ ಜಡ್ಜಮೆಂಟಿನ ಮೇಲೆ ಸದರೀ ತೀರ್ಪು ಕೊಡೋಣಾಗುತ್ತೋ ಅಂತಾ ಜಡ್ಜಮೆಂಟಿನ ಒಂದು ನಕಲನ್ನು ಪಡೆಯಲಿಕ್ಕೆ ತಗಲಿದ ಕಾಲವನ್ನು ಸಹ ತಳ್ಳಿ ಹಾಕತಕ್ಕದ್ದು.

ಒಂದು ತೀರ್ಪನ್ನು ತಳ್ಳಿ ಹಾಕಬೇಕೆಂದು ಕೊಡಲ್ಪಡುವ ಅರ್ಜೀಬಗ್ಯೆ ವಿಧಿಸಲ್ಪಟ್ಟ ಲಿಮಿಟೇಷನ್ ಕಾಯಿದೆಯನ್ನು ಗಣಿಸುವಲ್ಲಿ, ಅಂತಾ ತೀರ್ಪಿನ ನಕಲನ್ನು ಪಡಯಲಿಕ್ಕೆ ತಗಲಿದ ಕಾಲವನ್ನು ತಳ್ಳಿ ಹಾಕತಕ್ಕದ್ದು.

ಮೈಸೂರು ದೇಶದಲ್ಲಿ ಪ್ರತಿವಾದಿಯ ಗೈರಹಾಜರೀ ಕಾಲವನ್ನು ತಳ್ಳಿಬಿಡುವಣ.

13. ಯಾವ ವ್ಯಾಜ್ಯದ ಬಗ್ಯಾದರೂ ವಿಧಿಸಲ್ಪಟ್ಟಿರುವ ಲಿಮಿಟೇಷನ್ ಕಾಯಿದೆಯನ್ನು ಗಣಿಸುವಲ್ಲಿ ಪ್ರತಿವಾದಿಯಾದವನು ಮೈಸೂರು ದೇಶದಲ್ಲಿ ಇಲ್ಲದೇಯಿದ್ದ ಕಾಲವನ್ನು ತಳ್ಳಿ ಹಾಕತಕ್ಕದ್ದು.

ಅಧಿಕಾರ ಇಲ್ಲದ ಕೋರ್ಟಿನಲ್ಲಿ ಪ್ರಾಮಾಣಿಕವಾಗಿ ದಾವೇ ಮಾಡುವ ಕಾಲವನ್ನು ತಳ್ಳಿಬಿಡುವಣ.

14. ಯಾವ ವ್ಯಾಜ್ಯದ ಬಗ್ಯಾದರೂ ವಿಧಿಸಲ್ಪಟ್ಟಿರುವ ಲಿಮಿಟೇಷನ್ ಕಾಯಿದೆಯನ್ನು ಗಣಿಸುವಲ್ಲಿ ಕೆಳ ಕೋರ್ಟಿನಲ್ಲಾಗಲಿ ಅಪ್ಪೀಲ್ ಕೋರ್ಟಿನಲ್ಲಾಗಲಿ ಪ್ರತಿವಾದಿಯ ಮೇಲೆ ವಾದಿಯಾದಂತಾವನು ತಕ್ಕ ಜಾಗರೂಕತೆಯಿಂದ ಮತ್ತೊಂದು ಸಿವಿಲ್ ವ್ಯಾಜ್ಯವನ್ನು ನಡೆಸುತ್ತಿದ್ದ ಪಕ್ಷದಲ್ಲಿ ಆ ಕಾಲವನ್ನು ತಳ್ಳಿ ಹಾಕತಕ್ಕದ್ದು. ಆದರೆ ಅಂತಾ ವ್ಯಾಜ್ಯವು, ಈ ವ್ಯಾಜ್ಯದ ಬಾಬತು ಕಾರಣದ ಮೇಲೆಯೇ ಸ್ಥಾಪಿತವಾದ್ದಾಗಿ ಅಧಿಕಾರದ ಕೊರತೆಯು ಸಬಬಿನಿಂದ ಯಾ ಅಂತಾ ಇತರ ಸಬಬಿನಿಂದ ದರಿಯಾಫ್ತೀ ಮಾಡಲಿಕ್ಕೆ ಶಕ್ತಿ ಇಲ್ಲದಂಥಾ ಕೋರ್ಟಿನಲ್ಲಿ ನಿಶ್ಚಯವಾದ ನಂಬಿಕೆಯಿಂದ ದಾಖಲ್ಮಾಡಿದ್ದಾಗಿರಬೇಕು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡುವ ಹುಕುಮಿನ ಸಂಗತಿಯಲ್ಲಿ ಬದಸ್ತೂರ್ ತಳ್ಳಿ ಬಿಡುವಣ.

ಒಂದು ವ್ಯಾಜ್ಯದ ಬಗ್ಯೆ ವಿಧಿಸಲ್ಪಟ್ಟ ಲಿಮಿಟೇಷನ್ ಕಾಯಿದೆಯನ್ನು ಗಣಿಸುವಲ್ಲಿ, ಸಿವಿಲ್ ಪ್ರೊಸೀಡ್ಯೂರ್ ಕೋಡ್ 20ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡುವ ಹುಕ್ಕುಮಿನಿಂದ ಆ ವ್ಯಾಜ್ಯದ ನಡವಳಿತವು ನಿಲ್ಲಿಸಲ್ಪಟ್ಟಿರುವ ಸಂಗತಿಗಳಲ್ಲಿ ವ್ಯಾಜ್ಯ ದಾಖಲಾದ್ದಕ್ಕೂ, ಹಾಗೆ ನಡವಳಿತ ನಿಲ್ಲಿಸಲ್ಪಟ್ಟ ತಾರೀಖಿಗೂ, ಮಧ್ಯ ಕಾಲವನ್ನು ಮತ್ತು ನಡವಳಿತಗಳನ್ನು ನಿಲ್ಲಿಸಿ ಇರುವ ಕೋರ್ಟಿನಿಂದ ವ್ಯಾಜ್ಯವು ಮರಳಿ ದಾಖಲಾದ ಕೋರ್ಟಿಗೆ ಹೋಗುವದಕ್ಕೆ ಅವಶ್ಯಕವಾದ ಕಾಲವನ್ನು ತಳ್ಳಿಹಾಕತಕ್ಕದ್ದು.

ಯಾವದಾದರೂ ಅರ್ಜೀಬಗ್ಗೆವಿಧಿಸಲ್ಪಟ್ಟ ಲಿಮಿಟೇಷನ್ ವಾಯಿದೆಯನ್ನು ಗಣಿಸುವಲ್ಲಿ, ಯಾವ ಕಾಲದೊಳಗೆಅರ್ಜೀದಾರನು ಅಪೇಕ್ಷಪ್ರಯೋಜನದ ಬಗ್ಯೆ ಮತ್ತೊಂದು ಅರ್ಜೀ ಕೊಡುತ್ತಾನೋ ಅಂತಾ ಕಾಲವು, ತಳ್ಳಿಹಾಕಲ್ಪಡತಕ್ಕದ್ದು. ಯಾವ ಪಕ್ಷದಲ್ಲಂದರೆ ಯಾವ ಕೋರ್ಟನವರು ಅಧಿಕಾರ ಲೋಪದಿಂದಲಾಗಲಿ, ಅದೇವಿಧವಾದ ಇತರ ಕಾರಣದಿಂದಲಾಗಲಿ, ಅರ್ಜೀ ಪ್ರಕಾರ ನಡಿಸಲಿಕ್ಕೆ ಅಸಮರ್ಥರಾಗಿರುತ್ತಾರೋ ಅಂತಾ ಕೋರ್ಟಿಗೆ ನಿಶ್ಚಯವಾದ ನಂಬಿಕೆಯಿಂದ, ಕಡೇಲಿ ನಮೂದಿಸಿದ ಅರ್ಜೀ ಕೊಡಲ್ಪಟ್ಟ ಪಕ್ಷದಲ್ಲಿ ತಳ್ಳಿ ಹಾಕಲ್ಪಡತಕ್ಕದ್ದು.

ಅರ್ಜೀವಿಷಯದಲ್ಲಿ ಬದಸ್ತೂರ್ ತಳ್ಳಿಬಿಡುವಣ.

ಟಿಪ್ಪಣಿ 1.—ಹಿಂದಿನ ವ್ಯಾಜ್ಯ ಯಾ ಅರ್ಜಿ ನಡೆಯುತ್ತಾ ಯಾ ಮಾಡಲ್ಪಡುತ್ತಾ ಯಿದ್ದ ಕಾಲವನ್ನು ತಳ್ಳಿಹಾಕುವ ವಿಷಯದಲ್ಲಿ ಆ ದಾವೇ ಯಾ ಅರ್ಜೀದಾಖಲಾದ ಯಾ ಮಾಡಲ್ಪಟ್ಟ ದಿನವನ್ನೂ ಅದರ ನಡವಳಿತಗಳು ಮುಗಿದ ದಿನವನ್ನೂ ಶೇರಿಸಿಕೊಂಡು ಲೆಕ್ಕಮಾಡತಕ್ಕದ್ದು.

ಟಿಪ್ಪಣಿ 2.—ಹಾಜರ್ಮಾಡಲ್ಪಟ್ಟ ಅಪ್ಪೀಲನ್ನು ಅಧಿಕಾರದ ಕೊರತೆಯ ಸಬಬಿನ ಮೇಲೆ ಯೆದರಿಸುವ ವಾದಿಯು, ಈ ಪ್ರಕರಣದ ಭಾವಾನುಸಾರವಾಗಿ ವ್ಯಾಜ್ಯ ನಡೆಸುತ್ತಾ ಇದ್ದಾನೆಂದು ಯೆಣಿಸಲ್ಪಡತಕ್ಕದ್ದು.

ಇಂಜಂಕ್ಷನ್ ಹುಕ್ಕುಮಿನಿಂದ ವ್ಯಾಜ್ಯದ ಉಪಕ್ರಮು ನಿಂತಿದ್ದರೆ ಆ ಕಾಲವನ್ನು ತಳ್ಳಿ ಹಾಕುವಣ.

15. ಯಾವ ವ್ಯಾಜ್ಯ ದಾಖಲಾಗುವಣವು ಇಂಜಂಕ್ಷನ್ ಯಾ ಆರ್ಡರ್‌ನಿಂದ ನಿರೋಧಿಸಲ್ಪಟ್ಟಿರುತ್ತೋ ಅಂತಾ ಯಾವ ವ್ಯಾಜ್ಯದ ಬಗ್ಯಾದರೂ ವಿಧಿಸಲ್ಪಟ್ಟಿರುವ ಲಿಮಿಟೇಷನ್ ವಾಯಿದೆಯನ್ನು ಗಣಿಸುವಲ್ಲಿ, ಸದರೀ ಇಂಜಂಕ್ಷನ್ ಯಾ ಆರ್ಡರ್ ಜಾರೀಲಿ ಯಿದ್ದ ಕಾಲವನ್ನು, ಇಂಜಂಕ್ಷನ್ ಕೊಡಲ್ಪಟ್ಟ ಯಾ ಆರ್ಡರ್ ಮಾಡಲ್ಪಟ್ಟ ದಿನವನ್ನೂ, ಅದು ವಾಪಸ್ ತೆಗೆದುಕೊಳ್ಳಲ್ಪಟ್ಟ ದಿನವನ್ನೂ, ತಳ್ಳಿಹಾಕತಕ್ಕದ್ದು.

ಅಮಲ್‌ಜಾರೀ ವಿಕ್ರಯವನ್ನು ರದ್ದು ಪಡಿಸಬೇಕೆಂದು ಡಿಕ್ರೀ ಬಾಬತು ದೇಣೇದಾರನು ವ್ಯಾಜ್ಯ ನಡೆಸುವ ಕಾಲವನ್ನು ತಳ್ಳಿಹಾಕುವಣ.

16. ಡಿಕ್ರೀ ಅಮಲ್‌ಜಾರೀ ಮೂಲಕ ವಿಕ್ರಯವಾದ ಸ್ವತ್ತಿನ ಸ್ವಾಧೀನದ ಬಗ್ಯೆ ಅದನ್ನು ತೆಗದುಕೊಂಡವನು ವ್ಯಾಜ್ಯ ತರುವದಕ್ಕೋಸ್ಕರ ವಿಧಿಸಲ್ಪಟ್ಟಿರುವ ಲಿಮಿಟೇಷನ್ ವಾಯಿದೆಯನ್ನು ಗಣಿಸುವಲ್ಲಿ ಡಿಕ್ರಿಯಾದ ದೇಣೇದಾರನು ಸದರೀ ವಿಕ್ರಯವನ್ನು ರದ್ದುಪಡಿಸಬೇಕೆಂದು ವ್ಯಾಜ್ಯ ನಡಿಸುತ್ತಾ ಇದ್ದ ಕಾಲವನ್ನು ತಳ್ಳಿಹಾಕತಕ್ಕದ್ದು.

ದಾವೇ ಮಾಡಲಿಕ್ಕೆ ಹಕ್ಕು ಉಂಟಾಗುವದಕ್ಕೆ ಮುಂಚೆ ಮರಣ ಹೊಂದುವದರಿಂದುಂಟಾಗುವ ಫಲ.

17. ಯಾವನಾದರೂ, ಜೀವಂತನಾಗಿದ್ದರೆ ವ್ಯಾಜ್ಯ ಮಾಡುವ ಯಾ ಅರ್ಜೀ ಕೊಡುವ ಹಕ್ಕು ಹೊಂದುವವನಾಗಿದ್ದು ಅಂತಾ ಹಕ್ಕು ಉಂಟಾಗುವದಕ್ಕಿಂತ ಮುಂಚೆಯೇ ಸತ್ತು ಹೋದಲ್ಲಿ, ಸದರೀ ಮೃತಪಟ್ಟವನ ವಾರಸ್‌ದಾರನು ವ್ಯಾಜ್ಯ ಹಾಕಲಿಕ್ಕೆ ಯಾ ಅರ್ಜೀ ಕೊಡಲಿಕ್ಕೆ ಶಕ್ತನಾಗುವ ಕಾಲದ ಮೊದಲು ಲಿಮಿಟೇಷನ್ ವಾಯಿದೆಯನ್ನು ಗಣಿಸತಕ್ಕದ್ದು.

ಯಾವನಾದರೂ, ಅವನು ಜೀವಂತನಾಗಿದ್ದಲ್ಲಿ ವ್ಯಾಜ್ಯ ತರಲ್ಪಡಲಿಕ್ಕೆ ಗುರಿಯಾದವನಾಗಿದ್ದು ವ್ಯಾಜ್ಯಮಾಡುವ ಹಕ್ಕು ಉಂಟಾಗುವದಕ್ಕಿಂತ ಮುಂಚೆಯೇ ಸತ್ತುಹೋದರೆ ನ್ಯಾಯವಾದ ಅವನ ವಾರಸದಾರನಿದ್ದರೆ ಅವನ ಮೇಲೆ ವಾದಿಯು ವ್ಯಾಜ್ಯ ತರಬಹುದಾದ ಕಾಲದ ಮೊದಲು ಲಿಮಿಟೇಷನ್ ವಾಯಿದೆಯನ್ನು ಗಣಿಸತಕ್ಕದ್ದು.

ಈ ಸೆಕ್ಷನಿನ ಹಿಂದಿನ ಭಾಗದಲ್ಲಿರುವ ಯಾವ ಅಂಶವೂ (pre-emption) ಹಕ್ಕುದಾರಿಯನ್ನು ನಡಿಸುವದಕ್ಕೋಸ್ಕರ ತರಲ್ಪಡುವ ದಾವೆಗಳಿಗೆ, ಅಥವಾ ಸ್ಥಿರಸ್ವತ್ತಿನ ಸ್ವಾಧೀನತೆಯ ಬಗ್ಯಾಗಲಿ, ಪಾರಂಪರ್ಯವಾಗಿ ನಡೆದು ಬರುವ ಒಂದು ಉದ್ಯೋಗದ ಬಗ್ಯಾಗಲಿ ತರಲ್ಪಡುವ ದಾವೆಗಳಿಗೆ ಲಗಾವಾಗುವದಿಲ್ಲವು.

ಮೋಸದಿಂದುಂಟಾಗುವ ಫಲ.

18. ದಾವೇ ಮಾಡಲಿಕ್ಕೆ ಯಾ ಅರ್ಜೀ ಕೊಡಲಿಕ್ಕೆ ಹಕ್ಕುಉಳ್ಳ ಯಾವ ಮನುಷ್ಯನಿಗಾಗಲಿ, ಮೋಸದಿಂದ, ಸದರೀ ಹಕ್ಕು ಯಾ ಅದು ಯಾವದರ ಬಲದಿಂದ ಯಿಧೆಯೋ ಆ ಬಾಧ್ಯತೆಯು ತಿಳಿಸಲ್ಪಡದೇ ಇದ್ದರೆ ದಾವೇ ಮಾಡಲಿಕ್ಕೆ ಯಾ ಅರ್ಜೀ ಕೊಡಲಿಕ್ಕೆ ನಿಬಂಧನೆ ಮಾಡಲ್ಪಟ್ಟ ಕಾಲವು,

ಅಥವಾ ಸದರೀ ಹಕ್ಕನ್ನು ಸ್ಥಾಪಿಸಲಿಕ್ಕೆ ಅವಶ್ಯಕವಾದ ಯಾವ ದಸ್ತಾವೇಜಾಗಲಿ ಮೋಸದಿಂದ ಅವನಿಗೆ ತಿಳಿಯದೆ ಮರೆ ಮಾಡಲ್ಪಟ್ಟಿದ್ದರೆ,

(*a*) ಮೋಸ ಮಾಡಿದ ಯಾ ಆ ಬಗ್ಗೆ ಸಹಾಯ ಮಾಡಿದ ತಕಸೀರ್‌ವುಳ್ಳ ಮನುಷ್ಯನ ಅವಗುಣವಾಗಿ, ಅಥವಾ,

(*b*) ಹಾಜಬಿಯಾಗಿ ಅಲ್ಲದೇ ಬೇರೇ ಮಾರ್ಗವಾಗಿ ಮತ್ತು ಬೆಲೆಯುಳ್ಳ ಆಧಾರದ ಮೇಲೆ ಅವನ ಮುಖಾಂತರವಾಗಿ ದಾವೇ ಮಾಡುವ ಯಾವನಾದರೂ ಮನುಷ್ಯನ ಅವಗುಣವಾಗಿ,

ಒಂದು ದಾವೆಯನ್ನು ಷುರೂ ಮಾಡುವದಕ್ಕೋಸ್ಕರ ಗೊತ್ತಾದ ವಾಯಿದೆಯನ್ನು, ಸದರೀ ಮೋಸದಿಂದ ಹಾನಿಕರವಾಗಿ ಬಾಧಿಸಲ್ಪಟ್ಟ ಮನುಷ್ಯನಿಗೆ ಸದರೀ ಮೋಸವು ಪ್ರಥಮತಃ ಯಾವಾಗ ತಿಳಿಯಿತೋ ಆ ಕಾಲದಿಂದ ಗಣಿಸತಕ್ಕದ್ದು, ಅಥವಾ ಮರೆ ಮಾಡಲ್ಪಟ್ಟ ದಸ್ತಾವೇಜಿನ ವಿಷಯವಾಗಿದ್ದರೆ, ಅದನ್ನ ಬರಮಾಡಿಕೊಳ್ಳಲಿಕ್ಕೆ ಯಾ ಅದನ್ನು ಹಾಜರ್ಮಾಡಿಕೊಳ್ಳಲಿಕ್ಕೆ ಅನುಕೂಲತೆಯನ್ನು ಪ್ರಥಮತಃ ತಾನು ಯಾವಾಗ ಪಡೆದಿದ್ದನೋ ಆ ಕಾಲದಿಂದ ಸದರೀ ವಾಯಿದೆಯನ್ನು ಗಣಿಸತಕ್ಕದ್ದು.

ಬರಹಮೂಲಕವಾದ ರಸೀತಿಯಿಂದಲುಂಟಾಗುವ ಫಲ

19. ಯಾವ ಸ್ವತ್ತಿನ ಯಾ ಹಕ್ಕಿನ ವಿಷಯದಲ್ಲಾಗಲಿ, ಒಂದು ದಾವೆಗೆ ಯಾ ಅರ್ಜಿಗೆ ವಿಧಿಸಲ್ಪಟ್ಟ ಕಾಲ ಕಳೆದು ಹೋಗುವದಕ್ಕೆ ಮುಂಚಿತವಾಗಿ ಅಂತಾ ಸ್ವತ್ತನ್ನು ಯಾ ಹಕ್ಕನ್ನು ಕುರಿತ ಜವಾಬ್ದಾರಿಯ ಅಂಗೀಕಾರವು ಬರಹ ಮೂಲಕ ಅಂತಾ ಸ್ವತ್ತು ಯಾ ಹಕ್ಕು ಬಗ್ಗೆ ಯಾರ ಮೇಲೆ ದಾವಾ ಮಾಡಲ್ಪಟ್ಟಿದೆಯೋ ಅಂತಾವನಿಂದ ಅಥವಾ ಯಾರ ಮೂಲಕ ಬಾಧ್ಯತೆಯನ್ನು ಯಾ ಜವಾಬ್ದಾರೀಯನ್ನು ಅವನು ಪಡೆಯುತ್ತಾನೋ ಅಂತಾ ಮನುಷ್ಯನಿಂದ, ಮಾಡಲ್ಪಟ್ಟು ಅದಕ್ಕೆ ದಸ್ತಖತ್ ಮಾಡಲ್ಪಟ್ಟಿದ್ದಲ್ಲಿ ಮೊದಲಿನ ಜವಾಬ್ದಾರಿಯ ಸ್ವಭಾವಾನುಸಾರವಾಗಿ ಒಂದು ಲಿಮಿಟೇಷನ್ ವಾಯಿದೆಯು ಸದರೀ ವಾಗ್ದಾನ ಯಾ ಅಂಗೀಕಾರ ಹಾಂಗೆ ರುಜು ಮಾಡಲ್ಪಟ್ಟ ತಾರೀಖಿನಿಂದ ಗಣಿಸಲ್ಪಡತಕ್ಕದ್ದು.

ಸದರೀ ವಾಗ್ದಾನ ಯಾ ಅಂಗೀಕಾರ ಅಡಗಿರುವ ಲಿಖಿತದಲ್ಲಿ ತಾರೀಖು ನಮೂದಿಸದೇ ಇದ್ದರೆ ಅದಕ್ಕೆ ಯಾವಾಗ ರುಜು ಹಾಕಲ್ಪಟ್ಟಿತೋ ಆ ಕಾಲವನ್ನು ಕುರಿತು ಜುಬಾನೀ ಸಾಕ್ಷ್ಯವನ್ನು ಕೊಡಬಹುದು, ಆದರೆ ಸದರೀ ವಾಗ್ದಾನದ ಯಾ ಅಂಗೀಕಾರದಲ್ಲಿ ಬರದಂತಾವುಗಳ ವಿಷಯವಾಗಿ ಜುಬಾನೀ ಸಾಕ್ಷ್ಯವನ್ನು ಅಂಗೀಕರಿಸತಕ್ಕದ್ದಲ್ಲ.

ಟಿಪ್ಪಣಿ 1.—ಈ ಪ್ರಕರಣದ ಉದ್ದೇಶಾರ್ಥವಾಗಿ ವಾಗ್ದಾನವು ಯಾ ಅಂಗೀಕಾರವು ಸಾಕಾಗಿರಬಹುದು; ಅದರೊಳಗೆ ಸ್ವತ್ತಿನ ಯಾ ಹಕ್ಕಿನ ಸರಿಯಾದ ಸ್ವಭಾವವು ಬರಿಯದೇ ಬಿಟ್ಟಿದ್ದಾಗ್ಯೂ ಚಿಂತೆ ಇಲ್ಲ, ಅಥವಾ ಪಾವತೀ ಮಾಡತಕ್ಕ ಬಗ್ಗೆ ಯಾ ಕೊಟ್ಟು ಬಿಡತಕ್ಕ ಬಗ್ಗೆ ಯಾ ನೆರವೇರಿಸತಕ್ಕ ಬಗ್ಗೆ ಯಾ ಅನುಭವಿಸತಕ್ಕ ಬಗ್ಗೆ ಇನ್ನೂ ಕಾಲ ಬರಲಿಲ್ಲವೆಂದು ವಾದಿಸಿದಾಗ್ಯೂ; ಯಥಾ ಕೊಡುವದಿಲ್ಲವೆಂಬು ಯಾ ಪಾವತೀ ಮಾಡುವದಿಲ್ಲವೆಂದು ಯಾ ನೆರವೇರಿಸುವದಿಲ್ಲವೆಂದು ಯಾ ಅನುಭವಿಸುವಂತೆ ಅಪ್ಪಣೆಕೊಡುವದಿಲ್ಲವೆಂಬು ತಿರಸ್ಕರಿಸಿದಾಗ್ಯೂ, ಅಥವಾ ಬಾಕೀ ಆಗುವ ಮೊಬಲಗಿನಲ್ಲಿ ಮುಜರೇ ಕೊಡಬೇಕೆಂದು ವ್ಯಾಜ್ಯವಾಡಿದಾಗ್ಯೂ ಅಥವಾ ಸ್ವತ್ತಿಗೆ ಯಾ ಹಕ್ಕಿಗೆ ಬಾಧ್ಯಸ್ಥನಲ್ಲದ ಇತರ ಯಾವ ಮನುಷ್ಯನ ಹೆಸರಿಗಾಗಲಿ ಬರದಿದ್ದಾಗ್ಯೂ ಈ ಪ್ರಕರಣದ ಉದ್ದೇಶದ ಬಗ್ಗೆ ಅಂಗೀಕಾರ ಯಾ ವಾಗ್ದಾನ ಸಾಕಾಗಿರಬಹುದು.

ಟಿಪ್ಪಣಿ 2.—ಈ ಪ್ರಕರಣದಲ್ಲಿ "ದಸ್ತಖತ್ ಮಾಡಲ್ಪಟ್ಟ" ಅಂದರೆ ಖುದ್ದಾಗಿಯಾಗಲಿ ಈ ಬಗ್ಗೆ ಕ್ರಮ ಪ್ರಕಾರ ಅಧಿಕಾರ ಹೊಂದಿದ ಮುತಾಲೀಕನ ಮುಖಾಂತರವಾಗಲಿ, ದಸ್ತಖತ್ ಮಾಡಲ್ಪಟ್ಟದ್ದೆಂದು ಅರ್ಥವು.

ಅಂತಾ ಬಡ್ಡೀ ಕೊಡುವದರಿಂದುಂಟಾಗುವ ಫಲ.

20. ವಿಧಿಸಲ್ಪಟ್ಟ ವಾಯಿದೆಯು ಮುಗಿಯುವದರೊಳಗಾಗಿ, ಒಂದು ಸಾಲದ ಯಾ ಮರಣ ಶಾಸನದ ಸ್ವತ್ತು ಬಾಬತು ಬಡ್ಡಿಯು, ಬಡ್ಡಿಯಂತೆ ಸದರೀ ಸಾಲವನ್ನು ಯಾ ಮರಣ ಕಾಲದಲ್ಲಿ ಬಿಟ್ಟ ಸ್ವತ್ತನ್ನು, ಕೊಡಲಿಕ್ಕೆ ಗುರಿಯಾದ ಮನುಷ್ಯನಿಂದ, ಅಥವಾ ಈ ಬಗ್ಗೆ ಕ್ರಮವಾಗಿ ಅಧಿಕಾರಹೊಂದಿದ ಅವನ ಮುತಾಲೀಕನಿಂದ ಪಾವತೀಯಾದರೆ;

ಅಸಲಿನಲ್ಲಿ ಒಂದು ಭಾಗ ಕೊಡುವದರಿಂದುಂಟಾಗುವಫಲ

ಅಥವಾ ವಿಧಿಸೋಣಾದ ಸದರೀ ವಾಯಿದೆಯು ಕಳೆಯುವದರೊಳಗಾಗಿ, ದೇಣೇದಾರನಿಂದ ಯಾ ಈ ಬಗ್ಗೆ ಕ್ರಮವಾಗಿ ಅಧಿಕಾರ ಹೊಂದಿದ ಅವನ ಮುತಾಲೀಕನಿಂದ ಸಾಲ ಅಸಲಿನ ಪೈಕೀ ಒಂದು ಭಾಗ ಪಾವತೀ ಯಾದರೆ,

ಸದರೀ ಮೂಲ ಜವಾಬ್ದಾರಿಯ ಸ್ವಭಾವಾನುಸಾರವಾಗಿ, ಯಾವಾಗ ಪಾವತೀ ಮಾಡುವಣವಾಯಿತೋ ಆ ಕಾಲದಿಂದ ಒಂದು ಹೊಸ ಲಿಮಿಟೇಷ್ನ ವಾಯಿದೆಯನ್ನು ಗಣಿಸತಕ್ಕದ್ದು,

ಪರಂತು, ಸಾಲದ ಅಸಲಿನ ಒಂದು ಭಾಗವನ್ನ ಪಾವತೀ ಮಾಡಿದ ಹಣದ ವಿಷಯದಲ್ಲಿ, ಹಣ ಪಾವತೀ ಯಾದ ಸಂಗತಿಯು ಪಾವತೀ ಮಾಡಿದವನ ಸ್ವಂತ ಬರವಣಿಗೆಯಿಂದ ಬರೆದಿರಬೇಕು.

ಅಡಮಾನ ಹಾಕಿದ ಜಮೀನು ಅಡಮಾನ ತೆಗೆದುಕೊಂಡವನ ಸ್ವಾಧೀನದಲ್ಲಿದ್ದರೆ ಅಂತಾ ಜಮೀನಿನ ಹುಟ್ಟುವಳಿಯನ್ನು ತೆಗೆದು ಕೊಳ್ಳುವಣವು, ಈ ಪ್ರಕರಣದ ಕಾರ್ಯಕ್ಕಾಗಿ ಒಂದು ಪಾವತೀ ಯೆಂಬದಾಗಿ ಭಾವಿಸಲ್ಪಡತಕ್ಕದ್ದು.

ಅಡಮಾನದ ಜಮೀನಿನ ಹುಟ್ಟುವಳಿಯನ್ನು ತೆಗೆದು ಕೊಳ್ಳುವಣದರ ಫಲ.

21. ಸಮುದಾಯವಾದ ಕಂಟ್ರಾಕ್ಟುದಾರರು, ಭಾಗಸ್ತರು, ಎಗ್ಸಿಕ್ಯೂಟರ್‌ಗಳು, ಭೋಗ್ಯದಾರರು ಇವರುಗಳ ಪೈಕೀ ಒಬ್ಬನು ತಮ್ಮಲ್ಲಿ ಒಬ್ಬನು ಅಥವಾ ಅನೇಕರು ಅಥವಾ ಅವರ ತರಫ್ ಏಜಂಟರು ರುಜುಮಾಡಿ ರಶೀತಿ ಕೊಟ್ಟರೆಂಬ ಅಥವಾ ಹಣ ಪಾವತೀ ಮಾಡಿದರೆಂಬ ಕಾರಣದ ಮೇಲೆ ಜವಾಬ್ದಾರನಾಗುವದಕ್ಕೆ 19, 20ನೇ ಸೆಕ್ಷನ್‌ಗಳಲ್ಲಿ ಯೇನೂ ಯಾವ ಆಧಾರವೂ ಯಿಲ್ಲವು.

ಬಹುಮಂದಿ ಕಂಟ್ರಾಕ್ಟುದಾರ್ರು ವಗೈರೇರ ಪೈಕೀ ಒಬ್ಬನು, ತಮ್ಮಗಳ ಪೈಕೀ ಮತ್ತೊಬ್ಬನು ರಶೀತೀ ಅಥವಾ ಹಣ ಕೊಟ್ಟ ಬಗ್ಯೆ ಜವಾಬ್ದಾರನಾಗುವದಿಲ್ಲವು.

22. ದಾವೇ ದಾಖಲಾದ ಮೇಲೆ, ಒಬ್ಬ ಹೊಸ ವಾದಿಯನ್ನ ಯಾ ಪ್ರತಿವಾದಿಯನ್ನ ಬದಲಾಯಿಸಿದ್ದರಿಂದ ಯಾ ಶೇರಿಸಿದ್ದರಿಂದ ಸದರೀ ಯವನ ವಿಷಯವಾಗಿ ಅವನು ಯಾವಾಗ ಸದರೀ ಮೇರೆ ಕಕ್ಷಿಗಾರನಾಗಿ ಮಾಡಲ್ಪಟ್ಟನೋ ಆ ಕಾಲದಿಂದ ದಾವೇ ದಾಖಲಾಯಿತೆಂಬದಾಗಿ ಎಣಿಸತಕ್ಕದ್ದು,

ಹೊಸ ವಾದಿಯನ್ನಾಗಲೀ ಹೊಸ ಪ್ರತಿವಾದಿಯನ್ನಾಗಲೀ ಬದಲಾಗಿ ಇಡುವದರಿಂದ ಯಾ ಹೆಚ್ಚಾಗಿ ಶೇರಿಸುವದರಿಂದುಂಟಾಗುವ ಫಲ.

ಪರಂತು, ವಾದಿಯಾದವನು ಸತ್ತ ತರುವಾಯ ಅವನ ವಾರಸ್‌ದಾರನು ವ್ಯಾಜ್ಯವನ್ನು ನಡಿಸಿದರೆ, ಅವನ ವಿಷಯದಲ್ಲಿ ಸದರೀ ಮೃತಪಟ್ಟ ವಾದಿಯಿಂದ ವ್ಯಾಜ್ಯ ದಾಖಲ್ಮಾಡಲ್ಪಟ್ಟ ಕಾಲದಲ್ಲೇ ಅದು ದಾಖಲಾಯಿತೆಂತ ಗ್ರಹಿಸತಕ್ಕದ್ದು.

ಮೂಲವಾದಿ ಸತ್ತರೆ ನಿಯಮ.

ಪರಂತು, ಪ್ರತಿವಾದಿಯು ಮೃತಪಟ್ಟಾಗ ಅವನ ವಾರಸ್‌ದಾರರ ಮೇಲೆ ವ್ಯಾಜ್ಯವನ್ನು ನಡಿಸುತ್ತಾ ಬಂದರೆ ಸದರೀ ವಾರಸ್‌ದಾರರ ವಿಷಯದಲ್ಲಿ ಆ ಮೃತಪಟ್ಟ ಪ್ರತಿವಾದಿಯ ಮೇಲೆ ದಾವೇ ದಾಖಲಾದ ಕಾಲದಲ್ಲೇ ಅದು ದಾಖಲಾಯಿತೆಂತ ಗ್ರಹಿಸತಕ್ಕದ್ದು.

ಮೂಲ ಪ್ರತಿವಾದಿ ಸತ್ತರೆ ನಿಯಮ.

23. ಕರಾರು ತಪ್ಪಿನಡೆಯುತ್ತಲೇ ಇದ್ದ ಸಂಗತಿಯಲ್ಲಿ ಮತ್ತು ಕರಾರಿನ ನಿಸಬತ್ ಇಲ್ಲದೆ ಅಪರಾಧ ನಡೆಯುತ್ತಲೇ ಇದ್ದ ಸಂಗತಿಯಲ್ಲಿ, ಸದರೀ ಕರಾರ್ ತಪ್ಪಿ ನಡೆಯುವಣವಾಗಲಿ, ಅಪರಾಧವಾಗಲಿ, ಸಂದರ್ಭವಿದ್ದಂತೆ ನಡೆಯುತಿರುವ ಪ್ರತಿ ಸಮಯದಲ್ಲೂ ಹೊಸ ಲಿಮಿಟೇಷ್ನವಾಯಿದೆಯು ಆರಂಭಿಸುತ್ತದೆ.

ಕರಾರ್ ಉಲ್ಲಂಘನೆಗಳು ವ ಅಪರಾಧಗಳು ನಡೆಯುತಲೇ ಇರುವಣ.

24. ಒಂದು ಕೃತ್ಯದಿಂದ ನಿಜವಾದ ಒಂದು ಮುಖ್ಯನಷ್ಟ ಸಂಭವಿಸಿದ ಹೊರತು ಯಾವ ಕೃತ್ಯವು ವ್ಯಾಜ್ಯಕಾರಣವನ್ನು ವುಂಟು ಮಾಡುವದಿಲ್ಲವೋ ಅಂತಾ ಕೃತ್ಯಕ್ಕೋಸ್ಕರ ಭರ್ತೀ ಬಗ್ಯೆ ತರಲ್ಪಡುವ ವ್ಯಾಜ್ಯದ ಸಂಗತಿಯಲ್ಲಿ ಸದರೀ ನಷ್ಟ ವುಂಟಾಗುವ ಕಾಲದಿಂದ ಲಿಮಿಟೇಷ್ನ ವಾಯಿದೆಯನ್ನು ಗಣಿಸತಕ್ಕದ್ದು.

ಮುಖ್ಯವಾದ ನಷ್ಟವಿಲ್ಲದೆ ವ್ಯಾಜ್ಯ ತರಲಿಕ್ಕೆ ಆಗದ ಕೃತ್ಯಕ್ಕೋಸ್ಕರ ಭರ್ತೀ ಬಗ್ಯೆ ವ್ಯಾಜ್ಯ.

ಉದಾಹರಣೆ.

(a) ಒಂದು ಹೊಲದ ಮೇಲ್ಭಾಗವು A ಎಂಬವನಿಗೆ ಶೇರಿದ್ದು, ಕೆಳ್ಭಮೀನು B ಯಂಬವನಿಗೆ ಶೇರಿದ್ದು, B ಎಂಬವನು ಅಲ್ಲಿಂದ, ಮೇಲ್ ಭಾಗಕ್ಕೆ ತಾತ್ಕಾಲಿಕ ನಷ್ಟವೇನೂ ಇಲ್ಲದೆ ಕಲ್ಲಿದ್ದಲನ್ನು ಅಗೆಯುತ್ತಾನೆ, ಆದರೆ ಕಡೇಲಿ ಮೇಲ್ ಭಾಗವು ಕುಸಿದು ಬೀಳುತ್ತೆ. A ಎಂಬವನಿಂದ B ಎಂಬವನ ಮೇಲೆ ತರಲ್ಪಟ್ಟ ವ್ಯಾಜ್ಯದ ಸಂಗತಿಯಲ್ಲಿ ಲಿಮಿಟೇಷ್ನ ವಾಯಿದೆಯು ಭೂಮಿ ಕುಸಿದು ಬಿದ್ದ ಕಾಲದ ಮೊದಲು ಗತಿಸಲಾರಂಭಿಸುತ್ತೆ.

(b) A ಎಂಬವನು B ಎಂಬವನ ಮೇಲೆ, ಅಪವಾದದ ಮಾತುಗಳನ್ನು ಅಂದರೆ ಅವುಗಳಿಂದ ಮುಖ್ಯವಾದ ನುಕ್ಸಾನ್ ಉಂಟುಮಾಡದೆ, ಫಿರ್ಯಾದ್ ಮಾಡಲ್ಪಡಲಿಕ್ಕೆ ಅರ್ಹವಲ್ಲದ ಅವುಗಳನ್ನು ನುಡಿಯುತ್ತಾನೆ ಮತ್ತು

760

ಪ್ರಕಟಪಡಿಸುತ್ತಾನೆ, ಅದರ ದೆಶೆಯಿಂದ C ಎಂಬವನು B ಎಂಬವನನ್ನು ಕ್ಯಾಡ್ಡಾಗಿ ನೌಕರಿಯಲ್ಲಿ ಇಟ್ಟುಕೊಳ್ಳಲಿಕ್ಕೆ ನಿರಾಕರಿಸುತ್ತಾನೆ, ಅಪವಾದಕೋಸ್ಕರವಾದ ಭರ್ತೀಬಗ್ಗೆ B ಎಂಬವನಿಂದ A ಎಂಬವನ ಮೇಲೆ ತರಲ್ಪಡುವ ವ್ಯಾಜ್ಯದ ಸಂಗತಿಯಲ್ಲಿ ಲಿಮಿಟೇಷನ್ ವಾಯಿದೆಯು, ನಿರಾಕರಣ ಪರ್ಯಂತ ಆರಂಭಿಸುವದಿಲ್ಲವು.

ದಸ್ತಾವೇಜುಗಳಲ್ಲಿ ನಮೂದಿಸಿರುವ ಕಾಲವನ್ನು ಗಣಿಸುವಿಕೆ.

25. ಸಮಸ್ತ ದಸ್ತಾವೇಜುಗಳೂ ಈ ಆಕ್ಟಿನ ಉದ್ದೇಶಾರ್ಥವಾಗಿ ಗ್ರಿಗೋರಿಯನ್ ಪಂಚಾಂಗದ ಪ್ರಕಾರ ಹುಟ್ಟಿದಂತೆ ಎಣಿಸಲ್ಪಡತಕ್ಕದ್ದು.

ಉದಾಹರಣೆಗಳು.

(*a*) ಒಬ್ಬ ಹಿಂದುವು ಸ್ವದೇಶ ತಾರೀಖು ಮಾತ್ರವೇ ಬರೆದು ಸದರೀ ತಾರೀಖಿನಿಂದ ನಾಲ್ಕು ತಿಂಗಳಿಗೆ ಪಾವತೀ ಮಾಡುತ್ತೇನೆಂದು ಒಂದು ಪ್ರಾಮಿಸ್ಸೋರಿ ನೋಟೆಂಬ ಹುಂಡಿ ಬರೆಯುತ್ತಾನೆ, ಸದರೀ ನೋಟಿನ ಮೇಲೆ ತರೋಣಾಗುವ ದಾವೆಗೆ ಲಗಾವಾಗುವ ಲಿಮಿಟೇಷನ್ ವಾಯಿದೆಯು, ಗ್ರೆಗೋರಿಯನ್ ಪಂಚಾಂಗದ ಪ್ರಕಾರ ಗಣಿಸಲ್ಪಟ್ಟ ತಾರೀಖಿನಿಂದ ನಾಲ್ಕು ತಿಂಗಳು ಕಳೆದ ನಂತರ ಗತಿಸಲಾರಂಭಿಸುತ್ತದೆ.

(*b*) ಒಂದು ಸಂವತ್ಸರದೊಳಗಾಗಿ ಹಣವನ್ನು ವಾಪಸಸ ಮಾಡುತ್ತೇನೆಂತ ಒಬ್ಬ ಹಿಂದುವು ಸ್ವದೇಶ ತಾರೀಖನ್ನೇ ನಮೂದಿಸಿ ಒಂದು ಪತ್ರವನ್ನು ಬರೆಯುತ್ತಾನೆ, ಸದರೀ ಪತ್ರದ ಮೇಲೆ ತರೋಣಾಗುವ ದಾವೆಗೆ ಲಗಾವಾಗುವ ಲಿಮಿಟೇಷನ್ ವಾಯಿದೆಯು, ಗ್ರೆಗೋರಿಯನ್ ಪಂಚಾಂಗದ ಪ್ರಕಾರ ಗಣಿಸಲ್ಪಟ್ಟ ತಾರೀಖಿನಿಂದ ಒಂದು ಸಂವತ್ಸರ ಕಳೆದನಂತರ ಗತಿಸಲಾರಂಭಿಸುತ್ತದೆ.

4ನೇ ಭಾಗ.

ಸ್ವಾಧೀನದಿಂದ ಸ್ವತ್ತನ್ನು ಸಂಪಾದಿಸುವಿಕೆ.

ಇಜ್ಮೆಂಟಸ್ ಯಂಬ ಸರಾಗಗಳ ಹಕ್ಕಿನ ಸಂಪಾದನೆ,

26. ಸರಾಗವಾಗಿಯೂ, ಹಕ್ಕಿನಂತೆಯೂ, ಆಟಂಕವಿಲ್ಲದೆ ಮತ್ತು ಇಪ್ಪತ್ತು ಸಂವತ್ಸರಗಳ ವರಿವಿಗೆ ಒಂದು ಕಟ್ಟಣೆಕ್ಕೋಸ್ಕರ ಘಾಳಿಯನ್ನು ಯಾ ಬೆಳಕನ್ನು ಸುಖದಿಂದ ಅನುಭವಿಸಿಕೊಂಡಿದ್ದರೆ,

ಮತ್ತು ಯಾವದೊಂದು ಮಾರ್ಗವನ್ನು ಯಾ ನಿರಿನ ಕಾಲುವೆಯನ್ನು ಯಾ ನೀರಿನ ಉಪಯೋಗವನ್ನು ಯಾ ಇತರ ಈಜ್ಮೆಂಟ್ ಯಂಬ ಸರಾಗವನ್ನು, ಇಂತಾದ್ದು ಅನ್ವಯವಾಗಿಯಾಗಲಿ ವ್ಯತಿರೇಕವಾಗಿಯಾಗಲಿ ಇವುಗಳ ಹಕ್ಕು, ಬಾಧ್ಯತೆಯುಳ್ಳವನಾದ ಯಾವ ಮನುಷ್ಯನೇ ಆಗಲಿ, ಸರಾಗವಾಗಿಯೂ, ಹಕ್ಕಿನಂತೆಯೂ ನಿರಾತಂಕವಾಗಿ ಮತ್ತು ಇಪ್ಪತ್ತು ಸಂವತ್ಸರಗಳ ವರಿವಿಗೆ, ಸುಖವಾಗಿ ವ ಬಹಿರಂಗವಾಗಿ ಅನುಭವಿಸಿಕೊಂಡು ಬಂದಿದ್ದರೆ,

ಸದರೀ ಬೆಳಕು ಯಾ ಘಾಳಿ, ಮಾರ್ಗ, ನೀರಿನ ಕಾಲುವೆ, ನೀರನ್ನು ಉಪಯೋಗಿಸುವಿಕ್ಕೆ, ಯಾ ಇತರ ಸರಾಗ ಇವುಗಳ ಸಂಪಾದಿಸಿ ಉಪಯೋಗಿಸುತ್ತಾ ಬಂದ ಹಕ್ಕು ಸ್ವತಂತ್ರವಾದ್ದಾಗಿ ಯಾ ಭಂಗವಿಲ್ಲದೆ ಅನುಭವಿಸಿದ್ದಾಗಿ ಆಗತಕ್ಕದ್ದು.

ಸದರೀ ಇಪ್ಪತ್ತು ವರುಷಗಳ ಪ್ರತಿವಾಯಿದೆಯು, ಇದಕ್ಕೆ ಸಂಬಂಧಪಟ್ಟ ಬಾಧ್ಯತೆಯ ವಿಷಯದಲ್ಲಿ ವಿವಾದ ಸಂಭವಿಸಿ ದಾವಾ ದಾಖಲಾಗುವದಕಿಂತ ಎರಡು ಸಂವತ್ಸರಗಳೊಳಗೆ ಪೂರೈಸಿದ್ದಾಗಿರುವಂತೆ ಗ್ರಹಿಸಲ್ಪಡತಕ್ಕದ್ದು.

ಟಿಪ್ಪಣಿ.—ವಾಜ್ಯಗಾರನಲ್ಲದೆ ಇತರ ಮನುಷ್ಯನ ಕೃತ್ಯದಿಂದಾದ ಆಟಂಕದ ಸಬಬ್ ಸ್ವಾಧೀನ ಯಾ ಅನುಭವ ಶುದ್ಧಾಂಗವಾಗಿ ನಿಂತು ಹೋಗಿದ್ದರೆ ಹೊರ್ತು, ಮತ್ತು ಅಂತಾ ಆಟಂಕ ಉಂಟೆಂದು ಅದು ಘಲಾನೆಯವನಿಂದ ಉಂಟಾಯಿತೆಂದು ದಾವೇದಾರನಿಗೆ ತಿಳಿಯಬಂದ ತಾರೀಖಿನ ತರುವಾಯ ಒಂದು ಸಂವತ್ಸರದ ಮುಟ್ಟಿಗೆ ಆವನು ಅದಕ್ಕೆ ವಳಪಟ್ಟಿದ್ದರೆ ಯಾ ಸಮ್ಮತಿಸಿದ್ದರೆ ಹೊರ್ತು ಮತ್ಯಾವದೂ ಈ ಪ್ರಕರಣದ ಭಾವಾನುಸಾರವಾಗಿ ಅಟಂಕವೆಂದೆನಿಸಿಕೊಳ್ಳುವದಿಲ್ಲ.

ಉದಾಹರಣೆಗಳು.

(*a*) ಒಂದು ಮಾರ್ಗದ ಹಕ್ಕನ್ನು ಅಡ್ಡಿಮಾಡಿದ್ದಕ್ಕೋಸ್ಕರ 1881ನೇ ಇಸವಿಯಲ್ಲಿ ಒಂದು ದಾವೆಯು ತರಲ್ಪಟ್ಟಿತು. ಪ್ರತಿವಾದಿಯು, ಅಡ್ಡಿಮಾಡಿದ್ದನ್ನು ಒಪ್ಪಿಕೊಳ್ಳುತ್ತಾನೆ, ಆದರೆ ಮಾರ್ಗದ ಹಕ್ಕನ್ನು ಇನ್ಕಾರ್ ಮಾಡುತ್ತಾ 1860ನೇ ಇಸವಿ ಜನವರೀ ಮೊದಲನೇ ತಾರೀಖಿನಿಂದ 1880ನೇ ಜನವರೀ ಮೊದಲನೇ ತಾರೀಖು

761

ವರಿಗೆ, ಆಟಂಕವಿಲ್ಲದೆ ಸರಾಗವಾಗಿಯೂ, ಹಕ್ಕು ಉಳ್ಳಂತೆಯೂ, ಅದನ್ನು ಸುಖವಾಗಿಯೂ, ಬಹಿರಂಗವಾಗಿಯೂ, ಅನುಭವಿಸುತಿದ್ದೇನೆಂಬದಾಗಿ ವಾದಿಯು ರುಜು ಮಾಡುತ್ತಾನೆ, ವಾದಿಯು ತನ್ನ ಪರವಾಗಿ ಜಡ್ಜ್‌ಮೆಂಟ್ ಹೊಂದಲಿಕ್ಕೆ ಅರ್ಹನಾಗಿರುತ್ತಾನೆ.

(b) 1881ನೇ ಇಸವಿಯಲ್ಲಿಯೂ ತರಲ್ಪಟ್ಟ ಅಂತಾ ವ್ಯಾಜ್ಯದಲ್ಲಿ 1858ನೇ ಇಸವಿ ಲಾಗಾಯತು 1878ರವರಿಗೆ ಸದರೀ ಹಕ್ಕನ್ನು ಮೇಲ್ಕಂಡ ಮೇರಿಗೆ ಅನುಭವಿಸಿದೆನೆಂಬದನ್ನು ಮಾತ್ರವೇ ವಾದಿಯು ರುಜು ಮಾಡಿದನು. ದಾವೇ ದಾಖಲಾಗುವದಕ್ಕೆ ಮುಂಚೆ ಎರಡು ವರುಷಗಳ ಒಳಗಾಗಿ, ನಿಜವಾದ ಅನುಭವದಾರನು ಹಕ್ಕನ್ನು ನಡಿಸಿದಂತೆ ಅನುಭವಿಸಿದ ಹಾಗೆ ರುಜು ಮಾಡಿ ಕೊಡಲಿಲ್ಲವಾದ್ದರಿಂದ ದಾವೆಯನ್ನು ಡಿಸ್‌ಮಿಸ್ ಮಾಡತಕ್ಕದ್ದು.

(c) ಅಂತಾ ಒಂದು ಮೊಕದ್ದಮೆಯಲ್ಲಿ ವಾದಿಯು ಇಪ್ಪತ್ತು ಸಂವತ್ಸರಗಳ ವರಿವಿಗೆ ಸದರೀ ಹಕ್ಕನ್ನು ಸಾಖ್ಯವಾಗಿಯೂ ಬಹಿರಂಗವಾಗಿಯೂ ಅನುಭವಿಸುತಿದ್ದೆನೆಂಬವನ್ನು ತೋರಿಸಿದನು, ಸದರೀ ಇಪ್ಪತ್ತು ಸಂವತ್ಸರದೊಳಗೆ ಒಂದಾವರ್ತಿ ವಾದಿಯು ಸದರೀ ಹಕ್ಕನ್ನು ಅನುಭವಿಸಲಿಕ್ಕೆ ಅಪ್ಪಣೇ ಬಗ್ಯೆ ತನ್ನನ್ನ ಕೇಳಿ ಇದ್ದಾನೆಂಬದಾಗಿ ಪ್ರತಿವಾದಿ ರುಜು ಮಾಡುತ್ತಾನೆ, ದಾವೆಯನ್ನ ಡಿಸ್‌ಮಿಸ್ ಮಾಡತಕ್ಕದ್ದು.

ಬಬ್ಬರ ಕೈಕೆಳಗಿನ ಅನುಭವದಲ್ಲಿರುವ ಯಾವದಾದರೂ ಜಮೀನು ಉತ್ತರೋತ್ತರ ಯಾರ ಸ್ವಾಧೀನವಾಗುವದೋ ಅವರ ಪರವಾಗಿ ತಳ್ಳಿಹಾಕುವಣ.

27. ಪರಂತು, ಯಾವ ಜಮೀನು ಯಾ ನೀರಿನಮೇಲೆ ಅಥವಾ ಅದರ ಮೇಲ್ಭಾಗದಲ್ಲಿ ಅಥವಾ ಅದರಿಂದ ಯಾವ ಈಜ್‌ಮೆಂಟ್‌ಯಾನೆ ಸರಾಗವು ಅನುಭವಿಸಲ್ಪಟ್ಟಿರುತ್ತೋ ಯಾ ಹೊಂದಲ್ಪಟ್ಟಿರುತ್ತೋ ಅಂತಾ ಯಾವದಾದರೂ ಜಮೀನು ಯಾ ನೀರು, ಯಾವ ಜ್ಜೀವ ಅನುಭವಿಸುವ ಬಾಧ್ಯತೆಯ ಆಧಾರದ ಮೇಲೆ ಯಾ ಅಥಾರದಿಂದ ಅಥವಾ ಅಂತಾ ಸರಾಗವನ್ನು ಹೊಂದಿದ್ದು ಮೊದಲು ಮೂರು ವರುಷಗಳಿಗೆ ಮೇಲ್ಪಟ್ಟು ಎಷ್ಟರ ವಾಯಿದೆವರಿಗಾದರೂ, ಅಂತಾ ಬಾಧ್ಯತೆಯಾಗಲಿ ವಾಯಿದೆ ಯಾಗಲಿ ನಡೆದು ಬರುವಲ್ಲಿ ಅಂತಾ ಸರಾಗವನ್ನು ಅನುಭವಿಸುವ ಕಾಲವು, ಸದರೀ ಕಡೇಲಿ ನಮೂದಿಸಿದ ಇಪ್ಪತ್ತು ವರುಷಗಳ ವಾಯಿದೆಯನ್ನು ಗಣಿಸುವಲ್ಲಿ, ಅಂತಾ ಬಾಧ್ಯತೆಯಾಗಲಿ ವಾಯಿದೆ ಯಾಗಲಿ ನಿರ್ಣಯಿಸಲ್ಪಟ್ಟ ತರುವಾಯ ಅವ್ಯವಹಿತವಾಗಿ ಮೂರುವರುಷಗಳೊಳಗಾಗಿ, ಅಂತಾ ನಿರ್ಣಯದ ಮೇಲೆ, ಸದರೀ ಜಮೀನಿನ ಯಾ ನೀರಿನ ಮೂಲಕರ್ತನಿಂದ ಎದುರಿಸಲ್ಪಟ್ಟ ಸಂಗತಿಯಲ್ಲಿ ತಳ್ಳಿ ಹಾಕಲ್ಪಡತಕ್ಕದ್ದು.

ಉದಾಹರಣೆ.

B ಎಂಬವನ ಜಮೀನಿನ ಮೇಲೆ ದಾರೀ ಮಾಡಿಕ್ಕೊಂಡು ತಿರುಗಾಡುವ ಹಕ್ಕು ತನಗೆ ಉಂಟೆಂದು A ಎಂಬವನು ದಾವೇ ಮಾಡಿ ಅದನ್ನು ತಾನು ಇಪ್ಪತ್ತೈದು ಸಂವತ್ಸರಗಳವರಿವಿಗೆ ಅನುಭವಿಸಿದಂತೆ ರುಜು ಮಾಡುತ್ತಾನೆ. ಆದರೆ ಈ ಪೈಕೀ ಹತ್ತು ಸಂವತ್ಸರಗಳ ವರಿವಿಗೆ C ಎಂಬ ಹಿಂದೂ ವಿಧವಾ ಸ್ತ್ರೀಯೊಬ್ಬಳು ಆ ಜಮೀನನ್ನು ಮರಣಾವಧಿ ಅನುಭವಿಸುವ ಬಾಧ್ಯತೆ ಉಂಟಾಗಿದ್ದಳೆಂತಲೂ ಅವಳು ಸತ್ತ ತರುವಾಯ B ಅದಕ್ಕೆ ಹಕ್ಕುದಾರನೆಂತಲೂ ಅವಳು ಸತ್ತ ಯೆರಡು ಸಂವತ್ಸರಗಳೊಳಗಾಗಿಯೇ A ಎಂಬವನ ಹಕ್ಕಿನ ವಿಷಯದಲ್ಲಿ ತಕರಾರು ಮಾಡಿದನೆಂತಲೂ B ರುಜು ಮಾಡುತ್ತಾನೆ. ಈ ಪ್ರಕರಣದ ನಿಬಂಧನೆಗಳಿಗನುಗುಣವಾಗಿ A ಎಂಬವನು ಹದಿನೈದು ಸಂವತ್ಸರಗಳು ಮಾತ್ರ ಅನುಭವಿಸಿದಂತೆ ರುಜುವಾಯಿತಾದ್ದರಿಂದ ಈ ವ್ಯಾಜ್ಯವನ್ನು ಡಿಸ್‌ಮಿಸ್ ಮಾಡತಕ್ಕದ್ದು.

ಸ್ವತ್ತಿಗೆ ಉಂಟಾಗಿರುವ ಹಕ್ಕು ಉಡಾಯಿಸಿ ಹೋಗುವಿಕೆ.

28. ಯಾವ ಸ್ವತ್ತಿನ ಸ್ವಾಧೀನದ ಬಗ್ಯಾದರೂ ದಾವೆಮಾಡಲಿಕ್ಕೆ ಯಾವ ಮನುಷ್ಯನಿಗಾಗಲಿ ಇದರಿಂದ ನಿರ್ದೇಶಿಸೋಣಾಗಿರುವ ಲಿಮಿಟೇಷನ್ ವಾಯಿದೆಯು ನಿರ್ಣಯು ಕಾಲದಲ್ಲಿ ಸದರೀ ಸ್ವತ್ತಿಗೆ ಆವನಿಗಿದ್ದ ಹಕ್ಕು ನಿಂತು ಹೋಗತಕ್ಕದ್ದು.

ಎರಡನೇ ಷೆಡ್ಯೂಲ್.

(4ನೇ ಸೆಕ್ಷನನ್ನು ನೋಡತಕ್ಕದ್ದು.)

ಮೊದಲನೇ ಡಿವಿಜ಼ನ; ದಾವೆಗಳು.

ವ್ಯಾಜ್ಯದ ತಪಶೀಲ್.	ಲಿಮಿಟೇಷನ ವಾಯಿದೆ.	ವಾಯಿದೆ ನಡೆಯಲಾರಂಭಿಸುವಕಾಲ.
	IIನೇ ಭಾಗ—90 ದಿನಗಳು.	
2—ಮೈಸೂರ್ ಶೀಮೆಯಲ್ಲಿ ತತ್ಕಾಲಕ್ಕೆ ಜಾರೀಲಿರುವ ಚಟ್ಟಕ್ಕನುಗುಣವಾಗಿ ಒಂದು ಕೃತ್ಯವನ್ನು ಮಾಡಿದ್ದಕ್ಕೋಸ್ಕರ ಯಾ ಮಾಡದೇ ಬಿಟ್ಟದ್ದಕ್ಕೋಸ್ಕರ ಭರ್ತೀಬಗ್ಗೆ.	ತೊಂಭತ್ತು ದಿನಗಳು ..	ಕೃತ್ಯವನ್ನು ನಡೆಸಿದ ಯಾ ನಡೆಸದೇ ಬಿಟ್ಟಕಾಲ.
	IIIನೇ ಭಾಗ—ಆರು ತಿಂಗಳು.	
3—ಸ್ತ 1877ನೇ ಇಸವಿ ಸ್ಪೆಸಿಫಿಕ್ ರಿಲೀಫ್ ಆಕ್ಟು 9ನೇ ಸೆಕ್ಷನ ಅನುಸರಿಸಿ ಸ್ಥಾವರ ಸತ್ತು ಸ್ವಾಧೀನಕ್ಕೆ ಬರಮಾಡಿಕೊಳ್ಳುವ ಬಗ್ಗೆ.	ಆರು ತಿಂಗಳು ..	ಸ್ವಾಧೀನ ತಪ್ಪಿಹೋದ ಕಾಲ.
5—(ಪರಭಾರೆಯಾಗತಕ್ಕ ದಸ್ತಾವೇಜುಗಳ ವಿಷಯದಲ್ಲಿ ಫ್ರಾಡ್ ನಡವಳಿತವನ್ನು ಕುರಿತು) ಸಿವಿಲ್ ಪ್ರೊಸಿಡ್ಯೂರ್ ಕೋಡ್ 39ನೇ ಅಧ್ಯಾಯ ಪ್ರಕಾರ.	ಡಿಟೋ ..	ದಾವಾ ಮಾಡಲ್ಪಟ್ಟ ದಸ್ತಾವೇಜಿನ ಮೊಬಲಗು ಬಾಕೀಯಾಗಿ ಸಲ್ಲತಕ್ಕ ಕಾಲ.
	IVನೇ ಭಾಗ—ಒಂದು ವರುಷ.	
6—ಒಂದು ಸ್ಟ್ಯಾಟ್ಯೂಟ್ ಯಾ ಆಕ್ಟು ಯಾ ರೆಗ್ಯುಲೇಷನ ಯಾ ಬೈಲಾ ಇಂಥಾದ್ದಕ್ಕನುಗುಣವಾಗಿ ದಂಡ ಯಾ ಮುಟ್ಟುಗೋಳು ಕೊಡತಕ್ಕ ಬಗ್ಗೆ.	ಒಂದು ವರುಷ ..	ದಂಡ ಯಾ ಮುಟ್ಟುಗೋಳು ಸಂಭವಿಸಿದಾಗ.
7—ಮನೆ ಆಳಿನ ಯಾ ಶಿಲ್ಪಿಯ ಯಾ ಕೂಲಿಯವನ ಕೂಲೀ ಬಗ್ಗೆ.	ಡಿಟೋ ..	ಕೂಲಿ ಬಾಕೀಯಾಗುವಾಗ.
8—ಒಂದು ಹೋಟಲನ್ನೂ, ಟಾವರ್ನನ್ನೂ ಯಾ ಲಾಡ್ಜಿಂಗ್ ಹಾಸನ್ನೂ ಇಟ್ಟಿರುವಂತಾವನಿಂದ ಮಾರೋಣಾದ ಆಹಾರದ ಯಾ ಪಾನದ ಕ್ರಯಕ್ಕೋಸ್ಕರ.	ಡಿಟೋ ..	ಆಹಾರವನ್ನು ಯಾ ಪಾನವನ್ನು ಕೊಟ್ಟಾಗ.
9—ಬಿಡಾರದ ಬಾಡಿಗೆಗೋಸ್ಕರ.	ಡಿಟೋ ..	ಬಾಡಿಗೆ ಸಲ್ಲಬೇಕಾದ್ದ ಕಾಲ.
10—ಮುಂಚೆ ಕೊಂಡುಕೊಳ್ಳುವ ಹಕ್ಕನ್ನು, ಸದರೀ ಹಕ್ಕು ಕಾನೂನಿನ ಪ್ರಕಾರವಾಗಿರಲಿ ಸಾಧಾರಣ ವಾಡಿಕೇ ಪ್ರಕಾರವಾಗಿರಲಿ ವಿಶೇಷ ಕಾರಾರ್ ಅನುಸರಿಸಿ ಉಂಟಾದ್ದಾಗಿರಲಿ ಅದನ್ನು ಚಲಾಯಿಸಲಿಕ್ಕೆ.	ಡಿಟೋ ..	ಹರಾಜಿನಮೇಲೆ ಆಕ್ಷೇಪಣೆ ಉಂಟಾಗಿರುವಲ್ಲಿ ವಿಕ್ರಯಿಸಲ್ಪಟ್ಟ ದರೋಬಸ್ತು ಜಿಂದಗಿಯನ್ನು ಕ್ರಯದಾರನು ಸ್ವಾಧೀನ ಪಡಿಸಿಕೊಂಡರೆ, ತೆಗದುಕೊಂಡ ಪಕ್ಷಕ್ಕೆ ಅಥವಾ ಹರಾಜ್ ಮಾಡಲ್ಪಟ್ಟ ವಿಷಯವು ವಸ್ತುರೂಪವಾದ ಸ್ವಾಧೀನತೆಗೆ ಅವಕಾಶ ಕೊಡದೇ ಹರಾಜಿನ ದಸ್ತಾವೇಜು ರಿಜಿಸ್ಟರ್ ಮಾಡಲ್ಪಟ್ಟಾಗ.
11—ಹುಕ್ಕುಮಿನಲ್ಲಿ ಅಡಗಿರುವ ಸ್ವತ್ತಿಗೆ ತನ್ನ ಭಾಧ್ಯತೆಯನ್ನು ಅಥವಾ ಅದರ ತಾತ್ಕಾಲಿಕ ಸ್ವಾಧೀನತೆಯನ್ನು ಸ್ಥಿರಪಡಿಸಲಿಕ್ಕೆ ಸಿವಿಲ್ ಪ್ರೊಸೀಡ್ಯೂರ್ ಕೋಡಿನ 280—281—282 ಅಥವಾ 335ನೇ ಸೆಕ್ಷನಗಳ ಪ್ರಕಾರ ಯಾರ ಮೇಲೆ ಹುಕ್ಕುಂ ಕೊಡಲ್ಪಟ್ಟಿರುತ್ತೋ ಅಂತಾ ಮನುಷ್ಯನಿಂದ.	ಡಿಟೋ ..	ಹುಕ್ಕುಮಿನ ತಾರೀಖು.

ವ್ಯಾಜ್ಯದ ತಪಸೀಲ್.	ಲಿಮಿಟೇಷನ್ ವಾಯಿದೆ.	ವಾಯಿದೆ ನಡೆಯಲಾರಂಭಿಸುವ ಕಾಲ.
	IVನೇ ಭಾಗ—ಒಂದು ವರುಷ.	
12—ಈ ಕೆಳಗಣ ವಿಕ್ರಯಗಳ ಪೈಕೀ ಯಾವದನ್ನಾದರೂ ರದ್ದು ಪಡಿಸಲಿಕ್ಕೆ.	ಒಂದು ವರುಷ ..	ವಿಕ್ರಯು ಸ್ಥಿರಪಟ್ಟರೆ ಅಥವಾ ಅದರಮೇಲೆ ಅಂತಾ ದಾವೇ ತರಲ್ಪಡದಿದ್ದರೆ, ಸದರೀ ವಿಕ್ರಯು ಯಾವಾಗ ಆಖೈರಾಗಿ ಮುಗಿಯುತಿತ್ತೋ ಆವಾಗ.
(a) ಒಂದು ಸಿವಿಲ್ ಕೋರ್ಟಿನ ಡಿಕ್ರಿಯು ಅಮುಲ್‌ಜಾರಿಯಲ್ಲಿ ಆಗುವ ವಿಕ್ರಯು,		
(b) ಒಬ್ಬ ಡೆಪ್ಯುಟಿಕಮಿಷನರ ಯಾ ಇತರ ರೆವಿನ್ಯೂ ಆಫೀಸರನ ಡಿಕ್ರಿ ಯಾ ಆರ್ಡರಿಗನುಗುಣವಾಗಿ ಆಗುವ ವಿಕ್ರಯು,		
(c) ಗವರ್ನಮೆಂಟಿನ ಗೈರಾದೇ ಶಿಸ್ತಿನ ಬಗ್ಯೆ ಯಾ ಅಂತಾ ಗೈರಾದೇ ಬಾಬತು ಹಣ ವಸೂಲ್ಮಾಡಲಿಕ್ಕೆ,		
(d) ಚಾಲತೀ ಕಂದಾಯದ ಗೈರಾದೇ ಬಗ್ಯೆ ಮಾರಲ್ಪಡುವ ಒಂದು ಪಟ್ಣ ತಾಲ್ಲೂಕಿನ ವಿಕ್ರಯು.		
ಟಿಪ್ಪಣಿ:—ಈ ಕಲಮಿನಲ್ಲಿ ಪಟ್ಣ ಯೆಂಬ ಮಾತು, ತುರ್ತು ಗೈರಾದೇಯಲ್ಲಿರುವ ಶಿಸ್ತಿನ ಬಗ್ಯೆ ವಿಕ್ರಯಿಸಲ್ಪಡಲಿಕ್ಕೆ ಅರ್ಹವಾದ ಮಧ್ಯಗತ ಜಮೀನನ್ನು ಸೇರಿಸಿಕೊಂಡಿರುತ್ತೆ.		
13—ದಾವೆಯಲ್ಲದ ಇತರ ಯಾವದಾದರೂ ಪ್ರೊಸೀಡಿಂಗ್ಸಿನಲ್ಲಿ ಒಂದು ಸಿವಿಲ್ ಕೋರ್ಟಿನ ಒಂದು ಫೈಸಲನ್ನಾಗಲೀ, ಹುಕ್ಕುಮನ್ನಾಗಲಿ, ಬದಲಾಯಿಸಲಿಕ್ಕೆ ಯಾ ರದ್ದು ಮಾಡಲಿಕ್ಕೆ.	ಡಿಟೋ. ..	ಒಂದು ಮೊಕದ್ದಮೆಯನ್ನು ಆಖೈರ್ ವರಿಗೆ ವಿಚಾರಿಸಲಿಕ್ಕೆ ತಕ್ಕ ಒಂದು ಕೋರ್ಟಿನವರಿಂದ ಒಂದು ಮೊಕದ್ದಮೆಯಲ್ಲಿ ಕೊಡೋಣಾದ ಆಖೈರ್ ಫೈಸಲಿನ ಯಾ ಹುಕುಮಿನ ತಾರೀಖು.
14—ಇದರಲ್ಲಿ ಅನ್ಯಥಾ ಕಂಠೋಕ್ತವಾಗಿ ನಿಬಂಧಿಸದ ಸರಕಾರೀ ಉದ್ಯೋಗದಲ್ಲಿ ಮಾಡಲ್ಪಟ್ಟ ಒಬ್ಬ ಗವರ್ನಮೆಂಟ್ ಆಫಿಸರ ಕೃತ್ಯವನ್ನು ಯಾ ಹುಕ್ಕುಮನ್ನು ರದ್ದು ಮಾಡಲಿಕ್ಕೆ.	ಡಿಟೋ ..	ಕೃತ್ಯದ ಯಾ ಹುಕ್ಕುಮಿನ ತಾರೀಖು.
15—ಗವರ್ನಮೆಂಟ್ ರೆವಿನ್ಯೂ ಗೈರಾದೇ ಬಗ್ಯೆ ರೆವಿನ್ಯೂ ಅಧಿಕಾರಿಗಳು ಸ್ಥಿರಸ್ವತ್ತನ್ನು ಜಫ್ತೀ ಮಾಡಿದರೆ ಅಥವಾ ಪಟ್ಟೇ ಮಾಡಿಕೊಟ್ಟರೆ ಅಥವಾ ವರ್ಗಮಾಡಿದರೆ, ಇದು ರದ್ದು ಮಾಡಲಿಕ್ಕೋಸ್ಕರ ಗವರ್ನಮೆಂಟಿನವರ ಮೇಲೆ.	ಡಿಟೋ ..	ಜಫ್ತೀಮಾಡಿದಾಗ ಅಥವಾ ಪಟ್ಟೇ ಕೊಟ್ಟಾಗ ಅಥವಾ ವರ್ಗಮಾಡಿದಾಗ.
16—ರೆವಿನ್ಯೂ ಗೈರಾದೇ ಬಗ್ಯೆ ರೆವಿನ್ಯೂ ಅಧಿಕಾರಿಗಳು ಮಾಡೋಣಾದ ದಾವೆಗೋಸ್ಕರ ಅಥವಾ ಅಂತಾ ಗೈರಾದೇ ತರೀಕ್ ವಸೂಲಾಗಬೇಕಾದ ತಗಾದೆಗಳ ಬಗ್ಯೆ ಕೊಡತಕ್ಕದ್ದಲ್ಲವೆಂದು ಹೇಳಿಕೊಟ್ಟ ಮೊಬಲಗ್ ವಸೂಲ್ಮಾಡಿಕೊಳ್ಳಲಿಕ್ಕೆ, ಗವರ್ನಮೆಂಟಿನವರ ಮೇಲೆ.	ಡಿಟೋ ..	ಪಾವತೀಯಾದಾಗ.
17—ಸರ್ಕಾರ್ ಕೆಲಸಗಳಿಗಾಗಿ ತೆಗದುಕೊಂಡ ಜಮೀನ್ಗೋಸ್ಕರ ಈಡು ಮೊಬಲಗ್ ಬಗ್ಯೆ ಗವರ್ನಮೆಂಟಿನ ಮೇಲೆ.	ಡಿಟೋ ..	ಈಡು ಹಣ ಗೊತ್ತು ಮಾಡಿದ ತಾರೀಖು.
18—ಸಂಪೂರ್ಣವಾಗಿ ಭೂಮಿಯನ್ನು ತೆಗದುಕೊಳ್ಳದೆ ಇರುವಾಗ ಈಡು ಹಣದ ಬಗ್ಯೆ ಅಂತಾ ದಾವೆ.	ಡಿಟೋ ..	ಪೂರೈಸಲಿಕ್ಕೆ ನಿರಾಕರಿಸಿದ ತಾರೀಖು.
19—ಅಕ್ರಮ ಖೈದ್‌ಗಾಗಿ ಈಡು ಬಗ್ಯೆ.	ಡಿಟೋ ..	ಖೈದು ಮುಗಿಯುವಾಗ.
20—ಮೃತಪಟ್ಟ ಒಬ್ಬ ಮನುಷ್ಯನಿಗೆ ನಡಿಸಲ್ಪಟ್ಟ ಅನ್ಯಾಯಗಳ ವಿಚಾರವಾಗಿ ದಾವೆ ಮಾಡುವದಕ್ಕೂ, ಮಾಡಲ್ಪಡುವದಕ್ಕೂ ಎಗ್ಸಿಕ್ಯೂಟರ್‌ಗಳು, ಅಡ್ಮಿನಿಸ್ಟ್ರೇಟರ್‌ಗಳು ಪ್ರತಿನಿಧಿಗಳನ್ನು ಸಹ ಸಮರ್ಥಗೊಳಿಸುವಂತಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವದಾದರೂ ಕಾನೂನ್ ಪ್ರಕಾರ ಎಗ್ಸಿಕ್ಯೂಟರ್‌ಗಳಿಂದ, ಅಡ್ಮಿನಿಸ್ಟ್ರೇಟರ್‌ಗಳಿಂದ ಅಥವಾ ಪ್ರತಿನಿಧಿಗಳಿಂದ.	ಡಿಟೋ ..	ಹಾನಿ ಹೊಂದಿದವನು ಮೃತಪಟ್ಟ ತಾರೀಖು.

ವ್ಯಾಜ್ಯದ ತಪಶೀಲ್.	ಲಿಮಿಟೇಷರ್ನ ಮಾಯಿದೆ.	ಮಾಯಿದೆ ನಡೆಯಲಾರಂಭಿಸುವ ಕಾಲ.
	IVನೇ ಭಾಗ—ಒಂದು ವರುಷ.	
21—1892ನೇ ಇಸವಿಯ IIನೇ ನಂಬರ್ ರೆಗ್ಯುಲೇಷನ್ನ ಅನುಸರಿಸಿ ಎಗ್ಜಿಕ್ಯೂಟರರಗಳು, ಅಡ್ಮಿನಿಸ್ಟ್ರೇಟರರಗಳು, ವ ಪ್ರತಿನಿಧಿಗಳು, ಇಂತವರಿಂದ (ಫಿರ್ಯಾದ ಮಾಡಲ್ಪಡತಕ್ಕ ಕೆಡಕಿನಿಂದ ಉಂಟುಮಾಡಲ್ಪಟ್ಟ ಒಬ್ಬ ಮನುಷ್ಯನ ಮರಣದಿಂದ ಉಂಟಾದ ನಷ್ಟಕ್ಕಾಗಿ ಕುಟುಂಬಗಳಿಗೆ ಈಡು ಕೊಡುವಣ).	ಒಂದು ವರುಷ ..	ಕೊಲ್ಲಲ್ಪಟ್ಟ ಮನುಷ್ಯನು ಮೃತನಾದ ತಾರೀಖು.
22—ಒಬ್ಬ ಮನುಷ್ಯನಿಗೆ ಮಾಡುವ ಇತರ ಹಾನಿಯ ಬಗ್ಯೆ ಈಡು.	ಡಿಟೋ ..	ಹಾನಿ ಯುಂಟುಮಾಡಲ್ಪಟ್ಟಾಗ.
23—ಜಿದ್ದಿನಿಂದ ಮಾಡುವ ಫಿರ್ಯಾದಿಗೆ ಈಡು ಬಗ್ಯೆ.	ಡಿಟೋ ..	ವಾದಿ ಖುಲಾಸೆ ಮಾಡಲ್ಪಟ್ಟಾಗ ಅಥವಾ ಫಿರ್ಯಾದ್ ಇತರ ವಿಧದಿಂದ ಪೂರೈಸಿದಾಗ.
24—ಮಾನ ನಷ್ಟಕ್ಕಾಗಿ ಈಡು ಬಗ್ಯೆ.	ಡಿಟೋ ..	ಮಾನನಷ್ಟ ಪ್ರಕಟವಾದಾಗ.
25—ದೂಷಣೆಯ ಬಗ್ಯೆ.	ಡಿಟೋ ..	ದೂಷಣೆಯ ಮಾತುಗಳು ಆಡಿದಾಗ ಅಥವಾ ಆಡಿದ ಮಾತುಗಳು ಫಿರ್ಯಾದಿಗೆ ಅರ್ಹವಾಗದೆ ಇದ್ದು, ಫಿರ್ಯಾದ್ ಮಾಡಲ್ಪಟ್ಟ ಮುಖ್ಯವಾದ ನಷ್ಟ ವುಂಟಾದಾಗ.
26—ವಾದಿಯ ನವುಕರನನ್ನಾಗಲಿ, ಮಗಳನ್ನಾಗಲಿ, ಅಪಹರಿಸಿಕೊಂಡು ಹೋಗುವಣದರಿಂದ ಸಂಭವಿಸುವ ನವುಕರಿಯ ನಷ್ಟಕ್ಕಾಗಿ ಈಡು ಬಗ್ಯೆ.	ಡಿಟೋ ..	ನಷ್ಟ ಸಂಭವಿಸಿದಾಗ.
27—ವಾದಿ ಸಂಗಡ ಕರಾರನ್ನು ತಪ್ಪಲಿಕ್ಕೆ ಒಬ್ಬ ಮನುಷ್ಯನನ್ನು ಪ್ರೇರಿಸಿದ ಬಗ್ಯೆ ಈಡಿಗಾಗಿ.	ಡಿಟೋ ..	ಕರಾರ್ ಮೀರಿದ ತಾರೀಖು.
28—ಅನ್ಯಾಯ, ಅಕ್ರಮ ವ ಜಾಸ್ತೀ ಜಪ್ತೀ ಈ ಬಗ್ಯೆ ಈಡಿಗಾಗಿ.	ಡಿಟೋ ..	ಜಪ್ತೀ ತಾರೀಖು.
29—ನ್ಯಾಯದ ನಡವಳಿತದಲ್ಲಿ ಚರಸ್ವತ್ತಿನ ಅಕ್ರಮವಾದ ಮುಟ್ಟುಗೋಲಿಗಾಗಿ ಈಡ ಬಗ್ಯೆ.	ಡಿಟೋ ..	ಮುಟ್ಟುಗೋಲು ತಾರೀಖು.
	Vನೇ ಭಾಗ—ಎರಡು ವರುಷಗಳು.	
30—ಹೊರೆಯನ್ನು ಹೊತ್ತುಕೊಂಡು ಹೋಗುವಂತಾವನು ಸಾಮಾನುಗಳನ್ನು ಕಳೆದರೆ ಯಾ ಹಾನಿ ನಡಿಸಿದರೆ ಈಡು ಬಗ್ಯೆ ಅವನ ಮೇಲೆ.	ಎರಡು ವರುಷಗಳು ..	ನಷ್ಟವಾಗಲಿ, ಹಾನಿಯಾಗಲಿ, ವುಂಟಾದಾಗ.
31—ಸಾಮಾನುಗಳನ್ನು ಒಪ್ಪಿಸುವದರಲ್ಲಿ ಆಲಸ್ಯದ ಬಗ್ಯೆ ಹೊರೆಯನ್ನು ಹೊತ್ತುಕೊಂಡು ಹೋಗುವಂತಾವನ ಮೇಲೆ.	ಡಿಟೋ ..	ಸಾಮಾನುಗಳನ್ನು ಒಪ್ಪಿಸಬೇಕಾದ ಕಾಲ.
32—ನಿಯಮಿತವಾದ ಕೆಲಸಗಳ ಬಗ್ಯೆ ಸ್ವತ್ತನ್ನು ಉಪಯೋಗಿಸಲಿಕ್ಕೆ ಹಕ್ಕು ಉಂಟಾಗುವ ಮನುಷ್ಯನು ಅವುಗಳನ್ನ ಇತರ ಕೆಲಸಗಳಿಗೆ ಉಪಯೋಗಪಡಿಸಿದರೆ ಅವನಮೇಲೆ.	ಡಿಟೋ ..	ಉಪಯೋಗಿಸುವಣದರಿಂದ ಹಾನಿಯನ್ನು ಹೊಂದಿದ ಮನುಷ್ಯನಿಗೆ ಆ ಸಂಗತಿ ಪ್ರಥಮತಃ ತಿಳಿದಾಗ.
33—ಒಬ್ಬ ಮೃತಪಟ್ಟ ಮನುಷ್ಯನಿಗೆ ಅಥವಾ ಮನುಷ್ಯನಿಂದ ನಡಿಸಲ್ಪಟ್ಟ ಅನ್ಯಾಯಗಳ ವಿಚಾರವಾಗಿ ದಾವೆ ಮಾಡಲು ಮತ್ತು ಮಾಡಲ್ಪಡಲು ಎಗ್ಜಿಕ್ಯೂಟರರಗಳು ಅಡ್ಮಿನಿಸ್ಟ್ರೇಟರಗಳು ಅಥವಾ ಪ್ರತಿನಿಧಿಗಳನ್ನು ಸಮರ್ಥರಗೊಳಿಸುವಂತಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವದಾದರೂ ಕಾನೂನಿನನುಗುಣವಾಗಿ ಎಗ್ಜಿಕ್ಯೂಟರಿನ ಯಾ ಅಡ್ಮಿನಿಸ್ಟ್ರೇಟರಿನ ಯಾ ಇತರ ವಾರಸ್‌ದಾರನ ಮೇಲೆ.	ಡಿಟೋ ..	ಫಿರ್ಯಾದಾದ ಹಾನಿ ನಡದಾಗ.

ವ್ಯಾಜ್ಯದ ತಪಶೀಲ್.	ಲಿಮಿಟೇಷನ್ ವಾಯಿದೆ.	ವಾಯಿದೆ ನಡೆಯಲಾರಂಭಿಸುವ ಕಾಲ.
	Vನೇ ಭಾಗ—ಎರಡು ವರುಷಗಳು.	
34—ಹೆಂಡತಿಯನ್ನ ಸ್ವಾಧೀನ ಪಡಿಸಿಕೊಳ್ಳತಕ್ಕ ಬಗ್ಯೆ.	ಎರಡು ವರುಷ ..	ತನ್ನ ಬಳಿಗೆ ಕಳುಹಿಸಬೇಕೆಂದು ಕೇಳಿ ನಿರಾಕರಿಸಲ್ಪಟ್ಟಾಗ.
35—ವಿವಾಹ ಹಕ್ಕುಗಳನ್ನು ಪುನಸ್ಥಾಪನೆ ಬಗ್ಯೆ.	ಡಿಟೋ ..	ಪುನಸ್ಥಾಪನೆ ಬಗ್ಯೆ ಕೇಳಿದರೂ ನಿರಾಕರಿಸಲ್ಪಟ್ಟಾಗ.
36—ಕರಾರಿಗೆ ಬಳಪಡದಂತೆಯೂ, ಇದರಲ್ಲಿ ವಿಶೇಷವಾಗಿ ನಿಬಂಧನೆ ಯೇರ್ಪಡಿಸುವನಾಗದಂತಾ ಕೆಡಕಾದ ಯಾವ ಕೃತ್ಯವನ್ನಾದರೂ ಮಾಡಿದ ಬಗ್ಯೆ, ಮಾಡಲ್ಪೇಕಾದ ಕೃತ್ಯವನ್ನು ಮಾಡದೇ ಬಿಟ್ಟ ಬಗ್ಯೆ ಮಾಡಬಾರದಂತಾದ್ದನ್ನು ಮಾಡಿದ ಬಗ್ಯೆ ಹಾನಿಯುಂಟುಮಾಡಿದ್ದರಿಂದ ಕಂಪೆನ್‌ಸೇಷನ್ ಐವಜಿಗಾಗಿ.	ಡಿಟೋ ..	ಕೆಡಕನ್ನು ಮಾಡಿದ್ದಾಗ ಅಥವಾ ಲೋಪ ಸಂಭವಿಸಿದಾಗ ಅಥವಾ ಮಾಡಬಾರದ್ದನ್ನು ಮಾಡಿದಾಗ.
	VIನೇ ಭಾಗ—ಮೂರು ವರುಷಗಳು.	
37—ಬಂದು ಮಾರ್ಗವನ್ನಾಗಲಿ, ನೀರಿನ ಮಾರ್ಗವನ್ನಾಗಲಿ, ನಿರೋಧಿಸಿದ್ದಕ್ಕೋಸ್ಕರ ಕಂಪೆನ್‌ಸೇಷನ್ ಗಾಗಿ.	ಮೂರು ವರುಷ ..	ನಿರೋಧ ವುಂಟಾದಾಗ.
38—ನೀರಿನ ಮಾರ್ಗವನ್ನು ತಿರುಗಿಸಿದ್ದಕ್ಕೋಸ್ಕರ ಕಂಪೆನ್‌ಸೇಷನ್ ಬಗ್ಯೆ.	ಡಿಟೋ ..	ತಿರುಗಿಸಿದಾಗ.
39—ಸ್ಥಿರಸ್ವತ್ತಿನೊಳಗೆ ಅತಿಕ್ರಮ ಪ್ರವೇಶದ ಬಗ್ಯೆ.	ಡಿಟೋ ..	ಅತಿಕ್ರಮ ಪ್ರವೇಶವಾದಾಗ.
40—ಕಾಪಿರೈಟ್ ಯಾ ಇತರ ಯಾವ ಸರ್‍ವ ಸ್ವಾತಂತ್ರ್ಯದ ಹಕ್ಕನ್ನು ಅತಿಕ್ರಮಿಸಿದ ಬಗ್ಯೆ.	ಡಿಟೋ ..	ಅತಿಕ್ರಮ ನಡದಾಗ.
41—ಹಾನಿಪಡಿಸುವವನ್ನು ಅಡೀ ಮಾಡತಕ್ಕ ಬಗ್ಯೆ.	ಡಿಟೋ ..	ಹಾನಿ ಮಾಡಲ್ಪಟ್ಟಾಗ.
42—ಅಕ್ರಮವಾಗಿ ಪಡಕೊಂಡ ಇಂಜಂಕ್ಷನ್ನಿಂದ ಉಂಟು ಮಾಡಲ್ಪಟ್ಟ ಕೆಡಕಿಗೋಸ್ಕರ ಕಂಪೆನ್‌ಸೇಷನ್ ಬಗ್ಯೆ.	ಡಿಟೋ ..	ಇಂಜಂಕ್ಷನ್ ನಿವೃತ್ತಿಯಾದಾಗ.
43—1865ನೇ ಇಸವಿಯ ಇಂಡಿಯನ್ ಸಕ್‌ಸೆಷನ್ ಆಕ್ಟಿನ 320 ಯಾ 321 ಈ ಸೆಕ್ಷನ್‌ಗಳನುಸರಿಸಿ ಎಕ್ಸಿಕ್ಯೂಟರು ಯಾ ಅಡ್ಮಿನಿಸ್ಟ್ರೇಟರು, ಮರಣಶಾಸನ ಪೂರ್ವಕವಾಗಿ ಕೊಟ್ಟುಬಿಟ್ಟ ಸ್ವತ್ತನ್ನು ಯಾವ ಮನುಷ್ಯನಿಗೆ ಕೊಟ್ಟಿರುತ್ತಾನೋ ಯಾ ಮೃತಪಟ್ಟವನ ಸ್ವತ್ತನ್ನು ವಿನಿಯೋಗಿಸಿ ಇರುತ್ತಾನೋ ಅಂತಾ ಮನುಷ್ಯನಿಂದ ಮೊಬಲಗು ವಾಪಸ್ ಕೊಡಲಿಕ್ಕೆ ಬಲಾತ್ಕರಿಸತಕ್ಕ ಬಗ್ಯೆ.	ಡಿಟೋ ..	ಪಾವತೀ ಮಾಡಿದ ಯಾ ವಿನಿಯೋಗಿಸಿದ ತಾರೀಖು.
44—ಪ್ರಾಯ ಪ್ರಬುದ್ಧನಾದ ಒಬ್ಬ ವಾರಿ (ಒಬ್ಬನ ಸಂರಕ್ಷಣೆಯಲ್ಲಿಡಲ್ಪಟ್ಟವ)ನಿಂದ ತನ್ನ ಸಂರಕ್ಷಕ ಮಾಡಿದ ವಿಕ್ರಯವನ್ನು ರದ್ದುಪಡಿಸಲಿಕ್ಕೆ.	ಡಿಟೋ .	ಒಬ್ಬನಸಂರಕ್ಷಣೆಯಲ್ಲಿಡಲ್ಪಟ್ಟ ವ್ಯವಹಾರ ದೆಸೆಯನ್ನು ಹೊಂದಿದಾಗ
47—ಕ್ರಿಮಿನಲ್ ಪ್ರೊಸೀಜ್ಯೂರ್‌ಕೋಡ್ 12ನೇ ಅಧ್ಯಾಯವನ್ನು ಅನುಸರಿಸಿ ಅಥವಾ 1888ನೇ ಇಸವಿ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್ ಅನುಸರಿಸಿ ಸ್ವತ್ತಿನ ಸ್ವಾಧೀನದ ವಿಷಯದಲ್ಲಿ ಕೊಡಲ್ಪಟ್ಟ ಹುಕ್ಕುಂನಿಂದ ಬದ್ಧನಾದ ಒಬ್ಬ ಮನುಷ್ಯನಿಂದ ಅಥವಾ ಅಂತಾವನ ಕೆಳಗೆ ದಾವೇ ಮಾಡುವ ಮನುಷ್ಯನಿಂದ ಸದರೀ ಹುಕ್ಕುಂನಲ್ಲಿ ಅಡಗಿರತಕ್ಕ ಸ್ವತ್ತು ಬಿಡಮಾಡಿಕೊಳ್ಳುವ ಬಗ್ಯೆ.	ಡಿಟೋ ..	ಮೊಕದ್ದಮೆಯಲ್ಲಿ ಆಖೈರ್ ಹುಕುಂ ಕೊಟ್ಟ ತಾರೀಖು.
48—ಕಳಕೊಂಡ ಯಾ ಕಳವಿನಿಂದ ಪಡಕೊಂಡ ಯಾ ಅಕ್ರಮವಾಗಿ ದುರುಪಯೋಗ ಪಡಿಸಿಕೊಂಡ ಯಾ ಬದಲಾಯಿಸಿಕೊಂಡ ನಿಷ್ಕ್ರಿಯವಾದ ಚರಸ್ವತ್ತಿಗಾಗಿ ಅಥವಾ ಸದರೀ ಸ್ವತ್ತನ್ನು ಅಕ್ರಮವಾಗಿ ತೆಗದುಕೊಂಡ ಯಾ ಇರಿಸಿಕೊಂಡಿರುವದಕ್ಕಾಗಿ ಈಡು ಮೊಬಲಗಿನ ಬಗ್ಯೆ.	ಡಿಟೋ ..	ಸ್ವತ್ತಿನ ಮಾಲೀಕ, ಆ ಸ್ವತ್ತು ಯಾರ ಸ್ವಾಧೀನದಲ್ಲಿರುತ್ತೋ ಅದನ್ನು ಮೊದಲು ತಿಳದುಕೊಂಡಾಗ.

ವ್ಯಾಜ್ಯದ ತಪ್ಸೀಲ್.	ಲಿಮಿಟೇಷನ್ ವಾಯಿದೆ.	ವಾಯಿದೆ ನಡೆಯಲಾರಂಭಿಸುವ ಕಾಲ.
	VIನೇ ಭಾಗ—ಮೂರು ವರುಷಗಳು.	
49—ಇತರ ನಿಷ್ಕೃಷ್ಟವಾದ ಚರಸ್ವತ್ತಿನ ಬಗ್ಯೆ ಯಾ ಅಂತಾ ಸ್ವತ್ತನ್ನು ಅಕ್ರಮವಾಗಿ ತೆಗದುಕೊಂಡ ಯಾ ಹಾನಿ ಪಡಿಸಿದ ಬಗ್ಯೆ ಯಾ ಅಕ್ರಮವಾಗಿ ಇರಸಿಕೊಂಡಿರುವ ಬಗ್ಯೆ ಈಡು ವೊಬಲಗಿಗೋಸ್ಕರ.	ಮೂರು ವರುಷಗಳು.	ಸ್ವತ್ತು ಅಕ್ರಮವಾಗಿ ತೆಗದುಕೊಂಡಾಗ ಯಾ ಹಾನಿ ಪಡಿಸಿದಾಗ, ಅಥವಾ ಸದರೀ ಸ್ವತ್ತನ್ನು ನಿಲ್ಲಿಸಿಕೊಂಡವನ ಸ್ವಾಧೀನವು ಅಕ್ರಮವಾದಾಗ.
50—ಜಾನ್‌ವರ್‌ಗಳ, ವಾಹನಗಳ, ಡೋಣೀಗಳ ಯಾ ಮನೇ ಸಾಮಾನುಗಳ ಬಾಡಿಗೆ ಬಗ್ಯೆ.	ಡಿಟೋ ..	ಬಾಡಿಗೆ ಸಲ್ಲಬೇಕಾದ ಕಾಲ.
51—ಒಪ್ಪಿಸಲ್ಪಡತಕ್ಕ ಸರ್ಕುಗಳ ವೊಬಲಗು ಪಾವತೀ ಬಗ್ಯೆ ಕೊಡಲ್ಪಟ್ಟ ಅಡ್ವಾನ್ಸು ಹಣದ ಬಾಕೀ ಬಗ್ಯೆ.	ಡಿಟೋ ..	ಸರ್ಕುಗಳು ಒಪ್ಪಿಸಲ್ಪಡಬೇಕಾದ ಕಾಲ.
52—ಸಾಲದ ವಾಯಿದೆ ಗೊತ್ತಾಗದ ಪಕ್ಷಕ್ಕೆ, ವಿಕ್ರಯಿಸಲ್ಪಟ್ಟ ವ ಒಪ್ಪಿಸಲ್ಪಟ್ಟ ಸಾಮಾನುಗಳ ಕ್ರಯದ ಬಗ್ಯೆ.	ಡಿಟೋ ..	ಸಾಮಾನುಗಳನ್ನು ಒಪ್ಪಿಸಿದ ತಾರೀಖು.
53—ಸಾಲದ ಗೊತ್ತಾದ ವಾಯಿದೆ ಮುಗಿದ ತರುವಾಯ ಸಲ್ಲಿಸಲ್ಪಡತಕ್ಕ, ವಿಕ್ರಯವಾಗಿ ಒಪ್ಪಿಸಲ್ಪಟ್ಟ ಸಾಮಾನುಗಳ ಖರೀದಿ ಬಗ್ಯೆ.	ಡಿಟೋ ..	ಸಾಲದ ವಾಯಿದೆ ಮುಗಿದ ಅನಂತರ.
54—ಬಿಲ್ ಆವ್ ಎಕ್ಸ್‌ಜೇಂಜ್ ಎಂಬ ಹುಂಡಿಯ ದ್ವಾರಾ, ಹಣ ಸಲ್ಲಿಸುವದಾಗಿ ಸಾಮಾನು ಖರೀದಿಗೆ ತೆಗದುಕೊಂಡು ಅಂತಾ ಬಿಲ್ ಕೊಡದೇ ಹೋದ ಪಕ್ಷದಲ್ಲಿ ಹಾಗೆ ವಿಕ್ರಯಿಸಲ್ಪಟ್ಟ ಯಾ ಒಪ್ಪಿಸಲ್ಪಟ್ಟ ಆ ಸಾಮಾನಿನ ಖರೀದಿಯ ಬಗ್ಯೆ.	ಡಿಟೋ ..	ಹಾಗೆ ಕೊಡುವದಾಗಿ ಹೇಳಿದ ಹುಂಡಿಯ ತಾರೀಖು ಮುಗಿದ ಅನಂತರ.
55—ಸಾಲದ ಗೊತ್ತಾದ ವಾಯಿದೆಯು ನಿಶ್ಚೈಸದ ಪಕ್ಷಕ್ಕೆ ಪ್ರತಿ ವಾದಿಗೆ ವಾದಿಯಿಂದ ವಿಕ್ರಯವಾದ ಮರಗಳ ಯಾ ಬೆಳೆಯುವ ಪೈರಿನ ಖರೀದಿ ಬಗ್ಯೆ.	ಡಿಟೋ ..	ಕ್ರಯದ ತಾರೀಖು.
56—ಪ್ರತಿವಾದಿ ಕೇಳಿ ಕೊಂಡದರಮೇಲೆ ವಾದಿಯಿಂದ ನಡಿಸಲ್ಪಟ್ಟ ಕೆಲಸಕ್ಕೋಸ್ಕರ ಕ್ರಯದ ವೊಬಲಗನ್ನು ಪಾವತೀ ಮಾಡತಕ್ಕ ಕಾಲ ಗೊತ್ತಾಗದೇ ಯಿದ್ದರೆ ಸದರೀ ಕ್ರಯದ ಬಗ್ಯೆ.	ಡಿಟೋ ..	ಕೆಲಸವಾದಾಗ.
57—ಸಾಲ ಕೊಟ್ಟ ಹಣಕ್ಕೋಸ್ಕರ ಕೊಡಬೇಕಾದ ಹಣದ ಬಗ್ಯೆ.	ಡಿಟೋ ..	ಸಾಲ ಕೊಟ್ಟಾಗ.
58—ಲೇಣೇದಾರನು ಹಣಕ್ಕಾಗಿ ಚೆಕ್ಕು ಕೊಟ್ಟಿರುವಲ್ಲಿ ಸದರೀ ಪ್ರಕಾರವಾದ ವ್ಯಾಜ್ಯ.	ಡಿಟೋ ..	ಚೆಕ್ಕಿಗೆ ಹಣ ಪಾವತೀಯಾದಾಗ.
59—ಸಾಲ ಕೊಟ್ಟ ಹಣವನ್ನು ಕೇಳಿದಾಗ ಕೊಡುವದೆಂದು ಹುಟ್ಟಿದ ಕರಾರಿಗನುಗುಣವಾಗಿ ಸದರೀ ಹಣದ ಬಗ್ಯೆ.	ಡಿಟೋ ..	ಸಾಲ ಕೊಟ್ಟಾಗ.
60—ಸಾಲ ಕೊಟ್ಟ ಹಣವನ್ನು ಕೇಳಿದಾಗ ಕೊಡತಕ್ಕದ್ದೆಂದು ಹುಟ್ಟಿದ ಕರಾರ್ ಅನುಸರಿಸಿ ಠೇವಣೀ ಇಡಲ್ಪಟ್ಟ ಹಣಕ್ಕೋಸ್ಕರ.	ಡಿಟೋ ..	ಹಣವನ್ನು ಕೇಳಿದಾಗ.
61—ಪ್ರತಿವಾದಿಗೋಸ್ಕರ ಕೊಡಲ್ಪಟ್ಟ ಹಣಕ್ಕಾಗಿ ವಾದಿಗೆ ಸಲ್ಲತಕ್ಕ ಹಣದ ಬಗ್ಯೆ.	ಡಿಟೋ ..	ಹಣವನ್ನು ಪಾವತೀ ಮಾಡಿದಾಗ.
62—ವಾದಿಯ ಉಪಯೋಗಾರ್ಥವಾಗಿ ಪ್ರತಿವಾದಿಯಿಂದ ತೆಗದುಕೊಳ್ಳಲ್ಪಟ್ಟ ಹಣಕ್ಕೋಸ್ಕರ ವಾದಿಗೆ ಪ್ರತಿವಾದಿಯಿಂದ ಸಲ್ಲಬೇಕಾದ ಹಣಕ್ಕಾಗಿ.	ಡಿಟೋ ..	ಹಣವನ್ನು ತೆಗದುಕೊಂಡಾಗ.
63—ವಾದಿಗೆ ಪ್ರತಿವಾದಿಯಿಂದ ಬಾಕೀಯಾಗುವ ಹಣಕ್ಕೆ ಬಡ್ಡೀ ಬಾಬತು ಪಾವತೀ ಮಾಡಬೇಕಾದ ಹಣಕ್ಕೋಸ್ಕರ.	ಡಿಟೋ ..	ಬಡ್ಡೀ ಬಾಕಿಯಾಗುವಲ್ಲಿ.

ವ್ಯಾಜ್ಯದ ತಪಶೀಲ.	ಲಿಮಿಟೇಷನ ಮಾಯಿದೆ.	ಮಾಯಿದೆ ನಡೆಯಲಾರಂಭಿಸುವ ಕಾಲ.
	VIನೇ ಭಾಗ—ಮೂರು ವರುಷಗಳು.	
64—ವಾದಿ ಪ್ರತಿವಾದಿಗಳೊಳಗೆ ಒಡಂಬಟ್ಟಿರುವ ಲೆಕ್ಕಗಳಲ್ಲಿ ನಮೂದಿರುವ ಮೇರೆ ಪ್ರತಿವಾದಿಯು ವಾದಿಗೆ ಬಾಕೀಯಾಗಿ ಕಾಣಬರುವ ಹಣಕ್ಕೋಸ್ಕರ.	ಮೂರು ವರುಷಗಳು.	ಪ್ರತಿವಾದಿಯಿಂದಲಾಗಲಿ ಈ ಬಗ್ಯೆ ಕ್ರಮವಾಗಿ ಅಧಿಕಾರ ಹೊಂದಿದ ಅವನ ಮುತಾಲೀಕನಿಂದಲಾಗಲಿ ರುಜೂ ಮಾಡಲ್ಪಟ್ಟ ಬರವಣಿಗೆಯಿಂದ ಲೆಕ್ಕ ಫೈಸಲ್ಮಾಡಲ್ಪಟ್ಟಾಗ, ಪರಂತು ಸದರೀ ಮೇರೆ ಕೈ ಬರಹ ಹಾಕಲ್ಪಟ್ಟ ಬರವಣಿಗೆ ಮೂಲಕ ಏಕ ಕಾಲದಲ್ಲಿ ಹುಟ್ಟಿದ ಕರಾರಿನಿಂದ ಮುಂದೆ ಯಾವಾಗಲಾಗಲಿ ಸಾಲ ಕೊಡಬೇಕಾಗಿ ಬಂದು, ತರುವಾಯ ಅಂತಾಕಾಲ ಪ್ರಾಪ್ತವಾಗದೇ ಇರಬೇಕಾದಾಗ.
65—ಒಂದು ಗೊತ್ತಾದ ಕಾಲದಲ್ಲಿ ಅಥವ ಒಂದು ಗೊತ್ತಾದ ಕಾರಣ ಸಂಭವಿಸಿದಾಗ ಯೇನಾದರು ಒಂದು ಕೆಲಸವನ್ನು ನಡಿಸುವಂತೆ ವಾಗ್ದಾನ ತಪ್ಪಿದ ಬಗ್ಯೆ ಕೊಡತಕ್ಕ ಈಡಿಗೋಸ್ಕರ.	ಡಿಟೋ ..	ಗೊತ್ತಾದ ಕಾಲದಲ್ಲಿ ಅಥವಾ ಕಾರಣ ಸಂಭವಿಸಿದಾಗ.
66—ಹಣ ಪಾವತೀ ಮಾಡಬೇಕಾದ ದಿನ ನಮೂದುಳ್ಳ ಒಂದು ಪತ್ರದ ಮೇಲೆ.	ಡಿಟೋ ..	ಹಾಗೆ ನಮೂದಿಸಲ್ಪಟ್ಟ ದಿನ.
67—ಅಂತಾ ಯಾವ ತಾರೀಖೂ ನಮೂದಿಲ್ಲದಂತಾ ಒಂದು ಪತ್ರದ ಮೇಲೆ.	ಡಿಟೋ ..	ಪತ್ರ ಹುಟ್ಟಿದ ತಾರೀಖು.
68—ಒಂದು ಷರತ್ತಿಗೆ ಒಳಪಟ್ಟ ಪತ್ರದ ಮೇಲೆ.	ಡಿಟೋ ..	ಷರತ ತಪ್ಪಿದಾಗ.
69—ಒಂದು ತಾರೀಖಾದನಂತರ ಗೊತ್ತಾದ ಮಾಯಿದೆಯೊಳಗೆ ಹಣ ಪಾವತಿ ಯಾಗತಕ್ಕ ಒಂದು ಬಿಲ್ ಆಪ್ ಎಕ್ಸ್‌ಚೇಂಜಿನ ಮೇಲೆ ಯಾ ಪ್ರಾಮಿಸ್ಸೋರಿ ನೋಟಿನ ಮೇಲೆ.	ಡಿಟೋ ..	ಸದರೀ ಬಿಲ್ ಯಾ ನೋಟ ಬಾಕೀಯಾಗುವಾಗ.
70—ನೋಡಿದಾಗ ಯಾ ನೋಡಿದ ಮೇಲೆ ಪರಂತು ಗೊತ್ತಾದ ಮಾಯಿದೆಯೊಳಗಲ್ಲದೆ ಪಾವತೀಯಾಗತಕ್ಕ ಹುಂಡಿ ಯಾನೆ ಬಿಲ್ ಆಪ್ ಎಕ್ಸ್‌ಚೇಂಜಿನ ಮೇಲೆ.	ಡಿಟೋ ..	ಹುಂಡಿಯನ್ನು ಹಾಜರ ಮಾಡಿದಾಗ.
71—ಫಲಾನೇ ಸ್ಥಳದಲ್ಲಿ ಪಾವತಿ ಮಾಡಬೇಕೆಂಬದಾಗಿ ಅಂಗೀಕರಿಸೋಣಾದ ಬಿಲ್ ಆಪ್ ಎಕ್ಸ್ ಚೇಂಜಿನ ಮೇಲೆ.	ಡಿಟೋ ..	ಸದರೀ ಸ್ಥಳದಲ್ಲಿ ಹುಂಡಿಯನ್ನು ಹಾಜರ ಮಾಡಿದಾಗ.
72—ನೋಡಿದ ಮೇಲೆ ಯಾ ಕೇಳಿದ ಮೇಲೆ ಗೊತ್ತಾದ ಒಂದು ಮಾಯಿದೆಯಲ್ಲಿ ಹಣವನ್ನು ಪಾವತೀ ಮಾಡಬೇಕೆಂಬದಾಗಿ ನಮೂದಿರುವ ಒಂದು ಬಿಲ್ ಆಪ್ ಎಕ್ಸ್ ಚೇಂಜ್ ಯಾ ಪ್ರಾಮಿಸ್ಸೋರಿ ನೋಟ ಮೇಲೆ.	ಡಿಟೋ ..	ಗೊತ್ತಾದ ಮಾಯಿದೆ ಕಳೆದಾಗ.
73—ಕೇಳಿದಾಗ ಹಣ ಪಾವತೀಯಾಗತಕ್ಕ ಮತ್ತು ದಾವೇ ಮಾಡುವ ಹಕ್ಕು ಆಟಂಕ ಪಡಿಸುವ ಯಾ ನಿಲ್ಲಿಸಿ ಇಡುವ ಬರವಣಿಗೆಯೊಂದಿಗೆ ಇಲ್ಲದೆ ಇರುವ ಒಂದು ಬಿಲ್ ಆಪ್ ಎಕ್ಸ್ ಚೇಂಜ್ ಯಾ ಪ್ರಾಮಿಸ್ಸೋರಿ ನೋಟಿನ ಮೇಲೆ.	ಡಿಟೋ ..	ಬಿಲ್ ಯಾ ನೋಟಿನ ತಾರೀಖು.
74—ಕಂತುಗಳ ಮೂಲಕ ಹಣ ಪಾವತೀಯಾಗತಕ್ಕ ಒಂದು ಪ್ರಾಮಿಸ್ಸೋರಿ ನೋಟ ಅಥವಾ ಪತ್ರದ ಮೇಲೆ.	ಡಿಟೋ ..	ಆಗ ಕೊಡಬೇಕಾಗಿದ್ದ ಭಾಗಕ್ಕೆ ಮೊದಲನೇ ಮಾಯಿದೆ ಗತಿಸಿದಮೇಲೆ ಮತ್ತು ಇತರ ಭಾಗಗಳಿಗೆ ಆಯಾ ಮಾಯಿದೆಗಳು ಗತಿಸಿದಮೇಲೆ
75—ಕಂತುಗಳಾಗಿ ಹಣವನ್ನು ಕೊಡತಕ್ಕದ್ದಾಗಿಯೂ, ಮತ್ತು ಒಂದು ಕಂತು ತಪ್ಪಿದರೆ ತಮಾಂ ಕೊಟ್ಟುಬಿಡತಕ್ಕದ್ದಾಗಿಯೂ, ಬರೆದಿರುವ ಒಂದು ಪ್ರಾಮಿಸ್ಸೋರಿ ನೋಟ ಯಾ ಪತ್ರದಮೇಲೆ.	ಡಿಟೋ ..	ಹಣ ಪಡೆಯಬೇಕಾದವನು ಯಾ ಪತ್ರದಾರನು ಈ ನಿಬಂಧನೆಯ ಪ್ರಯೋಜನವನ್ನು ಬಿಟ್ಟುಬಿಡದೇ ಇದ್ದ ಪಕ್ಷದಲ್ಲಿ ಮೊದಲುಸಲ ತಪ್ಪಿದಾಗ ಮತ್ತು ಆ ಮೇಲೆ ಪುನಃ ಆ ಪ್ರಕಾರ ತಪ್ಪಿ ಆವಿಷಯದಲ್ಲಿ ಸದರೀ ನಿಬಂಧನೆಯ ಪ್ರಯೋಜವನ್ನು ಬಿಟ್ಟು ಬಿಡತಕ್ಕವನು ಇಲ್ಲದಾಗ.

ವ್ಯಾಜ್ಯದ ತಪಶೀಲ್.	ಲಿಮಿಟೇಷನ್ ವಾಯಿದೆ.	ವಾಯಿದೆ ನಡೆಯಲಾರಂಭಿಸುವ ಕಾಲ.
	VIನೇ ಭಾಗ—ಮೂರು ವರುಷಗಳು.	
76—ಒಂದು ಕಾರ್ಯವಾದ ತರುವಾಯ ಒಬ್ಬನಿಗೆ ಇಷ್ಟು ಹಣ ಕೊಡಬೇಕೆಂದು ಮತ್ತೊಬ್ಬನು ಮೂರನೇಯವನಿಗೆ ಬರಕೊಟ್ಟ ಪ್ರಾಮಿಸ್ಸೊರಿ ನೋಟ್ ಮೇಲೆ.	ಮೂರು ವರುಷಗಳು.	ಪತ್ರದಾರನಿಗೆ ದಸ್ತಾವೇಜನ್ನು ಒಪ್ಪಿಸಿದ ತಾರೀಖು.
77—ಅಡ್ಡೀಪಾಡಿ ನೋಟಿಸ್ ಕೊಡುವಣಾದ ನಾಮಂಜೂರಾದ ಪರಾಯಿದೇಶದ ಹುಂಡೀ ಮೇಲೆ.	ಡಿಟೋ ..	ನೋಟೀಸ್ ಕೊಟ್ಟಾಗ.
78—ನರ್ ಅಕ್ಸೆಪ್ಟೆನ್ಸ ಯಾನೆ ಅಂಗೀಕರಿಸದೇ ಯಿದ್ದದರಿಂದ ಅಂತಾ ನಾಮಂಜೂರಾದ ಒಂದು ಬಿಲ್ಲಾಫ್ ಎಕ್ಸ್‌ಚೇಂಜ್ ಎಂಬ ಹುಂಡೀಯನ್ನು ಬರೆದವನ ಮೇಲೆ ಹಣ ಕೊಟ್ಟಂತಾವನಿಂದ.	ಡಿಟೋ ..	ಅಕ್ಸೆಪ್ಟ್ಯಯಾನೆ ಅಂಗೀಕರಿಸಲಿಕ್ಕೆ ನಿರಾಕರಿಸಿದ ತಾರೀಖು.
79—ಪ್ರಾಯರ್‌ಮೇಲೆ ಅವನಿಗೆ ಸಹಾಯಾರ್ಥವಾಗಿ ಅದನ್ನ ಅಕ್ಸೆಪ್ಟ್ ಮಾಡಿದವನಿಂದ.	ಡಿಟೋ ..	ಅಕ್ಸೆಪ್ಟ್ ಮಾಡಿದವನು ಹುಂಡೀ ಮೊಬಲಗು ಕೊಟ್ಟಾಗ.
80—ಇದರಲ್ಲಿ ಕಂತತಃ ವಿಧಿಸಲ್ಪಡದ ಒಂದು ಬಿಲ್ಲಾಫ್ ಎಕ್ಸ್‌ಚೇಂಜ್ ಯಾ ಪ್ರಾಮಿಸ್ಸೋರಿನೋಟಿನ ಮೇಲೆ ದಾವೆ.	ಡಿಟೋ ..	ಹುಂಡಿ ಯಾ ನೋಟ್ ಯಾ ಬಾಂಡಿನಬಗ್ಯೆ ಹಣ ಪಾವತೀ ಯಾಗಬೇಕಾದಾಗ.
81—ಅಸಲ್ ದೇಣೇದಾರನ ಮೇಲೆ ಜಾಮೀನ್‌ದಾರನಿಂದ.	ಡಿಟೋ ..	ಜಾಮೀನ್‌ದಾರನು ಲೇಣೇದಾರನಿಗೆ ಪಾವತೀ ಮಾಡಿದಾಗ.
82—ಒಬ್ಬ ಜಾಮೀನ್‌ದಾರನ ಮೇಲೆ ಮತ್ತೊಬ್ಬ ಜಾಮೀನ್‌ದಾರನಿಂದ.	ಡಿಟೋ ..	ಜಾಮೀನ್‌ದಾರನು ತನ್ನ ಸ್ವಂತ ಭಾಗಕ್ಕಿಂತ-ಜಾಸ್ತೀಯಾಗಿ ಯೇನಾದರೂ ಕೊಟ್ಟಾಗ.
83—ಈಡುಕಟ್ಟುವದರ ಬಾಬತು ಇತರ ಯಾವ ಕರಾರಿನ ಮೇಲಾಗಲಿ.	ಡಿಟೋ ..	ವಾದಿಯು ಯಥಾರ್ಥವಾಗಿ ನಷ್ಟಪಡಿಸಲ್ಪಟ್ಟಾಗ.
84—ಒಂದು ಮೊಕದ್ದಮೆಯು ಕೆಲಸಕ್ಕೋಸ್ಕರ ಒಬ್ಬ ಅಡ್ವೋಕೇಟಿನ ಅಥವಾ ಪ್ಲೀಡರಿನ ಖರ್ಚುಗಳನ್ನು ಫಲಾನೇ ಕಾಲದಲ್ಲಿ ಕೊಡುವಂತೆ ಕಂಡೋಕ್ತವಾಗಿ ಯಾವ ಕರಾರೂ ಮಾಡಲ್ಪಡದೇ ಯಿದ್ದರೆ ಆ ಖರ್ಚಿನ ಬಗ್ಯೆ ಸದರೀ ಅಟಾರ್ನಿ ಯಾ ವಕೀಲನಿಂದ.	ಡಿಟೋ ..	ದಾವೆಯು ಯಾ ಕೆಲಸದ ಆಖೈರ್ ಅಥವಾ (ಸದರೀ ಅಡ್ವೋಕೇಟ್ ಅಥವಾ ಪ್ಲೀಡರ್ ಆ ದಾವೆಯನ್ನು ಯಾ ಕೆಲಸವನ್ನು ಯುಕ್ತವಾಗಿ ನಿಲ್ಲಿಸಿಬಿಟ್ಟು ಇದ್ದರೆ) ಅಂತಾ ನಿಲ್ಲಿಸಿಬಿಟ್ಟ ತಾರೀಖು.
85—ಕಕ್ಷಿಗಾರರಲ್ಲಿ ಪರಸ್ಪರ ಲೇವಾದೇವೀ ನಡೆಯುತ್ತಿದ್ದಲ್ಲಿ ಪರಸ್ಪರವಾದ ಬಹಿರಂಗವಾದ ಚಾಲ್ತೀ ಲೆಕ್ಕದ ಪ್ರಕಾರ ಹೊರತಕ್ಕ ಬಾಕೀಗೋಸ್ಕರ.	ಡಿಟೋ ..	ಯಾವ ಸಂವತ್ಸರದಲ್ಲಿ ಕಡೇ ರಖಂ ಲೆಕ್ಕದೊಳಗೆ ದಾಖಲಾಗಿ ಒಪ್ಪಿಕೊಳ್ಳಲ್ಪಟ್ಟು ಅಥವಾ ರುಜುವಾತಾಗಿರುತ್ತೋ ಆ ಸಂವತ್ಸರದ ಆಖೈರ್‌ಭಾಗ, ಸದರೀ ಸಂವತ್ಸರವನ್ನು ಲೆಕ್ಕದಲ್ಲಿ ನಮೂದಿದ್ದಂತೆ ಗಣಿಸತಕ್ಕದ್ದು.
86—ಮರಣವನ್ನು ಯಾ ನಷ್ಟವನ್ನು ರುಜು ಮಾಡಿದ ಕೂಡಲೇ ದೃಢವಾಗಿ ನಿಷ್ಕರ್ಷಿಯಿಸಲ್ಪಟ್ಟ ಮೊಬಲಗನ್ನು ಇನ್ಷ್ಯೂರರ್‌ಗಳಿಂದ ಬೀಮು ದಸ್ತಾವೇಜು ಮಾಡಿ ಕೊಡುವವರಿಗೆ ಕೊಟ್ಟಾಗ ಯಾ ಅವರುಗಳು ತೆಗೆದುಕೊಂಡಾಗ, ಇನ್ಷ್ಯೂರೆನ್ಸ್ ಪಾಲಿಸೀ ಮೇಲೆ.	ಡಿಟೋ ..	ಮರಣದ ಯಾ ನಷ್ಟದ ರುಜುವಾತನ್ನು ವಾದಿಯಾಗಲಿ, ಇತರ ಮನುಷ್ಯನಾಗಲಿ ಇನ್ಷೂರರ್‌ಗಳಿಗೆ ಕೊಟ್ಟಾಗ ಯಾ ಅವರು ಅದನ್ನು ತೆಗೆದುಕೊಂಡಾಗ.
87—ಇನ್ಷ್ಯೂರರ್‌ಗಳನ್ನು ಚುನಾಯಿಸುವ ಕಾಲದಲ್ಲಿ ಅಸಿದ್ಧವಾಗುವ ಪಾಲಿಸೀಗನುಗುಣವಾಗಿ ಪಾವತೀ ಮಾಡಿದ ಪ್ರಿಮಿಯಮ್ ಯೆಂಬ ಅಡು ಯಾ ಮೊಬಲಗುಗಳನ್ನು ವಸೂಲ್ಮಾಡಲಿಕ್ಕೆ ಇನ್ಷ್ಯೂರ್ ಮಾಡಲ್ಪಟ್ಟವನಿಂದ.	ಡಿಟೋ ...	ಪಾಲಿಸೀಯನ್ನು ತಪ್ಪಿಸಿಕೊಳ್ಳುವದಕ್ಕೆ ಇನ್ಷ್ಯೂರರ್‌ಗಳು ಅಪೇಕ್ಷಿಸಿದಾಗ.
88—ಲೆಕ್ಕಕ್ಕೋಸ್ಕರ ಮುತಾಲೀಕನ ಮೇಲೆ.	ಡಿಟೋ ..	ಮುತಾಲೀಕನು ಕೆಲಸ ನೋಡುತ್ತಿದ್ದ ಕಾಲದಲ್ಲಿ ಲೆಕ್ಕಕ್ಕೆ ತಗಾದೇ ಮಾಡಿ ನಿರಾಕರಿಸಲ್ಪಟ್ಟಾಗ ಅಥವಾ ಅಂತಾ ತಗಾದೇ ಮಾಡದೆ ಮುತಾಲೀಕತನ ನಿಂತು ಹೋದಾಗ.

ವ್ಯಾಜ್ಯದ ತಪಶೀಲಿ.	ಲಿಮಿಟೇಷನ್ ವಾಯಿದೆ.	ವಾಯಿದೆ ನಡೆಯಲಾರಂಭಿಸುವ ಕಾಲ.
	VIನೇ ಭಾಗ—ಮೂರು ವರುಷಗಳು.	
89—ತನ್ನ ಮುತಾಲೀಕನಿಂದ ತೆಗೆದುಕೊಳ್ಳಲ್ಪಟ್ಟು, ಅದಕ್ಕೆ ಲೆಕ್ಕ ಕೊಡದೇ ಇರುವ ಬಾಬತು ಚರಸ್ವತ್ತಿಗಾಗಿ ತನ್ನ ಮುತಾಲೀಕನ ಮೇಲೆ ಮುಖ್ಯಸ್ಥನಿಂದ.	ಮೂರು ವರುಷಗಳು ..	ಮುತಾಲೀಕನು ಕೆಲಸ ನೋಡುತ್ತಿದ್ದ ಕಾಲದಲ್ಲಿ ಲೆಕ್ಕಕ್ಕೆ ತಗಾದೇ ಮಾಡಿ ನಿರಾಕರಿಸಲ್ಪಟ್ಟಾಗ ಅಥವಾ ಅಂತಾ ತಗಾದೇ ಮಾಡದೆ ಮುತಾಲೀಕತನ ನಿಂತು ಹೋದಾಗ.
90—ಅಜಾಗ್ರತೆ ಯಾ ದುರ್ನಡತೆಗೋಸ್ಕರ ಮುತಾಲೀಕರ ಮೇಲೆ ಯಜಮಾನರಿಂದ ತರಲ್ಪಡುವ ಯಿತರ ದಾವೆಗಳು.	ಡಿಟೋ ..	ಸದರೀ ಅಜಾಗ್ರತೆ ಯಾ ದುರ್ನಡತೆಯು ವಾದಿಗೆ ತಿಳಿಯಬಂದಾಗ.
91—ಅನ್ಯಥಾ ನಿಬಂಧಿಸಲ್ಪಡದ ಒಂದು ದಸ್ತಾವೇಜನ್ನು ರದ್ದುಮಾಡಲಿಕ್ಕೆ ಯಾ ತಳ್ಳಿಪಡಿ ಮಾಡಲಿಕ್ಕೆ.	ಡಿಟೋ ..	ದಸ್ತಾವೇಜನ್ನು ರದ್ದು ಮಾಡಿಸಲಿಕ್ಕೆ ಯಾ ತಳ್ಳಿಪಡಿ ಮಾಡಿಸಲಿಕ್ಕೆ ವಾದಿಗೆ ಬಾಧ್ಯತೆಯನ್ನುಂಟುಮಾಡುವ ಸಂಗತಿಗಳು ಅವರಿಗೆ ತಿಳಿಯಬಂದಾಗ.
92—ಹುಟ್ಟಿದ ಯಾ ರಿಜಿಸ್ಟರಾದ, ಒಂದು ದಸ್ತಾವೇಜಿನ ಸೃಷ್ಟನೆಯನ್ನು ತಿಳಿಸಲಿಕ್ಕೆ.	ಡಿಟೋ ..	ಹುಟ್ಟುವಣ, ಅಥವಾ ರಿಜಿಸ್ಟ್ರೇಷನ್ ಮಾಡಿಸುವಣ, ವಾದಿಗೆ ತಿಳಿಯಬಂದಾಗ.
93—ವಾದೀ ಮೇಲೆ ಜಾರಿಮಾಡಲೆತ್ನಿಸಲ್ಪಟ್ಟ ಒಂದು ದಸ್ತಾವೇಜಿನ ಸೃಷ್ಟನೆಯನ್ನು ತಿಳಿಸಲಿಕ್ಕೆ.	ಡಿಟೋ ..	ಯತ್ನಿಸಿದ ತಾರೀಖು.
94—ವಾದಿಯು ಹುಚ್ಚನಾಗಿದ್ದಾಗ ತೆಗೆದುಕೊಂಡು ಹೋದ ಸ್ವತ್ತಿಗಾಗಿ.	ಡಿಟೋ ..	ವಾದಿಗೆ ಜ್ಞಾನಬಂದು ತಾನು ತೆಗೆದುಕೊಂಡು ಹೋದದ್ದು ತನಗೆ ತಿಳಿಯಬಂದಾಗ.
95—ಮೋಸದಿಂದ ಪಡೆದ ಡಿಕ್ರಿಯನ್ನು ಅಥವಾ ಮೋಸದ ಮೂಲಕ ಇತರ ಪರಿಹಾರದ ಬಗ್ಗೆ ಪಡೆದ ಡಿಕ್ರಿಯನ್ನು ರದ್ದು ಪಡಿಸಲಿಕ್ಕೆ.	ಡಿಟೋ ..	ಮೋಸಗೊಳಿಸಲ್ಪಟ್ಟವನಿಗೆ ಮೋಸ ತಿಳಿಯಬಂದಾಗ.
96—ತಪ್ಪಿನ ಸಬಬಿನ ಮೇಲೆ ಪರಿಹಾರದ ಬಗ್ಗೆ.	ಡಿಟೋ ..	ವಾದಿಗೆ ಸದರೀ ತಪ್ಪು ತಿಳಿಯಬಂದಾಗ.
97—ತತ್ಕಾಲದಲ್ಲಿ ಯಿದ್ದು ತರುವಾಯ ತಪ್ಪಿಹೋಗುವ ಕಾರಣಗಳ ಮೇಲೆ ಕೊಡಲ್ಪಟ್ಟ ಹಣಕ್ಕಾಗಿ.	ಡಿಟೋ ..	ತಪ್ಪಿಹೋದ ತಾರೀಖು.
98—ಮೃತಪಟ್ಟ ಟ್ರಸ್ಟಿಯ ಸಾಮಾನ್ಯ ಸ್ವತ್ತಿನಿಂದ, ವಿಶ್ವಾಸಘಾತಕತನದ ಸಬಬ್ ಸಂಭವಿಸುವ ನಷ್ಟವನ್ನು ಕೊಡಿಸಲಿಕ್ಕೆ.	ಡಿಟೋ ..	ಟ್ರಸ್ಟಿಯ ಮರಣದ ತಾರೀಖು ಅಥವಾ ಆಗಲೇ ನಷ್ಟ ಸಂಭವಿಸದೆ ಇದ್ದರೆ ನಷ್ಟದ ತಾರೀಖು.
99—ಒಂದು ಸಮುದಾಯ ಡಿಕ್ರಿಯ ಪ್ರಕಾರ ಬಾಕಿಯಾಗುವ ಪೂರಾ ಮೊಬಲಗನ್ನು ಪಾವತೀ ಮಾಡಿದ ಒಬ್ಬ ಕಕ್ಷಿಗಾರನಿಂದ ಅಥವಾ ಒಬ್ಬ ಪಾಲ್‌ದಾರನು ತನ್ನಿಂದ ವ ತನ್ನ ಜೊತೇ ಪಾಲುದಾರನಿಂದ ಸಲ್ಲತಕ್ಕಾಗುವ ತಮಾಂ ರೆವಿನ್ಯೂ ಮೊಬಲಗನ್ನು ಪಾವತಿ ಮಾಡಿದ ತನ್ನ ಹಿಸ್ಸೆಗೋಸ್ಕರ.	ಡಿಟೋ ..	ವಾದಿಯಾದವನು ತಾನು ಕೊಡಬೇಕಾದ ತನ್ನ ಹಿಸ್ಸೇ ಬಾಬತು ಹಣಕ್ಕಿಂತ ಹೆಚ್ಚಾಗಿ ಕೊಟ್ಟ ತಾರೀಖು.
100—ಮೃತಪಟ್ಟ ಟ್ರಸ್ಟಿಯ ಆಸ್ತಿಯ ಮೇಲೆ ಅವನ ಜೊತೆಗಾರನಾದ ಟ್ರಸ್ಟಿಯು ಕಾಂಟ್ರಿಬ್ಯೂಷನ್ ಹೊಂದುವ ಬಾಧ್ಯತೆಯನ್ನು ಸ್ಥಾಪಿಸಲಿಕ್ಕೆ.	ಡಿಟೋ ..	ಕಾಂಟ್ರಿಬ್ಯೂಷನಿಗೆ ಹಕ್ಕು ಹುಟ್ಟಿದಾಗ.
101—ನಾವಿಕನ ಸಂಬಳದ ಬಗ್ಗೆ.	ಡಿಟೋ ..	ಸಂಬಳವನ್ನು ಸಂಪಾದಿಸಿದ ಸಮುದ್ರ ಪ್ರಯಾಣವು ಪೂರೈಸಿದಾಗ.
102—ಈ ಷೆಡ್ಯೂಲ್ ಪಟ್ಟಿಯಿಂದ ಕಂಡತಹ ಅನ್ಯಥಾ ವಿಧಿಸಲ್ಪಡದ ಮಜೂರೀ ಬಗ್ಗೆ.	ಡಿಟೋ ..	ಕೂಲೀ ಕೊಡಬೇಕಾದಾಗ.

ವ್ಯಾಜ್ಯದ ತಪಸೀಲ್.	ಲಿಮಿಟೇಷನ್ ವಾಯಿದೆ.	ವಾಯಿದೆ ನಡೆಯಲಾರಂಭಿಸುವ ಕಾಲ.
	VIನೇ ಭಾಗ—ಮೂರು ವರುಷಗಳು.	
103—ತಗಾದೆ ಮಾಡಲ್ಪಡಬಹುದಾದ (ಮುವಜ್ಜಲ್) ಎಂಬ ಸ್ತ್ರೀಧನದ ಬಗ್ಗೆ ಮಹಮ್ಮದೀಯನಿಂದ.	ಮೂರು ವರುಷಗಳು.	ಸ್ತ್ರೀಧನವು ತಗಾದೇ ಮಾಡಲ್ಪಟ್ಟು ನಿರಾಕರಿಸಲ್ಪಟ್ಟಾಗ, ಅಥವಾ (ಮದುವೆಯಕಾಲದಲ್ಲಿ ಅಂತಾ ತಗಾದೆ ಮಾಡಲ್ಪಡದ ಪಕ್ಷಕ್ಕೆ) ಮರಣ ಯಾ ಅಗಲಿಕೆಯಿಂದ ವಿವಾಹವು ತಪ್ಪಿ ಹೋದಾಗ.
104—ನಿಲ್ಲಿಸಿ ಇಡಲ್ಪಟ್ಟ (ಮುವಜ್ಜಲ್) ಎಂಬ ಸ್ತ್ರೀಧನಕ್ಕಾಗಿ ಒಬ್ಬ ಮಹಮ್ಮದೀಯನಿಂದ.	ಡಿಟೋ ..	ಮರಣ ಅಥವಾ ಅಗಲಿಕೆಯಿಂದ ವಿವಾಹವು ತಪ್ಪಿ ಹೋದಾಗ.
105—ಭೋಗ್ಯದ ಮೊಬಲಗನ್ನು ಕೊಟ್ಟಮೇಲೆ ಭೋಗ್ಯ ಇಟ್ಟುಕೊಂಡವನು ವಸೂಲ್ ಮಾಡಿದ ಜಾಸ್ತಿ ಮೊಬಲಗನ್ನು ಪಡೆಯುವ ಬಗ್ಗೆ ಭೋಗ್ಯ ಇಟ್ಟವನಿಂದ.	ಡಿಟೋ ..	ಭೋಗ್ಯದ ಸ್ವತ್ತಿನ ವಿಷಯದಲ್ಲಿ ಭೋಗ್ಯ ಇಟ್ಟವನು ಮರಳಿ ಪ್ರವೇಶಿಸುವಾಗ.
106—ತಪ್ಪಿಹೋದ ಪಾಲುಗಾರಿಕೆಯ ಲಾಭದ ಲೆಕ್ಕ ಮತ್ತು ನಫೆಯ ಹಿಸ್ಸೆಯ ಬಗ್ಗೆ.	ಡಿಟೋ ..	ಪಾಲುಗಾರಿಕೆ ತಪ್ಪಿಹೋದ ತಾರೀಖು.
107—ಅವಿಭಕ್ತ ಕುಟುಂಬದ ಸ್ಥಿತಿಯ ವಿಚಾರಣೆಕರ್ತನು ಸದರೀ ಸ್ವತ್ತಿಗೋಸ್ಕರ ತಾನು ಕೈಯಿಂದ ಕೊಟ್ಟ ಹಣಕ್ಕಾಗಿ.	ಡಿಟೋ ..	ಹಣ ಕೊಟ್ಟ ತಾರೀಖು.
108—ಒಕ್ಕಲಾದವನು ಗೇಣೀ ಚೀಟಿಯ ಷರತ್ತುಗಳಿಗೆ ವಿರುದ್ಧವಾಗಿ ಕಡಿದು ಹಾಕಿದ ಮರಗಳ ಕಿಮ್ಮತ್ತಿನ ಬಗ್ಗೆ ಜಮೀನಿನ ಮಾಲೀಕನಿಂದ.	ಡಿಟೋ ..	ಮರಗಳನ್ನು ಕಡಿದು ಹಾಕಿದಾಗ.
109—ವಾದಿಗೆ ಸೇರಿದ ಸ್ಥಿರಸ್ವತ್ತಿನಿಂದ ಉತ್ಪತ್ತಿಯಾದ ನಫೆಯನ್ನು ಪ್ರತಿವಾದಿ ಅಕ್ರಮವಾಗಿ ವಸೂಲ್ಮಾಡಿಕೊಂಡಿದ್ದದ್ದಕ್ಕೋಸ್ಕರ.	ಡಿಟೋ ..	ನಫೆ ವಸೂಲ್ ಮಾಡಿದಾಗ, ಅಥವಾ ಡಿಕ್ರಿಯಿಂದ ವಾದಿಯ ಸ್ವಾಧೀನ ತಪ್ಪಿಹೋಗಿ ಅಪ್ಪೀಲ್ ಕೋರ್ಟಿನಲ್ಲಿ ಅವನ ಪರವಾಗಿ ಸ್ವತ್ತು ಅವನ ಸ್ವಾಧೀನವಾದಾಗ.
110—ಬಾಡಿಗೆ ಬಾಬತು ಗೈರಾದೇಗೋಸ್ಕರ.	ಡಿಟೋ ..	ಗೈರಾದೇ ಬಾಕಿಯಾಗುವಾಗ.
111—ಸ್ಥಿರಸ್ವತ್ತನ್ನು ಮಾರಿದವನಿಂದ ಅವನಿಗೆ ಸಲ್ಲಬೇಕಾದ ಕ್ರಯದ ಮೊಬಲಗಿನ ಪೈಕಿ ಬಾಕಿಯಾದ ಹಣಕ್ಕೋಸ್ಕರ ತನ್ನ ಹಕ್ಕನ್ನು ಸದರೀ ಸ್ವತ್ತಿನ ಮೇಲೆ ಸ್ಥಿರಪಡಿಸುವದಕ್ಕೋಸ್ಕರ.	ಡಿಟೋ ..	ವಿಕ್ರಯವನ್ನು ಪೂರ್ತಿ ಮಾಡುವದಕ್ಕೆ ಗೊತ್ತುಮಾಡಿದ ತಾರೀಖು, (ಅಂತಾ ತಾರೀಖಿನ ತರುವಾಯ ಬಾಧ್ಯತೆ ಮಂಜೂರಾದಲ್ಲಿ) ಹಾಗೆ ಮಂಜೂರಾದ ತಾರೀಖು.
112—ಯಾವ ಸ್ವ್ಯಾಟ್ಯೂಟಿಗನುಗುಣವಾಗಿ ಯಾಗಲಿ, ಆಕ್ಟಿಗನುಗುಣವಾಗಿ ಯಾಗಲಿ, ರಿಜಿಸ್ಟರಾದ ಕಂಪೆನಿಯಿಂದ ಮಾಡಲ್ಪಡುವ ತಗಾದೆ ಬಗ್ಗೆ.	ಡಿಟೋ ..	ತಗಾದೆ ನೋಟೀಸಿಗೆ ಹಣ ಸಲ್ಲಬೇಕಾದಾಗ.
113—ಕರಾರಿನ ಪ್ರಕಾರ ಒಂದು ಕೆಲಸ ಮಾಡಿಸತಕ್ಕ ಬಗ್ಗೆ.	ಡಿಟೋ ..	ಕೆಲಸ ಮಾಡಲಿಕ್ಕೆ ಗೊತ್ತಾದ ತಾರೀಖು ಅಥವಾ ಅಂತಾ ತಾರೀಖು ಗೊತ್ತಾಗದಿದ್ದರೆ ಕೆಲಸವನ್ನು ಮಾಡುವದಿಲ್ಲವೆಂಬು ನಿರಾಕರಿಸಲ್ಪಟ್ಟ ಸಂಗತಿ ವಾದಿಗೆ ತಿಳಿಯಬಂದಾಗ.
114—ಕರಾರಿನ ರದ್ದಿಯಾತಿಯ ಬಗ್ಗೆ.	ಡಿಟೋ ..	ಕರಾರ್ ರದ್ದುಪಡಿಸಿಕೊಳ್ಳಲಿಕ್ಕೆ ವಾದಿಗೆ ಬಾಧ್ಯತೆಯನ್ನುಂಟು ಮಾಡುವ ವಿದ್ಯಮಾನಗಳು ಅವನಿಗೆ ಮೊದಲು ತಿಳಿಯ ಬಂದಾಗ.
115—ಬರಹ ಮೂಲಕವಾಗಿ ರಿಜಿಸ್ಟರಾಗದ ಮತ್ತು ಇದರಲ್ಲಿ ವಿಶೇಷತಃ ವಿಧಿಸಲ್ಪಡದ ಕಂಟ್ರೋಕ್ಟವಾದ ಯಾ ಊಹ್ಯವಾದ ಯಾವದಾದರೂ ಕರಾರು ತಪ್ಪಿ ನಡೆದದ್ದಕ್ಕೋಸ್ಕರ ಈಡು ಬಗ್ಗೆ.	ಡಿಟೋ ..	ಕರಾರ್ ತಪ್ಪಿ ನಡೆದಾಗ, ಅಥವಾ (ಅನೇಕಾವರ್ತಿ ತಪ್ಪುನಡೆದಲ್ಲಿ) ಪ್ರತ್ಯೇಕ ಬಾಬತು ತಪ್ಪುನಡೆದಾಗ ಅಥವಾ (ಕರಾರ್ ತಪ್ಪಿ ನಡೆಯುತಲೇ ಯಿದ್ದಲ್ಲಿ) ಅದು ನಿಂತಾಗ.

ವ್ಯಾಜ್ಯದ ತಪಶೀಲ್.	ಲಿಮಿಟೇಶನ್ ವಾಯಿದೆ.	ವಾಯಿದೆ ನಡೆಯಲಾರಂಭಿಸುವ ಕಾಲ.
	VIIನೇ ಭಾಗ ಆರು ವರುಷಗಳು.	
116—ರಿಜಿಸ್ಟರಾದ ಬರಹ ಮೂಲಕವಾದ ಕರಾರ್ ತಪ್ಪಿನಡೆದ ಬಗ್ಯೆ ಈಡಿಗಾಗಿ.	ಆರು ವರುಷಗಳು. ..	ರಿಜಿಸ್ಟರಾಗದ ಬದಸ್ತೂರ್ ಕರಾರಿನ ಮೇಲೆ ತರಲ್ಪಟ್ಟ ದಾವೆಗೆ ವಿರುದ್ಧವಾಗಿ ಲಿಮಿಟೇಶನ್ ವಾಯಿದೆಯು ಗತಿಸಲಿಕ್ಕೆ ಷುರುವಾಗುವಾಗ.
117—ಸಿವಿಲ್ ಪ್ರೊಸಿಢ್ಯೂರ್ ಕೋಡಿನಲ್ಲಿ ವಿವರಿಸಲ್ಪಟ್ಟ ಪರಾಯಿ ದೇಶದಲ್ಲಿ ಪಡೆದ ಜಡ್ಜಿಮೆಂಟಿನ ಮೇಲೆ.	ಡಿಟೋ ..	ಜಡ್ಜಿಮೆಂಟಿನ ತಾರೀಖು.
118—ನಡೆಯಿತೆಂಬ ಪುತ್ರಸ್ವೀಕಾರವು ರದ್ದಾಗತಕ್ಕದ್ದೆಂದು ಅಥವಾ ವಸ್ತುತಃ ನಡೆಯಲಿಲ್ಲವೆಂದು ತೀರ್ಪನ್ನು ಹೊಂದಲಿಕ್ಕೆ.	ಡಿಟೋ ..	ನಡೆಯಿತೆಂಬ ಸ್ವೀಕಾರವು ವಾದಿಗೆ ತಿಳಿಯಬಂದಾಗ.
119—ಸ್ವೀಕಾರವು ದೃಢವಾದದ್ದೆಂದು ತೀರ್ಪನ್ನು ಹೊಂದಲಿಕ್ಕೆ.	ಡಿಟೋ ..	ಸ್ವೀಕೃತಪುತ್ರನ ಹಕ್ಕುದಾರಿಗಳು ಅಂತಾವ್ರುಗಳಾಗಿ ಬಾಧಿಸಲ್ಪಟ್ಟಾಗ.
120—ಈ ಷೆಡ್ಯೂಲ್‌ನಲ್ಲಿ ಇನ್ನೆಲ್ಲಿಯೂ ಲಿಮಿಟೇಶನ್ ವಾಯಿದೆ ವಿಧಿಸಲ್ಪಡದ ದಾವೆಗೆ.	ಡಿಟೋ ..	ದಾವೇಮಾಡತಕ್ಕ ಹಕ್ಕು ಉಂಟಾಗುವಾಗ.
	VIIIನೇ ಭಾಗ—ಹನ್ನೆರಡು ವರುಷಗಳು.	
121—ಕಂದಾಯ ಗೈರಾದೇ ಬಗ್ಯೆ ವಿಕ್ರಯವಾದ ಬಂದು ಪೂರಾ ಎಸ್ಟೇಟಿನಲ್ಲಿ ಅಥವಾ ಕಂದಾಯದ ಬಾಕೀಗೋಸ್ಕರ ವಿಕ್ರಯಿಸಲ್ಪಟ್ಟ ಪಟ್ಟ, ತಾಲ್ಲೂಕಿನಲ್ಲಿ ಯಾ ಇತರ ವಿಕ್ರಯವಾಗತಕ್ಕದ್ದರಲ್ಲಿ ದೇಣೀಗಳನ್ನು ಯಾ ಬಳಷಿಕ್ಕೀ ಕಂದಾಯ ಕ್ರಮಗಳನ್ನು ನಿವರ್ತಿಸಲಿಕ್ಕೆ.	ಹನ್ನೆರಡು ವರುಷಗಳು.	ವಿಕ್ರಯವು ಆಖೈರಾಗಿಮುಗಿದಾಗ.
122—ಮೈಸೂರ್ ಶೀಮೆಯಲ್ಲಿ ಪಡೆದ ಜಡ್ಜಿಮೆಂಟ್ ಯಾ ಬಂದು ನಫರ್ ಜಾರಿನಾ ಖತ ಮೇಲೆ.	ಡಿಟೋ ..	ಜಡ್ಜಿಮೆಂಟಿನ ಯಾ ನಫರ್ ಜಾರಿನಾಖತ್ತಿನ ತಾರೀಖು.
123—ಮರಣಕಾಲದಲ್ಲಿ ಬಿಟ್ಟ ಸ್ವತ್ತಿನ ಬಗ್ಯೆ ಅಥವಾ ಮರಣಶಾಸನವನ್ನು ಬರೆದಂತಾವನ, ಅಥವಾ ಉಯಿಲ್ ಬರೆಯದೆ ಬಿಟ್ಟಂತಾ ಚರಸ್ವತ್ತಿನಲ್ಲಿ ಪಾಲಿನ ಬಗ್ಯೆ.	ಡಿಟೋ ..	ಮರಣಕಾಲದಲ್ಲಿ ಬಿಟ್ಟ ಸ್ವತ್ತುಯಾ ಭಾಗ ಕೊಡಲ್ಪಡುವಾಗ ಯಾ ಒಪ್ಪಿಸಲ್ಪಡುವಾಗ.
124—ಪಾರಂಪರ್ಯವಾಗಿ ಬಂದ ಬಂದು ಉದ್ಯೋಗದ ಸ್ವಾಧೀನದ ಬಗ್ಯೆ.	ಡಿಟೋ ..	ವಾದಿಗೆ ವಿರುದ್ಧವಾಗಿ ಉದ್ಯೋಗದ ಸ್ವಾಧೀನವನ್ನು ಪ್ರತಿವಾದಿ ತೆಗೆದುಕೊಂಡಾಗ. ಟಿಪ್ಪಣಿ—ಪರಂಪರೆಯಾದ ಬಂದು ಉದ್ಯೋಗದ ಲಾಭಗಳನ್ನು ಮಾಮೂಲಾಗಿ ತೆಗೆದುಕೊಳ್ಳುವಾಗ ಅಥವಾ (ಲಾಭಗಳೇನೂ ಇಲ್ಲದಿದ್ದರೆ) ಅದರ ಕೆಲಸಗಳನ್ನು ಮಾಮೂಲಾಗಿ ನಡೆಸಿಕೊಂಡು ಬರುವಾಗ ಅದನ್ನು ಪಡೆದ ಹಾಗೇ ಆಗುತಿದೆ.
125—ಬಬ್ಬ ಹಿಂದೂಸ್ತ್ರೀ ಅಥವಾ ಮುಸಲ್ಮಾನ್ ಸ್ತ್ರೀಯೂ, ದಾವೇ ದಾಖಲ್ ಆಗುವ ತಾರೀಖಿನಲ್ಲಿ ಮೃತಪಟ್ಟರೆ, ಜಮೀನಿನ ಸ್ವಾಧೀನತೆಯನ್ನು ಪಡೆಯಲಿಕ್ಕೆ ಅರ್ಹನಾದಂತ ಬಬ್ಬ ಹಿಂದುವು ಯಾ ಮುಸಲ್ಮಾನನು, ಸದರೀ ಹೆಂಗುಸು ಮಾಡಿದ ಪರಭಾರೇಯು ಅವಳ ಜೀವಿತಕಾಲ ಪರ್ಯಂತ ಯಾ ಅವಳ ಪುನರ್ವಿವಾಹ ಪರ್ಯಂತ ಹೊರತು ಅನ್ಯಥಾ ರದ್ದಾಗತಕ್ಕದ್ದೆಂದು ತೀರ್ಪು ಕೊಡಹೇಳಿ ಅವಳ ಜೀವಿತಕಾಲದಲ್ಲಿ ತಂದ ದಾವೆ.	ಡಿಟೋ ..	ಪರಭಾರೇಯಾದ ತಾರೀಖು.

772

ವ್ಯಾಜ್ಯದ ತಪಶೀಲ್.	ಲಿಮಿಟೇಷನ್ ವಾಯಿದೆ.	ವಾಯಿದೆ ನಡೆಯಲಾರಂಭಿಸುವ ಕಾಲ.
	VIIIನೇ ಭಾಗ—ಹನ್ನೆರಡು ವರುಷಗಳು.	
ಮಿತಾಕ್ಷರ ಧರ್ಮಶಾಸ್ತ್ರಕ್ಕೆ ಒಳಗಾಗತಕ್ಕ ಒಬ್ಬ ಹಿಂದುವು ತನ್ನ ಹಿರಿಯರ ಸ್ವತ್ತು ತನ್ನ ತಂದೆಯಿಂದ ಪರಭಾರೆ ಮಾಡಲ್ಪಟ್ಟದ್ದಲ್ಲಿ ಅದನ್ನು ರದ್ದು ಮಾಡಬೇಕೆಂದು.	ಹನ್ನೆರಡು ವರುಷಗಳು.	ಪರಭಾರೇಹೊಂದಿದವನು, ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಲ್ಲಿ.
127—ಅವಿಭಕ್ತ ಕುಟುಂಬದ ಜಿಂದಗಿಯಿಂದ ತಳ್ಳಲ್ಪಟ್ಟ ಒಬ್ಬ ಹಿಂದುವು ಸದರೀ ಜಿಂದಿಗಿಯಲ್ಲಿ ಭಾಗ ಮಾಡಿಕೊಳ್ಳುವ ಹಕ್ಕುದಾರಿಯನ್ನು ಜಾರೀ ಮಾಡುವ ಬಗ್ಯೆ.	ಡಿಟೋ ..	ಭಾಗ ನಿರಾಕರಣೆ ವಾದಿಗೆ ತಿಳಿಯಬಂದಾಗ.
128—ಜೀವನಾಂಶದ ಬಾಕೀ ಬಗ್ಯೆ ಒಬ್ಬ ಹಿಂದುವಿನಿಂದ.	ಡಿಟೋ ..	ಬಾಕೀ ಸಲ್ಲಬೇಕಾದಾಗ.
129—ಒಬ್ಬ ಹಿಂದುವು ಜೀವನಾಂಶ ವಿಷಯದಲ್ಲಿ ತನ್ನ ಹಕ್ಕುದಾರಿಯನ್ನು ಸ್ಥಾಪಿಸಿ ಫೈಸಲ್ ಕೊಡುವ ಬಗ್ಯೆ.	ಡಿಟೋ ..	ಹಕ್ಕುದಾರಿ ನಿರಾಕರಿಸಲ್ಪಟ್ಟಾಗ.
130—ಇನಾಂ ಜಮೀನನ್ನು ಪುನಃ ತೆಗೆದುಕೊಂಡದ್ದಕ್ಕೋಸ್ಕರ ಅಥವಾ ಕಂದಾಯ ಹಾಕಿದ್ದಕ್ಕೋಸ್ಕರ.	ಡಿಟೋ .	ಜಮೀನನ್ನು ಪುನಃ ತೆಗೆದುಕೊಳ್ಳಲಿಕ್ಕಾಗಲಿ ಕಂದಾಯ ಮೊಕರರ್ ಮಾಡಲಿಕ್ಕಾಗಲಿ ಹಕ್ಕುದಾರಿ ಪ್ರಥಮತಃ ಉಂಟಾದಾಗ.
131—ನಿರ್ಣೀತವಾದ ಕಾಲಕ್ಕೊಂದಾವರ್ತಿ ಉಂಟಾಗುವ ಹಕ್ಕುದಾರಿಯನ್ನು ಸ್ಥಾಪಿಸಲಿಕ್ಕೆ.	ಡಿಟೋ ..	ವಾದಿಗೆ ಸದರೀ ಹಕ್ಕಿನ ಅನುಭವವು ಪ್ರಥಮತಃ ನಿರಾಕರಿಸಲ್ಪಟ್ಟಾಗ.
132—ಸ್ಥಾವರ ಸ್ವತ್ತಿನ ಮೇಲೆ ಬರಬೇಕಾದ ಹಣ ಅಗತ್ಯವಾಗಿ ಪಾವತಿ ಮಾಡುವ ಹಾಗೆ ಮಾಡುವ ಬಗ್ಯೆ. ಟಿಪ್ಪಣಿ—"ಮಾಲೀಕನ" ವ "ಹಕಗಳು" ಎಂತ ಕರೆಯಲ್ಪಡುವ ಲಾರ್ಡ್ಸ್ ವ ರುಸುಂಗಳು ಈ ಕಲಮಿನ ಉದ್ದೇಶಕ್ಕೋಸ್ಕರ ಸ್ಥಿರಸ್ವತ್ತಿನ ಮೇಲೆ ಬರತಕ್ಕ ಹಣವೆಂಬದಾಗಿ ಗ್ರಹಿಸತಕ್ಕದ್ದು.	ಡಿಟೋ ..	ದಾವಾ ಬೊಬಲಗು ಬಾಕಿಯಾಗುವಾಗ.
133—ಪರಭಾರೇ ಮಾಡಲ್ಪಟ್ಟ ಅಥವಾ ಭರವಸದ ಮೇಲಿಟ್ಟ ಒಬ್ಬನ ಆಧೀನದಲ್ಲಿಟ್ಟ ಅಥವಾ ಅಡವಿಟ್ಟ ಮತ್ತು ತರುವಾಯ ಭರವಸೆದಾರನಿಂದಲಾಗಲಿ ಆಧೀನದಲ್ಲಿಟ್ಟುಕೊಂಡಿದ್ದವನಿಂದಲಾಗಲಿ ಅಡವಿಟ್ಟುಕೊಂಡಿದ್ದವನಿಂದಲಾಗಲಿ ಒಂದು ಕಿಮ್ಮತ್ತಿಗಾಗಿ ತರುವಾಯ ಖರೀದಿಗೆ ತೆಗೆದುಕೊಳ್ಳಲ್ಪಟ್ಟ ಜಂಗಮ ಸ್ವತ್ತನ್ನು ಪುನಹಾ ಸ್ವಾಧೀನ ಪಡಿಸಿಕೊಳ್ಳಲಿಕ್ಕೆ.	ಡಿಟೋ ..	ಖರೀದಿ ಮಾಡಿದ ತಾರೀಖು.
134—ಭರವಸದ ಮೇಲೆ ಇಟ್ಟ ಅಥವಾ ಅಡವಿಟ್ಟ ಮತ್ತು ಪರಭಾರೆ ಮಾಡಲ್ಪಟ್ಟ ಯಾ ಒಂದು ಕಿಮ್ಮತ್ತಿಗೆ ಭರವಸೇದಾರನಿಂದ ಯಾ ಅಡಮಾನ ಇಟ್ಟುಕೊಂಡವನಿಂದ ಖರೀದಿಗೆ ತೆಗೆದುಕೊಳ್ಳುವಣಾದ ಸ್ಥಿರಸ್ವತ್ತಿನ ಸ್ವಾಧೀನತೆಯನ್ನು ಮರಳಿ ಪಡೆಯುವದಕ್ಕೋಸ್ಕರ.	ಡಿಟೋ ..	ಕ್ರಯಕ್ಕೆ ತೆಗೆದುಕೊಂಡ ತಾರೀಖು.
135—ಅಡಮಾನ ಇಟ್ಟುಕೊಂಡವನು ಅಡಮಾನ ಇಟ್ಟ ಸ್ಥಿರಜಿಂದಿಗಿಯ ಸ್ವಾಧೀನತೆ ಬಗ್ಯೆ ಒಂದು ಕೋರ್ಟಿನಲ್ಲಿ ದಾಖಲ್ ಮಾಡಿದ ದಾವೆ.	ಡಿಟೋ .	ಸ್ವತ್ತಿನ ಸ್ವಾಧೀನತೆ ಬಗ್ಯೆ ಅಡವಿಟ್ಟುಕೊಂಡವನ ಬಾಧ್ಯತೆ ನಿಷ್ಕಲ್ಪಷ್ಟವಾದಾಗ.
136—ಬಿಕರೀದಾರನು ಸ್ಥಾವರ ಸ್ವತ್ತನ್ನು ಸ್ವಂತವಾಗಿ ವಿಕ್ರಯಿಸಿದ ತಾರೀಖಿನಲ್ಲಿ ತಾನು ಸದರೀ ಸ್ವತ್ತು ಸ್ವಾಧೀನದಲ್ಲಿಲ್ಲದವನಾಗಿದ್ದರೆ, ಆ ಸ್ವತ್ತನ್ನು ಕೊಂಡುಕೊಂಡಂತಾವನು ಅದರ ಸ್ವಾಧೀನದ ಬಗ್ಯೆ ತರುವ ವ್ಯಾಜ್ಯಕ್ಕೆ.	ಡಿಟೋ ..	ಬಿಕರೀದಾರನು ಸ್ವಾಧೀನಕ್ಕೆ ಪ್ರಥಮತಃ ಅರ್ಹನಾದಾಗ.
137—ಡಿಕ್ರಿಯು ಅಮಲ್‌ಜಾರೀ ವಿಕ್ರಯದೊಳಗೆ ಡಿಕ್ರಿಯಾದ ಪ್ರತಿವಾದಿಯು ಹರಾಜ್ ತಾರೀಖಿನಲ್ಲಿ ಸ್ವತ್ತು ಸ್ವಾಧೀನದಲ್ಲಿಲ್ಲದವನಾಗಿದ್ದರೆ ಕ್ರಯದಾರನಿಂದ ತರಲ್ಪಡುವ ಬದಸ್ತೂರಿ ದಾವೆ.	ಡಿಟೋ ..	ಡಿಕ್ರಿಯಾದ ಪ್ರತಿವಾದಿಯು ಪ್ರಥಮತಃ ಸ್ವತ್ತು ಸ್ವಾಧೀನದಲ್ಲಿ ಪಡೆಯಲಿಕ್ಕೆ ಅರ್ಹನಾದಾಗ.

ವ್ಯಾಜ್ಯದ ತಪಶೀಲ್.	ಲಿಮಿಟೇಷನ್ ವಾಯಿದೆ.	ವಾಯಿದೆ ನಡೆಯಲಾರಂಭ
	VIIIನೇ ಭಾಗ—ಹನ್ನೆರಡುವರುಷಗಳು.	
138—ಒಂದು ಡಿಕ್ರಿಯ ಅಮಲ್‌ಜಾರೀ ಹರಾಜಿನ ಭೂಮಿಯನ್ನು ಕ್ರಯಕ್ಕೆ ತೆಗೆದುಕೊಂಡಂತಾವನು ಸದರೀ ಕ್ರಯಕ್ಕೆ ತೆಗೆದುಕೊಂಡ ಜಮೀನು ಹರಾಜು ತಾರೀಖಿನಲ್ಲಿ ಡಿಕ್ರಿಯಾದ ಪ್ರತಿವಾದಿಯ ಸ್ವಾಧೀನದಲ್ಲಿದ್ದರೆ ಕೊಂಡುಕೊಳ್ಳಲ್ಪಟ್ಟ ಅಂತಾ ಜಮೀನನ್ನ ಸ್ವಾಧೀನ ಪಡಿಸಿಕೊಳ್ಳುವ ಬಗ್ಯೆ.	ಹನ್ನೆರಡು ವರುಷಗಳು.	ವಿಕ್ರಯದ ತಾರೀಖು.
139—ಒಕ್ಕಲಿನ ದೆಸೆಯಿಂದ ಸ್ವಾಧೀನವನ್ನು ಪುನಃ ಪಡೆಯಲಿಕ್ಕೆ ಮಾಲೀಕನಿಂದ ತರಲ್ಪಡುವ ದಾವೆ.	ಡಿಟೋ ..	ಒಕ್ಕಲುತನದ ವ:ಯಿದೆ ಮ: ತರುವಾಯ.
140—ಸ್ಥಿರಸ್ವತ್ತಿನ ಸ್ವಾಧೀನದ ಬಗ್ಯೆ (ಮಾಲೀಕನಲ್ಲದ) ರಿಮೇಂಡರ್‌ಮ್ಯಾನ್, ರಿವರ್ಷನರ್ ಯಾಡಿವೈಜಿ ಎಂಬ ಬಾಧ್ಯಸ್ಥರಿಂದ ತರಲ್ಪಡುವ ದಾವೆ.	ಡಿಟೋ ..	ಅವನ ಸ್ಥಿತಿ ಸ್ವಾಧೀನಕ್ಕೊಳಗಗುವಾಗ.
141—ಹಿಂದು ಯಾ ಮಹಮ್ಮದೀಯರ್ ಸ್ತ್ರೀಯು ಮರಣಾನಂತರ ಸ್ಥಿರಸ್ವತ್ತಿನ ಸ್ವಾಧೀನಕ್ಕೆ ಅರ್ಹನಾದ ಒಬ್ಬ ಹಿಂದುವಿನಿಂದ ಯಾ ಮಹಮ್ಮದೀಯನಿಂದ ತರಲ್ಪಡುವ ಬದಸ್ತೂರ್‌ದಾವೆ.	ಡಿಟೋ	ಆ ಹೆಂಗಸು ಸಾಯುವಾಗ.
142—ವಾದಿಯ ವಶದಲ್ಲಿದ್ದ ಸ್ವತ್ತು ಅವನ ಸ್ವಾಧೀನ ತಪ್ಪಿದಾಗ ಅಥವಾ ಸ್ವಾಧೀನವನ್ನು ಬಿಟ್ಟಿರುವಾಗ ಸದರೀ ಸ್ಥಿರ ಸ್ವತ್ತಿನ ಸ್ವಾಧೀನದ ಬಗ್ಯೆ.	ಡಿಟೋ ..	ಸ್ವಾಧೀನ ತಪ್ಪಿದ ಯಾ ಸ್ವಾಧೀನ ಬಿಟ್ಟ ತಾರೀಖು.
143—ವಾದಿಯು ಯಾವದಾದರೂ ಒಂದು ಮುಟ್ಟುಗೋಲು ಅಥವಾ ಷರತ್ತನ್ನು ತಪ್ಪಿದ ಸಬಬು ಅರ್ಹನಾದಾಗ ತರುವ ಬದಸ್ತೂರ್ ದಾವೆ.	ಡಿಟೋ ..	ಮುಟ್ಟುಗೋಲು ಸಂಭವಿಸಿದಾಗ ಅಥವಾ ಷರತ್ತು ತಪ್ಪಿದಾಗ.
144—ಇದರಿಂದ ಅನ್ಯಥಾ ವಿಶೇಷವಾಗಿ ವಿಧಿಸಲ್ಪಡದ ಸ್ಥಿರಸ್ವತ್ತಿನ ಸ್ವಾಧೀನದ ಬಗ್ಯೆ ಅಥವಾ ಅದರಲ್ಲಿರತಕ್ಕ ಸಂಬಂಧದ ಬಗ್ಯೆ.	ಡಿಟೋ ..	ಪ್ರತಿವಾದಿಯ ಸ್ವಾಧೀನವು ವಾದಿಗೆ ವಿರುದ್ಧವಾದಾಗ.
	IXನೇ ಭಾಗ—ಮೂವತ್ತು ವರುಷಗಳು.	
145—ಯಾರಬಳಿ ಸ್ವತ್ತು ಇಡೋಣಾಯಿತೋ ಆ ಮನುಷ್ಯನಿಂದ ಅಥವಾ ಅಡಮಾನ ಇಟ್ಟುಕೊಂಡವನಿಂದ ಯಿಡಲ್ಪಟ್ಟ ಯಾ ಅಡಮಾನ ಇಟ್ಟ ಚರಸ್ವತ್ತನ್ನು ಪುನಃ ವಶಪಡಿಸಿ ಕೊಳ್ಳಲಿಕ್ಕೆ ಅಂತವನ ಮೇಲೆ.	ಮೂವತ್ತು ವರುಷಗಳು.	ಇಟ್ಟುಕೊಂಡ ಯಾ ಅಡವಿಟ್ಟ ತಾರೀಖು.
	Xನೇ ಭಾಗ—ಅರವತ್ತು ವರುಷಗಳು.	
147—ಅಡವಿಟ್ಟುಕೊಂಡವನು ಅನಧಿ ಕ್ರಯದ ಬಗ್ಯೆ ಯಾ ವಿಕ್ರಯದ ಬಗ್ಯೆ.	ಅರವತ್ತು ವರುಷಗಳು.	ಅಡಮಾನ ದೆಸೆಯಿಂದ ಪಡೆಯು ಹಣವು ಬಾಕಿಯಾದಾಗ.
148—ಅಡಮಾನ ಇಟ್ಟ ಸ್ಥಿರಜಿಂದಗಿಯನ್ನು ಬಿಡಿಸಿಕೊಳ್ಳಲಿಕ್ಕೆ ಅಥವಾ ಪುನಃ ವಶಪಡಿಸಿಕೊಳ್ಳಲಿಕ್ಕೆ ಅಡಮಾನ ಇಟ್ಟುಕೊಂಡಂತಾವನ ಮೇಲೆ.	ಡಿಟೋ ..	ಬಿಡಿಸಿಕೊಳ್ಳಲಿಕ್ಕಾಗಲಿ ಸ್ವಾಧೀಯನ್ನು ಮರಳಿ ಪಡೆಯಲಿಕ್ಕಾ ಹಕ್ಕು ಉಂಟಾದಾಗ.
149—ಮೈಸೂರ್ ಗವರ್ನಮೆಂಟನವರಿಂದ ಅಥವಾ ಅವರ ಪರವಾಗಿ ದಾವೆಯ ಬಗ್ಯೆ.	ಡಿಟೋ ..	ಸರ್ಕಾರ್ ನೌಕರನಲ್ಲದ ಮನುಷ್ಯನಿಂದ ಬದಸ್ತೂರ್ ದಾವೆಗೆ ವಿರುದ್ಧವಾಗಿ ಈ ಆಕ್ಟು ಅನುಸರಿಸಿ ಲಿಮಿಟೇಷನ್ ವಾಯಿದೆ ಗತಿಸಲಿಕ್ಕೆ ಆರಂಭಿಸುವಾಗ.

ಎರಡನೇ ಷೆಡ್ಯೂಲ್.

2ನೇ ಡಿವಿಜನ—ಅಪ್ಪೀಲಗಳು.

ಅಪ್ಪೀಲಗಳ ತಪಶೀಲ್.	ಲಿಮಿಟೇಷನ ವಾಯಿದೆ.	ವಾಯಿದೆ ನಡೆಯಲಾರಂಭಿಸುವ ಕಾಲ.
126—ಒಬ್ಬ ಸೆಷನ್ಸ ಜಡ್ಜಿಯಿಂದ ವಿಧಿಸಲ್ಪಟ್ಟ ಮರಣ ದಂಡನೆ ಮೇಲೆ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ ಅನುಸರಿಸಿ.	ಏಳು ದಿನಗಳು ..	ಸೆಂಟೆನ್ಸಿನ ತಾರೀಖು.
151—ಚೀಫ್ ಕೋರ್ಟು ಅದರ ಅಸಲ್ ಅಧಿಕಾರವನ್ನು ನಡಿಸುವಲ್ಲಿ ಕೊಡುವ ಒಂದು ಫೈಸಲಿನ ಯಾ ಹುಕ್ಕುಮಿನ ಮೇಲೆ.	ಇಪ್ಪತ್ತು ದಿನಗಳು ..	ಡಿಕ್ರಿಯು ಯಾ ಆರ್ಡರಿನ ತಾರೀಖು.
152—ಸಿವಿಲ್ ಪ್ರೊಸಿಡ್ಯೂರ್ ಕೋಡಿಗನುಗುಣವಾಗಿ ಡಿಸ್ಟ್ರಿಕ್ಟು ಜಡ್ಜು ಕೋರ್ಟಿಗೆ.	ಮೂವತ್ತು ದಿನಗಳು ..	ಅಪ್ಪೀಲ್ ಆಗತಕ್ಕ ಡಿಕ್ರಿಯು ಯಾ ಆರ್ಡರಿನ ತಾರೀಖು.
154—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿಗನುಗುಣವಾಗಿ ಚೀಫ್ ಕೋರ್ಟು ಅಲ್ಲದ ಇತರ ಯಾವ ಕೋರ್ಟಿಗಾಗಲಿ.	ಡಿಟೋ ..	ಅಪ್ಪೀಲ್ ಆದ ಸೆಂಟೆನ್ಸಿನ ಯಾ ಹುಕುಮಿನ ತಾರೀಖು.
155—150 ಮತ್ತು 157 ಈ ನಂಬರಗಳಿಂದ ವಿಧಿಸಲ್ಪಟ್ಟ ಸಂಗತಿಗಳಲ್ಲಿ ಹೊರತು ಅನ್ಯಥಾ ಅದೇ ಕೋಡಿಗನುಗುಣವಾಗಿ ಚೀಫ್ ಕೋರ್ಟಿಗೆ.	ಅರವತ್ತು ದಿನಗಳು ..	ಡಿಟೋ
156— 151ನೇ ನಂಬರನಿಂದ ವಿಧಿಸಲ್ಪಟ್ಟ ಸಂಗತಿಯಲ್ಲಿ ಹೊರತು ಅನ್ಯಥಾ ಸಿವಿಲ್ ಪ್ರೊಸಿಡ್ಯೂರ್ ಕೋಡಿಗನುಗುಣವಾಗಿ ಚೀಫ್ ಕೋರ್ಟಿಗೆ.	ತೊಂಭತ್ತು ದಿನಗಳು ..	ಅಪ್ಪೀಲ್ ಆದ ಡಿಕ್ರಿ ಯಾ ಆರ್ಡರ್ ತಾರೀಖು.
157—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ಅನುಸರಿಸಿ ಖುಲಾಸೆ ಜಡ್ಜಮೆಂಟು ಮೇಲೆ.	ಆರು ತಿಂಗಳು	ಅಪ್ಪೀಲ್ ಮಾಡಲ್ಪಟ್ಟ ಜಡ್ಜಮೆಂಟಿನ ತಾರೀಖು.

3ನೇ ಡಿವಿಜನ—ಅರ್ಜಿಗಳು.

ಅರ್ಜಿಗಳ ವಿವರಣೆ.	ಲಿಮಿಟೇಷನವಾಯಿದೆ.	ಲಿಮಿಟೇಷನ ನಡೆಯಲಿಕ್ಕೆ ಷುರುವಾಗುವ ಕಾಲ.
158—ಸಿವಿಲ್ ಪ್ರೊಸಿಡ್ಯೂರ್ ಕೋಡಿಗನುಗುಣವಾಗಿ ಒಂದು ತೀರ್ಪನ್ನು ರದ್ದುಮಾಡಲಿಕ್ಕೆ.	ಹತ್ತು ದಿನಗಳು ..	ತೀರ್ಪು ಕೋರ್ಟಿಗೆ ಕಳುಹಿಸಿದಾಗ.
159—ಅದೇ ಕೋಡು 39ನೇ ಅಧ್ಯಾಯವನ್ನನುಸರಿಸಿ ಒಂದು ವ್ಯಾಜ್ಯಕ್ಕೆ ಹಾಜರಾಗಲಿಕ್ಕೂ ಮತ್ತು ಅದನ್ನ ಸಾಧಿಸಲಿಕ್ಕೂ ಅಪ್ಪಣೆಬಗ್ಯೆ.	ಡಿಟೋ ..	ಸಮನ್ ಜಾರಿ ಆದಾಗ.
160—ರಿವ್ಯೂ ಬಗ್ಯೆ ಕೊಡಲ್ಪಟ್ಟ ಅರ್ಜಿ ತಳ್ಳಲ್ಪಟ್ಟಂತಾದ್ದನ್ನು ಪುನಃ ಫೈಲಿಗೆ ದಾಖಲಾಗುವ ಬಗ್ಯೆ ಅದೇ ಕೋಡ 629ನೇ ಸೆಕ್ಷನ್ ಪ್ರಕಾರ ಆರ್ಡರಿಗೋಸ್ಕರ.	ಹದಿನೈದು ದಿನಗಳು ..	ರಿವ್ಯೂ ಬಗ್ಯೆ ಮಾಡಲ್ಪಟ್ಟ ಅರ್ಜಿ ತಳ್ಳಿ ಹಾಕಿದಾಗ.
1[illegible])A—ಒಂದು ಸ್ಮಾಲ್‌ಕಾಜ್ ಕೋರ್ಟನಿಂದ, ಅಥವಾ ಸ್ಮಾಲ್ ಕಾಜ್ ಕೋರ್ಟಿನ ಯಖ್ತ್ಯಾರಿ ಕೊಡಲ್ಪಟ್ಟ ಒಂದು ಕೋರ್ಟನವರು ಆ ಯಖ್ತ್ಯಾರಿ ನಡಿಸುವಾಗ್ಯೆ ಅವರಿಂದ, ಕೊಡಲ್ಪಟ್ಟ ಜಡ್ಜಮೆಂಟಿನ ಪುನರ್ವಿಮರ್ಶೆ ಬಗ್ಯೆ.	ಡಿಟೋ ..	ಡಿಕ್ರಿ ಅಥವಾ ಹುಕುಮಿನ ತಾರೀಖು.
162—ಚೀಫ್ ಕೋರ್ಟನವರು ಅಸಲ್ ಅಧಿಕಾರವನ್ನು ಚಲಾಯಿಸುವಲ್ಲಿ ಕೊಟ್ಟ ಜಡ್ಜಮೆಂಟಿನ ರಿವ್ಯೂ ಬಗ್ಯೆ.	ಇಪ್ಪತ್ತು ದಿನಗಳು ..	ಫೈನಲ್ ವೆ ಆರ್ಡರ್ ತಾರೀಖು.
163—ವಾದಿಯ ಗೈರ ಹಾಜರಿಯಲ್ಲಿ ಆದ ಡಿಸ್‌ಮಿಸನ್ನ ರದ್ದು ಮಾಡಲಿಕ್ಕೆ ಅಪ್ಪಣೆಗೋಸ್ಕರ ಆ ವಾದಿಯಿಂದ ಕೊಡಲ್ಪಡುವ ಅರ್ಜಿ.	ಮೂವತ್ತು ದಿನಗಳು ..	ವ್ಯಾಜ್ಯದ ಡಿಸ್‌ಮಿಸ್ ತಾರೀಖು.

58

3ನೇ ಡಿವಿಜನ್—ಅರ್ಜಿಗಳು.

ಅರ್ಜಿಗಳ ವಿವರಣೆ.	ಲಿಮಿಟೇಷನ್ ಮಾಯಿದೆ.	ಲಿಮಿಟೇಷನ್ ನಡೆಯಲಿಕ್ಕೆ ಷುರುವಾಗುವ ಕಾಲ.
164—ಏಕಪಕ್ಷವಾಗಿ ಆದ ಜಡ್ಜಮೆಂಟನ್ನು ರದ್ದು ಮಾಡಲಿಕ್ಕೆ ಹುಕುಮಿಗೋಸ್ಕರ ಪ್ರತಿವಾದಿಯಿಂದ ಕೊಡಲ್ಪಡುವ ಅರ್ಜಿ.	ಮೂವತ್ತು ದಿನಗಳು ..	ಜಡ್ಜಮೆಂಟ್ ಅಮಲ್‌ಚಲಾಯಿಸುವ ಬಗ್ಯೆ ಉಂಟಾದ ಯಾವ ಆಚರಣೆ ಯನ್ನಾಗಲಿ ನಡೆಸಿದ ತಾರೀಖು.
165—ಸಿವಿಲ್ ಪ್ರೊಸೀಡ್ಯೂರ್ ಕೋಡಿಗನುಗುಣವಾಗಿ ಸ್ಥಿರಸ್ವತ್ತಿನ ಸ್ವಾಧೀನ ತಪ್ಪಿಸಲ್ಪಟ್ಟವನು, ಮತ್ತು ಡಿಕ್ರೀ ಪಡೆದವನ ಅಥವಾ ಡಿಕ್ರಿಯ ಅಮಲ್‌ಜಾರಿ ಹರಾಜಿನಲ್ಲಿ ಕೊಂಡುಕೊಂಡವನ ಸ್ವಾಧೀನತೆಗಾಗಿ ಯಿರುವ ಹಕ್ಕಿನ ವಿಷಯದಲ್ಲಿ ತಕರಾರು ಮಾಡಿ ಕೊಡುವ ಅರ್ಜಿ.	ಡಿಟೋ ..	ಸ್ವಾಧೀನ ತಪ್ಪಿದ ತಾರೀಖು.
166—ವಿಕ್ರಯವನ್ನು ಕುರಿತು ಪ್ರಕಟಿಸಿದ್ದು ಯಾ ವಿಕ್ರಯಿಸಿದ್ದು ಅಕ್ರಮವೆಂಬ ಸಬಬಿನ ಮೇಲೆ ಒಂದು ಡಿಕ್ರಿಯ ಅಮಲ್‌ಜಾರಿಯಲ್ಲಿ ಆದ ವಿಕ್ರಯವನ್ನು ರದ್ದು ಮಾಡಲಿಕ್ಕೆ.	ಡಿಟೋ ..	ವಿಕ್ರಯದ ತಾರೀಖು.
167—ಡಿಕ್ರೀಯಾದ ಯಾ ಅಮಲ್‌ಜಾರಿಯಲ್ಲಿ ವಿಕ್ರಯದ ಸ್ಥಿರಸ್ವತ್ತಿನ ಸ್ವಾಧೀನವನ್ನು ಬಿಡಲಿಕ್ಕೆ ಹುಜ್ಜತ್ ಯಾ ಆಟಂಕ ಮಾಡಿದರೆ, ಅಥವಾ ಡಿಕ್ರಿದಾರನಿಗೆ ಯಾ ಅಂತಾ ಸ್ವತ್ತಿನ ಕ್ರಯದಾರನಿಗೆ ಸ್ವತ್ತಿನ ಸ್ವಾಧೀನತೆಯನ್ನು ಒಪ್ಪಿಸುವಲ್ಲಿ ಸ್ವಾಧೀನ ಹೊಂದಿದವರನ್ನ ಸದರೀ ಸ್ವಾಧೀನದಿಂದ ತಪ್ಪಿಸಿದರೆ.	ಡಿಟೋ ...	ಹುಜ್ಜತ್, ಆಟಂಕ ಯಾ ಸ್ವಾಧೀನ ತಪ್ಪಿದ ತಾರೀಖು.
168—ವ್ಯಾಜ್ಯ ಸರಿಯಾಗಿ ನಡಿಸಲಿಲ್ಲವೆಂದು ಡಿಸ್‌ಮಿಸ್ ಆದ ಅಪ್ಪೀಲನ್ನು ಪುನಃ ಅಂಗೀಕರಿಸಲಿಕ್ಕೆ.	ಡಿಟೋ ..	ಡಿಸ್‌ಮಿಸ್ ಆದ ತಾರೀಖು.
169—ಅಪ್ಪೀಲ್ ಪ್ರತಿವಾದಿಯು ಗೈರ್ ಹಾಜರಿಯಲ್ಲಿ ಏಕಪಕ್ಷ ವಿಚಾರಣೆ ಆದ ಮೊಕದ್ದಮೆಯನ್ನು ಪುನಃ ವಿಚಾರಣೆ ಮಾಡಲಿಕ್ಕೆ.	ಡಿಟೋ ..	ಅಪ್ಪೀಲನಲ್ಲಿ ಡಿಕ್ರಿಯ ತಾರೀಖು.
170—ಪಾಪರಾಗಿ ಅಪ್ಪೀಲ್ ಮಾಡಲಿಕ್ಕೆ ಅಪ್ಪಣೆಯ ಬಗ್ಯೆ.	ಡಿಟೋ ..	ಅಪ್ಪೀಲಾಗತಕ್ಕ ಡಿಕ್ರಿಯ ತಾರೀಖು.
171—ಸಿವಿಲ್ ಪ್ರೊಸಿಡ್ಯೂರ್ ಕೋಡಿನ 371ನೇ ಪ್ರಕರಣ ಪ್ರಕಾರವಾಗಲಿ, ಅದೇ ಕೋಡ್ ಅದೇ ಪ್ರಕರಣ ಮತ್ತು 582ನೇ ಪ್ರಕರಣದಂತೆ ವ್ಯಾಜ್ಯ ನಿಂತು ಹೋಗಲು ಅಥವಾ ತಳ್ಳಪಡಿಯಾಗಲು ಹುಟ್ಟಿದ ಹುಕುಂ ರದ್ದಾಗುವ ಬಗ್ಯೆ ಹುಕುಂ ಆಗಬೇಕೆಂದು.	ಅರವತ್ತು ದಿನಗಳು ..	ವ್ಯಾಜ್ಯ ನಿಂತು ಹೋಗಲೆಂದು ಅಥವಾ ತಳ್ಳಪಡಿಯಾಗಲೆಂದು ಆದ ಹುಕುಮಿನ ತಾರೀಖು.
172—ಅಮಲ್‌ಜಾರಿಯ ಹರಾಜಿನಲ್ಲಿ ಕೊಂಡುಕೊಂಡವನಿಂದ ಆ ಸ್ವತ್ತಿನಲ್ಲಿ ಯಾರ ಸಂಬಂಧವು ಮಾರಲ್ಪಟ್ಟಿತೆಂದು ಹೇಳಲ್ಪಟ್ಟಿತ್ತೋ ಅಂತಾ ಮನುಷ್ಯನಿಗೆ ಸದರೀ ಸ್ವತ್ತಿನಲ್ಲಿ ನ್ಯಾಯವಾಗಿ ವಿಕ್ರಯಿಸಲ್ಪಡತಕ್ಕ ಹಕ್ಕು ಉಂಟಾಗಿರಲಿಲ್ಲವೆಂಬ ಸಬಬಿನ ಮೇಲೆ ವಿಕ್ರಯ ರದ್ದು ಪಡಿಸಲಿಕ್ಕೆ.	ಡಿಟೋ ..	ವಿಕ್ರಯದ ತಾರೀಖು.
173—160 A ಮತ್ತು 162ನೇ ನಂಬರಿನಿಂದ ವಿಧಿಸಲ್ಪಟ್ಟ ಸಂಗತಿಗಳಲ್ಲಿ ಹೊರತು ಅನ್ಯಥಾ ಜಡ್ಜಮೆಂಟ್ ರಿವ್ಯೂ ಬಗ್ಯೆ.	ತೊಂಭತ್ತು [illegible]ಗಳು ..	ಡಿಕ್ರಿ ಯಾ ಹುಕುಮಿನ ತಾರೀಖು.
173 A—ಸಿವಿಲ್ ಪ್ರೊಸಿಡ್ಯೂರ್ ಕೋಡ್ 258ನೇ ಪ್ರಕರಣ ಪ್ರಕಾರ ಹುಟ್ಟಬೇಕೆಂಬ ನೋಟಿಸಿನಲ್ಲಿ ಕಂಡ ಪಾವತಿ ಅಥವಾ ವೆವಸ್ಥೆಯು, ಜಡ್ಜಮೆಂಟಿನ ಅಮಲ್‌ಜಾರಿ ಬಗ್ಯೆ ಪ್ರೊಸೆಸ್ಸ್ ಅಂತಾ ಪಾವತಿ ಅಥವಾ ವೆವಸ್ಥೆ ಮಾಡಲ್ಪಟ್ಟ ಒಂದು ವರುಷದೊಳಗಾಗಿ ಅರ್ಜಿದಾರನ ಮೇಲೆ ಜಾರಿಯಾಗಿದ್ದರೆ, ಸ್ಥಾಪಿತವಾದಂತೆ ಯಾತಕ್ಕೆ ರಿಕಾರ್ಡು ಮಾಡಲ್ಪಡಕೂಡದೆಂಬ ಬಗ್ಯೆ ಕಾರಣವನ್ನು ತೋರಿಸುವದಕ್ಕೋಸ್ಕರ.	ಡಿಟೋ ..	ಅಂತಾ ಪ್ರೊಸೆಸ್ಸ್ ಜಾರಿಯಾದ ತಾರೀಖು ಲಗಾಯತು.
174—ಸಿವಿಲ್ ಪ್ರೊಸಿಡ್ಯೂರ್ ಕೋಡಿನ 353ನೇ ಸೆಕ್ಷನ್ ಅನುಸರಿಸಿ, ದಿವಾಳೀಖೋರನಾದ ಜಡ್ಜಮೆಂಟ್ ಪ್ರತಿವಾದಿ ಮೇಲೆ ವಾದಿಯಿಂದ.	ಡಿಟೋ ..	ಷೆಡ್ಯೂಲ್ ಪಟ್ಟಿಯನ್ನು ಪ್ರಕಟಿಸಿದ ತಾರೀಖು.
175—ಡಿಕ್ರಿ ಮೊಬಲಗು ಖಿಸ್ತುಗಳಾಗಿ ಪಾವತಿ ಮಾಡಲಿಕ್ಕೆ.	ಆರು ತಿಂಗಳು ..	ಡಿಕ್ರಿ ತಾರೀಖು.